॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೪

ಭೀಷ್ಮಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷ್ಮಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಪಿ. ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೪

ಭೀಷ್ಮಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಪಿ. ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಭೀಷ್ಮಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಭೀಷ್ಮಪರ್ವ - ಭಾಗ ೧ಳ

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-71-2

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XX + 624 = 644
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	ಪವನ್ ಪ್ರಿಂಟರ್ಸ್, ಬೆಂಗಳೂರು : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ಪಾಪಿಷ್ಠಕೃಷ್ಣ ಮುಮು ದೇಹಿ ಕರಾವಲಂಬಮ್

ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ಭಾಗವತಾಯ ನಮಃ



ವಿದ್ಯಾಮಾನ್ಯಾನ್ಯನೀನ್ನುಮಃ

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

ಅನುಗ್ರಹ ಸಂದೇಶ

ಒಬ್ಬ ಸಾಧಕನಾದವ, ಆದರ್ಶವ್ಯಕ್ತಿ ಹೇಗೆ ಇರಬೇಕೆಂಬುದನ್ನು ಸಮಾಜಕ್ಕೆ ತೋರಿಸಿಕೊಟ್ಟವರು ಭೀಷ್ಮರು. ಯಾವುದೇ ಒಂದು ಅಧಿಕಾರದ ಆಮಿಷಕ್ಕೆ ಒಳಗಾಗದೆ ಕರ್ತವ್ಯ ದೃಷ್ಟಿಯಿಂದ ಧರ್ಮಗಳನ್ನು ಪಾಲನೆ ಮಾಡಿ ಭಗವಂತನಲ್ಲಿ ನಿಷ್ಠೆ ತೋರಿಸಿದ ಒಬ್ಬ ಆದರ್ಶವ್ಯಕ್ತಿ ಭೀಷ್ಮ. ತಾನು ಬ್ರಹ್ಮಚಾರಿಯಾಗಿ ಒಬ್ಬ ರಾಜಕಾರಣಿಯೂ ಆಗಬಹುದು ಎಂಬುದನ್ನು ಚೆನ್ನಾಗಿ ತೋರಿಸಿದ. ವೇದಾಂತ ಅಧ್ಯಯನಕ್ಕೆ ಯಾವುದು ಬೇಕು ಎಂದು ಹೇಳುತೇವೆ. ಆ ನೈಷ್ಠಿಕಬ್ರಹ್ಮಚರ್ಯ ಇಡೀ ಎಂಟುನೂರು ವರ್ಷಗಳ ಜೀವನದಲ್ಲಿ ಅಳವಡಿಸಿ ತೋರಿಸಿಕೊಟ್ಟವ. ಒಬ್ಬ ಆದರ್ಶಸಾಧಕ ಪಿತೃಭಕ್ತಿಯನ್ನು ಮೆರೆಯಬೇಕು. ಅದು ಹೇಗೆಂದರೆ, ತಂದ ಮಗನಿಗೆ ಮದುವೆ ಮಾಡಬೇಕು. ವಯಸ್ಸಿಗೆ ಬಂದ ಮಗೇ ತಂದೆಗೆ ಮದುವೆ ಮಾಡುತ್ತಾನೆ ಎಂದರೆ ಭೀಷ್ಮನ ಅಪರೂಪ ಆದರ್ಶವನ್ನು ನೋಡುತ್ತೇವೆ. ಭೀಷ್ಮ ಅಧ್ಯಯನ ಮಾಡಿದ, ಪ್ರವಚನ ಮಾಡಲಿಲ್ಲ ಅನ್ನುವ ಕೊರತೆ ಇತ್ತು. ಆದರೆ ಕೊನೆಯ ಕಾಲದಲ್ಲಿ ಅಂದರೆ ಒಂದು ರೀತಿಯಲ್ಲಿ ತನಗೆ ಏನೂ ಬೇಡ ಅನುವ ತನ್ನ ಜೀವನದ ಕೊನೆಯ ಸಂದರ್ಭದಲ್ಲಿ ಅವನು ಸೋಮಾರಿ ಆಗದೆ ಅಧ್ಯಾಪನೆ ಮಾಡಿಸಿ 'ಆಚಾರ್ಯ' ಅನ್ನುವ ಬಿರುದನು ಸಾರ್ಥಕಗೊಳಿಸಿದ. ಸಾಮಾನ್ಯವಾಗಿ ಆಚಾರ್ಯ ಎನ್ನುವ ಪ್ರಶಸ್ತಿ ಅದು ಬ್ರಾಹ್ಮಣನಿಗೆ ಅಂತ ತಿಳಿದುಕೊಂಡಿದ್ದೇವೆ. ಅದು ಬ್ರಾಹ್ಮಣ ಮಾತ್ರ ಅಲ್ಲ, ಕ್ಷತ್ರಿಯರು- ಇತರರೂ ಅದನ್ನು ಸಂಪಾದನೆ ಮಾಡಬಹುದು ಎಂದು ತೋರಿಸಿಕೊಟ್ಟವ ಭೀಷ್ಮ. ಅವನು ಮೊದಲು ಪ್ರವಚನ ಮಾಡಲಿಲ್ಲ, ಪಾಠ ಹೇಳಲಿಲ್ಲ. ಆದರೆ ಧರ್ಮದೇವತೆಗಳಿಗೆ ಮಾಡಿದ ಪ್ರವಚನ ಇವತ್ತು ಇತಿಹಾಸ ದಾಖಲೆ ಮಾಡಿದೆ. ಅಂತಹ ಆಚಾರ್ಯ, ಭೀಷ್ಮರ ನೆನಪನ್ನು ಇವತ್ತೂ ಅರ್ಘ್ಯ ಕೊಟ್ಟು ನಡೆಸುತ್ತೇವೆ ಅಂದರೆ ಭೀಷ್ಮರ ವ್ಯಕ್ತಿತ್ವ ಎಂತಹದ್ದು ಎಂದು ಊಹಿಸಬಹುದು. ಆದ್ದರಿಂದಲೇ ಆ ವ್ಯಕ್ತಿತ್ವ ತುಂಬಾ ಅಭಿನಂದನೀಯವಾದದ್ದು. ಎಂತಹ ಸಂದರ್ಭ ಬಂದರೂ ಶ್ರೀಕೃಷ್ಣನ

ಸರ್ವೋತ್ತಮತ್ವವನ್ನು ಸಾಧನೆ ಹಾಗೂ ಪ್ರತಿಪಾದನೆ ಮಾಡಿದ ಒಬ್ಬ ಆದರ್ಶ ವ್ಯಕ್ತಿ. ಪಾಂಡವರು ರಾಜಸೂಯಯಾಗ ಮಾಡಿದ ನಂತರ ಅಗ್ರಪೂಜೆಯ ಸಂದರ್ಭ ಯಾರಿಗೆ ಮಾಡಬೇಕು ಎಂದು ಸಮರ್ಥಿಸಿದ ಧೀರರು ಇವರು. ಯದ್ಯಪಿ ಆ ಸಭೆಯಲ್ಲಿ ಭಗವಂತನದ್ದೇ ಒಟ್ಟು ೩ ರೂಪಗಳು ಗೋಚರಿಸುತ್ತಿದ್ದವು. ಆದರೆ ಯುಕ್ತಿಯುಕ್ತವಾಗಿ ಶ್ರೀಕೃಷ್ಣನಿಗೆ ಸಲ್ಲಬೇಕು ಎಂದು ಸಾಧನೆ ಮಾಡಿದ ಅದ್ಭುತ ವ್ಯಕ್ತಿ ಭೀಷ್ಮರು. ದೋಷಗಳಿರುತ್ತದೆ, ದ್ರೌಪದೀ ದೇವಿಗೆ ಅವಮಾನ ಆದಾಗ ತಡೆಯಲಿಲ್ಲ ಅನ್ನುವ ಕಲಿಯ ಬಾಧೆ ಅದು ಇದೆ. ಆದರೆ ಅವುಎಗಳು ಉನ್ನಂತ ದೋಷಗಳು. ನಮ್ಮಿಂದ ಎಣಿಸಲು ಸಾಧ್ಯವಿಲ್ಲ. ಆ ಯೋಗ್ಯತೆ ಕೂಡ ನಮಗಿಲ್ಲ. ಪರಶುಕ್ಷತ್ರಯರನ್ನು ಬಿಟ್ಟರೆ ಎಲ್ಲರಿಗೂ ಕಲಿ ಬಾಧೆ ಇರುತ್ತದೆ. ಅದನ್ನು ಬಿಟ್ಟರೆ ಭೀಷ್ಮ ಒಬ್ಬ ಒಳ್ಳೆಯ ಆದರ್ಶ ವ್ಯಕ್ತಿ. ಅವನ ಉಪದೇಶ ರೂಪವಾದ ಶಾಂತಿಪರ್ವ-ಅನುಶಾಸನ ಪರ್ವಗಳನ್ನು ನಾವು ಅಧ್ಯಯನ ಮಾಡಬೇಕಾದದ್ದು. ಅಂತಹ ಅದ್ಭುತ ಉಪದೇಶವನ್ನು ಸಮಾಜಕ್ಕೆ ನೀಡಲು ಭಗವಂತ ಆರಿಸಿದ್ದು ಈ ಭೀಷ್ಮರನ್ನು. ಅಂತಹ ಭೀಷ್ಮನ ಪರಿಚಯವನ್ನು ಮಾಡಿಕೊಟ್ಟ ವ್ಯಾಸರನ್ನು ಭಕ್ತಿಯಿಂದ ಸ್ಮರಣೆ ಮಾಡುತ್ತೇವೆ.ಅದರ ಪರಿಚಯವನು ಬಿಡಿಸಿಟ್ಟ ಶ್ರೀ ಆಚಾರ್ಯ ಮಧ್ವರನ್ನು, ಶ್ರೀ ವಾದಿರಾಜರನ್ನು ಭಕ್ತಿಯಿಂದ ಸ್ಮರಣೆ ಮಾಡುತ್ತೇವೆ. ಮನುಕುಲದ ಪಿತಾಮಹರಾದ ಶ್ರೀ ಭೀಷ್ಮಾಚಾರ್ಯರು ನಮ್ಮೆಲ್ಲರಿಗೆ ಭಗವಂತನಲ್ಲಿ ಅವಿಚ್ಛಿನ್ನವಾದ ಭಕ್ತಿಯನ್ನು ಕರುಣಿಸಿ, ನಮ್ಮನ್ನು ಸಾಧನ ಮಾಗದಲ್ಲಿ ನಡೆಸಲೆಂದು ಪ್ರಾರ್ಥಿಸುತ್ತೇವೆ.

ನಮ್ಮ ಮಠದ ತತ್ವಸಂಶೋಧನ ಸಂಸತ್ತಿನ ಮಹತ್ತರವಾದ ಯೋಜನೆಯಾದ ಶ್ರೀಮಹಾಭಾರತದ ಶುದ್ಧಪಾಠವನ್ನು ಪ್ರಚುರ ಪಡಿಸುವ ವಿಷಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಶ್ರೀ ಶೇಷಗಿರಿ ಆಚಾರ್ಯರ ಮಹಾಸಾಹಸದ ವಿಶ್ವರೂಪವನ್ನು ನಾವು ಇಲ್ಲಿ ಕಾಣಬಹುದು. ಅವರ ಅನುವಾದದ ಸಾಮರ್ಥ್ಯ ಅದ್ಭುತವಾದದ್ದು. ಒಂದು ರೀತಿಯಲ್ಲಿ ಪ್ರಿಂಟಿಂಗ ಮಿಷನ್ ಎಂದು ಹೇಳಿದರೂ ತಪ್ಪಾಗಲಾರದು. ಅಪ್ಪು ಶ್ರಮಪಟ್ಟು ಈ ಭಾಷಾಂತರವನ್ನು ನಡೆಸಿದ್ದಾರೆ. ಸುಂದರವಾದ ಭಾಷೆ. ಮಿತವಾದ ಅಕ್ಷರಗಳು. ಶೇಷಗಿರಿ ಆಚಾರ್ಯರ ಈ ಭೀಷ್ಮಪರ್ವದ ಕನ್ನಡಾನುವಾದ ಬಹಳ ಅಪೂರ್ವವಾದದ್ದು. ತಮ್ಮ ಈ ಶೇಷ ವಯಸ್ಸಿನಲ್ಲಿಯೂ ಕೂಡಗಿರಿ ಎಂದರೆ ಮಾತಿನಲ್ಲಿ ಮಹಾಸಾಹಸವನ್ನು ನಡೆಸಿದ್ದಾರೆ. ಗಿರಿಯಷ್ಟು (ಬೆಟ್ಟದಷ್ಟು) ಸಾಹಸವನ್ನು ಮಾಡಿದ್ದಾರೆ.

ಅವರು ಅನುವಾದ ಮಾಡುವಾಗ ಬೇರೆ ಬೇರೆ ವ್ಯಾಖ್ಯಾನಗಳ ಕಡೆ ಗಮನ ಹರಿಸಿ, ಅದರಲ್ಲಿ ಬಹಳ ಸುಂದರವಾದ ಚಿಂತನೆಯನ್ನು ನಡೆಸಿ ಅದರಿಂದ ಮಥಿತವಾದ ಬೆಣ್ಣೆಯಂತಿರುವ ಚಿಂತನೆಗಳನ್ನು - ಪಾಠಗಳನ್ನು ನೀಡಿದ್ದಾರೆ. ಅವರನ್ನು ಹೃದಯ ತುಂಬಿ ಅಭಿನಂದಿಸುತ್ತಿದ್ದೇವೆ. ಈ ಮಹತ್ಕಾರ್ಯದಲ್ಲಿ ಕೈಜೋಡಿಸಿದ ಎಲ್ಲ ವಿದ್ವಾಂಸರಿಗೆ ಶ್ರೀಪ್ರಾಣದೇವರು - ಶ್ರೀಸೀತಾಪತಿ ರಾಮದೇವರು- ಶ್ರೀಕೃಷ್ಣ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು

ಶ್ರೀ ಪಲಿಮಾರು ಕೃಷ್ಣೇಶ ಮಠ, ಉಡುಪಿ.

ನಿರ್ದೇಶಕರ ನುಡಿ

ಭೀಷ್ಮರು ಎಂಬ ಶಬ್ದ ಕೇಳಿದ ತಕ್ಷಣ ಅವರ ಔನ್ನತ್ಯ, ಔದಾರ್ಯ, ಗಾಂಭೀರ್ಯಾದಿಗಳು ನಮ್ಮ ಸ್ಮೃತಿಪಟಲಕ್ಕೆ ಬರುತ್ತವೆ. ಭೀಷ್ಮಾಚಾರ್ಯರಿಗೆ ಆ ಹೆಸರು ಬಂದದ್ದೇ ಅವರ ಆ ಕ್ರಿಯೆ ಅಂದರೆ ಗಂಭೀರವಾದಂತಹ ಪ್ರತಿಜ್ಞೆಯಿಂದ. ಭೀಷ್ಮರನ್ನು ನಾವು ನಿತ್ಯ ಚಿಂತನೆ ಮಾಡಬೇಕು. ಭೀಷ್ಮರ ಬಗ್ಗೆ ನಾವು ಹೇಳುವುದಕ್ಕಿಂತಲೂ ಕೂಡ ಶ್ರೀಕೃಷ್ಣನೇ ಎಂತಹ ಉದಾತ್ತವಾದ ಶಬ್ದಗಳಿಂದ ಹೊಗಳುತ್ತಾನೆ. ಮಹಾಭಾರತದ ಶಾಂತಿಪರ್ವದಲ್ಲಿ ಭೀಷ್ಮರ ಬಳಿಗೆ ತನ್ನ ಈ ಪಾಂಡವರನ್ನೆಲ್ಲಾ ಕರೆದುಕೊಂಡು ಹೋಗುವ ಪ್ರಸಂಗ ಬಂದಾಗ ಧರ್ಮರಾಜನಿಗೆ ಭೀಷ್ಮರ ಬಗ್ಗೆ ಕೆಲವು ಚಿಂತನೆಗಳನ್ನು ಶ್ರೀಕೃಷ್ಣನು ಕೊಡುತ್ತಾನೆ. ಸುಮಾರು 14 ಶ್ಲೋಕಗಳಲ್ಲಿ ಭೀಷ್ಮರ ಗುಣಚಿಂತನೆಯನ್ನು ಶ್ರೀಕೃಷ್ಣ ಮಾಡುತ್ತಾನೆ. ಸರ್ವೋತ್ತಮನಾದ ಶ್ರೀಕೃಷ್ಣನೇ ಒಬ್ಬ ವ್ಯಕ್ತಿಯ ಬಗ್ಗೆ ಈ ರೀತಿ ಚಿಂತನೆ ಮಾಡುತ್ತಿದ್ದಾನೆ ಎಂದರೆ ಆ ವ್ಯಕ್ತಿಯ ವ್ಯಕ್ತಿತ್ವ ಎಂತಹ ಎತ್ತರದ್ದು ಎಂದು ನಾವು ಚಿಂತನೆ ಮಾಡಬಹುದು. ಅಲ್ಲಿ ಹೇಳುವ 14 ಶ್ಲೋಕಗಳಲ್ಲಿ ಶ್ರೀಕೃಷ್ಣನು, ಪರಶುರಾಮ ದೇವರ ತುಂಬಾ ಪ್ರೀತಿಪಾತ್ರ ಶಿಷ್ಯ ಎಂದು ಇತ್ಯಾದಿಯಾಗಿ ಭೀಷ್ಮರ ವರ್ಣನೆ ಮಾಡುತ್ತಾನೆ. ಅದರಲ್ಲಿ ಒಂದೆರಡು ತುಣುಕುಗಳನ್ನು ನಾವು ಚಿಂತನೆ ಮಾಡುವುದಾದರೆ-

ದಿವ್ಯಾಸ್ತ್ರಾಣಿ ಮಹಾತೇಜಾಃ ಯೋ ಧಾರಯತಿ ಬುದ್ಧಿಮಾನ್ ।
ಸಾಂಗಾಂಶ್ಚ ಚತುರೋ ವೇದಾನ್ ತಮಸ್ಮಿ ಮನಸಾ ಗತಃ ॥

ರಾಮಸ್ಯ ದಯಿತಂ ಶಿಷ್ಯಂ ಜಾಮದಗ್ನ್ಯಸ್ಯ ಪಾಂಡವ ।
ಆಧಾರಂ ಸರ್ವವಿದ್ಯಾನಾಂ ತಮಸ್ಮಿ ಮನಸಾ ಗತಃ ॥

ಎಂದು ಮನದುಂಬಿ ಹೊಗಳುತ್ತಾನೆ ಶ್ರೀಕೃಷ್ಣ. ದಿವ್ಯಾಸ್ತ್ರಗಳು ಎಂದು ಏನೆಲ್ಲಾ ಉಂಟೋ ಎಲ್ಲವನ್ನೂ ಧಾರಣೆ ಮಾಡಿದ ಬುದ್ಧಿವಂತ ಭೀಷ್ಮ. ಇಡೀ ಕುರುವಂಶದಲ್ಲಿ ಬಂದವರಲ್ಲಿ ಬಹಳ ಬುದ್ಧಿವಂತ ಈ ಭೀಷ್ಮ ಎಂಬ ಚಿಂತನೆಯನ್ನು ಕೃಷ್ಣ ಕೊಡುತ್ತಾನೆ. ಅಷ್ಟು ಮಾತ್ರವಲ್ಲ, ''**ಸಾಂಗಾಂಶ್ಚ ಚತುರೋವೇದಾನ್**'' ಎಂದು ಕೃಷ್ಣ ಹೇಳುತ್ತಾನೆ. ಷಡಂಗ ಸಹಿತವಾದ ಸಮಸ್ತ ವೇದಗಳ ಅಧ್ಯಯನ ಮಾಡಿದವ, ಅಂದರೆ ಕೇವಲ ಓದಿದವನಲ್ಲ, ಪೂರ್ಣ ಪ್ರಮಾಣದಲ್ಲಿ ಅರ್ಥಚಿಂತನೆಯನ್ನು ಮಾಡಿದವ ಎಂದು ಅರ್ಥ. ಅನಂತರ 'ಜಾಮದಗ್ನ್ಯಸ್ಯ ರಾಮಸ್ಯ ದಯಿತಂ ಶಿಷ್ಯಂ' ಎಂಬ ವಿಶೇಷಣ ಕೊಡುತ್ತಾನೆ ಶ್ರೀಕೃಷ್ಣ ಅಂದರೆ ಪರಶುರಾಮದೇವರ ಪ್ರೀತಿಪಾತ್ರ ಶಿಷ್ಯ ಎಂದು ಅರ್ಥ. ಅದಕ್ಕಾಗಿಯೇ ಪರಶುರಾಮದೇವರು ತಮ್ಮ ಪ್ರೀತಿಪಾತ್ರ ಶಿಷ್ಯನಾದ ಭೀಷ್ಮನಿಗೆ ತಮ್ಮ

ಸರ್ವವಿದ್ಯೆಗಳನ್ನು ಧಾರೆ ಎರೆದರು. ಶ್ರೀಮದಾಚಾರ್ಯರು ತಾತ್ಪರ್ಯನಿರ್ಣಯದಲ್ಲಿ ತಿಳಿಸುತ್ತಾರೆ– ಸುಮಾರು 570 ವರ್ಷಗಳ ಕಾಲ ಅಧ್ಯಯನಕ್ಕಾಗಿ ಮೀಸಲಿಟ್ಟವರು ಭೀಷ್ಮರು. ಅದಕ್ಕಾಗಿಯೇ ಕೃಷ್ಣನಿಗೆ ಅಷ್ಟೊಂದು ಭೀಷ್ಮರ ಬಗ್ಗೆ ಪ್ರೀತಿ. ಹೀಗೆ ಮಹಾಭಾರತ ಯುದ್ಧದ ಕೊನೆಯಲ್ಲಿ ಕೃಷ್ಣನು ಆಯುಧವನ್ನು ಹಿಡಿಯುವುದಿಲ್ಲ ಎಂಬ ತನ್ನ ಮಾತನ್ನೂ ಕೂಡ ಈ ಭೀಷ್ಮರಿಗೋಸ್ಕರ ತ್ಯಾಗ ಮಾಡಿ, ಭೀಷ್ಮರ ಮಾತನ್ನು ಸತ್ಯ ಮಾಡಲು ಆಯುಧವನ್ನು ಹಿಡಿಯುತ್ತಾನೆ. ಅದನ್ನು ಸಹಸ್ರನಾಮದ ಕೊನೆಯಲ್ಲಿ ಭೀಷ್ಮರು 'ರಥಾಂಗಪಾಣಿಃ' ಎಂಬ ಶಬ್ದದ ಮೂಲಕ ಉಲ್ಲೇಖ ಮಾಡುತ್ತಾರೆ. ಹೀಗೆ ಅದ್ಭುತ ವ್ಯಕ್ತಿತ್ವವನ್ನು ತಾಳಿಕೊಂಡವರು ಭೀಷ್ಮಾಚಾರ್ಯರು.

ಎಂಟುನೂರು ವರ್ಷಗಳ ಕಾಲದಷ್ಟು ಆಯುಷ್ಯವನ್ನು ಪಡೆದುಕೊಂಡು ಈ ಭೂಮಿಯಲ್ಲಿ ಸ್ವಲ್ಪವೂ ತನ್ನ ಭಕ್ತಿಯಲ್ಲಿ ಕುಂದುಬಾರದೆ ತಮ್ಮ ಜೀವನವನ್ನು ನಡೆಸಿದ ಆದರ್ಶ ವ್ಯಕ್ತಿತ್ವವುಳ್ಳವರು ಭೀಷ್ಮಾಚಾರ್ಯರು. ಜಗತ್ತಿನಲ್ಲಿ ಮಗನಿಗೆ ಹೆಣ್ಣನ್ನು ಹುಡುಕಿ, ಮದುವೆ ಮಾಡಿ, ರಾಜ್ಯವನ್ನು ಧಾರೆ ಎರೆಯುವಂತಹ ತಂದೆಯರನ್ನು ನೋಡಿದ್ದೇವೆ. ಆದರೆ ಮಗನೇ ತಂದೆಗೋಸ್ಕರ ಒಂದು ಹೆಣ್ಣುಮಗಳನ್ನು ಧಾರೆ ಎರೆದು, ತಂದೆಯ ವಿವಾಹಗೋಸ್ಕರ ತನ್ನ ಸಿಂಹಾಸನವನ್ನೇ ತ್ಯಾಗ ಮಾಡಿರುವಂತಹ ತ್ಯಾಗಮೂರ್ತಿ ಭೀಷ್ಮಾಚಾರ್ಯರು. ಯಾರ ಕೃತಿಗಳನ್ನು, ಯಾರ ಗುಣಗಳನ್ನು ನೋಡಿ ಐದು ಸಾವಿರ ವರ್ಷಗಳಾದರೂ ಭೀಷ್ಮಾಷ್ಟಮೀ ದಿನದಂದು ಎಲ್ಲ ಅಧಿಕಾರಿಗಳು, ಅನಧಿಕಾರಿಗಳೂ ಸಹ ಅವರಿಗೆ ತರ್ಪಣವನ್ನು ಕೊಡಬೇಕೆಂದು ಶ್ರೀಕೃಷ್ಣನು ವಿಧಿಮಾಡಿದ್ದಾನೋ ಅಂತಹ ಆ ಭೀಷ್ಮರ ವ್ಯಕ್ತಿತ್ವ ಎಂತಹ ಉನ್ನತ ಮಟ್ಟದ್ದೆಂದು ನಾವು ಆಲೋಚಿಸಬಹುದಾಗಿದೆ. ನಮಗೆ ಆಹಾರದ ವ್ಯವಸ್ಥೆಯನ್ನು ಯಾವ ರೀತಿ ಮಾಡಿಕೊಂಡರೆ ನಮ್ಮ ಬುದ್ಧಿ ಹೇಗಿರುತ್ತದೆ ಎಂಬುದಕ್ಕೆ ಜ್ವಲಂತ ನಿದರ್ಶನ ಭೀಷ್ಮರು. ಪಿತೃಭಕ್ತಿ ಹೀಗೆ ಮಾಡಬೇಕೆಂದು ತೋರಿಸಿಕೊಟ್ಟವರು ಭೀಷ್ಮರು. ಉಳಿದ ರಾಜರುಗಳಲ್ಲಿ ಒಬ್ಬ ಕ್ಷತ್ರಿಯರು ಹೇಗಿರಬೇಕೆಂಬುದನ್ನು ತಿಳಿಸಿಕೊಟ್ಟವರು ಭೀಷ್ಮರು. ಒಂದು ವಂಶದ ಹಿರಿಯನಾದವನು ಹೇಗಿರಬೇಕೆಂದು ತಿಳಿಸಿಕೊಟ್ಟವರು ಭೀಷ್ಮರು. ಹೀಗೆ ನಡವಳಿಕೆಯ ಮೂಲಕ ಇಡೀ ಜನಾಂಗಕ್ಕೇ, ಜಗತ್ತಿಗೇ ಅದ್ಭುತವಾದ ನೀತಿ ಪಾಠವನ್ನು ಕೊಟ್ಟಿರುವಂತಹ ವ್ಯಕ್ತಿ ಭೀಷ್ಮಾಚಾರ್ಯರು.

ಭೀಷ್ಮಾಚಾರ್ಯರ ಜೀವನದ ಮತ್ತೊಂದು ಘಟನೆ ನೋಡುವುದಾದರೆ ರಾಜಸೂಯ ಯಾಗದ ನಂತರ ಅಗ್ರಪೂಜೆಯು ಯಾರಿಗೆ ಎಂಬ ದೊಡ್ಡ ಸಮಸ್ಯೆ ಧರ್ಮರಾಜನಿಗೆ ಎದುರಾದಾಗ ಅಲ್ಲಿ ಯದ್ಯಪಿ ಭಗವಂತನ ಇನ್ನೂ ಎರಡು

ರೂಪಗಳಾದ ವೇದವ್ಯಾಸ ಮತ್ತು ಪರಶುರಾಮ ರೂಪಗಳಿದ್ದರೂ ಕೃಷ್ಣನಿಗೇ ಅಗ್ರಪೂಜೆ ಎಂದು ಘಂಟಾಘೋಷವಾಗಿ ಹೇಳಿ ಅದಕ್ಕೆ ಸಂಬಂಧಪಟ್ಟ ಪ್ರಮಾಣಗಳನ್ನೂ ಸಹ ಹೇಳಿ ಅಗ್ರಪೂಜೆಯನ್ನು ಕೃಷ್ಣನಿಗೆ ಸಲ್ಲುವಂತೆ ಮಾಡಿದ ದೊಡ್ಡ ಸಾಹಸವನ್ನು ಭೀಷ್ಮಾಚಾರ್ಯರು ಮಾಡಿದರು.

ಹೀಗೆ ಭೀಷ್ಮಾಚಾರ್ಯರ ವ್ಯಕ್ತಿತ್ವವನ್ನು ತಿಳಿಸುವಂತಹ, ಅದಕ್ಕಾಗಿಯೇ 'ಭೀಷ್ಮಪರ್ವ' ಎಂಬ ಹದಿನೆಂಟು ಪರ್ವಗಳಲ್ಲಿ ಒಂದು ಪರ್ವವನ್ನು ವೇದವ್ಯಾಸರು ಇವರಿಗಾಗಿಯೇ ಮೀಸಲಿಟ್ಟಿದ್ದಾರೆ. ಇನ್ನೂ ಹಲವಾರು ಕಾರಣಗಳು ಈ ಭೀಷ್ಮ ಪರ್ವದಲ್ಲಿ ಅಡಗಿದೆ.

ಮಹಾಭಾರತದ 10 ದಿನಗಳ ಯುದ್ಧದಲ್ಲಿ ಭೀಷ್ಮರ ಪರಿಚಯ ಈ ಪರ್ವ ಮಾಡಿಕೊಡುತ್ತದೆ. ಮಹಾಭಾರತದ ಒಂದೊಂದು ಶಬ್ದವೂ ಕೂಡ ನಮಗೆ ಮೂರು-ಮೂರು ಅರ್ಥಗಳನ್ನು ಕೊಡುತ್ತದೆ ಎಂಬ ಹಿರಿಯ ವಾಣಿಯೂ ಇದೆ. ಅದು ಭೀಷ್ಮರ ವ್ಯಕ್ತಿತ್ವದ ಚಿಂತನೆಯನ್ನು ಕೊಡುವಾಗ ಪೂರ್ಣವಾಗಿ ಸತ್ಯ . ಅಂತಹ ಮಹಾಭಾರತದ ಭೀಷ್ಮ ಪರ್ವದ ಕನ್ನಡ ಅನುವಾದ ಸಹಿತ ಶುದ್ಧ ಪಾಠವನ್ನು ಆಚಾರ್ಯ ಮಧ್ವರ ತಾತ್ಪರ್ಯ ನಿರ್ಣಯ ಹಾಗೂ ಭಾಷ್ಯಸೀಮೀರ ವಾದಿರಾಜ ಶ್ರೀಪಾದರ ಲಕ್ಷಾಲಂಕಾರಕ್ಕೆ ಒಪ್ಪುವಂತಹ ಪಾಠವನ್ನು ನಾವು ಇಲ್ಲಿ ನೀಡುತ್ತಿದ್ದೇವೆ. ಇದನ್ನು ಪಡೆದುಕೊಂಡು ಸಮಸ್ತ ಆಸ್ತಿಕ ಬಂಧುಗಳು ಭಾರತದ ಅಧ್ಯಯನವನ್ನು ನಡೆಸಬೇಕು. ಇಂತಹ ಅಪೂರ್ವವಾದ ಮಹಾಭಾರತದ ಶುದ್ಧ ಪ್ರತಿಯ ಸಂಶೋಧನೆಯನ್ನು ಹಮ್ಮಿಕೊಳ್ಳಲು ಪ್ರಧಾನ ಕಾರಣರಾದ ಹಾಗೂ ಸಕ್ರಿಯವಾಗಿ ಬೆನ್ನೆಲುಬಾಗಿ ಮತ್ತು ಅಂತರಂಗದಿಂದ ಕೆಲಸ ಮಾಡಿಸುವಂತಹ ಗುರುಗಳಾದ, ತತ್ತ್ವ ಸಂಶೋಧನ ಸಂಸತ್ತಿನ ಅಧ್ಯಕ್ಷರಾದ, ಪ್ರಸಕ್ತ ಪರ್ಯಾಯ ಪೀಠಾಧಿಪತಿಗಳಾದ, ಪಲಿಮಾರು ಮಠದ **ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು.** ಈ ಗುರುಗಳನ್ನು ಪಡೆದ ನಾವೇ ಧನ್ಯರು. ಇಂತಹ ಗುರುಗಳು ಪೂರ್ಣರೀತಿಯಲ್ಲಿನಮ್ಮಿಂದ ಕೆಲಸವನ್ನು ಮಾಡಿಸುವಂತಹ ಕಾರುಣ್ಯಕ್ಕೆ 'ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ' ಅನಂತ ಸಾಷ್ಟಾಂಗ ನಮನಗಳನ್ನು ಸಮರ್ಪಣೆ ಮಾಡುತ್ತಿದ್ದೇವೆ.

ಅದೇ ರೀತಿ ಈ ಕೆಲಸಕ್ಕೆ ಸಹಕಾರ ಮಾಡಿರುವ ಭೀಷ್ಮಪರ್ವದ ಕನ್ನಡದ ಅನುವಾದವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟು ದೊಡ್ಡ ಸಾಹಸವನ್ನೇ ಮಾಡಿದ ಇದಕ್ಕಾಗಿ ಈ ಇಳಿವಯಸ್ಸಿನಲ್ಲಿ ತಮ್ಮ ಜೀವನವನ್ನೇ ಮೀಸಲಾಗಿಟ್ಟಿರುವ ನಾಡಿನ ಶ್ರೇಷ್ಠ ವಿದ್ವಾಂಸರೂ, ಸಂಶೋಧಕರೂ ಆಗಿರುವಂತಹ ನಮ್ಮ ಸಂಸತ್ತಿನ, ಪಲಿಮಾರು ಮಠದ

ವಿಶೇಷ ಅಭಿಮಾನಿಗಳಾಗಿರುವ **ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ**ರಿಗೆ ಹೃತ್ಪೂರ್ವಕ ನಮನಗಳ ಮೂಲಕ ಅಭಿವಂದನೆಗಳನ್ನು ಮಾಡುತ್ತಿದ್ದೇವೆ.

ಅದೇ ರೀತಿಯಲ್ಲೀ ಗ್ರಂಥದ ಪ್ರಕಟನೆ ಮಾಡುವ ವಿಷಯದಲ್ಲಿ ಆರ್ಥಿಕವಾಗಿ ನಮಗೆ ಸಹಕಾರ ನೀಡಿದ, ನೀಡುತ್ತಿರುವ ಕರ್ನಾಟಕ ಸರ್ಕಾರಕ್ಕೆ ಎಲ್ಲಪದಾಧಿಕಾರಿಗಳಿಗೆ ನಮ್ಮ ಸಂಸತ್ತಿನಿಂದ ಹೃತ್ಪೂರ್ವಕ ಧನ್ಯವಾದಗಳನ್ನು ಸಮರ್ಪಣೆ ಮಾಡುತ್ತಿದ್ದೇವೆ.

ಈ ಮಹಾಭಾರತದ ಯೋಜನೆಯಲ್ಲಿ ತೊಡಗಿರುವ ಎಲ್ಲ ವಿದ್ವಾಂಸರು, ಮುಖ್ಯವಾಗಿ ಯೋಜಕರಾಗಿರುವ, ಎಲ್ಲ ವಿದ್ವಾಂಸರನ್ನು ಸೇರಿಸಿ ಯೋಜನೆಯನ್ನು ರೂಪಿಸಿ ಅದ್ಭುತವಾದ ಕಾರ್ಯವನ್ನು ಮಾಡುತ್ತಿರುವ ನಮ್ಮ ನಾಡಿನ ಶ್ರೇಷ್ಠ ಪ್ರವಚನ-ಕಾರರೂ, ವಿದ್ವಾಂಸರೂ ಆಗಿರುವಂತಹ **ಡಾ॥ ಬಿ.ನಾ. ವಿಜಯೀಂದ್ರಾಚಾರ್ಯ**ರಿಗೆ ಹೃತ್ಪೂರ್ವಕ ನಮನಗಳನ್ನು ಸಮರ್ಪಿಸುತ್ತೇವೆ.

ಅದೇ ರೀತಿ ಅಕ್ಷರ ಜೋಡಣೆಯನ್ನು ಮಾಡಿರುವ ನಮ್ಮವರೇ ಆದ ಶ್ರೀ ಶರತ್ ಚಂದ್ರ ಹಾಗೂ ಶ್ರೀ ಸುಬ್ಬಣ್ಣರವರಿಗೆ, ಈ ಗ್ರಂಥವನ್ನು ಅಂದವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಮುದ್ರಣ ಮಾಡಿಕೊಟ್ಟಂತಹ ಪವನ್ ಪ್ರಿಂಟರ್ಸ್‌ನ ಶ್ರೀ ಮಂಜುನಾಥ್‌ರವರಿಗೂ ನಮ್ಮ ಸಂಸತ್ತಿನ ಪರವಾಗಿ ಧನ್ಯವಾದಗಳು.

ಹಾಗೆಯೇ ಈ ಕಾರ್ಯಕ್ಕೆ ಸಹಕಾರ ಮಾಡಿದ, ಮಾಡುತ್ತಿರುವ, ಇನ್ನು ಮುಂದೆ ಮಾಡುವಂತಹ ತತ್ತ್ವಸಂಶೋಧನ ಸಂಸತ್ತಿನ ಎಲ್ಲ ಪದಾಧಿಕಾರಿಗಳಿಗೂ ಹಾಗೂ ಶ್ರೀ ಪಲಿಮಾರು ಮಠದ ಎಲ್ಲ ಪದಾಧಿಕಾರಿಗಳಿಗೆ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ವಂದನೆಗಳು.

ಎಲ್ಲ ಆಸ್ತಿಕರು ಈ ಗ್ರಂಥದ ಅಧ್ಯಯನ ಮಾಡಿದರೆ, ಇಷ್ಟು ವಿದ್ವಾಂಸರ ಶ್ರಮ, ಶ್ರೀಗಳವರ ಸಂಕಲ್ಪ ಸಾರ್ಥಕ. ಭಾರತದಲ್ಲಿ ಹುಟ್ಟಿದ್ದಕ್ಕೆ ಮಹಾಭಾರತದ ಚಿಂತನೆಯನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಉದ್ಧರಾಗೋಣ ಎಂದು ಆಶಿಸುತ್ತೇನೆ.

ಡಾ॥ ವಂಶೀಕೃಷ್ಣಾಚಾರ್ಯ ಪುರೋಹಿತ್
ನಿರ್ದೇಶಕರು, ತತ್ತ್ವಸಂಶೋಧನಸಂಸತ್,
ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಭೀಷ್ಮಪರ್ವವನ್ನು ಕುರಿತು

ಭೀಷ್ಮ ಪರ್ವವು ಮಹಾಭಾರತದ ಆರನೆಯ ಪರ್ವ. ಇದರಲ್ಲಿ ಜಂಬೂಷಂಡ ನಿರ್ಮಾಣಪರ್ವ, ಭೂಮಿಪರ್ವ, ಭಗವದ್ಗೀತಾ ಪರ್ವ, ಭೀಷ್ಮವಧ ಪರ್ವಗಳೆಂಬ ನಾಲ್ಕು ಅವಾಂತರ ಪರ್ವಗಳೂ ಒಟ್ಟು ನೂರಹತ್ತೊಂಬತ್ತು ಅಧ್ಯಾಯಗಳೂ ಇವೆ.

ಜಂಬೂಷಂಡ ನಿರ್ಮಾಣಪರ್ವ ಮತ್ತು ಭೂಮಿಪರ್ವಗಳಲ್ಲಿ ಜಂಬೂದ್ವೀಪದ, ಉಳಿದ ದ್ವೀಪಗಳ ಮತ್ತು ಲವಣಾದಿ ಸಮುದ್ರಗಳ ಪರಿಮಾಣಾದಿ ವರ್ಣನೆ ಇದೆ. ಶ್ರೀಮದ್ಭಾಚಾರ್ಯರು ಐದನೆಯ ಸ್ಕಂಧದ ಭಾಗವತ ತಾತ್ಪರ್ಯನಿರ್ಣಯದಲ್ಲಿ ಹೇಳಿರುವಂತೆ ಭಾಗವತಕ್ಕೆ ಅನುಗುಣವಾಗಿ ಅರ್ಥಮಾಡಿಕೊಳ್ಳಬೇಕು. ದಧಿಸಮುದ್ರ ದ್ವೀಪವನ್ನು ಜಂಬೂಪರ್ವತವೆಂದು ಉಲ್ಲೇಖಿಸಿದ್ದಾರೆ. ಇದೊಂದು ಗಮನಿಸಬೇಕಾದ ಅಂಶ. ಅಂಚಿನಲ್ಲಿರುವ ಲವಣಸಮುದ್ರದಿಂದ ಹಿಡಿದು ಮಧ್ಯದಲ್ಲಿರುವ ಮೇರು ಪರ್ವತದವರೆಗೆ ಕ್ರಮವಾಗಿ ಎತ್ತರ ಎತ್ತರವಾಗಿರುವುದರಿಂದ ಜಂಬೂಪರ್ವತವೆಂದು ಕರೆದಿದ್ದಾರೆಂದು ಲಕ್ಷಾಲಂಕಾರದಲ್ಲಿ ಸಮರ್ಥನೆ ಇದೆ. ಸೂರ್ಯನ ಗತಿ, ಹಗಲು ರಾತ್ರಿಗಳ ಗಣನೆಗಳಲ್ಲಿ ಈ ಅಂಶವು ಉಪಯೋಗಕ್ಕೆ ಬರಬಹುದು.

ಭಗವದ್ಗೀತಾ ಪರ್ವವು ಅದರಲ್ಲಿಯೂ ಭಗವದ್ಗೀತೆಯು ಭೀಷ್ಮಪರ್ವದ ಅತ್ಯಂತ ಸಾರವಾದ ಭಾಗ. 'ಭಾರತಂ ಸರ್ವಶಾಸ್ತ್ರೇಷು ಗೀತಿಕಾವರಾ। ವಿಷ್ಣೋಃ ಸಹಸ್ರನಾಮಾಪಿ ಜ್ಞೇಯಂ ಪಾಠ್ಯಂ ಚ ತದ್ ದ್ವಯಮ್' ಎಂಬ ಪ್ರಸಿದ್ಧ ಸ್ಮೃತಿ ವಾಕ್ಯದಂತೆ ಈ ಪರ್ವದಲ್ಲಿ ಬರುವ ಭಗವದ್ಗೀತೆ ಮತ್ತು ಅನುಶಾಸನ ಪರ್ವದಲ್ಲಿ ಬರುವ ವಿಷ್ಣುಸಹಸ್ರನಾಮ ಎರಡೂ ಬಹಳ ಮುಖ್ಯವಾದವು. ಅವುಗಳಲ್ಲಿ ಗೀತೆಯ ಭಗವಂತನೇ ಭಕ್ತರಿಗೆ ತನ್ನ ಮಹಿಮೆಯನ್ನು ಹೇಳಿ ತತ್ತ್ವಜ್ಞಾನವನ್ನು ಉಂಟುಮಾಡುವ ಉಪದೇಶವಾದರೆ ವಿಷ್ಣುಸಹಸ್ರನಾಮವು ಭಗವಂತನ ಅಂತಹ ಮಹಿಮೆಯನ್ನು ತಿಳಿದ ಭಕ್ತನು ಒಂದೊಂದು ನಾಮದಲ್ಲಿಯೂ ಭಗವಂತನ ನೂರಾರು ಗುಣಗಳನ್ನು ಚಿಂತನೆ ಮಾಡುವ ಸ್ತೋತ್ರವಾಗಿದೆ. ಅಷ್ಟಮಠಗಳ ತುಳುಲಿಪಿಯ ತಾಳೆಗರಿಗಳಲ್ಲಿ ಒಂದು ವಿಶೇಷವೆಂದರೆ ಗೀತೆಯಲ್ಲಿ ಬೇರೆ ಯಾವ ಮುದ್ರಿತ ಪುಸ್ತಕಗಳಲ್ಲಾಗಲೀ ಅಥವಾ ಹಸ್ತಪ್ರತಿಗಳಲ್ಲಾಗಲೀ ಸಿಗದಿರುವ ಎಂಟು-ಹತ್ತು ಶ್ಲೋಕಗಳು ಇವುಗಳಲ್ಲಿ ಕಂಡುಬರುತ್ತವೆ. ಅವು ಆಯಾ ಪ್ರಕರಣಗಳಲ್ಲಿ ಸಂಗತವಾಗಿರುವುದರಿಂದ ಅವುಗಳನ್ನು ಈ ಪುಸ್ತಕದಲ್ಲಿ ಸೇರಿಸಲಾಗಿದೆ. ಭಗವದ್ಗೀತೆಯ ಅನುವಾದವನ್ನು ಮಾಡುವಾಗ ಮುಖ್ಯವಾಗಿ ಲಕ್ಷಾಲಂಕಾರವನ್ನೇ ಅನುಸರಿಸಲಾಗಿದೆ. ಲಕ್ಷಾಲಂಕಾರವಿಲ್ಲದಿರುವ ಸ್ಥಳಗಳಲ್ಲಿ ಶ್ರೀರಾಘವೇಂದ್ರಸ್ವಾಮಿಗಳವರ ಗೀತಾವಿವೃತ್ತಿಯನ್ನು ಅನುಸರಿಸಲಾಗಿದೆ.

ಮಹಾಭಾರತಕ್ಕೇ ಪ್ರಾಧಾನ್ಯವನ್ನು ಕೊಟ್ಟು ಇಲ್ಲಿ ಗೀತೆಯ ಅನುವಾದವನ್ನು ಸಂಕ್ಷೇಪವಾಗಿಯೇ ಮಾಡಲಾಗಿದೆ. ಗೀತಾಭಾಷ್ಯ, ಗೀತಾ ತಾತ್ಪರ್ಯ, ಪ್ರಮೇಯ ದೀಪಿಕಾದ ಗ್ರಂಥಗಳನ್ನು ಅನುಸರಿಸುವ ಗೀತೆಯದೇ ಸ್ವತಂತ್ರವಾದ ಅಧ್ಯಯನವು ಬೇರೆಯೇ ಇದೆ ಎಂದು ವಿದ್ವಜ್ಜನರಿಗೆ ನಿವೇದಿಸಿಕೊಳ್ಳುತ್ತಿದ್ದೇವೆ.

ಭೀಷ್ಮಪರ್ವದಲ್ಲಿ ಭೀಷ್ಮರು ಸೇನಾಪತಿಯಾಗಿ ಮಾಡಿದ ಹತ್ತು ದಿವಸಗಳ ಯುದ್ಧ ಮತ್ತು ಅವರ ಪಾತ, ಶರಪಂಜರದಲ್ಲಿ ಶಯನಗಳು ವರ್ಣಿಸಲ್ಪಟ್ಟಿವೆ. ಯೋಧನಾಗಿ ಪ್ರತಿದಿನವೂ ಯುದ್ಧಕ್ಕೆ ಹೋಗುವ ಸಂಜಯನು ಆ ದಿನದ ಯುದ್ಧವು ಮುಗಿದ ಮೇಲೆ ಧೃತರಾಷ್ಟ್ರನ ಬಳಿಗೆ ಬಂದು ಯುದ್ಧದ ಎಲ್ಲಾ ವೃತ್ತಾಂತವನ್ನೂ ವೇದವ್ಯಾಸರು ಅವನಿಗೆ ಕೊಟ್ಟ ದಿವ್ಯದೃಷ್ಟಿಯ ಬಲದಿಂದ ಹೇಳುತ್ತಾನೆ. ಭೀಷ್ಮರ ಪಾತದ ನಂತರ ಮೊದಲ ಬಾರಿಗೆ ಬಂದು ಹೇಳಿದಾಗ ಆಶ್ಚರ್ಯ-ಖೇದಗಳಿಂದ ಕೂಡಿದ ಧೃತರಾಷ್ಟ್ರನು ಮೊದಲಿನಿಂದಲೂ ಎಲ್ಲವನ್ನೂ ಹೇಳುವಂತೆ ಆದೇಶಿಸುತ್ತಾನೆ. ಅನಂತರ ಸಂಜಯನು ಗೀತೋಪದೇಶ ಸಂದರ್ಭದಿಂದ ಆರಂಭಿಸಿ ಪ್ರತಿದಿನದ ಯುದ್ಧವನ್ನು ಹೇಳುತ್ತಾನೆ ಎಂಬುದು ಗಮನಿಸಬೇಕಾದ ಒಂದು ಅಂಶ.

ಭೀಷ್ಮಪರ್ವದಿಂದ ಆರಂಭಿಸಿ ಗದಾಯುದ್ಧಪರ್ವವು ಮುಗಿಯುವವರೆಗೂ ಎಲ್ಲವೂ ಯುದ್ಧಪರ್ವಗಳು. ಇವುಗಳಲ್ಲಿ ರಥಗಳ, ರಥಾಂಗಗಳ, ಆಯುಧಗಳ ಅನೇಕ ಉಲ್ಲೇಖಗಳು ಬರುತ್ತವೆ. ರಥದ ಅಂಗಗಳನ್ನು ಕೋಶವನ್ನು ನೋಡಿ ಸ್ವಲ್ಪಮಟ್ಟಿಗೆ ಅರ್ಥ ಮಾಡಿಕೊಳ್ಳಬಹುದಾದರೂ, ಆ ಕಾಲದಲ್ಲಿದ್ದ ಆಯುಧಗಳ ಪರಿಚಯವು ಕೋಶಕಾರರಿಗೂ ಇಲ್ಲವಾದ ಕಾರಣ ಆ ಶಬ್ದಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

ರಥ ಪ್ರಸಿದ್ಧವಾದುದು. ರಥೋಪಸ್ಥ ಎಂದರೆ ರಥಿಕನಿರುವ ರಥದ ಪೀಠ. ರಥನೀಡವು ರಥೋಪಸ್ಥದ ಮುಂಭಾಗ. ಈಷಾ ಎಂದರೆ ಮೂಕಿ. ಯುಗ ಎಂದರೆ ನೊಗ (Yoke). ಅನುಕರ್ಷ= ಮೂಕಿಯ ಕೆಳಗಿರುವ ಇನ್ನೊಂದು ಮರದ ತುಂಡು. ಅಕ್ಷ= ತೂಬು (axel), ನಾಭಿ= ಚಕ್ರದ ಮಧ್ಯಭಾಗ (navel). ಯೋಕ್ತ್ರ ಎಂದರೆ ನೊಗದ ಎರಡು ಕಡೆ ಇರುವ ಹಗ್ಗ ಸಹಿತವಾದ ಕಡಗೂಟಗಳು. ಕೀಲಕ ಎಂದರೆ ಚಕ್ರಗಳು ಅಕ್ಷವನ್ನೂ ಬಿಟ್ಟು ಹೋಗದಂತೆ ಹೊರಭಾಗದಲ್ಲಿ ಹಾಕುವ ಕಡಾಣಿಗಳು. ಅಭೀಷಾ, ರಶನಾ ಎಂದರೆ ಕುದುರೆಯ ಕಡಿವಾಣಗಳು. ಧ್ವಜ ಎಂದರೆ ರಥದ ಮಧ್ಯದಲ್ಲಿರುವ ಎತ್ತರವಾದ ಸ್ತಂಭದ ಮೇಲಿರುವ ಆಯಾ ವೀರರ ಚಿಹ್ನೆಗಳು. ಆ ಎತ್ತರದ ಮರವು ಧ್ವಜಸ್ತಂಭ, ಪತಾಕೆಗಳು ವಸ್ತ್ರಗಳಿಂದ ಮಾಡಿದವು (buntings). ಇತ್ಯಾದಿಯಾಗಿ ತಿಳಿಯಬೇಕು.

ಶರ, ಬಾಣ, ಪತ್ರಿ, ಮಾರ್ಗಣ, ಕರ್ಣಿ, ಅಂಜಲಿ, ಅರ್ಧಚಂದ್ರ, ನಾರಾಚ, ಕ್ಷುರ, ಕ್ಷುರವು ಇದೆಲ್ಲವೂ ಧನುಸ್ಸಿನಿಂದ ಪ್ರಯೋಗಿಸುವ ಬೇರೆ ಬೇರೆ ವಿಧದ ಬಾಣಗಳು. ನಿಷಂಗ, ಉಪಾಸಂಗ, ತೂಣೀರ ಮೊದಲಾದವು ಬತ್ತಳಿಕೆಯ ಪ್ರಭೇದಗಳು. ಅಸಿ, ಬದ್ಧ, ನಿಸ್ತ್ರಿಂಶ ಇವು ಕತ್ತಿಯ ಹೆಸರುಗಳು. ಇದಲ್ಲದೆ ಭಲ್ಲ, ಪ್ರಾಸ, ಮರಿದ್ಗರ, ಭಿಂಡಿಪಾಲ, ಭುಸುಂಡಿ (ಮೃಸುಂಠಿ), ಕ್ಷೇಪಣಿ, ಶೂಲ, ಕಂಪನ, ಕಣಪ, ಋಷ್ಟಿ, ಪರಿಘ, ಪರಶು, ಪರಶ್ವಧ ಮೊದಲಾದ ಅನೇಕ ಆಯುಧಗಳೂ ಹೇಳಲ್ಪಡುತ್ತವೆ. ಇವುಗಳಲ್ಲಿ ಕೆಲವಕ್ಕೆ ಈಟಿ, ಭರ್ಜಿ, ಒನಕೆ, ತ್ರಿಶೂಲ ಮೊದಲಾದ ಅರ್ಥಗಳನ್ನು ಹೇಳಬಹುದಾದರೂ ಉಳಿದ ಅನೇಕ ಹೆಸರುಗಳಿಗೆ ಸರಿಯಾದ ಅರ್ಥವು ತಿಳಿಯುವುದಿಲ್ಲ. ಶಕ್ತಿ ಎಂಬ ಆಯುಧವನ್ನು ವಿಶೇಷವಾಗಿಹೇಳಿದ್ದಾರೆ. ಅದು ಜ್ವಾಲೆಗಳನ್ನು ಉಗುಳುತ್ತದೆ, ಓಡಿಯನ್ನು ಹೊಂದಿರುತ್ತದೆ, ಪ್ರಾಯಶಃ ಅಮೋಘವಾಗಿರುತ್ತದೆ. ಅದರ ವರ್ಣನೆಯು ಆಧುನಿಕ ಯುಗದ ಬಾಂಬ್‌ಗಳಿಗೆ ಹೋಲುತ್ತದೆ. ಒಂದೇ ಒಂದು ವ್ಯತ್ಯಾಸವೆಂದರೆ ಶಕ್ತಿಯು ಉದ್ದೇಶ್ಯವಾದ ವ್ಯಕ್ತಿಯನ್ನು ಮಾತ್ರ ಕೊಲ್ಲುತ್ತದೆ. ಬಾಬ್‌ಗಳು ಎಲ್ಲರನ್ನೂ ಕೊಲ್ಲುತ್ತವೆ. ಹೀಗೆಯೇ ಧನುಸ್ಸು, ಇಷ್ವಾಸ, ಇಷ್ವಸನ ಇವು ಬಿಲ್ಲನ್ನು ಹೇಳುತ್ತವೆ. ಅಂಗುಲಿತ್ರಾಣ ಎಂದರೆ ಹಸ್ತರಕ್ಷೆ (Gloves). ಇಂತಹ ಅನೇಕ ಉಲ್ಲೇಖಗಳು ಇನ್ನು ಐದು ಪರ್ವಗಳಲ್ಲಿ ಪುನಃ ಪುನಃ ಬರುತ್ತವೆ.

ಪರಮಪೂಜ್ಯರಾದ ಪಲಿಮಾರು ಮಠಾಧೀಶರಾದ ಶ್ರೀವಿದ್ಯಾಧೀಶತೀರ್ಥರ ಆಜ್ಞೆ ಮತ್ತು ಅನುಗ್ರಹ ಬಲದಿಂದ ಇಂತಹ ಮಹಾಭಾರತದ ಸಂಶೋಧನೆ, ಸಂಪಾದನೆ ಮತ್ತು ಅನುವಾದವೆಂಬ ಸಾಹಸಕಾರ್ಯದಲ್ಲಿತೊಡಗಿದ್ದೇವೆ. ವಿದ್ಯಾಗುರುಗಳಾಗಿ ಪೇಜಾವರ ಮಠಾಧೀಶರಾದ ಪರಮಪೂಜ್ಯಶ್ರೀವಿಶ್ವೇಶತೀರ್ಥರ ಅಭಯ ಮತ್ತು ಅನುಗ್ರಹಹಸ್ತಗಳು ನಮಗೆ ಶ್ರೀರಕ್ಷೆಯಾಗಿರುವುದೇ ನಮ್ಮ ಈ ಸಾಹಸಕ್ಕೆ ಪ್ರೇರಕ ಶಕ್ತಿಯಾಗಿದೆ.

ಗ್ರಂಥಸಂಶೋಧನೆ ಮತ್ತು ಅನುವಾದವನ್ನೂ ಮಾಡುವಾಗ ನಮ್ಮ ಅಜ್ಞಾನ ಮತ್ತು ಪ್ರಮಾದಗಳಿಂದ ಅನೇಕ ದೋಷಗಳು ಬಂದಿರುವ ಸಾಧ್ಯತೆಯು ಅವಶ್ಯವಾಗಿ ಇದೆ. ಉದಾರಿಗಳಾದ ವಿದ್ವಜ್ಜನರು ಮತ್ತು ಅಧೇತೃಗಳು ಅದಕ್ಕಾಗಿ ನಮ್ಮನ್ನು ಮನ್ನಿಸಿ ಶುಭವನ್ನು ಹಾರೈಸಬೇಕೆಂದು ಪ್ರಾರ್ಥಿಸುತ್ತೇನೆ.

ಇತಿ ಶ್ರೀಪಾದ ಆಜ್ಞಾಧಾರಕ
ಶೇಷಗಿರಿ ಆಚಾರ್ಯ

★ ★ ★ ★ ★

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೧೪

ಭೀಷ್ಮಪರ್ವ

		ಪುಟ ಸಂ.
1.	ಕುರುಕ್ಷೇತ್ರದಲ್ಲಿ ಪಾಂಡವರ-ಕೌರವರ ಸೇನೆಗಳ ಸಮಾವೇಶ. ಯುದ್ಧದ ನಿಬಂಧನೆಗಳು.	1
2.	ಧೃತರಾಷ್ಟ್ರನಿಂದ ದಿವ್ಯದೃಷ್ಟಿಯ ನಿರಾಕರಣೆ. ವ್ಯಾಸರಿಂದ ಸಂಜಯನಿಗೆ ದಿವ್ಯದೃಷ್ಟಿಯ ದಾನ ಮತ್ತು ಧೃತರಾಷ್ಟ್ರನನ್ನು ಕುರಿತು ಅಪಶಕುನಗಳ ಕಥನ	9
3.	ವ್ಯಾಸರಿಂದ ಅಪಶಕುನಗಳ ಕಥನದ ಅನುವೃತ್ತಿ	16
4.	ವ್ಯಾಸರಿಂದ ಜಯಶಾಲಿಗಳಾಗುವವರ ಲಕ್ಷಣಗಳ ಕಥನ	26
5.	ವ್ಯಾಸರ ಪ್ರಯಾಣ. ಸಂಜಯನಿಂದ ಭೂಮಿಯ ಗುಣಗಳ ವರ್ಣನೆ	36
6.	ಸಂಜಯನಿಂದ ಧೃತರಾಷ್ಟ್ರನನ್ನು ಕುರಿತು ಸಂಕ್ಷೇಪವಾಗಿ ಭೂಮಿಯ ಗುಣವರ್ಣನೆ	41
7.	ಸಂಜಯನಿಂದ ಮೇರು ಪರ್ವತದ, ಭಾರತಾದಿ ವರ್ಷಗಳ ಮತ್ತು ಸೀಮಾಪರ್ವತಗಳ ವರ್ಣನೆ	44
8.	ಸಂಜಯನಿಂದ ಶಶಾಕೃತಿಯ ವಿವರಣೆ. ಮೇರುವಿನ ಉತ್ತರದಲ್ಲಿರುವ ಉತ್ತರವರ್ಷದ ಮತ್ತು ಪೂರ್ವದಲ್ಲಿರುವ ಭದ್ರಾಶ್ವವರ್ಷದ ವಿವರಣೆ	56
9.	ಮೇರುವಿನ ಉತ್ತರದಲ್ಲಿರುವ ರಮಣಕ, ಹಿರಣ್ಮಯ ಮತ್ತು ಐರಾವತ ವರ್ಷಗಳ ವರ್ಣನೆ	64
10.	ಭಾರತವರ್ಷದ ನದಿಗಳ, ಪರ್ವತಗಳ ಮತ್ತು ದೇಶಗಳ ನಿರೂಪಣೆ	69
11.	ಚತುರ್ಯುಗದ ಪುರುಷರ ಆಯುರಾದಿ ವರ್ಣನೆ	81
12.	ಶಾಕದ್ವೀಪ ವರ್ಣನೆ	84
13.	ಕ್ರೌಂಚಾದಿ ದ್ವೀಪ ವರ್ಣನೆ	92

14. ಸಂಜಯನಿಂದ ಧೃತರಾಷ್ಟ್ರನನ್ನು ಕುರಿತು ಭೀಷ್ಮಪಾತದ ಕಥನ 104
15. ಧೃತರಾಷ್ಟ್ರನಿಂದ ಭೀಷ್ಮ ಪತನದ ಬಗ್ಗೆ ವಿಸ್ತಾರವಾದ ಪ್ರಶ್ನೆಗಳು 107
16. ಸಂಜಯನಿಂದ ಭೀಷ್ಮರ ರಕ್ಷಣೆಯ ವಿಷಯದಲ್ಲಿ ದುರ್ಯೋಧನನ ಆದೇಶ ಮತ್ತು ಕುರು-ಪಾಂಡವರ ಸೇನೆಗಳ ವರ್ಣನೆ 123
17. ಸಂಜಯನಿಂದ ಯುದ್ಧಕ್ಕೆ ಹೊರಟ ಕುರುಸೇನೆಯ ವರ್ಣನೆ 133
18. ಸಂಜಯನಿಂದ ಕುರುಸೇನೆಯ ಯುದ್ಧಾರಂಭದ ವರ್ಣನೆ 140
19. ಯುದ್ಧಕ್ಕಾಗಿ ಪಾಂಡವಸೇನೆಯು ಸಜ್ಜಾದ ರೀತಿಯ ಕಥನ 144
20. ಕುರುಸೇನೆಯು ಸಜ್ಜುಗೊಂಡ ಪ್ರಕಾರದ ಕಥನ 154
21. ಕೌರವಸೇನೆಯನ್ನು ನೋಡಿ ಚಕಿತನಾದ ಯುಧಿಷ್ಠಿರನಿಗೆ ಅರ್ಜುನನ ಸಮಾಧಾನಕರ ವಚನಗಳು 160
22. ಯುದ್ಧಕ್ಕಾಗಿ ಯುಧಿಷ್ಠಿರಾದಿಗಳ ನಿರ್ಗಮನ. ಸಂಜಯನಿಂದ ಉಭಯ ಸೈನ್ಯಗಳ ಅಭ್ಯುದಯಲಕ್ಷಣಗಳ ಕಥನ 164
23. ಭಗವದ್ಗೀತೆ – ಅರ್ಜುನ ವಿಷಾದ ಯೋಗ 174
24. ಕೃಷ್ಣನಿಂದ ಉಪದೇಶ ಪ್ರಾರಂಭ. ಆತ್ಮನಿತ್ಯತ್ವ ಸಮರ್ಥನೆ 184
25. ಭಗವದ್ಗೀತಾ – ಕರ್ಮಯೋಗ 206
26. ಭಗವದ್ಗೀತಾ – ಜ್ಞಾನಯೋಗ 219
27. ಭಗವದ್ಗೀತಾ – ಸಂನ್ಯಾಸ ಯೋಗ 232
28. ಭಗವದ್ಗೀತಾ – ಆತ್ಮಸಂಯಮ ಯೋಗ 240
29. ಭಗವದ್ಗೀತಾ – ಜ್ಞಾನ-ವಿಜ್ಞಾನ ಯೋಗ 252
30. ಭಗವದ್ಗೀತಾ – ಜ್ಞಾನ-ವಿಜ್ಞಾನ ಯೋಗ 262
31. ಭಗವದ್ಗೀತಾ – ರಾಜಗುಹ್ಯಯೋಗ (ಭಗವನ್‌ಮಹಿಮಾವರ್ಣನರೂಪವಾದ ಭಕ್ತಿಯೋಗ) 269
32. ಭಗವದ್ಗೀತಾ – ವಿಭೂತಿಯೋಗ 278
33. ಭಗವದ್ಗೀತಾ – ವಿಶ್ವರೂಪದರ್ಶನ 288

34. ಭಗವದ್ಗೀತಾ – ಭಕ್ತಿಯೋಗ. ಲಕ್ಷ್ಮ್ಯಾಯ ಉಪಾಸಕನಿಗಿಂತ ಹರಿಯ ಉಪಾಸಕನ ಶ್ರೇಷ್ಠತ್ವ ಕಥನ 304

35. ಭಗವದ್ಗೀತಾ – ಕ್ಷೇತ್ರ-ಕ್ಷೇತ್ರಜ್ಞವಿಭಾಗಯೋಗ 309

36. ಭಗವದ್ಗೀತಾ – ಗುಣತ್ರಯವಿಭಾಗಯೋಗ 320

37. ಭಗವದ್ಗೀತಾ – ಪುರಾಣಪುರುಷೋತ್ತಮಯೋಗ 327

38. ಭಗವದ್ಗೀತಾ – ದೈವಾಸುರಸಂಪದ್ವಿಭಾಗಯೋಗ 334

39. ಭಗವದ್ಗೀತಾ – ಶ್ರದ್ಧಾತ್ರಯವಿಭಾಗ 341

40. ಭಗವದ್ಗೀತಾ – ಸಂನ್ಯಾಸಯೋಗ. ಅರ್ಜುನಪ್ರಬೋಧ 348

41. ಭೀಷ್ಮ-ದ್ರೋಣ-ಕೃಪ-ಶಲ್ಯರಿಂದ ಅನುಮತಿಯನ್ನು ಪಡೆದು ಯುಧಿಷ್ಠಿರನಿಂದ ಪುನಃ ತನ್ನ ರಥದಲ್ಲಿ ಸ್ಥಿತಿ 367

42. ಯುದ್ಧದ ಪ್ರಾರಂಭ. ಭೀಮಸೇನನ ವಿಜೃಂಭಣೆ 390

43. ಪ್ರಥಮ ದಿವಸದ ಯುದ್ಧದ ವರ್ಣನೆ 396

44. ಪ್ರಥಮ ದಿವಸದ ಯುದ್ಧದ ವರ್ಣನೆ 413

45. ಮೊದಲನೆಯ ದಿವಸದ ಯುದ್ಧದಲ್ಲಿ ಭೀಷ್ಮರ ಮೇಲುಗೈ, ಪಾಂಡವರಿಂದ ಸಾಯಂಕಾಲದಲ್ಲಿ ಸೇನಾ ಅವಹಾರ 424

46. ಕೃಷ್ಣನಿಂದ ಯುಧಿಷ್ಠಿರನ ಸಮಾಶ್ವಾಸನೆ. ದ್ವಿತೀಯ ದಿವಸ ಯುದ್ಧಕ್ಕಾಗಿ ಪಾಂಡವರ ಉದ್ಯಮ 437

47. ದ್ವಿತೀಯ ದಿವಸದ ಯುದ್ಧಕ್ಕಾಗಿ ಕೌರವರ ಸಮಾಗಮ 449

48. ದ್ವಿತೀಯದಿವಸದ ಯುದ್ಧ. ಭೀಷ್ಮಾರ್ಜುನರ ಪರಾಕ್ರಮ 454

49. ದ್ರೋಣ-ಧೃಷ್ಟದ್ಯುಮ್ನರ ಯುದ್ಧ 468

50. ಕಳಿಂಗರ ಜೊತೆಯಲ್ಲಿ ಯುದ್ಧವನ್ನು ಮಾಡುವ ಭೀಮಸೇನನ ಖಡ್ಗಯುದ್ಧಕೌಶಲ 477

51. ಅಭಿಮನ್ಯು ಮತ್ತು ಅರ್ಜುನರ ಪರಾಕ್ರಮ. ಭೀಷ್ಮರಿಂದ ಸನ್ಯಾವಹಾರ 501

52. ಮೂರನೆಯ ದಿವಸ ಯುದ್ಧದ ಪ್ರಾರಂಭ. ಭೀಷ್ಮರಿಂದ ಗರುಡವ್ಯೂಹದ ಮತ್ತು ಅರ್ಜುನನಿಂದ ಅರ್ಧಚಂದ್ರವ್ಯೂಹದ ರಚನೆ 509

53. ತೃತೀಯ ದಿವಸದ ಯುದ್ಧದ ಪ್ರಾರಂಭ 514

54. ಭೀಮಸೇನ, ಘಟೋತ್ಕಚ ಮತ್ತು ಅರ್ಜುನನ ಪರಾಕ್ರಮ. ಭೀಷ್ಮರನ್ನು ಕುರಿತು ದುರ್ಯೋಧನನ ಕ್ರೂರ ವಚನಗಳು ಮತ್ತು ಭೀಷ್ಮರ ಪ್ರತಿಜ್ಞೆ 524

55. ಯುದ್ಧದಲ್ಲಿ ಭೀಷ್ಮರ ಪರಾಕ್ರಮ. ಕೃಷ್ಣನಿಂದ ಚಕ್ರಧಾರಣ. ಪರಾಜಿತರಾದ ಭೀಷ್ಮರಿಂದ ಸೈನ್ಯಾವಹಾರ 533

56. ನಾಲ್ಕನೆಯ ದಿವಸದ ಯುದ್ಧದ ಪ್ರಾರಂಭ. ಭೀಷ್ಮಾರ್ಜುನರ ಪ್ರತಾಪ 567

57. ಧೃಷ್ಟದ್ಯುಮ್ನನಿಂದ ಯುದ್ಧದಲ್ಲಿ ಸಾಂಯಮಿನ ಪುತ್ರನ ವಧೆ 576

58. ಭೀಮಸೇನನಿಂದ ಗದೆಯಿಂದ ಶತ್ರುಗಳ ಗಜಗಳ ವಧೆ 587

59. ಭೀಮಸೇನನ ಪರಾಕ್ರಮ. ಧೃಷ್ಟದ್ಯುಮ್ನನ ಪ್ರತಾಪವನ್ನು ನೋಡಿ ಭೂರಿಶ್ರವನ ಆಗಮನ 600

60. ಭೀಮಸೇನನಿಂದ ದುರ್ಯೋಧನನ ತಮ್ಮಂದಿರ ವಧೆ. ಭೀಷ್ಮರಿಂದ ಸೈನ್ಯಾವಹಾರ 607

★ ★ ★ ★ ★

ಮಹಾಭಾರತ

ಭೀಷ್ಮಪರ್ವ

೧. ಜಂಬೂಖಂಡವಿನಿರ್ಮಾಣಪರ್ವ

ಒಂದನೆಯ ಅಧ್ಯಾಯ

ಕುರುಕ್ಷೇತ್ರದಲ್ಲಿ ಪಾಂಡವರ-ಕೌರವರ ಸೇನೆಗಳ ಸಮಾವೇಶ.
ಯುದ್ಧದ ನಿಬಂಧನೆಗಳು.

ಜನಮೇಜಯಃ

ಕಥಂ ಯುಯುಧಿರೇ ವೀರಾಃ ಕುರುಪಾಂಡವಸೋಮಕಾಃ ।
ಪಾರ್ಥಿವಾಶ್ಚ ಮಹಾಭಾಗಾ ನಾನಾದೇಶಸಮಾಗತಾಃ ॥೧॥

ಜನಮೇಜಯ– ನಾನಾ ದೇಶಗಳಿಂದ ಬಂದ ಮಹಾನುಭಾವರಾದ ರಾಜರು ಮತ್ತು ವೀರರಾದ ಕುರುಪಾಂಡವಸೋಮಕರು ಹೇಗೆ ಯುದ್ಧವನ್ನು ಮಾಡಿದರು?

ಪ್ರತ್ಯಯುಧ್ಯಂತ ಸಮರೇ ಭೀಷ್ಮೇಣಾಮಿತ್ರಕರ್ಶಿಣಾ ।
ಕಥಂ ವಾ ಕೌರವಾಃ ಸರ್ವೇ ಭೀಮಸೇನೇ ಚಮೂಪತೌ ॥೨॥

ಭೀಮಸೇನನು ಪಾಂಡವರ ಸೇನಾನಾಯಕನಾಗಿರಲು ಎಲ್ಲ ಕೌರವರು ಶತ್ರು ಸಂಹಾರಕನಾದ ಭೀಷ್ಮರನ್ನು ಮುಂದೆ ಮಾಡಿಕೊಂಡು ಹೇಗೆ ಪ್ರತಿಯಾಗಿ ಯುದ್ಧವನ್ನು ಮಾಡಿದರು?

ವೈಶಂಪಾಯನಃ

ಯಥಾ ಯುಯುಧಿರೇ ವೀರಾ ಕುರುಪಾಂಡವಸೋಮಕಾಃ ।
ಕುರುಕ್ಷೇತ್ರೇ ತಪಃಕ್ಷೇತ್ರೇ ಶೃಣು ತತ್ ಪೃಥಿವೀಪತೇ ॥೩॥

ವೈಶಂಪಾಯನ– ಎಲೈ ಪೃಥಿವೀಪತಿಯೇ, ತಪಸ್ಸಿನ ಕ್ಷೇತ್ರವಾದ ಕುರುಕ್ಷೇತ್ರದಲ್ಲಿ ವೀರರಾದ ಕುರುಪಾಂಡವ ಸೋಮಕರು ಹೇಗೆ ಯುದ್ಧವನ್ನು ಮಾಡಿದರು ಎಂಬುದನ್ನು ತಿಳಿಯವನಾಗು.

ಅವತೀರ್ಯ ಕುರುಕ್ಷೇತ್ರಂ ಪಾಂಡವಾಃ ಸಹಸೋಮಕಾಃ ।
ಕೌರವಾಸ್ಸರ್ವತಶ್ಚ ಜಿಗೀಷಂತೋ ಮಹಾಬಲಾಃ ॥೪॥

ಸೋಮಕರ ಜೊತೆಯಲ್ಲಿ ಪಾಂಡವರು ಕುರುಕ್ಷೇತ್ರವನ್ನು ತಲುಪಿ ಮಹಾಬಲಿಷ್ಠರಾದ ಅವರು ಜಯವನ್ನು ಬಯಸುತ್ತಾ ಕೌರವರನ್ನು ಎದುರಿಸಿದರು.

ವೇದಾಧ್ಯಯನಸಂಪನ್ನಾಃ ಸರ್ವೇ ಯುದ್ಧಾಭಿನಂದಿನಃ ।
ಆಶಂಸಂತೋ ಜಯಂ ಯುದ್ಧೇ ವಧಂ ವಾಭಿಮುಖಾ ರಣೇ ॥೫॥

ಅಭಿಯಾಯ ಚ ದುರ್ಧರ್ಷಾಂ ಧಾರ್ತರಾಷ್ಟ್ರಸ್ಯ ವಾಹಿನೀಮ್ ।
ಪ್ರಾಙ್ಮುಖಾಃ ಪಶ್ಚಿಮೇ ಭಾಗೇ ಸ್ಥಿತಿಂತ ಸ್ಯೈನಿಕಾಃ ॥೬॥

ವೇದಾಧ್ಯಯನ ಸಂಪನ್ನರೂ, ಯುದ್ಧವನ್ನು ಅಭಿನಂದಿಸುವವರೂ, ಯುದ್ಧದಲ್ಲಿ ಜಯವನ್ನಾಗಲೀ ಅಥವಾ ಶತ್ರುಗಳಿಗೆ ಅಭಿಮುಖವಾಗಿ ಮರಣವನ್ನಾಗಲೀ ಬಯಸುವ ಆ ಎಲ್ಲರೂ ಸೋಲಿಸಲು ಕಷ್ಟಸಾಧ್ಯವಾದ ದುರ್ಯೋಧನನ ಸೈನ್ಯವನ್ನು ಎದುರಿಸಿದರು. ಪಾಂಡವರು ತಮ್ಮ ಸೈನಿಕರೊಡನೆ ಪ್ರವೇಶಿಸಿ ಕುರುಕ್ಷೇತ್ರದ ಪಶ್ಚಿಮ ಭಾಗದಲ್ಲಿ ಪೂರ್ವಾಭಿಮುಖವಾಗಿ ನಿಂತರು.

ಪೂರ್ವಭಾಗೇ ತು ಕ್ಷೇತ್ರಸ್ಯ ಸ್ಥಿತಾಃ ಪ್ರತ್ಯಙ್ಮುಖಾ ಯುಧಿ ।
ಆಹವಾಯ ದುರಾಧರ್ಷ ಧಾರ್ತರಾಷ್ಟ್ರಸ್ಯ ಪಾರ್ಥಿವಾಃ ॥೭॥

ಎಲೈ ಸೋಲಿಸಲು ಅಸಾಧ್ಯನಾದ ಜನಮೇಜಯನೇ, ದುರ್ಯೋಧನನ ಪಕ್ಷದ ರಾಜರು ಯುದ್ಧಕ್ಕಾಗಿ ಕುರುಕ್ಷೇತ್ರದ ಪೂರ್ವಭಾಗದಲ್ಲಿ ಪಶ್ಚಿಮಾಭಿಮುಖವಾಗಿ ನಿಂತರು.

ಸಮಂತಪಂಚಕಾದ್ ಬಾಹ್ಯಂ ಶಿಬಿರಾಣಿ ಸಹಸ್ರಶಃ ।
ಕಾರಯಾಮಾಸ ವಿಧಿವತ್ ಕುಂತೀಪುತ್ರೋ ಯುಧಿಷ್ಠಿರಃ ॥೮॥

ಕುಂತೀಪುತ್ರನಾದ ಯುಧಿಷ್ಠಿರನು ಸಮಂತಪಂಚಕದ ಸುತ್ತಲೂ, ಹೊರಭಾಗದಲ್ಲಿ ಸಹಸ್ರಾರು ಶಿಬಿರಗಳನ್ನು ಮಾಡಿಸಿದನು.

ಅನ್ಯೇವ ಪೃಥಿವೀ ಸರ್ವಾ ಬಾಲವೃದ್ಧಾವಶೇಷಿತಾ ।
ನಿರಸ್ತಪುರುಷೇವಾಸೀತ್ ರಥಕುಂಜರವರ್ಜಿತಾ ॥೯॥

ಅಶ್ವ-ರಥ-ಕುಂಜರಗಳಿಲ್ಲದೆ, ಪುರುಷರೂ ಇಲ್ಲದೆ, ಕೇವಲ ವೃದ್ಧರನ್ನು ಮತ್ತು ಬಾಲಕರನ್ನೊಳಗೊಂಡ ಉಳಿದ ಭೂಮಿಯು ಇನ್ನೊಂದು ಭೂಮಿಯಂತೆ ತೋರುತ್ತಿದ್ದಿತು.

ಯಾವತ್ ತಪತಿ ಸೂರ್ಯೋ ಹಿ ಜಂಬೂದ್ವೀಪಸ್ಯ ಮಂಡಲಮ್ ।
ತಾವದೇವ ಸಮಾವೃತ್ತಂ ಬಲಂ ಪಾರ್ಥಿವಸತ್ತಮ ॥೧೦॥

ಎಲೈ ರಾಜಶ್ರೇಷ್ಠನೇ, ಸೂರ್ಯನು ಜಂಬೂದ್ವೀಪದಲ್ಲಿ ಎಷ್ಟು ಭಾಗವನ್ನು ಬೆಳಗುತ್ತಾನೆಯೋ ಅಷ್ಟು ಭಾಗಗಳಿಂದ ಸೈನ್ಯಗಳು ಬಂದು ಸೇರಿದವು.

ಏಕಸ್ಥಾಃ ಸರ್ವವರ್ಣಾಸ್ತೇ ಮಂಡಲಂ ಬಹುಯೋಜನಮ್ ।
ಪರ್ಯಾಕ್ರಾಮಂತ ದೇಶಾಂಶ್ಚ ನದೀಃ ಶೈಲಾನ್ ವನಾನಿ ಚ ॥೧೧॥

ಎಲ್ಲ ವರ್ಣಗಳಿಗೂ ಸೇರಿದ ಒಂದು ಕಡೆ ಒಟ್ಟುಗೂಡಿದ ಆ ರಾಜರು ಅನೇಕ ಯೋಜನ ದೂರವಾದ ಮಂಡಲಗಳನ್ನೂ, ದೇಶಗಳನ್ನೂ, ನದಿಗಳನ್ನೂ, ಪರ್ವತಗಳನ್ನೂ ಮತ್ತು ವನಗಳನ್ನೂ ದಾಟಿ ಮುಂದೆ ಬಂದರು.

ತೇಷಾಂ ಯುಧಿಷ್ಠಿರೋ ರಾಜಾ ಸರ್ವೇಷಾಂ ಪುರುಷರ್ಷಭ ।
ಆದಿದೇಶ ಸವಾಹಾನಾಂ ಭಕ್ಷ್ಯಭೋಜ್ಯಮನುತ್ತಮಮ್ ॥೧೨॥

ಎಲೈ ಪುರುಷಶ್ರೇಷ್ಠನೇ, ರಾಜನಾದ ಯುಧಿಷ್ಠಿರನು ಅವರೆಲ್ಲರಿಗೂ ಮತ್ತು ಅವರ ವಾಹನಗಳಿಗೂ ಶ್ರೇಷ್ಠವಾದ ಭಕ್ಷ್ಯ-ಭೋಜ್ಯಗಳನ್ನು ಮತ್ತು ಮೇವುಗಳನ್ನು ಆದೇಶ ಮಾಡಿದನು.

ಸಂಜ್ಞಾಶ್ಚ ವಿವಿಧಾಸ್ತಾಸ್ತೇಷಾಂ ಚಕ್ರೇ ಯುಧಿಷ್ಠಿರಃ ।
ಏವಂವಾದೀ ವೇದಿತವ್ಯಃ ಪಾಂಡವೇಯೋऽಯಮಿತ್ಯುತ ॥೧೩॥

ಜಯರಾಮ, ಜಯಕೃಷ್ಣ ಮೊದಲಾದ ಸಂಕೇತ ಶಬ್ದಗಳನ್ನು ಬಳಸುತ್ತಿದ್ದವರನ್ನು ತನ್ನ ಸೈನ್ಯಕ್ಕೆ ಸೇರಿದವರೆಂದು ತಿಳಿಯಬೇಕೆಂದು ಯುಧಿಷ್ಠಿರನು ಅಪ್ಪಣೆಯನ್ನು ಮಾಡಿದನು (ಲಕ್ಷಾಲಂಕಾರ).

ಅಭಿಜ್ಞಾನಾನಿ ಸರ್ವೇಷಾಂ ಸಂಜ್ಞಾಶ್ಚಾಭರಣಾನಿ ಚ ।
ಯೋಜಯಾಮಾಸ ಕೌರವ್ಯೋ ಯುದ್ಧಕಾಲ ಉಪಸ್ಥಿತೇ ॥೧೪॥

ಯುದ್ಧಕಾಲವು ಪ್ರಾಪ್ತವಾದಾಗ ಕೌರವ ಕುಲದಲ್ಲಿ ಜನಿಸಿದ ಯುಧಿಷ್ಠಿರನು ತನ್ನ ಸೈನ್ಯಕ್ಕೆ ಸೇರಿದವರೆಲ್ಲರಿಗೂ ಗುರುತಿನ ಪದಕಗಳನ್ನೂ, ಸಂಜ್ಞೆಗಳನ್ನೂ ಮತ್ತು ಆಭರಣಗಳನ್ನೂ ನೀಡಿದನು.

ದೃಷ್ಟ್ವಾ ಧ್ವಜಾಗ್ರಂ ಪಾರ್ಥಾನಾಂ ಧಾರ್ತರಾಷ್ಟ್ರೋ ಮಹಾಮನಾಃ ।
ಸಹ ಸರ್ವೈರ್ಮಹೀಪಾಲೈಃ ಪ್ರತ್ಯವ್ಯೂಹತ ಪಾಂಡವಾನ್ ॥೧೫॥

ಪಾಂಡವರ ಸೈನ್ಯದ ಮುಂಭಾಗವನ್ನು ನೋಡಿದ ಧೈರ್ಯಶಾಲಿಯಾದ ಸುಯೋಧನನು ತನ್ನ ಪಕ್ಷಕ್ಕೆ ಸೇರಿದ ಉಳಿದ ರಾಜರ ಜೊತೆಯಲ್ಲಿ ಪಾಂಡವರ ಸೈನ್ಯದ ವ್ಯೂಹಕ್ಕೆ ಪ್ರತಿಯಾಗಿ ವ್ಯೂಹವನ್ನು ರಚಿಸಿದನು.

ಪಾಂಡರೇಣಾತಪತ್ರೇಣ ಧ್ರಿಯಮಾಣೇನ ಮೂರ್ಧನಿ ।
ವೃತಂ ಸರ್ವೈಃ ಮಹೀಪಾಲೈಃ ಭ್ರಾತೃಭಿಃ ಪರಿವಾರಿತಾನ್ ॥೧೬॥

ಮಧ್ಯೇ ನಾಗಸಹಸ್ರಸ್ಯ ಸ್ಥಿತಂ ಯುದ್ಧಾಭನಂದಿನಮ್ ।
ದೃಷ್ಟ್ವಾ ದುರ್ಯೋಧನಂ ಹೃಷ್ಟಾಃ ಸರ್ವೇ ಪಾಂಡವಸೈನಿಕಾಃ ।
ದಧ್ಮುಃ ಸರ್ವೇ ಮಹಾಶಂಖಾನ್ ಭೇರೀರ್ಜಘ್ನುಃ ಸಹಸ್ರಶಃ ॥೧೭॥

ತಲೆಯ ಮೇಲೆ ಹಿಡಿದ ಶ್ವೇತಚ್ಛತ್ರಿಯಿಂದ ಶೋಭಿಸುತ್ತಾ, ಅನೇಕ ರಾಜರುಗಳಿಂದಲೂ ಮತ್ತು ತಮ್ಮಂದಿರಿಂದಲೂ ಪರಿವಾರಿತನಾಗಿ ಯುದ್ಧವನ್ನು ಬಯಸುತ್ತಾ ಸಹಸ್ರ ಗಜಗಳ ಮಧ್ಯೆ ನಿಂತ ದುರ್ಯೋಧನನನ್ನು ನೋಡಿ ಪಾಂಡವರ ಸೈನಿಕರೆಲ್ಲರೂ ಹರ್ಷಗೊಂಡರು. ಅವರೆಲ್ಲರೂ ತಮ್ಮ ದೊಡ್ಡ ಶಂಖಗಳನ್ನು ಊದಿದರು ಮತ್ತು ಸಹಸ್ರ ಸಂಖ್ಯೆಯಲ್ಲಿ ಭೇರಿಗಳನ್ನು ಬಾರಿಸಿದರು.

ತತಃ ಪ್ರಹೃಷ್ಟಾಂ ಸ್ವಾಂ ಸೇನಾಮಭಿವೀಕ್ಷ್ಯಾಥ ಪಾಂಡವಾಃ ।
ಬಭೂವುರ್ಹೃಷ್ಟಮನಸೋ ವಾಸುದೇವಶ್ಚ ವೀರ್ಯವಾನ್ ॥೧೮॥

ಆಗ ಸಂತೋಷಗೊಂಡ ತಮ್ಮ ಸೈನ್ಯವನ್ನು ಗಮನಿಸಿ ಪಾಂಡವರೂ, ಪರಾಕ್ರಮಶಾಲಿಯಾದ ವಾಸುದೇವನೂ ತಮ್ಮ ಮನಸ್ಸಿನಲ್ಲಿ ಹರ್ಷಗೊಂಡರು.

ತತೋ ಯೋಧಾನ್ ಹರ್ಷಯಂತೋ ವಾಸುದೇವಧನಂಜಯೌ ।
ದಧ್ಮತುಃ ಪುರುಷವ್ಯಾಘ್ರೌ ದಿವ್ಯೌ ಶಂಖೌ ರಥೇ ಸ್ಥಿತೌ ॥೧೯॥

ಆಗ ತಮ್ಮ ಯೋಧರನ್ನು ಸಂತೋಷಗೊಳಿಸುತ್ತಾ ಪುರುಷವ್ಯಾಘ್ರರಾದ ಕೃಷ್ಣಾರ್ಜುನರು ರಥದಲ್ಲಿ ಕುಳಿತು ತಮ್ಮ ದಿವ್ಯವಾದ ಶಂಖಗಳನ್ನು ಊದಿದರು.

ಪಾಂಚಜನ್ಯಸ್ಯ ನಿರ್ಘೋಷಂ ದೇವದತ್ತಸ್ಯ ಚೋಭಯೋಃ ।
ಶ್ರುತ್ವಾ ಸವಾಹನಾ ಯೋಧಾಃ ಶಕೃನ್ಮೂತ್ರಂ ಪ್ರಸುಸ್ರುವುಃ ॥೨೦॥

ಕೃಷ್ಣಾರ್ಜುನರ ಪಾಂಚಜನ್ಯ ಮತ್ತು ದೇವದತ್ತ ಶಂಖದ ಘೋಷವನ್ನು ಕೇಳಿ ಕೌರವರ ಸೈನಿಕರೂ ಮತ್ತು ವಾಹನಗಳೂ ಮಲ-ಮೂತ್ರಗಳನ್ನು ಸ್ರವಿಸಿದರು.

ಯಥಾ ಸಿಂಹಸ್ಯ ನದತಃ ಸ್ವನಂ ಶ್ರುತ್ವೇತರೇ ಮೃಗಾಃ ।
ತ್ರಸೇಯುಸ್ತದ್ವದೇವಾಸೀದ್ ಧಾರ್ತರಾಷ್ಟ್ರಬಲಂ ತದಾ ॥೨೧॥

ಗರ್ಜಿಸುವ ಸಿಂಹದ ನಾದವನ್ನು ಕೇಳಿ ಉಳಿದ ಮೃಗಗಳು ಹೆದರುವಂತೆ ಆಗ ದುರ್ಯೋಧನನ ಸೈನ್ಯವು ಹೆದರಿತು.

ಉದತಿಷ್ಠದ್ ರಜೋ ಭೌಮಂ ನ ಪ್ರಾಜ್ಞಾಯತ ಕಿಂಚನ ।
ಅಂತರ್ಧೀಯತ ಚಾದಿತ್ಯಃ ಸೈನ್ಯೇನ ರಜಸಾವೃತಃ ॥೨೨॥

ಭೂಮಿಯ ಧೂಳು ಮೇಲಕ್ಕೆದ್ದಿತು. ಏನೂ ಕಾಣುತ್ತಿರಲಿಲ್ಲ. ಸೈನ್ಯದಿಂದ ಎದ್ದ ಧೂಳಿನಿಂದ ಸೂರ್ಯನು ಮರೆಯಾದನು.

ವವರ್ಷ ಚಾತ್ರ ಪರ್ಜನ್ಯೋ ಮಾಂಸಶೋಣಿತವೃಷ್ಟಿಮಾನ್ ।
ವ್ಯಕ್ಷನ್ ಸರ್ವಾಣ್ಯನೀಕಾನಿ ತದದ್ಭುತಮಿವಾಭವತ್ ॥೨೩॥

ಪರ್ಜನ್ಯನು ಮಾಂಸ, ರಕ್ತಗಳ ಮಳೆಯನ್ನು ಸುರಿಸಿ ಸೈನ್ಯಗಳನ್ನು ತೋಯಿಸಿದನು. ಆ ದೃಶ್ಯವು ಅದ್ಭುತವಾಗಿದ್ದಿತು.

ವಾಯುಸ್ತತಃ ಪ್ರಾದುರಭೂನ್ಮೀಮೈಃ ಶರ್ಕರಕರ್ಷಣಃ ।
ವಿನಿಘ್ನಂಸ್ತಾನ್ಯನೀಕಾನಿ ವಿಧಮಂಶ್ಚೈವ ತದ್ ರಜಃ ॥೨೪॥

ಅನಂತರ ವಾಯುವು ನೆಲವನ್ನು ಹಿಡಿದು ಮರಳಿನ ಕಣಗಳನ್ನು ಎಬ್ಬಿಸಿ ಬೀಸುತ್ತಾ, ಆ ಮರಳುಗಳಿಂದ ಆ ಸೈನ್ಯಗಳಿಗೆ ಪ್ರಹಾರವನ್ನು ಮಾಡಿ ಘಾಸಿಗೊಳಿಸಿ ಧೂಳನ್ನು ಹಾರಿಸಿತು.

ಉಭೇ ಸೇನೇ ತದಾ ರಾಜನ್ ಯುದ್ಧಾಯ ಮುದಿತೇ ಭೃಶಮ್ ।
ಕುರುಕ್ಷೇತ್ರೇ ಸ್ಥಿತೇ ಯತ್ ತೇ ಸಾಗರಕ್ಷುಭಿತೋಪಮೇ ॥೨೫॥

ಎಲೈ ರಾಜನೇ, ಆಗ ಕುರುಕ್ಷೇತ್ರದಲ್ಲಿ ಎರಡು ಸೈನ್ಯಗಳು ಸಂತೋಷದಿಂದ ಸೇರಿ ನಿಂತವು. ಆ ಸೈನ್ಯಗಳು ಪ್ರಕ್ಷುಬ್ಧಗೊಂಡ ಎರಡು ಸಾಗರಗಳಂತಿದ್ದವು.

ತಯೋಸ್ತು ಸೇನಯೋರಾಸೀದದ್ಭುತಃ ಸ ಸಮಾಗಮಃ ।
ಯುಗಾಂತೇ ಸಮನುಪ್ರಾಪ್ತೇ ದ್ವಯೋಃ ಸಾಗರಯೋರಿವ ॥೨೬॥

ಯುಗಾಂತಕಾಲದಲ್ಲಿ ಎರಡು ಸಾಗರಗಳಿಗೆ ಆಗುವ ಸಮಾಗಮದಂತೆ ಆ ಎರಡು ಸೈನ್ಯಗಳ ಸಮಾಗಮವು ಅದ್ಭುತವಾಗಿದ್ದಿತು.

ಶೂನ್ಯಾऽऽಸೀತ್ ಪೃಥಿವೀ ಸರ್ವಾ ಬಾಲವೃದ್ಧಾವಶೇಷಿತಾ ।
ತೇನ ಸೇನಾಸಮೂಹೇನ ಸಮಾನೀತೇನ ಕೌರವ್ಯೈಃ ।
ಸಮಂತಾನ್ನಾಗಕಲ್ಪೇನ ಗರ್ಜಮಾನೇನ ಸರ್ವಶಃ ॥೨೭॥

ಕೌರವರು ಎಲ್ಲಾ ಕಡೆಗಳಿಂದಲೂ ಗರ್ಜಿಸುವ ಗಜಗಳಂತಿರುವ ಸೈನ್ಯಗಳನ್ನು ತೆಗೆದುಕೊಂಡು ಬಂದುದರಿಂದ ಭೂಮಿಯೆಲ್ಲವೂ ಬಾಲ-ವೃದ್ಧರಿಂದ ಮಾತ್ರ ಕೂಡಿ ಶೂನ್ಯವಾದಂತಾಯಿತು.

ತತಸ್ತೇ ಸಮಯಂ ಚಕ್ರುಃ ಕುರುಪಾಂಡವಸೋಮಕಾಃ ।
ಧರ್ಮಾಂಶ್ಚ ಸ್ಥಾಪಯಾಮಾಸುರ್ಯುದ್ಧಾನಾಂ ಭರತರ್ಷಭ ॥೨೮॥

ಎಲೈ ಭರತಶ್ರೇಷ್ಠನೇ, ಅನಂತರ ಕುರು-ಪಾಂಡವ-ಸೋಮಕರು ಯುದ್ಧದ ನಿಬಂಧನೆಗಳನ್ನು ಮಾಡಿಕೊಂಡು ಯುದ್ಧದ ಧರ್ಮಗಳನ್ನು ಸ್ಥಾಪಿಸಿದರು (ಅವು ಈ ರೀತಿ ಇದ್ದವು).

ನಿವೃತ್ತೇ ಚೈವ ನೋ ಯುದ್ಧೇ ಪ್ರೀತಿಶ್ಚ ಸ್ಯಾತ್ ಪರಸ್ಪರಮ್ ।
ಯಥಾಪುರಂ ಯಥಾಯೋಗಂ ನ ಚ ಸ್ಯಾಚ್ಚಲನಂ ಪುನಃ ॥೨೯॥

ಯುದ್ಧವು ಮುಗಿದ ಮೇಲೆ ನಮಗೆ ಮೊದಲಿನಂತೆ ನಮ್ಮ ನಮ್ಮ ಯೋಗ್ಯತೆಗೆ ತಕ್ಕಂತೆ ಪರಸ್ಪರ ಸ್ನೇಹವಿರಬೇಕು. ಇನ್ನೊಮ್ಮೆ ಯಾರೂ ಮೋಸವನ್ನು ಮಾಡಬಾರದು.

ವಾಚಾ ಯುದ್ಧೇ ಪ್ರವೃತ್ತೇ ನೋ ವಾಚೈವ ಪ್ರತಿಯೋಧನಮ್ ।
ನಿಷ್ಕಾಂತಃ ಪೃತನಾಮಧ್ಯಾನ್ನ ಹಂತವ್ಯಃ ಕಥಂಚನ ॥೩೦॥

ಮಾತಿನಿಂದ ಯುದ್ಧವು ಪ್ರವೃತ್ತವಾದಾಗ ಮಾತಿನಿಂದಲೇ ಯುದ್ಧವನ್ನು ಪ್ರತಿಯಾಗಿ ಮಾಡಬೇಕು (ಶಸ್ತ್ರಪ್ರಯೋಗವನ್ನು ಮಾಡಬಾರದು). ಸೇನೆಯ ಮಧ್ಯದಿಂದ ಹೊರಬಂದವನನ್ನು ಯಾವ ಕಾರಣದಿಂದಲೂ ವಧೆ ಮಾಡಬಾರದು.

ರಥೀ ರಥಿನಾ ಯೋಧ್ಯೋ ಗಜೇನ ಗಜಧೂರ್ಗತಃ ।
ಅಶ್ವೇನಾಶ್ವೀ ಪದಾತಿಶ್ಚ ಪದಾತೇನೈವ ಭಾರತ ॥೩೧॥

ಎಲೈ ಭಾರತನೇ, ರಥಿಯು ರಥಿಕನ ಜೊತೆಯಲ್ಲಿಯೇ, ಗಜದ ಮೇಲೆ ಯುದ್ಧವನ್ನು ಮಾಡುವವನು ಇನ್ನೊಬ್ಬ ಗಜವಾಹನನ ಜೊತೆಯಲ್ಲಿಯೇ, ಅಶ್ವವಾಹನನಾದವನು ಅಶ್ವವಾಹನನ ಜೊತೆಯಲ್ಲಿಯೇ, ಪದಾತಿಯು ಪದಾತಿಯ ಜೊತೆಯಲ್ಲಿಯೇ ಯುದ್ಧವನ್ನು ಮಾಡಬೇಕು.

ಯಥಾಯೋಗಂ ಯಥಾವೀರ್ಯಂ ಯಥೋತ್ಸಾಹಂ ಯಥಾವಯಃ ।
ಸಮಾಭಾಷ್ಯ ಪ್ರಹರ್ತವ್ಯಂ ನ ವಿತ್ತಸ್ತೇ ನ ವಿಹ್ವಲೇ ॥೩೨॥

ತಮ್ಮ ಪರಾಕ್ರಮಕ್ಕೆ, ತಮ್ಮ ಕೌಶಲಕ್ಕೆ, ತಮ್ಮ ಉತ್ಸಾಹಕ್ಕೆ ಮತ್ತು ತಮ್ಮ ವಯಸ್ಸಿಗನುಗುಣವಾಗಿ ಶತ್ರುವನ್ನು ಹೆಸರು ಹಿಡಿದು ಕರೆದು ಪ್ರಹಾರ ಮಾಡಬೇಕು. ತನ್ನ ಮೇಲೆ ಶಸ್ತ್ರಪ್ರಯೋಗ ಮಾಡುವುದಿಲ್ಲ ಎಂಬ ವಿಶ್ವಾಸವಿರುವವನಲ್ಲಿ ಅಥವಾ ಶಸ್ತ್ರಾಶದಿಂದ ನೆರಳಾಡುವವನ ಮೇಲೆ ಶಸ್ತ್ರಪ್ರಯೋಗವನ್ನು ಮಾಡಬಾರದು.

ಪರೇಣ ಸಹ ಸಂಯುಕ್ತಃ ಪ್ರಮತ್ತೋ ವಿಮುಖಸ್ತಥಾ ।
ಕ್ಷೀಣಶಸ್ತ್ರೋ ವಿವರ್ಮಾ ಚ ನ ಹಂತವ್ಯಃ ಕಥಂಚನ ॥೩೩॥

ಇನ್ನೊಬ್ಬನ ಜೊತೆಯಲ್ಲಿ ಯುದ್ಧ ಮಾಡುತ್ತಿರುವವನ ಮೇಲೆ, ಪ್ರಮಾದದಿಂದ ಕೂಡಿರುವವನ ಮೇಲೆ, ಯುದ್ಧದಿಂದ ಹಿಮ್ಮೆಟ್ಟುತ್ತಿರುವವನ ಮೇಲೆ, ತನ್ನ ಶಸ್ತ್ರಮತ್ತು ಕವಚವನ್ನು ಕಳೆದುಕೊಂಡಿರುವವನ ಮೇಲೆ ಶಸ್ತ್ರಪ್ರಯೋಗವನ್ನು ಮಾಡಿ ಅವನನ್ನು ವಧೆ ಮಾಡಬಾರದು.

ನ ಸೂತೇಷು ನ ಧುರ್ಯೇಷು ನ ಚ ಶಸ್ತ್ರೋಪನಾಯಿಷು ।
ನ ಭೇರೀಶಂಖವಾದೇಷು ಪ್ರಹರ್ತವ್ಯಂ ಕಥಂಚನ ॥೩೪॥

ಸಾರಥಿಗಳ ಮೇಲೆ, ರಥದಲ್ಲಿ ಶಸ್ತ್ರಗಳನ್ನು ತಂದುಕೊಡುವ ಕಾರ್ಮಿಕರ ಮೇಲೆ, ಭೇರೀ-ಶಂಖ ವಾದಗಳನ್ನು ಮಾಡುವವರ ಮೇಲೆ ಪ್ರಹಾರವನ್ನು ಮಾಡಬಾರದು.

ಏವಂ ತೇ ಸಮಯಂ ಕೃತ್ವಾ ಕುರುಪಾಂಡವಸೋಮಕಾಃ ।
ವಿಸ್ಮಯಂ ಪರಮಂ ಜಗ್ಮುಃ ಪ್ರೇಕ್ಷಮಾಣಾಃ ಪರಸ್ಪರಮ್ ॥೩೫॥

ಹೀಗೆ ಕುರು-ಪಾಂಡವ-ಸೋಮಕರು ನಿಬಂಧನೆಗಳನ್ನು ಮಾಡಿಕೊಂಡು ಒಬ್ಬರನ್ನೊಬ್ಬರು ನೋಡುತ್ತಾ ಬಹಳ ವಿಸ್ಮಯಾವಿಷ್ಟರಾದರು.

ನಿವಿತ್ಯ ಚ ಮಹಾತ್ಮಾನಸ್ತತಸ್ತೇ ಪುರುಷರ್ಷಭಾಃ ।
ಹೃಷ್ಟರೂಪಾಃ ಸುಮನಸೋ ಬಭೂವುಃ ಸಹಸೈನಿಕಾಃ ॥೩೬॥

ಪುರುಷಶ್ರೇಷ್ಠರಾದ ಆ ಮಹಾತ್ಮರೆಲ್ಲರೂ ತಮ್ಮ ಸೈನಿಕರ ಜೊತೆಯಲ್ಲಿ ಹೀಗೆ ಕುರುಕ್ಷೇತ್ರವನ್ನು ಪ್ರವೇಶ ಮಾಡಿ, ಒಳ್ಳೆಯ ಮನಸ್ಸಿನಿಂದ ಕೂಡಿ ಸಂತೋಷವುಳ್ಳವರಾದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಪ್ರಥಮೋಽಧ್ಯಾಯಃ ॥

॥ ಇತಿ ಜಂಬೂಖಂಡನಿರ್ಮಾಣಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಮೊದಲನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎರಡನೆಯ ಅಧ್ಯಾಯ

ಧೃತರಾಷ್ಟ್ರನಿಂದ ದಿವ್ಯದೃಷ್ಟಿಯ ನಿರಾಕರಣೆ. ವ್ಯಾಸರಿಂದ ಸಂಜಯನಿಗೆ ದಿವ್ಯದೃಷ್ಟಿಯ ದಾನ ಮತ್ತು ಧೃತರಾಷ್ಟ್ರನನ್ನು ಕುರಿತು ಅಪಶಕುನಗಳ ಕಥನ.

ವೈಶಂಪಾಯನಃ

ತತಃ ಪೂರ್ವಾಪರೇ ಸಂಧ್ಯೇ ಸಮೀಕ್ಷ್ಯ ಭಗವಾನ್ ಋಷಿಃ ।
ಸರ್ವವೇದವಿದಾಂ ಶ್ರೇಷ್ಠೋ ವ್ಯಾಸಃ ಸತ್ಯವತೀಸುತಃ ॥೧॥

ವೈಶಂಪಾಯನ– ಅನಂತರ ಸರ್ವವೇದವೇತ್ತರಲ್ಲಿ ಶ್ರೇಷ್ಠರಾದ, ಸತ್ಯವತೀ ಸುತರಾದ, ಋಷಿಗಳಾದ ಭಗವಾನ್ ವೇದವ್ಯಾಸರು ಎರಡು ಸಂಧ್ಯಾಕಾಲಗಳನ್ನು ನೋಡಿ ಮಾತನಾಡಿದರು.

ಭವಿಷ್ಯತಿ ರಣೇ ಘೋರೇ ಭರತಾನಾಂ ಪಿತಾಮಹಃ ।
ಪ್ರತ್ಯಕ್ಷದರ್ಶೀ ಭಗವಾನ್ ಭೂತಭವ್ಯಭವಿಷ್ಯವಿತ್ ॥೨॥

ವೈಚಿತ್ರವೀರ್ಯಂ ರಾಜಾನಂ ಸ ರಹಸ್ಯಂ ಬ್ರವೀದಿದಮ್ ।
ಶೋಚಂತಮಾರ್ತಂ ಧ್ಯಾಯಂತಂ ಪುತ್ರಾಣಾಮನಯಂ ತದಾ ॥೩॥

ಭರತರ ಪಿತಾಮಹರಾದ, ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡುವ, ಭೂತಭವಿಷ್ಯತ್ ವರ್ತಮಾನಗಳ ಜ್ಞಾನವುಳ್ಳ, ಪೂಜ್ಯರಾದ ಅವರು ಘೋರವಾದ ಯುದ್ಧವು ಸನ್ನಿಹಿತವಾಗುತ್ತಿರಲು ತನ್ನ ಮಕ್ಕಳ ಅನ್ಯಾಯಗಳನ್ನು ಕುರಿತು ಯೋಚಿಸುತ್ತಾ

ಶೋಕದಿಂದ ಆರ್ತನಾಗಿದ್ದ ವಿಚಿತ್ರವೀರ್ಯಪುತ್ರನಾದ ಧೃತರಾಷ್ಟ್ರನನ್ನು ಕುರಿತು ಏಕಾಂತದಲ್ಲಿ ಈ ಮಾತುಗಳನ್ನು ಆಡಿದರು.

ಶ್ರೀವ್ಯಾಸಃ

ರಾಜನ್ ಪರೀತಕಾಲಾಸ್ತೇ ಪುತ್ರಾಶ್ಚಾನ್ಯೇ ಚ ಭೂಮಿಪಾಃ ।
ತೇ ಹನಿಷ್ಯಂತಿ ಸಂಗ್ರಾಮೇ ಸಮಾಸಾದ್ಯೇತರೇತರಮ್ ॥೪॥

ಶ್ರೀವ್ಯಾಸ– ಎಲೈ ರಾಜನೇ, ನಿನ್ನ ಮಕ್ಕಳಿಗೂ ಮತ್ತು ಬೇರೆ ರಾಜರುಗಳಿಗೂ ಕಾಲವು (ಮೃತ್ಯುಕಾಲವು) ತುಂಬಿ ಬಂದಿದೆ. ಅವರು ಪರಸ್ಪರವಾಗಿ ಎದುರಿಸಿ ಯುದ್ಧದಲ್ಲಿ ಒಬ್ಬರನ್ನೊಬ್ಬರು ಕೊಲ್ಲುವರು.

ತೇಷು ಕಾಲಪರೀತೇಷು ವಿನಶ್ಯತ್ಸು ಚ ಭಾರತ ।
ಕಾಲಪರ್ಯಾಯಮಾಜ್ಞಾಯ ಮಾ ಸ್ಮ ಶೋಕೇ ಮನಃ ಕೃಥಾಃ ॥೫॥

ಎಲೈ ಭಾರತನೇ, ಕಾಲಪಕ್ವವಾಗಿ ಅವರು ವಿನಾಶವನ್ನು ಹೊಂದುತ್ತಿರಲು, ಕಾಲದ ಗತಿಯನ್ನು ತಿಳಿದು ನೀನು ಮನಸ್ಸಿನಲ್ಲಿ ಶೋಕವನ್ನು ತಂದುಕೊಳ್ಳಬಾರದು.

ಯದಿ ತ್ವಿಚ್ಛಸಿ ಸಂಗ್ರಾಮಂ ದ್ರಷ್ಟುಮೇನಂ ವಿಶಾಂಪತೇ ।
ಚಕ್ಷುರ್ದದಾನಿ ತೇ ಹಂತ ಯುದ್ಧಮೇತನ್ನಿಶಾಮಯ ॥೬॥

ಎಲೈ ರಾಜನೇ, ನೀನು ಈ ಯುದ್ಧವನ್ನು ನೋಡಲು ಬಯಸುವುದಾದರೆ ನಿನಗೆ ನಾನು ಸಂತೋಷದಿಂದ ದಿವ್ಯದೃಷ್ಟಿಯನ್ನು ಕೊಟ್ಟೇನು! ಈ ಯುದ್ಧವನ್ನು ನೀನು ನೋಡುವವನಾಗು.

ಧೃತರಾಷ್ಟ್ರಃ

ನ ರೋಚಯೇ ಜ್ಞಾತಿವಧಂ ದ್ರಷ್ಟುಂ ಬ್ರಹ್ಮರ್ಷಿಸತ್ತಮ ।
ಯುದ್ಧಮೇತತ್ತ್ವಶೇಷೇಣ ಶೃಣುಯಾಂ ತವ ತೇಜಸಾ ॥೭॥

ಧೃತರಾಷ್ಟ್ರ– ಎಲೈ ಬ್ರಹ್ಮರ್ಷಿಶ್ರೇಷ್ಠರೇ, ನಾನು ಜ್ಞಾತಿಗಳ ವಧೆಯನ್ನು ನೋಡಲು ಬಯಸುವುದಿಲ್ಲ. ನಿಮ್ಮ ಅನುಗ್ರಹದಿಂದ ಈ ಯುದ್ಧದ ವಿವರವನ್ನು ಸಮಗ್ರವಾಗಿ ಕೇಳಲು ಬಯಸಿಯೇನು!

ವೈಶಂಪಾಯನಃ

ತಸ್ಮಿನ್ನನಿಚ್ಛತಿ ದ್ರಷ್ಟುಂ ಸಂಗ್ರಾಮಂ ಶ್ರೋತುಮಿಚ್ಛತಿ ।
ವರಾಣಾಮೀಶ್ವರೋ ದಾತಾ ಸಂಜಯಾಯ ವರಂ ದದೌ ॥೮॥

ವೈಶಂಪಾಯನ– ಹೀಗೆ ಧೃತರಾಷ್ಟ್ರನು ಯುದ್ಧವನ್ನು ನೋಡಲು ಬಯಸದೆ, ಕೇಳಲು ಮಾತ್ರ ಬಯಸುತ್ತಿರಲು, ವರಗಳನ್ನು ಕೊಡುವವರಲ್ಲಿ ಶ್ರೇಷ್ಠರಾದ ವ್ಯಾಸರು ಸಂಜಯನಿಗೆ ವರವನ್ನು ನೀಡಿದರು.

ವ್ಯಾಸಃ

ಏಷ ತೇ ಸಂಜಯೋ ರಾಜನ್ ಯುದ್ಧಮೇತದ್ ವದಿಷ್ಯತಿ ।
ಏತಸ್ಯ ಸರ್ವಂ ಸಂಗ್ರಾಮೇ ನಪರೋಕ್ಷಂ ಭವಿಷ್ಯತಿ ॥೯॥

ವ್ಯಾಸರು– ಎಲೈ ರಾಜನೇ, ಈ ಸಂಜಯನು ನಿನಗೆ ಈ ಯುದ್ಧವನ್ನು ವರ್ಣಿಸುವನು. ಈ ಯುದ್ಧದಲ್ಲಿ ಇವನಿಗೆ ಎಲ್ಲವೂ ಪ್ರತ್ಯಕ್ಷವಾಗುವುದು.

ಚಕ್ಷುಷಾ ಸಂಜಯೋ ರಾಜನ್ ದಿವ್ಯೇನೈಷ ಸಮನ್ವಿತಃ ।
ಕಥಯಿಷ್ಯತಿ ತೇ ಯುದ್ಧಂ ಸರ್ವಜ್ಞಶ್ಚ ಭವಿಷ್ಯತಿ ॥೧೦॥

ಎಲೈ ರಾಜನೇ, ಈ ಸಂಜಯನು ದಿವ್ಯದೃಷ್ಟಿಯಿಂದ ಕೂಡಿದವನಾಗಿ ಈ ಯುದ್ಧದಲ್ಲಿ ನಡೆಯುವ ಎಲ್ಲವನ್ನೂ ನಿನಗೆ ಹೇಳುವನು. ಈ ವಿಷಯದಲ್ಲಿ ಅವನು ಸರ್ವಜ್ಞನಾಗುವನು.

ಪ್ರಕಾಶಂ ವಾ ರಹಸ್ಯಂ ವಾ ರಾತ್ರೌ ವಾ ಯದಿ ವಾ ದಿವಾ ।
ಮನಸಾ ಚಿಂತಿತಮಪಿ ಸರ್ವಂ ವೇತ್ಸ್ಯತಿ ಸಂಜಯಃ ॥೧೧॥

ಪ್ರಕಾಶವಾಗಲೀ ಅಥವಾ ರಹಸ್ಯವಾಗಲೀ, ರಾತ್ರಿಯಾಗಲೀ ಅಥವಾ ಹಗಲಾಗಲೀ, ನಡೆಯುವ ವಿಷಯಗಳನ್ನು ಮತ್ತು ಮನಸ್ಸಿನಲ್ಲಿ ಚಿಂತಿಸಿದ ಎಲ್ಲ ವಿಷಯವನ್ನೂ ಸಂಜಯನು ತಿಳಿಯುವನು.

ನೈನಂ ಶಸ್ತ್ರಾಣಿ ಭೇತ್ಸ್ಯಂತಿ ನೈನಂ ಬಾಧಿಷ್ಯತೇ ಶ್ರಮಃ ।
ಗಾವಲ್ಗಣೇರಯಂ ಜೀವನ್ ಯುದ್ಧಾದಸ್ಮಾದ್ ವಿಮೋಕ್ಷ್ಯತೇ ॥೧೨॥

ಇವನನ್ನು ಯಾವ ಶಸ್ತ್ರಗಳೂ ಗಾಯಗೊಳಿಸುವುದಿಲ್ಲ. ಇವನಿಗೆ ಶ್ರಮವಾಗುವುದಿಲ್ಲ. ಗವಲ್ಗಣನ ಪುತ್ರನಾದ ಇವನು ಜೀವಂತನಾಗಿ ಈ ಯುದ್ಧದಿಂದ ಹೊರಬರುವನು.

ಅಹಂ ಚ ಕೀರ್ತಿಮೇತೇಷಾಂ ಕುರೂಣಾಂ ಭರತರ್ಷಭ ।
ಪಾಂಡವಾನಾಂ ಚ ಸರ್ವೇಷಾಂ ಪ್ರಥಯಿಷ್ಯಾಮಿ ಮಾ ಶುಚಃ ॥೧೩॥

ಎಲೈ ಭರತಶ್ರೇಷ್ಠನೇ, ನಾನಾದರೂ ಈ ಕುರುಗಳ ಮತ್ತು ಎಲ್ಲ ಪಾಂಡವರ ಕೀರ್ತಿಯನ್ನು ಹರಡುವೆನು. ನೀನು ದುಃಖಪಡಬೇಡ.

ದಿಷ್ಟಮೇತತ್ ಪುರಾ ಚೈವ ನಾತ್ರ ಶೋಚಿತುಮರ್ಹಸಿ ।
ನ ಚೈವ ಶಕ್ಯಂ ಸಂಯಂತುಂ ಯತೋ ಧರ್ಮಸ್ತತೋ ಜಯಃ ॥೧೪॥

ಇದು ಹಿಂದೆಯೇ ಕ್ಲಪ್ತವಾಗಿದೆ. ಈ ವಿಷಯದಲ್ಲಿ ನೀನು ಶೋಕಪಡುವ ಕಾರಣವಿಲ್ಲ ಮತ್ತು ಇದನ್ನು ನಿವಾರಿಸಲೂ ಸಾಧ್ಯವಿಲ್ಲ. ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವುಂಟಾಗುತ್ತದೆ.

ವೈಶಂಪಾಯನಃ

ಏವಮುಕ್ತ್ವಾ ಸ ಭಗವಾನ್ ಕುರೂಣಾಂ ಪ್ರಪಿತಾಮಹಃ ।
ಪುನರೇವ ಮಹಾಬಾಹೋ ಧೃತರಾಷ್ಟ್ರಮುವಾಚ ಹ ॥೧೫॥

ವೈಶಂಪಾಯನ– ಹೀಗೆ ಹೇಳಿ ಕುರುಗಳ ಪ್ರಪಿತಾಮಹರಾದ ಭಗವಾನ್ ವ್ಯಾಸರು ಮಹಾಬಾಹುವಾದ ಧೃತರಾಷ್ಟ್ರನನ್ನು ಕುರಿತು ಪುನಃ ಮಾತನಾಡಿದರು.

ಇಹ ಯುದ್ಧೇ ಮಹಾರಾಜ ಭವಿಷ್ಯತಿ ಮಹಾನ್ ಕ್ಷಯಃ ।
ಯಥೇಮಾನಿ ನಿಮಿತ್ತಾನಿ ಭಯಾಯಾದ್ಯೋಪಲಕ್ಷಯೇ ॥೧೬॥

ಎಲೈ ಮಹಾರಾಜನೇ, ನಾನು ಭಯಸೂಚಕವಾದ ಈ ಶಕುನಗಳನ್ನು ಗಮನಿಸುತ್ತಿದ್ದೇನೆ. ಅದರಂತೆ ಈ ಯುದ್ಧದಲ್ಲಿ ದೊಡ್ಡ ನಾಶವು ಉಂಟಾಗಲಿದೆ.

ಶ್ಯೇನಾ ಗೃಧ್ರಾಶ್ಚ ಕಾಕಾಶ್ಚ ಕಂಕಾಶ್ಚ ಸಹಿತಾ ಬಲೈಃ ।
ಸಂಪತಂತಿ ವನಾಂತೇಷು ಸಮವಾಯಾಂಶ್ಚ ಕುರ್ವತೇ ॥೧೭॥

ಹದ್ದುಗಳು, ಗಿಡಗಗಳು, ಕಾಗೆಗಳು, ಗೃಧ್ರಗಳು ಮತ್ತು ಬಲಪಕ್ಷಿಗಳು ಕಾಡಿನ ಅಂಚಿಗೆ ಹಾರಿಬಂದು ಗುಂಪುಗೂಡುತ್ತಿವೆ.

ಅತ್ಯುಗ್ರಂ ಚ ಪ್ರಪಶ್ಯಂತಿ ಯುದ್ಧಮಾನಂದಿನೋ ದ್ವಿಜಾಃ ।
ಕ್ರವ್ಯಾದಾ ಭಕ್ಷಯಿಷ್ಯಂತಿ ಮಾಂಸಾನಿ ಗಜವಾಜಿನಾಮ್ ॥೧೮॥

ಯುದ್ಧವನ್ನು ಸವಿಯುವ ಕ್ರೂರಪಕ್ಷಿಗಳು ಬಹಳ ಉಗ್ರವಾಗಿ ನೋಡುತ್ತಿವೆ. ಮಾಂಸಾಹಾರಿ ಪ್ರಾಣಿಗಳು ಗಜಾಶ್ವಗಳ ಮಾಂಸಗಳನ್ನು ತಿನ್ನುವವು.

ಖೇಟಾ ಹಾಹೇತಿ ವಾಶಂತೋ ಭೈರವಂ ಭಯವೇದಿನಃ ।
ಕಹ್ವಾಃ ಪ್ರಯಾಂತಿ ಮಧ್ಯೇನ ದಕ್ಷಿಣಾಮಭಿತೋ ದಿಶಮ್ ॥೧೯॥

ಗ್ರಾಮಗಳು ಅಥವಾ ಕ್ರೂರಪಕ್ಷಿಗಳು ಹಾಹಾಕಾರವನ್ನು ಮಾಡುತ್ತಾ ಭೀಕರವಾದ ಭಯವನ್ನು ಸೂಚಿಸುತ್ತಿವೆ. ಬಕಪಕ್ಷಿಗಳು ಅವುಗಳ ಮಧ್ಯದಲ್ಲಿ ದಕ್ಷಿಣಾಭಿಮುಖವಾಗಿ ಹೋಗುತ್ತಿವೆ.

ಉಭೇ ಪೂರ್ವಾಪರೇ ಸಂಧ್ಯೇ ನಿತ್ಯಂ ಪಶ್ಯಾಮಿ ಭಾರತ ।
ಉದಯಾಸ್ತಮಯೇ ಸೂರ್ಯಂ ಕಬಂಧೈಃ ಪರಿವಾರಿತಮ್ ॥೨೦॥

ಎಲೈ ಭಾರತನೇ, ಪ್ರಾತಃಕಾಲದ ಮತ್ತು ಸಾಯಂಕಾಲದ ಎರಡು ಸಂಧಿಗಳಲ್ಲಿಯೂ ಸೂರ್ಯನ ಉದಯಾಸ್ತಮಯ ಸಮಯಗಳಲ್ಲಿ ಸೂರ್ಯನು ಪರಿವೇಶಗಳಿಂದ ಸುತ್ತುವರಿಯಲ್ಪಟ್ಟಿರುವುದನ್ನು ನಾನು ನೋಡುತ್ತಿದ್ದೇನೆ.

ಶ್ವೇತಲೋಹಿತಪರ್ಯಂತಾಃ ಕೃಷ್ಣಗ್ರೀವಾಃ ಸವಿದ್ಯುತಃ ।
ತ್ರಿವರ್ಣಾಃ ಪರಿಘಾಃ ಸಂಧೌ ಭಾನುಮಾವಾರಯಂತ್ಯುತ ॥೨೧॥

ಬಿಳಿ ಮತ್ತು ಕೆಂಪು ಬಣ್ಣಗಳಿಂದ ಕೂಡಿರುವ, ಮಧ್ಯದಲ್ಲಿ ಸ್ವಲ್ಪಭಾಗ ಕಪ್ಪಾದ ಮಿಂಚುಗಳಿಂದ ಕೂಡಿದ ಈ ಮೂರುವರ್ಣದ ಪರಿವೇಶಗಳು ಸಂಧ್ಯಾಕಾಲದಲ್ಲಿ ಸೂರ್ಯನನ್ನು ಸುತ್ತುವರಿಯುತ್ತಿವೆ.

ಜ್ವಲಿತಾರ್ಕೇಂದುನಕ್ಷತ್ರಂ ನಿರ್ವಿಶೇಷದಿನಕ್ಷಪಮ್ ।
ಅಹೋರಾತ್ರಂ ಮಯಾ ದೃಷ್ಟಂ ತತ್‌ಕ್ಷಯಾಯ ಭವಿಷ್ಯತಿ ॥೨೨॥

ಸೂರ್ಯ, ಚಂದ್ರ, ನಕ್ಷತ್ರಗಳು ಜ್ವಲಿತವಾಗಿವೆ. ಹಗಲು ಮತ್ತು ರಾತ್ರಿಗಳಲ್ಲಿ ಯಾವ ವ್ಯತ್ಯಾಸವೂ ಕಾಣುತ್ತಿಲ್ಲ. ಪ್ರತಿದಿನವೂ ನಾನು ನೋಡುತ್ತಿರುವ ಈ ಶಕುನವು ದೊಡ್ಡ ಕ್ಷಯವನ್ನು ಸೂಚಿಸುವುದು.

ಅಲಕ್ಷ್ಮಃ ಪ್ರಭಯಾ ಹೀನಃ ಪೌರ್ಣಮಾಸೀಂ ಚ ಕಾರ್ತಿಕೀಮ್ ।
ಚಂದ್ರೋಽಭೂದಗ್ನಿವರ್ಣಶ್ಚ ಸಮವರ್ಣೇ ನಭಸ್ತಲೇ ॥೨೩॥

ಇಲ್ಲಿ ಕಾರ್ತಿಕ ಪೌರ್ಣಮಾಸೆಯಂದು ಚಂದ್ರನು ಕಾಂತಿಹೀನನಾಗಿ ಅಗ್ನಿವರ್ಣದಿಂದ ಕೂಡಿದ ಆಕಾಶದಲ್ಲಿ ತಾನೂ ಅಗ್ನಿವರ್ಣದಿಂದ ಕೂಡಿದವನಾಗಿ ಅವನನ್ನು ಗಮನಿಸಲು ಸಾಧ್ಯವೇ ಆಗುತ್ತಿಲ್ಲ.

ಸ್ವಪ್ಸ್ಯಂತಿ ನಿಹತಾ ವೀರಾ ಭೂಮಿಮಾವೃತ್ಯ ಪಾರ್ಥಿವಾಃ ।
ರಾಜಾನೋ ರಾಜಪುತ್ರಾಶ್ಚ ಶೂರಾಃ ಪರಿಘಬಾಹವಃ ॥೨೪॥

ಭೂಮಿಯ ಮೇಲಿರುವ ಒನಕೆಯಂತಹ ಬಾಹುಗಳುಳ್ಳ, ಶೂರರಾದ ಮತ್ತು ವೀರರಾದ ರಾಜರು ಮತ್ತು ರಾಜಪುತ್ರರು ಭೂಮಿಯ ಮೇಲೆ ಸತ್ತು, ಭೂಮಿಯನ್ನು ಮುಚ್ಚಿಮಲಗುವರು.

ಅಂತರಿಕ್ಷೇ ವರಾಹಸ್ಯ ವೃಷದಂಶಸ್ಯ ಚೋಭಯೋಃ ।
ಪ್ರಣಾದಂ ಯುಧ್ಯತೋ ರಾತ್ರೌ ರೌದ್ರಂ ನಿತ್ಯಂ ಪ್ರಲಕ್ಷಯೇ ॥೨೫॥

ಅಂತರಿಕ್ಷದಲ್ಲಿ ರಾತ್ರಿಯ ಕಾಲದಲ್ಲಿ ವರಾಹ ಮತ್ತು ಮಾರ್ಜಾಲಗಳು ಯುದ್ಧವನ್ನು ಮಾಡುತ್ತಾ, ಭಯಂಕರವಾದ ನಾದವನ್ನು ಮಾಡುವುದನ್ನು ನಿತ್ಯವೂ ನೋಡುತ್ತಿದ್ದೇನೆ.

ದೇವತಾಪ್ರತಿಮಾಶ್ಚಾಪಿ ಕಂಪಂತಿ ಚ ಹಸಂತಿ ಚ ।
ವಮಂತಿ ರುಧಿರಂ ಚಾಸ್ಯೈಃ ಸ್ವಿದ್ಯಂತಿ ಪ್ರಪತಂತಿ ಚ ॥೨೬॥

ದೇವತಾಪ್ರತಿಮೆಗಳು ಅಲುಗಾಡುತ್ತಿವೆ ಮತ್ತು ನಗುತ್ತಿವೆ. ಬಾಯಿಂದ ರಕ್ತವನ್ನು ಸುರಿಸುತ್ತಿವೆ. ಬೆವರುತ್ತಿವೆ ಮತ್ತು ಬೀಳುತ್ತಿವೆ.

ಅನಾಹತಾ ದುಂದುಭಯಃ ಪ್ರಣದಂತಿ ವಿಶಾಂಪತೇ ।
ಅಯುಕ್ತಾಶ್ಚ ಪ್ರವರ್ತಂತೇ ಕ್ಷತ್ರಿಯಾಣಾಂ ಮಹಾರಥಾಃ ॥೨೭॥

ಎಲೈ ರಾಜನೇ, ಬಾರಿಸದಿದ್ದರೂ ದುಂದುಭಿಗಳು ನಾದವನ್ನು ಮಾಡುತ್ತಿವೆ. ಮಹಾರಥರಾದ ಕ್ಷತ್ರಿಯರ ರಥಗಳು ಹೂಡದಿದ್ದರೂ ಮುಂದೆ ಚಲಿಸುತ್ತಿವೆ.

ಕೋಕಿಲಾಃ ಶತಪತ್ರಾಶ್ಚ ಚಾಷಾ ಭಾಸಾಃ ಶುಕಾಸ್ತಥಾ ।
ಸಾರಸಾಶ್ಚ ಮಯೂರಾಶ್ಚ ವಾಚೋ ಮುಂಚಂತಿ ದಕ್ಷಿಣಾಃ ॥೨೮॥

ಕೋಗಿಲೆಗಳು, ಶತಪತ್ರಗಳು, ಚಾಷಗಳು (ಹಂಗನ ಹಕ್ಕಿಗಳು), ಶಕುಂತ ಪಕ್ಷಿಗಳು, ಗಿಣಿಗಳು, ಸಾರಸ ಪಕ್ಷಿಗಳು ಮತ್ತು ನವಿಲುಗಳು ದಕ್ಷಿಣಾಭಿಮುಖವಾಗಿ ನಿಂತು ಕಿರುಚುತ್ತಿವೆ.

ಗೃಹೀತಶಸ್ತ್ರಾವರಣಾ ವರ್ಮಿಣೋ ವಾಜಿಪೃಷ್ಠಗಾಃ ।
ಅರುಣೋದಯೇಷು ದೃಶ್ಯಂತೇ ಶತಶಃ ಶಲಭವ್ರಜಾಃ ॥೨೯॥

ಅರುಣೋದಯ ಕಾಲದಲ್ಲಿ ನೂರಾರು ಸಂಖ್ಯೆಯ ಪತಂಗಗಳ ಹಿಂಡು ಆಯುಧಗಳನ್ನು, ಆಭರಣಗಳನ್ನು, ಕವಚಗಳನ್ನು ಮತ್ತು ಅಶ್ವಗಳ ಹಿಂಭಾಗವನ್ನು ಮುತ್ತುತ್ತಿರುವುದು ಕಂಡುಬರುತ್ತಿದೆ.

ಉಭೇ ಸಂಧ್ಯೇ ಪ್ರಕಾಶೇತೇ ದಿಶಾಂ ದಾಹಸಮನ್ವಿತೇ ।
ಆಸೀದ್ ರುಧಿರವರ್ಷಂ ಚ ಅಸ್ಥಿವರ್ಷಂ ಚ ಭಾರತ ॥೩೦॥

ಎರಡು ಸಂಧ್ಯಾಕಾಲಗಳಲ್ಲಿಯೂ ದಿಕ್ಕುಗಳು ದಾಹದಿಂದ ಕೂಡಿವೆ. ಎಲೈ ಭಾರತನೇ, ರಕ್ತದ ಮಳೆಯೂ ಮತ್ತು ಮೂಳೆಗಳ ಮಳೆಯೂ ಉಂಟಾಯಿತು.

ಯಾ ಚೈಷಾ ವಿಶ್ರುತಾ ರಾಜಂಸ್ತ್ರಿಲೋಕ್ಯೇ ಸಾಧುಸಮ್ಮತಾ ।
ಅರುಂಧತೀ ತಯಾಪ್ಯೇಷ ವಸಿಷ್ಠಃ ಪೃಷ್ಠತಃ ಕೃತಃ ॥೩೧॥

ಎಲೈ ರಾಜನೇ, ಮೂರುಲೋಕಗಳಲ್ಲಿ ವಿಶ್ರುತವಾದ, ಸಜ್ಜನರಿಗೆ ಸಮ್ಮತವಾದ ಈ ಅರುಂಧತೀ ನಕ್ಷತ್ರವೂ ಸಹ ವಸಿಷ್ಠ ನಕ್ಷತ್ರವನ್ನು ಹಿಂದೆ ಹಾಕಿ ಮುಂದೆ ಸಾಗಿದೆ.

ರೋಹಿಣೀಂ ಪೀಡಯನ್ನೇವ ಸ್ಥಿತೋ ರಾಜನ್ ಶನೈಶ್ಚರಃ ।
ವ್ಯಾವೃತ್ತಂ ಲಕ್ಷ್ಯ ಸೋಮಸ್ಯ ಭವಿಷ್ಯತಿ ಮಹದ್ ಭಯಮ್ ॥೩೨॥

ಎಲೈ ರಾಜನೇ, ಶನಿಯು ವೃಷಭ ರಾಶಿಯಲ್ಲಿ ರೋಹಿಣೀ ನಕ್ಷತ್ರವನ್ನು ಪೀಡಿಸುತ್ತಿದ್ದಾನೆ. ಚಂದ್ರನ ಚಿಹ್ನೆಯು ಕಂಡುಬರುತ್ತಿಲ್ಲ. ದೊಡ್ಡ ಭಯವು ಉಂಟಾಗಲಿದೆ.

ಅಸಙ್ಗೇ ಚ ಮಹಘೋರಸ್ತನಿಕಂ ಶ್ರೂಯತೇ ಭೃಶಮ್ ।
ವಾಹನಾನಾಂ ಚ ರುದತಾಂ ನಿಪತಂತ್ಯ ಶ್ರುಬಿಂದವಃ ॥೩೩॥

ಮೋಡವಿಲ್ಲದ ಆಕಾಶದಲ್ಲಿ ಸತತವಾಗಿ ಘೋರವಾದ ಗುಡುಗುಗಳು ಕೇಳಿ ಬರುತ್ತಿವೆ. ಅಳುತ್ತಿರುವ ಗಜಾಶ್ವ-ವಾಹನಗಳ ಕಣ್ಣಿನಿಂದ ನೀರು ಸುರಿಯುತ್ತಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮ ಪರ್ವಣಿ ದ್ವಿತೀಯೋಽಧ್ಯಾಯಃ ॥

॥ಇತಿ ಜಂಬೂಖಂಡನಿರ್ಮಾಣಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ವ್ಯಾಸರಿಂದ ಅಪಶಕುನಗಳ ಕಥನದ ಅನುವೃತ್ತಿ.

ವ್ಯಾಸಃ

ಖರಾ ಗೋಷು ಪ್ರಜಾಯಂತೇ ರಮಂತೇ ಮಾತೃಭಿಃ ಸುತಾಃ ।
ಅನಾರ್ತವಂ ಪುಷ್ಪಫಲಂ ದರ್ಶಯಂತಿ ವನೇ ದ್ರುಮಾಃ ॥೧॥

ವ್ಯಾಸರು– ಗೋವುಗಳಲ್ಲಿ ಕತ್ತೆಗಳು ಜನಿಸುತ್ತವೆ. ಪುತ್ರರು ತಾಯಿಯರ ಜೊತೆಯಲ್ಲಿ ರಮಿಸುತ್ತಾರೆ. ಕಾಡಿನಲ್ಲಿ ಮರಗಳು ಆ ಋತುವಿಗೆ ಯೋಗ್ಯವಲ್ಲದ ಪುಷ್ಪ-ಫಲಗಳನ್ನು ಕೊಡುತ್ತವೆ.

ಗರ್ಭಿಣ್ಯೋ ರಾಜಪುತ್ರ್ಯಶ್ಚ ಜನಯಂತಿ ವಿಭೀಷಣಾನ್ ।
ಕ್ರವ್ಯಾದಾನ್ ಪಕ್ಷಿಣಶ್ಚೈವ ಗೋಮಾಯೂನಪರಾನ್ ಮೃಗಾನ್ ॥೨॥

ಗರ್ಭಿಣಿಯರಾದ ರಾಜಕುಮಾರಿಯರು ಭಯಂಕರವಾದ ಮಾಂಸಾಹಾರಿ ಪ್ರಾಣಿಗಳನ್ನೂ, ಪಕ್ಷಿಗಳನ್ನೂ, ನರಿಗಳನ್ನೂ, ಉಳಿದ ಮೃಗಗಳನ್ನೂ ಪ್ರಸವಿಸುತ್ತಾರೆ.

ತ್ರಿವಿಷಾಣಾಶ್ಚತುರ್ನೇತ್ರಾಃ ಪಂಚಪಾದಾಃ ದ್ವಿಮೇಹನಾಃ ।
ದ್ವಿಶೀರ್ಷಾಶ್ಚ ದ್ವಿಪುಚ್ಛಾಶ್ಚ ದಂಷ್ಟಿಣಃ ಪಶವೋಽಶಿವಾಃ ॥೩॥

ಮೂರು ಕೊಂಬುಗಳು, ನಾಲ್ಕು ಕಣ್ಣುಗಳು, ಐದು ಕಾಲುಗಳು, ಎರಡು ಮೂತ್ರದ್ವಾರಗಳು, ಎರಡು ತಲೆಗಳು, ಎರಡು ಬಾಲಗಳು ಮತ್ತು ಕೋರೆಯ ಹಲ್ಲುಗಳನ್ನು ಹೊಂದಿದ ಅಮಂಗಳವಾದ ಪಶುಗಳು ಜನಿಸುತ್ತವೆ.

ಜಾಯಂತೇ ವಿವೃತಾಸ್ಯಾಶ್ಚ ವ್ಯಾಹರಂತೋಽಶಿವಾ ಗಿರಃ ।
ತ್ರಿಪದಾಃ ಶಿಖಿನಸ್ತಾಕ್ಷ್ರ್ಯಾಶ್ಚತುರ್ದಂಷ್ಟ್ರಾ ವಿಷಾಣಿನಃ ॥೪॥

ಹುಟ್ಟುವಾಗಲೇ ದೊಡ್ಡದಾಗಿ ತೆರೆದ ಬಾಯಿಂದ ಅಮಂಗಳವಾದ ಮಾತುಗಳನ್ನು ಆಡುತ್ತಾರೆ. ನವಿಲುಗಳು ಮತ್ತು ಗರುಡ ಪಕ್ಷಿಗಳು ಮೂರು ಪಾದಗಳನ್ನೂ, ಕೊಂಬುಳ್ಳ ಪ್ರಾಣಗಳು ನಾಲ್ಕು ಕೋರೆಹಲ್ಲುಗಳನ್ನು ಹೊಂದಿರುತ್ತವೆ.

ತಥೈವಾನ್ಯಾಶ್ಚ ದೃಶ್ಯಂತೇ ಸ್ತ್ರಿಯಶ್ಚ ಬ್ರಹ್ಮವಾದಿನಾಮ್ ।
ವೈನತೇಯಾನ್ ಮಯೂರಾಂಶ್ಚ ಜನಯಂತ್ಯಃ ಪುರೇ ತವ ॥೫॥

ಅದರಂತೆ ಬ್ರಾಹ್ಮಣ ಸ್ತ್ರೀಯರು ಗರುಡಗಳನ್ನೂ, ನವಿಲುಗಳನ್ನೂ ಪ್ರಸವಿಸುವುದು ನಿನ್ನ ಪಟ್ಟಣದಲ್ಲಿ ಕಂಡುಬರುತ್ತದೆ.

ಗೋವತ್ಸಂ ವಡವಾ ಸೂತೇ ಶ್ವಾ ಸೃಗಾಲಂ ಮಹೀಪತೇ ।
ಕ್ರಕರಾನ್ ಶಾರಿಕಾಶ್ಚೈವ ಶುಕಾಂಶ್ಚಾಶುಭವಾದಿನಃ ॥೬॥

ಎಲೈ ರಾಜನೇ, ಕುದುರೆಯು ಗೋವತ್ಸವನ್ನೂ, ನಾಯಿಯು ನರಿಯನ್ನೂ ಪ್ರಸವಿಸುತ್ತದೆ. ಕಬ್ಬಕ್ಕಿಗಳು ಕೆಟ್ಟಮಾತುಗಳನ್ನಾಡುವ ಶುಕ, ಶಾರಿಕಗಳನ್ನು ಪ್ರಸವಿಸುತ್ತವೆ.

ಸ್ತ್ರಿಯಃ ಕಾಚಿತ್ ಪ್ರಜಾಯಂತೇ ಚತಸ್ರಃ ಪಂಚ ಕನ್ಯಕಾಃ ।
ತಾ ಜಾತಮಾತ್ರಾ ನೃತ್ಯಂತಿ ಗಾಯಂತಿ ಚ ಹಸಂತಿ ಚ ॥೭॥

ಸ್ತ್ರೀಯರು ಒಮ್ಮೊಮ್ಮೆ ಒಟ್ಟಿಗೆ ನಾಲ್ಕೈದು ಹೆಣ್ಣುಮಕ್ಕಳಿಗೆ ಜನ್ಮವೀಯುತ್ತಾರೆ. ಆ ಹೆಣ್ಣು ಶಿಶುಗಳಾದರೂ ಹುಟ್ಟಿದ ತಕ್ಷಣವೇ ಕುಣಿಯುತ್ತವೆ, ನಗುತ್ತವೆ ಮತ್ತು ಹಾಡುತ್ತವೆ.

ಪೃಥಗ್‌ಜನಸ್ಯ ಕುಡಕಾಃ ಸ್ತನಪಾಃ ಸ್ತೇನವೇಶ್ಮನಿ ।
ನೃತ್ಯಂತಿ ಪರಿಗಾಯಂತಿ ವೇದಯಂತೋ ಮಹದ್ಭಯಮ್ ॥೮॥

ನೀಚಜನರ ಮನೆಯಲ್ಲಿ ಮತ್ತು ಕಳ್ಳರ ಮನೆಗಳಲ್ಲಿ ಆಗ ತಾನೇ ಹುಟ್ಟಿದ ಅಂಗವಿಕಲಗಳಾದ ಶಿಶುಗಳು ದೊಡ್ಡ ಭಯವನ್ನು ಸೂಚಿಸುತ್ತಾ ಕುಣಿಯುತ್ತಾರೆ ಮತ್ತು ಹಾಡುತ್ತಾರೆ.

ಪ್ರತಿಮಾಶ್ಚಾಲಿಖಂತ್ಯನ್ಯೇ ಸಶಸ್ತ್ರಾಃ ಕಾಲಚೋದಿತಾಃ ।
ಅನ್ಯೋನ್ಯಮಭಿಧಾವಂತಿ ಶಿಶವೋ ದಂಡಪಾಣಯಃ ।
ಉಪರುಂಧಂತಿ ಕೃತ್ವಾ ಚ ನಗರಾಣಿ ಯುಯುತ್ಸವಃ ॥೯॥

ಇನ್ನು ಕೆಲವು ಮಕ್ಕಳು ಕಾಲಚೋದಿತರಾಗಿ ಕೈಯಲ್ಲಿ ಶಸ್ತ್ರಗಳನ್ನು ಹಿಡಿದು ಪ್ರತಿಮೆಗಳನ್ನು ಬರೆಯುತ್ತಾರೆ. ಚಿಕ್ಕಮಕ್ಕಳು ಕೈಯಲ್ಲಿ ದಂಡವನ್ನು ಹಿಡಿದು ಪರಸ್ಪರವಾಗಿ ಮುನ್ನುಗ್ಗುತ್ತಾರೆ. ಆಟದ ನಗರಗಳನ್ನು ನಿರ್ಮಿಸಿ ಯುದ್ಧ ಮಾಡುವ ಇಚ್ಛೆಯಿಂದ ಅವುಗಳಿಗೆ ಮುತ್ತಿಗೆಯನ್ನು ಹಾಕುತ್ತಾರೆ.

ಪದ್ಮೋತ್ಪಲಾನಿ ವೃಕ್ಷೇಷು ಜಾಯಂತೇ ಕುಮುದಾನಿ ಚ ।
ವಿಷ್ಣಾತಾಶ್ಚ ವಾಂತ್ಯುಗ್ರಾ ರಜೋ ನ ವ್ಯುಪಶಾಮ್ಯತಿ ॥೧೦॥

ಮರಗಳಲ್ಲಿ ಪದ್ಮ, ಉತ್ಪಲ ಮತ್ತು ಕುಮುದ ಪುಷ್ಪಗಳು ಉಂಟಾಗುತ್ತವೆ. ಭಯಂಕರವಾದ ಸುಂಟರಗಾಳಿಗಳು ಉಂಟಾಗುತ್ತವೆ. ಧೂಳು ಅಡಗುವುದಿಲ್ಲ.

ಅಭೀಕ್ಷ್ಣಂ ಕಂಪತೇ ಭೂಮಿರರ್ಕಂ ರಾಹುಸ್ತಥಾಗ್ರಸತ್ ।
ಶ್ವೇತೋ ಗ್ರಹಸ್ತಥಾ ಚಿತ್ರಾಂ ಸಮತಿಕ್ರಮ್ಯ ತಿಷ್ಠತಿ ॥೧೧॥

ಭೂಮಿಯು ಸತತವಾಗಿ ನಡುಗುತ್ತಿದೆ. ರಾಹುವು ಸೂರ್ಯನನ್ನು ಹಿಡಿದಿದ್ದಾನೆ. ಶುಕ್ರನು ಚಿತ್ತಾ ನಕ್ಷತ್ರವನ್ನು ಆಕ್ರಮಿಸಿ ಮುಂದೆ ಹೋಗಿ ನಿಂತಿದ್ದಾನೆ.

ಅಭಾವಂ ಹಿ ವಿಶೇಷೇಣ ಕುರೂಣಾಂ ಪ್ರತಿಪಶ್ಯತಿ ।
ಧೂಮಕೇತುರ್ಮಹಾಘೋರಃ ಪುಷ್ಯಮಾಕ್ರಮ್ಯ ತಿಷ್ಠತಿ ॥೧೨॥

ಪುಷ್ಯ ನಕ್ಷತ್ರವನ್ನು ಆಕ್ರಮಿಸಿಕೊಂಡಿರುವ ಮಹಾಘೋರವಾದ ಧೂಮಕೇತುವು ವಿಶೇಷವಾಗಿ ಕುರುಗಳ ನಾಶವನ್ನು ಸೂಚಿಸುತ್ತದೆ.

ಸೇನಯೋರಶಿವಂ ಘೋರಂ ಕರಿಷ್ಯತಿ ಮಹಾಗ್ರಹಃ ।
ಮಘಾಸ್ವಂಗಾರಕೋ ವಕ್ರಃ ಶ್ರವಣೇ ಚ ಬೃಹಸ್ಪತಿಃ ॥೧೩॥

ಮಘಾ ನಕ್ಷತ್ರದಲ್ಲಿ ವಕ್ರನಾದ ಅಂಗಾರಕನು, ಶ್ರವಣ ನಕ್ಷತ್ರದಲ್ಲಿ ವಕ್ರನಾದ ಬೃಹಸ್ಪತಿಯು ಈ ಎರಡು ಮಹಾಗ್ರಹಗಳು ಎರಡು ಸೇನೆಗಳಿಗೂ ಘೋರವಾದ ಅಮಂಗಳವನ್ನು ಮಾಡುವವು.

ಭಾಗ್ಯಂ ನಕ್ಷತ್ರಮಾಕ್ರಮ್ಯ ಸೂರ್ಯಪುತ್ರೇಣ ಪೀಡ್ಯತೇ ।
ಶುಕ್ರಃ ಪ್ರೋಷ್ಠಪದೇ ಪೂರ್ವಂ ಸಮಾಹೃತ್ಯ ವಿಶಾಂಪತೇ ।
ಉತ್ತರೇ ತು ಸಮಾಕ್ರಮ್ಯ ಸಹಿತಃ ಪ್ರತ್ಯುದೀಕ್ಷತೇ ॥೧೪॥

ಸೂರ್ಯಪುತ್ರನಾದ ಶನಿಯು ಭಗದೇವತಾಕವಾದ ನಕ್ಷತ್ರವಾದ ನಕ್ಷತ್ರವನ್ನು ಪೀಡಿಸುತ್ತಿದ್ದಾನೆ. ಶುಕ್ರನು ಭಾದ್ರಪದ ಮಾಸದಲ್ಲಿ ಪೂರ್ಣಿಮೆಯ ಮೊದಲು ಬರುವ ಪೂರ್ವಾಭಾದ್ರ ನಕ್ಷತ್ರವನ್ನು ಆಕ್ರಮಿಸಿ ಮುಂದಿನ ಉತ್ತರಾಭಾದ್ರ ನಕ್ಷತ್ರವನ್ನು ನೋಡುತ್ತಿದ್ದಾನೆ.

ಶ್ವೇತೋ ಗ್ರಹಃ ಪ್ರಜ್ವಲಿತಃ ಸಧೂಮಃ ಸಹಪಾವಕಃ ।
ಐಂದ್ರಂ ತೇಜಸ್ವಿ ನಕ್ಷತ್ರಂ ಜ್ಯೇಷ್ಠಮಾಕ್ರಮ್ಯ ತಿಷ್ಠತಿ ॥೧೫॥

ಚಂದ್ರನು ಪ್ರಜ್ವಲಿತನಾಗಿ ಧೂಮಾಗ್ನಿಗಳಿಂದ ಕೂಡಿದ್ದಾನೆ. ತೇಜಸ್ವಿಯಾದ ಇಂದ್ರದೇವತಾಕವಾದ ಜ್ಯೇಷ್ಠಾನಕ್ಷತ್ರವನ್ನು ಆಕ್ರಮಿಸಿ ಕುಳಿತಿದ್ದಾನೆ.

ಧ್ರುವಂ ಪ್ರಜ್ವಲಿತೋ ಘೋರಮಪಸವ್ಯಂ ಪ್ರವರ್ತತೇ ।
ಚಿತ್ರಾಸ್ವಾತ್ಯುತ್ತರೇ ಚೈವ ಧಿಷ್ಣತಃ ಪರುಷೋ ಗ್ರಹಃ ॥೧೬॥

ಧ್ರುವ ನಕ್ಷತ್ರವು ಘೋರವಾದ ಜ್ವಾಲೆಗಳಿಂದ ಕೂಡಿದ್ದು, ಅಪ್ರದಕ್ಷಿಣಾಕಾರವಾಗಿ ಚಲಿಸುತ್ತಿದೆ. ಕ್ರೂರಗ್ರಹವಾದ ರಾಹುವು ಚಿತ್ರಾ ನಕ್ಷತ್ರಗಳಲ್ಲಿಯೂ ಮತ್ತು ಅದರ ಮುಂದಿನ ಸ್ವಾತಿ ನಕ್ಷತ್ರದಲ್ಲಿಯೂ ಅಧಿಷ್ಠಿತವಾಗಿದೆ.

ವಕ್ರಾನುವಕ್ರಂ ಕೃತ್ವಾ ಚ ಶ್ರವಣೇ ಪಾವಕಪ್ರಭಃ ।
ಬ್ರಹ್ಮರಾಶಿಂ ಸಮಾವೃತ್ಯ ಲೋಹಿತಾಂಗೋ ವ್ಯವಸ್ಥಿತಃ ॥೧೭॥

ಲೋಹಿತಾಂಗನಾದ ಕುಜನು ಅಗ್ನಿಯ ಕಾಂತಿಯನ್ನು ಹೊಂದಿ ಬ್ರಾಹ್ಮ ಮುಹೂರ್ತದ ಸಮಯದಲ್ಲಿ ವಕ್ರಾನುವಕ್ರ ಗತಿಯಿಂದ ಶ್ರವಣ ನಕ್ಷತ್ರದಲ್ಲಿದ್ದಾನೆ.

ಸರ್ವಸ್ಯಪ್ರತಿಚ್ಛನ್ನಾ ಪೃಥಿವೀ ಫಲಮೂಲಿನೀ ।
ಪಂಚಶೀರ್ಷಾ ಯವಾಶ್ಚೈವ ಶತಶೀರ್ಷಾಶ್ಚ ಶಾಲಯಃ ॥೧೮॥

ಭೂಮಿಯೆಲ್ಲವೂ ಎಲ್ಲ ವಿಧದ ಸಸ್ಯಗಳಿಂದ ಮತ್ತು ಫಲಗಳಿಂದ ಮುಚ್ಚಿ ಹೋಗಿದೆ. ಗೋಧಿಯ ಗಿಡದಲ್ಲಿ ಐದು ತೆನೆಗಳು, ಭತ್ತದ ಪೈರಿನಲ್ಲಿ ನೂರಾರು ತೆನೆಗಳು ಕಂಡುಬರುತ್ತಿವೆ.

ಪ್ರಧಾನಾಃ ಸರ್ವಲೋಕಸ್ಯ ಯಾಸ್ವಾಯತ್ತಮಿದಂ ಜಗತ್ ।
ತಾ ಗಾವಃ ಪ್ರಸ್ರುತಾ ಮೇಘೈಃ ಶೋಣಿತಂ ಪ್ರಕ್ಷರಂತ್ಯುತ ॥೧೯॥

ಈ ಲೋಕಕ್ಕೆ ಪ್ರಧಾನವಾದ, ಸರ್ವರಿಗೂ ಆಶ್ರಯವಾದ ಗೋವುಗಳು ಕರುಗಳು ಹಾಲನ್ನು ಕುಡಿಯುವಾಗ ರಕ್ತವನ್ನು ಸುರಿಸುತ್ತಿವೆ.

ನಿಶ್ಚೇರುರಸಿಧಾನೇಭ್ಯಃ ಖಡ್ಗಾಃ ಪ್ರಜ್ವಲಿತಾ ಭೃಶಮ್ ।
ವ್ಯಕ್ತಂ ಪಶ್ಯಂತಿ ಶಸ್ತ್ರಾಣಿ ಸಂಗ್ರಾಮಂ ಸಮುಪಸ್ಥಿತಮ್ ॥೨೦॥

ಖಡ್ಗಗಳು ಜ್ವಾಲೆಯಿಂದ ಕೂಡಿದ್ದು ತಮ್ಮ ಒರೆಗಳಿಂದ ತಾವೇ ಹೊರಬರುತ್ತಿವೆ. ಈ ಶಸ್ತ್ರಗಳು ಸ್ಪಷ್ಟವಾಗಿ ಸನ್ನಿಹಿತವಾದ ಯುದ್ಧವನ್ನು ನೋಡುತ್ತಿವೆ.

ಅಗ್ನಿವರ್ಣಾ ಯಥಾ ಭಾಸಃ ಶಸ್ತ್ರಾಣಾಮುದಕಸ್ಯ ಚ ।
ಕವಚಾನಾಂ ಧ್ವಜಾನಾಂ ಚ ಭವಿಷ್ಯತಿ ಮಹಾನ್ ಕ್ಷಯಃ ॥೨೧॥

ಶಸ್ತ್ರಗಳು, ನೀರು, ಕವಚಗಳು ಮತ್ತು ಧ್ವಜಗಳು ಅಗ್ನಿವರ್ಣದಿಂದ ಕೂಡಿವೆ. ದೊಡ್ಡ ಕ್ಷಯವು ಉಂಟಾಗಲಿದೆ.

ದಿಕ್ಷು ಪ್ರಜ್ವಲಿತಾಸ್ಯಾಶ್ಚ ವ್ಯಾಹರಂತಿ ಮೃಗದ್ವಿಜಾಃ ।
ಆತ್ಮಾಹಿತಂ ದರ್ಶಯಂತೋ ವೇದಯಂತಿ ಮಹದ್ಭಯಮ್ ॥೨೨॥

ದಿಕ್ಕು ದಿಕ್ಕುಗಳಲ್ಲಿ ಮೃಗಗಳು ಮತ್ತು ಪಕ್ಷಿಗಳು ಜ್ವಾಲೆಯಿಂದ ಕೂಡಿದ ಮುಖವುಳ್ಳವುಗಳಾಗಿ ಕಿರುಚುತ್ತಿವೆ. ಅವು ಅತಿ ಘೋರವಾದ ಮಹಾಭಯವನ್ನು ಸೂಚಿಸುತ್ತಿವೆ.

ಏಕಪಕ್ಷಾಕ್ಷಿಚರಣಃ ಶಕುನಿಃ ಖಚರೋ ನಿಶಿ ।
ರೌದ್ರಂ ವದತಿ ಸಂರಬ್ಧಃ ಶೋಣಿತಂ ಧರ್ದಯನ್ ಮುಹುಃ ॥೨೩॥

ಒಂದು ರೆಕ್ಕೆ, ಒಂದು ಕಣ್ಣು ಮತ್ತು ಒಂದು ಪಾದವುಳ್ಳ ರಾತ್ರಿಯಲ್ಲಿ ಆಕಾಶದಲ್ಲಿ ಸಂಚರಿಸುವ ಪಕ್ಷಿಯು ಸಿಟ್ಟಿನಿಂದ ರಕ್ತವನ್ನು ಮತ್ತೆ ಮತ್ತೆ ಕಾರುತ್ತಾ ಭಯಂಕರವಾಗಿ ಕಿರುಚುತ್ತಿದೆ.

ಗ್ರಹೌ ತಾಮ್ರಾರುಣಶಿಖೌ ಪ್ರಜ್ವಲಂತಾವಿವ ಸ್ಥಿತೌ ।
ಸಪ್ತರ್ಷೀಣಾಮುದಾರಾಣಾಂ ಸಮವಚ್ಛಾದ್ಯ ವೈ ಪ್ರಭಾಮ್ ॥೨೪॥

ತಾಮ್ರಬಣ್ಣದ ಮತ್ತು ಅರುಣವರ್ಣದ ಶಿಖೆಗಳುಳ್ಳ ಗುರು-ಶನಿಗಳು ಉರಿಯುತ್ತಿರುವಂತೆ ಕಾಣುತ್ತಿವೆ. ಅವು ಉದಾರರಾದ ಸಪ್ತರ್ಷಿಗಳ ಪ್ರಭೆಯನ್ನು ಮುಚ್ಚಿವೆ.

ಸಂವತ್ಸರಸ್ಥಾಯಿನೌ ಚ ಗ್ರಹೌ ಪ್ರಜ್ವಲಿತಾವುಭೌ ।
ವಿಶಾಖಯೋಃ ಸಮೀಪಸ್ಥೌ ಬೃಹಸ್ಪತಿಶನೈಶ್ಚರೌ ॥೨೫॥

ಒಂದು ರಾಶಿಯಲ್ಲಿ ವರ್ಷದ ಕಾಲ ಇರುವ ಗುರು-ಶನಿಗ್ರಹಗಳು ಎರಡು ಜ್ವಾಲೆಗಳಿಂದ ಕೂಡಿದ್ದು, ವಿಶಾಖಾ ನಕ್ಷತ್ರದಲ್ಲಿ ಪರಸ್ಪರ ಸಮೀಪದಲ್ಲಿವೆ.

ಕೃತ್ತಿಕಾಸು ಗ್ರಹಸ್ತೀವ್ರೋ ನಕ್ಷತ್ರೇ ಪ್ರಥಮೇ ಜ್ವಲನ್ ।
ವಪೂಂಷ್ಯಪಹರನ್ ಭಾಸಾ ಧೂಮಕೇತುರಿವ ಸ್ಥಿತಃ ॥೨೬॥

ತೀವ್ರಗ್ರಹವಾದ ಕೇತುವು ಕೃತ್ತಿಕಾ ನಕ್ಷತ್ರಗಳ ಮೊದಲನೆಯ ನಕ್ಷತ್ರದಲ್ಲಿ ಜ್ವಲಿಸುತ್ತಾ, ತನ್ನ ಕಾಂತಿಯಿಂದ ಉಳಿದ ನಕ್ಷತ್ರಗಳ ಕಾಂತಿಯನ್ನು ಅಪಹರಿಸುತ್ತಾ ಧೂಮಕೇತುವಿನಂತಿದೆ.

ತ್ರಿಷು ಪೂರ್ವೇಷು ಸರ್ವೇಷು ನಕ್ಷತ್ರೇಷು ವಿಶಾಂಪತೇ ।
ಬುಧಃ ಸಂಪತತೇऽಭೀಕ್ಷ್ಣಂ ಜನಯನ್ ಸುಮಹದ್ಭಯಮ್ ॥೨೭॥

ಎಲೈ ರಾಜನೇ, ಬುಧನು ದೊಡ್ಡ ಭಯವನ್ನು ಉಂಟುಮಾಡುತ್ತಾ ಸತತವಾಗಿ ತಾನು ಇರುವ ನಕ್ಷತ್ರದಿಂದ ಹಿಂದಿನ ಮೂರು ನಕ್ಷತ್ರಗಳನ್ನು ವಕ್ರಗತಿಯಿಂದ ನೋಡುತ್ತಿದ್ದಾನೆ.

ಚತುರ್ದಶೀಂ ಪಂಚದಶೀಂ ಭೂತಪೂರ್ವಾಂ ಚ ಷೋಡಶೀಮ್ ।
ಇಮಾಂ ತು ನಾಭಿಜಾನೀಮಃ ಅಮಾವಾಸ್ಯಾಂ ತ್ರಯೋದಶೀಮ್ ॥

ಚಂದ್ರನು ಕಾಂತಿಹೀನನಾಗಿರುವುದರಿಂದ ಶುಕ್ಲಪಕ್ಷದ ಮತ್ತು ಕೃಷ್ಣಪಕ್ಷದ ಹದಿನಾಲ್ಕನೆಯ, ಹದಿನೈದನೆಯ, ಹದಿನಾರನೆಯ ಮತ್ತು ಹದಿಮೂರನೆಯ ದಿನಗಳಲ್ಲಿ ವ್ಯತ್ಯಾಸವೇ ತಿಳಿಯುತ್ತಿಲ್ಲ (ಲಕ್ಷಾಲಂಕಾರ).

ಹುಣ್ಣಿಮೆಯಿಂದ ಹದಿನಾಲ್ಕನೆಯ ದಿನ, ಹದಿನೈದನೆಯ ದಿನ ಅಥವಾ ಹದಿನಾರನೆಯ ದಿನ ಅಮಾವಾಸ್ಯೆಯು ಉಂಟಾಗಿರುವುದನ್ನು ನಾವು ಹಿಂದೆ ನೋಡಿದ್ದೇವೆ. ಆದರೆ ಈಗ ಹದಿಮೂರನೆಯ ದಿನದಲ್ಲಿ ಉಂಟಾಗುತ್ತಿರುವ ಅಮಾವಾಸ್ಯೆಯನ್ನು ನಾವು ಎಂದೂ ಕಂಡಿಲ್ಲ.

ಚಂದ್ರಸೂರ್ಯಾವುಭೌ ಗ್ರಸ್ತಾವೇಕಮಾಸೇ ತ್ರಯೋದಶೀಮ್ ।
ಅಪರ್ವಣಿ ಗ್ರಹಾವೇತೌ ಪ್ರಜಾಃ ಸಂಕ್ಷಪಯಿಷ್ಯತಃ ॥೨೯॥

ಪರ್ವಕಾಲವಲ್ಲದ ತ್ರಯೋದಶಿಯಂದು ಚಂದ್ರ-ಸೂರ್ಯರಿಬ್ಬರೂ ಒಂದೇ ತಿಂಗಳಿನಲ್ಲಿ ಗ್ರಹಣವನ್ನು ಹೊಂದಿ ಪ್ರಜೆಗಳ ನಾಶವನ್ನು ಮಾಡುವವರಾಗಿದ್ದಾರೆ.

ರಜೋವೃತಾ ದಿಶಃ ಸರ್ವಾಃ ಪಾಂಸುವರ್ಷೈಃ ಸಮಂತತಃ ।
ಉತ್ಪಾತಮೇಘಾ ರೌದ್ರಾಶ್ಚ ರಾತ್ರೌ ವರ್ಷಂತಿ ಶೋಣಿತಮ್ ॥೩೦॥

ಎಲ್ಲ ದಿಕ್ಕುಗಳೂ ಧೂಳಿನಿಂದ ತುಂಬಿವೆ. ಎಲ್ಲ ಕಡೆಗಳಲ್ಲಿಯೂ ಧೂಳಿನ ಮಳೆಗಳು ಬೀಳುತ್ತಿವೆ. ರಾತ್ರಿಯ ಕಾಲದಲ್ಲಿ ಅಪಶಕುನಗಳನ್ನು ಸೂಚಿಸುವ ಮೋಡಗಳು ರಕ್ತವನ್ನು ಮಳೆಗರೆಯುತ್ತಿವೆ.

ಮಾಂಸವರ್ಷಂ ಪುನಸ್ತೀವ್ರಮಾಸೀತ್ ಕೃಷ್ಣಚತುರ್ದಶೀಮ್ ।
ಅರ್ಧರಾತ್ರೇ ಮಹಾಘೋರಮತೃಪ್ಯಂಸ್ತತ್ರ ರಾಕ್ಷಸಾಃ ॥೩೧॥

ಕೃಷ್ಣಪಕ್ಷದ ಚತುರ್ದಶಿಯಂದು ಅರ್ಧರಾತ್ರಿಯ ಸಮಯದಲ್ಲಿ ಮಹಾಘೋರವಾದ ತೀವ್ರವಾದ ಮಾಂಸದ ಮಳೆ ಉಂಟಾಯಿತು. ಅದರಲ್ಲಿ ರಾಕ್ಷಸರೆಲ್ಲರೂ ತೃಪ್ತಿ ಹೊಂದಿದರು.

ಪ್ರತಿಸ್ರೋತೋಽವಹನ್ ನದ್ಯಃ ಸರಿತಃ ಶೋಣತೋದಕಾಃ ।
ಫೇನಾಯಮಾನಾಃ ಕೂಪಾಶ್ಚ ನರ್ದಂತಿ ವೃಷಭಾ ಇವ ।
ಪತಂತ್ಯುಲ್ಕಾಃ ಸನಿರ್ಘಾತಾಃ ಶುಷ್ಕಾಶನಿವಿಮಿಶ್ರಿತಾಃ ॥೩೨॥

ಸಣ್ಣ ಮತ್ತು ದೊಡ್ಡ ನದಿಗಳು ರಕ್ತವರ್ಣದ ನೀರಿನಿಂದ ಕೂಡಿದವುಗಳಾಗಿ ಪ್ರವಾಹಕ್ಕೆ ಅಭಿಮುಖವಾಗಿ ಹರಿಯುತ್ತಿವೆ. ಬಾವಿಗಳಲ್ಲಿ ನೊರೆಗಳು ಕಂಡುಬಂದು ಅವು ವೃಷಭಗಳಂತೆ ಗರ್ಜಿಸುತ್ತಿವೆ. ಶಬ್ದದೊಡನೆ ಉಲ್ಕಾಪಾತಗಳು ಉಂಟಾಗುತ್ತಿವೆ. ಅವು ಬರಸಿಡಿಲುಗಳ ಜೊತೆಯಲ್ಲಿ ಮಿಶ್ರಿತವಾಗಿವೆ.

ಅದ್ಯ ಚೈವ ನಿಶಾಂ ವ್ಯುಷ್ಟಾಮುದಯೇ ಭಾನುರಾಹತಃ ।
ಜ್ವಲಂತೀಭರ್ಮಹೋಲ್ಕಾಭಿಶ್ಚತುರ್ಭಿಃ ಸರ್ವತೋ ದಿಶಮ್ ॥೩೩॥

ಈ ದಿನವೇ ರಾತ್ರಿಯು ಕಳೆದು ಪ್ರಾತಃಕಾಲದಲ್ಲಿ ಸೂರ್ಯೋದಯವಾಗುವಾಗ ಸೂರ್ಯನ ಮೇಲೆ ನಾಲ್ಕು ದಿಕ್ಕುಗಳಲ್ಲಿಯೂ ಜ್ವಲಿಸುವ ಉಲ್ಕೆಗಳು ಬಿದ್ದವು.

ಅನ್ಯೋನ್ಯಮುಪತಿಷ್ಠದ್ಭಿಸ್ತತ್ರ ಚೋಕ್ತಂ ಮಹರ್ಷಿಭಿಃ ।
ಭೂಮಿಪಾಲಸಹಸ್ರಾಣಾಂ ಭೂಮಿಃ ಪಾಸ್ಯತಿ ಶೋಣಿತಮ್ ॥೩೪॥

ಪರಸ್ಪರವಾಗಿ ಸಮೀಪದಲ್ಲಿರುವ ವಾಲಖಿಲ್ಯಋಷಿಗಳು ಆ ಸಮಯದಲ್ಲಿ ಭೂಮಿಯು ಸಹಸ್ರಾರು ರಾಜರ ರಕ್ತವನ್ನು ಕುಡಿಯುವುದು ಎಂದು ಹೇಳಿದರು.

ಕೈಲಾಸಮಂದರಾಭ್ಯಾಂ ತು ತಥಾ ಹಿಮವತೋ ಗಿರೇಃ ।
ಸಹಸ್ರಶೋ ಮಹಾಶಬ್ದಂ ಶಿಖರಾಣಿ ಪತಂತಿ ಚ ॥೩೫॥

ಕೈಲಾಸ, ಮಂದರ ಮತ್ತು ಹಿಮಾಲಯ ಪರ್ವತಗಳಲ್ಲಿ ಸಹಸ್ರಾರು ಬಾರಿ ಮಹಾಶಬ್ದಗಳು ಕೇಳಿಬರುತ್ತಿವೆ ಮತ್ತು ಅವುಗಳ ಶಿಖರಗಳು ಉರುಳುತ್ತಿವೆ.

ಮಹಾಭೂತಾ ಭೂಮಿಕಂಪೇ ಚತುರಃ ಸಾಗರಾನ್ ಪೃಥಕ್ ।
ವೇಲಾಭೂರ್ಧಮಯಂತಿ ಸ್ಮ ಕ್ಷೋಭಯಂತಃ ಪುನಃ ಪುನಃ ॥೩೬॥

ಪಂಚಮಹಾಭೂತಗಳು ಮತ್ತೆ ಮತ್ತೆ ಭೂಕಂಪವನ್ನು ಉಂಟುಮಾಡಿ ನಾಲ್ಕು ಸಾಗರಗಳಲ್ಲೂ ಕ್ಷೋಭೆಯನ್ನು ಉಂಟುಮಾಡುತ್ತಾ, ನಾಲ್ಕು ಸಾಗರಗಳನ್ನೂ ಮತ್ತು ಸಾಗರಗಳ ವೇಲಾಭೂಮಿಯಾದ ತೀರಗಳನ್ನೂ ನಾಶಪಡಿಸುತ್ತಿವೆ.

ವೃಕ್ಷಾನುನ್ಮಥ್ಯ ವಾಂತ್ಯುಗ್ರಾ ವಾತಾಃ ಶರ್ಕರಕರ್ಷಿಣಃ ।
ಪತಂತಿ ಚೈತ್ಯವೃಕ್ಷಾಶ್ಚ ಗ್ರಾಮೇಷು ನಗರೇಷು ಚ ॥೩೭॥

ಉಗ್ರವಾದ ವಾಯುಗಳು ಮರಳಿನ ಕಣಗಳನ್ನು ತೆಗೆದುಕೊಂಡು ಬೀಸುತ್ತಾ, ಮರಗಳನ್ನು ಬೀಳಿಸುತ್ತಿವೆ. ಗ್ರಾಮಗಳಲ್ಲಿ ಮತ್ತು ನಗರಗಳಲ್ಲಿ ದೇವಾಲಯದ ವೃಕ್ಷಗಳು ಉರುಳುತ್ತಿವೆ.

ಪೀತಲೋಹಿತನೀಲಶ್ಚ ಜ್ವಲತ್ಯಗ್ನಿರ್ಹುತೋ ದ್ವಿಜೈಃ ।
ವಾಮಾರ್ಚಿಃ ಶಾವಗಂಧೀ ಚ ಧೂಮಪ್ರಾಯಃ ಖರಸ್ವನಃ ॥೩೮॥

ಬ್ರಾಹ್ಮಣರಿಂದ ಹೋಮ ಮಾಡಲ್ಪಟ್ಟ ಅಗ್ನಿಯು ಕಪ್ಪು, ಹಳದಿ ಮತ್ತು ಕೆಂಪು ಜ್ವಾಲೆಗಳಿಂದ ಕೂಡಿ, ಎಡಭಾಗದಲ್ಲಿ ಜ್ವಾಲೆಗಳನ್ನು ಹೊಂದಿ, ಶವಗಂಧವನ್ನು ಉಂಟುಮಾಡುತ್ತಾ, ಒರಟು ಶಬ್ದಗಳಿಂದ ಬಹಳ ಧೂಮವನ್ನು ಉಂಟುಮಾಡುತ್ತಿದೆ.

ಧೂಮಾಯಂತೇ ಧ್ವಜಾ ರಾಜ್ಞಾಂ ಕಂಪಮಾನಾ ಮುಹುರ್ಮುಹುಃ ।
ಮುಂಚಂತ್ಯಂಗಾರವರ್ಷಾಣಿ ಭೇರ್ಯೋಽಥ ಪಟಹಾಸ್ತಥಾ ॥೩೯॥

ರಾಜರ ರಥದ ಧ್ವಜಗಳು ಪುನಃ ಪುನಃ ನಡುಗುತ್ತಾ ಧೂಮವನ್ನು ಉಗುಳುತ್ತಿವೆ. ಭೇರಿಗಳು ಮತ್ತು ಪಟಹಗಳು ಕೆಂಡಗಳ ಮಳೆಯನ್ನು ಸುರಿಸುತ್ತಿವೆ.

ಪ್ರಾಸಾದಶಿಖರಾಗ್ರೇಷು ಪುರದ್ವಾರೇಷು ಚೈವ ಹಿ ।
ಗೃಧ್ರಾಃ ಪರಿಪತಂತ್ಯುಗ್ರಾಃ ವಾಮಂ ಮಂಡಲಮಾಶ್ರಿತಃ ॥೪೦॥

ಉಗ್ರವಾದ ಹದ್ದುಗಳು ಉಪ್ಪರಿಗೆಯ ಶಿಖರಗಳಲ್ಲಿಯೂ ಮತ್ತು ಕೋಟೆಯ ಬಾಗಿಲುಗಳಲ್ಲಿಯೂ ಅಪ್ರದಕ್ಷಿಣೆಯಾಗಿ ಸುತ್ತುತ್ತಾ ಮತ್ತೆ ಮತ್ತೆ ಕುಳಿತುಕೊಳ್ಳುತ್ತಿವೆ.

ಪಟಾಪಚ್ಛೇತಿ ಸುಭೃಶಂ ವಾವಾಶ್ಯಂತೇ ವಯಾಂಸಿ ಚ ।
ನಿಲೀಯಂತೇ ಧ್ವಜಾಗ್ರೇಷು ಕ್ಷಯಾಯ ಪೃಥಿವೀಕ್ಷಿತಾಮ್ ॥೪೧॥

ಎಲ್ಲ ಪಕ್ಷಿಗಳೂ ಮತ್ತೆ ಮತ್ತೆ ಅಪಶಬ್ದಗಳನ್ನು ಮಾಡುತ್ತಾ , ರಾಜರ ಕ್ಷಯವನ್ನು ಸೂಚಿಸುತ್ತಾ, ರಥಗಳ, ಧ್ವಜಗಳ ತುದಿಗಳಲ್ಲಿ ಅಡಗಿಕೊಳ್ಳುತ್ತಿವೆ.

ಧ್ಯಾಯಂತಃ ಪ್ರಕಿರಂತಶ್ಚ ಬಾಲಾನ್ ವೇಪಥುಸಂಯುತಾಃ ।
ರುದಂತಿ ದೀನಾಸ್ತುರಗಾ ಮಾತಂಗಾಶ್ಚ ಸಹಸ್ರಶಃ ॥೪೨॥

ಆನೆಗಳು ಮತ್ತು ಕುದುರೆಗಳು ಸಹಸ್ರ ಸಂಖ್ಯೆಯಲ್ಲಿ ಯೋಚನೆಯನ್ನು ಮಾಡುತ್ತಾ, ತಮ್ಮ ಬಾಲಗಳನ್ನು ಕೊಡವುತ್ತಾ, ಭಯದಿಂದ ನಡುಗುತ್ತಾ ದೈನ್ಯದಿಂದ ಅಳುತ್ತಿವೆ.

ವಿತಚ್ಯ್ರುತ್ವಾ ಭವಾನತ್ರ ಪ್ರಾಪ್ತಕಾಲಂ ವ್ಯವಸ್ಯತಾಮ್ ।
ಯಥಾ ಲೋಕಃ ಸಮುಚ್ಛೇದಂ ನಾಯಂ ಗಚ್ಛೇತ ಭಾರತ ॥೪೩॥

ಎಲೈ ಭಾರತನೇ, ಇವುಗಳನ್ನು ಕೇಳಿ ಈ ಲೋಕವು ನಾಶವಾಗದಂತೆ ಈ ಕಾಲದಲ್ಲಿ ಏನನ್ನು ಮಾಡಬಹುದೋ ಆದನ್ನು ನಿರ್ಧರಿಸು.

ವೈಶಂಪಾಯನಃ

ಪಿತುರ್ವಚೋ ನಿಶಮ್ಯೈತದ್ ಧೃತರಾಷ್ಟ್ರೋಽಬ್ರವೀದಿದಮ್ ।
ದಿಷ್ಟಮೇತತ್ ಪುರಾ ಮನ್ಯೇ ಭವಿಷ್ಯತಿ ನ ಸಂಶಯಃ ॥೪೪॥

ವೈಶಂಪಾಯನ– ತಂದೆಯ ಈ ಮಾತುಗಳನ್ನು ಕೇಳಿದ ಧೃತರಾಷ್ಟ್ರನು ಹೀಗೆ ಮಾತನಾಡಿದನು. ಇದು ಮೊದಲೇ ಕ್ಲಪ್ತವಾಗಿದೆ ಎಂದು ತಿಳಿಯುತ್ತೇನೆ. ಇದು ಹೀಗೆಯೇ ನಡೆಯುವುದರಲ್ಲಿ ಸಂಶಯವಿಲ್ಲ.

ಕ್ಷತ್ರಿಯಾಃ ಕ್ಷತ್ರಧರ್ಮೇಣ ವಧ್ಯಂತೇ ಯದಿ ಸಂಯುಗೇ ।
ವೀರಲೋಕಂ ಸಮಾಸಾದ್ಯ ಸುಖಂ ಪ್ರಾಪ್ಸ್ಯಂತಿ ಕೇವಲಮ್ ॥೪೫॥

ಕ್ಷತ್ರಿಯರು ಕ್ಷತ್ರಿಯ ಧರ್ಮದಂತೆ ಯುದ್ಧದಲ್ಲಿ ಮರಣವನ್ನು ಹೊಂದಿದರೆ ವೀರಲೋಕವನ್ನು ಹೊಂದಿ ಬಹಳ ಸುಖವನ್ನು ಪಡುತ್ತಾರೆ.

ಇಹ ಕೀರ್ತಿಂ ಪರೇ ಲೋಕೇ ದೀರ್ಘಕಾಲಂ ಮಹತ್ಸುಖಮ್ ।
ಪ್ರಾಪ್ನುಯಂತಿ ಪುರುಷವ್ಯಾಘ್ರಾಃ ಪ್ರಾಣಾಂಸ್ಯಕ್ತ್ವಾ ಮಹಾಹವೇ ॥೪೬॥

ಪುರುಷವ್ಯಾಘ್ರರಾದ ವೀರರು ದೊಡ್ಡ ಯುದ್ಧದಲ್ಲಿ ಪ್ರಾಣಗಳನ್ನು ತ್ಯಜಿಸಿ ಈ ಲೋಕದಲ್ಲಿ ಕೀರ್ತಿಯನ್ನೂ ಮತ್ತು ಪರಲೋಕದಲ್ಲಿ ದೀರ್ಘಕಾಲದವರೆಗೆ ದೊಡ್ಡ ಸುಖವನ್ನೂ ಪಡೆಯುವರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ತೃತೀಯೋಽಧ್ಯಾಯಃ ॥

॥ಇತಿ ಜಂಬೂಖಂಡನಿರ್ಮಾಣಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಾಲ್ಕನೆಯ ಅಧ್ಯಾಯ

ವ್ಯಾಸರಿಂದ ಜಯಶಾಲಿಗಳಾಗುವವರ ಲಕ್ಷಣಗಳ ಕಥನ.

ವೈಶಂಪಾಯನಃ

ಏವಮುಕ್ತೋ ಮುನಿಸ್ತತ್ತ್ವಂ ಕವೀಂದ್ರೋ ರಾಜಸತ್ತಮ ।
ಪುತ್ರೇಣ ಧೃತರಾಷ್ಟ್ರೇಣ ಧ್ಯಾನಮನ್ವಗಮತ್ ಪರಮ್ ॥೧॥

ವೈಶಂಪಾಯನ- ಎಲೈ ರಾಜಶ್ರೇಷ್ಠನೇ, ಪುತ್ರನಾದ ಧೃತರಾಷ್ಟ್ರನಿಂದ ಹೀಗೆ ತತ್ತ್ವವನ್ನು ಹೇಳಲ್ಪಟ್ಟ ಜ್ಞಾನಿಶ್ರೇಷ್ಠರೂ ಮತ್ತು ಋಷಿಗಳೂ ಆದ ವ್ಯಾಸರು ಧ್ಯಾನವನ್ನು ತಾಳಿದರು.

ಪುನರೇವಾಬ್ರವೀದ್ ವಾಕ್ಯಂ ಕಲ್ಪಾದೀ ಮಹಾತಪಾಃ ।
ಅಸಂಶಯಂ ಪಾರ್ಥಿವೇಂದ್ರ ಕಾಲಃ ಸಂಕ್ಷಿಪ್ಯತೇ ಜಗತ್ ॥೨॥

ಎಲ್ಲರ ಹಣೆಯ ಬರಹವನ್ನು ತಿಳಿದ ಮಹಾತಪಸ್ವಿಗಳಾದ ಅವರು ಪುನಃ ಧೃತರಾಷ್ಟ್ರನನ್ನು ಕುರಿತು ರಾಜೇಂದ್ರನೇ, ನಿಸ್ಸಂಶಯವಾಗಿ ಕಾಲವು ಜಗತ್ತನ್ನು ಸಂಹರಿಸುತ್ತದೆ ಎಂದು ಹೇಳಿದರು.

ಸೃಜತೇ ಚ ಪುನರ್ಲೋಕಾನ್ ನೇಹ ವಿದ್ಯತಿ ಶಾಶ್ವತಮ್ ।
ಜ್ಞಾತೀನಾಂ ಚ ಕುರೂಣಾಂ ಚ ಸಂಬಂಧಿಸುಹೃದಾಂ ತಥಾ ॥೩॥

ಧರ್ಮ್ಯಂ ದೇಶಯ ಪಂಥಾನಂ ಸಮರ್ಥೋ ಹ್ಯಸಿ ವಾರಣೇ ।
ಕ್ಷುದ್ರಂ ಜ್ಞಾತಿವಧಂ ಪ್ರಾಹುರ್ಮಾ ಕುರುಷ್ವ ಮಮಾಪ್ರಿಯಮ್ ॥೪॥

ಆ ಕಾಲವು ಪುನಃ ಸೃಷ್ಟಿಯನ್ನು ಮಾಡುತ್ತದೆ. ಈ ಪ್ರಪಂಚದಲ್ಲಿ ಯಾವುದೂ ಶಾಶ್ವತವಾಗಿ ಇರುವುದಿಲ್ಲ. ನೀನು ನಿನ್ನ ಬಂಧುಗಳೆಲ್ಲರಿಗೂ, ಸಂಬಂಧಿಗಳಿಗೂ, ವಿಶ್ವಾಸಪಾತ್ರರಿಗೂ ಮತ್ತು ಎಲ್ಲಾ ಕುರುಗಳಿಗೂ ಧರ್ಮದ ಮಾರ್ಗವನ್ನು ಉಪದೇಶಿಸುವವನಾಗು. ಅವರನ್ನು ಈ ಯುದ್ಧದಿಂದ ನಿವಾರಿಸಲು ನೀನು ಸಮರ್ಥನಾಗಿದ್ದೀಯೆ. ಬಂಧುಗಳ ವಧೆಯು ನೀಚವಾದುದೆಂದು ಹೇಳುತ್ತಾರೆ. ನನಗೆ ಅಪ್ರಿಯವನ್ನು ಮಾಡಬೇಡ.

ಕಾಲೋಽಯಂ ಪುತ್ರರೂಪೇಣ ತವ ಜಾತೋ ವಿಶಾಂಪತೇ ।
ನ ವಧಃ ಪೂಜ್ಯತೇ ವೇದೇ ಹಿತಂ ನೈತತ್ ಕಥಂಚನ ॥೫॥

ಎಲೈ ರಾಜನೇ, ಆ ಕಾಲವು ನಿನ್ನ ಪುತ್ರನ ರೂಪದಲ್ಲಿ ಜನಿಸಿದೆ. ವಧೆಯು ವೇದದಲ್ಲಿ ಪ್ರಶಂಸಿಸಲ್ಪಡುವುದಿಲ್ಲ ಮತ್ತು ಅದು ಹಿತವೂ ಅಲ್ಲ.

ಹನ್ಯಾತ್ ಸ ಏವ ಯೋ ಹನ್ಯಾತ್ ಕುಲಧರ್ಮಂ ಸ್ವಕಾಂ ತನುಮ್ ।
ಕಾಲೇನೋತ್ಪಥಗಂತಾಸಿ ಶಕ್ಯೇ ಸತಿ ಯಥಾಪಥಿ ॥೬॥

ಯಾವನು ತನ್ನ ಶರೀರದಂತಿರುವ ಕುಲಧರ್ಮವನ್ನು ವಧೆ ಮಾಡುತ್ತಾನೆಯೋ, ಅವನನ್ನು ಆ ಕುಲಧರ್ಮವೇ ವಧೆಯನ್ನು ಮಾಡುತ್ತದೆ. ಕ್ಷೇಮದ ಮಾರ್ಗವು ಇದ್ದರೂ ಸಹ ನೀನು ಮೃತ್ಯುವಿನಿಂದ ಪ್ರೇರಿತನಾಗಿ ದುರ್ಮಾರ್ಗದಲ್ಲಿ ನಡೆಯುವವನಾಗುವಿ.

ಕುಲಸ್ಯಾಸ್ಯ ವಿನಾಶಾಯ ತಥೈವ ಚ ಮಹೀಕ್ಷಿತಾಮ್ ।
ಅನರ್ಥೋ ರಾಜ್ಯರೂಪೇಣ ತ್ಯಜ್ಯತಾಮಸುಖಾವಹಃ ॥೭॥

ಈ ಕುಲದ ಮತ್ತು ಎಲ್ಲಾ ರಾಜರುಗಳ ವಿನಾಶಕ್ಕಾಗಿ ಉಂಟಾಗಿರುವ, ದುಃಖವನ್ನು ತಂದುಕೊಡುವ ಈ ರಾಜ್ಯರೂಪವಾದ ಅನರ್ಥವನ್ನು ಪರಿತ್ಯಾಗ ಮಾಡು.

ಲುಪ್ತಪ್ರಜ್ಞಃ ಪರೇಣಾಪಿ ಧರ್ಮಂ ದರ್ಶಯ ವೈ ಸುತಾನ್ ।
ಕಿಂ ತೇ ರಾಜ್ಯೇನ ದುರ್ಧರ್ಷ ಯೇನ ಪ್ರಾಪ್ತೋಽಸಿ ಕಿಲ್ಬಿಷಮ್ ॥೮॥

ಇನ್ನೊಬ್ಬರಿಗೆ ವಶನಾಗಿ ನೀನು ನಿನ್ನ ಪ್ರಜ್ಞೆಯನ್ನು ಕಳೆದುಕೊಂಡಿದ್ದೀಯೆ. ನಿನ್ನ ಪುತ್ರರಿಗೆ ಧರ್ಮದ ಮಾರ್ಗವನ್ನುತೋರಿಸು. ಎಲ್ಲೆ ಸೋಲಿಸಲು ಅಸಾಧ್ಯನಾದವನೇ, ನಿನಗೆ ಇಷ್ಟೊಂದು ದೋಷವನ್ನು ತಂದುಕೊಟ್ಟಿರುವ ರಾಜ್ಯದಿಂದ ನಿನಗೆ ವಿನಾಗಬೇಕಾಗಿದೆ?

ಯಶೋ ಧರ್ಮಂ ಚ ಕೀರ್ತಿಂ ಚ ಪಾಲಯನ್ ಸ್ವರ್ಗಮಾಪ್ಸ್ಯಸಿ ।
ಲಭಂತಾಂ ಪಾಂಡವಾ ರಾಜ್ಯಂ ಶಮಂ ಗಚ್ಛಂತು ಕೌರವಾಃ ॥೯॥

ಯಶಸ್ಸನ್ನೂ, ಧರ್ಮವನ್ನೂ ಮತ್ತು ಕೀರ್ತಿಯನ್ನು ರಕ್ಷಿಸಿಕೊಂಡು ನೀನು ಸ್ವರ್ಗವನ್ನು ಹೊಂದುವಿ. ಪಾಂಡವರಿಗೆ ರಾಜ್ಯವು ದೊರಕಲಿ, ಕೌರವರು ಸಂಧಿಯನ್ನು ಮಾಡಿಕೊಳ್ಳಲಿ.

ಏವಂ ಬ್ರುವತಿ ವಿಪ್ರೇಂದ್ರೇ ಧೃತರಾಷ್ಟ್ರೋಽಂಬಿಕಾಸುತಃ ।
ಆಕ್ಷಿಪ್ಯ ವಾಕ್ಯಂ ವಾಕ್ಯಜ್ಞೋ ವಾಕ್ಯಜ್ಞೇನಾಪ್ಯಯಾತ್ ಪುನಃ ॥೧೦॥

ಆ ಬ್ರಾಹ್ಮಣಶ್ರೇಷ್ಠರು ಹೀಗೆ ಮಾತನಾಡುತ್ತಿರಲು ಅಂಬಿಕಾಸುತನೂ, ಮಾತನಾಡಲು ತಿಳಿದವನೂ ಆದ ಧೃತರಾಷ್ಟ್ರನು ಅವರ ಮಾತನ್ನು ಆಕ್ಷೇಪಿಸಿ ತನ್ನ ವಾಕ್ಸರಣಿಯನ್ನು ಮುಂದುವರಿಸಿದನು.

ಯಥಾ ಭವಾನ್ ವೇದ ತಥಾಽಽ ವೇತ್ತಾ
ಭಾವಾಭಾವೌ ವಿದಿತೌ ಮೇ ಯಥಾವತ್ ।
ಸ್ವಾರ್ಥೇ ಹಿ ಸಮ್ಮುಹ್ಯತಿ ತಾತ ಲೋಕೋ
ಮಾಂ ಚಾಪಿ ಲೋಕಾತ್ಕಮೇವ ವಿದ್ಧಿ ॥೧೧॥

ಪೂಜ್ಯರೇ, ನೀವು ಹೇಗೆ ತಿಳಿದಿದ್ದೀರೋ ಹಾಗೆಯೇ ನಾನೂ ತಿಳಿದಿದ್ದೇನೆ. ನಾನು ಅಭ್ಯುದಯ ಮತ್ತು ಅವನತಿಗಳನ್ನು ಸರಿಯಾಗಿ ತಿಳಿದಿದ್ದೇನೆ. ಪ್ರೀತಿಪಾತ್ರರೇ, ಸ್ವಾರ್ಥದ ವಿಷಯವು ಬಂದಾಗ ಎಲ್ಲ ಜನರೂ ಮೋಹಕ್ಕೆ ಒಳಗಾಗುತ್ತಾರೆ. ನನ್ನನ್ನೂ ಸಹ ಅಂತಹ ಜನರಲ್ಲಿ ಸೇರಿದವನೆಂದು ತಿಳಿಯಿರಿ.

ಪ್ರಸಾದಯೇ ತ್ವಾಮತುಲಪ್ರಭಾವಂ
ತ್ವಂ ನೋ ಗತಿರ್ದರ್ಶಯಿತಾ ಚ ಧೀರಃ ।
ನ ಚಾಪಿ ತೇ ವಶಗಾ ಮೇ ಮಹರ್ಷೇ
ನಾತಿಗ್ರಹಂ ಕರ್ತುಮಿಹಾರ್ಹಸೇ ಮೇ ॥೧೨॥

ಅಪರಿಮಿತ ಸಾಮರ್ಥ್ಯವುಳ್ಳ ತಮ್ಮನ್ನು ಪ್ರಸನ್ನರಾಗಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಧೀರರಾದ ನೀವೇ ನಮಗೆ ಗತಿಯಾದವರು. ಮಹರ್ಷಿಗಳೇ, ನನ್ನ ಮಕ್ಕಳು ನಿಮ್ಮ ಮಾತುಗಳನ್ನೇ ಕೇಳಲಿಲ್ಲ. ಆದ್ದರಿಂದ ಈ ವಿಷಯದಲ್ಲಿ ನನ್ನನ್ನು ಬಹಳವಾಗಿ ಒತ್ತಾಯ ಪಡಿಸುವುದು ಬೇಡ.

ತ್ವಂ ಹಿ ಧರ್ಮಃ ಪವಿತ್ರಂ ಚ ಯಶಃ ಕೀರ್ತಿರ್ಧೃತಿಃ ಸ್ಮೃತಿಃ ।
ಕುರೂಣಾಂ ಪಾಂಡವಾನಾಂ ಚ ಮಾನ್ಯಶ್ಚಾಸಿ ಪಿತಾಮಹಃ ॥೧೩॥

ನೀವೇ ಧರ್ಮ, ಪವಿತ್ರರಾದವರು, ಯಶಸ್ಸು ಮತ್ತು ಕೀರ್ತಿಸಂಪನ್ನರಾದವರು, ಧೈರ್ಯ ಮತ್ತು ಸ್ಮೃತಿಗೆ ನಿಯಾಮಕರಾದವರು. ಪಿತಾಮಹರಾದ ನೀವು ಕುರುಗಳಿಗೂ ಮತ್ತು ಪಾಂಡವರಿಗೂ ಮಾನ್ಯರಾಗಿದ್ದೀರಿ.

ವ್ಯಾಸಃ

ವೈಚಿತ್ರವೀರ್ಯ ನೃಪತೇ ಯತ್ ತೇ ಮನಸಿ ವರ್ತತೇ ।
ಅಭಿಧತ್ಸ್ವ ಯಥಾಕಾಮಂ ಛೇತ್ತಾಸ್ಮಿ ತವ ಸಂಶಯಮ್ ॥೧೪॥

ವ್ಯಾಸರು– ವಿಚಿತ್ರವೀರ್ಯನ ಪುತ್ರನಾದ ಎಲೈ ರಾಜನೇ, ನಿನ್ನ ಮನಸ್ಸಿನಲ್ಲಿ ಏನಿದೆಯೋ ಅದನ್ನು ಸಂಕೋಚವಿಲ್ಲದೆ ಹೇಳು. ನಾನು ನಿನ್ನ ಮನಸ್ಸಿನ ಸಂಶಯಗಳನ್ನು ಪರಿಹರಿಸುವೆನು.

ಧೃತರಾಷ್ಟ್ರಃ

ಯಾನಿ ಲಿಂಗಾನಿ ಸಂಗ್ರಾಮೇ ಭವಂತಿ ವಿಜಯಿಷ್ಯತಾಮ್ ।
ತಾನಿ ಸರ್ವಾಣಿ ಭಗವನ್ ಶ್ರೋತುಮಿಚ್ಛಾಮಿ ತತ್ತ್ವತಃ ॥೧೫॥

ಧೃತರಾಷ್ಟ್ರ- ಪೂಜ್ಯರೇ, ಯುದ್ಧದಲ್ಲಿ ಜಯಗಳಿಸಲಿರುವವರ ಚಿಹ್ನೆಗಳು ಏನು ಇವೆಯೋ ಅವೆಲ್ಲವನ್ನೂ ನಾನು ಸರಿಯಾಗಿ ಕೇಳಲು ಬಯಸುತ್ತೇನೆ.

ವ್ಯಾಸಃ

ಪ್ರಸನ್ನಭಾಃ ಪಾವಕ ಊರ್ಧ್ವರಶ್ಮಿಃ
ಪ್ರದಕ್ಷಿಣಾವರ್ತಶಿಖೋ ವಿಧೂಮಃ ।
ಪುಣ್ಯಾ ಗಂಧಾಶ್ಚಾಹುತೀನಾಂ ಪ್ರವಾಂತಿ
ಜಯಸ್ಯೈತದ್ ಭಾವಿನೋ ರೂಪಮಾಹುಃ ॥೧೬॥

ವ್ಯಾಸರು- ಅಗ್ನಿಯು ಪರಿಶುದ್ಧವಾದ ಕಾಂತಿಯನ್ನು ಹೊಂದಿ ಊರ್ಧ್ವಮುಖವಾದ ಜ್ವಾಲೆಗಳನ್ನು ಹೊಂದಿರುತ್ತದೆ. ಧೂಮವಿಲ್ಲದೆ ಜ್ವಾಲೆಗಳು ಪ್ರದಕ್ಷಿಣಾಕಾರವಾಗಿ ಇರುತ್ತವೆ. ಆಹುತಿಗಳ ಪವಿತ್ರವಾದ ಗಂಧವು ಎಲ್ಲ ಕಡೆಯಲ್ಲಿಯೂ ಹರಡುತ್ತದೆ. ಇದು ಮುಂದೆ ಉಂಟಾಗಲಿರುವ ಜಯದ ಸೂಚನೆ ಎಂದು ಪ್ರಾಜ್ಞರು ಹೇಳುತ್ತಾರೆ.

ಗಂಭೀರಘೋಷಾಶ್ಚ ಮಹಾಸ್ವನಾಶ್ಚ
ಶಂಖಾ ಮೃದಂಗಾಶ್ಚ ನದಂತಿ ಯತ್ರ ।
ವಿಶುದ್ಧರಶ್ಮಿಪ್ರಭವಃ ಶಶೀ ಚ
ಜಯಸ್ಯೈತದ್ ಭಾವಿನೋ ರೂಪಮಾಹುಃ ॥೧೭॥

ಎಲ್ಲಿ ಶಂಖಗಳು ಮತ್ತು ಮೃದಂಗಗಳು ಗಂಭೀರವಾದ ಘೋಷವನ್ನು ಹೊಂದಿ ದೊಡ್ಡ ನಾದವನ್ನು ಉಂಟುಮಾಡುತ್ತವೆಯೋ ಮತ್ತು ಸೂರ್ಯ-ಚಂದ್ರರು ಪರಿಶುದ್ಧವಾದ ಕಿರಣವನ್ನು ಹೊಂದಿರುತ್ತಾರೆಯೋ ಅದನ್ನು ಮುಂದೆ ಉಂಟಾಗಲಿರುವ ಜಯದ ಸೂಚನೆ ಎಂದು ಹೇಳುತ್ತಾರೆ.

ಇಷ್ಟಾ ವಾಚಃ ಪೃಷ್ಠತೋ ವಾಯಸಾನಾಂ
ಸಂಪ್ರಸ್ಥಿತಾನಾಂ ಚ ಗಮಿಷ್ಯತಾಂ ಚ ।

ಯೇ ಪೃಷ್ಠತಸ್ತೇ ತ್ವರಯಂತಿ ರಾಜನ್
ಯೇ ತ್ವಗ್ರತಸ್ತೇ ಪ್ರತಿಷೇಧಯಂತಿ ॥೧೮॥

ಯುದ್ಧಕ್ಕೆ ಹೊರಡಲು ಸಿದ್ಧತೆಯನ್ನು ಮಾಡುವಾಗ ಮತ್ತು ಹೊರಟಾಗ ಹಿಂದುಗಡೆಯಿಂದ ಕೇಳಿ ಬರುವ ಸಂತೋಷದ ಇಷ್ಟವಾದ ಮಾತುಗಳು (ಒಳ್ಳೆಯ ಸೂಚನೆ). ಎಲೈ ರಾಜನೇ, ಹಿಂದಿನಿಂದ ಕೇಳಿ ಬರುವ ಮಾತುಗಳು ಜಯಕ್ಕಾಗಿ ತ್ವರೆಮಾಡುತ್ತವೆ. ಮುಂದುಗಡೆಯಿಂದ ಕೇಳಿ ಬರುವ ಮಾತುಗಳು ಜಯವನ್ನು ಪ್ರತಿಷೇಧ ಮಾಡುತ್ತವೆ.

ಕಲ್ಯಾಣವಾಚಃ ಶಕುನಾ ರಾಜಹಂಸಾಃ
ಶುಕಾಃ ಕ್ರೌಂಚಾಃ ಶತಪತ್ರಾಶ್ಚ ಯತ್ರ ।
ಪ್ರದಕ್ಷಿಣಾಶ್ಚೈವ ಭವಂತಿ ಸಂಖೇ
ಧ್ರುವಂ ಜಯಂ ತತ್ರ ವದಂತಿ ವಿಪ್ರಾಃ ॥೧೯॥

ಎಲ್ಲಿ ರಾಜಹಂಸಗಳು, ಗಿಳಿಗಳು, ಕ್ರೌಂಚಗಳು, ಶತಪತ್ರಗಳು ಮೊದಲಾದ ಪಕ್ಷಿಗಳು ಒಳ್ಳೆಯ ಮಾತುಗಳನ್ನು ಆಡುತ್ತಾ ಬಲಭಾಗದಲ್ಲಿ ಬರುತ್ತವೆಯೋ ಅಲ್ಲಿ ಯುದ್ಧದಲ್ಲಿ ಜಯವು ನಿಶ್ಚಿತವೆಂದು ಬ್ರಾಹ್ಮಣರು ಹೇಳುತ್ತಾರೆ.

ಅಲಂಕಾರೈಃ ಕವಚೈಃ ಕೇತುಭಿಶ್ಚ
ಮುಖಪ್ರಸಾದೈರ್ಹೇಮವರ್ಣೈಶ್ಚ ನೃಣಾಮ್ ।
ಭ್ರಾಜಿಷ್ಣತೀ ದುಷ್ಪ್ರತಿಪ್ರೇಕ್ಷಣೀಯಾ
ಯೇಷಾಂ ಚಮೂಸ್ತೇ ವಿಜಯಂತಿ ಶತ್ರೂನ್ ॥೨೦॥

ಯಾರ ಸೈನ್ಯವು ಅಲಂಕಾರಗಳಿಂದಲೂ, ಕವಚಗಳಿಂದಲೂ, ಧ್ವಜಗಳಿಂದಲೂ, ವೀರರ ಮುಖದ ಪ್ರಸನ್ನತೆಯಿಂದಲೂ ಮತ್ತು ಹೇಮವರ್ಣಗಳಿಂದಲೂ ಹೊಳೆಯುತ್ತಾ (ಶತ್ರುಗಳಿಗೆ) ನೋಡಲು ಅಸಾಧ್ಯವಾಗುತ್ತದೆಯೋ ಅಂತಹವರು ಶತ್ರುಗಳನ್ನು ಗೆಲ್ಲುತ್ತಾರೆ.

ಹೃಷ್ಟಾ ವಾಚಸ್ತಥಾ ಸತ್ತ್ವಂ ಯೋಧಾನಾಂ ಚೈವ ಭಾರತ ।
ನ ಮ್ಲಾಯಂತೇ ಸ್ರಜಶ್ಚೈವ ತೇ ತರಂತಿ ರಣೇ ರಿಪೂನ್ ॥೨೧॥

ಎಲೈ ಭಾರತನೇ, ಎಲ್ಲಿ ಯೋಧರು ಸಂತೋಷದಿಂದ ಮಾತನಾಡುತ್ತಾರೆಯೋ, ಅವರ ಧೈರ್ಯವು ಕುಂದುವುದಿಲ್ಲವೋ ಮತ್ತು ಹೂಮಾಲೆಗಳು ಬಾಡುವುದಿಲ್ಲವೋ ಅಂತಹವರು ಯುದ್ಧದಲ್ಲಿ ಶತ್ರುಗಳನ್ನು ಗೆಲ್ಲುತ್ತಾರೆ.

ಇಷ್ಟೋ ವಾತಃ ಪ್ರವಿಷ್ಟಸ್ಯ ದಕ್ಷಿಣೇ ಪ್ರವಿವಿಕ್ಷತಃ ।
ಪಶ್ಚಾತ್ ಸಂಪಾಧಯತ್ಯರ್ಥಂ ಪುರಸ್ತಾತ್ ಪ್ರತಿಷೇಧತೇ ॥೨೨॥

ಯುದ್ಧಭೂಮಿಯನ್ನು ಪ್ರವೇಶಿಸುವಾಗ ಬಲಭಾಗದಲ್ಲಿ, ಪ್ರವೇಶವನ್ನು ಮಾಡಿದ ಮೇಲೆ ಹಿಂಭಾಗದಿಂದ ಎಲ್ಲಿ ಅನುಕೂಲವಾದ ಗಾಳಿಯು ಬೀಸುತ್ತದೆಯೋ ಅಲ್ಲಿ ಹಿಂದಿನಿಂದ ಬೀಸುವ ಗಾಳಿಯು ಅರ್ಥಸಿದ್ಧಿಯನ್ನು ಉಂಟುಮಾಡಿಕೊಡುತ್ತದೆ. ಎದುರಾಗಿ ಗಾಳಿಯು ಬೀಸಿದರೆ ಅರ್ಥಸಿದ್ಧಿಯನ್ನು ಪ್ರತಿಷೇಧ ಮಾಡುತ್ತದೆ.

ಶಬ್ದರೂಪರಸಸ್ಪರ್ಶಗಂಧಾಶ್ಚಾವಿಷ್ಕೃತಾಃ ಶುಭಾಃ ।
ಸದಾ ಯೋಧಾಶ್ಚ ಹೃಷ್ಟಾಶ್ಚ ಯೇಷಾಂ ತೇಷಾಂ ಧ್ರುವಂ ಜಯಃ ॥೨೩॥

ಎಲ್ಲಿ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳು ಶುಭವಾಗಿರುತ್ತವೆಯೋ ಮತ್ತು ಯೋಧರು ಸಂತೋಷದಿಂದ ಇರುತ್ತಾರೆಯೋ ಅಲ್ಲಿ ಜಯವು ನಿಶ್ಚಿತವಾದುದು.

ಅನ್ವೇವ ವಾಯವೋ ವಾಂತಿ ತಥಾಭ್ರಾಣಿ ವಯಾಂಸಿ ಚ ।
ಅನುಪ್ಲವಂತೇ ಮೇಘಾಶ್ಚ ತಥೈವೇಂದ್ರಧನೂಂಷಿ ಚ ॥೨೪॥

ವಾಯುವು, ಬಿಳಿಯ ಮೋಡಗಳು ಮತ್ತು ಪಕ್ಷಿಗಳು ಹಿಂದಿನಿಂದಲೇ ಬೀಸುತ್ತವೆ ಮತ್ತು ಹಿಂಬಾಲಿಸುತ್ತವೆ. ಕಪ್ಪು ಮೋಡಗಳೂ ಮತ್ತು ಕಾಮನಬಿಲ್ಲೂ ಸಹ ಹಿಂದಿನಿಂದಲೇ ಹಿಂಬಾಲಿಸುತ್ತವೆ (ಅಂತಹ ಕಡೆಯಲ್ಲಿ ಜಯವು ನಿಶ್ಚಿತವಾದುದು).

ಏತಾನಿ ಜಯಮಾನಾನಾಂ ಲಕ್ಷಣಾನಿ ವಿಶಾಂಪತೇ ।
ಭವಂತಿ ವಿಪರೀತಾನಿ ಮುಮುರ್ಷೂಣಾಂ ಜನಾಧಿಪ ॥೨೫॥

ಅಲ್ಪಾಯಾಂ ವಾ ಮಹತ್ಯಾಂ ವಾ ಸೇನಾಯಾಮಿತಿ ನಿಶ್ಚಿತಮ್ ।
ಹರ್ಷೋ ಯೋಧಗಣಸ್ಯೈಕಂ ಜಯಲಕ್ಷಣಮುಚ್ಯತೇ ॥೨೬॥

ಎಲೈ ರಾಜನೇ, ಇವು ಜಯವನ್ನು ಹೊಂದಲಿರುವವರ ಲಕ್ಷಣಗಳು. ಎಲೈ ಜನಾಧಿಪನೇ, ಮರಣವನ್ನು ಹೊಂದುವವರಾದರೆ ಇದಕ್ಕೆ ವಿರುದ್ಧವಾದ ಲಕ್ಷಣವಿರುತ್ತವೆ. ಅಲ್ಪವಾಗಲೀ ಅಥವಾ ದೊಡ್ಡದಾಗಲೀ ಸೈನ್ಯದಲ್ಲಿ ಯೋಧರ ಸಮೂಹದ ಹರ್ಷವು ಮುಖ್ಯವಾಗಿ ಜಯಕ್ಕೆ ಕಾರಣವಾಗುತ್ತದೆ.

ಏಕೋ ದೀರ್ಣೋ ದಾರಯತಿ ಸೇನಾಂ ಸುಮಹತೀಮಪಿ ।
ತಂ ದೀರ್ಣಮನುದೀರ್ಯಂತೇ ಯೋಧಾಃ ಶೂರತಮಾ ಅಪಿ ॥೨೭॥

ಎಷ್ಟೇ ದೊಡ್ಡ ಸೈನ್ಯವಾದರೂ ಒಬ್ಬ ವೀರನು ಸೋತರೆ ಸಮಗ್ರ ಸೈನ್ಯವನ್ನೇ ಒಡೆಯುತ್ತಾನೆ. ಹಾಗೆಯೇ ದೀರ್ಣನಾದ ಆ ವೀರನನ್ನು ಅನುಸರಿಸಿ ಉಳಿದ ಶೂರರಾದ ಯೋಧರೂ ಸಹ ಬಿರಿದುಹೋಗುತ್ತಾರೆ.

ದುರ್ನಿವಾರತಮಾ ಚೈವ ಪ್ರಭಗ್ನಾ ಮಹತೀ ಚಮೂಃ ।
ಅಪಾಮಿವ ಮಹಾವೇಗಸ್ತ್ರಸ್ತಾ ಮೃಗಗಣಾ ಇವ ॥೨೮॥

ನೈವ ಶಕ್ಯಾ ಸಮಾಧಾತುಂ ಸನ್ನಿಪಾತೇ ಮಹಾಚಮೂಃ ।

ಹೀಗೆ ಒಡೆದುಹೋದ ದೊಡ್ಡ ಸೈನ್ಯವನ್ನು ಕಟ್ಟಿ ಒಡೆದು ಹರಿಯುವ ನೀರಿನಂತೆ ಅಥವಾ ಹೆದರಿದ ಜಿಂಕೆಗಳ ಸಮೂಹದಂತೆ ಒಂದು ಕಡೆ ಒಟ್ಟುಗೂಡಿಸಿ ಸಮಾಧಾನಪಡಿಸಲು ಸಾಧ್ಯವಾಗುವುದಿಲ್ಲ.

ದೀರ್ಣಾ ಇತ್ಯೇವ ದೀರ್ಯಂತೇ ಯೋಧಾಃ ಶೂರತಮಾ ಅಪಿ ।
ಭೀತಾನ್ ಭಗ್ನಾಂಶ್ಚ ಸಂಪ್ರೇಕ್ಷ್ಯ ಭಯಂ ಭೂಯೋ ವಿವರ್ಧತೇ ॥೨೯॥

ಎಲ್ಲವೂ ಒಡೆದುಹೋಗಿದೆ ಎಂದು ತಿಳಿದು ಶೂರರಾದ ಯೋಧರೂ ಸಹ ಬಿರಿದು ಹೋಗುತ್ತಾರೆ. ಭೀತರಾದವರನ್ನು ಮತ್ತು ಭಗ್ನರಾದವರನ್ನು ನೋಡಿ ಭಯವು ಇನ್ನೂ ಹೆಚ್ಚಾಗುತ್ತದೆ.

ಪ್ರಭಗ್ನಾ ಸಹಸಾ ರಾಜನ್ ದಿಶೋ ವಿಭ್ರಾಮಿತಾ ಪರೈಃ ।
ನೈವ ಸ್ಥಾಪಯಿತುಂ ಶಕ್ಯಾ ಶೂರೈರಪಿ ಮಹಾಚಮೂಃ ॥೩೦॥

ಎಲೈ ರಾಜನೇ, ಹೀಗೆ ಒಡೆದುಹೋಗಿ ಶತ್ರುಗಳಿಂದ ದಿಕ್ಕು ದಿಕ್ಕಿಗೆ ಚದುರಿಸಲ್ಪಟ್ಟ ದೊಡ್ಡ ಸೈನ್ಯವನ್ನು ಶೂರರೂ ಸಹ ನಿಲ್ಲಿಸಲು ಸಾಧ್ಯವಾಗುವುದಿಲ್ಲ.

ಸಂಭೃತ್ಯ ಮಹತೀಂ ಸೇನಾಂ ಚತುರಂಗಾಂ ಮಹೀಪತಿಃ ।
ಉಪಾಯಪೂರ್ವಂ ಮೇಧಾವೀ ಯತೇತ ಸತತೋತ್ಥಿತಃ ॥೩೧॥

ರಾಜನಾದವನು ದೊಡ್ಡದಾದ ಚದುರಂಗ ಸೈನ್ಯವನ್ನು ಮೊದಲು ಕಲೆಹಾಕಿ ಮೇಧಾವಿಯಾಗಿ ಸತತ ಪ್ರಯತ್ನಶೀಲನಾಗಿ ಉಪಾಯದಿಂದಲೇ ಜಯಕ್ಕಾಗಿ ಪ್ರಯತ್ನ ಪಡಬೇಕು.

ಉಪಾಯವಿಜಯಂ ಶ್ರೇಷ್ಠಮಾಹುರ್ಭೇದೇನ ಮಧ್ಯಮಮ್ ।
ಜಘನ್ಯ ಏಷ ವಿಜಯೋ ಯೋ ಯುದ್ಧೇನ ವಿಶಾಂಪತೇ ।
ಮಹಾದೋಷಃ ಸನ್ನಿಪಾತಸ್ತತೋ ವ್ಯಂಗಃ ಸ ಉಚ್ಯತೇ ॥೩೨॥

ಉಪಾಯದಿಂದ ಸಂಪಾದಿಸಿದ ವಿಜಯವು ಶ್ರೇಷ್ಠವೆಂದು ಹೇಳುತ್ತಾರೆ. ಭೇದೋಪಾಯದಿಂದ ಸಂಪಾದಿಸಿದ ವಿಜಯವು ಮಧ್ಯಮವಾದುದು. ಎಲೈ ರಾಜನೇ, ಯುದ್ಧ ಮಾಡಿ ಸಂಪಾದಿಸಿದ ವಿಜಯವು ಅಧಮವಾದುದು. ಎಲೈ ರಾಜನೇ, ಪರಸ್ಪರ ಸಂಘರ್ಷವು ಮಹಾದೋಷದಿಂದ ಕೂಡಿರುತ್ತದೆ. ಆದ್ದರಿಂದ ಅದನ್ನು ವಿಕಲಾಂಗವೆಂದು ಹೇಳುತ್ತಾರೆ.

ಪರಸ್ಪರಜ್ಞಾಃ ಸಂಹೃಷ್ಟಾ ವ್ಯವಧೂತಾಃ ಸುನಿಶ್ಚಿತಾಃ ।
ಪಂಚಾಶದಪಿ ಯೇ ಶೂರಾ ಮಥ್ನಂತಿ ಮಹತೀಂ ಚಮೂಮ್ ।
ಅಥವಾ ಪಂಚ ಷಟ್ ಸಪ್ತ ವಿಜಯಂತ್ಯನಿವರ್ತಿನಃ ॥೩೩॥

ಪರಸ್ಪರವಾಗಿ ತಿಳುವಳಿಕೆಯುಳ್ಳ, ಸಂತೋಷಗೊಂಡ, ಸ್ಥಿರರಾದ, ಒಳ್ಳೆಯ ನಿಶ್ಚಯವನ್ನು ಹೊಂದಿದ ಐವತ್ತು ಜನ ಶೂರರೂ ಸಹ ದೊಡ್ಡ ಸೈನ್ಯವನ್ನು ಕಲಕಾಡುತ್ತಾರೆ. ಅಥವಾ ಹಿಂದಿರುಗದ ಐದಾರು, ಏಳು ಜನ ವೀರರೇ ವಿಜಯವನ್ನು ಸಂಪಾದಿಸುತ್ತಾರೆ.

ಪರಸ್ಪರೇಣಾಸಂಹೃಷ್ಟಾ ಶೂರೈರಪಿ ಮಹಾಚಮೂ ।
ನೈವ ಸ್ಥಾಪಯಿತುಂ ಶಕ್ಯಾ ಪ್ರಭಗ್ನಾ ಭಯವಿಹ್ವಲಾ ॥೩೪॥

ಪರಸ್ಪರವಾಗಿ ಸಂತೋಷವನ್ನು ಹೊಂದದಿದ್ದರೆ ಭಗ್ನಗೊಂಡು ಭಯಗ್ರಸ್ತವಾದ ದೊಡ್ಡ ಸೈನ್ಯವನ್ನು ಶೂರರೂ ಸಹ ನಿಲ್ಲಿಸಲಾರರು.

ನ ವೈನತೇಯೋ ಗರುಡಃ ಪ್ರಶಂಸತಿ ಮಹಾಜನಮ್ ।
ದೃಷ್ಟ್ವಾ ಸುಪರ್ಣೋऽಪಚಿತಿಂ ಮಹತೀಮಪಿ ಭಾರತ ॥೩೫॥★

ಎಲೈ ಭಾರತನೇ, ವಿನತಾಸುತನಾದ ಗರುಡನು ಸೈನ್ಯದ ದೊಡ್ಡ ಸಂಖ್ಯೆಯನ್ನು ಪ್ರಶಂಸಿಸುವುದಿಲ್ಲ. ಏಕೆಂದರೆ ಅವನು ದೊಡ್ಡ ಸೈನ್ಯವಾದರೂ ಅದರ ಕ್ಷಯವನ್ನು ನೋಡಿದ್ದಾನೆ.

ನ ಬಾಹುಲ್ಯೇನ ಸೇನಾಯಾ ಜಯೋ ಭವತಿ ಭಾರತ ।
ಅಧ್ರುವೋ ಹಿ ಜಯೋ ನಾಮ ದೈವಂ ಚಾತ್ರ ಪರಾಯಣಮ್ ।
ಜಯಂತೋ ಹ್ಯಪಿ ಸಂಗ್ರಾಮೇ ಕ್ಷಯವಂತೋ ಭವಂತ್ಯುತ ॥೩೬॥

ಎಲೈ ಭಾರತನೇ, ಸೇನೆಯು ದೊಡ್ಡದಾಗಿದೆ ಎಂಬ ಕಾರಣದಿಂದ ಜಯ ಉಂಟಾಗುವುದೆಂಬ ನಿಶ್ಚಯವಿಲ್ಲ. ಜಯವು ಅನಿಶ್ಚಿತವಾದುದು. ಈ ವಿಷಯದಲ್ಲಿ ದೈವವೇ ಮುಖ್ಯಕಾರಣವಾದುದು. ಯುದ್ಧದಲ್ಲಿ ಜಯಶೀಲರಾದವರೂ ಸಹ ಬಹಳ ನಷ್ಟಗಳನ್ನು ಅನುಭವಿಸುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಚತುರ್ಥೋऽಧ್ಯಾಯಃ ॥

॥ ಇತಿ ಜಂಬೂಖಂಡನಿರ್ಮಾಣಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐದನೆಯ ಅಧ್ಯಾಯ

ವ್ಯಾಸರ ಪ್ರಯಾಣ. ಸಂಜಯನಿಂದ ಭೂಮಿಯ ಗುಣಗಳ ವರ್ಣನೆ.

ವೈಶಂಪಾಯನಃ

ಏವಮುಕ್ತ್ವಾ ಯಯೌ ವ್ಯಾಸೋ ಧೃತರಾಷ್ಟ್ರಾಯ ಧೀಮತೇ ।
ಧೃತರಾಷ್ಟ್ರೋಽಪಿ ತಚ್ಛ್ರುತ್ವಾ ಧ್ಯಾನಮೇವಾನ್ವಪದ್ಯತ ॥೧॥

ವೈಶಂಪಾಯನ– ವ್ಯಾಸರು ಮೇಧಾವಿಯಾದ ಧೃತರಾಷ್ಟ್ರನಿಗೆ ಹೀಗೆ ಹೇಳಿ ಹೊರಟು ಹೋದರು. ಧೃತರಾಷ್ಟ್ರನಾದರೂ ಅದನ್ನು ಕೇಳಿ ಧ್ಯಾನ ಪರವಶನಾದನು.

ಸ ಮುಹೂರ್ತಮಿವ ಧ್ಯಾತ್ವಾ ವಿನಿಃಶ್ವಸ್ಯ ಮುಹುರ್ಮುಹುಃ ।
ಸಂಜಯಂ ಸಂಪಿತಾತ್ಮಾನಮಪೃಚ್ಛದ್ ಭರತರ್ಷಭ ॥೨॥

ಎಲೈ ಭರತರ್ಷಭನೇ, ಅವನು ಒಂದು ಮುಹೂರ್ತದ ಕಾಲ ಧ್ಯಾನ ಪರವಶನಾಗಿದ್ದು, ಆನಂತರ ಮತ್ತೆ ಮತ್ತೆ ನಿಟ್ಟುಸಿರನ್ನು ಬಿಡುತ್ತಾ ಸೂಕ್ಷ್ಮವಾದ ಬುದ್ಧಿಯುಳ್ಳ ಸಂಜಯನನ್ನು ಕುರಿತು ಪ್ರಶ್ನೆಯನ್ನು ಮಾಡಿದನು.

ಸಂಜಯೇಮೇ ಮಹೀಪಾಲಾಃ ಶೂರಾ ಯುದ್ಧಾಭಿನಂದಿನಃ ।
ಅನ್ಯೋನ್ಯಮಭಿನಿಘ್ನಂತಿ ಶಸ್ತ್ರೈರುಚ್ಚಾವಚೈರಪಿ ॥೩॥

ಎಲೈ ಸಂಜಯನೇ, ಈ ರಾಜರು ಶೂರರು ಮತ್ತು ಯುದ್ಧವನ್ನು ಅಭಿನಂದಿಸುತ್ತಿರುವವರು. ಶ್ರೇಷ್ಠವಾದ ಮತ್ತು ಕನಿಷ್ಠವಾದ ಶಸ್ತ್ರಗಳಿಂದ ಪರಸ್ಪರವಾಗಿ ಕೊಲ್ಲುತ್ತಾರೆ.

ಪಾರ್ಥಿವಾಃ ಪೃಥಿವೀಹೇತೋಃ ಸಮಭಿತ್ಯಕ್ತಜೀವಿತಾಃ ।
ನ ಚ ಶಾಮ್ಯಂತಿ ನಿಘ್ನಂತೋ ವರ್ಧಯಂತೋ ಯಮಕ್ಷಯಮ್ ॥೪॥

ರಾಜರು ಭೂಮಿಯ ಒಡೆತನದ ಸಲುವಾಗಿ ತಮ್ಮ ಜೀವಿತವನ್ನು ತ್ಯಾಗ ಮಾಡಲು ಸಿದ್ಧರಾಗಿದ್ದಾರೆ. ಪರಸ್ಪರವಾಗಿ ಹೊಡೆದಾಡುತ್ತಾ ಸಂಧಿಯನ್ನು ಮಾಡಿಕೊಳ್ಳದೆ ಅವರು ಯಮಪುರದ ಜನಸಂಖ್ಯೆಯನ್ನು ಹೆಚ್ಚಿಸುತ್ತಾರೆ.

ಭೌಮಮೈಶ್ವರ್ಯಮಿಚ್ಛಂತೋ ನ ಮೃಷ್ಯಂತೇ ಪರಸ್ಪರಮ್ ।
ಮನ್ಯೇ ಬಹುಗುಣಾ ಭೂಮಿಸ್ತನ್ಮಾಚಕ್ಷ್ವ ಸಂಜಯ ॥೫॥

ಭೂಮಿಯ ಮೇಲೆ ದೊರೆಯುವ ಐಶ್ವರ್ಯವನ್ನು ಬಯಸುತ್ತಾ ಅವರು ಪರಸ್ಪರವಾಗಿ ಸಹಿಸುತ್ತಿಲ್ಲ. ಎಲೈ ಸಂಜಯನೇ, ಭೂಮಿಯು ಬಹಳ ಗುಣವುಳ್ಳದ್ದೆಂದು ತಿಳಿದಿದ್ದೇನೆ. ಅದನ್ನು ನನಗೆ ಹೇಳು.

ಬಹೂನಿ ಚ ಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ಕೋಟ್ಯಶ್ಚ ಲೋಕವೀರಾಣಾಂ ಸಮೇತಾಃ ಕುರುಜಾಂಗಲೇ ॥೬॥

ಈ ಕುರುಜಾಂಗರದಲ್ಲಿ ಅನೇಕ ಸಹಸ್ರ, ಲಕ್ಷ, ದಶಲಕ್ಷ, ಅರ್ಬುದ ಮತ್ತು ಕೋಟಿಗಳ ಸಂಖ್ಯೆಯಲ್ಲಿ ಲೋಕವೀರರು ಸಮಾವೇಶಗೊಂಡಿದ್ದಾರೆ.

ದೇಶಾನಾಂ ಚ ಪರೀಮಾಣಂ ನಗರಾಣಾಂ ಚ ಸಂಜಯ ।
ಶ್ರೋತುಮಿಚ್ಛಾಮಿ ತತ್ತ್ವೇನ ಯತ ಏತೇ ಸಮಾಗತಾಃ ॥೭॥

ಎಲೈ ಸಂಜಯನೇ, ಈ ವೀರರು ಯಾವ ದೇಶದಿಂದ ಮತ್ತು ನಗರಗಳಿಂದ ಬಂದಿದ್ದಾರೆಯೋ ಆ ದೇಶಗಳ ಮತ್ತು ನಗರಗಳ ಪರಿಮಾಣವನ್ನು ನಾನು ಕೇಳಲು ಬಯಸುತ್ತೇನೆ.

ದಿವ್ಯಬುದ್ಧಿಪ್ರದೀಪೇನ ಯುಕ್ತಸ್ತ್ವಂ ಜ್ಞಾನಚಕ್ಷುಷಾ ।
ಪ್ರಸಾದಾತ್ ತಸ್ಯ ವಿಪ್ರರ್ಷೇರ್ವ್ಯಾಸಸ್ಯಾಮಿತತೇಜಸಃ ॥೮॥

ಅಮಿತ ತೇಜಸ್ವಿಗಳಾದ, ವಿಪ್ರರ್ಷಿಗಳಾದ ವೇದವ್ಯಾಸರ ಅನುಗ್ರಹದಿಂದ ನೀನು ಜ್ಞಾನಚಕ್ಷುಸ್ಸಿನಿಂದ ದಿವ್ಯವಾದ ಬುದ್ಧಿಯನ್ನು ಹೊಂದಿದ್ದೀಯೆ.

ಸಂಜಯಃ

ಯಥಾಪ್ರಜ್ಞಂ ಮಹಾಪ್ರಾಜ್ಞ ಭೌಮಾನ್ ವಕ್ಷ್ಯಾಮಿ ತೇ ಗುಣಾನ್ ।
ಶಾಸ್ತ್ರಚಕ್ಷುರವೇಕ್ಷಸ್ವ ನಮಸ್ತೇ ಭರತರ್ಷಭ ॥೯॥

ಸಂಜಯ– ಎಲೈ ಮಹಾಪ್ರಾಜ್ಞನೇ, ನಾನು ನನಗೆ ತಿಳಿದಷ್ಟು ಭೂಮಿಯ ಗುಣಗಳನ್ನು ಹೇಳುವೆನು. ಎಲೈ ಭರತರ್ಷಭನೇ, ನಿನಗೆ ನಮಸ್ಕಾರ. ಶಾಸ್ತ್ರದೃಷ್ಟಿಯಿಂದ ತಿಳಿಯುವವನಾಗು.

ದ್ವಿವಿಧಾನೀಹ ಭೂತಾನಿ ತ್ರಸಾನಿ ಸ್ಥಾವರಾಣಿ ಚ ।
ತ್ರಸಾನಾಂ ತ್ರಿವಿಧಾ ಯೋನಿರಂಡಸ್ವೇದಜರಾಯುಜಾಃ ॥೧೦॥

ಇಲ್ಲಿ ಪ್ರಾಣಿಗಳು ಜಂಗಮ ಮತ್ತು ಸ್ಥಾವರ ಎಂಬ ಎರಡು ಬಗೆಗಳಾಗಿವೆ. ಜಂಗಮ ಎಂದರೆ ಚಲಿಸುವ ಪ್ರಾಣಿಗಳಲ್ಲಿ ಅಂಡಜ, ಸ್ವೇದಜ ಮತ್ತು ಜರಾಯುಜ (ಮೊಟ್ಟೆಯಿಂದ ಹುಟ್ಟಬಂದವು, ಶಾಖದಿಂದಲೇ ಹುಟ್ಟಬಂದವು ಮತ್ತು ಗರ್ಭಕೋಶದಲ್ಲಿ ಹುಟ್ಟಬಂದವು) ಎಂದು ಮೂರುವಿಧ.

ತ್ರಸಾನಾಂ ಖಲು ಸರ್ವೇಷಾಂ ಶ್ರೇಷ್ಠಾ ರಾಜನ್ ಜರಾಯುಜಾಃ ।
ಜರಾಯುಜಾನಾಂ ಪ್ರವರಾ ಮಾನವಾಃ ಪಶವಶ್ಚ ಯೇ ॥೧೧॥

ಎಲೈ ರಾಜನೇ, ಎಲ್ಲಾ ಜಂಗಮ ಪ್ರಾಣಿಗಳಲ್ಲಿ ಜರಾಯುಜಗಳು ಶ್ರೇಷ್ಠವಾದವುಗಳು. ಆ ಜರಾಯುಜಗಳಲ್ಲಿಯೂ ಮನುಷ್ಯರು ಮತ್ತು ಪಶುಗಳು ಶ್ರೇಷ್ಠರಾದವರು.

ನಾನಾರೂಪಾಣಿ ಬಿಭ್ರಾಣಾಸ್ತೇಷಾಂ ಭೇದಾಶ್ಚತುರ್ದಶ ।
ಅರಣ್ಯವಾಸಿನಃ ಸಪ್ತ ಸಪ್ತೈಷಾಂ ಗ್ರಾಮವಾಸಿನಃ ॥೧೨॥

ಜರಾಯುಜಗಳು ನಾನಾ ವಿಧವಾದ ರೂಪಗಳನ್ನು ಹೊಂದಿ ಹದಿನಾಲ್ಕು ಬಗೆಯಾಗಿವೆ. ಅವುಗಳಲ್ಲಿ ಅರಣ್ಯದಲ್ಲಿ ವಾಸಿಸುವವು ಏಳು ಬಗೆ ಮತ್ತು ಗ್ರಾಮದಲ್ಲಿ ವಾಸಿಸುವವು ಏಳು ಬಗೆಯಾಗಿವೆ.

ಸಿಂಹವ್ಯಾಘ್ರವರಾಹಾಶ್ಚ ಮಹಿಷಾ ವಾರಣಾಸ್ತಥಾ ।
ಋಕ್ಷಾಶ್ಚ ವಾನರಾಶ್ಚೈವ ಸಪ್ತಾರಣ್ಯಾಃ ಶ್ರುತಾ ನೃಪ ॥೧೩॥

ಸಿಂಹ, ಹುಲಿ, ಹಂದಿ, ಕಾಡೆಮ್ಮೆ, ಆನೆ, ಕರಡಿ ಮತ್ತು ಕಪಿ - ಈ ಏಳು ವಿಧಗಳು ಅರಣ್ಯವಾಸಿಗಳೆಂದು ಕರೆಯಲ್ಪಡುತ್ತವೆ.

ಗೌರಜೋ ಮನುಜೋ ಮೇಷೋ ವಾಜ್ಯಶ್ವತರಗರ್ದಭಾಃ ।
ಏತೇ ಗ್ರಾಮ್ಯಾಃ ಸಮಾಖ್ಯಾತಾಃ ಪಶವಃ ಸಪ್ತ ಸಾಧುಭಿಃ ॥೧೪॥

ಗೋವು, ಆಡು, ಮನುಷ್ಯ , ಕುರಿ, ಕುದುರೆ, ಹೇಸರಗತ್ತೆ ಮತ್ತು ಕತ್ತೆ ಇವುಗಳು ಗ್ರಾಮದಲ್ಲಿ ವಾಸಿಸುವ ಪಶುಗಳೆಂದು ಸಜ್ಜನರು ಎಣಿಸುತ್ತಾರೆ.

ಏತೇ ವೈ ಪಶವೋ ರಾಜನ್ ಗ್ರಾಮ್ಯಾರಣ್ಯಾಶ್ಚತುರ್ದಶ ।
ವೇದೋಕ್ತಾಃ ಪೃಥಿವೀಪಾಲ ಯೇಷು ಯಜ್ಞಾಃ ಪ್ರತಿಷ್ಠಿತಾಃ ॥೧೫॥

ಎಲೈ ರಾಜನೇ, ಈ ಹದಿನಾಲ್ಕು ಬಗೆಯ ಪಶುಗಳು ವೇದೋಕ್ತವಾಗಿವೆ. ಇವುಗಳಲ್ಲಿ ಯಜ್ಞಗಳು ಪ್ರತಿಷ್ಠಿತವಾಗಿವೆ.

ಗ್ರಾಮ್ಯಾಣಾಂ ಪುರುಷಃ ಶ್ರೇಷ್ಠಃ ಸಿಂಹಶ್ಚಾರಣ್ಯವಾಸಿನಾಮ್ ।
ಸರ್ವೇಷಾಮೇವ ಭೂತಾನಾಮನ್ಯೋನ್ಯೇನಾಭಜೀವನಮ್ ॥೧೬॥

ಗ್ರಾಮ್ಯ ಪ್ರಾಣಿಗಳಲ್ಲಿ ಮನುಷ್ಯನು ಶ್ರೇಷ್ಠನಾದವನು. ಅರಣ್ಯವಾಸಿ ಪ್ರಾಣಿಗಳಲ್ಲಿ ಸಿಂಹವು ಶ್ರೇಷ್ಠವಾದುದು. ಎಲ್ಲ ಪ್ರಾಣಿಗಳಿಗೂ ಒಂದರಿಂದ ಒಂದಕ್ಕೆ ಉಪಜೀವನವಾಗುತ್ತದೆ (ಒಂದು ಪ್ರಾಣಿಯ ದೇಹವು ಇನ್ನೊಂದು ಪ್ರಾಣಿಯ ದೇಹಧಾರಣೆಗೆ ಬೇಕಾದ ಆಹಾರವಾಗುತ್ತದೆ).

ಉದ್ಭಿಜಾಃ ಸ್ಥಾವರಾಃ ಪ್ರೋಕ್ತಾಸ್ತೇಷಾಂ ಪಂಚೈವ ಜಾತಯಃ ।
ವೃಕ್ಷಗುಲ್ಮಲತಾವಲ್ಲ್ಯಸ್ತ್ವ್ಕ್ಸಾರಾಸ್ತೃಣಜಾತಯಃ ॥೧೭॥

ಉದ್ಭಿಜಗಳು ಎಂದರೆ ಭೂಮಿಯನ್ನು ಒಡೆದುಕೊಂಡು ಮೇಲೆ ಬರುವ ಜೀವರನ್ನು ಸ್ಥಾವರಗಳು ಎಂದು ಹೇಳುತ್ತಾರೆ. ಅವುಗಳಲ್ಲಿ ಐದೇ ಜಾತಿ ಇದೆ. ಮರಗಳು, ಪೊದೆಗಳು, ಲತಾಸಮೂಹಗಳು, ತೊಗಟೆಯಲ್ಲೇ ಸಾರವುಳ್ಳ ಬಿದಿರು ಮುಂತಾದವುಗಳು ಮತ್ತು ತೃಣಜಾತಿಗೆ ಸೇರಿದವು ಎಂದು ಐದು ವಿಧ.

ಏಷಾಂ ಏಂಶತಿರೇಕೋನಾ ಮಹಾಭೂತೇಷು ಪಂಚಸು ।
ಚತುರ್ವಿಂಶತಿರುದ್ದಿಷ್ಟಾ ಗಾಯತ್ರೀ ಲೋಕಸಮ್ಮತಾ ॥೧೮॥

ಈ ಹದಿನಾಲ್ಕು ಮತ್ತು ಐದು ಜಾತಿಗಳನ್ನು ಸೇರಿಸಿದರೆ ಹತ್ತೊಂಬತ್ತು ಆಗುತ್ತದೆ. ಅದಕ್ಕೆ ಪಂಚಮಹಾಭೂತಗಳನ್ನು ಸೇರಿಸಿದರೆ ಇಪ್ಪತ್ತನಾಲ್ಕು ಆಗುತ್ತದೆ. ಇಪ್ಪತ್ತನಾಲ್ಕು ಅಕ್ಷರಗಳ ಗಾಯತ್ರಿಯ ಸ್ಮರಣೆಯು ಹೇಗೆ ಪುಣ್ಯದಾಯಕವೋ ಹಾಗೆಯೇ

ಪಂಚಮಹಾಭೂತಗಳ ಮತ್ತು ಸ್ಥಾವರ-ಜಂಗಮಗಳ ಇಪ್ಪತ್ತನಾಲ್ಕರ ಗಣಗಳನ್ನು ಸ್ಮರಿಸಿದರೂ ಪುಣ್ಯ ಉಂಟಾಗುತ್ತದೆ.

ಯ ಏತಾಂ ವೇದ ಗಾಯತ್ರೀಂ ಪುಣ್ಯಾಂ ಸರ್ವಗುಣಾನ್ವಿತಾಮ್ ।
ತತ್ತ್ವೇನ ಭರತಶ್ರೇಷ್ಠ ಸ ಲೋಕಾನ್ನ ಪ್ರಣಶ್ಯತಿ ॥೧೯॥

ಎಲೈ ಭರತಶ್ರೇಷ್ಠನೇ, ಯಾವನು ಪವಿತ್ರವಾದ ಸರ್ವಗುಣಗಳಿಂದ ಕೂಡಿದ ಈ ಗಾಯತ್ರಿಯನ್ನು ಸರಿಯಾಗಿ ತಿಳಿಯುತ್ತಾನೆಯೋ ಅವನಿಗೆ ಲೋಕಗಳು ನಾಶವನ್ನು ಹೊಂದುವುದಿಲ್ಲ.

ಭೂಮೌ ಹಿ ಜಾಯತೇ ಸರ್ವಂ ಭೂಮೌ ಸರ್ವಂ ಪ್ರಣಶ್ಯತಿ ।
ಭೂಮಿಃ ಪ್ರತಿಷ್ಠಾ ಭೂತಾನಾಂ ಭೂಮಿರೇವ ಪರಾಯಣಮ್ ॥೨೦॥

ಎಲ್ಲವೂ ಭೂಮಿಯಲ್ಲಿ ಜನಿಸುತ್ತವೆ. ಭೂಮಿಯಲ್ಲಿಯೇ ನಾಶವನ್ನು ಹೊಂದುತ್ತವೆ. ಎಲ್ಲ ಭೂತಗಳಿಗೂ ಭೂಮಿಯೇ ಆಧಾರ ಮತ್ತು ಶ್ರೇಷ್ಠವಾದ ಆಶ್ರಯವೂ ಆಗಿದೆ.

ಯಸ್ಯ ಭೂಮಿಸ್ತಸ್ಯ ಸರ್ವಂ ಜಗತ್ತ್ಥಾವರಜಂಗಮಮ್ ।
ತಸ್ಮಾದ್ಭಗ್ಧಾ ರಾಜಾನೋ ವಿನಿಘ್ನಂತೀತರೇತರಮ್ ॥೨೧॥

ಯಾವನು ಭೂಮಿಗೆ ಒಡೆಯನಾಗುತ್ತಾನೆಯೋ ಅವನು ಅಲ್ಲಿರುವ ಸ್ಥಾವರ-ಜಂಗಮಗಳೆಲ್ಲಕ್ಕೂ ಒಡೆಯನಾಗುತ್ತಾನೆ. ರಾಜರು ಅಂತಹ ಭೂಮಿಯಲ್ಲಿ ಆಸೆಯನ್ನು ಮಾಡುವವರಾಗಿ ಪರಸ್ಪರವಾಗಿ ಕೊಲ್ಲುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಪಂಚಮೋಽಧ್ಯಾಯಃ ॥

॥ಇತಿ ಜಂಬೂಖಂಡನಿರ್ಮಾಣಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಆರನೆಯ ಅಧ್ಯಾಯ

ಸಂಜಯನಿಂದ ಧೃತರಾಷ್ಟ್ರನನ್ನು ಕುರಿತು ಸಂಕ್ಷೇಪವಾಗಿ
ಭೂಮಿಯ ಗುಣವರ್ಣನೆ.

ಧೃತರಾಷ್ಟ್ರಃ

ನದೀನಾಂ ಪರ್ವತಾನಾಂ ಚ ನಾಮಧೇಯಾನಿ ಸಂಜಯ ।
ತಥಾ ಜನಪದಾನಾಂ ಚ ಯೇ ಚಾನ್ಯೇ ಭೂಮಿಮಾಶ್ರಿತಾಃ ॥೧॥

ಪ್ರಮಾಣಂ ಚ ಪ್ರಮಾಣಜ್ಞ ಪೃಥಿವ್ಯಾ ಅಪಿ ಸರ್ವಶಃ ।
ನಿಖಿಲೇನ ಸಮಾಚಕ್ಷ್ವ ಕಾನನಾನಿ ಚ ಸಂಜಯ ॥೨॥

ಧೃತರಾಷ್ಟ್ರ– ಎಲೈ ಸಂಜಯನೇ, ನದಿಗಳು, ಪರ್ವತಗಳು, ದೇಶಗಳು ಮತ್ತು ಭೂಮಿಯನ್ನು ಆಶ್ರಯಿಸಿರುವ ಇತರ ಶ್ರೇಷ್ಠವಾದ ಪದಾರ್ಥಗಳು, ಇವುಗಳ ನಾಮಧೇಯವನ್ನು (ಹೇಳುವವನಾಗು). ಎಲೈ ಎಲ್ಲದರ ಪ್ರಮಾಣಗಳನ್ನು ತಿಳಿದ ಸಂಜಯನೇ, ಪೃಥಿವಿಯ ಎಲ್ಲಾ ಪ್ರಮಾಣಗಳನ್ನೂ ಮತ್ತು ಪೃಥಿವಿಯಲ್ಲಿರುವ ಕಾನನಗಳನ್ನೂ ಸಮಗ್ರವಾಗಿ ತಿಳಿಸು.

ಸಂಜಯಃ

ಪಂಚೇಮಾನಿ ಮಹಾರಾಜ ಮಹಾಭೂತಾನಿ ಸಂಗ್ರಹಾತ್ ।
ಜಗತ್ಸ್ಥಿತಾನಿ ಸರ್ವಾಣಿ ಸಮಾನ್ಯಾಹುರ್ಮನೀಷಿಣಃ ॥೩॥

ಸಂಜಯ– ಎಲೈ ಮಹಾರಾಜನೇ, ಸಂಕ್ಷೇಪವಾಗಿ ಈ ಮಹಾಭೂತಗಳು ಐದು. ಜಗತ್ತಿನಲ್ಲಿರುವ ಇವೆಲ್ಲವೂ ಸಮವಾಗಿರುವುವೆಂದು ಜ್ಞಾನಿಗಳು ಹೇಳುತ್ತಾರೆ. ಭೂಮಿ, ಜಲ, ವಾಯು, ಅಗ್ನಿ ಮತ್ತು ಆಕಾಶ, ಇವುಗಳಲ್ಲಿ ಒಂದಕ್ಕಿಂತ ಇನ್ನೊಂದು ಹೆಚ್ಚಿನ ಗುಣವುಳ್ಳವುಗಳು. ಅವುಗಳಲ್ಲೂ ಗುಣಗಳ ದೃಷ್ಟಿಯಿಂದ ಭೂಮಿಯು ಎಲ್ಲದಕ್ಕಿಂತಲೂ ಪ್ರಧಾನವಾದುದು.

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗಂಧಶ್ಚ ಪಂಚಮಃ ।
ಭೂಮೇರೇತೇ ಗುಣಾಃ ಪ್ರೋಕ್ತಾ ಋಷಿಭಿಸ್ತತ್ತ್ವದರ್ಶಿಭಿಃ ॥೪॥

ತತ್ತ್ವಜ್ಞಾನಿಗಳಾದ ಋಷಿಗಳು ಶಬ್ದ, ಸ್ಪರ್ಶ, ರೂಪ, ರಸ ಮತ್ತು ಐದನೆಯದಾದ ಗಂಧವನ್ನು ಭೂಮಿಯ ಗುಣಗಳೆಂದು ಹೇಳುತ್ತಾರೆ.

ಚತ್ವಾರೋऽಪ್ಸು ಗುಣಾ ರಾಜನ್ ಗಂಧಸ್ತತ್ರ ನ ವಿದ್ಯತೇ ।
ಶಬ್ದಃ ಸ್ಪರ್ಶಶ್ಚ ವಾಯೋಸ್ತು ಆಕಾಶೇ ಶಬ್ದ ಏವ ಚ ॥೬॥

ಎಲೈ ರಾಜನೇ, ಜಲದ ಗುಣಗಳು ನಾಲ್ಕು, ಅಲ್ಲಿ ಗಂಧವಿಲ್ಲ. ತೇಜಸ್ಸಿನ ಗುಣಗಳು ಶಬ್ದ, ಸ್ಪರ್ಶ, ರೂಪ ಎಂದು ಮೂರು. ವಾಯುವಿನ ಗುಣಗಳು ಶಬ್ದ ಮತ್ತು ಸ್ಪರ್ಶ. ಮತ್ತು ಆಕಾಶದ ಗುಣವು ಶಬ್ದ ಒಂದೇ.

ಏತೇ ಪಂಚ ಗುಣಾ ರಾಜನ್ ಮಹಾಭೂತೇಷು ಪಂಚಸು ।
ವರ್ತಂತೇ ಸರ್ವಲೋಕೇಷು ಯೇಷು ಲೋಕಾಃ ಪ್ರತಿಷ್ಠಿತಾಃ ॥೭॥

ಎಲೈ ರಾಜನೇ, ಈ ಐದು ಗುಣಗಳು ಪಂಚಮಹಾಭೂತಗಳಲ್ಲಿ ಎಲ್ಲ ಲೋಕಗಳಲ್ಲಿಯೂ ಇರುತ್ತವೆ. ಅಂತಹ ಲೋಕಗಳಲ್ಲಿ ಎಲ್ಲ ಪ್ರಾಣಿಗಳು ಪ್ರತಿಷ್ಠಿತವಾಗಿವೆ.

ಅನ್ಯೋನ್ಯಂ ನಾಭಿವರ್ತಂತೇ ಸಾಮ್ಯಂ ಭವತಿ ವೈ ಯದಾ ।
ಯದಾ ತು ವಿಷಮೀಭಾವಮಾವಿಶಂತಿ ಪರಸ್ಪರಮ್ ।
ತದಾ ದೇಹೈರ್ದೇಹವಂತೋ ವ್ಯತಿರೋಹಂತಿ ನಾನ್ಯಥಾ ॥೮॥

ಸಾಮ್ಯಾವಸ್ಥೆ ಇರುವಾಗ ಈ ಪಂಚಮಹಾಭೂತಗಳು ಒಂದನ್ನೊಂದು ಮೀರುವುದಿಲ್ಲ. ಯಾವಾಗ ಇವುಗಳಲ್ಲಿ ಪರಸ್ಪರವಾಗಿ ವೈಷಮ್ಯ ಉಂಟಾಗುತ್ತದೆಯೋ ಆಗ ದೇಹಿಗಳು ದೇಹವಿಯೋಗವನ್ನು ಹೊಂದುತ್ತಾರೆ, ಇಲ್ಲದಿದ್ದರೆ ಇಲ್ಲ.

ಆನುಪೂರ್ವ್ಯಾದ್ ವಿನಶ್ಯಂತಿ ಜಾಯಂತೇ ಚಾನುಪೂರ್ವಶಃ ।
ಸರ್ವಾಣ್ಯಪರಿಮೇಯಾನಿ ತದೇಷಾಂ ರೂಪಮೈಶ್ವರಮ್ ॥೯॥

ಈ ಪಂಚಮಹಾಭೂತಗಳು ಕ್ರಮವಾಗಿ ಉತ್ಪನ್ನವಾಗುತ್ತವೆ ಮತ್ತು ವ್ಯತ್ಕ್ರಮದಿಂದ (ಅದಕ್ಕೆ ವಿರುದ್ಧವಾದ ಕ್ರಮದಿಂದ) ನಾಶವನ್ನು ಹೊಂದುತ್ತವೆ. ಎಲ್ಲವೂ ಅಪರಿಮೇಯಗಳು. ಅವುಗಳ ಈ ಸ್ವಭಾವವು ಈಶ್ವರಾಧೀನವಾದುದು.

ತತ್ರ ತತ್ರ ಹಿ ದೃಶ್ಯಂತೇ ಧಾತವಃ ಪಾಂಚಭೌತಿಕಾಃ ।
ತೇಷಾಂ ಮನುಷ್ಯಾಸ್ತರ್ಕೇಣ ಪ್ರಮಾಣಾನಿ ಪ್ರಚಕ್ಷತೇ ॥೧೦॥

ಅಲ್ಲಲ್ಲಿ ಪಂಚಭೂತಗಳಿಂದ ಉಂಟಾದ ಧಾತುಗಳು ಕಂಡುಬರುತ್ತವೆ. ಅವುಗಳಿಗೆ ಮನುಷ್ಯರು ತಮ್ಮ ಊಹೆಯಿಂದ ಪ್ರಮಾಣಗಳನ್ನು ಹೇಳುತ್ತಾರೆ.

ಅಚಿಂತ್ಯಾಃ ಖಲು ಯೇ ಭಾವಾ ನ ತಾಂಸ್ತರ್ಕೇಣ ಸಾಧಯೇತ್ ।
ಪ್ರಕೃತಿಭ್ಯಃ ಪರಂ ಯತ್ ತು ತದಚಿಂತ್ಯಸ್ಯ ಲಕ್ಷಣಮ್ ॥೧೧॥

ಯಾವ ಪದಾರ್ಥಗಳು ಅಚಿಂತ್ಯವಾಗಿವೆಯೋ ಅವುಗಳನ್ನು ತರ್ಕದಿಂದ ಸಾಧಿಸಬಾರದು. ಪ್ರಕೃತಿಗಿಂತ ಶ್ರೇಷ್ಠವಾದ ವಸ್ತುವು ಯಾವುದು ಇದೆಯೋ ಅದು ಅಚಿಂತ್ಯವಾದುದು. ಆ ಅಚಿಂತ್ಯವಾದ ವಸ್ತುವೇ ನಾರಾಯಣ.

ಸುದರ್ಶನಂ ಪ್ರವಕ್ಷ್ಯಾಮಿ ದ್ವೀಪಂ ತೇ ಕುರುನಂದನ ।
ಪರಿಮಂಡಲೋ ಮಹಾರಾಜ ದ್ವೀಪೋಽಸೌ ಚಕ್ರಸಂಸ್ಥಿತಃ ॥೧೨॥

ಎಲೈ ಕುರುನಂದನನೇ, ನಾನು ನಿನಗೆ ಸುದರ್ಶನ ದ್ವೀಪವನ್ನು ವರ್ಣಿಸುವೆನು. ಎಲೈ ಮಹಾರಾಜನೇ, ಈ ದ್ವೀಪವು ವರ್ತುಲಾಕಾರವಾಗಿದ್ದು ಸುದರ್ಶನ ಚಕ್ರದ ಸನ್ನಿಧಾನಕ್ಕೆ ಪಾತ್ರವಾಗಿದೆ.

ನದೀಜಲಪ್ರತಿಚ್ಛನ್ನಃ ಪರ್ವತೈಶ್ಚಾಭ್ರಸನ್ನಿಭೈಃ ।
ಪುರೈಶ್ಚ ವಿವಿಧಾಕಾರೈ ರಮ್ಯೈರ್ಜನಪದೈಸ್ತಥಾ ॥೧೩॥

ಇದು ನದೀಜಲಗಳಿಂದಲೂ, ಮುಗಿಲೆತ್ತರದ ಪರ್ವತಗಳಿಂದಲೂ, ವಿವಿಧಾಕಾರದ ಪಟ್ಟಣಗಳಿಂದಲೂ ಮತ್ತು ಮನೋಹರವಾದ ದೇಶಗಳಿಂದಲೂ ತುಂಬಿ ಹೋಗಿದೆ.

ವೃಕ್ಷೈಃ ಪುಷ್ಪಫಲೋಪೇತೈಃ ಸಂಪನ್ನಧನಧಾನ್ಯವಾನ್ ।
ಲಾವಣೇನ ಸಮುದ್ರೇಣ ಸಮಂತಾತ್ ಪರಿವಾರಿತಃ ॥೧೪॥

ಪುಷ್ಪ-ಫಲಭರಿತವಾದ ವೃಕ್ಷಗಳಿಂದ ತುಂಬಿದೆ. ಸಮೃದ್ಧವಾದ ಧನ-ಧಾನ್ಯಗಳಿಂದ ಕೂಡಿದೆ. ಲವಣ ಸಮುದ್ರದಿಂದ ಎಲ್ಲಕಡೆಯಲ್ಲಿಯೂ ಸುತ್ತುವರಿಯಲ್ಪಟ್ಟಿದೆ.

ಯಥಾ ಚ ಪುರುಷಃ ಪಶ್ಯೇದಾದರ್ಶೇ ಮುಖಮಾತ್ಮನಃ ।
ಏವಂ ಸುದರ್ಶನದ್ವೀಪೋ ದೃಶ್ಯತೇ ಚಂದ್ರಮಂಡಲೇ ॥೧೫॥

ಹೇಗೆ ಕನ್ನಡಿಯಲ್ಲಿ ಮನುಷ್ಯನ ಮುಖದ ಪ್ರತಿಬಿಂಬವು ಕಾಣುವುದೋ, ಹಾಗೆ ಚಂದ್ರಮಂಡಲದಲ್ಲಿ ಈ ಸುದರ್ಶನ ದ್ವೀಪದ ಪ್ರತಿಬಿಂಬವು ಕಾಣುತ್ತದೆ.

ದ್ವಿರಂಶಃ ಪಿಪ್ಪಲಸ್ತತ್ರ ದ್ವಿರಂಶಶ್ಚ ಶಶೋ ಮಹಾನ್ ।
ಸರ್ವೌಷಧಿಸಮಾವಾಪ್ತೈಃ ಸರ್ವತಃ ಪರಿಬೃಂಹಿತಃ ।
ಆಪಸ್ತತೋಽನ್ಯಾ ವಿಜ್ಞೇಯಾ ಏಷ ಸಂಕ್ಷೇಪ ಉಚ್ಯತೇ ॥೧೬॥

ಇದರಲ್ಲಿ ಎರಡು ಅಂಶ ಪಿಪ್ಪಲ ವೃಕ್ಷವೂ, ಎರಡು ಅಂಶಗಳಲ್ಲಿ ದೊಡ್ಡ ಮೊಲವೂ ಕಂಡು ಬರುತ್ತದೆ. ಎಲ್ಲ ವಿಧವಾದ ಓಷಧಿಗಳ ಸಸ್ಯಗಳಿಂದ ಎಲ್ಲ ಕಡೆಯಲ್ಲಿಯೂ ತುಂಬಿ ಹೋಗಿದೆ. ಜಲವು ಇದಕ್ಕಿಂತ ಭಿನ್ನವಾದ ತತ್ತ್ವ. ಇದು ಸುದರ್ಶನ ದ್ವೀಪದ ಸಂಕ್ಷೇಪ ವರ್ಣನೆಯಾಗಿದೆ.

॥ ॥ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಷಷ್ಠೋಽಧ್ಯಾಯಃ ॥

॥ ಇತಿ ಜಂಬೂಖಂಡನಿರ್ಮಾಣಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಏಳನೆಯ ಅಧ್ಯಾಯ

ಸಂಜಯನಿಂದ ಮೇರು ಪರ್ವತದ, ಭಾರತಾದಿ ವರ್ಷಗಳ
ಮತ್ತು ಸೀಮಾಪರ್ವತಗಳ ವರ್ಣನೆ.

ಧೃತರಾಷ್ಟ್ರಃ

ಉಕ್ತೋ ದ್ವೀಪಸ್ಯ ಸಂಕ್ಷೇಪೋ ವಿಸ್ತರಂ ಬ್ರೂಹಿ ಸಂಜಯ ।
ಯಾವದ್ ಭೂಮ್ಯವಕಾಶೋಽಯಂ ದೃಶ್ಯತೇ ಶಶಲಕ್ಷಣೇ ।
ತಸ್ಯ ಪ್ರಮಾಣಂ ಪ್ರಬ್ರೂಹಿ ತತೋ ವಕ್ಷ್ಯಸಿ ಪಿಪ್ಪಲಮ್ ॥೧॥

ಧೃತರಾಷ್ಟ್ರ- ಎಲೈ ಸಂಜಯನೇ, ಜಂಬೂದ್ವೀಪವನ್ನು ಸಂಕ್ಷೇಪವಾಗಿ ಹೇಳಿದ್ದೀಯೆ. ಅದನ್ನು ವಿಸ್ತಾರವಾಗಿ ಹೇಳು. ಈ ಭೂಮಿಯ ಪ್ರತಿಬಿಂಬವು ಚಂದ್ರನಲ್ಲಿ ಏನು ಕಾಣುತ್ತದೆಯೋ ಅದರ ಪ್ರಮಾಣವನ್ನು ಮೊದಲು ಹೇಳು. ಅನಂತರ ಪಿಪ್ಪಲ ವೃಕ್ಷವನ್ನು ಹೇಳುವಿಯಂತೆ.

ವೈಶಂಪಾಯನಃ

ಏವಮುಕ್ತಃ ಸ ರಾಜ್ಞಾತು ಸಂಜಯೋ ವಾಕ್ಯಮಬ್ರವೀತ್ ।
ಪ್ರಾಗಾಯತಾ ಮಹಾರಾಜ ಷಡೇತೇ ರತ್ನಪರ್ವತಾಃ ।
ಅವಗಾಢಾ ಹ್ಯುಭಯತಃ ಸಮುದ್ರೌ ಪೂರ್ವಪಶ್ಚಿಮೌ ॥೨॥

ವೈಶಂಪಾಯನ- ಹೀಗೆ ರಾಜನಿಂದ ಹೇಳಲ್ಪಟ್ಟ ಸಂಜಯನು ಉತ್ತರವನ್ನು ನೀಡಿದನು. ಎಲೈ ಮಹಾರಾಜನೇ, ಈ ಆರು ವರ್ಷ ಪರ್ವತಗಳು ಪಶ್ಚಿಮದಿಂದ ಪೂರ್ವಕ್ಕೆ ಹಬ್ಬಿ ಎರಡು ಕಡೆಗಳಲ್ಲಿಯೂ ಪಶ್ಚಿಮ ಮತ್ತು ಪೂರ್ವ ಸಮುದ್ರಗಳವರೆಗೆ ಚಾಚಿಕೊಂಡಿವೆ.

ಹಿಮವಾನ್ ಹೇಮಕೂಟಶ್ಚ ನಿಷಧಶ್ಚ ನಗೋತ್ತಮಃ ।
ನೀಲಶ್ಚ ವೈಡೂರ್ಯಮಯಃ ಶ್ವೇತಶ್ಚ ರಜತಪ್ರಭಃ ।
ಸರ್ವಧಾತುಪಿನದ್ಧಶ್ಚ ಶೃಂಗವಾನ್ ನಾಮ ಪರ್ವತಃ ॥೩॥

ಹಿಮಾಲಯ, ಹೇಮಕೂಟ, ಶ್ರೇಷ್ಠವಾದ ನಿಷಧ ಪರ್ವತ, ವೈಡೂರ್ಯಮಯವಾದ ನೀಲಪರ್ವತ, ಬೆಳ್ಳಿಯ ಕಾಂತಿಯುಳ್ಳ ಶ್ವೇತಪರ್ವತ ಮತ್ತು ಎಲ್ಲ ಧಾತುಗಳಿಂದ ಕೂಡಿದ ಶೃಂಗವಾನ್ ಎಂಬ ಪರ್ವತ (ಇವು ಆ ಆರು ಪರ್ವತಗಳು).

ಏತೇ ವೈ ಪರ್ವತಾ ರಾಜನ್ ಸಿದ್ಧಚಾರಣಸೇವಿತಾಃ ।
ತೇಷಾಮಂತರವಿಷ್ಕಂಭೋ ಯೋಜನಾನಿ ಸಹಸ್ರಶಃ ॥೪॥

ಎಲೈ ರಾಜನೇ, ಈ ಪರ್ವತಗಳು ಸಿದ್ಧಚಾರಣರಿಂದ ಸೇವಿತವಾಗಿವೆ. ಇವುಗಳ ಮಧ್ಯದ ವಿಸ್ತಾರವು ಸಹಸ್ರಾರು ಯೋಜನಗಳಷ್ಟಿದೆ.

ತತ್ರ ಪುಣ್ಯಾ ಜನಪದಾಸ್ತಾನಿ ವರ್ಷಾಣಿ ಭಾರತ ।
ವಸಂತಿ ತೇಷು ಸತ್ತ್ವಾನಿ ನಾನಾಜಾತೀನಿ ಸರ್ವಶಃ ॥೫॥

ಎಲೈ ಭಾರತನೇ, ಅವುಗಳ ಮಧ್ಯದಲ್ಲಿ ಪವಿತ್ರವಾದ ದೇಶಗಳಿವೆ. ಆ ದೇಶಗಳಲ್ಲಿ ಎಲ್ಲಕಡೆಯಲ್ಲಿಯೂ ನಾನಾ ಜಾತಿಯ ಜೀವರು ವಾಸ ಮಾಡುತ್ತಾರೆ.

ಇದಂ ತು ಭಾರತಂ ವರ್ಷಂ ತತೋ ಹ್ಯೆಮವತಂ ಪರಮ್ ।
ಹೇಮಕೂಟಾತ್ ಪರಂ ಚೈವ ಹರಿವರ್ಷಂ ಪ್ರಚಕ್ಷತೇ ॥೬॥

ನಾವಿರುವುದು ಭಾರತವರ್ಷ. ಅದರ ಉತ್ತರಕ್ಕೆ ಹಿರಣ್ಮಯ ವರ್ಷ. ಅದರ ಉತ್ತರಕ್ಕೆ (ಹೇಮಕೂಟ ಪರ್ವತದ ಆಚೆಗೆ)ಇರುವುದಕ್ಕೆ ಹರಿವರ್ಷವೆಂದು ಹೇಳುತ್ತಾರೆ.

ದಕ್ಷಿಣೇನ ತು ನೀಲಸ್ಯ ನಿಷೇಧಸ್ಯೋತ್ತರೇಣ ಚ ।
ಪ್ರಾಗಾಯತೋ ಮಹಾರಾಜ ಮಾಲ್ಯವಾನ್ ನಾಮ ಪರ್ವತಃ ॥೭॥

ಎಲೈ ಮಹಾರಾಜನೇ, ನೀಲ ಪರ್ವತದ ದಕ್ಷಿಣದಲ್ಲಿಮತ್ತು ನಿಷಧ ಪರ್ವತದ ಉತ್ತರದಲ್ಲಿ ವಿಸ್ತಾರವಾಗಿ ಹಬ್ಬಿರುವ ಮೇರುವಿನ ಪೂರ್ವಭಾಗದಲ್ಲಿ ಮಾಲ್ಯವಾನ್ ಎಂಬ ಪರ್ವತವಿದೆ.

ತತಃ ಪರಂ ಮಾಲ್ಯವತಃ ಪರ್ವತೋ ಗಂಧಮಾದನಃ ।
ಪರಿಮಂಡಲಸ್ತಯೋರ್ಮಧ್ಯೇ ಮೇರುಃ ಕನಕಪರ್ವತಃ ॥೮॥

ಹಾಗೆಯೇ, ಮಾಲ್ಯವಾನ್ ಪರ್ವತದ ಪಶ್ಚಿಮ ಭಾಗದಲ್ಲಿ ಗಂಧಮಾದನ ಪರ್ವತವಿದೆ. ಇವುಗಳ ಮಧ್ಯದಲ್ಲಿ ವರ್ತುಲಾಕಾರವಿರುವ ಕನಕಮಯವಾದ ಮೇರುಪರ್ವತವಿದೆ.

ಆದಿತ್ಯತರುಣಾಭಾಸೋ ವಿಧೂಮ ಇವ ಪಾವಕಃ ।
ಯೋಜನಾನಾಂ ಸಹಸ್ರಾಣಿ ಷೋಡಶಾಧಃ ಕಿಲ ಸ್ಮೃತಃ ॥೯॥

ಉದಯಿಸುವ ಆದಿತ್ಯನ ಪ್ರಭೆಯನ್ನು ಹೊಂದಿರುವ, ಧೂಮವಿಲ್ಲದ ಅಗ್ನಿಯನ್ನು ಹೋಲುವ ಈ ಮೇರುಪರ್ವತವು ಭೂಮಿಯ ಕೆಳಗೆ ಹದಿನಾರು ಸಾವಿರ ಯೋಜನಗಳವರೆಗೆ ಹಬ್ಬಿದೆ.

ಉಚ್ಚೈಶ್ಚ ಚತುರಾಶೀತಿರ್ಯೋಜನಾನಾಂ ಮಹೀಪತೇ ।
ಊರ್ಧ್ವಮಂತಶ್ಚ ತಿರ್ಯಕ್ಚ ಲೋಕಾನಾವೃತ್ಯ ತಿಷ್ಠತಿ ॥೧೦॥

ಎಲೈ ರಾಜನೇ, ಭೂಮಿಯ ಮೇಲ್ಭಾಗದಲ್ಲಿ ಅದು ಎಂಬತ್ತನಾಲ್ಕು ಸಾವಿರ ಯೋಜನಗಳಷ್ಟು ಎತ್ತರವಿದೆ. ಅದು ಮೇಲ್ಭಾಗದಲ್ಲಿಯೂ, ತನ್ನ ಒಳಗೂ ಮತ್ತು ತನ್ನ ಸುತ್ತಮುತ್ತಲೂ ಅನೇಕ ಲೋಕಗಳನ್ನು ಆವರಿಸಿಕೊಂಡಿದೆ.

ತಸ್ಯ ಪಾರ್ಶ್ವೇ ತ್ವಿಮೇ ದ್ವೀಪಾಶ್ಚತ್ವಾರಃ ಸಂಸ್ಥಿತಾಃ ಪ್ರಭೋ ।
ಭದ್ರಾಶ್ವಃ ಕೇತುಮಾಲಶ್ಚ ಜಂಬೂದ್ವೀಪಶ್ಚ ಭಾರತ ।
ಉತ್ತರಾಶ್ಚೈವ ಕುರವಃ ಕೃತಪುಣ್ಯಪ್ರತಿಶ್ರಯಾಃ ॥೧೧॥

ಎಲೈ ಪ್ರಭುವೇ, ಆ ಮೇರುಪರ್ವತದ ಸುತ್ತಲೂ ದ್ವೀಪಾಕಾರದಲ್ಲಿರುವ ಭದ್ರಾಶ್ವ, ಕೇತುಮಾಲ, ಜಂಬೂದ್ವೀಪ ಮತ್ತು ಪುಣ್ಯವಂತರು ವಾಸಿಸುವ ಉತ್ತರ ಕುರು ಈ ನಾಲ್ಕು ವರ್ಷಗಳಿವೆ.

ವಿಹಗಃ ಸುಮುಖೋ ಯತ್ರ ಸುಪರ್ಣಸ್ಯಾತ್ಮಜಃ ಕಿಲ ।
ಸ ವೈ ವಿಚಿಂತಯಾಮಾಸ ಸೌವರ್ಣಾನ್ ಪ್ರೇಕ್ಷ್ಯ ವಾಯಸಾನ್ ॥೧೨॥

ಗರುಡನ ಮಗನಾದ ಸುಮುಖನು ಆ ಮೇರು ಪರ್ವತದಲ್ಲಿರುವ ಸುವರ್ಣಮಯವಾದ ಕಾಗೆಗಳನ್ನು ನೋಡಿ ಹೀಗೆ ಚಿಂತಿಸಿದನು.

ಮೇರುರುತ್ತಮಮಧ್ಯಾನಾಮಧಮಾನಾಂ ಚ ಪಕ್ಷಿಣಾಮ್ ।
ಅವಿಶೇಷಕರೋ ಯಸ್ಮಾತ್ ತಸ್ಮಾದೇನಂ ತ್ಯಜಾಮ್ಯಹಮ್ ॥೧೩॥

ಈ ಮೇರು ಪರ್ವತವು ಶ್ರೇಷ್ಠವಾದ, ಕನಿಷ್ಠವಾದ ಮತ್ತು ಮಧ್ಯಮ ವರ್ಗಕ್ಕೆ ಸೇರಿದ ಎಲ್ಲ ಪಕ್ಷಿಗಳಿಗೂ ಒಂದೇ ರೀತಿಯಾಗಿ ಆಶ್ರಯವಾಗಿದೆ. ಆದ್ದರಿಂದ ನಾನು ಇದನ್ನು ತ್ಯಜಿಸುತ್ತೇನೆ.

ತಸ್ಯಾದಿತ್ಯೋಽನುಪರ್ಯೇತಿ ಸತತಂ ಜ್ಯೋತಿಷಾಂ ಪತಿಃ ।
ಚಂದ್ರಮಾಶ್ಚ ಸನಕ್ಷತ್ರೋ ವಾಯುಶ್ಚೈವ ಪ್ರದಕ್ಷಿಣಮ್ ॥೧೪॥

ಜ್ಯೋತಿಶ್ಚಕ್ರಕ್ಕೆ ಅಧಿಪತಿಯಾದ ಸೂರ್ಯನೂ, ನಕ್ಷತ್ರಗಳಿಂದ ಕೂಡಿದ ಚಂದ್ರನೂ ಮತ್ತು ವಾಯುವೂ ಈ ಮೇರುಪರ್ವತಕ್ಕೆ ಪ್ರದಕ್ಷಿಣಾಕಾರದಲ್ಲಿ ಸಂಚರಿಸುತ್ತಾರೆ.

ಸ ಪರ್ವತೋ ಮಹಾರಾಜ ದಿವ್ಯಪುಷ್ಪಫಲಾನ್ವಿತಃ ।
ಭವನೈರಾವೃತಃ ಸರ್ವೈರ್ಜಾಂಬೂನದಮಯೈಃ ಶುಭೈಃ ॥೧೫॥

ಮಹಾರಾಜನೇ, ಆ ಮೇರುಪರ್ವತವು ದಿವ್ಯಪುಷ್ಪ-ಫಲಗಳಿಂದ ಭರಿತವಾಗಿದ್ದು ಸುವರ್ಣಮಯವಾದ ಮತ್ತು ಶುಭವಾದ ಅನೇಕ ಗೃಹಗಳಿಂದ ಕೂಡಿದೆ.

ತತ್ರ ದೇವಗಣಾ ರಾಜನ್ ಗಂಧರ್ವಾಸುರರಾಕ್ಷಸಾಃ ।
ಅಪ್ಸರೋಗಣಸಂಯುಕ್ತಾಃ ಶೈಲೇ ಕ್ರೀಡಂತಿ ನಿತ್ಯಶಃ ॥೧೬॥

ಎಲೈ ರಾಜನೇ, ಆ ಪರ್ವತದಲ್ಲಿ ದೇವತೆಗಳ ಸಮೂಹಗಳು, ಗಂಧರ್ವ-ಅಸುರ ಮತ್ತು ರಾಕ್ಷಸರು, ಅಪ್ಸರೆಯರ ಗಣಗಳ ಜೊತೆಯಲ್ಲಿ ಯಾವಾಗಲೂ ವಿಹರಿಸುತ್ತಾರೆ.

ತತ್ರ ಬ್ರಹ್ಮಾ ಚ ರುದ್ರಶ್ಚ ಶಕ್ರಶ್ಚಾಪಿ ಸುರೇಶ್ವರಃ ।
ಸಮೇತ್ಯ ವಿವಿಧೈರ್ಯಜ್ಞೈರ್ಯಜಂತೇऽನೇಕದಕ್ಷಿಣೈಃ ॥೧೭॥

ಬ್ರಹ್ಮದೇವರು, ರುದ್ರದೇವರು ಮತ್ತು ದೇವತೆಗಳ ಅಧಿಪತಿಯಾದ ಇಂದ್ರ ಇವರು ಅಲ್ಲಿಗೆ ಬಂದು ಅನೇಕ ದಕ್ಷಿಣೆಗಳಿಂದ ಕೂಡಿದ ವಿಧವಿಧವಾದ ಯಾಗಗಳನ್ನು ಮಾಡಿ ಭಗವಂತನನ್ನು ಆರಾಧಿಸುತ್ತಾರೆ.

ತುಂಬುರುರ್ನಾರದಶ್ಚೈವ ವಿಶ್ವಾವಸುರ್ಹಹಾ ಹುಹೂ ।
ಅಭಿಗಮ್ಯಾಮರಶ್ರೇಷ್ಠಾಃ ಸ್ತವೈಃ ಸ್ತುನ್ವಂತಿ ಚಾಭಿಭೋ ॥೧೮॥

ಎಲೈ ಶತ್ರುಗಳನ್ನು ಪರಾಭವಗೊಳಿಸುವವನೇ, ತುಂಬುರು, ನಾರದರು, ವಿಶ್ವಾವಸು, ಹಾಹಾ-ಹೂಹೂ ಇಂತಹ ಶ್ರೇಷ್ಠ ದೇವತೆಗಳು ಅಲ್ಲಿಗೆ ಬಂದು ಅನೇಕ ಸ್ತೋತ್ರಗಳಿಂದ ದೇವರನ್ನು ಸ್ತುತಿಸುತ್ತಾರೆ.

ಸಪ್ತರ್ಷಯೋ ಮಹಾತ್ಮಾನಃ ಕಶ್ಯಪಶ್ಚ ಪ್ರಜಾಪತಿಃ ।
ತತ್ರ ಗಚ್ಛಂತಿ ಭದ್ರಂ ತೇ ಸದಾ ಪರ್ವಣಿಪರ್ವಣಿ ॥೧೯॥

ನಿನಗೆ ಮಂಗಳವಾಗಲಿ. ಮಹಾತ್ಮರಾದ ಪ್ರಜಾಪತಿಗಳಾದ ಕಶ್ಯಪರೇ ಮೊದಲಾದ ಸಪ್ತರ್ಷಿಗಳು ಅಲ್ಲಿಗೆ ಪ್ರತಿಯೊಂದು ಪರ್ವಕಾಲದಲ್ಲಿಯೂ ಬರುತ್ತಾರೆ.

ತಸ್ಯೈವ ಮೂರ್ಧ್ನ್ಯುಶನಾಃ ಕಾವ್ಯೋ ದೈತ್ಯೈರ್ಮಹೀಯತೇ ।
ತಸ್ಯ ಹೀಮಾನಿ ರತ್ನಾನಿ ತಸ್ಯೇಮೇ ರತ್ನಪರ್ವತಾಃ ॥೨೦॥

ಆ ಮೇರುಪರ್ವತದ ಮೇಲ್ಭಾಗದಲ್ಲಿ ಕವಿಗಳ ಪುತ್ರನಾದ ಶುಕ್ರನು ದೈತ್ಯರಿಂದ ಪೂಜಿಸಲ್ಪಡುತ್ತಾನೆ. ಕಣ್ಣಿಗೆ ಕಾಣುವ ರತ್ನಗಳೂ ಮತ್ತು ರತ್ನಪರ್ವತಗಳೆಲ್ಲವೂ ಆ ಶುಕ್ರಾಚಾರ್ಯರಿಗೆ ಸೇರಿದುದು.

ತಸ್ಮಾತ್ ಕುಬೇರೋ ಭಗವಾಂಶ್ಚತುರ್ಥಂ ಭಾಗಮಶ್ನುತೇ ।
ತತಃ ಕಲಾಂಶಂ ವಿತ್ತಸ್ಯ ಮನುಷ್ಯೇಭ್ಯಃ ಪ್ರಯಚ್ಛತಿ ॥೨೧॥

ಕುಬೇರನು ಶುಕ್ರಾಚಾರ್ಯರಿಗೆ ಸೇರಿದ ಆ ಸಂಪತ್ತಿನ ನಾಲ್ಕನೆಯ ಒಂದು ಭಾಗವನ್ನು ಸ್ವೀಕರಿಸಿ ಆ ಸಂಪತ್ತಿನ ಒಂದು ಅಲ್ಪಭಾಗವನ್ನು ಮನುಷ್ಯರಿಗೆ ಕೊಡುತ್ತಾನೆ.

ಪಾರ್ಶ್ವೇ ತಸ್ಯೋತ್ತರೇ ದಿವ್ಯಂ ಸರ್ವರ್ತುಕುಸುಮಂ ಶಿವಮ್ ।
ಕರ್ಣಿಕಾರವನಂ ರಮ್ಯಂ ಶಿಲಾಜಾಲಸಮುದ್ಗತಮ್ ॥೨೨॥

ಮೇರುಪರ್ವತದ ಉತ್ತರಭಾಗದಲ್ಲಿ ಎಲ್ಲ ಋತುಗಳಲ್ಲಿಯೂ ಪುಷ್ಪಭರಿತವಾದ ಮಂಗಳವಾದ ಮತ್ತು ದಿವ್ಯವಾದ, ಮನೋಹರವಾದ ಕರ್ಣಿಕಾರ ವೃಕ್ಷಗಳ ವನವು ಆ ಶಿಲಾಸಮೂಹಗಳ ಮಧ್ಯದಲ್ಲಿ ಎದ್ದುನಿಂತಿದೆ.

ತತ್ರ ಸಾಕ್ಷಾತ್ ಪಶುಪತಿರ್ದಿವ್ಯೈರ್ಭೂತೈಃ ಸಮಾವೃತಃ ।
ಉಮಾಸಹಾಯೋ ಭಗವಾನ್ ರಮತೇ ಭೂತಭಾವನಃ ॥೨೩॥

ಅಲ್ಲಿ ಭೂತಭಾವನರಾದ, ಭಗವಂತನಾದ ರುದ್ರದೇವರು ದಿವ್ಯವಾದ ಭೂತಗಣಗಳಿಂದಲೂ ಮತ್ತು ಪಾರ್ವತಿಯಿಂದಲೂ ಸಹಿತರಾಗಿ ವಿಹರಿಸುತ್ತಾರೆ.

ಕರ್ಣಿಕಾರಮಯೀಂ ಮಾಲಾಂ ಬಿಭ್ರತ್ ಪಾದಾವಲಂಬಿನೀಮ್ ।
ತ್ರಿಭಿರ್ನೇತ್ರೈಃ ಕೃತೋದ್ಯೋತಸ್ತ್ರಿಭಿಃ ಸೂರ್ಯೈರಿವೋದಿತೈಃ ॥೨೪॥

ಪಾದದವರೆಗೂ ಲಂಬಿಸಿರುವ ಕರ್ಣಿಕಾರ ಪುಷ್ಪಗಳ ಮಾಲೆಯನ್ನು ಧರಿಸಿ, ಉದಯಿಸಿದ ಸೂರ್ಯನಂತಿರುವ ಮೂರು ಕಣ್ಣುಗಳ ಪ್ರಕಾಶದಿಂದ ಆ ದೇಶವನ್ನೆಲ್ಲಾ ಬೆಳಗುತ್ತಾರೆ.

ತಮುಗ್ರತಪಸಃ ಸಿದ್ಧಾಃ ಸುವ್ರತಾಃ ಸತ್ಯವಾದಿನಃ ।
ಪಶ್ಯಂತಿ ನ ಹಿ ದುರ್ವೃತ್ತೈಃ ಶಕ್ಯೋ ದ್ರಷ್ಟುಂ ಮಹೇಶ್ವರಃ ॥೨೫॥

ಉಗ್ರತಪಸ್ವಿಗಳೂ, ಸತ್ಯವಾದಿಗಳೂ, ಒಳ್ಳೆಯ ವ್ರತಧಾರಿಗಳೂ ಆದ ಸಿದ್ಧರು ಆ ರುದ್ರದೇವರನ್ನು ದರ್ಶನ ಮಾಡುತ್ತಾರೆ. ದುರ್ನಡತೆಯುಳ್ಳವರು ಆ ಮಹೇಶ್ವರನನ್ನು ದರ್ಶನ ಮಾಡಲು ಸಾಧ್ಯವಿಲ್ಲ.

ತಸ್ಯ ಶೈಲಸ್ಯ ಶಿಖರಾತ್ ಕ್ಷೀರಧಾರಾ ನರೇಶ್ವರ ।
ತ್ರಿಂಶದ್ ಬಾಹುಪರಿಗ್ರಾಹ್ಯಾ ಭೀಮನಿರ್ಘಾತನಿಸ್ವನಾ ॥೨೬॥

ಪುಣ್ಯಾ ಪುಣ್ಯತಮೈರ್ಜುಷ್ಟಾ ಗಂಗಾ ಭಾಗೀರಥೀ ಶುಭಾ ।
ಪತತ್ಯಜಸ್ರವೇಗೇನ ಹ್ರದೇ ಚಾಂದ್ರಮಸೇ ಶುಭೇ ।
ತಯಾ ಹ್ಯುತ್ಪಾದಿತಃ ಪುಣ್ಯಃ ಸ ಹ್ರದಃ ಸಾಗರೋಪಮಃ ॥೨೭॥

ಎಲೈ ನರೇಶ್ವರನೇ, ಆ ಮೇರು ಪರ್ವತದ ಶಿಖರದಿಂದ ಕ್ಷೀರಧಾರೆಯನ್ನು ಹೋಲುವ ಮೂವತ್ತು ಮಾರಿನಷ್ಟು ಅಗಲವಾದ, ಭಯಂಕರವಾದ, ಅಪ್ಪಳಿಸುವ ಶಬ್ದದಿಂದ ಕೂಡಿದ, ಮಹಾಪುಣ್ಯವಂತರಿಂದ ಸೇವಿತವಾದ, ಪವಿತ್ರವಾದ, ಮಂಗಳವಾದ, ಭಾಗೀರಥಿಯಾದ ಗಂಗೆಯು ಸತತವಾಗಿ ಮಹಾವೇಗದಿಂದ ಪವಿತ್ರವಾದ ಚಂದ್ರಸರೋವರದಲ್ಲಿ ಬೀಳುತ್ತಾಳೆ. ಸಾಗರದಂತಿರುವ ಪವಿತ್ರವಾದ ಆ ಚಂದ್ರಸರೋವರವು ಗಂಗೆಯ ಅಧಃಪತನದ ವೇಗದಿಂದಲೇ ಉಂಟು ಮಾಡಲ್ಪಟ್ಟಿದೆ.

ತಾಂ ಧಾರಯಾಮಾಸ ಪುರಾ ದುರ್ಧರಾಂ ಪರ್ವತೈರಪಿ ।
ಶತಂ ವರ್ಷಸಹಸ್ರಾಣಾಂ ಶಿರಸಾ ವೈ ಮಹೇಶ್ವರಃ ॥೨೮॥

ಯಾವ ಪರ್ವತವೂ ಧರಿಸಲು ಸಾಧ್ಯವಾಗದ ಆ ಗಂಗೆಯನ್ನು ಮಹೇಶ್ವರನು ತನ್ನ ಶಿರಸ್ಸಿನ ಮೇಲೆ ಒಂದು ಲಕ್ಷವರ್ಷಗಳ ಕಾಲದವರೆಗೆ ಧರಿಸಿದನು.

ಮೇರೋಸ್ತು ಪಶ್ಚಿಮೇ ಪಾರ್ಶ್ವೇ ಕೇತುಮಾಲೋ ಮಹೀಯತೇ ।
ಜಂಬೂಷಂಡಶ್ಚ ತತ್ರೈವ ಸುಮಹಾನ್ ನಂದನೋಪಮಃ ॥೨೯॥

ಮೇರುಪರ್ವತದ ಪಶ್ಚಿಮಭಾಗದಲ್ಲಿ ಕೇತುಮಾಲ ಎಂಬ ವರ್ಷವು ಶೋಭಿಸುತ್ತದೆ. ಅಲ್ಲಿಯೇ ನಂದನವನದಂತಿರುವ ಬಹಳ ದೊಡ್ಡದಾದ ಜಂಬೂವೃಕ್ಷವಿದೆ.

ಆಯುರ್ದಶ ಸಹಸ್ರಾಣಿ ವರ್ಷಾಣಾಂ ತತ್ರ ಭಾರತ ।
ಸುವರ್ಣವರ್ಣಾಶ್ಚ ನರಾಃ ಸ್ತ್ರಿಯಶ್ಚಾಪ್ಸರಸೋಪಮಾಃ ॥೩೦॥

ಎಲೈ ಭಾರತನೇ, ಆ ವರ್ಷದಲ್ಲಿ ವಾಸ ಮಾಡುವವರಿಗೆ ಹತ್ತು ಸಹಸ್ರ ವರ್ಷಗಳ ಆಯುಸ್ಸು ಇರುತ್ತದೆ. ಅಲ್ಲಿ ಪುರುಷರು ಸುವರ್ಣವರ್ಣದಿಂದ ಕೂಡಿರುತ್ತಾರೆ ಮತ್ತು ಸ್ತ್ರೀಯರು ಅಪ್ಸರೆಯರನ್ನು ಹೋಲುತ್ತಾರೆ.

ಅನಾಮಯಾ ವೀತಶೋಕಾ ನಿತ್ಯಂ ಮುದಿತಮಾನಸಾಃ ।
ಜಾಯಂತೇ ಮಾನವಾಸ್ತತ್ರ ನಿಷ್ಪ್ತಕನಕಪ್ರಭಾಃ ॥೩೧॥

ಅಲ್ಲಿ ವಾಸಿಸುವ ಮನುಷ್ಯರು ಯಾವ ರೋಗವಾಗಲೀ, ಶೋಕವಾಗಲೀ ಇಲ್ಲದೆ ನಿತ್ಯವೂ ಸಂತೋಷಗೊಂಡ ಮನಸ್ಸುಳ್ಳವರಾಗಿರುತ್ತಾರೆ. ಎಲ್ಲರೂ ಪುಟವಿಟ್ಟ ಚಿನ್ನದ ಕಾಂತಿಯನ್ನು ಹೊಂದಿದವರಾಗಿ ಜನಿಸುತ್ತಾರೆ.

ಗಂಧಮಾದನಶೃಂಗೇಷು ಕುಬೇರಃ ಸಹ ರಾಕ್ಷಸೈಃ ।
ಸಂವೃತೋಽಪ್ಸರಸಾಂ ಸಂಘೈರ್ಮೋದತೇ ಗುಹ್ಯಕಾಧಿಪಃ ॥೩೨॥

ಗಂಧಮಾದನ ಪರ್ವತದ ಶಿಖರಗಳಲ್ಲಿ ಗುಹ್ಯಕಾಧಿಪತಿಯಾದ ಕುಬೇರನು ರಾಕ್ಷಸರಿಂದಲೂ ಮತ್ತು ಅಪ್ಸರೆಯರ ಗಣಗಳಿಂದಲೂ ಪರಿವೃತನಾಗಿ ವಿಹರಿಸುತ್ತಾನೆ.

ಗಂಧಮಾದನಪಾದೇಷು ಪರೇ ತ್ವಪರಗಂಡಿಕಾಃ ।
ಏಕಾದಶ ಸಹಸ್ರಾಣಿ ವರ್ಷಾಣಾಂ ಪರಮಾಯುಷಃ ॥೩೩॥

ಗಂಧಮಾದನ ಪರ್ವತದ ತಪ್ಪಲಿನಲ್ಲಿ (ಪಾದ ಪ್ರದೇಶಗಳಲ್ಲಿ) ಇನ್ನೂ ಅನೇಕ ಸಣ್ಣ-ಸಣ್ಣ ಪರ್ವತಗಳಿವೆ. ಅಲ್ಲಿ ವಾಸಿಸುವವರಿಗೆ ಹನ್ನೊಂದು ಸಾವಿರ ವರ್ಷಗಳು ಪರಮಾಯುಷ್ಯವಾಗಿರುತ್ತದೆ.

ತತ್ರ ಕೃಷ್ಣಾ ನರಾ ರಾಜಂಸ್ತೇಜೋಯುಕ್ತಾ ಮಹಾಬಲಾಃ ।
ಸ್ತ್ರಿಯಶ್ಚೋತ್ಪಲಪತ್ರಾಭಾಃ ಸರ್ವಾಃ ಸುಪ್ರಿಯದರ್ಶನಾಃ ॥೩೪॥

ಎಲೈ ರಾಜನೇ, ಅಲ್ಲಿ ಪುರುಷರು ಮಹಾಬಲದಿಂದ ಕೂಡಿ, ತೇಜೋಯುಕ್ತರಾಗಿ ಕಪ್ಪುಬಣ್ಣದಿಂದ ಕೂಡಿದವರಾಗಿರುತ್ತಾರೆ. ಸ್ತ್ರೀಯರೂ ಸಹ ಎಲ್ಲರೂ ನೋಡಲು ಮನೋಹರರಾಗಿದ್ದು, ನೈದಿಲೆಯ ಕಾಂತಿಯನ್ನು ಹೊಂದಿರುತ್ತಾರೆ.

ನೀಲಾತ್ ಪರತರಂ ಶ್ವೇತಂ ಶ್ವೇತಾದ್ಧೈರಣ್ಯಕಂ ಪರಮ್ ।
ವರ್ಷಮೈರಾವತಂ ನಾಮ ತತಃ ಶೃಂಗವತಃ ಪರಮ್ ॥೩೫॥

ನೀಲಪರ್ವತದ ಆಚೆಗೆ ಶ್ವೇತಪರ್ವತವಿದೆ. ಶ್ವೇತಪರ್ವತದ ಆಚೆಗೆ ಹಿರಣ್ಯಕ ವರ್ಷ ಮತ್ತು ಅಲ್ಲಿಂದಾಚೆಗೆ ಇರುವ ಶೃಂಗವಾನ್ ಪರ್ವತದ ಆಚೆಗೆ ಐರಾವತ ವರ್ಷವೂ ಇದೆ.

ಹಿರಣ್ಮಯಂ ಚ ಶ್ವೇತಾದ್ರೇಃ ಪರಂ ವರ್ಷಂ ನರಾಧಿಪ ।
ಕುರುವರ್ಷಂ ತತೋ ರಾಜನ್ ಶೃಂಗವತ್ಪರ್ವತಾತ್ ಪರಮ್ ॥೩೬॥

ಎಲೈ ರಾಜನೇ, ಶ್ವೇತಪರ್ವತದ ಆಚೆಗೆ ಹಿರಣ್ಮಯ ವರ್ಷವೂ ಮತ್ತು ಶೃಂಗವಾನ್ ಪರ್ವತದ ಆಚೆಗೆ ಕುರುವರ್ಷವೂ ಇದೆ.

ಧನುಸಂಸ್ಥೇ ಮಹಾರಾಜ ದ್ವೇ ವರ್ಷೇ ದಕ್ಷಿಣೋತ್ತರೇ ।
ಇಲಾವೃತಂ ಮಧ್ಯಮಂ ತು ಪಂಚ ವರ್ಷಾಣಿ ವೈ ಹ ॥೩೭॥

ಎಲೈ ಮಹಾರಾಜನೇ, ಮಧ್ಯದಲ್ಲಿರುವ ಇಲಾವೃತ ಖಂಡಕ್ಕೆ ದಕ್ಷಿಣ-ಉತ್ತರದಲ್ಲಿರುವ ಎರಡು ವರ್ಷಗಳು ಮತ್ತು ಉಳಿದ ಐದು ವರ್ಷಗಳು ಎಲ್ಲವೂ ಧನುಸ್ಸಿನ ಆಕಾರದಲ್ಲಿವೆ.

ಉತ್ತರೋತ್ತರಮೇತೇಭ್ಯೋ ವರ್ಷಮುದ್ರಿಚ್ಯತೇ ಗುಣೈಃ ।
ಆಯುಷ್ಪ್ರಮಾಣಮಾರೋಗ್ಯಂ ಧರ್ಮತಃ ಕಾಮತೋऽರ್ಥತಃ ॥೩೮॥

ನಾವು ಇವುಗಳಿಂದ ಉತ್ತರಕ್ಕೆ ಹೋದಂತೆ ಈ ವರ್ಷಗಳು ಗುಣಗಳಿಂದ ಅಧಿಕವಾಗುತ್ತವೆ. ಅಲ್ಲಿರುವ ಜೀವರ ಆಯುಷ್ಪ್ರಮಾಣವೂ, ಆರೋಗ್ಯವೂ, ಧರ್ಮಾರ್ಥ-ಕಾಮಗಳೂ ಎಲ್ಲವೂ ಅಭಿವೃದ್ಧಿಯನ್ನು ಹೊಂದುತ್ತವೆ.

ಸಮನ್ವಿತಾನಿ ಭೂತಾನಿ ತೇಷು ವರ್ಷೇಷು ಭಾರತ ।
ಏವಮೇಷಾ ಮಹಾರಾಜ ಪರ್ವತೈಃ ಪೃಥಿವೀ ಚಿತಾ ॥೩೯॥

ಎಲೈ ಭಾರತನೇ, ಆ ಎಲ್ಲ ವರ್ಷಗಳಲ್ಲಿಯೂ ಅನೇಕ ವಿಧವಾದ ಜೀವರಿದ್ದಾರೆ. ಎಲೈ ಮಹಾರಾಜನೇ, ಹೀಗೆ ಈ ಭೂಮಿಯು ಪರ್ವತಗಳಿಂದ ತುಂಬಿದೆ.

ಹೇಮಕೂಟಸ್ತು ಸುಮಹಾನ್ ಕೈಲಾಸೋ ನಾಮ ಪರ್ವತಃ ।
ತತ್ರ ವೈಶ್ರವಣೋ ರಾಜಾ ಗುಹ್ಯಕೈಃ ಸಹ ಮೋದತೇ ॥೪೦॥

ಹೇಮಕೂಟ ಎಂಬುದು ದೊಡ್ಡ ಪರ್ವತ. ಅದಕ್ಕೆ ಕೈಲಾಸವೆಂದೂ ಹೆಸರಿದೆ. ಅಲ್ಲಿ ಗುಹ್ಯಕರ ಅಧಿಪತಿಯಾದ ಕುಬೇರನು ಗುಹ್ಯಕರ ಜೊತೆಯಲ್ಲಿ ವಿಹರಿಸುತ್ತಾನೆ.

ತತ್ರ ದೇವೋ ಮಹಾದೇವೋ ನಿತ್ಯಮಾಸ್ತೇ ಸಹೋಮಯಾ ।
ಚಿತ್ರೇ ಶಿಲಾತಲೇ ರಮ್ಯೇ ದೇವರ್ಷಿಗಣಪೂಜಿತಃ ॥೪೧॥

ಅಲ್ಲಿ ಮಹಾತ್ಮನಾದ, ದೇವದೇವನಾದ ಮಹಾದೇವನು ನಿತ್ಯವೂ ಪಾರ್ವತಿಯ ಜೊತೆಯಲ್ಲಿ ದೇವರ್ಷಿಗಳ ಗಣಗಳಿಂದ ಪೂಜಿತನಾಗಿ ಮನೋಹರವಾದ ಶಿಲಾತಳದಲ್ಲಿ ವಾಸಿಸುತ್ತಾನೆ.

ಅಸ್ಯೋತ್ತರೇಣ ಕೈಲಾಸಂ ಮೈನಾಕಂ ಪರ್ವತಂ ಪ್ರತಿ ।
ಹಿರಣ್ಯಶೃಂಗಃ ಸುಮಹಾನ್ ದಿವ್ಯೋ ಮಣಿಮಯೋ ಗಿರಿಃ ॥೪೨॥

ಕೈಲಾಸ ಪರ್ವತದ ಉತ್ತರದಲ್ಲಿ ಮೈನಾಕ ಪರ್ವತದ ಕಡೆಗೆ ಹಿರಣ್ಮಮಯವಾದ ಶಿಖರಗಳನ್ನು ಹೊಂದಿದ, ಮಣಿಮಯವಾದ, ದಿವ್ಯವಾದ ಹಿರಣ್ಯಶೃಂಗ ಪರ್ವತವಿದೆ.

ತಸ್ಯ ಪಾರ್ಶ್ವೇ ಮಹದ್ ದಿವ್ಯಂ ಶುಭಂ ಕಾಂಚನವಾಲುಕಮ್ ।
ರಮ್ಯಂ ಬಿಂದುಸರೋ ನಾಮ ಯತ್ರ ರಾಜಾ ಭಗೀರಥಃ ।
ದೃಷ್ಟ್ವಾ ಭಾಗೀರಥೀಂ ಗಂಗಾಮುವಾಸ ಬಹುಲಾಃ ಸಮಾಃ ॥೪೩॥

ಆ ಪರ್ವತದ ಪಾರ್ಶ್ವದಲ್ಲಿ ಚಿನ್ನದ ಕಣಗಳಂತಿರುವ ಮಣ್ಣುಗಳನ್ನು ಹೊಂದಿದ, ದಿವ್ಯವೂ, ಶುಭವೂ, ಮನೋಹರವೂ ಆದ ದೊಡ್ಡ ಬಿಂದು ಸರೋವರವಿದೆ. ಅಲ್ಲಿ

ಭಗೀರಥ ರಾಜನು ಭಾಗೀರಥಿಯನ್ನು ನೋಡಿ (ನೋಡಲು) ಅನೇಕ ವರ್ಷಗಳವರೆಗೆ ವಾಸ ಮಾಡಿದನು (ತಪಸ್ಸನ್ನು ಆಚರಿಸುತ್ತಾ ವಾಸ ಮಾಡಿದನು).

ಯೂಪಾ ಮಣಿಮಯಾಸ್ತತ್ರ ಚೈತ್ಯಾಶ್ಚಾಪಿ ಹಿರಣ್ಮಯಾಃ ।
ತತ್ರೇಷ್ಟ್ವಾ ತು ಗತಃ ಸಿದ್ಧಿಂ ಸಹಸ್ರಾಕ್ಷೋ ಮಹಾಯಶಾಃ ॥೪೪॥

ಆ ಬಿಂದುಸರೋವರದ ಸಮೀಪದಲ್ಲಿ ಇರುವ ಯೂಪಗಳು ಮಣಿಮಯವಾದವುಗಳು. ಪೂಜ್ಯವಾದ ವೃಕ್ಷಗಳೆಲ್ಲವೂ ಹಿರಣ್ಮಯವಾದವು. ಮಹಾಕೀರ್ತಿಶಾಲಿಯಾದ ಸಹಸ್ರಾಕ್ಷನಾದ ಇಂದ್ರನು ಅಲ್ಲಿ ಯಾಗವನ್ನು ಮಾಡಿ ಸಿದ್ಧಿಯನ್ನು ಪಡೆದನು.

ಸೃಷ್ಟ್ವಾ ಭೂತಪತಿರ್ಯತ್ರ ಸರ್ವಲೋಕಾನ್ ಸನಾತನಃ ।
ಉಪಾಸ್ಯತೇ ತಿಗ್ಮತೇಜಾ ವೃತೋ ಭೂತೈಃ ಸಮಾಗತೈಃ ।
ನರನಾರಾಯಣೌ ಬ್ರಹ್ಮಾ ಮನುಃ ಸ್ಥಾಣುಶ್ಚ ಪಂಚಮಃ ॥೪೫॥

ಅಲ್ಲಿ ಭೂತಭಾವನನಾದ ಶಂಕರನು ಎಲ್ಲ ಲೋಕಗಳನ್ನೂ ಸೃಷ್ಟಿ ಮಾಡಿ ಸನಾತನನೂ, ಮಹಾಸಾಮರ್ಥ್ಯವುಳ್ಳವನೂ ಆದ ಅವನು ಅಲ್ಲಿಗೆ ಬಂದ ಭೂತಗಣಗಳಿಂದ ಉಪಾಸನೆ ಮಾಡಲ್ಪಡುತ್ತಾನೆ. ಅಲ್ಲಿ ನರ-ನಾರಾಯಣರೂ, ಬ್ರಹ್ಮದೇವರೂ, ಮನುವೂ ಮತ್ತು ಐದನೆಯವರಾದ ರುದ್ರದೇವರೂ ಇರುತ್ತಾರೆ.

ತತ್ರ ತ್ರಿಪಥಗಾ ದೇವೀ ಪ್ರಥಮಂ ತು ಪ್ರತಿಷ್ಠಿತಾ ।
ಬ್ರಹ್ಮಲೋಕಾದಪಕ್ರಾಂತಾ ಸಪ್ತಧಾ ಪ್ರತಿಪದ್ಯತೇ ॥೪೬॥

ತ್ರಿಪಥಗಾಮಿನಿಯಾದ ಗಂಗೆಯು ಬ್ರಹ್ಮಲೋಕದಿಂದ ಹೊರಟು ಅಲ್ಲಿಗೆ ಬಂದು ಮೊದಲು ಪ್ರತಿಷ್ಠಿತಳಾಗಿ ಅಲ್ಲಿಂದ ಏಳು ಕವಲುಗಳಾಗಿ ಹರಿಯುತ್ತಾಳೆ.

ವಸ್ವೋಕಸಾರಾ ನಳಿನೀ ಪಾವನಾ ಚ ಸರಸ್ವತೀ ।
ಜಾಂಬೂನದೀ ಚ ಸೀತಾ ಚ ಗಂಗಾ ಸಿಂಧುಶ್ಚ ಸಪ್ತಮೀ ॥೪೭॥

ವಸ್ವೋಕಸಾರಾ, ನಳಿನೀ, ಪವಿತ್ರವಾದ ಸರಸ್ವತೀ, ಜಂಬೂನದೀ, ಸೀತಾ, ಗಂಗಾ ಮತ್ತು ಸಿಂಧು ಎಂಬುವೆ ಆ ಏಳು ಕವಲುಗಳು.

ಅಚಿಂತ್ಯಾ ದಿವ್ಯಸಂಕಲ್ಪಾ ಪ್ರಭೋರೇಷೈವ ಸಂವಿಧಿಃ ।
ಉಪಾಸತೇ ಯತ್ರ ಸತ್ರಂ ಸಹಸ್ರಯುಗಪರ್ಯಯೇ ॥೪೮॥

ಆ ಗಂಗೆಯ ಸಾಮರ್ಥ್ಯವು ಅಚಿಂತ್ಯವಾದುದು ಮತ್ತು ಅವಳ ಸಂಕಲ್ಪವು ದಿವ್ಯವಾದುದು. ಇದು ಪ್ರಭುವಾದ ನಾರಾಯಣನ ಆಜ್ಞೆ. ಸಹಸ್ರಯುಗಗಳು ಮುಗಿಯುವಾಗ ಅಲ್ಲಿ ಬ್ರಹ್ಮದೇವರು ಸತ್ರಯಾಗವನ್ನು ಮಾಡುತ್ತಾರೆ.

ದೃಶ್ಯಾದೃಶ್ಯಾ ಚ ಭವತಿ ತತ್ರ ತತ್ರ ಸರಸ್ವತೀ ।
ಏತಾ ದಿವ್ಯಾಃ ಸಪ್ತ ಗಂಗಾಸ್ತ್ರಿಷು ಲೋಕೇಷು ವಿಶ್ರುತಾಃ ॥೪೯॥

ಅವುಗಳಲ್ಲಿ ಆ ಸರಸ್ವತಿಯು ಕೆಲವೊಮ್ಮೆ ದೃಶ್ಯಳಾಗಿ, ಕೆಲವೊಮ್ಮೆ ಅದೃಶ್ಯಳಾಗಿ ಹರಿಯುತ್ತಾಳೆ. ಈ ಸಪ್ತಗಂಗೆಗಳು ಮೂರು ಲೋಕಗಳಲ್ಲಿಯೂ ಪ್ರಖ್ಯಾತವಾಗಿವೆ.

ರಕ್ಷಾಂಸಿ ವೈ ಹಿಮವತಿ ಹೇಮಕೂಟೇ ತು ಗುಹ್ಯಕಾಃ ।
ಸರ್ಪಾ ನಾಗಾಶ್ಚ ನಿಷಧೇ ಗೋಕರ್ಣೇ ಚ ತಪೋಧನಾಃ ॥೫೦॥

ಹಿಮಾಲಯ ಪರ್ವತದಲ್ಲಿ ರಾಕ್ಷಸರೂ, ಹೇಮಕೂಟ ಪರ್ವತದಲ್ಲಿ ಗುಹ್ಯಕರೂ, ನಿಷಧ ಪರ್ವತದಲ್ಲಿ ಸರ್ಪ ಮತ್ತು ನಾಗಗಳೂ ಮತ್ತು ಗೋಕರ್ಣದಂತಿರುವ ಗಂಧಮಾದನ ಪರ್ವತದಲ್ಲಿ ತಪೋಧನರೂ ವಾಸಿಸುತ್ತಾರೆ.

ದೇವಾಸುರಾಣಾಂ ಚ ಗೃಹಂ ಶ್ವೇತಃ ಪರ್ವತ ಉಚ್ಯತೇ ।
ಗಂಧರ್ವಾ ನಿಷಧೇ ಶೈಲೇ ನೀಲೇ ಬ್ರಹ್ಮರ್ಷಯೋ ನೃಪ ।
ಶೃಂಗವಾಂಸ್ತು ಮಹಾರಾಜ ಪಿತೃಣಾಂ ಪ್ರತಿಸಂಚರಃ ॥೫೧॥

ಶ್ವೇತಪರ್ವತವು ದೇವತೆಗಳ ಮತ್ತು ಅಸುರರ ವಾಸಸ್ಥಾನವೆಂದು ಹೇಳಲ್ಪಡುತ್ತದೆ. ಎಲೈ ರಾಜನೇ, ನಿಷಧ ಪರ್ವತದಲ್ಲಿ ಗಂಧರ್ವರೂ, ನೀಲಪರ್ವತದಲ್ಲಿ ಬ್ರಹ್ಮರ್ಷಿಗಳೂ ವಾಸಿಸುತ್ತಾರೆ. ಮಹಾರಾಜನೇ, ಶೃಂಗವಾನ್ ಪರ್ವತವಾದರೂ ಪಿತೃಗಳ ಸಂಚಾರ ಮತ್ತು ವಿಹಾರದಿಂದ ಕೂಡಿದುದಾಗಿದೆ.

ಇತ್ಯೇತಾನಿ ಮಹಾರಾಜ ಸಪ್ತ ವರ್ಷಾಣಿ ಭಾಗಶಃ ।
ಭೂತಾನ್ಯುಪನಿವಿಷ್ಟಾನಿ ಗತಿಮಂತಿ ಧ್ರುವಾಣಿ ಚ ॥೫೨॥

ಎಲೈ ಮಹಾರಾಜನೇ, ಇವು ಏಳು ವರ್ಷಗಳ ಭಾಗಗಳು. ಇವುಗಳಲ್ಲಿ ಸ್ಥಾವರ ಮತ್ತು ಜಂಗಮಾತ್ಮಕವಾದ ಅನೇಕ ಜೀವರು ತುಂಬಿದ್ದಾರೆ.

॥ ॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಸಪ್ತಮೋಽಧ್ಯಾಯಃ ॥

॥ ಜಂಬೂಖಂಡನಿರ್ಮಾಣಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಟನೆಯ ಅಧ್ಯಾಯ

ಸಂಜಯನಿಂದ ಶಶಾಕೃತಿಯ ವಿವರಣೆ. ಮೇರುವಿನ ಉತ್ತರದಲ್ಲಿರುವ ಉತ್ತರವರ್ಷದ ಮತ್ತು ಪೂರ್ವದಲ್ಲಿರುವ ಭದ್ರಾಶ್ವವರ್ಷದ ವಿವರಣೆ.

ವೈಶಂಪಾಯನಃ

ತೇಷಾಮೃದ್ಧಿರ್ಬಹುವಿಧಾ ದೃಶ್ಯತೇ ದೈವಮಾನುಷೀ ।
ಅಶಕ್ಯಾ ಪರಿಸಂಖ್ಯಾತುಂ ಶ್ರದ್ದೇಯಾ ತು ಬುಭೂಷತಾ ॥೧॥

ವೈಶಂಪಾಯನ– ಈ ವರ್ಷದಲ್ಲಿ ವಾಸಿಸುವವರಿಗೆ ದೈವಿಕವಾದ ಮತ್ತು ಮಾನಸಿಕವಾದ ಅನೇಕ ವಿಧವಾದ ಸಂಪತ್ತುಗಳು ಕಂಡುಬರುತ್ತವೆ. ಅವುಗಳನ್ನು ಎಣಿಸಲು ಸಾಧ್ಯವಿಲ್ಲ. ಆದರೆ ಶ್ರೇಯಸ್ಕಾಮಿಗಳಾದವರು ನಂಬಬೇಕಷ್ಟೆ!

ಯಾಂ ತು ಪೃಚ್ಛಸಿ ಮಾಂ(ಮಾ) ರಾಜನ್ ದಿವ್ಯಾಮೇತಾಂ ಶಶಾಕೃತಿಮ್ ।
ಪಾರ್ಶ್ವೇ ಶಶಸ್ಯ ದ್ವೇ ವರ್ಷೇ ಉಭಯೇ ದಕ್ಷಿಣೋತ್ತರೇ ।
ಕರ್ಣೌ ತು ನಾಗದ್ವೀಪಂ ಚ ಕಶ್ಯಪದ್ವೀಪಮೇವ ಚ ॥೨॥

ಎಲೈ ರಾಜನೇ, ದಿವ್ಯವಾದ ಶಶಾಕೃತಿಯನ್ನು ಏನು ಕೇಳುತ್ತಿದ್ದಿಯೋ, ಅದನ್ನು ಹೇಳುತ್ತೇನೆ. ಮೇರುಪರ್ವತದ ಎರಡು ಪಕ್ಕದಲ್ಲಿರುವ ದಕ್ಷಿಣೋತ್ತರವಾಗಿ ಹರಡಿರುವ ಎರಡು ಭಾಗಗಳು ಮೊಲದ ಎರಡು ಪಾರ್ಶ್ವಗಳು. ಉನ್ನತವಾದ ನಾಗದ್ವೀಪ ಮತ್ತು ಕಶ್ಯಪದ್ವೀಪಗಳು ಮೊಲದ ಕಿವಿಗಳು.

ಜಂಬೂದ್ವೀಪಸ್ಯ ಸರ್ವಸ್ಯ ಆಕೃತಿಂ ಚಂದ್ರಮಂಡಲೇ ।
ಸ ವೈ ಸುದರ್ಶನದ್ವೀಪೋ ದೃಶ್ಯತೇ ಶಶವದ್ ವಿಭೌ ॥೩॥

ಸಮಗ್ರವಾದ ಜಂಬೂದ್ವೀಪದ ಆಕೃತಿಯು ಚಂದ್ರಮಂಡಲದಲ್ಲಿ ಕಂಡು ಬರುತ್ತದೆ. ಸುದರ್ಶನದ್ವೀಪವೆಂದು ಕರೆಯಲ್ಪಡುವ ಅದೇ ಜಂಬೂದ್ವೀಪವು ಚಂದ್ರನಲ್ಲಿ ಪ್ರತಿಫಲಿತವಾಗಿ ಮೊಲದಂತೆ ಕಂಡುಬರುತ್ತದೆ.

ತಿಸ್ರವರ್ಣಃ ಶಿರೋ ರಾಜನ್ ಶ್ರೀಮಾನ್ ಮಲಯಪರ್ವತಃ ।
ಏತದ್ ದ್ವಿತೀಯಂ ದ್ವೀಪಸ್ಯ ದೃಶ್ಯತೇ ಶಶಸಂಸ್ಥಿತಮ್ ॥೪॥

ಎಲೈ ರಾಜನೇ, ಮೂರುವರ್ಣಗಳ ಶಿಖರಗಳಿಂದ ಕೂಡಿದ, ಸಂಪದ್ಯುಕ್ತವಾದ ಮಲಯ ಪರ್ವತವು ಜಂಬೂದ್ವೀಪದಲ್ಲಿರುವ ಎರಡನೆಯ ಮೊಲದ ಆಕೃತಿ. ಇದೂ ಸಹ ಚಂದ್ರನಲ್ಲಿ ಕಾಣುತ್ತದೆ.

ಧೃತರಾಷ್ಟ್ರಃ

ಮೇರೋರಥೋತ್ತರಂ ಪಾರ್ಶ್ವಂ ಪೂರ್ವಂ ಚಾಚಕ್ಷ್ವ ಸಂಜಯ ।
ನಿಖಿಲೇನ ಮಹಾಬುದ್ಧೇ ಮಾಲ್ಯವಂತಂ ಚ ಪರ್ವತಮ್ ॥೫॥

ಧೃತರಾಷ್ಟ್ರ– ಎಲೈ ಸಂಜಯನೇ, ಮೇರುವಿನ ಉತ್ತರಪಾರ್ಶ್ವದಲ್ಲಿರುವ ಮತ್ತು ಪೂರ್ವದಲ್ಲಿರುವ ವರ್ಷಗಳನ್ನು ಸಮಗ್ರವಾಗಿ ಹೇಳು. ಎಲೈ ಮಹಾಬುದ್ಧಿಯುಳ್ಳವನೇ, ಮಾಲ್ಯವಂತ ಪರ್ವತವನ್ನೂ ವರ್ಣಿಸು.

ಸಂಜಯಃ

ದಕ್ಷಿಣೇನ ತು ನೀಲಸ್ಯ ಮೇರೋಃ ಪಾರ್ಶ್ವೇ ತಥೋತ್ತರೇ ।
ಉತ್ತರಾಃ ಕುರವೋ ರಾಜನ್ ಪುಣ್ಯಾಃ ಸಿದ್ಧನಿಷೇವಿತಾಃ ॥೬॥

ಸಂಜಯ– ಎಲೈ ರಾಜನೇ, ನೀಲಪರ್ವತದ ದಕ್ಷಿಣ ಭಾಗದಲ್ಲಿ ಮತ್ತು ಮೇರುವಿನ ಉತ್ತರಭಾಗದಲ್ಲಿ ಉತ್ತರಕುರು ಎಂಬ ವರ್ಷವಿದೆ. ಅದು ಪವಿತ್ರವಾದುದು ಮತ್ತು ಸಿದ್ಧರಿಂದ ಸೇವಿತವಾದುದು.

ತತ್ರ ವೃಕ್ಷಾ ಮಧುಫಲಾ ನಿತ್ಯಪುಷ್ಪಫಲೋಪಗಾಃ ।
ಪುಷ್ಪಾಣಿ ಚ ಸುಗಂಧೀನಿ ರಸವಂತಿ ಫಲಾನಿ ಚ ॥೭॥

ಅಲ್ಲಿ ವೃಕ್ಷಗಳು ಮಧುರವಾದ ಫಲಗಳನ್ನು ಕೊಡುತ್ತವೆ. ಯಾವಾಗಲೂ ಪುಷ್ಪ-ಫಲ ಧರಿತವಾಗಿರುತ್ತವೆ. ಪುಷ್ಪಗಳು ಸುಗಂಧಯುಕ್ತವಾಗಿರುತ್ತವೆ ಮತ್ತು ಫಲಗಳು ಒಳ್ಳೆಯ ರಸದಿಂದ ಕೂಡಿರುತ್ತವೆ.

ಸರ್ವಕಾಮಫಲಾಸ್ತತ್ರ ಕೇಚಿದ್ ವೃಕ್ಷಾ ಜನಾಧಿಪ ।
ಅಪರೇ ಕ್ಷೀರಿಣೋ ನಾಮ ವೃಕ್ಷಾಸ್ತತ್ರ ನರಾಧಿಪ ॥೬॥

ಎಲೈ ಜನಾಧಿಪನೇ, ಅಲ್ಲಿ ಕೆಲವು ವೃಕ್ಷಗಳು ಕೇಳಿದುದನ್ನೆಲ್ಲ ಫಲರೂಪವಾಗಿ ಕೊಡುತ್ತವೆ. ಎಲೈ ನರಾಧಿಪನೇ, ಅಲ್ಲಿ ಕ್ಷೀರಿಗಳು ಎಂಬ ಬೇರೆ ಮರಗಳಿವೆ.

ಯೇ ಕ್ಷರಂತಿ ಸದಾ ಕ್ಷೀರಂ ಷಡ್ರಸಂ ಹ್ಯಮೃತೋಪಮಮ್ ।
ಮಜ್ಜಾನಂ ಚ ಪ್ರಸೂಯಂತೇ ಫಲೇಷ್ವಾಭರಣಾನಿ ಚ ॥೯॥

ಅವು ಆರು ರಸಗಳಿಂದ ಕೂಡಿದ, ಅಮೃತಕ್ಕೆ ಸಮಾನವಾದ ಕ್ಷೀರವನ್ನು ಯಾವಾಗಲೂ ಸುರಿಸುತ್ತವೆ, ವಸ್ತ್ರಗಳನ್ನೂ ಕೊಡುತ್ತವೆ ಮತ್ತು ಆ ವೃಕ್ಷಗಳ ಫಲಗಳಲ್ಲಿ ಆಭರಣಗಳೂ ಇರುತ್ತವೆ.

ಸರ್ವಂ ಮಣಿಮಯೀ ಭೂಮಿಃ ಸೂಕ್ಷ್ಮಕಾಂಚನವಾಲುಕಾ ।
ಸರ್ವತ್ರ ಸುಖಸಂಸ್ಪರ್ಶಾ ನಿಷ್ಪಂಕಾ ಚ ಜನಾಧಿಪ ॥೧೦॥

ಎಲೈ ಜನಾಧಿಪನೇ, ಅಲ್ಲಿಯ ಭೂಮಿ ಎಲ್ಲವೂ ಮಣಿಮಯವಾಗಿದ್ದು, ಚಿನ್ನದ ಕಣಗಳ ರೂಪವಾದ ಮರಳಿನಿಂದ ಕೂಡಿರುತ್ತದೆ. ಎಲ್ಲ ಕಡೆಯಲ್ಲಿಯೂ ಸುಖಸ್ಪರ್ಶವುಳ್ಳದ್ದಾಗಿರುತ್ತದೆ ಮತ್ತು ಎಲ್ಲಿಯೂ ಕಶ್ಮಲವಿರುವುದಿಲ್ಲ.

ಮಣಿರತ್ನನಿಭಂ ರಮ್ಯಂ ವಜ್ರವೈಡೂರ್ಯಸನ್ನಿಭಮ್ ।
ಭೂಭಾಗೋ ದೃಶ್ಯತೇ ತತ್ರ ಪದ್ಮರಾಗಸಮಪ್ರಭಮ್ ॥೧೧॥

ಅಲ್ಲಿ ಕೆಲವು ಕಡೆ ಮಣಿರತ್ನಮಯವಾದ, ಮನೋಹರವಾದ, ಕೆಲವು ಕಡೆ ವಜ್ರವೈಡೂರ್ಯ ಕಾಂತಿಯುಳ್ಳ ಅಥವಾ ಕೆಲವು ಕಡೆ ಪದ್ಮರಾಗದ ಕಾಂತಿಯುಳ್ಳ ಭೂಪ್ರದೇಶಗಳು ಕಂಡುಬರುತ್ತವೆ.

ದೇವಲೋಕಚ್ಯುತಾಃ ಸರ್ವೇ ಜಾಯಂತೇ ತತ್ರ ಮಾನವಾಃ ।
ತುಲ್ಯರೂಪಗುಣೋಪೇತಾಃ ಸಮೇಷು ವಿಷಮೇಷು ಚ ॥೧೨॥

ದೇವಲೋಕದಿಂದ ಚ್ಯುತರಾದ ಎಲ್ಲ ಮನುಷ್ಯರೂ ಅಲ್ಲಿ ಜನಿಸುತ್ತಾರೆ. ಸಮೃದ್ಧಿ ಇರಲಿ ಅಥವಾ ಇಲ್ಲದಿರಲಿ, ಎಲ್ಲರೂ ಸಮಾನರೂಪಗಳಿಂದ ಕೂಡಿರುತ್ತಾರೆ.

ಮಿಥುನಾನಿ ಚ ಜಾಯಂತೇ ಸ್ತ್ರಿಯಶ್ಚಾಪ್ಸರಸೋಪಮಾಃ ।
ತೇಷಾಂ ತೇ ಕ್ಷೀರಿಣಾಂ ಕ್ಷೀರಂ ಪಿಬಂತ್ಯಮೃತಸನ್ನಿಭಮ್ ॥೧೩॥

ಅಲ್ಲಿ ಅವಳಿ ಮಕ್ಕಳು ಜನಿಸುತ್ತವೆ. ಸ್ತ್ರೀಯರು ಅಪ್ಸರೆಯರಂತೆ ಇರುತ್ತಾರೆ. ಅವರು ಆ ಕ್ಷೀರಿ ವೃಕ್ಷಗಳ ಅಮೃತಕ್ಕೆ ಸಮಾನವಾದ ಕ್ಷೀರವನ್ನು ಪಾನ ಮಾಡುತ್ತಾರೆ.

ಮಿಥುನಂ ಜಾಯಮಾನಂ ವೈ ಸಮಂ ತಚ್ಚ ಪ್ರವರ್ಧತೇ ।
ತುಲ್ಯರೂಪಗುಣೋಪೇತಂ ಸಮವೇಷಂ ತಥೈವ ಚ ।
ಏಕೈಕಮನುರಕ್ತಂ ಚ ಚಕ್ರವಾಕಸಮಂ ವಿಭೋ ॥೧೪॥

ಹುಟ್ಟುವ ಅವಳಿ ಮಕ್ಕಳು ಒಂದೇ ರೀತಿಯಾಗಿ ಬೆಳೆಯುತ್ತಾರೆ. ಸಮಾನವಾದ ಗುಣ-ರೂಪಗಳನ್ನೂ, ಸಮಾನವಾದ ವೇಷವನ್ನೂ ಹೊಂದಿರುತ್ತಾರೆ. ಎಲೈ ವಿಭುವೇ, ಅವರು ಚಕ್ರವಾಕ ಪಕ್ಷಿಗಳಂತೆ ಒಬ್ಬರಲ್ಲೊಬ್ಬರು ಪ್ರೀತಿಯನ್ನು ಹೊಂದಿರುತ್ತಾರೆ.

ನಿರಾಮಯಾ ವೀತಶೋಕಾ ನಿತ್ಯಂ ಮುದಿತಮಾನಸಾಃ ।
ದಶ ವರ್ಷಸಹಸ್ರಾಣಿ ದಶ ವರ್ಷಶತಾನಿ ಚ ।
ಜೀವಂತಿ ತೇ ಮಹಾರಾಜ ನ ಚಾನ್ಯೋನ್ಯಂ ಜಹತ್ಯುತ ॥೧೫॥

ಜನರಿಗೆ ಯಾವ ರೋಗಗಳಾಗಲೀ ಅಥವಾ ಶೋಕವಾಗಲೀ ಇರುವುದಿಲ್ಲ. ನಿತ್ಯವೂ ಸಂತೋಷಗೊಂಡ ಮನಸ್ಸನ್ನು ಹೊಂದಿರುತ್ತಾರೆ. ಎಲೈ ಮಹಾರಾಜನೇ, ಅವರು ಹನ್ನೊಂದು ಸಾವಿರ ವರ್ಷಗಳ ಕಾಲ ಜೀವಿಸುತ್ತಾರೆ ಮತ್ತು ಒಬ್ಬರನ್ನೊಬ್ಬರು ಬಿಡುವುದಿಲ್ಲ.

ಭಾರುಂಡಾ ನಾಮ ಶಕುನಾಸ್ತೀಕ್ಷ್ಣತುಂಡಾ ಮಹಾಬಲಾಃ ।
ತೇ ನಿರ್ಹರಂತಿ ಹಿ ಮೃತಾನ್ ದರೀಷು ಪ್ರಕ್ಷಿಪಂತಿ ಚ ॥೧೬॥

ಭಾರುಂಡ ಎಂಬ ಹೆಸರಿನ ಮಹಾಬಲಿಷ್ಠವಾದ ಮತ್ತು ತೀಕ್ಷ್ಣವಾದ ಕೊಕ್ಕುಳ್ಳ ಪಕ್ಷಿಗಳು ಅಲ್ಲಿ ಮೃತರನ್ನು ಎತ್ತಿಕೊಂಡು ಹೋಗಿ ಗುಹೆಗಳಲ್ಲಿ ಎಸೆಯುತ್ತವೆ.

ಉತ್ತರಾಃ ಕುರವೋ ರಾಜನ್ ವ್ಯಾಖ್ಯಾತಾಸ್ತೇ ಸಮಾಸತಃ ।
ಮೇರೋಃ ಪಾರ್ಶ್ವಮಹಂ ಪೂರ್ವಂ ವಕ್ಷ್ಯಾಮ್ಯಥ ಯಥಾತಥಮ್ ॥

ಎಲೈ ರಾಜನೇ, ನಿನಗೆ ಉತ್ತರ ಕುರುವರ್ಷವನ್ನು ಸಂಕ್ಷೇಪವಾಗಿ ವರ್ಣಿಸಿದ್ದೇನೆ. ಮೇರುವಿನ ಪೂರ್ವದಲ್ಲಿರುವ ವರ್ಷವನ್ನೂ ಸಹ ಯಥಾರ್ಥವಾಗಿ ವರ್ಣಿಸುವೆನು.

ತಸ್ಯ ಮೂರ್ಧ್ನಾಭಿಷೇಕಸ್ತು ಭದ್ರಾಶ್ವಸ್ಯ ವಿಶಾಂಪತೇ ।
ಭದ್ರಸಾಲವನಂ ಯತ್ರ ಕಾಲಾಮ್ರಶ್ಚ ಮಹಾದ್ರುಮಃ ॥೧೮॥

ಎಲೈ ರಾಜನೇ, ಆ ವರ್ಷದ ಮೂರ್ಧನ್ಯ ಪ್ರಾಯವಾದುದು ಭದ್ರಸಾಲ ಎಂಬ ಒಂದು ಉದ್ಯಾನ. ಅಲ್ಲಿ ಕಾಲಾಮ್ರ ಎಂಬ ಮಹಾವೃಕ್ಷವೂ ಇದೆ.

ಕಾಲಾಮ್ರಶ್ಚ ಮಹಾರಾಜ ನಿತ್ಯಪುಷ್ಪಫಲಃ ಶುಭಃ ।
ದ್ವೀಪಶ್ಚ ಯೋಜನೋತ್ಸೇಧಃ ಸಿದ್ಧಚಾರಣಸೇವಿತಃ ॥೧೯॥

ಎಲೈ ಮಹಾರಾಜನೇ, ಕಾಲಾಮ್ರ ಎಂಬ ವೃಕ್ಷವು ಶುಭಪ್ರದವಾಗಿದ್ದು, ಯಾವಾಗಲೂ ಪುಷ್ಪ-ಫಲಯುಕ್ತವಾಗಿರುತ್ತದೆ. ಒಂದು ಯೋಜನ ಎತ್ತರವಾದ ಈ ದ್ವೀಪವು ಸಿದ್ಧ-ಚಾರಣರಿಂದ ಸೇವಿತವಾಗಿರುತ್ತದೆ (ವರ್ಷಗಳನ್ನು ದ್ವೀಪಗಳೆಂದು ಕರೆಯುತ್ತಾರೆ).

ತತ್ರ ತೇ ಪುರುಷಾಃ ಶ್ವೇತಾಸ್ತೇಜೋಯುಕ್ತಾ ಮಹಾಬಲಾಃ ।
ಸ್ತ್ರಿಯಃ ಕುಮುದವರ್ಣಾಶ್ಚ ಸುಂದರ್ಯಃ ಪ್ರಿಯದರ್ಶನಾಃ ॥೨೦॥

ಅಲ್ಲಿ ಇರುವ ಪುರುಷರು ಶ್ವೇತವರ್ಣದಿಂದ ಕೂಡಿದ್ದು, ಮಹಾಬಲಿಷ್ಠರೂ ಮತ್ತು ತೇಜೋಯುಕ್ತರೂ ಆಗಿರುತ್ತಾರೆ. ಸ್ತ್ರೀಯರು ನೈದಿಲೆಯ ವರ್ಣದವರಾಗಿದ್ದು, ಸುಂದರಿಯರೂ, ನೋಡಲು ಮನೋಹರರೂ ಆಗಿರುತ್ತಾರೆ.

ಚಂದ್ರಪ್ರಭಾಶ್ಚಂದ್ರವರ್ಣಾಃ ಪೂರ್ಣಚಂದ್ರನಿಭಾನನಾಃ ।
ಚಂದ್ರಶೀತಲಗಾತ್ರ್ಯಶ್ಚ ನೃತ್ತಗೀತವಿಶಾರದಾಃ ॥೨೧॥

ಕೆಲವು ಸ್ತ್ರೀಯರು ಚಂದ್ರನ ಕಾಂತಿಯನ್ನು ಹೊಂದಿ, ಚಂದ್ರನ ಬಣ್ಣವನ್ನೂ ಹೊಂದಿ, ಪೂರ್ಣಚಂದ್ರನನ್ನು ಹೋಲುವ ಮುಖವುಳ್ಳವರಾಗಿರುತ್ತಾರೆ. ಅವರ ಶರೀರದ ಸ್ಪರ್ಶವು ಚಂದ್ರನಂತೆ ಶೀತಲವಾಗಿರುತ್ತದೆ. ಅವರು ನೃತ್ಯ-ಗಾನಗಳಲ್ಲಿ ವಿಶಾರದರಾಗಿರುತ್ತಾರೆ.

ದಶ ವರ್ಷಸಹಸ್ರಾಣಿ ತತ್ರಾಯುರ್ಭರತರ್ಷಭ ।
ಕಾಲಾಮ್ರರಸಪೀತಾಸ್ತೇ ನಿತ್ಯಂ ಸಂಸ್ಥಿತಯೌವನಾಃ ॥೨೨॥

ಎಲೈ ಭರತಶ್ರೇಷ್ಠನೇ, ಅಲ್ಲಿ ಇರುವವರಿಗೆ ಹತ್ತುಸಹಸ್ರ ವರ್ಷಗಳ ಆಯುಸ್ಸು ಇರುತ್ತದೆ. ಕಾಲಾಮ್ರವೃಕ್ಷರಸವನ್ನು ಪಾನಮಾಡಿ, ಅವರು ನಿತ್ಯವೂ ಯೌವನಭರಿತರಾಗಿರುತ್ತಾರೆ.

ದಕ್ಷಿಣೇನ ತು ನೀಲಸ್ಯ ನಿಷಧಸ್ಯೋತ್ತರೇಣ ತು ।
ಸುದರ್ಶನೋ ನಾಮ ಮಹಾನ್ ಜಂಬೂವೃಕ್ಷಃ ಸನಾತನಃ ॥೨೩॥

ನೀಲ ಪರ್ವತದ ದಕ್ಷಿಣದಲ್ಲಿ ಮತ್ತು ನಿಷಧ ಪರ್ವತದ ಉತ್ತರದಲ್ಲಿ ಸುದರ್ಶನ ಎಂಬ ಹೆಸರಿನ ಪುರಾತನವಾದ ಒಂದು ಜಂಬೂವೃಕ್ಷವಿದೆ.

ಸರ್ವಕಾಮಫಲಃ ಪುಣ್ಯಃ ಸಿದ್ಧಚಾರಣಸೇವಿತಃ ।
ತಸ್ಯ ನಾಮ್ನಾ ಸಮಾಖ್ಯಾತೋ ಜಂಬೂದ್ವೀಪಃ ಸನಾತನಃ ॥೨೪॥

ಆ ವೃಕ್ಷವು ಎಲ್ಲ ಕಾಮಗಳನ್ನು ಕೊಡುವಂಥದ್ದು ಫಲಭರಿತವಾಗಿದ್ದು, ಪುಣ್ಯಪ್ರದವೂ, ಸಿದ್ಧ-ಚಾರಣಸೇವಿತವೂ ಆಗಿದೆ. ಪುರಾತನವಾದ ಜಂಬೂದ್ವೀಪವು ಆ ವೃಕ್ಷದ ಹೆಸರಿನಿಂದಲೇ ಪ್ರಸಿದ್ಧಿಯನ್ನು ಪಡೆದಿದೆ.

ಯೋಜನಾನಾಂ ಸಹಸ್ರಂ ಚ ಶತಂ ಚ ಭರತರ್ಷಭ ।
ಉತ್ಸೇಧೋ ವೃಕ್ಷರಾಜಸ್ಯ ದಿವಸ್ಪೃಙ್ ಮನುಜೇಶ್ವರ ॥೨೫॥

ಎಲೈ ಭರತಶ್ರೇಷ್ಠನೇ, ಮನುಜೇಶ್ವರನೇ, ಆಕಾಶವನ್ನು ಮುಟ್ಟುವಂತಿರುವ ಆ ವೃಕ್ಷರಾಜವು ಹನ್ನೊಂದುನೂರು ಯೋಜನಗಳಷ್ಟು ಎತ್ತರವಿದೆ.

ಅರತ್ನೀನಾಂ ಸಹಸ್ರಂ ಚ ಶತಾನಿ ದಶ ಪಂಚ ಚ ।
ಪರಿಣಾಹಸ್ತು ವೃಕ್ಷಸ್ಯ ಫಲಾನಾಂ ರಸಭೇದಿನಾಮ್ ॥೨೬॥

ಆ ವೃಕ್ಷದ ರಸ ವಿಶೇಷವುಳ್ಳ ಮರಗಳ ಸುತ್ತಳತೆಯು ನೂರು ಅಥವಾ ಹತ್ತು ಅಥವಾ ಐದು (ಅಥವಾ ಹದಿನೈದು ನೂರು) ಅರತ್ನಿಗಳಷ್ಟು (ಮೊಳದ ಪರಿಮಾಣವಷ್ಟು) ಇರುತ್ತದೆ.

ಪತಮಾನಾನಿ ತಾನ್ಯುರ್ವ್ಯಾಂ ಕುರ್ವಂತಿ ವಿಪುಲಂ ಸ್ವನಮ್ ।
ಮುಂಚಂತಿ ಚ ರಸಂ ರಾಜಂಸ್ತಸ್ಮಿನ್ ರಜತಸನ್ನಿಭಮ್ ॥೨೭॥

ಅವು ಭೂಮಿಯ ಮೇಲೆ ಬೀಳುತ್ತಾ ದೊಡ್ಡ ಶಬ್ದವನ್ನು ಮಾಡುತ್ತವೆ. ಎಲೈ ರಾಜನೇ, ಆ ಭೂಮಿಯಲ್ಲಿ ಅವು ಬೆಳ್ಳಿಯ ಕಾಂತಿಯುಳ್ಳ ರಸವನ್ನು ಸ್ರವಿಸುತ್ತವೆ.

ತಸ್ಯಾಃ ಜಂಬ್ವಾಃ ಫಲರಸೋ ನದೀ ಭೂತ್ವಾ ಜನಾಧಿಪ ।
ಮೇರುಂ ಪ್ರದಕ್ಷಿಣಂ ಕೃತ್ವಾ ಸಂಪ್ರಯಾತ್ಯುತ್ತರಾನ್ ಕುರೂನ್ ॥೨೮॥

ಎಲೈ ಜನಾಧಿಪನೇ, ಆ ಜಂಬೂಫಲದ ರಸವು ನದಿಯಾಗಿ ಹರಿದು ಮೇರುವಿಗೆ ಪ್ರದಕ್ಷಿಣಾಕಾರವಾಗಿ ಬಂದು ಉತ್ತರಕುರುವರ್ಷವನ್ನು ಸೇರುತ್ತದೆ.

ಪಿಬಂತಿ ತದ್ರಸಂ ಹೃಷ್ಟಾ ಜನಾ ನಿತ್ಯಂ ಜನಾಧಿಪ ।
ತಸ್ಮಿನ್ ಫಲರಸೇ ಪೀತೇ ನ ಜರಾ ಬಾಧತೇ ಚ ತಾನ್ ॥೨೯॥

ಎಲೈ ಜನಾಧಿಪನೇ, ಅಲ್ಲಿಯ ಜನರು ನಿತ್ಯವೂ ಸಂತೋಷದಿಂದ ಆ ಫಲದ ರಸವನ್ನು ಪಾನ ಮಾಡುತ್ತಾರೆ. ಆ ಫಲರಸವನ್ನು ಪಾನ ಮಾಡುವುದರಿಂದ ಅವರನ್ನು ಮುಪ್ಪು ಬಾಧಿಸುವುದಿಲ್ಲ.

ತತ್ರ ಜಾಂಬೂನದಂ ನಾಮ ಕನಕಂ ದೇವಭೂಷಣಮ್ ।
ತರುಣಾದಿತ್ಯವರ್ಣಾಶ್ಚ ಜಾಯಂತೇ ತತ್ರ ಮಾನವಾಃ ॥೩೦॥

ಆ ಜಂಬೂ ಫಲರಸಗಳು ಅಲ್ಲಿನ ಮಣ್ಣಿನ ಜೊತೆಯಲ್ಲಿ ಸೇರಿ ದೇವತೆಗಳಿಗೆ ಅಲಂಕಾರವಾಗುವ ಕನಕವೆಂಬ ನಿರ್ಮಲವಿಶೇಷವಾಗುತ್ತದೆ. ಅಲ್ಲಿಯ ಮಾನವರು ಉದಯಿಸುವ ಸೂರ್ಯನ ಬಣ್ಣವನ್ನು ಹೊಂದಿ ಜನಿಸುತ್ತಾರೆ.

ತಥಾ ಮಾಲ್ಯವತಃ ಶೃಂಗೇ ದೀಪ್ಯತೇ ತತ್ರ ಹವ್ಯರಾಟ್ ।
ನಾಮ್ನಾ ಸಂವರ್ತಕೋ ನಾಮ ಕಾಲಾಗ್ನಿರ್ಭರತರ್ಷಭ ॥೩೧॥

ಅದರಂತೆ ಮಾಲ್ಯವಾನ್ ಪರ್ವತದ ಶಿಖರದಲ್ಲಿ ಅಗ್ನಿಯು ಯಾವಾಗಲೂ ಬೆಳಗುತ್ತಾನೆ. ಎಲೈ ಭರತರ್ಷಭನೇ, ಕಾಲಾಗ್ನಿಯಾದ ಅವನಿಗೆ ಸಂವರ್ತಕ ಎಂದು ಹೆಸರು.

ತಸ್ಯ ಮಾಲ್ಯವತಃ ಶೃಂಗೇ ಪೂರ್ವೇ ಪೂರ್ವೇ ತು ಗಂಡಕಾ ।
ಯೋಜನಾನಾಂ ಸಹಸ್ರಾಣಿ ಪಂಚಾಶನ್ಮಾಲ್ಯವಾನ್ ಸ್ಥಿತಃ ॥೩೨॥

ಮಾಲ್ಯವಾನ್ ಪರ್ವತದ ಶಿಖರದಿಂದ ಪೂರ್ವ ಪೂರ್ವಾಭಿಮುಖವಾಗಿ ಗಂಡಕಾ ಎಂಬ ನದಿಯು ಹರಿಯುತ್ತದೆ. ಮಾಲ್ಯವಾನ್ ಪರ್ವತದ ವಿಸ್ತಾರವು ಏಏತ್ತು ಸಾವಿರ ಯೋಜನಗಳು.

ಮಹಾರಜತಸಂಕಾಶಾ ಜಾಯಂತೇ ತತ್ರ ಮಾನವಾಃ ।
ಬ್ರಹ್ಮಲೋಕಾಚ್ಚ್ಯುತಾಃ ಸರ್ವೇ ಸರ್ವೇ ಚ ಬ್ರಹ್ಮವಾದಿನಃ ॥೩೩॥

ಅಲ್ಲಿ ಬ್ರಹ್ಮಲೋಕದಿಂದ ಚ್ಯುತರಾದ ಮಾನವರು ಮಹಾರಜತದ ಬಣ್ಣವನ್ನು ಹೊಂದಿ ಜನಿಸುತ್ತಾರೆ. ಎಲ್ಲರೂ ಬ್ರಹ್ಮವಾದಿಗಳಾಗಿರುತ್ತಾರೆ.

ತಪಸ್ತು ತಪ್ಯಮಾನಾಸ್ತೇ ಭವಂತಿ ಹ್ಯೂರ್ಧ್ವರೇತಸಃ ।
ರಕ್ಷಣಾರ್ಥಂ ತು ಭೂತಾನಾಂ ಪ್ರವಿಶಂತಿ ದಿವಾಕರಮ್ ॥೩೪॥

ಅವರು ಊರ್ಧ್ವರೇತಸ್ಕರಾಗಿ ಸರ್ವಪ್ರಾಣಿಗಳ ಕ್ಷೇಮಕ್ಕಾಗಿ ತಪಸ್ಸನ್ನು ಆಚರಿಸುತ್ತಾರೆ. ಅನಂತರ ಸೂರ್ಯನನ್ನು ಪ್ರವೇಶಿಸುತ್ತಾರೆ.

ಷಷ್ಟಿಸ್ತಾನಿ ಸಹಸ್ರಾಣಿ ಷಷ್ಟಿರೇವ ಶತಾನಿ ಚ ।
ಅರುಣಸ್ಯಾಗ್ರತೋ ಯಾಂತಿ ಪರಿವಾರ್ಯ ದಿವಾಕರಮ್ ॥೩೫॥

ಅವರು ಅರವತ್ತಾರು ಸಾವಿರ ಸಂಖ್ಯೆಯ ವಾಲಖಿಲ್ಯರೆಂಬ ಋಷಿಗಳು. ಅವರು ಅರುಣನ ಮುಂಭಾಗದಲ್ಲಿ ಸೂರ್ಯನನ್ನು ಸುತ್ತುವರಿದು ತಿರುಗುತ್ತಾರೆ.

ಅರತ್ನೀನಾಂ ಸಹಸ್ರಂ ಚ ಶತಾನಿ ದಶ ಪಂಚ ಚ ।
ಪರಿಣಾಹಸ್ತು ವೃಕ್ಷಸ್ಯ ಫಲಾನಾಂ ರಸಭೇದಿನಾಮ್ ॥೨೬॥

ಆ ವೃಕ್ಷದ ರಸ ವಿಶೇಷವುಳ್ಳ ಮರಗಳ ಸುತ್ತಳತೆಯು ನೂರು ಅಥವಾ ಹತ್ತು ಅಥವಾ ಐದು (ಅಥವಾ ಹದಿನೈದು ನೂರು) ಅರತ್ನಿಗಳಷ್ಟು (ಮೊಳದ ಪರಿಮಾಣದಷ್ಟು) ಇರುತ್ತದೆ.

ಪತಮಾನಾನಿ ತಾನ್ಯುರ್ವ್ಯಾಂ ಕುರ್ವಂತಿ ವಿಪುಲಂ ಸ್ವನಮ್ ।
ಮುಂಚಂತಿ ಚ ರಸಂ ರಾಜಂಸ್ತಸ್ಮಿನ್ ರಜತಸನ್ನಿಭಮ್ ॥೨೭॥

ಅವು ಭೂಮಿಯ ಮೇಲೆ ಬೀಳುತ್ತಾ ದೊಡ್ಡ ಶಬ್ದವನ್ನು ಮಾಡುತ್ತವೆ. ಎಲೈ ರಾಜನೇ, ಆ ಭೂಮಿಯಲ್ಲಿ ಅವು ಬೆಳ್ಳಿಯ ಕಾಂತಿಯುಳ್ಳ ರಸವನ್ನು ಸ್ರವಿಸುತ್ತವೆ.

ತಸ್ಯಾಃ ಜಂಬ್ವಾಃ ಫಲರಸೋ ನದೀ ಭೂತ್ವಾ ಜನಾಧಿಪ ।
ಮೇರುಂ ಪ್ರದಕ್ಷಿಣಂ ಕೃತ್ವಾ ಸಂಪ್ರಯಾತ್ಯುತ್ತರಾನ್ ಕುರೂನ್ ॥೨೮॥

ಎಲೈ ಜನಾಧಿಪನೇ, ಆ ಜಂಬೂಫಲದ ರಸವು ನದಿಯಾಗಿ ಹರಿದು ಮೇರುವಿಗೆ ಪ್ರದಕ್ಷಿಣಾಕಾರವಾಗಿ ಬಂದು ಉತ್ತರಕುರುವರ್ಷವನ್ನು ಸೇರುತ್ತದೆ.

ಪಿಬಂತಿ ತದ್ರಸಂ ಹೃಷ್ಟಾ ಜನಾ ನಿತ್ಯಂ ಜನಾಧಿಪ ।
ತಸ್ಮಿನ್ ಫಲರಸೇ ಪೀತೇ ನ ಜರಾ ಬಾಧತೇ ಚ ತಾನ್ ॥೨೯॥

ಎಲೈ ಜನಾಧಿಪನೇ, ಅಲ್ಲಿಯ ಜನರು ನಿತ್ಯವೂ ಸಂತೋಷದಿಂದ ಆ ಫಲದ ರಸವನ್ನು ಪಾನ ಮಾಡುತ್ತಾರೆ. ಆ ಫಲರಸವನ್ನು ಪಾನ ಮಾಡುವುದರಿಂದ ಅವರನ್ನು ಮುಪ್ಪು ಬಾಧಿಸುವುದಿಲ್ಲ.

ತತ್ರ ಜಾಂಬೂನದಂ ನಾಮ ಕನಕಂ ದೇವಭೂಷಣಮ್ ।
ತರುಣಾದಿತ್ಯವರ್ಣಾಶ್ಚ ಜಾಯಂತೇ ತತ್ರ ಮಾನವಾಃ ॥೩೦॥

ಆ ಜಂಬೂ ಫಲರಸಗಳು ಅಲ್ಲಿನ ಮಣ್ಣಿನ ಜೊತೆಯಲ್ಲಿ ಸೇರಿ ದೇವತೆಗಳಿಗೆ ಅಲಂಕಾರವಾಗುವ ಕನಕವೆಂಬ ನಘರ್ಣವಿಶೇಷವಾಗುತ್ತದೆ. ಅಲ್ಲಿಯ ಮಾನವರು ಉದಯಿಸುವ ಸೂರ್ಯನ ಬಣ್ಣವನ್ನು ಹೊಂದಿ ಜನಿಸುತ್ತಾರೆ.

ತಥಾ ಮಾಲ್ಯವತಃ ಶೃಂಗೇ ದೀಪ್ಯತೇ ತತ್ರ ಹವ್ಯವಾಟ್ ।
ನಾಮ್ನಾ ಸಂವರ್ತಕೋ ನಾಮ ಕಾಲಾಗ್ನಿರ್ಭರತರ್ಷಭ ॥೩೧॥

ಅದರಂತೆ ಮಾಲ್ಯವಾನ್ ಪರ್ವತದ ಶಿಖರದಲ್ಲಿ ಅಗ್ನಿಯು ಯಾವಾಗಲೂ ಬೆಳಗುತ್ತಾನೆ. ಎಲೈ ಭರತರ್ಷಭನೇ, ಕಾಲಾಗ್ನಿಯಾದ ಅವನಿಗೆ ಸಂವರ್ತಕ ಎಂದು ಹೆಸರು.

ತಸ್ಯ ಮಾಲ್ಯವತಃ ಶೃಂಗೇ ಪೂರ್ವೇ ಪೂರ್ವೇ ತು ಗಂಡಕಾ ।
ಯೋಜನಾನಾಂ ಸಹಸ್ರಾಣಿ ಪಂಚಾಶನ್ಮಾಲ್ಯವಾನ್ ಸ್ಥಿತಃ ॥೩೨॥

ಮಾಲ್ಯವಾನ್ ಪರ್ವತದ ಶಿಖರದಿಂದ ಪೂರ್ವ ಪೂರ್ವಾಭಿಮುಖವಾಗಿ ಗಂಡಕಾ ಎಂಬ ನದಿಯು ಹರಿಯುತ್ತದೆ. ಮಾಲ್ಯವಾನ್ ಪರ್ವತದ ವಿಸ್ತಾರವು ಐವತ್ತು ಸಾವಿರ ಯೋಜನಗಳು.

ಮಹಾರಜತಸಂಕಾಶಾ ಜಾಯಂತೇ ತತ್ರ ಮಾನವಾಃ ।
ಬ್ರಹ್ಮಲೋಕಾಚ್ಚ್ಯುತಾಃ ಸರ್ವೇ ಸರ್ವೇ ಚ ಬ್ರಹ್ಮವಾದಿನಃ ॥೩೩॥

ಅಲ್ಲಿ ಬ್ರಹ್ಮಲೋಕದಿಂದ ಚ್ಯುತರಾದ ಮಾನವರು ಮಹಾರಜತದ ಬಣ್ಣವನ್ನು ಹೊಂದಿ ಜನಿಸುತ್ತಾರೆ. ಎಲ್ಲರೂ ಬ್ರಹ್ಮವಾದಿಗಳಾಗಿರುತ್ತಾರೆ.

ತಪಸ್ತು ತಪ್ಯಮಾನಾಸ್ತೇ ಭವಂತಿ ಹ್ಯೂರ್ಧ್ವರೇತಸಃ ।
ರಕ್ಷಣಾರ್ಥಂ ತು ಭೂತಾನಾಂ ಪ್ರವಿಶಂತಿ ದಿವಾಕರಮ್ ॥೩೪॥

ಅವರು ಊರ್ಧ್ವರೇತಸ್ಕರಾಗಿ ಸರ್ವಪ್ರಾಣಿಗಳ ಕ್ಷೇಮಕ್ಕಾಗಿ ತಪಸ್ಸನ್ನು ಆಚರಿಸುತ್ತಾರೆ. ಆನಂತರ ಸೂರ್ಯನನ್ನು ಪ್ರವೇಶಿಸುತ್ತಾರೆ.

ಷಷ್ಟಿಸ್ತಾನಿ ಸಹಸ್ರಾಣಿ ಷಷ್ಟಿರೇವ ಶತಾನಿ ಚ ।
ಅರುಣಸ್ಯಾಗ್ರತೋ ಯಾಂತಿ ಪರಿವಾರ್ಯ ದಿವಾಕರಮ್ ॥೩೫॥

ಅವರು ಆರವತ್ತಾರು ಸಾವಿರ ಸಂಖ್ಯೆಯ ವಾಲಖಿಲ್ಯರೆಂಬ ಋಷಿಗಳು. ಅವರು ಅರುಣನ ಮುಂಭಾಗದಲ್ಲಿ ಸೂರ್ಯನನ್ನು ಸುತ್ತುವರಿದು ತಿರುಗುತ್ತಾರೆ.

ಷಷ್ಟಿಂ ವರ್ಷಸಹಸ್ರಾಣಿ ಷಷ್ಟಿಮೇವ ಶತಾನಿ ಚ ।
ಆದಿತ್ಯತಾಪಸಪ್ತಾಸ್ತೇ ವಿಶಂತಿ ಶಶಿಮಂಡಲಮ್ ॥೩೬॥

ಅವರು ಅರವತ್ತಾರು ಸಾವಿರ ವರ್ಷಗಳ ಕಾಲ ಸೂರ್ಯನ ತಾಪದಿಂದ ಬಳಲಿದವರಾಗಿ ಅನಂತರ ಚಂದ್ರಮಂಡಲವನ್ನು ಪ್ರವೇಶಿಸುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಅಷ್ಟಮೋಽಧ್ಯಾಯಃ ॥

॥ ಇತಿ ಜಂಬೂಖಂಡನಿರ್ಮಾಣಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಮೇರುವಿನ ಉತ್ತರದಲ್ಲಿರುವ ರಮಣಕ, ಹಿರಣ್ಮಯ ಮತ್ತು ಐರಾವತ ವರ್ಷಗಳ ವರ್ಣನೆ.

ಧೃತರಾಷ್ಟ್ರಃ

ವರ್ಷಾಣಾಂ ಚೈವ ನಾಮಾನಿ ಪರ್ವತಾನಾಂ ಚ ಸಂಜಯ ।
ಆಚಕ್ಷ್ವ ಮೇ ಯಥಾತತ್ತ್ವಂ ಯೇ ಚ ಪರ್ವತವಾಸಿನಃ ॥೧॥

ಧೃತರಾಷ್ಟ್ರ– ಎಲೈ ಸಂಜಯನೇ, ನನಗೆ ವರ್ಷಗಳ ನಾಮಗಳನ್ನೂ, ಅಲ್ಲಿರುವ ಪರ್ವತಗಳನ್ನೂ, ಆ ಪರ್ವತದಲ್ಲಿ ವಾಸಿಸುವ ಜನರನ್ನೂ ಯಥಾರ್ಥವಾಗಿ ತಿಳಿಸುವವನಾಗು.

ಸಂಜಯಃ

ದಕ್ಷಿಣೇನ ತು ಶ್ವೇತಸ್ಯ ನೀಲಸ್ಯೈವೋತ್ತರೇಣ ತು ।
ವರ್ಷಂ ರಮಣಕಂ ನಾಮ ಜಾಯಂತೇ ತತ್ರ ಮಾನವಾಃ ॥೨॥

ಸಂಜಯ– ಶ್ವೇತಪರ್ವತ ದಕ್ಷಿಣದಲ್ಲಿ ಮತ್ತು ನೀಲಪರ್ವತದ ಉತ್ತರದಲ್ಲಿ ರಮಣಕ ಎಂಬ ವರ್ಷವಿದೆ. ಅಲ್ಲಿ ಮಾನವರು ಜನಿಸುತ್ತಾರೆ.

ಶುಕ್ಲಾಭಿಜನಸಂಪನ್ನಾಃ ಸರ್ವೇ ಸುಪ್ರಿಯದರ್ಶನಾಃ ।
ರತಿಪ್ರಧಾನಾಶ್ಚ ತಥಾ ಜಾಯಂತೇ ತತ್ರ ಮಾನವಾಃ ॥೩॥

ಶುದ್ಧವಾದ ಕುಲದಲ್ಲಿ ಜನ್ಮವನ್ನು ಹೊಂದಿದವರಾಗಿ ಅವರೆಲ್ಲರೂ ನೋಡಲು ಮನೋಹರರಾಗಿರುತ್ತಾರೆ. ಅಲ್ಲಿ ಜನಿಸುವ ಮಾನವರು ಸುಖಪ್ರಧಾನರಾಗಿರುತ್ತಾರೆ.

ದಶ ವರ್ಷಸಹಸ್ರಾಣಿ ಶತಾನಿ ದಶ ಪಂಚ ಚ ।
ಜೀವಂತಿ ತೇ ಮಹಾರಾಜ ನಿತ್ಯಂ ಮುದಿತಮಾನಸಾಃ ॥೪॥

ಎಲೈ ಮಹಾರಾಜನೇ, ಅವರು ಸಂತೋಷಗೊಂಡ ಮನಸ್ಸನ್ನು ಉಳ್ಳವರಾಗಿ, ಹನ್ನೊಂದುಸಾವಿರದ ಐದುನೂರು ವರ್ಷಗಳ ಕಾಲ ಜೀವಿಸುತ್ತಾರೆ.

ದಕ್ಷಿಣೇ ಶೃಂಗಿಣಶ್ಚೈವ ಶ್ವೇತಸ್ಯಾಥೋತ್ತರೇಣ ಚ ।
ವರ್ಷಂ ಹೈರಣ್ವತಂ ನಾಮ ಯತ್ರ ಹೈರಣ್ವತೀ ನದೀ ॥೫॥

ಶೃಂಗವಾನ್ ಪರ್ವತದ ದಕ್ಷಿಣದಲ್ಲಿ ಮತ್ತು ಶ್ವೇತಪರ್ವತದ ಉತ್ತರದಲ್ಲಿ ಹೈರಣ್ವತ ಎಂಬ ವರ್ಷವಿದೆ. ಅಲ್ಲಿ ಹೈರಣ್ವತೀ ಎಂಬ ನದಿ ಇದೆ.

ಯಕ್ಷಾನುಗಾ ಮಹಾರಾಜ ಧನ್ವಿನಃ ಪ್ರಿಯದರ್ಶನಾಃ ।
ಮಹಾಬಲಾಸ್ತತ್ರ ಸದಾ ರಾಜನ್ ಮುದಿತಮಾನಸಾಃ ॥೬॥

ಎಲೈ ಮಹಾರಾಜನೇ, ಅಲ್ಲಿ ಕುಬೇರನ ಅನುಚರರಾದ ಪ್ರಿಯದರ್ಶನವುಳ್ಳ ಮಹಾಬಲರಾದ ಧನುರ್ಧಾರಿಗಳು ಸಂತುಷ್ಟಮನಸ್ಸಿನಿಂದ ವಾಸಿಸುತ್ತಾರೆ.

ಏಕಾದಶ ಸಹಸ್ರಾಣಿ ವರ್ಷಾಣಾಂ ತೇ ಜನಾಧಿಪ ।
ಆಯುಷ್ಪ್ರಮಾಣಂ ಜೀವಂತಿ ಶತಾನಿ ದಶ ಪಂಚ ಚ ॥೭॥

ಎಲೈ ಜನಾಧಿಪನೇ, ಅಲ್ಲಿರುವ ಜನರಿಗೆ ಹನ್ನೆರಡು ಸಾವಿರದ ಐದುನೂರು ವರ್ಷಗಳು ಆಯುಷ್ಪ್ರಮಾಣವಾಗಿರುತ್ತದೆ. ಅಷ್ಟು ವರ್ಷಗಳ ಕಾಲ ಅವರು ಜೀವಿಸುತ್ತಾರೆ.

ಶೃಂಗಾಣಿ ವೈ ಶೃಂಗವತಸ್ತ್ರೀಣ್ಯೇವ ಮನುಜಾಧಿಪ ।
ಏಕಂ ಮಣಿಮಯಂ ತತ್ರ ತಥೈಕಂ ರೌಪ್ಯಮದ್ಭುತಮ್ ॥೮॥

ಷಷ್ಟಿಂ ವರ್ಷಸಹಸ್ರಾಣಿ ಷಷ್ಟಿಮೇವ ಶತಾನಿ ಚ ।
ಆದಿತ್ಯತಾಪತಪ್ತಾಸ್ತೇ ವಿಶಂತಿ ಶಶಿಮಂಡಲಮ್ ॥೩೬॥

ಅವರು ಅರವತ್ತಾರು ಸಾವಿರ ವರ್ಷಗಳ ಕಾಲ ಸೂರ್ಯನ ತಾಪದಿಂದ ಬಳಲಿದವರಾಗಿ ಅನಂತರ ಚಂದ್ರಮಂಡಲವನ್ನು ಪ್ರವೇಶಿಸುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಅಷ್ಟಮೋಽಧ್ಯಾಯಃ ॥

॥ ಇತಿ ಜಂಬೂಖಂಡನಿರ್ಮಾಣಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಮೇರುವಿನ ಉತ್ತರದಲ್ಲಿರುವ ರಮಣಕ, ಹಿರಣ್ಮಯ ಮತ್ತು ಐರಾವತ ವರ್ಷಗಳ ವರ್ಣನೆ.

ಧೃತರಾಷ್ಟ್ರಃ

ವರ್ಷಾಣಾಂ ಚೈವ ನಾಮಾನಿ ಪರ್ವತಾನಾಂ ಚ ಸಂಜಯ ।
ಆಚಕ್ಷ್ವ ಮೇ ಯಥಾತತ್ತ್ವಂ ಯೇ ಚ ಪರ್ವತವಾಸಿನಃ ॥೧॥

ಧೃತರಾಷ್ಟ್ರ– ಎಲೈ ಸಂಜಯನೇ, ನನಗೆ ವರ್ಷಗಳ ನಾಮಗಳನ್ನೂ, ಅಲ್ಲಿರುವ ಪರ್ವತಗಳನ್ನೂ, ಆ ಪರ್ವತದಲ್ಲಿ ವಾಸಿಸುವ ಜನರನ್ನೂ ಯಥಾರ್ಥವಾಗಿ ತಿಳಿಸುವವನಾಗು.

ಸಂಜಯಃ

ದಕ್ಷಿಣೇನ ತು ಶ್ವೇತಸ್ಯ ನೀಲಸ್ಯೈವೋತ್ತರೇಣ ತು ।
ವರ್ಷಂ ರಮಣಕಂ ನಾಮ ಜಾಯಂತೇ ತತ್ರ ಮಾನವಾಃ ॥೨॥

ಸಂಜಯ– ಶ್ವೇತಪರ್ವತ ದಕ್ಷಿಣದಲ್ಲಿ ಮತ್ತು ನೀಲಪರ್ವತದ ಉತ್ತರದಲ್ಲಿ ರಮಣಕ ಎಂಬ ವರ್ಷವಿದೆ. ಅಲ್ಲಿ ಮಾನವರು ಜನಿಸುತ್ತಾರೆ.

ಶುಕ್ಲಾಭಿಜನಸಂಪನ್ನಾಃ ಸರ್ವೇ ಸುಪ್ರಿಯದರ್ಶನಾಃ ।
ರತಿಪ್ರಧಾನಾಶ್ಚ ತಥಾ ಜಾಯಂತೇ ತತ್ರ ಮಾನವಾಃ ॥೩॥

ಶುದ್ಧವಾದ ಕುಲದಲ್ಲಿ ಜನ್ಮವನ್ನು ಹೊಂದಿದವರಾಗಿ ಅವರೆಲ್ಲರೂ ನೋಡಲು ಮನೋಹರರಾಗಿರುತ್ತಾರೆ. ಅಲ್ಲಿ ಜನಿಸುವ ಮಾನವರು ಸುಖಪ್ರಧಾನರಾಗಿರುತ್ತಾರೆ.

ದಶ ವರ್ಷಸಹಸ್ರಾಣಿ ಶತಾನಿ ದಶ ಪಂಚ ಚ ।
ಜೀವಂತಿ ತೇ ಮಹಾರಾಜ ನಿತ್ಯಂ ಮುದಿತಮಾನಸಾಃ ॥೪॥

ಎಲೈ ಮಹಾರಾಜನೇ, ಅವರು ಸಂತೋಷಗೊಂಡ ಮನಸ್ಸನ್ನು ಉಳ್ಳವರಾಗಿ, ಹನ್ನೊಂದುಸಾವಿರದ ಐದುನೂರು ವರ್ಷಗಳ ಕಾಲ ಜೀವಿಸುತ್ತಾರೆ.

ದಕ್ಷಿಣೇ ಶೃಂಗಿಣಶ್ಚೈವ ಶ್ವೇತಸ್ಯಾಥೋತ್ತರೇಣ ಚ ।
ವರ್ಷಂ ಹೈರಣ್ವತಂ ನಾಮ ಯತ್ರ ಹೈರಣ್ವತೀ ನದೀ ॥೫॥

ಶೃಂಗವಾನ್ ಪರ್ವತದ ದಕ್ಷಿಣದಲ್ಲಿ ಮತ್ತು ಶ್ವೇತಪರ್ವತದ ಉತ್ತರದಲ್ಲಿ ಹೈರಣ್ವತ ಎಂಬ ವರ್ಷವಿದೆ. ಅಲ್ಲಿ ಹೈರಣ್ವತೀ ಎಂಬ ನದಿ ಇದೆ.

ಯಕ್ಷಾನುಗಾ ಮಹಾರಾಜ ಧನ್ವಿನಃ ಪ್ರಿಯದರ್ಶನಾಃ ।
ಮಹಾಬಲಾಸ್ತತ್ರ ಸದಾ ರಾಜನ್ ಮುದಿತಮಾನಸಾಃ ॥೬॥

ಎಲೈ ಮಹಾರಾಜನೇ, ಅಲ್ಲಿ ಕುಬೇರನ ಅನುಚರರಾದ ಪ್ರಿಯದರ್ಶನವುಳ್ಳ ಮಹಾಬಲರಾದ ಧನುರ್ಧಾರಿಗಳು ಸಂತುಷ್ಟ ಮನಸ್ಸಿನಿಂದ ವಾಸಿಸುತ್ತಾರೆ.

ಏಕಾದಶ ಸಹಸ್ರಾಣಿ ವರ್ಷಾಣಾಂ ತೇ ಜನಾಧಿಪ ।
ಆಯುಷ್ಮಮಾಣಂ ಜೀವಂತಿ ಶತಾನಿ ದಶ ಪಂಚ ಚ ॥೭॥

ಎಲೈ ಜನಾಧಿಪನೇ, ಅಲ್ಲಿರುವ ಜನರಿಗೆ ಹನ್ನೆರಡು ಸಾವಿರದ ಐದುನೂರು ವರ್ಷಗಳು ಆಯುಷ್ಮಮಾಣವಾಗಿರುತ್ತದೆ. ಅಷ್ಟು ವರ್ಷಗಳ ಕಾಲ ಅವರು ಜೀವಿಸುತ್ತಾರೆ.

ಶೃಂಗಾಣಿ ವೈ ಶೃಂಗವತಸ್ತ್ರೀಣ್ಯೇವ ಮನುಜಾಧಿಪ ।
ಏಕಂ ಮಣಿಮಯಂ ತತ್ರ ತಥೈಕಂ ರೌಗ್ಮಮದ್ಭುತಮ್ ॥೮॥

ಸರ್ವರತ್ನಮಯಂ ಚೈಕಂ ಭವನೈರುಪಶೋಭಿತಮ್ ।
ತತ್ರ ಸ್ವಯಂಪ್ರಭಾ ದೇವೀ ನಿತ್ಯಂ ವಸತಿ ಶಾಂಡಿಲೀ ॥೯॥

ಎಲೈ ಮನುಜಾಧಿಪನೇ, ಶೃಂಗವಾನ್ ಪರ್ವತಕ್ಕೆ ಮೂರೇ ಶಿಖರಗಳಿವೆ. ಅವುಗಳಲ್ಲಿ ಒಂದು ಮಣಿಮಯವಾದುದು. ಅದ್ಭುತವಾದ ಇನ್ನೊಂದು ಸುವರ್ಣಮಯವಾದುದು. ಇನ್ನೊಂದು ಶಿಖರವು ಸರ್ವರತ್ನಮಯವಾದುದು. ಅದು ಅನೇಕ ಭವನಗಳಿಂದ ಶೋಭಿತವಾಗಿದೆ. ಅಲ್ಲಿ ಶಾಂಡಿಲ್ಯಮುನಿಗಳ ಪುತ್ರಿಯಾದ ಸ್ವಯಂಪ್ರಭಾ ದೇವಿಯು ನಿತ್ಯವೂ ವಾಸ ಮಾಡುತ್ತಾಳೆ.

ಉತ್ತರೇಣ ತು ಶೃಂಗಸ್ಯ ಸಮುದ್ರಾಂತೇ ಜನಾಧಿಪ ।
ವರ್ಷಮೈರಾವತಂ ನಾಮ ತಸ್ಮಾಚ್ಛೃಂಗವತಃ ಪರಮ್ ॥೧೦॥

ಎಲೈ ಜನಾಧಿಪನೇ, ಶೃಂಗವಾನ್ ಪರ್ವತದ ಉತ್ತರಕ್ಕೆ, ಶೃಂಗವಾನ್ ಪರ್ವತದ ಆಚೆಗೆ ಸಮುದ್ರದವರೆಗೆ ಐರಾವತ ಎಂಬ ವರ್ಷವಿದೆ.

ನ ತತ್ರ ಸೂರ್ಯಸ್ತಪತಿ ನ ತೇ ಜೀರ್ಯಂತಿ ಮಾನವಾಃ ।
ಚಂದ್ರಮಾಶ್ಚ ಸನಕ್ಷತ್ರೋ ಜ್ಯೋತಿರ್ಭೂತ ಇವಾವೃತಃ ॥೧೧॥

ಅಲ್ಲಿ ಸೂರ್ಯನು ತಾಪವನ್ನು ಉಂಟುಮಾಡುವುದಿಲ್ಲ. ಅಲ್ಲಿರುವ ಮನುಷ್ಯರು ಮುಪ್ಪನ್ನು ಹೊಂದುವುದಿಲ್ಲ. ನಕ್ಷತ್ರದಿಂದ ಕೂಡಿದ ಚಂದ್ರನು ಒಂದು ಜ್ಯೋತಿಯಂತೆ ಆವೃತನಾಗಿ ಕಾಣುತ್ತಾನೆ.

ಪದ್ಮಪ್ರಭಾಃ ಪದ್ಮವರ್ಣಾಃ ಪದ್ಮಪತ್ರನಿಭೇಕ್ಷಣಾಃ ।
ಪದ್ಮಪತ್ರಸುಗಂಧಾಶ್ಚ ಜಾಯಂತೇ ತತ್ರ ಮಾನವಾಃ ॥೧೨॥

ಅಲ್ಲಿ ಜನಿಸುವ ಮಾನವರು ಪದ್ಮದ ಕಾಂತಿಯುಳ್ಳವರು, ಪದ್ಮದ ವರ್ಣವುಳ್ಳವರು, ಪದ್ಮದಳದಂತಹ ಕಣ್ಣುಳ್ಳವರು ಮತ್ತು ಪದ್ಮದಳದಂತೆ ಸುವಾಸನೆಯನ್ನು ಹೊಂದಿದವರು.

ಅನಿಷ್ಪಂದಾಃ ಸುಗಂಧಾಶ್ಚ ನಿರಾಹಾರಾ ಜಿತೇಂದ್ರಿಯಾಃ ।
ದೇವಲೋಕಚ್ಯುತಾಃ ಸರ್ವೇ ತಥಾ ವಿರಜಸೋ ನೃಪ ॥೧೩॥

ಅವರಿಗೆ ಬೆವರು ಉಂಟಾಗುವುದಿಲ್ಲ. ಸುಗಂಧಯುಕ್ತರಾಗಿರುತ್ತಾರೆ. ಜಿತೇಂದ್ರಿಯರೂ, ನಿರಾಹಾರರೂ ಆಗಿರುತ್ತಾರೆ. ಎಲ್ಲರೂ ದೇವಲೋಕದಿಂದ ಚ್ಯುತರಾದವರು ಮತ್ತು ಯಾವ ಕಶ್ಮಲವೂ ಇಲ್ಲದವರು.

ತ್ರಯೋದಶ ಸಹಸ್ರಾಣಿ ವರ್ಷಾಣಾಂ ತೇ ಜನಾಧಿಪ ।
ಆಯುಷ್ಪ್ರಮಾಣಂ ಜೀವಂತಿ ನರಾ ಭರತಸತ್ತಮ ॥೧೪॥

ಎಲೈ ಜನಾಧಿಪನೇ, ಎಲೈ ಭರತಶ್ರೇಷ್ಠನೇ, ಅಲ್ಲಿರುವ ನರರು ಹದಿಮೂರು ಸಾವಿರ ವರ್ಷಗಳ ಕಾಲ ಆಯುಷ್ಪ್ರಮಾಣವನ್ನು ಹೊಂದಿ ಜೀವಿಸುತ್ತಾರೆ.

ಕ್ಷೀರೋದಸ್ಯ ಸಮುದ್ರಸ್ಯ ತಥೈವೋತ್ತರತಃ ಪ್ರಭುಃ ।
ಹರಿರ್ವಸತಿ ವೈಕುಂಠಃ ಶಕಟೇ ಕನಕಾತ್ಮಕೇ ॥೧೫॥

ಕ್ಷೀರಸಮುದ್ರದ ಉತ್ತರಭಾಗದಲ್ಲಿ ಪ್ರಭುವೂ, ವೈಕುಂಠನಾಮಕನೂ ಆದ ಹರಿಯು ಸ್ವರ್ಣಮಯವಾದ ರಥದಲ್ಲಿ ವಾಸಿಸುತ್ತಾನೆ.

ಅಷ್ಟಚಕ್ರಂ ಹಿ ತದ್ ಯಾನಂ ಭೂತಯುಕ್ತಂ ಮನೋಜವಮ್ ।
ಅಗ್ನಿವರ್ಣಂ ಮಹಾವೇಗಂ ಜಾಂಬೂನದಪರಿಷ್ಕೃತಮ್ ॥೧೬॥

ಆ ರಥಕ್ಕೆ ಎಂಟು ಚಕ್ರಗಳಿವೆ. ಅದು ಪಂಚಭೂತಗಳಿಂದ ಕೂಡಿ, ಅಗ್ನಿವರ್ಣದಿಂದಲೂ, ಮಹಾವೇಗದಿಂದಲೂ ಕೂಡಿ, ಸುವರ್ಣಾಲಂಕೃತವಾಗಿ ಮನೋಜವವನ್ನು ಹೊಂದಿದೆ.

ಸ ಪ್ರಭುಃ ಸರ್ವಭೂತಾನಾಂ ವಿಭುಶ್ಚ ಭರತರ್ಷಭ ।
ಸಂಕ್ಷೇಪೋ ವಿಸ್ತರಶ್ಚೈವ ಕರ್ತಾ ಕಾರಯಿತಾ ಚ ಸಃ ॥೧೭॥

ಎಲೈ ಭರತರ್ಷಭನೇ, ಅವನೇ ಎಲ್ಲ ಜೀವರಿಗೂ ಪ್ರಭುವಾದವನು, ವ್ಯಾಪ್ತನಾದವನು, ಜಗತ್ತಿನ ಸೃಷ್ಟಿ-ಸಂಹಾರಕರ್ತನಾದವನು ಮತ್ತು ಎಲ್ಲ ಕಾರ್ಯಗಳನ್ನೂ ಮಾಡಿ ಮಾಡಿಸುವವನು.

ಪೃಥಿವ್ಯಾಪಸ್ತಥಾಕಾಶಂ ವಾಯುಸ್ತೇಜಶ್ಚ ಪಾರ್ಥಿವ ।
ಸ ಯಜ್ಞಃ ಸರ್ವಭೂತಾನಾಮಾಸ್ಯಂ ತಸ್ಯ ಹುತಾಶನಃ ॥೧೮॥

ಎಲೈ ರಾಜನೇ, ಅವನು ಪೃಥಿವಿ, ಅಪ್, ಆಕಾಶ, ವಾಯು, ತೇಜಸ್ ಮೊದಲಾದ ಎಲ್ಲಶಬ್ದಗಳಿಂದಲೂ ವಾಚ್ಯನಾಗಿ ಅವುಗಳಲ್ಲಿ ಅಂತರ್ಯಾಮಿಯಾಗಿ ಇರುವವನು. ಅವನು ಎಲ್ಲ ಜೀವರಿಂದಲೂ ಯಜನೀಯನಾದವನು. ಅಗ್ನಿಯು ಅವನ ಮುಖ.

ವೈಶಂಪಾಯನಃ

ಏವಮುಕ್ತಃ ಸಂಜಯೇನ ಧೃತರಾಷ್ಟ್ರೋ ಮಹಾಮನಾಃ ।
ಧ್ಯಾನಮನ್ವಗಮದ್ ರಾಜಾ ಪುತ್ರಾನ್ ಪ್ರತಿ ಜನಾಧಿಪ ॥೧೯॥

ವೈಶಂಪಾಯನ– ಸಂಜಯನಿಂದ ಹೀಗೆ ಹೇಳಲ್ಪಟ್ಟ ಧೈರ್ಯಶಾಲಿಯಾದ ಧೃತರಾಷ್ಟ್ರರಾಜನು ಎಲೈ ಮನುಜಾಧಿಪನೇ, ತನ್ನ ಮಕ್ಕಳನ್ನು ಕುರಿತು ಯೋಚಿಸುತ್ತಾ ಚಿಂತಾಪರವಶನಾದನು.

ಅಸಂಶಯಂ ಸೂತಪುತ್ರ ಕಾಲಃ ಸಂಕ್ಷಪತೇ ಜಗತ್ ।
ಸೃಜ್ಯತೇ ಚ ಪುನಃ ಸರ್ವಂ ನೇಹ ವಿದ್ಯತಿ ಶಾಶ್ವತಮ್ ॥೨೦॥

ಎಲೈ ಮಹಾರಾಜನೇ, ಅವನು ಸ್ವಲ್ಪ ಕಾಲ ಯೋಚಿಸಿ ಪುನಃ ಹೀಗೆ ಮಾತನಾಡಿದನು. ಎಲೈ ಸೂತಪುತ್ರನೇ, ಕಾಲವು ನಿಸ್ಸಂಶಯವಾಗಿ ಜಗತ್ತನ್ನು ನಾಶ ಮಾಡುತ್ತದೆ. ಅದೇ ಪುನಃ ಜಗತ್ತನ್ನು ಸೃಷಿಸುತ್ತದೆ. ಈ ಜಗತ್ತಿನಲ್ಲಿ ಶಾಶ್ವತವಾದುದು ಯಾವುದೂ ಇಲ್ಲ.

ನರೋ ನಾರಾಯಣಶ್ಚೈವ ಸರ್ವಜ್ಞಃ ಸರ್ವಭೂತಭೃತ್ ।
ದೇವಾ ವೈಕುಂಠ ಇತ್ಯಾಹುರ್ವೇದಾ ವಿಷ್ಣುರಿತಿ ಪ್ರಭುಮ್ ॥೨೧॥

ಅವನನ್ನು ದೇವತೆಗಳು ನರನೆಂದೂ, ನಾರಾಯಣನೆಂದೂ, ಸರ್ವಜ್ಞನೆಂದೂ, ಸರ್ವಭೂತಗಳನ್ನು ಧರಿಸಿದವನೆಂದೂ, ವೈಕುಂಠನೆಂದೂ ಕರೆಯುತ್ತಾರೆ. ವೇದಗಳು ಪ್ರಭುವಾದ ಅವನನ್ನು ವಿಷ್ಣುವೆಂದು ಕರೆಯುತ್ತವೆ.

॥ ॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ನವಮೋಽಧ್ಯಾಯಃ ॥

॥ ಇತಿ ಜಂಬೂಖಂಡನಿರ್ಮಾಣಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತನೆಯ ಅಧ್ಯಾಯ

ಭಾರತವರ್ಷದ ನದಿಗಳ, ಪರ್ವತಗಳ ಮತ್ತು ದೇಶಗಳ ನಿರೂಪಣೆ.

ಧೃತರಾಷ್ಟ್ರಃ

ಯದಿದಂ ಭಾರತಂ ವರ್ಷಂ ಯತ್ರೇದಂ ಮೂರ್ಚ್ಛಿತಂ ಬಲಮ್ ।
ಯತ್ರಾತಿಮಾತ್ರಂ ಲುಬ್ಧೋऽಯಂ ಪುತ್ರೋ ದುರ್ಯೋಧನೋ ಮಮ ॥

ಯತ್ರ ಗೃಧ್ರಾಃ ಪಾಂಡುಸುತಾ ಯತ್ರ ಮೇ ಸಕ್ತತೇ ಮನಃ ।
ಏತನ್ಮೇ ತತ್ತ್ವಮಾಚಕ್ಷ್ವ ಕುಶಲೋ ಹ್ಯಸಿ ಸಂಜಯ ॥೨॥

ಧೃತರಾಷ್ಟ್ರ– ಈ ಸೈನ್ಯಗಳೆಲ್ಲವೂ ಸೇರಿರುವ ಭಾರತ ವರ್ಷವು ಎಲ್ಲಿದೆಯೋ ಮತ್ತು ಯಾವುದರಲ್ಲಿ ನನ್ನ ಮಗ ದುರ್ಯೋಧನನು ಬಹಳವಾದ ಆಸೆಯನ್ನು ಹೊಂದಿದ್ದಾನೆಯೋ, ಯಾವುದರಲ್ಲಿ ಪಾಂಡವರೂ ಸಹ ಅಭಿಲಾಷೆಯನ್ನು ಹೊಂದಿದ್ದಾರೆಯೋ, ಎಲ್ಲಿ ನನ್ನ ಮನಸ್ಸು ಲಗ್ನವಾಗಿದೆಯೋ, ಎಲೈ ಸಂಜಯನೇ, ಅಂತಹ ಭಾರತವರ್ಷವನ್ನು ಯಥಾರ್ಥವಾಗಿ ಹೇಳು. ನೀನು ಹೇಳುವುದರಲ್ಲಿ ಕುಶಲನಾಗಿದ್ದೀಯೆ.

ಸಂಜಯಃ

ನ ತತ್ರ ಪಾಂಡವಾಃ ಗೃಧ್ರಾಃ ಶೃಣು ರಾಜನ್ ವಚೋ ಮಮ ।
ಗೃದ್ಧೋ ದುರ್ಯೋಧನಸ್ತತ್ರ ಶಕುನಿಶ್ಚಾಪಿ ಸೌಬಲಃ ॥೩॥

ಸಂಜಯ– ಎಲೈ ರಾಜನೇ, ಪಾಂಡವರು ಅದರಲ್ಲಿ ಅಭಿಲಾಷೆಯನ್ನು ಹೊಂದಿಲ್ಲ. ನನ್ನ ಮಾತನ್ನು ಕೇಳು. ದುರ್ಯೋಧನನೂ ಮತ್ತು ಶಕುನಿಯೂ ಅದರಲ್ಲಿ ಮಹದಾಸೆಯನ್ನು ಹೊಂದಿದ್ದಾರೆ.

ಅಪರೇ ಕ್ಷತ್ರಿಯಾಶ್ಚಾಪಿ ನಾನಾದೇಶಪದೇಶ್ವರಾಃ ।
ಯೇ ಗೃಧ್ರಾ ಭಾರತೇ ವರ್ಷೇ ನ ಮೃಷ್ಯಂತಿ ಪರಸ್ಪರಮ್ ॥೪॥

ನಾನಾ ದೇಶದ ಅಧಿಪತಿಗಳಾದ ಇನ್ನೂ ಅನೇಕ ಕ್ಷತ್ರಿಯರು ಭಾರತ ವರ್ಷದ ಸಂಪಾದನೆಯಲ್ಲಿ ಆಸೆಯನ್ನು ಹೊಂದಿದ್ದಾರೆ. ಅವರು ಒಬ್ಬರನ್ನೊಬ್ಬರು ಸಹಿಸುವುದಿಲ್ಲ.

ಅತ್ರ ತೇ ವರ್ಣಯಿಷ್ಯಾಮಿ ವರ್ಷಂ ಭಾರತ ಭಾರತಮ್ ।
ಪ್ರಿಯಮಿಂದ್ರಸ್ಯ ದೇವಸ್ಯ ಮನೋರ್ವೈವಸ್ವತಸ್ಯ ಚ ॥೫॥

ಪೃಥೋಶ್ಚ ರಾಜನ್ ವೈನ್ಯಸ್ಯ ತಥೇಕ್ಷ್ವಾಕೋರ್ಮಹಾತ್ಮನಃ ।
ಯಯಾತೇರಂಬರೀಷಸ್ಯ ಮಾಂಧಾತುರ್ನಹುಷಸ್ಯ ಚ ॥೬॥

ತಥೈವ ಮುಚುಕುಂದಸ್ಯ ಶಿಬೇರೌಶೀನರಸ್ಯ ಚ ।
ಋಷಭಸ್ಯ ತಥೈಲಸ್ಯ ನೃಗಸ್ಯ ನೃಪತೇಸ್ತಥಾ ॥೭॥

ಎಲೈ ಭಾರತನೇ, ದೇವೇಂದ್ರನಿಗೆ, ವೈವಸ್ವತ ಮನುವಿಗೆ, ವೇನನ ಮಗನಾದ ಪೃಥುಚಕ್ರವರ್ತಿಗೆ, ಮಹಾತ್ಮನಾದ ಇಕ್ಷ್ವಾಕುವಿಗೆ, ಯಯಾತಿಗೆ, ಅಂಬರೀಷನಿಗೆ, ಮಾಂಧಾತೃವಿಗೆ, ನಹುಷನಿಗೆ, ಅದರಂತೆ ಮುಚುಕುಂದನಿಗೆ, ಔಶೀನರನಾದ ಶಿಬಿಗೆ, ಋಷಭನಿಗೆ, ಪುರೂರವನಿಗೆ, ನೃಗ ರಾಜನಿಗೆ ಪ್ರಿಯವಾದಂತಹ ಭಾರತ ವರ್ಷವನ್ನು ನಿನಗೆ ವರ್ಣಿಸುವೆನು.

ಅನ್ಯೇಷಾಂ ಚ ಮಹಾರಾಜ ಕ್ಷತ್ರಿಯಾಣಾಂ ಬಲೀಯಸಾಮ್ ।
ಸರ್ವೇಷಾಮೇವ ರಾಜೇಂದ್ರ ಪ್ರಿಯಂ ಭರತ ಭಾರತಮ್ ॥೮॥

ಎಲೈ ಮಹಾರಾಜನೇ, ರಾಜೇಂದ್ರನೇ, ಇನ್ನೂ ಅನೇಕ ಬಲಿಷ್ಠರಾದ ಕ್ಷತ್ರಿಯರೆಲ್ಲರಿಗೂ ಭಾರತ ವರ್ಷವು ಬಹಳ ಪ್ರಿಯವಾಗಿದೆ.

ತತ್ತೇ ವರ್ಷಂ ಪ್ರವಕ್ಷ್ಯಾಮಿ ಯಥಾಶ್ರುತಮರಿಂದಮ ।
ಶೃಣು ಮೇ ಗದತೋ ರಾಜನ್ ಯನ್ಮಾಂ ತ್ವಂ ಪರಿಪೃಚ್ಛಸಿ ॥೯॥

ಎಲೈ ಅರಿಂದಮನೇ, ನಾನು ಕೇಳಿದಂತೆ ನಿನಗೆ ಆ ಭಾರತ ವರ್ಷವನ್ನು ನಿರೂಪಣೆ ಮಾಡುವೆನು. ರಾಜನೇ, ನೀನು ಕೇಳಿದ ಪ್ರಶ್ನೆಗೆ ಉತ್ತರವಾಗಿ ಹೇಳುವ ನನ್ನ ಮಾತುಗಳನ್ನು ಕೇಳುವವನಾಗು.

ಮಹೇಂದ್ರೋ ಮಲಯಃ ಸಹ್ಯಃ ಶುಕ್ತಿಮಾನ್ ಋಕ್ಷವಾನಪಿ ।
ವಿಂಧ್ಯಶ್ಚ ಪಾರಿಯಾತ್ರಶ್ಚ ಸಪ್ತೈತೇ ಕುಲಪರ್ವತಾಃ ॥೧೦॥

ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷವಾನ್, ವಿಂಧ್ಯ, ಪಾರಿಯಾತ್ರ ಎಂಬ ಈ ಏಳು ಕುಲಪರ್ವತಗಳು.

ತೇಷಾಂ ಸಹಸ್ರಶೋ ರಾಜನ್ ಪರ್ವತಾಸ್ತು ಸಮೀಪತಃ ।
ಅಭಿಜ್ಞಾತಾಃ ಸಾರವಂತೋ ವಿಪುಲಾಶ್ಚಿತ್ರಸಾನವಃ ॥೧೧॥

ಎಲೈ ರಾಜನೇ, ಅವುಗಳ ಸಮೀಪದಲ್ಲಿ (ಬೇರೆ ಬೇರೆ) ಹೆಸರಿನಿಂದ ಪ್ರಸಿದ್ಧವಾಗಿರುವ ಬಲಿಷ್ಠವಾದ, ವಿಸ್ತಾರವಾದ, ವಿಚಿತ್ರವಾದ ಶಿಖರಗಳನ್ನು ಹೊಂದಿರುವ ಸಹಸ್ರಾರು ಪರ್ವತಗಳಿವೆ.

ಅನ್ಯೇ ತತೋಽಪರಿಜ್ಞಾತಾ ಹ್ರಸ್ವಾ ಹ್ರಸ್ವೋಪಜೀವಿನಃ ।
ಆರ್ಯಾ ಮ್ಲೇಚ್ಛಾಶ್ಚ ಕೌರವ್ಯ ತೈರ್ಮಿಶ್ರಾಃ ಪುರುಷಾ ವಿಭೋ ॥೧೨॥

ಇನ್ನೂ ಹೆಸರಿಲ್ಲದಿರುವ ಅನೇಕ ಪರ್ವತಗಳಿವೆ. ಅಲ್ಲಿಯ ಜನರು ಹ್ರಸ್ವಕಾಯರಾಗಿದ್ದು ಅಂತಹವರನ್ನೇ ಉಪಜೀವಿಸುತ್ತಾರೆ. ಎಲೈ ಪೌರವ್ಯನೇ, ವಿಭುವೇ, ಆರ್ಯರಿಂದ ಮತ್ತು ಮ್ಲೇಚ್ಛರಿಂದ ಮಿಶ್ರಿತರಾದ ಪುರುಷರು ಅಲ್ಲಿ ವಾಸಿಸುತ್ತಾರೆ.

ನದೀಃ ಪಿಬಂತಿ ಬಹುಲಾ ಗಂಗಾಂ ಸಿಂಧುಂ ಸರಸ್ವತೀಮ್ ।
ಗೋದಾವರೀಂ ನರ್ಮದಾಂ ಚ ಬಾಹುದಾಂ ಚ ಮಹಾನದೀಮ್ ॥

ಶತದ್ರುಂ ಚಂದ್ರಭಾಗಾಂ ಚ ಯಮುನಾಂ ಚ ಮಹಾನದೀಮ್ ।
ದೃಷದ್ವತೀಂ ವಿಪಾಶಾಂ ಚ ವಿಪಾಪಾಂ ಸ್ಥೂಲವಾಲುಕಾಮ್ ॥೧೪॥

ನದೀಂ ವೇತ್ರವತೀಂ ಚೈವ ಕೃಷ್ಣವೇಣಾಂ ಚ ನಿಮ್ನಗಾಮ್ ।
ಇರಾವತೀಂ ವಿತಸ್ತಾಂ ಚ ಪಯೋಷ್ಣೀಂ ದೇವಿಕಾಮಪಿ ॥೧೫॥

ಬಹಳವಾಗಿ ಮುಂದೆ ಹೇಳುವ ಈ ನದಿಗಳ ನೀರನ್ನು ಪಾನ ಮಾಡುತ್ತಾರೆ. ಗಂಗಾ, ಸಿಂಧು, ಸರಸ್ವತೀ, ಗೋದಾವರೀ, ನರ್ಮದಾ, ಬಾಹುದಾ, ಮಹಾನದೀ, ಶತದ್ರು, ಚಂದ್ರಭಾಗಾ, ಮಹಾನದಿಯಾದ ಯಮುನೆ, ದೃಷದ್ವತೀ, ವಿಪಾಶಾ, ವಿಪಾಪಾ, ಸ್ಥೂಲವಾಲುಕಾ, ವೇತ್ರವತೀ, ಕೃಷ್ಣವೇಣಾ, ಇರಾವತೀ, ವಿತಸ್ತಾ, ಪಯೋಷ್ಣೀ, ದೇವಿಕಾ;

ವೇದಸ್ಮೃತಿಂ ವೇತಸಿನೀಂ ತ್ರಿದಿವಾಮಿಕ್ಷುಮಾಲಿನೀಮ್ ।
ಕರೀಷಿಣೀಂ ಚಿತ್ರವಹಾಂ ಚಿತ್ರಸೇನಾಂ ಚ ನಿಮ್ನಗಾಮ್ ॥೧೬॥

ಗೋಮತೀಂ ಧೂತಪಾಪಾಂ ಚ ವಂದನಾಂ ಚ ಮಹಾನದೀಮ್ ।
ಕೌಶಿಕೀಂ ತ್ರಿದಿವಾಂ ಕೃತ್ಯಾಂ ಏಚತ್ರಾಂ ಲೋಕತಾರಿಣೀಮ್ ॥೧೭॥

ರಥಸ್ಥಾಂ ಶತಕುಂಭಾಂ ಚ ಸರಯೂಂ ಚ ನರೇಶ್ವರ ।
ಚರ್ಮಣ್ವತೀಂ ವೇತ್ರವತೀಂ ಹಸ್ತಿಸೋಮಾಂ ದಿಶಂ ತಥಾ ॥೧೮॥

ವೇದಸ್ಮೃತಿ, ವೇತಸಿನೀ, ತ್ರಿದಿವಾ, ಇಕ್ಷುಮಾಲಿನೀ, ಕರೀಷಿಣೀ ಚಿತ್ರವಾಹಾ, ಚಿತ್ರಸೇನಾ, ಗೋಮತೀ, ಧೂತವಾಪಾ, ಮಹಾನದಿಯಾದ ವಂದನಾ, ಕೌಶಿಕೀ, ತ್ರಿದಿವಾ, ಕೃತ್ಯಾ, ಏಚತ್ರಾ, ಲೋಕತಾರಿಣೀ, ರಥಸ್ಥಾ, ಶತಕುಂಭಾ, ಸರಯೂ, ಚರ್ಮಣ್ವತೀ, ವೇತ್ರವತೀ, ಹಸ್ತಿಸೋಮಾ, ದಿಕ್;

ಶತಾವರೀಂ ಪಯೋಷ್ಣೀಂ ಚ ಪರಾಂ ಭೈಮರಥೀಂ ತಥಾ ।
ಕಾವೇರೀಂ ಚುಲುಕಾಂ ಚಾಪಿ ವಾಪೀಂ ಶತಬಲಾಮಪಿ ॥೧೯॥

ನಿಚೀರಾಂ ಮಹಿತಾಂ ಚಾಪಿ ಸುಪ್ರಯೋಗಾಂ ನರಾಧಿಪ ।
ಪವಿತ್ರಾಂ ಕುಂಡಲಾಂ ಸಿಂಧುಂ ವಾಜಿನೀಂ ಪುರಮಾಲಿನೀಮ್ ॥೨೦॥

ಪೂರ್ವಾಭಿರಾಮಾಂ ವೀರಾಂ ಚ ಭೀಮಾಮೋಘವತೀಂ ತಥಾ ।
ಪಲಾಶಿನೀಂ ಪಾಪಹರಾಂ ಮಹೇಂದ್ರಾಂ ಪಿಪ್ಪಲಾವತೀಮ್ ॥೨೧॥

ಶತಾವರೀ, ಪಯೋಷ್ಣೀ, ಭೈಮರಥೀ, ಕಾವೇರೀ, ಚುಲುಕಾ, ವಾಪೀ, ಶತಬಲಾ, ನಿಚೀರಾ, ಮಹಿತಾ, ಸುಪ್ರಯೋಗಾ, ಪವಿತ್ರಾ, ಕುಂಡಲಾ, ಸಿಂಧು, ವಾಜಿನೀ, ಪುರಮಾಲಿನೀ, ಪೂರ್ವಾಭಿಮುಖವಾಗಿ ಹರಿಯುವ ವೀರಾ, ಭೀಮಾ, ಮೋಘವತೀ, ಪಲಾಶಿನೀ, ಪಾಪಹರಾ, ಮಹೇಂದ್ರಾ, ಪಿಪ್ಪಲಾವತೀ;

ಪಾರಿಷೇಣಾಮಸಿಕ್ನೀಂ ಚ ಸರಲಾಂ ಭಾರಮರ್ದಿನೀಮ್ ।
ಪುರುಹೀಂ ಪ್ರವರಾಂ ಮೇನಾಂ ಮೋಘಾಂ ಋತವತೀಂ ತಥಾ ॥೨೨॥

ಧೂಮತ್ಯಾಮತಿಕೃಷ್ಣಾಂ ಚ ಸೂಚೀಂ ಭಾವೀಂ ಚ ಕೌರವ ।
ಸದಾನೀರಾಮಧೃಷ್ಯಾಂ ಚ ಕುಶಧಾರಾಂ ಮಹಾನದೀಮ್ ॥೨೩॥

ಶಶಿಕಾಂತಾಂ ಶಿವಾಂ ಚೈವ ತಥಾ ವೀರವತೀಮಪಿ ।
ವಾಸ್ತುಂ ಸುವಾಸ್ತುಂ ಗೌರೀಂ ಚ ಕಂಪನಾಂ ಹಿರಣ್ವತೀಮ್ ॥೨೪॥

ಪಾರಿಷೇಣಾ, ಅಸಿಕ್ನೀ, ಸರಲಾ, ಭಾರಮರ್ದಿನೀ, ಪುರುಹೀ, ಪ್ರವರಾ, ಮೇನಾ, ಮೋಘಾ, ಘೃತವತೀ, ಧೂಮಾತ್ಯಾ, ಅತಿಕೃಷ್ಣಾ, ಸೂಚೀ, ಭಾವೀ, ಸದಾನೀರಾ, ಅದೃಶ್ಯಾ, ಮಹಾನದಿಯಾದ ಕುಶಧಾರಾ, ಶಶಿಕಾಂತಾ, ಶಿವಾ, ವೀರವತೀ, ವಾಸ್ತು, ಸುವಾಸ್ತು, ಗೌರೀ, ಕಂಪನಾ, ಹಿರಣ್ವತೀ;

ಹಿರಣ್ವತೀಂ ಚಿತ್ರವತೀಂ ಚಿತ್ರಸೇನಾಂ ಚ ನಿಮ್ನಗಾಮ್ ।
ರಥಚಿತ್ರಾಂ ಜ್ಯೋತಿರಥಾಂ ವಿಶ್ವಾಮಿತ್ರಾಂ ಕಪಿಂಜಲಾಮ್ ॥೨೫॥

ಉಪೇಂದ್ರಾಂ ಬಹುಲಾಂ ಚೈವ ಕುಚರಾಮಂಬುವಾಹಿನೀಮ್ ।
ವೇನಂದೀಂ ಪಿಂಜಲಾಂ ವೇಣ್ಣಾಂ ತುಂಗವೇಣಾಂ ಮಹಾನದೀಮ್ ॥

ವಿದಿಶಾಂ ಕೃಷ್ಣವೇಣ್ಣಾಂ ಚ ತಾಮ್ರಾಂ ಚ ಕಪಿಲಾಮಪಿ ।
ಶಲುಂ ಸುವಾಮಾಂ ವೇದಾಶ್ವಾಂ ಹರಿಸ್ರಾವಾಂ ಮಹಾಪಗಾಮ್॥೨೬॥

ಹಿರಣ್ವತೀ (ಹಿರಣ್ಮಯೀ), ಚಿತ್ರವತೀ, ಚಿತ್ರಸೇನಾ, ರಥಚಿತ್ರಾ, ಜ್ಯೋತಿರಥಾ, ವಿಶ್ವಾಮಿತ್ರಾ, ಕಪಿಂಜಲಾ, ಉಪೇಂದ್ರಾ, ಬಹುಲಾ, ಕುಚರಾ, ಅಂಬುವಾಹಿನೀ, ವೈಸಂದೀ, ಪಿಂಜಲಾ, ವೇಣ್ಣಾ, ತುಂಗವೇಣಾ, ವಿದಿಶಾ, ಕೃಷ್ಣವೇಣಾ, ಕಪಿಲಾ, ಶಲು, ಸುವಾಮಾ, ವೇದಾಶ್ವಾ, ಹರಿಸ್ರಾವಾ;

ಶೀಘ್ರಾಂ ಚ ಪಿಚ್ಛಿಲಾಂ ಚೈವ ಭಾರದ್ವಾಜೀಂ ಚ ನಿಮ್ನಗಾಮ್ ।
ಕೌಶಿಕೀಂ ನಿಮ್ನಗಾಂ ಶೋಣಾಂ ಬಾಹುದಾಮಥ ಚಂದನಾಮ್ ॥೨೮॥

ದುರ್ಗಾಮಂತಃಶಿಲಾಂ ಚೈವ ಬ್ರಹ್ಮಮೇಧ್ಯಾಂ ಬೃಹದ್ವತೀಮ್ ।
ಚರಕ್ಷಾಂ ಮಹಿರೋಹೀಂ ಚ ತಥಾ ಜಂಬುನದೀಮಪಿ ॥೨೯॥

ಸುನಸಾಂ ತಮಸಾಂ ದಾಸೀಂ ತ್ರಸಾಮನ್ಯಾಂ ವರಾಣಸೀಮ್ ।
ಲೋಲೋದ್ಭ್ರತಕರಾಂ ಚೈವ ಪೂರ್ಣಾಶಾಂ ಚ ಮಹಾನದೀಮ್ ॥

ಶೀಘ್ರಾ, ಪಿಚ್ಛಿಲಾ, ಭಾರದ್ವಾಜೀ, ಕೌಶಿಕೀ, ಶೋಣಾ, ಬಾಹುದಾ, ಚಂದನಾ, ದುರ್ಗಾ, ಅಂತಃಶಿಲಾ, ಬ್ರಹ್ಮಮೇಧ್ಯಾ, ಬೃಹದ್ವತೀ, ಚರಕ್ಷಾ, ಮಹಿರೋಹೀ, ಜಂಬುನದೀ, ಸುನಸಾ, ತಮಸಾ, ದಾಸೀ, ತ್ರಸಾ, ವರಾಣಸೀ, ಅಲೆಗಳಿಂದ ಚಂಚಲವಾದ ಪೂರ್ಣಾಶಾ;

ಮಾನವೀಂ ವೃಷಭಾಂ ಚೈವ ಮಹಾನದ್ಯೋ ಜನಾಧಿಪ ।
ಸದಾನಿರಾಮಯಾಂ ವೃತ್ಯಾಂ ಮಂದಗಾಂ ಮಂದವಾಹಿನೀಮ್ ॥೩೧॥

ಬ್ರಹ್ಮಣೀಂ ಚ ಮಹಾಗೌರೀಂ ದುರ್ಗಾಮಪಿ ಚ ಭಾರತ ।
ಚಿತ್ರೋಪಲಾಂ ಚಿತ್ರಬರ್ಹಾಂ ಮಂಜುಂ ಮಕರವಾಹಿನೀಮ್ ॥೩೨॥

ಮಂದಾಕಿನೀಂ ವೈತರಣೀಂ ಕೋಶಾಂ ಚೈವ ಮಹಾನದೀಮ್ ।
ಶುಕ್ತಿಮತೀಮರಣ್ಯಾಂ ಚ ಪುಷ್ಪವೇಣ್ಯುತ್ಪಲಾವತೀಮ್ ॥೩೩॥

ಮಾನವೀ, ವೃಷಭಾ, ಸದಾನಿರಾಮಯಾ, ವೃತ್ಯಾ, ಮಂದಗಾ, ಮಂದವಾಹಿನೀ, ಬ್ರಹ್ಮಣೀ, ಮಹಾಗೌರೀ, ದುರ್ಗಾ, ಚಿತ್ರೋಪಲಾ, ಚಿತ್ರಬರ್ಹಾ, ಮಂಜು, ಮಕರವಾಹಿನೀ, ಮಂದಾಕಿನೀ, ವೈತರಣೀ, ಮಹಾನದಿಯಾದ ಕೋಶಾ, ಶುಕ್ತಿಮತೀ, ಅರಣ್ಯಾ, ಪುಷ್ಪವೇಣೀ, ಉತ್ಪಲಾವತೀ;

ಲೋಹಿತ್ಯಾಂ ಕರತೋಯಾಂ ಚ ತಥೈವ ವೃಷಭಾಂಗಿನೀಮ್ ।
ಕುಮಾರೀಮೃಷಿಕುಲ್ಯಾಂ ಚ ಬ್ರಹ್ಮಕುಲ್ಯಾಂ ಚ ಭಾರತ ॥೩೪॥

ಸರಸ್ವತೀಃ ಸುಪುಣ್ಯಾಶ್ಚ ಸರ್ವಾ ಗಂಗಾಶ್ಚ ಮಾರಿಷ ।
ವಿಶ್ವಸ್ಯ ಮಾತರಃ ಸರ್ವಾಃ ಸರ್ವಾಶ್ಚೈವ ಮಹಾಬಲಾಃ ॥೩೫॥

ಲೋಹಿತ್ಯಾ, ಕರತೋಯಾ, ವೃಷಭಾಂಗಿನೀ, ಕುಮಾರೀ, ಋಷಿಕುಲ್ಯಾ, ಬ್ರಹ್ಮಕುಲ್ಯಾ, ಸರಸ್ವತೀ; ಎಲೈ ಭಾರತನೇ, ಇವೇ ಮೊದಲಾದ ನದಿಗಳ ನೀರನ್ನು ಪಾನ ಮಾಡುತ್ತಾರೆ. ಎಲೈ ವೀರನೇ, ಈ ನದಿಗಳೆಲ್ಲವೂ ಜಲಪೂರ್ಣವಾಗಿದ್ದು, ಪವಿತ್ರವೂ ಮತ್ತು ಗಂಗೆಯ ಸನ್ನಿಧಾನಕ್ಕೆ ಪಾತ್ರವೂ ಆಗಿವೆ. ಈ ಎಲ್ಲ ನದಿಗಳೂ ಜಗತ್ತಿನ ತಾಯಿಯ ಸ್ಥಾನದಲ್ಲಿದ್ದು, ಎಲ್ಲವೂ ಮಹಾಬಲದಿಂದ ಕೂಡಿವೆ.

ತಥಾ ನದ್ಯಸ್ತ್ವಪ್ರಕಾಶಾಃ ಶತಶೋಽಥ ಸಹಸ್ರಶಃ ।
ಇತ್ಯೇತಾಃ ಸರಿತೋ ರಾಜನ್ ಸಮಾಖ್ಯಾತಾ ಯಥಾಶ್ರುತಿ ॥೩೬॥

ಅದರಂತೆ ಪ್ರಸಿದ್ಧವಲ್ಲದ ನೂರಾರು, ಸಹಸ್ರಾರು ನದಿಗಳಿವೆ. ಎಲೈ ರಾಜನೇ, ನನ್ನ ಸ್ಮರಣೆಗೆ ಬಂದಷ್ಟು ಈ ನದಿಗಳನ್ನು ನಿನಗೆ ಹೇಳಿದ್ದೇನೆ.

ಅಥ ಊರ್ಧ್ವಂ ಜನಪದಾನ್ನಿಬೋಧ ಗದತೋ ಮಮ ।
ತತ್ರೇಮೇ ಕುರುಪಾಂಚಾಲಾಃ ಸಾಲ್ವಮಾದ್ರೇಯಜಾಂಗಲಾಃ ॥೩೭॥

ಶೂರಸೇನಾಃ ಕಳಿಂಗಾಶ್ಚ ಬೋಧಾ ಮೌಕಾಸ್ತಥೈವ ಚ ।
ಮತ್ಸ್ಯಾಃ ಸುಕುಟ್ಯಃ ಸೌಬಲ್ಯಾಃ ಕುಂತಲಾಃ ಕಾಶಿಕೋಶಲಾಃ ॥೩೮॥

ಚೇದಿವತ್ಸಾಃ ಕರೂಷಾಶ್ಚ ಭೋಜಾಃ ಸಿಂಧುಪುಳಿಂದಕಾಃ ।
ಉತ್ತಮೌಜಾ ದಶಾರ್ಣಾಶ್ಚ ಮೇಕಲಾಶ್ಚೋತ್ಕಲೈಃ ಸಹ ॥೩೯॥

ಇನ್ನು ಮುಂದೆ ನಾನು ದೇಶಗಳನ್ನು ಹೇಳುವೆನು. ಅದನ್ನು ನನ್ನಿಂದ ಕೇಳು. ಅವುಗಳಲ್ಲಿ ಈ ಕುರುಪಾಂಚಾಲಗಳು, ಸಾಲ್ವ, ಮಾದ್ರೇಯ ಮತ್ತು ಜಾಂಗಲಗಳು, ಶೂರಸೇನ, ಕಳಿಂಗ, ಬೋಧ, ಮೌಕ, ಮತ್ಸ್ಯ, ಸುಕುಟಿ, ಸೌಬಲ್ಯ, ಕುಂತಲ, ಕಾಶಿಕೋಶಲಗಳು, ಚೇದಿ, ವತ್ಸ, ಕರೂಷ, ಭೋಜ, ಸಿಂಧು-ಪುಳಿಂದಕಗಳು, ಉತ್ತಮೌಜ, ದಶಾರ್ಣ, ಮೇಕಲ, ಉತ್ಕಲ;

ಪಾಂಚಾಲಾಃ ಕೌಶಿಜಾಶ್ಚೈವ ಏಕಪೃಷ್ಠಾ ಯುಗಂಧರಾಃ ।
ಸೌಧಾ ಮದ್ರಾ ಭುಜಂಗಾಶ್ಚ ಕಾಶಯೋಽಪರಕಾಶಯಃ ॥೪೦॥

ಜಠರಾಃ ಕುಕ್ಕುಶಾಶ್ಚೈವ ಸುದಾಶಾರ್ಣಾಶ್ಚ ಭಾರತ ।
ಕುಂತಯೋಽವಂತಯಶ್ಚೈವ ತಥೈವಾಪರಕುಂತಯಃ ॥೪೧॥

ಗೋವಿಂದಾ ಮಂದಕಾಃ ಷಂಡಾ ವಿದರ್ಭಾನೂಪವಾಸಿಕಾಃ ।
ಅಶ್ಮಕಾಃ ಪಾಂಸುರಾಷ್ಟ್ರಾಶ್ಚ ಗೋಪರಾಷ್ಟ್ರಾಃ ಪನೀತಕಾಃ ॥೪೨॥

ಪಾಂಚಾಲ, ಕೌಶಿಜ, ಏಕಪೃಷ್ಠ, ಯುಗಂಧರ, ಸೌಧ, ಮದ್ರ, ಭುಜಂಗ, ಕಾಶಿ, ಅಪರಕಾಶಿ, ಜಠರ, ಕುಕ್ಕುಶ, ಸುದಾಶಾರ್ಣ, ಕುಂತಿ, ಅವಂತಿ, ಅಪರಕುಂತಿ, ಗೋವಿಂದ, ಮಂದಕ, ಷಂಡ, ವಿದರ್ಭ, ಅನುಪವಾಸಿ, ಅಶ್ಮಕ, ಪಾಂಸುರಾಷ್ಟ್ರ, ಗೋಪರಾಷ್ಟ್ರ, ಪನೀತಕ;

ಆದಿರಾಷ್ಟ್ರಾಃ ಸುಕುಟ್ಟಾಶ್ಚ ಬಲಿರಾಷ್ಟ್ರಂ ಚ ಕೇವಲಮ್ ।
ವಾನರಾಸ್ಯಾಃ ಪ್ರವಾಹಾಶ್ಚ ವಕ್ರಾ ವಕ್ರಭಯಾಃ ಶಕಾಃ ॥೪೩॥

ವಿದೇಹಕಾ ಮಾಗಧಾಶ್ಚ ಸುಹ್ಮಾಶ್ಚ ವಿಜಯಾಸ್ತಥಾ ।
ಅಂಗಾ ವಂಗಾಃ ಕಳಿಂಗಾಶ್ಚ ಯಕೃಲ್ಲೋಮಾನ ಏವ ಚ ॥೪೪॥

ಮಲ್ಲಾಃ ಸುದೇಷ್ಣಾಃ ಪ್ರಾಹೂತಾಸ್ತಥಾ ಮಾಹಿಷಕಾರ್ಷಿಕಾಃ ।
ವಾಹೀಕಾ ವಾಟಧಾನಾಶ್ಚ ಆಭೀರಾಃ ಕಾಲತೋಯಕಾಃ ॥೪೫॥

ಆದಿರಾಷ್ಟ್ರ, ಸುಕುಟ್ಟ, ಬಲಿರಾಷ್ಟ್ರ, ವಾನರಾಸ್ಯ, ಪ್ರವಾಹ, ವಕ್ರ, ವಕ್ರಭಯ, ಶಕ, ವಿದೇಹಕ, ಮಾಗಧ, ಸುಹ್ಮ, ವಿಜಯ, ಅಂಗ, ವಂಗ, ಕಳಿಂಗ, ಯಕೃಲ್ಲೋಮ, ಮಲ್ಲಾ, ಸುದೇಷ್ಣ, ಪ್ರಾಹೂತ, ಮಾಹಿಷಕಾರ್ಷಿಕ, ವಾಹೀಕ, ವಾಟಧಾನ, ಆಭೀರ, ಕಾಲತೋಯಕ;

ಅಪರಾಂಧ್ರಾಶ್ಚ ಶೂದ್ರಾಶ್ಚ ಪಲ್ಲವಾಶ್ಚರ್ಮಖಂಡಿಕಾಃ ।
ಅಟವೀಶಾಬರಾಶ್ಚೈವ ಮರುಭೌಮಾಶ್ಚ ಮಾರಿಷ ॥೪೬॥

ಉಪಾವೃತ್ತಾಶ್ಚಾನುಪಾವೃತ್ತಾಃ ಸುರಾಷ್ಟ್ರಾಃ ಕೇಕಯಾಸ್ತಥಾ ।
ಕುಟ್ಟಾಃ ಪರಾಂತಾ ದ್ವೈಧೇಯಾಃ ಕಾಕ್ಷಾಃ ಸಾಮುದ್ರನಿಷ್ಕುಟಾಃ ॥೪೭॥

ಆಂಧ್ರಾಶ್ಚ ಬಹವೋ ರಾಜನ್ನಂತರ್ಗಿರ್ಯಾಸ್ತಥೈವ ಚ ।
ಬಾಹಿರ್ಗಿರ್ಯಾಂಗಮಲದಾ ಮಾಗಧಾ ಮಾನವರ್ಜಕಾಃ ॥೪೮॥

ಅಪರಾಂಧ್ರ, ಶೂದ್ರ, ಪಲ್ಲವ, ಚರ್ಮಖಂಡಿಕ, ಅಟವೀಶಬರ, ಮರುಭೌಮ, ಉಪಾವೃತ್ತ, ಅನುಪಾವೃತ್ತ, ವಸುರಾಷ್ಟ್ರ, ಕೇಕಯ, ಕುಟ್ಟ, ಪರಾಂತ, ದ್ವೈಧೇಯ, ಕಾಕ್ಷ, ಸಾಮುದ್ರನಿಷ್ಕುಟ, ಆಂಧ್ರ, ಅನೇಕ ಅಂತರ್ಗಿರಿ ದೇಶಗಳು, ಬಹಿರ್ಗಿರಿ ದೇಶಗಳು, ಅಂಗ, ಮಲದ,ಮಾಗಧ, ಮಾನವರ್ಜಕ;

ಮಹ್ಯುತ್ತರಾಃ ಪ್ರಾವೃಷೇಯಾ ಭಾರ್ಗವಾಶ್ಚ ಜನಾಧಿಪ ।
ಪುಂಡ್ರಾ ಭಾರ್ಗಾಃ ಕಿರಾತಾಶ್ಚ ಸುದೋಷ್ಣಾಃ ಪ್ರಮುದಾಸ್ತಥಾ ॥೪೯॥

ಶಕಾ ನಿಷಾದಾ ನಿಷಧಾಸ್ತಥೈವಾನರ್ತನೈರ್ಯತಾಃ ।
ದುಗೂಲಾಃ ಪ್ರತಿಮತ್ಸ್ಯಾಶ್ಚ ಕುಶಲಾಃ ಕುನಟಾಸ್ತಥಾ ॥೫೦॥

ತೀರಗ್ರಾಹಾಸ್ತರತೋಯಾ ರಾಜಕಾ ರಸ್ಯಕಾ ಗಣಾಃ ।
ತಿಲಕಾಃ ಪಾರಸೀಕಾಶ್ಚ ಮಧುಮಂತಃ ಪ್ರಕುತ್ಸಕಾಃ ॥೫೧॥

ಮಹ್ಯುತ್ತರ, ಪ್ರಾವೃಷೇಯ, ಭಾರ್ಗವ, ಪುಂಡ್ರ, ಭಾರ್ಗ, ಕಿರಾತ, ಸುದೋಷ್ಣ, ಪ್ರಮುದ, ಶಕ, ನಿಷಾದ, ನಿಷಧ, ಆನರ್ತ, ನೈಋತ, ದುಗೂಲ, ಪ್ರತಿಮತ್ಸ್ಯ, ಕುಶಲ, ಕುನಟ, ತೀರಗ್ರಹ, ಕರತೋಯ, ರಾಜಕ, ರಸ್ಯಕ, ಗಣ, ತಿಲಕ, ಪಾರಸೀಕ, ಮಧುಮಂತ, ಪ್ರಕುತ್ಸಕ;

ಕಾಶ್ಮೀರಾಃ ಸಿಂಧುಸೌವೀರಾ ಗಾಂಧಾರಾ ದರ್ಶಕಾಸ್ತಥಾ ।
ಅಭೀಸಾರಾ ಕುಲೂತಾಶ್ಚ ಶೈವಲಾ ಬಾಹ್ಲಿಕಾಸ್ತಥಾ ॥೫೨॥

ದರ್ವೀಕಾಃ ಸಕಚಾ ದರ್ವಾ ವಾತಜಾಮರಥೋರಗಾಃ ।
ಬಹುವಾದ್ಯಾಶ್ಚ ಕೌರವ್ಯ ಸುದಾಮಾನಃ ಸುಮಲ್ಲಿಕಾಃ ॥೫೩॥

ವಧ್ರಾಃ ಕರೀಷಕಾಶ್ಚಾಪಿ ಕುಳಿಂದೋಪತ್ಯಕಾಸ್ತಥಾ ।
ವಾನಾಯವೋ ದಶಾಪಾರ್ಶ್ವಾ ರೋಮಾಣಃ ಕುಶಬಿಂದವಃ ॥೫೪॥

ಕಾಶ್ಮೀರ, ಸಿಂಧುಸೌವೀರ, ಗಾಂಧಾರ, ದರ್ಶಕ, ಅಭೀಸಾರ, ಕುಲೂತ, ಶೈವಲ, ಬಾಹ್ಲಿಕ, ದರ್ವೀಕ, ಕಚ, ದರ್ವ, ವಾತಜಾಮ, ರಥೋರಗ, ಬಹುವಾದ್ಯ, ಸುದಾಮ, ಸುಮಲ್ಲಿಕ, ವಧ್ರ, ಕರೀಷಕ, ಕುಳಿಂದ, ಉಪತ್ಯಕ, ವಾನಾಯವ, ದಶಾಪಾರ್ಶ್ವ, ರೋಮ, ಕುಶಬಿಂದು;

ಕಚ್ಛಾ ಗೋಪಾಲಕಚ್ಛಾಶ್ಚ ಲಾಂಗಲಾಃ ಪರವಲ್ಲಕಾಃ ।
ಕಿರಾತಾ ಬರ್ಬರಾಃ ಸಿದ್ಧಾ ವಿದೇಹಾಸ್ತಾಮ್ರಲಿಂಗಕಾಃ ॥೫೫॥

ಓಷ್ಟ್ರಾಃ ಪುಂಡ್ರಾಃ ಸಸೈರಂಧ್ರ್ಯಾಃ ಪಾರ್ವತೀಯಾಶ್ಚ ಮಾರಿಷ ।
ಅಥಾಪರೇ ಜನಪದಾ ದಕ್ಷಿಣಾ ಭರತರ್ಷಭ ॥೫೬॥

ದ್ರವಿಡಾಃ ಕೇರಳಾಃ ಪ್ರಾಚ್ಯಾ ಭೂಷಿಕಾ ವನವಾಸಿನಃ ।
ಉನ್ನತ್ಯಕಾ ಮಾಹಿಷಕಾ ವಿಕಲ್ಪಾ ಮೂಷಕಾಸ್ತಥಾ ॥೫೭॥

ಕಚ್ಛ, ಗೋಪಾಲಕಚ್ಛ, ಲಾಂಗಲ, ಪರವಲ್ಲಕ, ಕಿರಾತ, ಬರ್ಬರ, ಸಿದ್ಧ, ವಿದೇಹ, ತಾಮ್ರಲಿಂಗಕ, ಓಷ್ಟ್ರ, ಪುಂಡ್ರ, ಸೈರಂಧ್ರ, ಪಾರ್ವತೀಯ; ಎಲೈ ವೀರನಾದ ಭರತರ್ಷಭನೇ, ಇನ್ನು ಮುಂದಿನವು ದಕ್ಷಿಣ ಭಾಗದ ದೇಶಗಳು– ದ್ರವಿಡ, ಕೇರಳ, ಪ್ರಾಚ್ಯ, ಭೂಷಿಕ, ವನವಾಸಿ, ಉನ್ನತ್ಯಕ, ಮಾಹಿಷಕ, ವಿಕಲ್ಪ, ಮೂಷಕ;

ಕರ್ಣಾಃ ಕುಂತಿಕಾಶ್ಚೈವ ಸೌದ್ಭಿದಾ ನಲವಾಲಕಾಃ ।
ಕೌಕುಕ್ಕುಟಸ್ಥಾ ಚೋಲಾಃ ಕೋಂಕಣಾ ಮಾಲವಾಣಕಾಃ ॥೫೮॥

ಸಮಂಗಾಃ ಕೋಪನಾಶ್ಚೈವ ಕುಕುರಾಂಗದಮಾರಿಷಾಃ ।
ಧ್ವಜೀಯುತ್ಸವಸಂಕೇತಾಸ್ತ್ರಿಗರ್ತಾಃ ಸರ್ವಸೇನಯಃ ॥೫೯॥

ತ್ರ್ಯಂಗಾಃ ಕೇಕರಾಃ ಪ್ರೋಷ್ಯಾಃ ಪರಸಂಚರಕಾಸ್ತಥಾ ।
ತಥೈವ ಏಂಧ್ಯಪುಲಕಾಃ ಪುಲಿಂದಾಃ ಕಲ್ಕಲೈಃ ಸಹ ॥೬೦॥

ಕರ್ಣಕ, ಕುಂತಿಕ, ಸೌದ್ಭಿದ, ನಲಕಾಲಕ, ಕೌಕುಕ್ಕುಟಕ, ಚೋಲ, ಕೊಂಕಣ, ಮಾಲವಾಣಕ, ಸಮಂಗ, ಕೋಪನ, ಕುಕುರ, ಅಂಗದ, ಮಾರಿಷ, ಧ್ವಜ, ಉತ್ಸವಸಂಕೇತ, ತ್ರಿಗರ್ತ, ಸರ್ವಸೇನಿ, ತ್ರ್ಯಂಗ, ಕೇಕರಕ, ಪ್ರೋಷ್ಯ, ಪರಸಂಚರಕ, ಏಂಧ್ಯಪುಲಕ, ಪುಲಿಂದ, ಕಲ್ಕಲ;

ಮಾಲಕಾ ಮಲ್ಲಕಾಶ್ಚೈವ ತಥೈವಾಪರಮರ್ತಕಾಃ ।
ಕುಲಿಂದಾಃ ಕುಲಕಾಶ್ಚೈವ ಕರಂಠಾಃ ಕುರಕಾಸ್ತಥಾ ॥೬೧॥

ಮೂಷಕಾ ಸ್ತನಬಾಲಾಶ್ಚ ಸನೀಪಾಃ ಪತ್ತಿಪಂಜಕಾಃ ।
ಆದಿದಾಯಾಃ ಸಿರಾಲಾಶ್ಚ ಸ್ತೂಬಕಾ ಸ್ತನಪಾಸ್ತಥಾ ॥೬೨॥

ಹೃಷೀವಿದರ್ಭಾಃ ಕಾಂತೀಕಾಸ್ತಂಗಣಾಃ ಪರತಂಗಣಾಃ ।
ಉತ್ತರಾಶ್ಚಾಪರೇ ಮ್ಲೇಚ್ಛಾ ಜನಾ ಭರತಸತ್ತಮ ॥೬೩॥

ಮಾಲಕ, ಮಲ್ಲಕ, ಅಪರಮರ್ತಕ, ಕುಲಿಂದ, ಕುಲಕ, ಕರಂಠ, ಕುರಕ, ಮೂಷಕ, ಸ್ತನಬಾಲ, ಸನೀಪ, ಪತ್ತಿಪಂಜಕ, ಆದಿದಾಯ, ಸಿರಾಲ, ಸ್ತೂಬಕ, ಸ್ತನಪ, ಹೃಷೀವಿದರ್ಭ, ಕಾಂತೀಕ, ತಂಗಣ, ಪರತಂಗಣ; ಎಲೈ ಭಾರತಶ್ರೇಷ್ಠನೇ, ಇನ್ನು ಕೆಲವು ಉತ್ತರದಿಕ್ಕಿನ ಮ್ಲೇಚ್ಛಪ್ರದೇಶಗಳು.

ಯವನಾಶ್ಚೈವ ಸಕಾಂಬೋಜಾ ದಾರುಣಾ ಮ್ಲೇಚ್ಛಜಾತಯಃ ।
ಸಕ್ಷದ್ದ್ರುಹಃ ಕುಂತಲಾಶ್ಚ ಹೂಣಾಃ ಪಾರತಕೈಃ ಸಹ ॥೬೪॥

ತಥೈವ ಮರಧಾಶ್ಚೀನಾಸ್ತಥೈವ ದಶಮಾಲಿಕಾಃ ।
ಕ್ಷತ್ರಿಯೋಪನಿವೇಶಾಶ್ಚ ವೈಶ್ಯಶೂದ್ರಕುಲಾನಿ ಚ ॥೬೫॥

ಶೂದ್ರಾಭೀರಾಥ ದರದಾಃ ಕಾಶ್ಮೀರಾಃ ಪಶುಭಿಃ ಸಹ ।
ಖಶಿಕಾಶ್ಚ ತುಖಾರಾಶ್ಚ ಪಲ್ಲವಾ ಗಿರಿಗಹ್ವರಾಃ ॥೬೬॥

ಅವು ಯವನ, ಕಾಂಬೋಜ, ದಾರುಣ, ಸಕ್ಷದ್ಮುಹ, ಕುಂತಲ, ಹೂಣ, ಪಾರತಕ ಮೊದಲಾದ ಮ್ಲೇಚ್ಛಪ್ರದೇಶಗಳು. ಆದರಂತೆ ಮರಧ, ಚೀನ, ದಶಮಾಲಿಕ, ಕ್ಷತ್ರಿಯರು ಮತ್ತು ವೈಶ್ಯ-ಶೂದ್ರರು ವಾಸಿಸುವ ಪ್ರದೇಶಗಳು. ಶೂದ್ರ, ಆಭೀರ, ದರದ, ಕಾಶ್ಮೀರ, ಪಶು, ಖಶಿಕ, ತುಖಾರ, ಪಲ್ಲವ, ಗಿರಿಗಹ್ವರ;

ಆತ್ರೇಯಾಃ ಸಭರದ್ವಾಜಾಸ್ತಥೈವ ಸ್ತನಯೋಷಿಕಾಃ ।
ಔಪಕಾಶ್ಚ ಕಲಿಂಗಾಶ್ಚ ಕಿರಾತಾನಾಂ ಚ ಜಾತಯಃ ॥೬೭॥

ತಾಮರಾ ಹಂಸಮಾರ್ಗಾಶ್ಚ ತಥೈವ ಕರಭಂಜಕಾಃ ।
ಉದ್ದೇಶಮಾತ್ರೇಣ ಮಯಾ ದೇಶಾಃ ಸಂಕೀರ್ತಿತಾಃ ಪ್ರಭೋ ॥೬೮॥

ಆತ್ರೇಯ, ಭರದ್ವಾಜ, ಸ್ತನಯೋಷಿಕ, ಔಪಕ, ಕಲಿಂಗ, ಕಿರಾತ, ತಾಮರ, ಹಂಸಮಾರ್ಗ, ಕರಭಂಜಕ ಮೊದಲಾದವುಗಳು. ಎಲೈ ಪ್ರಭುವಾದ ಧೃತರಾಷ್ಟ್ರನೇ, ನಾನು ಕೇವಲ ಹೆಸರುಗಳಿಂದ ಮಾತ್ರ ನಿನಗೆ ದೇಶಗಳನ್ನು ಹೇಳಿದ್ದೇನೆ.

ಯಥಾಗುಣಬಲಂ ಚಾಪಿ ತ್ರಿವರ್ಗಸ್ಯ ಮಹಾಫಲಮ್ ।
ದುಹ್ಯೇದ್ ಧೇನುಃ ಕಾಮಧುಕ್ ಚ ಭೂಮಿಃ ಸಮ್ಯಗನುಷ್ಠಿತಾ ॥೬೯॥

ಹೇಗೆ ಧೇನುವು ಅದರ ಗುಣ ಮತ್ತು ಬಲಕ್ಕನುಗುಣವಾಗಿ ಸೇವಿಸಿದರೆ ಧರ್ಮಾರ್ಥಕಾಮರೂಪವಾದ ತ್ರಿವರ್ಗ ಫಲವನ್ನು ಕೊಡುವುದೋ, ಅದರಂತೆ ಭೂಮಿಯನ್ನು ಸರಿಯಾಗಿ ಪೋಷಿಸಿದರೆ ಕೇಳಿದ ಕಾಮವನ್ನು ಕೊಡುವುದು.

ತಸ್ಯಾಂ ಗೃಧ್ಯಂತಿ ರಾಜಾನಃ ಶೂರಾ ಧರ್ಮಾರ್ಥಕೋವಿದಾಃ ।
ತೇ ತ್ಯಜಂತ್ಯಾಹವೇ ಪ್ರಾಣಾನ್ ರಸಾಗೃದ್ಧಾಸ್ತರಸ್ವಿನಃ ॥೭೦॥

ಶೂರರೂ, ಧರ್ಮಾರ್ಥಕೋವಿದರೂ ಆದ ರಾಜರು ಆ ಭೂಮಿಯಲ್ಲಿ ಆಸೆಯುಳ್ಳವರಾಗುತ್ತಾರೆ. ಭೂಮಿಯಲ್ಲಿ ಮಹದಾಸೆಯುಳ್ಳ ವೇಗಶಾಲಿಗಳಾದ ಅವರು ಯುದ್ಧದಲ್ಲಿ ತಮ್ಮ ಪ್ರಾಣಗಳನ್ನು ತ್ಯಜಿಸುತ್ತಾರೆ.

ದೇವಮಾನುಷಕಾಯಾನಾಂ ಕಾಮಂ ಭೂಮಿಃ ಪರಾಯಣಮ್ ।
ಅನ್ಯೋನ್ಯಸ್ಯಾವಲುಂಪಂತಿ ಸಾರಮೇಯಾ ಇವಾಮಿಷಮ್ ॥೭೧॥

ದೇವತೆಗಳ ಮತ್ತು ಮನುಷ್ಯರ ಶರೀರವನ್ನು ಧರಿಸಿದವರಿಗೆ ಭೂಮಿಯು ಶ್ರೇಷ್ಠವಾದ ಆಶ್ರಯವಾದುದು. ನಾಯಿಗಳು ಮಾಂಸವನ್ನು ಎಳೆದಾಡಿದಂತೆ ಒಬ್ಬರನ್ನೊಬ್ಬರು ಘಾಸಿಗೊಳಿಸುತ್ತಾರೆ.

ರಾಜಾನೋ ಭರತಶ್ರೇಷ್ಠ ಭೋಕ್ತುಕಾಮಾ ವಸುಂಧರಾಮ್ ।
ನ ಚಾಪಿ ತೃಪ್ತಿಃ ಕಾಮಾನಾಂ ವಿದ್ಯತೇ ಚೇಹ ಕಸ್ಯಚಿತ್ ॥೭೨॥

ಎಲೈ ಭರತಶ್ರೇಷ್ಠನೇ, ಎಲ್ಲರಾಜರೂ ಭೂಮಿಯನ್ನು ಭೋಗಿಸಲು ಬಯಸುತ್ತಾರೆ. ಆದರೂ ತೃಪ್ತಿಯನ್ನು ಹೊಂದುವುದಿಲ್ಲ. ಈ ಪ್ರಪಂಚದಲ್ಲಿ ಕಾಮದಿಂದ ತೃಪ್ತಿಯೇ ಇಲ್ಲವಷ್ಟೆ?

ತಸ್ಮಾತ್ ಪರಿಗ್ರಹೇ ಭೂಮಿರ್ಯತಂತೇ ಕುರುಪಾಂಡವಾಃ ।
ಸಾಮ್ನಾ ದಾನೇನ ಭೇದೇನ ದಂಡೇನೈವ ಚ ಪಾರ್ಥಿವ ॥೭೩॥

ಎಲೈ ರಾಜನೇ, ಆದ್ದರಿಂದ ಕುರು-ಪಾಂಡವರು ಸಾಮ, ದಾನ, ಭೇದ ಮತ್ತು ದಂಡೋಪಾಯಗಳಿಂದ ಭೂಮಿಯನ್ನು ಪಡೆಯಲು ಯತ್ನಿಸುತ್ತಾರೆ.

ಪಿತಾ ಮಾತಾ ಚ ಪುತ್ರಶ್ಚ ಖಂ ದ್ಯೌಶ್ಚ ನರಪುಂಗವ ।
ಭೂಮಿರ್ಭವತಿ ಭೂತಾನಾಂ ಸಮ್ಯಗಚ್ಚಿದ್ರದರ್ಶಿನಾಮ್ ॥೭೪॥

ಭೂಮಿಯ ದೋಷವನ್ನು ಎಣಿಸದೇ ಪೂಜಿಸುವ ಎಲ್ಲ ಜೀವರಿಗೆ ಎಲೈ ನರಶ್ರೇಷ್ಠನೇ, ಭೂಮಿಯು ತಂದೆಯೂ, ತಾಯಿಯೂ, ಪುತ್ರನೂ, ಅಂತರಿಕ್ಷವೂ, ಸ್ವರ್ಗವೂ ಆಗುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ದಶಮೋಽಧ್ಯಾಯಃ ॥

॥ ಇತಿ ಜಂಬೂಖಂಡನಿರ್ಮಾಣಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೊಂದನೆಯ ಅಧ್ಯಾಯ

ಚತುರ್ಯುಗದ ಪುರುಷರ ಆಯುರಾದಿ ವರ್ಣನೆ.

ಧೃತರಾಷ್ಟ್ರಃ

ಭಾರತಸ್ಯಾಸ್ಯ ವರ್ಷಸ್ಯ ತಥಾ ಹೈಮವತಸ್ಯ ಚ ।
ಪ್ರಮಾಣಮಾಯುಷಃ ಸೂತ ಫಲಂ ಚಾಪಿ ಶುಭಾಶುಭಮ್ ॥೧॥

ಅನಾಗತಮತಿಕ್ರಾಂತಂ ವರ್ತಮಾನಂ ಚ ಸಂಜಯ ।
ಆಚಕ್ಷ್ವ ಮೇ ವಿಸ್ತರೇಣ ಹರಿವರ್ಷಂ ತಥೈವ ಚ ॥೨॥

ಧೃತರಾಷ್ಟ್ರ- ಎಲೈ ಸಂಜಯನೇ, ಈ ಭಾರತವರ್ಷದ ಹಾಗೂ ಹೈಮವತ ವರ್ಷದ ಆಯುಃಪ್ರಮಾಣವನ್ನು ಹೇಳು. ಎಲೈ ಸೂತನೇ, ಈಗಿರುವ, ಹಿಂದೆ ಉಂಟಾದ ಮತ್ತು ಮುಂದೆ ಬರಲಿರುವ ಶುಭಾಶುಭದ ಫಲಗಳನ್ನು ವಿಸ್ತಾರವಾಗಿ ಹೇಳು. ಅದರಂತೆ ಹರಿವರ್ಷದ ವಿಷಯವನ್ನೂ ನಿರೂಪಿಸು.

ಸಂಜಯಃ

ಚತ್ವಾರಿ ಭಾರತೇ ವರ್ಷೇ ಯುಗಾನಿ ಭರತರ್ಷಭ ।
ಕೃತಂ ತ್ರೇತಾ ದ್ವಾಪರಂ ಚ ತಿಷ್ಯಂ ಚ ಕುರುವರ್ಧನ ॥೩॥

ಸಂಜಯ- ಎಲೈ ಭರತರ್ಷಭನೇ, ಭಾರತವರ್ಷದಲ್ಲಿ ನಾಲ್ಕು ಯುಗಗಳು ಇವೆ. ಕುರುವರ್ಧನನೇ, ಅವು ಕೃತ, ತ್ರೇತ, ದ್ವಾಪರ ಮತ್ತು ಕಲಿ ಎಂದು.

ಪೂರ್ವಂ ಕೃತಯುಗಂ ನಾಮ ತತಸ್ತ್ರೇತಾಯುಗಂ ವಿಭೋ ।
ಸಂಕ್ಷೇಪಾದ್ ದ್ವಾಪರಸ್ಯಾಥ ತತಃಷ್ಯಂ ಪ್ರವರ್ತತೇ ॥೪॥

ಮೊದಲು ಕೃತಯುಗವು ಉಂಟಾಗುತ್ತದೆ. ಎಲೈ ವಿಭುವೇ, ಅನಂತರ ತ್ರೇತಾಯುಗ. ಅನಂತರ ಮುಗಿಯಲು ಬಂದಿರುವ ಈ ದ್ವಾಪರ ಯುಗ. ಅನಂತರ ಕಲಿಯುಗವು ಪ್ರವೃತ್ತವಾಗುತ್ತದೆ.

ಚತ್ವಾರಿ ಚ ಸಹಸ್ರಾಣಿ ವರ್ಷಾಣಾಂ ಕುರುಸತ್ತಮ ।
ಆಯುಷಸಂಖ್ಯಾ ಕೃತಯುಗೇ ಸಂಖ್ಯಾತಾ ರಾಜಸತ್ತಮ ॥೫॥

ಎಲೈ ಕುರುಶ್ರೇಷ್ಠನೇ, ರಾಜಶ್ರೇಷ್ಠನೇ, ಕೃತಯುಗದಲ್ಲಿ ಮನುಷ್ಯರಿಗೆ ನಾಲ್ಕು ಸಹಸ್ರವರ್ಷಗಳು ಆಯುಃಪ್ರಮಾಣವೆಂದು ಪರಿಗಣನೆ ಮಾಡಲ್ಪಟ್ಟಿದೆ.

ತಥಾ ತ್ರೀಣಿ ಸಹಸ್ರಾಣಿ ತ್ರೇತಾಯಾಂ ಮನುಜಾಧಿಪ ।
ದ್ವಿಸಹಸ್ರಂ ದ್ವಾಪರೇ ತು ಶತೇ ತಿಷ್ಠತಿ ಸಂಪ್ರತಿ ॥೬॥

ಎಲೈ ಮನುಜಾಧಿಪನೇ, ಅದರಂತೆ ತ್ರೇತಾಯುಗದಲ್ಲಿ ಮೂರುಸಹಸ್ರ ವರ್ಷಗಳು, ದ್ವಾಪರ ಯುಗದಲ್ಲಿ ಎರಡು ಸಹಸ್ರವರ್ಷಗಳು (ಆದು ಕಡಿಮೆಯಾಗಿ ಈಗ ನೂರಕ್ಕೆ ಬಂದು ನಿಂತಿದೆ).

ನ ಪ್ರಮಾಣಸ್ಥಿತಿರ್ಹ್ಯಸ್ತಿ ತಿಷ್ಯೇऽಸ್ಮಿನ್ ಭರತರ್ಷಭ ।
ಗರ್ಭಸ್ಥಾಶ್ಚ ಮ್ರಿಯಂತೇऽತ್ರ ತಥಾ ಜಾತಾ ಮ್ರಿಯಂತಿ ಚ ॥೭॥

ಎಲೈ ಭರತರ್ಷಭನೇ, ಕಲಿಯುಗದಲ್ಲಿ ಇಷ್ಟೇ ಆಯುಸ್ಸು ಎಂಬ ನಿಯಮವಿಲ್ಲ. ಗರ್ಭದಲ್ಲಿದ್ದ ಶಿಶುಗಳೂ ಮೃತವಾಗುತ್ತವೆ ಮತ್ತು ಆಗ ತಾನೇ ಹುಟ್ಟಿದವುಗಳೂ ಮೃತವಾಗುತ್ತವೆ.

ಮಹಾಬಲಾ ಮಹಾಸತ್ತ್ವಾಃ ಪ್ರಜಾ ಗುಣಸಮನ್ವಿತಾಃ ।
ಅಜಾಯಂತ ಕೃತೇ ರಾಜನ್ ಮುನಯಃ ಸುತಪೋಧನಾಃ ॥೮॥

ಎಲೈ ರಾಜನೇ, ಕೃತಯುಗದಲ್ಲಿ ಮಹಾಬಲವುಳ್ಳ, ಮಹಾಧೈರ್ಯವುಳ್ಳ, ಗುಣಸಮನ್ವಿತರಾದ, ತಪೋಧನರಾದ ಋಷಿಗಳು ಜನಿಸಿದರು.

ಮಹೋತ್ಸಾಹಾ ಮಹಾತ್ಮಾನೋ ಧಾರ್ಮಿಕಾಃ ಸತ್ಯವಾದಿನಃ ।
ಜಾತಾಃ ಕೃತಯುಗೇ ರಾಜನ್ ಧನಿನಃ ಪ್ರಿಯದರ್ಶನಾಃ ॥೯॥

ಎಲೈ ರಾಜನೇ, ಕೃತಯುಗದಲ್ಲಿ ಜನಿಸಿದವರು ಮಹಾಉತ್ಸಾಹಶಾಲಿಗಳೂ, ಮಹಾಪ್ರಯತ್ನಶೀಲರೂ, ಧಾರ್ಮಿಕರೂ, ಸತ್ಯವಾದಿಗಳೂ, ಶ್ರೀಮಂತರೂ ಮತ್ತು ನೋಡಲು ಸುಂದರರೂ ಆಗಿದ್ದರು.

ಆಯುಷ್ಮಂತೋ ಮಹಾವೀರಾ ಧನುರ್ಧರವರಾ ಯುಧಿ ।
ಜಾಯಂತೇ ಕ್ಷತ್ರಿಯಾಃ ಶೂರಾಸ್ತ್ರೇತಾಯಾಂ ಚಕ್ರವರ್ತಿನಃ ॥೧೦॥

ತ್ರೇತಾಯುಗದಲ್ಲಿ ದೀರ್ಘವಾದ ಆಯುಸ್ಸುಳ್ಳ ಮಹಾವೀರರೂ, ಯುದ್ಧದಲ್ಲಿ ಶ್ರೇಷ್ಠಧನುರ್ಧಾರಿಗಳೂ, ಶೂರರೂ ಆದ ಕ್ಷತ್ರಿಯ ಚಕ್ರವರ್ತಿಗಳು ಜನಿಸುತ್ತಾರೆ.

ಸರ್ವವರ್ಣಾ ಮಹಾರಾಜ ಜಾಯಂತೇ ದ್ವಾಪರೇ ಸತಿ ।
ಮಹೋತ್ಸಾಹಾ ಮಹಾವೀರ್ಯಾಃ ಪರಸ್ಪರವಧೈಷಿಣಃ ॥೧೧॥

ಮಹಾರಾಜನೇ, ದ್ವಾಪರಯುಗದಲ್ಲಿ ಎಲ್ಲ ವರ್ಣದವರೂ ಮಹಾ ಉತ್ಸಾಹ ಮತ್ತು ಮಹಾಪರಾಕ್ರಮದಿಂದ ಕೂಡಿ ಪರಸ್ಪರ ವಧೆಯನ್ನು ಬಯಸುತ್ತಾ ಜನಿಸುತ್ತಾರೆ.

ತೇಜಸಾऽಲ್ಪೇನ ಸಂಯುಕ್ತಾಃ ಕ್ರೋಧನಾಃ ಪುರುಷಾ ನೃಪ ।
ಲುಬ್ಧಾಶ್ಚಾನೃತಕಾಶ್ಚೈವ ತಿಷ್ಯೇ ಜಾಯಂತಿ ಭಾರತ ॥೧೨॥

ಎಲೈ ಭಾರತನೇ, ಕಲಿಯುಗದಲ್ಲಿ ಜನಿಸುವವರು ಅಲ್ಪಸಾಮರ್ಥ್ಯವುಳ್ಳವರು, ಕ್ರೋಧಶೀಲರು, ಲೋಭಿಗಳು ಮತ್ತು ಸುಳ್ಳು ಹೇಳುವವರು.

ಈರ್ಷ್ಯಾ ಮಾನಸ್ತಥಾ ಕ್ರೋಧೋ ಮಾಯಾऽಸೂಯಾ ತಥೈವ ಚ ।
ತಿಷ್ಯೇ ಭವಂತಿ ಮರ್ತ್ಯಾನಾಂ ರಾಗೋ ಲೋಭಶ್ಚ ಭಾರತ ॥೧೩॥

ಎಲೈ ಭಾರತನೇ, ಮಾತ್ಸರ್ಯ, ಅಹಂಕಾರ, ಕ್ರೋಧ, ಕಪಟ, ಅಸೂಯೆ, ರಾಗ ಮತ್ತು ಲೋಭಗಳು ಕಲಿಯುಗದಲ್ಲಿ ಜನಿಸಿದ ಪುರುಷರಿಗೆ ಉಂಟಾಗುತ್ತವೆ.

ಸಂಕ್ಷೇಪೋ ವರ್ತತೇ ರಾಜನ್ ದ್ವಾಪರೇऽಸ್ಮಿನ್ ನರಾಧಿಪ ।
ಗುಣೋತ್ತರಂ ಹೈಮವತಂ ಹರಿವರ್ಷಂ ತತಃ ಪರಮ್ ॥೧೪॥

ಎಲೈ ರಾಜನೇ, ನರಾಧಿಪನೇ, ಈ ದ್ವಾಪರ ಯುಗವು ಕೊನೆಗೊಳ್ಳುತ್ತಿದೆ. ಭಾರತದ ಉತ್ತರದಲ್ಲಿರುವ ಹೈಮವತ ವರ್ಷ ಮತ್ತು ಅದರ ಉತ್ತರದಲ್ಲಿರುವ ಹರಿವರ್ಷಗಳು ಭಾರತಕ್ಕಿಂತಲೂ ಮೇಲೆ ಹೋದಂತೆ ಶ್ರೇಷ್ಠವಾದ ಗುಣಗಳನ್ನು ಹೊಂದಿವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಏಕಾದಶೋऽಧ್ಯಾಯಃ ॥

ಜಂಬೂಖಂಡನಿರ್ಮಾಣಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಜಂಬೂಖಂಡವಿನಿರ್ಮಾಣಪರ್ವ ॥

★ ★ ★ ★ ★

೨. ಭೂಮಿಪರ್ವ

ಹನ್ನೆರಡನೆಯ ಅಧ್ಯಾಯ

ಶಾಕದ್ವೀಪ ವರ್ಣನೆ.

ಧೃತರಾಷ್ಟ್ರ:

ಜಂಬೂಖಂಡಸ್ಯ ತ್ವಯಾ ಪ್ರೋಕ್ತೋ ಯಥಾವದಿಹ ಸಂಜಯ ।
ವಿಷ್ಕಂಭಮಸ್ಯ ಪ್ರಬ್ರೂಹಿ ಪರಿಮಾಣಂ ಚ ತತ್ತ್ವತಃ ॥೧॥

ಧೃತರಾಷ್ಟ್ರ- ಎಲೈ ಸಂಜಯನೇ, ನೀನು ಇಲ್ಲಿಯವರೆಗೆ ಜಂಬೂದ್ವೀಪವನ್ನು ಸರಿಯಾಗಿ ಹೇಳಿದ್ದೀಯೆ. ಜಂಬೂದ್ವೀಪದ ಗಾತ್ರವನ್ನು ಮತ್ತು ಪರಿಮಾಣವನ್ನು ಸರಿಯಾಗಿ ಹೇಳುವವನಾಗು.

ಜಂಬೂದ್ವೀಪದ ಆಯಾಮ-ವಿಸ್ತಾರಗಳು ಒಂದುಲಕ್ಷ ಯೋಜನವೆಂದು ಪ್ರಸಿದ್ಧವಾಗಿರುವುದರಿಂದ ಇಲ್ಲಿ ಅದರ ಬಗ್ಗೆ ಪ್ರಶ್ನೆಯಲ್ಲ. ಜಂಬೂದ್ವೀಪದ ಕೆಳಭಾಗದಿಂದ ಹಿಡಿದು ಮೇಲ್ಭಾಗದವರೆಗೆ ಇರುವ ಗಾತ್ರ (ಎತ್ತರವೆಷ್ಟು) ಎಂದೇ ಪ್ರಶ್ನೆ (ಲಕ್ಷಾಲಂಕಾರ).

ಸಮುದ್ರಸ್ಯ ಪ್ರಮಾಣಂ ಚ ಸಮ್ಯಗಚ್ಛಿದ್ರದರ್ಶನ ।
ಶಾಕದ್ವೀಪಂ ಚ ಮೇ ಬ್ರೂಹಿ ಕುಶದ್ವೀಪಂ ಚ ಸಂಜಯ ॥೨॥

ಎಲೈ ನಿರ್ದುಷ್ಪಜ್ಞಾನವುಳ್ಳವನೇ, ಎಲೈ ಸಂಜಯನೇ, ಸಮುದ್ರದ ಪ್ರಮಾಣವನ್ನು ಮತ್ತು ಶಾಕದ್ವೀಪ ಮತ್ತು ಕುಶದ್ವೀಪವನ್ನು ನನಗೆ ಸರಿಯಾಗಿ ಹೇಳುವವನಾಗು.

ಶಾಲ್ಮಲಂ ಚೈವ ತತ್ತ್ವೇನ ಕ್ರೌಂಚದ್ವೀಪಂ ತಥೈವ ಚ ।
ಬ್ರೂಹಿ ಗಾವಲ್ಗಣೇ ಸರ್ವಂ ರಾಹೋಃ ಸೋಮಾರ್ಕಯೋಸ್ತಥಾ ॥೩॥

ಎಲೈ ಗಾವಲ್ಗಣಯೇ, ಹಾಗೆಯೇ ಶಾಲ್ಮಲ ದ್ವೀಪವನ್ನೂ, ಕ್ರೌಂಚದ್ವೀಪವನ್ನೂ ಮತ್ತು ರಾಹು-ಚಂದ್ರ-ಸೂರ್ಯ ಮೊದಲಾದ ಗ್ರಹಗಳ ವಿವರಗಳನ್ನೂ ನನಗೆ ಸರಿಯಾಗಿ ಹೇಳುವವನಾಗು.

ಸಂಜಯಃ

ರಾಜನ್ ಸುಬಹವೋ ದ್ವೀಪಾ ಯೈರಿದಂ ಸಂತತಂ ಜಗತ್ ।
ಸಪ್ತ ತ್ವಹಂ ಪ್ರವಕ್ಷ್ಯಾಮಿ ಚಂದ್ರಾದಿತ್ಯೌ ಗ್ರಹಾಂಸ್ತಥಾ ॥೪॥

ಸಂಜಯ– ಎಲೈ ರಾಜನೇ, ಈ ಜಗತ್ತು ಅನೇಕ ದ್ವೀಪಗಳಿಂದ ತುಂಬಿದೆ. ಆದರೆ ನಾನು ಏಳು ದ್ವೀಪಗಳನ್ನೂ ಮತ್ತು ಸೂರ್ಯ-ಚಂದ್ರಾದಿ ಗ್ರಹಗಳನ್ನೂ ನಿನಗೆ ಹೇಳುವೆನು.

ಅಷ್ಟಾದಶ ಸಹಸ್ರಾಣಿ ಯೋಜನಾನಾಂ ವಿಶಾಂಪತೇ ।
ಷಟ್‌ಶತಾನಿ ಚ ಪೂರ್ಣಾನಿ ವಿಷ್ಕಂಭೋ ಜಂಬುಪರ್ವತಃ ॥೫॥

ಎಲೈ ರಾಜನೇ, ಜಂಬೂಪರ್ವತದ ಎತ್ತರವು ಸರಿಯಾಗಿ, ಪೂರ್ಣವಾಗಿ ಹದಿನೆಂಟು ಸಾವಿರದ ಆರುನೂರು ಯೋಜನಗಳಿವೆ (ಜಂಬೂದ್ವೀಪವು ಕ್ರಮವಾಗಿ ಪ್ರಸ್ಥಭೂಮಿಯಾಗಿ ಉಬ್ಬಿರುವುದರಿಂದ ಜಂಬೂದ್ವೀಪವನ್ನು ಜಂಬೂಪರ್ವತ ಎಂದೂ ಕರೆಯುತ್ತಾರೆ).

ಲಾವಣಸ್ಯ ಸಮುದ್ರಸ್ಯ ವಿಷ್ಕಂಭೋ ದ್ವಿಗುಣಃ ಸ್ಮೃತಃ ।
ನಾನಾಜನಪದಾಕೀರ್ಣೋ ಮಣಿವಿದ್ರುಮಚಿತ್ರಿತಃ ॥೬॥

ನೈಕಧಾತುವಿಚಿತ್ರೈಶ್ಚ ಪರ್ವತೈರುಪಶೋಭಿತಃ ।
ಸಿದ್ಧಚಾರಣಸಂಕೀರ್ಣಃ ಸಾಗರಃ ಪರಿಮಂಡಲಃ ॥೭॥

ಲವಣಸಮುದ್ರದ ವಿಸ್ತಾರವು ಜಂಬೂದ್ವೀಪದ ಎರಡರಷ್ಟಿದೆ. ವರ್ತುಲಾಕಾರವಾಗಿರುವ ಆ ಸಾಗರವು ಅನೇಕ ದೇಶಗಳಿಂದಲೂ, ಅನೇಕ ಮಣಿಹವಳಗಳಿಂದಲೂ, ಅನೇಕ ಧಾತುಗಳಿಂದಲೂ, ಅನೇಕ ಪರ್ವತಗಳಿಂದಲೂ ಶೋಭಿತವಾಗಿ ಸಿದ್ಧ-ಚಾರಣರಿಂದ ನಿಬಿಡವಾಗಿದೆ.

ಶಾಕದ್ವೀಪಂ ಚ ವಕ್ಷ್ಯಾಮಿ ಯಥಾವದಿಹ ಪಾರ್ಥಿವ ।
ಶೃಣು ಮೇ ತ್ವಂ ಯಥಾನ್ಯಾಯಂ ಬ್ರುವತಃ ಕುರುನಂದನ ॥೬॥

ಎಲೈ ರಾಜನೇ, ಕುರುನಂದನನೇ, ನಾನು ನಿನಗೆ ಶಾಕದ್ವೀಪವನ್ನು ಸರಿಯಾಗಿ ಹೇಳುವೆನು. ನಾನು ಹೇಳಿದಂತೆ ನೀನು ಕೇಳುವವನಾಗು.

ಜಂಬೂದ್ವೀಪಪ್ರಮಾಣೇನ ದ್ವಿಗುಣಃ ಸ ನರಾಧಿಪ ।
ವಿಷ್ಕಂಭೇಣ ಮಹಾರಾಜ ಸಾಗರೋಽಪಿ ವಿಭಾಗಶಃ ।
ಕ್ಷೀರೋದೋ ಭರತಶ್ರೇಷ್ಠ ಯೇನ ಸಂಪರಿವಾರಿತಃ ॥೯॥

ಎಲೈ ನರಾಧಿಪನೇ, ಮಹಾರಾಜನೇ, ಶಾಕದ್ವೀಪದ ಎತ್ತರವು ಜಂಬೂದ್ವೀಪದ ಎತ್ತರದ ಎರಡರಷ್ಟಿದೆ. ಎಲೈ ಭರತಶ್ರೇಷ್ಠನೇ, ಅದು ಕ್ಷೀರಸಮುದ್ರವನ್ನು ಸುತ್ತುವರಿದಿದೆ.

ತತ್ರ ಪುಣ್ಯಾ ಜನಪದಾ ನ ತತ್ರ ಮ್ರಿಯತೇ ಜನಃ ।
ಕುತ ಏವ ಹಿ ದುರ್ಭಿಕ್ಷಂ ಕ್ಷಮಾತೇಜೋಯುತಾ ಹಿ ತೇ ॥೧೦॥

ಅಲ್ಲಿ ಪುಣ್ಯದೇಶಗಳಿವೆ. ಅಲ್ಲಿಯ ಜನರು ಮರಣ ಹೊಂದುವುದಿಲ್ಲ. ಕ್ಷಮೆ ಮತ್ತು ತೇಜಸ್ಸುಳ್ಳ ಅವರಿಗೆ ಇನ್ನು ದುರ್ಭಿಕ್ಷವು ಎಲ್ಲಿಂದ ಬರಬೇಕು?

ಶಾಕದ್ವೀಪಸ್ಯ ಸಂಕ್ಷೇಪೋ ಯಥಾವದ್ ಭರತರ್ಷಭ ।
ಉಕ್ತ ಏಷ ಮಹಾರಾಜ ಕಿಮನ್ಯಚ್ಛ್ರೋತುಮಿಚ್ಛಸಿ ॥೧೧॥

ಎಲೈ ಭರತರ್ಷಭನೇ, ಶಾಕದ್ವೀಪವನ್ನು ಸಂಕ್ಷೇಪವಾಗಿ ಸರಿಯಾಗಿ ಹೇಳಿದ್ದೇನೆ. ಮಹಾರಾಜನೇ, ಬೇರೆ ಏನನ್ನು ಕೇಳಲು ಬಯಸುತ್ತೀಯೆ?

ಧೃತರಾಷ್ಟ್ರಃ

ಶಾಕದ್ವೀಪಸ್ಯ ಸಂಕ್ಷೇಪೋ ಯಥಾವದಿಹ ಸಂಜಯ ।
ಉಕ್ತಸ್ತ್ವಯಾ ಮಹಾಭಾಗ ವಿಸ್ತರಂ ಬ್ರೂಹಿ ತತ್ತ್ವತಃ ॥೧೨॥

ಧೃತರಾಷ್ಟ್ರ– ಎಲೈ ಸಂಜಯನೇ, ನೀನು ಶಾಕದ್ವೀಪವನ್ನು ಸಂಕ್ಷೇಪವಾಗಿ ಸರಿಯಾಗಿ ಹೇಳಿದ್ದೀಯೆ. ಎಲೈ ಮಹಾನುಭಾವನೇ, ಅದನ್ನೇ ವಿಸ್ತಾರವಾಗಿ ಸರಿಯಾಗಿ ಹೇಳುವವನಾಗು.

ಸಂಜಯಃ

ತಥೈವ ಪರ್ವತಾ ರಾಜನ್ ಸಪ್ತಾತ್ರ ಮಣಿಭೂಷಿತಾಃ ।
ರತ್ನಾಕರಾಸ್ತಥಾ ನದ್ಯಸ್ತೇಷಾಂ ನಾಮಾನಿ ಮೇ ಶೃಣು ।
ಅತೀವಗುಣವತ್ಸರ್ವಂ ತತ್ರ ಪುಣ್ಯಂ ಜನಾಧಿಪ ॥೧೩॥

ಸಂಜಯ– ಎಲೈ ರಾಜನೇ, ಹಾಗೆಯೇ ಇಲ್ಲಿ ಮಣಿಭೂಷಿತವಾದ ಸಪ್ತ ಪರ್ವತಗಳೂ, ಸಪ್ತ ಸಾಗರಗಳೂ ಮತ್ತು ಸಪ್ತ ನದಿಗಳೂ ಇದೆ. ಎಲೈ ಜನಾಧಿಪನೇ, ಅಲ್ಲಿರುವ ಎಲ್ಲವೂ ಶ್ರೇಷ್ಠಗುಣವನ್ನು ಹೊಂದಿ ಪುಣ್ಯಪ್ರದವಾದವುಗಳು, ಅವುಗಳ ಹೆಸರನ್ನು ಕೇಳು.

ದೇವರ್ಷಿಗಂಧರ್ವಯುತಃ ಪರಮೋ ಮೇರುರುಚ್ಯತೇ ।
ಪ್ರಾಗಾಯತೋ ಮಹಾರಾಜ ಮಲಯೋ ನಾಮ ಪರ್ವತಃ ।
ಯತೋ ಮೇಘಾಃ ಪ್ರವರ್ತಂತೇ ಪ್ರಭವಂತಿ ಚ ಸರ್ವಶಃ ॥೧೪॥★

ಎಲೈ ಮಹಾರಾಜನೇ, ದೇವರ್ಷಿ-ಗಂಧರ್ವರಿಂದ ಕೂಡಿದ ಶ್ರೇಷ್ಠವಾದ ಮೇರು ಎಂಬ ಪರ್ವತವಿದೆ (ಇದು ಇಲಾವೃತ ಖಂಡದ ಮಧ್ಯದಲ್ಲಿರುವ ಸುಮೇರುವಲ್ಲ). ಪೂರ್ವಕ್ಕೆ ಹಬ್ಬಿರುವ ಮಲಯ ಎಂಬ ಪರ್ವತವಿದೆ. ಅಲ್ಲಿಂದ ಮೇಘಗಳು ಉತ್ಪನ್ನವಾಗಿ ಎಲ್ಲ ಕಡೆಯಲ್ಲಿಯೂ ಹರಡುತ್ತದೆ.

ತತಃ ಪರೇಣ ಕೌರವ್ಯ ಜಲಧಾರೋ ಮಹಾಗಿರಿಃ ।
ಯತ್ರ ನಿತ್ಯಮುಪಾದತ್ತೇ ವಾಸವಃ ಪರಮಂ ಜಲಮ್ ॥
ಯತೋ ವರ್ಷಂ ಪ್ರಭವತಿ ವರ್ಷಾಕಾಲೇ ಜನೇಶ್ವರ ॥೧೫॥

ಎಲೈ ಕೌರವ್ಯನೇ, ಜನೇಶ್ವರನೇ, ಅಲ್ಲಿಂದ ಉತ್ತರಕ್ಕೆ ಜಲಧಾರವೆಂಬ ಮಹಾಪರ್ವತವಿದೆ. ಅಲ್ಲಿ ಇಂದ್ರನು ಜಲವನ್ನು ತೆಗೆದುಕೊಂಡು ಮಳೆಗಾಲದಲ್ಲಿ ಮಳೆಯನ್ನಾಗಿ ಸುರಿಸುತ್ತಾನೆ.

ಉತ್ತರೇಗಿರೀ ರೈವತಕೋ ಯತ್ರ ನಿತ್ಯಂ ಪ್ರತಿಷ್ಠಿತಾ ।
ರೇವತೀ ದಿವಿ ನಕ್ಷತ್ರಂ ಪಿತಾಮಹಕೃತೋ ವಿಧಿಃ ॥೧೬॥

ಎತ್ತರವಾದ ರೈವತಕವೆಂಬ ಇನ್ನೊಂದು ಪರ್ವತವಿದೆ. ಆಕಾಶದಲ್ಲಿರುವ ರೇವತೀ ನಕ್ಷತ್ರವು ಈ ಪರ್ವತದಲ್ಲಿ ನಿತ್ಯವೂ ಸನ್ನಿಹಿತವಾಗಿದೆ. ಇದು ಬ್ರಹ್ಮದೇವರ ಆದೇಶ.

ಉತ್ತರೇಣ ತು ರಾಜೇಂದ್ರ ಶ್ಯಾಮೋ ನಾಮ ಮಹಾಗಿರಿಃ ।
ಯತಃ ಶ್ಯಾಮತ್ವಮಾಪನ್ನಾಃ ಪ್ರಜಾಃ ಜನಪದೇಶ್ವರ ॥೧೭॥

ಎಲೈ ರಾಜೇಂದ್ರನೇ, ಜನಪದೇಶ್ವರನೇ, ಅದಕ್ಕಿಂತ ಉತ್ತರದಲ್ಲಿ ಶ್ಯಾಮ ಎಂಬ ದೊಡ್ಡ ಪರ್ವತವಿದೆ. ಆ ಪರ್ವತದಿಂದಾಗಿ ಅಲ್ಲಿನ ಪ್ರಜೆಗಳೆಲ್ಲರೂ ಶ್ಯಾಮ ವರ್ಣದವರಾಗಿದ್ದಾರೆ.

ಧೃತರಾಷ್ಟ್ರಃ

ಸುಮಹಾನ್ ಸಂಶಯೋ ಮೇಽದ್ಯ ಪ್ರೋಕ್ತಂ ಸಂಜಯ ಯತ್ ತ್ವಯಾ।
ಪ್ರಜಾಃ ಕಥಂ ಸೂತಪುತ್ರ ಸಂಪ್ರಾಪ್ತಾಃ ಶ್ಯಾಮತಾಮಿಹ ॥೧೮॥

ಧೃತರಾಷ್ಟ್ರ– ಎಲೈ ಸಂಜಯನೇ, ನೀನು ಹೇಳಿದ ವಿಷಯದಲ್ಲಿ ನನಗೆ ಈ ದೊಡ್ಡ ಸಂಶಯವುಂಟಾಗಿದೆ. ಸೂತಪುತ್ರನೇ, ಪ್ರಜೆಗಳು ಹೇಗೆ ಶ್ಯಾಮವರ್ಣವನ್ನು ಹೊಂದುತ್ತಾರೆ?

ಸಂಜಯಃ

ಸರ್ವೇಷ್ವೇವ ಮಹಾಪ್ರಾಜ್ಞ ದ್ವೀಪೇಷು ಕುರುನಂದನ ।
ಗೌರಃ ಕೃಷ್ಣಶ್ಚ ವರ್ಣೌ ದ್ವೌ ತಯೋರ್ವರ್ಣಾಂತರಂ ನೃಪ ॥೧೯॥

ಸಂಜಯ– ಎಲೈ ಮಹಾಪ್ರಾಜ್ಞನೇ, ಕುರುನಂದನನೇ, ರಾಜನೇ, ಎಲ್ಲ ದ್ವೀಪಗಳಲ್ಲಿಯೂ ಬಿಳಿ ಮತ್ತು ಕಪ್ಪು ಎಂಬ ಎರಡೇ ಬಣ್ಣಗಳಿವೆ. ಈ ಶ್ಯಾಮವರ್ಣವು ಅದಕ್ಕಿಂತ ಭಿನ್ನವಾದುದು.

ಶ್ಯಾಮೋ ಯಸ್ಮಾತ್ ಪ್ರವೃತ್ತೋ ವೈ ತತ್ ತೇ ವಕ್ಷ್ಯಾಮಿ ಭಾರತ ।
ಆಸ್ತೇಽತ್ರ ಭಗವಾನ್ ಕೃಷ್ಣಸ್ತತ್ಕಾಂತ್ಯಾ ಶ್ಯಾಮತಾಂ ಗತಃ ॥೨೦॥

ಎಲೈ ಭಾರತನೇ, ಈ ಶ್ಯಾಮವರ್ಣವು ಹೇಗೆ ಉಂಟಾಯಿತೆಂದು ನಾನು ನಿನಗೆ ಹೇಳುವೆನು. ಅಲ್ಲಿ ಭಗವಂತನಾದ ಕೃಷ್ಣನು ಇದ್ದಾನೆ. ಅವನ ಕಾಂತಿಯಿಂದ ಪ್ರಜೆಗಳಿಗೆ ಶ್ಯಾಮವರ್ಣವು ಉಂಟಾಯಿತು.

ತತಃ ಪರಂ ಕೌರವೇಂದ್ರ ದುರ್ಗಶೈಲೋ ಮಹೋದಯಃ ।
ಕೇಸರೀ ಕೇಸರಯುತೋ ಯತೋ ವಾತಃ ಪ್ರವಾಯತಿ ॥೨೧॥

ಎಲೈ ಕೌರವೇಂದ್ರನೇ, ಅಲ್ಲಿಂದಾಚೆಗೆ ಮಹಾಸಂಪತ್ತಿಗೆ ಕಾರಣವಾದ, ದುರ್ಗಮವಾದ ಶಿಖರಗಳಿಂದ ಕೂಡಿದ ಕೇಸರವೆಂಬ ಪರ್ವತವಿದೆ. ಅಲ್ಲಿ ವಾಯುವು ಸಿಂಹಾಕಾರವನ್ನು ಧರಿಸಿ ಯಾವಾಗಲೂ ಬೀಸುತ್ತಾನೆ (ಲಕ್ಷಾಲಂಕಾರ).

ತೇಷಾಂ ಯೋಜನವಿಷ್ಕಂಭೋ ದ್ವಿಗುಣಃ ಪ್ರವಿಭಾಗಶಃ ।
ವರ್ಷಾಣಿ ತೇಷು ಕೌರವ್ಯ ಸಂಪ್ರೋಕ್ತಾನಿ ಮನೀಷಿಭಿಃ ॥೨೨॥

ಎಲೈ ಕೌರವ್ಯನೇ, ಅವುಗಳ ಗಾತ್ರವು ಪರಸ್ಪರವಾಗಿ ದ್ವಿಗುಣವಾಗಿದೆ. ಎಲೈ ಕೌರವ್ಯನೇ, ಅಲ್ಲಿ ಒಂಬತ್ತು ವರ್ಷಗಳೂ ಜ್ಞಾನಿಗಳಿಂದ ಪ್ರಖ್ಯಾತವಾಗಿವೆ.

ಮಹಾಮೇರುರ್ಮಹಾಕಾಶೋ ಜಲದಃ ಕುಮುದೋತ್ತರಃ ।
ಜಲಧಾರಾತ್ ಪರೋ ರಾಜನ್ ಸುಕುಮಾರ ಇತಿ ಸ್ಮೃತಃ ॥೨೩॥

ಮಹಾಮೇರು, ಮಹಾಕಾಶ, ಜಲದ, ಕುಮುದೋತ್ತರ (ಇವು ನಾಲ್ಕು ವರ್ಷಗಳು). ಎಲೈ ರಾಜನೇ, ಜಲಧಾರ ಪರ್ವತದ ಆಚೆಗೆ ಸುಕುಮಾರ ವರ್ಷವೆಂದು ಹೇಳಲ್ಪಡುತ್ತದೆ.

ರೈವತಸ್ಯ ತು ಕೌಮಾರಃ ಶ್ಯಾಮಸ್ಯ ತು ಮಣೀಚಕಃ ।
ಕೇಸರಸ್ಯಾಥ ಮೋದಾಕೀ ಪರೇಣ ತು ಮಹಾಪುಮಾನ್ ॥೨೪॥

ರೈವತ ಪರ್ವತದ ಆಚೆಗೆ ಕೌಮಾರ ವರ್ಷವೂ, ಶ್ಯಾಮ ಪರ್ವತದ ಆಚೆಗೆ ಮಣೀಚಕವೂ, ಕೇಸರ ಪರ್ವತದ ಆಚೆಗೆ ಮೋದಾಕೀ ವರ್ಷವೂ, ಅದರಿಂದ ಆಚೆಗೆ ಮಹಾಪುಮಾನ್ ಎಂಬ ವರ್ಷವೂ ಇದೆ.

ಪರಿವಾರ್ಯ ತು ಕೌರವ್ಯ ದೈರ್ಘ್ಯಂ ಹ್ರಸ್ವತ್ವಮೇವ ಚ ।
ಜಂಬೂದ್ವೀಪೇನ ವಿಖ್ಯಾತಸ್ತಸ್ಯ ಮಧ್ಯೇ ಮಹಾದ್ರುಮಃ ॥೨೫॥

ಶಾಕೋ ನಾಮ ಮಹಾರಾಜ ತಸ್ಯ ದ್ವೀಪಸ್ಯ ಮಧ್ಯಗಃ ।
ತತ್ರ ಪುಣ್ಯಾ ಜನಪದಾಃ ಪೂಜ್ಯತೇ ತತ್ರ ಶಂಕರಃ ॥೨೬॥

ಎಲೈ ಮಹಾರಾಜನೇ, ಈ ವರ್ಷಗಳು ಆ ಪರ್ವತಗಳ ದೀರ್ಘತೆ ಮತ್ತು ಹ್ರಸ್ವತೆಗೆ ಅನುಗುಣವಾಗಿ ಅವುಗಳನ್ನು ಸುತ್ತಿಕೊಂಡಿವೆ. ಶಾಕದ್ವೀಪದ ಮಧ್ಯದಲ್ಲಿ ಜಂಬೂದ್ವೀಪ ಪ್ರಮಾಣವಾದ ಲಕ್ಷಯೋಜನದಷ್ಟು ವಿಸ್ತಾರವಾಗಿರುವ ಶಾಕವೆಂಬ ಮಹಾವೃಕ್ಷವಿದೆ. ಶಾಕದ್ವೀಪದಲ್ಲಿ ಪುಣ್ಯಪ್ರದವಾದ ದೇಶವಿದೆ. ಅಲ್ಲಿ ಶಂಕರನು ಪೂಜಿಸಲ್ಪಡುತ್ತಾನೆ.

ತತ್ರ ಗಚ್ಛಂತಿ ಸಿದ್ಧಾಶ್ಚ ಚಾರಣಾ ದೈವತಾನಿ ಚ ।
ಧಾರ್ಮಿಕಾಶ್ಚ ಪ್ರಜಾ ರಾಜಂಶ್ಚತ್ವಾರೋಽತೀವ ಭಾರತ ॥೨೭॥

ಎಲೈ ಭಾರತನೇ, ಅಲ್ಲಿಗೆ ಸಿದ್ಧರೂ, ಚಾರಣರೂ ಮತ್ತು ದೇವತೆಗಳೂ ಹೋಗುತ್ತಾರೆ. ಎಲೈ ರಾಜನೇ, ನಾಲ್ಕು ರೀತಿಯ ಪ್ರಜೆಗಳೂ ಅಲ್ಲಿ ಪರಮ ಧಾರ್ಮಿಕರಾಗಿರುತ್ತಾರೆ.

ವರ್ಣಾಃ ಸ್ವಕರ್ಮನಿರತಾ ನ ಚ ಸ್ತೇನೋಽತ್ರ ದೃಶ್ಯತೇ ।
ದೀರ್ಘಾಯುಷೋ ಮಹಾರಾಜ ಜರಾಮೃತ್ಯುವಿವರ್ಜಿತಾಃ ॥೨೮॥

ವರ್ಣಗಳು ತಮ್ಮ ತಮ್ಮ ಕರ್ಮಗಳಲ್ಲಿ ನಿರತವಾಗಿರುತ್ತವೆ. ಇಲ್ಲಿ ಚೋರರು ಇರುವುದಿಲ್ಲ. ಮಹಾರಾಜನೇ, ಪ್ರಜೆಗಳು ಜರಾಮೃತ್ಯುವಿವರ್ಜಿತರಾಗಿ ದೀರ್ಘವಾದ ಆಯುಸ್ಸನ್ನು ಹೊಂದಿರುತ್ತಾರೆ.

ಪ್ರಜಾಸ್ತತ್ರ ವಿವರ್ಧಂತೇ ವರ್ಷಾಸ್ವಿವ ಸಮುದ್ರಗಾಃ ।
ನದ್ಯಃ ಪುಣ್ಯಜಲಾಸ್ತತ್ರ ಗಂಗಾ ಚ ಬಹುಧಾಗತಿಃ ॥೨೯॥

ಅಲ್ಲಿ ಪ್ರಜೆಗಳು ಮಳೆಗಾಲದ ನದಿಗಳಂತೆ ಅಭಿವೃದ್ಧಿಯನ್ನು ಹೊಂದುತ್ತಾರೆ. ನದಿಗಳಲ್ಲಿ ಪವಿತ್ರವಾದ ಜಲವಿದೆ. ಗಂಗೆಯು ಅನೇಕ ವಿಧವಾಗಿ ಅಲ್ಲಿ ಹರಿಯುತ್ತಾಳೆ.

ಸುಕುಮಾರೀ ಕುಮಾರೀ ಚ ಸೀತಾ ಕಾವೇರಕಾ ತಥಾ ।
ಮಹಾನದೀ ಚ ಕೌರವ್ಯ ತಥಾ ಮಣಿಜಲಾ ನದೀ ।
ಇಕ್ಷುವರ್ಧನಿಕಾ ಚೈವ ತಥಾ ಭರತಸತ್ತಮ ॥೩೦॥

ಎಲೈ ಭರತಸತ್ತಮನೇ, ಸುಕುಮಾರೀ, ಕುಮಾರೀ, ಸೀತಾ, ಕಾವೇರಿಕಾ, ಮಹಾನದೀ, ಮಣಿಜಲಾ, ಇಕ್ಷುವರ್ಧನಿಕಾ ಇವೆಲ್ಲವೂ ಗಂಗೆಯ ಕವಲುಗಳೇ ಆಗಿವೆ.

ತತ್ರ ಪ್ರವೃತ್ತಾಃ ಪುಣ್ಯೋದಾ ನದ್ಯಃ ಕುರುಕುಲೋದ್ವಹ ।
ಸಹಸ್ರಾಣಾಂ ಶತಾನ್ಯೇವ ಯತೋ ವರ್ಷತಿ ವಾಸವಃ ॥೩೧॥

ಎಲೈ ಕುರುಕುಲೋದ್ವಹನೇ, ಅವುಗಳಿಂದ ಪವಿತ್ರವಾದ ನೀರನ್ನು ಹೊಂದಿದ ಲಕ್ಷಾಂತರ ನದಿಗಳು ಉಂಟಾಗುತ್ತವೆ. ಇಂದ್ರನು ಅವುಗಳಿಂದ ನೀರನ್ನು ತೆಗೆದುಕೊಂಡು ಮಳೆಯನ್ನು ಸುರಿಸುತ್ತಾನೆ.

ನ ತಾಸಾಂ ನಾಮಧೇಯಾನಿ ಪರಿಮಾಣಂ ತಥೈವ ಚ ।
ಶಕ್ಯತೇ ಪರಿಸಂಖ್ಯಾತುಂ ಪುಣ್ಯಾಸ್ತಾ ಹಿ ಸರಿದ್ವರಾಃ ॥೩೨॥

ಆ ನದಿಗಳಿಗೆ ಹೆಸರನ್ನಾಗಲೀ, ಅವುಗಳ ಪರಿಮಾಣವನ್ನಾಗಲೀ ಹೇಳಲು ಸಾಧ್ಯವಾಗುವುದಿಲ್ಲ. ಅವುಗಳನ್ನು ಎಣಿಸಲೂ ಸಾಧ್ಯವಾಗುವುದಿಲ್ಲ. ಎಲ್ಲವೂ ಪವಿತ್ರವಾದ ಶ್ರೇಷ್ಠವಾದ ನದಿಗಳಷ್ಟೆ!

ತತ್ರ ಪುಣ್ಯಾ ಜನಪದಾಶ್ಚತ್ವಾರೋ ಲೋಕಸಮ್ಮತಾಃ ।
ಮಗಾಶ್ಚ ಮಶಕಾಶ್ಚೈವ ಮಾನಸಾ ಮಂದಗಾಸ್ತಥಾ ॥೩೩॥

ಅಲ್ಲಿ ಪುಣ್ಯಪ್ರದವಾದ, ಲೋಕಸಮ್ಮತವಾದ ಮಗ, ಮಶಕ, ಮಾನಸ ಮತ್ತು ಮಂದಗ ಎಂಬ ನಾಲ್ಕು ದೇಶಗಳಿವೆ.

ಮಗಾ ಬ್ರಾಹ್ಮಣಭೂಯಿಷ್ಠಾಃ ಸ್ವಕರ್ಮನಿರತಾ ನೃಪ ।
ಮಶಕೇಷು ತು ರಾಜನ್ಯಾ ಧಾರ್ಮಿಕಾಃ ಸರ್ವಕಾಮದಾಃ ॥೩೪॥

ಎಲೈ ರಾಜನೇ, ಮಗದೇಶವು ತಮ್ಮ ಕರ್ಮದಲ್ಲಿ ನಿರತರಾದ ಬ್ರಾಹ್ಮಣರಿಂದ ಬಹಳವಾಗಿ ತುಂಬಿದೆ. ಮಶಕ ದೇಶದಲ್ಲಿ ಧಾರ್ಮಿಕರೂ, ಕೇಳುವ ಎಲ್ಲವನ್ನೂ ಕೊಡುವವರೂ ಆದ ರಾಜರಿದ್ದಾರೆ.

ಮಾನಸೇಷು ಮಹಾರಾಜ ವೈಶ್ಯಾಃ ಕರ್ಮೋಪಜೀವಿನಃ ।
ಸರ್ವಕಾಮಸಮಾಯುಕ್ತಾಃ ಶೂದಾ ಧರ್ಮಾರ್ಥನಿಶ್ಚಿತಾಃ ।
ಶೂದ್ರಾಸ್ತು ಮಂದಗೇ ನಿತ್ಯಂ ಪುರುಷಾ ಧರ್ಮಶೀಲಿನಃ ॥೩೫॥

ಶಾಕೋ ನಾಮ ಮಹಾರಾಜ ತಸ್ಯ ದ್ವೀಪಸ್ಯ ಮಧ್ಯಗಃ ।
ತತ್ರ ಪುಣ್ಯಾ ಜನಪದಾಃ ಪೂಜ್ಯತೇ ತತ್ರ ಶಂಕರಃ ॥೨೬॥

ಎಲೈ ಮಹಾರಾಜನೇ, ಈ ವರ್ಷಗಳು ಆ ಪರ್ವತಗಳ ದೀರ್ಘತೆ ಮತ್ತು ಹಸ್ವತೆಗೆ ಅನುಗುಣವಾಗಿ ಅವುಗಳನ್ನು ಸುತ್ತಿಕೊಂಡಿವೆ. ಶಾಕದ್ವೀಪದ ಮಧ್ಯದಲ್ಲಿ ಜಂಬೂದ್ವೀಪ ಪ್ರಮಾಣವಾದ ಲಕ್ಷಯೋಜನದಷ್ಟು ವಿಸ್ತಾರವಾಗಿರುವ ಶಾಕವೆಂಬ ಮಹಾವೃಕ್ಷವಿದೆ. ಶಾಕದ್ವೀಪದಲ್ಲಿ ಪುಣ್ಯಪ್ರದವಾದ ದೇಶವಿದೆ. ಅಲ್ಲಿ ಶಂಕರನು ಪೂಜಿಸಲ್ಪಡುತ್ತಾನೆ.

ತತ್ರ ಗಚ್ಛಂತಿ ಸಿದ್ಧಾಶ್ಚ ಚಾರಣಾ ದೈವತಾನಿ ಚ ।
ಧಾರ್ಮಿಕಾಶ್ಚ ಪ್ರಜಾ ರಾಜಂಶ್ಚತ್ವಾರೋಽತೀವ ಭಾರತ ॥೨೭॥

ಎಲೈ ಭಾರತನೇ, ಅಲ್ಲಿಗೆ ಸಿದ್ಧರೂ, ಚಾರಣರೂ ಮತ್ತು ದೇವತೆಗಳೂ ಹೋಗುತ್ತಾರೆ. ಎಲೈ ರಾಜನೇ, ನಾಲ್ಕು ರೀತಿಯ ಪ್ರಜೆಗಳೂ ಅಲ್ಲಿ ಪರಮ ಧಾರ್ಮಿಕರಾಗಿರುತ್ತಾರೆ.

ವರ್ಣಾಃ ಸ್ವಕರ್ಮನಿರತಾ ನ ಚ ಸ್ತೇನೋಽತ್ರ ದೃಶ್ಯತೇ ।
ದೀರ್ಘಾಯುಷೋ ಮಹಾರಾಜ ಜರಾಮೃತ್ಯುವಿವರ್ಜಿತಾಃ ॥೨೮॥

ವರ್ಣಗಳು ತಮ್ಮ ತಮ್ಮ ಕರ್ಮಗಳಲ್ಲಿ ನಿರತವಾಗಿರುತ್ತವೆ. ಇಲ್ಲಿ ಚೋರರು ಇರುವುದಿಲ್ಲ. ಮಹಾರಾಜನೇ, ಪ್ರಜೆಗಳು ಜರಾಮೃತ್ಯುವಿವರ್ಜಿತರಾಗಿ ದೀರ್ಘವಾದ ಆಯುಸ್ಸನ್ನು ಹೊಂದಿರುತ್ತಾರೆ.

ಪ್ರಜಾಸ್ತತ್ರ ವಿವರ್ಧಂತೇ ವರ್ಷಾಸ್ವಿವ ಸಮುದ್ರಗಾಃ ।
ನದ್ಯಃ ಪುಣ್ಯಜಲಾಸ್ತತ್ರ ಗಂಗಾ ಚ ಬಹುಧಾಗತಿಃ ॥೨೯॥

ಅಲ್ಲಿ ಪ್ರಜೆಗಳು ಮಳೆಗಾಲದ ನದಿಗಳಂತೆ ಅಭಿವೃದ್ಧಿಯನ್ನು ಹೊಂದುತ್ತಾರೆ. ನದಿಗಳಲ್ಲಿ ಪವಿತ್ರವಾದ ಜಲವಿದೆ. ಗಂಗೆಯು ಅನೇಕ ವಿಧವಾಗಿ ಅಲ್ಲಿ ಹರಿಯುತ್ತಾಳೆ.

ಸುಕುಮಾರೀ ಕುಮಾರೀ ಚ ಸೀತಾ ಕಾವೇರಕಾ ತಥಾ ।
ಮಹಾನದೀ ಚ ಕೌರವ್ಯ ತಥಾ ಮಣಿಜಲಾ ನದೀ ।
ಇಕ್ಷುವರ್ಧನಿಕಾ ಚೈವ ತಥಾ ಭರತಸತ್ತಮ ॥೩೦॥

ಎಲೈ ಭರತಸತ್ತಮನೇ, ಸುಕುಮಾರೀ, ಕುಮಾರೀ, ಸೀತಾ, ಕಾವೇರಿಕಾ, ಮಹಾನದೀ, ಮಣಿಜಲಾ, ಇಕ್ಷುವರ್ಧನಿಕಾ ಇವೆಲ್ಲವೂ ಗಂಗೆಯ ಕವಲುಗಳೇ ಆಗಿವೆ.

ತತ್ರ ಪ್ರವೃತ್ತಾಃ ಪುಣ್ಯೋದಾ ನದ್ಯಃ ಕುರುಕುಲೋದ್ವಹ ।
ಸಹಸ್ರಾಣಾಂ ಶತಾನ್ಯೇವ ಯತೋ ವರ್ಷತಿ ವಾಸವಃ ॥೩೧॥

ಎಲೈ ಕುರುಕುಲೋದ್ವಹನೇ, ಅವುಗಳಿಂದ ಪವಿತ್ರವಾದ ನೀರನ್ನು ಹೊಂದಿದ ಲಕ್ಷಾಂತರ ನದಿಗಳು ಉಂಟಾಗುತ್ತವೆ. ಇಂದ್ರನು ಅವುಗಳಿಂದ ನೀರನ್ನು ತೆಗೆದುಕೊಂಡು ಮಳೆಯನ್ನು ಸುರಿಸುತ್ತಾನೆ.

ನ ತಾಸಾಂ ನಾಮಧೇಯಾನಿ ಪರಿಮಾಣಂ ತಥೈವ ಚ ।
ಶಕ್ಯತೇ ಪರಿಸಂಖ್ಯಾತುಂ ಪುಣ್ಯಾಸ್ತಾ ಹಿ ಸರಿದ್ವರಾಃ ॥೩೨॥

ಆ ನದಿಗಳಿಗೆ ಹೆಸರನ್ನಾಗಲೀ, ಅವುಗಳ ಪರಿಮಾಣವನ್ನಾಗಲೀ ಹೇಳಲು ಸಾಧ್ಯವಾಗುವುದಿಲ್ಲ. ಅವುಗಳನ್ನು ಎಣಿಸಲೂ ಸಾಧ್ಯವಾಗುವುದಿಲ್ಲ. ಎಲ್ಲವೂ ಪವಿತ್ರವಾದ ಶ್ರೇಷ್ಠವಾದ ನದಿಗಳಷ್ಟೆ!

ತತ್ರ ಪುಣ್ಯಾ ಜನಪದಾಶ್ಚತ್ವಾರೋ ಲೋಕಸಮ್ಮತಾಃ ।
ಮಗಾಶ್ಚ ಮಶಕಾಶ್ಚೈವ ಮಾನಸಾ ಮಂದಗಾಸ್ತಥಾ ॥೩೩॥

ಅಲ್ಲಿ ಪುಣ್ಯಪ್ರದವಾದ, ಲೋಕಸಮ್ಮತವಾದ ಮಗ, ಮಶಕ, ಮಾನಸ ಮತ್ತು ಮಂದಗ ಎಂಬ ನಾಲ್ಕು ದೇಶಗಳಿವೆ.

ಮಗಾ ಬ್ರಾಹ್ಮಣಭೂಯಿಷ್ಠಾಃ ಸ್ವಕರ್ಮನಿರತಾ ನೃಪ ।
ಮಶಕೇಷು ತು ರಾಜನ್ಯಾ ಧಾರ್ಮಿಕಾಃ ಸರ್ವಕಾಮದಾಃ ॥೩೪॥

ಎಲೈ ರಾಜನೇ, ಮಗದೇಶವು ತಮ್ಮ ಕರ್ಮದಲ್ಲಿ ನಿರತರಾದ ಬ್ರಾಹ್ಮಣರಿಂದ ಬಹಳವಾಗಿ ತುಂಬಿದೆ. ಮಶಕ ದೇಶದಲ್ಲಿ ಧಾರ್ಮಿಕರೂ, ಕೇಳುವ ಎಲ್ಲವನ್ನೂ ಕೊಡುವವರೂ ಆದ ರಾಜರಿದ್ದಾರೆ.

ಮಾನಸೇಷು ಮಹಾರಾಜ ವೈಶ್ಯಾಃ ಕರ್ಮೋಪಜೀವಿನಃ ।
ಸರ್ವಕಾಮಸಮಾಯುಕ್ತಾಃ ಶೂರಾ ಧರ್ಮಾರ್ಥನಿಶ್ಚಿತಾಃ ।
ಶೂದ್ರಾಸ್ತು ಮಂದಗೇ ನಿತ್ಯಂ ಪುರುಷಾ ಧರ್ಮಶೀಲಿನಃ ॥೩೫॥

ಶಾಕೋ ನಾಮ ಮಹಾರಾಜ ತಸ್ಯ ದ್ವೀಪಸ್ಯ ಮಧ್ಯಗಃ ।
ತತ್ರ ಪುಣ್ಯಾ ಜನಪದಾಃ ಪೂಜ್ಯತೇ ತತ್ರ ಶಂಕರಃ ॥೨೬॥

ಎಲೈ ಮಹಾರಾಜನೇ, ಈ ವರ್ಷಗಳು ಆ ಪರ್ವತಗಳ ದೀರ್ಘತೆ ಮತ್ತು ಹಸ್ವತೆಗೆ ಅನುಗುಣವಾಗಿ ಅವುಗಳನ್ನು ಸುತ್ತಿಕೊಂಡಿವೆ. ಶಾಕದ್ವೀಪದ ಮಧ್ಯದಲ್ಲಿ ಜಂಬೂದ್ವೀಪ ಪ್ರಮಾಣವಾದ ಲಕ್ಷಯೋಜನದಷ್ಟು ವಿಸ್ತಾರವಾಗಿರುವ ಶಾಕವೆಂಬ ಮಹಾವೃಕ್ಷವಿದೆ. ಶಾಕದ್ವೀಪದಲ್ಲಿ ಪುಣ್ಯಪ್ರದವಾದ ದೇಶವಿದೆ. ಅಲ್ಲಿ ಶಂಕರನು ಪೂಜಿಸಲ್ಪಡುತ್ತಾನೆ.

ತತ್ರ ಗಚ್ಛಂತಿ ಸಿದ್ಧಾಶ್ಚ ಚಾರಣಾ ದೈವತಾನಿ ಚ ।
ಧಾರ್ಮಿಕಾಶ್ಚ ಪ್ರಜಾ ರಾಜಂಶ್ಚತ್ವಾರೋಽತೀವ ಭಾರತ ॥೨೭॥

ಎಲೈ ಭಾರತನೇ, ಅಲ್ಲಿಗೆ ಸಿದ್ಧರೂ, ಚಾರಣರೂ ಮತ್ತು ದೇವತೆಗಳೂ ಹೋಗುತ್ತಾರೆ. ಎಲೈ ರಾಜನೇ, ನಾಲ್ಕು ರೀತಿಯ ಪ್ರಜೆಗಳೂ ಅಲ್ಲಿ ಪರಮ ಧಾರ್ಮಿಕರಾಗಿರುತ್ತಾರೆ.

ವರ್ಣಾಃ ಸ್ವಕರ್ಮನಿರತಾ ನ ಚ ಸ್ತೇನೋಽತ್ರ ದೃಶ್ಯತೇ ।
ದೀರ್ಘಾಯುಷೋ ಮಹಾರಾಜ ಜರಾಮೃತ್ಯುವಿವರ್ಜಿತಾಃ ॥೨೮॥

ವರ್ಣಗಳು ತಮ್ಮ ತಮ್ಮ ಕರ್ಮಗಳಲ್ಲಿ ನಿರತವಾಗಿರುತ್ತವೆ. ಇಲ್ಲಿ ಚೋರರು ಇರುವುದಿಲ್ಲ. ಮಹಾರಾಜನೇ, ಪ್ರಜೆಗಳು ಜರಾಮೃತ್ಯುವಿವರ್ಜಿತರಾಗಿ ದೀರ್ಘವಾದ ಆಯುಸ್ಸನ್ನು ಹೊಂದಿರುತ್ತಾರೆ.

ಪ್ರಜಾಸ್ತತ್ರ ವಿವರ್ಧಂತೇ ವರ್ಷಾಸ್ವಿವ ಸಮುದ್ರಗಾಃ ।
ನದ್ಯಃ ಪುಣ್ಯಜಲಾಸ್ತತ್ರ ಗಂಗಾ ಚ ಬಹುಧಾಗತಿಃ ॥೨೯॥

ಅಲ್ಲಿ ಪ್ರಜೆಗಳು ಮಳೆಗಾಲದ ನದಿಗಳಂತೆ ಅಭಿವೃದ್ಧಿಯನ್ನು ಹೊಂದುತ್ತಾರೆ. ನದಿಗಳಲ್ಲಿ ಪವಿತ್ರವಾದ ಜಲವಿದೆ. ಗಂಗೆಯು ಅನೇಕ ವಿಧವಾಗಿ ಅಲ್ಲಿ ಹರಿಯುತ್ತಾಳೆ.

ಸುಕುಮಾರೀ ಕುಮಾರೀ ಚ ಸೀತಾ ಕಾವೇರಕಾ ತಥಾ ।
ಮಹಾನದೀ ಚ ಕೌರವ್ಯ ತಥಾ ಮಣಿಜಲಾ ನದೀ ।
ಇಕ್ಷುವರ್ಧನಿಕಾ ಚೈವ ತಥಾ ಭರತಸತ್ತಮ ॥೩೦॥

ಎಲೈ ಭರತಸತ್ತಮನೇ, ಸುಕುಮಾರೀ, ಕುಮಾರೀ, ಸೀತಾ, ಕಾವೇರಿಕಾ, ಮಹಾನದೀ, ಮಣಿಜಲಾ, ಇಕ್ಷುವರ್ಧನಿಕಾ ಇವೆಲ್ಲವೂ ಗಂಗೆಯ ಕವಲುಗಳೇ ಆಗಿವೆ.

ತತ್ರ ಪ್ರವೃತ್ತಾಃ ಪುಣ್ಯೋದಾ ನದ್ಯಃ ಕುರುಕುಲೋದ್ವಹ ।
ಸಹಸ್ರಾಣಾಂ ಶತಾನ್ಯೇವ ಯತೋ ವರ್ಷತಿ ವಾಸವಃ ॥೩೧॥

ಎಲೈ ಕುರುಕುಲೋದ್ವಹನೇ, ಅವುಗಳಿಂದ ಪವಿತ್ರವಾದ ನೀರನ್ನು ಹೊಂದಿದ ಲಕ್ಷಾಂತರ ನದಿಗಳು ಉಂಟಾಗುತ್ತವೆ. ಇಂದ್ರನು ಅವುಗಳಿಂದ ನೀರನ್ನು ತೆಗೆದುಕೊಂಡು ಮಳೆಯನ್ನು ಸುರಿಸುತ್ತಾನೆ.

ನ ತಾಸಾಂ ನಾಮಧೇಯಾನಿ ಪರಿಮಾಣಂ ತಥೈವ ಚ ।
ಶಕ್ಯತೇ ಪರಿಸಂಖ್ಯಾತುಂ ಪುಣ್ಯಾಸ್ತಾ ಹಿ ಸರಿದ್ವರಾಃ ॥೩೨॥

ಆ ನದಿಗಳಿಗೆ ಹೆಸರನ್ನಾಗಲೀ, ಅವುಗಳ ಪರಿಮಾಣವನ್ನಾಗಲೀ ಹೇಳಲು ಸಾಧ್ಯವಾಗುವುದಿಲ್ಲ. ಅವುಗಳನ್ನು ಎಣಿಸಲೂ ಸಾಧ್ಯವಾಗುವುದಿಲ್ಲ. ಎಲ್ಲವೂ ಪವಿತ್ರವಾದ ಶ್ರೇಷ್ಠವಾದ ನದಿಗಳಷ್ಟೆ!

ತತ್ರ ಪುಣ್ಯಾ ಜನಪದಾಶ್ಚತ್ವಾರೋ ಲೋಕಸಮ್ಮತಾಃ ।
ಮಗಾಶ್ಚ ಮಶಕಾಶ್ಚೈವ ಮಾನಸಾ ಮಂದಗಾಸ್ತಥಾ ॥೩೩॥

ಅಲ್ಲಿ ಪುಣ್ಯಪ್ರದವಾದ, ಲೋಕಸಮ್ಮತವಾದ ಮಗ, ಮಶಕ, ಮಾನಸ ಮತ್ತು ಮಂದಗ ಎಂಬ ನಾಲ್ಕು ದೇಶಗಳಿವೆ.

ಮಗಾ ಬ್ರಾಹ್ಮಣಭೂಯಿಷ್ಠಾಃ ಸ್ವಕರ್ಮನಿರತಾ ನೃಪ ।
ಮಶಕೇಷು ತು ರಾಜನ್ಯಾ ಧಾರ್ಮಿಕಾಃ ಸರ್ವಕಾಮದಾಃ ॥೩೪॥

ಎಲೈ ರಾಜನೇ, ಮಗದೇಶವು ತಮ್ಮ ಕರ್ಮದಲ್ಲಿ ನಿರತರಾದ ಬ್ರಾಹ್ಮಣರಿಂದ ಬಹಳವಾಗಿ ತುಂಬಿದೆ. ಮಶಕ ದೇಶದಲ್ಲಿ ಧಾರ್ಮಿಕರೂ, ಕೇಳುವ ಎಲ್ಲವನ್ನೂ ಕೊಡುವವರೂ ಆದ ರಾಜರಿದ್ದಾರೆ.

ಮಾನಸೇಷು ಮಹಾರಾಜ ವೈಶ್ಯಾಃ ಕರ್ಮೋಪಜೀವಿನಃ ।
ಸರ್ವಕಾಮಸಮಾಯುಕ್ತಾಃ ಶೂರಾ ಧರ್ಮಾರ್ಥನಿಶ್ಚಿತಾಃ ।
ಶೂದ್ರಾಸ್ತು ಮಂದಗೇ ನಿತ್ಯಂ ಪುರುಷಾ ಧರ್ಮಶೀಲಿನಃ ॥೩೫॥

ಶಾಕೋ ನಾಮ ಮಹಾರಾಜ ತಸ್ಯ ದ್ವೀಪಸ್ಯ ಮಧ್ಯಗಃ ।
ತತ್ರ ಪುಣ್ಯಾ ಜನಪದಾಃ ಪೂಜ್ಯತೇ ತತ್ರ ಶಂಕರಃ ॥೨೬॥

ಎಲೈ ಮಹಾರಾಜನೇ, ಈ ವರ್ಷಗಳು ಆ ಪರ್ವತಗಳ ದೀರ್ಘತೆ ಮತ್ತು ಹ್ರಸ್ವತೆಗೆ ಅನುಗುಣವಾಗಿ ಅವುಗಳನ್ನು ಸುತ್ತಿಕೊಂಡಿವೆ. ಶಾಕದ್ವೀಪದ ಮಧ್ಯದಲ್ಲಿ ಜಂಬೂದ್ವೀಪ ಪ್ರಮಾಣವಾದ ಲಕ್ಷಯೋಜನದಷ್ಟು ವಿಸ್ತಾರವಾಗಿರುವ ಶಾಕವೆಂಬ ಮಹಾವೃಕ್ಷವಿದೆ. ಶಾಕದ್ವೀಪದಲ್ಲಿ ಪುಣ್ಯಪ್ರದವಾದ ದೇಶವಿದೆ. ಅಲ್ಲಿ ಶಂಕರನು ಪೂಜಿಸಲ್ಪಡುತ್ತಾನೆ.

ತತ್ರ ಗಚ್ಛಂತಿ ಸಿದ್ಧಾಶ್ಚ ಚಾರಣಾ ದೈವತಾನಿ ಚ ।
ಧಾರ್ಮಿಕಾಶ್ಚ ಪ್ರಜಾ ರಾಜಂಶ್ಚತ್ವಾರೋಽತೀವ ಭಾರತ ॥೨೭॥

ಎಲೈ ಭಾರತನೇ, ಅಲ್ಲಿಗೆ ಸಿದ್ಧರೂ, ಚಾರಣರೂ ಮತ್ತು ದೇವತೆಗಳೂ ಹೋಗುತ್ತಾರೆ. ಎಲೈ ರಾಜನೇ, ನಾಲ್ಕು ರೀತಿಯ ಪ್ರಜೆಗಳೂ ಅಲ್ಲಿ ಪರಮ ಧಾರ್ಮಿಕರಾಗಿರುತ್ತಾರೆ.

ವರ್ಣಾಃ ಸ್ವಕರ್ಮನಿರತಾ ನ ಚ ಸ್ತೇನೋಽತ್ರ ದೃಶ್ಯತೇ ।
ದೀರ್ಘಾಯುಷೋ ಮಹಾರಾಜ ಜರಾಮೃತ್ಯುವಿವರ್ಜಿತಾಃ ॥೨೮॥

ವರ್ಣಗಳು ತಮ್ಮ ತಮ್ಮ ಕರ್ಮಗಳಲ್ಲಿ ನಿರತವಾಗಿರುತ್ತವೆ. ಇಲ್ಲಿ ಚೋರರು ಇರುವುದಿಲ್ಲ. ಮಹಾರಾಜನೇ, ಪ್ರಜೆಗಳು ಜರಾಮೃತ್ಯುವಿವರ್ಜಿತರಾಗಿ ದೀರ್ಘವಾದ ಆಯುಸ್ಸನ್ನು ಹೊಂದಿರುತ್ತಾರೆ.

ಪ್ರಜಾಸ್ತತ್ರ ವಿವರ್ಧಂತೇ ವರ್ಷಾಸ್ವಿವ ಸಮುದ್ರಗಾಃ ।
ನದ್ಯಃ ಪುಣ್ಯಜಲಾಸ್ತತ್ರ ಗಂಗಾ ಚ ಬಹುಧಾಗತಿಃ ॥೨೯॥

ಅಲ್ಲಿ ಪ್ರಜೆಗಳು ಮಳೆಗಾಲದ ನದಿಗಳಂತೆ ಅಭಿವೃದ್ಧಿಯನ್ನು ಹೊಂದುತ್ತಾರೆ. ನದಿಗಳಲ್ಲಿ ಪವಿತ್ರವಾದ ಜಲವಿದೆ. ಗಂಗೆಯು ಅನೇಕ ವಿಧವಾಗಿ ಅಲ್ಲಿ ಹರಿಯುತ್ತಾಳೆ.

ಸುಕುಮಾರೀ ಕುಮಾರೀ ಚ ಸೀತಾ ಕಾವೇರಕಾ ತಥಾ ।
ಮಹಾನದೀ ಚ ಕೌರವ್ಯ ತಥಾ ಮಣಿಜಲಾ ನದೀ ।
ಇಕ್ಷುವರ್ಧನಿಕಾ ಚೈವ ತಥಾ ಭರತಸತ್ತಮ ॥೩೦॥

ಎಲೈ ಭರತಸತ್ತಮನೇ, ಸುಕುಮಾರೀ, ಕುಮಾರೀ, ಸೀತಾ, ಕಾವೇರಿಕಾ, ಮಹಾನದೀ, ಮಣಿಜಲಾ, ಇಕ್ಷುವರ್ಧನಿಕಾ ಇವೆಲ್ಲವೂ ಗಂಗೆಯ ಕವಲುಗಳೇ ಆಗಿವೆ.

ತತ್ರ ಪ್ರವೃತ್ತಾಃ ಪುಣ್ಯೋದಾ ನದ್ಯಃ ಕುರುಕುಲೋದ್ವಹ ।
ಸಹಸ್ರಾಣಾಂ ಶತಾನ್ಯೇವ ಯತೋ ವರ್ಷತಿ ವಾಸವಃ ॥೩೧॥

ಎಲೈ ಕುರುಕುಲೋದ್ವಹನೇ, ಅವುಗಳಿಂದ ಪವಿತ್ರವಾದ ನೀರನ್ನು ಹೊಂದಿದ ಲಕ್ಷಾಂತರ ನದಿಗಳು ಉಂಟಾಗುತ್ತವೆ. ಇಂದ್ರನು ಅವುಗಳಿಂದ ನೀರನ್ನು ತೆಗೆದುಕೊಂಡು ಮಳೆಯನ್ನು ಸುರಿಸುತ್ತಾನೆ.

ನ ತಾಸಾಂ ನಾಮಧೇಯಾನಿ ಪರಿಮಾಣಂ ತಥೈವ ಚ ।
ಶಕ್ಯತೇ ಪರಿಸಂಖ್ಯಾತುಂ ಪುಣ್ಯಾಸ್ತಾ ಹಿ ಸರಿದ್ವರಾಃ ॥೩೨॥

ಆ ನದಿಗಳಿಗೆ ಹೆಸರನ್ನಾಗಲೀ, ಅವುಗಳ ಪರಿಮಾಣವನ್ನಾಗಲೀ ಹೇಳಲು ಸಾಧ್ಯವಾಗುವುದಿಲ್ಲ. ಅವುಗಳನ್ನು ಎಣಿಸಲೂ ಸಾಧ್ಯವಾಗುವುದಿಲ್ಲ. ಎಲ್ಲವೂ ಪವಿತ್ರವಾದ ಶ್ರೇಷ್ಠವಾದ ನದಿಗಳಷ್ಟೆ!

ತತ್ರ ಪುಣ್ಯಾ ಜನಪದಾಶ್ಚತ್ವಾರೋ ಲೋಕಸಮ್ಮತಾಃ ।
ಮಗಾಶ್ಚ ಮಶಕಾಶ್ಚೈವ ಮಾನಸಾ ಮಂದಗಾಸ್ತಥಾ ॥೩೩॥

ಅಲ್ಲಿ ಪುಣ್ಯಪ್ರದವಾದ, ಲೋಕಸಮ್ಮತವಾದ ಮಗ, ಮಶಕ, ಮಾನಸ ಮತ್ತು ಮಂದಗ ಎಂಬ ನಾಲ್ಕು ದೇಶಗಳಿವೆ.

ಮಗಾ ಬ್ರಾಹ್ಮಣಭೂಯಿಷ್ಠಾಃ ಸ್ವಕರ್ಮನಿರತಾ ನೃಪ ।
ಮಶಕೇಷು ತು ರಾಜನ್ಯಾ ಧಾರ್ಮಿಕಾಃ ಸರ್ವಕಾಮದಾಃ ॥೩೪॥

ಎಲೈ ರಾಜನೇ, ಮಗದೇಶವು ತಮ್ಮ ಕರ್ಮದಲ್ಲಿ ನಿರತರಾದ ಬ್ರಾಹ್ಮಣರಿಂದ ಬಹಳವಾಗಿ ತುಂಬಿದೆ. ಮಶಕ ದೇಶದಲ್ಲಿ ಧಾರ್ಮಿಕರೂ, ಕೇಳುವ ಎಲ್ಲವನ್ನೂ ಕೊಡುವವರೂ ಆದ ರಾಜರಿದ್ದಾರೆ.

ಮಾನಸೇಷು ಮಹಾರಾಜ ವೈಶ್ಯಾಃ ಕರ್ಮೋಪಜೀವಿನಃ ।
ಸರ್ವಕಾಮಸಮಾಯುಕ್ತಾಃ ಶೂರಾ ಧರ್ಮಾರ್ಥನಿಶ್ಚಿತಾಃ ।
ಶೂದ್ರಾಸ್ತು ಮಂದಗೇ ನಿತ್ಯಂ ಪುರುಷಾ ಧರ್ಮಶೀಲಿನಃ ॥೩೫॥

ಎಲೈ ಮಹಾರಾಜನೇ, ಮಾನಸ ದೇಶದಲ್ಲಿ ಕುಶಲಕರ್ಮಗಳಿಂದ ಜೀವಿಸುವ, ಸರ್ವಸಮೃದ್ಧಿಯಿಂದ ಕೂಡಿದ, ಧರ್ಮಾರ್ಥನಿಶ್ಚಯವುಳ್ಳ ಶೂರರಾದ ವೈಶ್ಯರಿದ್ದಾರೆ. ಮಂದಗ ದೇಶದಲ್ಲಿ ನಿತ್ಯವೂ ಧರ್ಮಶೀಲರಾದ ಶೂದ್ರರು ಇರುತ್ತಾರೆ.

ನ ತತ್ರ ರಾಜಾ ರಾಜೇಂದ್ರ ನ ದಂಡೋ ನ ಚ ದಂಡಿಕಾಃ ।
ಸ್ವಧರ್ಮೇಣೈವ ಧರ್ಮಂ ಚ ತೇ ರಕ್ಷಂತಿ ಪರಸ್ಪರಮ್ ॥೩೬॥

ಎಲೈ ರಾಜೇಂದ್ರನೇ, ಅಲ್ಲಿ ರಾಜನಾಗಲೀ, ಅಥವಾ ದಂಡವನ್ನು ವಿಧಿಸುವ ಅಧಿಕಾರಿಯಾಗಲೀ ಇರುವುದಿಲ್ಲ. ಪ್ರಜೆಗಳು ತಮ್ಮ ತಮ್ಮ ಧರ್ಮಗಳಿಂದಲೇ ಪರಸ್ಪರವಾಗಿ ರಕ್ಷಣೆಯನ್ನು ಮಾಡಿಕೊಳ್ಳುತ್ತಾರೆ.

ಏತಾವದೇವ ಶಕ್ಯಂ ತು ತಸ್ಮಿನ್ ದ್ವೀಪೇ ಪ್ರಭಾಷಿತುಮ್ ।
ಏತಾವದೇವ ಶ್ರೋತವ್ಯಂ ಶಾಕದ್ವೀಪೇ ಮಹೌಜಸಿ ॥೩೭॥

ಶಾಕದ್ವೀಪದಲ್ಲಿ ಇಷ್ಟು ಮಾತ್ರ ಹೇಳಲು ಸಾಧ್ಯ. ಮಹಾಸಾಮರ್ಥ್ಯವುಳ್ಳ ಶಾಕದ್ವೀಪದ ವಿಷಯದಲ್ಲಿ ಇಷ್ಟನ್ನು ಮಾತ್ರ ಕೇಳಲು ಸಾಧ್ಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ದ್ವಾದಶೋಽಧ್ಯಾಯಃ ॥
॥ ಭೂಮಿಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿಮೂರನೆಯ ಅಧ್ಯಾಯ

ಕ್ರೌಂಚಾದಿ ದ್ವೀಪ ವರ್ಣನೆ.

ಸಂಜಯಃ

ಉತ್ತರೇಷು ತು ಕೌರವ್ಯ ದ್ವೀಪೇಷು ಶ್ರೂಯತೇ ಕಥಾ ।
ಯಥಾಶ್ರುತಂ ಮಹಾರಾಜ ಬ್ರುವತಸ್ತನ್ನಿಬೋಧ ಮೇ ॥೧॥

ಸಂಜಯ– ಎಲೈ ಕೌರವ್ಯನೇ, ಮಹಾರಾಜನೇ, ಉತ್ತರ ದ್ವೀಪಗಳಲ್ಲಿ ಅನೇಕ ಕಥೆಗಳು ಕೇಳಿ ಬರುತ್ತವೆ. ನಾನು ಕೇಳಿದಂತೆ ಹೇಳುತ್ತೇನೆ. ಅದನ್ನು ಆಲಿಸು.

ಘೃತತೋಯಃ ಸಮುದ್ರೋಽತ್ರ ದಧಿಮಂಡೋದಕೋಽಪರಃ ।
ಸುರೋದಃ ಸಾಗರಶ್ಚೈವ ತಥಾನ್ಯೋ ಧರ್ಮಸಾಗರಃ ॥೨॥

ಘೃತ ಸಮುದ್ರ, ದಧಿಮಂಡೋದಕ ಸಮುದ್ರ, ಸುರೋದ ಹಾಗೆಯೇ ಧರ್ಮಸಾಗರ ಈ ಸಮುದ್ರಗಳು ಇವೆ.

ಪರಸ್ಪರೇಣ ದ್ವಿಗುಣಾಃ ಸರ್ವೇ ದ್ವೀಪಾ ನರಾಧಿಪ ।
ಸರ್ವತಶ್ಚ ಮಹಾರಾಜ ಪರ್ವತೈಃ ಪರಿವಾರಿತಾಃ ॥೩॥

ಎಲೈ ನರಾಧಿಪನೇ, ಮಹಾರಾಜನೇ, ಈ ಎಲ್ಲ ದ್ವೀಪಗಳು ಕ್ರಮವಾಗಿ ದ್ವಿಗುಣವಾದ ವಿಸ್ತಾರವನ್ನು ಹೊಂದಿವೆ ಮತ್ತು ಎಲ್ಲ ದ್ವೀಪಗಳೂ ಪರ್ವತಗಳಿಂದ ತುಂಬಿವೆ.

ಇಕ್ಷೂದಶ್ಚ ಸುರೋದಶ್ಚ ಸರ್ಪಿಃ ಕ್ಷೀರೋದಧಿಸ್ತದಾ ।
ದಧಿಮಂಡೋದಧಿಶ್ಚಾನ್ಯಃ ಶುದ್ಧೋದಧಿರಥೋ ಮಹಾನ್ ॥೪॥

ಇಕ್ಷುರಸೋದ, ಸುರೋದ, ಘೃತೋದ, ಕ್ಷೀರೋದ, ದಧಿಮಂಡೋದ ಮತ್ತು ಶುದ್ಧೋದ ಎಂಬ ಸಮುದ್ರಗಳು ಕ್ರಮವಾಗಿ ಇವೆ (ಭಾಗವತ ತಾತ್ಪರ್ಯದಲ್ಲಿ ಹೇಳಿರುವಂತೆ ಇಲ್ಲಿ ಕ್ಷೀರೋದ ಎಂದರೆ ಸಿಹಿಯಾದ ಮೊಸರಿನ ಸಮುದ್ರ, ದಧಿಮಂಡೋದವೆಂದರೆ ಮೊಸರಿನಂತೆ ಗಟ್ಟಿಯಾದ ಹಾಲಿನ ಸಮುದ್ರ).

ಗೌರಸ್ತು ಮಧ್ಯಮೇ ದ್ವೀಪೇ ಗಿರಿರ್ಮಾನಃಶಿಲೋ ಮಹಾನ್ ।
ಪರ್ವತಃ ಪಶ್ಚಿಮಃ ಕೃಷ್ಣೋ ನಾರಾಯಣನಿಭೋ ನೃಪ ॥೫॥

ಈ ಸಪ್ತದ್ವೀಪಗಳ ಮಧ್ಯದಲ್ಲಿರುವ ಕ್ರೌಂಚದ್ವೀಪದಲ್ಲಿ ಪೂರ್ವಭಾಗದಲ್ಲಿ ಮಾನಃಶಿಲ ಎಂಬ ಹೆಸರಿನ ಗೌರ ವರ್ಣದ ಒಂದು ಪರ್ವತವಿದೆ. ಅದೇ ದ್ವೀಪದ ಪಶ್ಚಿಮ ಭಾಗದಲ್ಲಿ ನಾರಾಯಣನ ಕಾಂತಿಯನ್ನು ಹೊಂದಿದ ಕೃಷ್ಣ ಎಂಬ ಪರ್ವತವಿದೆ.

ಎಲೈ ಮಹಾರಾಜನೇ, ಮಾನಸ ದೇಶದಲ್ಲಿ ಕುಶಲಕರ್ಮಗಳಿಂದ ಜೀವಿಸುವ, ಸರ್ವಸಮೃದ್ಧಿಯಿಂದ ಕೂಡಿದ, ಧರ್ಮಾರ್ಥನಿಶ್ಚಯವುಳ್ಳ ಶೂರರಾದ ವೈಶ್ಯರಿದ್ದಾರೆ. ಮಂದಗ ದೇಶದಲ್ಲಿ ನಿತ್ಯವೂ ಧರ್ಮಶೀಲರಾದ ಶೂದ್ರರು ಇರುತ್ತಾರೆ.

ನ ತತ್ರ ರಾಜಾ ರಾಜೇಂದ್ರ ನ ದಂಡೋ ನ ಚ ದಂಡಿಕಾಃ ।
ಸ್ವಧರ್ಮೇಣೈವ ಧರ್ಮಂ ಚ ತೇ ರಕ್ಷಂತಿ ಪರಸ್ಪರಮ್ ॥೩೬॥

ಎಲೈ ರಾಜೇಂದ್ರನೇ, ಅಲ್ಲಿ ರಾಜನಾಗಲೀ, ಅಥವಾ ದಂಡವನ್ನು ವಿಧಿಸುವ ಅಧಿಕಾರಿಯಾಗಲೀ ಇರುವುದಿಲ್ಲ. ಪ್ರಜೆಗಳು ತಮ್ಮ ತಮ್ಮ ಧರ್ಮಗಳಿಂದಲೇ ಪರಸ್ಪರವಾಗಿ ರಕ್ಷಣೆಯನ್ನು ಮಾಡಿಕೊಳ್ಳುತ್ತಾರೆ.

ಏತಾವದೇವ ಶಕ್ಯಂ ತು ತಸ್ಮಿನ್ ದ್ವೀಪೇ ಪ್ರಭಾಷಿತುಮ್ ।
ಏತಾವದೇವ ಶ್ರೋತವ್ಯಂ ಶಾಕದ್ವೀಪೇ ಮಹೌಜಸಿ ॥೩೭॥

ಶಾಕದ್ವೀಪದಲ್ಲಿ ಇಷ್ಟು ಮಾತ್ರ ಹೇಳಲು ಸಾಧ್ಯ. ಮಹಾಸಾಮರ್ಥ್ಯವುಳ್ಳ ಶಾಕದ್ವೀಪದ ವಿಷಯದಲ್ಲಿ ಇಷ್ಟನ್ನು ಮಾತ್ರ ಕೇಳಲು ಸಾಧ್ಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ದ್ವಾದಶೋಽಧ್ಯಾಯಃ ॥

॥ ಭೂಮಿಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿಮೂರನೆಯ ಅಧ್ಯಾಯ

ಕ್ರೌಂಚಾದಿ ದ್ವೀಪ ವರ್ಣನೆ.

ಸಂಜಯಃ

ಉತ್ತರೇಷು ತು ಕೌರವ್ಯ ದ್ವೀಪೇಷು ಶ್ರೂಯತೇ ಕಥಾ ।
ಯಥಾಶ್ರುತಂ ಮಹಾರಾಜ ಬ್ರುವತಸ್ತನ್ನಿಬೋಧ ಮೇ ॥೧॥

ಸಂಜಯ– ಎಲೈ ಕೌರವ್ಯನೇ, ಮಹಾರಾಜನೇ, ಉತ್ತರ ದ್ವೀಪಗಳಲ್ಲಿ ಅನೇಕ ಕಥೆಗಳು ಕೇಳಿ ಬರುತ್ತವೆ. ನಾನು ಕೇಳಿದಂತೆ ಹೇಳುತ್ತೇನೆ. ಅದನ್ನು ಆಲಿಸು.

ಘೃತೋಯಃ ಸಮುದ್ರೋಽತ್ರ ದಧಿಮಂಡೋದಕೋಽಪರಃ ।
ಸುರೋದಃ ಸಾಗರಶ್ಚೈವ ತಥಾನ್ಯೋ ಧರ್ಮಸಾಗರಃ ॥೨॥

ಘೃತ ಸಮುದ್ರ, ದಧಿಮಂಡೋದಕ ಸಮುದ್ರ, ಸುರೋದ ಹಾಗೆಯೇ ಧರ್ಮಸಾಗರ ಈ ಸಮುದ್ರಗಳು ಇವೆ.

ಪರಸ್ಪರೇಣ ದ್ವಿಗುಣಾಃ ಸರ್ವೇ ದ್ವೀಪಾ ನರಾಧಿಪ ।
ಸರ್ವತಶ್ಚ ಮಹಾರಾಜ ಪರ್ವತೈಃ ಪರಿವಾರಿತಾಃ ॥೩॥

ಎಲೈ ನರಾಧಿಪನೇ, ಮಹಾರಾಜನೇ, ಈ ಎಲ್ಲ ದ್ವೀಪಗಳು ಕ್ರಮವಾಗಿ ದ್ವಿಗುಣವಾದ ವಿಸ್ತಾರವನ್ನು ಹೊಂದಿವೆ ಮತ್ತು ಎಲ್ಲ ದ್ವೀಪಗಳೂ ಪರ್ವತಗಳಿಂದ ತುಂಬಿವೆ.

ಇಕ್ಷೂದಶ್ಚ ಸುರೋದಶ್ಚ ಸರ್ಪಿಃ ಕ್ಷೀರೋದಧಿಸ್ತದಾ ।
ದಧಿಮಂಡೋದಧಿಶ್ಚಾನ್ಯಃ ಶುದ್ಧೋದಧಿರಥೋ ಮಹಾನ್ ॥೪॥

ಇಕ್ಷುರಸೋದ, ಸುರೋದ, ಘೃತೋದ, ಕ್ಷೀರೋದ, ದಧಿಮಂಡೋದ ಮತ್ತು ಶುದ್ಧೋದ ಎಂಬ ಸಮುದ್ರಗಳು ಕ್ರಮವಾಗಿ ಇವೆ (ಭಾಗವತ ತಾತ್ಪರ್ಯದಲ್ಲಿ ಹೇಳಿರುವಂತೆ ಇಲ್ಲಿ ಕ್ಷೀರೋದ ಎಂದರೆ ಸಿಹಿಯಾದ ಮೊಸರಿನ ಸಮುದ್ರ, ದಧಿಮಂಡೋದವೆಂದರೆ ಮೊಸರಿನಂತೆ ಗಟ್ಟಿಯಾದ ಹಾಲಿನ ಸಮುದ್ರ).

ಗೌರಸ್ತು ಮಧ್ಯಮೇ ದ್ವೀಪೇ ಗಿರಿರ್ಮಾನಃಶಿಲೋ ಮಹಾನ್ ।
ಪರ್ವತಃ ಪಶ್ಚಿಮಃ ಕೃಷ್ಣೋ ನಾರಾಯಣನಿಭೋ ನೃಪ ॥೫॥

ಈ ಸಪ್ತದ್ವೀಪಗಳ ಮಧ್ಯದಲ್ಲಿರುವ ಕ್ರೌಂಚದ್ವೀಪದಲ್ಲಿ ಪೂರ್ವಭಾಗದಲ್ಲಿ ಮಾನಃಶಿಲ ಎಂಬ ಹೆಸರಿನ ಗೌರ ವರ್ಣದ ಒಂದು ಪರ್ವತವಿದೆ. ಅದೇ ದ್ವೀಪದ ಪಶ್ಚಿಮ ಭಾಗದಲ್ಲಿ ನಾರಾಯಣನ ಕಾಂತಿಯನ್ನು ಹೊಂದಿದ ಕೃಷ್ಣ ಎಂಬ ಪರ್ವತವಿದೆ.

ತತ್ರ ರತ್ನಾನಿ ದಿವ್ಯಾನಿ ಸ್ವಯಂ ರಕ್ಷತಿ ಕೇಶವಃ ।
ಪ್ರಜಾಪತಿಮುಪಾಸೀನಃ ಪ್ರಜಾನಾಂ ವಿದಧೇ ಸುಖಮ್ ॥೬॥

ಅಲ್ಲಿ ಕೇಶವನು ಸ್ವತಃ ದಿವ್ಯವಾದ ರತ್ನಗಳನ್ನು ರಕ್ಷಿಸುತ್ತಾನೆ. ಪ್ರಜಾಪತಿಗಳ ಸಮೀಪದಲ್ಲಿ ಕುಳಿತವನಾಗಿ ಪ್ರಜೆಗಳಿಗೆ ಸುಖವನ್ನು ಉಂಟುಮಾಡುತ್ತಾನೆ.

ಕುಶದ್ವೀಪೇ ಕುಶಸ್ತಂಭೋ ಮಧ್ಯೇ ಜನಪದಸ್ಯ ಹ ।
ಸಂಪೂಜ್ಯತೇ ಶಾಲ್ಮಲಿಶ್ಚ ದ್ವೀಪೇ ಶಾಲ್ಮಲಿಕೇ ನೃಪ ॥೭॥

ಎಲೈ ರಾಜನೇ, ಕುಶದ್ವೀಪ ದೇಶದ ಮಧ್ಯದಲ್ಲಿ ಕುಶದ ಒಂದು ಪೊದೆ ಇದೆ. ಅದೂ ಮತ್ತು ಶಾಲ್ಮಲಿ ದ್ವೀಪದಲ್ಲಿ ಇರುವ ಶಾಲ್ಮಲಿ ವೃಕ್ಷವೂ ಪೂಜಿಸಲ್ಪಡುತ್ತವೆ.

ಕ್ರೌಂಚದ್ವೀಪೇ ಮಹಾಕ್ರೌಂಚೋ ಗಿರೀ ರತ್ನಚಯಾಕರಃ ।
ಸಂಪೂಜ್ಯತೇ ಮಹಾರಾಜ ಚಾತುರ್ವರ್ಣ್ಯೈರ ನಿತ್ಯದಾ ॥೮॥

ಎಲೈ ಮಹಾರಾಜನೇ, ಕ್ರೌಂಚದ್ವೀಪದಲ್ಲಿ ರತ್ನಸಮೂಹಗಳಿಗೆ ಆಶ್ರಯವಾದ ಕ್ರೌಂಚವೆಂಬ ಮಹಾಪರ್ವತವಿದೆ. ಅದು ಯಾವಾಗಲೂ ನಾಲ್ಕು ವರ್ಣದ ಪ್ರಜೆಗಳಿಂದ ಪೂಜಿಸಲ್ಪಡುತ್ತದೆ.

ಗೋಮಂದಃ ಪರ್ವತೋ ರಾಜನ್ ಸುಮಹಾನ್ ಸರ್ವಧಾತುಮಾನ್ ।
ಯತ್ರ ನಿತ್ಯಂ ನಿವಸತಿ ಶ್ರೀಮಾನ್ ಕಮಲಲೋಚನಃ ।
ಮೋಕ್ಷಿಭಿಃ ಸಂಸ್ತುತೋ ನಿತ್ಯಂ ಪ್ರಭುರ್ನಾರಾಯಣೋ ಹರಿಃ ॥೯॥

ಕುಶದ್ವೀಪದಲ್ಲಿ ಗೋಮಂದನೆಂಬ ಸರ್ವಧಾತುಗಳಿಂದ ಕೂಡಿದ ಇನ್ನೊಂದು ದೊಡ್ಡ ಪರ್ವತವಿದೆ. ಅಲ್ಲಿ ನಿತ್ಯವೂ ಸಂಪದ್ಯುಕ್ತನಾದ, ಕಮಲನೇತ್ರನಾದ, ಪ್ರಭುವಾದ ನಾರಾಯಣನು ಮೋಕ್ಷಾರ್ಥಿಗಳಿಂದ ಯಾವಾಗಲೂ ಸ್ತೋತ್ರ ಮಾಡಲ್ಪಡುತ್ತಾನೆ.

ಕುಶದ್ವೀಪೇ ತು ರಾಜೇಂದ್ರ ಪರ್ವತೋ ವಿದ್ರುಮೈಶ್ಚಿತಃ ।
ಸುಧಾಮಾ ನಾಮ ದುರ್ಧರ್ಷೋ ದ್ವಿತೀಯೋ ಹೈಮಪರ್ವತಃ ॥೧೦॥

ಎಲೈ ರಾಜೇಂದ್ರನೇ, ಕುಶದ್ವೀಪದಲ್ಲಿ ಹವಳಗಳಿಂದ ತುಂಬಿದ ಸುಧಾಮ ಎಂಬ ಏರಲು ಅಸಾಧ್ಯವಾದ ಸುವರ್ಣಮಯವಾದ ಇನ್ನೊಂದು ಪರ್ವತವಿದೆ.

ದ್ಯುತಿಮಾನ್ನಾಮ ಕೌರವ್ಯ ತೃತೀಯಃ ಕುಮುದೋ ಗಿರಿಃ ।
ಚತುರ್ಥಃ ಪುಷ್ಪವಾನ್ನಾಮ ಪಂಚಮಸ್ತು ಕುಶೇಶಯಃ ॥೧೧॥

ಎಲೈ ಕೌರವ್ಯನೇ, ಅಲ್ಲಿಯೇ ದ್ಯುತಿಮಾನ್ ಎಂಬ ಮೂರನೆಯ ಪರ್ವತವಿದೆ. ಅದಕ್ಕೆ ಕುಮುದ ಎಂದೂ ಹೆಸರು. ನಾಲ್ಕನೆಯ ಪರ್ವತವು ಪುಷ್ಪವಾನ್, ಐದನೆಯ ಪರ್ವತದ ಹೆಸರು ಕುಶೇಶಯ.

ಷಷ್ಠೋ ಹರಿಗಿರಿರ್ನಾಮ ಷಡೇತೇ ಪರ್ವತೋತ್ತಮಾಃ ।
ತೇಷಾಮಂತರವಿಷ್ಕಂಭೋ ದ್ವಿಗುಣಃ ಪ್ರತಿಭಾಗಶಃ ॥೧೨॥

ಆರನೆಯದು ಹರಿಗಿರಿ ಎಂಬ ಪರ್ವತ. ಈ ಆರು ಪರ್ವತಗಳು ಕುಶದ್ವೀಪದಲ್ಲಿರುವ ಶ್ರೇಷ್ಠವಾದ ಪರ್ವತಗಳು. ಆ ಪರ್ವತದ ಮಧ್ಯಭಾಗದ ವಿಸ್ತಾರವು ಹಿಂದಿನ ಪರ್ವತದ ಎರಡರಷ್ಟಿದೆ.

ಔದ್ಭಿದಂ ಪ್ರಥಮಂ ವರ್ಷಂ ದ್ವಿತೀಯಂ ವೇಣುಮಂಡಲಮ್ ।
ತೃತೀಯಂ ವೈ ರಥಾಕಾರಂ ಚತುರ್ಥಂ ಪಾಲನಂ ಸ್ಮೃತಮ್ ॥೧೩॥

ಧೃತಿಮತ್ ಪಂಚಕಂ ವರ್ಷಂ ಷಷ್ಠಂ ವರ್ಷಂ ಪ್ರಭಾಕರಮ್ ।
ಸಪ್ತಮಂ ಕಾಪಿಲಂ ವರ್ಷಂ ಸಪ್ತೈತೇ ವರ್ಷಪುಂಡಕಾಃ ॥೧೪॥

ಆ ಕುಶದ್ವೀಪದಲ್ಲಿ ಔದ್ಭಿದ ಎಂಬುದು ಮೊದಲನೆಯ ವರ್ಷ, ವೇಣುಮಂಡಲ ಎಂಬುದು ಎರಡನೆಯದು, ರಥಾಕಾರ ಎಂಬುದು ಮೂರನೆಯದು, ಪಾಲನ ಎಂಬುದು ನಾಲ್ಕನೆಯದು, ಧೃತಿಮತ್ ಎಂಬುದು ಐದನೆಯದು, ಪ್ರಭಾಕರ ಎಂಬುದು ಆರನೆಯ ವರ್ಷ, ಕಾಪಿಲ ಎಂಬುದು ಏಳನೆಯ ವರ್ಷ. ಇವು ಅಲ್ಲಿರುವ ವರ್ಷ ಸಮೂಹಗಳು.

ಏತೇಷು ದೇವಗಂಧರ್ವಾಃ ಪ್ರಜಾಶ್ಚ ಜಗತೀಶ್ವರ ।
ವಿಹರಂತಿ ರಮಂತೇ ಚ ನ ತೇಷು ಮ್ರಿಯತೇ ಜನಃ ॥೧೫॥

ಎಲೈ ರಾಜೇಂದ್ರನೇ, ಈ ವರ್ಷಗಳಲ್ಲಿ ದೇವ-ಗಂಧರ್ವರು ಮತ್ತು ಉಳಿದ ಪ್ರಜೆಗಳು ವಿಹಾರವನ್ನು ಮಾಡಿ ಸಂತೋಷಪಡುತ್ತಾರೆ. ಅಲ್ಲಿ ಯಾರೂ ಮರಣವನ್ನು ಹೊಂದುವುದಿಲ್ಲ.

ನ ತೇಷು ದಸ್ಯವಃ ಸಂತಿ ಮ್ಲೇಚ್ಛಜಾತ್ಯೋಽಪಿ ವಾ ನೃಪ ।
ಗೌರಪ್ರಾಯೋ ಜನಃ ಸರ್ವಃ ಸುಕುಮಾರಾಶ್ಚ ಪಾರ್ಥಿವ ॥೧೬॥

ಎಲೈ ರಾಜನೇ, ಅಲ್ಲಿ ಕಳ್ಳರು ಇರುವುದಿಲ್ಲ. ಮ್ಲೇಚ್ಛಜಾತಿಯ ಜನರೂ ಇರುವುದಿಲ್ಲ. ಎಲೈ ಪಾರ್ಥಿವನೇ, ಅಲ್ಲಿರುವ ಜನರೆಲ್ಲರೂ ಪ್ರಾಯಃ ಬಿಳಿಯ ಬಣ್ಣದವರಾಗಿದ್ದು ಕೋಮಲ ಶರೀರವುಳ್ಳವರಾಗಿರುತ್ತಾರೆ.

ಅವಶಿಷ್ಟೇಷು ವರ್ಷೇಷು ವಕ್ಷ್ಯಾಮಿ ಮನುಜೇಶ್ವರ ।
ಯಥಾಶ್ರುತಂ ಮಹಾರಾಜ ತದವ್ಯಗ್ರಮನಾಃ ಶೃಣು ॥೧೭॥

ಎಲೈ ಮನುಜೇಶ್ವರನೇ, ಉಳಿದ ದ್ವೀಪಗಳ ವಿಷಯದಲ್ಲಿ ನಾನು ಕೇಳಿದಂತೆ ಹೇಳುವೆನು. ಎಲೈ ಮಹಾರಾಜನೇ, ಸಮಾಧಾನಚಿತ್ತದಿಂದ ಕೇಳು.

ಕ್ರೌಂಚದ್ವೀಪೇ ಮಹಾರಾಜ ಕ್ರೌಂಚೋ ನಾಮ ಮಹಾಗಿರಿಃ ।
ಕ್ರೌಂಚಾತ್ ಪರೋ ವಾಮನಕೋ ವಾಮನಾದಂಧಕಾರಕಃ ॥೧೮॥

ಎಲೈ ಮಹಾರಾಜನೇ, ಕ್ರೌಂಚದ್ವೀಪದಲ್ಲಿ ಕ್ರೌಂಚ ಎಂಬ ದೊಡ್ಡ ಪರ್ವತವಿದೆ. ಕ್ರೌಂಚ ಪರ್ವತದ ನಂತರ ವಾಮನಕ ಎಂಬ ಪರ್ವತವೂ, ವಾಮನ ಎಂಬ ಪರ್ವತದ ನಂತರ ಅಂಧಕಾರಕ ಎಂಬ ಪರ್ವತವೂ ಇದೆ.

ಅಂಧಕಾರಾತ್ ಪರೋ ರಾಜನ್ ಮೈನಾಕಃ ಪರ್ವತೋತ್ತಮಃ ।
ಮೈನಾಕಾತ್ ಪರತೋ ರಾಜನ್ ಗೋವಿಂದೋ ಗಿರಿರುತ್ತಮಃ ॥೧೯॥

ಎಲೈ ಮಹಾರಾಜನೇ, ಅಂಧಕಾರಕ ಪರ್ವತದ ಆಚೆಗೆ ಶ್ರೇಷ್ಠವಾದ ಮೈನಾಕ ಪರ್ವತವಿದೆ. ಎಲೈ ರಾಜನೇ, ಮೈನಾಕ ಪರ್ವತದ ಆಚೆಗೆ ಶ್ರೇಷ್ಠವಾದ ಗೋವಿಂದ ಎಂಬ ಪರ್ವತವಿದೆ.

ಗೋವಿಂದಾತ್ ತು ಪರೋ ರಾಜನ್ ನಿಬಿಡೋ ನಾಮ ಪರ್ವತಃ ।
ಪರಸ್ತು ದ್ವಿಗುಣಸ್ತೇಷಾಂ ವಿಷ್ಕಂಭೋ ವಂಶವರ್ಧನ ॥೨೦॥

ಎಲೈ ರಾಜನೇ, ವಂಶವರ್ಧನನೇ, ಗೋವಿಂದ ಪರ್ವತದ ಆಚೆಗೆ ನಿಬಿಡವೆಂಬ ಪರ್ವತವಿದೆ. ಹಿಂದೆ ಹೇಳಿದಂತೆ ಅನಂತರ ಅನಂತರ ಪರ್ವತಗಳ ಮಧ್ಯಭಾಗದ ವಿಸ್ತಾರವು ಹಿಂದಿನ ಪರ್ವತಗಳ ಮಧ್ಯಭಾಗದ ವಿಸ್ತಾರಕ್ಕಿಂತ ಎರಡರಷ್ಟು ಇರುತ್ತದೆ.

ದೇಶಾಂಸ್ತತ್ರ ಪ್ರವಕ್ಷ್ಯಾಮಿ ತನ್ಮೇ ನಿಗದತಃ ಶೃಣು ।
ಕ್ರೌಂಚಸ್ಯ ಕುಶಲೋ ದೇಶೋ ವಾಮನಸ್ಯ ಮನೋನುಗಃ ॥೨೧॥

ಅಲ್ಲಿರುವ ದೇಶಗಳನ್ನು ಹೇಳುವೆನು. ಅದನ್ನೂ ನನ್ನಿಂದ ಕೇಳು. ಕ್ರೌಂಚ ಪರ್ವತದ ಸಮೀಪದಲ್ಲಿ ಕುಶಲ ಎಂಬ ದೇಶ. ವಾಮನ ಪರ್ವತದ ಸಮೀಪದಲ್ಲಿ ಮನೋನುಗ ಎಂಬ ದೇಶ.

ಮನೋನುಗಾನ್ ಪರಶ್ಚೋಷ್ಣೋ ದೇಶಃ ಕುರುಕುಲೋದ್ವಹ ।
ಉಷ್ಣಾತ್ ಪರಃ ಪ್ರಾವರಕಃ ಪ್ರಾವರಾದಂಧಕಾರಕಃ ॥೨೨॥

ಮನೋನುಗ ದೇಶದ ಅನಂತರ ಉಷ್ಣದೇಶ. ಎಲೈ ಕುರುಕುಲೋದ್ವಹನೇ, ಉಷ್ಣ ದೇಶದ ಅನಂತರ ಪ್ರಾವರಕ ದೇಶ ಮತ್ತು ಪ್ರಾವರಕ ದೇಶದ ಅನಂತರ ಅಂಧಕಾರಕ ದೇಶವಿದೆ.

ಅಂಧಕಾರಕದೇಶಾತ್ ತು ಮುನಿದೇಶಃ ಪರಃ ಸ್ಮೃತಃ ।
ಮುನಿದೇಶಾತ್ ಪರಶ್ಚೈವ ಪ್ರೋಚ್ಯತೇ ದುಂದುಭಿಸ್ವನಃ ॥೨೩॥

ಅಂಧಕಾರಕ ದೇಶದ ಆಚೆಗೆ ಮುನಿದೇಶವಿದೆ ಎಂದು ಹೇಳಲ್ಪಡುತ್ತದೆ. ಮುನಿದೇಶದ ಆಚೆಗೆ ದುಂದುಭಿಸ್ವನ ದೇಶವು ಹೇಳಲ್ಪಡುತ್ತದೆ.

ಸಿದ್ಧಚಾರಣಸಂಕೀರ್ಣೋ ಗೌರಪ್ರಾಯೋ ಜನಾಧಿಪ ।
ಏತೇ ದೇಶಾ ಮಹಾರಾಜ ದೇವಗಂಧರ್ವಸೇವಿತಾಃ ॥೨೪॥

ಎಲೈ ಜನಾಧಿಪನೇ, ಈ ದೇಶಗಳು ಹೆಚ್ಚಾಗಿ ಗೌರವರ್ಣದ ಜನಗಳಿಂದ ಕೂಡಿದ್ದು, ಸಿದ್ಧ-ಚಾರಣರಿಂದ ನಿಬಿಡವಾಗಿವೆ. ಎಲೈ ಮಹಾರಾಜನೇ, ಈ ದೇಶಗಳು ದೇವ-ಗಂಧರ್ವರಿಂದಲೂ ಸೇವಿತವಾಗಿವೆ.

ಪುಷ್ಕರೇ ಪುಷ್ಕರೋ ನಾಮ ಪರ್ವತೋ ಮಣಿರತ್ನವಾನ್ ।
ತತ್ರ ನಿತ್ಯಂ ನಿವಸತಿ ಸ್ವಯಂ ದೇವಃ ಪ್ರಜಾಪತಿಃ ॥೨೫॥

ಪುಷ್ಕರ ದ್ವೀಪದಲ್ಲಿ ಪುಷ್ಕರ ಎಂಬ ಹೆಸರಿನ ಮಣಿರತ್ನಮಯವಾದ ಪರ್ವತವಿದೆ. ಅಲ್ಲಿ ಪ್ರಜಾಪತಿಯಾದ ಬ್ರಹ್ಮದೇವರು ನಿತ್ಯವೂ ವಾಸಿಸುತ್ತಾರೆ.

ತಂ ಪರ್ಯುಪಾಸತೇ ನಿತ್ಯಂ ದೇವಾಃ ಸರ್ವೇ ಮಹರ್ಷಿಭಿಃ ।
ವಾಗ್ಭಿರ್ಮನೋನುಕೂಲಾಭಿಃ ಪೂಜಯಂತೋ ಜನಾಧಿಪ ॥೨೬॥

ಎಲೈ ಜನಾಧಿಪನೇ, ಅವರನ್ನು ಎಲ್ಲ ದೇವತೆಗಳು ಮತ್ತು ಮಹರ್ಷಿಗಳು ಮನೋನುಕೂಲವಾದ ಸ್ತೋತ್ರದಿಂದ ಪೂಜಿಸುತ್ತಾ ಉಪಾಸನೆಯನ್ನು ಮಾಡುತ್ತಾರೆ.

ಜಂಬೂದ್ವೀಪಾತ್ ಪ್ರಭೃತ್ಯೇವ ರತ್ನಾನಿ ವಿವಿಧಾನ್ಯುತ ।
ದ್ವೀಪೇಷು ಶೇಷು ಸರ್ವೇಷು ಪ್ರಜಾನಾಂ ಕುರುನಂದನ ॥೨೭॥

ಎಲೈ ಕುರುನಂದನನೇ, ಜಂಬೂದ್ವೀಪವನ್ನು ಆರಂಭಿಸಿ ಎಲ್ಲ ದ್ವೀಪಗಳಲ್ಲಿಯೂ ಪ್ರಜೆಗಳಿಗೆ ವಿವಿಧವಾದ ರತ್ನಗಳು ದೊರೆಯುತ್ತವೆ.

ವಿಪ್ರಾಣಾಂ ಬ್ರಹ್ಮಚರ್ಯೇಣ ಸತ್ಯೇನ ಚ ದಮೇನ ಚ ।
ಆರೋಗ್ಯಾಯುಃಪ್ರಮಾಣಾಭ್ಯಾಂ ದ್ವಿಗುಣಂ ದ್ವಿಗುಣಂ ತತಃ ॥೨೮॥

ಜಂಬೂದ್ವೀಪವನ್ನು ಆರಂಭಿಸಿ ಮುಂದೆ ಹೋದಂತೆ ಅಲ್ಲಿರುವ ಬ್ರಾಹ್ಮಣರ ಬ್ರಹ್ಮಚರ್ಯ, ಸತ್ಯ ಮತ್ತು ಇಂದ್ರಿಯನಿಗ್ರಹಗಳಿಂದ ಅವರ ಆರೋಗ್ಯ ಮತ್ತು ಆಯುಸ್ಸು ಎರಡೆರಡುಪಟ್ಟು ಹೆಚ್ಚಾಗುತ್ತಾ ಹೋಗುತ್ತವೆ.

ಏಷೋ ಜನಪದೋ ರಾಜನ್ ದ್ವೀಪೇಷ್ವೇತೇಷು ಭಾರತ ।
ಉಕ್ತಾ ಜನಪದಾ ಯೇಷು ಧರ್ಮಶ್ಚೈಕಃ ಪ್ರದೃಶ್ಯತೇ ॥೨೯॥

ಎಲೈ ರಾಜನೇ, ಭಾರತನೇ, ಈ ದ್ವೀಪದಲ್ಲಿ ಒಂದೇ ವಿಧವಾದ ದೇಶವಿದೆ. ಅನೇಕ ದೇಶಗಳಿದ್ದರೂ ಅವುಗಳಲ್ಲಿ ಒಂದೇ ವಿಧವಾದ ಧರ್ಮಾಚರಣೆಯು ಕಂಡು ಬರುತ್ತದೆ.

ಈಶ್ವರೋ ದಂಡಮುದ್ಯಮ್ಯ ಸ್ವಯಮೇವ ಪ್ರಜಾಪತಿಃ ।
ದ್ವೀಪಾನೇತಾನ್ ಮಹಾರಾಜ ರಕ್ಷತ್ಯುತ್ಥಾಯ ನಿತ್ಯದಾ ॥೩೦॥

ಎಲೈ ಮಹಾರಾಜನೇ, ಪ್ರಜಾಪತಿಯಾದ ಈಶ್ವರನು ತಾನೇ ಕೈಯಲ್ಲಿ ದಂಡವನ್ನು ಹಿಡಿದು ಈ ದ್ವೀಪಗಳನ್ನು ಯಾವಾಗಲೂ ರಕ್ಷಿಸುತ್ತಾನೆ.

ಸ ರಾಜಾ ಸ ಶಿವೋ ರಾಜನ್ ಸ ಪಿತಾ ಸ ಪಿತಾಮಹಃ ।
ಗೋಪಾಯತಿ ನರಶ್ರೇಷ್ಠ ಪ್ರಜಾಃ ಸಜಡಪಂಡಿತಾಃ ॥೩೧॥

ಎಲೈ ರಾಜನೇ, ಅವನೇ ರಾಜ, ಅವನೇ ಶಿವ, ಅವನೇ ಪಿತಾ, ಅವನೇ ಪಿತಾಮಹ. ನರಶ್ರೇಷ್ಠನೇ, ಅವನು ಪಂಡಿತ-ಪಾಮರಾದಿ ಎಲ್ಲ ಪ್ರಜೆಗಳನ್ನೂ ರಕ್ಷಿಸುತ್ತಾನೆ.

ಭೋಜನಂ ಚಾತ್ರ ಕೌರವ್ಯ ಪ್ರಜಾಃ ಸ್ವಯಮುಪಸ್ಥಿತಮ್ ।
ಸಿದ್ಧಮೇವ ಮಹಾರಾಜ ಭುಂಜತೇ ತತ್ರ ನಿತ್ಯದಾ ॥೩೨॥

ಎಲೈ ಕೌರವ್ಯನೇ, ಮಹಾರಾಜನೇ, ಅಲ್ಲಿಯ ಪ್ರಜೆಗಳು ತಾನಾಗಿಯೇ ಸಿದ್ಧವಾಗಿ ಬಂದ ಭೋಜನವನ್ನು ನಿತ್ಯವೂ ಭುಂಜಿಸುತ್ತಾರೆ.

ತತಃ ಪರಂ ಸಮಾ ನಾಮ ದೃಶ್ಯತೇ ಲೋಕಸಂಸ್ಥಿತಿಃ ।
ಚತುರಶ್ರಾ ಮಹಾರಾಜ ತ್ರಯಸ್ತ್ರಿಂಶತ್ತು ಮಂಡಲಮ್ ॥೩೩॥

ಎಲೈ ಮಹಾರಾಜನೇ, ಅಲ್ಲಿಂದಾಚೆಗೆ ಸಮತಟ್ಟಾದ ಭೂಪ್ರದೇಶವಿದೆ. ಮಂಡಲಾಕಾರವಾದ ಆ ಭೂಪ್ರದೇಶದಲ್ಲಿ ಮೂವತ್ತಮೂರು ಮಂಡಲಗಳಿವೆ.

ಸುದರ್ಶನ ಚಕ್ರದ ದಳಗಳಂತೆ ಭೂಮಿಯ ಅಂಚಿನ ಪ್ರದೇಶವು ಮಂಡಲಾಕಾರವಾಗಿದೆ. ಅಲ್ಲಿ ಹೆಚ್ಚಾಗಿ ಮೂವತ್ತಮೂರು ಪ್ರಧಾನ ದೇವತೆಗಳೇ ಸಂಚಾರ ಮಾಡುತ್ತಾರೆ. ಆದ್ದರಿಂದಲೇ ಭೂಚಕ್ರವೆಂದು ಕರೆಯುವ ಪದ್ಧತಿಯಿದೆ (ಲಕ್ಷಾಲಂಕಾರ).

ತತ್ರ ತಿಷ್ಠಂತಿ ಕೌರವ್ಯ ಚತ್ವಾರೋ ಲೋಕಸಮ್ಮತಾಃ ।
ದಿಗ್ಗಜಾ ಭರತಶ್ರೇಷ್ಠ ವಾಮನೈರಾವತಾದಯಃ ।
ಸುಪ್ರತೀಕಸ್ತಥಾ ರಾಜನ್ ಪ್ರಭಿನ್ನಕರಟಾಮುಖಃ ॥೩೪॥

ಎಲೈ ಕೌರವ್ಯನೇ, ಅಲ್ಲಿ ಲೋಕಸಮ್ಮತವಾದ ನಾಲ್ಕು ದಿಗ್ಗಜಗಳು ಇರುತ್ತವೆ. ಎಲೈ ಭರತಶ್ರೇಷ್ಠನಾದ ರಾಜನೇ, ಅವು ವಾಮನ, ಐರಾವತ, ಸುಪ್ರತೀಕ ಮತ್ತು ಮದವನ್ನು ಸುರಿಸುವ (ಕುಮುದ).

ತಸ್ಯಾಹಂ ಪರಿಮಾಣಂ ತು ನ ಸಂಖ್ಯಾತುಮಿಹೋತ್ಸಹೇ ।
ಅಸಂಖ್ಯಾತಃ ಸ ನಿತ್ಯಂ ಹಿ ತಿರ್ಯಗೂರ್ಧ್ವಮಧಸ್ತಥಾ ॥೩೫॥

ಆ ದಿಗ್ಗಜಗಳ ಪರಿಮಾಣವನ್ನು ನಾನು ಹೇಳಲಾರೆ. ಅವು ಅಡ್ಡವಾಗಿ ಮೇಲ್ಭಾಗದಲ್ಲಿ ಮತ್ತು ಕೆಳಭಾಗದಲ್ಲಿ ಗಣನೆ ಇಲ್ಲದಷ್ಟು ವಿಸ್ತಾರವನ್ನು ಹೊಂದಿವೆ.

ತತ್ರ ವೈ ವಾಯವೋ ವಾಂತಿ ದಿಗ್ಭ್ಯಃ ಸರ್ವಾಭ್ಯ ಏವ ಚ ।
ಅಸಂಬಾಧಾ ಮಹಾರಾಜ ತಾನ್ ನಿಗೃಹ್ಣಂತಿ ತೇ ಗಜಾಃ ॥೩೬॥

ಆ ದಿಗ್ಗಜಗಳಿರುವ ಪ್ರದೇಶದಲ್ಲಿ ಎಲ್ಲ ದಿಕ್ಕುಗಳಿಂದಲೂ ಗಾಳಿಯು ಬೀಸುತ್ತದೆ. ಎಲೈ ಮಹಾರಾಜನೇ, ಒಂದಕ್ಕೆ ಒಂದು ತಗುಲದಂತಿರುವ ಆ ಗಜಗಳು ಆ ವಾಯುವಿನ ವೇಗವನ್ನು ನಿಗ್ರಹಿಸುತ್ತವೆ.

ಪುಷ್ಕರೈಃ ಪದ್ಮಸಂಕಾಶೈಃ ವರ್ಷ್ಮವದ್ಭಿ ಮಹಾಪ್ರಭೈಃ ।
ತೇ ತಸ್ಯೈಃ ಪುನರೇವಾತು ವಾಯೂನ್ ಮುಂಚಂತಿ ನಿತ್ಯಶಃ ॥೩೭॥

ತಮ್ಮ ಮಹಾಕಾಂತಿಯುಳ್ಳ ದೃಢವಾದ ಪದ್ಮದಂತಿರುವ ಸೊಂಡಿಲುಗಳಿಂದ ತಾವು ಹೀರಿದ ಆ ವಾಯುವನ್ನು ಪುನಃ ನಿಧಾನವಾಗಿ ಬಿಡುತ್ತವೆ.

ಶ್ವಸದ್ಭಿರ್ಮುಚ್ಯಮಾನಾಸ್ತು ದಿಗ್ಗಜೈರಿಹ ಮಾರುತಾಃ ।
ಆಗಚ್ಛಂತಿ ಮಹಾರಾಜ ತತ್ಪ್ರಸೃಷ್ಟಂತಿ ವೈ ಪ್ರಜಾಃ ॥೩೮॥

ಎಲೈ ಮಹಾರಾಜನೇ, ಹೀಗೆ ಶ್ವಾಸೋಚ್ಛ್ವಾಸವನ್ನು ಮಾಡುವ ದಿಗ್ಗಜಗಳ ನಿಃಶ್ವಾಸದಿಂದ ಉಂಟಾದ ಮಾರುತಗಳು ನಿಧಾನವಾಗಿ ಬೀಸುತ್ತವೆ. ಅದರಿಂದ ಪ್ರಜೆಗಳು ಉಳಿಯುತ್ತಾರೆ.

ಧೃತರಾಷ್ಟ್ರಃ

ಪರೋ ವೈ ವಿಸ್ತರೋಽತ್ಯರ್ಥಂ ತ್ವಯಾ ಸಂಜಯ ಕೀರ್ತಿತಃ ।
ದರ್ಶಿತಂ ದ್ವೀಪಸಂಸ್ಥಾನಮುತ್ತರಂ ಬ್ರೂಹಿ ಸಂಜಯ ॥೩೯॥

ಧೃತರಾಷ್ಟ್ರ– ಎಲೈ ಸಂಜಯನೇ, ನೀನು ಎಲ್ಲ ದ್ವೀಪಗಳನ್ನೂ ಬಹಳ ವಿಸ್ತಾರವಾಗಿ ಹೇಳಿದ್ದೀಯೆ. ದ್ವೀಪಗಳ ಆಕೃತಿಯನ್ನು ಹೇಳಿದ್ದಾಯಿತು. ಎಲೈ ಸಂಜಯನೇ, ಮೇಲ್ಭಾಗದಲ್ಲಿರುವ ಗ್ರಹಗಳ ವಿಷಯವನ್ನು ಹೇಳು.

ಸಂಜಯಃ

ಉಕ್ತಾ ದ್ವೀಪಾ ಮಹಾರಾಜ ಗ್ರಹಾನ್ ಮೇ ಶೃಣು ತತ್ತ್ವತಃ ।
ಸ್ವರ್ಭಾನುಃ ಕೌರವಶ್ರೇಷ್ಠ ಯಾವದೇಷ ಪ್ರಭಾವತಃ ॥೪೦॥

ಸಂಜಯ– ಎಲೈ ಮಹಾರಾಜನೇ, ದ್ವೀಪಗಳನ್ನು ಹೇಳಿದ್ದಾಯಿತು. ಗ್ರಹಗಳನ್ನು ಸರಿಯಾಗಿ ನನ್ನಿಂದ ಕೇಳುವವನಾಗು. ಎಲೈ ಕೌರವಶ್ರೇಷ್ಠನೇ, ಈ ರಾಹುವಿನ ಪ್ರಭಾವವು ಎಷ್ಟು ಎಂಬುದನ್ನು ಕೇಳು.

ಪರಿಮಂಡಲೋ ಮಹಾರಾಜ ಸ್ವರ್ಭಾನುಃ ಶ್ರೂಯತೇ ಗ್ರಹಃ ।
ಯೋಜನಾನಿ ಸಹಸ್ರಾಣಿ ವಿಷ್ಕಂಭೋ ದ್ವಾದಶಾಸ್ಯ ವೈ ॥೪೧॥

ಎಲೈ ಮಹಾರಾಜನೇ, ರಾಹುವು ಮಂಡಲಾಕಾರವಾಗಿರುವ ಗ್ರಹವೆಂದು ಕೇಳಬರುತ್ತದೆ. ಅದರ ಮಧ್ಯಭಾಗದ ವಿಸ್ತಾರ ಹನ್ನೆರಡು ಸಾವಿರ ಯೋಜನಗಳು.

ಪರಿಣಾಹೇನ ಷಟ್‌ತ್ರಿಂಶದ್ ವಿಪುಲತ್ವೇನ ಚಾನಘ ।
ಷಷ್ಟಿಮಾಹುಃ ಸಹಸ್ರಾಣಿ ಬುಧಾಃ ಪೌರಾಣಿಕಾಸ್ತಥಾ ॥೪೨॥

ಆ ಗ್ರಹದ ಸುತ್ತಳತೆಯು ಮೂವತ್ತಾರು ಸಾವಿರ ಯೋಜನಗಳಿವೆ. ಎಲೈ ಅನಘನೇ, ಪುರಾಣವನ್ನು ತಿಳಿದ ಜ್ಞಾನಿಗಳು ಅವನ ಪ್ರಭೆಯ ವಿಸ್ತಾರವು ಅರವತ್ತು ಸಾವಿರ ಯೋಜನಗಳು ಎಂದು ಹೇಳುತ್ತಾರೆ.

ಚಂದ್ರಮಾಸ್ತು ಸಹಸ್ರಾಣಿ ರಾಜನ್ನೇಕಾದಶ ಸ್ಮೃತಃ ।
ವಿಷ್ಕಂಭೇಣ ಕುರುಶ್ರೇಷ್ಠ ತ್ರಯಸ್ತ್ರಿಂಶತ್ತು ಮಂಡಲಮ್ ।
ಏಕೋನಷಷ್ಟಿವಿಸ್ತಾರಃ ಶೀತರಶ್ಮೇರ್ಮಹಾತ್ಮನಃ ॥೪೩॥

ಎಲೈ ರಾಜನೇ, ಚಂದ್ರನ ಮಧ್ಯಭಾಗದ ವಿಸ್ತಾರವು ಹನ್ನೊಂದು ಸಾವಿರ ಯೋಜನಗಳಿವೆ. ಎಲೈ ಕುರುಶ್ರೇಷ್ಠನೇ, ಅವನ ಮಂಡಲದ ಸುತ್ತಳತೆಯು ಮೂವತ್ತಮೂರು ಸಾವಿರ ಯೋಜನಗಳು ಇವೆ. ಮಹಾತ್ಮನಾದ ಶೀತಕರಣನಾದ ಅವನ ಕಾಂತಿಯ ವಿಸ್ತಾರವು ಐವತ್ತೊಂಬತ್ತು ಸಹಸ್ರ ಯೋಜನಗಳಿವೆ.

ಸೂರ್ಯಸ್ತ್ವಷ್ಟೌ ಸಹಸ್ರಾಣಿ ದ್ವೇ ಚಾನ್ಯೇ ಕುರುನಂದನ ।
ವಿಷ್ಕಂಭೇಣ ತತೋ ರಾಜನ್ ಮಂಡಲಂ ತ್ರಿಂಶತಂ ಸಮಮ್ ॥೪೪॥

ಎಲೈ ಕುರುನಂದನನೇ, ಸೂರ್ಯನ ಮಧ್ಯಭಾಗದ ವಿಸ್ತಾರವು ಹತ್ತು ಸಹಸ್ರ ಯೋಜನಗಳಿವೆ. ಎಲೈ ರಾಜನೇ, ಸೂರ್ಯಮಂಡಲದ ಸುತ್ತಳತೆಯು ಮೂವತ್ತು ಸಹಸ್ರ ಯೋಜನಗಳಾಗುತ್ತವೆ.

ಅಷ್ಟಪಂಚಾಶತಂ ರಾಜನ್ ವಿಪುಲತ್ವೇನ ಚಾನಘ ।
ಶ್ರೂಯತೇ ಪರಮೋದಾರಃ ಪತಂಗೋಽಸೌ ವಿಭಾವಸುಃ ।
ಏತತ್ ಪ್ರಮಾಣಮರ್ಕಸ್ಯ ನಿರ್ದಿಷ್ಟಮಿಹ ಭಾರತ ॥೪೫॥

ಎಲೈ ಅನಘನೇ, ಪರಮಶ್ರೇಷ್ಠನಾದ ಈ ಸೂರ್ಯನ ಕಾಂತಿಯ ವಿಸ್ತಾರವು ಐವತ್ತೆಂಟು ಸಾವಿರ ಯೋಜನಗಳೆಂದು ಕೇಳಿ ಬರುತ್ತದೆ. ಎಲೈ ಭಾರತನೇ, ಇವು ಸೂರ್ಯನಿಗೆ ಸಂಬಂಧಪಟ್ಟ ಪರಿಮಾಣಗಳ ವಿಸ್ತಾರವಾಗಿದೆ.

ಸ ರಾಹುಶ್ಚಾದಯತ್ಯೇತೌ ಯಥಾಕಾಲಂ ಮಹತ್ತಯಾ ।
ಚಂದ್ರಾದಿತ್ಯೌ ಮಹಾರಾಜ ಸಂಕ್ಷೇಪೋಽಯಮುದಾಹೃತಃ ॥೪೬॥

ಎಲೈ ಮಹಾರಾಜನೇ, ರಾಹುವು ಸೂರ್ಯ-ಚಂದ್ರರಿಗಿಂತ ಹೆಚ್ಚಿನ ಪ್ರಭಾವಿಸ್ತಾರವನ್ನು ಹೊಂದಿರುವುದರಿಂದ ಅವನಿಗೆ ಯೋಗ್ಯವಾದ ಕಾಲದಲ್ಲಿ ಚಂದ್ರ-ಸೂರ್ಯರನ್ನು ಮುಚ್ಚುತ್ತಾನೆ. ಇದನ್ನು ಗ್ರಹಣವೆಂದು ಕರೆಯುತ್ತಾರೆ. ಮಹಾರಾಜನೇ, ಈ ಗ್ರಹಗಳ ವಿಷಯವನ್ನು ನಿನಗೆ ಸಂಕ್ಷೇಪವಾಗಿ ಹೇಳಿದ್ದೇನೆ.

ಇತ್ಯೇತತ್ ತೇ ಮಹಾರಾಜ ಪೃಚ್ಛತಃ ಶಾಸ್ತ್ರಚಕ್ಷುಷಾ ।
ಸರ್ವಮುಕ್ತಂ ಯಥಾತತ್ತ್ವಂ ತಸ್ಮಾತ್ ಶಮಮವಾಪ್ನುಹಿ ॥೪೭॥

ಎಲೈ ಮಹಾರಾಜನೇ, ನಿನ್ನ ಪ್ರಶ್ನೆಗಳಿಗೆ ಉತ್ತರವಾಗಿ ಶಾಸ್ತ್ರದೃಷ್ಟಿಯಿಂದ ಎಲ್ಲವನ್ನೂ ಹೇಳಿದ್ದೇನೆ. ನೀನು ಸಮಾಧಾನವನ್ನು ಹೊಂದುವವನಾಗು.

ಯಥಾದೃಷ್ಟಂ ಮಯಾ ಪ್ರೋಕ್ತಂ ಸನಿರ್ಯಾಣಮಿದಂ ಜಗತ್ ।
ತಸ್ಮಾದಾಶ್ವಸ ಕೌರವ್ಯ ಪುತ್ರಂ ದುರ್ಯೋಧನಂ ಪ್ರತಿ ॥೪೮॥

ಎಲೈಕೌರವ್ಯನೇ, ನಾನು ನೋಡಿದಂತೆ ಈ ಜಗತ್ತನ್ನು ಸಂಹಾರದವರೆಗೆ ಹೇಳಿದ್ದೇನೆ. ಆದ್ದರಿಂದ ನಿನ್ನ ಪುತ್ರನಾದ ದುರ್ಯೋಧನನ ಬಗ್ಗೆ ಸಮಾಧಾನವನ್ನು ಹೊಂದು.

ಶ್ರುತ್ವೇದಂ ಭರತಶ್ರೇಷ್ಠ ಭೂಮಿಪರ್ವ ಮನೋನುಗಮ್ ।
ಶ್ರೀಮಾನ್ ಭವತಿ ರಾಜನ್ಯಃ ಪಿದ್ಧಾರ್ಥಃ ಸಾಧುಸಮ್ಮತಃ ।
ಆಯುರ್ಬಲಂ ಚ ವೀರ್ಯಂ ಚ ತಸ್ಯ ತೇಜಶ್ಚ ವರ್ಧತೇ ॥೪೯॥

ಎಲೈ ಭರತಶ್ರೇಷ್ಠನೇ, ಈ ಭೂಮಿಪರ್ವವನ್ನು ಮನಃಪೂರ್ವಕವಾಗಿ ಶ್ರವಣ ಮಾಡಿದ ರಾಜನು ಸಂಪದ್ಯುಕ್ತನಾಗುತ್ತಾನೆ, ತನ್ನ ಕಾರ್ಯವನ್ನು ಸಾಧಿಸುತ್ತಾನೆ ಮತ್ತು ಸಜ್ಜನರಿಗೆ ಸಮ್ಮತನಾಗುತ್ತಾನೆ. ಅವನ ಆಯುಸ್ಸು, ಬಲ, ಪರಾಕ್ರಮ ಮತ್ತು ಸಾಮರ್ಥ್ಯಗಳು ಹೆಚ್ಚುತ್ತವೆ.

ಯಃ ಶೃಣೋತಿ ಮಹೀಪಾಲ ಪರ್ವಣೀದಂ ಯತವ್ರತಃ ।
ಪ್ರೀಯಂತೇ ಪಿತರಸ್ತಸ್ಯ ತಥೈವ ಚ ಪಿತಾಮಹಾಃ ॥೫೦॥

ಎಲೈ ರಾಜನೇ, ಯಾವನು ತನ್ನ ಪಿತೃಗಳ ಶ್ರಾದ್ಧಕಾಲ ಮೊದಲಾದ ಪರ್ವಕಾಲದಲ್ಲಿ ಈ ಭೂಮಿಪರ್ವವನ್ನು ಶ್ರವಣ ಮಾಡುತ್ತಾನೆಯೋ, ಅವನ ಪಿತೃಗಳು ಮತ್ತು ಪಿತಾಮಹರು ಸಂತೋಷಪಡುತ್ತಾರೆ.

ಇದಂ ತು ಭಾರತಂ ವರ್ಷಂ ಯತ್ರ ವರ್ತಾಮಹೇ ವಯಮ್ ।
ಪೂರ್ವಂ ಪ್ರವರ್ತತೇ ಪುಣ್ಯಂ ತತ್ಸರ್ವಂ ಶ್ರುತವಾನಸಿ ॥೫೧॥

ನಾವು ಇರುವ ಈ ವರ್ಷವು ಭಾರತವರ್ಷ. ಇಲ್ಲಿ ಪುಣ್ಯಕಾರ್ಯಗಳು ಬಹಳ ಹಿಂದಿನ ಕಾಲದಿಂದಲೂ ನಡೆದು ಬರುತ್ತಿವೆ. ಈ ಎಲ್ಲ ವಿಷಯಗಳನ್ನೂ ನೀನು ಕೇಳಿದ್ದೀಯೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ತ್ರಯೋದಶೋಽಧ್ಯಾಯಃ ॥

॥ ಭೂಮಿಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

॥ ಭೂಮಿಪರ್ವ ಸಮಾಪ್ತಂ ॥

★ ★ ★ ★ ★

೩. ಭಗವದ್ಗೀತಾಪರ್ವ

ಹದಿನಾಲ್ಕನೆಯ ಅಧ್ಯಾಯ

ಸಂಜಯನಿಂದ ಧೃತರಾಷ್ಟ್ರನನ್ನು ಕುರಿತು ಭೀಷ್ಮಪಾತದ ಕಥನ.

ವೈಶಂಪಾಯನಃ

ಅಥ ಗಾವಲ್ಗಣಿರ್ಧೀಮಾನ್ ಸಮರಾದೇತ್ಯ ಸಂಜಯಃ ।
ಪ್ರತ್ಯಕ್ಷದರ್ಶೀ ಸರ್ವಸ್ಯ ಭೂತಭವ್ಯಭವಿಷ್ಯವಿತ್ ॥೧॥

ವಚನಾದ್ ಧೃತರಾಷ್ಟ್ರಸ್ಯ ಕುರುಕ್ಷೇತ್ರಂ ಜಗಾಮ ಹ ।
ವ್ಯಾಸಸ್ಯ ವರದಾನೇನ ತ್ವರಮಾಣಸ್ತು ಸಂಜಯಃ ।
ದೃಷ್ಟ್ವಾ ತು ಸಮರೇ ರಾಜನ್ ಕ್ಷಣೇನೈವ ಸಮಾಗತಃ ॥೨॥

ವೈಶಂಪಾಯನ– ಅನಂತರ ಭೂತ-ಭವಿಷ್ಯ-ವರ್ತಮಾನಗಳನ್ನು ತಿಳಿದವನೂ, ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡುವವನೂ ಆದ, ಮೇಧಾವಿಯಾದ, ಗವಲ್ಗಣ ಪುತ್ರನಾದ ಸಂಜಯನು ಯುದ್ಧಭೂಮಿಯಿಂದ ಹಿಂದಿರುಗಿ ಧೃತರಾಷ್ಟ್ರನ ವಚನದಂತೆ ಕುರುಕ್ಷೇತ್ರಕ್ಕೆ ಬಂದನು. ಎಲೈ ರಾಜನೇ, ವ್ಯಾಸರ ವರದಾನದಿಂದ ಅವನು ಧೃತರಾಷ್ಟ್ರನ ಮಾತಿನಂತೆ ಯುದ್ಧದಲ್ಲಿ ಎಲ್ಲವನ್ನೂ ನೋಡಿ ತ್ವರೆಯಿಂದ ಹಿಂದಿರುಗಿದನು.

ಧ್ಯಾಯತೇ ಧೃತರಾಷ್ಟ್ರಾಯ ಸಹಸೋಪೇತ್ಯ ದುಃಖಿತಃ ।
ಆಚಷ್ಟ ನಿಹತಂ ಭೀಷ್ಮಂ ಭರತಾನಾಮಮರ್ದಮಮ್ ॥

ವಿಶೇಷ ವಿಚಾರ– (ಅಮದ್ಯಪ= ಸುರಾಪಾನಮಾಡದಿರುವ ಕೌರವ ಎಂದು ವಾದಿರಾಜರು ಲಕ್ಷಾಲಂಕಾರದಲ್ಲಿ ಪಾಠ ಹಿಡಿದಿದ್ದಾರೆ.)

ಚಿಂತಾಕ್ರಾಂತನಾದ ಧೃತರಾಷ್ಟ್ರನ ಬಳಿ ಇದ್ದಕ್ಕಿದ್ದಂತೆಯೇ ಬಂದು ದುಃಖಿತನಾದ ಅವನು ಭರತ ಕುಲದಲ್ಲಿ ಶ್ರೇಷ್ಠರಾದ ಮದ್ಯಪಾನ ಮಾಡದಿರುವ ಭೀಷ್ಮರ ಪಾತವನ್ನು ತಿಳಿಸಿದನು.

ಸಂಜಯೋಽಹಂ ಮಹಾರಾಜ ನಮಸ್ತೇ ಭರತರ್ಷಭ ।
ಹತೋ ಭೀಷ್ಮಃ ಶಾಂತನವೋ ಭರತಾನಾಂ ಪಿತಾಮಹಃ ॥೪॥

ಎಲೈ ಮಹಾರಾಜನೇ, ಭರತರ್ಷಭನೇ, ನಿನಗೆ ನಮಸ್ಕಾರ. ನಾನು ಸಂಜಯ. ಶಂತನು ಪುತ್ರರಾದ, ಭರತರ ಪಿತಾಮಹರಾದ ಭೀಷ್ಮರು ಯುದ್ಧದಲ್ಲಿ ಹತರಾದರು.

ಕಕುದಂ ಸರ್ವಯೋಧಾನಾಂ ಧಾಮ ಸರ್ವಧನುಷ್ಮತಾಮ್ ।
ಶರತಲ್ಪಗತಃ ಸೋಽದ್ಯ ಶೇತೇ ಕುರುಪಿತಾಮಹಃ ॥೫॥

ಎಲ್ಲ ಯೋಧರಿಗೂ ಶಿಖರಪ್ರಾಯರಾಗಿದ್ದ, ಎಲ್ಲ ಧನುರ್ಧಾರಿಗಳಿಗೂ ಪರಮಾಶ್ರಯರಾಗಿದ್ದ, ಕುರುಪಿತಾಮಹರಾದ ಭೀಷ್ಮರು ಈ ದಿನ ಶರತಲ್ಪದಲ್ಲಿ ಮಲಗಿದ್ದಾರೆ.

ಯಸ್ಯ ವೀರ್ಯಂ ಸಮಾಶ್ರಿತ್ಯ ದ್ಯೂತಂ ಪುತ್ರಸ್ತವಾಕರೋತ್ ।
ಸ ಶೇತೇ ನಿಹತೋ ರಾಜನ್ ಸಂಖೇ ಭೀಷ್ಮಃ ಶಿಖಂಡಿನಾ ॥೬॥

ಎಲೈ ರಾಜನೇ, ಯಾರ ಪರಾಕ್ರಮವನ್ನು ಆಶ್ರಯಿಸಿ ನಿನ್ನ ಪುತ್ರನು ದ್ಯೂತವನ್ನು ಆಡಿದನೋ ಅಂತಹ ಭೀಷ್ಮರು ಶಿಖಂಡಿಯಿಂದ ಹತರಾಗಿ ಮಲಗಿದ್ದಾರೆ.

ಯಃ ಸರ್ವಾನ್ ಪೃಥಿವೀಪಾಲಾನ್ ಸಮವೇತಾನ್ ಮಹಾಮೃಧೇ ।
ಜಿಗಾಯೈಕರಥೇನೈವ ಕಾಶಿಪುರ್ಯಾಂ ಮಹಾರಥಃ ॥೭॥

ಜಾಮದಗ್ನ್ಯಂ ರಣೇ ರಾಮಮಾಯೋದ್ಧ್ಯ ಮಸುಸಂಭವಃ ।
ನ ಹತೋ ಜಾಮದಗ್ನ್ಯೇನ ಸ ಹತೋಽದ್ಯ ಶಿಖಂಡಿನಾ ॥೮॥

ಯಾವ ಮಹಾರಥರಾದ ಭೀಷ್ಮರು ಕಾಶೀಪಟ್ಟಣದಲ್ಲಿ ಏಕರಥದಿಂದ ದೊಡ್ಡ ಯುದ್ಧದಲ್ಲಿ ಅಲ್ಲಿಗೆ ಬಂದಿದ್ದ ರಾಜರೆಲ್ಲರನ್ನೂ ಜಯಿಸಿದರೋ, ಯಾವ ವಸುಪುತ್ರರಾದ ಭೀಷ್ಮರು ಪರಶುರಾಮರ ಜೊತೆಯಲ್ಲಿ ಯುದ್ಧವನ್ನು ಮಾಡಿ ಅವರಿಂದ ಹತರಾಗಲಿಲ್ಲವೋ ಅಂತಹ ಭೀಷ್ಮರು ಈ ದಿನ ಶಿಖಂಡಿಯಿಂದ ಹತರಾಗಿದ್ದಾರೆ.

ಮಹೇಂದ್ರಸದೃಶಃ ಶೌರ್ಯೇ ಸ್ಥೈರ್ಯೇ ಚ ಹಿಮವಾನಿವ ।
ಸಮುದ್ರ ಇವ ಗಾಂಭೀರ್ಯೇ ಸಹಿಷ್ಣುತ್ವೇ ಧರಾಸಮಃ ॥೯॥

ಶೌರ್ಯದಲ್ಲಿ ಇಂದ್ರನಿಗೆ ಸದೃಶರಾದವರು, ಸ್ಥೈರ್ಯದಲ್ಲಿ ಹಿಮಾಲಯಕ್ಕೆ ಸದೃಶರಾದವರು, ಗಾಂಭೀರ್ಯದಲ್ಲಿ ಸಮುದ್ರಕ್ಕೂ, ಸಹನಶಕ್ತಿಯಲ್ಲಿ ಭೂಮಿಗೂ ಸದೃಶರಾದವರು ಆ ಭೀಷ್ಮರು.

ಶರದಂಷ್ಟ್ರೋ ಧನುರ್ವಕ್ತ್ರಃ ಖಡ್ಗಜಿಹ್ವೋ ದುರಾಸದಃ ।
ನರಸಿಂಹಃ ಪಿತಾ ತೇऽದ್ಯ ಪಾಂಚಾಲ್ಯೇನ ನಿಪಾತಿತಃ ॥೧೦॥

ಶರಗಳೆಂಬ ದಂಷ್ಟ್ರಗಳುಳ್ಳ, ಧನುಸ್ಸೆಂಬ ವದನವುಳ್ಳ, ಖಡ್ಗವೆಂಬ ಜಿಹ್ವೆಯುಳ್ಳ, ಸಮೀಪಿಸಲೂ ಸಾಧ್ಯವಾಗದ, ಪುರುಷಸಿಂಹರಾದ ನಿನ್ನ ತಂದೆಯು ಈ ದಿನ ಪಾಂಚಾಲ ರಾಜಪುತ್ರನಾದ ಶಿಖಂಡಿಯಿಂದ ಉರುಳಿಸಲ್ಪಟ್ಟಿದ್ದಾರೆ.

ಪಾಂಡವಾನಾಂ ಮಹತ್‌ಸೈನ್ಯಂ ಯಂ ದೃಷ್ಟ್ವೋದ್ಯಂತಮಾಹವೇ ।
ಪ್ರವೇಪತ ಭಯೋದ್ವಿಗ್ನಂ ಸಿಂಹಂ ದೃಷ್ಟ್ವೇವ ಗೋಗಣಃ ॥೧೧॥

ಪರಿರಕ್ಷ್ಯ ಸ ಸೇನಾಂ ತೇ ದಶರಾತ್ರಮನೀಕಹಾ ।
ಜಗಾಮಾಸ್ತಮಿವಾದಿತ್ಯಃ ಕೃತ್ವಾ ಕರ್ಮ ಸುದುಷ್ಕರಮ್ ॥೧೨॥

ಪಾಂಡವರ ದೊಡ್ಡ ಸೈನ್ಯವು ಸಮರೋದ್ಯುಕ್ತರಾದ ಯಾವ ಭೀಷ್ಮರನ್ನು ನೋಡಿ, ಸಿಂಹವನ್ನು ನೋಡಿದ ಗೋವುಗಳ ಸಮೂಹದಂತೆ ಭಯದಿಂದ ನಡುಗಿತೋ, ಅಂತಹ ಶತ್ರುಸಂಹಾರಕರಾದ ಭೀಷ್ಮರು ನಿನ್ನ ಸೈನ್ಯವನ್ನು ಹತ್ತುದಿನಗಳ ಕಾಲ ರಕ್ಷಣೆಯನ್ನು ಮಾಡಿ ಅತ್ಯಂತ ದುಷ್ಕರವಾದ ಕರ್ಮವನ್ನು ಮಾಡಿ ಸೂರ್ಯನಂತೆ ಅಸ್ತಂಗತರಾಗಿದ್ದಾರೆ.

ಯಃ ಸ ಶಕ್ರ ಇವಾಕ್ಷೋಭ್ಯೋ ವರ್ಷನ್ ಬಾಣಾನ್ ಸಹಸ್ರಶಃ ।
ಜಘಾನ ಯುಧಿ ಯೋಧಾನಾಮರ್ಬುದಂ ದಶಭಿರ್ದಿನೈಃ ॥೧೩॥

ಸ ಶೇತೇ ನಿಷ್ಪನನ್ ಭೂಮೌ ವಾತರುಗ್ಣ ಇವ ದ್ರುಮಃ ।
ತವ ದುರ್ಮಂತ್ರಿತೇ ರಾಜನ್ ಯಥಾ ನಾರ್ಹಃ ಸ ಭಾರತ ॥೧೪॥

ಎಲೈ ಭಾರತನೇ, ಯಾರು ಇಂದ್ರನಂತೆ ಅಲುಗಾಡಿಸಲು ಸಾಧ್ಯವಿಲ್ಲದವರೋ, ಸಹಸ್ರಸಂಖ್ಯೆಯಲ್ಲಿ ಬಾಣಗಳ ಮಳೆಯನ್ನು ಸುರಿಸುತ್ತಿದ್ದರೋ, ಹತ್ತುದಿನಗಳ ಕಾಲ ಒಂದು ಲಕ್ಷ ಸೈನಿಕರನ್ನು ಸಂಹಾರ ಮಾಡಿದರೋ ಅಂತಹ ದುಃಖಕ್ಕೆ ಅರ್ಹರಲ್ಲದ ಭೀಷ್ಮರು ನಿನ್ನ ದುರ್ಮಂತ್ರಣದಿಂದ ಬಿರುಗಾಳಿಗೆ ಸಿಕ್ಕಿ ಗರ್ಜಿಸುತ್ತಾ ಬಿದ್ದ ಮರದಂತೆ ಭೂಮಿಯ ಮೇಲೆ ಮಲಗಿದ್ದಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಚತುರ್ದಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೈದನೆಯ ಅಧ್ಯಾಯ

ಧೃತರಾಷ್ಟ್ರನಿಂದ ಭೀಷ್ಮ ಪತನದ ಬಗ್ಗೆ ವಿಸ್ತಾರವಾದ ಪ್ರಶ್ನೆಗಳು.

ಧೃತರಾಷ್ಟ್ರಃ

ಕಥಂ ಕುರೂಣಾಮೃಷಭೋ ಹತೋ ಭೀಷ್ಮಃ ಶಿಖಂಡಿನಾ ।
ಕಥಂ ರಥಾತ್ ಸ ನ್ಯಪತತ್ ಪಿತಾ ಮೇ ವಾಸವೋಪಮಃ ॥೧॥

ಧೃತರಾಷ್ಟ್ರ– ಕುರುಗಳಲ್ಲಿ ಶ್ರೇಷ್ಠರಾದ ಭೀಷ್ಮರು ಶಿಖಂಡಿಯಿಂದ ಹೇಗೆ ಹತರಾದರು? ಇಂದ್ರನಿಗೆ ಸಮಾನರಾದ ನನ್ನ ತಂದೆಯು ರಥದಿಂದ ಹೇಗೆ ಕೆಳಗೆ ಬಿದ್ದರು?

ಕಥಮಾಸಂಶ್ಚ ಮೇ ಪುತ್ರಾ ಹೀನಾ ಭೀಷ್ಮೇಣ ಸಂಜಯ ।
ಬಲಿನಾ ದೇವಕಲ್ಪೇನ ಗುರ್ವರ್ಥೇ ಬ್ರಹ್ಮಚಾರಿಣಾ ॥೨॥

ಎಲೈ ಸಂಜಯನೇ, ದೇವತೆಗಳಿಗೆ ಸಮಾನರಾದ, ಬಲಿಷ್ಠರಾದ, ತಂದೆಯ ಸಲುವಾಗಿ ಬ್ರಹ್ಮಚಾರಿಗಳಾದ ಭೀಷ್ಮರನ್ನು ಕಳೆದುಕೊಂಡು ನನ್ನ ಪುತ್ರರು ಹೇಗಿದ್ದರು?

ತಸ್ಮಿನ್ ಹತೇ ಮಹಾಸತ್ತ್ವೇ ಮಹೇಷ್ವಾಸೇ ಮಹಾಬಲೇ ।
ಮಹಾರಥೇ ನರವ್ಯಾಘ್ರೇ ಕಿಮು ಆಸೀನ್ಮನಸ್ತವ ॥೩॥

ಮಹಾಸತ್ವವುಳ್ಳವರೂ, ಮಹಾಬಲವುಳ್ಳವರೂ, ಮಹಾಧನುರ್ಧಾರಿಗಳೂ, ಮಹಾರಥರೂ, ನರವ್ಯಾಘ್ರರೂ ಆದ ಅವರು ಬಿದ್ದಾಗ ನಿನ್ನ ಮನಸ್ಸಿಗೆ ಹೇಗಾಯಿತು?

ಆರ್ತಿಃ ಪರಾ ಮಾऽऽವಿಶತಿ ಯತಃ ಶಂಸಸಿ ಮೇ ಹತಮ್ ।
ಕುರೂಣಾಮೃಷಭಂ ವೀರಮಕಂಪ್ಯಂ ಪುರುಷರ್ಷಭಮ್ ॥೪॥

ಕುರುಗಳಲ್ಲಿ ಶ್ರೇಷ್ಠರಾದ, ಅಲುಗಾಡಿಸಲು ಸಾಧ್ಯವಿಲ್ಲದ, ವೀರರಾದ, ಪುರುಷ ಶ್ರೇಷ್ಠರಾದ ಭೀಷ್ಮರು ಹತರಾದರು ಎಂದು ಕೇಳಿ ನನಗೆ ಬಹಳ ದುಃಖವಾಗುತ್ತಿದೆ.

ಕೇ ತಂ ಯಾಂತಮನುಪ್ರೇಯುಃ ಕೇ ಚಾಸ್ಯಾಸನ್ ಪುರೋಗಮಾಃ ।
ಕೇऽತಿಷ್ಠನ್ ಕೇ ನ್ಯವರ್ತಂತ ಕೇऽಭ್ಯವರ್ತಂತ ಸಂಜಯ ॥೫॥

ಅವರು ಯುದ್ಧದಲ್ಲಿ ಮುಂದೆ ಹೊರಟಾಗ ಅವರನ್ನು ಯಾರು ಹಿಂಬಾಲಿಸಿದರು? ಅವರ ಮುಂಭಾಗದಲ್ಲಿ ಯಾರಿದ್ದರು? ಅವರ ಜೊತೆಯಲ್ಲಿ ಯಾರು ಉಳಿದರು? ಯಾರು ಹಿಂದಿರುಗಿದರು? ಎಲೈ ಸಂಜಯನೇ, ಯಾರು ಮುಂದೆ ಸಾಗಿದರು?

ಕೇ ಶೂರಾ ರಥಶಾರ್ದೂಲಮಚ್ಯುತಂ ಕ್ಷತ್ರಿಯರ್ಷಭಮ್ ।
ರಥಾನೀಕಂ ಗಾಹಮಾನಂ ಸಹಸಾ ಪೃಷ್ಠತೋऽನ್ವಯುಃ ॥೬॥

ಕ್ಷತ್ರಿಯಶ್ರೇಷ್ಠರೂ, ತಮ್ಮ ಗುಣಗಳಿಂದ ಚ್ಯುತರಾಗದವರೂ, ರಥಶಾರ್ದೂಲರೂ, ಶತ್ರುಗಳ ರಥಸಮೂಹದಲ್ಲಿ ಪ್ರವೇಶಿಸುವವರೂ ಆದ ಅವರನ್ನು ಹಿಂಭಾಗದಿಂದ ಯಾವ ಶೂರರು ಅನುಸರಿಸಿ ನಡೆದರು?

ಯಸ್ತಮೋऽರ್ಕ ಇವಾಪೋಹನ್ ಪರಸೈನ್ಯಮಮಿತ್ರಹಾ ।
ಸಹಸ್ರರಶ್ಮಿಪ್ರತಿಮಃ ಪರೇಷಾಂ ಭಯಮಾದಧತ್ ।
ಅಕರೋದ್ ದುಷ್ಕರಂ ಕರ್ಮ ರಣೇ ಕೌರವಶಾಸನಾತ್ ॥೭॥

ಗ್ರಸಮಾನಮನೀಕಾನಿ ಯ ಏನಂ ಪರ್ಯವಾರಯನ್ ।
ಕೃತಿನಂ ತಂ ದುರಾಧರ್ಷಂ ಸಮ್ಯಗ್ ಯಾಸ್ಯಂತಮಂತಿಕೇ ।
ಕಥಂ ಶಾಂತನವಂ ಯುದ್ಧೇ ಪಾಂಡವಾಃ ಪ್ರತ್ಯವಾರಯನ್ ॥೮॥

ಶತ್ರುಸಂಹಾರಕರಾದ ಯಾವ ಅವರು ಸೂರ್ಯನಿಗೆ ಸಮಾನರಾಗಿ ಸೂರ್ಯನು ಕತ್ತಲೆಯನ್ನು ನಾಶ ಮಾಡಿದಂತೆ ಪರಸೈನ್ಯವನ್ನು ನಾಶಮಾಡುತ್ತಾ, ಶತ್ರುಗಳಿಗೆ ಭಯವನ್ನು ಉಂಟುಮಾಡಿ, ಯುದ್ಧದಲ್ಲಿ ದುರ್ಯೋಧನನ ಶಾಸನಕ್ಕೆ ಅನುಗುಣವಾಗಿ ದುಷ್ಕರವಾದ ಕರ್ಮವನ್ನು ಮಾಡುತ್ತಾ, ಶತ್ರುಸೈನ್ಯವನ್ನು ನುಂಗುತ್ತಿದ್ದರೋ ಅಂತಹ ಅವರನ್ನು ಯಾರು ಸುತ್ತುವರಿದರು? ಕುಶಲರೂ, ಸಮೀಪಕ್ಕೆ ಹೋಗಲು ಸಾಧ್ಯವಿಲ್ಲದವರೂ, ಚೆನ್ನಾಗಿ ಮುನ್ನುಗ್ಗುವವರೂ ಆದ ಶಂತನುಪುತ್ರರಾದ ಭೀಷ್ಮರನ್ನು ಯುದ್ಧದಲ್ಲಿ ಪಾಂಡವರು ಹೇಗೆ ಸುತ್ತುವರಿದರು?

ನಿಕೃಂತಂತಮನೀಕಾನಿ ಶರದಂಷ್ಟ್ರಂ ತರಸ್ವಿನಮ್ ।
ಚಾಪವ್ಯಾತ್ತಾನನಂ ಘೋರಮಸಿಜಿಹ್ವಂ ದುರಾಸದಮ್ ॥೯॥

ಅತೃನ್ಯಂ ಪುರುಷವ್ಯಾಘ್ರಂ ಹ್ರೀಮಂತಮಪರಾಜಿತಮ್ ।
ಪಾತಯಾಮಾಸ ಕೌಂತೇಯಃ ಕಥಂ ತಮಜಿತಂ ಯುಧಿ ॥೧೦॥

ಶತ್ರುಗಳ ಸೈನ್ಯವನ್ನು ಕತ್ತರಿಸುತ್ತಾ, ಧೈರ್ಯಶಾಲಿಗಳಾಗಿ ಬಾಣಗಳೆಂಬ ದಂಷ್ಟ್ರಗಳನ್ನೂ, ಬಿಲ್ಲೆಂಬ ತೆರೆದ ವದನವನ್ನೂ, ಘೋರವಾದ ಕತ್ತಿ ಎಂಬ ಜಿಹ್ವೆಯನ್ನೂ ಹೊಂದಿ, ಇನ್ನೊಬ್ಬರು ಸಮೀಪಕ್ಕೆ ಸುಳಿಯಲು ಸಾಧ್ಯವಿಲ್ಲದಂತಹ, ಪುರುಷ ವ್ಯಾಘ್ರರಾದಂತಹ, ಎಲ್ಲರನ್ನೂ ಮೀರಿದಂತಹ, ಯುದ್ಧದಲ್ಲಿ ಎಂದೂ ಪರಾಜಿತರಾಗದ, ದಾಕ್ಷಿಣ್ಯಸ್ವಭಾವವುಳ್ಳ ಅಂತಹ ಭೀಷ್ಮರನ್ನು ಅರ್ಜುನನು ಹೇಗೆ ಕೆಡವಿದನು?

ಉಗ್ರಧನ್ವಾನಮುಗ್ರೇಷು ವರ್ತಮಾನಂ ರಥೋತ್ತಮೇ ।
ಪರೇಷಾಮುತ್ತಮಾಂಗಾನಿ ಪ್ರಚಿನ್ವಂತಂ ಶಿತೇಷುಭಿಃ ॥೧೧॥

ಪಾಂಡವಾನಾಂ ಮಹತ್‌ಸೈನ್ಯಂ ಯಂ ದೃಷ್ಟ್ವೋದ್ಯಂತಮಾಹವೇ ।
ಕಾಲಾಗ್ನಿಮಿವ ದುರ್ಧರ್ಷಂ ಸಮವೇಷ್ಟತ ನಿತ್ಯಶಃ ॥೧೨॥

ಯಾರು ಉಗ್ರವಾದ ಧನುಸ್ಸನ್ನು ಮತ್ತು ಉಗ್ರವಾದ ಬಾಣವನ್ನು ಹೊಂದಿ ಶ್ರೇಷ್ಠವಾದ ರಥದಲ್ಲಿ ಕುಳಿತು ತಮ್ಮ ಹರಿತವಾದ ಬಾಣಗಳಿಂದ ಶತ್ರುಗಳ ಶಿರಸ್ಸುಗಳನ್ನು ಕತ್ತರಿಸುತ್ತಿದ್ದರೋ, ಯಾರು ಯುದ್ಧದಲ್ಲಿ ಉದ್ಯುಕ್ತರಾಗಿರುವುದನ್ನು ನೋಡಿ ಪಾಂಡವರ ದೊಡ್ಡ ಸೈನ್ಯವು ಸೋಲಿಸಲು ಸಾಧ್ಯವಲ್ಲದ ಕಾಲಾಗ್ನಿಯನ್ನು ನೋಡಿದಂತೆ ನಿತ್ಯವೂ ಮುದುರಿಹೋಗುತ್ತಿದ್ದಿತೋ;

ಪರಿಕೃಷ್ಯ ಸ ಸೇನಾಂ ಮೇ ದಶರಾತ್ರಮನೀಕಹಾ ।
ಜಗಾಮಾಸ್ತಮಿವಾದಿತ್ಯಃ ಕೃತ್ವಾ ಕರ್ಮ ಸುದುಷ್ಕರಮ್ ॥೧೩॥

ಅಂತಹ ಶತ್ರುಸಂಹಾರಕರಾದ ಭೀಷ್ಮರು ಹತ್ತು ದಿನಗಳ ಕಾಲ ನನ್ನ ಸೈನ್ಯವನ್ನು ಮುಂದೆ ಸಾಗಿಸಿಕೊಂಡು ಹೋಗಿ ದುಷ್ಕರವಾದ ಕರ್ಮವನ್ನು ಮಾಡಿ ಸೂರ್ಯನಂತೆ ಮುಳುಗಿದ್ದಾರೆ.

ಯಃ ಸ ಶಕ್ರ ಇವಾಕ್ಷಯ್ಯಂ ವರ್ಷಂ ಶರಮಯಂ ಸೃಜನ್ ।
ಜಘಾನ ಯುಧಿ ಯೋಧಾನಾಮರ್ಬುದಂ ದಶಭಿರ್ದಿನೈಃ ॥೧೪॥

ಸ ಶೇತೇ ನಿಷ್ಪನನ್ ಭೂಮೌ ವಾತರುಗ್ಣ ಇವ ದ್ರುಮಃ ।
ಮಮ ದುರ್ಮಂತ್ರಿತೇನಾಸೌ ಯಥಾ ನಾರ್ಹಃ ಸ ಭಾರತಃ ॥೧೫॥

ಯಾರು ಇಂದ್ರನಂತೆ ಅಕ್ಷಯವಾದ ಬಾಣಗಳ ಮಳೆಯನ್ನು ಸುರಿಸುತ್ತಾ, ಹತ್ತು ದಿನಗಳಲ್ಲಿ ಒಂದು ಲಕ್ಷ ಶತ್ರುಯೋಧರನ್ನು ಸಂಹಾರ ಮಾಡಿದರೋ, ಅಂತಹ ಭೀಷ್ಮರು ನನ್ನ ದುರ್ಮಂತ್ರಣದಿಂದ ಅಂತಹ ಸೋಲಿಗೆ ಪಾತ್ರರಲ್ಲದಿದ್ದರೂ, ಬಿರುಗಾಳಿಗೆ ಸಿಕ್ಕಿ ಭೂಮಿಯ ಮೇಲೆ ಬಿದ್ದ ಮರದಂತೆ ಗರ್ಜಿಸುತ್ತಾ ಭೂಮಿಯ ಮೇಲೆ ಬಿದ್ದಿದ್ದಾರೆ.

ಕಥಂ ಶಾಂತನವಂ ದೃಷ್ಟ್ವಾ ಪಾಂಡವಾನಾಮನೀಕಿನೀ ।
ಪ್ರಹರ್ತುಮಶಕತ್ ತತ್ರ ಭೀಷ್ಮಂ ಭೀಮಪರಾಕ್ರಮಮ್ ॥೧೬॥

ಭಯಂಕರ ಪರಾಕ್ರಮವುಳ್ಳ ಶಂತನು ಪುತ್ರರಾದ ಭೀಷ್ಮರನ್ನು ನೋಡಿ ಪಾಂಡವರ ಸೈನ್ಯವು ಅವರ ಮೇಲೆ ಪ್ರಹಾರ ಮಾಡಲು ಹೇಗೆ ಸಮರ್ಥವಾಯಿತು?

ಕಥಂ ಭೀಷ್ಮೇಣ ಸಂಗ್ರಾಮಮಕುರ್ವನ್ ಪಾಂಡುನಂದನಾಃ ।
ಕಥಂ ಚ ನಾಜಯದ್ ಭೀಷ್ಮೋ ದ್ರೋಣೇ ಜೀವತಿ ಸಂಜಯ ॥೧೭॥

ಪಾಂಡುನಂದನರು ಭೀಷ್ಮರ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಿದರು? ಎಲೈ ಸಂಜಯನೇ, ದ್ರೋಣರು ಜೀವಿಸಿರುವಾಗ ಭೀಷ್ಮರು ಹೇಗೆ ಗೆಲ್ಲಲಿಲ್ಲ?

ಕೃಪೇ ಸನ್ನಿಹಿತೇ ತತ್ರ ಭಾರದ್ವಾಜಾತ್ಮಜೇ ತಥಾ ।
ಭೀಷ್ಮಃ ಪ್ರಹರತಾಂ ಶ್ರೇಷ್ಠಃ ಕಥಂ ಸ ನಿಧನಂ ಗತಃ ॥೧೮॥

ಅಲ್ಲಿ ಕೃಪರು ಸನ್ನಿಹಿತರಾಗಿದ್ದಾಗ, ದ್ರೋಣಾಚಾರ್ಯರ ಮಕ್ಕಳಾದ ಅಶ್ವತ್ಥಾಮರು ಸನ್ನಿಹಿತರಾಗಿದ್ದಾಗ, ಪ್ರಹಾರ ಮಾಡುವುದರಲ್ಲಿ ಶ್ರೇಷ್ಠರಾದ ಭೀಷ್ಮರು ಹೇಗೆ ನಿಧನವನ್ನು ಹೊಂದಿದರು?

ಕಥಂ ಚಾತಿರಥಸ್ತೇನ ಪಾಂಚಾಲ್ಯೇನ ಶಿಖಂಡಿನಾ ।
ಭೀಷ್ಮೋ ವಿನಿಹತೋ ಯುದ್ಧೇ ದೇವೈರಪಿ ದುರುತ್ಸಹಃ ॥೧೯॥

ಯಃ ಸ್ಪರ್ಧತೇ ರಣೇ ನಿತ್ಯಂ ಜಾಮದಗ್ನ್ಯಂ ಮಹಾಬಲಮ್ ।
ಅಜಿತಂ ಜಾಮದಗ್ನ್ಯೇನ ಶಕ್ರತುಲ್ಯಪರಾಕ್ರಮಮ್ ॥೨೦॥

ಯಾವ ಭೀಷ್ಮರು ನಿತ್ಯವೂ ಮಹಾಬಲರಾದ, ಅಜಿತರಾದ, ಪರಶುರಾಮರ ಜೊತೆಯಲ್ಲಿ ಸ್ಪರ್ಧಿಸುತ್ತಾರೆಯೋ ಅಂತಹ ಪರಶುರಾಮರಿಂದಲೂ ಜಿತರಾಗದ, ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ, ಯುದ್ಧದಲ್ಲಿ ದೇವತೆಗಳೂ ಸ್ಪರ್ಧೆ ಮಾಡಲು ಸಾಧ್ಯವಿಲ್ಲದ, ಅತಿರಥರಾದ ಭೀಷ್ಮರು ಪಾಂಚಾಲರಾಜಕುಮಾರನಾದ ಶಿಖಂಡಿಯಿಂದ ಹೇಗೆ ಹತರಾದರು?

ತಂ ಹತಂ ಸಮರೇ ಭೀಷ್ಮಂ ಮಹಾರಥಬಲೋಚಿತಮ್ ।
ಸಂಜಯಾಚಕ್ಷ್ವ ಮೇ ವೀರಂ ಯೇನ ಶರ್ಮ ನ ವಿದ್ಮಹೇ ॥೨೧॥

ಮಹಾರಥ ಮತ್ತು ದೊಡ್ಡ ಸೈನ್ಯದ ನಾಯಕತ್ವಕ್ಕೆ ಉಚಿತರಾದ ಭೀಷ್ಮರು ಯುದ್ಧದಲ್ಲಿ ಹತರಾಗಿದ್ದಾರೆ. ಸಂಜಯನೇ, ಆ ವೀರರ ಬಗ್ಗೆ ನನಗೆ ಇನ್ನೂ ಹೇಳು. ಮನಸ್ಸಿಗೆ ನಮಗೆ ಸಮಾಧಾನವೇ ದೊರೆಯುತ್ತಿಲ್ಲ.

ಮಾಮಕಾಃ ಕೇ ಮಹೇಷ್ವಾಸಾ ನಾಜಹುಃ ಸಂಜಯಾಚ್ಯುತಮ್ ।
ದುರ್ಯೋಧನಸಮಾದಿಷ್ಟಾಃ ಕೇ ವೀರಾಃ ಪರ್ಯವಾರಯನ್ ॥೨೨॥

ತಮ್ಮ ಪರಾಕ್ರಮದಿಂದ ಚ್ಯುತರಾಗದ ಅವರನ್ನು ನನ್ನ ಯಾವ ಮಹಾಧನುರ್ಧಾರಿಗಳು ತ್ಯಜಿಸಲಿಲ್ಲ? ದುರ್ಯೋಧನನ ಆದೇಶದಂತೆ ಯಾವ ವೀರರು ಅವರನ್ನು ಸುತ್ತುವರಿದರು?

ಯಚ್ಛಿಖಂಡಿಮುಖಾಃ ಸರ್ವೇ ಪಾಂಡವಾ ಭೀಷ್ಮಮಭ್ಯಯುಃ ।
ಕಚ್ಚಿನ್ನ ಕುರವೋ ಭೀತಾಸ್ತತ್ಯಜುಃ ಸಂಜಯಾಚ್ಯುತಮ್ ॥೨೩॥

ಎಲೈ ಸಂಜಯನೇ, ಯಾವಾಗ ಶಿಖಂಡಿಯನ್ನೇ ಮುಂದೆ ಮಾಡಿಕೊಂಡ, ಎಲ್ಲ ಪಾಂಡವರೂ ಭೀಷ್ಮರ ಮೇಲೆ ಎರಗಿದರೋ, ಆಗ ಕುರುಗಳು ಭೀತರಾಗಿ ತಮ್ಮ ಗುಣಗಳಿಂದ ಚ್ಯುತರಾಗದ ಭೀಷ್ಮರನ್ನು ತ್ಯಜಿಸಲಿಲ್ಲವಷ್ಟೆ?

ಮೌರ್ವೀಘೋಷಸ್ತನಯಿತ್ನುಃ ಪೃಷತ್ಕಪೃಷತೋ ಮಹಾನ್ ।
ಧನುರ್ಹ್ರಾದಮಹಾಶಬ್ದೋ ಮಹಾಮೇಘ ಇವೋನ್ನತಃ ॥೨೪॥

ಯದಭ್ಯವರ್ಷತ್ ಕೌಂತೇಯಾನ್ ಸಪಾಂಚಾಲಾನ್ ಸಸೃಂಜಯಾನ್ ।
ನಿಘ್ನನ್ ಪರರಥಾನ್ ವೀರೋ ದಾನವಾನಿವ ವಜ್ರಭೃತ್ ॥೨೫॥

ಜ್ಯಾಘೋಷವೆಂಬ ಗುಡುಗುಗಳಿಂದ ಕೂಡಿದ, ಬಾಣಗಳೆಂಬ ದೊಡ್ಡ ಜಲಬಿಂದುಗಳಿಂದ ಕೂಡಿದ, ಧನುಸ್ಸಿನ ನಾದವೆಂಬ ಮಹಾಶಬ್ದದಿಂದ ಕೂಡಿದ, ಉನ್ನತವಾದ ಮಹಾಮೇಘದಂತಿದ್ದ ಅವರು ಪಾಂಚಾಲರು ಮತ್ತು ಸೃಂಜಯರಿಂದ ಸಹಿತರಾದ ಕೌಂತೇಯರ ಮೇಲೆ ಯಾವಾಗ ಇಂದ್ರನು ದಾನವರನ್ನು ಸಂಹರಿಸಿದಂತೆ ಶತ್ರುಗಳ ರಥಗಳನ್ನು ಸಂಹರಿಸುತ್ತಾ ಬಾಣಗಳ ಮಳೆಯನ್ನು ಸುರಿಸಿದರೋ;

ಇಷ್ಟಸ್ತ್ರಸಾಗರಂ ಘೋರಂ ಬಾಣಗ್ರಾಹಂ ದುರಾಸದಮ್ ।
ಕಾರ್ಮುಕೋರ್ಮಿಣಮಕ್ಷಯ್ಯಮದ್ವೀಪಂ ಸಮರೇಽಪ್ಲವಮ್ ।
ಗದಾಸಿಮಕರಾವರ್ತಂ ಹಯಗ್ರಾಹಂ ಗಜಾಕುಲಮ್ ॥೨೬॥

ಹಯಾನ್ ಗಜಾನ್ ಪದಾತಾಂಶ್ಚ ರಥಾಂಶ್ಚ ತರಸಾ ಬಹೂನ್ ।
ನಿಮಜ್ಜಯಂತಂ ಸಮರೇ ಪರವೀರಾಪಹಾರಿಣಮ್ ॥೨೭॥

ಬಾಣಗಳೆಂಬ ಮೊಸಳೆಗಳುಳ್ಳ, ಬಿಲ್ಲುಗಳೆಂಬ ಅಲೆಗಳನ್ನುಳ್ಳ, ಗದಾ-ಖಡ್ಗಗಳೆಂಬ ಮಕರಗಳ ಸುಳಿಯನ್ನು ಹೊಂದಿದ, ಅಶ್ವಗಳೆಂಬ ಮೊಸಳೆಗಳನ್ನು ಹೊಂದಿದ, ಗಜಗಳಿಂದ ನಿಬಿಡವಾದ, ದ್ವೀಪವಿಲ್ಲದ, ನೌಕೆಯಿಲ್ಲದ ಘೋರವಾದ ಬಾಣ ಮತ್ತು ಅಸ್ತ್ರಗಳ ಸಾಗರದಲ್ಲಿ ಯುದ್ಧದಲ್ಲಿ ಅನೇಕ ಅಶ್ವಗಳನ್ನೂ, ಗಜಗಳನ್ನೂ, ಪದಾತಿಗಳನ್ನೂ ಮತ್ತು ರಥಗಳನ್ನೂ ಶೀಘ್ರವಾಗಿ ಮುಳುಗಿಸುತ್ತಿದ್ದಂತಹ ಶತ್ರುವೀರರನ್ನು ಸಂಹರಿಸುವ ಅವರನ್ನು;

ವಿದಹ್ಯಮಾನಂ ಕೋಪೇನ ತೇಜಸಾ ಚ ಪರಂತಪಮ್ ।
ವೇಲೇವ ಮಕರಾವಾಸಂ ಕೇ ವೀರಾಃ ಪರ್ಯುಪಾರಯನ್ ॥೨೮॥

ಕೋಪದಿಂದ ಪ್ರಜ್ವಲಿಸುತ್ತಾ ತಮ್ಮ ತೇಜಸ್ಸಿನಿಂದ ಶತ್ರುಸಂತಾಪವನ್ನು ಮಾಡುತ್ತಾ, ಸಾಗರಕ್ಕೆ ತೀರದಂತಿದ್ದ ಅವರನ್ನು ಯಾವ ವೀರರು ಸುತ್ತುವರಿದರು?

ಭೀಷ್ಮೋ ಯದಕರೋತ್ ಕರ್ಮ ಸಮರೇ ಸಂಜಯಾರಿಹಾ ।
ದುರ್ಯೋಧನಕೃತಾನ್ಯಹನ್ ಕೇ ತದಾಸ್ಯ ಪುರೋಽಭವನ್ ॥೨೯॥

ಎಲೈ ಸಂಜಯನೇ, ಶತ್ರುಸಂಹಾರಕರಾದ ಭೀಷ್ಮರು ಯುದ್ಧದಲ್ಲಿ ಯಾವಾಗ ದುಷ್ಕರವಾದ ಕರ್ಮವನ್ನು ಮಾಡಿದರೋ ಆಗ ದುರ್ಯೋಧನನ ಒಟ್ಟುಗೂಡಿಸಿದ ಸೈನ್ಯವನ್ನು ಯಾರು ಸಂಹರಿಸಿದರು? ಯಾರು ಭೀಷ್ಮರ ಮುಂದೆ ಇದ್ದರು?

ಕೇಽರಕ್ಷನ್ ದಕ್ಷಿಣಂ ಚಕ್ರಂ ಭೀಷ್ಮಸ್ಯಾಮಿತತೇಜಸಃ ।
ಪೃಷ್ಠತಃ ಕೇ ಪರಾನ್ ವೀರಾ ಉಪಾಸೇಧನ್ ಯತವ್ರತಾಃ ॥೩೦॥

ಅಮಿತಪರಾಕ್ರಮಿಗಳಾದ ಭೀಷ್ಮರ ಬಲಭಾಗವನ್ನು ಯಾರು ರಕ್ಷಿಸಿದರು? ಭೀಷ್ಮರ ಹಿಂಭಾಗದಲ್ಲಿ ನಿಂತು ಯಾವ ವೀರರು ವ್ರತವನ್ನು ಧರಿಸಿದವರಂತೆ ಶತ್ರುಗಳನ್ನು ತಡೆದರು?

ಕೇ ಪುರಾಸ್ಯದಮರ್ತಂತ ರಕ್ಷಂತೋ ಭೀಷ್ಮಮಂತಿಕೇ ।
ಕೇಽರಕ್ಷನ್ನುತ್ತರಂ ಚಕ್ರಂ ವೀರಾ ವೀರಸ್ಯ ಯುಧ್ಯತಃ ॥೩೧॥

ಭೀಷ್ಮರನ್ನು ಸಮೀಪದಿಂದ ರಕ್ಷಿಸುತ್ತಾ, ಯಾರು ಅವರ ಮುಂದೆ ಇರುತ್ತಿದ್ದರು? ಯಾವ ವೀರರು ಯುದ್ಧಮಾಡುವ ವೀರರಾದ ಭೀಷ್ಮರ ಉತ್ತರಭಾಗದಲ್ಲಿ ಅವರನ್ನು ರಕ್ಷಿಸಿದರು?

ವಾಮೇ ಚಕ್ರೇ ವರ್ತಮಾನಾಃ ಕೇಽಷ್ಣನ್ ಸಂಜಯ ಸೃಂಜಯಾನ್ ।
ಸಮೇತಾಗ್ರ್ಯಮನೀಕೇಷು ಕೇಽಭ್ಯರಕ್ಷನ್ ದುರಾಸದಮ್ ॥೩೨॥

ಎಲೈ ಸಂಜಯನೇ, ಭೀಷ್ಮರ ಎಡಭಾಗದಲ್ಲಿ ನಿಂತು ಯಾರು ಸೃಂಜಯರನ್ನು ಸಂಹರಿಸಿದರು? ನಮ್ಮ ಸೈನ್ಯದಲ್ಲಿ ಒಂದುಗೂಡಿದ, ಸಮೀಪಿಸಲು ಸಾಧ್ಯವಿಲ್ಲದ ಸೇನೆಯ ಮುಂಭಾಗವನ್ನು ಯಾರು ರಕ್ಷಿಸಿದರು?

ಪಾರ್ಶ್ವತಃ ಕೇಽಭ್ಯವರ್ತಂತ ಗಚ್ಛಂತೋ ದುರ್ಗಮಾಂ ಗತಿಮ್ ।
ಸಮೂಹೇ ಕೇ ಪರಾನ್ ವೀರಾನ್ ಪ್ರತ್ಯಯುಧ್ಯಂತ ಸಂಜಯ ॥೩೩॥

ಭೀಷ್ಮರು ಯುದ್ಧದಲ್ಲಿ ದುರ್ಗಮವಾದ ಗಮನಗಳನ್ನು ಮಾಡುತ್ತಾ ಮುಂದೆ ಸಾಗಿದಂತೆ ಅವರ ಪಾರ್ಶ್ವದಲ್ಲಿ ಯಾರು ಮುಂದೆ ಸಾಗಿದರು? ಎಲೈ ಸಂಜಯನೇ, ಆ ವೀರರ ಸಮೂಹದಲ್ಲಿ ಯಾರು ಶತ್ರುಗಳ ವೀರರ ಜೊತೆಯಲ್ಲಿ ಯುದ್ಧವನ್ನು ಮಾಡಿದರು?

ರಕ್ಷ್ಯಮಾಣಃ ಕಥಂ ವೀರೈರ್ಗೋಪ್ಯಮಾನಾಶ್ಚ ತೇನ ತೇ ।
ದುರ್ಜಯಾನಾಮನೀಕಾನಿ ನಾಜಯಂಸ್ತರಸಾ ಯುಧಿ ॥೩೪॥

ವೀರರಿಂದ ರಕ್ಷಣೆ ಮಾಡಲ್ಪಟ್ಟು ತಾವೂ ಆ ವೀರರನ್ನು ರಕ್ಷಿಸುವ ಭೀಷ್ಮರು ಇರುವಾಗ ಆ ವೀರರು ದುರ್ಜಯರಾದ ಪಾಂಡವರ ಸೈನ್ಯವನ್ನು ಏಕೆ ಶೀಘ್ರವಾಗಿ ಜಯಿಸಲಿಲ್ಲ?

ಸರ್ವಲೋಕೇಶ್ವರಸ್ಯೇವ ಪರಮೇಷ್ಠಿಪ್ರಜಾಪತೇಃ ।
ಕಥಂ ಪ್ರಹರ್ತುಮಪಿ ತೇ ಶೇಕುಃ ಸಂಜಯ ಪಾಂಡವಾಃ ॥೩೫॥

ಎಲೈ ಸಂಜಯನೇ, ಸರ್ವಲೋಕೇಶ್ವರನಾದ ಪರಮೇಷ್ಠಿ ಪ್ರಜಾಪತಿಯಂತಿದ್ದ ಭೀಷ್ಮರ ಮೇಲೆ ಆ ಪಾಂಡವರಿಗೆ ಪ್ರಹಾರ ಮಾಡಲೂ ಸಹ ಹೇಗೆ ಸಾಧ್ಯವಾಯಿತು?

ಯಸ್ಮಿನ್ ದ್ವೀಪೇ ಸಮಾಶ್ರಿತ್ಯ ಯುಧ್ಯಂತಿ ಕುರವಃ ಪರೈಃ ।
ತಂ ನಿಮಗ್ನಂ ನರವ್ಯಾಘ್ರಂ ಭೀಷ್ಮಂ ಶಂಸಸಿ ಸಂಜಯ ॥೩೬॥

ಎಲೈ ಸಂಜಯನೇ, ಕೌರವರು ಯಾವ ಭೀಷ್ಮರನ್ನು ದ್ವೀಪವಾಗಿ ಆಶ್ರಯಿಸಿ ಶತ್ರುಗಳ ಜೊತೆ ಯುದ್ಧವನ್ನು ಮಾಡುತ್ತಾರೆಯೋ, ಅಂತಹ ನರವ್ಯಾಘ್ರರಾದ ಭೀಷ್ಮರು ಮುಳುಗಿಹೋದರು ಎಂದು ಹೇಳುತ್ತಿದ್ದೀಯೆ!

ಯಸ್ಯ ವೀರ್ಯೇ ಸಮಾಶ್ವಸ್ಯ ಮಮ ಪುತ್ರೋ ಬೃಹದ್ಬಲಃ ।
ನ ಪಾಂಡವಾನಗಣಯತ್ ಕಥಂ ಸ ನಿಹತಃ ಪರೈಃ ॥೩೭॥

ಯಾರ ಪರಾಕ್ರಮವನ್ನು ಆವಲಂಬಿಸಿ ಮಹಾಸೈನ್ಯವುಳ್ಳ ನನ್ನ ಪುತ್ರನು ಪಾಂಡವರನ್ನು ಗಣನೆಗೇ ತಂದುಕೊಳ್ಳಲಿಲ್ಲವೋ ಅಂತಹ ಭೀಷ್ಮರು ಶತ್ರುಗಳಿಂದ ಹೇಗೆ ನಿಹತರಾದರು?

ಯಃ ಪುರಾ ವಿಬುಧೈಃ ಸೇಂದ್ರೈಃ ಸಾಹಾಯ್ಯೇ ಯುದ್ಧದುರ್ಮದಃ ।
ಕಾಂಕ್ಷತೋ ದಾನವಾನ್ ಘ್ನದ್ಭಿಃ ಪಿತಾ ಮಮ ಮಹಾವ್ರತಃ ॥೩೮॥

ಯಸ್ಮಿನ್ ಜಾತೇ ಮಹಾವೀರ್ಯೇ ಶಂತನುರ್ಲೋಕಶಂಕರೇ ।
ಶೋಕಂ ದುಃಖಂ ಚ ದೈನ್ಯಂ ಚ ಪ್ರಾಜಹಾತ್ ಪುತ್ರಲಕ್ಷಣೆ ॥೩೯॥

ಪ್ರಜ್ಞಾಪರಾಯಣಂ ಪ್ರಾಜ್ಞಂ ಸದ್ಧರ್ಮನಿರತಂ ಶುಚಿಮ್ ।
ವೇದವೇದಾಂಗತತ್ತ್ವಜ್ಞಂ ಕಥಂ ಶಂಸಸಿ ಮೇ ಹತಮ್ ॥೪೦॥

ಯುದ್ಧದುರ್ಮದರಾದ ಯಾವ ನನ್ನ ತಂದೆಯೂ, ಮಹಾವ್ರತರೂ ಆದ ಭೀಷ್ಮರು ದಾನವರನ್ನು ಸಂಹರಿಸಲು ಬಯಸಿದ ಇಂದ್ರಾದಿ ದೇವತೆಗಳಿಂದ ಸಹಾಯಕ್ಕಾಗಿ ಪ್ರಾರ್ಥಿಸಲ್ಪಟ್ಟರೋ, ಮಹಾಪರಾಕ್ರಮಶಾಲಿಗಳೂ ಮತ್ತು ಸತ್ಪುತ್ರಲಕ್ಷಣವನ್ನು ಹೊಂದಿದವರೂ, ಲೋಕಕಲ್ಯಾಣಕಾರಕರೂ ಆದ ಯಾವ ಭೀಷ್ಮರು ಜನಿಸಿದಾಗ ತಂದೆಯಾದ ಶಂತನುವು ತನ್ನ ಶೋಕವನ್ನೂ, ದುಃಖವನ್ನೂ ಮತ್ತು ದೈನ್ಯವನ್ನೂ ತೊರೆದನೋ ಅಂತಹ ಪ್ರಜ್ಞಾಪರಾಯಣರೂ, ಸ್ವತಃ ಪ್ರಾಜ್ಞರೂ, ಸದ್ಧರ್ಮನಿರತರೂ, ಶುಚಿಯೂ, ವೇದವೇದಾಂಗತತ್ತ್ವಜ್ಞರೂ ಆದ ಭೀಷ್ಮರನ್ನು ಹತರಾದರೆಂದು ಹೇಗೆ ಹೇಳುತ್ತಿದ್ದೀಯೆ?

ಸರ್ವಾಸ್ತ್ರವಿಸಯೋಪೇತಂ ದಾಂತಂ ಶಾಂತಂ ಮನಸ್ವಿನಮ್ ।
ಹತಂ ಶಾಂತನವಂ ಶ್ರುತ್ವಾ ಮಟ್ಟೇ ಶೇಷಂ ಬಲಂ ಹತಮ್ ॥೪೧॥

ಎಲ್ಲ ಅಸ್ತ್ರಗಳ ಪ್ರಯೋಗದಲ್ಲಿ ನಿಪುಣರಾದ, ಇಂದ್ರಿಯನಿಗ್ರಹವುಳ್ಳ, ಭಗವನ್ನಿಷ್ಠೆಯುಳ್ಳ, ಧೈರ್ಯಶಾಲಿಗಳಾದ, ಶಂತನುಪುತ್ರರಾದ ಭೀಷ್ಮರು ಹತರಾದರೆಂದು ಕೇಳಿದ ಮೇಲೆ ಉಳಿದ ಸೈನ್ಯವು ಹತವಾಗಿದೆ ಎಂದು ತಿಳಿಯುತ್ತೇನೆ.

ಧರ್ಮಾದಧರ್ಮೋ ಬಲವಾನ್ ಸಂಗ್ರಾಮ ಇತಿ ಮೇ ಮತಿಃ ।
ಯತ್ರ ವೃದ್ಧಂ ಗುರುಂ ಹತ್ವಾ ರಾಜ್ಯಮಿಚ್ಛಂತಿ ಪಾಂಡವಾಃ ॥೪೨॥

ಯಾವ ಕಾರಣದಿಂದ ಯುದ್ಧದಲ್ಲಿ ಪಾಂಡವರು ವೃದ್ಧರೂ, ಗುರುಗಳೂ ಆದ ಭೀಷ್ಮರನ್ನು ಕೊಂದು ರಾಜ್ಯವನ್ನು ಬಯಸುತ್ತಾರೆಯೋ ಆ ಕಾರಣದಿಂದ ಯುದ್ಧದಲ್ಲಿ ಧರ್ಮಕ್ಕಿಂತಲೂ ಅಧರ್ಮವೇ ಬಲಿಷ್ಠವಾದುದೆಂದು ನನ್ನ ಅಭಿಪ್ರಾಯ.

ಜಾಮದಗ್ನ್ಯಃ ಪುರಾ ರಾಮಃ ಸರ್ವಾಸ್ತ್ರವಿದನುತ್ತಮಃ ।
ಅಂಬಾರ್ಥಮುದ್ಯತಃ ಸಂಖೇ ಭೀಷ್ಮೇಣ ಯುಧಿ ನಿರ್ಜಿತಃ ॥೪೩॥

ಹಿಂದೆ ಸರ್ವಾಸ್ತ್ರಗಳನ್ನು ಬಲ್ಲವರಲ್ಲಿ ಶ್ರೇಷ್ಠರಾದ, ಜಮದಗ್ನಿಪುತ್ರರಾದ ಪರಶುರಾಮರು ಅಂಬೆಯ ಸಲುವಾಗಿ ಭೀಷ್ಮರ ಜೊತೆಯಲ್ಲಿ ಯುದ್ಧವನ್ನು ಮಾಡಿ ಸೋತುಹೋದರು.

ತಮಿಂದ್ರಸಮಕರ್ಮಾಣಂ ಕಕುದಂ ಸರ್ವಧನ್ವಿನಾಮ್ ।
ಹತಂ ತಂಸಸಿ ಭೀಷ್ಮಂ ಮೇ ಕಿಂ ನು ದುಃಖಮತಃಪರಮ್ ॥೪೪॥

ಇಂದ್ರನಿಗೆ ಸಮಾನವಾದ ಕರ್ಮಗಳನ್ನು ಮಾಡುವ, ಸರ್ವಧನುರ್ಧಾರಿಗಳಲ್ಲಿ ತಿಖರಪ್ರಾಯರಾದ ಅಂತಹ ಭೀಷ್ಮರು ಹತರಾದರೆಂದು ಹೇಳುತ್ತಿದ್ದೀಯೆ! ಇದಕ್ಕಿಂತ ನನಗೆ ಯಾವ ದೊಡ್ಡ ದುಃಖವಿದೆ!

ಅಸಕೃತ್ ಕ್ಷತ್ರಿಯವ್ರಾತಾಃ ಸಂಖೇ ಯೇನ ವಿನಿರ್ಜಿತಾಃ ।
ಜಾಮದಗ್ನ್ಯಸ್ತಥಾ ರಾಮಃ ಪರವೀರನಿಘಾತಿನಾ ॥೪೫॥

ಯಾವ ಭೀಷ್ಮರಿಂದ ಅನೇಕ ಬಾರಿ ಕ್ಷತ್ರಿಯ ಸಮೂಹಗಳು ಯುದ್ಧದಲ್ಲಿ ಸೋತು ಹೋದವೋ, ಯಾವ ಶತ್ರುವೀರ ಸಂಹಾರಕರಾದ ಭೀಷ್ಮರಿಂದ ಪರಶುರಾಮರೂ ಸೋತುಹೋದರೋ (ಅಂತಹವರನ್ನು ನೀನು ಹತರಾದರೆಂದು ಹೇಳುತ್ತಿದ್ದೀಯೆ!)

ತಸ್ಮಾನ್ನೂನಂ ಮಹಾವೀರ್ಯಾದ್ ಭಾರ್ಗವಾದ್ ಯುದ್ಧದುರ್ಮದಾತ್ ।
ತೇಜೋವೀರ್ಯಬಲೈರ್ಭೂಯಾನ್ ಶಿಖಂಡೀ ದ್ರುಪದಾತ್ಮಜಃ ॥೪೬॥

ಯಃ ಶೂರಂ ಕೃತಿನಂ ಯುದ್ಧೇ ಸರ್ವಶಾಸ್ತ್ರವಿಶಾರದಮ್ ।
ಪರಮಾಸ್ತ್ರವಿದಂ ವೀರಂ ಜಘಾನ ಭರತರ್ಷಭಮ್ ॥೪೭॥

ಯಾವ ದ್ರುಪದ ಪುತ್ರನಾದ ಶಿಖಂಡಿಯು ಶೂರರೂ, ಕುಶಲರೂ, ಯುದ್ಧದಲ್ಲಿ ಸರ್ವಶಸ್ತ್ರವಿಶಾರದರೂ, ದಿವ್ಯವಾದ ಅಸ್ತ್ರವನ್ನು ತಿಳಿದವರೂ, ವೀರರೂ, ಭರತಶ್ರೇಷ್ಠರೂ ಆದ ಭೀಷ್ಮರನ್ನು ಕೆಡವಿದನೆಂದರೆ ಮಹಾಪರಾಕ್ರಮಶಾಲಿಗಳೂ, ಯುದ್ಧದುರ್ಮದರೂ ಆದ ಪರಶುರಾಮರಿಗಿಂತಲೂ ದ್ರುಪದಪುತ್ರನಾದ ಶಿಖಂಡಿಯೇ ತೇಜೋವೀರ್ಯಬಲಗಳಲ್ಲಿ ಶ್ರೇಷ್ಠನಾದವನೆಂದು ತೋರುತ್ತದೆ.

ಕೇ ವೀರಾಸ್ತಮಮಿತ್ರಘ್ನಮನ್ವಯುಃ ಶತ್ರುಸನ್ನಿಧಿಮ್ ।
ಶಂಸ ಮೇ ತದ್ ಯಥಾ ವೃತ್ತಂ ಯುದ್ಧಂ ಭೀಷ್ಮಸ್ಯ ಪಾಂಡವೈಃ ॥೪೮॥

ಶತ್ರುಗಳನ್ನು ಅಡಗಿಸುವ ಮತ್ತು ಶತ್ರುಸಂಹಾರಕರಾದ ಆ ಭೀಷ್ಮರನ್ನು ಯಾವ ವೀರರು ಹಿಂಬಾಲಿಸಿದರು? ಭೀಷ್ಮರಿಗೂ ಮತ್ತು ಪಾಂಡವರಿಗೂ ಹೇಗೆ ಯುದ್ಧವು ನಡೆಯಿತು ಎಂಬುದನ್ನು ನನಗೆ ಹೇಳು.

ಯೋಷೇವ ಹತವೀರಾ ಮೇ ಸೇನಾ ಪುತ್ರಸ್ಯ ಸಂಜಯ ।
ಅಗೋಪಮಿವ ಚೋದ್ಧ್ರಾಂತಂ ಗೋಕುಲಂ ತದ್ಬಲಂ ಮಮ ॥೪೯॥

ಎಲೈ ಸಂಜಯನೇ, ನನ್ನ ಪುತ್ರನ ಸೇನೆಯು ವೀರಪತಿಯನ್ನು ಕಳೆದುಕೊಂಡ ಸ್ತ್ರೀಯಂತೆ, ಗೋಪಾಲಕನಿಲ್ಲದ ಗೋಸಮೂಹದಂತೆ ಸಂಭ್ರಾಂತವಾಗಿದೆ.

ಪೌರುಷಂ ಸರ್ವಲೋಕಸ್ಯ ಪರಂ ಯಸ್ಯ ಮಹಾಹವೇ ।
ಪರಾಸ್ತೇ ಚ ವಸ್ತಸ್ಮಿನ್ ಕಥಮಾಸೀನ್ನಸನ್ತದಾ ॥೫೦॥

ಯಾರಿಗೆ ದೊಡ್ಡ ಯುದ್ಧದಲ್ಲಿ ಸರ್ವಲೋಕಪೂಜಿತವಾದ ಪೌರುಷವಿದ್ದಿತೋ ಅಂತಹ ಭೀಷ್ಮರು ಪಾಂಡವರ ಜೊತೆಯಲ್ಲಿ ಹೋರಾಡಿದಾಗ ನಿನ್ನ ಮನಸ್ಸಿಗೆ ಏನು ಎನಿಸಿತು?

ಜೀವಿತೇऽಪ್ಯದ್ಯ ಸಾಮರ್ಥ್ಯಂ ಕಿಮಿವಾಸ್ಮಾಸು ಸಂಜಯ ।
ಘಾತಯಿತ್ವಾ ಮಹಾವೀರ್ಯಂ ಪಿತರಂ ಲೋಕಧಾರ್ಮಿಕಮ್ ॥೫೧॥

ಎಲೈ ಸಂಜಯನೇ, ಲೋಕದಲ್ಲೇ ಅತ್ಯಂತ ಧಾರ್ಮಿಕರಾದ, ಮಹಾಪರಾಕ್ರಮಶಾಲಿಗಳಾದ ತಂದೆಯನ್ನು ಕೊಲ್ಲಿಸಿ ನಾವು ಬದುಕಿರುವುದರಲ್ಲಾದರೂ ಏನು ಅರ್ಥವಿದೆ?

ಅಗಾಧೇ ಸಲಿಲೇ ಮಗ್ನಾಂ ನಾವಂ ದೃಷ್ಟ್ವೇವ ಪಾರಗಾಃ ।
ಭೀಷ್ಮೇ ಹತೇ ಭೃಶಂ ದುಃಖಾನ್ಮನ್ಯೇ ಶೋಚಂತಿ ಪುತ್ರಕಾಃ ॥೫೨॥

ಅಗಾಧವಾದ ಜಲವನ್ನು ದಾಟುವವರು ತಮ್ಮ ನೌಕೆಯು ಭಗ್ನವಾದುದನ್ನು ನೋಡಿದಂತೆ ಭೀಷ್ಮರ ಪಾತವನ್ನು ನೋಡಿ ನನ್ನ ಪುತ್ರರು ಬಹಳವಾಗಿ ಶೋಕಪಡುತ್ತಾರೆ.

ಅದ್ರಿಸಾರಮಯಂ ನೂನಂ ಸುದೃಢಂ ಹೃದಯಂ ಮಮ ।
ಯಚ್ಛ್ರುತ್ವಾ ಪುರುಷವ್ಯಾಘ್ರಂ ಹತಂ ಭೀಷ್ಮಂ ನ ದೀರ್ಯತೇ ॥೫೩॥

ನನ್ನ ಹೃದಯವು ಕಲ್ಲುಗಳ ಸಾರದಿಂದ ಮಾಡಲ್ಪಟ್ಟಿದೆ. ಏಕೆಂದರೆ ಪುರುಷವ್ಯಾಘ್ರರಾದ ಭೀಷ್ಮರ ಪಾತವನ್ನು ಕೇಳಿಯೂ ಅದು ಬಿರಿದುಹೋಗುತ್ತಿಲ್ಲ.

ಯಸ್ಮಿನ್ನಸ್ತ್ರಂ ಚ ಮೇಧಾ ಚ ನೀತಿಶ್ಚ ಭರತರ್ಷಭೇ ।
ಅಪ್ರಮೇಯಾನಿ ದುರ್ಧರ್ಷೇ ಕಥಂ ಸ ನಿಹತೋ ಯುಧಿ ॥೫೪॥

ಯಾವ ಭರತಶ್ರೇಷ್ಠರಾದ ಭೀಷ್ಮರಲ್ಲಿ ಅಸ್ತ್ರವೂ, ಮೇಧಾಶಕ್ತಿಯೂ, ರಾಜನೀತಿಯೂ ಅಗಾಧವಾಗಿದ್ದಿತೋ, ಯಾರನ್ನು ಯುದ್ಧದಲ್ಲಿ ಎಂದಿಗೂ ಸೋಲಿಸಲು ಸಾಧ್ಯವಾಗಿರಲಿಲ್ಲವೋ ಅಂತಹ ಭೀಷ್ಮರು ಹೇಗೆ ಹತರಾದರು?

ನ ಚಾಸ್ತ್ರೇಣ ನ ಶೌರ್ಯೇಣ ತಪಸಾ ಮೇಧಯಾ ನ ಚ ।
ನ ಧೃತ್ಯಾ ನ ಪುನಸ್ತಾಗಾನ್ಮೃತ್ಯೋಃ ಕಶ್ಚಿದ್ ವಿಮುಚ್ಯತೇ ॥೫೫॥

ಅಸ್ತ್ರದಿಂದಾಗಲೀ, ಪರಾಕ್ರಮದಿಂದಾಗಲೀ, ತಪಸ್ಸಿಂದಾಗಲೀ, ಬುದ್ಧಿಶಕ್ತಿಯಿಂದಾಗಲೀ, ಧೈರ್ಯದಿಂದಾಗಲೀ ಅಥವಾ ತ್ಯಾಗದಿಂದಾಗಲೀ ಯಾರೂ ಮೃತ್ಯುವನ್ನು ಮೀರಲಾರರು.

ಕಾಲೋ ನೂನಂ ಮಹಾವೀರ್ಯಃ ಸರ್ವಲೋಕದುರತ್ಯಯಃ ।
ಯತ್ರ ಶಾಂತನವಂ ಭೀಷ್ಮಂ ಹತಂ ಶಂಸಸಿ ಸಂಜಯ ॥೫೬॥

ಎಲೈ ಸಂಜಯನೇ, ನೀನು ಶಂತನು ಪುತ್ರರಾದ ಭೀಷ್ಮರು ಹತರಾದರೆಂದು ಹೇಳುತ್ತಿರುವಾಗ ನನಗೆ ಕಾಲವೇ ಮಹಾಪರಾಕ್ರಮವುಳ್ಳದುದು ಮತ್ತು ಯಾರಿಂದಲೂ ಮೀರಲು ಸಾಧ್ಯವಿಲ್ಲದುದು ಎಂದು ತೋರುತ್ತಿದೆ.

ಪುತ್ರಶೋಕಾಭಿಸಂತಪ್ತೋ ಮಹದ್ ದುಃಖಮಚಿಂತಯನ್ ।
ಆಶಂಸೇಽಹಂ ಪುರಾ ತ್ರಾಣಂ ಭೀಷ್ಮಾಚ್ಛಂತನುನಂದನಾತ್ ॥೫೭॥

ನನ್ನ ಪುತ್ರರ ದುರ್ನಡತೆಯಿಂದ ಶೋಕಪಡುತ್ತಾ, ಆ ದೊಡ್ಡದುಃಖವನ್ನು ಎಣಿಸದ ಶಂತನು ಪುತ್ರರಾದ ಭೀಷ್ಮರಿಂದ ಅವರಿಗೆ ರಕ್ಷಣೆಯನ್ನು ಬಯಸುತ್ತಿದ್ದೆ.

ಯದಾದಿತ್ಯಮಿವಾಪಶ್ಯತ್ ಪತಿತಂ ಭುವಿ ಸಂಜಯ ।
ದುರ್ಯೋಧನಃ ಶಾಂತನವಂ ಕಿಂ ತದಾ ಪ್ರತ್ಯಪದ್ಯತ ॥೫೮॥

ಎಲೈ ಸಂಜಯನೇ, ಸೂರ್ಯನು ಭೂಮಿಯ ಮೇಲೆ ಬಿದ್ದಂತಿದ್ದ ಭೀಷ್ಮರನ್ನು ನೋಡಿ ದುರ್ಯೋಧನನಿಗೆ ಯಾವ ಭಾವನೆ ಉಂಟಾಯಿತು?

ನಾಹಂ ಸ್ವೇಷಾಂ ಪರೇಷಾಂ ವಾ ಬುದ್ಧ್ಯಾ ಸಂಜಯ ಚಿಂತಯನ್ ।
ಶೇಷಂ ಕಿಂಚಿತ್ ಪ್ರಪಶ್ಯಾಮಿ ಪ್ರತ್ಯನೀಕೇ ಮಹೀಕ್ಷಿತಾಮ್ ॥೫೯॥

ಎಲೈ ಸಂಜಯನೇ, ನಾನು ನನ್ನ ಬುದ್ಧಿಯಿಂದ ಅಥವಾ ಬೇರೆಯವರ ಬುದ್ಧಿಯಿಂದ ವಿಚಾರ ಮಾಡಿದರೂ ರಾಜರುಗಳ ಸೈನ್ಯಗಳಲ್ಲಿ ಯಾವುದೂ ಉಳಿಯುವುದಿಲ್ಲವೆಂದು ತಿಳಿಯುತ್ತೇನೆ.

ದಾರುಣಃ ಕ್ಷತ್ರಧರ್ಮೋಽಯಮೃಷಿಭಿಃ ಸಂಪ್ರದರ್ಶಿತಃ ।
ಯತ್ರ ಶಾಂತನವಂ ಹತ್ವಾ ರಾಜ್ಯಮಿಚ್ಛಂತಿ ಪಾಂಡವಾಃ ॥೬೦॥

ಎಲ್ಲಿ ಶಂತನುಪುತ್ರರಾದ ಭೀಷ್ಮರನ್ನು ಸಂಹರಿಸಿ ಪಾಂಡವರು ರಾಜ್ಯವನ್ನು ಬಯಸುತ್ತಾರೆಯೋ, ಅಂತಹ ಋಷಿಗಳಿಂದ ಹೇಳಲ್ಪಟ್ಟ ಈ ಕ್ಷತ್ರಿಯ ಧರ್ಮವಾದ ಯುದ್ಧವು ಭಯಂಕರವಾದುದೆಂದು ನಾನು ಭಾವಿಸುತ್ತೇನೆ.

ವಯಂ ವಾ ರಾಜ್ಯಮಿಚ್ಛಾಮೋ ಘಾತಯಿತ್ವಾ ಪಿತಾಮಹಮ್ ।
ಕ್ಷತ್ರಧರ್ಮೇ ಸ್ಥಿತಾಃ ಪಾರ್ಥಾ ನಾಪರಾಧ್ನಂತಿ ಪುತ್ರಕಾಃ ॥೬೧॥

ಅಥವಾ ನಾವಾದರೂ ಪಾಂಡವರ ಕೈಯಲ್ಲಿ ಪಿತಾಮಹರಾದ ಭೀಷ್ಮರನ್ನು ಕೊಲ್ಲಿಸಿ ರಾಜ್ಯವನ್ನು ಬಯಸುತ್ತಿದ್ದೇವೆ. ಕ್ಷತ್ರಿಯಧರ್ಮದಲ್ಲೇ ನಿರತರಾದ ನನ್ನ ಪುತ್ರರಾದ ಪಾಂಡವರು ಅಪರಾಧಿಗಳಲ್ಲ.

ವಿತದಾಯೇಗಣ ಕರ್ತವ್ಯಂ ಕೃಚ್ಛ್ರಾಸ್ವಾಪತ್ಸು ಸಂಜಯ ।
ಪರಾಕ್ರಮಃ ಪರಂ ಶಕ್ತ್ಯಾ ತಚ್ಚ ತಸ್ಮಿನ್ ಪ್ರತಿಷ್ಠಿತಮ್ ॥೬೨॥

ಎಲೈ ಸಂಜಯನೇ, ಆರ್ಯನಾದ ಕ್ಷತ್ರಿಯನು ಕಷ್ಟ ಒದಗಿದಾಗ ಪರಾಕ್ರಮವನ್ನು ಮಾಡಬೇಕು. ಈ ಪರಾಕ್ರಮವು ಭೀಷ್ಮರಲ್ಲಿ ಪ್ರತಿಷ್ಠಿತವಾಗಿದ್ದಿತು.

ಅನೀಕಾನಿ ವಿನಿಘ್ನಂತಂ ಕ್ಷೀಮಂತಮಪರಾಜಿತಮ್ ।
ಕಥಂ ತಾಂತನವಂ ತಾತ ಪಾಂಡುಪುತ್ರಾ ನ್ಯಪಾತಯನ್ ॥೬೩॥

ತಮ್ಮ ಸೈನ್ಯವನ್ನು ಸಂಹರಿಸುತ್ತಾ ಅಪರಾಜಿತರೂ, ದಾಕ್ಷಿಣ್ಯಸ್ವಭಾವದವರೂ ಆಗಿದ್ದ ಶಂತನು ಪುತ್ರರಾದ ಭೀಷ್ಮರನ್ನು ಎಲೈ ಪ್ರೀತಿಪಾತ್ರನೇ, ಪಾಂಡವರು ಹೇಗೆ ಕೆಡವಿದರು?

ಕಥಂ ಯುಕ್ತಾನ್ಯನೀಕಾನಿ ಕಥಂ ಯುದ್ಧಂ ಮಹಾತ್ಮಭಿಃ ।
ಕಥಂ ವಾ ನಿಹತೋ ಭೀಷ್ಮಃ ಪಿತಾ ಸಂಜಯ ಮೇ ಪರೈಃ ॥೬೪॥

ಎಲೈ ಸಂಜಯನೇ, ಸೈನ್ಯಗಳನ್ನು ಹೇಗೆ ನಿಯೋಗ ಮಾಡಿದರು? ಮಹಾತ್ಮರಾದ ಪಾಂಡವರು ಹೇಗೆ ಯುದ್ಧವನ್ನು ಮಾಡಿದರು? ನನ್ನ ತಂದೆಯಾದ ಭೀಷ್ಮರು ಪರರಾದ ಪಾಂಡವರಿಂದ ಹೇಗೆ ನಿಹತರಾದರು?

ದುರ್ಯೋಧನಶ್ಚ ಕರ್ಣಶ್ಚ ಶಕುನಿಶ್ಚಾಪಿ ಸೌಬಲಃ ।
ದುಃಶಾಸನಶ್ಚ ಹತವೋ ಹತೇ ಭೀಷ್ಮೇ ಕಿಮಬ್ರುವನ್ ॥೬೫॥

ದುರ್ಯೋಧನನೂ, ಕರ್ಣನೂ, ಸೌಬಲನಾದ ಶಕುನಿಯೂ, ಕಪಟಿಯಾದ ದುಶ್ಶಾಸನನೂ ಭೀಷ್ಮರು ಹತರಾದಾಗ ಏನು ಹೇಳಿದರು?

ಯಚ್ಛರೀರೈರುಪಸ್ತೀರ್ಣಾಂ ನರವಾರಣವಾಜಿನಾಮ್ ।
ಶರಶಕ್ತಿಗದಾಖಡ್ಗತೋಮರಾಕ್ಷಾಂ ಭಯಾವಹಾಮ್ ॥೬೬॥

ಪ್ರಾವಿಶನ್ ಕಿತವಾ ಮಂದಾಃ ಸಭಾಂ ಯುಧಿ ದುರಾಸದಾಮ್ ।
ಪ್ರಾಣದ್ಯೂತೇ ಪ್ರತಿಭಯೇ ಕೇऽದೀವ್ಯಂತ ನರರ್ಷಭಾಃ ॥೬೭॥

ಪದಾತಿಗಳು, ಅಶ್ವಗಳು ಮತ್ತು ಗಜಗಳೆಂಬ ಹಾಸುಗಳನ್ನು ಹಾಸಿದ ಬಾಣಗಳೂ, ಶಕ್ತ್ಯಾಯುಧಗಳು, ಖಡ್ಗಗಳು, ಗದೆಗಳು, ತೋಮರಗಳು ಎಂಬ ದಾಳಗಳುಳ್ಳ ಭಯಂಕರವಾದ ಪ್ರಾಣದ್ಯೂತವುಳ್ಳ ಪ್ರವೇಶಿಸಲು ಅಸಾಧ್ಯವಾದ ಯುದ್ಧಸಭೆಯನ್ನು ಪಗಡೆಯಾಟವನ್ನು ಆಡುವಂತೆ ಇದ್ದ ವೀರರು ಹೇಗೆ ಪ್ರವೇಶಿಸಿದರು? ಯಾವ ನರಶ್ರೇಷ್ಠರು ಆ ಪಗಡೆಯಾಟವನ್ನು ಆಡಿದರು?

ಕೇऽಜಯನ್ ಕೇ ಜಿತಾಸ್ತತ್ರ ಹೃತಲಕ್ಷಾ ನಿಪಾತಿತಾಃ ।
ಅನ್ಯೇ ಭೀಷ್ಮಾಚ್ಛಾಂತನವಾತ್ ತನ್ಮಾಚಕ್ಷ್ವ ಸಂಜಯ ॥೬೮॥

ಎಲೈ ಸಂಜಯನೇ, ಆ ಪ್ರಾಣವನ್ನು ಒತ್ತೆಯಾಗಿಟ್ಟು ಆಡಿದ ಆಟದಲ್ಲಿ ಶಂತನು ಪುತ್ರರಾದ ಭೀಷ್ಮರನ್ನು ಬಿಟ್ಟು ಬೇರೆ ಯಾರು ಜಯಶೀಲರಾದರು? ಯಾರು ತಮ್ಮ ಪಣವನ್ನು ಕಳೆದುಕೊಂಡು ಪರಾಜಿತರಾಗಿ ಕೆಳಗೆ ಉರುಳಿದರು?

ನ ಹಿ ಮೇ ಶಾಂತಿರಸ್ತೀಹ ಯುಧಿ ದೇವವ್ರತಂ ಹತಮ್ ।
ಪಿತರಂ ಭೀಮಕರ್ಮಾಣಂ ಶ್ರುತ್ವಾ ಮೇ ದುಃಖಮಾವಿಶತ್ ॥೬೯॥

ದೇವವ್ರತರಾದ ಭೀಷ್ಮರು ಯುದ್ಧದಲ್ಲಿ ಹತರಾದುದನ್ನು ಕೇಳಿ ನನ್ನ ಮನಸ್ಸಿಗೆ ಶಾಂತಿಯೇ ಉಂಟಾಗುತ್ತಿಲ್ಲ. ಭಯಂಕರ ಕರ್ಮವನ್ನು ಮಾಡುವ ಸಾಮರ್ಥ್ಯವುಳ್ಳ ನನ್ನ ತಂದೆಯಾದ ಭೀಷ್ಮರ ಸುದ್ದಿಯನ್ನು ಕೇಳಿ ನನ್ನನ್ನು ದುಃಖವು ಆವರಿಸಿದೆ.

ಆರ್ತಿಂ ಮೇ ಹೃದಯೇ ರೂಢಾಂ ಮಹತೀಂ ಪುತ್ರಕಾರಿತಾಮ್ ।
ತ್ವಂ ಸಿಂಚನ್ ಸರ್ಪಿಷೇವಾಗ್ನಿಮುದ್ದೀಪಯಸಿ ಸಂಜಯ ॥೭೦॥

ಎಲೈ ಸಂಜಯನೇ, ನನ್ನ ಮಗನ ದುರ್ನಡತೆಯಿಂದ ನನ್ನ ಹೃದಯದಲ್ಲಿ ಬೇರೂರಿದ ದೊಡ್ಡ ದುಃಖವನ್ನು ಅಗ್ನಿಯನ್ನು ಆಜ್ಯದಿಂದ ಚುಮುಕಿಸಿದಂತೆ ನೀನು ಅಭಿವೃದ್ಧಿಗೊಳಿಸುತ್ತಿದ್ದೀಯೆ!

ಮಹಾಂತಂ ಭಾರಮುದ್ಯಮ್ಯ ವಿಶ್ರುತಂ ಸಾರ್ವಲೌಕಿಕಮ್ ।
ದೃಷ್ಟ್ವಾ ವಿನಿಹತಂ ಭೀಷ್ಮಂ ಮನ್ಯೇ ಶೋಚಂತಿ ಪುತ್ರಕಾಃ ॥೭೧॥

ಸರ್ವಲೋಕದಲ್ಲಿಯೂ ಪ್ರಖ್ಯಾತರಾದ ಭೀಷ್ಮರು ದೊಡ್ಡ ಜವಾಬ್ದಾರಿಯನ್ನು ಹೊತ್ತು ಯುದ್ಧದಲ್ಲಿ ಬಿದ್ದುದನ್ನು ನೋಡಿ ನನ್ನ ಮಕ್ಕಳು ಶೋಕಪಡುತ್ತಾರೆ ಎಂದು ತಿಳಿಯುತ್ತೇನೆ.

ಶ್ರೋಷ್ಯಾಮಿ ತಾನಿ ದುಃಖಾನಿ ದುರ್ಯೋಧನಕೃತಾನ್ಯಹಮ್ ।
ತಸ್ಮಾನ್ಮೇ ಸರ್ವಮಾಚಕ್ಷ್ವ ಯದ್‌ವೃತ್ತಂ ತತ್ರ ಸಂಜಯ ॥೭೨॥

ದುರ್ಯೋಧನನಿಂದ ಉಂಟಾದ ಇಂತಹ ದುಃಖಮಯ ವಾರ್ತೆಗಳನ್ನು ನಾನು ಇನ್ನೂ ಕೇಳುವವನಿದ್ದೇನೆ. ಆದ್ದರಿಂದ ಎಲೈ ಸಂಜಯನೇ, ಏನು ನಡೆಯಿತೆಂದು ಎಲ್ಲವನ್ನೂ ನನಗೆ ಹೇಳು.

ಸಂಗ್ರಾಮೇ ಪೃಥಿವೀಶಾನಾಂ ಮಂದಸ್ಯಾಬುದ್ಧಿಸಂಭವಮ್ ।
ಅಪನೀತಂ ಸುನೀತಂ ವಾ ತನ್ಮಮಾಚಕ್ಷ್ವ ಸಂಜಯ ॥೭೩॥

ಎಲೈ ಸಂಜಯನೇ, ಯುದ್ಧದಲ್ಲಿ ಪೃಥಿವೀಪಾಲರಾದ ರಾಜರೂ ಮತ್ತು ಮಂದನಾದ ನನ್ನ ಪುತ್ರನಾದ ದುರ್ಯೋಧನನೂ ಬುದ್ಧಿಯಿಲ್ಲದೆ ಮಾಡಿದ ಅನ್ಯಾಯವನ್ನಾಗಲೀ ಅಥವಾ ಸುನ್ಯಾಯವನ್ನಾಗಲೀ ನನಗೆ ಹೇಳುವವನಾಗು.

ಯತ್ಕೃತಂ ತತ್ರ ಭೀಷ್ಮೇಣ ಸಂಗ್ರಾಮೇ ಜಯಮಿಚ್ಛತಾ ।
ತೇಜೋಯುಕ್ತಂ ಕೃತಾಸ್ತ್ರೇಣ ಶಂಸ ತಚ್ಚಾಪ್ಯಶೇಷತಃ ॥೭೪॥

ಯುದ್ಧದಲ್ಲಿ ಜಯವನ್ನು ಬಯಸಿ ಅಸ್ತ್ರಪಾರಂಗತರಾದ ಭೀಷ್ಮರು ಪರಾಕ್ರಮದಿಂದ ಕೂಡಿದವರಾಗಿ ಏನನ್ನು ಎಸಗಿದರೋ ಅದನ್ನೂ ನನಗೆ ಪೂರ್ಣವಾಗಿ ಹೇಳುವವನಾಗು.

ಯಥಾ ತದಭವದ್ ಯುದ್ಧಂ ಕುರುಪಾಂಡವಸೇನಯೋಃ ।
ಕ್ರಮೇಣ ಯೇನ ಯಸ್ಮಿಂಶ್ಚ ಕಾಲೇ ಯಚ್ಚ ಯಥಾ ಚ ತತ್ ॥೭೫॥

ಕುರು-ಪಾಂಡವ ಸೇನೆಗಳಿಗೆ ಹೇಗೆ ಯುದ್ಧವು ನಡೆಯಿತು? ಯಾವ ಕ್ರಮದಿಂದ, ಯಾವ ಕಾಲದಲ್ಲಿ, ಯಾವ ಯಾವ ಘಟನೆಗಳು ನಡೆದವು? ಎಲ್ಲವನ್ನೂ ನನಗೆ ಹೇಳುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಪಂಚದಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾರನೆಯ ಅಧ್ಯಾಯ

ಸಂಜಯನಿಂದ ಭೀಷ್ಮರ ರಕ್ಷಣೆಯ ವಿಷಯದಲ್ಲಿ ದುರ್ಯೋಧನನ ಆದೇಶ ಮತ್ತು ಕುರು-ಪಾಂಡವರ ಸೇನೆಗಳ ವರ್ಣನೆ.

ಸಂಜಯಃ

ತ್ವದ್ಮುಕ್ತೋಽಯಮನುಪ್ರಶ್ನೋ ಮಹಾರಾಜ ಯಥಾರ್ಹಸಿ ।
ನ ತು ದುರ್ಯೋಧನೇ ದೋಷಮಿಮಮಾಸಕ್ತುಮರ್ಹಸಿ ॥೧॥

ಸಂಜಯ– ಎಲೈ ಮಹಾರಾಜನೇ, ನೀನು ಕೇಳುವ ಈ ಪ್ರಶ್ನೆಯು ನಿನಗೆ ಯೋಗ್ಯವಾಗಿಯೇ ಇದೆ. ಆದರೆ ಈ ದೋಷವನ್ನು ದುರ್ಯೋಧನನ ಮೇಲೆಯೇ ಹೇರುವುದು ನಿನಗೆ ಉಚಿತವಲ್ಲ.

ಯ ಆತ್ಮನೋ ದುಶ್ಚರಿತಾದಶುಭಂ ಪ್ರಾಪ್ನುಯಾನ್ನರಃ ।
ಏನಸಾ ತೇನ ನಾನ್ಯಂ ಸ ಉಪಾಶಂಕಿತುಮರ್ಹತಿ ॥೨॥

ಯಾವ ಮನುಷ್ಯನು ತನ್ನ ದುರ್ನಡತೆಯಿಂದ ಉಂಟಾದ ಅಶುಭವನ್ನು ಹೊಂದುತ್ತಾನೆಯೋ ಅವನು ಆ ದುರ್ನಡತೆಯಿಂದ ಉಂಟಾದ ಪಾಪವನ್ನು ಇನ್ನೊಬ್ಬರಿಗೆ ಸಂಬಂಧಿಸಲು ಪ್ರಯತ್ನಿಸಬಾರದು.

ಮಹಾರಾಜ ಮನುಷ್ಯೇಷು ನಿಂದ್ಯಂ ಯಃ ಸರ್ವಮಾಚರೇತ್ ।
ಸ ವಧ್ಯಃ ಸರ್ವಲೋಕಸ್ಯ ನಿಂದಿತಾನಿ ಸಮಾಚರನ್ ॥೩॥

ಎಲೈ ಮಹಾರಾಜನೇ, ಯಾವ ಮನುಷ್ಯನು ಲೋಕದಲ್ಲಿ ನಿಂದಿತವಾದ ಕರ್ಮವನ್ನು ಮಾಡುತ್ತಾನೆಯೋ, ಅಂತಹವನು ಎಲ್ಲ ಲೋಕದ ದೃಷ್ಟಿಯಿಂದಲೂ ವಧ್ಯನಾಗುತ್ತಾನೆ.

ನಿಕಾರೋ ನಿಕೃತಿಪ್ರಜ್ಞೈಃ ಪಾಂಡವೈಸ್ತ್ವ ತ್ಪ್ರತೀಕ್ಷಯಾ ।
ಅನುಭೂತಃ ಸಹಾಮಾತ್ಯೈಃ ಕ್ಷಾಂತಂ ಚ ಸುಚಿರಂ ವನೇ ॥೪॥

ನಿನ್ನ ಮಕ್ಕಳ ಮೋಸ ಬುದ್ಧಿಯಿಂದ ಉಂಟಾದ ಅವಮಾನಗಳನ್ನು ನಿನ್ನ ಮೇಲಿನ ದೃಷ್ಟಿಯಿಂದ ಪಾಂಡವರು ತಮ್ಮ ಮಂತ್ರಿಗಳ ಜೊತೆಯಲ್ಲಿ ಬಹುಕಾಲ ಅನುಭವಿಸಿದರು ಮತ್ತು ಬಹಳ ಕಾಲ ಕಾಡಿನಲ್ಲಿ ಕ್ಷಮಿಸಿದರು.

ಹಯಾನಾಂ ಚ ಗಜಾನಾಂ ಚ ಶೂರಾಣಾಂ ಚಾಮಿತೌಜಸಾಮ್ ।
ಪ್ರತ್ಯಕ್ಷಂ ಯನ್ಮಯಾ ದೃಷ್ಟಂ ದೃಷ್ಟಂ ಯೋಗಬಲೇನ ಚ ॥೫॥

ಶೃಣು ತತ್ ಪೃಥಿವೀಪಾಲ ಮಾ ಚ ಶೋಕೇ ಮನಃ ಕೃಥಾಃ ।
ದಿಷ್ಟಮೇತತ್ ಪುರಾ ನೂನಮೇವಂಭಾವಿ ನರಾಧಿಪ ॥೬॥

ಅಮಿತಪರಾಕ್ರಮಿಗಳಾದ ಯಾವ ಶೂರರನ್ನೂ, ಅಶ್ವಗಳನ್ನೂ ಮತ್ತು ಗಜಗಳನ್ನೂ ನಾನು ಪ್ರತ್ಯಕ್ಷವಾಗಿ ಮತ್ತು ಯೋಗದೃಷ್ಟಿಯಿಂದ ಹಿಂದೆ ನೋಡಿದೆನೋ ಅದನ್ನು ಎಲೈ ರಾಜನೇ, ನಿನಗೆ ಹೇಳುತ್ತೇನೆ. ಮನಸ್ಸಿನಲ್ಲಿ ಶೋಕವನ್ನು ಪಡಬೇಡ. ಎಲೈ ನರಾಧಿಪನೇ, ಇದು ಹೀಗೆಯೇ ಆಗಬೇಕೆಂದು ಮೊದಲೇ ವಿಧಿಯಿಂದ ನಿಯತವಾಗಿದೆ.

ನಮಸೃತ್ವಾ ಪಿತುಸ್ತೇऽಹಂ ಪಾರಾಶರ್ಯಾಯ ಧೀಮತೇ ।
ಯಸ್ಯ ಪ್ರಸಾದಾದ್ ದಿವ್ಯಂ ಮೇ ಪ್ರಾಪ್ತಂ ಜ್ಞಾನಮನುತ್ತಮಮ್ ॥೭॥

ದೃಷ್ಟಿಶ್ಚಾತೀಂದ್ರಿಯಾ ರಾಜನ್ ದೂರಾಚ್ಛ್ರವಣಮೇವ ಚ ।
ಪರಚಿತ್ತಸ್ಯ ವಿಜ್ಞಾನಮತೀತಾನಾಗತಸ್ಯ ಚ ॥೮॥

ವ್ಯುತ್ಥಿತೋತ್ಥಿವಿಜ್ಞಾನಮಾಕಾಶೇ ಚ ಗತಿಃ ಸದಾ ।
ಶಸ್ತ್ರೌರಸಂಗೋ ಯುದ್ಧೇಷು ವರದಾನಾನ್ಮಹಾತ್ಮನಃ ॥೯॥

ಯಾವ ನಿನ್ನ ತಂದೆಯಾದ ಪರಾಶರಪುತ್ರರಾದ ವೇದವ್ಯಾಸರ ಅನುಗ್ರಹದಿಂದ ನಾನು ಈ ಶ್ರೇಷ್ಠವಾದ ದಿವ್ಯಜ್ಞಾನವನ್ನು ಪಡೆದಿದ್ದೇನೆಯೋ, ಅತೀಂದ್ರಿಯ ದೃಷ್ಟಿಯನ್ನೂ, ದೂರಶ್ರವಣ ಶಕ್ತಿಯನ್ನೂ, ಪರಚಿತ್ತಜ್ಞಾನವನ್ನೂ, ಅತೀತಾನಾಗತ ಜ್ಞಾನವನ್ನೂ ಪಡೆದಿದ್ದೇನೆಯೋ, ಯಾವ ಮಹಾತ್ಮರಾದ ಅವರ ವರದಾನದಿಂದ ಆಗಾಗ್ಗೆ ಉಂಟಾಗುವ ಎಲ್ಲ ಘಟನೆಗಳ ಜ್ಞಾನವನ್ನೂ, ಆಕಾಶದಲ್ಲಿ ಗಮನಶಕ್ತಿಯನ್ನೂ, ಯುದ್ಧದಲ್ಲಿ ಶಸ್ತ್ರದಿಂದ ಅಹತಿಯನ್ನೂ ಪಡೆದಿದ್ದೇನೆಯೋ (ಅಂತಹ ನಾನು ನಿನಗೆ ಹೇಳುವೆನು).

ಶೃಣು ಮೇ ವಿಸ್ತರೇಣೇದಂ ನಿವೃತ್ತಂ ಪರಮಾದ್ಭುತಮ್ ।
ಭಾರತಾನಾಂ ಮಹದ್ ಯುದ್ಧಂ ಯಥಾಭೂಲ್ಲೋಮಹರ್ಷಣಮ್ ॥

ಈ ಹತ್ತುದಿನಗಳವರೆಗೆ ನಡೆದ ಪರಮಾದ್ಭುತವಾದ, ರೋಮಾಂಚಕಾರಿಯಾದ, ಭರತವಂಶದವರ ಈ ದೊಡ್ಡ ಯುದ್ಧವನ್ನು ವಿಸ್ತಾರವಾಗಿ ನನ್ನಿಂದ ಕೇಳುವವನಾಗು.

ತೇಷ್ವನೀಕೇಷು ಯತ್ತೇಷು ವ್ಯೂಢೇಷು ಚ ವಿಧಾನತಃ ।
ದುರ್ಯೋಧನೋ ಮಹಾರಾಜ ದುಃಶಾಸನಮಥಾಬ್ರವೀತ್ ॥೧೧॥

ಎಲೈ ಮಹಾರಾಜನೇ, ಸನ್ನದ್ಧರಾದ ಆ ಸೈನ್ಯಗಳು ಶಾಸ್ತ್ರವಿಧಾನಕ್ಕೆ ಅನುಗುಣವಾಗಿ ವ್ಯೂಹಗೊಂಡಮೇಲೆ ದುರ್ಯೋಧನನು ದುಶ್ಶಾಸನನನ್ನು ಕುರಿತು ಹೀಗೆ ಹೇಳಿದನು.

ದುಃಶಾಸನ ರಥಾಸ್ತೂರ್ಣಂ ಯುಜ್ಯಂತಾಂ ಭೀಷ್ಮರಕ್ಷಿಣಃ ।
ಅನೀಕಾನಿ ಚ ಸರ್ವಾಣಿ ಶೀಘ್ರಂ ತ್ವಮನುಚೋದಯ ॥೧೨॥

ಎಲೈ ದುಃಶಾಸನನೇ, ಭೀಷ್ಮರನ್ನು ರಕ್ಷಿಸಲು ರಥಗಳು ಶೀಘ್ರವಾಗಿ ಹೂಡಲ್ಪಡಲಿ. ನೀನು ಎಲ್ಲ ಸೈನ್ಯಕ್ಕೂ ಶೀಘ್ರವಾಗಿ ಪ್ರಚೋದನೆಯನ್ನು ಮಾಡು.

ಅಯಂ ಮಾ ಸಮನುಪ್ರಾಪ್ತೋ ವರ್ಷಪೂಗಾಭಿಚಿಂತಿತಃ ।
ಪಾಂಡವಾನಾಂ ಸ್ವಸೈನ್ಯಾನಾಂ ಕುರೂಣಾಂ ಚ ಸಮಾಗಮಃ ॥೧೩॥

ನಾನು ಸೈನ್ಯಸಹಿತರಾದ ಪಾಂಡವರಿಗೂ ಮತ್ತು ಕುರುಗಳಿಗೂ ಯುದ್ಧದಲ್ಲಿ ಸಮಾಗಮವನ್ನು ಅನೇಕ ವರ್ಷಗಳಿಂದ ನಿರೀಕ್ಷಿಸುತ್ತಿದ್ದೆ. ಅಂತಹ ಸಮಾಗಮವು ಈಗ ಪ್ರಾಪ್ತವಾಗಿದೆ.

ನಾತಃ ಕಾರ್ಯತಮಂ ಮನ್ಯೇ ರಣೇ ಭೀಷ್ಮಸ್ಯ ರಕ್ಷಣಾತ್ ।
ಹನ್ಯಾದ್ ದೃಪ್ತೋ ಹ್ಯಸೌ ಪಾರ್ಥಾನ್ ಸೋಮಕಾಂಶ್ಚ ಸಸೃಂಜಯಾನ್ ॥

ನಾವು ಯುದ್ಧದಲ್ಲಿ ಭೀಷ್ಮರ ರಕ್ಷಣೆಗಿಂತ ಈಗ ಮಾಡಬೇಕಾದ ಶ್ರೇಷ್ಠವಾದ ಕಾರ್ಯವು ಇನ್ನೊಂದಿಲ್ಲ. ದರ್ಪದಿಂದ ಕೂಡಿದ ಭೀಷ್ಮರು ಸೃಂಜಯರಿಂದ ಸಹಿತರಾದ ಪಾಂಡವರನ್ನೂ ಮತ್ತು ಸೋಮಕರನ್ನೂ ಕೊಂದಾರು!

ಅಬ್ರವೀಚ್ಚ ವಿಶುದ್ಧಾತ್ಮಾ ನಾಹಂ ಹನ್ಯಾಂ ಶಿಖಂಡಿನಮ್ ।
ಶ್ರೂಯತೇ ಸ್ತ್ರೀ ಹ್ಯಸೌ ಪೂರ್ವಂ ತಸ್ಮಾದ್ ವರ್ಜ್ಯೋ ರಣೇ ಮಮ ॥

ವಿಶುದ್ಧಾತ್ಮರಾದ ಭೀಷ್ಮರು ನಾನು ಶಿಖಂಡಿಯನ್ನು ಕೊಲ್ಲುವುದಿಲ್ಲ. ಅವನು ಮೊದಲು ಸ್ತ್ರೀಯಾಗಿದ್ದ ಎಂದು ನಾನು ಕೇಳಿದ್ದೇನೆ. ಆದ್ದರಿಂದ ಯುದ್ಧದಲ್ಲಿ ನಾನು ಅವನನ್ನು ಪರಿವರ್ಜಿಸುತ್ತೇನೆ ಎಂದು ಹೇಳಿದ್ದಾರಷ್ಟೆ!

ತಸ್ಮಾದ್ ಭೀಷ್ಮೋ ರಕ್ಷಿತವ್ಯೋ ವಿಶೇಷೇಣೇತಿ ಮೇ ಮತಿಃ ।
ಶಿಖಂಡಿನೋ ವಧೇ ಯತ್ತಾಃ ಸರ್ವೇ ತಿಷ್ಠಂತು ಮಾಮಕಾಃ ॥೧೬॥

ಆದ್ದರಿಂದ ವಿಶೇಷವಾಗಿ ಭೀಷ್ಮರನ್ನು ರಕ್ಷಿಸಬೇಕು ಎಂಬುದು ನನ್ನ ಅಭಿಪ್ರಾಯ. ನನ್ನವರೆಲ್ಲರೂ ಶಿಖಂಡಿಯನ್ನು ವಧೆ ಮಾಡಲು ಸಿದ್ಧರಾಗಿ.

ತಥಾ ಪ್ರಾಚ್ಯಾಃ ಪ್ರತೀಚ್ಯಾಶ್ಚ ದಾಕ್ಷಿಣಾತ್ಯೋತ್ತರಾಪಥಾಃ ।
ಸರ್ವಶಸ್ತ್ರಾಸ್ತ್ರಕುಶಲಾಸ್ತೇ ರಕ್ಷಂತು ಪಿತಾಮಹಮ್ ॥೧೭॥

ಅದರಂತೆಯೇ ಪೂರ್ವದಿಕ್ಕಿನ, ಪಶ್ಚಿಮ ದಿಕ್ಕಿನ, ದಕ್ಷಿಣ ಮತ್ತು ಉತ್ತರ ದಿಕ್ಕಿನ ಸರ್ವಶಸ್ತ್ರಾಸ್ತ್ರಕುಶಲರಾದ ರಾಜರು ಪಿತಾಮಹರಾದ ಭೀಷ್ಮರನ್ನು ರಕ್ಷಿಸಲಿ.

ಅರಕ್ಷ್ಯಮಾಣಂ ಹಿ ವೃಕೋ ಹನ್ಯಾತ್ ಸಿಂಹಂ ಮಹಾಬಲಮ್ ।
ಮಾ ಸಿಂಹಂ ಜಂಬುಕೇನೇವ ಘಾತಯಾಮಃ ಶಿಖಂಡಿನಾ ॥೧೮॥

ಸಿಂಹಕ್ಕೆ ರಕ್ಷಣೆಯಿಲ್ಲದಿದ್ದರೆ ಅದು ಮಹಾಬಲಿಷ್ಠವಾದರೂ ಅದನ್ನು ತೋಳವು ಕೊಂದೀತು! ಸಿಂಹದಂತಿರುವ ಭೀಷ್ಮರನ್ನು ತೋಳದಂತಿರುವ ಶಿಖಂಡಿಯಿಂದ ನಾವು ಕೊಲ್ಲಿಸಬಾರದು.

ವಾಮಂ ಚಕ್ರಂ ಯುಧಾಮನ್ಯುರುತ್ತಮೌಜಾಶ್ಚ ದಕ್ಷಿಣಮ್ ।
ಗೋಪ್ತಾರೌ ಫಲ್ಗುನಸ್ಯೈತೌ ಫಲ್ಗುನೋऽಪಿ ಶಿಖಂಡಿನಃ ॥೧೯॥

ಅರ್ಜುನನ ಎಡಭಾಗವನ್ನು ಯುಧಾಮನ್ಯುವೂ, ಬಲಭಾಗವನ್ನು ಉತ್ತಮೌಜನೂ ರಕ್ಷಿಸುವರು. ಅರ್ಜುನನಾದರೂ ಶಿಖಂಡಿಯ ಎರಡು ಭಾಗಗಳನ್ನೂ ರಕ್ಷಿಸುವನು.

ಸಂರಕ್ಷ್ಯಮಾಣಃ ಪಾರ್ಥೇನ ಭೀಷ್ಮೇಣ ಚ ವಿವರ್ಜಿತಃ ।
ಯಥಾ ನ ಹನ್ಯಾದ್ ಗಾಂಗೇಯಂ ದುಃಶಾಸನ ತಥಾ ಕುರು ॥೨೦॥

ಎಲೈ ದುಃಶಾಸನನೇ, ಭೀಷ್ಮರಿಂದ ಪರಿತ್ಯಕ್ತನಾಗಿ ಅರ್ಜುನನಿಂದ ರಕ್ಷಿತನಾಗಿ ಶಿಖಂಡಿಯು ಗಾಂಗೇಯರಾದ ಭೀಷ್ಮರನ್ನು ಕೊಲ್ಲದಂತೆ ವ್ಯವಸ್ಥೆ ಮಾಡು.

ಸಂಜಯಃ

ತತೋ ರಜನ್ಯಾಂ ವ್ಯುಷ್ಟಾಯಾಂ ಶಬ್ದಃ ಸಮಭವನ್ಮಹಾನ್ ।
ಕ್ರೋಶತಾಂ ಭೂಮಿಪಾಲಾನಾಂ ಯುಜ್ಯತಾಂ ಯುಜ್ಯತಾಮಿತಿ ॥೨೧॥

ಸಂಜಯ– ಅನಂತರ ರಾತ್ರಿಯು ಕಳೆದ ಮೇಲೆ ರಥಗಳನ್ನು ಹೂಡಿ, ಹೂಡಿ ಎಂದು ಕಿರುಚುವ ರಾಜರುಗಳಿಂದ ದೊಡ್ಡ ಶಬ್ದವುಂಟಾಯಿತು.

ಶಂಖದುಂದುಭಿನಿರ್ಘೋಷೈಃ ಸಿಂಹನಾದೈಶ್ಚ ಭಾರತ ।
ಹಯಹೇಷಿತಶಬ್ದೈಶ್ಚ ರಥನೇಮಿಸ್ವನೈಸ್ತಥಾ ॥೨೨॥

ಗಜಾನಾಂ ಬೃಂಹತಾಂ ಚೈವ ಯೋಧಾನಾಂ ಚಾಭಿಗರ್ಜತಾಮ್ ।
ಕ್ಷ್ವೇಡಿತಾಸ್ಫೋಟಿತೋತ್ಥೈಶ್ಚ ಸ್ತುಮುಲಂ ಸರ್ವತೋऽಭವತ್ ॥೨೩॥

ಎಲೈ ಭಾರತನೇ, ಶಂಖ-ದುಂದುಭಿಘೋಷಗಳಿಂದಲೂ, ಸಿಂಹನಾದಗಳಿಂದಲೂ, ಕುದುರೆಗಳ ಹೇಷಾರವದಿಂದಲೂ, ರಥಚಕ್ರಗಳ ಘೋಷದಿಂದಲೂ, ಗಜಗಳ ಘೀಂಕಾರದಿಂದಲೂ, ಯೋಧರ ಗರ್ಜನೆಯಿಂದಲೂ

ಮತ್ತು ಯೋಧರ ಚಪ್ಪಾಳೆಗಳು, ಸಿಂಹನಾದಗಳು ಮತ್ತು ದೊಡ್ಡ ಆಕ್ರೋಶ ಶಬ್ದಗಳಿಂದಲೂ ತೀವ್ರವಾದ ಕೋಲಾಹಲ ಉಂಟಾಯಿತು.

ಉದತಿಷ್ಠನ್ ಮಹಾರಾಜ ಸರ್ವಂ ಯುಕ್ತಮಶೇಷತಃ ।
ಸೂರ್ಯೋದಯೇ ಮಹತ್‌ಸೈನ್ಯಂ ಕುರುಪಾಂಡವಸೇನಯೋಃ ।
ತವ ರಾಜೇಂದ್ರ ಪುತ್ರಾಣಾಂ ಪಾಂಡವಾನಾಂ ತಥೈವ ಚ ॥೨೪॥

ಎಲೈ ಮಹಾರಾಜನೇ, ರಾಜೇಂದ್ರನೇ, ಸೂರ್ಯೋದಯವಾಗುತ್ತಿರಲು ಕುರು-ಪಾಂಡವ ಸೇನೆಗೆ ಸಂಬಂಧಿಸಿದ ಎಲ್ಲ ಮಹತ್ಸೈನ್ಯವು ಪೂರ್ಣವಾಗಿ, ಸನ್ನದ್ಧವಾಗಿ ನಿಂತಿತು. ನಿನ್ನ ಮಕ್ಕಳ ಮತ್ತು ಪಾಂಡವರ ಸೈನ್ಯವು ಹಾಗೆಯೇ ಸಜ್ಜುಗೊಂಡವು.

ತತ್ರ ನಾಗಾ ರಥಾಶ್ಚೈವ ಜಾಂಬೂನದಪರಿಷ್ಕೃತಾಃ ।
ವಿಭ್ರಾಜಮಾನಾ ದೃಶ್ಯಂತೇ ಮೇಘಾ ಇವ ಸವಿದ್ಯುತಃ ॥೨೫॥

ಅಲ್ಲಿ ಸುವರ್ಣದಿಂದ ಅಲಂಕೃತವಾದ ಗಜಗಳು ಮತ್ತು ರಥಗಳು ಮಿಂಚಿನಿಂದ ಕೂಡಿದ ಮೋಡಗಳಂತೆ ಶೋಭಿಸುವುದು ಕಂಡುಬರುತ್ತಿದ್ದಿತು.

ರಥಾನೀಕಾನ್ಯದೃಶ್ಯಂತ ನಗರಾಣೀವ ಭೂರಿಶಃ ।
ಅತೀವ ಶುಶುಭೇ ತತ್ರ ಪಿತಾ ತೇ ಪೂರ್ಣಚಂದ್ರವತ್ ॥೨೬॥

ರಥಗಳ ಸಮೂಹಗಳು ಅನೇಕ ನಗರಗಳಂತೆ ಕಂಡುಬಂದವು. ಅಲ್ಲಿ ನಿನ್ನ ತಂದೆಯಾದ ಭೀಷ್ಮರು ಪೂರ್ಣಚಂದ್ರನಂತೆ ಬಹಳವಾಗಿ ಕಂಗೊಳಿಸಿದರು.

ಧನುರ್ಭಿರ್ಋಷ್ಟಿಭಿಃ ಖಡ್ಗೈರ್ಗದಾಭಿಃ ಶಕ್ತಿತೋಮರೈಃ ।
ಯೋಧಾ ಪ್ರಹರಣೈಃ ಶುಭ್ರೈಃ ಸ್ವೇಷ್ವನೀಕೇಷ್ವವಸ್ಥಿತಾಃ ॥೨೭॥

ಯೋಧರು ಶುಭ್ರವಾದ ತಮ್ಮ ಆಯುಧಗಳಾದ ಧನುಸ್ಸುಗಳು, ಋಷ್ಟಿಗಳು, ಖಡ್ಗಗಳು, ಗದೆಗಳು, ಶಕ್ತಿಗಳು ಮತ್ತು ತೋಮರಗಳನ್ನು ಹಿಡಿದು ತಮ್ಮ ಸೈನ್ಯಗಳಲ್ಲಿ ನಿಂತರು.

ಗಜಾ ರಥಾಃ ಪದಾತಾಶ್ಚ ತುರಗಾಶ್ಚ ವಿಶಾಂಪತೇ ।
ವ್ಯತಿಷ್ಠದ್ ವಾಗುರಾಕಾರಾಃ ಶತಶೋಽಥ ಸಹಸ್ರಶಃ ॥೨೮॥

ಎಲೈ ರಾಜನೇ, ಗಜಗಳು, ರಥಗಳು, ಪದಾತಿಗಳು ಮತ್ತು ಅಶ್ವಗಳು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಬಲೆಗಳಂತೆ ನಿಂತವು.

ಧ್ವಜಾ ಬಹುವಿಧಾಕಾರಾ ವ್ಯದೃಶ್ಯಂತ ಸಮುಚ್ಛ್ರಿತಾಃ ।
ಸ್ವೇಷಾಂ ಚೈವ ಪರೇಷಾಂ ಚ ದ್ಯುತಿಮಂತಃ ಸಹಸ್ರಶಃ ॥೨೯॥

ಕಾಂತಿಯುಕ್ತವಾದ ಎತ್ತರವಾಗಿದ್ದ ಬಹುವಿಧ ಆಕಾರವುಳ್ಳ ತಮ್ಮ ಮತ್ತು ಪರರ ಧ್ವಜಗಳು ಸಹಸ್ರ ಸಂಖ್ಯೆಯಲ್ಲಿ ಕಂಡುಬಂದವು.

ಕಾಂಚನಾ ಮಣಿಚಿತ್ರಾಂಗಾ ಜ್ವಲಂತ ಇವ ಪಾವಕಾಃ ।
ಅರ್ಚಿಷ್ಮಂತೋ ವ್ಯರೋಚಂತ ಧ್ವಜಾ ರಾಜ್ಞಾಂ ಸಹಸ್ರಶಃ ॥೩೦॥

ಸುವರ್ಣ ಮತ್ತು ಮಣಿಗಳಿಂದ ಅಲಂಕೃತವಾದ ಸಹಸ್ರಾರು ಸಂಖ್ಯೆಯಲ್ಲಿದ್ದ ರಾಜರ ಧ್ವಜಗಳು ತಮ್ಮ ಕಾಂತಿಯಿಂದ ಜ್ವಲಿಸುವ ಅಗ್ನಿಯಂತೆ ಕಂಗೊಳಿಸಿದವು.

ಮಹೇಂದ್ರಕೇತವಃ ಶುಭ್ರಾ ಮಹೇಂದ್ರಸದನೇಷ್ವಿವ ।
ಸನ್ನದ್ಧಾಸ್ತೇಷು ತೇ ವೀರಾ ದದೃಶುರ್ಯುದ್ಧಕಾಂಕ್ಷಿಣಃ ॥೩೧॥

ಇಂದ್ರ ಸದನದಲ್ಲಿನ ಇಂದ್ರಧ್ವಜಗಳಂತೆ ಶುಭ್ರವಾದ ಆ ಧ್ವಜಗಳು ಶೋಭಿಸಿದವು. ಅಂತಹ ಧ್ವಜಗಳುಳ್ಳ ಆ ರಥಗಳಲ್ಲಿ ಯುದ್ಧಾಕಾಂಕ್ಷಿಗಳಾದ ಆ ವೀರರು ಸನ್ನದ್ಧರಾಗಿರುವುದು ಕಂಡುಬರುತ್ತಿದ್ದಿತು.

ಉದ್ಯತೈರಾಯುಧೈಶ್ಚಿತ್ರಾಸ್ತಳಬದ್ಧಾಃ ಕಲಾಪಿನಃ ।
ಋಷಭಾಕ್ಷಾ ಮನುಷ್ಯೇಂದ್ರಾಶ್ಚಮೂಮುಖಿಗತಾ ಬಭುಃ ॥೩೨॥

ಯುದ್ಧದ ಸಲಕರಣೆಗಳನ್ನು ಧರಿಸಿ ಹಸ್ತಗಳಿಗೆ ರಕ್ಷಣೆಯನ್ನು ಹಾಕಿಕೊಂಡು ಕೈಯಲ್ಲಿ ಆಯುಧವನ್ನು ಹಿಡಿದ ವಿಶಾಲವಾದ ಕಣ್ಣುಳ್ಳ ಆ ರಾಜರು ಸೇನೆಯ ಮುಂಭಾಗದಲ್ಲಿ ಶೋಭಿಸಿದರು.

ಶಕುನಿಃ ಸೌಬಲಃ ಶಲ್ಯಃ ಸೈಂಧವೋಽಥ ಜಯದ್ರಥಃ ।
ಏಂದಾನುಏಂದಾವಾವಂತ್ಯೌ ಕಾಂಬೋಜಶ್ಚ ಸುದಕ್ಷಿಣಃ ॥೩೩॥

ಶ್ರುತಾಯುಧಶ್ಚ ಕಾಳಿಂಗೋ ಜಯತ್ಸೇನಶ್ಚ ಪಾರ್ಥಿವಃ ।
ಬೃಹದ್ಬಲಶ್ಚ ಕೌಸಲ್ಯಃ ಕೃತವರ್ಮಾ ಚ ಸಾತ್ವತಃ ॥೩೪॥

ದಶೈತೇ ಪುರುಷವ್ಯಾಘ್ರಾಃ ಶೂರಾಃ ಪರಿಘಬಾಹವಃ ।
ಅಕ್ಷೌಹಿಣೀನಾಂ ಪತಯೋ ಯಜ್ವಾನೋ ಭೂರಿದಕ್ಷಿಣಾಃ ॥೩೫॥

ಸೌಬಲನಾದ ಶಕುನಿ, ಶಲ್ಯ, ಸಿಂಧುದೇಶದ ಜಯದ್ರಥ, ಅವಂತಿದೇಶದ ವಿಂದಾನುವಿಂದರು, ಕಾಂಬೋಜ ದೇಶದ ಸುಲಕ್ಷಣ, ಕಳಿಂಗ ದೇಶದ ಶ್ರುತಾಯುಧ, ಜಯತ್ಸೇನರಾಜ, ಕೌಸಲದೇಶದ ಬೃಹದ್ಬಲ ಮತ್ತು ಸಾತ್ವತ ಕುಲಕ್ಕೆ ಸೇರಿದ ಕೃತವರ್ಮ ಒನಕೆಯಂತೆ ಬಾಹುಗಳುಳ್ಳ ಅನೇಕ ಭೂರಿದಕ್ಷಿಣೆಯುಳ್ಳ ಯಾಗವನ್ನು ಮಾಡಿದ ಶೂರರಾದ ಈ ಹತ್ತು ಪುರುಷವ್ಯಾಘ್ರರು ಹತ್ತು ಅಕ್ಷೌಹಿಣಿಯ ಪತಿಗಳಾರಾಗಿದ್ದರು.

ಏತೇ ಚಾನ್ಯೇ ಚ ಬಹವೋ ದುರ್ಯೋಧನವಶಾನುಗಾಃ ।
ರಾಜಾನೋ ರಾಜಪುತ್ರಾಶ್ಚ ನೀತಿಮಂತೋ ಮಹಾಬಲಾಃ ॥೩೬॥

ಇವರೂ ಮತ್ತು ಇನ್ನೂ ಅನೇಕ ದುರ್ಯೋಧನವಶವರ್ತಿಗಳಾದ ರಾಜರೂ, ರಾಜಕುಮಾರರೂ, ರಾಜನೀತಿಯನ್ನು ತಿಳಿದವರೂ, ಮಹಾಬಲಿಷ್ಠರೂ ಆದ ಶೂರರು ಸನ್ನದ್ಧರಾದರು.

ಸನ್ನದ್ಧಾಃ ಸಮದೃಶ್ಯಂತ ಸ್ವೇಷ್ವನೀಕೇಷ್ವವಸ್ಥಿತಾಃ ।
ಬದ್ಧಕೃಷ್ಣಾಜಿನಾಃ ಸರ್ವೇ ಧ್ವಜಿನೋ ಮುಂಜಮಾಲಿನಃ ॥೩೭॥

ಅವರೆಲ್ಲರೂ ಕೃಷ್ಣಾಜಿನವನ್ನು ಧರಿಸಿ, ತಮ್ಮ ಧ್ವಜಗಳನ್ನು ಎತ್ತಿ, ಮುಂಜಮಾಲೆಗಳನ್ನು ಹಾಕಿಕೊಂಡು ತಮ್ಮ ತಮ್ಮ ಸೈನ್ಯದ ಮುಂಭಾಗದಲ್ಲಿರುವುದು ಕಂಡು ಬರುತ್ತಿದ್ದಿತು.

ಕೃಷ್ಣಾ ದುರ್ಯೋಧನಸ್ಯಾರ್ಥೇ ಬ್ರಹ್ಮಲೋಕಾಯ ದೀಕ್ಷಿತಾಃ ।
ಸಮೃದ್ಧಾ ದಶ ವಾಹಿನ್ಯಃ ಪರಿಗೃಹ್ಯ ವ್ಯವಸ್ಥಿತಾಃ ॥೩೮॥

ದುರ್ಯೋಧನನ ಸಲುವಾಗಿಯೇ ಜನ್ಮವನ್ನು ಪಡೆದು, ಬ್ರಹ್ಮಲೋಕವನ್ನು ಸಂಪಾದಿಸಲು ದೀಕ್ಷೆಯನ್ನು ಹೊಂದಿ, ತಮ್ಮ ಸಮೃದ್ಧವಾದ ಹತ್ತು ಸೈನ್ಯಗಳನ್ನು ಸಂಗ್ರಹಿಸಿ ಅದರ ಮುಂಭಾಗದಲ್ಲಿ ನಿಂತರು.

ಏಕಾದಶೀ ಧಾರ್ತರಾಷ್ಟ್ರೀ ಕೌರವಾಣಾಂ ಮಹಾಚಮೂಃ ।
ಅಗ್ರತಃ ಸರ್ವಸೈನ್ಯಾನಾಂ ಯತ್ರ ಶಾಂತನವೋಽಗ್ರಣೀಃ ॥೩೯॥

ದುರ್ಯೋಧನನಿಗೆ ಸೇರಿದ ಕೌರವರ ದೊಡ್ಡಸೈನ್ಯವು ಹನ್ನೊಂದನೆಯದು. ಎಲ್ಲ ಸೈನ್ಯಗಳಿಗೂ ಮುಂದಿದ್ದ ಆ ಸೈನ್ಯದಲ್ಲಿ ಭೀಷ್ಮರು ಮುಂಭಾಗದಲ್ಲಿದ್ದರು.

ಶ್ವೇತೋಷ್ಣೀಷಂ ಶ್ವೇತಹಯಂ ಶ್ವೇತವರ್ಮಾಣಮಚ್ಯುತಮ್ ।
ಅಪಶ್ಯಾಮ ಮಹಾರಾಜ ಭೀಷ್ಮಂ ಚಂದ್ರಮಿವೋದಿತಮ್ ॥೪೦॥

ಎಲೈ ಮಹಾರಾಜನೇ, ಬಿಳಿಯ ರುಮಾಲನ್ನು ಧರಿಸಿ, ಬಿಳಿಯ ಕುದುರೆಗಳನ್ನು ಹೂಡಿದ ರಥದಲ್ಲಿ ಕುಳಿತು, ಬಿಳಿಯ ಕವಚವನ್ನು ಧರಿಸಿ ತಮ್ಮ ಗುಣಗಳಿಂದ ಚ್ಯುತರಾಗದ ಭೀಷ್ಮರನ್ನು ಉದಯಿಸಿದ ಚಂದ್ರನಂತೆ ನಾನು ನೋಡಿದೆನು.

ಹೇಮತಾಳಧ್ವಜಂ ಭೀಷ್ಮಂ ರಾಜತೇ ಸ್ಯಂದನೇ ಸ್ಥಿತಮ್ ।
ಶ್ವೇತಾಭ್ರ ಇವ ತೀಕ್ಷ್ಣಾಂಶುಂ ದದೃಶುಃ ಕುರುಪಾಂಡವಾಃ ॥೪೧॥

ರಜತಮಯವಾದ ರಥದಲ್ಲಿ ಸುವರ್ಣಮಯವಾದ ತಾಳಧ್ವಜವನ್ನು ಹೊಂದಿದ ಭೀಷ್ಮರನ್ನು ಬಿಳಿಯ ಮೋಡಗಳ ಮಧ್ಯದಲ್ಲಿರುವ ಸೂರ್ಯನಂತೆ ಕುರು-ಪಾಂಡವರು ನೋಡಿದರು.

ದೃಷ್ಟ್ವಾ ಚಮೂಮುಖೇ ಭೀಷ್ಮಂ ಸಮಕಂಪಂತ ಪಾಂಡವಾಃ ।
ಸೃಂಜಯಾಶ್ಚ ಮಹೇಷ್ವಾಸಾ ಧೃಷ್ಟದ್ಯುಮ್ನಪುರೋಗಮಾಃ ॥೪೨॥

ಸೇನೆಯ ಮುಂಭಾಗದಲ್ಲಿ ಭೀಷ್ಮರನ್ನು ನೋಡಿ ಪಾಂಡವರು, ಸೃಂಜಯರು, ಮಹಾಧನುರ್ಧಾರಿಗಳಾದ ಧೃಷ್ಟದ್ಯುಮ್ನ ಮೊದಲಾದವರು ನಡುಗಿದರು.

ಜೃಂಭಮಾಣಂ ಮಹಾಸಿಂಹಂ ದೃಷ್ಟ್ವಾ ಕ್ಷುದ್ರಮೃಗಾ ಯಥಾ ।
ಧೃಷ್ಟದ್ಯುಮ್ನಮುಖಾಃ ಸರ್ವೇ ಸಮುದ್ವಿಜಿರೇ ಮುಹುಃ ॥೪೩॥

ಬಾಯಿ ತೆರೆದು ಆಕಳಿಸುವ ದೊಡ್ಡ ಸಿಂಹವನ್ನು ನೋಡಿದ ಕ್ಷುದ್ರಮೃಗಗಳಂತೆ ಧೃಷ್ಟದ್ಯುಮ್ನ ಮೊದಲಾದವರೆಲ್ಲರೂ ಪುನಃ ಪುನಃ ಉದ್ವಿಗ್ನರಾದರು.

ಏತದಕ್ಷೌಹಿಣೀ ಶ್ರೀಮತ್ಪಾಹಿನ್ಯಸ್ತವ ಭಾರತ ।
ಪಾಂಡವಾನಾಂ ತಥಾ ಸಸ್ತ ಮಹಾಪುರುಷಪಾಲಿತಾ ॥೪೪॥

ಎಲೈ ಧಾರತನೇ, ಕಾಂತಿಯುಕ್ತವಾದ ಈ ಹನ್ನೊಂದು ಅಕ್ಷೌಹಿಣಿಯು ನಿನ್ನ ಸೈನ್ಯವು. ಪಾಂಡವರ ಸೈನ್ಯವಾದರೂ ಮಹಾಪುರುಷರಿಂದ ಪಾಲಿತವಾದ ಏಳು ಅಕ್ಷೌಹಿಣಿಗಳಾಗಿದ್ದವು.

ಊರ್ಜಸ್ವಮಕರವ್ಯೂಹೌ ಮಹಾಗ್ರಾಹಸಮಾಕುಲೌ ।
ಯುಗಾಂತೇ ಸಮುಪೇತೌ ದ್ವೌ ದೃಶ್ಯೇತೇ ಸಾಗರಾವಿವ ॥೪೫॥

ಊರ್ಜಸ್ವವಾದ ಮೊಸಳೆಗಳೆಂಬ ಸುಳಿಗಳಿಂದ ಕೂಡಿದ, ಮಹಾತಿಮಿಂಗಿಲಗಳಿಂದ ನಿಬಿಡವಾದ ಎರಡು ಸಾಗರಗಳು ಯುಗಾಂತದಲ್ಲಿ ಒಂದನ್ನೊಂದು ಸೇರಿದಂತೆ ಎರಡು ಸೈನ್ಯಗಳು ಕಂಡುಬಂದವು.

ನೈವ ಪೂರ್ವತರೋ ರಾಜನ್ ದೃಷ್ಟಪೂರ್ವೋ ನ ಚ ಶ್ರುತಃ ।
ಅನೀಕಾನಾಂ ಸಮೇತಾನಾಂ ಸಮವಾಯಸ್ತಥಾವಿಧಃ ॥೪೬॥

ಎಲೈ ರಾಜನೇ, ಅಂತಹ ಸೈನ್ಯದ ಸಮೂಹವನ್ನು ನಾವು ಹಿಂದೆ ನೋಡಿರಲಿಲ್ಲ, ಅಥವಾ ಕೇಳಿರಲಿಲ್ಲ. ಎರಡು ಸೈನ್ಯದ ಸಮಾಗಮವು ಆ ರೀತಿ ಇದ್ದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಷೋಡಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಕೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೇಳನೆಯ ಅಧ್ಯಾಯ

ಸಂಜಯನಿಂದ ಯುದ್ಧಕ್ಕೆ ಹೊರಟ ಕುರುಸೇನೆಯ ವರ್ಣನೆ.

ಸಂಜಯಃ

ಯಥಾ ಸ ಭಗವಾನ್ ವ್ಯಾಸಃ ಕೃಷ್ಣದ್ವೈಪಾಯನೋಽಬ್ರವೀತ್ ।
ತಥೈವ ಸಹಿತಾಃ ಸರ್ವೇ ಸಮಾಜಗ್ಮುರ್ಮಹೀಕ್ಷಿತಃ ॥೧॥

ಸಂಜಯ– ಭಗವಂತನಾದ ಕೃಷ್ಣ-ದ್ವೈಪಾಯನರಾದ ವ್ಯಾಸರು ಹೇಳಿದಂತೆಯೇ ಎಲ್ಲ ರಾಜರೂ ಒಟ್ಟುಗೂಡಿ ಬಂದರು.

ಮಘಾವಿಷಯಗಃ ಸೋಮಸ್ತದ್ದಿನಂ ಪ್ರತ್ಯಪದ್ಯತ ।
ದೀಪ್ಯಮಾನಾಶ್ಚ ಸಂಪೇತುರ್ದಿವಿ ಸಪ್ತ ಮಹಾಗ್ರಹಾಃ ॥೨॥

ಆ ದಿನ ಚಂದ್ರನು ಮಘಾ ನಕ್ಷತ್ರವನ್ನು ತಲುಪಿದನು. ಜ್ವಲಿಸುವ ಏಳು ಗ್ರಹಗಳು ಆಕಾಶದಲ್ಲಿ ಒಟ್ಟಿಗೆ ಸೇರಿದವು.

ದ್ವಿಧಾಭೂತ ಇವಾದಿತ್ಯ ಉದಯೇ ಪ್ರತ್ಯದೃಶ್ಯತ ।
ಜ್ವಲಂತ್ಯಾ ಶಿಖಯಾ ಭೂಯೋ ಭಾನುಮಾನುದಿತೋ ದಿವಿ ॥೩॥

ಸೂರ್ಯನು ಉದಯಿಸುವಾಗ ಎರಡು ಭಾಗವುಳ್ಳವನಾಗಿ ಕಂಡನು. ಸೂರ್ಯನು ಉದಯಿಸುವಾಗ ಅವನ ಸುತ್ತಲೂ ಜ್ವಲಿಸುವ ಶಿಖೆಗಳು ಕಂಡು ಬಂದವು.

ಪವಾಶಿರೇ ಚ ದೀಪ್ತಾಯಾಂ ದಿಶಿ ಗೋಮಾಯುವಾಯಸಾಃ ।
ಲಿಪ್ಸಮಾನಾಃ ಶರೀರಾಣಿ ಮಾಂಸಶೋಣಿತಭೋಜನಾಃ ॥೪॥

ಜ್ವಲಿಸುವ ದಕ್ಷಿಣ ದಿಕ್ಕಿನಲ್ಲಿ ಮಾಂಸ-ಶೋಣಿತ ಭೋಜನವನ್ನು ಪಡೆಯಲು ಶರೀರಗಳನ್ನು ಬಯಸುವ ನರಿಗಳು ಮತ್ತು ಕಾಗೆಗಳು ಗೋಳಿಟ್ಟವು.

ಅಹನ್ಯಹನಿ ಪಾರ್ಥಾನಾಂ ವೃದ್ಧಃ ಕುರುಪಿತಾಮಹಃ ।
ಭರದ್ವಾಜಾತ್ಮಜಶ್ಚೈವ ಪ್ರಾತರುತ್ಥಾಯ ಸಂಯತೌ ॥೫॥

ಜಯೋಽಸ್ತು ಪಾಂಡುಪುತ್ರಾಣಾಮಿತ್ಯೂಚತುರರಿಂದಮೌ ।
ಯುಯುಧಾತೇ ತವಾರ್ಥಾಯ ಯಥಾ ಸ ಸಮಯಃ ಕೃತಃ ॥೬॥

ಪ್ರತಿದಿವಸವೂ ಪಾರ್ಥರ ಮತ್ತು ಕುರುಗಳ ಪಿತಾಮಹರಾದ ಕುರುವೃದ್ಧರಾದ ಭೀಷ್ಮರೂ ಮತ್ತು ಭರದ್ವಾಜರ ಪುತ್ರರಾದ ದ್ರೋಣರೂ ಸಹ ಪ್ರಾತಃಕಾಲದಲ್ಲಿ ಎದ್ದು ಮೌನವಾಗಿ ಆ ಅರಿಂದಮರು ಪಾಂಡುಪುತ್ರರಿಗೆ ಜಯವಾಗಲಿ ಎಂದು ಹೇಳುತ್ತಿದ್ದರು. ಆದರೆ ಮೊದಲು ಮಾಡಿದ ನಿಬಂಧನೆಗಾಗಿ ನಿನ್ನ ಪರವಾಗಿ ಯುದ್ಧವನ್ನು ಮಾಡುತ್ತಿದ್ದರು.

ಸರ್ವಧರ್ಮವಿಶೇಷಜ್ಞಃ ಪಿತಾ ದೇವವ್ರತಸ್ತವ ।
ಸಮಾನೀಯ ಮಹೀಪಾಲಾನಿದಂ ವಚನಮಬ್ರವೀತ್ ॥೭॥

ಎಲ್ಲ ಧರ್ಮಗಳನ್ನು ವಿಶೇಷವಾಗಿ ತಿಳಿದಿದ್ದ ನಿನ್ನ ತಂದೆಯಾದ ದೇವವ್ರತರಾದ ಭೀಷ್ಮರು ಎಲ್ಲ ರಾಜರನ್ನೂ ಸಮೀಪಕ್ಕೆ ಕರೆದು ಹೀಗೆ ಮಾತನಾಡಿದರು.

ಇದಂ ವಃ ಕ್ಷತ್ರಿಯಾ ದ್ವಾರಂ ಸ್ವರ್ಗಾಯಾಪಾವೃತಂ ಮಹತ್ ।
ಗಚ್ಛಧ್ವಂ ತೇನ ಶಕ್ರಸ್ಯ ಬ್ರಹ್ಮಣಶ್ಚ ಸಲೋಕತಾಮ್ ॥೮॥

ಎಲೈ ಕ್ಷತ್ರಿಯರೇ, ಇದೋ ನಿಮಗೆ ಸ್ವರ್ಗದ ಈ ದೊಡ್ಡ ದ್ವಾರವು ತೆರೆದಿದೆ. ಆ ಮಾರ್ಗವಾಗಿ ನೀವು ಇಂದ್ರನ ಮತ್ತು ಬ್ರಹ್ಮದೇವರ ಲೋಕಕ್ಕೆ ಹೋಗುವವರಾಗಿ.

ಏಷ ವಃ ಶಾಶ್ವತಃ ಪಂಥಾ ಪೂರ್ವೈಃ ಪೂರ್ವತರೈರ್ಗತಃ ।
ಸಂಭಾವಯತ ಚಾತ್ಮಾನಮವ್ಯಗ್ರಮನಸೋ ಯುಧಿ ॥೯॥

ಇದು ನಿಮ್ಮ ಪೂರ್ವಜರೂ, ಅವರ ಪೂರ್ವಜರೂ ತುಳಿದ ಶಾಶ್ವತವಾದ ಮಾರ್ಗ. ಏಕಾಗ್ರವಾದ ಮನಸ್ಸಿನಿಂದ ಯುದ್ಧವನ್ನು ಮಾಡಿ ನಿಮ್ಮನ್ನು ನೀವು ಸನ್ನಾಸಿಸಿಕೊಳ್ಳಿ.

ನಾಭಾಗೋ ಹಿ ಯಯಾತಿಶ್ಚ ಮಾಂಧಾತಾ ನಹುಷೋ ನೃಗಃ ।
ಸಂಸಿದ್ಧಾಃ ಪರಮಂ ಸ್ಥಾನಂ ಗತಾಃ ಕರ್ಮಭಿರೀದೃಶೈಃ ॥೧೦॥

ನಾಭಾಗ, ಯಯಾತಿ, ಮಾಂಧಾತಾ, ನಹುಷ, ನೃಗ ಮೊದಲಾದವರು ಇಂತಹ ಕರ್ಮಗಳನ್ನು ಮಾಡಿ ಸಿದ್ಧಿಯನ್ನು ಪಡೆದು ಶ್ರೇಷ್ಠವಾದ ಸ್ಥಾನವನ್ನು ಹೊಂದಿದರು.

ಅಧರ್ಮಃ ಕ್ಷತ್ರಿಯಸ್ಯೈಷ ಯದ್ ವ್ಯಾಧಿಮರಣಂ ಗೃಹೇ ।
ಯದಾಜೌ ನಿಧನಂ ಯಾತಿ ಸೋಽಸ್ಯ ಧರ್ಮಃ ಸನಾತನಃ ॥೧೧॥

ಕ್ಷತ್ರಿಯನು ಮನೆಯಲ್ಲಿ ವ್ಯಾಧಿಯಿಂದ ಮರಣವನ್ನು ಹೊಂದುವುದು ಅಧರ್ಮ. ಯುದ್ಧದಲ್ಲಿ ಮರಣವನ್ನು ಹೊಂದುವುದು ಅವನಿಗೆ ಸನಾತನವಾದ ಧರ್ಮ.

ಏವಮುಕ್ತಾ ಮಹೀಪಾಲಾ ಭೀಷ್ಮೇಣ ಭರತರ್ಷಭ ।
ನಿರ್ಯಯುಃ ಸ್ವಾನ್ಯನೀಕಾನಿ ಶೋಭಯಂತೋ ರಥೋತ್ತಮೈಃ ॥೧೨॥

ಎಲೈ ಭರತರ್ಷಭನೇ, ಭೀಷ್ಮರಿಂದ ಹೀಗೆ ಹೇಳಲ್ಪಟ್ಟ ಆ ರಾಜರು ತಮ್ಮ ಶ್ರೇಷ್ಠವಾದ ರಥಗಳಿಂದ ತಮ್ಮ ತಮ್ಮ ಸೈನ್ಯಗಳಿಗೆ ಶೋಭೆಯನ್ನು ತಂದುಕೊಡುತ್ತಾ ಹೊರಟರು.

ಸ ತು ವೈಕರ್ತನಃ ಕರ್ಣಃ ಸಾಮಾತ್ಯಃ ಸಹ ಬಂಧುಭಿಃ ।
ನ್ಯಾಸಿತಃ ಸಮರೇ ಶಸ್ತ್ರಂ ಭೀಷ್ಮೇಣ ಭರತರ್ಷಭ ॥೧೩॥

ಎಲೈ ಭರತರ್ಷಭನೇ, ಆ ವೈಕರ್ತನನಾದ ಕರ್ಣನಾದರೂ ಅವನ ಅಮಾತ್ಯರ ಮತ್ತು ಬಂಧುಗಳ ಜೊತೆಯಲ್ಲಿ ಭೀಷ್ಮರಿಂದ ಶಸ್ತ್ರಸಂನ್ಯಾಸವನ್ನು ಮಾಡಿಸಲ್ಪಟ್ಟದ್ದನಷ್ಟೆ!

ಅಪೇತಕರ್ಣಾಃ ಪುತ್ರಾಸ್ತೇ ರಾಜಾನಶ್ಚೈವ ತಾವಕಾಃ ।
ನಿರ್ಯಯುಃ ಸಿಂಹನಾದೇನ ನಾದಯಂತೋ ದಶೋ ದಿಶ ॥೧೪॥

ಕರ್ಣನ ಜೊತೆಯಿಲ್ಲದ ನಿನ್ನ ಪುತ್ರರು ಮತ್ತು ನಿನ್ನ ಸಲುವಾಗಿ ಯುದ್ಧಮಾಡಲು ಬಂದ ರಾಜರು ತಮ್ಮ ಸಿಂಹನಾದದಿಂದ ಹತ್ತುದಿಕ್ಕುಗಳನ್ನು ಮೊಳಗಿಸುತ್ತಾ ಹೊರಟರು.

ಶ್ವೇತೈಶ್ಛತ್ರೈಃ ಪತಾಕಾಭಿರ್ಧ್ವಜವಾರಣವಾಜಿಭಿಃ ।
ತಾನ್ಯನೀಕಾನ್ಯಶೋಭಂತ ರಥೈರಥ ಪದಾತಿಭಿಃ ॥೧೫॥

ಶ್ವೇತಚ್ಛತ್ರಗಳಿಂದಲೂ, ಪತಾಕೆಗಳಿಂದಲೂ, ಧ್ವಜಗಳಿಂದಲೂ, ಗಜಗಳಿಂದಲೂ, ಅಶ್ವಗಳಿಂದಲೂ, ಪದಾತಿಗಳಿಂದಲೂ ಮತ್ತು ರಥಗಳಿಂದಲೂ ಆ ಸೈನ್ಯಗಳು ಬಹಳವಾಗಿ ಶೋಭಿಸಿದವು.

ಭೇರೀಪಣವಶಬ್ದೈಶ್ಚ ಪಟಹಾನಾಂ ಚ ನಿಸ್ವನೈಃ ।
ರಥನೇಮಿನಿನಾದೈಶ್ಚ ಬಭೂವಾಕುಲಿತಾ ಮಹೀ ॥೧೬॥

ಭೇರೀ, ಪಣವ ಶಬ್ದಗಳಿಂದಲೂ, ಪಟಹ ಶಬ್ದಗಳಿಂದಲೂ, ರಥದ ಗಾಲಿಗಳ ಶಬ್ದದಿಂದಲೂ ಭೂಮಿಯು ತುಂಬಿಹೋಯಿತು.

ಕಾಂಚನಾಂಗದಕೇಯೂರೈಃ ಕಾರ್ಮುಕೈಶ್ಚ ಮಹಾರಥಾಃ ।
ಭ್ರಾಜಮಾನಾ ವ್ಯದೃಶ್ಯಂತ ಜಂಗಮಾಃ ಪರ್ವತಾ ಇವ ॥೧೭॥

ಚಿನ್ನದ ಕಡಗ ಮತ್ತು ಭುಜಕೀರ್ತಿಗಳನ್ನು ಧರಿಸಿದ ಮತ್ತು ಧನುಸ್ಸುಗಳನ್ನು ಧರಿಸಿದ ಮಹಾರಥರು ಚಲಿಸುವ ಪರ್ವತಗಳಂತೆ ಕಾಂತಿಯುಕ್ತರಾಗಿ ಶೋಭಿಸಿದರು.

ತಾಳೇನ ಮಹತಾ ಭೀಷ್ಮಃ ಪಂಚತಾರೇಣ ಕೇತುನಾ ।
ವಿಮಲಾದಿತ್ಯಸಂಕಾಶಸ್ತಸ್ಥೌ ಕುರುಚಮೂಪತಿಃ ॥೧೮॥

ಕುರುಸೇನಾಪತಿಗಳಾದ ಭೀಷ್ಮರು ಐದು ನಕ್ಷತ್ರಗಳ ಚಿಹ್ನೆಯುಳ್ಳ ತಾಳಧ್ವಜದಿಂದ ಶೋಭಿತವಾದ ರಥದಲ್ಲಿ ನಿರ್ಮಲವಾದ ಆದಿತ್ಯನಿಗೆ ಸದೃಶವಾದ ಪ್ರಭೆಯಿಂದ ಶೋಭಿಸಿ ನಿಂತರು.

ಯೇ ತ್ವದೀಯಾ ಮಹೇಷ್ವಾಸಾ ರಾಜಾನೋ ಭರತರ್ಷಭ ।
ಅವರ್ತಂತ ಯಥಾದೇಶಂ ರಾಜನ್ ಶಾಂತನವಸ್ಯ ತೇ ॥೧೯॥

ಎಲೈ ರಾಜನೇ, ಭರತರ್ಷಭನೇ, ಮಹಾಧನುರ್ಧಾರಿಗಳಾದ ನಿನ್ನ ಪಕ್ಷದ ರಾಜರು ಶಂತನು ಪುತ್ರರಾದ ಭೀಷ್ಮರ ಆದೇಶದಂತೆ ಅವರವರ ಸ್ಥಳದಲ್ಲಿ ನಿಂತರು.

ಶತ್ರುಗಾವಸನಃ ಶೈಬ್ಯಃ ಸಹಿತಃ ಸರ್ವರಾಜಭಿಃ ।
ಯಯೌ ಮಾತಂಗರಾಜೇನ ರಾಜಾರ್ಹೇಣ ಪತಾಕಿನಾ ।
ಪದ್ಮವರ್ಣಸ್ಯ ನೀಕಾನಾಂ ಸರ್ವೇಷಾಮಗ್ರತಃ ಸ್ಥಿತಃ ॥೨೦॥

ಶತ್ರುಗುಹೆಯನ್ನು ಆಕ್ರಮಿಸಿ ಅಲ್ಲಿಯೇ ವಾಸ ಮಾಡುವ ಪದ್ಮವರ್ಣವುಳ್ಳ ಶೈಬ್ಯನು ಎಲ್ಲ ರಾಜರಿಂದ ಕೂಡಿಕೊಂಡು ರಾಜನಿಗೆ ಯೋಗ್ಯವಾದ ಪತಾಕೆಗಳಿಂದ ಕೂಡಿದ ಗಜರಾಜನ ಮೇಲೆ ಕುಳಿತು ಉಳಿದ ಎಲ್ಲರ ಮುಂದೆ ನಿಂತನು.

ಅಶ್ವತ್ಥಾಮಾ ಯಯೌ ತಸ್ಮಿನ್ ಸಿಂಹಲಾಂಗೂಲಕೇತನಃ ।
ಶ್ರುತಾಯುಶ್ಚಿತ್ರಸೇನಶ್ಚ ಪುರುಮಿತ್ರೋ ವಿವಿಂಶತಿಃ ॥೨೧॥

ಶಲ್ಯೋ ಭೂರಿಶ್ರವಾಶ್ಚೈವ ವಿಕರ್ಣಶ್ಚ ಮಹಾರಥಃ ।
ಏತೇ ಸಪ್ತ ಮಹೇಷ್ವಾಸಾ ದ್ರೋಣಪುತ್ರಪುರೋಗಮಾಃ ।
ಸ್ಕಂದನೈರ್ವರವರ್ಣಾಭೈರ್ಭಾಸ್ಕಾಸನ್ ಪುರಪರಾಃ ॥೨೨॥

ಸಿಂಹಲಾಂಗೂಲ ಧ್ವಜವುಳ್ಳ ಅಶ್ವತ್ಥಾಮರು ಸೇನಾಮುಖದಲ್ಲಿ ಹೊರಟರು. ಶ್ರುತಾಯು, ಚಿತ್ರಸೇನ, ಪುರುಮಿತ್ರ, ವಿವಿಂಶತಿ, ಶಲ್ಯ, ಭೂರಿಶ್ರವ ಮತ್ತು ಮಹಾರಥನಾದ ವಿಕರ್ಣ ಈ ಏಳು ಮಹಾಧನುರ್ಧಾರಿಗಳು ಅಶ್ವತ್ಥಾಮರನ್ನು ಮುಂದೆ ಮಾಡಿಕೊಂಡು ಶ್ರೇಷ್ಠವಾದ ಕಾಂತಿಯುಳ್ಳ ತಮ್ಮ ರಥಗಳಲ್ಲಿ ಭೀಷ್ಮರ ಮುಂದೆ ನಡೆದರು.

ತೇಷಾಮಪಿ ಮಹೋತ್ಸೇಧಾಃ ಶೋಭಯಂತೋ ರಥೋತ್ತಮಾನ್ ।
ಭ್ರಾಜಮಾನಾ ವ್ಯದೃಶ್ಯಂತ ಜಾಂಬೂನದಮಯಾ ಧ್ವಜಾಃ ॥೨೩॥

ಅವರ ರಥಗಳಲ್ಲಿಯೂ ಆ ಶ್ರೇಷ್ಠವಾದ ರಥಗಳಿಗೆ ಶೋಭೆಯನ್ನು ತಂದುಕೊಡುತ್ತಿದ್ದ ಸುವರ್ಣ ಅಲಂಕೃತವಾದ, ಎತ್ತರವಾದ, ಧ್ವಜಗಳು ಶೋಭಿಸುತ್ತಿದ್ದುದು ಕಂಡುಬರುತ್ತಿದ್ದವು.

ಜಾಂಬೂನದಮಯೀ ವೇದಿಃ ಕಮಂಡಲುವಿಭೂಷಿತಾ ।
ಕೇತುರಾಚಾರ್ಯಮುಖ್ಯಸ್ಯ ದ್ರೋಣಸ್ಯ ಧನುಷಾ ಸಹ ॥೨೪॥

ಸುವರ್ಣಮಯವಾದ ವೇದಿ ಮತ್ತು ಕಮಂಡಲುಗಳಿಂದ ಭೂಷಿತವಾದ ಧನುಸ್ಸಿನಿಂದಲೂ ಭೂಷಿತವಾದ ಆಚಾರ್ಯಮುಖ್ಯರಾದ ದ್ರೋಣರ ರಥದ ಧ್ವಜವು ಶೋಭಿಸಿತು.

ಅನೇಕಶತಸಾಹಸ್ರಮನೀಕಮನುಕರ್ಷತಃ ।
ಮಹಾನ್ ದುರ್ಯೋಧನಸ್ಯಾಸೀನ್ನಾಗೋ ಮಣಿಮಯೋ ಧ್ವಜಃ ॥೨೫॥

ಅನೇಕ ಲಕ್ಷ ಸೈನ್ಯವನ್ನು ಎಳೆದುಕೊಂಡು ಸಾಗುತ್ತಿದ್ದ ದುರ್ಯೋಧನನಿಗೆ ಮಣಿಮಯವಾದ ದೊಡ್ಡ ಸರ್ಪಧ್ವಜವಿದ್ದಿತು.

ತಸ್ಯ ಪೌರವಕಾಳಿಂಗೌ ಕಾಂಬೋಜಶ್ಚ ಸುದಕ್ಷಿಣಃ ।
ಕ್ಷೇಮಧನ್ವಾ ಸುಮಿತ್ರಶ್ಚ ತಸ್ಥುಃ ಪ್ರಮುಖತೋ ರಥಾಃ ॥೨೬॥

ಪೌರವ, ಕಾಳಿಂಗರಾಜರು, ಕಾಂಬೋಜರಾಜನಾದ ಸುದಕ್ಷಿಣ, ಕ್ಷೇಮಧನ್ವಾ ಮತ್ತು ಸುಮಿತ್ರ ಈ ಮಹಾರಥರು ಅವನ ಮುಂದೆ ನಿಂತರು.

ಸ್ಕಂದಸೇನ ಮಹಾರ್ಹೇಣ ಕೇತುನಾ ವೃಷಭೇಣ ಚ ।
ಪ್ರಕರ್ಷನ್ನೇವ ಸೇನಾಗ್ರಂ ಮಗಧಸ್ಯ ನೃಪೋ ಯಯೌ ॥೨೭॥

ಮಗಧ ದೇಶದ ರಾಜನು ಮಹಾಬೆಲೆಬಾಳುವ ವೃಷಭಧ್ವಜದಿಂದ ಕೂಡಿದ ರಥವುಳ್ಳವನಾಗಿ ಸೇನೆಯ ಮುಂಭಾಗವನ್ನು ಎಳೆದುಕೊಂಡು ಮುಂದೆ ನಡೆದನು.

ತದಂಗಪತಿನಾ ಗುಪ್ತಂ ಕೃಪೇಣ ಚ ಮಹಾತ್ಮನಾ ।
ತಾರದಾಭ್ರಚಯಪ್ರಖ್ಯಂ ಪ್ರಾಚ್ಯಾನಾಮಭವದ್ ಬಲಮ್ ॥೨೮॥

ಅಂಗಪತಿಯಿಂದಲೂ ಮಹಾತ್ಮರಾದ ಕೃಪರಿಂದಲೂ ರಕ್ಷಿತವಾದ ಪೂರ್ವದಿಕ್ಕಿನ ರಾಜರುಗಳ ಸೈನ್ಯವು ಶರತ್ಕಾಲದ ಮೋಡಗಳ ಕಾಂತಿಯನ್ನು ಹೊಂದಿದ್ದಿತು.

ಅನೀಕಪ್ರಮುಖೇ ತಿಷ್ಠನ್ ವರಾಹೇಣ ಮಹಾಯತಾಃ ।
ಶುಶುಭೇ ಕೇತುಮುಖ್ಯೇನ ರಾಜತೇನ ಜಯದ್ರಥಃ ॥೨೯॥

ಸೇನೆಯ ಮುಂಭಾಗದಲ್ಲಿ ರಜತಮಯವಾದ ವರಾಹಧ್ವಜವುಳ್ಳ ಮಹಾಕೀರ್ತಿವಂತನಾದ ಜಯದ್ರಥನು ಶೋಭಿಸಿದನು.

ತತಂ ರಥಸಹಸ್ರಾಣಾಂ ತಸ್ಯಾಸನ್ ವತವರ್ತಿನಃ ।
ಅಷ್ಟೌ ನಾಗಸಹಸ್ರಾಣಿ ಸಾದಿನಾಮಯುತಾನಿ ಷಟ್ ॥೩೦॥

ಅವನ ವತದಲ್ಲಿ ಒಂದು ಲಕ್ಷ ರಥಗಳು, ಎಂಟು ಸಹಸ್ರ ಗಜಗಳು ಮತ್ತು ಅರವತ್ತು ಸಾವಿರ ಅಶ್ವಾರೋಹಿಗಳು ಇದ್ದರು.

ತತ್ಸಿಂಧುಪತಿನಾ ರಾಜನ್ ಪಾಲಿತಂ ಧ್ವಜಿನೀಮುಖಮ್ ।
ಅನಂತರಥನಾಗಾತ್ವಮತೋಭಿ ಮಹದ್ ಬಲಮ್ ॥೩೧॥

ಎಲೈ ರಾಜನೇ, ಸಿಂಧುಪತಿಯಾದ ಜಯದ್ರಥನಿಂದ ರಕ್ಷಿತವಾದ ಅನಂತರಥನಾಗಾತ್ವವುಳ್ಳ ಆ ದೊಡ್ಡ ಸೈನ್ಯವು ಶೋಭಿಸಿತು.

ಷಷ್ಟ್ಯಾ ರಥಸಹಸ್ರೈಸ್ತು ನಾಗಾನಾಮಯುತೇನ ಚ ।
ಪತಿಃ ಸರ್ವಕಳಿಂಗಾನಾಂ ಯಯೌ ಕೇತುಮತಾ ಸಹ ॥೩೨॥

ಸರ್ವಕಳಿಂಗಾಧಿಪತಿಯು ಅರವತ್ತು ಸಾವಿರ ರಥಗಳಿಂದಲೂ, ಹತ್ತು ಸಾವಿರ ಆನೆಗಳಿಂದಲೂ ಕೂಡಿದವನಾಗಿ ಕೇತುಮಾನ್ ರಾಜನ ಜೊತೆಯಲ್ಲಿ ಹೊರಟನು.

ತಸ್ಯ ಪರ್ವತಸಂಕಾಶಾ ವ್ಯರೋಚಂತ ಮಹಾಗಜಾಃ ।
ಯಂತ್ರತೋಮರತೂಣೀರೈಃ ಪತಾಕಾಭಿಶ್ಚ ಶೋಭಿತಾಃ ॥೩೩॥

ಯಂತ್ರ, ತೋಮರ, ಬತ್ತಳಿಕೆಗಳು ಮತ್ತು ಪತಾಕೆಗಳಿಂದ ಶೋಭಿಸುವ ಪರ್ವತದಂತಿದ್ದ ಅವನ ಮಹಾಗಜಗಳು ವಿಶೇಷವಾಗಿ ಶೋಭಿಸಿದವು.

ಶುಶುಭೇ ಕೇತುಮುಖ್ಯೇನ ಪಾದಪೇನ ಕಳಿಂಗಪಃ ।
ಶ್ವೇತಚ್ಛತ್ರೇಣ ನಿಷ್ಕೇಣ ಚಾಮರವ್ಯಜನೇನ ಚ ॥೩೪॥

ಕಳಿಂಗಾಧಿಪತಿಯು ಶ್ರೇಷ್ಠವಾದ ವೃಕ್ಷದ್ವಜದಿಂದಲೂ, ಶ್ವೇತಚ್ಛತ್ರದಿಂದಲೂ, ನಿಷ್ಕಚಾಮರ ವ್ಯಜನಗಳಿಂದಲೂ ಶೋಭಿಸಿದನು.

ಕೇತುಮಾನಪಿ ಮಾತಂಗಂ ವಿಚಿತ್ರಪರಮಾಂಕುಶಮ್ ।
ಆಸ್ಥಿತಃ ಸಮರೇ ರಾಜನ್ ಮೇಘಸ್ಥ ಇವ ಭಾನುಮಾನ್ ॥೩೫॥

ಎಲೈ ರಾಜನೇ, ಕೇತುಮಾನ್ ರಾಜನೂ ಸಹ ವಿಚಿತ್ರವೂ ಮತ್ತು ಶ್ರೇಷ್ಠವೂ ಆದ ಅಂಕುಶವನ್ನು ಹೊಂದಿದ್ದ ಗಜವನ್ನು ಏರಿ ಯುದ್ಧದಲ್ಲಿ ಮೋಡದ ಮಧ್ಯದಲ್ಲಿದ್ದ ಆದಿತ್ಯನಂತೆ ತೋರಿದನು.

ತೇಜಸಾ ದೀಪ್ಯಮಾನಸ್ತು ವಾರಣೋತ್ತಮಮಾಸ್ಥಿತಃ ।
ಭಗದತ್ತೋ ಯಯೌ ರಾಜಾ ಯಥಾ ವಜ್ರಧರಸ್ತಥಾ ॥೩೬॥

ಶ್ರೇಷ್ಠವಾದ ಗಜವನ್ನು ಏರಿ ತನ್ನ ಕಾಂತಿಯಿಂದ ಬೆಳಗುತ್ತಾ ಭಗದತ್ತ ರಾಜನು ವಜ್ರಧರನಾದ ಇಂದ್ರನಂತೆ ಯುದ್ಧಕ್ಕೆ ಹೊರಟನು.

ಗಜಸ್ಕಂಧಗತಾವಾಸ್ತಾಂ ಭಗದತ್ತೇನ ಸಮ್ಮಿತೌ ।
ವಿಂದಾನುವಿಂದಾವಾವಂತ್ಯೌ ಕೇತುಮಂತಮನುವ್ರತೌ ॥೩೭॥

ಪರಾಕ್ರಮದಲ್ಲಿ ಭಗದತ್ತನಿಗೆ ಸಮರಾದ ಅವಂತಿದೇಶದ ವಿಂದಾನುವಿಂದರು ಆನೆಯ ಸ್ಕಂಧದ ಮೇಲೆ ಕುಳಿತು ಕೇತುಮಾನ್ ರಾಜನನ್ನು ಹಿಂಬಾಲಿಸಿದರು.

ಸ ರಥಾನೀಕಾನ್ ವ್ಯೂಹೋ ಹಸ್ತ್ಯಂಗೋತ್ತಮಶೀರ್ಷವಾನ್ ।
ವಾಜಿಪಕ್ಷಃ ಪತನ್ನುಗ್ರಃ ಪ್ರಾಹರತ್ ಸರ್ವತೋಮುಖಃ ॥೩೮॥

ದ್ರೋಣೇನ ವಿಹಿತೋ ರಾಜನ್ ರಾಜ್ಞಾ ಶಾಂತನವೇನ ಚ ।
ತಥೈವಾಚಾರ್ಯಪುತ್ರೇಣ ಬಾಹ್ಲೀಕೇನ ಕೃಪೇಣ ಚ ॥೩೯॥

ಎಲೈ ರಾಜನೇ, ದ್ರೋಣರಿಂದಲೂ, ಶಂತನುಪುತ್ರರಾದ ಭೀಷ್ಮರಿಂದಲೂ, ಆಚಾರ್ಯಪುತ್ರರಾದ ಅಶ್ವತ್ಥಾಮರಿಂದಲೂ, ಬಾಹ್ಲಿಕ ಮತ್ತು ಕೃಪರಿಂದಲೂ ರಕ್ಷಿಸಲ್ಪಟ್ಟ, ರಥಸಮೂಹಗಳಿಂದ ಕೂಡಿದ, ಗಜಗಳೆಂಬ ಶ್ರೇಷ್ಠವಾದ ಶಿರಸ್ಸಿನಿಂದ ಕೂಡಿದ, ಅಶ್ವಗಳೆಂಬ ರೆಕ್ಕೆಗಳಿಂದ ಕೂಡಿದ, ಭಯಂಕರವಾದ ಪಕ್ಷಿಯು (ಪಕ್ಷಿವ್ಯೂಹವು) ಹಾರುತ್ತಾ ಎಲ್ಲ ಕಡೆಗಳಿಂದಲೂ ಪಾಂಡವರ ಸೇನೆಯ ಮೇಲೆ ಪ್ರಹಾರವನ್ನು ಮಾಡಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಸಪ್ತದಶೋऽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೆಂಟನೆಯ ಅಧ್ಯಾಯ

ಸಂಜಯನಿಂದ ಕುರುಸೇನೆಯ ಯುದ್ಧಾರಂಭದ ವರ್ಣನೆ.

ಸಂಜಯಃ

ತತೋ ಮುಹೂರ್ತಾತ್ ತುಮುಲಃ ಶಬ್ದೋ ಹೃದಯಕಂಪನಃ ।
ಅಶ್ರೂಯತ ಮಹಾರಾಜ ಯೋಧಾನಾಂ ಪ್ರಯುಯುತ್ಸತಾಮ್ ॥೧॥

ಸಂಜಯ– ಅನಂತರ ಒಂದು ಮುಹೂರ್ತದಲ್ಲಿ ಎದೆಯನ್ನು ನಡುಗಿಸುವ ತೀವ್ರವಾದ ಶಬ್ದವು ಉಂಟಾಯಿತು. ಎಲೈ ಮಹಾರಾಜನೇ, ಪರಸ್ಪರವಾಗಿ ಯುದ್ಧವನ್ನು ಮಾಡಲು ಬಯಸಿದ ಯೋಧರ ಮಹಾಶಬ್ದವು ಕೇಳಿಬಂದಿತು.

ಶಂಖದುಂದುಭಿನಿರ್ಘೋಷೈರ್ವಾರಣಾನಾಂ ಚ ಬೃಂಹಿತೈಃ ।
ರಥಾನಾಂ ನೇಮಿಘೋಷೈಶ್ಚ ದೀರ್ಯತೀವ ವಸುಂಧರಾ ॥೨॥

ಶಂಖ-ದುಂದುಭಿಗಳ ದೊಡ್ಡ ಘೋಷದಿಂದಲೂ, ಗಜಗಳ ಬೃಂಹಿತಗಳಿಂದಲೂ, ರಥಗಳ ನೇಮಿಗಳ ಘೋಷದಿಂದಲೂ ಭೂಮಿಯು ಬಿರಿದು ಹೋಗುವಂತೆ ತೋರಿತು.

ಹಯಾನಾಂ ಹೇಷಮಾಣಾನಾಂ ಯೋಧಾನಾಂ ತತ್ರ ಗರ್ಜತಾಮ್ ।
ಕ್ಷಣೇನ ಖಂ ದಿಶಶ್ಚೈವ ಶಬ್ದೇನಾಪೂರಿತಂ ತದಾ ॥೩॥

ಆಗ ಕುದುರೆಗಳ ಹೇಷಾರವದಿಂದಲೂ, ಯೋಧರ ಗರ್ಜನೆಗಳಿಂದಲೂ ಅಲ್ಲಿ ಒಂದು ಕ್ಷಣದಲ್ಲಿ ಆಕಾಶ ಮತ್ತು ದಿಕ್ಕುಗಳು ಶಬ್ದಗಳಿಂದ ತುಂಬಿಹೋದವು.

ಪುತ್ರಾಣಾಂ ತವ ದುರ್ಧರ್ಷ ಪಾಂಡವಾನಾಂ ತಥೈವ ಚ ।
ಸಮಕಂಪಂತ ಸೈನ್ಯಾನಿ ಪರಸ್ಪರಸಮಾಗಮೇ ॥೪॥

ಎಲೈ ದುರ್ಧರ್ಷನೇ, ಪರಸ್ಪರ ಸಮಾಗಮ ಉಂಟಾದಾಗ ನಿನ್ನ ಮಕ್ಕಳ ಸೈನ್ಯಗಳು ಹಾಗೆಯೇ ಪಾಂಡವರ ಸೈನ್ಯಗಳು ನಡುಗಿದವು.

ತತ್ರ ನಾಗಾ ರಥಾಶ್ಚೈವ ಜಾಂಬೂನದವಿಭೂಷಿತಾಃ ।
ಭ್ರಾಜಮಾನಾ ವ್ಯದೃಶ್ಯಂತ ಮೇಘಾ ಇವ ಸವಿದ್ಯುತಃ ॥೫॥

ಅಲ್ಲಿ ಸುವರ್ಣಾಲಂಕೃತವಾದ ಗಜಗಳು ಮತ್ತು ರಥಗಳು ಕಂಗೊಳಿಸುತ್ತಾ, ಮಿಂಚಿನಿಂದ ಕೂಡಿದ ಮೋಡಗಳಂತೆ ಕಂಡು ಬಂದವು.

ಧ್ವಜಾ ಬಹುವಿಧಾಕಾರಾಸ್ತಾವಕಾನಾಂ ನರಾಧಿಪ ।
ಕಾಂಚನಾಂಗದಿನೋ ರೇಜುರ್ಜ್ವಲಿತಾ ಇವ ಪಾವಕಾಃ ॥೬॥

ಎಲೈ ನರಾಧಿಪನೇ, ನಿನ್ನ ಸೈನ್ಯದ ಸುವರ್ಣಮಯವಾದ ಅಂಗದಾದಿಗಳಿಂದ ಅಲಂಕೃತವಾದ ಬಹುವಿಧವಾದ ಆಕಾರವುಳ್ಳ ಧ್ವಜಗಳು ಜ್ವಲಿಸುವ ಅಗ್ನಿಯಂತೆ ಪ್ರಕಾಶಿಸಿದವು.

ಸ್ವೇಷಾಂ ಚೈವ ಪರೇಷಾಂ ಚ ಸಮದೃಶ್ಯಂತ ಭಾರತ ।
ಮಹೇಂದ್ರಕೇತವಃ ಶುಭ್ರಾ ಮಹೇಂದ್ರಸದನೇಷ್ವಿವ ॥೭॥

ಎಲೈ ಭಾರತನೇ, ನಿನ್ನ ಮತ್ತು ಪರರ ಶುಭ್ರವಾದ ಧ್ವಜಗಳು ಮಹೇಂದ್ರಸದನದಲ್ಲಿನ ಮಹೇಂದ್ರ ಧ್ವಜಗಳಂತೆ ಕಂಡುಬಂದವು.

ಕಾಂಚನೈಃ ಕವಚೈರ್ವೀರಾ ಜ್ವಲನಾರ್ಕಸಮಪ್ರಭೈಃ ।
ಸನ್ನದ್ಧಾಃ ಪ್ರತ್ಯದೃಶ್ಯಂತ ಗ್ರಹಾಃ ಪ್ರಜ್ವಲಿತಾ ಇವ ॥೮॥

ಜ್ವಲಿಸುವ ಅಗ್ನಿಗೆ ಸಮಾನವಾದ ಕಾಂತಿಯುಳ್ಳ, ಸುವರ್ಣಮಯವಾದ ಕವಚಗಳನ್ನು ಧರಿಸಿದ ವೀರರು ಯುದ್ಧಸನ್ನದ್ಧರಾಗಿ ಜ್ವಲಿಸುವ ಗ್ರಹದಂತಿರುವುದು ಕಂಡುಬಂದಿತು.

ಉದ್ಯತೈರಾಯುಧೈಶ್ಚಿತ್ರೈಸ್ತಲಬದ್ಧಾಃ ಪತಾಕಿನಃ ।
ಋಷಭಾಕ್ಷಾ ಮಹೇಷ್ವಾಸಾಶ್ಚಮೂಮುಖಗತಾ ಬಭುಃ ॥೯॥

ಕೈಗಳಲ್ಲಿ ಆಯುಧವನ್ನು ಎತ್ತಿಹಿಡಿದು, ತಳರಕ್ಷಣೆಯನ್ನು (Gloves) ಧರಿಸಿ, ರಥದಲ್ಲಿ ಪತಾಕೆಗಳನ್ನು ಹೊಂದಿದ ಋಷಭಾಕ್ಷರಾದ ಮಹಾಧನುರ್ಧಾರಿಗಳು ಸೇನೆಯ ಮುಂಭಾಗದಲ್ಲಿ ಶೋಭಿಸಿದರು.

ಪೃಷ್ಠಗೋಪಾಸ್ತು ಭೀಷ್ಮಸ್ಯ ಪುತ್ರಾಸ್ತವ ನರಾಧಿಪ ।
ದುಃಶಾಸನೋ ದುರ್ವಿಷಹೋ ದುರ್ಮುಖೋ ದುಃಸಹಸ್ತಥಾ ॥೧೦॥

ವಿವಿಂಶತಿಶ್ಚಿತ್ರಸೇನೋ ವಿಕರ್ಣಶ್ಚ ಮಹಾರಥಃ ।
ಸತ್ಯವ್ರತಃ ಪುರುಮಿತ್ರೋ ಜಯೋ ಭೂರಿಶ್ರವಾಃ ಶಲಃ ॥೧೧॥

ಎಲೈ ನರಾಧಿಪನೇ, ನಿನ್ನ ಮಕ್ಕಳಾದ ದುಃಶಾಸನ, ದುರ್ವಿಷಹ, ದುರ್ಮುಖ, ದುಃಸಹ, ವಿವಿಂಶತಿ, ಚಿತ್ರಸೇನ, ಮಹಾರಥನಾದ ವಿಕರ್ಣ ಮತ್ತು ಸತ್ಯವ್ರತ, ಪುರುಮಿತ್ರ, ಜಯ, ಭೂರಿಶ್ರವ, ಶಲ ಇವರು ಭೀಷ್ಮರನ್ನು ಹಿಂಭಾಗದಿಂದ ರಕ್ಷಿಸಿದರು.

ರಥಾ ವಿಂಶತಿಸಾಹಸ್ರಾಸ್ತಥೈಷಾಮನುಯಾಯಿನಃ ।
ಅಭೀಷಾಹಾಃ ಶೂರಸೇನಾಃ ಶಿಬಯೋಽಥ ವಸಾತಯಃ ॥೧೨॥

ಸಾಲ್ವಾ ಮತ್ಸ್ಯಾಸ್ತಥಾಂಬಷ್ಠಾಸ್ತ್ರಿಗರ್ತಾಃ ಕೇಕಯಾಸ್ತಥಾ ।
ಸೌವೀರಾಃ ಕಿತವಾಃ ಪ್ರಾಚ್ಯಾಃ ಪ್ರತೀಚ್ಯೋದೀಚ್ಯಮಾಲವಾಃ ॥೧೩॥

ದ್ವಾದಶೈತೇ ಜನಪದಾಃ ಸರ್ವೇ ಶೂರಾಸ್ತನುತ್ಯಜಃ ।
ಮಹತಾ ರಥವಂಶೇನ ತೇಽಭ್ಯರಕ್ಷನ್ ಪಿತಾಮಹಮ್ ॥೧೪॥

ಇಪ್ಪತ್ತು ಸಹಸ್ರ ರಥಗಳು, ಹಾಗೆಯೇ ಆ ರಥಗಳ ಹಿಂದೆ ಹೋಗುವ ಅಭೀಷಾಹರು, ಶೂರಸೇನರು, ಶಿಬಿಗಳು, ವಸಾತಿಗಳು, ಸಾಲ್ವರು, ಮತ್ಸ್ಯರು, ಅಂಬಷ್ಠರು, ತ್ರಿಗರ್ತರು, ಕೇಕೆಯರು, ಸೌವೀರರು, ಪೂರ್ವದಿಕ್ಕಿನ ಯೋಧರು, ಪಶ್ಚಿಮ ಮತ್ತು ಉತ್ತರದಿಕ್ಕಿನ ಮಾಲವರು, ಪ್ರಾಣವನ್ನು ಬಿಡಲು ಸಿದ್ಧರಾಗಿದ್ದ ಈ ಹನ್ನೆರಡು ದೇಶಗಳ ಎಲ್ಲಾ ಶೂರರು ದೊಡ್ಡ ರಥ ಸಮೂಹದಿಂದ ಪಿತಾಮಹರಾದ ಭೀಷ್ಮರನ್ನು ರಕ್ಷಿಸಿದರು.

ಅನೀಕಂ ದಶಸಾಹಸ್ರಂ ಕುಂಜರಾಣಾಂ ತರಸ್ವಿನಾಮ್ ।
ಮಾಗಧೋ ಯೇನ (ಯತ) ನೃಪತಿಸ್ತದ್ ರಥಾನೀಕಮನ್ವಯಾತ್ ॥

ವೇಗಶಾಲಿಗಳಾದ ಹತ್ತುಸಹಸ್ರ ಗಜಗಳ ಸೇನೆಯನ್ನು ಹೊಂದಿದ ಮಗಧ ದೇಶದ ರಾಜನು ಆ ರಥಗಳ ಸಮೂಹವನ್ನು ಹಿಂಬಾಲಿಸಿದನು.

ರಥಾನಾಂ ಚಕ್ರರಕ್ಷಾಶ್ಚ ಪಾದರಕ್ಷಾಶ್ಚ ದಂತಿನಾಮ್ ।
ಅಭೂವನ್ ವಾಹಿನೀಮಧ್ಯೇ ಶತಾನಾಮಯುತಾನಿ ಷಟ್ ॥೧೬॥

ರಥಗಳ ಚಕ್ರರಕ್ಷಕರೂ, ಧ್ವಜಗಳ ಪಾದರಕ್ಷಕರೂ ಆ ಸೇನೆಯ ಮಧ್ಯದಲ್ಲಿ ಅರವತ್ತು ಲಕ್ಷ ಜನರಿದ್ದರು.

ಪಾದಾತಾಶ್ಚಾಗ್ರತೋಽಗಚ್ಛನ್ ಧನುಶ್ಚರ್ಮಾಸಿಪಾಣಯಃ ।
ಅನೇಕಶತಸಾಹಸ್ರಾ ನಖರಪ್ರಾಸಯೋಧಿನಃ ॥೧೭॥

ನಖರಪ್ರಾಸಗಳಿಂದ ಯುದ್ಧವನ್ನು ಮಾಡುವ ಅನೇಕ ಲಕ್ಷ ಯೋಧರು ಧನುಸ್ಸು, ಖಡ್ಗ-ಗುರಾಣಿಗಳನ್ನು ಹಿಡಿದ ಅನೇಕ ಪದಾತಿಗಳು ಮುಂಭಾಗದಲ್ಲಿ ನಡೆದರು.

ಅಕ್ಷೋಹಿಣ್ಯೋ ದಶೈಕಾ ಚ ತವ ಪುತ್ರಸ್ಯ ಭಾರತ ।
ಅದೃಶ್ಯಂತ ಮಹಾರಾಜ ಗಂಗೇವ ಯಮುನಾಂತರೇ ॥೧೮॥

ಎಲೈ ಭಾರತನೇ, ಮಹಾರಾಜನೇ, ನಿನ್ನ ಮಗನ ಹನ್ನೊಂದು ಅಕ್ಷೋಹಿಣಿ ಸೈನ್ಯವು ಯಮುನೆಯ ಜೊತೆಯಲ್ಲಿ ಸೇರಿದ ಗಂಗೆಯಂತೆ ಕಂಡುಬಂದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಅಷ್ಟಾದಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತೊಂಬತ್ತನೆಯ ಅಧ್ಯಾಯ

ಯುದ್ಧಕ್ಕಾಗಿ ಪಾಂಡವಸೇನೆಯು ಸಜ್ಜಾದ ರೀತಿಯ ಕಥನ.

ಧೃತರಾಷ್ಟ್ರಃ

ಅಕ್ಷೋಹಿಣ್ಯೋ ದಶೈಕಾಂ ಚ ವ್ಯೂಢಾಂ ದೃಷ್ಟ್ವಾ ಯುಧಿಷ್ಠಿರಃ ।
ಕಥಮಲ್ಪೇನ ಸೈನ್ಯೇನ ಪ್ರತ್ಯವ್ಯೂಹತ ಪಾಂಡವಃ ॥೧॥

ಧೃತರಾಷ್ಟ್ರ- ಪಾಂಡವನಾದ ಯುಧಿಷ್ಠಿರನು ನಮ್ಮ ಹನ್ನೊಂದು ಅಕ್ಷೋಹಿಣಿ ಸೈನ್ಯವು ವ್ಯೂಹಗೊಂಡಿದ್ದನ್ನು ನೋಡಿ ತನ್ನ ಅಲ್ಪಸೈನ್ಯದಿಂದ ಹೇಗೆ ಪ್ರತಿವ್ಯೂಹವನ್ನು ರಚಿಸಿದನು?

ಯೋ ವೇದ ಮಾನುಷಂ ವ್ಯೂಹಂ ದೈವಂ ಗಾಂಧರ್ವಮಾಸುರಮ್ ।
ಕಥಂ ಭೀಷ್ಮಂ ಸ ಕೌಂತೇಯಃ ಪ್ರತ್ಯವ್ಯೂಹತ ಪಾಂಡವಃ ॥೨॥

ಕುಂತೀಪುತ್ರನಾದ, ಪಾಂಡವನಾದ ಧರ್ಮರಾಜನು ಮನುಷ್ಯರ, ದೇವತೆಗಳ, ಗಂಧರ್ವರ, ಅಸುರರ ವ್ಯೂಹಗಳನ್ನು ತಿಳಿದ ಭೀಷ್ಮರಿಗೆ ಎದುರಾಗಿ ಹೇಗೆ ವ್ಯೂಹವನ್ನು ರಚಿಸಿದನು?

ಸಂಜಯಃ

ಧಾರ್ತರಾಷ್ಟ್ರಾಣ್ಯನೀಕಾನಿ ದೃಷ್ಟ್ವಾ ವ್ಯೂಢಾನಿ ಪಾಂಡವಃ ।
ಅಭ್ಯಭಾಷತ ಧರ್ಮಾತ್ಮಾ ಧರ್ಮರಾಜೋ ಧನಂಜಯಮ್ ॥೩॥

ಸಂಜಯ– ಧರ್ಮಾತ್ಮನಾದ, ಪಾಂಡುಪುತ್ರನಾದ ಧರ್ಮರಾಜನು ದುರ್ಯೋಧನನ ಸೈನ್ಯವು ವ್ಯೂಹಗೊಂಡುದನ್ನು ನೋಡಿ ಅರ್ಜುನನನ್ನು ಕುರಿತು ಮಾತನಾಡಿದನು.

ಮಹರ್ಷೇರ್ವಚನಾತ್ ತಾತ ವೇದಯಂತಿ ಬೃಹಸ್ಪತೇಃ ।
ಸಂಯತಾನ್ ಯೋಧಯೇದಲ್ಪಾನ್ ಕಾಮಂ ವಿಸ್ತಾರಯೇದ್ ಬಹೂನ್ ॥

ಸೂಚೀಮುಖಮನೀಕಂ ಸ್ಯಾದಲ್ಪಾನಾಂ ಬಹುಭಿಃ ಸಹ ।
ಅಸ್ಮಾಕಂ ಚ ತಥಾ ಸೈನ್ಯಮಲ್ಪೀಯಃ ಸುತರಾಂ ಪರೈಃ ॥೫॥

ಪ್ರೀತಿಪಾತ್ರನೇ, ಮಹರ್ಷಿಗಳಾದ ಬೃಹಸ್ಪತಿಗಳ ವಚನದಂತೆ ಜ್ಞಾನಿಗಳು ಯುದ್ಧೋಪಾಯವನ್ನು ಹೀಗೆ ತಿಳಿಯುತ್ತಾರೆ. ಅಲ್ಪಸೈನ್ಯವಿರುವಾಗ ಅದನ್ನು ಒಂದುಗೂಡಿಸಿಯೇ ಯುದ್ಧವನ್ನು ಮಾಡಬೇಕು. ಬಹಳ ಸೈನಿಕರಿದ್ದಾಗ ಅದನ್ನು ಬೇಕಾದಂತೆ ವಿಸ್ತಾರಗೊಳಿಸಬಹುದು. ಅಲ್ಪರು ಬಹುಸೈನ್ಯದ ಜೊತೆಯಲ್ಲಿ ಯುದ್ಧವನ್ನು ಮಾಡುವಾಗ ತಮ್ಮ ಸೈನ್ಯವನ್ನು ಸೂಚೀಮುಖ ರೀತಿಯಲ್ಲಿ ವ್ಯೂಹವನ್ನು ಮಾಡಬೇಕು. ಎಂದರೆ ಸೂಚಿಯ ತುದಿಯು ಹೇಗೆ ಅತಿ ಕ್ರೂರವಾಗಿರುತ್ತದೆಯೋ, ಅದರಂತೆ ಮುಂಭಾಗದಲ್ಲಿ ಅತಿ ಕ್ರೂರನಾದ ಒಬ್ಬ ಭಟನನ್ನು ನಿಲ್ಲಿಸಿ ಅವನ ಹಿಂದೆ ಎಲ್ಲರೂ ನಡೆಯಬೇಕು. ನಮ್ಮ ಸೈನ್ಯವಂತೂ ಶತ್ರುಸೈನ್ಯಕ್ಕಿಂತ ಬಹಳ ಅಲ್ಪವಾದುದು ಎಂಬುದು ಸ್ಪಷ್ಟವಾಗಿದೆ.

ಏತದ್ ವಚನಮಾಜ್ಞಾಯ ಮಹರ್ಷೇರ್ವ್ಯೂಹ ಪಾಂಡವ ।
ತಚ್ಛ್ರುತ್ವಾ ಧರ್ಮರಾಜಸ್ಯ ಪ್ರತ್ಯಭಾಷತ ಫಲ್ಗುನಃ ॥೬॥

ಎಲೈ ಪಾಂಡುಪುತ್ರನೇ, ಮಹರ್ಷಿಗಳಾದ ಬೃಹಸ್ಪತಿಗಳ ಈ ಮಾತನ್ನು ಅರ್ಥ ಮಾಡಿಕೊಂಡು ವ್ಯೂಹವನ್ನು ರಚಿಸು. ಧರ್ಮರಾಜನ ಈ ಮಾತನ್ನು ಕೇಳಿ ಅರ್ಜುನನು ಉತ್ತರವನ್ನು ಕೊಟ್ಟನು.

ಏಷ ವ್ಯೂಹಾಮಿ ತೇ ರಾಜನ್ ವ್ಯೂಹಂ ಪರಮದುರ್ಜಯಮ್ ।
ಅಚಲಂ ನಾಮ ವಜ್ರಾಖ್ಯಂ ವಿಹಿತಂ ವಜ್ರಪಾಣಿನಾ ॥೭॥

ಎಲೈ ರಾಜನೇ, ಇಗೋ ನಾನು ನಿನ್ನ ಸೈನ್ಯವನ್ನು ಪರಮದುರ್ಜಯವಾದ, ಅಲುಗಾಡಿಸಲು ಅಸಾಧ್ಯವಾದ, ವಜ್ರವೆಂಬ ವ್ಯೂಹದಲ್ಲಿ ಯೋಜಿಸುವೆನು. ಇದನ್ನು ಹಿಂದೆ ವಜ್ರಪಾಣಿಯಾದ ಇಂದ್ರನು ಮಾಡಿದ್ದನು.

ಯಃ ಸ ವಾತ ಇವೋದ್ಧೂತಃ ಸಮರೇ ದುಃಸಹಃ ಪರೈಃ ।
ಧೃಷ್ಟದ್ಯುಮ್ನೋSಗ್ರತೋ ಯಾತು ಪರಸೈನ್ಯಾನಿ ಭೀಷಯನ್ ।
ಸ ನಃ ಪುರೋ ಯೋತ್ಸ್ಯತೇ ವೈ ಭೀಮಃ ಪ್ರಹರತಾಂ ವರಃ ॥೮॥

ಯಾವ ಧೃಷ್ಟದ್ಯುಮ್ನನು ಬಿರುಗಾಳಿಯಂತೆ ಯುದ್ಧದಲ್ಲಿ ಶತ್ರುಗಳಿಗೆ ದುಃಸಹನೋ ಅಂತಹ ಧೃಷ್ಟದ್ಯುಮ್ನನು ಶತ್ರುಸೈನ್ಯವನ್ನು ಹೆದರಿಸುತ್ತಾ ಮುಂದೆ ಸಾಗಲಿ. ಪ್ರಹಾರ ಮಾಡುವವರಲ್ಲಿ ಶ್ರೇಷ್ಠನಾದ ಭೀಮನು ನಮ್ಮ ಮುಂದೆ ಯುದ್ಧವನ್ನು ಮಾಡುವನು.

ತೇಜಾಂಸಿ ಪಾರ್ಥಿವೇಂದ್ರಾಣಾಂ ಸ ಮೃದ್ನನ್ ಪುರುಷರ್ಷಭಾನ್ ।
ಅಗ್ರೇಣ ಯಾಸ್ಯತಿ ಸ ನೋ ಯುದ್ಧಮಾರ್ಗವಿಚಕ್ಷಣಃ ॥೯॥

ಯುದ್ಧ ಮಾರ್ಗಗಳನ್ನು ಬಲ್ಲ ಅವನು ಶತ್ರುಗಳ ಪುರುಷಶ್ರೇಷ್ಠರನ್ನು ಒರೆಸುತ್ತಾ, ರಾಜರ ಸಾಮರ್ಥ್ಯಗಳನ್ನು ನಾಶಮಾಡುತ್ತಾ ನಮ್ಮ ಮುಂಭಾಗದಲ್ಲಿ ಹೋಗುವನು.

ಸೇನಾಪ್ರಣೇತಾ ಯೋSಸ್ಮಾಕಂ ದೇವಾನಾಮಿವ ಪಾವಕಿಃ ।
ಯಂ ದೃಷ್ಟ್ವಾ ಪಾರ್ಥಿವಾಃ ಸರ್ವೇ ದುರ್ಯೋಧನಪುರೋಗಮಾಃ ।
ವಿವರ್ತಿಷ್ಯಂತಿ ಸಂತ್ರಸ್ತಾಃ ಸಿಂಹತ್ರಸ್ತಾ ಮೃಗಾ ಇವ ॥೧೦॥

ದೇವತೆಗಳಿಗೆ ಷಣ್ಮುಖನಂತೆ ನಮ್ಮ ಸೇನಾನಾಯಕನಾದ ಯಾವ ಭೀಮಸೇನನಿದ್ದಾನೆಯೋ, ಅವನನ್ನು ನೋಡಿ ದುರ್ಯೋಧನರೇ ಮೊದಲಾದ ಎಲ್ಲ ರಾಜರೂ ಸಿಂಹಕ್ಕೆ ಹೆದರಿದ ಮೃಗಗಳಂತೆ ಸಂತ್ರಸ್ತರಾಗಿ ಹೊರಳಾಡುತ್ತಾರೆ.

ಏತೇ ಸರ್ವೇ ತು ಯಾಸ್ಯಾಮ ಪ್ರಕಾಮಮಕುತೋಭಯಾಃ ।
ಭೀಮಸೇನೇನ ಸಹಿತಂ ವಿಷ್ಣುನೇವ ಶತಕ್ರತುಮ್ ॥೧೧॥

ನಾವೆಲ್ಲರೂ ಯಾವ ಭಯವೂ ಇಲ್ಲದೆ ನಮ್ಮ ಇಚ್ಛೆಗೆ ಅನುಗುಣವಾಗಿ ವಿಷ್ಣುವಿನಿಂದ ಒಡಗೂಡಿದ ಇಂದ್ರನಂತೆ ಭೀಮಸೇನನಿಂದ ಸಹಿತರಾಗಿ ಹೋಗೋಣ.

ನ ಹಿ ಸೋಽಸ್ತಿ ಪುಮಾನ್ ಲೋಕೇ ಯಃ ಸಂಕ್ರುದ್ಧಂ ವೃಕೋದರಮ್ ।
ದೃಷ್ಟ್ವಾ ಹ್ಯತ್ಯುಗ್ರಕರ್ಮಾಣಂ ವಿಷಹೇತ ನರರ್ಷಭಮ್ ॥೧೨॥

ಅತ್ಯಂತ ಉಗ್ರವಾದ ಕರ್ಮವನ್ನು ಆಚರಿಸುವವನೂ, ಸಂಕ್ರುದ್ಧನೂ, ನರಶ್ರೇಷ್ಠನೂ ಆದ ವೃಕೋದರನನ್ನು ನೋಡಿ ಲೋಕದಲ್ಲಿ ಅವನನ್ನು ಎದುರಿಸುವ ವ್ಯಕ್ತಿಯು ಯಾವನೂ ಇಲ್ಲ.

ಭೀಮಸೇನೋ ಗದಾಂ ಬಿಭ್ರದ್ ವಜ್ರಸಾರಮಯೀಂ ದೃಢಾಮ್ ।
ಚರನ್ ವೇಗೇನ ಮಹತಾ ಸಮುದ್ರಮಪಿ ಶೋಷಯೇತ್ ॥೧೩॥

ಭೀಮಸೇನನು ವಜ್ರಸಾರಮಯವಾದ ಉಗ್ರವಾದ ಗದೆಯನ್ನು ಹಿಡಿದು ಮಹಾವೇಗದಿಂದ ಚಲಿಸುತ್ತಾ ಸಮುದ್ರವನ್ನೂ ಒಣಗಿಸಿಯಾನು!

ಕೇಕಯಾ ಧೃಷ್ಟಕೇತುಶ್ಚ ಚೇಕಿತಾನಶ್ಚ ವೀರ್ಯವಾನ್ ।
ಏತೇ ಗಚ್ಛಂತು ಸಾಮಾತ್ಯಾಃ ಪ್ರಕರ್ಷಂತೋ ನರೇಶ್ವರ ॥೧೪॥

ಧೃತರಾಷ್ಟ್ರಸ್ಯ ದಾಯಾದಾನಿತಿ ಬೀಭತ್ಸುರಬ್ರವೀತ್ ।
ಬ್ರುವಾಣಂ ತು ತಥಾ ಪಾರ್ಥಂ ಸರ್ವಸೈನ್ಯಾನಿ ಮಾರಿಷ ।
ಅಪೂಜಯಂಸ್ತದಾ ವಾಗ್ಭಿರನುಕೂಲಾಭಿರಾಹವೇ ॥೧೫॥

ಎಲೈ ನರೇಶ್ವರನೇ, ಕೇಕಯರು, ಧೃಷ್ಟಕೇತು, ಪರಾಕ್ರಮಶಾಲಿಯಾದ ಚೇಕಿತಾನ ಇವರು ತಮ್ಮ ಅಮಾತ್ಯರ ಜೊತೆಯಲ್ಲಿ ಧೃತರಾಷ್ಟ್ರನ ಮಕ್ಕಳ ಮೇಲೆ ಎರಗಲಿ ಎಂದು ಅರ್ಜುನನು ಹೇಳಿದನು. ಎಲೈ ವೀರನಾದ ಧೃತರಾಷ್ಟ್ರನೇ, ಹೀಗೆ ಮಾತನಾಡುವ ಅರ್ಜುನನನ್ನು ನೋಡಿ ಎಲ್ಲ ಸೈನ್ಯವೂ ಅನುಕೂಲವಾದ ವಚನಗಳಿಂದ ಯುದ್ಧದಲ್ಲಿ ಅವನನ್ನು ಪೂಜಿಸಿದವು.

ಏವಮುಕ್ತ್ವಾ ಮಹಾಬಾಹುಸ್ತಥಾ ಚಕ್ರೇ ಧನಂಜಯಃ ।
ವ್ಯೂಹ್ಯ ತಾನಿ ಬಲಾನ್ಯಾಶು ಪ್ರಯಯೌ ಫಲ್ಗುನಸ್ತದಾ ॥೧೬॥

ಮಹಾಬಾಹುವಾದ ಅರ್ಜುನನು ಹೀಗೆ ಮಾತನಾಡಿ ಆ ಸೈನ್ಯವನ್ನು ಅದರಂತೆ ವ್ಯೂಹ ಮಾಡಿ ಅಲ್ಲಿಂದ ಹೊರಟನು.

ಸಂಪ್ರಯಾತಾನ್ ಕುರೂನ್ ದೃಷ್ಟ್ವಾ ಪಾಂಡವಾನಾಂ ಮಹಾಚಮೂಃ ।
ಗಂಗೇವ ಪೂರ್ಣಾ ಸ್ರಿಮಿತಾ ಸ್ಯಂದಮಾನಾ ವ್ಯದೃಶ್ಯತ ॥೧೭॥

ಯುದ್ಧಕ್ಕೆ ಹೊರಟ ಕುರುಗಳನ್ನು ನೋಡಿ ಪಾಂಡವರ ದೊಡ್ಡ ಸೈನ್ಯವು ಎರಡು ತೀರಗಳನ್ನು ತುಂಬಿಹರಿಯುವ ಗಂಗೆಯಂತೆ ಮುಂದೆ ಸಾಗಿದುದು ಕಂಡುಬರುತ್ತಿದ್ದಿತು.

ಭೀಮಸೇನೋಽಗ್ರಣೀಸ್ತೇಷಾಂ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ನಕುಲಃ ಸಹದೇವಶ್ಚ ಧೃಷ್ಟಕೇತುಶ್ಚ ವೀರ್ಯವಾನ್ ॥೧೮॥

ಆ ಸೈನ್ಯದ ಅಗ್ರಭಾಗದಲ್ಲಿ ಭೀಮಸೇನ ಮತ್ತು ಧೃಷ್ಟದ್ಯುಮ್ನರಿದ್ದರು. ಅನಂತರ ನಕುಲ, ಸಹದೇವ ಮತ್ತು ಪರಾಕ್ರಮಶಾಲಿಯಾದ ಧೃಷ್ಟಕೇತುವೂ ಇದ್ದರು.

ಸಮುದ್ಯೋಜ್ಯ ತತಃ ಪಶ್ಚಾದ್ ರಾಜಾಽಕ್ಷೋಹ್ಯೇವೃತಃ ।
ಭ್ರಾತೃಭಿಃ ಸಹ ಪುತ್ರೈಶ್ಚ ಸೋಽಭ್ಯರಕ್ಷತ ಪೃಷ್ಠತಃ ॥೧೯॥

ಅವರ ಹಿಂದೆ ರಾಜನಾದ ಯುಧಿಷ್ಠಿರನು ಒಂದು ಅಕ್ಷೋಹಿಣಿ ಸೈನ್ಯವನ್ನು ಸಜ್ಜುಗೊಳಿಸಿ ತನ್ನ ತಮ್ಮಂದಿರಿಂದ ಮತ್ತು ಮಕ್ಕಳಿಂದ ಕೂಡಿಕೊಂಡು ಹಿಂಭಾಗದಿಂದ ಅವರಿಗೆ ರಕ್ಷಣೆಯನ್ನು ನೀಡಿದನು.

ಚಕ್ರರಕ್ಷೌ ತು ಭೀಮಸ್ಯ ಮಾದ್ರೀಪುತ್ರೌ ಮಹಾದ್ಯುತೀ ।
ದ್ರೌಪದೇಯಾಃ ಸಸೌಭದ್ರಾಃ ಪೃಷ್ಠಗೋಪಾಸ್ತರಸ್ವಿನಃ ॥೨೦॥

ಮಹಾಕಾಂತಿಯುಳ್ಳ ಮಾದ್ರೀಪುತ್ರರಾದ ನಕುಲ-ಸಹದೇವರು ಭೀಮಸೇನನ ಚಕ್ರರಕ್ಷಕರಾಗಿದ್ದರು (ಎರಡು ಪಾರ್ಶ್ವಗಳ ರಕ್ಷಕರಾಗಿದ್ದರು). ದ್ರೌಪದಿಯ ಮಕ್ಕಳು ಮತ್ತು ಅಭಿಮನ್ಯುವು ವೇಗಶಾಲಿಯಾದ ಭೀಮಸೇನನಿಗೆ ಹಿಂಭಾಗದಲ್ಲಿ ರಕ್ಷಕರಾಗಿದ್ದರು.

ಧೃಷ್ಟದ್ಯುಮ್ನಶ್ಚ ಪಾಂಚಾಲ್ಯಸ್ತೇಷಾಂ ಗೋಪ್ತಾ ಮಹಾರಥಃ ।
ಸಹಿತಃ ಶತನಾಶೂರೈಃ ರಥಮುಖ್ಯೈಃ ಪ್ರಭದ್ರಕೈಃ ॥೨೧॥

ಪಾಂಚಲರಾಜನ ಕುಮಾರನಾದ ಮಹಾರಥನಾದ ಧೃಷ್ಟದ್ಯುಮ್ನನು ಶೂರರಾದ ಯೋಧರಿಂದಲೂ ಮತ್ತು ಪ್ರಭದ್ರಕರ ಶ್ರೇಷ್ಠರಥರಿಂದಲೂ ಸಹಿತನಾಗಿ ಅವರಿಗೆ ರಕ್ಷಕನಾಗಿದ್ದನು.

ಶಿಖಂಡೀ ತು ತತಃ ಪಶ್ಚಾದರ್ಜುನೇನಾಭಿರಕ್ಷಿತಃ ।
ಯತ್ತೋ ಭೀಷ್ಮವಿನಾಶಾಯ ಪ್ರಯಯೌ ಭರತರ್ಷಭ ॥೨೨॥

ಎಲೈ ಭರತರ್ಷಭನೇ, ಶಿಖಂಡಿಯು ಅವರ ಹಿಂದೆ ಅರ್ಜುನನಿಂದ ಚೆನ್ನಾಗಿ ರಕ್ಷಿತನಾಗಿ ಭೀಷ್ಮವಿನಾಶಕ್ಕಾಗಿ ದೃಢವಾದ ಸಂಕಲ್ಪವನ್ನು ಮಾಡಿ ಹೊರಟನು.

ಪೃಷ್ಠಗೋಪೋऽರ್ಜುನಸ್ಯಾಪಿ ಯುಯುಧಾನೋ ಮಹಾರಥಃ ।
ಚಕ್ರರಕ್ಷೌ ತು ಪಾಂಚಾಲ್ಯೌ ಯುಧಾಮನ್ಯೂತ್ತಮೌಜಸೌ ॥೨೩॥

ಮಹಾರಥನಾದ ಯುಯುಧಾನನು ಅರ್ಜುನನಿಗೆ ಹಿಂಭಾಗದಲ್ಲಿ ರಕ್ಷಕನಾಗಿದ್ದನು. ಪಾಂಚಾಲದೇಶದ ಯುಧಾಮನ್ಯು ಮತ್ತು ಉತ್ತಮೌಜರು ಅವನಿಗೆ ಚಕ್ರ ರಕ್ಷಕರಾಗಿದ್ದರು.

ರಾಜಾ ತು ಮಧ್ಯಮಾನೀಕೇ ಕುಂತೀಪುತ್ರೋ ಯುಧಿಷ್ಠಿರಃ ।
ಬೃಹದ್ಭಿಃ ಕುಂಜರೈರ್ಮತ್ತೈಶ್ಚಲದ್ಭಿರಚಲೈರಿವ ॥೨೪॥

ಕುಂತೀಪುತ್ರನಾದ ಯುಧಿಷ್ಠಿರನು ಸೈನ್ಯದ ಮಧ್ಯಭಾಗದಲ್ಲಿ ಚಲಿಸುವ ಪರ್ವತಗಳಂತಿದ್ದ ಮಹಾಮತ್ತಗಜಗಳ ಜೊತೆಯಲ್ಲಿದ್ದನು.

ಅಕ್ಷೌಹಿಣ್ಯಾ ಚ ಪಾಂಚಾಲ್ಯೋ ಯಜ್ಞಸೇನೋ ಮಹಾಮನಾಃ ।
ವಿರಾಟಮನ್ವಯಾತ್ ಪಶ್ಚಾತ್ ಪಾಂಡವಾರ್ಥೇ ಪರಾಕ್ರಮೀ ॥೨೫॥

ಪರಾಕ್ರಮಶಾಲಿಯೂ, ಧೈರ್ಯಶಾಲಿಯೂ ಆದ ಪಾಂಚಾಲರಾಜನಾದ ಯಜ್ಞಸೇನನು (ದ್ರುಪದನು) ಒಂದು ಅಕ್ಷೌಹಿಣಿ ಸೈನ್ಯವನ್ನು ತೆಗೆದುಕೊಂಡು ಪಾಂಡವರ ಸಲುವಾಗಿ ವಿರಾಟನ ಹಿಂದೆ ನಡೆದನು.

ತೇಷಾಮಾದಿತ್ಯಚಂದ್ರಾಭಾಃ ಕನಕೋತ್ತಮಭೂಷಣಾಃ ।
ನಾನಾಚಿಹ್ನಧರಾ ರಾಜನ್ ರಥೇಷ್ವಾಸನ್ ಮಹಾಧ್ವಜಾಃ ॥೨೬॥

ಎಲೈ ರಾಜನೇ, ಅವರ ರಥಗಳಲ್ಲಿ ಆದಿತ್ಯ-ಚಂದ್ರರ ಕಾಂತಿಯನ್ನು ಹೊಂದಿದ, ಶ್ರೇಷ್ಠವಾದ ಸುವರ್ಣಭೂಷಣಗಳಿಂದ ಅಲಂಕೃತವಾದ, ನಾನಾ ಚಿಹ್ನೆಗಳನ್ನು ಧರಿಸಿದ ಮಹಾಧ್ವಜಗಳು ಇದ್ದವು.

ಸಮುತ್ಸೃಜ್ಯ ತತಃ ಪಶ್ಚಾದ್ ಧೃಷ್ಟದ್ಯುಮ್ನೋ ಮಹಾರಥಃ ।
ಭ್ರಾತೃಭಿಃ ಸಹ ಪುತ್ರೈಶ್ಚ ಸೋಽಭ್ಯರಕ್ಷದ್ ಯುಧಿಷ್ಠಿರಮ್ ॥೨೭॥

ಮಹಾರಥನಾದ ಧೃಷ್ಟದ್ಯುಮ್ನನು ತನ್ನ ಸಹೋದರರ ಮತ್ತು ಪುತ್ರರ ಜೊತೆಯಲ್ಲಿ ನಿಧಾನವಾಗಿ ಚಲಿಸಿ ಯುಧಿಷ್ಠಿರನಿಗೆ ರಕ್ಷಕನಾಗಿದ್ದನು.

ತ್ವದೀಯಾನಾಂ ಪರೇಷಾಂ ಚ ರಥೇಷು ವಿವಿಧಾನ್ ಧ್ವಜಾನ್ ।
ಅಭಿಭೂಯಾರ್ಜುನಸ್ಯೈಕೋ ಧ್ವಜಸ್ತಸ್ಥೌ ಮಹಾಕಪಿಃ ॥೨೮॥

ನಿನ್ನವರ ಮತ್ತು ಶತ್ರುಗಳಾದ ಪಾಂಡವರ ಎಲ್ಲ ಧ್ವಜಗಳನ್ನು ಮೀರಿನಿಂತು ಅರ್ಜುನನ ಒಂದು ಧ್ವಜವು, ಮಹಾಕಪಿಯಿಂದ ಕೂಡಿದ ಕಾಣುತ್ತಿದ್ದಿತು.

ಪಾದಾತಾಸ್ತ್ವಗ್ರತೋಽಗಚ್ಛನ್ ಅಸಿಶಕ್ತ್ಯೃಷ್ಟಿಪಾಣಯಃ ।
ಅನೇಕಶತಸಾಹಸ್ರಾ ಭೀಮಸೇನಸ್ಯ ರಕ್ಷಣಃ ॥೨೯॥

ಅನೇಕ ಶತಸಹಸ್ರ ಪದಾತಿಗಳು ಕೈಯಲ್ಲಿ ಖಡ್ಗ, ಶಕ್ತಿ ಮತ್ತು ಋಷ್ಟಿಗಳನ್ನು ಹಿಡಿದು ಭೀಮಸೇನನಿಗೆ ರಕ್ಷಕರಾಗಿ ಮುಂದೆ ಸಾಗಿದರು.

ಧ್ವಜಾಗ್ರೇ ರುವತೋ ಭೀಮಂ ಕಪೇಸ್ತಸ್ಯ ಪುನಃಪುನಃ ।
ಶ್ರೂಯತೇ ಭೀಮನಿನದೋ ನಾದಯಾನೋ ದಿಶೋ ದಶ ॥೩೦॥

ಧ್ವಜದ ಮೇಲ್ಭಾಗದಲ್ಲಿ ಪುನಃ ಪುನಃ ಭಯಂಕರವಾಗಿ ಗರ್ಜಿಸುವ ಆ ಕಪಿಯ ಭಯಂಕರ ನಾದವು ಹತ್ತು ದಿಕ್ಕುಗಳಲ್ಲಿಯೂ ಪ್ರತಿಧ್ವನಿಸುತ್ತಾ ಕೇಳಿಬರುತ್ತಿದ್ದಿತು.

ದೃಷ್ಟ್ವಾ ಚ ಭೀಷಯಾಮಾಸ ವಿರಾವೈರ್ವಾನರೇಶ್ವರಃ ।
ಭ್ರೂಕ್ಷೇಪೋತ್ಕ್ಷೇಪವಿಕ್ಷೇಪೈರ್ಲಾಂಗೂಲೇನ ಪುನಃ ಕಪಿಃ ।
ಆಕಾಶೇ ದರ್ಶಯಾಮಾಸ ಪ್ರತಿಶಬ್ದೇ ಮಹಾಸ್ವನಮ್ ॥೩೧॥

ವಾನರೇಶ್ವರನಾದ ಆ ಕಪಿಯು ತನ್ನ ದರ್ಶನದಿಂದಲೂ, ಗರ್ಜನೆಗಳಿಂದಲೂ, ಹುಬ್ಬಿನ ಚಲನೆಯಿಂದಲೂ, ಮೇಲ್ಮುಖವಾಗಿ ಮತ್ತು ಕೆಳಮುಖವಾಗಿ ಹಾರುವುದರಿಂದಲೂ, ತನ್ನ ಬಾಲದ ಚಲನೆಯಿಂದಲೂ ಕೌರವಸೈನ್ಯವನ್ನು ಹೆದರಿಸಿತು. ತನ್ನ ಗರ್ಜನೆಯಿಂದ ಆಕಾಶದಲ್ಲಿ ಉಂಟಾಗುವ ಮಹಾಸ್ವನವುಳ್ಳ ಪ್ರತಿಧ್ವನಿಯನ್ನು ಮತ್ತೆ ಮತ್ತೆ ಕೇಳುವಂತೆ ಮಾಡಿತು.

ವಾರಣಾ ದಶಸಾಹಸ್ರಾಃ ಪ್ರಭಿನ್ನಕರಟಾಮುಖಾಃ ।
ಶೂರಾ ಹೇಮಮಯೈರ್ಜಾಲೈಃ ದೀಪ್ಯಮಾನಾ ಇವಾಚಲಾಃ ॥೩೨॥

ಕ್ಷರಂತ ಇವ ಜೀಮೂತಾಃ ಮದಾರ್ದ್ರಾಃ ಪದ್ಮಗಂಧಿನಃ ।
ರಾಜಾನಮನ್ವಯುಃ ಪಶ್ಚಾಚ್ಚಲಂತ ಇವ ಪರ್ವತಾಃ ॥೩೩॥

ತಮ್ಮ ಗಂಡಸ್ಥಳಗಳಿಂದ ಮದೋದಕವನ್ನು ಸುರಿಸುವ, ಪರಾಕ್ರಮಶಾಲಿಗಳಾದ, ಸುವರ್ಣಮಯವಾದ ಹಾಸುಗಳಿಂದ ಪರ್ವತಗಳಂತೆ ಪ್ರಕಾಶಿಸುವ ಹತ್ತು ಸಹಸ್ರ ಆನೆಗಳು ಪದ್ಮಗಂಧವನ್ನು ಹೊಂದಿ ಮದೋದಕದಿಂದ ಒದ್ದೆಯಾಗಿ, ನೀರನ್ನು ಸುರಿಸುವ ಮೋಡಗಳಂತೆ, ಚಲಿಸುವ ಪರ್ವತಗಳಂತೆ ರಾಜನ ಹಿಂದೆ ನಡೆದವು.

ಭೀಮಸೇನೋ ಗದಾಂ ಭೀಮಾಂ ಪ್ರಕರ್ಷನ್ ಪರಿಘೋಪಮಾಮ್ ।
ಪ್ರಚಕರ್ಷ ಮಹತ್ಸೈನ್ಯಂ ದುರಾಧರ್ಷೋ ಮಹಾಮನಾಃ ॥೩೪॥

ಭೀಮಸೇನನು ಒನಕೆಯಂತಿದ್ದ ತನ್ನ ಭಯಂಕರವಾದ ಗದೆಯನ್ನು ಎಳೆಯುತ್ತಾ ಇನ್ನೊಬ್ಬರು ಹತ್ತಿರ ಸುಳಿಯಲು ಸಾಧ್ಯವಿಲ್ಲದಂತಹ ಧೈರ್ಯಶಾಲಿಯಾದ ಅವನು ಆ ದೊಡ್ಡ ಸೈನ್ಯವನ್ನು ಮುಂದೆ ನಡೆಸಿದನು.

ತಮರ್ಕಮಿವ ದುಷ್ಪ್ರೇಕ್ಷ್ಯಂ ತಪಂತಂ ರಶ್ಮಿಮಾಲಿನಮ್ ।
ನ ಶೇಕುಃ ಸರ್ವತೋ ಯೋಧಾಃ ಪ್ರತಿವೀಕ್ಷಿತುಮಂತಿಕೇ ॥೩೫॥

ಕಿರಣಗಳ ಸಮೂಹವನ್ನು ಹೊಂದಿದ ಜ್ವಲಿಸುವ ಸೂರ್ಯನಂತೆ ನೋಡಲು ಅಸಾಧ್ಯನಾದ ಅವನನ್ನು ಸರ್ವಯೋಧರೂ ಸಹ ಸಮೀಪದಿಂದ ಪ್ರತಿಯಾಗಿ ನೋಡಲೂ ಸಾಧ್ಯವಾಗಲಿಲ್ಲ.

ವಜ್ರೋ ನಾಮೈಷ ತು ವ್ಯೂಹೋ ದುಭೇದಃ ಸರ್ವತೋಮುಖಃ ।
ಚಾಪವಿದ್ಯುದ್ ಧ್ವಜೋ ಘೋರೋ ಗುಪ್ತೋ ಗಾಂಡೀವಧನ್ವನಾ ॥೩೬॥

ಈ ವ್ಯೂಹಕ್ಕೆ ವಜ್ರವೆಂದು ಹೆಸರು. ಅದನ್ನು ಯಾವ ಕಡೆಗಳಿಂದಲೂ ಭೇದಿಸಲು ಸಾಧ್ಯವಿಲ್ಲ. ಬಿಲ್ಲು-ಬಾಣಗಳನ್ನು ಮತ್ತು ಧ್ವಜಗಳನ್ನು ಹೊಂದಿದ್ದ ಆ ಘೋರವಾದ ವ್ಯೂಹವು ಗಾಂಡೀವಿಯಾದ ಅರ್ಜುನನಿಂದ ರಕ್ಷಿಸಲ್ಪಟ್ಟಿತು.

ಯಂ ಪ್ರತಿವ್ಯೂಹ್ಯ ತಿಷ್ಠಂತಿ ಪಾಂಡವಾಸ್ತವ ವಾಹಿನೀಮ್ ।
ಅಜೇಯೋ ಮಾನುಷೇ ಲೋಕೇ ಪಾಂಡವೈರಭಿರಕ್ಷಿತಃ ॥೩೭॥

ಪಾಂಡವರು ನಿನ್ನ ವ್ಯೂಹಕ್ಕೆ ಪ್ರತಿಯಾಗಿ ಯಾವ ವಜ್ರವ್ಯೂಹವನ್ನು ರಚಿಸಿದರೋ, ಪಾಂಡವರಿಂದ ಚೆನ್ನಾಗಿ ರಕ್ಷಿತವಾದ ಅದು ಮನುಷ್ಯಲೋಕದಲ್ಲಿ ಅಜೇಯವಾದುದಾಗಿದ್ದಿತು.

ಸಂಧ್ಯಾಂ ತಿಷ್ಠತ್ಸು ಸೈನ್ಯೇಷು ಸೂರ್ಯಸ್ಯೋದಯನಂ ಪ್ರತಿ ।
ಪ್ರಾವಾತ್ ಸಪೃಷತೋ ವಾಯುರನಭ್ರೇ ಸ್ತನಯಿತ್ನುಮಾನ್ ॥೩೮॥

ಸೈನ್ಯಗಳು ಸೂರ್ಯೋದಯ ಸಮೀಪದ ಕಾಲದಲ್ಲಿ ಸಂಧ್ಯಾವಂದನೆಯನ್ನು ಆಚರಿಸುತ್ತಿರಲು ಮೋಡವಿಲ್ಲದ ಆಕಾಶದಲ್ಲಿ ವಾಯುವು ಪ್ರಬಲವಾಗಿ ಬೀಸಿ ಗುಡುಗುಗಳು ಮತ್ತು ಮಳೆಯ ಹನಿಗಳು ಉಂಟಾದವು.

ವಿಷ್ವಗ್ವಾತಾಶ್ಚ ವಾಂತ್ಯುಗ್ರಾ ನೀಚೈಃ ಶರ್ಕರಕರ್ಷಿಣಃ ।
ರಜಶ್ಚೋದ್ಧೂಯಮಾನಂ ತು ತಮಸಾऽऽಚ್ಛಾದಯಜ್ಜಗತ್ ॥೩೯॥

ಉಗ್ರವಾದ ಬಿರುಗಾಳಿಗಳು ನೆಲವನ್ನು ಹಿಡಿದು ಬೀಸಿ ಮರಳುಗಳ ಕಣಗಳನ್ನು ಎಳೆದಾಡಿದವು. ಅವುಗಳಿಂದ ಎದ್ದ ಧೂಳಿನಿಂದ ಉಂಟಾದ ಕತ್ತಲೆಯು ಜಗತ್ತನ್ನು ಆವರಿಸಿತು.

ಪಪಾತ ಮಹತೀ ಚೋಲ್ಕಾ ಪ್ರಾಙ್‌ಮುಖೀ ಭರತರ್ಷಭ ।
ಉದ್ಯಂತಂ ಸೂರ್ಯಮಾಹತ್ಯ ವ್ಯಶೀರ್ಯತ ಮಹಾಸ್ವನಾ ॥೪೦॥

ಎಲೈ ಭರತರ್ಷಭನೇ, ಸೂರ್ಯನು ಉದಯಿಸುತ್ತಿರುವಾಗ ಒಂದು ದೊಡ್ಡ ಉಲ್ಕೆಯು ಪೂರ್ವಾಭಿಮುಖವಾಗಿ ಸೂರ್ಯನ ಮೇಲೆ ಬಿದ್ದು ದೊಡ್ಡ ಶಬ್ದವನ್ನು ಮಾಡುತ್ತಾ ಪುಡಿಪುಡಿಯಾಯಿತು.

ಅಥ ಸಜ್ಜೇಯಮಾನೇಷು ಸೈನ್ಯೇಷು ಭರತರ್ಷಭ ।
ನಿಷ್ಪತ್ಯೋऽಭ್ಯುದಿಯಾತ್ ಸೂರ್ಯಃ ಸಘೋಷೋ ಭೂಶ್ಚಚಾಲ ಹ ।
ವ್ಯಶೀರ್ಯತ ಸನಾದಾ ಚ ಭೂಸ್ತದಾ ಭರತರ್ಷಭ ॥೪೧॥

ಎಲೈ ಭರತರ್ಷಭನೇ, ಸೈನ್ಯಗಳು ಸಜ್ಜುಗೊಳ್ಳುತ್ತಿರಲು ಸೂರ್ಯನು ಕಾಂತಿಹೀನನಾಗಿ ಉದಯಿಸಿದನು. ಭೂಮಿಯು ನಡುಗಿತು. ಎಲೈ ಭರತಸತ್ತಮನೇ, ಶಬ್ದಸಹಿತವಾಗಿ ಭೂಮಿಯು ಆಗ ಬಿರಿಯಿತು.

ನಿರ್ಘಾತಾ ಬಹವೋ ರಾಜನ್ ದಿಕ್ಷು ಸರ್ವಾಸು ಚಾಭವನ್ ।
ಪ್ರಾದುರಾಸೀತ್ ರಜಸ್ತೀವ್ರಂ ನ ಪ್ರಾಜ್ಞಾಯತ ಕಿಂಚನ ॥೪೨॥

ಎಲೈರಾಜನೇ, ಹಾಗೆಯೇ ಎಲ್ಲ ದಿಕ್ಕುಗಳಲ್ಲಿಯೂ ಅನೇಕ ಅಪಶಕುನಗಳು ಉಂಟಾದವು. ತೀವ್ರವಾದ ಧೂಳು ಎಲ್ಲಕಡೆಯಲ್ಲಿಯೂ ಆವರಿಸಿತು. ಯಾವುದೂ ಕಣ್ಣಿಗೆ ಕಾಣಲಿಲ್ಲ.

ಧ್ವಜಾನಾಂ ಧೂಯಮಾನಾನಾಂ ಸಹಸಾ ಮಾತರಿಶ್ವನಾ ।
ಕಿಂಕಿಣೀಜಾಲನದ್ಧಾನಾಂ ಕಾಂಚನಸ್ರಗ್ವತಾಂ ರವೈಃ ॥೪೩॥

ಮಹತಾಂ ಸಪತಾಕಾನಾಮಾದಿತ್ಯಸಮತೇಜಸಾಮ್ ।
ಸರ್ವಂ ಝಿಣಝಿಣೇಭೂತಮಾಸೀತ್ ತಾಳವನೇಷ್ವಿವ ॥೪೪॥

ವಾಯುವಿನಿಂದ ಪುನಃ ಪುನಃ ಅಲುಗಾಡಿಸಲ್ಪಟ್ಟ ಧ್ವಜಗಳ ಕಿಂಕಿಣೀಜಾಲಗಳ ಮತ್ತು ಕಾಂಚನಮಯವಾದ ಮಾಲೆಗಳ ಶಬ್ದದಿಂದಲೂ ಹಾಗೆಯೇ ಆದಿತ್ಯನಿಗೆ ಸಮಾನವಾದ ಕಾಂತಿಯುಳ್ಳ ದೊಡ್ಡ ದೊಡ್ಡ ಪತಾಕೆಗಳ ಶಬ್ದದಿಂದಲೂ ತಾಳವನದಲ್ಲಿಯೋ ಎಂಬಂತೆ ಎಲ್ಲವೂ ಝಿಣಝಿಣ ಶಬ್ದದಿಂದ ಕೂಡಿದ್ದಿತು.

ಏವಂ ತೇ ಪುರುಷವ್ಯಾಘ್ರಾಃ ಪಾಂಡವಾ ಯುದ್ಧನಂದಿನಃ ।
ವ್ಯವಸ್ಥಿತಾಃ ಪ್ರತಿವ್ಯೂಹ್ಯ ತವ ಪುತ್ರಸ್ಯ ವಾಹಿನೀಮ್ ॥೪೫॥

ಹೀಗೆ ಪುರುಷವ್ಯಾಘ್ರರೂ ಯುದ್ಧಾಕಾಂಕ್ಷಿಗಳೂ ಆದ ಪಾಂಡವರು ನಿನ್ನ ಪುತ್ರರ ಸೇನೆಗೆ ಎದುರಾಗಿ ತಮ್ಮ ಸೈನ್ಯವನ್ನು ವ್ಯೂಹ ಮಾಡಿ ನಿಂತರು.

ಸ್ರಂಸಂತ ಇವ ಚಾಕ್ಷೀಣಿ ಯೋಧಾನಾಂ ಭರತರ್ಷಭ ।
ದೃಷ್ಟ್ವಾಗ್ರತೋ ಭೀಮಸೇನಂ ಗದಾಪಾಣಿಮವಸ್ಥಿತಮ್ ॥೪೬॥

ಎಲೈ ಭರತರ್ಷಭನೇ, ಸೈನ್ಯದ ಮುಂಭಾಗದಲ್ಲಿ ಗದೆಯನ್ನು ಹಿಡಿದು ನಿಂತ ಭೀಮಸೇನನನ್ನು ನೋಡಿ ಕೌರವ ಯೋಧರ ಕಣ್ಣುಗಳೇ ಬಿದ್ದುಹೋದಂತಾದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಏಕೋನಪಂಚಾಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತನೆಯ ಅಧ್ಯಾಯ

ಕುರುಸೇನೆಯು ಸಜ್ಜುಗೊಂಡ ಪ್ರಕಾರದ ಕಥನ.

ಧೃತರಾಷ್ಟ್ರಃ

ಸೂರ್ಯೋದಯೇ ಸಂಜಯ ಕೇ ನು ಪೂರ್ವಂ
ಯಯುಃ ತ್ವದ್ಯೋ ಹೃಷ್ಟಮಾನಾ ಇವಾಸನ್ ।
ಮಾಮಕಾ ವಾ ಭೀಷ್ಮನೇತ್ರಾಃ ಸಮೀಕೇ
ಪಾಂಡವಾ ವಾ ಭೀಮಸೇನಾಸ್ತದಾನೀಮ್ ॥೧॥

ಧೃತರಾಷ್ಟ್ರ- ಎಲೈ ಸಂಜಯನೇ, ಸೂರ್ಯೋದಯದ ಸಮಯದಲ್ಲಿ ಯಾರು ಮೊದಲು ಹರ್ಷಗೊಂಡರು? ಯುದ್ಧದಲ್ಲಿ ಭೀಷ್ಮರನ್ನು ನಾಯಕನಾಗಿ ಉಳ್ಳ ನನ್ನ ಯೋಧರೇ? ಅಥವಾ ಭೀಮಸೇನನನ್ನು ನಾಯಕನಾಗಿ ಉಳ್ಳ ಪಾಂಡವರೇ?

ಕೇಷಾಂ ಜಘನ್ಯೇ ಸೋಮಸೂರ್ಯೌ ಸವಾಯೂ
ಕೇಷಾಂ ಸೇನಾಂ ಶ್ವಾಪದಾ ವ್ಯಾಭಷಂತ ।
ಕೇಷಾಂ ಯೂನಾಂ ಮುಖವರ್ಣಾಃ ಪ್ರಸನ್ನಾಃ
ಸರ್ವಂ ತತ್ ತ್ವಂ ಬ್ರೂಹಿ ತತ್ತ್ವಂ ಯಥಾವತ್ ॥೨॥

ಯಾರ ಸೈನ್ಯಕ್ಕೆ ಹಿಂಭಾಗದಲ್ಲಿ ಚಂದ್ರ-ಸೂರ್ಯ ಮತ್ತು ವಾಯುಗಳಿದ್ದರು? (ಹಿಂಭಾಗದಲ್ಲಿರುವ ಚಂದ್ರ-ಸೂರ್ಯರು ಉತ್ತೇಜನವನ್ನು ಕೊಟ್ಟುತ್ತರೆ ಮಾಡುತ್ತಾರೆ.

ಮುಂಭಾಗದಲ್ಲಿದ್ದರೆ ಪ್ರತಿಷೇಧ ಮಾಡುತ್ತಾರೆ). ಯಾರ ಸೈನ್ಯವನ್ನು ಕುರಿತು ನಾಯಿಗಳು ಬೊಗಳಿದವು? ಯಾವ ಯುವಕರ ಮುಖಗಳು ಪ್ರಸನ್ನ ವರ್ಣಗಳಿಂದ ಕೂಡಿದ್ದವು? ಈ ಎಲ್ಲ ತತ್ವವನ್ನೂ ನನಗೆ ನೀನು ಸರಿಯಾಗಿ ಹೇಳು.

ಸಂಜಯಃ

ಉಭೇ ಸೇನೇ ತುಲ್ಯಮಿವೋಪಯಾತೇ
ಉಭೇ ವ್ಯೂಹೇ ಹೃಷ್ಟರೂಪೇ ನರೇಂದ್ರ ।
ಉಭೇ ಚಿತ್ರೇ ವನರಾಶಿಪ್ರಕಾಶೇ
ತಥೈವೋಭೇ ನಾಗರಥಾಶ್ವಪೂರ್ಣೇ ॥೩॥

ಸಂಜಯ– ಎರಡು ಸೈನ್ಯಗಳೂ ಸಮಾನವಾದಂತೆಯೇ ಯುದ್ಧಭೂಮಿಗೆ ಬಂದವು. ಎಲೈ ನರೇಂದ್ರನೇ, ಎರಡು ವ್ಯೂಹಗಳೂ ಸಂತೋಷಗೊಂಡಿದ್ದವು. ಎರಡು ಸೈನ್ಯಗಳೂ ಸಾಗರದಂತೆ ವಿಚಿತ್ರವಾಗಿ ತೋರುತ್ತಿದ್ದವು ಮತ್ತು ಎರಡು ಸೈನ್ಯಗಳೂ ಅಶ್ವ, ಗಜ, ರಥಗಳಿಂದ ಪೂರ್ಣವಾಗಿದ್ದವು.

ಉಭೇ ಸೇನೇ ಬೃಹತೀ ಭೀಮರೂಪೇ
ತಥೈವೋಭೇ ಭಾರತ ದುರ್ವಿಷಹ್ಯೇ ॥
ತಥೈವೋಭೇ ಸ್ವರ್ಗಜಯಾಯ ಸೃಷ್ಟೇ
ತಥಾ ಹ್ಯುಭೇ ಸುರುಷಾರ್ಥಗುಪ್ತೇ ॥೪॥

ಎರಡು ಸೈನ್ಯಗಳೂ ದೊಡ್ಡದಾಗಿ ಭಯಂಕರವಾಗಿದ್ದವು. ಎಲೈ ಭಾರತನೇ, ಹಾಗೆಯೇ ಎರಡು ಸೈನ್ಯಗಳೂ ಸಹಿಸಲು ಅಸಾಧ್ಯವಾಗಿದ್ದವು. ಎರಡು ಸೈನ್ಯಗಳೂ ಸ್ವರ್ಗವನ್ನು ಜಯಿಸುವುದಕ್ಕೆ ಸೃಷ್ಟವಾಗಿದ್ದವು ಮತ್ತು ಎರಡು ಸೈನ್ಯಗಳೂ ಒಳ್ಳೆಯ ಪುರುಷಾರ್ಥದ ದೃಷ್ಟಿಯಿಂದ ರಕ್ಷಿತವಾಗಿದ್ದವು.

ಪಶ್ಚಾನ್ಮುಖಾಃ ಕುರವೋ ಧಾರ್ತರಾಷ್ಟ್ರಾಃ
ಸ್ಥಿತಾಃ ಪಾರ್ಥಾಃ ಪ್ರಾಙ್‌ಮುಖಾಃ ಯೋತ್ಸ್ಯಮಾನಾಃ ।
ದೈತ್ಯೇಂದ್ರಸೇನೇವ ಚ ಕೌರವಾಣಾಂ
ದೇವೇಂದ್ರಸೇನೇವ ಚ ಪಾಂಡವಾನಾಮ್ ॥೫॥

ಯುದ್ಧವನ್ನು ಮಾಡಲಿರುವ ಧೃತರಾಷ್ಟ್ರಪುತ್ರರಾದ ಕುರುಗಳು ಪಶ್ಚಿಮಾಭಿಮುಖವಾಗಿಯೂ ಪಾಂಡವರು ಪೂರ್ವಾಭಿಮುಖವಾಗಿಯೂ ನಿಂತರು. ಕೌರವರ ಸೈನ್ಯವು ದೈತ್ಯೇಂದ್ರರ ಸೇನೆಯಂತೆಯೂ, ಪಾಂಡವರ ಸೈನ್ಯವು ದೇವೇಂದ್ರನ ಸೈನ್ಯದಂತೆಯೂ ತೋರುತ್ತಿದ್ದಿತು.

ಶುಕ್ರೋ ವಾಯುಃ ಪೃಷ್ಠತಃ ಪಾಂಡವಾನಾಂ
ಧಾರ್ತರಾಷ್ಟ್ರಾನ್ ಶ್ವಪದಾ ವ್ಯಾಭಷಂತ ।
ಗಜೇಂದ್ರಾಣಾಂ ಮದಗಂಧಾಂಶ್ಚ ತೀವ್ರಾನ್
ನ ಸೇಹಿರೇ ತವ ಪುತ್ರಸ್ಯ ನಾಗಾಃ ॥೬॥

ಶುಕ್ರ ಮತ್ತು ವಾಯುಗಳು ಪಾಂಡವರ ಸೈನ್ಯದ ಹಿಂಭಾಗದಲ್ಲಿದ್ದವು. ದುರ್ಯೋಧನಾದಿಗಳನ್ನು ಕುರಿತು ನಾಯಿಗಳು ಬೊಗಳಿದವು. ಪಾಂಡವರ ಸೈನ್ಯದ ಶ್ರೇಷ್ಠ ಗಜಗಳ ಮದದ ಗಂಧವನ್ನು ನಿನ್ನ ಮಗನ ಗಜಗಳು ಸಹಿಸಲಿಲ್ಲ.

ದುರ್ಯೋಧನೋ ಹಸ್ತಿನಂ ಪದ್ಮವರ್ಣಂ
ಸುವರ್ಣಕಕ್ಷಂ ಜಾತಿಬಲಂ ಪ್ರಭಿನ್ನಮ್ ।
ಸಮಾಸ್ಥಿತೋ ಮಧ್ಯಗತಃ ಕುರೂಣಾಂ
ಸಂಸ್ತೂಯಮಾನೋ ಬಂದಿಭಿರ್ಮಾಗಧೈಶ್ಚ ॥೭॥

ದುರ್ಯೋಧನನು ಚಿನ್ನದ ಸರಪಣಿಗಳಿಂದ ಕೂಡಿದ ಒಳ್ಳೆಯ ಜಾತಿಯ ಮದಿಸಿದ ಪದ್ಮವರ್ಣದ ಆನೆಯನ್ನು ಏರಿ ಕುರುಗಳ ಮಧ್ಯದಲ್ಲಿ ವಂದಿ-ಮಾಗಧರಿಂದ ಸ್ತೋತ್ರ ಮಾಡಲ್ಪಟ್ಟುಸಿದ್ಧನಾಗಿದ್ದನು.

ಚಂದ್ರಪ್ರಭಂ ಶ್ವೇತಮಸ್ಯಾತಪತ್ರಂ
ಸೌವರ್ಣೇ ಸ್ರಗ್ ಭ್ರಾಜತೇ ಚೋತ್ತಮಾಂಗೇ ।
ತಂ ಸರ್ವತಃ ಶಕುನಿಃ ಪಾರ್ವತೀಯೈಃ
ಸಾರ್ಧಂ ಗಾಂಧಾರೈಃ ಪಾತಿ ಗಾಂಧಾರರಾಜಃ ॥೮॥

ಚಂದ್ರಕಾಂತಿಯುಳ್ಳ ಶ್ವೇತಚ್ಛತ್ರವು ಅವನ ಶಿರಸ್ಸಿನ ಮೇಲೆ ಇದ್ದಿತು. ಅವನ ತಲೆಯ ಮೇಲೆ ಸುವರ್ಣಮಯವಾದ ಮೂಲೆಯು ಹೊಳೆಯುತ್ತಿದ್ದಿತು. ಪರ್ವತ

ರಾಜರುಗಳಿಂದ ಕೂಡಿದ ಗಾಂಧಾರ ರಾಜನಾದ ಶಕುನಿಯು ಗಾಂಧಾರ ಯೋಧರಿಂದ ಕೂಡಿಕೊಂಡು ಅವನನ್ನು ಎಲ್ಲ ಕಡೆಯಲ್ಲಿಯೂ ರಕ್ಷಿಸುತ್ತಿದ್ದನು.

ಭೀಷ್ಮೋऽಗ್ರತಃ ಸರ್ವಸೈನ್ಯಸ್ಯ ವೃದ್ಧಃ
ಶ್ವೇತಶ್ಛತ್ರಃ ಶ್ವೇತಧನುಃ ಸಶಂಖಿಃ ।
ಶ್ವೇತೋಷ್ಣೀಷಃ ಪಾಂಡರೇಣ ಧ್ವಜೇನ
ಶ್ವೇತೈರಶ್ವೈಃ ಶ್ವೇತಶೈಲಪ್ರಕಾಶಃ ॥೯॥

ವೃದ್ಧರೂ, ಶ್ವೇತಚ್ಛತ್ರ ಉಳ್ಳವರೂ, ಶ್ವೇತಧನುಸ್ಸನ್ನೂ, ಶ್ವೇತವಾದ ಶಂಖವನ್ನೂ, ಶ್ವೇತವಾದ ರುಮಾಲನ್ನೂ, ಶ್ವೇತವಾದ ಧ್ವಜವನ್ನೂ, ಶ್ವೇತವಾದ ಅಶ್ವಗಳನ್ನೂ ಹೊಂದಿ ಶ್ವೇತ ಪರ್ವತದಂತಿದ್ದವರೂ ಆದ ಭೀಷ್ಮರು ಸರ್ವಸೈನ್ಯದ ಮುಂಭಾಗದಲ್ಲಿದ್ದರು.

ತಸ್ಯ ಸೈನ್ಯಂ ಧಾರ್ತರಾಷ್ಟ್ರಾಶ್ಚ ಸರ್ವೇ
ಬಾಹ್ಲೀಕಾನಾಮೇಕದೇಶಃ ಶಲಶ್ಚ ।
ಯೇ ಚಾಂಬಷ್ಠಾಃ ಕ್ಷತ್ರಿಯಾ ಯೇ ಚ ಸಿಂಧೌ
ತಥಾ ಸೌವೀರಾಃ ಪಂಚನದಾಶ್ಚ ಶೂರಾಃ ॥೧೦॥

ಅವರ ಸೈನ್ಯವೆಂದರೆ ಎಲ್ಲಾ ಧೃತರಾಷ್ಟ್ರಪುತ್ರರು, ಬಾಹ್ಲೀಕ ಸೈನ್ಯದ ಒಂದು ಭಾಗ, ಶಲ, ಅಂಬಷ್ಠರು, ಸಿಂಧುದೇಶದ ಕ್ಷತ್ರಿಯರು, ಸೌವೀರರು ಮತ್ತು ಪಂಚನದದ ಶೂರರು.

ಶೋಣೈರ್ಹಯೈ ರುಗ್ಮರಥೋ ಮಹಾತ್ಮಾ
ದ್ರೋಣೋ ಮಹಾಬಾಹುರದೀನಸತ್ತ್ವಃ ।
ಆಸ್ತೇ ಗುರುಃ ಪ್ರಯಶಾಃ ಸರ್ವರಾಜ್ಞಾಂ
ಪಶ್ಚಾಚ್ಚಮೂಮಿಂದ್ರ ಇವಾಭಿರಕ್ಷನ್ ॥೧೧॥

ಮಹಾಬಾಹುಗಳಾದ, ಧೈರ್ಯಶಾಲಿಗಳಾದ, ಮಹಾತ್ಮರಾದ ದ್ರೋಣರು ಕೆಂಪುಬಣ್ಣದ ಕುದುರೆಗಳನ್ನು ಹೂಡಿದ ಸುವರ್ಣರಥದಲ್ಲಿ ಇದ್ದರು. ಎಲ್ಲ ರಾಜರುಗಳಿಗೂ ಗುರುವಾದ, ಮಹಾಕೀರ್ತಿವಂತರಾದ ಅವರು ಹಿಂದಿನಿಂದ ಸೈನ್ಯವನ್ನು ರಕ್ಷಿಸುತ್ತಾ ಇಂದ್ರನಂತೆ ಇದ್ದರು.

ವಾರ್ದ್ಧಕ್ಷತ್ರಿಃ ಸರ್ವಸೈನ್ಯಸ್ಯ ಮಧ್ಯೇ
ಭೂರಿಶ್ರವಾಃ ಪುರುಮಿತ್ರೋ ಜಯಶ್ಚ।
ಸಾಲ್ವಾ ಮಾತ್ಸ್ಯಾಃ ಕೇಕಯಾಶ್ಚಾಪಿ ಸರ್ವೇ
ಗಜಾನೀಕೈರ್ಭ್ರಾತರೋ ಯೋತ್ಸಮಾನಾಃ ॥೧೨॥

ಎಲ್ಲಾ ಸೈನ್ಯದ ಮಧ್ಯಭಾಗದಲ್ಲಿ ವಾರ್ದ್ಧಕ್ಷತ್ರಿ (ಜಯದ್ರಥ), ಭೂರಿಶ್ರವ, ಪುರುಮಿತ್ರ, ಜಯ, ಸಾಲ್ವರು, ಮತ್ಸ್ಯರು ಮತ್ತು ಗಜಾನೀಕಗಳಿಂದ ಹೋರಾಡಲಿರುವ ಎಲ್ಲಾ ಕೇಕಯ ಸಹೋದರರೂ ಇದ್ದರು.

ಶಾರದ್ವತಶ್ಚೋತ್ತರಧೂರ್ಮಹಾತ್ಮಾ
ಮಹೇಷ್ವಾಸೋ ಗೌತಮಶ್ಚಿತ್ರಯೋಧೀ।
ಶಕೈಃ ಕಿರಾತೈರ್ಯವನೈಃ ಪಲ್ಲವೈಶ್ಚ
ಸಾರ್ಧಂ ಚಮೂಮುತ್ತರತೋಽಭಿಪಾತಿ ॥೧೩॥

ಮಹಾತ್ಮರೂ, ಮಹಾಧನುರ್ಧಾರಿಗಳೂ, ಚಿತ್ರಯೋಧಿಗಳೂ ಆದ ಗೌತಮ ಪುತ್ರರಾದ ಶಾರದ್ವತರಾದ ಕೃಪರು ಉತ್ತರ ಭಾಗದಲ್ಲಿ ಸೈನ್ಯದ ಭಾರವನ್ನು ಹೊತ್ತಿದ್ದರು. ಶಕರು, ಕಿರಾತರು, ಯವನರು, ಪಲ್ಲವರು ಇವರಿಂದ ಕೂಡಿ ಉತ್ತರ ಭಾಗದಲ್ಲಿ ಸೈನ್ಯದಲ್ಲಿ ಮುನ್ನಡೆಯುತ್ತಿದ್ದರು.

ಮಹಾರಥೈರಂಧಕವೃಷ್ಣಿಭೋಜ್ಯೈಃ
ಸೌರಾಷ್ಟ್ರಕೈರ್ಯೌಧೇಯೈರಾತ್ತಶಸ್ತ್ರೈಃ।
ಬೃಹದ್ಬಲಃ ಕೃತವರ್ಮಾಭಿಗುಪ್ತೋ
ಬಲಂ ತ್ವದೀಯಂ ದಕ್ಷಿಣತೋಽಭಿಪಾತಿ ॥೧೪॥

ಮಹಾರಥರಾದ ಅಂಧಕ-ವೃಷ್ಣಿ-ಭೋಜರಿಂದಲೂ ಸೌರಾಷ್ಟ್ರರಿಂದಲೂ, ಶಸ್ತ್ರಧಾರಿಗಳಾದ ರಾಕ್ಷಸರಿಂದಲೂ ಮತ್ತು ಕೃತವರ್ಮನಿಂದಲೂ ಚೆನ್ನಾಗಿ ರಕ್ಷಿತನಾದ ಬೃಹದ್ಬಲನು ನಿನ್ನ ಸೈನ್ಯದ ದಕ್ಷಿಣ ಭಾಗದಲ್ಲಿ ಮುಂದೆ ಸಾಗಿದನು.

ಸಂಶಪ್ತಕಾನಾಮಯುತಂ ರಥಾನಾಂ
ಮೃತ್ಯುರ್ಜಯೋ ವಾರ್ಜುನಸ್ಯೇತಿ ಸೃಷ್ಟಾಃ।

ಯೇನಾರ್ಜುನಸ್ಯೇನ ರಾಜನ್ ಕೃತಾಸ್ತ್ರಾಃ
ಪ್ರಯಾತಾ ವೈ ತೇ ತ್ರಿಗರ್ತಾಶ್ಚ ಶೂರಾಃ ॥೧೫॥

ಸಂಶಪ್ತಕರ ಒಂದು ಲಕ್ಷ ರಥಗಳು ಅರ್ಜುನನ ಮೇಲೆ ಜಯ ಅಥವಾ ನಮ್ಮ ಮೃತ್ಯು ಎಂಬ ಸಂಕಲ್ಪವುಳ್ಳವರಾಗಿ ಅಸ್ತ್ರಪಾರಂಗತರಾದ ಅವರು ಅರ್ಜುನನು ನಡೆದ ಮಾರ್ಗದಲ್ಲಿಯೇ ನಡೆದರು. ಎಲೈ ರಾಜನೇ, ತ್ರಿಗರ್ತ ದೇಶದ ಶೂರರು ಹಾಗೆಯೇ ಮಾಡಿದರು.

ಸಾಗ್ರಂ ಶತಸಹಸ್ರಂ ತು ನಾಗಾನಾಂ ತವ ಭಾರತ ।
ನಾಗೇ ನಾಗೇ ರಥಶತಂ ಶತಂ ಚಾಶ್ವಾ ರಥೇ ರಥೇ ॥೧೬॥

ಅಶ್ವೇಽಶ್ವೇ ದಶ ಧಾನುಷ್ಕಾ ಧಾನುಷ್ಕೇ ದಶ ಚರ್ಮಿಣಃ ।
ಏವಂ ವ್ಯೂಢಾನ್ಯನೀಕಾನಿ ಭೀಷ್ಮೇಣ ತವ ಭಾರತ ॥೧೭॥

ಎಲೈ ಭಾರತನೇ, ನಿನ್ನ ಸೈನ್ಯದಲ್ಲಿ ಒಂದು ಲಕ್ಷಕ್ಕೂ ಮೇಲ್ಪಟ್ಟು ಗಜಗಳು, ಪ್ರತಿ ಗಜಕ್ಕೂ ನೂರು ರಥಗಳು, ಪ್ರತಿ ರಥಕ್ಕೂ ನೂರು ಅಶ್ವಗಳು, ಪ್ರತಿ ಅಶ್ವಕ್ಕೂ ಹತ್ತು ಧನುರ್ಧಾರಿಗಳು, ಪ್ರತಿ ಧನುರ್ಧಾರಿಗೂ ಹತ್ತು ಚರ್ಮ (ಗುರಾಣಿ) ಧಾರಿಗಳು ಇರುವಂತೆ ಭೀಷ್ಮರು ನಿನ್ನ ಸೈನ್ಯವನ್ನು ವ್ಯೂಹ ಮಾಡಿದರು.

ಅವ್ಯೂಹನ್ ಮಾನುಷಂ ವ್ಯೂಹಂ ದೈವಂ ಗಾಂಧರ್ವಮಾಸುರಮ್ ।
ದಿವಸೇ ದಿವಸೇ ಪ್ರಾಪ್ತೇ ಭೀಷ್ಮಃ ಶಾಂತನವೋಽಗ್ರಣೀಃ ॥೧೮॥

ನಾಯಕರೂ, ಶಂತನು ಪುತ್ರರೂ ಆದ, ಮಾನುಷ-ದೈವ-ಗಾಂಧರ್ವ ಮತ್ತು ಆಸುರವ್ಯೂಹಗಳನ್ನು ತಿಳಿದ ಭೀಷ್ಮರು ಪ್ರತಿ ದಿವಸದಲ್ಲಿಯೂ ಬೇರೆ ಬೇರೆ ವ್ಯೂಹಗಳನ್ನು ರಚಿಸಿದ್ದರು.

ಮಹಾರಥೌಘವಿಪುಲಃ ಸಮುದ್ರ ಇವ ಪರ್ವಣಿ ।
ಭೀಷ್ಮೇಣ ಧಾರ್ತರಾಷ್ಟ್ರಾಣಾಂ ವ್ಯೂಹಃ ಪ್ರತ್ಯಙ್‌ಮುಖೋ ಯುಧಿ ॥

ಪರ್ವಕಾಲದ ಸಮುದ್ರದಂತೆ ಮಹಾರಥಗಳ ಸಮುದ್ರದಿಂದ ವಿಸ್ತಾರವಾದ, ಭೀಷ್ಮರು ರಚಿಸಿದ ದುರ್ಯೋಧನಾದಿಗಳ ವ್ಯೂಹವು, ಯುದ್ಧದಲ್ಲಿ ಪಶ್ಚಿಮಾಭಿಮುಖವಾಗಿದ್ದಿತು.

ಅನಂತರೂಪಾ ಧ್ವಜಿನೀ ತ್ವದೀಯಾ
ನರೇಂದ್ರ ಭೀಮಾ ನ ತು ಪಾಂಡವಾನಾಮ್ ।
ತಾಂ ತ್ವೇವ ಮನ್ಯೇ ಬೃಹತೀಂ ದುಷ್ಪ್ರಧೃಷ್ಯಾಂ
ಯಸ್ಯಾ ನೇತಾರೌ ಕೇಶವಶ್ಚಾರ್ಜುನಶ್ಚ ॥೨೦॥

ಎಲೈ ನರೇಂದ್ರನೇ, ನಿನ್ನ ಸೈನ್ಯವು ಕೊನೆಯೇ ಕಾಣದೇ ಭಯಂಕರವಾಗಿದ್ದಿತು. ಆದರೆ ಪಾಂಡವರ ಸೈನ್ಯವು (ಚಿಕ್ಕದಾದುದರಿಂದ) ಹಾಗಿರಲಿಲ್ಲ. ಆದರೆ ನಾನು, ಯಾವ ಸೈನ್ಯಕ್ಕೆ ಕೇಶವಾರ್ಜುನರು ನಾಯಕರಾಗಿದ್ದಾರೆಯೋ ಅಂತಹ ಪಾಂಡವರ ಸೈನ್ಯವನ್ನೇ ಸೋಲಿಸಲು ಅಸಾಧ್ಯವಾದುದು ಮತ್ತು ದೊಡ್ಡದಾದುದು ಎಂದು ತಿಳಿಯುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಏಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂದನೆಯ ಅಧ್ಯಾಯ

ಕೌರವಸೇನೆಯನ್ನು ನೋಡಿ ಚಕಿತನಾದ ಯುಧಿಷ್ಠಿರನಿಗೆ
ಅರ್ಜುನನ ಸಮಾಧಾನಕರ ವಚನಗಳು.

ಸಂಜಯಃ

ಬೃಹತೀಂ ಧಾರ್ತರಾಷ್ಟ್ರಾಣಾಂ ದೃಷ್ಟ್ವಾ ಸೇನಾಂ ಸಮುದ್ಯತಾಮ್ ।
ವಿಷಾದಮಗಮದ್ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ॥೧॥

ಸಂಜಯ– ಕುಂತೀಪುತ್ರನಾದ ಯುಧಿಷ್ಠಿರ ರಾಜನು ದುರ್ಯೋಧನನ ಬೃಹತ್ತಾದ ಸೇನೆಯು ಉದ್ಯುಕ್ತವಾದುದನ್ನು ನೋಡಿ ವಿಷಾದವನ್ನು ಹೊಂದಿದನು.

ವ್ಯೂಹಂ ಭೀಷ್ಮೇಣ ಚಾಭೇದ್ಯಂ ಕಲ್ಪಿತಂ ಪ್ರೇಕ್ಷ್ಯ ಪಾಂಡವಃ ।
ಅಭೇದ್ಯಮಿವ ಸಂಪ್ರೇಕ್ಷ್ಯ ವಿಷಣ್ಣೋಽರ್ಜುನಮಬ್ರವೀತ್ ॥೨॥

ಭೀಷ್ಮರಿಂದ ರಚಿತವಾದ ಅಭೇದ್ಯವಾದ ವ್ಯೂಹವನ್ನು ನೋಡಿ, ಅದನ್ನು ಅಭೇದ್ಯವೆಂದು ತಿಳಿದು ಅರ್ಜುನನನ್ನು ಕುರಿತು ವಿಷಾದದಿಂದ ಮಾತನಾಡಿದನು.

ಧನಂಜಯ ಕಥಂ ಶಕ್ಯಮಸ್ಮಾಭಿರ್ಯೋದ್ಧುಮಾಹವೇ ।
ಧಾರ್ತರಾಷ್ಟ್ರೈರ್ಮಹಾಬಾಹೋ ಯೇಷಾಂ ಯೋದ್ಧಾ ಪಿತಾಮಹಃ ॥

ಮಹಾಬಾಹುವಾದ ಎಲೈ ಧನಂಜಯನೇ, ಯಾವ ದುರ್ಯೋಧನಾದಿಗಳಿಗೆ ಪಿತಾಮಹರಾದ ಭೀಷ್ಮರು ಯೋಧರಾಗಿದ್ದಾರೆಯೋ, ಅಂತಹ ಸುಯೋಧನಾದಿಗಳ ಜೊತೆಯಲ್ಲಿ ನಾವು ಹೇಗೆ ಯುದ್ಧವನ್ನು ಮಾಡಲು ಸಾಧ್ಯ ?

ಅಕ್ಷೋಭ್ಯೋಽಯಮಭೇದ್ಯಶ್ಚ ಭೀಷ್ಮೇಣಾಮಿತ್ರಕರ್ಶಿನಾ ।
ಕಲ್ಪಿತಃ ಶಾಸ್ತ್ರದೃಷ್ಟೇನ ವಿಧಿನಾ ಭೂರಿತೇಜಸಾ ॥೪॥

ಮಹಾತೇಜಸ್ವಿಗಳಾದ, ಶತ್ರುಸಂಹಾರಕರಾದ ಭೀಷ್ಮರು ಶಾಸ್ತ್ರದೃಷ್ಟಿಯಿಂದ ರಚಿಸಿರುವ ಈ ವ್ಯೂಹವು ಅಲುಗಾಡಿಸಲು ಅಥವಾ ಭೇದಿಸಲು ಅಸಾಧ್ಯವಾದುದು.

ತೇ ವಯಂ ಸಂಶಯಂ ಪ್ರಾಪ್ತಾಃ ಸೈನ್ಯೇ ಶತ್ರುಕರ್ಶನ ।
ಕಥಮಸ್ಮಾತ್ ಮಹಾವ್ಯೂಹಾದುದ್ಯಾನಂ ನೋ ಭವಿಷ್ಯತಿ ॥೫॥

ಎಲೈ ಶತ್ರುಕರ್ಶನನೇ, ಈ ದೊಡ್ಡ ವ್ಯೂಹದಿಂದ ನಾವು ಹೇಗೆ ಪಾರಾಗುವವು ಎಂದು ನಮಗೆ ಸಂಶಯವುಂಟಾಗಿದೆ.

ಸಂಜಯಃ

ಅಥಾರ್ಜುನೋಽಬ್ರವೀದ್ ಪಾರ್ಥಂ ಯುಧಿಷ್ಠಿರಮಮಿತ್ರಹಾ ।
ವಿಷಣ್ಣಮಭಿಸಂಪ್ರೇಕ್ಷ್ಯ ತವ ರಾಜನ್ನನೀಕಿನೀಮ್ ॥೬॥

ಸಂಜಯ– ಎಲೈ ರಾಜನೇ, ಅನಂತರ ನಿಮ್ಮ ಸೈನ್ಯವನ್ನು ನೋಡಿ ವಿಷಣ್ಣನಾದ ಯುಧಿಷ್ಠಿರನನ್ನು ಕುರಿತು ಶತ್ರುಸಂಹಾರಕನಾದ ಅರ್ಜುನನು ಮಾತನಾಡಿದನು.

ಪ್ರಜ್ಞಯಾಭ್ಯಧಿಕಾನ್ ಶೂರಾನ್ ಗುಣಯುಕ್ತಾನ್ ಬಹೂನಪಿ ।
ಜಯಂತ್ಯಲ್ಪತರಾ ಯೇನ ತನ್ನಿಬೋಧ ವಿಶಾಂಪತೇ ॥೭॥

ಎಲೈ ರಾಜನೇ, ಪ್ರಜ್ಞೆಯಿಂದ ಅಧಿಕರಾದ ಶೂರರೂ, ಗುಣನಿಯುಕ್ತರೂ ಆದ ಅಲ್ಪತರ ಸೈನ್ಯವುಳ್ಳವರು ಬಹುಸೈನ್ಯವನ್ನು ಹೇಗೆ ಜಯಿಸುತ್ತಾರೆ ಎಂಬುದನ್ನು ಕೇಳು.

ತತ್ತು ತೇ ಕಾರಣಂ ರಾಜನ್ ಪ್ರವಕ್ಷ್ಯಾಮ್ಯನಸೂಯವೇ ।
ನಾರದಸ್ತಮೃಷಿರ್ವೇದ ಭೀಷ್ಮದ್ರೋಣೌ ಚ ಪಾಂಡವ ॥೮॥

ಎಲೈ ರಾಜನೇ, ಅಸೂಯಾರಹಿತನಾದ ನಿನಗೆ ಅಂತಹ ಜಯಕ್ಕೆ ಕಾರಣವನ್ನು ಹೇಳುವೆನು. ಎಲೈ ಪಾಂಡವನೇ, ಅದನ್ನು ನಾರದಋಷಿಗಳೂ ಮತ್ತು ಭೀಷ್ಮ-ದ್ರೋಣರೂ ತಿಳಿದಿದ್ದಾರೆ.

ಏತಮೇವಾರ್ಥಮಾಶ್ರಿತ್ಯ ಯುದ್ಧೇ ದೇವಾಸುರೇऽಬ್ರವೀತ್ ।
ಪಿತಾಮಹಃ ಕಿಲ ಪುರಾ ಮಹೇಂದ್ರಾದೀನ್ ದಿವೌಕಸಃ ॥೯॥

ಹಿಂದೆ ದೇವಾಸುರಯುದ್ಧದಲ್ಲಿ ಪಿತಾಮಹರಾದ ಬ್ರಹ್ಮದೇವರು ಇದೇ ವಿಷಯದಲ್ಲಿ ಮಹೇಂದ್ರ ಮೊದಲಾದ ದೇವತೆಗಳನ್ನು ಕುರಿತು ಮಾತನಾಡಿದರು.

ನ ತಥಾ ಬಲವೀರ್ಯಾಭ್ಯಾಂ ವಿಜಯಂತೇ ಜಿಗೀಷವಃ ।
ಯಥಾ ಸತ್ಯಾನೃಶಂಸಾಭ್ಯಾಂ ಧರ್ಮೇಣೈವೋದ್ಯಮೇನ ಚ ॥೧೦॥

ಸತ್ಯ, ಮಾರ್ದವ, ಧರ್ಮ ಮತ್ತು ಪ್ರಯತ್ನಗಳಿಂದ ಎಂತಹ ಜಯವನ್ನು ಸಾಧಿಸಬಹುದೋ ಅಂತಹ ಜಯವನ್ನು ಹೊಂದಲು ಇಚ್ಛಿಸುವವರು ಕೇವಲ ಬಲ-ವೀರ್ಯಗಳಿಂದ ಸಾಧಿಸುವುದಿಲ್ಲ.

ತ್ಯಕ್ತ್ವಾ ऽऽಧರ್ಮಂ ಚ ಲೋಭಂ ಚ ಮೋಹಂ ಚೋದ್ಯಮಮಾಸ್ಥಿತಾಃ ।
ಯುಧ್ಯಧ್ವಮನಹಂಕಾರಾ ಯತೋ ಧರ್ಮಸ್ತತೋ ಜಯಃ ॥೧೧॥

ಅಧರ್ಮವನ್ನೂ, ಲೋಭವನ್ನೂ ತ್ಯಜಿಸಿ ಅಹಂಕಾರವನ್ನು ಬಿಟ್ಟು ಪ್ರಯತ್ನಶೀಲರಾಗಿ ಯುದ್ಧವನ್ನು ಮಾಡಿ. ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವು ಉಂಟಾಗುತ್ತದೆ.

ಯತ್ರ ಕೃಷ್ಣಶ್ಚ ವೇದಾತ್ಮಾ ಸರ್ವಸರ್ವೇಶ್ವರೋ ಹರಿಃ ।
ಜಯಸ್ತತ್ರ ಮಹಾಬಾಹೋ ಯಥಾ ಮೇ ಪ್ರಾಹ ನಾರದಃ ॥೧೨॥

ಎಲೈ ಮಹಾಬಾಹುವಾದ ಯುಧಿಷ್ಠಿರನೇ, ಎಲ್ಲಿ ಸಕಲ ವೇದಸ್ವಾಮಿಯಾದ, ಸರ್ವಸರ್ವೇಶ್ವರನಾದ ಹರಿಯಾದ ಕೃಷ್ಣನು ಇರುವನೋ ಅಲ್ಲಿಯೇ ಜಯವೆಂದು ನನಗೆ ನಾರದರು ಹೇಳಿದ್ದಾರೆ.

ಏವಂ ರಾಜನ್ ವಿಜಾನೀಹಿ ಧ್ರುವೋಽಸ್ಮಾಕಂ ರಣೇ ಜಯಃ ।
ಯಥಾ ಮೇ ನಾರದಃ ಪ್ರಾಹ ಯತಃ ಕೃಷ್ಣಸ್ತತೋ ಜಯಃ ॥೧೩॥

ಎಲೈ ರಾಜನೇ, ಈ ರೀತಿಯಾಗಿ ನಮಗೆ ಜಯವು ನಿಶ್ಚಿತವಾದುದೆಂದು ತಿಳಿ. ನಾರದರು ನನಗೆ ಹೇಳಿದಂತೆ ಎಲ್ಲಿ ಕೃಷ್ಣನಿದ್ದಾನೋ ಅಲ್ಲಿ ಜಯವುಂಟಾಗುತ್ತದೆ.

ಗುಣಭೂತೋ ಜಯಃ ಕೃಷ್ಣೇ ಪೃಷ್ಟತೋಽನ್ವೇತಿ ಮಾಧವಮ್ ।
ಅಭಿಜಾತಿಜಯಸ್ತಸ್ಯ ಸನ್ನತಿಶ್ಚಾಪರೋ ಗುಣಃ ॥೧೪॥

ಗುಣರೂಪವಾದ ಜಯವು ಮಧುಕುಲದಲ್ಲಿ ಜನಿಸಿದ ಕೃಷ್ಣನು ಎಲ್ಲಿ ಹೋದರೆ ಅಲ್ಲಿ ಅವನನ್ನು ಹಿಂಬಾಲಿಸುತ್ತದೆ. ಜಯವು ಅವನಿಗೆ ಸ್ವಭಾವದಿಂದಲೇ ಸಿದ್ಧವಾದುದು. ಅವನ ವಿನಯವು ಇನ್ನೊಂದು ಗುಣ.

ಅನಂತತೇಜಾ ಗೋವಿಂದಃ ಶತ್ರುಘೋಷೇಷು ನಿರ್ವ್ಯಥಃ ।
ಪುರುಷಃ ಸನಾತನತಮೋ ಯತಃ ಕೃಷ್ಣಸ್ತತೋ ಜಯಃ ॥೧೫॥

ಗೋವಿಂದನು ಅನಂತ ಪರಾಕ್ರಮವುಳ್ಳವನು. ಶತ್ರುಸಮೂಹಗಳಿಂದ ಯಾವ ವ್ಯಥೆಯೂ ಇಲ್ಲದೆ ಇರುವವನು. ಅವನು ಅತ್ಯಂತ ಸನಾತನನಾದ ಪುರುಷ. ಎಲ್ಲಿ ಕೃಷ್ಣನೋ ಅಲ್ಲಿ ಜಯವುಂಟಾಗುತ್ತದೆ.

ಪುರಾ ಹ್ಯೇಷ ಹರಿರ್ಭೂತ್ವಾ ವೈಕುಂಠೋಽಕುಂಠಸಾಯಕಃ ।
ಸುರಾಸುರಾನಮಸ್ಕೃರ್ದನ್ಪಬ್ರವೀತ್ ಕೇ ಜಯಂತ್ವಿತಿ ॥೧೬॥

ಹಿಂದೆ ಕುಂಠಿತವಲ್ಲದ ಬಾಣಗಳುಳ್ಳ ವೈಕುಂಠನಾದ ಹರಿಯಾದ ಇವನು ಸುರಾಸುರರನ್ನು ಉದ್ದೇಶಿಸಿ ಯಾರು ಜಯಿಸಬೇಕು ಎಂದು ಕೇಳಿದನು.

ಅನುಕೃಷ್ಣಂ ಜಯಾಮ ಇತಿ ಯೈರುಕ್ತಂ ತತ್ರ ತೈರ್ಜಿತಮ್ ।
ತತ್ಪ್ರಸಾದಾದ್ಧಿ ತೈರೋಕ್ಯಂ ಪ್ರಾಪ್ತಂ ಶಕ್ರಾದಿಭಿಃ ಸುರೈಃ ॥೧೭॥

ಕೃಷ್ಣನನ್ನು ಅನುಸರಿಸಿ ನಾವು ಗೆಲ್ಲುತ್ತೇವೆ ಎಂದು ಯಾರು ಹೇಳಿದರೋ ಅವರು ಗೆದ್ದರು. ಅವನ ಅನುಗ್ರಹದಿಂದಲೇ ಇಂದ್ರಾದಿ ದೇವತೆಗಳು ತ್ರೈಲೋಕ್ಯವನ್ನು ಪಡೆದರು.

ತಸ್ಯ ತೇ ನ ವ್ಯಥಾಂ ಕಾಂಚಿದಿಹ ಪಶ್ಯಾಮಿ ಭಾರತ ।
ಯಸ್ಯ ತೇ ಜಯಮಾಶಾಸ್ತೇ ವಿಶ್ವಭುಕ್ ತ್ರಿದಶೇಶ್ವರಃ ॥೧೮॥

ಎಲೈ ಭಾರತನೇ, ಯಾವ ನಿನಗೆ ವಿಶ್ವಸಂಹಾರಕನೂ, ದೇವತೆಗಳ ಒಡೆಯನೂ ಆದ ಕೃಷ್ಣನು ಜಯವನ್ನು ಆಶಂಸಿಸುತ್ತಾನೆಯೋ ಅಂತಹ ನಿನಗೆ ವ್ಯಥೆಯನ್ನು ಪಡುವುದಕ್ಕೆ ಯಾವ ಕಾರಣವೂ ಇಲ್ಲವೆಂದು ಭಾವಿಸುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಏಕವಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆರಡನೆಯ ಅಧ್ಯಾಯ

ಯುದ್ಧಕ್ಕಾಗಿ ಯುಧಿಷ್ಠಿರಾದಿಗಳ ನಿರ್ಗಮನ. ಸಂಜಯನಿಂದ ಉಭಯ ಸೈನ್ಯಗಳ ಅಭ್ಯುದಯಲಕ್ಷಣಗಳ ಕಥನ.

ಸಂಜಯಃ

ತತೋ ಯುಧಿಷ್ಠಿರೋ ರಾಜಾ ಸ್ವಾಂ ಸೇನಾಂ ಸಮಚೋದಯತ್ ।
ಪ್ರತಿವ್ಯೂಹನ್ನನೀಕಾನಿ ಭೀಷ್ಮಸ್ಯ ಭರತರ್ಷಭ ॥೧॥

ಸಂಜಯ– ಎಲೈ ಭರತರ್ಷಭನೇ, ಅನಂತರ ಯುಧಿಷ್ಠಿರನು ಭೀಷ್ಮರ ವ್ಯೂಹಕ್ಕೆ ಎದುರಾಗಿ ತನ್ನ ಸೈನ್ಯಗಳನ್ನು ವ್ಯೂಹ ಮಾಡಿ ಅದನ್ನು ಪ್ರಚೋದಿಸಿದನು.

ಯಥೋದ್ದಿಷ್ಟಾನ್ಯನೀಕಾನಿ ಪ್ರತ್ಯವ್ಯೂಹಂತ ಪಾಂಡವಾಃ ।
ಸ್ವರ್ಗಂ ಪರಮಭೀಪ್ಸಂತಃ ಸುಯುದ್ಧೇನ ಕುರೂದ್ವಹಾಃ ॥೨॥

ಕುರೂದ್ವಹರಾದ ಪಾಂಡವರು ಒಳ್ಳೆಯ ಯುದ್ಧದಿಂದ ಸ್ವರ್ಗವನ್ನು ಪಡೆಯಲು ಇಚ್ಛಿಸಿ, ಮೊದಲು ಸಂಕಲ್ಪಿಸಿದಂತೆ ಸೈನ್ಯಗಳಿಂದ ಪ್ರತಿವ್ಯೂಹವನ್ನು ರಚಿಸಿದರು.

ಮಧ್ಯೇ ಶಿಖಂಡಿನೋऽನೀಕಂ ರಕ್ಷಿತಂ ಸವ್ಯಸಾಚಿನಾ ।
ಧೃಷ್ಟದ್ಯುಮ್ನಶ್ಚ ಸ್ವಯಂ ಭೀಮೇನ ಪರಿಪಾಲಿತಃ ॥೩॥

ಮಧ್ಯದಲ್ಲಿದ್ದ ಶಿಖಂಡಿಯ ಸೈನ್ಯವು ಸವ್ಯಸಾಚಿಯಾದ ಅರ್ಜುನನಿಂದ ರಕ್ಷಿಸಲ್ಪಟ್ಟಿತು. ಧೃಷ್ಟದ್ಯುಮ್ನನನ್ನು ಸ್ವಯಂ ಭೀಮನೇ ರಕ್ಷಿಸುತ್ತಿದ್ದನು.

ಅನೀಕಂ ದಕ್ಷಿಣಂ ರಾಜನ್ ಯುಯುಧಾನೇನ ಪಾಲಿತಮ್ ।
ಶ್ರೀಮತಾ ಸಾತ್ವತಾ ತೇನ ಶಕ್ರೇಣೇವ ಧನುಷ್ಮತಾ ॥೪॥

ಎಲೈ ರಾಜನೇ, ಬಲಭಾಗದ ಸೈನ್ಯವನ್ನು ಧನುರ್ಧಾರಿಯಾದ ಸಾತ್ವತ ಪ್ರವರನಾದ ಸಂಪದ್ಯುಕ್ತನಾದ ಯುಯುಧಾನನು ಇಂದ್ರನಂತೆ ಪಾಲಿಸಿದನು.

ಮಹೇಂದ್ರಯಾನಪ್ರತಿಮಂ ರಥಂ ತು
ಸೋಪಸ್ಕರಂ ಹಾಟಕರತ್ನಚಿತ್ರಮ್ ।
ಯುಧಿಷ್ಠಿರಃ ಕಾಂಚನಭಾಂಡಯೋಕ್ತ್ರಂ
ಸಮಾಸ್ಥಿತೋ ನಾಗಕುಲಸ್ಯ ಮಧ್ಯೇ ॥೫॥

ಯುಧಿಷ್ಠಿರನು ಮಹೇಂದ್ರನ ರಥಕ್ಕೆ ಸದೃಶವಾದ ಎಲ್ಲ ಉಪಕರಣಗಳಿಂದ ಕೂಡಿದ ಸುವರ್ಣ ಮತ್ತು ರತ್ನಗಳಿಂದ ವಿಚಿತ್ರವಾಗಿದ್ದ, ಸುವರ್ಣಮಯವಾದ ಕಡಗೂಟ ಮತ್ತು ಹಗ್ಗಗಳನ್ನು ಹೊಂದಿದ್ದ ರಥವನ್ನು ಏರಿ ಗಜಸಮೂಹದ ಮಧ್ಯೆ ಇದ್ದನು.

ಸಮುಚ್ಛ್ರಿತಂ ದಾಂತಶಲಾಕಮಸ್ಯ
ಸುಪಾಂಡರಂ ಛತ್ರಮತೀವ ಭಾತಿ ।
ಪ್ರದಕ್ಷಿಣಂ ಚೈನಮುಪಾಚರಂತಿ
ಮಹರ್ಷಯಃ ಸಂಸ್ತುತಿಭಿರ್ನರೇಂದ್ರಮ್ ॥೬॥

ಗಜದಂತಮಯವಾದ ದಂಡವುಳ್ಳ ಎತ್ತರವಾದ ಅವನ ಅತ್ಯಂತ ಬಿಳಿಯದಾದ ಛತ್ರವು ಬಹಳವಾಗಿ ಶೋಭಿಸುತ್ತಿದ್ದಿತು. ನರೇಂದ್ರನಾದ ಅವನನ್ನು ಮಹರ್ಷಿಗಳು ಒಳ್ಳೆಯ ಸ್ತೋತ್ರಗಳಿಂದ ಪ್ರದಕ್ಷಿಣೆಯನ್ನು ಮಾಡಿ ಪುರಸ್ಕರಿಸಿದರು.

ಪುರೋಹಿತಾಃ ಶತ್ರುವಧಂ ವದಂತೋ
ಮಹರ್ಷಿವೃದ್ಧಾಃ ಶ್ರುತವಂತ ಏವ ।
ಜಪ್ಯೈಶ್ಚ ಮಂತ್ರೈಶ್ಚ ತಥೌಷಧೀಭಿಃ
ಸಮಂತತಃ ಸ್ವಸ್ತ್ಯಯನಂ ಪ್ರಚಕ್ರುಃ ॥೭॥

ಪುರೋಹಿತರೂ, ಮಹರ್ಷಿಗಳೂ, ವೃದ್ಧರೂ, ಜ್ಞಾನಸಂಪನ್ನರೂ ಆದ ಅವರು ಶತ್ರುವಧವನ್ನು ಹಾರೈಸುತ್ತಾ ಜಪಗಳಿಂದಲೂ, ಮಂತ್ರಗಳಿಂದಲೂ ಮತ್ತು ಔಷಧಿಗಳಿಂದಲೂ ಅವನಿಗೆ ಎಲ್ಲಕಡೆಯಿಂದಲೂ ಕ್ಷೇಮವನ್ನು ಉಂಟುಮಾಡಿದರು.

ತತಃ ಸ ವಸ್ತ್ರಾಣಿ ತಥೈವ ಗಾಶ್ಚ
ಫಲಾನಿ ಪುಷ್ಪಾಣಿ ತಥೈವ ನಿಷ್ಕಾನ್ ।
ಕುರೂತ್ತಮೋ ಬ್ರಾಹ್ಮಣಸಾನ್ನಹಾತ್ಮಾ
ಕುರ್ವನ್ ಯಯೌ ಶತ್ರ ಇವಾಮರೇಭ್ಯಃ ॥೮॥

ಅನಂತರ ಮಹಾತ್ಮನಾದ ಕುರುಶ್ರೇಷ್ಠನಾದ ಅವನು ಆ ಬ್ರಾಹ್ಮಣರಿಗೆ ವಸ್ತ್ರಗಳನ್ನೂ, ಗೋವುಗಳನ್ನೂ, ಫಲ-ಪುಷ್ಪಗಳನ್ನೂ, ಸುವರ್ಣವನ್ನೂ ದೇವತೆಗಳಿಗೆ ಇಂದ್ರನು ಕೊಟ್ಟಂತೆ ದಾನ ಮಾಡುತ್ತಾ ಮುಂದೆ ಸಾಗಿದನು.

ಸಹಸ್ರಸೂರ್ಯಃ ಶತಕಿಂಕಿಣೀಕಃ
ಪರಾರ್ಧ್ಯಜಾಂಬೂನದಹೇಮಚಿತ್ರಃ ।
ರಥೋऽರ್ಜುನಸ್ಯಾಗ್ನಿರಿವಾರ್ಚಿಮಾಲೀ
ವಿಭ್ರಾಜತೇ ಶ್ವೇತಹಯಃ ಸುಚಕ್ರಃ ॥೯॥

ಅರ್ಜುನನ ರಥವು ಸಹಸ್ರ ಸೂರ್ಯರಿಂದಲೂ, ನೂರು ಕಿಂಕಿಣಿಗಳಿಂದಲೂ, ಬಹಳ ಬೆಲೆಬಾಳುವ ಜಾಂಬೂನದ ರೂಪವಾದ ಸುವರ್ಣಗಳಿಂದಲೂ ಕೂಡಿ ಕಿರಣಗಳ ಮಾಲೆಯುಳ್ಳ ಅಗ್ನಿಯಂತೆ ಶ್ವೇತಹಯಗಳಿಂದಲೂ ಮತ್ತು ಒಳ್ಳೆಯ ಚಕ್ರಗಳಿಂದಲೂ ಶೋಭಿಸುತ್ತಿದ್ದಿತು.

ತಮಾಸ್ಥಿತಃ ಕೇಶವಸಂಗೃಹೀತಂ
ಕಪಿಧ್ವಜಂ ಗಾಂಡಿವಬಾಣಹಸ್ತಃ ।

ಧನುರ್ಧರೋ ಯಸ್ಯ ಸಮಃ ಪೃಥಿವ್ಯಾಂ
ನ ವಿದ್ಯತೇ ನೋ ಭವಿತಾ ವಾ ಕದಾಚಿತ್ ॥೧೦॥

ಯಾವ ಅರ್ಜುನನಿಗೆ ಸಮಾನವಾದ ಧನುರ್ಧರನು ಪೃಥಿವಿಯಲ್ಲಿ ಹಿಂದೆ ಇರಲಿಲ್ಲವೋ, ಈಗ ಇಲ್ಲವೋ ಮತ್ತು ಮುಂದೆ ಎಂದೂ ಬರುವುದಿಲ್ಲವೋ ಅಂತಹ ಅರ್ಜುನನು ಗಾಂಡೀವ ಧನುಸ್ಸು ಮತ್ತು ಶರಗಳನ್ನು ಕೈಯಲ್ಲಿ ಹಿಡಿದು ಕೃಷ್ಣನಿಂದ ಸಂಗೃಹೀತವಾದ ಕಪಿಧ್ವಜವುಳ್ಳ ರಥವನ್ನು ಏರಿದ್ದನು.

ಉದ್ವರ್ತಯಿಷ್ಯಂಸ್ತವ ಪುತ್ರಸೇನಾಮ್
ಅತೀವ ರೌದ್ರಂ ಸ ಬಿಭರ್ತಿ ರೂಪಮ್ ।
ಅನಾಯುಧೋ ಯಃ ಸುಭುಜೋ ಭುಜಾಭ್ಯಾಂ
ನರಾಶ್ವನಾಗಾನ್ ಯುಧಿ ಭಸ್ಮ ಕುರ್ಯಾತ್ ॥೧೧॥

ಸ ಭೀಮಸೇನಃ ಸಹಿತೋ ಯಮಾಭ್ಯಾಂ
ವೃಕೋದರೋ ವೀರರಥಸ್ಯ ಗೋಪ್ತಾ ।

ಒಳ್ಳೆಯ ಭುಜಗಳುಳ್ಳ ಯಾವನು ಯಾವ ಆಯುಧವೂ ಇಲ್ಲದೆ ತನ್ನ ಭುಜಗಳಿಂದಲೇ ಯುದ್ಧದಲ್ಲಿ ಅಶ್ವ-ಗಜ-ಪದಾತಿಗಳನ್ನು ಭಸ್ಮ ಮಾಡಿಯಾನೋ, ಅಂತಹ ಭೀಮಸೇನನು ನಿನ್ನ ಪುತ್ರರ ಸೈನ್ಯವನ್ನು ಶೋಷಿಸುತ್ತಾ ಉಗ್ರವಾದ ರೂಪವನ್ನು ಹೊಂದಿದ್ದನು. ಅಂತಹ ಭೀಮಸೇನನು ನಕುಲ-ಸಹದೇವರಿಂದ ಸಹಿತನಾಗಿ ವೀರನಾದ ಅರ್ಜುನನ ರಥಕ್ಕೆ ರಕ್ಷಕನಾಗಿದ್ದನು.

ತಂ ಪ್ರೇಕ್ಷ್ಯ ಮತ್ತರ್ಷಭಸಿಂಹಖೇಲಂ
ಲೋಕೇ ಮಹೇಂದ್ರಪ್ರತಿಮಾನಕಲ್ಪಮ್ ॥೧೨॥
ಸಮೀಕ್ಷ್ಯ ಸೇನಾಗ್ರಗತಂ ದುರಾಸದಂ
ಪ್ರವಿವ್ಯಥುಃ ಪಂಕಗತಾ ಇವೋಷ್ಟ್ರಾಃ ।
ವೃಕೋದರಂ ವಾರಣರಾಜದರ್ಪಂ
ಯೋಧಾಸ್ತವೀಯಾ ಭಯವಿಗ್ನಮಸ್ತ್ರಾಃ ॥೧೩॥

ಮದಿಸಿದ ಗೂಳಿಯ ಮತ್ತು ಸಿಂಹದ ಲೀಲೆಯುಳ್ಳ, ಲೋಕದಲ್ಲಿ ಮಹೇಂದ್ರನಿಗೆ ಸದೃಶವಾದ ಸಾಮರ್ಥ್ಯವನ್ನು ಹೊಂದಿದ್ದ, ಸೇನೆಯ ಮುಂಭಾಗದಲ್ಲಿ ದುರಾಸದನಾದ, ಗಜರಾಜನ ದರ್ಪವನ್ನು ಹೊಂದಿದ್ದ ವೃಕೋದರನನ್ನು ನೋಡಿ ನಿನ್ನ ಯೋಧರು ಭಯದಿಂದ ತಮ್ಮ ಧೈರ್ಯವನ್ನು ಕಳೆದುಕೊಂಡರು.

ಅನೀಕಮಧ್ಯೇ ತಿಷ್ಠಂತಂ ರಾಜಪುತ್ರಂ ದುರಾಸದಮ್ ।
ಅಬ್ರವೀದ್ ಭರತಶ್ರೇಷ್ಠಂ ಗುಡಾಕೇಶಂ ಜನಾರ್ದನಃ ॥೧೪॥

ಸೈನ್ಯದ ಮಧ್ಯದಲ್ಲಿದ್ದ ದುರಾಸದನಾದ, ಭರತಶ್ರೇಷ್ಠನಾದ, ರಾಜಪುತ್ರನಾದ ಗುಡಾಕೇಶನನ್ನು ಕುರಿತು ಕೃಷ್ಣನು ಮಾತನಾಡಿದನು.

ಯ ಏಷ ಗೋಪ್ತಾ ಪ್ರತಪನ್ ಬಲಸ್ಯೋ
ಯೋ ನಃ ಸೇನಾಂ ಸಿಂಹ ಇವೇಕ್ಷತೇ ಚ ।
ಸ ಏಷ ಭೀಷ್ಮಃ ಕುರುವಂಶಕೇತುಃ
ಯೇನಾಹೃತಾಸ್ತ್ರಿಶತೋ ವಾಜಿಮೇಧಾಃ ॥೧೫॥

ಯಾವ ಇವನು ಕಾಂತಿಯಿಂದ ಜ್ವಲಿಸುತ್ತಾ, ಶತ್ರುಸೈನ್ಯದಲ್ಲಿದ್ದು ರಕ್ಷಿಸುತ್ತಿರುವನೋ, ಯಾವನು ನಮ್ಮ ಸೈನ್ಯವನ್ನು ಸಿಂಹದಂತೆ ನೋಡುತ್ತಿದ್ದಾನೆಯೋ, ಅವನೇ ಕುರುವಂಶಧ್ವಜನಾದ ಭೀಷ್ಮ. ಅವನು ಮೂವತ್ತು ಅಶ್ವಮೇಧಯಾಗವನ್ನು ಮಾಡಿದವನು.

ಏತಾನ್ಯನೀಕಾನಿ ಮಹಾನುಭಾವಂ
ಗೂಹಂತಿ ಮೇಘಾ ಇವ ಘರ್ಮರಾಶಿಮ್ ।
ಏತಾನಿ ಹತ್ವಾ ಪುರುಷಪ್ರವೀರ
ಕಾಂಕ್ಷಸ್ವ ಯುದ್ಧಂ ಭರತರ್ಷಭೇಣ ॥೧೬॥

ಈ ಸೈನ್ಯಗಳು ಮೋಡಗಳು ಸೂರ್ಯನನ್ನು ಮುಚ್ಚಿದಂತೆ ಮಹಾನುಭಾವನಾದ ಅವನನ್ನು ಮರೆ ಮಾಡುತ್ತಿವೆ. ಎಲೈ ಪುರುಷಪ್ರವೀರನೇ, ಈ ಸೈನ್ಯಗಳನ್ನು ಸಂಹರಿಸಿ ಭರತಶ್ರೇಷ್ಠನಾದ ಅವನ ಜೊತೆಯಲ್ಲಿ ಯುದ್ಧವನ್ನು ಬಯಸುವವನಾಗು.

ಧೃತರಾಷ್ಟ್ರಃ

ಕೇಷಾಂ ಪ್ರಹೃಷ್ಟಾಸ್ತತ್ರಾಗ್ರೇ ಯೋಧಾ ಯುಧ್ಯಂತಿ ಸಂಜಯ ।
ಉದಗ್ರಮನಸಃ ಕೇಽತ್ರ ಕೇ ವಾ ದೀನಾ ವಿಚೇತಸಃ ॥೧೭॥

ಧೃತರಾಷ್ಟ್ರ- ಎಲೈ ಸಂಜಯನೇ, ಎರಡು ಪಕ್ಷಗಳಲ್ಲಿ ಯಾವ ಪಕ್ಷದ ಸೈನಿಕರು ಮೊದಲು ಸಂತೋಷದಿಂದ ಯುದ್ಧವನ್ನು ಮಾಡಿದರು? ಧೈರ್ಯದಿಂದ ಕೂಡಿದ ಉದಾತ್ತವಾದ ಮನಸ್ಸುಳ್ಳವರು ಯಾರು? ದೈನ್ಯದಿಂದ ಕೂಡಿ ಪ್ರಜ್ಞಾಶೂನ್ಯರಾದವರು ಯಾರು?

ಕೇ ಪೂರ್ವಂ ಪ್ರಾಹರಂಸ್ತತ್ರ ಯುದ್ಧೇ ಹೃದಯಕಂಪನೇ ।
ಮಾಮಕಾಃ ಪಾಂಡವಾನಾಂ ವಾ ತನ್ಮಮಾಚಕ್ಷ್ವ ಸಂಜಯ ॥೧೮॥

ಎಲೈ ಸಂಜಯನೇ, ಹೃದಯವನ್ನು ನಡುಗಿಸುವ ಆ ಯುದ್ಧದಲ್ಲಿ ನನ್ನವರಲ್ಲಿ ಯಾರು ಮೊದಲು ಪ್ರಹಾರವನ್ನು ಮಾಡಿದರು ಅಥವಾ ಪಾಂಡವರಲ್ಲಿ ಯಾರು ಮೊದಲು ಪ್ರಹಾರವನ್ನು ಮಾಡಿದರು? ಅದನ್ನು ನನಗೆ ಹೇಳು.

ಕಸ್ಯ ಸೇನಾಸಮುದಾಯೇ ಗಂಧಮಾಲ್ಯಸಮುದ್ಭವಃ ।
ವಾಚಃ ಪ್ರದಕ್ಷಿಣಾಶ್ಚೈವ ಯೋಧಾನಾಮಭಿಗರ್ಜತಾಮ್ ॥೧೯॥

ಯಾರ ಸೇನಾಸಮೂಹದಲ್ಲಿ ಗಂಧ-ಮಾಲ್ಯಗಳು ಉಂಟಾದವು? ಗರ್ಜಿಸುವ ಯೋಧರಿಂದ ಶುಭಕರವಾದ ಮಾತುಗಳು ಯಾರಿಂದ ಕೇಳಿ ಬಂದವು?

ಸಂಜಯಃ

ಉಭಯೋಃ ಸೇನಯೋಸ್ತತ್ರ ಯೋಧಾ ಜಹೃಷಿರೇ ಮುದಾ ।
ಸ್ರಜಶ್ಚೋತ್ತಮಗಂಧಾನಾಮುಭಯತ್ರ ಸಮುದ್ಭವಃ ॥೨೦॥

ಸಂಜಯ- ಎರಡು ಸೈನ್ಯಗಳ ಯೋಧರೂ ಸಹ ಸಂತೋಷದಿಂದ ಕೂಡಿದ್ದರು. ಅವರು ಧರಿಸಿದ ಮಾಲೆಗಳಿಂದ ಶ್ರೇಷ್ಠವಾದ ಗಂಧವು ಎರಡು ಸೈನ್ಯಗಳಲ್ಲಿಯೂ ಉಂಟಾಯಿತು.

ಸಂಹತಾನಾಮನೀಕಾನಾಂ ವ್ಯೂಢಾನಾಂ ಭರತರ್ಷಭ ।
ಸಂಪರ್ಪತಾಮುದೀರ್ಣಾನಾಂ ಏಮರ್ದಃ ಸುಮಹಾನಭೂತ್ ॥೨೧॥

ಎಲೈ ಭರತರ್ಷಭನೇ, ವ್ಯೂಹಗಳನ್ನು ರಚಿಸಿ ಸೈನ್ಯಗಳು ಒಂದನ್ನೊಂದು ಎದುರಿಸಿದಾಗ ಮುಂದೆ ಸಾಗುವ ವಿರುದ್ಧವಾದ ಆ ಸೈನ್ಯಗಳಿಗೆ ದೊಡ್ಡ ಸಂಘರ್ಷ ಉಂಟಾಯಿತು.

ವಾದಿತ್ರಶಬ್ದಸ್ತುಮುಲಃ ಶಂಖಭೇರೀವಿಮಿಶ್ರಿತಃ ।
ಶೂರಾಣಾಂ ರಣಶೂರಾಣಾಂ ಗರ್ಜತಾಮಿತರೇತರಮ್ ॥೨೨॥

ಶಂಖ-ಭೇರಿನಾದದಿಂದ ಮಿಶ್ರಿತವಾದ ವಾದಿತ್ರಗಳ ಶಬ್ದವೂ ಪರಸ್ಪರವಾಗಿ ಗರ್ಜಿಸುವ ರಣಶೂರರಾದ ಶೂರರ ಶಬ್ದವೂ ಕೋಲಾಹಲಕಾರಿಯಾಗಿದ್ದಿತು.

ಉಭಯೋಃ ಸೇನಯೋ ರಾಜನ್ ಮಹಾನ್ ವ್ಯತಿಕರೋऽಭವತ್ ।
ಅನ್ಯೋನ್ಯಂ ವೀಕ್ಷಮಾಣಾನಾಂ ಯೋಧಾನಾಂ ಭರತರ್ಷಭ ।
ಕುಂಜರಾಣಾಂ ಚ ನದತಾಂ ಸೈನ್ಯಾನಾಂ ಚ ಪ್ರಹೃಷ್ಯತಾಮ್ ॥೨೩॥

ಎಲೈ ರಾಜನೇ, ಎರಡು ಸೈನ್ಯಗಳಿಗೂ ದೊಡ್ಡ ಮಿಶ್ರಣವುಂಟಾಯಿತು. ಎಲೈ ಭರತರ್ಷಭನೇ, ಪರಸ್ಪರವಾಗಿ ನೋಡುವ ಯೋಧರಿಗೂ, ಗಜಗಳಿಗೂ, ಸಂತೋಷದಿಂದ ಕೇಕೆ ಹಾಕುವ ಸೇನೆಗಳಿಗೂ ದೊಡ್ಡ ಮಿಶ್ರಣ ಉಂಟಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ದ್ವಾವಿಂಶೋऽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ – ೨೫ನೇ ಅಧ್ಯಾಯ

ತೇ ಸೇನೇ ಸಮರಾರಂಭೇ ಸಮೇತೇ ಸಾಗರೋಪಮೇ ।
ಭೀಮಭೀಷ್ಮಮುಖೇ ವೀಕ್ಷ್ಯ ಪ್ರಾಹ ವಾಸವಿರಚ್ಯುತಮ್ ॥೧॥

ಯುದ್ಧದ ಆರಂಭದಲ್ಲಿ ಭೀಮ ಭೀಷ್ಮರ ನಾಯಕತ್ವದಲ್ಲಿ ನಿಂತ ಸಾಗರದಂಥ ಎರಡು ಸೇನೆಗಳನ್ನು ಕಂಡು ಅರ್ಜುನ ಶ್ರೀಕೃಷ್ಣನಿಗೆ ನುಡಿದ.

ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ ।
ಇತ್ಯುಕ್ತಃ ಸ ತಥಾ ಚಕ್ರೇ ಪಾರ್ಥಃ ಪಶ್ಯಂಶ್ಚ ಬಾಂಧವಾನ್ ॥೨೫॥

'ಹೇ ಅಚ್ಯುತ, ಎರಡು ಸೈನ್ಯಗಳ ನಡುವೆ ನನ್ನ ರಥವನ್ನು ನಿಲ್ಲಿಸು' ಎಂದು ಅರ್ಜುನ ನುಡಿದಾಗ ಕೃಷ್ಣ ಹಾಗೇ ಮಾಡಿದ. ಅರ್ಜುನ ಸೈನ್ಯದಲ್ಲಿ ಬಾಂಧವರನ್ನು ಕಂಡ.

ವಿಸಸರ್ಜ ಧನುಃ ಪಾಪಾಶಂಕೀ ತತ್ರಾऽಹ ಮಾಧವಃ ।
ಸ್ವಧರ್ಮೋ ದುಷ್ಪದಮನಂ ಧರ್ಮಜ್ಞಾನಪಾಲನಮ್ ।
ಕ್ಷತ್ರಿಯಸ್ಯ ತಮುತ್ಸೃಜ್ಯ ನಿಂದಿತೋ ಯಾತ್ಯಧೋ ಧ್ರುವಮ್ ॥೩॥

ಅರ್ಜುನ ಯುದ್ಧದಿಂದ ಪಾಪ ಬರುವುದೆಂದು ಶಂಕಿಸಿ ಬಿಲ್ಲನ್ನು ಕೆಳಗೆ ಚೆಲ್ಲಿದ. ಆಗ ಶ್ರೀಕೃಷ್ಣ ನುಡಿದ. 'ದುಷ್ಪರನ್ನು ಸಂಹರಿಸುವುದು ಮತ್ತು ಆ ಮೂಲಕ ಧರ್ಮಜ್ಞಾನಗಳನ್ನು ಕಾಪಾಡುವುದು ಕ್ಷತ್ರಿಯನಿಗೆ ವಿಹಿತವಾದ ಸ್ವಧರ್ಮ. ಸ್ವಧರ್ಮವನ್ನು ಬಿಟ್ಟರುವವನು ನಿಂದಿತನಾಗಿ ಅಧೋಗತಿ ಹೊಂದುತ್ತಾನೆ.

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥೪॥

ಈ ಜಗತ್ತಿನ ಸಕಲ ಪ್ರಾಣಿಗಳ ಪ್ರವೃತ್ತಿ ಯಾರಿಂದಾಗುವುದೋ ಯಾರಿಂದ ಈ ಎಲ್ಲ ಜಗತ್ತೂ ವ್ಯಾಪ್ತವಾಗಿದೆಯೋ ಆ ಭಗವಂತನನ್ನು ಸ್ವಹಿತ ಕರ್ಮಾನುಷ್ಠಾನದಿಂದ ಚೆನ್ನಾಗಿ ಆರಾಧಿಸಿಯೆ ಮಾನವ ಸಿದ್ಧಿ ಪಡೆಯುತ್ತಾನೆ.

ನ ಚ ಶೋಕಸ್ತ್ವಯಾ ಕಾರ್ಯೋ ಬಂಧೂನಾಂ ನಿಧನೇಕ್ಷಯಾ ।
ದೇಹಸ್ಯ ಸರ್ವಥಾ ನಾಶಾದನಾಶಾಚ್ಚೇತನಸ್ಯ ಚ ॥೫॥

ಯುದ್ಧೇಚ್ಛೆ ಬಂಧುಗಳ ಮರಣಕ್ಕೆ ಕಾರಣವಾಗುವುದೆಂದು ನೀನು ಶೋಕ ಪಡಬಾರದು. ಏಕೆಂದರೆ ದೇಹಕ್ಕೆ ಸರ್ವಥಾ ನಾಶವಿದೆ. ಚೈತನ್ಯಕ್ಕೆ ಸರ್ವಥಾ ನಾಶವಿಲ್ಲ.

ಸೃಷ್ಟ್ವಾತ್ಮಯಾಜ್ಞಾಬಂಧೋಕ್ಷಪ್ರವೃತ್ತಯಃ ।
ಪ್ರಕಾಶನಿಯಮೌ ಚೈವ ಬ್ರಹ್ಮೇಶಾದಿಷ್ವಸ್ಯ ಚ ॥೬॥

ಅಕ್ಷರಪ್ರಕೃತೇಃ ಸಂತೋ ಮತ್ತ ಏವ ನ ಚಾನ್ಯತಃ ॥೭॥

ಸೃಷ್ಟಿಸ್ಥಿತಿ ಲಯ ಅಜ್ಞಾನ ಬಂಧ ಮೋಕ್ಷ ಪ್ರವೃತ್ತಿ ಪ್ರಕಾಶ ನಿಯಮಗಳು ಬ್ರಹ್ಮ-ರುದ್ರಾದಿ ಕ್ಷರಪುರುಷರಿಗೂ ಅಕ್ಷರ ಪುರುಷಳಾದ ಲಕ್ಷ್ಮಿಗೂ ಇರುವವುಗಳು ನನ್ನಿಂದಲೇ ಆಗುವವು. ಬೇರೆ ಯಾರಿಂದಲೂ ಅಲ್ಲ.

ನ ಮೇ ಕುತಶ್ಚಿತ್ ಸ್ವರ್ಗಾದ್ಯಾಃ ಸ್ವಾತಂತ್ರ್ಯಾದ್ ಗುಣಪೂರ್ತಿತಃ ।
ಅತಃ ಸಮಾಧಿಕಾಭಾವಾನ್ಮಮ ಮದ್ವಶಮೇವ ಚ ॥೮॥

ಸ್ವಾತಂತ್ರ್ಯವಿರುವುದರಿಂದಲೂ ಗುಣಪೂರ್ಣತ್ವವಿರುವುದರಿಂದಲೂ ನನಗೆ ಯಾರಿಂದಲೂ ಸೃಷ್ಟ್ಯಾದಿಗಳಿಲ್ಲ. ಅದರಿಂದ ನನಗೆ ಸಮಾನನಾಗಲಿ ಉತ್ತಮನಾಗಲಿ ಇಲ್ಲದುದರಿಂದ ಎಲ್ಲವೂ ನನ್ನ ವಶದಲ್ಲಿಯೆ ಇರುತ್ತದೆ.

ಜ್ಞಾತ್ವೈಷಾಂ ನಿಧನಾದ್ಯಂ ಚ ಜೀವಾದೇರಸ್ವತಂತ್ರತಾಮ್ ।
ಅಸ್ವಾತಂತ್ರ್ಯನ್ನಿವೃತ್ತೌ ಚ ಮಾಮನುಸ್ಮರ ಯುಧ್ಯ ಚ ॥೯॥

ಈ ಬಾಂಧವರ ಮರಣಾದಿಗಳು ನನ್ನ ವಶವೆಂದು ತಿಳಿದು ಜೀವ ಜಡಗಳಿಗೆ ಅಸ್ವಾತಂತ್ರ್ಯವನ್ನೂ ತಿಳಿದು, ಯುದ್ಧದಿಂದ ಹಿಂತಿರುಗಲೂ ನೀನು ಅಸ್ವತಂತ್ರನಾದ್ದರಿಂದ, ಯುದ್ಧವನ್ನೇ ಮಾಡು. ಅದು ನನ್ನ ಪೂಜೆ ಎಂದು ನನ್ನನ್ನು ಸ್ಮರಿಸು.

ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥೧೦॥

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನಚಿರಾತ್ ಪಾರ್ಥ ಮಯ್ಯಾವೇಶಿತಚೇತಸಾಮ್ ॥೧೧॥

ಯಾರು ಎಲ್ಲ ಕರ್ಮಗಳನ್ನೂ ನನ್ನಲ್ಲಿ ಪೂಜೆಯ ರೂಪದಿಂದ ಸಮರ್ಪಿಸಿ ನನ್ನನ್ನು ಅನ್ಯ ದೇವತೆಗಳಂತೆ ಕಾಣದೆ ಸರ್ವೋತ್ತಮನೆಂದು ಅನನ್ಯ ಯೋಗದಿಂದ ಧ್ಯಾನಿಸುತ್ತ ಉಪಾಸನೆ ಮಾಡುವರೋ ನನ್ನಲ್ಲಿ ನೆಟ್ಟ ಮನಸ್ಸಿನವರಾದ ಅವರಿಗೆ ನಾನು ಬೇಗನೆ ಮರಣದಿಂದ ಸಂಸಾರ ಸಾಗರದಿಂದ ಉದ್ಧಾರಕನೆನಿಸುತ್ತೇನೆ.

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥೧೨॥

ಅವ್ಯಕ್ತರೂಪನಾದ ನನ್ನಿಂದ ಈ ಎಲ್ಲ ಜಗತ್ತೂ ವ್ಯಾಪ್ತವಾಗಿದೆ. ಎಲ್ಲ ಚೇತನರೂ ನನ್ನನ್ನು ಆಶ್ರಯಿಸಿದ್ದಾರೆ.

ಸಂಪೂರ್ಣಸತ್ಸರ್ವಗುಣದೇಹೋಽಹಂ ಸರ್ವದಾ ಪ್ರಭುಃ ।
ಅಸ್ಪೃಷ್ಟಾಖಿಲದೋಷೈಕನಿತ್ಯಸತ್ತನುರವ್ಯಯಃ ॥೧೩॥

ಇತ್ಯುಕ್ತೋ ವಾಸವಿಃ ಪ್ರಾಹ ವ್ಯಾಪ್ತಿಂ ತೇ ದರ್ಶಯೇಶ ಮೇ ॥೧೪॥

ಪರಿಪೂರ್ಣ ಸದ್ಗುಣಗಳೆ ಸ್ವರೂಪ ದೇಹವಾಗಿ ಉಳ್ಳವನು ನಾನು ಸದಾ ಸರ್ವಶಕ್ತ. ಎಲ್ಲ ದೋಷಗಳಿಂದ ದೂರವಾದ ನಿತ್ಯವಾದ ಉತ್ತಮ ಶರೀರ ಉಳ್ಳವನು. ನಾಶ ರಹಿತ. ಹೀಗೆ ಶ್ರೀಕೃಷ್ಣ ನುಡಿದಾಗ ಅರ್ಜುನನೆಂದ, 'ಪ್ರಭು, ನೀನು ನಿನ್ನ ವ್ಯಾಪ್ತಿಯನ್ನು ತೋರಿಸು'.

ಅಥ ದಿವ್ಯದೃಶಂ ತಸ್ಯ ದತ್ವಾ ವ್ಯಾಪ್ತಂ ನಿಜಂ ವಪುಃ ।
ದೇಶತಃ ಕಾಲತಶ್ಚೈವ ಪೂರ್ಣಂ ಸರ್ವಗುಣೈಃ ಸದಾ ।
ದರ್ಶಯಾಮಾಸ ಭಗವಾನ್ ಯಾವತ್ಕಾರ್ಜುನಯೋಗ್ಯತಾ ॥೧೫॥

ಆಗ ಭಗವಾನ್ ಶ್ರೀಕೃಷ್ಣ ಅರ್ಜುನನಿಗೆ ದಿವ್ಯ ದೃಷ್ಟಿ ನೀಡಿ ವ್ಯಾಪ್ತವಾದ, ದೇಶಕಾಲಗಳಿಂದಲೂ ಸಕಲ ಗುಣಗಳಿಂದಲೂ ಸದಾಪೂರ್ಣವೂ ಆದ ತನ್ನ ಶರೀರವನ್ನು ಅರ್ಜುನನ ಯೋಗ್ಯತೆ ಇದ್ದಷ್ಟು ತೋರಿದ.

ತತ್ಪಾರ್ಥಿತಃ ಪುನಃ ಕೃಷ್ಣಸ್ತದ್ರೂಪಂ ಲೌಕಮಾನಯತ್ ।
ಪೂರ್ವವದ್ ದರ್ಶಯಾಮಾಸ ಪುನಶ್ಚೈನಮಶಿಕ್ಷಯತ್ ॥೧೬॥

ಜ್ಞಾನಚಕ್ಷೇಯಪ್ರಕೃತ್ಯಾದಿ ಜ್ಞಾಪಯನ್ ಪುರುಷೋತ್ತಮಃ ।
ತೇನಾನುಶಿಷ್ಟಃ ಪಾರ್ಥಸ್ತು ಸಶರಂ ಧನುರಾದದೇ ॥೧೭॥

ಅರ್ಜುನನಿಂದ ಪ್ರಾರ್ಥಿತನಾದ ಪುರುಷೋತ್ತಮ ಶ್ರೀಕೃಷ್ಣ ಪುನಃ ಅವನ ರೂಪವನ್ನು ಲೌಕದೃಷ್ಟಿಗನುಸಾರ ಹಿಂದಿನಂತೆ ಮಾಡಿ ತೋರಿಸಿದ. ಪುನಃ

ಅರ್ಜುನನಿಗೆ ಜ್ಞಾನಜ್ಞೇಯ ಸ್ವಭಾವ ಯೋಗ್ಯತಾದಿಗಳನ್ನು ತಿಳಿಸುತ್ತ ಯುದ್ಧ ಮಾಡೆಂದು ಉಪದೇಶಿಸಿದ. ಅವನಿಂದ ಉಪದೇಶ ಹೊಂದಿದ ಅರ್ಜುನ ಧನುರ್ಬಾಣಗಳನ್ನು ಎತ್ತಿಕೊಂಡ.

★ ★ ★ ★ ★

ಇಪ್ಪತ್ತೂರನೆಯ ಅಧ್ಯಾಯ

ಭಗವದ್ಗೀತೆ – ಅರ್ಜುನ ವಿಷಾದ ಯೋಗ

ಧೃತರಾಷ್ಟ್ರಃ

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥೧॥

ಧೃತರಾಷ್ಟ್ರ– ಎಲೈ ಸಂಜಯನೇ, ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧ ಮಾಡಲು ಬಯಸಿದ ನನ್ನವರು ಮತ್ತು ಪಾಂಡವರು ಏನು ಮಾಡಿದರು?

ಅನೇಕ ಜನರು ಒಂದು ಭೂಮಿಯಲ್ಲಿ ಒಂದೇ ಕಾಲದಲ್ಲಿ ಸಂಯುಕ್ತರಾಗುವುದನ್ನೇ ಸಮವಾಯ ಎಂದು ಹೇಳಿದ ಶ್ರೀಕೃಷ್ಣನು ಸಂಯೋಗವಿಶೇಷವೇ ಸಮವಾಯ ಹೊರತು ನ್ಯಾಯವೈಶೇಷಿಕರು ಹೇಳುವಂತೆ ಸಮವಾಯವು ಒಂದು ಪ್ರತ್ಯೇಕ ಸಂಬಂಧವಲ್ಲ ಎಂದು ಸೂಚಿಸುತ್ತಾನೆ.

ಸಂಜಯಃ

ದೃಷ್ಟ್ವಾ ತು ಪಾಂಡವಾನೀಕಂ ವ್ಯೂಢಂ ದುರ್ಯೋಧನಸ್ತದಾ ।
ಆಚಾರ್ಯಮುಪಸಂಗಮ್ಯ ರಾಜಾ ವಚನಮಬ್ರವೀತ್ ॥೨॥

ಸಂಜಯ– ಆಗ ರಾಜನಾದ ದುರ್ಯೋಧನನು ಪಾಂಡವರ ಸೈನ್ಯವು ವ್ಯೂಹಗೊಂಡಿದ್ದನ್ನು ನೋಡಿ ದ್ರೋಣಾಚಾರ್ಯರ ಸಮೀಪಕ್ಕೆ ಬಂದು ಮಾತನಾಡಿದನು.

ಪಶ್ಯೈತಾಂ ಪಾಂಡುಪುತ್ರಾಣಾಮಾಚಾರ್ಯ ಮಹತೀಂ ಚಮೂಮ್ ।
ವ್ಯೂಢಾಂ ದ್ರುಪದಪುತ್ರೇಣ ತವ ಶಿಷ್ಯೇಣ ಧೀಮತಾ ॥೩॥

ಆಚಾರ್ಯರೇ, ನಿಮ್ಮ ಶಿಷ್ಯನಾದ ದ್ರುಪದ ಪುತ್ರನಾದ ಮೇಧಾವಿಯಾದ ಧೃಷ್ಟದ್ಯುಮ್ನನಿಂದ ವ್ಯೂಹ ಮಾಡಲ್ಪಟ್ಟಿರುವ ಪಾಂಡವರ ಈ ದೊಡ್ಡ ಸೈನ್ಯವನ್ನು ನೋಡಿ.

ಅತ್ರ ಶೂರಾ ಮಹೇಷ್ವಾಸಾ ಭೀಮಾರ್ಜುನಸಮಾ ಯುಧಿ ।
ಯುಯುಧಾನೋ ವಿರಾಟಶ್ಚ ದ್ರುಪದಶ್ಚ ಮಹಾರಥಃ ॥೪॥

ಧೃಷ್ಟಕೇತುಶ್ಚೇಕಿತಾನಃ ಕಾಶಿರಾಜಶ್ಚ ವೀರ್ಯವಾನ್ ।
ಪುರುಜಿತ್ ಕುಂತಿಭೋಜಶ್ಚ ಶೈಬ್ಯಶ್ಚ ನರಪುಂಗವಃ ॥೫॥

ಯುಧಾಮನ್ಯುಶ್ಚ ವಿಕ್ರಾಂತ ಉತ್ತಮೌಜಾಶ್ಚ ವೀರ್ಯವಾನ್ ।
ಸೌಭದ್ರೋ ದ್ರೌಪದೇಯಾಶ್ಚ ಸರ್ವ ಏವ ಮಹಾರಥಾಃ ॥೬॥

ಇಲ್ಲಿ ಯುದ್ಧದಲ್ಲಿ ಭೀಮಾರ್ಜುನರಿಗೆ ಸಮರಾದ, ಶೂರರಾದ ಅನೇಕ ಧನುರ್ಧಾರಿಗಳಿದ್ದಾರೆ. ಯುಯುಧಾನ, ವಿರಾಟ, ಮಹಾರಥನಾದ ದ್ರುಪದ, ಧೃಷ್ಟಕೇತು, ಚೇಕಿತಾನ, ಪರಾಕ್ರಮಶಾಲಿಯಾದ ಕಾಶಿರಾಜ, ಪುರುಜಿತ್, ಕುಂತಿಭೋಜ, ನರಶ್ರೇಷ್ಠನಾದ ಶೈಬ್ಯ, ಪರಾಕ್ರಮಶಾಲಿಯಾದ ಯುಧಾಮನ್ಯು, ವೀರ್ಯಶಾಲಿಯಾದ ಉತ್ತಮೌಜ, ಸುಭದ್ರೆಯ ಮಗನಾದ ಅಭಿಮನ್ಯು, ದ್ರೌಪದಿಯ ಮಕ್ಕಳು ಎಲ್ಲರೂ ಮಹಾರಥರು.

ಅಸ್ಮಾಕಂ ತು ವಿಶಿಷ್ಟಾ ಯೇ ತಾನ್ ನಿಬೋಧ ದ್ವಿಜೋತ್ತಮ ।
ನಾಯಕಾ ಮಮ ಸೈನ್ಯಸ್ಯ ಸಂಜ್ಞಾರ್ಥಂ ತಾನ್ ಬ್ರವೀಮಿ ತೇ ॥೭॥

ಎಲೈ ದ್ವಿಜಶ್ರೇಷ್ಠರೇ, ನಮ್ಮ ಸೈನ್ಯದಲ್ಲಿ ವಿಶಿಷ್ಟರಾದ ನಾಯಕರನ್ನು ನಿಮ್ಮ ಗಮನಕ್ಕೆ ತರುವುದಕ್ಕಾಗಿ ಹೇಳುತ್ತಿದ್ದೇನೆ, ಅದನ್ನು ಕೇಳಿ.

ಭವಾನ್ ಭೀಷ್ಮಶ್ಚ ಕರ್ಣಶ್ಚ ಕೃಪಃ ಶಲ್ಯೋ ಜಯದ್ರಥಃ ।
ಅಶ್ವತ್ಥಾಮಾ ವಿಕರ್ಣಶ್ಚ ಸೌಮದತ್ತಿಸ್ತಥೈವ ಚ ॥೮॥

ಅನ್ಯೇ ಚ ಬಹವಃ ಶೂರಾಃ ಮದರ್ಥೇ ತ್ಯಕ್ತಜೀವಿತಾಃ ।
ನಾನಾಶಸ್ತ್ರಪ್ರಹರಣಾಃ ಸರ್ವೇ ಯುದ್ಧವಿಶಾರದಾಃ ॥೯॥

ನೀವು, ಭೀಷ್ಮರು, ಕರ್ಣ, ಕೃಪರು, ಶಲ್ಯ, ಜಯದ್ರಥ, ಅಶ್ವತ್ಥಾಮ, ವಿಕರ್ಣ, ಸೋಮದತ್ತನ ಮಗನಾದ ಭೂರಿಶ್ರವ, ಅದರಂತೆ ಯುದ್ಧವಿಶಾರದರಾದ, ಎಲ್ಲರೂ ಕೈಗಳಲ್ಲಿ ಅನೇಕ ವಿಧವಾದ ಶಸ್ತ್ರಗಳನ್ನು ಹಿಡಿದಿರುವ, ನನ್ನ ಸಲುವಾಗಿ ಪ್ರಾಣವನ್ನು ತೊರೆಯಲು ಸಿದ್ಧರಿರುವ ಇನ್ನೂ ಅನೇಕ ಶೂರರು.

ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಮ್ ।
ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಭೀಮಾಭಿರಕ್ಷಿತಮ್ ॥೧೦॥

ಭೀಷ್ಮರಿಂದ ರಕ್ಷಿತವಾದ ಈ ನಮ್ಮ ಸೈನ್ಯವು ಸಮರ್ಥವಾಗಿದೆ ಎನಿಸುವುದಿಲ್ಲ. ಭೀಮನಿಂದ ರಕ್ಷಿತವಾದ ಅವರ ಸೈನ್ಯವು ಸಮರ್ಥವಾಗಿದೆ.

ಅಯನೇಷು ಚ ಸರ್ವೇಷು ಯಥಾಭಾಗಮವಸ್ಥಿತಾಃ ।
ಭೀಷ್ಮಮೇವಾಭಿರಕ್ಷಂತು ಭವಂತಃ ಸರ್ವ ಏವ ಹಿ ॥೧೧॥

ನೀವೆಲ್ಲರೂ ನಿಮ್ಮ ನಿಮ್ಮ ಭಾಗಗಳಲ್ಲಿ ನಿಂತು ಎಲ್ಲ ಯುದ್ಧ ಮಾರ್ಗಗಳಲ್ಲಿಯೂ ಭೀಷ್ಮರನ್ನೇ ರಕ್ಷಿಸಿ.

ಸಂಜಯಃ

ತಸ್ಯ ಸಂಜನಯನ್ ಹರ್ಷಂ ಕುರುವೃದ್ಧಃ ಪಿತಾಮಹಃ ।
ಸಿಂಹನಾದಂ ವಿನದ್ಯೋಚ್ಚೈಃ ಶಂಖಂ ದಧ್ಮೌ ಪ್ರತಾಪವಾನ್ ॥೧೨॥

ಸಂಜಯ– ಕುರುವೃದ್ಧರೂ, ಪಿತಾಮಹರೂ ಆದ ಭೀಷ್ಮರು ಅವನಿಗೆ ಸಂತೋಷವನ್ನು ಉಂಟುಮಾಡುವವರಾಗಿ ಗಟ್ಟಿಯಾದ ಸಿಂಹನಾದವನ್ನು ಮಾಡಿ ಪ್ರತಾಪಶಾಲಿಯಾದ ಅವರು ತಮ್ಮ ಶಂಖವನ್ನು ಊದಿದರು.

ತತಃ ಶಂಖಾಶ್ಚ ಭೇರ್ಯಶ್ಚ ಪಣವಾನಕಗೋಮುಖಾಃ ।
ಸಹಸೈವಾಭ್ಯಹನ್ಯಂತ ಸ ಶಬ್ದಸ್ತುಮುಲೋಽಭವತ್ ॥೧೩॥

ಅನಂತರ ಶಂಖಗಳು, ಭೇರಿಗಳು, ಪಣವ, ಆನಕ ಮತ್ತು ಗೋಮುಖಗಳು ತಕ್ಷಣದಲ್ಲಿಯೇ ಊದಲ್ಪಟ್ಟವು ಮತ್ತು ಬಾರಿಸಲ್ಪಟ್ಟವು. ಆ ಶಬ್ದವು ಬಹಳ ತೀವ್ರವಾಗಿದ್ದಿತು.

ತತಃ ಶ್ವೇತಹಯೈರ್ಯುಕ್ತೇ ಮಹತಿ ಸ್ಯಂದನೇ ಸ್ಥಿತೌ ।
ಮಾಧವಃ ಪಾಂಡವಶ್ಚೈವ ದಿವ್ಯೌ ಶಂಖೌ ಪ್ರದಧ್ಮತುಃ ॥೧೪॥

ಅನಂತರ ಬಿಳಿಯ ಕುದುರೆಗಳನ್ನು ಹೂಡಿದ ದೊಡ್ಡ ರಥದಲ್ಲಿ ಕುಳಿತು ಮಾಧವನಾದ ಕೃಷ್ಣನು ಮತ್ತು ಪಾಂಡುಪುತ್ರನಾದ ಅರ್ಜುನನು ತಮ್ಮ ದಿವ್ಯವಾದ ಶಂಖಗಳನ್ನು ಊದಿದರು.

ಪಾಂಚಜನ್ಯಂ ಹೃಷೀಕೇಶೋ ದೇವದತ್ತಂ ಧನಂಜಯಃ ।
ಪೌಂಡ್ರಂ ದಧ್ಮೌ ಮಹಾಶಂಖಂ ಭೀಮಕರ್ಮಾ ವೃಕೋದರಃ ॥೧೫॥

ಹೃಷೀಕೇಶನು ಪಾಂಚಜನ್ಯವನ್ನೂ, ಧನಂಜಯನು ದೇವದತ್ತವನ್ನೂ ಭಯಂಕರ ಕರ್ಮಗಳನ್ನು ಮಾಡುವ ವೃಕೋದರನು ಪೌಂಡ್ರವೆಂಬ ಮಹಾಶಂಖವನ್ನೂ ಊದಿದರು.

ಅನಂತವಿಜಯಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ನಕುಲಃ ಸಹದೇವಶ್ಚ ಸುಘೋಷಮಣಿಪುಷ್ಪಕೌ ॥೧೬॥

ಕುಂತೀಪುತ್ರನಾದ ಯುಧಿಷ್ಠಿರರಾಜನು ಅನಂತವಿಜಯ ಎಂಬ ಶಂಖವನ್ನೂ, ನಕುಲ-ಸಹದೇವರು ಕ್ರಮವಾಗಿ ಸುಘೋಷ ಮತ್ತು ಮಣಿಪುಷ್ಪಕ ಎಂಬ ಶಂಖಗಳನ್ನೂ ಊದಿದರು.

ಕಾಶ್ಯಶ್ಚ ಪರಮೇಷ್ವಾಸಃ ಶಿಖಂಡೀ ಚ ಮಹಾರಥಃ ।
ಧೃಷ್ಟದ್ಯುಮ್ನೋ ವಿರಾಟಶ್ಚ ಸಾತ್ಯಕಿಶ್ಚಾಪರಾಜಿತಃ ॥೧೭॥

ದ್ರುಪದೋ ದ್ರೌಪದೇಯಾಶ್ಚ ಸರ್ವಶಃ ಪೃಥಿವೀಪತೇ ।
ಸೌಭದ್ರಶ್ಚ ಮಹಾಬಾಹುಃ ಶಂಖಾನ್ ದಧ್ಮುಃ ಪೃಥಕ್ ಪೃಥಕ್ ॥೧೮॥

ಎಲೈ ರಾಜನೇ, ಪರಮಧನುರ್ಧಾರಿಯಾದ ಕಾಶಿರಾಜನು, ಮಹಾರಥನಾದ ಶಿಖಂಡಿಯು, ಧೃಷ್ಟದ್ಯುಮ್ನ, ವಿರಾಟ ಮತ್ತು ಅಪರಾಜಿತನಾದ ಸಾತ್ಯಕಿಯು, ದ್ರುಪದನು, ದ್ರೌಪದಿಯ ಮಕ್ಕಳು, ಮಹಾಬಾಹುವಾದ ಅಭಿಮನ್ಯುವು ಎಲ್ಲ ಕಡೆಗಳಲ್ಲಿಯೂ ತಮ್ಮ ತಮ್ಮ ಶಂಖಗಳನ್ನು ಊದಿದರು.

ಸ ಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್ ।
ನಭಶ್ಚ ಪೃಥಿವೀಂ ಚೈವ ತುಮುಲೋ ವ್ಯನುನಾದಯನ್ ॥೧೯॥

ಆ ಶಂಖ ಘೋಷವು ಧೃತರಾಷ್ಟ್ರಪುತ್ರರ ಹೃದಯವನ್ನು ಬರಿಯುವಂತೆ ಮಾಡಿತು. ತೀವ್ರವಾದ ಆ ನಾದವು ಭೂಮಿ ಮತ್ತು ಅಂತರಿಕ್ಷದಲ್ಲಿ ಪ್ರತಿಧ್ವನಿಸಿತು.

ಅಥ ವ್ಯವಸ್ಥಿತಾನ್ ದೃಷ್ಟ್ವಾ ಧಾರ್ತರಾಷ್ಟ್ರಾನ್ ಕಪಿಧ್ವಜಃ ।
ಪ್ರವೃತ್ತೇ ಶಸ್ತ್ರಸಂಪಾತೇ ಧನುರುದ್ಯಮ್ಯ ಪಾಂಡವಃ ॥೨೦॥

ಹೃಷೀಕೇಶಂ ತದಾ ವಾಕ್ಯಮಿದಮಾಹ ಮಹೀಪತೇ ।
ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ ॥೨೧॥

ಎಲೈ ರಾಜನೇ, ಕಪಿಧ್ವಜನಾದ, ಪಾಂಡವನಾದ ಅರ್ಜುನನು ಧೃತರಾಷ್ಟ್ರಪುತ್ರರು ಯುದ್ಧಕ್ಕೆ ಸನ್ನದ್ಧರಾಗಿರುವುದನ್ನು ನೋಡಿ ಶಸ್ತ್ರಘಾತಗಳು ಸನ್ನಿಹಿತವಾಗುತ್ತಿರಲು ತನ್ನ ಧನುಸ್ಸನ್ನು ಎತ್ತಿ ಹೃಷೀಕೇಶನನ್ನು ಕುರಿತು ಈ ಮಾತುಗಳನ್ನು ಆಡಿದನು. ಅಚ್ಯುತನೇ, ಎರಡು ಸೈನ್ಯಗಳ ಮಧ್ಯದಲ್ಲಿ ನನ್ನ ರಥವನ್ನು ನಿಲ್ಲಿಸು.

ಯಾವದೇತಾನ್ ನಿರೀಕ್ಷೇಽಹಂ ಯೋದ್ಧುಕಾಮಾನವಸ್ಥಿತಾನ್ ।
ಕೈರ್ಮಯಾ ಸಹ ಯೋದ್ಧವ್ಯಮಸ್ಮಿನ್ ರಣಸಮುದ್ಯಮೇ ॥೨೨॥

ಅಷ್ಟರಲ್ಲಿ ನಾನು ಯುದ್ಧವನ್ನು ಮಾಡಲು ಬಯಸಿ ಇಲ್ಲಿ ನಿಂತಿರುವ ಈ ಶತ್ರು ಸೈನಿಕರನ್ನು ನೋಡುವೆನು. ಈ ದೊಡ್ಡ ಯುದ್ಧ ಸಮುದ್ಯಮದಲ್ಲಿ ನಾನು ಯಾರ ಜೊತೆಯಲ್ಲಿ ಯುದ್ಧವನ್ನು ಮಾಡಬೇಕು? (ಎಂದು ನೋಡುವೆನು).

ಯೋತ್ಸ್ಯಮಾನಾನವೇಕ್ಷೇಽಹಂ ಯ ಏತೇಽತ್ರ ಸಮಾಗತಾಃ ।
ಧಾರ್ತರಾಷ್ಟ್ರಸ್ಯ ದುರ್ಬುದ್ಧೇರ್ಯುದ್ಧೇ ಪ್ರಿಯಚಿಕೀರ್ಷವಃ ॥೨೩॥

ದುರ್ಬುದ್ಧಿಯಾದ ದುರ್ಯೋಧನನಿಗೆ ಯುದ್ಧದಲ್ಲಿ ಪ್ರಿಯವನ್ನುಂಟುಮಾಡಲು ಇಲ್ಲಿ ಸಮಾಗತರಾಗಿ ಯುದ್ಧ ಮಾಡಲಿರುವ ಈ ಯೋಧರನ್ನು ನಾನು ನೋಡುತ್ತೇನೆ.

ಏವಮುಕ್ತೋ ಹೃಷೀಕೇಶೋ ಗುಡಾಕೇಶೇನ ಭಾರತ ।
ಸೇನಯೋರುಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಮ್ ॥೨೪॥

ಭೀಷ್ಮದ್ರೋಣಪ್ರಮುಖತಃ ಸರ್ವೇಷಾಂ ಚ ಮಹೀಕ್ಷಿತಾಮ್ ।
ಉವಾಚ ಪಾರ್ಥ ಪಶ್ಯೈತಾನ್ ಸಮವೇತಾನ್ ಕುರೂನಿತಿ ॥೨೫॥

ಎಲೈ ಭಾರತನೇ, ಅರ್ಜುನನಿಂದ ಹೀಗೆ ಹೇಳಲ್ಪಟ್ಟ ಹೃಷೀಕೇಶನು ಭೀಷ್ಮ-ದ್ರೋಣರ ಎದುರಿಗೆ ಮತ್ತು ಎಲ್ಲಾ ರಾಜರ ಎದುರಿಗೆ ಎರಡು ಸೈನ್ಯಗಳ ಮಧ್ಯದಲ್ಲಿ ತನ್ನ ಶ್ರೇಷ್ಠವಾದ ರಥವನ್ನು ನಿಲ್ಲಿಸಿ, ಅರ್ಜುನನೇ, ಇಲ್ಲಿ ಸೇರಿದ ಕುರುಗಳನ್ನು ನೋಡು ಎಂದು ಹೇಳಿದನು.

ತತ್ರಾಪಶ್ಯತ್ ಸ್ಥಿತಾನ್ ಪಾರ್ಥಃ ಪಿತೃನಥ ಪಿತಾಮಹಾನ್ ।
ಆಚಾರ್ಯಾನ್ ಮಾತುಲಾನ್ ಭ್ರಾತೃನ್ ಪುತ್ರಾನ್ ಪೌತ್ರಾನ್ ಸಖೀಂಸ್ತಥಾ
ಶ್ವಶುರಾನ್ ಸುಹೃದಶ್ಚೈವ ಸೇನಯೋರುಭಯೋರಪಿ ।
ತಾನ್ ಸಮೀಕ್ಷ್ಯ ಸ ಕೌಂತೇಯಃ ಸರ್ವಾನ್ ಬಂಧೂನವಸ್ಥಿತಾನ್ ॥೨೭॥

ಕೃಪಯಾ ಪರಯಾSSವಿಷ್ಟೋ ವಿಷೀದನ್ನಿದಮಬ್ರವೀತ್ ।

ಅರ್ಜುನನು ಅಲ್ಲಿ ನೆರೆದ ಪಿತೃಗಳನ್ನೂ, ಪಿತಾಮಹರನ್ನೂ, ಆಚಾರ್ಯರನ್ನೂ, ಸೋದರಮಾವಂದಿರನ್ನೂ, ಸಹೋದರರನ್ನೂ, ಮಕ್ಕಳನ್ನೂ, ಮೊಮ್ಮಕ್ಕಳನ್ನೂ, ಸ್ನೇಹಿತರನ್ನೂ, ಮಾವಂದಿರನ್ನೂ, ಸುಹೃದಯರನ್ನೂ, ಎರಡು ಸೈನ್ಯಗಳಲ್ಲಿಯೂ ನೋಡಿದನು. ಕುಂತೀಪುತ್ರನಾದ ಅವನು ಸಿದ್ಧರಾಗಿ ನಿಂತಿರುವ ಆ ಎಲ್ಲ ಬಂಧುಗಳನ್ನೂ ನೋಡಿ ಬಹಳ ಕೃಪೆಯಿಂದ ಕೂಡಿದವನಾಗಿ ವಿಷಾದವನ್ನು ಪಡುತ್ತಾ ಹೀಗೆ ಮಾತನಾಡಿದನು.

ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಮ್ ॥೨೮॥
ಸೀದಂತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ ।
ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಜಾಯತೇ ॥೨೯॥

ಎಲೈ ಕೃಷ್ಣನೇ, ಯುದ್ಧವನ್ನು ಮಾಡಲು ಬಯಸಿ ಇಲ್ಲಿ ನೆರೆದಿರುವ ನನ್ನ ಈ ಸ್ವಜನರನ್ನು ನೋಡಿ ನನ್ನ ಅಂಗಾಂಗಗಳೆಲ್ಲವೂ ಕುಸಿಯುತ್ತಿವೆ. ಮುಖವು ಒಣಗುತ್ತಿದೆ. ನನ್ನ ಶರೀರದಲ್ಲಿ ನಡುಕವು ಮತ್ತು ರೋಮಾಂಚವು ಉಂಟಾಗುತ್ತಿದೆ.

ಗಾಂಡೀವಂ ಸ್ರಂಸತೇ ಹಸ್ತಾತ್ ತ್ವಕ್ ಚೈವ ಪರಿದಹ್ಯತೇ ।
ನ ಚ ಶಕ್ನೋಮ್ಯವಸ್ಥಾತುಂ ಭ್ರಮತೀವ ಚ ಮೇ ಮನಃ ॥೩೦॥

ಕೈಯಿಂದ ಗಾಂಡೀವ ಧನುಸ್ಸು ಜಾರುತ್ತಿದೆ, ಚರ್ಮವು ಒಡಿಯುತ್ತಿದೆ. ನಾನು ನಿಲ್ಲಲಾರೆ. ನನ್ನ ಮನಸ್ಸಿಗೆ ಭ್ರಾಂತಿ ಉಂಟಾದಂತೆ ಇದೆ.

ನಿಮಿತ್ತಾನಿ ಚ ಪಶ್ಯಾಮಿ ವಿಪರೀತಾನಿ ಕೇಶವ ।
ನ ಚ ಶ್ರೇಯೋಽನುಪಶ್ಯಾಮಿ ಹತ್ವಾ ಸ್ವಜನಮಾಹವೇ ॥೩೧॥

ಎಲೈ ಕೇಶವನೇ, ನನಗೆ ಅಪಶಕುನಗಳು ಕಂಡುಬರುತ್ತಿವೆ. ಯುದ್ಧದಲ್ಲಿ ಸ್ವಜನರನ್ನು ಕೊಂದು ಯಾವ ಶ್ರೇಯಸ್ಸನ್ನೂ ನಾನು ಕಾಣುತ್ತಿಲ್ಲ.

ನ ಕಾಂಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿ ಚ ।
ಕಿಂ ನೋ ರಾಜ್ಯೇನ ಗೋವಿಂದ ಕಿಂ ಭೋಗೈರ್ಜೀವಿತೇನ ವಾ ॥೩೨॥

ಎಲೈ ಕೃಷ್ಣನೇ, ನನಗೆ ಯುದ್ಧದಲ್ಲಿ ವಿಜಯವಾಗಲೀ, ರಾಜ್ಯವಾಗಲೀ, ಸುಖಗಳಾಗಲೀ ಬೇಕಾಗಿಲ್ಲ. ಎಲೈ ಗೋವಿಂದನೇ, ನಮಗೆ ರಾಜ್ಯದಿಂದಾಗಲೀ, ಭೋಗಗಳಿಂದಾಗಲೀ ಅಥವಾ ಜೀವಿತದಿಂದಾಗಲೀ ಏನು ಪ್ರಯೋಜನ?

ಯೇಷಾಮರ್ಥೇ ಕಾಂಕ್ಷಿತಂ ನೋ ರಾಜ್ಯಂ ಭೋಗಾಃ ಸುಖಾನಿ ಚ ।
ತ ಇಮೇಽವಸ್ಥಿತಾ ಯುದ್ಧೇ ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ ॥೩೩॥

ಯಾರ ಸಲುವಾಗಿ ನಾವು ರಾಜ್ಯವನ್ನೂ, ಭೋಗಗಳನ್ನೂ ಮತ್ತು ಸುಖಗಳನ್ನೂ ಬಯಸುತ್ತೇವೆಯೋ ಅಂತಹ ಇವರೆಲ್ಲರೂ ತಮ್ಮ ಪ್ರಾಣಗಳನ್ನು, ಧನವನ್ನೂ ತ್ಯಜಿಸಿ ಯುದ್ಧ ಮಾಡಲು ಸನ್ನದ್ಧರಾಗಿದ್ದಾರೆ.

ಆಚಾರ್ಯಾಃ ಪಿತರಃ ಪುತ್ರಾಸ್ತಥೈವ ಚ ಪಿತಾಮಹಾಃ ।
ಮಾತುಲಾಃ ಶ್ವಶುರಾಃ ಪೌತ್ರಾಃ ಶ್ಯಾಲಾಃ ಸಂಬಂಧಿನಸ್ತಥಾ ॥೩೪॥

ಆಚಾರ್ಯರು, ಪಿತೃಗಳು, ಪುತ್ರರು, ಹಾಗೆಯೇ ಪಿತಾಮಹರು, ಸೋದರ ಮಾವಂದಿರು, ಮಾವಂದಿರು, ಮೊಮ್ಮಕ್ಕಳು, ಭಾವಮೈದುನರು ಮತ್ತು ಉಳಿದ ಸಂಬಂಧಿಗಳು (ಎಲ್ಲರೂ ಸಿದ್ಧರಾಗಿದ್ದಾರೆ).

ಏತಾನ್ ನ ಹಂತುಮಿಚ್ಛಾಮಿ ಘ್ನತೋಽಪಿ ಮಧುಸೂದನ ।
ಅಪಿ ತ್ರೈಲೋಕ್ಯರಾಜ್ಯಸ್ಯ ಹೇತೋಃ ಕಿಂ ನು ಮಹೀಕೃತೇ ॥೩೫॥

ಎಲೈ ಮಧುಸೂದನನೇ, ಅವರು ನನ್ನನ್ನು ಸಂಹರಿಸಿದರೂ ನಾನು ಅವರನ್ನು ಕೊಲ್ಲಲು ಮೂರು ಲೋಕಗಳ ಸಲುವಾಗಿಯೂ ಬಯಸುವುದಿಲ್ಲ. ಇನ್ನು ಕೇವಲ ಭೂಮಿಯ ಸಲುವಾಗಿ ಏಕೆ ಬಯಸುತ್ತೇನೆ?

ನಿಹತ್ಯ ಧಾರ್ತರಾಷ್ಟ್ರಾನ್ ನಃ ಕಾ ಪ್ರೀತಿಃ ಸ್ಯಾಜ್ಜನಾರ್ದನ ।
ಪಾಪಮೇವಾಶ್ರಯೇದಸ್ಮಾನ್ ಹತ್ವೈತಾನಾತತಾಯಿನಃ ॥೩೬॥

ಎಲೈ ಜನಾರ್ದನನೇ, ಧೃತರಾಷ್ಟ್ರ ಪುತ್ರರನ್ನು ಕೊಂದು ನಮಗೆ ಯಾವ ಸುಖ ಉಂಟಾಗುತ್ತದೆ? ಈ ಶಸ್ತ್ರಧಾರಿಗಳನ್ನು ಕೊಂದರೆ ನಮಗೆ ಪಾಪವೇ ಉಂಟಾಗುತ್ತದೆ.

ತಸ್ಮಾನ್ನಾರ್ಹಾ ವಯಂ ಹಂತುಂ ಧಾರ್ತರಾಷ್ಟ್ರಾನ್ ಸಬಾಂಧವಾನ್ ।
ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ ॥೩೭॥

ಎಲೈ ಮಾಧವನೇ, ಆದ್ದರಿಂದ ಬಂಧು ಸಹಿತರಾದ ಧೃತರಾಷ್ಟ್ರ ಪುತ್ರರನ್ನು ನಾವು ಕೊಲ್ಲುವುದು ಉಚಿತವಲ್ಲ. ಸ್ವಜನರನ್ನು ಕೊಂದು ನಾವು ಹೇಗೆ ಸುಖಿಗಳಾಗುತ್ತೇವೆ?

ಯದ್ಯಪ್ಯೇತೇ ನ ಪಶ್ಯಂತಿ ಲೋಭೋಪಹತಚೇತಸಃ ।
ಕುಲಕ್ಷಯಕೃತಂ ದೋಷಂ ಮಿತ್ರದ್ರೋಹೇ ಚ ಪಾತಕಮ್ ॥೩೮॥

ಕಥಂ ನ ಜ್ಞೇಯಮಸ್ಮಾಭಿಃ ಪಾಪಾದಸ್ಮಾನ್ನಿವರ್ತಿತುಮ್ ।
ಕುಲಕ್ಷಯಕೃತಂ ದೋಷಂ ಪ್ರಪಶ್ಯದ್ಭಿರ್ಜನಾರ್ದನ ॥೩೯॥

ಯದ್ಯಪಿ ರಾಜ್ಯಲೋಭದಿಂದ ಕೂಡಿದ ಮನಸ್ಸುಳ್ಳ ಇವರು ಕುಲಕ್ಷಯದಿಂದ ಉಂಟಾಗುವ ದೋಷವನ್ನು, ಮಿತ್ರದ್ರೋಹದಿಂದ ಉಂಟಾಗುವ ಪಾಪವನ್ನು ಗಮನಿಸುತ್ತಿಲ್ಲ. ಆದರೆ ಎಲೈ ಜನಾರ್ದನನೇ, ಕುಲಕ್ಷಯದಿಂದ ಉಂಟಾಗುವ ದೋಷವನ್ನು ಚೆನ್ನಾಗಿ ಕಾಣುತ್ತಿರುವ ನಾವು ಈ ಪಾಪಕ್ಕಾಗಿ ಮಾಡುವ ಯುದ್ಧದಿಂದ ಹಿಮ್ಮೆಟ್ಟದಿರಲು ಹೇಗೆ ಸಾಧ್ಯ ?

ಕುಲಕ್ಷಯೇ ಪ್ರಣಶ್ಯಂತಿ ಕುಲಧರ್ಮಾಃ ಸನಾತನಾಃ ।
ಧರ್ಮೇ ನಷ್ಟೇ ಕುಲಂ ಕೃತ್ಸ್ನಮಧರ್ಮೋऽಭಿಭವತ್ಯುತ ॥೪೦॥

ಕುಲಕ್ಷಯ ಉಂಟಾದರೆ ಸನಾತನವಾದ ಕುಲಧರ್ಮಗಳು ನಾಶವನ್ನು ಹೊಂದುತ್ತವೆ. ಧರ್ಮವು ನಷ್ಟವಾದರೆ ಕುಲವನ್ನೆಲ್ಲಾ ಅಧರ್ಮವು ಆವರಿಸುತ್ತದೆ.

ಅಧರ್ಮಾಭಿಭವಾತ್ ಕೃಷ್ಣ ಪ್ರದುಷ್ಯಂತಿ ಕುಲಸ್ತ್ರಿಯಃ ।
ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ ॥೪೧॥

ಎಲೈ ಕೃಷ್ಣನೇ, ಅಧರ್ಮವು ಕುಲವನ್ನು ಆವರಿಸಿದಾಗ ಕುಲಸ್ತ್ರೀಯರು ಕೆಡುತ್ತಾರೆ. ಎಲೈ ವೃಷ್ಣಿಕುಲಸಂಭೂತನೇ, ಸ್ತ್ರೀಯರು ದುಷ್ಟರಾದಾಗ ವರ್ಣಸಂಕರ ಉಂಟಾಗುತ್ತದೆ.

ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ ।
ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ ॥೪೨॥

ವರ್ಣಸಂಕರವು ವರ್ಣಸಂಕರವನ್ನು ಮಾಡಿದವರಿಗೂ ಮತ್ತು ಆ ಕುಲಕ್ಕೂ ನರಕವನ್ನುಂಟು ಮಾಡುತ್ತದೆ. ವರ್ಣಸಂಕರವನ್ನು ಮಾಡಿದ ಇವರ ಪಿತೃಗಳು ಪಿಂಡೋದಕ ಕ್ರಿಯೆಗಳಿಲ್ಲದೆ ನರಕದಲ್ಲಿ ಬೀಳುತ್ತಾರೆ.

ದೋಷೈರೇತೈಃ ಕುಲಘ್ನಾನಾಂ ವರ್ಣಸಂಕರಕಾರಕೈಃ ।
ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ ॥೪೩॥

ಕುಲವನ್ನು ನಾಶಮಾಡುವವರ ಇಂತಹ ವರ್ಣಸಂಕರವನ್ನುಂಟು ಮಾಡುವ ಈ ದೋಷಗಳಿಂದ ಶಾಶ್ವತವಾದ ಕುಲಧರ್ಮಗಳು ಮತ್ತು ಜಾತಿಧರ್ಮಗಳು ನಾಶವನ್ನು ಹೊಂದುತ್ತವೆ.

ಉತ್ಸನ್ನಕುಲಧರ್ಮಾಣಾಂ ಮನುಷ್ಯಾಣಾಂ ಜನಾರ್ದನ ।
ನರಕೇ ನಿಯತಂ ವಾಸೋ ಭವತೀತ್ಯನುಶುಶ್ರುಮ ॥೪೪॥

ಎಲೈ ಜನಾರ್ದನನೇ, ಕುಲಧರ್ಮವನ್ನು ನಾಶ ಮಾಡಿದ ಮನುಷ್ಯರಿಗೆ ನರಕದಲ್ಲಿ ಶಾಶ್ವತವಾದ ವಾಸ ಉಂಟಾಗುತ್ತದೆ ಎಂದು ನಾವು ಕೇಳಿದ್ದೇವೆ.

ಅಹೋ ಬತ ಮಹತ್ಪಾಪಂ ಕರ್ತುಂ ವ್ಯವಸಿತಾ ವಯಮ್ ।
ಯದ್ ರಾಜ್ಯಸುಖಲೋಭೇನ ಹಂತುಂ ಸ್ವಜನಮುದ್ಯತಾಃ ॥೪೫॥

ಅಯ್ಯೋ! ರಾಜ್ಯ ಮತ್ತು ಸುಖಗಳ ಆಸೆಯಿಂದ ಸ್ವಜನರನ್ನೇ ಕೊಲ್ಲಲು ಉದ್ಯುಕ್ತರಾಗಿರುವ ನಾವು ಎಂತಹ ದೊಡ್ಡ ಪಾಪಕಾರ್ಯವನ್ನು ಮಾಡಲು ನಿರ್ಧರಿಸಿದ್ದೇವೆ!

ಯದಿ ಮಾಮಪ್ರತೀಕಾರಮಶಸ್ತ್ರಂ ಶಸ್ತ್ರಪಾಣಯಃ ।
ಧಾರ್ತರಾಷ್ಟ್ರಾ ರಣೇ ಹನ್ಯುಸ್ತನ್ಮೇ ಕ್ಷೇಮತರಂ ಭವೇತ್ ॥೪೬॥

ಯುದ್ಧದಲ್ಲಿ ಏನೂ ಪ್ರತೀಕಾರ ಮಾಡದಿರುವ ಮತ್ತು ಕೈಯಲ್ಲಿ ಶಸ್ತ್ರವನ್ನು ಹಿಡಿಯದಿರುವ ನನ್ನನ್ನು ಶಸ್ತ್ರವನ್ನು ಹಿಡಿದ ಧೃತರಾಷ್ಟ್ರ ಪುತ್ರರು ಕೊಲ್ಲುವುದಾದರೆ ಅದು ನನಗೆ ಬಹಳ ಕ್ಷೇಮವನ್ನುಂಟು ಮಾಡೀತು!

ಸಂಜಯ

ಏವಮುಕ್ತ್ವಾರ್ಜುನಃ ಸಂಖ್ಯೇ ರಥೋಪಸ್ಥ ಉಪಾವಿಶತ್ ।
ವಿಸೃಜ್ಯ ಸಶರಂ ಚಾಪಂ ಶೋಕಸಂವಿಗ್ನಮಾನಸಃ ॥೪೭॥

ಸಂಜಯ– ಹೀಗೆ ಹೇಳಿ ಅರ್ಜುನನು ಶೋಕದಿಂದ ಕೂಡಿದ ಮನಸ್ಸುಳ್ಳವನಾಗಿ ತನ್ನ ಬಿಲ್ಲು-ಬಾಣಗಳನ್ನು ತ್ಯಜಿಸಿ ಯುದ್ಧಭೂಮಿಯಲ್ಲಿ ರಥದ ಮಧ್ಯದಲ್ಲಿ ಕುಳಿತುಕೊಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ತ್ರಯೋವಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾಲ್ಕನೆಯ ಅಧ್ಯಾಯ

ಕೃಷ್ಣನಿಂದ ಉಪದೇಶ ಪ್ರಾರಂಭ. ಆತ್ಮನಿತ್ಯತ್ವ ಸಮರ್ಥನೆ.

ಸಂಜಯಃ

ತಂ ತಥಾ ಕೃಪಯಾSSವಿಷ್ಟಮಶ್ರುಪೂರ್ಣಾಕುಲೇಕ್ಷಣಮ್ ।
ವಿಷೀದಂತಮಿದಂ ವಾಕ್ಯಮುವಾಚ ಮಧುಸೂದನಃ ॥೧॥

ಸಂಜಯ– ಆ ರೀತಿಯಲ್ಲಿ ಬಂಧುಗಳ ಮೇಲೆ ಕೃಪೆಯಿಂದ ಕೂಡಿದವನಾಗಿ, ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ವಿಷಾದಿಸುತ್ತಿದ್ದ ಅರ್ಜುನನನ್ನು ಕುರಿತು ಮಧುಸೂದನನು ಹೀಗೆ ಮಾತನಾಡಿದನು.

ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಮ್ ।
ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರಮರ್ಜುನ ॥೨॥

ಅರ್ಜುನನೇ, ನಿನಗೆ ಆರ್ಯರಿಂದ ಸೇವಿತವಲ್ಲದ, ಸ್ವರ್ಗಸಾಧನವಲ್ಲದ, ಅಕೀರ್ತಿಯನ್ನುಂಟು ಮಾಡುವ ಈ ಮನೋದೌರ್ಬಲ್ಯವು ಅಕಾಲದಲ್ಲಿ ಎಲ್ಲಿಂದ ಉಂಟಾಯಿತು?

ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ ತ್ವಯ್ಯುಪಪದ್ಯತೇ ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥೩॥

ಪಾರ್ಥನೇ, ಹೀಗೆ ಮನೋವಿಷಾದವನ್ನು ಹೊಂದಬೇಡ. ಇದು ನಿನಗೆ ಉಚಿತವಲ್ಲ. ಎಲೈ ಪರಂತಪನೇ, ಕ್ಷುದ್ರವಾದ ಈ ಮನೋದೌರ್ಬಲ್ಯವನ್ನು ಬಿಟ್ಟು ಎದ್ದೇಳು.

ಅರ್ಜುನಃ

ಕಥಂ ಭೀಷ್ಮಮಹಂ ಸಂಖೇ ದ್ರೋಣಂ ಚ ಮಧುಸೂದನ ।
ಇಷುಭಿಃ ಪ್ರತಿಯೋತ್ಸ್ಯಾಮಿ ಪೂಜಾರ್ಹಾವರಿಸೂದನ ॥೪॥

ಅರ್ಜುನ– ಎಲೈ ಮಧುಸೂದನನೇ, ಶತ್ರುಸೂದನನೇ, ನಾನು ಪೂಜೆಗೆ ಅರ್ಹರಾದ ಭೀಷ್ಮರನ್ನು ಮತ್ತು ದ್ರೋಣರ ಜೊತೆ ಯುದ್ಧದಲ್ಲಿ ಬಾಣಗಳಿಂದ ಹೇಗೆ ಪ್ರತಿಯಾಗಿ ಯುದ್ಧವನ್ನು ಮಾಡುವೆನು?

ಗುರೂನಹತ್ವಾ ಹಿ ಮಹಾನುಭಾವಾನ್
ಶ್ರೇಯೋ ಭೋಕ್ತುಂ ಭೈಕ್ಷಮಪೀಹ ಲೋಕೇ ।
ಹತ್ವಾರ್ಥಕಾಮಾಂಸ್ತು ಗುರೂನಿಹೈವ
ಭುಂಜೀಯ ಭೋಗಾನ್ ರುಧಿರಪ್ರದಿಗ್ಧಾನ್ ॥೫॥

ಮಹಾನುಭಾವರಾದ ಗುರುಗಳನ್ನು ಕೊಲ್ಲದೆ ಲೋಕದಲ್ಲಿ ಭಿಕ್ಷೆಯಿಂದ ಜೀವಿಸುವುದು ಶ್ರೇಯಸ್ಕರವಾದುದು. ನಾವು ರಾಜ್ಯಾದಿ ರೂಪವಾದ ಅರ್ಥಕಾಮರಾದ ಗುರುಗಳನ್ನು ಕೊಂದರೆ ಇಲ್ಲಿಯೇ ಅವರ ರಕ್ತದಿಂದ ತೊಯ್ದ ಭೋಗಗಳನ್ನು ಅನುಭವಿಸಬೇಕಾದೀತು!

ನ ಚೈತದ್ ವಿದ್ಮಃ ಕತರನ್ನೋ ಗರೀಯೋ
ಯದ್ವಾ ಜಯೇಮ ಯದಿ ವಾ ನೋ ಜಯೇಯುಃ ।
ಯಾನೇವ ಹತ್ವಾ ನ ಜಿಜೀವಿಷಾಮಃ
ತೇಽವಸ್ಥಿತಾಃ ಪ್ರಮುಖೇ ಧಾರ್ತರಾಷ್ಟ್ರಾಃ ॥೬॥

ನಾವು ಅವರನ್ನು ಗೆಲ್ಲುವೆವೋ ಅಥವಾ ಅವರು ನಮ್ಮನ್ನು ಗೆಲ್ಲುವರೋ ಇದರಲ್ಲಿ ಯಾವುದು ಶ್ರೇಷ್ಠವಾದುದು ಎಂದು ನಮಗೆ ತಿಳಿಯುತ್ತಿಲ್ಲ. ಗುರುಗಳು, ಪಿತಾಮಹರು ಮೊದಲಾದವರನ್ನು ವಧೆ ಮಾಡುವುದು ನಮಗೆ ಅನುಚಿತ. ಮೊಮ್ಮಕ್ಕಳು, ಶಿಷ್ಯರನ್ನು ವಧೆ ಮಾಡುವುದು ಭೀಷ್ಮ-ದ್ರೋಣಾದಿಗಳಿಗೂ ಅನುಚಿತ ಎಂದು ಭಾವ. ಯಾರನ್ನು ವಧೆ ಮಾಡಿ ನಾವು ಜೀವಿಸಲು ಬಯಸುವುದಿಲ್ಲವೋ ಅಂತಹ ಧೃತರಾಷ್ಟ್ರ ಪುತ್ರರು ಎದುರಿಗೇ ಸಿದ್ಧರಾಗಿ ನಿಂತಿದ್ದಾರೆ.

ಕಾರ್ಪಣ್ಯದೋಷೋಪಹತಸ್ವಭಾವಃ
ಪೃಚ್ಛಾಮಿ ತ್ವಾ ಧರ್ಮಸಮ್ಮೂಢಚೇತಾಃ ।
ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ
ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್ ॥೭॥

ನನ್ನ ಸ್ವಭಾವವು ಈ ಕಾರ್ಪಣ್ಯದೋಷದಿಂದ ಮುಚ್ಚಿಹೋಗಿದೆ. ಧರ್ಮದ ವಿಷಯದಲ್ಲಿ ಸಂಭ್ರಾಂತಿಗೆ ಒಳಗಾದ ಮನಸ್ಸಿನಿಂದ ನಿನ್ನನ್ನು ಕೇಳುತ್ತಿದ್ದೇನೆ. ನಾನು

ನಿನಗೆ ಶಿಷ್ಯನಾಗಿ ಶರಣಾಗತನಾಗಿದ್ದೇನೆ. ನನಗೆ ಯಾವುದು ಶ್ರೇಯಸ್ಸೆಂದು ನಿಶ್ಚಿತವಾಗಿ ಹೇಳುವವನಾಗು.

ನ ಹಿ ಪ್ರಪಶ್ಯಾಮಿ ಮಮಾಪನುದ್ಯಾದ್
ಯಚ್ಛೋಕಮುಚ್ಛೋಷಣಮಿಂದ್ರಿಯಾಣಾಮ್ ।
ಅವಾಪ್ಯ ಭೂಮಾವಸಪತ್ನಮೃದ್ಧಂ
ರಾಜ್ಯಂ ಸುರಾಣಾಮಪಿ ಚಾಧಿಪತ್ಯಮ್ ॥೮॥

ನಾನು ಶತ್ರುರಹಿತವಾದ ಭೂಮಿಯ ರಾಜ್ಯವನ್ನಾಗಲೀ ಅಥವಾ ದೇವತೆಗಳ ರಾಜ್ಯವನ್ನೇ ಆಗಲೀ ಹೊಂದಿದರೂ ನನ್ನ ಇಂದ್ರಿಯಗಳನ್ನು ಒಣಗಿಸುತ್ತಿರುವ ಈ ಶೋಕವನ್ನು ಯಾವುದು ಕಳೆದೀತು ಎಂದು ಕಾಣುತ್ತಿಲ್ಲ.

ಸಂಜಯಃ

ಏವಮುಕ್ತ್ವಾ ಹೃಷೀಕೇಶಂ ಗುಡಾಕೇಶಃ ಪರಂತಪಃ ।
ನ ಯೋತ್ಸ್ಯ ಇತಿ ಗೋವಿಂದಮುಕ್ತ್ವಾ ತೂಷ್ಣೀಂ ಬಭೂವ ಹ ॥೯॥

ಸಂಜಯ– ಶತ್ರುತಾಪನನಾದ ಗುಡಾಕೇಶನು ಸರ್ವೇಂದ್ರಿಯನಿಯಾಮಕನಾದ ಕೃಷ್ಣನಿಗೆ ಹೀಗೆ ಹೇಳಿ ಆ ಗೋವಿಂದನನ್ನು ಕುರಿತು ನಾನು ಯುದ್ಧ ಮಾಡುವುದಿಲ್ಲ ಎಂದು ಹೇಳಿ ಸುಮ್ಮನಾದನು.

ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ ।
ಸೇನಯೋರುಭಯೋರ್ಮಧ್ಯೇ ವಿಷೀದಂತಮಿದಂ ವಚಃ ॥೧೦॥

ಎಲೈ ಭಾರತನೇ, ಹೃಷೀಕೇಶನು ಎರಡು ಸೈನ್ಯಗಳ ಮಧ್ಯದಲ್ಲಿ ವಿಷಾದಕ್ಕೆ ಒಳಗಾಗಿ ಕುಳಿತಿದ್ದ ಅರ್ಜುನನನ್ನು ಕುರಿತು ನಗುವವನಂತೆ ಈ ಮಾತನ್ನು ಆಡಿದನು.

ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।
ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ ॥೧೧॥

ಯಾರು ಶೋಕಕ್ಕೆ ಅರ್ಹರಲ್ಲವೋ ಅವರನ್ನು ಕುರಿತು ನೀನು ಶೋಕ ಪಡುತ್ತಿದ್ದೀಯೆ. ನಿನ್ನ ಮನಸ್ಸಿಗೆ ತೋರಿದಂತೆಯೇ ನೀನು ಮಾತನಾಡುತ್ತಿದ್ದೀಯೆ.

ಪಂಡಿತರಾದವರು ಬದುಕಿರುವವರ ವಿಷಯದಲ್ಲಿ ಹೇಗೆ ಶೋಕ ಪಡುವುದಿಲ್ಲವೋ ಹಾಗೆ ಮೃತರ ವಿಷಯದಲ್ಲೂ ಶೋಕಪಡುವುದಿಲ್ಲ.

ನ ತ್ವೇವಾಹಂ ಜಾತು ನಾಸಂ ನ ತ್ವಂ ನೇಮೇ ಜನಾಧಿಪಾಃ ।
ನ ಚೈವ ನ ಭವಿಷ್ಯಾಮಃ ಸರ್ವೇ ವಯಮತಃಪರಮ್ ॥೧೨॥

ನಾನು ಹಿಂದೆ ಎಂದೂ ಇರಲಿಲ್ಲವೆಂದು ಇಲ್ಲ, ನೀನಾಗಲೀ, ಈ ರಾಜರಾಗಲೀ ಹಿಂದೆ ಎಂದೂ ಇರಲಿಲ್ಲವೆಂದು ಇಲ್ಲ. ನಾವೆಲ್ಲರೂ ಇನ್ನು ಮುಂದೆ ಇರುವುದಿಲ್ಲ ಎಂಬುವುದೂ ಇಲ್ಲ.

ವಿಶೇಷ ವಿಚಾರ– ತನ್ನ ವಿಷಯದಲ್ಲಿ 'ನ ತ್ವೇವಾಹಂ' ಎಂದು ತು ಶಬ್ದವನ್ನು ಪ್ರಯೋಗಿಸಿ, ತನ್ನ ದೇಹವೂ ನಿತ್ಯವಾದುದು ಎಂಬ ವಿಶೇಷವನ್ನು ಕೃಷ್ಣನು ಸೂಚಿಸುತ್ತಾನೆ. ಆದರಿಂದ ಜೀವರಿಗೆ ತನ್ನ ಸಾಮ್ಯವು ಇಲ್ಲ ಎಂದು ತಿಳಿಸುತ್ತಾನೆ.

ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ ।
ತಥಾ ದೇಹಾಂತರಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ ॥೧೩॥

ಪ್ರಾಕೃತದೇಹವುಳ್ಳ ಜೀವನಿಗೆ ಈ ದೇಹದಲ್ಲಿ ಹೇಗೆ ಬಾಲ್ಯ, ಯೌವ್ವನಗಳು ಬರುತ್ತವೆಯೋ ಅದರಂತೆ ಇನ್ನೊಂದು ದೇಹವೂ ಬರುತ್ತದೆ. ಧೀರನಾದವನು ಈ ವಿಷಯದಲ್ಲಿ ಮೋಹವನ್ನು ಹೊಂದುವುದಿಲ್ಲ.

ವಿಶೇಷ ವಿಚಾರ– ಜೀವನ ಸ್ವರೂಪವು ನಿತ್ಯ, ದೇಹಾದಿಗಳು ಪ್ರವಾಹತಃ ನಿತ್ಯವಾದವು ಎಂದು ಹೇಳಿ, ಕೃಷ್ಣನು ಜಗತ್ತಿಗೆ ಭವಿಷ್ಯತ್ಕಾಲದಲ್ಲಿ ಬಾಧವು ಬರುತ್ತದೆ ಎಂಬ ಶಂಕೆಯನ್ನು ಪರಿಹರಿಸುತ್ತಾನೆ.

ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ ।
ಆಗಮಾಪಾಯಿನೋಽನಿತ್ಯಾಸ್ತಾಂಸ್ತಿತಿಕ್ಷಸ್ವ ಭಾರತ ॥೧೪॥

ಎಲೈ ಕೌಂತೇಯನೇ, ಶಬ್ದಸ್ಪರ್ಶಾದಿ ಮಾತ್ರೆಗಳ ಸ್ಪರ್ಶ ಎಂದರೆ ಅನುಭವವೇ ಶೀತೋಷ್ಣ-ಸುಖ-ದುಃಖಾದಿಗಳಿಗೆ ಕಾರಣವಾಗುತ್ತದೆ. ಎಲೈ ಭಾರತನೇ, ಈ ಮಾತ್ರಾ ಸ್ಪರ್ಶಗಳು ಬಂದು ಹೋಗುವಂತಹವುಗಳಾದ್ದರಿಂದ ಅನಿತ್ಯವಾದವುಗಳು. ಅಭಿಮಾನವನ್ನು ತ್ಯಜಿಸಿ ಅವುಗಳನ್ನು ವಿಫಲವಾಗಿ ಮಾಡಬೇಕು.

ವಿಶೇಷ ವಿಚಾರ– ಅಭಿಮಾನಸಹಿತವಾದ ಮಾತ್ರಾಸ್ಪರ್ಶಗಳೇ ಸುಖ-ದುಃಖಗಳನ್ನು ಕೊಡುತ್ತವೆ. ಅಭಿಮಾನವಿಲ್ಲದಿದ್ದರೆ ಕೇವಲ ಮಾತ್ರಾಸ್ಪರ್ಶಗಳು ಸುಖ-ದುಃಖಗಳನ್ನು ಕೊಡುವುದಿಲ್ಲ ಎಂದು ಅಭಿಪ್ರಾಯ.

ಯಂ ಹಿ ನ ವ್ಯಥಯಂತ್ಯೇತೇ ಪುರುಷಂ ಪುರುಷರ್ಷಭ ।
ಸಮದುಃಖಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ ॥೧೫॥

ಎಲೈ ಪುರುಷಶ್ರೇಷ್ಠನೇ, ಯಾವ ಜೀವನನ್ನು ಈ ಮಾತ್ರಾಸ್ಪರ್ಶಗಳು ವ್ಯಥೆಗೊಳಿಸುವುದಿಲ್ಲವೋ ಮತ್ತು ಯಾವನು ಸುಖ-ದುಃಖಗಳಲ್ಲಿ ಸಮನಾಗಿದ್ದು ಧೀರನಾಗಿರುತ್ತಾನೆಯೋ ಅವನು ಮೋಕ್ಷವನ್ನು ಪಡೆಯುತ್ತಾನೆ.

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
ಉಭಯೋರಪಿ ದೃಷ್ಟೋಽಂತಸ್ತ್ವನಯೋಸ್ತತ್ತ್ವದರ್ಶಿಭಿಃ ॥೧೬॥

ಅಸತ್ತಿಗೆ ಭಾವವು ಇರುವುದಿಲ್ಲ. ಸತ್ಯವಾದ ಪದಾರ್ಥಕ್ಕೆ ಅಭಾವವೂ ಇರುವುದಿಲ್ಲ. ಈ ಎರಡು ತತ್ತ್ವಗಳ ನಿಶ್ಚಯವು ತತ್ತ್ವದರ್ಶಿಗಳಾದ ಜ್ಞಾನಿಗಳಿಂದ ತಿಳಿಯಲ್ಪಟ್ಟಿದೆ.

ವಿಶೇಷ ವಿಚಾರ– ಇಲ್ಲಿ ಅಸತ್ ಎಂಬ ಪದದಿಂದ ಶಶಶೃಂಗಾದಿಗಳನ್ನೇ ತೆಗೆದುಕೊಳ್ಳಬೇಕು. ಏಕೆಂದರೆ ಸತ್, ಅಸತ್ ಬಿಟ್ಟು ಮೂರನೆಯ ಒಂದು ಕೋಟಿಯನ್ನು ಹೇಳಿಲ್ಲ. ಸತ್ ಪದದಿಂದ ಅಸತ್‌ಭಿನ್ನವಾದ, ಅರ್ಥಕ್ರಿಯಾಕಾರಿಯಾದ ಮತ್ತು ವಿದ್ಯಮಾನವಾದ, ಪ್ರಸ್ತುತ ದೇಹವನ್ನು ಹಿಡಿದು ಬ್ರಹ್ಮನವರೆಗೆ ಎಲ್ಲವನ್ನೂ ತೆಗೆದುಕೊಳ್ಳಬೇಕು. ಅಸತಃ=ಶಶಶೃಂಗಾದಿಗಳಿಗೆ, ಭಾವಃ= ಸತ್ತ್ವವು, ನ= ಇರುವುದಿಲ್ಲ. ಶಶಶೃಂಗಾದಿಗಳಲ್ಲಿ ಸದ್ವೈಲಕ್ಷಣ್ಯವು ಇರುತ್ತದೆ, ಆದರೆ ಅಸದ್ವೈಲಕ್ಷಣ್ಯವು ಇರುವುದಿಲ್ಲ. ಅಸತಃ= ದೇಹಾದಿಗಳಿಗೆ, ಅಭಾವಃ= ಅತ್ಯಂತಾಭಾವವು, ನ= ಇರುವುದಿಲ್ಲ. ದೇಹಾದಿಗಳಲ್ಲಿ ಅಸದ್ವೈಲಕ್ಷಣ್ಯವೇ ಇದೆ. ಆದರೆ ಸದ್ವೈಲಕ್ಷಣ್ಯ ಇಲ್ಲ ಎಂದು ಅಭಿಪ್ರಾಯ. ಅನಯೋಃ ಉಭಯೋಃ= ಹಿಂದಿನ ಶ್ಲೋಕಾರ್ಧದಲ್ಲಿಹೇಳಿದ ಅಸತ್ತಿನಲ್ಲಿ ಸದ್ವೈಲಕ್ಷಣ್ಯ ಮಾತ್ರ. ಸತ್ತಿನಲ್ಲಿ ಅಸದ್ವೈಲಕ್ಷಣ್ಯವು ಮಾತ್ರ ಎಂಬ ವ್ಯವಸ್ಥೆಯುಳ್ಳ ಎರಡು ಪಕ್ಷಗಳ, ಅಂತಃ= ಇದು ಹೀಗೆಯೇ ಎಂಬ ನಿಶ್ಚಯವು, ತತ್ತ್ವದರ್ಶಿಭಿಃ= ತತ್ತ್ವವಾದಿಗಳಿಂದ, ದೃಷ್ಟಃ= ಸಾಕ್ಷಿಯಿಂದ ತಿಳಿಯಲ್ಪಟ್ಟಿದೆ. ಈ ವಿಷಯವು

ಸಾಕ್ಷಿಸಿದ್ಧವಾದುದರಿಂದ ಎಂದಿಗೂ ವ್ಯತ್ಯಾಸವನ್ನು ಹೊಂದುವುದಿಲ್ಲ. ಜೀವನು ನಿತ್ಯನಾದುದರಿಂದ, ದೇಹಾದಿಗಳು ಅನಿತ್ಯವಾದರೂ ಅವುಗಳ ಅತ್ಯಂತಾಭಾವ-ವಿಲ್ಲದಿರುವ ಕಾರಣ ಪುನಃ ಇನ್ನೊಂದು ದೇಹವು ಬರುವುದರಿಂದ ಜೀವನ ಸ್ವರೂಪ ವಿಷಯದಲ್ಲಿಯೂ ಮತ್ತು ದೇಹಾದಿಗಳ ವಿಷಯದಲ್ಲಿಯೂ ದುಃಖವನ್ನು ಮಾಡಬಾರದು ಎಂದು ಅಭಿಪ್ರಾಯ.

ಸತ್ ಪದದಿಂದ ಬ್ರಹ್ಮಮಾತ್ರವನ್ನು ತೆಗೆದುಕೊಂಡು ಅಂತ ಪದದಿಂದ ನಾಶ ಎಂಬ ಅರ್ಥವನ್ನು ತೆಗೆದುಕೊಂಡರೆ ಅನಯೋರುಭಯೋಃ= ಪೂರ್ವಾರ್ಧದಲ್ಲಿ ಧರ್ಮಿಗಳಾಗಿ ತೆಗೆದುಕೊಂಡ ಸದಸತ್ಪದಾರ್ಥಗಳಾದ ಬ್ರಹ್ಮ ಮತ್ತು ಶಶವಿಷಾಣಗಳಿಗೂ, ಅವುಗಳಲ್ಲಿ ಇವೆ ಎಂದು ಹೇಳಲ್ಪಟ್ಟ ಅಸದ್ವ್ಯಲಕ್ಷಣ್ಯ ಮತ್ತು ಸದ್ವ್ಯಲಕ್ಷಣ್ಯಗಳಿಗೂ ಯಾರ ಮತದ ರೀತಿಯಿಂದಲೂ ನಾಶರೂಪವಾದ ಅವಸಾನವೇ ಇಲ್ಲದಿರುವ ಕಾರಣ ವಾಕ್ಯಾರ್ಥವು ಉಪಪನ್ನವಾಗುವುದಿಲ್ಲ. ಈ ಸದಸತ್ಪದಾರ್ಥಗಳನ್ನು ಬಿಟ್ಟು ಉಳಿದ ಜಗತ್ತಿನಲ್ಲಿ ಈ ಎರಡರ ನಾಶ ಎಂದು ಅಂಗೀಕಾರ ಮಾಡಿದರೆ ಜಗತಿ ಎಂಬ ಪದವು ಇಲ್ಲದಿರುವುದರಿಂದ ಶ್ರುತವಾದ ಸದಸತ್ಪದಾರ್ಥಗಳನ್ನು ಬಿಡುವುದರಿಂದ ಶ್ರುತಹಾನಿ ಮತ್ತು ಇಲ್ಲದಿರುವ ಜಗತಿ ಎಂಬ ಶಬ್ದವನ್ನು ಕಲ್ಪನೆ ಮಾಡುವುದರಿಂದ ಅಶ್ರುತ ಕಲ್ಪನಾ ಎಂಬ ದೋಷವು ಬರುತ್ತದೆ. ಈ ಪಕ್ಷದಲ್ಲಿ ಜಗತ್ತಿನಲ್ಲಿಯೂ ಸದಸತ್ತುಗಳ ನಾಶವಿಲ್ಲದಿರುವುದರಿಂದ ಧರ್ಮಿನಾಶವಿಲ್ಲದಿರುವ ಕಾರಣ ಅವುಗಳಿಗೆ ಅಂಥವನ್ನು ಹೇಳಲು ಬರುವುದಿಲ್ಲ. ಧರ್ಮನಾಶದಿಂದಲೂ ಅಂಥವನ್ನು ಹೇಳಲು ಬರುವುದಿಲ್ಲ. ಏಕೆಂದರೆ ಸದಸತ್ತುಗಳಲ್ಲಿರುವ ಧರ್ಮಗಳಿಗೆ ಬೇರೆ ಇನ್ನೊಂದು ಕಡೆಯಲ್ಲಿ ನಾಶವು ಅಸಂಭಾವಿತವಾದುದು. ಇವುಗಳ ಧರ್ಮಕ್ಕೆ ಸದೃಶವಾದ ಧರ್ಮಾಂತರವು ನಾಶವನ್ನು ಹೊಂದುತ್ತದೆ ಎಂದು ಅಂಗೀಕರಿಸಿದರೆ ಅನಯೋರುಭಯೋಃ ಎಂದು ಹೇಳಿ ಹಿಂದೆ ಹೇಳಿದ ಎರಡು ಪಕ್ಷಗಳನ್ನೇ ಪರಾಮರ್ಶೆ ಮಾಡಿದುದರ ವಿರೋಧವು ಬರುತ್ತದೆ. ಸತ್ಕಾರ್ಯ ವಾದಿಗಳಾದ ನೈಯಾಯಿಕರ ಮತದಲ್ಲಿ ಜಗತ್ತಿನಲ್ಲಿ ಅವರು ಸದ್ವ್ಯಲಕ್ಷಣ್ಯದ ಅತ್ಯಂತಾಭಾವವನ್ನು ಅಂಗೀಕಾರ ಮಾಡುವುದರಿಂದ ಮತ್ತು ಅಸದ್ವ್ಯಲಕ್ಷಣ್ಯವನ್ನು ಅಂಗೀಕಾರ ಮಾಡುವುದರಿಂದ ಎರಡಕ್ಕೂ ನಾಶವಿಲ್ಲದಿರುವ ಕಾರಣ ವಾಕ್ಯಾರ್ಥದ ಅನುಪಪತ್ತಿಯು ಇದ್ದೇ ಇರುತ್ತದೆ. ಮಿಥ್ಯಾತ್ವವಾದಿಗಳಾದ ಅದ್ವೈತಿಗಳ ರೀತಿಯಲ್ಲಾದರೂ ಜಗತ್ತಿನಲ್ಲಿ ಸದ್ವ್ಯಲಕ್ಷಣ್ಯ ಮತ್ತು ಅಸದ್ವ್ಯಲಕ್ಷಣ್ಯಗಳೆರಡೂ ಇರುವುದರಿಂದ ಅವುಗಳಿಗೆ ನಾಶವು ಇಲ್ಲದಿರುವುದರಿಂದ ವಾಕ್ಯಾರ್ಥವು ಸುತರಾಂ

ಅನುಪಪನ್ನವಾಗುತ್ತದೆ. ಜಗತ್ತು ಪ್ರತೀತವಾಗುವುದರಿಂದ ಅಸದ್ವಿಲಕ್ಷಣವಾದರೂ ಸ್ವಾತ್ಮ್ಯತಾಭಾವ ಸಮಾನಾಧಿಕರಣ ರೂಪ ಮಿಥ್ಯಾತ್ವವಿದೆ ಎಂದು ಅಂಗೀಕರಿಸುವ ವಾದಿಗಳು ಪರಂಪರೆಯಿಂದ ನಿಷೇಧ್ಯವಾಗಿ ಪ್ರಸ್ತುತವಾದ ಭಾವಾಭಾವಗಳಿಗೂ ಅಮಾನವನ್ನು ಅಂಗೀಕಾರ ಮಾಡಲು ಸಾಧ್ಯವಿಲ್ಲದಿರುವುದರಿಂದ ಶ್ಲೋಕಕ್ಕೆ ಹೀಗೂ ಅರ್ಥವನ್ನು ಹೇಳಲು ಸಾಧ್ಯವಿಲ್ಲ. ಭಾವಾಭಾವಪದಗಳಿಂದ ಸತ್ತಾ ಸತ್ವಗಳನ್ನು ತೆಗೆದುಕೊಂಡು 'ಅಂತ' ಎಂಬ ಪದಕ್ಕೆ ಲಕ್ಷಣಾವೃತ್ತಿಯಿಂದ ಅಭಾವ ಎಂದು ಅರ್ಥವನ್ನು ಮಾಡಿದರೆ ಆಗಲೂ ಜಗತ್ತಿನಲ್ಲಿ ತ್ರೈಕಾಲಿಕನಿಷೇಧಾಪ್ರಯೋಗಿತ್ವರೂಪವಾದ ಸತ್ವದ ನಿಷೇಧವು ಅಭಾವದ ಅಭಾವವು ಭಾವವೇ ಎಂಬ ವಚನಕ್ಕೆ ಅನುಸಾರವಾಗಿ, ತ್ರೈಕಾಲಿಕನಿಷೇಧಪ್ರತಿಯೋಗಿತ್ವರೂಪವಾದ ಅಸತ್ವವನ್ನೇ ಸ್ಥಾಪಿಸುವುದರಿಂದ ಅಲ್ಲಿ ಪುನಃ ಹೇಳಲ್ಪಡುವ ಅಸತ್ಯನಿಷೇಧವು ವಿರುದ್ಧವಾಗುತ್ತದೆ. ಅದರಂತೆ ತ್ರೈಕಾಲಿಕನಿಷೇಧಪ್ರತಿಯೋಗಿತ್ವರೂಪವಾದ ಅಸತ್ವದ ನಿಷೇಧವೂ ಸತ್ವನಿಷೇಧದ ಫಲವಾದ ತ್ರೈಕಾಲಿಕ ನಿಷೇಧ ಪ್ರತಿಯೋಗಿತ್ವನಿಷೇಧರೂಪವಾದ್ದರಿಂದ ಸತ್ವಾನಿಷೇಧವನ್ನು ವಿರೋಧಿಸುತ್ತದೆ. ಆದ್ದರಿಂದ ಈ ಪಕ್ಷದಲ್ಲಿ ಪರಸ್ಪರ ವ್ಯಾಹತಿ ಒಂದು ಅಧಿಕವಾಗಿ ಬರುತ್ತದೆ. ಹಾಗಲ್ಲದೆ, 'ಅಸಚ್ಛೇತ್ ನ ಪ್ರತೀಯೇತ' ಎಂಬ ನಿಮ್ಮ ಪ್ರಾಚೀನರ ವಚನಕ್ಕೆ ಅನುಗುಣವಾಗಿ ಅಸತ್ವ ಎಂದರೆ ಪ್ರತ್ಯಕ್ಷ ಅಯೋಗ್ಯತ್ವ ಹೊರತು ತ್ರೈಕಾಲಿಕ ನಿಷೇಧ ಪ್ರತಿಯೋಗಿತ್ವವಲ್ಲ ಎಂದು ಹೇಳುವುದಾದರೆ ಆಗಲೂ ಹೀಗೆ ಅಂಗೀಕರಿಸಿದ ಪ್ರತ್ಯಕ್ಷ ಅಯೋಗ್ಯತ್ವರೂಪವಾದ ಅಸತ್ವದ ನಿಷೇಧವೆಂದರೆ ಪ್ರತ್ಯಕ್ಷ ಯೋಗ್ಯತ್ವವೇ. ಆ ಪ್ರತ್ಯಕ್ಷಯೋಗ್ಯತ್ವವಾದರೂ ಸನ್ನಿಕರ್ಷ ಯೋಗ್ಯತ್ವರೂಪವಾದುದರಿಂದ ಅರ್ಥಸತ್ವವನ್ನೇ ಸಾಧನೆ ಮಾಡುತ್ತದೆ. ಆಗ ನಿನಗೆ ಇಷ್ಟವಾದ ಸತ್ವಾನಿಷೇಧಕ್ಕೆ ಅದು ಬಾಧಕವಾಗುತ್ತದೆ. ಸತ್ವಾನಿಷೇಧವಾದರೂ ನಿನಗೆ ಅಭಿಲಷಿತವಾದ ಪ್ರತ್ಯಕ್ಷ ಅಯೋಗ್ಯತ್ವರೂಪವಾದ ಅಸತ್ವನಿಷೇಧದ ಫಲವಾದ ಪ್ರತ್ಯಕ್ಷಯೋಗ್ಯತ್ವಕ್ಕೆ ಬಾಧಕವಾಗುವುದರಿಂದ ಔಷಧಿಯನ್ನು ಕುಡಿದರೂ ರೋಗವು ನಾಶವಾಗಲಿಲ್ಲ ಎಂಬ ಗಾದೆಗೆ ಸಮವಾಯಿತು ಮತ್ತು 'ನ ಭಾವೋ ವಿದ್ಯತೇ ಸತಃ' ಎಂಬ ಮೂಲಕ್ಕೆ ವಿರುದ್ಧವೂ ಆಯಿತು. ಅಲ್ಲದೆ, ಈ ಪ್ರಕರಣದ ಆರಂಭದಲ್ಲಿ ಕೃಷ್ಣನೇ 'ನ ಚೈವ ನ ಭವಿಷ್ಯಾಮಃ ಸರ್ವೇವಯಮತಃ ಪರಂ' ಎಂದು ವ್ಯತಿರೇಕವನ್ನು ಹೇಳುವ ಮೂಲಕ ಅನಿತ್ಯವಾದ ಜಗತ್ತಿನಲ್ಲಿ ಪ್ರವಾಹತಃ ನಿತ್ಯವಾದ, ನಿತ್ಯವಾದ ವಸ್ತುಗಳಲ್ಲಿ ಸ್ವರೂಪತಃ ನಿತ್ಯವಾದ, ಭಾವರೂಪವಾದ ಸತ್ವವನ್ನೇ ದೃಢೀಕರಿಸಿರುವುದರಿಂದ ಅವಸಾನ ರೂಪವಾದ ಅಥವಾ ನಾಶರೂಪವಾದ ಅದರ ಅಂತಕ್ಕೆ ಎಲ್ಲಿಯ ಅವಕಾಶ? ಆದುದರಿಂದ ನಾವು ಹೇಳಿದುದೇ ಸರಿಯಾದ ಅರ್ಥವೆಂದು ತಿಳಿಯಬೇಕು (ಲಕ್ಷಾಲಂಕಾರ).

ಅವಿನಾಶಿ ತು ತದ್ ವಿದ್ಧಿ ಯೇನ ಸರ್ವಮಿದಂ ತತಮ್ ।
ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ ಕರ್ತುಮರ್ಹತಿ ॥೧೭॥

ಯಾವ ಪರಬ್ರಹ್ಮನಿಂದ ಈ ಜಗತ್ತು ವ್ಯಾಪ್ತವಾಗಿದೆಯೋ ಆ ಪರಬ್ರಹ್ಮನನ್ನು ವಿಶೇಷವಾಗಿ ವಿನಾಶವಿಲ್ಲದವನು ಎಂದು ತಿಳಿ. ಅವನ ದೇಹಕ್ಕೂ ನಾಶವಿಲ್ಲದುದರಿಂದ ಅದು ಜೀವನಿಗಿಂತ ಪರಬ್ರಹ್ಮನ ವಿಶೇಷವೆಂದು 'ತು' ಶಬ್ದವು ತಿಳಿಸುತ್ತದೆ. ಹ್ರಾಸಹೀನನಾದ ಈ ಬ್ರಹ್ಮನ ನಾಶವನ್ನು ಯಾರಿಗೂ ಮಾಡಲಾಗುವುದಿಲ್ಲ. (ಹ್ರಾಸವೇ ಇಲ್ಲದವನಿಗೆ ನಾಶವು ಎಲ್ಲಿಂದ ಬರಬೇಕು?)

ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ ।
ಅನಾಶಿನೋಽಪ್ರಮೇಯಸ್ಯ ತಸ್ಮಾದ್ ಯುಧ್ಯಸ್ವ ಭಾರತ ॥೧೮॥

ಎಲೈ ಭಾರತನೇ, ಸ್ವರೂಪತಃ ನಿತ್ಯನಾದ ಜೀವನ ಈ ಭೌತಿಕ ದೇಹಗಳು ವಿನಾಶವುಳ್ಳವುಗಳು. ನಾಶರಹಿತನಾದ, ಅಪರಿಚ್ಛಿನ್ನನಾದ ಪರಮಾತ್ಮನ ಪ್ರತಿಬಿಂಬನಾಗಿರುವುದರಿಂದ ಜೀವನ ಸ್ವರೂಪಕ್ಕೆ ನಾಶವಿಲ್ಲ. ಆದ್ದರಿಂದ ಯುದ್ಧವನ್ನು ಮಾಡು.

ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಮ್ ।
ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ ॥೧೯॥

ಯಾವನು ಜೀವನನ್ನೇ ಸ್ವತಂತ್ರನಾಗಿ ಹಂತಕನೆಂದೂ ಮತ್ತು ಯಾವನು ಜೀವನ ದೇಹವೇ ಹತವಾದರೂ ಜೀವನ ಸ್ವರೂಪವೇ ಹತವಾದುದೆಂದೂ ತಿಳಿಯುತ್ತಾನೆಯೋ, ಅವರಿಬ್ಬರೂ ತತ್ತ್ವ ಜ್ಞಾನವುಳ್ಳವರಲ್ಲ.

ನ ಜಾಯತೇ ಮ್ರಿಯತೇ ವಾ ಕದಾಚಿತ್
ನಾ(ಽ)ಯಂ ಭೂತ್ವಾ ಭವಿತಾ ವಾ ನ ಭೂಯಃ ।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ ॥೨೦॥

ಜೀವೇಶ್ವರರಿಗೂ ಉತ್ಪತ್ತಿ-ವಿನಾಶವಿಲ್ಲ, ಈಶ್ವರನ ದೇಹಕ್ಕೂ ಉತ್ಪತ್ತಿ ಇಲ್ಲದಿರುವ ಕಾರಣ ಅವನು ಸ್ವತಂತ್ರ, ಜೀವನಿಗೆ ಸ್ವರೂಪದಿಂದ ಉತ್ಪತ್ತಿ ಇಲ್ಲದಿದ್ದರೂ ದೇಹಾದಿಗಳಿಂದ ಉತ್ಪತ್ತಿ ಇರುವುದರಿಂದ ಅವನು ಅಸ್ವತಂತ್ರ ಎಂಬ ವಿಷಯದಲ್ಲಿ

ಉಪನಿಷನ್ಮಂತ್ರವನ್ನು ಪ್ರಮಾಣವಾಗಿ ಹೇಳುತ್ತಾರೆ. ಜೀವನು ಸ್ವರೂಪತಃ ಹುಟ್ಟುವುದಿಲ್ಲ. ಮೃತನೂ ಆಗುವುದಿಲ್ಲ. ಈಶ್ವರಜ್ಞಾನವು ನಿತ್ಯವಾಗಿದ್ದರೂ, ಒಂದು ವಿಶೇಷ ವಿವಕ್ಷೆಯಿಂದ ತದ್ಭೇಕ್ಷತ ಇತ್ಯಾದಿ ಶ್ರುತಿಗಳು ಹೇಳುವಂತೆ ಜೀವನು ಅಲ್ಲ. ಮರಣಾನಂತರದಲ್ಲಿ ಪುನಃ ಆ ಜೀವನು ಆ ದೇಹವಿಶಿಷ್ಟನಾಗಿ ಇರುವುದಿಲ್ಲ. ಶಸ್ತ್ರಘಾತದಿಂದ, ಅಸ್ತ್ರದಿಂದ, ವಿಷಪಾನದಿಂದ, ಮಂತ್ರ-ಶಾಪಗಳಿಂದ, ಭಾವನೆಯಿಂದ ಲೋಕದಲ್ಲಿ ಮರಣವು ಕಂಡಿರುವುದರಿಂದ ಯಾವ ರೀತಿಯಲ್ಲಿಯೂ ಜೀವನ ಸ್ವರೂಪಕ್ಕೆ ಮರಣವಿಲ್ಲವೆಂದು ಸೂಚಿಸಲು ಪುನಃ ಪುನಃ ಆ ವಿಷಯವನ್ನು ಹೇಳುತ್ತಾರೆ. ಈ ಜೀವನು ಸ್ವರೂಪತಃ ಜನ್ಮವಿಲ್ಲದವನೂ, ನಿತ್ಯನೂ, ಶಾಶ್ವತನೂ, ದೇಹದಿಂದ ದೇಹಕ್ಕೆ ಹೋಗುವವನೂ ಆದ ಈ ಜೀವನು ಶರೀರವು ಶಸ್ತ್ರಘಾತಕ್ಕೆ ಒಳಗಾದರೂ ಸ್ವರೂಪತಃ ಮರಣವನ್ನು ಹೊಂದುವುದಿಲ್ಲ. (ಅಭೇದವಿಲ್ಲದಿರುವ ಕಡೆಯಲ್ಲಿ ಸಾಮಾನಾಧಿಕರಣ್ಯವು ಸಾದೃಶ್ಯವನ್ನು ಹೇಳುತ್ತದೆ ಎಂಬ ನಿಯಮವಿರುವುದರಿಂದ ಅಜನೂ, ನಿತ್ಯನೂ, ಶಾಶ್ವತನೂ ಮತ್ತು ಪುರಾಣನೂ ಆದ ಪರಮಾತ್ಮನಿಗೆ ಸದೃಶನಾಗಿರುವುದರಿಂದ ಜೀವನ ದೇಹವು ನಾಶವನ್ನು ಹೊಂದಿದರೂ ಜೀವನ ಸ್ವರೂಪವು ನಾಶವನ್ನು ಹೊಂದುವುದಿಲ್ಲ).

ವೇದಾವಿನಾಶಿನಂ ನಿತ್ಯಂ ಯ ಏನಮಜಮವ್ಯಯಮ್ ।
ಕಥಂ ಸ ಪುರುಷಃ ಪಾರ್ಥ ಕಂ ಘಾತಯತಿ ಹಂತಿ ಕಮ್ ॥೨೧॥

ಎಲೈ ಪಾರ್ಥನೇ, ಯಾವನು ಈ ಜೀವನನ್ನು ಸ್ವಾಭಾವಿಕ ನಾಶರಹಿತನಾದವನು, ಉತ್ಪತ್ತಿಹೀನನಾದವನು, ಸ್ವರೂಪವಿಕಾರರಹಿತನಾದವನು ಎಂದು ತಿಳಿಯುತ್ತಾನೆಯೋ ಅಂತಹವನು ಆ ಜೀವನನ್ನು ಹೇಗೆ ಶಸ್ತ್ರಘಾತಕ್ಕೆ ಒಳಪಡಿಸುತ್ತಾನೆ? ಅಥವಾ ಹೇಗೆ ಕೊಲ್ಲುತ್ತಾನೆ? (ಅಥವಾ ಯಾವನು ಅವಿನಾಶಿಯೂ, ನಿತ್ಯನೂ, ಉತ್ಪತ್ತಿರಹಿತನೂ, ಹ್ರಾಸರಹಿತನೂ ಆದ ಪರಮಾತ್ಮನನ್ನು ಸ್ವತಂತ್ರನೆಂದು ತಿಳಿಯುತ್ತಾನೆಯೋ ಅವನು ಇನ್ನೊಬ್ಬನನ್ನು ಹೇಗೆ ಶಸ್ತ್ರಘಾತಕ್ಕಾಗಲೀ, ಮರಣಕ್ಕಾಗಲೀ, ಸ್ವತಂತ್ರವಾಗಿ ಗುರಿಪಡಿಸುತ್ತಾನೆ).

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ ।

ತಥಾ ಶರೀರಾಣಿ ವಿಹಾಯ ಜೀರ್ಣಾ-
ನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥೨೨॥

ಹೇಗೆ ಸವೆದುಹೋದ ಹಳೆಯ ವಸ್ತ್ರಗಳನ್ನು ತ್ಯಜಿಸಿ ಮನುಷ್ಯನು ಬೇರೆ ಹೊಸ ವಸ್ತ್ರಗಳನ್ನು ಸ್ವೀಕರಿಸುತ್ತಾನೆಯೋ, ಅದರಂತೆ ಜೀರ್ಣವಾದ ಶರೀರಗಳನ್ನು ಬಿಟ್ಟು ದೇಹಿಯಾದ ಜೀವನು ಹೊಸ ಶರೀರವನ್ನು ಸ್ವೀಕರಿಸುತ್ತಾನೆ.

ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ।
ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ ॥೨೩॥

ಈ ಜೀವಚೈತನ್ಯವನ್ನು ಶಸ್ತ್ರವು ಛೇದಿಸುವುದಿಲ್ಲ. ಅಗ್ನಿಯು ದಹಿಸುವುದಿಲ್ಲ. ಜಲವು ನೆನೆಸುವುದಿಲ್ಲ. ವಾಯುವು ಶೋಷಿಸುವುದಿಲ್ಲ.

ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ ।
ನಿತ್ಯಃ ಸರ್ವಗತಸ್ಥಾಣುರಚಲೋಽಯಂ ಸನಾತನಃ ॥೨೪॥

ಈ ಜೀವನು ಅಚ್ಛೇದ್ಯನಾದವನು. ದಹಿಸಲು ಸಾಧ್ಯವಿಲ್ಲದವನು. ತೋಯಿಸಲು ಸಾಧ್ಯವಿಲ್ಲದವನು. ಒಣಗಿಸಲು ಸಾಧ್ಯವಿಲ್ಲದವನು. ಅವನು ನಿತ್ಯವೂ ಸರ್ವಗತನಾದ ಪರಮಾತ್ಮನ ಪ್ರತಿಬಿಂಬನಾದವನು. ತನ್ನ ಅಸ್ವತಂತ್ರ್ಯದಿಂದ ಚಲಿಸದವನು ಮತ್ತು ವಿಧಿ-ನಿಷೇಧ ಬದ್ಧನಾದವನು (ಅಥವಾ ಪರಮಾತ್ಮನು ನಿತ್ಯವೂ ಸರ್ವಗತನಾದವನು. ಯಾವಾಗಲೂ ಸ್ವತಂತ್ರ್ಯವಿಶಿಷ್ಟನಾದವನು. ಸಕಲ ವೇದ ಪ್ರತಿಪಾದ್ಯನಾದವನು ಮತ್ತು ಜೀವನು ಮಾತ್ರ ಅವನ ಪ್ರತಿಬಿಂಬನಾದ ಅಣು).

ಅವ್ಯಕ್ತೋಽಯಮಚಿಂತ್ಯೋಽಯಮವಿಕಾರ್ಯೋಽಯಮುಚ್ಯತೇ ।
ತಸ್ಮಾದೇವಂ ವಿದಿತ್ವೈನಂ ನಾನುಶೋಚಿತುಮರ್ಹಸಿ ॥೨೫॥

ಆ ಸರ್ವಗತನಾದ ಹರಿಯು ಅವ್ಯಕ್ತನಾದವನು. ಅಚಿಂತ್ಯಶಕ್ತಿ ಸಂಪನ್ನನಾದವನು. ಅವನನ್ನು ವಿಕಾರರಹಿತನಾದವನೆಂದು ಜ್ಞಾನಿಗಳು ಹೇಳುತ್ತಾರೆ. ಅವನ ಪ್ರತಿಬಿಂಬನಾದ ಜೀವನನ್ನೂ ನಿತ್ಯನಾದವನೆಂದು ತಿಳಿದು ನೀನು ಶೋಕವನ್ನು ತ್ಯಜಿಸು.

ಅಥ ಚೈನಂ ನಿತ್ಯಜಾತಂ ನಿತ್ಯಂ ವಾ ಮನ್ಯಸೇ ಮೃತಮ್ ।
ತಥಾಽಪಿ ತ್ವಂ ಮಹಾಬಾಹೋ ನೈನಂ ಶೋಚಿತುಮರ್ಹಸಿ ॥೨೬॥

ಒಂದು ಪಕ್ಷ ಸ್ವರೂಪತಃ ನಿತ್ಯನಾದರೂ ದೇಹದಿಂದ ಜನ್ಮವನ್ನು ಪಡೆಯುವವನು, ಸ್ವರೂಪತಃ ನಿತ್ಯನಾದರೂ ದೇಹದ ದೃಷ್ಟಿಯಿಂದ ಮರಣವನ್ನು ಹೊಂದುವವನು ಎಂದು ನೀನು ತಿಳಿಯುವುದಾದರೂ, ಎಲೈ ಮಹಾಬಾಹುವೇ, ಶೋಕಪಡುವ ಕಾರಣವಿಲ್ಲ.

ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ ।
ತಸ್ಮಾದಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ ॥೨೭॥

ಜನಿಸಿದ ವ್ಯಕ್ತಿಗೆ (ವಸ್ತುವಿಗೆ) ಮರಣವು ನಿಶ್ಚಿತವಾದುದು. ಹಾಗೆಯೇ ಮೃತನಾದ ವ್ಯಕ್ತಿಗೆ ಜನನವೂ ನಿಶ್ಚಿತವಾದುದು. ಆದ್ದರಿಂದ ಯಾವುದನ್ನು ಪರಿಹಾರ ಮಾಡಲು ಸಾಧ್ಯವಿಲ್ಲವೋ ಅಂತಹ ವಿಷಯದಲ್ಲಿ ನೀನು ಶೋಕಪಡಬಾರದು.

ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ ।
ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ ॥೨೮॥

ಎಲೈ ಭಾರತನೇ, ಜೀವ ಶರೀರಗಳು ಮೂಲಪ್ರಕೃತಿಯಿಂದ ಉಂಟಾದವುಗಳು. ಜನನ-ಮರಣಗಳ ಮಧ್ಯೆ ತೇಜೋಬನ್ನಾತ್ಮಕವಾದ ಅಥವಾ ಪಂಚಮಹಾಭೂತಾತ್ಮಕವಾದ ಶರೀರಗಳನ್ನು ಧರಿಸಿ ವ್ಯಕ್ತವಾಗುತ್ತವೆ. ಪುನಃ ಮೂಲಪ್ರಕೃತಿಯಲ್ಲಿಯೇ ನಾಶವನ್ನು ಹೊಂದುತ್ತವೆ. ಈ ವಿಷಯದಲ್ಲಿ ಗೋಳಾಡುವುದು ಏಕೆ?

ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಮ್
ಆಶ್ಚರ್ಯವದ್ ವದತಿ ತಥೈವ ಚಾನ್ಯಃ ।
ಆಶ್ಚರ್ಯವಚ್ಚೈನಮನ್ಯಃ ಶೃಣೋತಿ
ಶ್ರುತ್ವಾಽಪ್ಯೇನಂ ವೇದ ನ ಚೈವ ಕಶ್ಚಿತ್ ॥೨೯॥

ಸಾತ್ವಿಕ ಪ್ರಕೃತಿಯುಳ್ಳ ಬ್ರಹ್ಮಾದಿ ಜೀವರು ಸರ್ವಸ್ವತಂತ್ರನಾಗಿರುವ ಈ ಹರಿಯನ್ನು, ಸರ್ವಸ್ವತಂತ್ರವಾಗಿಯೇ ತಿಳಿದುಕೊಳ್ಳುತ್ತಾರೆ. 'ಗಗನಂ ಗಗನಾಕಾರಂ' ಎಂದಂತೆ. ಹಾಗೆ ತಿಳಿದುಕೊಂಡು ಅವನನ್ನು ಸ್ವತಂತ್ರನೆಂದೇ ಪ್ರವಚನ ಮಾಡುತ್ತಾರೆ. ಇನ್ನೊಬ್ಬನು ಆಶ್ಚರ್ಯವಾದ ಎಂದರೆ ಸರ್ವಸ್ವತಂತ್ರನಾದ ಹರಿಯನ್ನು ಸರ್ವಸ್ವತಂತ್ರನೆಂದೇ

ಪ್ರವಚನ ಮಾಡುತ್ತಾನೆ. ಇನ್ನೊಬ್ಬ ಸಾತ್ವಿಕ ಜೀವನು ಅವನನ್ನು ಆಶ್ಚರ್ಯನೆಂದೇ, ಸರ್ವಸ್ವತಂತ್ರನೆಂದೇ ಶ್ರವಣ ಮಾಡುತ್ತಾನೆ. ಇನ್ನೊಬ್ಬ ಜೀವನು ಕೇಳಿದರೂ (ನೋಡಿದರೂ) ಅವನನ್ನು ತಿಳಿಯುವುದಿಲ್ಲ. ಹರಿಯನ್ನು ಸರ್ವಸ್ವತಂತ್ರನೆಂದು ತಿಳಿಯುವವರು, ಅದರಂತೆ ಉಪದೇಶ ಮಾಡುವವರು, ಅದರಂತೆ ಶ್ರವಣ ಮಾಡುವವರು, ಅವನ ಸರಿಯಾದ ಜ್ಞಾನವನ್ನು ಪಡೆಯುವವರು ದುರ್ಲಭ ಎಂದು ಅಭಿಪ್ರಾಯ.

ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ ।
ತಸ್ಮಾತ್ ಸರ್ವಾಣಿ ಭೂತಾನಿ ನ ತ್ವಂ ಶೋಚಿತುಮರ್ಹಸಿ ॥೩೦॥

ಎಲೈ ಭಾರತನೇ, ಎಲ್ಲ ಜೀವರ ದೇಹದಲ್ಲಿ ಇರುವ ಈ ದೇಹಿಯಾದ ಜೀವನು ನಿತ್ಯವೂ ಅವಧ್ಯನಾಗಿದ್ದಾನೆ. ಆದ್ದರಿಂದ ಸರ್ವಜೀವರ ವಿಷಯದಲ್ಲಿ ನೀನು ಶೋಕಿಸುವ ಅಗತ್ಯವಿಲ್ಲ.

ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ ।
ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ ॥೩೧॥

ನಿನ್ನ ಧರ್ಮದ ದೃಷ್ಟಿಯಿಂದ ನೋಡಿದರೂ ನೀನು ಹೀಗೆ ವಿಚಲಿತನಾಗಬಾರದು. ಕ್ಷತ್ರಿಯನಾದವನಿಗೆ ಧರ್ಮಸಂಬಂಧಿಯಾದ ಯುದ್ಧಕ್ಕಿಂತ ಶ್ರೇಯಸ್ಕರವಾದುದು ಇನ್ನೊಂದಿಲ್ಲ.

ಯದೃಚ್ಛಯಾ ಚೋಪಪನ್ನಂ ಸ್ವರ್ಗದ್ವಾರಮಪಾವೃತಮ್ ।
ಸುಖಿನಃ ಕ್ಷತ್ರಿಯಾಃ ಪಾರ್ಥ ಲಭಂತೇ ಯುದ್ಧಮೀದೃಶಮ್ ॥೩೨॥

ಎಲೈ ಪಾರ್ಥನೇ, ಪುಣ್ಯವಂತರಾದ ಕ್ಷತ್ರಿಯರು ಭಗವದಿಚ್ಛೆಯಿಂದ ಪ್ರಾಪ್ತವಾದ ಸ್ವರ್ಗದ್ವಾರವೇ ತೆರೆದಿರುವ ಇಂತಹ ಯುದ್ಧದ ಅವಕಾಶವನ್ನು ಪಡೆಯುತ್ತಾರೆ.

ಅಥ ಚೇತ್ ತ್ವಮಿಮಂ ಧರ್ಮ್ಯಂ ಸಂಗ್ರಾಮಂ ನ ಕರಿಷ್ಯಸಿ ।
ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ ॥೩೩॥

ಒಂದುಪಕ್ಷ ನೀನು ಧರ್ಮದಿಂದ ಒದಗಿ ಬಂದ ಈ ಯುದ್ಧವನ್ನು ಮಾಡದಿದ್ದರೆ ನಿನ್ನ ಧರ್ಮವನ್ನು ಮತ್ತು ಕೀರ್ತಿಯನ್ನು ಕಳೆದುಕೊಂಡು ಪಾಪವನ್ನು ಹೊಂದುವಿ.

ಅಕೀರ್ತಿಂ ಚಾಪಿ ಭೂತಾನಿ ಕಥಯಿಷ್ಯಂತಿ ತೇऽವ್ಯಯಾಮ್ ।
ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ ॥೩೪॥

ಮನುಷ್ಯರು ನಿನ್ನ ಅಪಕೀರ್ತಿಯನ್ನು ಶಾಶ್ವತವಾಗಿ ಹೇಳುವರು. ಪೂಜಿತನಾದವನಿಗೆ ಉಂಟಾಗುವ ಅಪಕೀರ್ತಿಯು ಮರಣಕ್ಕಿಂತಲೂ ಕೇಡಾದುದು.

ಭಯಾದ್ ರಣಾದುಪರತಂ ಮಂಸ್ಯಂತೇ ತ್ವಾಂ ಮಹಾರಥಾಃ ।
ಯೇಷಾಂ ಚ ತ್ವಂ ಬಹುಮತೋ ಭೂತ್ವಾ ಯಾಸ್ಯಸಿ ಲಾಘವಮ್ ॥

ಮಹಾರಥರಾದವರು ನೀನು ಭಯದಿಂದ ಹಿಂದಿರುಗಿದೆ ಎಂದು ತಿಳಿಯುವರು. ಯಾರಿಂದ ಹಿಂದೆ ನೀನು ಪೂಜಿತನಾಗಿದ್ದೆಯೋ ಅವರ ದೃಷ್ಟಿಯಲ್ಲೇ ನೀನು ಅಲ್ಪನಾಗುವಿ.

ಅವಾಚ್ಯವಾದಾಂಶ್ಚ ಬಹೂನ್ ವದಿಷ್ಯಂತಿ ತವಾಹಿತಾಃ ।
ನಿಂದಂತಸ್ತವ ಸಾಮರ್ಥ್ಯಂ ತತೋ ದುಃಖತರಂ ನು ಕಿಮ್ ॥೩೬॥

ನಿನಗೆ ಅಹಿತರಾದವರು ನಿನ್ನ ಸಾಮರ್ಥ್ಯವನ್ನು ನಿಂದನೆ ಮಾಡುತ್ತಾ, ಕವಿಯಿಂದ ಕೇಳಬಾರದ ಅನೇಕ ಮಾತುಗಳನ್ನು ಆಡುವರು. ಅದಕ್ಕಿಂತಲೂ ದುಃಖತರವಾದುದು ಯಾವುದು?

ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಮ್ ।
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ ॥೩೭॥

ಎಲೈ ಕೌಂತೇಯನೇ, ಮೃತನಾದರೆ ಸ್ವರ್ಗವನ್ನು ಪಡೆಯುವಿ. ಅಥವಾ ಯುದ್ಧದಲ್ಲಿ ಗೆದ್ದು ಭೂಮಿಯನ್ನು ಭೋಗಿಸುವಿ. ಆದ್ದರಿಂದ ಯುದ್ಧ ಮಾಡುವುದಾಗಿ ನಿಶ್ಚಯಿಸಿ ಎದ್ದು ನಿಲ್ಲು.

ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥೩೮॥

ಸುಖ-ದುಃಖಗಳನ್ನೂ, ಲಾಭ-ನಷ್ಟಗಳನ್ನೂ, ಜಯಾಪಜಯಗಳನ್ನೂ ನಿರ್ವಿಕಾರ ದೃಷ್ಟಿಯಿಂದ ನೋಡಿ ಯುದ್ಧಕ್ಕೆ ಉದ್ಯುಕ್ತನಾಗು. ಆಗ ನೀನು ಪಾಪವನ್ನು ಹೊಂದುವುದಿಲ್ಲ.

ಏಷಾ ತೇಽಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು ।
ಬುದ್ಧ್ಯಾ ಯುಕ್ತೋ ಯಯಾ ಪಾರ್ಥ ಕರ್ಮಬಂಧಂ ಪ್ರಹಾಸ್ಯಸಿ ॥

'ನತ್ವೇವಾಹಂ' ಎಂಬ ಶ್ಲೋಕದಿಂದ ಹಿಡಿದು ಇಲ್ಲಿಯವರೆಗೆ ಜೀವೇಶ್ವರ ಜ್ಞಾನವನ್ನು ಉಂಟುಮಾಡುವ ವಾಕ್ಯಗಳನ್ನು ನಿನಗೆ ಹೇಳಿದೆ. ಕರ್ಮಕೌಶಲ ಶಾಸ್ತ್ರದ ವಿಷಯದಲ್ಲಿ ಈ ಮುಂದಿನ ಉಪದೇಶವನ್ನು ಕೇಳು. ಎಲೈ ಪಾರ್ಥನೇ, ಅಂತಹ ಜ್ಞಾನವನ್ನು (ಭಗವನ್ಮಹಿಮಾ ಪ್ರತಿಪಾದಕವಾದ ಪಂಚರಾತ್ರಾದಿ ಶಾಸ್ತ್ರದಿಂದ) ಪಡೆದು ಕರ್ಮಬಂಧನದಿಂದ ಸಂಪೂರ್ಣನಾಗಿ ಮುಕ್ತನಾಗುವಿ.

ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥೪೦॥

ಭಗವತ್ಪ್ರೀತಿಕರವಾದ ಕರ್ಮದ ಅನುಷ್ಠಾನವನ್ನು ಪ್ರಾರಂಭ ಮಾಡಿದರೂ ಅದಕ್ಕೆ ಪ್ರತ್ಯವಾಯವಿಲ್ಲ. ಅಂತಹ ಧರ್ಮವನ್ನು ಅಲ್ಪವಾಗಿ ಆಚರಣೆ ಮಾಡಿದರೂ ಅದು ದೊಡ್ಡ ಭಯದಿಂದ ರಕ್ಷಿಸುತ್ತದೆ.

ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।
ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಮ್ ॥೪೧॥

ಎಲೈ ಕುರುನಂದನನೇ, ಈ ಜ್ಞಾನ ಮತ್ತು ಕರ್ಮಗಳ ವಿಷಯದಲ್ಲಿ ನಿಶ್ಚಯಾತ್ಮಕವಾದ ಜ್ಞಾನವು ಒಂದೇ ರೀತಿ ಇರುತ್ತದೆ. ಅಂತಹ ನಿಶ್ಚಯವುಳ್ಳವರು ಯಜ್ಞವನ್ನು ಮಾಡುತ್ತೇನೆ, ದಾನವನ್ನು ಮಾಡುತ್ತೇನೆ, ತಪಸ್ಸನ್ನು ಮಾಡುತ್ತೇನೆ ಮುಂತಾದ ಅನಂತ ರೀತಿಗಳಲ್ಲಿ ಕರ್ಮಾನುಷ್ಠಾನ ಬುದ್ಧಿಯುಳ್ಳವರಾಗಿರುತ್ತಾರೆ. ಅಥವಾ 'ಅವ್ಯವಸಾಯಿನಾಮ್' ಎಂದು ಪದಚ್ಛೇದವನ್ನು ಮಾಡಬೇಕು. ಇಂತಹ ನಿಶ್ಚಯವಿಲ್ಲದವರು ನಡೆದುಕೊಳ್ಳುವ ರೀತಿ ಅನಂತವಾಗಿರುತ್ತವೆ ಎಂದು ಅಭಿಪ್ರಾಯ.

ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ ।
ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ ॥೪೨॥

ಕಾಮಾತ್ಮಾನಃ ಸ್ವರ್ಗಪರಾ ಜನ್ಮಕರ್ಮಫಲಪ್ರದಾಮ್ ।
ಕ್ರಿಯಾವಿಶೇಷಬಹುಲಾಂ ಭೋಗೈಶ್ವರ್ಯಗತಿಂ ಪ್ರತಿ ॥೪೩॥

ಎಲೈ ಪಾರ್ಥನೇ, ಅಜ್ಞಾನಿಗಳಾದ ಯಾರು ವೇದಗಳಲ್ಲಿ ಮೇಲೆ ತೋರುವ ಅರ್ಥಗಳಲ್ಲಿಯೇ ರತರಾಗಿ, ಪುಷ್ಪಗಳಂತೆ ಕಾಣುವ ಕಾಮ್ಯಕರ್ಮಗಳು ಮತ್ತು ಅದರಿಂದ ಉಂಟಾಗುವ ಅನಿತ್ಯ ಸುಖಗಳು ಇವೇ ಶ್ರೇಷ್ಠವಾದ ಫಲ, ಅದನ್ನು ಬಿಟ್ಟು ಮೋಕ್ಷವೆಂಬ ಮಹಾಫಲವಿಲ್ಲ ಎಂದು ಹೇಳುತ್ತಾರೆಯೋ, ಕಾಮಾತ್ಮರಾದ ಅವರು ಸ್ವರ್ಗವನ್ನೇ ಶ್ರೇಷ್ಠವೆಂದು ತಿಳಿದು ಪುನರ್ಜನ್ಮ ಮತ್ತು ಕರ್ಮಗಳ ರೂಪದ ಫಲವನ್ನು ಕೊಡುವ, ಕ್ರಿಯಾವಿಶೇಷವನ್ನು ಹೇಳುವ ಭೋಗೈಶ್ವರ್ಯ ಪ್ರಾಪ್ತಿಗಳಲ್ಲಿ ಆಸಕ್ತರಾಗಿರುತ್ತಾರೆ.

ಭೋಗೈಶ್ವರ್ಯಪ್ರಸಕ್ತಾನಾಂ ತಯಾऽಪಹೃತಚೇತಸಾಮ್ ।
ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌ ನ ವಿಧೀಯತೇ ॥೪೪॥

ಭೋಗೈಶ್ವರ್ಯಗಳಲ್ಲಿ ಅತಿಯಾಗಿ ಆಸಕ್ತರಾಗಿ ಅವುಗಳಿಂದ ಅಪಹೃತವಾದ ಮನಸ್ಸುಳ್ಳವರಿಗೆ ತತ್ತ್ವವಿಷಯದಲ್ಲಿ ದಾರ್ಢ್ಯವನ್ನು ತಂದುಕೊಡಬೇಕಾದ ನಿಶ್ಚಯಾತ್ಮಕವಾದ ಬುದ್ಧಿಯು ಅವರಿಗೆ ಚಿತ್ತ ಸಮಾಧಾನವನ್ನು ತಂದುಕೊಡುವುದಿಲ್ಲ.

ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ ।
ನಿರ್ದ್ವಂದ್ವೋ ನಿತ್ಯಸತ್ತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್ ॥೪೫॥

ಎಲೈ ಅರ್ಜುನನೇ, ವೇದಗಳು ಆಪಾತತಃ ಸತ್ವಾದಿಗುಣಮಯವಾದ ಸ್ವರ್ಗಾದಿಗಳನ್ನು ಪ್ರತಿಪಾದನೆ ಮಾಡುತ್ತವೆ. ಆದರೆ ವಸ್ತುತಃ ಅವು ತ್ರೈಗುಣ್ಯರೂಪವಾದ ವಿಷವನ್ನು ಪರಿಹಾರ ಮಾಡುತ್ತವೆ. ಯಥಾರ್ಥ ಪ್ರತಿಪಾದಕವಾದ ವೇದದಿಂದ ಪ್ರತಿಪಾದ್ಯವಾದಗುಣವನ್ನು ನಿಷೇಧ ಮಾಡಿದರೆ ವಿರೋಧ ಬರುವುದರಿಂದ 'ನಿಸ್ತ್ರೈಗುಣ್ಯಃ ಭವ' ಎಂದರೆ ತ್ರಿಗುಣಾತ್ಮಕವಾದ ಸ್ವರ್ಗಾದಿ ಫಲದಲ್ಲಿ ಆಕಾಂಕ್ಷಾರಹಿತನಾಗಿರು ಎಂದು ಅರ್ಥ. ಶೀತೋಷ್ಣಾದಿ ದ್ವಂದ್ವದಿಂದ ಉತ್ತೀರ್ಣನಾಗಿ, ನಿತ್ಯವೂ ಸದ್ಗುಣಭರಿತನಾದ ಹರಿಯ ಸ್ಮರಣೆಯನ್ನು ಹೊಂದಿದವನಾಗಿ, ಯೋಗಕ್ಷೇಮಾರ್ಥವಾಗಿ ಪ್ರಯತ್ನವನ್ನು ಪಡದೆ ಪರಮಾತ್ಮನೇ ನನಗೆ ರಕ್ಷಕನಾಗಿದ್ದಾನೆಂದು ಸ್ಮರಣೆಯನ್ನು ಹೊಂದುವವನಾಗು.

ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ ।
ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥೪೬॥

ಯಾರಿಗೆ ಸಣ್ಣ ಕೂಪದಲ್ಲಿ ತನ್ನ ಬಾಯಾರಿಕೆಯನ್ನು ನಿವಾರಿಸಿಕೊಳ್ಳಲು ಎಷ್ಟು ನೀರಿನ ಅವಶ್ಯಕವಿದೆಯೋ ಅಪರೋಕ್ಷ ಜ್ಞಾನಿಯಾದ ಅವನಿಗೂ ಎಲ್ಲ ವೇದಗಳಲ್ಲಿಯೂ ಅಷ್ಟೇ ಪ್ರಯೋಜನವಿದೆ. ತನಗೆ ಎಷ್ಟು ಯೋಗ್ಯತೆ ಇದೆಯೋ ಅಷ್ಟೇ ಉಪಾಸನೆಯನ್ನು ಮಾಡಬೇಕು. ಅದಕ್ಕಿಂತ ಹೆಚ್ಚು ಮಾಡಬಾರದು ಎಂದು ಅಭಿಪ್ರಾಯ.

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥೪೭॥

ನಿನಗೆ ಕರ್ಮವನ್ನು ಮಾಡುವುದರಲ್ಲಿ ಮಾತ್ರ ಅಧಿಕಾರ. ಕರ್ಮದ ಫಲದಲ್ಲಿ ಎಂದೂ ಅಧಿಕಾರವಿಲ್ಲ. ನಿನ್ನ ಪ್ರವೃತ್ತಿಯನ್ನು ಕುರಿತು ಕರ್ಮದ ಫಲದ ಉದ್ದೇಶವು ಕಾರಣವಾಗಬಾರದು. ಕರ್ಮವನ್ನು ಮಾಡದೆ ಕರ್ಮತ್ಯಾಗ ಮಾಡುವುದರಲ್ಲಿ ನೀನು ಆಸಕ್ತಿಯನ್ನು ಹೊಂದಬೇಡ.

ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥೪೮॥

ಎಲೈ ಧನಂಜಯನೇ, ಕರ್ಮಗಳಲ್ಲಿ ಆಸಕ್ತಿಯನ್ನು ಬಿಟ್ಟು ಯೋಗಸ್ಥನಾಗಿ ಕರ್ಮಗಳನ್ನು ಮಾಡು. ಕರ್ಮವು ಸಮಾಪ್ತಿಯಾದರೂ ಅಥವಾ ಆಗದಿದ್ದರೂ ಮನಸ್ಸಮಾಧಾನವನ್ನು ಹೊಂದಿರುವುದೇ ಯೋಗ.

ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥೪೯॥

ಯಾವನ ಎಲ್ಲ ಉಪಕ್ರಮಗಳೂ ಫಲೋದ್ದೇಶ ರಹಿತವಾಗಿರುತ್ತವೆಯೋ ಜ್ಞಾನಾಗ್ನಿಯಿಂದ ತನ್ನ ಕರ್ಮಗಳನ್ನು ಭಸ್ಮ ಮಾಡಿದ ಅವನನ್ನು ಜ್ಞಾನಿಗಳು ಪಂಡಿತನೆಂದು ಕರೆಯುತ್ತಾರೆ.

ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ ಧನಂಜಯ ।
ಬುದ್ಧೌ ಶರಣಮನ್ವಿಚ್ಛ ಕೃಪಣಾಃ ಫಲಹೇತವಃ ॥೫೦॥

ಎಲೈ ಧನಂಜಯನೇ, ನೀಚವಾದ ಕರ್ಮವನ್ನು ಬುದ್ಧಿಯೋಗವನ್ನು ಆಶ್ರಯಿಸಿ ದೂರದಲ್ಲಿಯೇ ಪರಿತ್ಯಾಗ ಮಾಡು. ಅಂತಹ ಬುದ್ಧಿಯೋಗವನ್ನೇ ಶರಣು ಹೊಂದು (ಅಪರೋಕ್ಷಜ್ಞಾನವುಂಟಾದರೂ ಹರಿಗೇ ಶರಣಾಗತನಾಗು. ಫಲದ ಆಕಾಂಕ್ಷೆಯಿಂದ ಕರ್ಮವನ್ನು ಮಾಡುವವರು ಕೃಪಣರು).

ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತದುಷ್ಕೃತೇ ।
ತಸ್ಮಾದ್ ಯೋಗಾಯ ಯುಜ್ಯಸ್ವ ಯೋಗಃ ಕರ್ಮಸು ಕೌಶಲಮ್ ॥

ಅಂತಹ ಬುದ್ಧಿಯೋಗವುಳ್ಳ ಜ್ಞಾನಿಯು ಕಾಮ್ಯವಾದ ಸತ್ಕರ್ಮ ಮತ್ತು ದುಷ್ಕರ್ಮಗಳೆರಡನ್ನೂ ಇಲ್ಲಿ ತ್ಯಜಿಸುತ್ತಾನೆ. ಆದ್ದರಿಂದ ಯೋಗವನ್ನು ಆಶ್ರಯಿಸುವವನಾಗು. ಅಂತಹ ಬುದ್ಧಿಯೋಗವೇ ಕರ್ಮಗಳಲ್ಲಿ ಕೌಶಲ ಎನಿಸುತ್ತದೆ.

ಕರ್ಮಜಂ ಬುದ್ಧಿಯುಕ್ತಾ ಹಿ ಫಲಂ ತ್ಯಕ್ತ್ವಾ ಮನೀಷಿಣಃ ।
ಜನ್ಮಬಂಧವಿನಿರ್ಮುಕ್ತಾಃ ಪದಂ ಗಚ್ಛಂತ್ಯನಾಮಯಮ್ ॥೫೨॥

ಅಂತಹ ಬುದ್ಧಿಯೋಗವುಳ್ಳ ಜ್ಞಾನಿಗಳು ಕರ್ಮದಿಂದ ಉಂಟಾಗುವ ಫಲದಲ್ಲಿ ಆಸಕ್ತಿಯನ್ನು ತೊರೆದು, ಜನ್ಮಬಂಧಗಳಿಂದ ಪೂರ್ಣವಾಗಿ ನಿರ್ಮುಕ್ತರಾಗಿ ನಿರ್ದುಷ್ಟವಾದ ಮೋಕ್ಷಸ್ಥಾನವನ್ನು ಹೊಂದುತ್ತಾರೆ.

ಯದಾ ತೇ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತಿ ।
ತದಾ ಗಂತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯ ಚ ॥೫೩॥

ಯಾವಾಗ ನಿನ್ನ ಬುದ್ಧಿಯು ಮೋಹವೆಂಬ ಕಶ್ಮಲವನ್ನು ತೊರೆಯುವುದೋ ಆಗ ಮಹಾತ್ಮರಿಂದ ಶ್ರವಣ ಮಾಡಿದುದರ ಮತ್ತು ಮುಂದ ಶ್ರವಣ ಮಾಡುವುದರ ಫಲವನ್ನು ಪಡೆದವನಾಗಿರುತ್ತೀಯೆ.

ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ ।
ಸಮಾಧಾವಚಲಾಬುದ್ಧಿಸ್ತದಾ ಯೋಗಮವಾಪ್ಸ್ಯಸಿ ॥೫೪॥

ಯಾವಾಗ ಶ್ರುತಿಗಳ ವಿಚಾರದಿಂದ ವಿಶೇಷವಾಗಿ ಉಂಟಾದ ನಿನ್ನ ಬುದ್ಧಿಯು ಸಂಶಯಾದಿಗಳನ್ನು ತೊರೆದು ಸಮಾಧಿಯಲ್ಲಿ ನಿಶ್ಚಂಚಲವಾಗಿ ನಿಲ್ಲುವುದೋ ಆಗ ನೀನು ಅಂತಹ ಬುದ್ಧಿಯೋಗವನ್ನು ಹೊಂದುವಿ.

ಅರ್ಜುನಃ

ಸ್ಥಿತಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ ।
ಸ್ಥಿತಧೀಃ ಕಿಂ ಪ್ರಭಾಷೇತ ಕಿಮಾಸೀತ ವ್ರಜೇತ ಕಿಮ್ ॥೫೫॥

ಅರ್ಜುನ– ಎಲೈ ಕೇಶವನೇ, ಸಮಾಧಿಸ್ಥನಾದ ಅಪರೋಕ್ಷಜ್ಞಾನಿಯ ಲಕ್ಷಣವೇನು? ಅಂತಹ ಅಪರೋಕ್ಷಜ್ಞಾನಿಯು ಭಾಷಣ, ಆಸನ, ಗಮನ ಮೊದಲಾದ ಕ್ರಿಯೆಗಳನ್ನು ಏತಕ್ಕಾಗಿ ಮಾಡುತ್ತಾನೆ?

ಶ್ರೀಭಗವಾನ್

ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್ ।
ಆತ್ಮನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥೫೬॥

ಶ್ರೀಭಗವಾನ್– ಎಲೈ ಪಾರ್ಥನೇ, ಮನೋಗತವಾದ ಎಲ್ಲ ಕಾಮಗಳನ್ನೂ ತೊರೆದು ಯಾವಾಗ ಪರಮಾತ್ಮನಲ್ಲಿಯೇ ಸಂತುಷ್ಟನಾಗಿರುತ್ತಾನೆಯೋ ಆಗ ಅವನನ್ನು ಸ್ಥಿತಪ್ರಜ್ಞನೆಂದು ಕರೆಯುತ್ತಾರೆ.

ದುಃಖೇಷ್ವನುದ್ವಿಗ್ನಮನಾ ಸುಖೇಷು ವಿಗತಸ್ಪೃಹಃ ।
ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥೫೭॥

ದುಃಖಗಳು ಉಂಟಾದಾಗ ಮನಸ್ಸಿನಲ್ಲಿ ಉದ್ವೇಗವನ್ನು ತಂದುಕೊಳ್ಳದೆ, ಸುಖಗಳು ಉಂಟಾದಾಗ ಅದನ್ನು ಬಯಸದೇ, ರಾಗ-ಭಯ-ಕ್ರೋಧಗಳಿಂದ ರಹಿತನಾದ ಮುನಿಯನ್ನು ಸ್ಥಿತಪ್ರಜ್ಞ ಎಂದು ಹೇಳುತ್ತಾರೆ.

ಯಃ ಸರ್ವತ್ರಾನಭಿಸ್ನೇಹಾತ್ತತ್ತತ್ ಪ್ರಾಪ್ಯ ಶುಭಾಶುಭಮ್ ।
ನಾಭಿನಂದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥೫೮॥

ಯಾವನು ಎಲ್ಲ ವಿಷಯಗಳಲ್ಲೂ ಆಸಕ್ತಿಯನ್ನು ತೊರೆದಿರುವುದರಿಂದ ಶುಭವನ್ನು ಹೊಂದಿ ಸಂತೋಷಪಡುವುದಿಲ್ಲವೋ, ಅಶುಭವನ್ನು ಹೊಂದಿ ದ್ವೇಷ ಮಾಡುವುದಿಲ್ಲವೋ ಅವನ ಪ್ರಜ್ಞೆಯು ಪ್ರತಿಷ್ಠಿತವಾಗಿರುತ್ತದೆ.

ಯದಾ ಸಂಹರತೇ ಚಾಯಂ ಕೂರ್ಮೋಽಂಗಾನೀವ ಸರ್ವಶಃ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥೫೯॥

ಯಾವನು ಕೂರ್ಮವು ತನ್ನ ಅಂಗಗಳನ್ನು ಪೂರ್ಣವಾಗಿ ಒಳಗೆ ಎಳೆದುಕೊಂಡಂತೆ ಇಂದ್ರಿಯಗಳನ್ನು ಅವುಗಳ ವಿಷಯದಿಂದ ಪೂರ್ಣವಾಗಿ ಹಿಂತೆಗೆದುಕೊಳ್ಳುತ್ತಾನೆಯೋ ಅವನ ಪ್ರಜ್ಞೆಯು ಪ್ರತಿಷ್ಠಿತವಾದುದು.

ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।
ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥೬೦॥

ದೇಹಿಯು ನಿರಾಹಾರವನ್ನು ಮಾಡಿದರೆ ವಿಷಯಗಳು ಅವನಿಂದ ದೂರವಾಗುತ್ತವೆ. ಆದರೆ ವಿಷಯವನ್ನು ಭೋಗಿಸುವ ಆಸೆಯು ಅವನಿಂದ ದೂರವಾಗುವುದಿಲ್ಲ. ಆ ಆಸೆಯಾದರೂ ಪರಮಾತ್ಮನನ್ನು ನೋಡಿದ ಮೇಲೆಯೇ ನಿವೃತ್ತವಾಗುತ್ತದೆ.

ಯತತೋ ಹ್ಯಪಿ ಕೌಂತೇಯ ಪುರುಷಸ್ಯ ವಿಪಶ್ಚಿತಃ ।
ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ ॥೬೧॥

ಎಲೈ ಕೌಂತೇಯನೇ, ಜ್ಞಾನವನ್ನು ಪಡೆದು ಮೋಕ್ಷಕ್ಕಾಗಿ ಪ್ರಯತ್ನಶೀಲನಾದ ಪುರುಷನಿಗೂ ಮನಸ್ಸನ್ನು ಕಲಕುವ ಸಾಮರ್ಥ್ಯವುಳ್ಳ ಇಂದ್ರಿಯಗಳು ತಮ್ಮ ಸಾಮರ್ಥ್ಯದಿಂದ ಮನಸ್ಸನ್ನು ಅಪಹರಿಸುತ್ತವೆ.

ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ ।
ವಶೇ ಹಿ ಯಸ್ಯೇಂದ್ರಿಯಾಣಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥೬೨॥

ನನ್ನನ್ನೇ ಸರ್ವೋತ್ತಮನೆಂದು ತಿಳಿದು ಆ ಇಂದ್ರಿಯಗಳೆಲ್ಲವನ್ನೂ ನಿಯಮನವನ್ನು ಮಾಡಿ ನನ್ನ ಚಿಂತನೆಯಿಂದ ಕೂಡಿದವನಾಗಿರಬೇಕು. ಯಾವನಿಗೆ ಇಂದ್ರಿಯಗಳು ವಶವಾಗಿರುತ್ತವೆಯೋ ಅವನ ಪ್ರಜ್ಞೆಯು ಪ್ರತಿಷ್ಠಿತವಾಗಿರುತ್ತದೆ.

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ ।
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ॥

ಕ್ರೋಧಾದ್ ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿವಿಭ್ರಮಃ ।
ಸ್ಮೃತಿಭ್ರಂಶಾತ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥೬೪॥

ಮನುಷ್ಯನು ಇಂದ್ರಿಯವಿಷಯಗಳನ್ನೇ ಧ್ಯಾನ ಮಾಡುತ್ತಿದ್ದರೆ ಅವುಗಳಲ್ಲಿ ಸ್ನೇಹ ಉಂಟಾಗುತ್ತದೆ. ಸ್ನೇಹದಿಂದ ಅವುಗಳನ್ನು ಪಡೆಯುವ ಆಸೆ ಉಂಟಾಗುತ್ತದೆ. ಆ ವಸ್ತುವು ದೊರೆಯದಿದ್ದರೆ ಅಂತಹ ಆಸೆಯಿಂದ ಕ್ರೋಧ ಉಂಟಾಗುತ್ತದೆ. ಕ್ರೋಧದಿಂದ ಅಜ್ಞಾನವೂ, ಅಜ್ಞಾನದಿಂದ ಶ್ರವಣ ಮಾಡಿದ ಶಾಸ್ತ್ರಾರ್ಥದ ಸ್ಮರಣೆಯ ನಾಶವೂ, ಅಂತಹ ಸ್ಮರಣೆಯ ನಾಶದಿಂದ ಶಾಸ್ತ್ರಜನ್ಯತತ್ತ್ವಜ್ಞಾನದ ನಾಶವೂ ಉಂಟಾಗುತ್ತದೆ. ತತ್ತ್ವ ಜ್ಞಾನದ ನಾಶವುಂಟಾದರೆ ಮನುಷ್ಯ ಹಾಳಾಗುತ್ತಾನೆ.

ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್ ।
ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ ॥೬೫॥

ಯಾವನು ತನ್ನ ಮನಸ್ಸಿಗೆ ಅಧೀನವಾದ ಇಂದ್ರಿಯಗಳಿಂದ ರಾಗ-ದ್ವೇಷ ರಹಿತನಾಗಿ ವಿಷಯಗಳನ್ನು ಸೇವಿಸುತ್ತಾನೆಯೋ, ಅಂತಹ ಸ್ವಾಧೀನವಾದ ಮನಸ್ಸುಳ್ಳ ಜೀವನು ಪರಮಾತ್ಮನ ಪ್ರಸಾದವನ್ನು ಹೊಂದುತ್ತಾನೆ ಅಥವಾ ಪರಮಾತ್ಮನ ಅನುಗ್ರಹದಿಂದ ಮನಃಪ್ರಸಾದವನ್ನು ಹೊಂದುತ್ತಾನೆ.

ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ ।
ಪ್ರಸನ್ನಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತಿ ॥೬೬॥

ಅಂತಹ ಭಗವದನುಗ್ರಹವೂ ಮತ್ತು ಮನಃಪ್ರಸನ್ನತೆಯೂ ಉಂಟಾದಾಗ ಅವನ ಎಲ್ಲ ದುಃಖಗಳೂ ನಾಶವನ್ನು ಹೊಂದುತ್ತವೆ. ಪ್ರಸನ್ನ ಮನಸ್ಸುಳ್ಳ ಅವನ ಬುದ್ಧಿಯು ಶೀಘ್ರವಾಗಿ ನಿಶ್ಚಲವಾಗಿ ನಿಲ್ಲುತ್ತದೆ.

ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ ।
ನ ಚಾಭಾವಯತಃ ಶಾಂತಿರಶಾಂತಸ್ಯ ಕುತಃ ಸುಖಮ್ ॥೬೭॥

ಅಂತಹ ಯೋಗವಿಲ್ಲದವನಿಗೆ ನಿಶ್ಚಿತಜ್ಞಾನವು ಇರುವುದಿಲ್ಲ, ನಿಧಿಧ್ಯಾಸನವೂ ಇರುವುದಿಲ್ಲ. ನಿಧಿಧ್ಯಾಸನವಿಲ್ಲದಿರುವವನಿಗೆ ಭಗವದೇಕನಿಷ್ಠವಾದ ಬುದ್ಧಿ ಇರುವುದಿಲ್ಲ ಎಂದರೆ ಅಪರೋಕ್ಷ ಜ್ಞಾನವಾಗುವುದಿಲ್ಲ. ಅಂತಹವನಿಗೆ ಸುಖವು ಎಲ್ಲಿಂದ ಬರಬೇಕು?

ಇಂದ್ರಿಯಾಣಾಂ ಹಿ ಚರತಾಂ ಯನ್ಮನೋಽನುವಿಧೀಯತೇ ।
ತದಸ್ಯ ಹರತಿ ಪ್ರಜ್ಞಾಂ ವಾಯುರ್ನಾವಮಿವಾಂಭಸಿ ॥೬೮॥

ಯಾವನ ಮನಸ್ಸು ವಿಷಯಗಳ ಕಡೆಗೆ ಧಾವಿಸಿ ಹೋಗುವ ಇಂದ್ರಿಯಗಳನ್ನು ಅನುಸರಿಸಿ ಹೊರಗೆ ಚಲಿಸುತ್ತದೆಯೋ ಅಂತಹವನ ಮನಸ್ಸು ಸಮುದ್ರದಲ್ಲಿ ವಾಯುವು ನೌಕೆಯನ್ನು ಎಳೆದಂತೆ ಅವನ ಪ್ರಜ್ಞೆಯನ್ನು ನಾಶಮಾಡುತ್ತದೆ.

ತಸ್ಮಾದ್ ಯಸ್ಯ ಮಹಾಬಾಹೋ ನಿಗೃಹೀತಾನಿ ಸರ್ವಶಃ ।
ಇಂದ್ರಿಯಾಣೇಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥೬೯॥

ಎಲೈ ಮಹಾಬಾಹುವೇ, ಆದ್ದರಿಂದ ಯಾವನ ಇಂದ್ರಿಯಗಳು ಅವುಗಳ ವಿಷಯಗಳಿಂದ ಸಂಪೂರ್ಣವಾಗಿ ನಿಗ್ರಹಿಸಲ್ಪಡುತ್ತವೆಯೋ ಅವನ ಪ್ರಜ್ಞೆಯು ಪ್ರತಿಷ್ಠಿತವಾಗಿರುತ್ತದೆ.

ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾಪಶ್ಯತೋ ಮುನೇಃ ॥೭೦॥

ಸರ್ವಜನರಿಗೆ ಪರಲೋಕ ಮತ್ತು ಪರಮಾತ್ಮನ ವಿಚಾರಗಳು ರಾತ್ರಿಯಿದ್ದಂತೆ ಅಂಧಕಾರ ವಶವಾಗಿರುತ್ತವೆ. ಆ ವಿಷಯದಲ್ಲಿ ಜ್ಞಾನಿಯು ಬಹಳ ಎಚ್ಚರವಾಗಿರುತ್ತಾನೆ. ಅವನಿಗೆ ಆ ವಿಷಯದಲ್ಲಿ ಅಂಧಕಾರವಿಲ್ಲ, ಯಾವಾಗಲೂ ಪರಮಾತ್ಮನ ಮತ್ತು ಪರಲೋಕದ ಚಿಂತನೆಯಲ್ಲಿಯೇ ಇರುತ್ತಾನೆ ಎಂದು ಅರ್ಥ. ಯಾರು ಎಲ್ಲವೂ ಅಸಕ್ತವಾಗಿರುವ ಕುಟುಂಬಪೋಷಣೆ ಮೊದಲಾದ ಕಾರ್ಯಗಳಲ್ಲಿಯೇ ಎಚ್ಚರವಾಗಿರುತ್ತಾನೆಯೋ, ಅಂತಹ ಕುಟುಂಬಭರಣಾದಿ ಕ್ರಿಯೆಗಳು ಅಪರೋಕ್ಷ ಜ್ಞಾನಿಯಾದವನಿಗೆ ರಾತ್ರಿಪ್ರಾಯವಾಗಿರುತ್ತವೆ. ಅವನ ಕಣ್ಣಿಗೆ ಅಂತಹ ಕ್ರಿಯೆಗಳು ಕಾಣಿಸುವುದಿಲ್ಲ ಎಂದು ಅಭಿಪ್ರಾಯ.

ಆಪೂರ್ಯಮಾಣಮಚಲಪ್ರತಿಷ್ಠಂ
ಸಮುದ್ರಮಾಪಃ ಪ್ರವಿಶಂತಿ ಯದ್ವತ್ ।
ತದ್ವತ್ ಕಾಮಾ ಯಂ ಪ್ರವಿಶಂತಿ ಸರ್ವೇ
ಸ ಶಾಂತಿಮಾಪ್ನೋತಿ ನ ಕಾಮಕಾಮೀ ॥೭೦॥

ಅಚಲವೂ, ಪ್ರತಿಷ್ಠಿತವೂ ಆದ ಸಮುದ್ರವನ್ನು ನದಿಯ ನೀರುಗಳು ಬಂದು ತುಂಬಿ ಹೇಗೆ ಅಲ್ಲಿಯೇ ವಿಲೀನವಾಗುತ್ತವೆಯೋ ಅದರಂತೆ ಯಾವನ ಮನಸ್ಸಿಗೆ ಬಂದ ಕಾಮಗಳು ಅಲ್ಲಿಯೇ ವಿಲೀನವಾಗುತ್ತವೆಯೋ ಅಂತಹ ಪುರುಷನು

ಮೋಕ್ಷವನ್ನು ಪಡೆಯುತ್ತಾನೆ. ಕಾಮ್ಯವಸ್ತುಗಳಲ್ಲಿಯೇ ಆಸೆಯುಳ್ಳವನು ಮೋಕ್ಷವನ್ನು ಪಡೆಯುವುದಿಲ್ಲ.

ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ ।
ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ ॥೭೨॥

ಯಾವ ಪುರುಷನು ಎಲ್ಲ ಕಾಮಗಳನ್ನೂ ತೊರೆದು ಯಾವುದರಲ್ಲಿಯೂ ಆಸಕ್ತನಾಗದೆ, ಅಹಂಕಾರ-ಮಮಕಾರ ರಹಿತನಾಗಿ ಕರ್ಮಗಳನ್ನು ಮಾಡುತ್ತಾನೆಯೋ ಅವನು ಮೋಕ್ಷವನ್ನು ಪಡೆಯುತ್ತಾನೆ.

ಜಹ್ನೋಪಸ್ಥನಿಮಿತ್ತಂ ಹಿ ಪ್ರವೃತ್ತಿರಸಕರ್ಮಣಃ ।
ತಸ್ಮಾದಪಿ ಚ ನಶ್ಯೇತ ಜಹ್ನೋಪಸ್ಥಾದ್ ಧನಂಜಯ ॥೭೩॥

ಸತ್ಕರ್ಮವನ್ನು ಮಾಡದಿರುವ ಪುರುಷನಿಗೆ ಜಿಹ್ವೆ ಮತ್ತು ಉಪಸ್ಥಸುಖದ ಸಲುವಾಗಿ ಎಲ್ಲ ಪ್ರವೃತ್ತಿಯಲ್ಲಿಯೂ ಇರುತ್ತದೆ. ಎಲೈ ಧನಂಜಯನೇ, ಜಹ್ನೋಪಸ್ಥದ ಸುಖದ ನಿಮಿತ್ತವಾಗಿ ನಾಶವನ್ನು ಹೊಂದಬಾರದು.

ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ ನೈನಾಂ ಪ್ರಾಪ್ಯ ವಿಮುಹ್ಯತಿ ।
ಸ್ಥಿತ್ವಾಸ್ಯಾಮಂತಕಾಲೇಽಪಿ ಬ್ರಹ್ಮ ನಿರ್ವಾಣಮೃಚ್ಛತಿ ॥೭೪॥

ಎಲೈ ಪಾರ್ಥನೇ, ಇದು ಪರಬ್ರಹ್ಮನಲ್ಲಿ ನೆಟ್ಟರುವ ಮನಸ್ಸಿನ ಸ್ಥಿತಿ. ಇಂತಹ ಸ್ಥಿತಿಯನ್ನು ಪಡೆದವನು ಪುನಃ ಮೋಹಕ್ಕೆ ಒಳಗಾಗುವುದಿಲ್ಲ. ದೇಹವನ್ನು ಬಿಡುವ ಕಾಲದಲ್ಲಿ ಇಂತಹ ಸ್ಥಿತಿಯನ್ನು ಹೊಂದಿದವನು ಪರಬ್ರಹ್ಮನ ಕೃಪೆಯಿಂದ ಮೋಕ್ಷವನ್ನು ಹೊಂದುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಚತುರ್ವಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೈದನೆಯ ಅಧ್ಯಾಯ

ಭಗವದ್ಗೀತಾ – ಕರ್ಮಯೋಗ

ಅರ್ಜುನಃ

ಜ್ಯಾಯಸೀ ಚೇತ್ ಕರ್ಮಣಸ್ತೇ ಮತಾ ಬುದ್ಧಿರ್ಜನಾರ್ದನ ।
ತತ್ ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ ॥೧॥

ಅರ್ಜುನ– ಎಲೈ ಜನಾರ್ದನನೇ, ನಿನಗೆ ಕರ್ಮಯೋಗಕ್ಕಿಂತಲೂ ಬುದ್ಧಿಯೋಗವೇ ಶ್ರೇಷ್ಠವೆಂದು ಅಭಿಪ್ರಾಯವಿದ್ದರೆ, ಎಲೈ ಕೇಶವನೇ, ಘೋರವಾದ ಯುದ್ಧರೂಪವಾದ ಕರ್ಮದಲ್ಲಿ ನನ್ನನ್ನು ಏಕೆ ತೊಡಗಿಸುತ್ತೀಯೆ?

ವ್ಯಾಮಿಶ್ರೇಣೇವ ವಾಕ್ಯೇನ ಬುದ್ಧಿಂ ಮೋಹಯಸೀವ ಮೇ ।
ತದೇಕಂ ವದ ನಿಶ್ಚಿತ್ಯ ಯೇನ ಶ್ರೇಯೋಽಹಮಾಪ್ನುಯಾಮ್ ॥೨॥

ಕೆಲವು ಸಲ ಕರ್ಮವನ್ನು ಹೊಗಳಿ, ಕೆಲವು ಸಲ ಜ್ಞಾನವನ್ನು ಹೊಗಳಿ, ಸಂದೇಹ ಜನಕವಾದ ವಾಕ್ಯಗಳಿಂದ ನನ್ನ ಬುದ್ಧಿಗೆ ಮೋಹವನ್ನು ಉಂಟುಮಾಡುತ್ತಿದ್ದೀಯೆ! ಯಾವ ಒಂದು ಮಾರ್ಗವನ್ನು ಅನುಸರಿಸಿದರೆ ನಾನು ಶ್ರೇಯಸ್ಸನ್ನು ಪಡೆದೇನೋ ಅಂತಹ ಮಾರ್ಗವನ್ನು ನಿಶ್ಚಯಿಸಿ ಹೇಳು.

ಶ್ರೀಭಗವಾನ್

ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾಽನಘ ।
ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್ ॥

ಶ್ರೀಭಗವಾನ್– ಎಲೈ ಅನಘನೇ, ನಾನು ಹಿಂದೆ ಈ ಲೋಕದಲ್ಲಿ ಎರಡು ವಿಧವಾದ ಮುಕ್ತಿಸಾಧನ ಅಥವಾ ಸಂಸಾರನಿವೃತ್ತಿ ಸಾಧನವು ಇದೆ ಎಂದು ಹೇಳಿದ್ದೇನೆ. ಜ್ಞಾನಪ್ರಧಾನರಾದ (ಅಲ್ಪಕರ್ಮವಿರುವ) ದೇವತೆಗಳಿಗೆ ಮತ್ತು ಸನಕಾದಿ ಯೋಗಿಗಳಿಗೆ ಜ್ಞಾನಯೋಗದಿಂದಲೂ, ಕರ್ಮಪ್ರಧಾನವಾಗಿರುವ (ಅದಕ್ಕಿಂತ ಕಡಿಮೆಯಾದ ಜ್ಞಾನವನ್ನು ಹೊಂದಿದ) ಜನಕಾದಿಗಳಿಗೆ ಕರ್ಮಯೋಗದಿಂದಲೂ ಸಿದ್ಧಿ ಉಂಟಾಗುತ್ತದೆ.

ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋऽಶ್ನುತೇ ।
ನ ಚ ಸನ್ನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥೪॥

ವಿಷ್ಣುಪ್ರೀತ್ಯರ್ಥವಾದ ಕರ್ಮವನ್ನು ಆರಂಭ ಮಾಡದಿರುವುದರಿಂದ ಯಾವ ಪುರುಷನೂ ಮೋಕ್ಷವನ್ನಾಗಲೀ, ಅದಕ್ಕೆ ಯೋಗ್ಯವಾದ ಜ್ಞಾನವನ್ನಾಗಲೀ ಪಡೆಯುವುದಿಲ್ಲ. ಮತ್ತು ಕೇವಲ ಕರ್ಮಸಂನ್ಯಾಸದಿಂದ ಸಿದ್ಧಿ ಉಂಟಾಗುವುದಿಲ್ಲ.

ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥೫॥

ಏಕೆಂದರೆ ಯಾವುದೇ ಪ್ರಾಣಿಯು ಕರ್ಮವನ್ನು ಮಾಡದೆ ಒಂದು ಕ್ಷಣವೂ ಇರುವುದಿಲ್ಲ. ಎಲ್ಲರೂ ವಿಷ್ಣುವಿಗೆ ವಶವಾಗಿ ಪ್ರಕೃತಿಯ ಗುಣಗಳಿಂದ ಯಾವುದಾದರೂ ಒಂದು ಕರ್ಮವನ್ನು ಮಾಡುತ್ತಲೇ ಇರುತ್ತಾರೆ.

ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್ ।
ಇಂದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ ॥೬॥

ಯಾವನು ಕರ್ಮೇಂದ್ರಿಯಗಳನ್ನು ನಿಯಂತ್ರಿಸಿ ಮನಸ್ಸಿನಿಂದ ಆ ಇಂದ್ರಿಯಗಳ ವಿಷಯಗಳನ್ನೇ ಸ್ಮರಣೆ ಮಾಡುತ್ತಾನೆಯೋ ಅಂತಹ ಮೂಢಾತ್ಮನನ್ನು ಜ್ಞಾನಿಗಳು ಮಿಥ್ಯಾಚಾರವುಳ್ಳವನು ಎಂದು ಕರೆಯುತ್ತಾರೆ.

ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇऽರ್ಜುನ ।
ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಃ ಸ ವಿಶಿಷ್ಯತೇ ॥೭॥

ಎಲೈ ಅರ್ಜುನನೇ, ಯಾವನು ಇಂದ್ರಿಯಗಳನ್ನು ಮನಸ್ಸಿನಿಂದ ನಿಯಂತ್ರಿಸಿ, ಫಲಾಪೇಕ್ಷಾರಹಿತನಾಗಿ, ಕರ್ಮೇಂದ್ರಿಯಗಳಿಂದ ಕರ್ಮಯೋಗವನ್ನು ಆರಂಭಿಸುತ್ತಾನೆಯೋ ಅವನು ಶ್ರೇಷ್ಠನಾಗುತ್ತಾನೆ.

ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ ।
ಶರೀರಯಾತ್ರಾऽಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ ॥೮॥

ನೀನು ನಿನ್ನ ವರ್ಣಾಶ್ರಮಗಳಿಗೆ ಉಚಿತವಾದ ನಿಯತವಾದ ಕರ್ಮವನ್ನು ಮಾಡು. ಕರ್ಮವನ್ನು ಮಾಡದಿರುವುದಕ್ಕಿಂತ ಮಾಡುವುದು ಶ್ರೇಷ್ಠವಾದುದು. ಯಾವ ಕರ್ಮವನ್ನೂ ಮಾಡದಿದ್ದರೆ ನಿನ್ನ ದೇಹ ಯಾತ್ರೆಯೇ ನಡೆಯುವುದಿಲ್ಲ.

ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ।
ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ ॥೯॥

ವಿಷ್ಣುಪ್ರೀತ್ಯರ್ಥವಾದ ಕರ್ಮವನ್ನು ಬಿಟ್ಟು ಬೇರೆ ಕರ್ಮವನ್ನು ಮಾಡಿದರೆ ಈ ಲೋಕವು ಆ ಕರ್ಮದಿಂದ ಬಂಧನಕ್ಕೆ ಒಳಗಾಗುತ್ತದೆ. ಎಲೈ ಕೌಂತೇಯನೇ, ಆದ್ದರಿಂದ ಭಗವತ್ಪೂಜಾರ್ಥವಾಗಿ ಫಲಾಪೇಕ್ಷಾರಹಿತನಾಗಿ ಕರ್ಮವನ್ನು ಮಾಡು.

ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।
ಅನೇನ ಪ್ರಸವಿಷ್ಯಧ್ವಮೇಷ ವೋಽಸ್ತ್ವಿಷ್ಟಕಾಮಧುಕ್ ॥೧೦॥

ಹಿಂದೆ ಪ್ರಜಾಪತಿಯು ಯಜ್ಞದ ಜೊತೆಯಲ್ಲಿ ಬ್ರಾಹ್ಮಣಾದಿ ಪ್ರಜೆಗಳನ್ನು ಸೃಷ್ಟಿಸಿ ಹೀಗೆ ಮಾತನಾಡಿದನು. ಯಜ್ಞದಿಂದ ನಿಮಗೆ ಇಷ್ಟವಾದ ಫಲಗಳನ್ನು ಪಡೆಯಿರಿ. ಈ ಯಜ್ಞವು ನಿಮಗೆ ಇಷ್ಟವಾದ ಫಲಗಳನ್ನು ಕೊಡುವುದಾಗಲಿ.

ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ ।
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ॥೧೧॥

ಈ ಯಜ್ಞದಿಂದ ನೀವು ದೇವತೆಗಳನ್ನು ಪೂಜಿಸಿ. ದೇವತೆಗಳು ಅದಕ್ಕೆ ಫಲವನ್ನು ಕೊಟ್ಟು ನಿಮ್ಮನ್ನು ಸಮ್ಮಾನಿಸುತ್ತಾರೆ. ಹೀಗೆ ಪರಸ್ಪರ ಸಮ್ಮಾನವನ್ನು ಮಾಡಿಕೊಂಡು ಶ್ರೇಷ್ಠವಾದ ಶ್ರೇಯಸ್ಸನ್ನು ಪಡೆಯಿರಿ.

ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ ।
ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ॥೧೨॥

ಯಜ್ಞಗಳಿಂದ ಪೂಜಿಸಲ್ಪಟ್ಟ ದೇವತೆಗಳು ನಿಮಗೆ ಇಷ್ಟವಾದ ಭೋಗಗಳನ್ನು ಕೊಡುವರು. ಅವರು ಕೊಟ್ಟುದುದನ್ನು ಅವರಿಗೆ ಕೊಡದೆ ಯಾವನು ಭೋಗಿಸುತ್ತಾನೆಯೋ ಅವನು ಕಳ್ಳನೇ ಸರಿ.

ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।
ಭುಂಜತೇ ತೇ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥೧೩॥

ಯಜ್ಞವನ್ನು ಮಾಡಿ ಉಳಿದುದನ್ನು ಆಹಾರವಾಗಿ ಸೇವಿಸುವ ಸಜ್ಜನರು ಎಲ್ಲ ದೋಷಗಳಿಂದಲೂ ಮುಕ್ತರಾಗುತ್ತಾರೆ. ಯಾರು ತಮ್ಮ ಸಲುವಾಗಿಯೇ ಅಡುಗೆಯನ್ನು ಮಾಡುತ್ತಾರೆಯೋ ಅಂತಹ ಪಾಪಿಗಳು ಪಾಪವನ್ನೇ ಭೋಗಿಸುತ್ತಾರೆ.

ಅನ್ನಾದ್ ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ ।
ಯಜ್ಞಾದ್ ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥೧೪॥

ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಮ್ ।
ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್ ॥೧೫॥

ಅನ್ನದಿಂದ ರೇತಸ್ಸಿನ ದ್ವಾರಾ ಪ್ರಾಣಿಗಳ ಉತ್ಪತ್ತಿಯಾಗುತ್ತದೆ. ಪರ್ಜನ್ಯನೆಸುವ ಆದಿತ್ಯನಿಂದ ವೃಷ್ಟಿಯ ಮೂಲಕವಾಗಿ ಅನ್ನದ ಉತ್ಪತ್ತಿಯಾಗುತ್ತದೆ. ಮೇಘಚಕ್ರಾಭಿಮಾನಿಯಾದ ಪರ್ಜನ್ಯನಾಮಕ ಆದಿತ್ಯನು ಯಜ್ಞದಿಂದ ಉಪಚಯವನ್ನು ಹೊಂದುತ್ತಾನೆ. ಇಲ್ಲಿ ಯಜ್ಞ ಎಂದರೆ ಅಜ್ಯಾದಿ ರೂಪವಾದ ಹವಿಸ್ಸು ಎಂದರೆ ಹವಿರ್ಭಾಗದಿಂದ ಸಂತುಷ್ಟನಾದ ಆದಿತ್ಯನಿಂದ ಉಂಟಾದ ಮೋಡದಿಂದ ಮಳೆಯು ಉಂಟಾಗುತ್ತದೆ ಎಂದು ಅಭಿಪ್ರಾಯ. ದೇವತೋದ್ದೇಶದಿಂದ ಮಾಡುವ ದ್ರವ್ಯ ತ್ಯಾಗರೂಪವಾದ ಜ್ಯೋತಿಷ್ಟೋಮಾದಿ ಕರ್ಮವು ಆ ಜ್ಯೋತಿಷ್ಟೋಮ ಯಾಗದ ಅಂಗಭೂತವಾದ ಕ್ರಿಯೆಗಳಿಂದ ಉಂಟಾಗುತ್ತದೆ. ಆ ಕರ್ಮವಾದರೂ ಪರಬ್ರಹ್ಮನಿಂದ ಉಂಟಾಗುತ್ತದೆ ಎಂದು ತಿಳಿ. ಪರಬ್ರಹ್ಮನಾದರೂ ಅಕ್ಷರ ಸಮುದಾಯವಾದ ವೇದಗಳಿಂದ ಪ್ರತಿಪಾದ್ಯನಾಗಿ ಅಭಿವ್ಯಕ್ತನಾಗುತ್ತಾನೆ. ಹೀಗೆ ತನ್ನನ್ನು ಪ್ರತಿಪಾದನೆ ಮಾಡುವ ವೇದಗಳಿಂದ ಯಜ್ಞವು ವಿಹಿತವಾದುದರಿಂದ ಪರಂಪರೆಯಿಂದ ಯಜ್ಞದಿಂದ ಅಭಿವ್ಯಂಗ್ಯನಾದ ಕಾರಣದಿಂದ ಬ್ರಹ್ಮನು ಯಜ್ಞದಲ್ಲಿ ಪ್ರತಿಷ್ಠಿತನಾಗಿದ್ದಾನೆ.

ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ ।
ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ ॥೧೬॥

ಎಲೈ ಪಾರ್ಥನೇ, ಹೀಗೆ ಅನಾದಿಕಾಲದಿಂದ ತಿರುಗುತ್ತಿರುವ ಈ ಪುಣ್ಯಚಕ್ರವನ್ನು ಯಾವನು ಅನುಸರಿಸುವುದಿಲ್ಲವೋ ಅವನು ಇಂದ್ರಿಯಲೋಲುಪನಾಗಿ ಪಾಪವನ್ನೇ ಸಂಪಾದಿಸುವ ಆಯುಸ್ಸನ್ನು ಹೊಂದಿ ವ್ಯರ್ಥವಾಗಿ ಜೀವನವನ್ನು ಮಾಡುತ್ತಾನೆ.

ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ ।
ಆತ್ಮನ್ಯೇವ ಚ ಸಂತುಷ್ಟಸ್ಯ ಕಾರ್ಯಂ ನ ವಿದ್ಯತೇ ॥೧೭॥

ಯಾವ ಮಾನವನು ಪರಮಾತ್ಮನಲ್ಲಿಯೇ ರತಿಯನ್ನು ಹೊಂದಿರುತ್ತಾನೆಯೋ, ಪರಮಾತ್ಮನ ಧ್ಯಾನದಿಂದ ಬೇರೆ ವಿಷಯಗಳಲ್ಲಿ ಅಲಂಬುದ್ಧಿಯನ್ನು ಹೊಂದಿರುತ್ತಾನೆಯೋ, ಪರಮಾತ್ಮನ ದರ್ಶನದಿಂದಲೇ ಸಂತೋಷವನ್ನು ಪಡೆದಿರುತ್ತಾನೆಯೋ, ಎಂದರೆ ಅಸಂಪ್ರಜ್ಞಾತ ಸಮಾಧಿಯಲ್ಲಿ ಇರುತ್ತಾನೆಯೋ, ಅಂತಹವನು ಮಾಡಬೇಕಾದ ಬಾಹ್ಯಕಾರ್ಯವು ಇರುವುದಿಲ್ಲ.

ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ ।
ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ ॥೧೮॥

ಅಸಂಪ್ರಜ್ಞಾತ ಸಮಾಧಿಸ್ಥನಾದವನು ಅಂತಹ ಸಮಾಧಿಯನ್ನು ಬಿಟ್ಟುಮಾಡಿದ ಯಜ್ಞಾದಿ ಕರ್ಮಗಳಿಂದ ಅವನಿಗೆ ಯಾವ ಪ್ರಯೋಜನವೂ ಇಲ್ಲ. ಸಮಾಧ್ಯವಸ್ಥೆಯಲ್ಲಿ ಅವನು ಮಾಡದಿರುವ ನಿತ್ಯಕರ್ಮಗಳಿಂದ ಯಾವ ಪ್ರತ್ಯವಾಯವೂ ಇಲ್ಲ. ಅವನು ಸರ್ವಪ್ರಾಣಿಗಳ ವಿಷಯದಲ್ಲಿ ದರ್ಶನ-ಸಂಭಾಷಣ-ಪೂಜನಾದಿಗಳನ್ನು ಮಾಡಿ ಅದರಿಂದ ಆಗಬೇಕಾದುದೂ ಯಾವುದೂ ಇಲ್ಲ. ಗುರುವಂದನಾದಿ ವ್ಯಾಪಾರಗಳು ಪುರುಷಾರ್ಥಸಾಧನವಾದರೂ ಸಮಾಧಿಸ್ಥನಾದವನಿಗೆ ಅಂತಹ ಕರ್ಮಗಳು ಇರುವುದಿಲ್ಲ ಎಂದು ಅಭಿಪ್ರಾಯ. ಸಮಾಧಿಯ ಅವಸ್ಥೆಯನ್ನು ಬಿಟ್ಟುಬೇರೆ ಕಾಲದಲ್ಲಿ ಅಂತಹ ಕರ್ಮಗಳನ್ನು ಮಾಡದಿದ್ದರೆ ಅನರ್ಥವು ಇದ್ದೇ ಇದೆ ಎಂದೂ ಅಭಿಪ್ರಾಯ.

ಕರ್ಮಣ್ಯೇವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ।
ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥೧೯॥

ಜನಕಾದಿಗಳು ಕರ್ಮಯೋಗದಿಂದಲೇ ಒಳ್ಳೆಯ ಸಿದ್ಧಿಯನ್ನು ಪಡೆದರಷ್ಟೆ! ಲೋಕಶಿಕ್ಷಣಕ್ಕಾಗಿಯಾದರೂ ನೀನು ಜ್ಞಾನಪೂರ್ವಕವಾಗಿ ಕರ್ಮವನ್ನು ಮಾಡಬೇಕು.

ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ ।
ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ ॥೨೦॥

ಆದ್ದರಿಂದ ಫಲಾಪೇಕ್ಷಾರಹಿತನಾಗಿ ಕರ್ತವ್ಯವಾದ ಕರ್ಮವನ್ನು ಸತತವಾಗಿ ಮಾಡು. ಫಲಾಪೇಕ್ಷೆಯಿಲ್ಲದೆ ಕರ್ಮವನ್ನು ಮಾಡುವ ಪುರುಷನು ಪರಮಾತ್ಮನನ್ನು ಹೊಂದುತ್ತಾನೆ.

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ।
ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥೨೧॥

ಶ್ರೇಷ್ಠ ಪುರುಷನು ಏನೇನು ಮಾಡುತ್ತಾನೆಯೋ, ಇತರ ಜನರು ಅದನ್ನೇ ಮಾಡುತ್ತಾರೆ. ಅವನು ಯಾವುದನ್ನು ಪ್ರಾಮಾಣಿಕವೆಂದು ಹೇಳುತ್ತಾನೆಯೋ ಲೋಕವು ಅದನ್ನು ಅನುಸರಿಸುತ್ತದೆ.

ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥೨೨॥

ಎಲೈ ಪಾರ್ಥನೇ, ಮೂರುಲೋಕಗಳಲ್ಲಿಯೂ ನನಗೆ ಯಾವ ಕರ್ತವ್ಯವಾದ ಕರ್ಮವೂ ಇಲ್ಲ. ಇದುವರೆಗೆ ಹೊಂದದಿರುವ ಯಾವುದನ್ನೂ ನಾನು ಪ್ರಯೋಜನವ ಹೊಂದಬೇಕಾಗಿಲ್ಲ. ಆದ್ದರಿಂದ ಕರ್ತವ್ಯಕರ್ಮವೂ ಇಲ್ಲ. ಆದರೂ ನಾನು ಕರ್ಮವನ್ನು ಮಾಡುತ್ತಲೇ ಇರುತ್ತೇನೆ.

ಯದಿ ಹ್ಯಹಂ ನ ವರ್ತೇಯಂ ಜಾತು ಕರ್ಮಣ್ಯತಂದ್ರಿತಃ ।
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥೨೩॥

ಒಂದು ಪಕ್ಷ ನಾನು ಆಲಸ್ಯವನ್ನು ತೊರೆದು ಕರ್ಮವನ್ನು ಮಾಡದಿದ್ದರೆ ಎಲೈ ಪಾರ್ಥನೇ, ಎಲ್ಲ ಮನುಷ್ಯರೂ ನನ್ನ ಮಾರ್ಗವನ್ನೇ ಅನುಸರಿಸುತ್ತಾರೆ.

ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮ ಚೇದಹಮ್ ।
ಸಂಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ ॥೨೪॥

. ನಾನು ಕರ್ಮವನ್ನು ಮಾಡದಿದ್ದರೆ ಅದರಿಂದ ನಾನು ಈ ಲೋಕಗಳನ್ನು ನಾಶ ಮಾಡಿಯೇನು! ಜಾತಿಸಂಕರಕ್ಕೆ ಕಾರಣನಾದೇನು! ಈ ಪ್ರಜೆಗಳನ್ನು ವಿನಾಶಗೊಳಿಸಿಯೇನು!

ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವಂತಿ ಭಾರತ ।
ಕುರ್ಯಾದ್ ವಿದ್ವಾಂಸ್ತಥಾऽಸಕ್ತಶ್ಚಿಕೀರ್ಷುರ್ಲೋಕಸಂಗ್ರಹಮ್ ॥೨೫॥

ಎಲೈ ಪಾರ್ಥನೇ, ಅಜ್ಞಾನಿಗಳು ಹೀಗೆ ಫಲದಲ್ಲಿ ಆಸಕ್ತರಾಗಿ ಕರ್ಮವನ್ನು ಮಾಡುತ್ತಾರೆಯೋ, ಜ್ಞಾನಿಯಾದವನು ಲೋಕಸಂಗ್ರಹವನ್ನು ಮಾಡುವುದಕ್ಕಾಗಿ ಕರ್ಮಫಲಾಪೇಕ್ಷಾರಹಿತನಾಗಿ ಹಾಗೆಯೇ ಕರ್ಮವನ್ನು ಆಚರಿಸಬೇಕು.

ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್ ।
ಜೋಷಯೇತ್ ಸರ್ವಕರ್ಮಾಣಿ ವಿದ್ವಾನ್ ಯುಕ್ತಃ ಸಮಾಚರನ್ ॥

ಕರ್ಮದಲ್ಲೇ ಆಸಕ್ತಿಯುಳ್ಳ ಅಜ್ಞಜನರಿಗೆ ಜ್ಞಾನಿಯಾದವನು ಕರ್ಮದಿಂದ ವಿಮುಖರಾಗುವಂತೆ (ಜ್ಞಾನವನ್ನು ಹೊಗಳಿ) ಬುದ್ಧಿಭೇದವನ್ನು ಉಂಟು ಮಾಡಬಾರದು. ಜ್ಞಾನಿಯಾದವನು ಭಗವಚ್ಚಿಂತನಾಯುಕ್ತನಾಗಿ ಕರ್ಮವನ್ನು ಆಚರಿಸಿ ಅಜ್ಞಾನಿಗಳಿಗೂ ಎಲ್ಲ ಕರ್ಮಗಳಲ್ಲಿಯೂ ಪ್ರೀತಿಯುಂಟಾಗುವಂತೆ ಮಾಡಬೇಕು.

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।
ಅಹಂಕಾರವಿಮೂಢಾತ್ಮಾ ಕರ್ತಾऽಹಮಿತಿ ಮನ್ಯತೇ ॥೨೭॥

ಪ್ರಕೃತಿಯ ಗುಣಗಳಾದ ಸತ್ವ-ರಜಸ್-ತಮಸ್ಸುಗಳಿಂದ ಮಾಡಲ್ಪಡುವ ಎಲ್ಲ ಕರ್ಮಗಳನ್ನೂ ಅಹಂಕಾರಿಯಾದ ಮೂಢಾತ್ಮನು (ಅಜ್ಞಾನಿಯು) ನಾನು ಮಾಡುತ್ತೇನೆಂದು ತಿಳಿದಿರುತ್ತಾನೆ.

ತತ್ತ್ವವಿತ್ ತು ಮಹಾಬಾಹೋ ಗುಣಕರ್ಮವಿಭಾಗಯೋಃ ।
ಗುಣಾ ಗುಣೇಷು ವರ್ತಂತ ಇತಿ ಮತ್ವಾ ನ ಸಜ್ಜತೇ ॥೨೮॥

ಎಲೈ ಮಹಾಬಾಹುವೇ, ಗುಣಕರ್ಮಗಳ ವಿಭಾಗವನ್ನು ತಿಳಿದ ತತ್ತ್ವಜ್ಞಾನಿಯಾದರೂ ಪ್ರಕೃತಿಯ ಗುಣಗಳಾದ ಸತ್ವ-ರಜಸ್-ತಮೋಗುಣಗಳು ತಮ್ಮ

ಕಾರ್ಯವಾದ ಸಾತ್ವಿಕ-ರಾಜಸ-ತಾಮಸ ಕಾರ್ಯಗಳಲ್ಲಿ ತೊಡಗಿವೆ ಎಂದು ತಿಳಿದು ಅವುಗಳಲ್ಲಿ ಆಸಕ್ತನಾಗುವುದಿಲ್ಲ.

ಪ್ರಕೃತೇರ್ಗುಣಸಮ್ಮೂಢಾಃ ಸಜ್ಜಂತೇ ಗುಣಕರ್ಮಸು ।
ತಾನಕೃತ್ಸ್ನವಿದೋ ಮಂದಾನ್ ಕೃತ್ಸ್ನವಿನ್ನ ವಿಚಾಲಯೇತ್ ॥೨೯॥

ಪ್ರಕೃತಿನಾಮಕ ಪರಮಾತ್ಮನ ಇಚ್ಛೆಯಿಂದ ಮತ್ತು ಜಡಪ್ರಕೃತಿಯ ಸತ್ವಾದಿ ಗುಣಗಳಿಂದ ಮೋಹಕ್ಕೆ ಒಳಗಾದ ಅಜ್ಞಾನಿಗಳು ಪ್ರಕೃತಿಯ ಶಬ್ದಾದಿ ಗುಣಗಳಲ್ಲಿ ಮತ್ತು ಅವುಗಳನ್ನು ಸಂಪಾದಿಸುವ ಕರ್ಮಗಳಲ್ಲಿ ಆಸಕ್ತರಾಗುತ್ತಾರೆ. ಗುಣಕರ್ಮಗಳ ವಿಭಾಗವನ್ನು ತಿಳಿಯದಿರುವ ಆ ಮಂದರನ್ನು ಗುಣಕರ್ಮಗಳ ವಿಭಾಗವನ್ನು ತಿಳಿದ ಜ್ಞಾನಿಯು ಅವರನ್ನು ಕರ್ಮ ಮಾರ್ಗದಿಂದ ಚಲಿಸುವಂತೆ ಮಾಡಬಾರದು. ಅವರಿಗೆ ಬೋಧನೆಯನ್ನು ಮಾಡಬೇಕು ಎಂದು ಅಭಿಪ್ರಾಯ.

ಮಯಿ ಸರ್ವಾಣಿ ಕರ್ಮಾಣಿ ಸನ್ನ್ಯಸ್ಯಾಧ್ಯಾತ್ಮಚೇತಸಾ ।
ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥೩೦॥

ಶರೀರದಲ್ಲಿ ನಾನು ಇದ್ದೇನೆಂದು ತಿಳಿದು ನನ್ನ ಸ್ಮರಣೆ ಪೂರ್ವಕವಾಗಿ ಎಲ್ಲ ಕರ್ಮಗಳ ಫಲವನ್ನು ನನ್ನಲ್ಲಿ ಸಮರ್ಪಿಸಿ ಕರ್ಮದ ಫಲವನ್ನು ಆಶ್ರಯಿಸದೇ, ಮಮಕಾರವನ್ನು ಬಿಟ್ಟು, ಯಾವ ಸಂತಾಪವೂ ಇಲ್ಲದೇ ಯುದ್ಧವನ್ನು ಮಾಡು.

ಯೇ ಮೇ ಮತಮಿದಂ ನಿತ್ಯಮನುತಿಷ್ಠಂತಿ ಮಾನವಾಃ ।
ಶ್ರದ್ಧಾವಂತೋಽನಸೂಯಂತೋ ಮುಚ್ಯಂತೇ ತೇಽಪಿ ಕರ್ಮಭಿಃ ॥

ಯಾವ ಮಾನವರು ಈ ನನ್ನ ಅಭಿಪ್ರಾಯವನ್ನು ತಿಳಿದು ಅದರಂತೆ ನಿತ್ಯವೂ ಅನುಷ್ಠಾನವನ್ನು ಮಾಡುತ್ತಾರೆಯೋ, ಅಂತಹ ಶ್ರದ್ಧೆಯುಳ್ಳ, ಅಸೂಯಾ ರಹಿತರಾದ ಅವರು ಎಲ್ಲ ಕರ್ಮಗಳಿಂದಲೂ ನಿರ್ಮುಕ್ತರಾಗುತ್ತಾರೆ.

ಯೇ ತ್ವೇತದಭ್ಯಸೂಯಂತೋ ನಾನುತಿಷ್ಠಂತಿ ಮೇ ಮತಮ್ ।
ಸರ್ವಜ್ಞಾನವಿಮೂಢಾಂಸ್ತಾನ್ ವಿದ್ಧಿ ನಷ್ಟಾನಚೇತಸಃ ॥೩೨॥

ಯಾರು ನನ್ನ ಈ ಉಪದೇಶದಲ್ಲಿ ಅಸೂಯೆಯನ್ನು ಪಟ್ಟು ನನ್ನ ಅಭಿಪ್ರಾಯದಂತೆ ನಡೆದುಕೊಳ್ಳುವುದಿಲ್ಲವೋ ಅವರು ಸರ್ವಜ್ಞಾನರಹಿತರಾಗಿ ವಿವೇಕವಿಲ್ಲದೇ ನಷ್ಟರಾಗುತ್ತಾರೆಂದು ತಿಳಿ.

ಸದೃಶಂ ಚೇಷ್ಟತೇ ಯಸ್ಯಾಃ ಪ್ರಕೃತೇರ್ಜ್ಞಾನವಾನಪಿ ।
ಪ್ರಕೃತಿಂ ಯಾಂತಿ ಭೂತಾನಿ ನಿಗ್ರಹಃ ಕಿಂ ಕರಿಷ್ಯತಿ ॥೩೫॥

ನಿನ್ನ ಮತವನ್ನು ಅನುಷ್ಠಾನ ಮಾಡಿದರೆ ಮೋಕ್ಷ ಇಲ್ಲದಿದ್ದರೆ ನಾಶ ಉಂಟಾಗುವುದಾದರೆ ಲೋಕವು ನಿನ್ನ ಮತವನ್ನು ಏಕೆ ಅನುಸರಿಸುವುದಿಲ್ಲ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವನ್ನು ಹೇಳುತ್ತಾರೆ. ಪ್ರಕೃತಿ ಶಬ್ದಕ್ಕೆ ಪೂರ್ವಸಂಸ್ಕಾರ ಎಂದು ಅರ್ಥ. ಇಲ್ಲಿ ಅದರ ಕಾರ್ಯವಾದ ರಾಗ-ದ್ವೇಷಗಳನ್ನು ತೆಗೆದುಕೊಳ್ಳಬೇಕು. ನನ್ನ ಮತದ ಅನುಷ್ಠಾನ, ಅನುಷ್ಠಾನಗಳಿಂದ ಇಷ್ಟಾನಿಷ್ಟ ಪ್ರಾಪ್ತಿಯನ್ನು ತಿಳಿದವನೂ ಸಹ ತನ್ನ ಪೂರ್ವಸಂಸ್ಕಾರ ಕಾರ್ಯವಾದ ರಾಗ-ದ್ವೇಷಗಳಿಗೆ ಅನುಗುಣವಾಗಿಯೇ ಕರ್ಮವನ್ನು ಮಾಡುತ್ತಾನೆ. ಇನ್ನು ಅಜ್ಞನ ವಿಷಯದಲ್ಲಿ ಹೇಳುವುದೇನು? ಮನೋನಿಗ್ರಹವನ್ನು ಮಾಡಿದೆ ಸ್ವಭಾವಾನುಗುಣವಾದ ಕರ್ಮದ ಉಪರತಿಯಾಗುವುದು ಎಂಬ ಶಂಕೆಗೆ ಉತ್ತರಾರ್ಧದಿಂದ ಉತ್ತರವನ್ನು ಹೇಳುತ್ತಾರೆ. ಜೀವರು ಸ್ವಭಾವಕ್ಕೆ ಅನುಗುಣವಾಗಿಯೇ ಕರ್ಮಗಳನ್ನು ಮಾಡುತ್ತಾರೆ. ಮನೋನಿಗ್ರಹವು ಅಪ್ರಯೋಜಕವಾದುದು ಎಂದು ಅಭಿಪ್ರಾಯ.

ಅಥವಾ ಏಕೆ ಅಯೋಗ್ಯರಿಗೆ ತತ್ತ್ವೋಪದೇಶವನ್ನು ಮಾಡಬಾರದು ಎಂದು ಇಲ್ಲಿ ಹೇಳುತ್ತಾರೆ. ತತ್ತ್ವೋಪದೇಶದಿಂದ ಜ್ಞಾನವುಂಟಾದರೂ ಅಯೋಗ್ಯರು ಸ್ವಭಾವಕ್ಕೆ ಅನುಗುಣವಾದ ಕರ್ಮವನ್ನೇ ಮಾಡುತ್ತಾರೆ. ಉತ್ಪನ್ನವಾದ ತತ್ತ್ವಜ್ಞಾನಕ್ಕೆ ಅನುಗುಣವಾದ ಕರ್ಮವನ್ನು ಮಾಡುವುದಿಲ್ಲ. ಆದ್ದರಿಂದ ಅವರಿಗೆ ಉಪದೇಶ ಮಾಡಬಾರದು ಎಂದು ಅರ್ಥ.

[illegible]ಇಂದ್ರಿಯಸ್ಯೇಂದ್ರಿಯಾರ್ಥೇಷು ರಾಗದ್ವೇಷೌ ವ್ಯವಸ್ಥಿತೌ ।
[illegible]ಶಮಾಗಚ್ಛೇತ್ ತೌ ಹ್ಯಸ್ಯ ಪರಿಪಂಥಿನೌ ॥೩೪॥

ಎಲ್ಲಾ ಜೀವರೂ ಸ್ವಭಾವಕ್ಕೆ ಅನುಗುಣವಾಗಿಯೇ ಕರ್ಮವನ್ನು ಮಾಡುವುದಾದರೆ 'ಮಯಿ ಸರ್ವಾಣಿ ಕರ್ಮಾಣಿ' ಎಂದು ಪ್ರಕಾರ ಪೂರ್ವಕವಾದ ಕರ್ಮವಿಧಾನವೂ 'ಯೇ ಮೇ ಮತಂ' ಎಂದು ಫಲವಿಧಾನವೂ ವ್ಯರ್ಥ ಎಂಬ ಶಂಕೆಗೆ ಇಲ್ಲಿ ಉತ್ತರವನ್ನು ಹೇಳುತ್ತಾರೆ. ಇಲ್ಲಿ ರಾಗದ್ವೇಷಪದಗಳಿಂದ ಲೋಭ ಮೋಹ ಮದ ಮತ್ಸರಗಳನ್ನೂ ತೆಗೆದುಕೊಳ್ಳಬೇಕು. ಪ್ರಧಾನವಾದುದರಿಂದ ಎರಡನ್ನೇ ಹೇಳಿದ್ದಾರೆ. ಅನುಕೂಲದಲ್ಲಿ ರಾಗ. ಪ್ರತಿಕೂಲದಲ್ಲಿ ದ್ವೇಷ. ಇವುಗಳಿಗೆ ಅನುಗುಣವಾಗಿಯೇ ಜೀವರ ಕರ್ಮಗಳು. ಆದರೂ ರಾಗ-ದ್ವೇಷಾದಿ ಷಡ್ವರ್ಗಗಳಿಗೆ ವಶವಾಗಬಾರದು. ಏಕೆಂದರೆ ಅವು ಜೀವನ ಶ್ರೇಯಸ್ಸಿಗೆ ಪ್ರತಿಬಂಧಕ ಮತ್ತು ಪಾಪಹೇತುಗಳು ಎಂದು ಅರ್ಥ. ಮನೋನಿಗ್ರಹದಿಂದ ತಕ್ಷಣದಲ್ಲಿ ಫಲವು ದೊರೆಯದಿದ್ದರೂ ಅತಿ ಪ್ರಯತ್ನವನ್ನು ಮಾಡಿದರೆ ಫಲವು ಖಂಡಿತವಾಗಿ ದೊರೆಯುತ್ತದೆ ಎಂದು ಅಭಿಪ್ರಾಯ.

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥೩೫॥

ರಾಗ-ದ್ವೇಷೋಪೇತವಾದ ಘೋರವಾದ ಯುದ್ಧರೂಪವಾದ ಕರ್ಮವನ್ನು ಮಾಡಲೇಬಾರದು ಎಂಬ ಅರ್ಜುನನ ಶಂಕೆಗೆ ಇಲ್ಲಿ ಉತ್ತರವನ್ನು ಹೇಳುತ್ತಾರೆ. ಸರ್ವಾಂಗ ಸಹಿತವಾಗಿ ಅನುಷ್ಠಾನ ಮಾಡಿದ ಅನ್ಯವರ್ಣಾಶ್ರಮ ಧರ್ಮಗಳಿಗಿಂತ ಅಂಗಹೀನವಾಗಿ ಮಾಡಿದ ಸ್ವವರ್ಣಾಶ್ರಮೋಚಿತ ಧರ್ಮವು ಪ್ರಶಸ್ತವಾದುದು. ಏಕೆಂದರೆ ಸ್ವಧರ್ಮವಾದ ಯುದ್ಧದಲ್ಲಿ ಮರಣವೂ ಶ್ರೇಯಸ್ಕರವಾದುದು ಪರಧರ್ಮವು ನಿಷಿದ್ಧವಾದುದರಿಂದ ಅನರ್ಥಕಾರಿ ಎಂದು ಭಾವ.

ಅರ್ಜುನಃ

ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ ।
ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ ॥೩೬॥

ಅರ್ಜುನ–ಪಾಪಹೇತುವಾದ ಅರಿಷಡ್ವರ್ಗದಲ್ಲಿ ಮಹಾಪ್ರಯತ್ನದಿಂದ ಜಯಿಸಬೇಕಾದ ಪ್ರಬಲವಾದುದನ್ನು ಇಲ್ಲಿ ಅರ್ಜುನನು ಕೇಳುತ್ತಾನೆ. ಜೀವನು ಪಾಪಕರ್ಮವನ್ನು ಮಾಡಲು ಬಯಸದಿದ್ದರೂ ಬಲತ್ಕಾರ ಮಾಡಲ್ಪಟ್ಟವನಂತೆ ಪಾಪವನ್ನು ಮಾಡುತ್ತಾರೆ. ಪಾಪಕರ್ಮ ಪ್ರಚೋದಕವಾದ ಕಾಮಾದಿ ಷಡ್ವರ್ಗದಲ್ಲಿ ಯಾವುದು ಪ್ರಬಲವಾದುದು ಎಂದು ಅರ್ಜುನನ ಪ್ರಶ್ನೆಯ ಅಭಿಪ್ರಾಯ.

ಯಾರು ನನ್ನ ಈ ಉಪದೇಶದಲ್ಲಿ ಅಸೂಯೆಯನ್ನು ಪಟ್ಟು ನನ್ನ ಅಭಿಪ್ರಾಯದಂತೆ ನಡೆದುಕೊಳ್ಳುವುದಿಲ್ಲವೋ ಅವರು ಸರ್ವಜ್ಞಾನರಹಿತರಾಗಿ ವಿವೇಕವಿಲ್ಲದೇ ನಷ್ಟರಾಗುತ್ತಾರೆಂದು ತಿಳಿ.

ಸದೃಶಂ ಚೇಷ್ಟತೇ ಯಸ್ಮಾಃ ಪ್ರಕೃತೇರ್ಜ್ಞಾನವಾನಪಿ ।
ಪ್ರಕೃತಿಂ ಯಾಂತಿ ಭೂತಾನಿ ನಿಗ್ರಹಃ ಕಿಂ ಕರಿಷ್ಯತಿ ॥೩೩॥

ನಿನ್ನ ಮತವನ್ನು ಅನುಷ್ಠಾನ ಮಾಡಿದರೆ ಮೋಕ್ಷ ಇಲ್ಲದಿದ್ದರೆ ನಾಶ ಉಂಟಾಗುವುದಾದರೆ ಲೋಕವು ನಿನ್ನ ಮತವನ್ನು ಏಕೆ ಅನುಸರಿಸುವುದಿಲ್ಲ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವನ್ನು ಹೇಳುತ್ತಾರೆ. ಪ್ರಕೃತಿ ಶಬ್ದಕ್ಕೆ ಪೂರ್ವಸಂಸ್ಕಾರ ಎಂದು ಅರ್ಥ. ಇಲ್ಲಿ ಅದರ ಕಾರ್ಯವಾದ ರಾಗ-ದ್ವೇಷಗಳನ್ನು ತೆಗೆದುಕೊಳ್ಳಬೇಕು. ನನ್ನ ಮತದ ಅನುಷ್ಠಾನ, ಅನುಷ್ಠಾನಗಳಿಂದ ಇಷ್ಟಾನಿಷ್ಟ ಪ್ರಾಪ್ತಿಯನ್ನು ತಿಳಿದವನೂ ಸಹ ತನ್ನ ಪೂರ್ವಸಂಸ್ಕಾರ ಕಾರ್ಯವಾದ ರಾಗ-ದ್ವೇಷಗಳಿಗೆ ಅನುಗುಣವಾಗಿಯೇ ಕರ್ಮವನ್ನು ಮಾಡುತ್ತಾನೆ. ಇನ್ನು ಅಜ್ಞನ ವಿಷಯದಲ್ಲಿ ಹೇಳುವುದೇನು? ಮನೋನಿಗ್ರಹವನ್ನು ಮಾಡಿದೆ ಸ್ವಭಾವಾನುಗುಣವಾದ ಕರ್ಮದ ಉಪರತಿಯಾಗುವುದು ಎಂಬ ಶಂಕೆಗೆ ಉತ್ತರಾರ್ಧದಿಂದ ಉತ್ತರವನ್ನು ಹೇಳುತ್ತಾರೆ. ಜೀವರು ಸ್ವಭಾವಕ್ಕೆ ಅನುಗುಣವಾಗಿಯೇ ಕರ್ಮಗಳನ್ನು ಮಾಡುತ್ತಾರೆ. ಮನೋನಿಗ್ರಹವು ಅಪ್ರಯೋಜಕವಾದುದು ಎಂದು ಅಭಿಪ್ರಾಯ.

ಅಥವಾ ಏಕೆ ಅಯೋಗ್ಯರಿಗೆ ತತ್ತ್ವೋಪದೇಶವನ್ನು ಮಾಡಬಾರದು ಎಂದು ಇಲ್ಲಿ ಹೇಳುತ್ತಾರೆ. ತತ್ತ್ವೋಪದೇಶದಿಂದ ಜ್ಞಾನವುಂಟಾದರೂ ಅಯೋಗ್ಯರು ಸ್ವಭಾವಕ್ಕೆ ಅನುಗುಣವಾದ ಕರ್ಮವನ್ನೇ ಮಾಡುತ್ತಾರೆ. ಉತ್ಪನ್ನವಾದ ತತ್ತ್ವ ಜ್ಞಾನಕ್ಕೆ ಅನುಗುಣವಾದ ಕರ್ಮವನ್ನು ಮಾಡುವುದಿಲ್ಲ. ಆದ್ದರಿಂದ ಅವರಿಗೆ ಉಪದೇಶ ಮಾಡಬಾರದು ಎಂದು ಅರ್ಥ.

ಇಂದ್ರಿಯಸ್ಯೇಂದ್ರಿಯಾರ್ಥೇಷು ರಾಗದ್ವೇಷೌ ವ್ಯವಸ್ಥಿತೌ ।
ತಯೋರ್ನ ವಶಮಾಗಚ್ಛೇತ್ ತೌ ಹ್ಯಸ್ಯ ಪರಿಪಂಥಿನೌ ॥೩೪॥

ಎಲ್ಲಾ ಜೀವರೂ ಸ್ವಭಾವಕ್ಕೆ ಅನುಗುಣವಾಗಿಯೇ ಕರ್ಮವನ್ನು ಮಾಡುವುದಾದರೆ 'ಮಯಿ ಸರ್ವಾಣಿ ಕರ್ಮಾಣಿ' ಎಂದು ಪ್ರಕಾರ ಪೂರ್ವಕವಾದ ಕರ್ಮವಿಧಾನವೂ 'ಯೇ ಮೇ ಮತಂ' ಎಂದು ಫಲವಿಧಾನವೂ ವ್ಯರ್ಥ ಎಂಬ ಶಂಕೆಗೆ ಇಲ್ಲಿ ಉತ್ತರವನ್ನು ಹೇಳುತ್ತಾರೆ. ಇಲ್ಲಿ ರಾಗದ್ವೇಷಪದಗಳಿಂದ ಲೋಭ ಮೋಹ ಮದ ಮತ್ಸರಗಳನ್ನೂ ತೆಗೆದುಕೊಳ್ಳಬೇಕು. ಪ್ರಧಾನವಾದುದರಿಂದ ಎರಡನ್ನೇ ಹೇಳಿದ್ದಾರೆ. ಅನುಕೂಲದಲ್ಲಿ ರಾಗ. ಪ್ರತಿಕೂಲದಲ್ಲಿ ದ್ವೇಷ. ಇವುಗಳಿಗೆ ಅನುಗುಣವಾಗಿಯೇ ಜೀವರ ಕರ್ಮಗಳು. ಆದರೂ ರಾಗ-ದ್ವೇಷಾದಿ ಷಡ್ವರ್ಗಗಳಿಗೆ ವಶವಾಗಬಾರದು. ಏಕೆಂದರೆ ಅವು ಜೀವನ ಶ್ರೇಯಸ್ಸಿಗೆ ಪ್ರತಿಬಂಧಕ ಮತ್ತು ಪಾಪಹೇತುಗಳು ಎಂದು ಅರ್ಥ. ಮನೋನಿಗ್ರಹದಿಂದ ತಕ್ಷಣದಲ್ಲಿ ಫಲವು ದೊರೆಯದಿದ್ದರೂ ಅತಿ ಪ್ರಯತ್ನವನ್ನು ಮಾಡಿದರೆ ಫಲವು ಖಂಡಿತವಾಗಿ ದೊರೆಯುತ್ತದೆ ಎಂದು ಅಭಿಪ್ರಾಯ.

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥೩೫॥

ರಾಗ-ದ್ವೇಷೋಪೇತವಾದ ಘೋರವಾದ ಯುದ್ಧರೂಪವಾದ ಕರ್ಮವನ್ನು ಮಾಡಲೇಬಾರದು ಎಂಬ ಅರ್ಜುನನ ಶಂಕೆಗೆ ಇಲ್ಲಿ ಉತ್ತರವನ್ನು ಹೇಳುತ್ತಾರೆ. ಸರ್ವಾಂಗ ಸಹಿತವಾಗಿ ಅನುಷ್ಠಾನ ಮಾಡಿದ ಅನ್ಯವರ್ಣಾಶ್ರಮ ಧರ್ಮಗಳಿಗಿಂತ ಅಂಗಹೀನವಾಗಿ ಮಾಡಿದ ಸ್ವವರ್ಣಾಶ್ರಮೋಚಿತ ಧರ್ಮವು ಪ್ರಶಸ್ತವಾದುದು. ಏಕೆಂದರೆ ಸ್ವಧರ್ಮವಾದ ಯುದ್ಧದಲ್ಲಿ ಮರಣವೂ ಶ್ರೇಯಸ್ಕರವಾದುದು ಪರಧರ್ಮವು ನಿಷಿದ್ಧವಾದುದರಿಂದ ಅನರ್ಥಕಾರಿ ಎಂದು ಭಾವ.

ಅರ್ಜುನಃ

ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ ।
ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ ॥೩೬॥

ಅರ್ಜುನ-ಪಾಪಹೇತುವಾದ ಅರಿಷಡ್ವರ್ಗದಲ್ಲಿ ಮಹಾಪ್ರಯತ್ನದಿಂದ ಜಯಿಸಬೇಕಾದ ಪ್ರಬಲವಾದುದನ್ನು ಇಲ್ಲಿ ಅರ್ಜುನನು ಕೇಳುತ್ತಾನೆ. ಜೀವನು ಪಾಪಕರ್ಮವನ್ನು ಮಾಡಲು ಬಯಸದಿದ್ದರೂ ಬಲತ್ಕಾರ ಮಾಡಲ್ಪಟ್ಟವನಂತೆ ಪಾಪವನ್ನು ಮಾಡುತ್ತಾರೆ. ಪಾಪಕರ್ಮ ಪ್ರಚೋದಕವಾದ ಕಾಮಾದಿ ಷಡ್ವರ್ಗದಲ್ಲಿ ಯಾವುದು ಪ್ರಬಲವಾದುದು ಎಂದು ಅರ್ಜುನನ ಪ್ರಶ್ನೆಯ ಅಭಿಪ್ರಾಯ.

ಶ್ರೀಭಗವಾನ್

ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಮ್ ॥೩೭॥

ಶ್ರೀಭಗವಾನ್– ಪುರುಷನನ್ನು ಪಾಪಕರ್ಮಗಳಲ್ಲಿ ಪ್ರವರ್ತಿಸುವ ಹೇತುಗಳಲ್ಲಿ ಪ್ರಬಲವಾದುದು ಯಾವುದು ಎಂಬ ಪ್ರಶ್ನೆಗೆ ಉತ್ತರವನ್ನು ಇಲ್ಲಿ ಹೇಳುತ್ತಾರೆ. ಪ್ರಬಲವಾದುದು ಕಾಮ, ಕ್ರೋಧವು ಕಾಮದಿಂದ ಜನಿಸುವುದರಿಂದ ಕಾರ್ಯಕಾರಣಗಳಿಗೆ ಅಭೇದ ದೃಷ್ಟಿಯಿಂದ ಅದನ್ನೇ ಕಾಮವೆಂದೂ ಕರೆದಿದ್ದಾನೆ. ಕಾಮ-ಕ್ರೋಧಗಳು ರಜೋಗುಣದಿಂದ ಉಂಟಾಗುತ್ತವೆ ಎಂದು ಅಭಿಪ್ರಾಯ. ಕ್ರೋಧ ಶಬ್ದದಿಂದ ಅರಿಷಡ್ವರ್ಗದಲ್ಲಿ ಉಳಿದ ನಾಲ್ಕನ್ನೂ ತೆಗೆದುಕೊಳ್ಳಬೇಕು. ಕಾಮವು ನಿವೃತ್ತವಾದರೆ ಅದರ ಕಾರ್ಯವಾದ ಉಳಿದ ಐದೂ ನಿವೃತ್ತವಾಗುತ್ತವೆ ಎಂದು ಅರ್ಥ. ಅಪೇಕ್ಷಿತವಾದ ವಿಷಯವನ್ನು ಕೊಟ್ಟು ಕಾಮವನ್ನು ಬಯಿಸಲು ಸಾಧ್ಯವಿಲ್ಲ ಏಕೆಂದರೆ ಅದು ಮಹಾಹಸಿವನ್ನು ಹೊಂದಿ ಎಷ್ಟು ತಿಂದರೂ ತೃಪ್ತಿಯನ್ನು ಹೊಂದುವುದಿಲ್ಲ ಮತ್ತು ಬ್ರಹ್ಮಹತ್ಯಾದಿ ಮಹಾಪಾಪಗಳಿಗೆ ಕಾರಣವಾಗುತ್ತದೆ. ಐಹಿಕಾಮುಷ್ಮಿಕ ಅಶುಭ ವಿಷಯಗಳಲ್ಲಿಯೇ ಪುರುಷನನ್ನು ಯಾವಾಗಲೂ ಪ್ರವರ್ತಿಸುವುದರಿಂದ ಮೋಕ್ಷವಿರೋಧಿಯಾದುದರಿಂದ ಅವನ್ನು ಜೀವರ ಶತ್ರುಗಳು ಎಂದು ತಿಳಿ ಎಂದು ಕೃಷ್ಣನ ಅಭಿಪ್ರಾಯ. ಕಾಮ ಎಂದರೆ ಇಲ್ಲಿ ಅದರ ಅಭಿಮಾನಿಯಾದ ಕಾಲನೇಮಿ ಎಂದು ಅರ್ಥ.

ಏಷ ಸೂಕ್ಷ್ಮತರಃ ಕ್ಲಪ್ತೋ ದೇಹಿನಾಮಿಂದ್ರಿಯೈಃ ಸಹ ।
ಸುಖಿತಂತ್ರ ಇವಾಸೀನೋ ಮೋಹಯನ್ ಪಾರ್ಥ ತಿಷ್ಠತಿ ॥೩೮॥

ಈ ಶ್ಲೋಕವು ಪ್ರಾಚೀನ ತುಳು ಲಿಪಿಯ ಕೋಶಗಳಲ್ಲಿ ಮಾತ್ರ ಇದೆ. ಬೇರೆ ಎಲ್ಲಿಯೂ ಇಲ್ಲ. ಈ ಕಾಮವು ಅತ್ಯಂತ ಸೂಕ್ಷ್ಮವಾಗಿದ್ದು ಪುರುಷರ ಇಂದ್ರಿಯಗಳ ಜೊತೆಯಲ್ಲಿ ಸೇರಿಕೊಂಡಿದೆ. ಎಲೈ ಅರ್ಜುನನೇ, ಸುಖಕಾರಣವೆಂದು ತೋರುತ್ತಾ ಜೀವರಿಗೆ ಭ್ರಾಂತಿಯನ್ನು ಉಂಟು ಮಾಡುತ್ತಾ ಕುಳಿತಿದೆ.

ಅರ್ಜುನಃ

ಭವತ್ಯೇಷ ಕಥಂ ಕೃಷ್ಣ ಕಥಂ ಚೈವ ವಿವರ್ಧತೇ ।
ಕಾಮಕ್ರೋಧಮಯೋ ಘೋರಃ ಸ್ತಂಭಹರ್ಷಸಮುದ್ಭವಃ ।
ಕಿಮಾತ್ಮಕಃ ಕಿಮಾಚಾರಃ ತನ್ಮಾಚಕ್ಷ್ವ ಪೃಚ್ಛತಃ ॥೩೯॥

ಅರ್ಜುನ– ಈ ಶ್ಲೋಕವು ಪ್ರಾಚೀನ ತುಳುಲಿಪಿಯ ಕೋಶಗಳಲ್ಲಿ ಮಾತ್ರ ಇದೆ. ಬೇರೆ ಎಲ್ಲಿಯೂ ಇಲ್ಲ. ಎಲೈ ಕೃಷ್ಣನೇ, ಸ್ತಬ್ಧತೆ ಮತ್ತು ಹರ್ಷಗಳನ್ನು ಉಂಟು ಮಾಡುವ ಕ್ರೋಧ ಕಾಯಾತ್ಮಕವಾದ ಘೋರವಾದ ಇದು ಹೇಗೆ ಉತ್ಪನ್ನವಾಗುತ್ತದೆ? ಇದರ ಸ್ವರೂಪವೇನು? ಕಾರ್ಯವೇನು? ಕೇಳುತ್ತಿರುವ ನನಗೆ ಉತ್ತರವನ್ನು ಹೇಳು.

ಶ್ರೀಭಗವಾನ್

ಅಹಂಕಾರೋಭಿಮಾನಾತ್ಮಾ ದುಸ್ತರಃ ಪಾಪಕರ್ಮಭಃ ।
ವರ್ಧಯತ್ಯಸ್ಯ ಹರ್ಷಂ ವೈ ಕಾಮಮಸ್ಯ ದದಾತಿ ಚ ॥೪೦॥

ಶ್ರೀಭಗವಾನ್– ಈ ಶ್ಲೋಕವೂ ಪ್ರಾಚೀನ ತುಳುಲಿಪಿಯ ಕೋಶಗಳಲ್ಲಿ ಮಾತ್ರ ಇದೆ. ಬೇರೆ ಎಲ್ಲಿಯೂ ಇಲ್ಲ. ಅಹಂಕಾರವು ಅಭಿಮಾನ ರೂಪವಾದುದು. ಎಂದರೆ ಕೆಟ್ಟದರಲ್ಲಿ ಒಳ್ಳೆಯದು ಎಂಬ ಜ್ಞಾನರೂಪವಾದುದು. ಇದನ್ನು ಪಾಪಕರ್ಮವನ್ನು ಮಾಡುವವರು ದಾಟಲಾರರು. ಈ ಅಹಂಕಾರವು ಪುರುಷನಿಗೆ ಹರ್ಷವನ್ನು ಉಂಟುಮಾಡಿ ಅವನಿಗೆ ಕಾಮವನ್ನು ತಂದುಕೊಡುತ್ತದೆ.

ಭಯಂ ಚಾಸ್ಯ ಕರೋತ್ಯೇಷ ಮೋಹಯನ್ ವೈ ಮುಹುರ್ಮುಹುಃ ।
ಸ ಏಷ ಕಲುಷಃ ಕ್ಷುದ್ರ ಚ್ಛೇದಾನ್ವೇಷೀ ಧನಂಜಯ ।
ರಜಃ ಪ್ರವೃತ್ತೋ ಮೋಹಾತ್ಮಾ ಮನುಷ್ಯಾಣಾಮುಪದ್ರವಃ ॥೪೧॥

ಇದು ಪುರುಷನಿಗೆ ಪುನಃ ಪುನಃ ಮೋಹವನ್ನು ಉಂಟುಮಾಡುತ್ತಾ ಅವನಿಗೆ ಭಯವನ್ನೂ ಉಂಟುಮಾಡುತ್ತದೆ. ಎಲೈ ಧನಂಜಯನೇ, ಇದು ದುಷ್ಟವಾದುದು, ಕ್ಷುದ್ರವಾದುದು, ಮತ್ತು ಯಾವಾಗಲು ಪುರುಷನ ದೌರ್ಬಲ್ಯವನ್ನು ಹುಡುಕುತ್ತಿರುತ್ತದೆ. ರಜೋಗುಣದಿಂದ ಉಂಟಾದ ಮೋಹರೂಪವಾದ ಈ ಅಹಂಕಾರವು ಪುರುಷನಿಗೆ ಮೋಕ್ಷಸಾಧನೆಗೆ ಪ್ರತಿಬಂಧಕವಾಗುತ್ತದೆ.

ಧೂಮೇನಾವ್ರಿಯತೇ ವಹ್ನಿರ್ಯಥಾऽऽದರ್ಶೋ ಮಲೇನ ಚ ।
ಯಥೋಲ್ಬೇನಾವೃತೋ ಗರ್ಭಸ್ತಥಾ ತೇನೇದಮಾವೃತಮ್ ॥೪೨॥

ಧೂಮದಿಂದ ಅಗ್ನಿಯು ಆವೃತನಾದಂತೆ, ಕನ್ನಡಿಯು ಕೊಳೆಯಿಂದ ಆವೃತವಾದಂತೆ, ಜಲಾಯುವಿನಿಂದ ಗರ್ಭವು ಆವೃತವಾದಂತೆ ಅಂತಹ ಅಹಂಕಾರದಿಂದ ಉತ್ತಮ ಜೀವನ ಜ್ಞಾನಸ್ವರೂಪವು ಆವೃತವಾಗಿದೆ.

ಆವೃತಂ ಜ್ಞಾನಮೇತೇನ ಜ್ಞಾನಿನೋ ನಿತ್ಯವೈರಿಣಾ ।
ಕಾಮರೂಪೇಣ ಕೌಂತೇಯ ದುಷ್ಪೂರೇಣಾನಲೇನ ಚ ॥೪೩॥

ಎಲೈ ಕೌಂತೇಯನೇ, ಜ್ಞಾನಿಗಳಿಗೆ ನಿತ್ಯವೈರಿಯಾದ ತೃಪ್ತಿಪಡಿಸಲು ಅಸಾಧ್ಯವಾದ ಈ ಕಾಮರೂಪವಾದ ಅಗ್ನಿಯಿಂದ ಉತ್ತಮ ಜೀವರ ಜ್ಞಾನವು ಆವೃತವಾಗಿದೆ.

ಇಂದ್ರಿಯಾಣಿ ಮನೋ ಬುದ್ಧಿರಸ್ಯಾಧಿಷ್ಠಾನಮುಚ್ಯತೇ ।
ಏತೈರ್ವಿಮೋಹಯತ್ಯೇಷ ಜ್ಞಾನಮಾವೃತ್ಯ ದೇಹಿನಮ್ ॥೪೪॥

ಇಂದ್ರಿಯಗಳೂ, ಮನಸ್ಸೂ, ಬುದ್ಧಿ ಇವುಗಳು ಕಾಮದ ಅಧಿಷ್ಠಾನವೆಂದು ಹೇಳಲ್ಪಡುತ್ತದೆ. ಈ ಕಾಮವು ಇವುಗಳಲ್ಲಿ ಇದ್ದು ಜ್ಞಾನವನ್ನು ಆವರಿಸಿ ಜೀವರಿಗೆ ಮೋಹವನ್ನುಂಟುಮಾಡುತ್ತದೆ.

ತಸ್ಮಾತ್ ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ ।
ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಮ್ ॥೪೫॥

ಎಲೈ ಭರತರ್ಷಭನೇ, ಆದ್ದರಿಂದ ನೀನು ಮೊದಲು ಇಂದ್ರಿಯಗಳನ್ನು ನಿಯಂತ್ರಿಸಿ ಜ್ಞಾನ-ವಿಜ್ಞಾನ ನಾಶಕವಾದ ಈ ಶತ್ರುವನ್ನು ಸಂಹರಿಸು.

ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ ॥೪೬॥

ಇಂದ್ರಿಯಾಭಿಮಾನಿಗಳಾದ ಬೃಹಸ್ಪತಿ, ಸೂರ್ಯ ಮೊದಲಾದ ದೇವತೆಗಳು ಇತರ ದೇವತೆಗಳಿಗಿಂತ ಶ್ರೇಷ್ಠರೆಂದು ಹೇಳುತ್ತಾರೆ. ಚಿತ್ತಾಹಂಕಾರ ರೂಪವಾದ ಮನಸ್ಸಿಗೆ ಅಭಿಮಾನಿಗಳಾದ ಬ್ರಹ್ಮಾದಿ ದೇವತೆಗಳು ಇಂದ್ರಿಯಾಭಿಮಾನಿ

ದೇವತೆಗಳಿಗಿಂತಲೂ ಶ್ರೇಷ್ಠರಾದವರು. ವಿದ್ಯಾಸ್ಫೂರ್ತಿಸಮೃದ್ಧಿಪವಾದ ಬುದ್ಧ್ಯಭಿಮಾನಿಯಾದ ಲಕ್ಷ್ಮೀದೇವಿಯು, ಮನೋಭಿಮಾನಿಗಳಾದ ಬ್ರಹ್ಮಾದಿ ದೇವತೆಗಳಿಗಿಂತಲೂ ಶ್ರೇಷ್ಠಳಾದವಳು. ಯಾವನು ಬುದ್ಧಿಗಿಂತಲೂ ಶ್ರೇಷ್ಠನಾಗಿದ್ದಾನೆಯೋ ಅವನು ಪರಮಾತ್ಮ.

ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।
ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್ ॥೪೭॥

ಹೀಗೆ ಪರಮಾತ್ಮನನ್ನು ಬುದ್ಧ್ಯಭಿಮಾನಿಯಾದ ಲಕ್ಷ್ಮಿಗಿಂತಲೂ ಉತ್ತಮನೆಂದು ತಿಳಿದು ಅವನ ಅನುಗ್ರಹದಿಂದ ಅಂತಃಕರಣವನ್ನು ನಿಯಂತ್ರಿಸಿ ಸಮೀಪದಲ್ಲಿ ಸುಳಿಯಲೂ ಕಷ್ಟವಾದ ಈ ಕಾಮರೂಪವಾದ ಶತ್ರುವನ್ನು ಎಲೈ ಮಹಾಬಾಹುವೇ, ಸಂಹರಿಸುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಪಂಚವಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾರನೆಯ ಅಧ್ಯಾಯ

ಭಗವದ್ಗೀತಾ – ಜ್ಞಾನಯೋಗ.

ಶ್ರೀಭಗವಾನ್

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಮ್ ।
ವಿವಸ್ವಾನ್ ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್ ॥೧॥

ಶ್ರೀಭಗವಾನ್– ನಾಶರಹಿತವಾದ ಈ ಯೋಗವನ್ನು ನಾನು ವಿವಸ್ವಂತನಿಗೆ ಹೇಳಿದ್ದೇನೆ. ವಿವಸ್ವಾನ್ ನಾಮಕ ಸೂರ್ಯನು ಮನುವಿಗೆ ಹೇಳಿದನು. ಮನುವು ಇಕ್ಷ್ವಾಕುವಿಗೆ ಹೇಳಿದನು.

ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ ।
ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ ॥೨॥

ಹೀಗೆ ಪರಂಪರೆಯಿಂದ ಪ್ರಾಪ್ತವಾದ ಈ ಯೋಗವನ್ನು ರಾಜರ್ಷಿಗಳು ತಿಳಿದಿದ್ದಾರೆ. ಎಲೈ ಪರಂತಪನೇ, ಕಾಲಕ್ರಮದಲ್ಲಿ ಆ ಯೋಗವು ನಷ್ಟವಾಯಿತು.

ಸ ಏವಾಯಂ ಮಯಾ ತೇಽದ್ಯ ಯೋಗಃ ಪ್ರೋಕ್ತಃ ಪುರಾತನಃ ।
ಭಕ್ತೋಽಸಿ ಮೇ ಸಖಾ ಚೇತಿ ರಹಸ್ಯಂ ಹ್ಯೇತದುತ್ತಮಮ್ ॥೩॥

ನೀನು ನನ್ನ ಸ್ನೇಹಿತ ಮತ್ತು ಭಕ್ತ ಎಂಬ ಕಾರಣದಿಂದ ಶ್ರೇಷ್ಠವಾದ ಮತ್ತು ರಹಸ್ಯವಾದ ಮತ್ತು ಪುರಾತನವಾದ ಅದೇ ಯೋಗವನ್ನು ನಾನು ಈ ದಿನ ನಿನಗೆ ಹೇಳಿದ್ದೇನೆ.

ಅರ್ಜುನಃ

ಅಪರಂ ಭವತೋ ಜನ್ಮ ಪರಂ ಜನ್ಮ ವಿವಸ್ವತಃ ।
ಕಥಮೇತದ್ ವಿಜಾನೀಯಾಂ ತ್ವಮಾದೌ ಪ್ರೋಕ್ತವಾನಿತಿ ॥೪॥

ಅರ್ಜುನ– ನಿನ್ನ ಜನ್ಮವು ಈಚಿನದು, ವಿವಸ್ವತನ ಜನ್ಮವು ಪ್ರಾಚೀನವಾದುದು. ನೀನು ಹಿಂದೆ ಅವನಿಗೆ ಈ ಯೋಗವನ್ನು ಹೇಳಿದ್ದೀಯೆ ಎಂದು ನಾನು ಹೇಗೆ ತಿಳಿಯಲಿ?

ಶ್ರೀಭಗವಾನ್

ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ ।
ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ॥೫॥

ಶ್ರೀಭಗವಾನ್– ಎಲೈ ಅರ್ಜುನನೇ, ನನಗೂ ಮತ್ತು ನಿನಗೂ ಅನೇಕ ಜನ್ಮಗಳು ಕಳೆದುಹೋಗಿವೆ. ಎಲೈ ಪರಂತಪನೇ, ನಾನು ಅವೆಲ್ಲವನ್ನೂ ತಿಳಿದಿದ್ದೇನೆ, ನೀನು ತಿಳಿದಿಲ್ಲ.

ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥೬॥

ನಾನು ಜನ್ಮರಹಿತನಾದರೂ, ಹ್ರಾಸವಿಲ್ಲದ ಸ್ವರೂಪವನ್ನು ಹೊಂದಿದ್ದರೂ, ಎಲ್ಲ ಜೀವರಿಗೆ ಒಡೆಯನಾದರೂ, ನನ್ನ ಸಚ್ಚಿದಾನಂದ ಸ್ವಭಾವವನ್ನೇ ತೆಗೆದುಕೊಂಡು ನನ್ನ ಇಚ್ಛೆಯಿಂದಲೇ ನಾನು ಜನ್ಮವನ್ನು ಪಡೆಯುತ್ತೇನೆ.

ವಿಶೇಷ ವಿಚಾರ– ಮುಂದಿನ ಶ್ಲೋಕಗಳಲ್ಲಿ 'ಜನ್ಮಕರ್ಮ ಚ ಮೇ ದಿವ್ಯಂ ಏವಂ ಯೋ ವೇತ್ತಿತತ್ತ್ವತಃ ತ್ವಕ್ತ್ವಾ ದೇಹಂ ಪುನರ್ಜನ್ಮನೈತಿ' (ಯಾವನು ನನ್ನ ದಿವ್ಯವಾದ ಜನ್ಮಕರ್ಮಗಳನ್ನು ಸರಿಯಾಗಿ ತಿಳಿಯುತ್ತಾನೆಯೋ, ಅವನು ದೇಹವನ್ನು ತ್ಯಜಿಸಿದ ಮೇಲೆ ಪುನರ್ಜನ್ಮವನ್ನು ಹೊಂದುವುದಿಲ್ಲ ಎಂದು ಹೇಳಿರುವುದರಿಂದ ಮಾಯಯಾ ಎಂದರೆ ಸ್ವೇಚ್ಛೆಯಿಂದಲೇ ಎಂದು ಅರ್ಥವನ್ನು ಮಾಡಬೇಕು. ಏಕೆಂದರೆ ಪುನರ್ಜನ್ಮವಿಲ್ಲ ಎಂಬ ಫಲವನ್ನೂ, ಜನ್ಮಕರಗಳಿಗೆ ಎಂಬ ದಿವ್ಯವಿಶೇಷಣವನ್ನೂ ಕೊಟ್ಟಿದ್ದಾರೆ. ಆದ್ದರಿಂದ ಹರಿಯ ಜನ್ಮವು ಉಳಿದ ಜೀವರ ಜನ್ಮದಂತೆ ಅಲ್ಲ. ಏಕೆಂದರೆ ಜನ್ಮಕಾರಣದಿಂದ ಜನ್ಮವು ನಾಶವಾಗಲು ಸಾಧ್ಯವಿಲ್ಲ. ಆದ್ದರಿಂದ ಹರಿಯ ಜನ್ಮವೆಂದರೆ ಅವತಾರವೆಂದೇ ಅರ್ಥ).

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾऽऽತ್ಮಾನಂ ಸೃಜಾಮ್ಯಹಮ್ ॥೭॥

ಎಲೈ ಭಾರತನೇ, ಯಾವಾಗ ಯಾವಾಗ ಧರ್ಮದ ಅವನತಿಯೂ ಮತ್ತು ಅಧರ್ಮದ ಅಭ್ಯುದಯವೂ ಉಂಟಾಗುತ್ತದೆಯೋ, ಆಗೆಲ್ಲಾ ನಾನು ನನ್ನನ್ನೇ ಸೃಷ್ಟಿಸಿಕೊಳ್ಳುತ್ತೇನೆ.

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥೮॥

ಸಜ್ಜನರ ರಕ್ಷಣೆಗಾಗಿ, ದುಷ್ಕರ್ಮಿಗಳ ವಿನಾಶಕ್ಕಾಗಿ ಮತ್ತು ಧರ್ಮಸಂಸ್ಥಾಪನೆಯನ್ನು ಮಾಡಲು ನಾನು ಯುಗ ಯುಗಗಳಲ್ಲಿಯೂ ಅವತಾರ ಮಾಡುತ್ತೇನೆ.

ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ತ್ವತಃ ।
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋऽರ್ಜುನ ॥೯॥

ಎಲೈ ಅರ್ಜುನನೇ, ಈ ರೀತಿಯಲ್ಲಿ ಇರುವ ನನ್ನ ಜನ್ಮಕರ್ಮಗಳನ್ನು ಯಾವನು ಯಥಾರ್ಥವಾಗಿ ತಿಳಿಯುತ್ತಾನೆಯೋ, ಅವನು ದೇಹವನ್ನು ತ್ಯಜಿಸಿದ ಮೇಲೆ ಪುನರ್ಜನ್ಮವನ್ನು ಹೊಂದುವುದಿಲ್ಲ. ನನ್ನನ್ನೇ ಹೊಂದುತ್ತಾನೆ.

ವೀತರಾಗಭಯಕ್ರೋಧಾ ಮನ್ಮಯಾ ಮಾಮುಪಾಶ್ರಿತಾಃ ।
ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ ॥೧೦॥

ರಾಗ-ಭಯ-ಕ್ರೋಧಗಳನ್ನು ತ್ಯಜಿಸಿ, ನನ್ನನ್ನೇ ಪ್ರಧಾನ ಎಂದರೆ ಸರ್ವೋತ್ತಮನೆಂದು ತಿಳಿದು, ನನ್ನನ್ನು ಆಶ್ರಯಿಸಿ ಜ್ಞಾನರೂಪವಾದ ತಪಸ್ಸಿನಿಂದ ಪವಿತ್ರರಾಗಿ ಅನೇಕರು ನನ್ನಲ್ಲಿ ಭಕ್ತಿಯನ್ನು ಪಡೆದಿದ್ದಾರೆ.

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್ ।
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥೧೧॥

ಯಾರು ನನ್ನನ್ನು ಹೇಗೆ ಉಪಾಸನೆ ಮಾಡುತ್ತಾರೆಯೋ ಅವರಿಗೆ ಅದೇ ರೀತಿ ಫಲವನ್ನು ಕೊಟ್ಟು ಅನುಗ್ರಹವನ್ನು ಮಾಡುತ್ತೇನೆ. ಎಲೈ ಪಾರ್ಥನೇ, ಎಲ್ಲ ಮನುಷ್ಯರೂ ನನ್ನ ಮಾರ್ಗವನ್ನೇ ಅನುಸರಿಸುತ್ತಾರೆ.

ಕಾಂಕ್ಷಂತಃ ಕರ್ಮಣಾಂ ಸಿದ್ಧಿಂ ಯಜಂತ ಇಹ ದೇವತಾಃ ।
ಕ್ಷಿಪ್ರಂ ಹಿ ಮಾನುಷೇ ಲೋಕೇ ಸಿದ್ಧಿರ್ಭವತಿ ಕರ್ಮಜಾ ॥೧೨॥

ಈ ಲೋಕದಲ್ಲಿ ಕರ್ಮಗಳ ಸಿದ್ಧಿಯನ್ನು ಬಯಸಿ ದೇವತೆಗಳನ್ನು ಪೂಜಿಸುತ್ತಾರೆ. ಮನುಷ್ಯಲೋಕದಲ್ಲಿ ಕ್ಷಿಪ್ರವಾಗಿ ಕರ್ಮದ ಸಿದ್ಧಿಯು ಉಂಟಾಗುತ್ತದೆ.

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ।
ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್ ॥೧೩॥

ಸತ್ವಾದಿ ಗುಣಗಳ ಮತ್ತು ಕರ್ಮಗಳ ವಿಭಾಗವನ್ನು ಆಶ್ರಯಿಸಿ ನಾನು ನಾಲ್ಕು ವರ್ಣಗಳನ್ನು ಸೃಷ್ಟಿಸಿದ್ದೇನೆ. ಅದನ್ನು ಸೃಷ್ಟಿಸಿದ ನನಗೆ ಇನ್ನೊಬ್ಬ ಕರ್ತೃವು ಇರುವುದಿಲ್ಲ. ಅಥವಾ ಅವುಗಳನ್ನು ಸೃಷ್ಟಿಸಿದರೂ ನಾನು ಕರ್ತೃವಲ್ಲದವನಂತೆ ಕರ್ಮಲೇಪ ರಹಿತನಾಗಿರುತ್ತೇನೆ.

ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ ।
ಇತಿ ಮಾಂ ಯೋಽಭಿಜಾನಾತಿ ಕರ್ಮಭಿರ್ನ ಸ ಬಧ್ಯತೇ ॥೧೪॥

ನನಗೆ ಶುಭಾಶುಭ ಕರ್ಮಗಳ ಲೇಪವುಂಟಾಗುವುದಿಲ್ಲ. ನನಗೆ ಕರ್ಮದಿಂದ ಉಂಟಾಗುವ ಫಲದಲ್ಲಿ ಆಸೆಯಿಲ್ಲ. ಹೀಗೆ ಯಾರು ನನ್ನನ್ನು ತಿಳಿಯುತ್ತಾರೋ ಅವರು ಕರ್ಮಗಳಿಂದ ಬಂಧನಕ್ಕೆ ಒಳಗಾಗುವುದಿಲ್ಲ.

ಏವಂ ಜ್ಞಾತ್ವಾ ಕೃತಂ ಕರ್ಮ ಪೂರ್ವೈರಪಿ ಮುಮುಕ್ಷುಭಿಃ ।
ಕುರು ಕರ್ಮೈವ ತಸ್ಮಾತ್ ತ್ವಂ ಪೂರ್ವೈಃ ಪೂರ್ವತರಂ ಕೃತಮ್ ॥೧೫॥

ಪ್ರಾಚೀನರಾದ ಮುಮುಕ್ಷುಗಳು ಹೀಗೆ ತಿಳಿದು ಕರ್ಮಗಳನ್ನು ಮಾಡಿದರು. ಆದ್ದರಿಂದ ನೀನೂ ಸಹ ಪೂರ್ವಜರು ಮತ್ತು ಅವರ ಪೂರ್ವಜರು ಮಾಡಿದ ಕರ್ಮವನ್ನೇ ಮಾಡುವವನಾಗು.

ಕಿಂ ಕರ್ಮ ಕಿಮಕರ್ಮೇತಿ ಕವಯೋऽಪ್ಯತ್ರ ಮೋಹಿತಾಃ ।
ತತ್ ತೇ ಕರ್ಮ ಪ್ರವಕ್ಷ್ಯಾಮಿ ಯಜ್ಜ್ಞಾತ್ವಾ ಮೋಕ್ಷ್ಯಸೇऽಶುಭಾತ್ ॥

ತಾನು ಮಾಡಬೇಕಾದ ಕರ್ಮವು ಯಾವುದು, ತನಗೆ ಅಯೋಗ್ಯವಾದ ಕಾರಣದಿಂದ ಬಿಡಬೇಕಾದ ಪುಣ್ಯಕರ್ಮವೇ ಯಾವುದು ಎಂಬ ವಿಷಯದಲ್ಲಿ ಜ್ಞಾನಿಗಳೂ ಮೋಹಕ್ಕೆ ಒಳಗಾಗುತ್ತಾರೆ. ನಾನು ನಿನಗೆ ಆ ಕರ್ಮವನ್ನು ಹೇಳುವೆನು. ಅದನ್ನು ತಿಳಿದು ನೀನು ಅಶುಭದಿಂದ ನಿರ್ಮುಕ್ತನಾಗುವಿ.

ಕರ್ಮಣೋ ಹ್ಯಪಿ ಬೋದ್ಧವ್ಯಂ ಬೋದ್ಧವ್ಯಂ ಚ ವಿಕರ್ಮಣಃ ।
ಅಕರ್ಮಣಶ್ಚ ಬೋದ್ಧವ್ಯಂ ಗಹನಾ ಕರ್ಮಣೋ ಗತಿಃ ॥೧೭॥

ಕರ್ಮಗಳ ಸ್ಥಿತಿಯನ್ನು ತಿಳಿಯಬೇಕು, ವಿಕರ್ಮಗಳ ಸ್ಥಿತಿಯನ್ನು ತಿಳಿಯಬೇಕು, ಅಕರ್ಮಗಳ ಸ್ಥಿತಿಯನ್ನು ತಿಳಿಯಬೇಕು. ಕರ್ಮಗಳ ಜ್ಞಾನವು ಬಹಳ ಗಹನವಾದುದು.

ವಿಶೇಷ ವಿಚಾರ– ಕರ್ಮ ಎಂದರೆ ಸ್ವಸ್ವವಿಹಿತ ಕರ್ಮಗಳು ಎಂದು ಅರ್ಥ. ಅವುಗಳನ್ನು ತಿಳಿಯಬೇಕು. ವಿಕರ್ಮಗಳು ಎಂದರೆ ವಿರುದ್ಧವಾದ ಪಾಪಕರ್ಮಗಳು. ಅವುಗಳನ್ನೂ ತಿಳಿಯಬೇಕು. ಅಕರ್ಮಗಳು ಎಂದರೆ ಪುಣ್ಯಕರ್ಮವಾದರೂ ತನಗೆ ಅಯೋಗ್ಯವಾದುದರಿಂದ ಕೆಲವರಿಂದ ಮಾಡಲ್ಪಡುವಂತಹದವುಗಳು, ಸಂನ್ಯಾಸಿಗಳಿಗೆ ಯಜ್ಞವಿದ್ಯಂತೆ. ಈ ಮೂರನ್ನೂ ತಿಳಿಯಬೇಕು ಎಂದು ಅಭಿಪ್ರಾಯ.

ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।
ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ॥೧೮॥

ಕರ್ಮಗಳಲ್ಲಿ ಯಾವನು ಅಕರ್ಮವನ್ನು ಕಾಣುತ್ತಾನೆಯೋ, ಅಕರ್ಮಗಳಲ್ಲಿ ಯಾವನು ಕರ್ಮವನ್ನು ಕಾಣುತ್ತಾನೆಯೋ ಅವನು ಮನುಷ್ಯರಲ್ಲಿ ಯೋಗಯುಕ್ತನಾದವನು, ಸಮಗ್ರ ಕರ್ಮವನ್ನು ಮಾಡಿದವನು ಮತ್ತು ವಿವೇಕಿಯಾದವನು.

ವಿಶೇಷ ವಿಚಾರ– ಕರ್ಮಣಿ ಎಂದರೆ ಸತ್ಯವಚನದ ಸತ್ಕರ್ಮಗಳ ವಿಷಯದಲ್ಲಿ ಅಕರ್ಮ. ಸಜ್ಜನರಿಗೆ ಅಪಾಯ ಒದಗಿದಾಗ ಸತ್ಯವಚನವನ್ನು ಆಡಬಾರದು, ಸತ್ಯವಚನವು ಅಕರ್ತವ್ಯ ಎಂದು ಯಾವನು ತಿಳಿಯುತ್ತಾನೆಯೋ; ಹಾಗೆಯೇ ಅಕರ್ಮಣಿ ಎಂದರೆ ವ್ರತವನ್ನು ಹಿಡಿದಿರುವ ಮನುಷ್ಯನಿಗೆ ನಿಷಿದ್ಧವಾದ ಶ್ರಾದ್ಧ ಭೋಜನಾದಿ ಕರ್ಮಗಳು, ಅದರಲ್ಲಿ ಕರ್ಮ= ಮಾಡು ಎಂದು ಗುರುವಿನ ಆಜ್ಞೆಯಾದರೆ ಇದು ನನ್ನಿಂದ ಮಾಡಲ್ಪಡಬೇಕು ಎಂದು ಯಾವನು ಕರ್ತವ್ಯತ್ವವನ್ನು ತಿಳಿಯುತ್ತಾನೆಯೋ ಅವನು ಬುದ್ಧಿವಂತನಾದವನು ಎಂದು ಅರ್ಥ. ಪೂರ್ವಶ್ಲೋಕದಲ್ಲಿ ವರ್ಣಾಶ್ರಮ ಭೇದದಿಂದ ಕರ್ಮ, ಅಕರ್ಮ, ವಿಕರ್ಮಗಳು ಹೇಳಲ್ಪಟ್ಟಿವೆ. ಈ ಶ್ಲೋಕದಲ್ಲಿ ಒಬ್ಬನೇ ವ್ಯಕ್ತಿಗೆ ಬೇರೆ ಬೇರೆ ದೃಷ್ಟಿಯಿಂದ ಅಕರ್ಮವು ಕರ್ಮವೂ; ಕರ್ಮವು ಅಕರ್ಮವೂ ಆಗುತ್ತದೆ ಎಂದು ಹೇಳಲ್ಪಟ್ಟಿದೆ. ಇಂತಹ ಕರ್ಮದ ಜ್ಞಾನವು ಅತಿಸೂಕ್ಷ್ಮ ಧರ್ಮವಾದ್ದರಿಂದ ಅದನ್ನು ತಿಳಿದವನು ಬುದ್ಧಿಮಾನ್ ಎಂದು ಅದಕ್ಕೆ ಫಲವನ್ನು ಹೇಳಿದ್ದಾರೆ.

ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥೧೯॥

ಯಾವನ ಎಲ್ಲಾ ಪ್ರಾರಂಭಗಳು (ಉಪಕ್ರಮಗಳು) ಫಲದ ಆಸೆಯಿಂದ ರಹಿತವಾಗಿರುತ್ತವೆಯೋ ಮತ್ತು ಯಾವನು ತನ್ನ ಜ್ಞಾನಾಗ್ನಿಯಿಂದ ತನ್ನ ದುಷ್ಕರ್ಮಗಳನ್ನು ದಹಿಸುತ್ತಾನೆಯೋ ಅವನನ್ನು ಜ್ಞಾನಿಗಳು ಪಂಡಿತನೆಂದು ಕರೆಯುತ್ತಾರೆ.

ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ ।
ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ ಕರೋತಿ ಸಃ ॥೨೦॥

ಕರ್ಮದ ಫಲದಲ್ಲಿ ಸ್ನೇಹವನ್ನು ತೊರೆದು ನಿತ್ಯತೃಪ್ತನೂ, ನಿರಾಶ್ರಯನೂ ಆದ ಭಗವಂತನಿಗೆ ನಾನು ಸದೃಶನಾಗಿದ್ದೆನೆ ಎಂಬ ಜ್ಞಾನವನ್ನು ಹೊಂದಿ, ಕರ್ಮದಲ್ಲಿ ಪ್ರವೃತ್ತನಾದವನು ಯಾವ ಕರ್ಮವನ್ನು ಮಾಡಿದರೂ ಅವನು ಅದನ್ನು ಮಾಡುವುದಿಲ್ಲ.

ವಿಶೇಷ ವಿಚಾರ– ಹಾಗೆ ಕರ್ಮವನ್ನು ಮಾಡುವವನಿಗೆ ತನ್ನ ಪಾರತಂತ್ರ್ಯ ಜ್ಞಾನವು ಮತ್ತು ಹರಿಯ ಸ್ವಾತಂತ್ರ್ಯ ಜ್ಞಾನವು ಇರುವುದರಿಂದ ಅವನು ಏನು ಮಾಡಿದರೂ ಅಂತಹ ಕರ್ಮದ ಫಲದಿಂದ ಲಿಪ್ತನಾಗುವುದಿಲ್ಲ ಎಂದು ಅಭಿಪ್ರಾಯ. 'ನಿತ್ಯತೃಪ್ತಃ ಅನಿರಾಶ್ರಯಃ' ಎಂದೂ ಪದಚ್ಛೇದವನ್ನು ಮಾಡಬಹುದು. ಭಗವಂತನ ಜ್ಞಾನದಿಂದ ತೃಪ್ತನಾಗಿ ಭಗವಂತನನ್ನು ಬಿಟ್ಟು ಬೇರೆ ಯಾವ ಆಶ್ರಯವನ್ನು ಅವಲಂಬಿಸದೆ ಯಾವನು ಕರ್ಮವನ್ನು ಮಾಡುತ್ತಾನೆಯೋ ಎಂದು ಆಗ ಯೋಜನೆಯನ್ನು ಮಾಡಬೇಕು.

ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ।
ಶಾರೀರಂ ಕೇವಲಂ ಕರ್ಮ ಕುರ್ವನ್ ನಾಪ್ನೋತಿ ಕಿಲ್ಬಿಷಮ್ ॥೨೧॥

ಆಸೆಗಳನ್ನು ತೊರೆದು ತನ್ನ ಚಿತ್ತವನ್ನೂ ಮತ್ತು ಪ್ರಯತ್ನವನ್ನೂ ನಿಯಂತ್ರಿಸಿ ಸರ್ವಪರಿಗ್ರಹವನ್ನು ತೊರೆದು ಶರೀರ ಯಾತ್ರೆಗೆ ಅವಶ್ಯಕವಾದಷ್ಟು ಕರ್ಮಗಳನ್ನು ಯಾವನು ಮಾಡುತ್ತಾನೆಯೋ ಅವನಿಗೆ ದೋಷವುಂಟಾಗುವುದಿಲ್ಲ.

ವಿಶೇಷ ವಿಚಾರ– 'ನಿರಾಶೀಃ ಯತಚಿತ್ತಾತ್ಮಾ' ಎಂಬುದರಿಂದ ಮನೋನಿಗ್ರಹದಿಂದಲೇ ಕಾಮಾದಿ ತ್ಯಾಗಗಳು ಉಂಟಾಗುತ್ತವ ಎಂದು ಸೂಚಿಸುತ್ತಾರೆ. 'ತ್ಯಕ್ತಸರ್ವಪರಿಗ್ರಹ' ಎಂದರೆ ತನ್ನ ದೇಹೇಂದ್ರಿಯಾದಿ ಪರಿಗ್ರಹಗಳಲ್ಲಿ ಅಭಿಮಾನವನ್ನು ತ್ಯಾಗ ಮಾಡಿ ಎಂದು ಅರ್ಥ. ಅಂತಹವನು ಮಾಡುವ ಕರ್ಮವು ಅಶುಭಕ್ಕೆ ಕಾರಣವಾಗುವುದಿಲ್ಲ.

ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।
ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಽಪಿ ನ ನಿಬಧ್ಯತೇ ॥೨೨॥

ಅಪ್ರಯತ್ನದಿಂದ ಲಬ್ಧವಾದುದರಲ್ಲೇ ತೃಪ್ತನಾಗಿ, ಶೀತೋಷ್ಣಾದಿ ದ್ವಂದ್ವಗಳಿಂದ ಉತ್ಸೇಕ, ಅನುತ್ಸೇಕಗಳನ್ನು ಹೊಂದದೆ, ಮಾತ್ಸರ್ಯವನ್ನು ತ್ಯಜಿಸಿ, ಕರ್ಮವು ಸಮಾಪ್ತಿಯನ್ನು ಹೊಂದಿ ಸಿದ್ಧಿಸಿದರೂ ಅಥವಾ ಸಿದ್ಧಿಸದಿದ್ದರೂ ಯಾವನು ಸಮಾಧಾನವನ್ನು ಹೊಂದಿರುತ್ತಾನೆಯೋ ಅವನು ಕರ್ಮವನ್ನು ಮಾಡಿದರೂ ಅದರಿಂದ ಬಂಧನಕ್ಕೆ ಒಳಗಾಗುವುದಿಲ್ಲ.

ಗತಸಂಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ ।
ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ ॥೨೩॥

ಹೀಗೆ ಎಲ್ಲದರಲ್ಲಿಯೂ ಸ್ನೇಹವನ್ನು ತ್ಯಜಿಸಿ, ದೇಹಾದಿ ಅಭಿಮಾನರಹಿತನಾಗಿ, ಜ್ಞಾನದಲ್ಲಿಯೇ ಆಸಕ್ತವಾದ ಮನಸ್ಸನ್ನು ಹೊಂದಿ, ಭಗವತ್ಪ್ರಾರ್ಥವಾಗಿಯೇ ಕರ್ಮವನ್ನು ಆಚರಿಸುವವನ ಸಮಗ್ರವಾದ ಪಾಪವು ನಾಶವನ್ನು ಹೊಂದುತ್ತದೆ.

ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ।
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮಸಮಾಧಿನಾ ॥೨೪॥

ಬ್ರಹ್ಮಾರ್ಪಣಂ ಎಂದರೆ ಕರ್ಮದಿಂದ ಉಂಟಾದ ಫಲವನ್ನು ಬ್ರಹ್ಮನಿಗೇ ಸಮರ್ಪಿಸುವುದು. ಬ್ರಹ್ಮಹವಿಃ ಎಂದರೆ ಹವಿಸ್ಸು ಬ್ರಹ್ಮನ ಸಂಬಂಧಿ, ಅವನಿಗೆ ಅಧೀನವಾದುದು ಎಂದು ಚಿಂತಿಸುವುದು. ಬ್ರಹ್ಮಾಗ್ನಿಃ= ಅಗ್ನಿಯೂ ಕೂಡ ಬ್ರಹ್ಮನ ಅಧೀನವೆಂದು ಚಿಂತಿಸುವುದು. ಬ್ರಹ್ಮಣಾ ಹುತಮ್= ಬ್ರಹ್ಮನಿಂದ ಪ್ರೇರಿತನಾಗಿ ಯಜಮಾನನಾದ ಬ್ರಾಹ್ಮಣನಿಂದ ಹೋಮಮಾಡಲ್ಪಟ್ಟುದು ಎಂದು ಅರ್ಥ. ಬ್ರಹ್ಮನಲ್ಲಿಯೇ ಅರ್ಪಣೆ ಮಾಡಬೇಕು. ಹವಿಸ್ಸಿನಲ್ಲಿಯೂ ಮತ್ತು ಅಗ್ನಿಯಲ್ಲಿಯೂ ಬ್ರಹ್ಮನ ಸನ್ನಿಧಾನವನ್ನು ಚಿಂತಿಸಬೇಕು. 'ನ ಋತೇ ತ್ವತ್ಕ್ರಿಯತೇ ಕಿಂಚನ' ಅವನು ಚಲಿಸದಿದ್ದರೆ ಯಾವುದೂ ಚಲಿಸುವುದಿಲ್ಲ ಎಂಬ ಶ್ರುತಿ ಇರುವುದರಿಂದ ಬ್ರಹ್ಮಪ್ರಯತ್ನಕ್ಕೆ ಅಧೀನನಾಗಿಯೇ ನಾನು ಹೋಮವನ್ನು ಮಾಡುತ್ತಿದ್ದೇನೆ ಎಂದು ಚಿಂತಿಸುವುದು. ಈ ರೀತಿಯಲ್ಲಿ ಬ್ರಹ್ಮಕರ್ಮಸಮಾಧಿನಾ=ಬ್ರಹ್ಮನಲ್ಲಿಯೇ ಕರ್ಮಕ್ಕೆ ಸಂಬಂಧಪಟ್ಟ ಎಲ್ಲ ವಿಷಯದಲ್ಲಿಯೂ ಚಿತ್ತಸಮಾಧಾನವುಳ್ಳವನಾದ, ತೇನ= ಆ ಯಜಮಾನನಿಂದ, ಕೊನೆಯಲ್ಲಿ ಅಂದರೆ ಮೋಕ್ಷದಲ್ಲಿ, ಬ್ರಹ್ಮೈವಗಂತವ್ಯಂ= ಬ್ರಹ್ಮನೇ ಪ್ರಾಪ್ತನಾಗುತ್ತಾನೆ ಎಂದು ಯೋಜನೆ. ಮೋಕ್ಷಾವಸ್ಥೆಯಲ್ಲಿಯೂ ಸಹ ಬ್ರಹ್ಮನು ಗಮ್ಯ, ಜೀವನು ಗಂತೃ ಎಂದು ಭೇದವನ್ನೇ ಹೇಳಿರುವುದರಿಂದ ಬ್ರಹ್ಮಣಾ ಹುತಮ್ ಎಂಬಲ್ಲಿ ಸಾಂಸಾರಿಕ ಜೀವರಿಗೂ ಮತ್ತು ಬ್ರಹ್ಮನಿಗೂ ಅಭೇದವನ್ನು ಹೇಳುವುದು ಪೂರ್ವೋತ್ತರ ವಿರುದ್ಧವಾಗುತ್ತದೆ. ಅಲ್ಲದೇ ಜಡಭೂತವಾದ ಅರ್ಪಣ ಕ್ರಿಯೆ, ಜಡವಾದ ಹವಿಸ್ಸು, ಜಡವಾದ ಅಗ್ನಿ ಇವುಗಳಿಗೆ ಬ್ರಹ್ಮನೇ ಅರ್ಪಣ, ಬ್ರಹ್ಮನೇ ಹವಿಸ್ಸು, ಬ್ರಹ್ಮನೇ ಅಗ್ನಿ ಎಂದು ಐಕ್ಯವನ್ನು ಹೇಳುವುದು ಪೂರ್ವೋತ್ತರ ವಿರುದ್ಧವೂ, ಸ್ವಮತ (ಅದ್ವೈತ) ಮತವೂ ಆಗುತ್ತದೆ.

ದೈವಮೇವಾಪರೇ ಯಜ್ಞಂ ಯೋಗಿನಃ ಪರ್ಯುಪಾಸತೇ ।
ಬ್ರಹ್ಮಾಗ್ನಾವಪರೇ ಯಜ್ಞಂ ಯಜ್ಞೇನೈವೋಪಜುಹ್ವತಿ ॥೨೫॥

ಇನ್ನು ಕೆಲವು ಯೋಗಿಗಳು ದೇವಸಂಬಂಧಿಯಜ್ಞವನ್ನೇ ಎಂದರೆ ಜ್ಞಾನರೂಪವಾದ ಯಜ್ಞವನ್ನೇ ಯಾವಾಗಲೂ ಮಾಡುತ್ತಾರೆ. ಇನ್ನು ಕೆಲವರು ಬ್ರಹ್ಮಸಂಬಂಧಿಯಾದ ಅಗ್ನಿಯಲ್ಲಿ ಯಜ್ಞನಾಮಕನಾದ ಪರಮಾತ್ಮನಿಂದ ಪ್ರೇರಿತರಾಗಿ ಕರ್ಮರೂಪ ಯಜ್ಞದಿಂದ ಯಜ್ಞನಾಮಕ ಪರಮಾತ್ಮನನ್ನೇ ಹೋಮವನ್ನು ಮಾಡಿ ಉಪಾಸನೆ ಮಾಡುತ್ತಾರೆ.

ಶ್ರೋತ್ರಾದೀನೀಂದ್ರಿಯಾಣ್ಯನ್ಯೇ ಸಂಯಮಾಗ್ನಿಷು ಜುಹ್ವತಿ ।
ಶಬ್ದಾದೀನ್ ವಿಷಯಾನನ್ಯ ಇಂದ್ರಿಯಾಗ್ನಿಷು ಜುಹ್ವತಿ ॥೨೬॥

ಇನ್ನು ಕೆಲವರು ವಿಷಯ ತೃಷ್ಣೆಯ ಸಂಯಮನ ಎಂಬ ಅಗ್ನಿಗಳಲ್ಲಿ ಶ್ರೋತ್ರಾದಿ ಇಂದ್ರಿಯಗಳನ್ನು ಹೋಮ ಮಾಡುತ್ತಾರೆ. ವಿಷಯದ ಆಸೆಯ ನಿಯಂತ್ರಣವನ್ನು ಪ್ರತಿದಿನವೂ ಮಾಡಬೇಕಾಗಿರುವುದರಿಂದ ಬಹುವಚನ. ಇನ್ನು ಕೆಲವರು ಇಂದ್ರಿಯ ನಿಯಮನ ಎಂಬ ಅಗ್ನಿಗಳಲ್ಲಿ ಶಬ್ದಾದಿ ವಿಷಯವನ್ನು ಹೋಮ ಮಾಡುತ್ತಾರೆ. ಇಂದ್ರಿಯಗಳ ನಿಯಂತ್ರಣವಿದ್ದರೆ ಶಬ್ದಾದಿ ವಿಷಯಗಳು ಹುತವಾದ ಅನ್ನದಂತೆ ಯಾವ ವಿಕಾರವನ್ನು ಉಂಟುಮಾಡುವುದಿಲ್ಲವಾದ್ದರಿಂದ ಜುಹ್ವತಿ (ಹೋಮ ಮಾಡುತ್ತಾರೆ) ಎಂದು ಹೇಳಲಾಗಿದೆ. ವಿಷಯದ ಆಸೆಯನ್ನು ತೊರೆದರೆ ಇಂದ್ರಿಯಗಳು ಬಾಧಕವಾಗುವುದಿಲ್ಲ. ಇಂದ್ರಿಯಗಳ ನಿಯಂತ್ರಣವಿದ್ದರೆ ವಿಷಯಗಳು ಬಾಧಕವಾಗುವುದಿಲ್ಲ ಎಂದು ಒಟ್ಟು ಅಭಿಪ್ರಾಯ.

ಸರ್ವಾಣೀಂದ್ರಿಯಕರ್ಮಾಣಿ ಪ್ರಾಣಕರ್ಮಾಣಿ ಚಾಪರೇ ।
ಆತ್ಮಸಂಯಮಯೋಗಾಗ್ನೌ ಜುಹ್ವತಿ ಜ್ಞಾನದೀಪಿತೇ ॥೨೭॥

ಇನ್ನು ಕೆಲವರು ಎಲ್ಲ ಇಂದ್ರಿಯಗಳ ವ್ಯಾಪಾರಗಳನ್ನು ಮತ್ತು ಶ್ವಾಸೋಚ್ಛ್ವಾಸಾದಿ ವ್ಯಾಪಾರಗಳನ್ನು ಜ್ಞಾನದಿಂದ ದೀಪ್ತವಾದ ಚಿತ್ತವನ್ನು ಪರಮಾತ್ಮನಲ್ಲಿಯೇ ನಿಲ್ಲಿಸುವುದು ಎಂಬ ಆತ್ಮಸಂಯಮಯೋಗ ಎಂದರೆ ಧ್ಯಾನಯೋಗರೂಪವಾದ ಅಗ್ನಿಯಲ್ಲಿ ಹೋಮವನ್ನು ಮಾಡುತ್ತಾರೆ.

ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾऽಪರೇ ।
ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯತಯಃ ಸಂಶಿತವ್ರತಾಃ ॥೨೮॥

ಬಹಳ ತೀಕ್ಷ್ಣವಾದ ವ್ರತವನ್ನು ಧರಿಸಿದ ಪ್ರಯತ್ನಶೀಲರಾದ ಕೆಲವರು ದ್ರವ್ಯ ಯಜ್ಞಗಳನ್ನೂ, ಇನ್ನು ಕೆಲವರು ತಪೋಯಜ್ಞಗಳನ್ನೂ, ಇನ್ನು ಕೆಲವರು ಯೋಗ ಯಜ್ಞಗಳನ್ನೂ, ಇನ್ನು ಕೆಲವರು ಸ್ವಾಧ್ಯಾಯ ಜ್ಞಾನಯಜ್ಞಗಳನ್ನೂ ಮಾಡುತ್ತಾರೆ.

ಅಪಾನೇ ಜುಹ್ವತಿ ಪ್ರಾಣಂ ಪ್ರಾಣೇऽಪಾನಂ ತಥಾऽಪರೇ ।
ಪ್ರಾಣಾಪಾನಗತೀ ರುದ್ಧ್ವಾ ಪ್ರಾಣಾಯಾಮಪರಾಯಣಾಃ ॥೨೯॥

ಇನ್ನು ಕೆಲವರು ಅಪಾನದ ಪ್ರಾಣವನ್ನು ಹೋಮ ಮಾಡುತ್ತಾರೆ. ಪ್ರಾಣನಲ್ಲಿ ಅಪಾನನನ್ನು ಹೋಮ ಮಾಡುತ್ತಾರೆ. ಪ್ರಾಣಾಪಾನಗಳ ಸಂಚಾರವನ್ನು ತಡೆದು ಕುಂಭಕದಲ್ಲಿ ಪರಮಾತ್ಮನನ್ನು ಧ್ಯಾನಿಸಿ ಪ್ರಾಣಾಯಾಮಪರಾಯಣರಾಗಿರುತ್ತಾರೆ.

ವಿಶೇಷ ವಿಚಾರ– ಪರಮಾತ್ಮನ ಧ್ಯಾನವನ್ನು ಮಾಡುವಾಗ ಅಪಾನ ವಾಯುವನ್ನೂ ಸಹ ಮೇಲ್ಮುಖವಾಗಿ ಎಳೆದುಕೊಂಡು ಶ್ವಾಸದಲ್ಲಿ ಸೇರಿಸುವುದರಿಂದ ಪ್ರಾಣನಲ್ಲಿ ಅಪಾನನನ್ನು ಹೋಮಿಸುತ್ತಾರೆ ಎಂದು ಹೇಳಿದೆ. ಎಡನಾಸಾ ಪುಟದಿಂದ ಊರ್ಧ್ವಶ್ವಾಸ ರೂಪವಾದ ಪ್ರಾಣವಾಯುವನ್ನು ಒಳಗೆ ತೆಗೆದುಕೊಂಡಾಗ ಅದು ಕೆಳಮುಖವಾಗಿ ಹೋಗಿ ಅಪಾನವಾಯುವಿನಲ್ಲಿ ಲಯವನ್ನು ಹೊಂದುವುದರಿಂದ ಅಪಾನನಲ್ಲಿ ಪ್ರಾಣನನ್ನು ಹೋಮ ಮಾಡುತ್ತಾರೆ ಎಂದು ಹೇಳಲಾಗಿದೆ. ಮೂಲದಲ್ಲಿ ಈ ಎರಡನೇ ಹೋಮವನ್ನು ಮೊದಲು ಹೇಳಿದ್ದರೂ ಸಹ ಅಪಾನನನ್ನು ಪ್ರಾಣನಲ್ಲಿ ಹೋಮ ಮಾಡುವುದು ಪ್ರಶಸ್ತವಾದುದರಿಂದ ಹೀಗೆಯೇ ಯೋಜನೆ ಮಾಡಬೇಕು.

ಅಪರೇ ನಿಯತಾಹಾರಾಃ ಪ್ರಾಣಾನ್ ಪ್ರಾಣೇಷು ಜುಹ್ವತಿ ।
ಸರ್ವೇऽಪ್ಯೇತೇ ಯಜ್ಞವಿದೋ ಯಜ್ಞಕ್ಷಪಿತಕಲ್ಮಷಾಃ ॥೩೦॥

ಇನ್ನು ಕೆಲವರು ಆಹಾರ ನಿಯಂತ್ರಣವನ್ನು ಮಾಡಿ ಶ್ರೋತ್ರಾದಿ ಇಂದ್ರಿಯಗಳನ್ನು ಶ್ವಾಸವಾಯುಗಳಲ್ಲಿ ಹೋಮ ಮಾಡುತ್ತಾರೆ. ಎಂದರೆ ಆಹಾರ ನಿಯಂತ್ರಣವನ್ನು ಮಾಡಿ ಕೇವಲ ಚರ್ಮಾಸ್ಥಿಗಳನ್ನು ಅವಯವಗಳಾಗಿ ಹೊಂದಿ ಶ್ವಾಸವನ್ನು ಮಾತ್ರ ಮಾಡುತ್ತಿರುತ್ತಾರೆ ಎಂದು ಅರ್ಥ. ಈ ಎಲ್ಲರೂ ಯಜ್ಞವನ್ನು ತಿಳಿದವರು ಮತ್ತು ಅಂತಹ ಯಜ್ಞದಿಂದ ತಮ್ಮ ಎಲ್ಲಾ ದೋಷಗಳನ್ನೂ ಕಳೆದುಕೊಂಡವರು.

ಯಜ್ಞಶಿಷ್ಟಾಮೃತಭುಜೋ ಯಾಂತಿ ಬ್ರಹ್ಮ ಸನಾತನಮ್ ।
ನಾಯಂ ಲೋಕೋಽಸ್ತ್ಯಯಜ್ಞಸ್ಯ ಕುತೋಽನ್ಯಃ ಕುರುಸತ್ತಮ ॥೩೧॥

ಯಜ್ಞವನ್ನು ಮಾಡಿ ಅದರಿಂದ ಉಂಟಾದ ಪುಣ್ಯ, ಜ್ಞಾನ, ವೈರಾಗ್ಯಾದಿಗಳೇ ಅಮೃತದಂತೆ. ಅದನ್ನು ಭುಂಜಿಸುವವರು ವೇದಪ್ರತಿಪಾದ್ಯನಾದ ಪರಬ್ರಹ್ಮನನ್ನು ಹೊಂದುತ್ತಾರೆ. ಎಲೈ ಕುರುಶ್ರೇಷ್ಠನೇ, ಮೇಲೆ ಹೇಳಿದ ಯಜ್ಞಗಳಲ್ಲಿ ಯಾವ ಒಂದು ಯಜ್ಞವನ್ನೂ ಮಾಡದವನು ಈ ಲೋಕದಲ್ಲೇ ಬಹಳ ನಿಂದೆಗೆ ಒಳಗಾಗಿ ಈ ಲೋಕವನ್ನೂ ಕಳೆದುಕೊಳ್ಳುತ್ತಾನೆ. ಇನ್ನು ಅವನಿಗೆ ಪರಲೋಕವು ಎಲ್ಲಿಂದ ಬರಬೇಕು?

ಏವಂ ಬಹುವಿಧಾ ಯಜ್ಞಾ ವಿತತಾ ಬ್ರಹ್ಮಣೋ ಮುಖೇ ।
ಕರ್ಮಜಾನ್ ವಿದ್ಧಿ ತಾನ್ ಸರ್ವಾನೇವಂ ಜ್ಞಾತ್ವಾ ವಿಮೋಕ್ಷ್ಯಸೇ ॥೩೨॥

ಹೀಗೆ ಅನೇಕ ವಿಧವಾದ ಯಜ್ಞಗಳು ಸರ್ವಯಜ್ಞಭೋಕ್ತವಾದ ಆ ಬ್ರಹ್ಮನ ಮುಖದಲ್ಲಿ ವಿಸ್ತರಿಸಲ್ಪಟ್ಟಿವೆ. ಇವೆಲ್ಲವನ್ನೂ ಕರ್ಮರೂಪವಾದವುಗಳೆಂದು ತಿಳಿ. ಹೀಗೆ ತಿಳಿದರೆ ಮುಕ್ತನಾಗುವಿ.

ಶ್ರೇಯಾನ್ ದ್ರವ್ಯಮಯಾದ್ ಯಜ್ಞಾದ್ ಜ್ಞಾನಯಜ್ಞಃ ಪರಂತಪ ।
ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥೩೩॥

ಎಲೈ ಪರಂತಪನೇ, ಹವಿಸ್ಸು ಮೊದಲಾದ ದ್ರವ್ಯರೂಪವಾದ ಯಜ್ಞಗಳಿಗಿಂತಲೂ ಜ್ಞಾನಯಜ್ಞವು ವಿಶಿಷ್ಟವಾದುದು. ಎಲೈ ಪಾರ್ಥನೇ, ಮಾಡಿದ ಕರ್ಮವೆಲ್ಲವೂ ನಾಶವನ್ನು ಹೊಂದದೆ ಜ್ಞಾನದಲ್ಲಿ ಪರಿಸಮಾಪ್ತಿ ಹೊಂದುತ್ತದೆ.

ತದ್ ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।
ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥೩೪॥

ಗುರುಗಳಿಗೆ ನಮಸ್ಕಾರವನ್ನು ಮಾಡಿ, ಯೋಗ್ಯವಾದ ಪ್ರಶ್ನೆಗಳನ್ನು ಮಾಡಿ, ಅವರ ಸೇವೆಯನ್ನು ಮಾಡಿ ಆ ಪರಮಾತ್ಮನ ಜ್ಞಾನವನ್ನು ಸಂಪಾದಿಸು. ತತ್ತ್ವದರ್ಶಿಯಾದ ಆ ಜ್ಞಾನಿಗಳು ನಿನಗೆ ಅಂತಹ ಪರಬ್ರಹ್ಮನ ಜ್ಞಾನವನ್ನು ಉಂಟು ಮಾಡುವ ವಾಕ್ಯಗಳನ್ನು ಉಪದೇಶ ಮಾಡುವರು.

ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಂಡವ ।
ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ ॥೩೫॥

ಎಲೈ ಪಾಂಡವನೇ, ಅಂತಹ ಜ್ಞಾನವನ್ನು ಸಂಪಾದನೆ ಮಾಡಿದರೆ ನೀನು ಪುನಃ ಇಂತಹ ಮೋಹಕ್ಕೆ ಒಳಗಾಗುವುದಿಲ್ಲ. ಮತ್ತು ಎಲ್ಲಾ ಜೀವಜಡಾತ್ಮಕವಾದ ಪ್ರಪಂಚವೂ ಸಹ ಸಮಗ್ರವಾಗಿ ನನ್ನನ್ನು ಆಶ್ರಯಿಸಿಕೊಂಡಿರುವುದನ್ನು ನೋಡುವಿ.

ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ ।
ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥೩೬॥

ನೀನು ಒಂದು ಪಕ್ಷ ಎಲ್ಲ ಪಾಪಾಚರಣೆ ಮಾಡುವವರಿಗಿಂತಲೂ ಹೆಚ್ಚು ಪಾಪವನ್ನು ಮಾಡಿದ್ದರೂ ಜ್ಞಾನವೆಂಬ ಹಡಗಿನಿಂದಲೇ ಎಲ್ಲ ಪಾಪಗಳನ್ನೂ ದಾಟುವಿ.

ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ ಕುರುತೇಽರ್ಜುನ ।
ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ ॥೩೭॥

ಎಲೈ ಅರ್ಜುನನೇ, ಹೇಗೆ ದೀಪ್ತವಾದ ಅಗ್ನಿಯು ಕಟ್ಟಿಗೆಗಳನ್ನು ಭಸ್ಮವನ್ನಾಗಿ ಮಾಡುತ್ತದೆಯೋ ಹಾಗೆ ಜ್ಞಾನಾಗ್ನಿಯು ಸರ್ವಕರ್ಮಗಳನ್ನು ಭಸ್ಮ ಮಾಡುತ್ತದೆ.

ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।
ತತ್ ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ ॥೩೮॥

ಜ್ಞಾನಕ್ಕೆ ಸದೃಶವಾದ ಪವಿತ್ರವಾದ ವಸ್ತುವು ಈ ಲೋಕದಲ್ಲಿ ಇನ್ನೊಂದು ಇಲ್ಲ. ಯೋಗಸಂಸಿದ್ಧನಾದ ಮನುಷ್ಯನು ಬಹುಕಾಲದ ನಂತರ ಅಂತಹ ಜ್ಞಾನವನ್ನು ತನ್ನ ಮನಸ್ಸಿನಲ್ಲಿ ಪಡೆಯುತ್ತಾನೆ.

ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ ।
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ॥೩೯॥

ಭಗವಂತನೇ ಸರ್ವೋತ್ತಮನೆಂದು ತಿಳಿದು ಮತ್ತು ಜ್ಞಾನದಲ್ಲಿಯೇ ಯಾವಾಗಲೂ ಆಸಕ್ತನಾಗಿ, ಇಂದ್ರಿಯನಿಯಂತ್ರಣವನ್ನು ಹೊಂದಿ ಶ್ರದ್ಧೆಯುಳ್ಳ ಮನುಷ್ಯನು ಜ್ಞಾನವನ್ನು ಪಡೆಯುತ್ತಾನೆ. ಜ್ಞಾನವನ್ನು ಪಡೆದ ಮೇಲೆ ಅಲ್ಪಕಾಲದಲ್ಲಿಯೇ ಶ್ರೇಷ್ಠ ಸುಖರೂಪವಾದ ಮೋಕ್ಷವನ್ನು ಪಡೆಯುತ್ತಾನೆ.

ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ ।
ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ ॥೪೦॥

ಅಜ್ಞಾನಿಯೂ, ಶ್ರದ್ಧೆಯಿಲ್ಲದವನೂ ಮತ್ತು ಎಲ್ಲದರಲ್ಲಿಯೂ ಸಂಶಯವನ್ನು ತಾಳುವವನೂ ವಿನಾಶವನ್ನು ಹೊಂದುತ್ತಾನೆ. ಸಂಶಯಶೀಲ ಮಾನವನಿಗೆ ಈ ಲೋಕವೂ ಇಲ್ಲ, ಪರಲೋಕವೂ ಇಲ್ಲ ಮತ್ತು ಸುಖವೂ ಇಲ್ಲ.

ಯೋಗಸನ್ನ್ಯಸ್ತಕರ್ಮಾಣಂ ಜ್ಞಾನಸಂಛಿನ್ನಸಂಶಯಮ್ ।
ಆತ್ಮವಂತಂ ನ ಕರ್ಮಾಣಿ ನಿಬಧ್ನಂತಿ ಧನಂಜಯ ॥೪೧॥

ಎಲೈ ಧನಂಜಯನೇ, ಮೇಲೆ ಹೇಳಿದ ಯೋಗಗಳಿಂದ ಕರ್ಮಫಲಗಳನ್ನು ಹರಿಯಲ್ಲಿ ಸಮರ್ಪಿಸಿ, ಜ್ಞಾನದಿಂದ ತನ್ನ ಎಲ್ಲಾ ಸಂಶಯಗಳನ್ನು ಕಳೆದುಕೊಂಡು, ಪರಮಾತ್ಮನ ಭಕ್ತನಾಗಿ ಪರಮಾತ್ಮನನ್ನು ಹೃದಯದಲ್ಲಿ ಧರಿಸಿದವನಿಗೆ ಕರ್ಮಗಳು ಬಂಧಕವಾಗುವುದಿಲ್ಲ.

ತಸ್ಮಾದಜ್ಞಾನಸಂಭೂತಂ ಹೃತ್ಸ್ಥಂ ಜ್ಞಾನಾಸಿನಾಽಽತ್ಮನಃ ।
ಛಿತ್ತ್ವೈನಂ ಸಂಶಯಂ ಯೋಗಮಾತಿಷ್ಠೋತ್ತಿಷ್ಠ ಭಾರತ ॥೪೨॥

ಆದ್ದರಿಂದ ಎಲೈ ಭಾರತನೇ, ಅಜ್ಞಾನದಿಂದ ನಿನ್ನ ಹೃದಯದಲ್ಲಿ ಉಂಟಾದ ಈ ಸಂಶಯವನ್ನು ನಿನ್ನ ಜ್ಞಾನವೆಂಬ ಕತ್ತಿಯಿಂದ ಛೇದಿಸಿ ಯೋಗವನ್ನು ಆಶ್ರಯಿಸು, ಎದ್ದೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಷಡ್ವಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೇಳನೆಯ ಅಧ್ಯಾಯ

ಭಗವದ್ಗೀತಾ – ಸಂನ್ಯಾಸ ಯೋಗ.

ಅರ್ಜುನಃ

ಸನ್ನ್ಯಾಸಂ ಕರ್ಮಣಾಂ ಕೃಷ್ಣ ಪುನರ್ಯೋಗಂ ಚ ಶಂಸಸಿ ।
ಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್ ॥೧॥

ಅರ್ಜುನ– ಎಲೈ ಕೃಷ್ಣನೇ, ನೀನು ಹಿಂದಿನ ಅಧ್ಯಾಯದಲ್ಲಿ ಯದೃಚ್ಛಾಲಾಭ ಸಂತುಷ್ಟ ಇತ್ಯಾದಿಗಳಿಂದ ಕಾಮಾದಿ ಪರಿತ್ಯಾಗರೂಪವಾದ ಸಂನ್ಯಾಸವನ್ನು, 'ಕುರುಕರ್ಮೈವ ತಸ್ಮಾತ್' ಇತ್ಯಾದಿಗಳಿಂದ ವರ್ಣಾಶ್ರಯೋಚಿತವಾದ ಕರ್ಮವನ್ನು ಈಶ್ವರಾರ್ಪಣಬುದ್ಧಿಯಿಂದ ಮಾಡುವ ಕರ್ಮಯೋಗವನ್ನೂ ಪ್ರಶಂಸಿಸುತ್ತಿದ್ದೀಯೆ. ಇವೆರಡರಲ್ಲಿ ಯಾವುದು ಶ್ರೇಷ್ಠವಾದುದು ಎಂದು ನನಗೆ ನಿಶ್ಚಿತವಾಗಿ ಹೇಳು.

ಶ್ರೀಭಗವಾನ್

ಸನ್ನ್ಯಾಸಃ ಕರ್ಮಯೋಗಶ್ಚ ನಿಶ್ರೇಯಸಕರಾವುಭೌ ।
ತಯೋಸ್ತು ಕರ್ಮಸನ್ನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ॥೨॥

ಶ್ರೀಭಗವಾನ್– ಕಾಮಾದಿ ವರ್ಜನರೂಪವಾದ ಸಂನ್ಯಾಸ ಮತ್ತು ಈಶ್ವರಾರ್ಪಣ ಬುದ್ಧಿಯಿಂದ ಕರ್ಮಾನುಷ್ಠಾನರೂಪವಾದ ಕರ್ಮಯೋಗ ಇವೆರಡೂ ಮೋಕ್ಷಕ್ಕೆ ಸಾಧನಗಳು. ಅವೆರಡರಲ್ಲಿ ಕಾಮಾದಿವರ್ಜನರೂಪವಾದ ಸಂನ್ಯಾಸಕ್ಕಿಂತಲೂ ಈಶ್ವರಾರ್ಪಣಬುದ್ಧಿಯಿಂದ ಮಾಡುವ ಕರ್ಮಾನುಷ್ಠಾನರೂಪವಾದ ಕರ್ಮಯೋಗವು ಶ್ರೇಷ್ಠವಾದುದು.

ಜ್ಞೇಯಃ ಸ ನಿತ್ಯಸಂನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತಿ ।
ನಿರ್ದ್ವಂದ್ವೋ ಹಿ ಮಹಾಬಾಹೋ ಸುಖಂ ಬಂಧಾತ್ ಪ್ರಮುಚ್ಯತೇ ॥

ಎಲೈ ಮಹಾಬಾಹುವೇ, ಯಾವನು ದ್ವೇಷ, ಆಕಾಂಕ್ಷೆ ಮೊದಲಾದವುಗಳಿಂದ ರಹಿತನಾಗಿ, ಕಾಮ್ಯಕರ್ಮವನ್ನು ತ್ಯಾಗ ಮಾಡುತ್ತಾನೆಯೋ ಎಂದೂ ಇಟ್ಟುಕೊಳ್ಳಬೇಕು ಅಂತಹವನನ್ನು ನಿತ್ಯಸಂನ್ಯಾಸಿ ಎಂದು ತಿಳಿಯಬೇಕು. ದ್ವಂದ್ವಗಳನ್ನು ಮೀರಿದ ಅವನು ಸುಖವಾಗಿ ಸಂಸಾರಬಂಧದಿಂದ ಮುಕ್ತನಾಗುತ್ತಾನೆ.

ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ ।
ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿಂದತೇ ಫಲಮ್ ॥೪॥

ಸಾಂಖ್ಯಯೋಗಗಳು ಭಿನ್ನ-ಭಿನ್ನವಾದವುಗಳು ಎಂದರೆ ಸಾಧ್ಯ-ಸಾಧನ ಭಾವವಿಲ್ಲದವು ಎಂದು ಅವಿವೇಕಿಗಳು ಹೇಳುತ್ತಾರೆ. ಪಂಡಿತರು ಹಾಗೆ ಹೇಳುವುದಿಲ್ಲ. ಜ್ಞಾನಮಾರ್ಗ ಮತ್ತು ಕರ್ಮಮಾರ್ಗಗಳಲ್ಲಿ ಒಂದನ್ನು ಆಶ್ರಯಿಸಿದವನೂ ಎರಡರ ಫಲವನ್ನೂ ಪಡೆಯುತ್ತಾನೆ.

ಯತ್ ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ ಯೋಗೈರಪಿ ಗಮ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥೫॥

ವಿಶುದ್ಧಜ್ಞಾನವುಳ್ಳವರಿಂದ ಯಾವ ಸ್ಥಾನವು ಅಥವಾ ಭಗವತ್ಸ್ವರೂಪ ಲಕ್ಷಣವಾದ ಯಾವ ಸ್ಥಾನವು ದೊರೆಯಲ್ಪಡುತ್ತದೆಯೋ ಅದನ್ನು ಯೋಗಾನುಷ್ಠಾನ ಮಾಡುವವರೂ ಪಡೆಯುತ್ತಾರೆ. ಕರ್ಮಯೋಗವನ್ನು ಮಾಡುವವರೂ ಸಹ ಜ್ಞಾನದ್ವಾರಾ ಭಗವಂತನ ಪ್ರಾಪ್ತಿಯನ್ನು ಪಡೆಯುತ್ತಾರೆ ಎಂದು ಅರ್ಥ. ಆದ್ದರಿಂದ ಹೀಗೆ ಸಾಂಖ್ಯ ಮತ್ತು ಯೋಗಗಳಿಗೆ ಸಾಧ್ಯ-ಸಾಧನಭಾವವಿದೆ ಎಂದು ಯಾವನು ತಿಳಿಯುತ್ತಾನೆಯೋ ಅವನೇ ಜ್ಞಾನಿ.

ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ ।
ಯೋಗಯುಕ್ತೋ ಮುನಿರ್ಬ್ರಹ್ಮ ನಚಿರೇಣಾಧಿಗಚ್ಛತಿ ॥೬॥

ಎಲೈ ಮಹಾಬಾಹುವೇ, ಯೋಗರಹಿತವಾದ ಸಂನ್ಯಾಸವು ಕೇವಲ ದುಃಖವನ್ನು ಹೊಂದಲು ಕಾರಣವಾಗುತ್ತದೆ. ಸುಖಪ್ರಾಪ್ತಿಗೆ ಕಾರಣವಾಗುವುದಿಲ್ಲ ಮತ್ತು ಅದು ಅಸಾಧ್ಯವಾದುದು ಎಂದೂ ಅಭಿಪ್ರಾಯ. ಯೋಗಯುಕ್ತನಾದವನು ಶೀಘ್ರವಾಗಿ ಬ್ರಹ್ಮನನ್ನು ಹೊಂದುತ್ತಾನೆ.

ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ ।
ಸರ್ವಭೂತಾತ್ಮಭೂತಾತ್ಮಾ ಕುರ್ವನ್ನಪಿ ನ ಲಿಪ್ಯತೇ ॥೭॥

ಯೋಗಯುಕ್ತನಾಗಿ ಶುದ್ಧಾಂತಕರಣನಾಗಿ ಇಂದ್ರಿಯಜಯ ಮತ್ತು ಮನೋಜಯವನ್ನು ಹೊಂದಿ, ಸರ್ವಭೂತಗಳ ಅಂತರ್ಯಾಮಿಯಾದ

ಪರಮಾತ್ಮನಲ್ಲೇ ಮನಸ್ಸನ್ನು ಇಟ್ಟವನು ಏನು ಮಾಡಿದರೂ ಅದರಿಂದ ಲೇಪಕ್ಕೆ ಒಳಗಾಗುವುದಿಲ್ಲ.

ನೈವ ಕಿಂಚಿತ್ ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ ।
ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ನಶ್ನನ್ ಗಚ್ಛನ್ ಸ್ವಪನ್ ಶ್ವಸನ್ ॥

ನೋಡುವುದು, ಕೇಳುವುದು, ಸ್ಪರ್ಶ ಮಾಡುವುದು, ವಾಸನೆಯನ್ನು ನೋಡುವುದು, ತಿನ್ನುವುದು, ನಡೆಯುವುದು, ಮಲಗುವುದು, ಉಸಿರಾಡುವುದು ಮುಂತಾದ ಏನನ್ನೇ ಮಾಡಿದರೂ ಜ್ಞಾನಿಯಾದವನು ನಾನೇ ಇದನ್ನು ಸ್ವತಂತ್ರವಾಗಿ ಮಾಡುತ್ತಿದ್ದೇನೆಂದು ತಿಳಿಯಬಾರದು. ಹರಿಪ್ರೇರಣೆಯಿಂದಲೇ ಎಲ್ಲವನ್ನೂ ಮಾಡುತ್ತಿದ್ದೇನೆ ಎಂದು ತಿಳಿಯಬೇಕು.

ಪ್ರಲಪನ್ ವಿಸೃಜನ್ ಗೃಹ್ಣನ್ನುನ್ಮಿಷನ್ ನಿಮಿಷನ್ನಪಿ ।
ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್ ॥೯॥

ಅವನು ಮಾತನಾಡಲಿ, ವಿಸರ್ಜನೆಯನ್ನು ಮಾಡಲಿ, ಕೈಯಿಂದ ಹಿಡಿದುಕೊಳ್ಳಲಿ, ಕಣ್ಣನ್ನು ತೆರೆಯಲಿ ಅಥವಾ ಮುಚ್ಚಲಿ, ಏನೇ ಮಾಡಿದರೂ ಹರಿಯಿಂದ ಪ್ರೇರಿತವಾದ ಇಂದ್ರಿಯಗಳು ತಮ್ಮ ವಿಷಯಗಳಲ್ಲಿ ವ್ಯಾಪಾರ ಮಾಡುತ್ತಿವೆ ಎಂದು ತಿಳಿಯಬೇಕು.

ವಿಶೇಷ ವಿಚಾರ– ಸರ್ವವ್ಯಾಪಾರವನ್ನು ಮಾಡಿದರೂ ಹರಿಪ್ರೇರಿತವಾದ ಇಂದ್ರಿಯಗಳು ಹರಿಪ್ರೇರಿತವಾದ ಅರ್ಥಗಳಲ್ಲಿ ವ್ಯಾಪೃತವಾಗಿವೆ. ಅವನೇ ಸ್ವತಂತ್ರನಾದವನು. ನಾನು ಸ್ವತಂತ್ರವಾಗಿ ಏನನ್ನೂ ಮಾಡುವುದಿಲ್ಲ ಎಂಬ ಅನುಸಂಧಾನವೇ ದ್ವೇಷಾದಿವರ್ಜನರೂಪವಾದ ಸಂನ್ಯಾಸಕ್ಕೆ ಯೋಗರೂಪತ್ವವನ್ನು ತಂದುಕೊಡುತ್ತದೆ ಎಂದು ಎರಡು ಶ್ಲೋಕಗಳ ಒಟ್ಟು ಅಭಿಪ್ರಾಯ.

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥೧೦॥

ತಾನು ಮಾಡುವ ಎಲ್ಲ ಕರ್ಮಗಳ ವಿಷಯದಲ್ಲಿಯೂ ಫಲಕಾಮನೆಯನ್ನು ಬಿಟ್ಟು ಹರಿಯು ನನ್ನ ಶುಭಕ್ಕಾಗಿ ತನ್ನ ಪೂಜಾತ್ಮಕವಾದ ಕರ್ಮಗಳನ್ನು ನನ್ನಿಂದ ಮಾಡಿಸುತ್ತಿದ್ದಾನೆ ಎಂದು ಅನುಸಂಧಾನ ಮಾಡಿ ಯಾವನು ಕರ್ಮವನ್ನು ಮಾಡುತ್ತಾನೋ, ಅವನು ಪದ್ಮಪತ್ರವು ನೀರಿನ ಲೇಪವನ್ನು ಹೊಂದದಂತೆ ಪಾಪದ ಲೇಪವನ್ನು ಹೊಂದುವುದಿಲ್ಲ.

ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ ।
ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾ ऽऽತ್ಮಶುದ್ಧಯೇ ॥೧೧॥

ಯೋಗಿಗಳು ಕರ್ಮಫಲದಲ್ಲಿ ಸ್ನೇಹವನ್ನು ತೊರೆದು ತಮ್ಮ ಆತ್ಮಶುದ್ಧಿಗಾಗಿ ದೇಹದಿಂದ, ಮನಸ್ಸಿನಿಂದ, ಬುದ್ಧಿಯಿಂದ ಅಥವಾ ಕೇವಲ ಇಂದ್ರಿಯಗಳಿಂದಲೂ ಕರ್ಮಗಳನ್ನು ಮಾಡುತ್ತಾರೆ.

ಯುಕ್ತಃ ಕರ್ಮಫಲಂ ತ್ಯಕ್ತ್ವಾ ಶಾಂತಿಮಾಪ್ನೋತಿ ನೈಷ್ಠಿಕೀಮ್ ।
ಅಯುಕ್ತಃ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ ॥೧೨॥

ಯೋಗಯುಕ್ತನಾದವನು ಕರ್ಮಫಲದಲ್ಲಿ ಸ್ನೇಹವನ್ನು ತೊರೆದು ಶಾಶ್ವತವಾದ ಶಾಂತಿಯನ್ನು ಪಡೆಯುತ್ತಾನೆ. ಯೋಗರಹಿತನಾದವನು ತನ್ನ ಇಚ್ಛೆಗೆ ಅನುಗುಣವಾಗಿ ಫಲದಲ್ಲಿ ಆಸಕ್ತನಾಗಿ ಸಂಸಾರಬಂಧನಕ್ಕೆ ಒಳಗಾಗುತ್ತಾನೆ.

ಸರ್ವಕರ್ಮಾಣಿ ಮನಸಾ ಸಂನ್ಯಸ್ಯಾಸ್ತೇ ಸುಖಂ ವಶೀ ।
ನವದ್ವಾರೇ ಪುರೇ ದೇಹೀ ನೈವ ಕುರ್ವನ್ನ ಕಾರಯನ್ ॥೧೩॥

ಜಿತೇಂದ್ರಿಯನೂ, ಜಿತಮನಸ್ಕನೂ ಆದ ಅವನು ಸರ್ವಕರ್ಮಗಳನ್ನು ಮನಸ್ಸಿನಲ್ಲಿಯೇ ತ್ಯಾಗವನ್ನು ಮಾಡಿ - ಮನಸ್ಸಿನಿಂದಲೇ ತ್ಯಾಗವೆಂದರೆ ಎಲ್ಲ ಕರ್ಮಗಳನ್ನು ಹರಿಯೇ ಮಾಡಿಸುತ್ತಿದ್ದಾನೆ, ನನ್ನ ಕರ್ತೃತ್ವ ಶಕ್ತಿಯು ಈಶಾಧೀನವಾದುದು ಎಂಬ ಜ್ಞಾನವನ್ನು ಹೊಂದಿ, ನವದ್ವಾರವಿರುವ ಈ ಶರೀರದಲ್ಲಿ ಯಾವುದನ್ನೂ ಸ್ವತಂತ್ರವಾಗಿ ಮಾಡುತ್ತಿದ್ದೇನೆಂದು ತಿಳಿಯದೆ ಇರುತ್ತಾನೆಯೋ ಅವನು ಸುಖವಾಗಿರುತ್ತಾನೆ.

ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।
ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥೧೪॥

ಹರಿಯು ಲೋಕಕ್ಕೆ ಸ್ವತಂತ್ರಕರ್ತೃತ್ವವನ್ನು ಸೃಷ್ಟಿ ಮಾಡುವುದಿಲ್ಲ. ಸ್ವತಂತ್ರ ಕರ್ಮಗಳನ್ನೂ ಸೃಷ್ಟಿ ಮಾಡುವುದಿಲ್ಲ. ಕರ್ಮಫಲಸಂಯೋಗವನ್ನೂ ಸ್ವತಂತ್ರವಾಗಿರಲೆಂದು ಸೃಷ್ಟಿ ಮಾಡುವುದಿಲ್ಲ. ಎಲ್ಲವೂ ಸ್ವತಂತ್ರನಾದ ಹರಿಯ ಚೇಷ್ಟೆಯಿಂದ ನಡೆಯುತ್ತದೆ.

ನಾದತ್ತೇ ಕಸ್ಯಚಿತ್ ಪಾಪಂ ನ ಚೈವ ಸುಕೃತಂ ವಿಭುಃ ।
ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ ॥೧೫॥

ಹರಿಯೇ ಎಲ್ಲವನ್ನು ಮಾಡಿಸಿದರೂ ಅಶುಭಕರ್ಮದಿಂದ ಉಂಟಾದ ಯಾವ ಪಾಪವನ್ನೂ ತಾನು ತೆಗೆದುಕೊಳ್ಳುವುದಿಲ್ಲ. ಶುಭಕರ್ಮದಿಂದ ಉಂಟಾದ ಪುಣ್ಯವನ್ನೂ ತಾನು ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಅವನು ವಿಭು- ಸಮರ್ಥನಾದವನು. ಆದರೂ ಇಂತಹ ಜ್ಞಾನವು ಎಲ್ಲರಿಗೂ ಇರುವುದಿಲ್ಲ. ಏಕೆಂದರೆ ಅವರ ಜ್ಞಾನವು ಅಜ್ಞಾನದಿಂದ ಆವೃತವಾಗಿರುತ್ತದೆ. ಆದ್ದರಿಂದ ಜೀವರು ಮೋಹಕ್ಕೆ ಒಳಗಾಗುತ್ತಾರೆ.

ಜ್ಞಾನೇನ ತು ತದಜ್ಞಾನಂ ಯೇಷಾಂ ನಾಶಿತಮಾತ್ಮನಃ ।
ತೇಷಾಮಾದಿತ್ಯವಜ್ಜ್ಞಾನಂ ಪ್ರಕಾಶಯತಿ ತತ್ಪರಮ್ ॥೧೬॥

ಯಾರಿಗೆ ಆ ಅಜ್ಞಾನವು ಜ್ಞಾನದಿಂದ ನಾಶವನ್ನು ಹೊಂದುತ್ತದೆಯೋ ಅವರ ಜ್ಞಾನವು ಸೂರ್ಯನಂತೆ ವಿಷ್ಣುರೂಪವಾದ ಪರಬ್ರಹ್ಮನನ್ನು ಪ್ರಕಾಶಿಸುತ್ತದೆ.

ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾಸ್ತತ್ಪರಾಯಣಾಃ ।
ಗಚ್ಛಂತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ ॥೧೭॥

ಪುನಃ ಪುನಃ ಅವನ ಮಹಿಮೆಯನ್ನೇ ಆವೃತ್ತಿ ಮಾಡುವ ಬುದ್ಧಿಯುಳ್ಳವರಾಗಿ ಅವನೇ ತಮಗೆ ಅದಾನಾದಿಕರ್ತನಾದ ಸ್ವಾಮಿಯೆಂದು ತಿಳಿದು, ಅವನಲ್ಲಿ ಅಚಂಚಲವಾದ ಶ್ರದ್ಧೆಯನ್ನು ಹೊಂದಿ, ಅವನನ್ನೇ ಶ್ರೇಷ್ಠವಾದ ಆಶ್ರಯವೆಂದು ತಿಳಿದ ಜ್ಞಾನಿಗಳು ತಮ್ಮ ಜ್ಞಾನದಿಂದ ಎಲ್ಲ ಪಾಪಗಳನ್ನೂ ಕಳೆದುಕೊಂಡು ಪುನರಾವೃತ್ತಿ ರಹಿತವಾದ ಮೋಕ್ಷವನ್ನು ಪಡೆಯುತ್ತಾರೆ.

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥೧೮॥

ಜ್ಞಾನಿಗಳಾದವರು ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣನಲ್ಲಿ, ಗೋವಿನಲ್ಲಿ, ಗಜದಲ್ಲಿ, ಶ್ವಾನದಲ್ಲಿ ಮತ್ತು ಶ್ವಪಾಕನಲ್ಲಿ ಇರುವ ಪರಮಾತ್ಮನ ರೂಪಗಳು ನಿತ್ಯಶುದ್ಧತ್ವ, ಸರ್ವಜ್ಞತ್ವ ಮೊದಲಾದ ಗುಣಗಳಿಂದ ಸಮಾನವಾಗಿವೆ ಎಂದು ತಿಳಿಯುತ್ತಾರೆ.

ವಿಶೇಷ ವಿಚಾರ– 'ನ ಸ್ಥಾನತೋಪಿಪರಸ್ಯೋ ಭಯಲಿಂಗಂ ಸರ್ವತ್ರಹಿ' ಎಂಬ ಬ್ರಹ್ಮಸೂತ್ರದಲ್ಲಿ ಸ್ಥಾನಭೇದದಿಂದ ಹರಿಯ ಮಹಿಮೆಯಲ್ಲಿ ವ್ಯತ್ಯಾಸವಿಲ್ಲವೆಂದು ಹೇಳಿದ್ದಾರೆ. 'ನಿರ್ದೋಷಂ ಹಿ ಸಮಂ ಬ್ರಹ್ಮ' ಎಂಬ ಮುಂದಿನ ಶ್ಲೋಕದಲ್ಲಿ 'ಸಮ' ಪದಕ್ಕೆ ಕೃಷ್ಣನೇ ವ್ಯಾಖ್ಯಾನ ಮಾಡಿದ್ದಾನೆ. ಬ್ರಾಹ್ಮಣಾದಿ ಎಲ್ಲರಲ್ಲಿಯೂ ಸಾಮ್ಯವನ್ನೇ ಕಾಣುತ್ತಾರೆ ಎಂದು ಯಾರಿಗೆ ಆಸೆ ಇದೆಯೋ ಅವರಿಗೆ ಸಮಪದವೇ ವಿಷಮವಾಗುತ್ತದೆ. ಅವರ ಅಭಿಪ್ರಾಯದಂತೆ ಸಾಮ್ಯದರ್ಶಿನಃ ಎಂದು ಇರಬೇಕಾಗಿದ್ದಿತು, ಸಮದರ್ಶಿನಃ ಎಂದು ಇದೆ. ಗೋವು, ನಾಯಿ, ಬ್ರಾಹ್ಮಣ ಎಲ್ಲರಿಗೂ ಸಾಮ್ಯದರ್ಶನವು ಅನುಭವ ವಿರುದ್ಧವೂ ಮತ್ತು ಸ್ಮೃತಿವಿರುದ್ಧವೂ ಆಗಿದೆ. ನಾಯಿಯನ್ನು ಮುಟ್ಟಿದರೆ ಸ್ನಾನವನ್ನು ವಿಧಾನ ಮಾಡುತ್ತಾರೆ. ಗೋವನ್ನು ಮುಟ್ಟಿದರೆ ಪುಣ್ಯವನ್ನು ವಿಧಾನ ಮಾಡುತ್ತಾರೆ. ಪರ್ವಕಾಲಗಳಲ್ಲಿ ಗೋದಾನವನ್ನು ವಿಧಾನ ಮಾಡಿದ್ದಾರೆ. ನಾಯಿಗಳ ದಾನವನ್ನು ವಿಧಾನ ಮಾಡಿಲ್ಲ.

ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ ।
ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ ಬ್ರಹ್ಮಣಿ ತೇ ಸ್ಥಿತಾಃ ॥೧೯॥

ಯಾರ ಮನಸ್ಸು ಉತ್ಸೇಕ, ಅನುತ್ಸೇಕಗಳಿಗೆ ಒಳಗಾಗದೆ ಸಾಮ್ಯಸ್ಥಿತಿಯಲ್ಲಿ ಇರುತ್ತದೆಯೋ ಅವರು ಇಲ್ಲಿಯೇ ಸ್ವರ್ಗವನ್ನು ಗೆದ್ದಿದ್ದಾರೆ. ನಿರ್ದೋಷನಾದ ಬ್ರಹ್ಮನೇ ಸಮನಾದವನು. ಆದ್ದರಿಂದ ಅವರ ಮನಸ್ಸು ಬ್ರಹ್ಮನಲ್ಲಿಯೇ ಇರುವುದರಿಂದ ಅವರು ಅವನಲ್ಲಿಯೇ ಇದ್ದಾರೆ.

ನ ಪ್ರಹೃಷ್ಯೇತ್ ಪ್ರಿಯಂ ಪ್ರಾಪ್ಯ ನೋದ್ವಿಜೇತ್ ಪ್ರಾಪ್ಯ ಚಾಪ್ರಿಯಮ್ ।
ಸ್ಥಿರಬುದ್ಧಿರಸಂಮೂಢೋ ಬ್ರಹ್ಮವಿದ್ ಬ್ರಹ್ಮಣಿ ಸ್ಥಿತಃ ॥೨೦॥

ಪ್ರಿಯವನ್ನು ಹೊಂದಿ ಹಿಗ್ಗಲಾರದು, ಅಪ್ರಿಯವನ್ನು ಹೊಂದಿ ಕುಗ್ಗಲೂ ಬಾರದು. ಬ್ರಹ್ಮಜ್ಞಾನಿಯಾದವನು ಬ್ರಹ್ಮನಲ್ಲೇ ಮನಸ್ಸನ್ನಿಟ್ಟು ಸ್ಥಿರವಾದ ಬುದ್ಧಿಯುಳ್ಳವನಾಗಿ ಯಾವ ಮೋಹಕ್ಕೂ ಒಳಗಾಗುವುದಿಲ್ಲ.

ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿ ಯತ್ ಸುಖಮ್ ।
ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯಮಶ್ನುತೇ ॥೨೧॥

ಬಾಹ್ಯಶಬ್ದಾದಿಗಳ ಸಂಯೋಗದಿಂದ ಉಂಟಾಗುವ ಸುಖದಲ್ಲಿ ಆಸಕ್ತಿ ರಹಿತನಾದ ಮನಸ್ಸುಳ್ಳವನು ತನ್ನ ಮನಸ್ಸಿನಲ್ಲಿ ಯಾವ ಸುಖವನ್ನು ಹೊಂದುತ್ತಾನೆಯೋ ಬ್ರಹ್ಮಯೋಗದಿಂದ ಯುಕ್ತನಾದ ಮನಸ್ಸುಳ್ಳವನು ಅದಕ್ಕಿಂತ ಅಕ್ಷಯವಾದ ಸುಖವನ್ನು ಹೊಂದುತ್ತಾನೆ.

ವಿಶೇಷ ವಿಚಾರ– ಕಾಮಾದಿ ತ್ಯಾಗದಿಂದ ಉಂಟಾಗುವ ಸುಖಕ್ಕಿಂತ ಸರ್ವತ್ರ ಬ್ರಹ್ಮನ ಅನುಸಂಧಾನದಿಂದ ಬ್ರಹ್ಮನಲ್ಲಿ ಸಮರ್ಪಣೆ ಮಾಡುವ ಕರ್ಮಯೋಗ ಉಳ್ಳವನು ಶ್ರೇಷ್ಠವಾದ ಸುಖವನ್ನು ಪಡೆಯುತ್ತಾನೆ ಎಂದು ಅಭಿಪ್ರಾಯ.

ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ ।
ಆದ್ಯಂತವಂತಃ ಕೌಂತೇಯ ನ ತೇಷು ರಮತೇ ಬುಧಃ ॥೨೨॥

ವಿಷಯಸಂಯೋಗದಿಂದ ಉಂಟಾಗುವ ಭೋಗಗಳು ಏನಿವೆಯೋ ಅವೆಲ್ಲವೂ ದುಃಖಕ್ಕೇ ಕಾರಣವಾದವುಗಳು. ಎಲೈ ಕೌಂತೇಯನೇ, ಅವುಗಳು ಆದಿ ಮತ್ತು ಅಂತ್ಯವನ್ನು ಹೊಂದಿದವುಗಳು. ಜ್ಞಾನಿಯಾದವನು ಅವುಗಳಲ್ಲಿ ಸಂತೋಷ ಪಡುವುದಿಲ್ಲ.

ಶಕ್ನೋತೀಹೈವ ಯಃ ಸೋಢುಂ ಪ್ರಾಕ್‌ಶರೀರವಿಮೋಕ್ಷಣಾತ್ ।
ಕಾಮಕ್ರೋಧೋದ್ಭವಂ ವೇಗಂ ಸ ಯುಕ್ತಃ ಸ ಸುಖೀ ನರಃ ॥೨೩॥

ಯಾವ ಮನುಷ್ಯನು ಶರೀರತ್ಯಾಗಕ್ಕಿಂತಲೂ ಮೊದಲು ಇಲ್ಲಿಯೇ (ಕಾಮ ಕ್ರೋಧಗಳನ್ನು ಬಿಡಲಾಗದಿದ್ದರೂ) ಕಾಮ-ಕ್ರೋಧಗಳಿಂದ ಉಂಟಾಗುವ ವೇಗವನ್ನು ಸಹಿಸಲು (ಕಡಿಮೆ ಮಾಡಲು) ಸಮರ್ಥನಾಗುತ್ತಾನೆಯೋ ಅಂತಹ ಮನುಷ್ಯನು ಯೋಗಯುಕ್ತನಾದವನು ಮತ್ತು ಸುಖಿಯಾದವನು.

ಯೋಽಂತಃಸುಖೋಽಂತರಾರಾಮಸ್ತಥಾಽಂತರ್ಜ್ಯೋತಿರೇವ ಯಃ ।
ಸ ಯೋಗೀ ಬ್ರಹ್ಮ ನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ ॥೨೪॥

ಯಾವನು ಹರಿಧ್ಯಾನದಿಂದ ತನ್ನ ಒಳಗೇ ಸುಖವನ್ನು ಹೊಂದಿರುತ್ತಾನೆಯೋ, ಒಳಗಿರುವ ಅಂತರ್ಯಾಮಿಯಾದ ಹರಿಯ ಚಿಂತನೆಯಿಂದಲೇ ಸಂತೋಷವನ್ನು ಪಡುತ್ತಾನೆಯೋ ಮತ್ತು ಒಳಗೆ ಅಂತರ್ಯಾಮಿಯಾಗಿರುವ ಹರಿಯ ಅಪರೋಕ್ಷ

ಜ್ಞಾನವನ್ನು ಹೊಂದಿರುತ್ತಾನೆಯೋ ಅಂತಹ ಯೋಗಿಯು ಬ್ರಹ್ಮನಲ್ಲೇ ಇರುವವನಾಗಿ ಬ್ರಹ್ಮನಿಷ್ಠನಾಗಿ ಪ್ರಾಕೃತ ಶರೀರರಹಿತವಾದ ಮೋಕ್ಷಾವಸ್ಥೆಯನ್ನು ಕೊಡುವ ಬ್ರಹ್ಮನನ್ನೇ ಹೊಂದುತ್ತಾನೆ.

ಲಭಂತೇ ಬ್ರಹ್ಮ ನಿರ್ವಾಣಮೃಷಯಃ ಕ್ಷೀಣಕಲ್ಮಷಾಃ ।
ಛಿನ್ನದ್ವೈಧಾ(SS)ಯತಾತ್ಮಾನಃ ಸರ್ವಭೂತಹಿತೇ ರತಾಃ ॥೨೫॥

ತಮ್ಮ ಪಾಪಗಳನ್ನು ಕಳೆದುಕೊಂಡು, ಸಂಶಯಗಳನ್ನೂ ಕಳೆದುಕೊಂಡು ಯಾವಾಗಲೂ ಮೋಕ್ಷಾರ್ಥಿ ಪ್ರಯತ್ನಶೀಲರಾಗಿ ಸರ್ವಪ್ರಾಣಿಗಳ ಹಿತರಲ್ಲಿ ಆಸಕ್ತರಾದ ಋಷಿಗಳು ಮೋಕ್ಷಪ್ರದನಾದ ಅಥವಾ ಪ್ರಾಕೃತದೇಹ ರಹಿತನಾದ ಬ್ರಹ್ಮನನ್ನು ಹೊಂದುತ್ತಾರೆ.

ಕಾಮಕ್ರೋಧವಿಯುಕ್ತಾನಾಂ ಯತೀನಾಂ ಯತಚೇತಸಾಮ್ ।
ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಾಮ್ ॥೨೬॥

ಕಾಮ-ಕ್ರೋಧ ರಹಿತರಾದ, ಜಿತಮನಸ್ಕರಾದ, ಪ್ರಯತ್ನಶೀಲರಾದ, ಪರಮಾತ್ಮ ತತ್ತ್ವವನ್ನು ಚೆನ್ನಾಗಿ ತಿಳಿದ ಜ್ಞಾನಿಗಳಿಗೆ ನಿರ್ವಾಣನಾದ ಬ್ರಹ್ಮನು ಎಲ್ಲ ಕಡೆಯಲ್ಲಿಯೂ ರಕ್ಷಕನಾಗಿ ಇರುತ್ತಾನೆ.

ಸ್ಪರ್ಶಾನ್ ಕೃತ್ವಾ ಬಹಿರ್ಬಾಹ್ಯಾಂಶ್ಚಕ್ಷುಶ್ಚೈವಾಂತರೇ ಭ್ರುವೋಃ ।
ಪ್ರಾಣಾಪಾನೌ ಸಮೌ ಕೃತ್ವಾ ನಾಸಾಭ್ಯಂತರಚಾರಿಣೌ ॥೨೭॥

ಯತೇಂದ್ರಿಯಮನೋಬುದ್ಧಿರ್ಮುನಿರ್ಮೋಕ್ಷಪರಾಯಣಃ ।
ವಿಗತೇಚ್ಛಾಭಯಕ್ರೋಧೋ ಯಃ ಸದಾ ಮುಕ್ತ ಏವ ಸಃ ॥೨೮॥

ಬಾಹ್ಯವಾದ ಶಬ್ದಾದಿಗಳ ಅನುಭವವನ್ನು ದೂರ ಮಾಡಿ, ದೃಷ್ಟಿಯನ್ನು ಭ್ರೂ ಮಧ್ಯದಲ್ಲಿ ನಿಲ್ಲಿಸಿ, ನಾಸಿಕೆಯಲ್ಲಿ ಸಂಚರಿಸುವ ಪ್ರಾಣಾಪಾನಗಳನ್ನು ಸಮಾನವಾಗಿ ಮಾಡಿ ತಮ್ಮ ಇಂದ್ರಿಯ, ಮನಸ್ಸು, ಬುದ್ಧಿಗಳನ್ನು ನಿಯಂತ್ರಣದಲ್ಲಿಟ್ಟು, ಕಾಮ-ಕ್ರೋಧ ಭಯಗಳನ್ನು ತ್ಯಜಿಸಿ ಮೋಕ್ಷಪರನಾಗಿರುವ ಮುನಿಯು ಅವನು ಯಾವಾಗಲೂ ಮುಕ್ತನೇ ಆಗಿದ್ದಾನೆ.

ಭೋಕ್ತಾರಂ ಯಜ್ಞತಪಸಾಂ ಸರ್ವಲೋಕಮಹೇಶ್ವರಮ್ ।
ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾಂತಿಮೃಚ್ಛತಿ ॥೨೯॥

ಸರ್ವಯಜ್ಞಭೋಕ್ತೃವಾದ, ಸರ್ವತಪಸ್ಸುಗಳಿಗೆ ಉದ್ದೇಶನಾದ, ಸರ್ವಲೋಕಗಳಿಗೂ ಮಹಾಪ್ರಭುವಾದ, ಎಲ್ಲ ಜೀವರಿಗೂ ಹಿತನಾದ ನನ್ನನ್ನು ತಿಳಿದು ಜ್ಞಾನಿಯು ಮೋಕ್ಷವನ್ನು ಹೊಂದುತ್ತಾನೆ.

ವಿಶೇಷ ವಿಚಾರ– ಹಿಂದಿನ ಎರಡು ಶ್ಲೋಕಗಳಲ್ಲಿ ಧ್ಯಾನಪ್ರಕಾರವನ್ನೂ, ಈ ಶ್ಲೋಕದಲ್ಲಿ ಧ್ಯೇಯವಾದ ವಸ್ತುವಿನ ಸ್ವರೂಪವನ್ನೂ ಹೇಳಿದ್ದಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಸಪ್ತವಿಂಶೋऽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆಂಟನೆಯ ಅಧ್ಯಾಯ

ಭಗವದ್ಗೀತಾ – ಆತ್ಮಸಂಯಮ ಯೋಗ.

ಶ್ರೀಭಗವಾನ್

ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ ।
ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ ॥೧॥

ಶ್ರೀಭಗವಾನ್– ಕರ್ಮಯೋಗಸಾಧ್ಯವಾದ, ಜ್ಞಾನಯೋಗ್ಯಕ್ಕೆ ಅಂತರಂಗ ಸಾಧನವಾದ, ಸಮಾಧಿ ಯೋಗವನ್ನು ಈ ಅಧ್ಯಾಯದಲ್ಲಿ ವಿಸ್ತಾರವಾಗಿ ಹೇಳುತ್ತಾರೆ.

ಯಾವನು ಕರ್ಮದ ಫಲವನ್ನು ಉದ್ದೇಶಿಸದೆ ತನ್ನ ವರ್ಣಾಶ್ರಮಗಳಿಗೆ ಉಚಿತವಾದ ಕರ್ತವ್ಯವಾದ ಕರ್ಮವನ್ನು ಮಾಡುತ್ತಾನೆಯೋ ಅವನೇ ಸಂನ್ಯಾಸಿ ಮತ್ತು ಅವನೇ ಯೋಗಿ. ಅವನೇ ಧ್ಯಾನಾಧಿಕಾರಿ ಎಂದು ಅಭಿಪ್ರಾಯ. ಸಾಂಖ್ಯರು ಹೇಳುವಂತೆ ಅಗ್ನಿಹೋತ್ರಾದಿ ಕ್ರಿಯೆಗಳನ್ನು ತ್ಯಾಗ ಮಾಡಿದವನು ಮತ್ತು ನಿಸ್ಸಂಗತೆಯಿಂದ ಜೀವಿಸುವವನು ಸಂನ್ಯಾಸಿಯೂ ಅಲ್ಲ, ಯೋಗಿಯೂ ಅಲ್ಲ.

ಯಂ ಸಂನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಂಡವ ।
ನ ಹ್ಯಸಂನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ ॥೨॥

ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥೩॥

ಎಲೈ ಪಾಂಡವನೇ, ಯಾವುದನ್ನು ಕರ್ಮಸಂನ್ಯಾಸವೆಂದು ಹೇಳುತ್ತಾರೆಯೋ ಅದೇ ಕರ್ಮಯೋಗ. ಯಾವನು ಫಲೋದ್ದೇಶವನ್ನು ತ್ಯಜಿಸದೆ ಫಲಕಾಮನೆಯಿಂದ ಕೂಡಿರುತ್ತಾನೆಯೋ ಅವನು ಯೋಗಿಯಾಗುವುದಿಲ್ಲ. ಯೋಗದ ತುಟ್ಟತುದಿಯನ್ನು ಏರಲು ಬಯಸುವ ಪರೋಕ್ಷ ಜ್ಞಾನಿಗೆ ಉತ್ತಮ-ಅಧಮ-ಮಧ್ಯಮ ಜನರ ಸೇವೆ ಎಂಬ ಕರ್ಮವು ಅಂತಹ ಯೋಗಾರೋಹಕ್ಕೆ ಕಾರಣವೆಂದು ಹೇಳಲ್ಪಡುತ್ತದೆ. ಯೋಗದ ತುಟ್ಟತುದಿಯನ್ನು ತಲುಪಿ ಅಪರೋಕ್ಷ ಜ್ಞಾನಿಯಾದವನಿಗೆ ಅಂತಹ ಕರ್ಮದ ಉಪಶಮವು ಎಂದರೆ ನಿವೃತ್ತಿಯು ಹೇಳಲ್ಪಡುತ್ತದೆ. ಧ್ಯಾನದ ಉಪಶಮವು ಹೇಳಲ್ಪಡುವುದಿಲ್ಲ. ಏಕೆಂದರೆ ಧ್ಯಾನವನ್ನು ಮಾಡಲೇಬೇಕು.

ಯದಾ ಹಿ ನೇಂದ್ರಿಯಾರ್ಥೇಷು ನ ಕರ್ಮಸ್ವನುಷಜ್ಜತೇ ।
ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಸ್ತದೋಚ್ಯತೇ ॥೪॥

ಯಾವಾಗ ಇಂದ್ರಿಯಗಳ ವಿಷಯವಾದ ಶಬ್ದಾದಿಗಳಲ್ಲಿಯೂ ಮತ್ತು ಕರ್ಮಗಳಲ್ಲಿಯೂ ಅಪ್ರಯತ್ನದಿಂದಲೇ ಸ್ನೇಹರಹಿತನಾಗುತ್ತಾನೆಯೋ ಮತ್ತು ಸರ್ವಸಂಕಲ್ಪ ತ್ಯಾಗ ಎಂದರೆ ಮಮತಾ ತ್ಯಾಗವನ್ನು ಮಾಡುತ್ತಾನೆಯೋ, ಎಂದರೆ ಸಂಕಲ್ಪ, ಕ್ರಿಯೆ ಮೊದಲಾದವುಗಳೆಲ್ಲವೂ ಭಗವದಧೀನವೆಂದು ತಿಳಿಯುತ್ತಾನೆಯೋ ಆಗ ಅವನು ಯೋಗದ ತುದಿಯನ್ನು ತಲುಪುತ್ತಾನೆ.

ಉದ್ಧರೇದಾತ್ಮನಾऽऽತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥೫॥

ತನ್ನನ್ನು ತನ್ನಿಂದಲೇ ಉದ್ಧಾರ ಮಾಡಿಕೊಳ್ಳಬೇಕು. ತನ್ನನ್ನು ಕ್ಲೇಶಭಾಜನನನ್ನಾಗಿ ಮಾಡಿಕೊಳ್ಳಬಾರದು. ಪುಣ್ಯವನ್ನು ಮಾಡಿದರೆ ತಾನೇ ತನಗೆ ಬಂಧು. ಪಾಪವನ್ನು ಮಾಡಿದರೆ ತಾನೇ ತನಗೆ ಶತ್ರುವಾಗುತ್ತಾನೆ ಅಥವಾ ಆತ್ಮ ಎಂದರೆ ಮನಸ್ಸು ಎಂದು

ಅರ್ಥವನ್ನಿಟ್ಟುಕೊಂಡು ತನಗೆ ಮನಸ್ಸೇ ಬಂಧು ಮತ್ತು ಮನಸ್ಸೇ ಶತ್ರುವಾಗುತ್ತದೆ ಎಂದು ಅರ್ಥ.

ಬಂಧುರಾತ್ಮಾऽऽತ್ಮನಸ್ತಸ್ಯ ಯೇನಾತ್ಮೈವಾತ್ಮನಾ ಜಿತಃ ।
ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ॥೬॥

ಯಾವ ಜೀವನು ತನ್ನ ಬುದ್ಧಿಯಿಂದ ತನ್ನ ಮನಸ್ಸನ್ನು ವಶಪಡಿಸಿಕೊಳ್ಳುತ್ತಾನೆಯೋ, ಅವನಿಗೆ ತನ್ನ ಮನಸ್ಸೇ ಬಂಧುವಾಗುತ್ತದೆ. ಮನೋಜಯವಿಲ್ಲದವನಿಗೆ ಯಾರಿಂದಲಾದರೂ ಶತ್ರುತ್ವವು ಉಂಟಾಗುವುದಾದರೆ ತನ್ನ ಮನಸ್ಸೇ ಶತ್ರುವಿನಂತೆ ಇರುತ್ತದೆ.

ಯಾರ ಜೊತೆಯಲ್ಲಾದರೂ ಕಲಹವನ್ನು ಮಾಡಬೇಕಾದರೆ ತನ್ನ ಚಿತ್ತವನ್ನು ಕುರಿತು ತಾನೇ ಶತ್ರುವಿನಂತೆ ವರ್ತಿಸಬೇಕು. ಕಲಹ ಮಾಡುವವರ ಜೊತೆಯಲ್ಲಿ ಕಲಹವನ್ನು ಮಾಡಬಾರದು. ಅದಕ್ಕೆ ಬದಲಾಗಿ ತನ್ನ ಚಿತ್ತವನ್ನೇ ಶಾಂತವನ್ನಾಗಿ ಮಾಡಿಕೊಳ್ಳಬೇಕು.

ಜಿತಾತ್ಮನಃ ಪ್ರಶಾಂತಸ್ಯ ಪರಮಾತ್ಮಾ ಸಮಾಹಿತಃ ।

ಮನೋಜಯವನ್ನು ಹೊಂದಿ ಭಕ್ತಿಯಿಂದ ಭಗವಂತನನ್ನು ವಶಪಡಿಸಿಕೊಂಡವನಿಗೆ ಪ್ರಶಾಂತಿ ಉಂಟಾಗುತ್ತದೆ. ಅವನ ಮನಸ್ಸು ಪರಮಾತ್ಮನಲ್ಲೇ ಕೇಂದ್ರೀಕೃತವಾಗಿ ಸಹಜವಾಗಿಯೇ ವಿಷಯದ ಕಡೆಗೆ ಹೋಗುವುದಿಲ್ಲ.

ಶೀತೋಷ್ಣಸುಖದುಃಖೇಷು ತಥಾ ಮಾನಾಪಮಾನಯೋಃ ॥೭॥

ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ ।
ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಂಚನಃ ॥೮॥

ಶೀತೋಷ್ಣಗಳಿಂದ ಸುಖ-ದುಃಖಗಳು ಉಂಟಾದಾಗ ಹಾಗೆಯೇ ಮಾನಾಪಮಾನಗಳು ಉಂಟಾದಾಗ ಯಾವನು ಜಿತೇಂದ್ರಿಯನಾಗಿ ಜ್ಞಾನ-ವಿಜ್ಞಾನಗಳಿಂದ ತೃಪ್ತನಾಗಿ ನಿರ್ವಿಕಾರನಾಗಿರುತ್ತಾನೆಯೋ ಹಾಗೆಯೇ ಮಣ್ಣುಹೆಂಟೆ, ಕಲ್ಲು ಮತ್ತು ಸುವರ್ಣಗಳಲ್ಲಿ ಸಮಾನವಾಗಿ ಅನಾಸಕ್ತನಾಗಿರುತ್ತಾನೆಯೋ ಅಂತಹವನನ್ನು ಭಗವದ್ಯೋಗಯುಕ್ತನಾದ ಯೋಗಿ ಎಂದು ಕರೆಯುತ್ತಾರೆ.

ವಿಶೇಷ ವಿಚಾರ- ವೇದಾದಿಗಳಲ್ಲಿ ಎಲ್ಲ ಕಡೆಯಲ್ಲಿಯೂ ಹೇಳಲ್ಪಡುವ ವಿಷ್ಣುವಿನ ಸರ್ವೋತ್ತಮತ್ವದ ಜ್ಞಾನವು ಜ್ಞಾನವೆಂದು ಹೇಳಲ್ಪಡುತ್ತದೆ. ವೇದಗಳಲ್ಲಿ ಅಲ್ಲಲ್ಲಿ ಹೇಳಲ್ಪಡುವ ಅವನ ವಿಶೇಷ ಮಹಿಮೆಗಳು ವಿಜ್ಞಾನವೆಂದು ಹೇಳಲ್ಪಡುತ್ತದೆ.

ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥದ್ವೇಷ್ಯಬಂಧುಷು ।
ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ ॥೯॥

ಹಿತೈಷಿ, ಸ್ನೇಹಿತ, ಶತ್ರು, ಉದಾಸೀನ, ಮಧ್ಯಸ್ಥ, ದ್ವೇಷ ವಿಷಯನಾದವನು, ಬಂಧುಗಳು, ಸಾಧುಗಳು ಮತ್ತು ಪಾಪಿಗಳಲ್ಲಿ ಯಾವನು ತನ್ನ ರೂಪಗಳಲ್ಲಿ ಸಮನಾದ ನಾರಾಯಣನ ಅಂತರ್ಯಾಮಿತ್ವದ ಜ್ಞಾನವನ್ನು ಹೊಂದುತ್ತಾನೆಯೋ ಅವನು ವಿಶಿಷ್ಟನಾದ ಯೋಗಿಯಾಗುತ್ತಾನೆ.

ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ ।
ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ ॥೧೦॥

ಯೋಗಿಯಾಗುವವನು ಸತತವಾಗಿ ಏಕಾಂತದಲ್ಲಿ ಒಬ್ಬನೇ ಕುಳಿತು ತನ್ನ ಮನಸ್ಸಿನ ಆಸೆಗಳನ್ನು ತೊರೆದು, ಪರಿಗ್ರಹಗಳನ್ನು ತ್ಯಜಿಸಿ, ಮನಸ್ಸಿನ ಪ್ರಯತ್ನಗಳನ್ನೂ ತ್ಯಜಿಸಿ, ಸತತವಾಗಿ ಯೋಗವನ್ನು ಮಾಡಬೇಕು.

ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ ।
ನಾತ್ಯುಚ್ಛ್ರಿತಂ ನಾತಿನೀಚಂ ಚೇಲಾಜಿನಕುಶೋತ್ತರಮ್ ॥೧೧॥

ಶುಚಿಯಾದ ದೇಶದಲ್ಲಿ ಬಹಳ ಎತ್ತರವೂ ಅಲ್ಲದ ಮತ್ತು ತಗ್ಗೂ ಅಲ್ಲದ ಸ್ಥಳದಲ್ಲಿ ಕುಶ(ದರ್ಭೆ)ಗಳು, ಅದರ ಮೇಲೆ ಅಜಿನ (ಕೃಷ್ಣಾಜಿನ), ಅದರ ಮೇಲೆ ಚೇಲ (ಧಾವಳಿ) ಇವುಗಳಿಂದ ತನಗೆ ಸ್ಥಿರವಾದ ಆಸನವನ್ನು ಕಲ್ಪಿಸಿಕೊಳ್ಳಬೇಕು.

ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ ।
ಉಪವಿಶ್ಯಾಸನೇ ಯುಂಜ್ಯಾದ್ ಯೋಗಮಾತ್ಮವಿಶುದ್ಧಯೇ ॥೧೨॥

ಅಲ್ಲಿ ಮನಸ್ಸನ್ನು ಏಕಾಗ್ರವನ್ನಾಗಿ ಮಾಡಿ, ಚಿತ್ತದ ವ್ಯಾಪಾರಗಳನ್ನು ಮತ್ತು ಇಂದ್ರಿಯಗಳ ವ್ಯಾಪಾರಗಳನ್ನು ನಿಯಂತ್ರಿಸಿ, ಆಸನದಲ್ಲಿ ಕುಳಿತು ತನ್ನ ಅಂತಃಕರಣದ

ಶುದ್ಧಿಗಾಗಿ ಧ್ಯಾನ ಯೋಗವನ್ನು ಅಭ್ಯಾಸ ಮಾಡಬೇಕು (ಅಂತಃಕರಣದ ಶುದ್ಧಿಗಾಗಿ ಎಂದರೆ ಅಂತಃಕರಣದಲ್ಲಿ ಉಂಟಾಗುವ ಎಲ್ಲಾ ಕಾಮಗಳ ನಾಶಕ್ಕಾಗಿ ಅಥವಾ ಸಂಸಾರದ ನಿವೃತ್ತಿಗಾಗಿ ಎಂದೂ ಅರ್ಥ).

ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ ।
ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥೧೩॥

ದೇಹ, ಶಿರಸ್ಸು ಮತ್ತು ಕತ್ತು ಇವುಗಳನ್ನು ನೇರವಾಗಿ ಇಟ್ಟುಕೊಂಡು ಅಲುಗಾಡದೆ ಸ್ಥಿರವಾಗಿ ಕುಳಿತು ಆಕಾಶವನ್ನಾಗಲೀ, ದಿಕ್ಕುಗಳನ್ನಾಗಲೀ ನೋಡದೆ ತನ್ನ ನಾಸಿಕದ ತುದಿಯನ್ನು ಮಾತ್ರ ನೋಡಿಕೊಂಡು ಧ್ಯಾನವನ್ನು ಮಾಡಬೇಕು.

ಪ್ರಶಾಂತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ ।
ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ ॥೧೪॥

ಪ್ರಶಾಂತವಾದ ಅಂತಃಕರಣವುಳ್ಳವನಾಗಿ ಎಲ್ಲ ಭಯಗಳನ್ನೂ ತ್ಯಜಿಸಿ, ಬ್ರಹ್ಮಚರ್ಯ ವ್ರತದಲ್ಲಿ ಇರುವವನಾಗಿ, ಮನಸ್ಸನ್ನು ನಿಯಂತ್ರಿಸಿ, ನನ್ನನ್ನೇ ಸರ್ವೋತ್ತಮನೆಂದು ತಿಳಿದು, ನನ್ನಲ್ಲೇ ಮನಸ್ಸನ್ನು ಕೇಂದ್ರೀಕರಿಸಿ ಯೋಗವನ್ನು ಮಾಡಬೇಕು.

ಯುಂಜನ್ನೇವಂ ಸದಾತ್ಮಾನಂ ಯೋಗೀ ನಿಯತಮಾನಸಃ ।
ಶಾಂತಿಂ ನಿರ್ವಾಣಪರಮಾಂ ಮತ್ಸಂಸ್ಥಾಮಧಿಗಚ್ಛತಿ ॥೧೫॥

ಹೀಗೆ ಯೋಗಿಯಾದವನು ಮನಸ್ಸನ್ನು ನಿಯಂತ್ರಿಸಿ ಸತತವಾಗಿ ತನ್ನನ್ನು ಧ್ಯಾನ ಯೋಗದಲ್ಲಿ ತೊಡಗಿಸಿಕೊಳ್ಳುವವನು ಶರೀರ ತ್ಯಾಗದ ನಂತರ ನನ್ನಲ್ಲಿ ಇರುವಿಕೆಯ ರೂಪವಾದ ಶಾಂತಿಯನ್ನು ಪಡೆಯುತ್ತಾನೆ.

ನಾತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾಂತಮನಶ್ನತಃ ।
ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ ॥೧೬॥

ಎಲೈ ಅರ್ಜುನನೇ, ಬಹಳ ಊಟ ಮಾಡುವವನಿಗೆ ಯೋಗವು ಫಲಿಸುವುದಿಲ್ಲ. ನಿಯಮೇನ ಉಪವಾಸ ಮಾಡುವವನಿಗೂ, ಬಹಳ ನಿದ್ರೆಯನ್ನು ಮಾಡುವವನಿಗೂ ಮತ್ತು ಯಾವಾಗಲೂ ಎಚ್ಚರದಿಂದಲೇ ಇರುವವನಿಗೂ ಯೋಗವು ಸಿದ್ಧಿಸುವುದಿಲ್ಲ.

ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।
ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥೧೭॥

ಯೋಗ್ಯವಾದ, ಮಿತವಾದ ಆಹಾರ-ವಿಹಾರಗಳನ್ನು ಸೇವಿಸಿ, ಕರ್ಮಗಳಲ್ಲಿ ಯೋಗ್ಯವಾದ ವ್ಯಾಪಾರಗಳನ್ನು ಮಾಡಿ, ಯೋಗ್ಯವಾದಷ್ಟು ನಿದ್ರೆ ಮತ್ತು ಯೋಗ್ಯವಾದಷ್ಟು ಎಚ್ಚರಗಳನ್ನು ಹೊಂದಿದ ಪುರುಷನಿಗೆ ಯೋಗವು ದುಃಖಪರಿಹಾರಕವಾಗುತ್ತದೆ.

ಯದಾ ವಿನಿಯತಂ ಚಿತ್ತಮಾತ್ಮನ್ಯೇವಾವತಿಷ್ಠತೇ ।
ನಿಃಸ್ಪೃಹಃ ಸರ್ವಕಾಮೇಭ್ಯೋ ಯುಕ್ತ ಇತ್ಯುಚ್ಯತೇ ತದಾ ॥೧೮॥

ಹೀಗೆ ನಿಯಂತ್ರಿತವಾದ ಚಿತ್ತವು ಎಲ್ಲ ಕಾಮುಗಳನ್ನೂ ತೊರೆದು ಪರಮಾತ್ಮನಲ್ಲಿಯೇ ಸ್ಥಿರವಾಗಿ ಯಾವಾಗ ನಿಲ್ಲುತ್ತದೆಯೋ ಆಗ ಅವನನ್ನು ಯೋಗಯುಕ್ತನಾದವನು ಎಂದು ಹೇಳುತ್ತಾರೆ.

ಯಥಾ ದೀಪೋ ನಿವಾತಸ್ಥೋ ನೇಂಗತೇ ಸೋಪಮಾ ಸ್ಮೃತಾ ।
ಯೋಗಿನೋ ಯತಚಿತ್ತಸ್ಯ ಯುಂಜತೋ ಯೋಗಮಾತ್ಮನಃ ॥೧೯॥

ಚಿತ್ತ ನಿಯಂತ್ರಣವನ್ನು ಹೊಂದಿ ಯೋಗವನ್ನು ಮಾಡುವ ಯೋಗಿಗೆ ದೀಪವು ಒಂದು ಉಪಮಾನ. ಹೇಗೆ ಗಾಳಿ ಇಲ್ಲದ ಕಡೆಯಲ್ಲಿ ದೀಪವು ಅಲುಗಾಡುವುದಿಲ್ಲವೋ ಅದರಂತೆ ಯೋಗಿಯ ಮನಸ್ಸೂ ಅಲುಗಾಡುವುದಿಲ್ಲ.

ಯತ್ರೋಪರಮತೇ ಚಿತ್ತಂ ನಿರುದ್ಧಂ ಯೋಗಸೇವಯಾ ।
ಯತ್ರ ಚೈವಾತ್ಮನಾऽऽತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ ॥೨೦॥

ಯೋಗಾಭ್ಯಾಸದಿಂದ ನಿರೋಧವನ್ನು ಹೊಂದಿದ ಚಿತ್ತವು ಸಮಾಧಿಯ ಅವಸ್ಥೆಯಲ್ಲಿ ಬಾಹ್ಯ ವ್ಯಾಪಾರದಿಂದ ಪೂರ್ಣವಾಗಿ ರಹಿತವಾಗುತ್ತದೆ. ಅಂತಹ ಸಮಾಧಿಯೋಗದಲ್ಲಿ ತನ್ನ ಮನಸ್ಸಿನಿಂದಲೇ ಭಗವಂತನನ್ನು ನೋಡುತ್ತಾ, ತನ್ನ ಮನಸ್ಸಿನಲ್ಲಿಯೇ ಸಂತೋಷವನ್ನು ಹೊಂದುತ್ತಾನೆ.

ಸುಖಮಾತ್ಯಂತಿಕಂ ಯತ್ತದ್ಬುದ್ಧಿಗ್ರಾಹ್ಯಮತೀಂದ್ರಿಯಮ್ ।
ವೇತ್ತಿ ಯತ್ರ ನ ಚೈವಾಯಂ ಸ್ಥಿತಶ್ಚಲತಿ ತತ್ತ್ವತಃ ॥೨೧॥

ಹಾಗೆ ಸಮಾಧಿಯಲ್ಲಿರುವವನು ಅನುಭವ ಮಾತ್ರ ವಿದ್ಯವಾದ, ಇಂದ್ರಿಯ ಗ್ರಾಹ್ಯವಲ್ಲದ, ಅತಿಶಯಿತವಾದ ಸುಖವನ್ನು ಅನುಭವಿಸುತ್ತಾನೆ. ಅಂತಹ ಸಮಾಧಿಯಲ್ಲಿದ್ದ ಅವನು ಭಗವದ್ರೂಪ ದರ್ಶನದಿಂದ ಬೇರೆ ಕಡೆಗೆ ಚಲಿಸುವುದಿಲ್ಲ ಅಥವಾ ಆ ಸಮಾಧಿಯ ಅವಸ್ಥೆಯಲ್ಲಿ ಆತ್ಯಂತಿಕ ಸುಖ ಎಂದರೆ ನಿರವಧಿಕ ಸುಖವಾದ ಬ್ರಹ್ಮನನ್ನು ಚೆನ್ನಾಗಿ ತಿಳಿಯುತ್ತಾನೆ.

ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ ॥೨೨॥

ತಂ ವಿದ್ಯಾದ್ ದುಃಖಸಂಯೋಗವಿಯೋಗಂ ಯೋಗಸಂಜ್ಞಿತಮ್ ।
ಸ ನಿಶ್ಚಯೇನ ಯೋಕ್ತವ್ಯೋ ಯೋಗೋ ನಿರ್ವಿಣ್ಣಚೇತಸಾ ॥೨೩॥

ಯಾವ ಸುಖವನ್ನು ಪಡೆದು ಅದಕ್ಕಿಂತಲೂ ಅಧಿಕ ಸುಖವಿಲ್ಲವೆಂದು ಭಾವಿಸುತ್ತಾನೆಯೋ, ಅಂತಹ ಸುಖರೂಪವಾದ ಸಮಾಧಿಯ ಸ್ಥಿತಿಯಲ್ಲಿದ್ದು, ಎಷ್ಟೇ ದೊಡ್ಡ ದುಃಖ ಬಂದರೂ ವಿಚಲಿತನಾಗುವುದಿಲ್ಲವೋ, ಅಂತಹ ದುಃಖಸಂಬಂಧಗಳ ವಿಯೋಗರೂಪವಾದ ಅವಸ್ಥೆಯನ್ನು ಯೋಗ ಎಂದು ತಿಳಿಯಬೇಕು. ವಿಷಯಗಳಲ್ಲಿ ವಿರಕ್ತನಾದ ಮನಸ್ಸುಳ್ಳವನು ಅವಶ್ಯವಾಗಿ ಅಂತಹ ಯೋಗವನ್ನು ಅನುಷ್ಠಾನ ಮಾಡಬೇಕು.

ಸಂಕಲ್ಪಪ್ರಭವಾನ್ ಕಾಮಾಂಸ್ತ್ಯಕ್ತ್ವಾ ಸರ್ವಾನಶೇಷತಃ ।
ಮನಸೈವೇಂದ್ರಿಯಗ್ರಾಮಂ ವಿನಿಯಮ್ಯ ಸಮಂತತಃ ॥೨೪॥

ಶನೈಃ ಶನೈರುಪರಮೇದ್ ಬುದ್ಧ್ಯಾ ಧೃತಿಗೃಹೀತಯಾ ।
ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್ ॥೨೫॥

ಫಲೋದ್ದೇಶ ಪೂರ್ವಕವಾಗಿ ಅನುಷ್ಠಾನ ಮಾಡುವ ಕರ್ಮದಿಂದ ಉಂಟಾದ ಕಾಮ್ಯವಸ್ತುಗಳೆಲ್ಲವನ್ನೂ ಸಂಪೂರ್ಣವಾಗಿ ತ್ಯಜಿಸಿ, ಮನಸ್ಸಿನಿಂದಲೇ ಎಲ್ಲ

ಇಂದ್ರಿಯಗಳನ್ನೂ ನಿಯಂತ್ರಿಸಿ, ಧೈರ್ಯವನ್ನು ಅವಲಂಬಿಸಿ, ಬುದ್ಧಿಯಿಂದ ನಿಧಾನವಾಗಿ ಕಾಮ್ಯವಿಷಯಗಳಿಂದ ಹಿಂದೆ ಸರಿಯಬೇಕು. ಮನಸ್ಸನ್ನು ಭಗವಂತನಲ್ಲಿಯೇ ಇಟ್ಟು ಬೇರೆ ಏನನ್ನೂ ಚಿಂತಿಸಬಾರದು.

ಯತೋ ಯತೋ ನಿಶ್ಚರತಿ ಮನಶ್ಚಂಚಲಮ್ಯಸ್ಥಿರಮ್ ।
ತತಸ್ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ್ ॥೨೬॥

ಚಂಚಲವೂ ಮತ್ತು ಅಸ್ಥಿರವೂ ಆದ ಮನಸ್ಸು ಪರಮಾತ್ಮನಿಂದ ಬೇರೆ ಕಡೆಗೆ ಹೋದಂತೆ ಹೋದಂತೆ ಅದನ್ನು ಪರಮಾತ್ಮನಲ್ಲಿ ಎಳೆದು ತಂದು ತನ್ನ ವಶವನ್ನು ಮಾಡಿಕೊಳ್ಳಬೇಕು.

ಪ್ರಶಾಂತಮನಸಂ ಹ್ಯೇನಂ ಯೋಗಿನಂ ಸುಖಮುತ್ತಮಮ್ ।
ಉಪೈತಿ ಶಾಂತರಜಸಂ ಬ್ರಹ್ಮಭೂತಮಕಲ್ಮಷಮ್ ॥೨೭॥

ಇಂತಹ ಪ್ರಶಾಂತ ಮನಸ್ಕನಾದ ಯೋಗಿಯು ತನ್ನ ರಜೋಗುಣಜನ್ಯವಾದ ದೋಷಗಳನ್ನು ಕಳೆದುಕೊಂಡು, ಬ್ರಹ್ಮನ ಪ್ರಸಾದದಿಂದ ನಿಷ್ಕಲ್ಮಷವಾದ ಶ್ರೇಷ್ಠವಾದ ಸುಖವನ್ನು ಹೊಂದುತ್ತಾನೆ.

ಯುಂಜನ್ನೇವಂ ಸದಾತ್ಮಾನಂ ಯೋಗೀ ವಿಗತಕಲ್ಮಷಃ ।
ಸುಖೇನ ಬ್ರಹ್ಮಸಂಸ್ಪರ್ಶಮತ್ಯಂತಂ ಸುಖಮಶ್ನುತೇ ॥೨೮॥

ಕಲ್ಮಷರಹಿತನಾದ ಯೋಗಿಯು ಹೀಗೆ ಯೋಗವನ್ನು ಮಾಡುತ್ತಾ, ಚಿತ್ತದಲ್ಲಿ ಯಾವಾಗಲೂ ಪರಮಾತ್ಮನನ್ನು ಇಡುವವನು ಅನಾಯಾಸವಾಗಿ ಪರಮ ಸುಖವನ್ನು ಪಡೆಯುತ್ತಾನೆ.

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥೨೯॥

ಅಂತಹ ಯೋಗದಿಂದ ಯುಕ್ತನಾದವನು ಸರ್ವತ್ರ ಇರುವ ಭಗವದ್ರೂಪಗಳಲ್ಲಿ ಸಾಮ್ಯವನ್ನೇ ಕಾಣುತ್ತಾ, ಎಲ್ಲ ವಸ್ತುಗಳಲ್ಲಿ ಪರಮಾತ್ಮನನ್ನು ಮತ್ತು ಪರಮಾತ್ಮನಲ್ಲಿ ಎಲ್ಲ ವಸ್ತುಗಳಿರುವುದನ್ನೂ ಕಾಣುತ್ತಾನೆ (ಆ ಪರಮಾತ್ಮನೆಂದರೆ ನಾನೇ).

ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥೩೦॥

ಯಾವ ಯೋಗಿಯು ಸರ್ವತ್ರ ನನ್ನನ್ನು ನೋಡುತ್ತಾನೆಯೋ ಮತ್ತು ನನ್ನಲ್ಲಿ ಸರ್ವವನ್ನೂ ನೋಡುತ್ತಾನೆಯೋ ಅವನಿಗೆ ನಾನು ನಾಶವನ್ನು ಹೊಂದುವುದಿಲ್ಲ. ಎಂದರೆ ಅವನ ಯೋಗಕ್ಷೇಮವನ್ನು ಸದಾ ನೋಡಿಕೊಳ್ಳುತ್ತೇನೆ. ಅವನೂ ಸಹ ನನ್ನ ವಿಷಯದಲ್ಲಿ ನಾಶ ಹೊಂದುವುದಿಲ್ಲ. ಎಂದರೆ ಅವನಾದರೂ ಸದಾ ನನ್ನ ಭಕ್ತನಾಗಿರುತ್ತಾನೆ.

ಸರ್ವಭೂತಸ್ಥಿತಂ ಯೋ ಮಾಂ ಭಜತ್ಯೇಕತ್ವಮಾಸ್ಥಿತಃ ।
ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ ॥೩೧॥

ಸರ್ವಜೀವರಲ್ಲಿ ಇರುವ ನನ್ನ ರೂಪಗಳಲ್ಲಿ ಸ್ಥಾನಭೇದದಿಂದ ಭೇದವನ್ನು ಚಿಂತಿಸದೆ ಯಾವ ಯೋಗಿಯು ರೂಪಗಳಲ್ಲಿ ಅಭೇದವನ್ನು ಚಿಂತಿಸುತ್ತಾನೆಯೋ ಅವನು ಶುಭಕರ್ಮವನ್ನು ಮಾಡಿದರೂ, ಅಶುಭಕರ್ಮವನ್ನು ಮಾಡಿದರೂ ಸಹ ಮೋಕ್ಷವನ್ನು ಪಡೆದು ನನ್ನಲ್ಲಿಯೇ ಇರುತ್ತಾನೆ (ಅಶುಭಕರ್ಮವನ್ನು ಮಾಡಿದರೂ ಜ್ಞಾನಿಗೆ ಮೋಕ್ಷ ಇದ್ದೇ ಇದೆ. ಆದರೆ ಆನಂದದ ಹ್ರಾಸವಾಗುವ ಸಂಭವವಿದೆ).

ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।
ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ ॥೩೨॥

ಯಾವ ಯೋಗಿಯು ಸುಖವನ್ನಾಗಲೀ, ದುಃಖವನ್ನಾಗಲೀ ತನ್ನಂತೆ ಇನ್ನೊಬ್ಬನನ್ನು ನೋಡುತ್ತಾನೆಯೋ ಎಲೈ ಅರ್ಜುನನೇ, ಅವನು ಶ್ರೇಷ್ಠವಾದ ಯೋಗಿ ಎನಿಸುತ್ತಾನೆ. ತನಗೆ ದುಃಖವು ಅಸಹ್ಯವಾದಂತೆ ಇನ್ನೊಬ್ಬ ಭಗವದ್ಭಕ್ತನಿಗೂ ದುಃಖವು ಅಸಹ್ಯವಾದುದು, ತನಗೆ ಸುಖವು ಹಿತವಾದಂತೆ ಇನ್ನೊಬ್ಬ ಭಗವದ್ಭಕ್ತನಿಗೂ ಹಿತವಾದುದು ಎಂದು ತನ್ನ ದೃಷ್ಟಾಂತದಿಂದ ತಿಳಿಯುವವನು ಶ್ರೇಷ್ಠವಾದ ಯೋಗಿ ಎಂದು ಅಭಿಪ್ರಾಯ.

ಅರ್ಜುನಃ

ಯೋಽಯಂ ಯೋಗಸ್ತ್ವಯಾ ಪ್ರೋಕ್ತಃ ಸಾಮ್ಯೇನ ಮಧುಸೂದನ ।
ಏತಸ್ಯಾಹಂ ನ ಪಶ್ಯಾಮಿ ಚಂಚಲತ್ವಾತ್ ಸ್ಥಿತಿಂ ಸ್ಥಿರಾಮ್ ॥೩೩॥

ಅರ್ಜುನ– ಎಲೈ ಮಧುಸೂದನನೇ, ಮನಸ್ಸಿನ ಸಾಮ್ಯಸ್ಥಿತಿಯನ್ನು ಹೊಂದಿ ಅನುಷ್ಠಾನ ಮಾಡುವಂತೆ ನೀನು ಹೇಳಿದ ಯೋಗವು ಏನಿದಯೋ ಅದು ಮನಸ್ಸು ಚಂಚಲವಾದುದರಿಂದ ಸ್ಥಿರವಾದ ಸ್ಥಿತಿಯನ್ನು ಹೊಂದದಿರುವುದರಿಂದ ಸಾಧ್ಯವಿಲ್ಲವೆಂದು ಭಾವಿಸುತ್ತೇನೆ.

ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ ದೃಢಮ್ ।
ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಮ್ ॥೩೪॥

ಎಲೈ ಕೃಷ್ಣನೇ, ಮನಸ್ಸು ಚಂಚಲವಾದುದು. ಜೀವನನ್ನು ಎಳೆಯುವಂತಹದು. ದೃಢವಾದುದು ಮತ್ತು ಬಲಿಷ್ಠವಾದುದು. ಅದರ ನಿಗ್ರಹವು ವಾಯುವಿನ ನಿಗ್ರಹದಷ್ಟೇ ಅತ್ಯಂತ ದುಷ್ಕರವಾದುದೆಂದು ನಾನು ಭಾವಿಸುತ್ತೇನೆ.

ಶ್ರೀಭಗವಾನ್

ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್ ।
ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥೩೫॥

ಶ್ರೀಭಗವಾನ್– ಎಲೈ ಮಹಾಬಾಹುವೇ, ಮನಸ್ಸು ಚಂಚಲವಾದುದು ಮತ್ತು ನಿಗ್ರಹಿಸಲು ಕಷ್ಟಸಾಧ್ಯವಾದುದು ಎಂಬ ವಿಷಯದಲ್ಲಿ ಸಂಶಯವಿಲ್ಲ. ಎಲೈ ಕೌಂತೇಯನೇ, ಆದರೂ ವೈರಾಗ್ಯ ಮತ್ತು ಸತತ ಪ್ರಯತ್ನದಿಂದ ನಿಗ್ರಹಿಸಲು ಸಾಧ್ಯವಾಗುತ್ತದೆ.

ಅಸಂಯತಾತ್ಮನಾ ಯೋಗೋ ದುಷ್ಪ್ರಾಪ ಇತಿ ಮೇ ಮತಿಃ ।
ವಶ್ಯಾತ್ಮನಾ ತು ಯತತಾ ಶಕ್ಯೋಽವಾಪ್ತುಮುಪಾಯತಃ ॥೩೬॥

ಮನಸ್ಸಂಯಮವಿಲ್ಲದವನಿಗೆ ಯೋಗವು ದುರ್ಲಭವೆಂದು ನನ್ನ ಅಭಿಪ್ರಾಯ. ಜಿತಮನಸ್ಕನಾದರೆ ಮಾತ್ರ ಪ್ರಯತ್ನದಿಂದ ಉಪಾಯಪೂರ್ವಕವಾಗಿ ಯೋಗವನ್ನು ಪಡೆಯಲು ಸಾಧ್ಯ.

ಅರ್ಜುನಃ

ಅಯತಿಃ ಶ್ರದ್ಧಯೋಪೇತೋ ಯೋಗಾಚ್ಚಲಿತಮಾನಸಃ ।
ಅಪ್ರಾಪ್ಯ ಯೋಗಸಂಸಿದ್ಧಿಂ ಕಾಂ ಗತಿಂ ಕೃಷ್ಣ ಗಚ್ಛತಿ ॥೩೭॥

ಅರ್ಜುನ– ಎಲೈ ಕೃಷ್ಣನೇ, ಶ್ರದ್ಧೆಯುಳ್ಳವನು ಪ್ರಯತ್ನರಹಿತನಾಗಿ ಯೋಗದಿಂದ ಮನಸ್ಸು ಚ್ಯುತವಾದಾಗ ಯೋಗಸಂಸಿದ್ಧಿಯನ್ನು ಪಡೆಯದಿದ್ದರೆ ಅವನಿಗೆ ಯಾವ ಗತಿಯಾಗುತ್ತದೆ?

ಕಚ್ಚಿನ್ನೋಭಯವಿಭ್ರಷ್ಟಶ್ಛಿನ್ನಾಭ್ರಮಿವ ನಶ್ಯತಿ ।
ಅಪ್ರತಿಷ್ಠೋ ಮಹಾಬಾಹೋ ವಿಮೂಢೋ ಬ್ರಹ್ಮಣಃ ಪಥಿ ॥೩೮॥

ಸ್ವರ್ಗ-ಮೋಕ್ಷಾದಿ ಉಭಯರೂಪವಾದ ಫಲದಿಂದ ಭ್ರಷ್ಟನಾಗಿ ಸಣ್ಣಮೋಡವು ಬಿರುಗಾಳಿಗೆ ಸಿಕ್ಕಿ ನಾಶವಾದಂತೆ ನಿರಾಶ್ರಯನಾದ ಅವನು ಬ್ರಹ್ಮಪ್ರಾಪ್ತಿಯ ಉಪಾಯದಲ್ಲಿ ವಿಮೂಢನಾಗಿ ನಾಶವನ್ನು ಹೊಂದುತ್ತಾನೆಯೇ?

ಏತನ್ಮೇ ಸಂಶಯಂ ಕೃಷ್ಣ ಛೇತ್ತುಮರ್ಹಸ್ಯಶೇಷತಃ ।
ತ್ವದನ್ಯಃ ಸಂಶಯಸ್ಯಾಸ್ಯ ಛೇತ್ತಾ ನ ಹ್ಯುಪಪದ್ಯತೇ ॥೩೯॥

ಎಲೈ ಕೃಷ್ಣನೇ, ಈ ನನ್ನ ಸಂಶಯವನ್ನು ನೀನು ಸಂಪೂರ್ಣವಾಗಿ ಪರಿಹರಿಸಬೇಕು. ನಿನ್ನನ್ನು ಬಿಟ್ಟು ಈ ಸಂಶಯವನ್ನು ಪರಿಹರಿಸುವವರು ಬೇರೆ ಯಾರೂ ಇಲ್ಲ.

ಶ್ರೀಭಗವಾನ್

ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ ।
ನ ಹಿ ಕಲ್ಯಾಣಕೃತ್ ಕಶ್ಚಿದ್ ದುರ್ಗತಿಂ ತಾತ ಗಚ್ಛತಿ ॥೪೦॥

ಶ್ರೀಭಗವಾನ್– ಎಲೈ ಪಾರ್ಥನೇ, ಈ ಲೋಕದಲ್ಲಾಗಲೀ ಅಥವಾ ಪರಲೋಕದಲ್ಲಾಗಲೀ ಅಂತಹ ವ್ಯಕ್ತಿಗೆ ವಿನಾಶವಿಲ್ಲ. ಪ್ರೀತಿಪಾತ್ರನೇ, ಅಲ್ಪವಾದ ಪುಣ್ಯಕಾರ್ಯವನ್ನು ಮಾಡಿದವನೂ ಸಹ ದುರ್ಗತಿಯನ್ನು ಹೊಂದುವುದಿಲ್ಲ.

ಪ್ರಾಪ್ಯ ಪುಣ್ಯಕೃತಾನ್ ಲೋಕಾನುಷಿತ್ವಾ ಶಾಶ್ವತೀಃ ಸಮಾಃ ।
ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ॥೪೧॥

ಯೋಗಭ್ರಷ್ಟನಾದವನು ಪುಣ್ಯದಿಂದ ಸಂಪಾದಿಸಿದ ಲೋಕಗಳನ್ನು ಹೊಂದಿ, ಅಲ್ಲಿ ಬಹುಕಾಲ ವಾಸ ಮಾಡಿ ಶುಚಿಯಾದವರ ಹಾಗೂ ಶ್ರೀಮಂತರಾದವರ ಕುಲದಲ್ಲಿ ಜನಿಸುತ್ತಾನೆ.

ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಮ್ ।
ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಮ್ ॥೪೨॥

ಅಥವಾ ಮೇಧಾವಿಗಳಾದ ಯೋಗಿಗಳ ಕುಲದಲ್ಲಿಯೇ ಜನಿಸುತ್ತಾನೆ. ಇಂತಹ ಜನ್ಮವು ಲೋಕದಲ್ಲಿ ಅತ್ಯಂತ ದುರ್ಲಭವಾದುದು.

ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಮ್ ।
ಯತತೇ ಚ ತತೋ ಭೂಯಃ ಸಂಸಿದ್ಧೌ ಕುರುನಂದನ ॥೪೩॥

ಆ ಜನ್ಮದಲ್ಲಿಯೂ ಹಿಂದಿನ ಜನ್ಮದ ಬುದ್ಧಿಯನ್ನು ಪಡೆಯುತ್ತಾನೆ. ಎಲೈ ಕುರುನಂದನನೇ, ಪುನಃ ಅವನು ಯೋಗಸಿದ್ಧಿಗಾಗಿ ಪ್ರಯತ್ನಪಡುತ್ತಾನೆ.

ಪೂರ್ವಾಭ್ಯಾಸೇನ ತೇನೈವ ಹ್ರಿಯತೇ ಹ್ಯವಶೋऽಪಿ ಸಃ ।
ಜಿಜ್ಞಾಸುರಪಿ ಯೋಗಸ್ಯ ಶಬ್ದಬ್ರಹ್ಮಾತಿವರ್ತತೇ ॥೪೪॥

ಅವನ ಹಿಂದಿನ ಜನ್ಮದ ಅಭ್ಯಾಸದಿಂದ ಅವನಿಗೆ ಅರಿವಿಲ್ಲದೆಯೇ ಅವನು ಯೋಗಮಾರ್ಗದಲ್ಲಿ ಪ್ರವೃತ್ತನಾಗುತ್ತಾನೆ. ಯೋಗಾಭ್ಯಾಸ ಮತ್ತು ವೇದಾಭ್ಯಾಸವನ್ನು ಒಂದೇ ಮನಸ್ಸಿನಿಂದ ಮಾಡಲು ಅಸಾಧ್ಯವಾದುದರಿಂದ ಆಗ ವೇದಾಭ್ಯಾಸವನ್ನು ಕಡಿಮೆ ಮಾಡಿಕೊಳ್ಳುತ್ತಾನೆ. ಅಥವಾ ಶಬ್ದರೂಪವಾದ ವೇದದ ಆವೃತ್ತಿಯನ್ನು ಬಿಟ್ಟು ಅರ್ಥರೂಪನಾದ ಬ್ರಹ್ಮನನ್ನೇ ಧ್ಯಾನಿಸುತ್ತಾನೆ.

ಪ್ರಯತ್ನಾದ್ ಯತಮಾನಸ್ತು ಯೋಗೀ ಸಂಶುದ್ಧಕಿಲ್ಬಿಷಃ ।
ಅನೇಕಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಮ್ ॥೪೫॥

ಸತತವಾಗಿ ಪ್ರಯತ್ನ ಪಡುವ ಯೋಗಿಯು ತನ್ನ ಪ್ರಯತ್ನದ ಫಲವಾಗಿ ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗಿ ಅನೇಕ ಜನ್ಮಗಳ ಕೊನೆಯಲ್ಲಿ ಅಪರೋಕ್ಷಜ್ಞಾನವನ್ನು ಹೊಂದಿ ಮೋಕ್ಷವನ್ನು ಪಡೆಯುತ್ತಾನೆ.

ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ।
ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ ಯೋಗೀ ಭವಾರ್ಜುನ ॥೪೬॥

ಎಲೈ ಅರ್ಜುನನೇ, ತಪಸ್ವಿಗಳಿಗಿಂತಲೂ ಯೋಗಿಗಳು ಶ್ರೇಷ್ಠರಾದವರು. ಜ್ಞಾನಿಗಳಿಗಿಂತಲೂ ಯೋಗಿಗಳು ಶ್ರೇಷ್ಠರಾದವರು ಎಂದು ಹೇಳಲ್ಪಡುತ್ತಾರೆ. ಕರ್ಮಯೋಗಿಗಳಿಗಿಂತಲೂ ಧ್ಯಾನದಲ್ಲಿ ನಿರತರಾದವರು ಶ್ರೇಷ್ಠರು. ಆದ್ದರಿಂದ ನೀನು ಅಂತಹ ಯೋಗಿಯಾಗು.

ಯೋಗಿನಾಮಪಿ ಸರ್ವೇಷಾಂ ಮದ್ಗತೇನಾಂತರಾತ್ಮನಾ ।
ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ ॥

ನನ್ನಲ್ಲಿಯೇ ಮನಸ್ಸನ್ನಿಟ್ಟು ಯೋಗವನ್ನು ಅನುಷ್ಠಾನ ಮಾಡುವ ಎಲ್ಲರ ಮಧ್ಯದಲ್ಲಿ ಯಾವನು ಶ್ರದ್ಧೆಯಿಂದ ಕೂಡಿದವನಾಗಿ ನನ್ನನ್ನು ಭಜಿಸುತ್ತಾನೆಯೋ ಅವನು ಯೋಗಿಗಳಲ್ಲಿ ಅತ್ಯಂತ ಶ್ರೇಷ್ಠನಾದವನು ಎಂದು ನನ್ನ ಅಭಿಪ್ರಾಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಅಷ್ಟಾವಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಪಂಚದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂಬತ್ತನೆಯ ಅಧ್ಯಾಯ

ಭಗವದ್ಗೀತಾ – ಜ್ಞಾನ-ವಿಜ್ಞಾನ ಯೋಗ.

ಶ್ರೀಭಗವಾನ್

ಮಯ್ಯಾಸಕ್ತಮನಾಃ ಪಾರ್ಥ ಯೋಗಂ ಯುಂಜನ್ ಮದಾಶ್ರಯಃ ।
ಅಸಂಶಯಂ ಸಮಗ್ರಂ ಮಾಂ ಯಥಾ ಜ್ಞಾಸ್ಯಸಿ ತಚ್ಛೃಣು ॥೧॥

ಶ್ರೀಭಗವಾನ್– ಎಲೈ ಪಾರ್ಥನೇ, ಕೃಷ್ಣನಾದ ನನ್ನಲ್ಲಿಯೇ ಅತ್ಯಂತ ಸ್ನೇಹವುಳ್ಳ ಮನಸ್ಸುಳ್ಳವನಾಗಿ, ಜ್ಞಾನಯೋಗವನ್ನು ಅನುಷ್ಠಾನ ಮಾಡುತ್ತಾ, ನಾನೇ ಎಲ್ಲದಕ್ಕೂ

ಆಶ್ರಯ ಮತ್ತು ಎಲ್ಲವನ್ನೂ ಮಾಡಿಸುತ್ತೇನೆ ಎಂದು ತಿಳಿಯುವ ಜ್ಞಾನಿಯು ಸಂಶಯರಹಿತನಾಗಿ, ಸಮಗ್ರವಾಗಿ ಯಾವ ಪ್ರಕಾರದಿಂದ ಜ್ಞಾನವನ್ನು ಸಂಪಾದನೆ ಮಾಡುತ್ತಾನೆಯೋ ಅದನ್ನು ತಿಳಿಯುವಿ, ಅದನ್ನು ಕೇಳು.

ಜ್ಞಾನಂ ತೇऽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ ।
ಯಜ್ಜ್ಞಾತ್ವಾ ನೇಹ ಭೂಯೋऽನ್ಯಜ್ಜ್ಞಾತವ್ಯಮವಶಿಷ್ಯತೇ ॥೨॥

ನಾನು ನಿನಗೆ ವಿಜ್ಞಾನಸಹಿತವಾದ ಈ ಜ್ಞಾನವನ್ನು ನಿನ್ನ ಯೋಗ್ಯತೆ ಇದ್ದಷ್ಟು ಸಮಗ್ರವಾಗಿ ಹೇಳುವೆನು. ಅದನ್ನು ತಿಳಿದ ಮೇಲೆ ನೀನು ಬೇರೆ ಏನನ್ನೂ ತಿಳಿಯುವ ಅವಶ್ಯಕತೆ ಇಲ್ಲ.

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥೩॥

ಸಹಸ್ರ ಮನುಷ್ಯರಲ್ಲಿ ಯಾವನೋ ಒಬ್ಬನು ಸಿದ್ಧಿಗಾಗಿ ಪ್ರಯತ್ನ ಪಡುತ್ತಾನೆ. ಪ್ರಯತ್ನ ಪಟ್ಟು ಸಿದ್ಧಿಯನ್ನು ಸಂಪಾದಿಸುವವರಲ್ಲಿಯೂ ಯಾವನೋ ಒಬ್ಬನು ನನ್ನನ್ನು ಸರಿಯಾಗಿ ತಿಳಿಯುತ್ತಾನೆ.

ಭೂಮಿರಾಪೋऽನಲೋ ವಾಯುಃ ಖಂ ಮನೋ ಬುದ್ಧಿರೇವ ಚ ।
ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ ॥೪॥

ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ ।
ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥

ನನಗೆ ಅಧೀನವಾದ ಜಡಪ್ರಕೃತಿಯು ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಮನಸ್ಸು, ಬುದ್ಧಿ ಮತ್ತು ಅಹಂಕಾರ ಎಂದು ಎಂಟು ರೀತಿಯ ವಿಭಾಗವನ್ನು ಹೊಂದಿದೆ. ಎಲೈ ಮಹಾಬಾಹುವೇ, ನನಗಿಂತ ಭಿನ್ನವಾದ ಜೀವರ ದೇಹೇಂದ್ರಿಯಾದಿಗಳಿಗೆ ಕಾರಣವಾದ ಜಗತ್ತನ್ನು ಧರಿಸಿರುವ ಈ ಶ್ರೇಷ್ಠವಾದ ಪ್ರಕೃತಿಯನ್ನು ತಿಳಿಯುವವನಾಗು.

ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ ।
ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ॥೬॥

ಎಲ್ಲಪ್ರಾಣಿಗಳೂ ಈ ಜಡಪ್ರಕೃತಿಯನ್ನೇ ಮೂಲವಾಗಿ ಹೊಂದಿವೆ ಎಂದು ತಿಳಿ (ಎಲ್ಲ ಪ್ರಾಣಿಗಳ ದೇಹೇಂದ್ರಿಯಾದಿಗಳು ಪ್ರಕೃತಿಯ ವಿಕಾರಗಳು ಎಂದು ಅಭಿಪ್ರಾಯ). ನಾನು ಸಮಗ್ರವಾದ ಜಗತ್ತಿನ ಉತ್ಪತ್ತಿ ಮತ್ತು ಸಂಹಾರಗಳಿಗೆ ಕಾರಣನಾದವನು.

ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥೭॥

ಎಲೈ ಧನಂಜಯನೇ, ನನಗಿಂತ ಶ್ರೇಷ್ಠವಾದುದು ಯಾವುದೂ ಇಲ್ಲ. ಈ ಜೀವ-ಜಡಾತ್ಮಕವಾದ ಜಗತ್ತು ಮಣಿಗಳ ಸಮೂಹಗಳು ಸೂತ್ರವನ್ನು ಆಶ್ರಯಿಸಿಕೊಂಡಿರುವಂತೆ ನನ್ನನ್ನು ಆಶ್ರಯಿಸಿಕೊಂಡಿವೆ.

ರಸೋಽಹಮಪ್ಸು ಕೌಂತೇಯ ಪ್ರಭಾಽಸ್ಮಿ ಶಶಿಸೂರ್ಯಯೋಃ ।
ಪ್ರಣವಃ ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು ॥೮॥

ಎಲೈ ಕೌಂತೇಯನೇ, ನಾನು ಜಲದಲ್ಲಿರುವ ರಸಕ್ಕೆ ನಿಯಾಮಕನಾದವನು. ಚಂದ್ರ, ಸೂರ್ಯರ ಕಾಂತಿಯೂ ನನ್ನಿಂದಲೇ. ಸರ್ವವೇದಗಳಲ್ಲಿ ಶ್ರೇಷ್ಠವಾದ ಪ್ರಣವವೂ, ಆಕಾಶದಲ್ಲಿ ವಿಶೇಷಗುಣವಾದ ಶಬ್ದವೂ, ಮನುಷ್ಯರ ಪೌರುಷವೂ ನನ್ನಿಂದಲೇ ನಿಯತವಾದುದು.

ವಿಶೇಷ ವಿಚಾರ– 'ಸೂತ್ರೇ ಮಣಿಗಣಾ ಇವ' ಎಂದು ಹೇಳಿದ ಆಧಾರಾಧೇಯಭಾವವನ್ನೇ ಇಲ್ಲಿ ವಿವರಿಸಿರುವುದರಿಂದ 'ರಸೋಽಹಂ' ಇತ್ಯಾದಿಗಳು ಆಧಾರಾಧೇಯಭಾವದ ಅಭಿಪ್ರಾಯದಿಂದಲೇ ಪ್ರವೃತ್ತವಾಗುತ್ತವೆ. ಏಕೆಂದರೆ ಜಡೈಕ್ಯವನ್ನು ಯಾರೂ ಅಂಗೀಕರಿಸುವುದಿಲ್ಲ. ಅಲ್ಲದೇ, 'ಬೀಜಂ ಮಾಂ ಸರ್ವಭೂತಾನಾಂ' ಎಂದು ಇಲ್ಲಿಯೇ ಮುಂದೆ ಕೃಷ್ಣನು ತಾನು ಎಲ್ಲದಕ್ಕೂ ಕಾರಣನೆಂದು ಹೇಳುತ್ತಾನೆ. ಆಯಾ ವಸ್ತುವಿನ ಸ್ವಭಾವವಾದ ಅಸಾಧಾರಣ ಗುಣಗಳಿಗೂ ತಾನೇ ನಿಯಾಮಕನೆಂದು ತಿಳಿಸುವುದಕ್ಕಾಗಿ 'ರಸೋಹಮಪ್ಸು' ಮುಂತಾದ ವಾಕ್ಯಗಳಿಂದ ಇನ್ನೊಮ್ಮೆ ತನ್ನ ನಿಯಾಮಕತ್ವವನ್ನು ಹೇಳುತ್ತಾನೆ.

ಪುಣ್ಯೋ ಗಂಧಃ ಪೃಥಿವ್ಯಾಂ ಚ ತೇಜಶ್ಚಾಸ್ಮಿ ವಿಭಾವಸೌ ।
ಜೀವನಂ ಸರ್ವಭೂತೇಷು ತಪಶ್ಚಾಸ್ಮಿ ತಪಸ್ವಿಷು ॥೯॥

ಪೃಥಿವಿಯಲ್ಲಿರುವ ಪವಿತ್ರವಾದ ಗಂಧವು ಮತ್ತು ಅಗ್ನಿಯ ತೇಜಸ್ಸು ನಾನೇ ಆಗಿದ್ದೇನೆ (ನನ್ನ ಅಧೀನವೇ ಆಗಿದೆ ಎಂದು ಅಭಿಪ್ರಾಯ). ಸರ್ವಪ್ರಾಣಿಗಳ ಜೀವನವೂ, ತಪಸ್ವಿಗಳ ತಪಸ್ಸೂ ಸಹ (ನನ್ನ ಅಧೀನವೇ ಆಗಿದೆ).

ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ಪಾರ್ಥ ಸನಾತನಮ್ ।
ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಮ್ ॥೧೦॥

ಎಲೈ ಪಾರ್ಥನೇ, ವೇದಪ್ರತಿಪಾದ್ಯನಾದ ನನ್ನನ್ನು ಸರ್ವಜೀವರಿಗೂ (ಜೀವರ ದೇಹಾದಿಗಳಿಗೆ) ಕಾರಣನೆಂದು ತಿಳಿ. ಮೇಧಾವಿಗಳ ಬುದ್ಧಿಶಕ್ತಿಯೂ, ಪರಾಕ್ರಮಶಾಲಿಗಳ ಪರಾಕ್ರಮವೂ ನನ್ನಿಂದಲೇ ನಿಯತವಾದುದು.

ಬಲಂ ಬಲವತಾಂ ಚಾಹಂ ಕಾಮರಾಗವಿವರ್ಜಿತಮ್ ।
ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ ॥೧೧॥

ಬಲಿಷ್ಠರಲ್ಲಿರುವ ಕಾಮರಾಗವಿವರ್ಜಿತವಾದ ಬಲವೂ ನನ್ನಿಂದಲೇ ನಿಯತವಾಗಿದೆ (ನಾನು ಕಾಮರಾಗವಿವರ್ಜಿತವಾದ ಬಲರೂಪನೂ ಆಗಿದ್ದೇನೆ). ಎಲೈ ಭರತರ್ಷಭನೇ, ಜೀವರಲ್ಲಿರುವ ಧರ್ಮಕ್ಕೆ ವಿರುದ್ಧವಾದ ಕಾಮವೂ ನನ್ನಿಂದ ನಿಯತವಾಗಿದೆ (ಧರ್ಮಕ್ಕೆ ಅವಿರುದ್ಧವಾದ ಕಾಮದಲ್ಲಿ ಪರಮಾತ್ಮನ ವಿಶೇಷ ಸನ್ನಿಧಾನವಿದೆ).

ಯೇ ಚೈವ ಸಾತ್ತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚ ಯೇ ।
ಮತ್ತ ಏವೇತಿ ತಾನ್ ವಿದ್ಧಿ ನ ತ್ವಹಂ ತೇಷು ತೇ ಮಯಿ ॥೧೨॥

ಸಾತ್ತ್ವಿಕವಾದ, ರಾಜಸವಾದ ಮತ್ತು ತಾಮಸವಾದ ಯಾವ ವಸ್ತುಗಳಿವೆಯೋ ಅದಕ್ಕೆ ಕಾರಣವಾದ ಸತ್ತಾದಿ ಗುಣಗಳು ನನ್ನಿಂದಲೇ ನಿಯತವೆಂದು ತಿಳಿ. ಆ ಗುಣಗಳನ್ನೇ ನಾನೆಂದು ತಿಳಿಯಬೇಡ. ನನಗೆ ಆ ಗುಣಗಳು ಆಧಾರವಾಗಿಲ್ಲ, ನಾನೇ ಆ ಗುಣಗಳಿಗೆ ನಿಯಾಮಕನಾಗಿ ಆಧಾರನಾಗಿದ್ದೇನೆ. ಅಥವಾ ನಾನು ಅಸಂಗನಾದುದರಿಂದ ನಾನು ಆ ಗುಣಗಳಲ್ಲಿಯೂ ಇಲ್ಲ, ಆ ಗುಣಗಳು ನನ್ನಲ್ಲಿಯೂ ಇಲ್ಲ.

ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮಿದಂ ಜಗತ್ ।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್ ॥೧೩॥

ಮೂರುಗುಣಗಳಿಂದ ಉಂಟಾದ ವಸ್ತುಗಳಿಂದ ಮೋಹಿತವಾದ ಈ ಎಲ್ಲ ಜಗತ್ತೂ ನಾನು ಈ ಗುಣಗಳಿಗಿಂತ ವಿಲಕ್ಷಣನಾದವನು, ಉತ್ತಮನಾದವನು ಮತ್ತು ನಾಶರಹಿತನಾದವನು ಎಂದು ನನ್ನನ್ನು ತಿಳಿಯುವುದಿಲ್ಲ.

ವಿಶೇಷ ವಿಚಾರ– 'ರಸೋಽಹಂ' ಇತ್ಯಾದಿ ವಾಕ್ಯಗಳಿಗೆ ಕೃಷ್ಣನಿಗೆ ಅಭಿಪ್ರೇತವಾದ ಅರ್ಥವನ್ನು ತಿಳಿಯದೆ ಜಡ-ಜೀವೈಕ್ಯವನ್ನು ಹೇಳುವವರು ಮಿಥ್ಯಾಜ್ಞಾನಿಗಳು ಎಂದು ಅಭಿಪ್ರಾಯ.

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ ॥೧೪॥

ನನ್ನ ಸಂಬಂಧಿಯಾದ ಮಹಾಲಕ್ಷ್ಮಿಯಿಂದ ಅಭಿಮನ್ಯಮಾನವಾದ ಈ ಗುಣಮಯವಾದ ಮಾಯೆ ಏನಿದೆಯೋ ಅದನ್ನು ದಾಟುವುದು ಕಷ್ಟ. ನನ್ನನ್ನೇ ಯಾರು ಶರಣು ಹೊಂದುತ್ತಾರೋ, ಅವರು ಮಾತ್ರ ಈ ಮಾಯೆಯನ್ನು (ಮಹಾಲಕ್ಷ್ಮಿಯಿಂದ ಅಭಿಮನ್ಯಮಾನವಾದ ಗುಣಗಳಿಂದ ಉಂಟಾಗುವ ಮೋಹವನ್ನು) ದಾಟುತ್ತಾರೆ.

ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇ ನರಾಧಮಾಃ ।
ಮಾಯಯಾಽಪಹೃತಜ್ಞಾನಾ ಆಸುರಂ ಭಾವಮಾಶ್ರಿತಾಃ ॥೧೫॥

ದುಷ್ಕರ್ಮವನ್ನು ಮಾಡುವ, ಮಾಯೆಯಿಂದ ಜ್ಞಾನಲೋಪವನ್ನು ಹೊಂದಿದ ಆಸುರ ಸ್ವಭಾವವುಳ್ಳ ಮೂಢರಾದ ನರಾಧಮರು ನನ್ನನ್ನು ಹೊಂದುವುದಿಲ್ಲ.

ವಿಶೇಷ ವಿಚಾರ– ಶರಣಾಗತಿರೂಪವಾದ 'ದಾಸೋಽಹಂ' ಭಾವವನ್ನು ಬಿಟ್ಟು 'ಸೋಽಹಂ' ಭಾವವನ್ನು ಆಶ್ರಯಿಸುವ ಪುರುಷರು ಪಂಚಮಹಾಪಾತಕಿಗಳು, ಮೂಢರು, ಮನುಷ್ಯಾಧಮರು, ದುರ್ಗಾದೇವಿಯಿಂದ ತತ್ತ್ವಜ್ಞಾನ ನಾಶ ಹೊಂದಿದವರು ಮತ್ತು ಕೇವಲ ಅಸುರರು ಎಂದು ಅಭಿಪ್ರಾಯ.

ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥೧೬॥

ಎಲೈ ಅರ್ಜುನನೇ, ನನ್ನನ್ನು ನಾಲ್ಕು ವಿಧವಾದ ಜನರು ಭಜಿಸುತ್ತಾರೆ. ಭರತರ್ಷಭನೇ, ಅವರು ಆರ್ತರು, ಜಿಜ್ಞಾಸುಗಳು, ಅರ್ಥವನ್ನು ಬಯಸುವವರು ಮತ್ತು ಜ್ಞಾನಿಗಳು.

ವಿಶೇಷ ವಿಚಾರ– ಯಾರು 'ಸೋಽಹಂ' ಭಾವವನ್ನು ಬಿಟ್ಟು ತನ್ನ ಸೇವೆಯಲ್ಲಿಯೇ ನಿರತರಾಗಿರುತ್ತಾರೆಯೋ, ಅವರ ಆ ಸೇವೆ ಸೌಪಾಧಿಕವಾಗಲಿ ಅಥವಾ ನಿರುಪಾಧಿಕವಾಗಲೀ ಅವರೆಲ್ಲರೂ ಪುಣ್ಯಶಾಲಿಗಳು ಎಂದು ಕೃಷ್ಣನ ಅಭಿಪ್ರಾಯ.

ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।
ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ ॥೧೭॥

ಆ ನಾಲ್ಕು ವಿಧವಾದ ಜನರಲ್ಲಿ ನಿತ್ಯವೂ ನನ್ನ ಯೋಗಯುಕ್ತನಾದ ನನ್ನಲ್ಲಿ ಮುಖ್ಯವಾದ ಭಕ್ತಿಯನ್ನು ಹೊಂದಿದ ಜ್ಞಾನಿಯು ಶ್ರೇಷ್ಠನಾದವನು. ನಾನು ಜ್ಞಾನಿಗೆ ಅತ್ಯಂತ ಪ್ರಿಯನಾದವನು ಮತ್ತು ಜ್ಞಾನಿಯೂ ನನಗೆ ಅತ್ಯಂತ ಪ್ರಿಯನಾದವನು.

ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಮ್ ।
ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಮ್ ॥೧೮॥

ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।

ಅವರೆಲ್ಲರೂ ಉತ್ಕೃಷ್ಟರಾದವರೇ. ಅವರಲ್ಲಿಯೂ ಅಪರೋಕ್ಷಜ್ಞಾನಿಯು ನನಗೆ ವಿಶೇಷವಾಗಿ ಸಮ್ಮತನಾದವನು. ಅಥವಾ ಆ ನಾಲ್ಕು ವಿಧವಾದ ಜನರಲ್ಲಿ ಅಪರೋಕ್ಷ ಜ್ಞಾನಿಯು ಅವನೇ ನಿಜವಾದ ಜೀವ ಎಂದು ನನ್ನ ಅಭಿಪ್ರಾಯ. ಉಳಿದ ಮಿಥ್ಯಾಜ್ಞಾನಿಗಳು ನರಾಧಮರೆಂದು ಹೇಳುವುದರಿಂದ ಜ್ಞಾನಿಯು ನರಶ್ರೇಷ್ಠ ಎಂದು ಅಭಿಪ್ರಾಯ. ಜ್ಞಾನಿಯು ನಾನೇ ಎಂಬುದು, ಎಂದರೆ ಜ್ಞಾನಿಗೂ ನನಗೂ ಅಭೇದವಿದೆ ಎಂಬುದು ನನಗೆ ಅಭಿಪ್ರೇತವಲ್ಲ.

ವಿಶೇಷ ವಿಚಾರ– 'ಮೇ ಅಮತಃ' ಎಂದು ಭೇದವನ್ನು ಮಾಡಿದರೆ ಈ ಅರ್ಥವು ದೊರೆಯುತ್ತದೆ. 'ಚತುರ್ವಿಧಾ ಭಜಂತೇ ಮಾಂ' 'ಏಕ ಭಕ್ತಿರ್ವಿಶಿಷ್ಯತೇ', 'ಸ ಚ ಮಮ ಪ್ರಿಯಃ' ಮುಂತಾದ ಹಿಂದಿನ ವಾಕ್ಯಗಳಿಂದ ಜ್ಞಾನಿಗೂ ತನಗೂ ಭೇದವನ್ನೇ ಹೇಳಿರುವುದರಿಂದ ಮತ್ತು ಸರ್ವೈಕ್ಯವಾದಿಗಳಾದ ಅದ್ವೈತಿಗಳಿಗೆ ಜ್ಞಾನಿ ಮಾತ್ರೈಕ್ಯವು

ಅಸಮ್ಮತವೂ ಆದುದರಿಂದ ಹೀಗೆಯೇ ಅರ್ಥವನ್ನು ಮಾಡಬೇಕು. ಜ್ಞಾನಿಯು ನನಗೆ ದೇಹದಂತೆ ಪ್ರಿಯನಾದವನು ಎಂದೂ ಅರ್ಥವನ್ನು ಮಾಡಬಹುದು. ಜ್ಞಾನಿಯು ನಾನೇ ಅಲ್ಲ ಎಂಬುದನ್ನು ಪುನಃ ಕೃಷ್ಣನು ಸ್ಪಷ್ಟ ಪಡಿಸುತ್ತಾನೆ. ಆ ಜ್ಞಾನಿಯು ಅತ್ಯಂತ ಶ್ರೇಷ್ಠವಾದ ಗತಿಯನ್ನು ಕೊಡುವ ನನ್ನನ್ನೇ ಆಶ್ರಯಿಸಿರುತ್ತಾನೆ. ಆಶ್ರಯಾಶ್ರಯಿಭಾವವಿರುವುದರಿಂದ ನನಗೂ ಜ್ಞಾನಿಗೂ ಭೇದವಿದೆ ಎಂದು ಅರ್ಥ. ಅನೇಕ ಜನ್ಮಗಳ ಅನಂತರ ಜ್ಞಾನಿಯಾದವನು ನನ್ನನ್ನು ಹೊಂದುತ್ತಾನೆ ಹೊರತು ನಾನೇ ಆಗುವುದಿಲ್ಲ. ಗಂತೃಗಮ್ಯಭಾವವಿರುವುದರಿಂದಲೂ ಭೇದವೇ ಮೋಕ್ಷದೆಶೆಯಲ್ಲಿಯೂ ಇದೆ. ಇನ್ನು ಸಂಸಾರದೆಶೆಯಲ್ಲಿ ಭೇದವಿದೆ ಎಂದು ಇನ್ನೊಮ್ಮೆ ಹೇಳಬೇಕಾದ ಅವಶ್ಯಕತೆ ಇಲ್ಲ.

ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥೧೯॥

ವಾಸುದೇವನು ಸರ್ವನಿಯಾಮಕನು ಅಥವಾ ಸರ್ವವ್ಯಾಪ್ತನು ಎಂದು ತಿಳಿಯುವ ಮಹಾತ್ಮನು ಅತ್ಯಂತ ದುರ್ಲಭನಾದವನು.

ವಿಶೇಷ ವಿಚಾರ– 'ಅಹಂ ಕೃತ್ಸ್ನಸ್ಯ ಜಗತಃ' ಎಂದು ಹೇಳಿದ ಸರ್ವಜಗತ್‌ಸ್ರಷ್ಟೃತ್ವ, 'ಮತ್ತಃ ಪರತರಂ ನಾನ್ಯತ್' ಎಂದು ಹೇಳಿದ ಸರ್ವೋತ್ತಮತ್ವ, 'ಮಯಿ ಸರ್ವಮಿದಂ ಪ್ರೋತಂ' ಎಂದು ಹೇಳಿದ ಸರ್ವಾಧಾರತ್ವ, 'ನಮಾಂ ದುಷ್ಕೃತಿನೋ ಮೂಢಾಃ', 'ಚತುರ್ವಿಧಾ ಭಜಂತೇ ಮಾಂ' ಎಂದು ಹೇಳಿದ ಜೀವವೈವಿಧ್ಯ, ಈ ಪ್ರಮೇಯವನ್ನು ಸುದುರ್ಲಭನಾದ ಮಹಾತ್ಮನಾದ ವಾಸುದೇವನು ತಿಳಿದಿದ್ದಾನೆ. ಅಥವಾ 'ವಾ ಅಸುದೇವಃ' ಎಂದು ಪದಚ್ಛೇದ ಮಾಡಿ ವಾಯುದೇವರು ತಿಳಿದಿದ್ದಾರೆ. ಏಕೆಂದರೆ ವಾಸುದೇವ ಕೃಷ್ಣನು ಮೂಲಗ್ರಂಥಕರ್ತೃ, ಅಸುದೇವರಾದ ಆಚಾರ್ಯರು ಭಾಷ್ಯಕರ್ತೃಗಳು.

ಅಥವಾ ಐಕ್ಯವನ್ನು ಹೇಳುವ ಪರರೂ ಸಹ ವಾಸುದೇವಃ ಸರ್ವಮಿತಿ' ಎಂಬಲ್ಲಿ 'ಯೋ ವೇದ' ಎಂದು ಅಧ್ಯಾಹಾರವನ್ನು ಮಾಡಬೇಕು. ಆಗ ಪೂರ್ವೋತ್ತರ ವಾಕ್ಯಗಳಿಂದ ವಿರೋಧ ಉಂಟಾಗುತ್ತದೆ. ಆದರ ಬದಲು 'ಯೋ ನ ವೇದ' ಎಂದು ಅಧ್ಯಾಹಾರ ಮಾಡಿದರೆ ಎಲ್ಲವೂ ಸಮಂಜಸವಾಗುತ್ತದೆ. ವಾಸುದೇವನು ಸರ್ವಾಭಿನ್ನನು ಎಂದು ಯಾರು ತಿಳಿಯುವುದಿಲ್ಲವೋ ಅಂತಹ ಮಹಾತ್ಮನು ಅತ್ಯಂತ ದುರ್ಲಭನಾದವನು ಎಂಬ ಅರ್ಥವು ದೊರೆಯುತ್ತದೆ.

ಅಥವಾ 'ಯೋ ವೇದ' ಎಂದು ಅಧ್ಯಾಹಾರ ಮಾಡಿದರೂ 'ಸರ್ವಂ ಸಮಾಪ್ನೋಷಿ ತತೋಸಿ ಸರ್ವಃ' ಎಂದು ಗೀತೆಯಲ್ಲಿಯೇ ಮುಂದೆ ಹೇಳುವುದರಿಂದ ಸರ್ವಂ ಎಂದರೆ ಸರ್ವವ್ಯಾಪಿಯಾದ ಬ್ರಹ್ಮ ಎಂದು ಅರ್ಥ, ವಾಸುದೇವನು ಸರ್ವವ್ಯಾಪಿ ಎಂಬ ಅರ್ಥವು ಅಬಾಧಿತವಾದುದು. ಚಿನ್ಮಾತ್ರೈಕ್ಯವನ್ನು ಹೇಳುವವರ ಮತದಲ್ಲಿ ಜೀವ-ಜಡಾತ್ಮಕ ಸಕಲ ಪ್ರಪಂಚದ ಏಕ್ಯವು ಅಯುಕ್ತವಾದುದು ಮತ್ತು ಇಲ್ಲಿ ಹೇಳಿದ ಅನೇಕ ಭೇದ ವಚನಗಳ ವಿರೋಧವು ಬರುತ್ತದೆ. ಆದ್ದರಿಂದ ನಾವು ಹೇಳಿದುದೇ ಸರಿಯಾದ ಅರ್ಥ. ಎಲ್ಲವೂ ವಾಸುದೇವನೇ ಆದರೆ ಎಲ್ಲವೂ ಸಮಾನವಾಗುವುದರಿಂದ 'ಜ್ಞಾನೀ ಮಮಾತ್ಮಾ' ಎಂದು ಜ್ಞಾನಿಗೆ ಹೇಳಿದ ಮಹತ್ವವಾಗಲೀ, ನಾಯಿಯೂ ಕೂಡ ವಾಸುದೇವನಾದುದರಿಂದ ಅಂತಹವನು ಸಿಗುವುದು ದುರ್ಲಭ ಎಂದು ಹೇಳಿದ ದುರ್ಲಭತ್ವವಾಗಲೀ ಕೂಡುವುದಿಲ್ಲ. 'ಸರ್ವ' ಎಂಬ ಶಬ್ದಕ್ಕೆ ತನ್ನ ಎದುರಾಗಿ ಬರುವ ವೈರಿಗಳನ್ನು ವಾರಣ ಮಾಡುತ್ತಾನೆ ಎಂದಾಗಲೀ ಅಥವಾ ಅನುಸರಿಸಿ ಬರುವ ಭಕ್ತರನ್ನು ಸ್ವೀಕರಿಸುತ್ತಾನೆ ಎಂದಾಗಲಿ ಲೌಕಿಕ ಅರ್ಥವನ್ನು ಮಾಡಿ ಕೃಷ್ಣನ ಮಹಿಮೆಯ ಪರವಾಗಿ ಅನ್ವಯಿಸಬಹುದು. ಆದ್ದರಿಂದ ಇಲ್ಲಿ ಯಾವ ಕ್ಷುದ್ರ ಉಪದ್ರವಕ್ಕೂ ಎಡೆಯಿಲ್ಲ. ಅಲ್ಲದೆ ಮುಂದಿನ ಶ್ಲೋಕದಲ್ಲಿ ಅನ್ಯದೇವತಾ ಭಕ್ತರನ್ನು ನಿಂದೆ ಮಾಡುವುದರಿಂದಲೂ ಎಲ್ಲರೂ ವಾಸುದೇವನೇ ಎಂಬ ಮೇಲ್ನೋಟದ ಅರ್ಥವು ಕೃಷ್ಣನಿಗೆ ಅಭಿಪ್ರೇತವಾದುದಲ್ಲ ಎಂದು ತಿಳಿಯುತ್ತದೆ.

ಕಾಮೈಸ್ತೈಸ್ತೈರ್ಹೃತಜ್ಞಾನಾಃ ಪ್ರಪದ್ಯಂತೇಽನ್ಯದೇವತಾಃ ।
ತಂ ತಂ ನಿಯಮಮಾಸ್ಥಾಯ ಪ್ರಕೃತ್ಯಾ ನಿಯತಾಃ ಸ್ವಯಾ ॥೨೦॥

ಆಯಾ ದೇವತೆಗಳಿಂದ ಕೊಡಲ್ಪಡುವ ಕಾಮ್ಯ ವಸ್ತುಗಳಿಂದ ನನ್ನ ಸರ್ವೋತ್ತಮತ್ವ ಜ್ಞಾನವನ್ನು ಕಳೆದುಕೊಂಡು ಆಯಾ ದೇವತೆಗಳ ಪೂಜೆಗೆ ಹೇಳಿದ ಲಿಂಗ ಭಸ್ಮ ಧಾರಣಾದಿ ನಿಯಮಗಳನ್ನು ಅನುಸರಿಸಿ ತಮ್ಮ ಅಸುರಾದಿ ಸ್ವಭಾವಕ್ಕೆ ಅನುಗುಣವಾಗಿ ಜನರು ಬೇರೆ ದೇವತೆಗಳನ್ನು ಪೂಜಿಸುತ್ತಾರೆ.

ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ ।
ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ ॥೨೧॥

ಯಾವ ಯಾವ ಭಕ್ತರು ಯಾವ ಯಾವ ಬ್ರಹ್ಮ-ರುದ್ರಾದಿಗಳ ಪ್ರತಿಮೆಗಳನ್ನು ಶ್ರದ್ಧೆಯಿಂದ ಅರ್ಚಿಸಿದರೂ ಅವರಿಗೆ ಅದೇ ಶ್ರದ್ಧೆಯನ್ನು ದೃಢಪಡಿಸುತ್ತೇನೆ.

ಸ ತಯಾ ಶ್ರದ್ಧಯಾ ಯುಕ್ತಸ್ತಸ್ಯಾರಾಧನಮೀಹತೇ ।
ಲಭತೇ ಚ ತತಃ ಕಾಮಾನ್ಮಯೈವ ವಿಹಿತಾನ್ ಹಿ ತಾನ್ ॥೨೨॥

ಆ ಭಕ್ತನು ಆ ಶ್ರದ್ಧೆಯಿಂದ ಕೂಡಿ ಅದೇ ದೇವತೆಯ ಆರಾಧನೆಯನ್ನು ಮಾಡಲು ತೊಡಗುತ್ತಾನೆ. ಆ ದೇವತೆಗಳಿಂದ ಅವನು ತನ್ನ ಕಾಮ್ಯವಸ್ತುಗಳನ್ನು ಪಡೆದರೂ ಆ ಕಾಮ್ಯವಸ್ತುಗಳು ಆ ದೇವತೆಗಳ ಅಂತರ್ಯಾಮಿಯಾದ ನನ್ನಿಂದಲೇ ಕೊಡಲ್ಪಟ್ಟವುಗಳು.

ವಿಶೇಷ ವಿಚಾರ– ಆ ಫಲಗಳು ಆ ದೇವತೆಗಳಿಂದ ಕೊಡಲ್ಪಡುವುದಿಲ್ಲ. ಏಕೆಂದರೆ ಆ ದೇವತೆಗಳಿಗೆ ತಮ್ಮನ್ನು ಆರಾಧಿಸುವವರಿಗೆ ಫಲವನ್ನು ಕೊಡುವ ಶಕ್ತಿಯೂ ಇಲ್ಲವೆಂದು ಅಭಿಪ್ರಾಯ.

ಅಂತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಮ್ ।
ದೇವಾನ್ ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪಿ ॥

ಅಲ್ಪಬುದ್ಧಿಯುಳ್ಳ ಅಂತಹ ಮಾನವರು ಪಡೆಯುವ ಫಲವು ಶೀಘ್ರವಾಗಿ ನಾಶವನ್ನು ಹೊಂದುತ್ತದೆ. ದೇವತೆಗಳನ್ನು ಪೂಜಿಸುವವರು ದೇವತೆಗಳನ್ನು ಹೊಂದುತ್ತಾರೆ. ನನ್ನ ಭಕ್ತರು ನನ್ನನ್ನೇ ಹೊಂದುತ್ತಾರೆ.

ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಮಬುದ್ಧಯಃ ।
ಪರಂ ಭಾವಮಜಾನಂತೋ ಮಮಾವ್ಯಯಮನುತ್ತಮಮ್ ॥೨೪॥

ಬುದ್ಧಿಶೂನ್ಯರಾದ ಮಾನವರು ನನ್ನ ಶಾಶ್ವತವಾದ, ಶ್ರೇಷ್ಠವಾದ ಸರ್ವೋತ್ತಮತ್ವ ಭಾವವನ್ನು ತಿಳಿಯದೆ ಬ್ರಹ್ಮಾದಿಗಳಿಗೂ ಅದೃಶ್ಯನಾದ ನನ್ನನ್ನು ಎಲ್ಲರಿಗೂ ಕಾಣುವ ಪಾಂಚಭೌತಿಕ ದೇಹವನ್ನು ಹೊಂದಿ, ಬ್ರಹ್ಮಾದಿ ಪಿಪೀಲಿಕಾಂತ ಜೀವರೂಪನಾಗಿ ಇದ್ದಾನೆ ಎಂದು ತಿಳಿಯುತ್ತಾರೆ. ಆದ್ದರಿಂದಲೇ ಅವರು ಬುದ್ಧಿಹೀನರು. ಅವರು ಪಡೆಯುವ ಫಲವು ಅಲ್ಪವಾದುದು.

ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ ।
ಮೂಢೋಽಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಮ್॥

ಯೋಗಮಾಯೆಯಿಂದ ಆವೃತನಾದ ನಾನು ಎಲ್ಲರಿಗೂ ನನ್ನನ್ನು ಸರಿಯಾಗಿ ತೋರಗೊಡುವುದಿಲ್ಲ. ಮೂಢರಾದ ಜನರು ನಾನು ಜನ್ಮರಹಿತನಾದವನು ಮತ್ತು ನಾಶರಹಿತನಾದವನು ಎಂದು ನನ್ನನ್ನು ತಿಳಿಯುವುದಿಲ್ಲ.

ವೇದಾಹಂ ಸಮತೀತಾನಿ ವರ್ತಮಾನಾನಿ ಚಾರ್ಜುನ ।
ಭವಿಷ್ಯಾಣಿ ಚ ಭೂತಾನಿ ಮಾಂ ತು ವೇದ ನ ಕಶ್ಚನ ॥೨೬॥

ಎಲೈ ಅರ್ಜುನನೇ, ನಾನು ಭೂತ-ವರ್ತಮಾನ-ಭವಿಷ್ಯಗಳೆಲ್ಲವನ್ನೂ ತಿಳಿದಿದ್ದೇನೆ. ಆದರೆ ನನ್ನನ್ನು ಯಾರೂ (ಪೂರ್ಣವಾಗಿ) ತಿಳಿದಿಲ್ಲ.

ವಿಶೇಷ ವಿಚಾರ– ಜೀವರಿಗೆ ಇರುವ ಅಸರ್ವಜ್ಞತ್ವ ಮತ್ತು ಕೃಷ್ಣನಿಗೆ ಸರ್ವಜ್ಞತ್ವವು ಅವರಲ್ಲಿರುವ ಭೇದಕ್ಕೆ ಪ್ರಯೋಜಕವೆಂದು ಕೃಷ್ಣನ ಅಭಿಪ್ರಾಯ.

ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಭಾರತ ।
ಸರ್ವಭೂತಾನಿ ಸಂಮೋಹಂ ಸರ್ಗೇ ಯಾಂತಿ ಪರಂತಪ ॥೨೭॥

ಎಲೈ ಭಾರತನೇ, ರಾಗ-ದ್ವೇಷಗಳಿಂದ ಉಂಟಾದ ಶೀತೋಷ್ಣಾದಿ ದ್ವಂದ್ವಗಳ ಮೋಹದಿಂದ ಎಲೈ ಪರಂತಪನೇ, ಸೃಷ್ಟಿಯಾದ ಮೇಲೆ ಎಲ್ಲ ಜೀವರೂ ಮೋಹವನ್ನು ಹೊಂದುತ್ತಾರೆ.

ಯೇಷಾಂ ತ್ವಂತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಮ್ ।
ತೇ ದ್ವಂದ್ವಮೋಹನಿರ್ಮುಕ್ತಾ ಭಜಂತೇ ಮಾಂ ದೃಢವ್ರತಾಃ ॥೨೮॥

ಯಾವ ಪುಣ್ಯಶಾಲಿಗಳಿಗೆ ಅವರು ಮಾಡಿದ ಪಾಪವು ನಾಶವನ್ನು ಹೊಂದುತ್ತದೆಯೋ ಅಂತಹವರು ಮಾತ್ರ ದ್ವಂದ್ವ ಮೋಹದಿಂದ ನಿರ್ಮುಕ್ತರಾಗಿ ದೃಢವಾದ ಶ್ರದ್ಧೆಯಿಂದ ನನ್ನನ್ನು ಭಜಿಸುತ್ತಾರೆ.

ಜರಾಮರಣಮೋಕ್ಷಾಯ ಮಾಮಾಶ್ರಿತ್ಯ ಯತಂತಿ ಯೇ ।
ತೇ ಬ್ರಹ್ಮ ತದ್ವಿದುಃ ಕೃತ್ಸ್ನಮಧ್ಯಾತ್ಮಂ ಕರ್ಮ ಚಾಖಿಲಮ್ ॥೨೯॥

ನನ್ನನ್ನು ಆಶ್ರಯಿಸಿ ಯಾರು ಮುಪ್ಪು ಸಾವುಗಳಿಂದ ಬಿಡುಗಡೆಯನ್ನು ಹೊಂದಲು ಪ್ರಯತ್ನವನ್ನು ಪಡುತ್ತಾರೆಯೋ ಅವರು ಆ ಬ್ರಹ್ಮನನ್ನು ತಿಳಿಯುತ್ತಾರೆ, ಅಧ್ಯಾತ್ಮವೆಲ್ಲವನ್ನೂ ತಿಳಿಯುತ್ತಾರೆ ಮತ್ತು ಎಲ್ಲ ಕರ್ಮಗಳನ್ನೂ ತಿಳಿಯುತ್ತಾರೆ.

ಸಾಧಿಭೂತಾಧಿದೈವಂ ಮಾಂ ಸಾಧಿಯಜ್ಞಂ ಚ ಯೇ ವಿದುಃ ।
ಪ್ರಯಾಣಕಾಲೇಽಪಿ ಚ ಮಾಂ ತೇ ವಿದುರ್ಯುಕ್ತಚೇತಸಃ ॥೩೦॥

ಯಾರು ಪ್ರಯಾಣ ಕಾಲದಲ್ಲಿ ಅಧಿಭೂತ, ಅಧಿದೈವ ಮತ್ತು ಅಧಿಯಜ್ಞಗಳಿಂದ ಸಹಿತನಾದ ನನ್ನನ್ನು ತಮ್ಮ ಹೃದಯದಲ್ಲಿರುವವನೆಂದು ತಿಳಿಯುತ್ತಾರೆಯೋ, ಯೋಗಯುಕ್ತ ಮನಸ್ಸುಳ್ಳ ಅವರು ನನ್ನನ್ನು ಸರಿಯಾಗಿ ತಿಳಿಯುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಏಕೋನತ್ರಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಷೋಡಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತನೆಯ ಅಧ್ಯಾಯ

ಭಗವದ್ಗೀತಾ – ಜ್ಞಾನ-ವಿಜ್ಞಾನ ಯೋಗ.

ಅರ್ಜುನಃ

ಕಿಂ ತದ್ ಬ್ರಹ್ಮ ಕಿಮಧ್ಯಾತ್ಮಂ ಕಿಂ ಕರ್ಮ ಪುರುಷೋತ್ತಮ ।
ಅಧಿಭೂತಂ ಚ ಕಿಂ ಪ್ರೋಕ್ತಮಧಿದೈವಂ ಕಿಮುಚ್ಯತೇ ॥೧॥

ಅಧಿಯಜ್ಞಃ ಕಥಂ ಕೋಽತ್ರ ದೇಹೇಽಸ್ಮಿನ್ ಮಧುಸೂದನ ।
ಪ್ರಯಾಣಕಾಲೇ ಚ ಕಥಂ ಜ್ಞೇಯೋಽಸಿ ನಿಯತಾತ್ಮಭಿಃ ॥೨॥

ಅರ್ಜುನ– ಎಲೈ ಪುರುಷೋತ್ತಮನೇ, ಬ್ರಹ್ಮ ಎಂದರೆ ಯಾವುದು? ಅಧ್ಯಾತ್ಮವೆಂದರೆ ಏನು? ಕರ್ಮವೆಂದರೆ ಏನು? ನೀನು ಹೇಳಿದ ಅಧಿಭೂತ, ಅಧಿದೈವ ಎಂದರೆ ಏನು? ಎಲೈ ಮಧುಸೂದನನೇ, ಈ ದೇಹದಲ್ಲಿ ಅಧಿಯಜ್ಞನು ಯಾರು? ಅವನು ಹೇಗೆ ಅಧಿಯಜ್ಞನಾಗುತ್ತಾನೆ? ನಿಯತಚಿತ್ತವುಳ್ಳವರು ದೇಹತ್ಯಾಗ ಕಾಲದಲ್ಲಿ ನಿನ್ನನ್ನು ಹೇಗೆ ಸ್ಮರಣೆ ಮಾಡಬೇಕು?

ಶ್ರೀಭಗವಾನ್

ಅಕ್ಷರಂ ಬ್ರಹ್ಮ ಪರಮಂ ಸ್ವಭಾವೋಽಧ್ಯಾತ್ಮಮುಚ್ಯತೇ ।
ಭೂತಭಾವೋದ್ಭವಕರೋ ವಿಸರ್ಗಃ ಕರ್ಮಸಂಜ್ಞಿತಃ ॥೩॥

ಶ್ರೀಭಗವಾನ್– ಚತುರ್ವಿಧ ನಾಶರಹಿತನಾದ, ಪರಮಾಕ್ಷರ ಶಬ್ದವಾಚ್ಯನಾದವನು ಬ್ರಹ್ಮ (ಪ್ರಕೃತಿಯೂ ಅಕ್ಷರ ಶಬ್ದವಾಚ್ಯವಾದುದರಿಂದ 'ಪರಮಂ ಅಕ್ಷರಂ' ಎಂದು ಹೇಳಲಾಗಿದೆ. ಆತ್ಮ ಎಂದರೆ ಜೀವ. ಅವನನ್ನು ಸಂಬಂಧಿಸಿ ಅವನ ಹೊರಗೆ ಇರುವ ದೇಹೇಂದ್ರಿಯಾದಿಗಳು ಅಧ್ಯಾತ್ಮ ಎಂದು ಹೇಳಲ್ಪಡುತ್ತವೆ. ಎಲ್ಲ ಜೀವರಿಗೂ ಉತ್ಪತ್ತಿಯನ್ನು ಉಂಟುಮಾಡುವ ಪರಮಾತ್ಮನ ಆದಿಕಾಲೀನವಾದ ಸೃಷ್ಟಿ ವ್ಯಾಪಾರವು ಕರ್ಮ ಎಂದು ಕರೆಯಲ್ಪಡುತ್ತದೆ.

ಅಧಿಭೂತಂ ಕ್ಷರೋ ಭಾವಃ ಪುರುಷಶ್ಚಾಧಿದೈವತಮ್ ।
ಅಧಿಯಜ್ಞೋಽಹಮೇವಾತ್ರ ದೇಹೇ ದೇಹಭೃತಾಂ ವರ ॥೪॥

ಎಲೈ ದೇಹವನ್ನು ಧರಿಸಿದವರಲ್ಲಿ ಶ್ರೇಷ್ಠನೇ, ನಾಶವನ್ನು ಹೊಂದುವುದರಿಂದ ಕ್ಷರಶಬ್ದವಾಚ್ಯವಾದ ಜೀವರ ದೇಹವು ಅಧಿಭೂತವೆನಿಸುತ್ತದೆ. ದೇಹವು ಪಂಚ ಮಹಾಭೂತ ಸಂಬಂಧಿಯಾಗಿರುವುದರಿಂದ ಅಧಿಭೂತ ಶಬ್ದದಿಂದ ಹೇಳಲ್ಪಡುತ್ತದೆ. ದೇವತೆಗಳನ್ನು ಉದ್ದೇಶಿಸಿ ಯಜ್ಞಾದಿಗಳಿಂದ ಅವರಿಗೆ ಪ್ರೀತಿಯನ್ನು ಉಂಟು ಮಾಡುವ ದೇವಸಂಬಂಧಿಯಾದ ಜೀವನೇ ಅಧಿದೈವತ. ಸರ್ವಯಜ್ಞಭೋಕ್ತೃವಾದುದರಿಂದ ಯಜ್ಞಸಂಬಂಧಿಯಾಗಿ ಈ ದೇಹದಲ್ಲಿ ನೆಲೆಸುವುದರಿಂದ ನಾನೇ ಅಧಿಯಜ್ಞ ಶಬ್ದವಾಚ್ಯನಾದವನು.

ಅಂತಕಾಲೇ ಚ ಮಾಮೇವ ಸ್ಮರನ್ ಮುಕ್ತ್ವಾ ಕಲೇವರಮ್ ।
ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ ॥೫॥

ಅಂತಕಾಲದಲ್ಲಿ ನನ್ನನ್ನು ಸ್ಮರಿಸುತ್ತಲೇ ಯಾವನು ದೇಹವನ್ನು ಪರಿತ್ಯಾಗ ಮಾಡುತ್ತಾನೆಯೋ ಅವನು ನನ್ನಲ್ಲಿ ಭಕ್ತಿಯನ್ನೂ ಮತ್ತು ನನ್ನ ಪ್ರಾಕೃಯನ್ನೂ, ನನ್ನ ಸಾದೃಶ್ಯವನ್ನೂ ಹೊಂದುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ.

ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್ ।
ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ ॥೬॥

ಎಲೈ ಕೌಂತೇಯನೇ, ಯಾವ ಯಾವ ವಸ್ತುವನ್ನು ಸ್ಮರಿಸಿ ಕೊನೆಯಲ್ಲಿ ದೇಹವನ್ನು ತ್ಯಜಿಸುತ್ತಾನೆಯೋ ಅಂತಹದೇ ವಸ್ತುಗಳ (ಅಂತಹ ಜೀವರ) ದೇಹಗಳನ್ನು ಪಡೆಯುತ್ತಾನೆ. ಆದ್ದರಿಂದ ಯಾವಾಗಲೂ ಪರಮಾತ್ಮನ ಚಿಂತನೆಯಿಂದ ಮನಸ್ಸನ್ನು ಒಳ್ಳೆಯ ಸಂಸ್ಕಾರವುಳ್ಳದ್ದಾಗಿ ಮಾಡಬೇಕು.

ತಸ್ಮಾತ್ ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ।
ಮಯ್ಯರ್ಪಿತಮನೋಬುದ್ಧಿರ್ಮಾಮೇವೈಷ್ಯಸ್ಯಸಂಶಯಃ ॥೭॥

ಆದ್ದರಿಂದ ಎಲ್ಲ ಕಾಲದಲ್ಲಿಯೂ ನನ್ನನ್ನು ಸ್ಮರಿಸು, ಯುದ್ಧವನ್ನು ಮಾಡು. ಮನೋಬುದ್ಧಿಗಳನ್ನು ನನ್ನಲ್ಲಿ ಅರ್ಪಿಸಿದ ನೀನು ನನ್ನನ್ನೇ ಹೊಂದುವಿ, ಇದರಲ್ಲಿ ಸಂಶಯವಿಲ್ಲ.

ಅಭ್ಯಾಸಯೋಗಯುಕ್ತೇನ ಚೇತಸಾ ನಾನ್ಯಗಾಮಿನಾ ।
ಪರಮಂ ಪುರುಷಂ ದಿವ್ಯಂ ಯಾತಿ ಪಾರ್ಥಾನುಚಿಂತಯನ್ ॥೮॥

ಎಲೈ ಪಾರ್ಥನೇ, ಅಭ್ಯಾಸರೂಪವಾದ ಉಪಾಯವನ್ನು ಹೊಂದಿದ, ಬೇರೆ ವಿಷಯಕ್ಕೆ ಹೋಗದಿರುವ ಮನಸ್ಸಿನಿಂದ ತನ್ನ ಯೋಗ್ಯತೆಗೆ ಅನುಗುಣವಾಗಿ ಚಿಂತನೆಯನ್ನು ಮಾಡುವವನು ದಿವ್ಯನಾದ ಪರಮಪುರುಷನನ್ನು ಹೊಂದುತ್ತಾನೆ.

ಕವಿಂ ಪುರಾಣಮನುಶಾಸಿತಾರಮಣೋರಣೀಯಾಂಸಮನುಸ್ಮರೇದ್ ಯಃ ।
ಸರ್ವಸ್ಯ ಧಾತಾರಮಚಿಂತ್ಯರೂಪಮಾದಿತ್ಯವರ್ಣಂ ತಮಸಃ ಪರಸ್ತಾತ್ ॥೯॥

ಪ್ರಯಾಣಕಾಲೇ ಮನಸಾऽಚಲೇನ
ಭಕ್ತ್ಯಾ ಯುಕ್ತೋ ಯೋಗಬಲೇನ ಚೈವ ।
ಭ್ರುವೋರ್ಮಧ್ಯೇ ಪ್ರಾಣಮಾವೇಶ್ಯ ಸಮ್ಯಕ್
ಸ ತಂ ಪರಂ ಪುರುಷಮುಪೈತಿ ದಿವ್ಯಮ್ ॥೧೦॥

ಸರ್ವಜ್ಞನೂ, ಅನಾದಿನಿತ್ಯನೂ, ಸರ್ವನಿಯಾಮಕನೂ, ಅಣುವಿಗಿಂತ ಅಣುವಾದವನೂ, ಎಲ್ಲವನ್ನೂ ಅನುಗ್ರಹಿಸುವವನೂ, ತರ್ಕಕ್ಕೆ ನಿಲುಕದವನೂ,

ಉದಯಿಸುವ ಸೂರ್ಯನ ಬಣ್ಣವನ್ನು ಹೊಂದಿದವನೂ, ಪ್ರಕೃತಿಗಿಂತಲೂ ಶ್ರೇಷ್ಠನಾದವನೂ ಆದ ಅವನನ್ನು ದೇಹತ್ಯಾಗ ಕಾಲದಲ್ಲಿ ಯಾವನು ನಿಶ್ಚಲವಾದ ಮನಸ್ಸಿನಿಂದ ಭಕ್ತಿಯಿಂದಲೂ ಮತ್ತು ಯೋಗಬಲದಿಂದಲೂ ಕೂಡಿದವನಾಗಿ ಸ್ಮರಣೆ ಮಾಡುತ್ತಾ ಹುಬ್ಬುಗಳ ಮಧ್ಯದಲ್ಲಿ ಪ್ರಾಣವಾಯುವನ್ನು ಆಕರ್ಷಿಸಿ, ಚೆನ್ನಾಗಿ ಸ್ಥಾಪಿಸಿ (ಶ್ವಾಸ ನಿರೋಧವನ್ನು ಮಾಡಿ) ದೇಹವನ್ನು ತ್ಯಾಗ ಮಾಡುತ್ತಾನೆಯೋ ಅವನು ಆ ದಿವ್ಯನಾದ ಶ್ರೇಷ್ಠವಾದ ಪುರುಷನನ್ನು ಹೊಂದುತ್ತಾನೆ.

ಯದಕ್ಷರಂ ವೇದವಿದೋ ವದಂತಿ
ವಿಶಂತಿ ಯದ್ ಯತಯೋ ವೀತರಾಗಾಃ ।
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ
ತತ್ತೇ ಪದಂ ಸಂಗ್ರಹೇಣ ಪ್ರವಕ್ಷ್ಯೇ ॥೧೧॥

ವೇದವನ್ನು ತಿಳಿದವರು ಯಾವುದನ್ನು ಅಕ್ಷರ ಎಂದು ಹೇಳುತ್ತಾರೆಯೋ, ರಾಗ ರಹಿತರಾದ ಯತಿಗಳು ಯಾವುದನ್ನು ಪ್ರವೇಶ ಮಾಡುತ್ತಾರೆಯೋ, ಯಾವುದನ್ನು ಬಯಸಿ ಬ್ರಹ್ಮಚರ್ಯವನ್ನು ಆಚರಿಸುತ್ತಾರೆಯೋ ಅಂತಹ ಗಮ್ಯವಾದ ವಸ್ತುವನ್ನು ನಿನಗೆ ಸಂಕ್ಷೇಪವಾಗಿ ಹೇಳುವೆನು.

ಸರ್ವದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುಧ್ಯ ಚ ।
ಮೂರ್ಧ್ನ್ಯಾಧಾಯಾತ್ಮನಃ ಪ್ರಾಣಮಾಸ್ಥಿತೋ ಯೋಗಧಾರಣಾಮ್ ॥

ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್ ।
ಯಃ ಪ್ರಯಾತಿ ತ್ಯಜನ್ ದೇಹಂ ಸ ಯಾತಿ ಪರಮಾಂ ಗತಿಮ್ ॥೧೩॥

ಎಲ್ಲ ದ್ವಾರಗಳನ್ನೂ ವಾಯುಸಂಚಾರವಿಲ್ಲದಂತೆ ನಿಯಂತ್ರಿಸಿ, ಮನಸ್ಸನ್ನು ಸರ್ವಸಂಹಾರಕನಾದುದರಿಂದ ಹೃದ್ ನಾಮಕನಾದ ಪರಮಾತ್ಮನಲ್ಲಿ ನೆಲೆಸಿ, ತನ್ನ ಪ್ರಾಣವಾಯುವನ್ನು ಶಿರಸ್ಸಿನಲ್ಲಿ ತಗೆದುಕೊಂಡು ಹೋಗಿ ನಿಲ್ಲಿಸಿ, ಯೋಗಧಾರಣೆಯನ್ನು ಮಾಡಿ, ಓಂಕಾರವನ್ನು ಉಚ್ಚರಿಸುತ್ತಾ, ಓಂಕಾರ ಪ್ರತಿಪಾದ್ಯನಾದ ಬ್ರಹ್ಮನಾದ ನನ್ನನ್ನು ಸ್ಮರಣೆ ಮಾಡುತ್ತಾ, ದೇಹವನ್ನು ತ್ಯಜಿಸಿ ಯಾವನು ಪ್ರಯಾಣ ಮಾಡುತ್ತಾನೆಯೋ ಅವನು ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ.

ಅನನ್ಯಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।
ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥೧೪॥

ಎಲೈ ಪಾರ್ಥನೇ, ಯಾವನು ತನ್ನ ಮನಸ್ಸಿನಲ್ಲಿ ಇನ್ನೊಂದು ವಿಷಯವನ್ನು ಚಿಂತಿಸದೆ ನಿತ್ಯವೂ ನನ್ನನ್ನೇ ಸ್ಮರಿಸುತ್ತಾನೆಯೋ ಅಂತಹ ನಿತ್ಯಯೋಗವುಳ್ಳ ಯೋಗಿಗೆ ನಾನು ಸುಲಭನಾದವನು.

ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಮ್ ।
ನಾಪ್ನುವಂತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ಗತಾಃ ॥೧೫॥

ಮಹಾತ್ಮರಾದವರು ಶ್ರೇಷ್ಠವಾದ ಸಿದ್ಧಿಯನ್ನು ಪಡೆದು ನನ್ನನ್ನು ಹೊಂದಿ ದುಃಖಕ್ಕೆ ಆಶ್ರಯವೂ ಮತ್ತು ಅನಿತ್ಯವೂ ಆದ ಪುನರ್ಜನ್ಮವನ್ನು ಪಡೆಯುವುದಿಲ್ಲ.

ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।
ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ ॥೧೬॥

ಮಹಾಮೇರುಪರ್ವತದ ಮೇಲಿರುವ ಬ್ರಹ್ಮಸದನ ಪರ್ಯಂತವಾಗಿ ಇರುವ ಲೋಕಗಳು ಪುನರಾವರ್ತಿಯುಳ್ಳ ಸಂಸಾರಿಗಳಿಂದ ಕೂಡಿರುತ್ತವೆ. ಅಲ್ಲಿ ಮುಕ್ತರು ಇರುವುದಿಲ್ಲ. ಅದಕ್ಕಿಂತ ಮೇಲೆ ಮುಕ್ತರೂ ಸಂಚರಿಸುತ್ತಾರೆ ಮತ್ತು ಸಂಸಾರಿಗಳೂ ಇರುತ್ತಾರೆ. ತಮ್ಮ ಮುಕ್ತಲೋಕದಲ್ಲಿ ಮಾತ್ರ ಮುಕ್ತರು ಮಾತ್ರ ಇರುತ್ತಾರೆ. ಎಲೈ ಕೌಂತೇಯನೇ, ನನ್ನನ್ನು ಹೊಂದಿದ ಮೇಲೆ ಪುನರ್ಜನ್ಮವು ಇರುವುದಿಲ್ಲ.

ಸಹಸ್ರಯುಗಪರ್ಯಂತಮಹರ್ಯದ್ಬ್ರಹ್ಮಣೋ ವಿದುಃ ।
ರಾತ್ರಿಂ ಯುಗಸಹಸ್ರಾಂತಾಂ ತೇಽಹೋರಾತ್ರವಿದೋ ಜನಾಃ ॥೧೭॥

ಅಹೋರಾತ್ರಿಗಳನ್ನು ತಿಳಿದ ಜ್ಞಾನಿ ಜನರು ಬ್ರಹ್ಮದೇವರ ಹಗಲನ್ನು ಒಂದು ಸಹಸ್ರ ಚತುರ್ಯುಗಗಳ ಪರ್ಯಂತವೆಂದು ತಿಳಿಯುತ್ತಾರೆ. ರಾತ್ರಿಯನ್ನೂ ಸಹ ಚತುರ್ಯುಗ ಸಹಸ್ರ ಪರ್ಯಂತವಾದುದು ಎಂದು ತಿಳಿಯುತ್ತಾರೆ.

ಅವ್ಯಕ್ತಾದ್ ವ್ಯಕ್ತಯಃ ಸರ್ವಾಃ ಪ್ರಭವಂತ್ಯಹರಾಗಮೇ ।
ರಾತ್ರ್ಯಾಗಮೇ ಪ್ರಲೀಯಂತೇ ತತ್ರೈವಾವ್ಯಕ್ತಸಂಜ್ಞಕೇ ॥೧೮॥

ಬ್ರಹ್ಮದೇವರ ಹಗಲು ಉಂಟಾದಾಗ ಎಲ್ಲ ಜೀವರು ಅವ್ಯಕ್ತವಾದ ಪ್ರಕೃತಿಯಿಂದ ಪ್ರಾಕೃತವಾದ ದೇಹವುಳ್ಳವರಾಗಿ ಜನಿಸುತ್ತಾರೆ. ರಾತ್ರಿಯು ಉಂಟಾದಾಗ ಅಲ್ಲಿಯೇ ಅವ್ಯಕ್ತ ತತ್ತ್ವದಲ್ಲಿ ಮತ್ತು ಅವ್ಯಕ್ತನಾಮಕ ಪರಮಾತ್ಮನಲ್ಲಿ ಲಯವನ್ನು ಹೊಂದುತ್ತಾರೆ.

ಭೂತಗ್ರಾಮಃ ಸ ಏವಾಯಂ ಭೂತ್ವಾ ಭೂತ್ವಾ ಪ್ರಲೀಯತೇ ।
ರಾತ್ರ್ಯಾಗಮೇऽವಶಃ ಪಾರ್ಥ ಪ್ರಭವತ್ಯಹರಾಗಮೇ ॥೧೯॥

ಈ ಚರಾಚರ ಜೀವಸಮುದಾಯವು ಪುನಃ ಪುನಃ ಹುಟ್ಟಿ ನಾಶವನ್ನು ಹೊಂದುತ್ತದೆ. ಎಲೈ ಪಾರ್ಥನೇ, ಹಗಲಿನಲ್ಲಿ ಜನಿಸುತ್ತದೆ ಮತ್ತು ರಾತ್ರಿಯು ಉಂಟಾದಾಗ ವಿಷ್ಣುವಶವಾಗಿ ಲಯವನ್ನು ಹೊಂದುತ್ತದೆ. (ಸೃಷ್ಟಿ-ಪ್ರಳಯಗಳ ಅವಿಚ್ಛೇದವು ಭಗವಂತನ ಮಹಾಮಹಿಮೆ ಎಂದು ತಾತ್ಪರ್ಯ).

ಪರಸ್ತಸ್ಮಾತ್ ತು ಭಾವೋऽನ್ಯೋऽವ್ಯಕ್ತೋऽವ್ಯಕ್ತಾತ್ ಸನಾತನಃ ।
ಯಃ ಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ ॥೨೦॥

ಅವ್ಯಕ್ತೋऽಕ್ಷರ ಇತ್ಯುಕ್ತಸ್ತಮಾಹುಃ ಪರಮಾಂ ಗತಿಮ್ ।
ಯಂ ಪ್ರಾಪ್ಯ ನ ನಿವರ್ತಂತೇ ತದ್ಧಾಮ ಪರಮಂ ಮಮ ॥೨೧॥

ಆ ಭೂತಗ್ರಾಮಕ್ಕಿಂತಲೂ ಭಿನ್ನನಾಗಿ ಉತ್ತಮನಾಗಿರುವ ಪರಮಾತ್ಮನೆಂಬ ವಸ್ತುವೇನಿದೆಯೋ ಅದು ಅವ್ಯಕ್ತತತ್ತ್ವಕ್ಕಿಂತಲೂ ಅವ್ಯಕ್ತವಾದುದು. ವೇದಪ್ರತಿವಾದ್ಯವಾದ ಆ ತತ್ತ್ವವು ಎಲ್ಲ ಭೂತಗಳು ನಾಶವನ್ನು ಹೊಂದಿದರೂ ತಾನು ನಾಶವನ್ನು ಹೊಂದುವುದಿಲ್ಲ. ಅವನನ್ನು ಅವ್ಯಕ್ತ ಎಂದೂ, ಅಕ್ಷರ ಎಂದೂ, ಪರಮಾಗತಿ ಎಂದೂ ಕರೆಯುತ್ತಾರೆ. ಎಲೈ ಅರ್ಜುನನೇ, ಯಾವುದನ್ನು ಹೊಂದಿ ಪುನಃ ಹಿಂದಿರುಗುವುದಿಲ್ಲವೋ ಅದು ನನ್ನ ಶ್ರೇಷ್ಠವಾದ ಭವನ.

ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ ।
ಯಸ್ಯಾಂತಃಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಮ್ ॥೨೨॥

ಎಲೈ ಪಾರ್ಥನೇ, ಯಾವನೊಳಗೆ ಚರಾಚರ ಜೀವರ ಮತ್ತು ಜಡಗಳ ಸಮುದಾಯವಿದೆಯೋ, ಯಾವನು ಈ ಎಲ್ಲ ಜಗತ್ತನ್ನು ವ್ಯಾಪಿಸಿದ್ದಾನೆಯೋ ಅಂತಹ ಪರಮಪುರುಷನು ಅನ್ಯವಿಷಯವಲ್ಲದ ಮುಖ್ಯವಾದ ಭಕ್ತಿಯಿಂದ ಮಾತ್ರ ಹೊಂದಲ್ಪಡುವವನು.

ಯತ್ರ ಕಾಲೇ ತ್ವನಾವೃತ್ತಿಮಾವೃತ್ತಿಂ ಚೈವ ಯೋಗಿನಃ ।
ಪ್ರಯಾತಾ ಯಾಂತಿ ತಂ ಕಾಲಂ ವಕ್ಷ್ಯಾಮಿ ಭರತರ್ಷಭ ॥೨೩॥

ಎಲೈ ಭರತಶ್ರೇಷ್ಠನೇ, ಯಾವ ಕಾಲದಲ್ಲಿ ದೇಹತ್ಯಾಗವನ್ನು ಮಾಡುವ ಯೋಗಿಯು ಪುನಃ ಆವೃತ್ತಿಯನ್ನು ಅಥವಾ ಅನಾವೃತ್ತಿಯನ್ನು ಹೊಂದುತ್ತಾನೆಯೋ ಆ ಕಾಲವನ್ನು ಹೇಳುವೆನು.

ಅಗ್ನಿರ್ಜ್ಯೋತಿರಹಃ ಶುಕ್ಲಃ ಷಣ್ಮಾಸಾ ಉತ್ತರಾಯಣಮ್ ।
ತತ್ರ ಪ್ರಯಾತಾ ಗಚ್ಛಂತಿ ಬ್ರಹ್ಮ ಬ್ರಹ್ಮವಿದೋ ಜನಾಃ ॥೨೪॥

ಅಗ್ನಿದೇವತೆ, ಜ್ಯೋತಿಸ್ ಎಂದರೆ ಅರ್ಚನಾಮಕ ದೇವತೆ, ಅಹರಭಿಮಾನಿ ದೇವತೆ, ಶುಕ್ಲಪಕ್ಷಾಭಿಮಾನಿ ದೇವತೆ, ಉತ್ತರಾಯಣಾಭಿಮಾನಿ ದೇವತೆ, ಈ ಕ್ರಮದಲ್ಲಿ ಪ್ರಯಾಣ ಮಾಡಿದ ಬ್ರಹ್ಮಜ್ಞಾನಿಗಳಾದ ಜನರು ಬ್ರಹ್ಮನನ್ನೇ ಹೊಂದುತ್ತಾರೆ.

ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಮ್ ।
ತತ್ರ ಚಾಂದ್ರಮಸಂ ಜ್ಯೋತಿರ್ಯೋಗೀ ಪ್ರಾಪ್ಯ ನಿವರ್ತತೇ ॥೨೫॥

ಧೂಮಾಭಿಮಾನಿದೇವತೆ, ರಾತ್ರ್ಯಭಿಮಾನಿ ದೇವತೆ, ಕೃಷ್ಣಪಕ್ಷಾಭಿಮಾನಿ ದೇವತೆ, ದಕ್ಷಿಣಾಯನಾಭಿಮಾನಿ ದೇವತೆ, ಚಂದ್ರ, ಈ ಕ್ರಮದಲ್ಲಿ ಪ್ರಯಾಣ ಮಾಡಿದ ಯೋಗಿಗಳು ಚಂದ್ರನಿಂದ ಹಿಂದಿರುಗುತ್ತಾರೆ.

ಶುಕ್ಲಕೃಷ್ಣೇ ಗತೀ ಹ್ಯೇತೇ ಜಗತಃ ಶಾಶ್ವತೇ ಮತೇ ।
ಏಕಯಾ ಯಾತ್ಯನಾವೃತ್ತಿಮನ್ಯಯಾऽऽವರ್ತತೇ ಪುನಃ ॥೨೬॥

ಈ ಶುಕ್ಲ-ಕೃಷ್ಣಗತಿಗಳು ಜಗತ್ತಿಗೆ ಶಾಶ್ವತವಾದವುಗಳು ಎಂದು ಹೇಳಲ್ಪಡುತ್ತವೆ. ಒಂದು ಗತಿಯಿಂದ ಅನಾವೃತ್ತಿಯನ್ನೂ, ಇನ್ನೊಂದು ಗತಿಯಿಂದ ಪುನರಾವೃತ್ತಿಯನ್ನೂ ಜೀವರು ಹೊಂದುತ್ತಾರೆ.

ನೈತೇ ಸೃತೀ ಪಾರ್ಥ ಜಾನನ್ ಯೋಗೀ ಮುಹ್ಯತಿ ಕಶ್ಚನ ।
ತಸ್ಮಾತ್ ಸರ್ವೇಷು ಕಾಲೇಷು ಯೋಗಯುಕ್ತೋ ಭವಾರ್ಜುನ ॥೨೭॥

ಎಲೈ ಪಾರ್ಥನೇ, ಈ ಎರಡು ಮಾರ್ಗಗಳನ್ನು ತಿಳಿದ ಯಾವ ಯೋಗಿಯೂ ಮೋಹಕ್ಕೆ ಒಳಗಾಗುವುದಿಲ್ಲ. ಆದ್ದರಿಂದ ಎಲೈ ಅರ್ಜುನನೇ, ಎಲ್ಲ ಕಾಲಗಳಲ್ಲಿಯೂ ಯೋಗಯುಕ್ತನಾಗಿರು.

ವೇದೇಷು ಯಜ್ಞೇಷು ತಪಸು ಚೈವ
ದಾನೇಷು ಯತ್ಪುಣ್ಯಫಲಂ ಪ್ರದಿಷ್ಟಮ್ ।
ಅತ್ಯೇತಿ ತತ್ಸರ್ವಮಿದಂ ವಿದಿತ್ವಾ ಯೋಗೀ
ಪರಂ ಸ್ಥಾನಮುಪೈತಿ ಚಾದ್ಯಮ್ ॥೨೮॥

ವೇದಗಳಲ್ಲಿ, ಯಜ್ಞಗಳಲ್ಲಿ, ತಪಸ್ಸುಗಳಲ್ಲಿ ಮತ್ತು ದಾನಗಳಲ್ಲಿ ಯಾವ ಪುಣ್ಯಫಲವು ಹೇಳಲ್ಪಟ್ಟಿದೆಯೋ ಯೋಗಿಯಾದವನು ತನ್ನ ಯೋಗ ಸಾಮರ್ಥ್ಯದಿಂದ, ಭಗವಂತನ ಅನುಗ್ರಹದಿಂದ ಅವೆಲ್ಲವನ್ನೂ ಮೀರಿ ಶ್ರೇಷ್ಠವಾದ ಸ್ಥಾನವನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ತ್ರಿಂಶೋಽಧ್ಯಾಯಃ ॥
॥ ಭಗವದ್ಗೀತಾಪರ್ವಗ ಸಪ್ತಮೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊಂದನೆಯ ಅಧ್ಯಾಯ

ಭಗವದ್ಗೀತಾ – ರಾಜಗುಹ್ಯಯೋಗ
(ಭಗವನ್‌ಮಹಿಮಾವರ್ಣನರೂಪವಾದ ಭಕ್ತಿಯೋಗ).

ಶ್ರೀಭಗವಾನ್

ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ ।
ಜ್ಞಾನಂ ವಿಜ್ಞಾನಸಹಿತಂ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥೧॥

ಶ್ರೀಭಗವಾನ್– ಅಸೂಯಾ ರಹಿತನಾದ ನಿನಗೆ ಅತ್ಯಂತ ರಹಸ್ಯವಾದ ವಿಜ್ಞಾನ ಸಹಿತವಾದ ಈ ಜ್ಞಾನವನ್ನು ಉಪದೇಶಿಸುವೆನು. ಅದನ್ನು ತಿಳಿದು ನೀನು ಅಶುಭಗಳಿಂದ ನಿರ್ಮುಕ್ತನಾಗುವಿ.

ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಮ್ ।
ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಮ್ ॥೨॥

ಇದು ವಿದ್ಯೆಗಳಲ್ಲಿ ಶ್ರೇಷ್ಠವಾದುದು, ರಹಸ್ಯಗಳಲ್ಲಿ ಶ್ರೇಷ್ಠವಾದುದು, ಪವಿತ್ರವಾದುದು, ಉತ್ತಮವಾದುದು, ಯೋಗಿಗಳಿಂದ ಪ್ರತ್ಯಕ್ಷವಾಗಿ ತಿಳಿಯಲ್ಪಡುವುದು, ಧರ್ಮಸಾಧಕವಾದುದು, ನಾಶರಹಿತವಾದುದು ಮತ್ತು ಸುಲಭವಾಗಿ ಮಾಡಬಹುದಾದುದು.

ಅಶ್ರದ್ದಧಾನಾಃ ಪುರುಷಾ ಧರ್ಮಸ್ಯಾಸ್ಯ ಪರಂತಪ ।
ಅಪ್ರಾಪ್ಯ ಮಾಂ ನಿವರ್ತಂತೇ ಮೃತ್ಯುಸಂಸಾರವರ್ತ್ಮನಿ ॥೩॥

ಎಲೈ ಪರಂತಪನೇ, ನಾನು ಮುಂದೆ ಹೇಳಲಿರುವ ಈ ಧರ್ಮದಲ್ಲಿ ಯಾವ ಪುರುಷರಿಗೆ ಶ್ರದ್ಧೆ ಇಲ್ಲವೋ ಅವರು ನನ್ನನ್ನು ಹೊಂದದೆ ಮೃತ್ಯುರೂಪವಾದ ಸಂಸಾರ ಮಾರ್ಗದಲ್ಲಿಯೇ ಹಿಂದಕ್ಕೆ ಬರುತ್ತಾರೆ.

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥೪॥

ಅವ್ಯಕ್ತ ಸ್ವರೂಪವುಳ್ಳ ನನ್ನಿಂದ ಈ ಜಗತ್ತು ವ್ಯಾಪ್ತವಾಗಿದೆ. ನನ್ನಲ್ಲಿ ಎಲ್ಲ ಜಗತ್ತೂ ಆಶ್ರಯಿಸಿಕೊಂಡಿದೆ. ನಾನು ಅವುಗಳನ್ನು ಆಶ್ರಯಿಸಿಲ್ಲ.

ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಮ್ ।
ಭೂತಭೃನ್ನ ಚ ಭೂತಸ್ಥೋ ಮಮಾತ್ಮಾ ಭೂತಭಾವನಃ ॥೫॥

ನನ್ನಲ್ಲಿ ಎಲ್ಲ ಜಗತ್ತು ಆಶ್ರಯಿಸಿಕೊಂಡಿದ್ದರೂ ನನ್ನಲ್ಲಿ ಅವು ಇಲ್ಲ (ಯಾವ ವಿಕಾರವನ್ನೂ ಮಾಡುವುದಿಲ್ಲ). ನನ್ನ ಅಸಂಗತ್ವರೂಪವಾದ ಮಹಿಮೆಯ ಸಾಮರ್ಥ್ಯವನ್ನು ನೋಡು. ನಾನು ಎಲ್ಲ ಭೂತಗಳನ್ನು ಧರಿಸಿದ್ದೇನೆ. ಆದರೂ ಭೂತಗಳಲ್ಲಿ ಇಲ್ಲ. ಚೇತನಾತ್ಮಕವಾದ ನನ್ನ ದೇಹವೂ ಸಹ ಜಗತ್ತನ್ನು ಸೃಷ್ಟಿಸುವಂತಹದು.

ಯಥಾಽಽಕಾಶಸ್ಥಿತೋ ನಿತ್ಯಂ ವಾಯುಃ ಸರ್ವತ್ರಗೋ ಮಹಾನ್ ।
ತಥಾ ಸರ್ವಾಣಿ ಭೂತಾನಿ ಮತ್ಸ್ಥಾನೀತ್ಯುಪಧಾರಯ ॥೬॥

ಹೇಗೆ ಮಹಾವಾಯುವು ಯಾವಾಗಲೂ ಸರ್ವತ್ರ ಆಕಾಶದಲ್ಲಿದ್ದರೂ ಯಾವ ಪದಾರ್ಥದ ಗುಣಗಳಿಂದಲೂ ಲೇಪ ಹೊಂದುವುದಿಲ್ಲವೋ, ಅದರಂತೆ ಎಲ್ಲ ಭೂತಗಳೂ ನನ್ನಲ್ಲಿ ಇವೆ ಎಂದು ತಿಳಿಯುವವನಾಗು.

ವಾಯುವಿನಲ್ಲಿರುವ ಶೈತ್ಯ, ಸೌರಭ ಮೊದಲಾದ ಗುಣಗಳು ಅದರಲ್ಲಿರುವ ಜಲ, ಪೃಥಿವಿ ಕಣಗಳದೇ ಹೊರತು ವಾಯುವಿನದಲ್ಲ. ಆದ್ದರಿಂದ ವಾಯುವು ನಿರ್ಲಿಪ್ತವಾಗಿರುತ್ತದೆ.

ಸರ್ವಭೂತಾನಿ ಕೌಂತೇಯ ಪ್ರಕೃತಿಂ ಯಾಂತಿ ಮಾಮಿಕಾಮ್ ।
ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಮ್ ॥೭॥

ಎಲೈ ಕೌಂತೇಯನೇ, ಎಲ್ಲಾ ಜೀವರು ಕಲ್ಪಕ್ಷಯವಾದಾಗ ನನಗೆ ಅಧೀನವಾದ ಪ್ರಕೃತಿಯನ್ನು ಪ್ರವೇಶಿಸುತ್ತಾರೆ. ಕಲ್ಪದ ಆದಿಯಲ್ಲಿ ಪುನಃ ಆ ಜೀವರನ್ನು ನಾನು ದೇಹ ಸಂಬಂಧದಿಂದ ಸೃಷ್ಟಿಮಾಡುತ್ತೇನೆ.

ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ ।
ಭೂತಗ್ರಾಮಮಿಮಂ ಕೃತ್ಸ್ನಮವಶಂ ಪ್ರಕೃತೇರ್ವಶಾತ್ ॥೮॥

ತ್ರಿಗುಣಾತ್ಮಕವಾದ ಪ್ರಕೃತಿಯನ್ನು ಅಧಿಷ್ಠಾನವನ್ನಾಗಿ ಮಾಡಿಕೊಂಡು ಅಸ್ವತಂತ್ರವಾದ ಈ ಸಮಸ್ತವಾದ ಚರಾಚರ ಜೀವಸಮುದಾಯವನ್ನು ನಾನು ಪುನಃ ಪುನಃ ಸೃಷ್ಟಿಮಾಡುತ್ತೇನೆ.

ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ ।
ಉದಾಸೀನವದಾಸೀನಮಸಕ್ತಂ ತೇಷು ಕರ್ಮಸು ॥೯॥

ಮಯಾಽಽಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್ ।
ಹೇತುನಾಽನೇನ ಕೌಂತೇಯ ಜಗದ್ವಿಪರಿವರ್ತತೇ ॥೧೦॥

ಅಧ್ಯಕ್ಷನಾದ ನನ್ನಿಂದ ಪ್ರಕೃತಿಯು ಈ ಚರಾಚರ ಜಗತ್ತನ್ನು ಪ್ರಸವಿಸುತ್ತದೆ. ಅಧ್ಯಕ್ಷನಾದ ನಾನು ಮತ್ತು ಪ್ರಸವಕರ್ತ್ರಿಯಾದ ಪ್ರಕೃತಿಯು ನಿತ್ಯವಾಗಿರುವುದರಿಂದ ಎಲೈ ಕೌಂತೇಯನೇ, ಈ ಜಗತ್ತು ಅನಾದ್ಯನಂತ ಕಾಲದಲ್ಲಿಯೂ ಉಂಟಾಗುತ್ತಿರುತ್ತದೆ.

ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಮ್ ।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಮ್ ॥೧೧॥

ಮನುಷ್ಯರ ಶರೀರದಂತೆ ಕಾಣುವ ಶರೀರವನ್ನು ಧರಿಸಿದ ನನ್ನನ್ನು ಮೂಢರು ನನ್ನ ಸರ್ವೇಶ್ವರ್ಯಾದಿ ಶ್ರೇಷ್ಠ ಮಹಿಮೆಯನ್ನು ತಿಳಿಯದೆ ಅವಜ್ಞೆ ಮಾಡುತ್ತಾರೆ.

ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ।
ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ॥೧೨॥

ಅವರು ರಾಕ್ಷಸಸ್ವಭಾವ ಅಥವಾ ಆಸುರಸ್ವಭಾವವನ್ನು ಹೊಂದಿದವರಾಗಿ ವ್ಯರ್ಥವಾದ ಆಸೆ, ವ್ಯರ್ಥವಾದ ಕರ್ಮಗಳು, ವ್ಯರ್ಥವಾದ ಜ್ಞಾನವನ್ನು ಹೊಂದಿ ವ್ಯರ್ಥವಾದ ಚೇತಸ್ಸನ್ನು ಹೊಂದಿರುತ್ತಾರೆ.

ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ ।
ಭಜಂತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಮ್ ॥೧೩॥

ಎಲೈ ಪಾರ್ಥನೇ, ಮಹಾತ್ಮರಾದರೂ ದೈವಸ್ವಭಾವವನ್ನು ಹೊಂದಿದವರಾಗಿ ನನ್ನನ್ನು ಸರ್ವಜಗತ್ಸೃಷ್ಟಿಕರ್ತನೂ ಮತ್ತು ನಾಶರಹಿತನೂ ಎಂದು ತಿಳಿದು ಅನನ್ಯವಾದ ಮನಸ್ಸಿನಿಂದ ನನ್ನನ್ನು ಭಜಿಸುತ್ತಾರೆ.

ಈ ಶ್ಲೋಕದಲ್ಲಿ ರಾಕ್ಷಸೀಂ ಪ್ರಕೃತಿಂ ಮತ್ತು ದೈವೀಂ ಪ್ರಕೃತಿಂ ಎಂದು ಹೇಳುವ ಶ್ರೀಕೃಷ್ಣನು ಜೀವರಲ್ಲಿ ಸ್ವಾಭಾವಿಕವಾಗಿಯೇ ದೈವಿಧ್ಯವಿದೆ ಎಂದು ಹೇಳುತ್ತಾನೆ.

ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾಃ ।
ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥೧೪॥

ಅಂತಹ ಮಹಾತ್ಮರು ಸತತವಾಗಿ ನನ್ನ ಕೀರ್ತನೆಯನ್ನು ಮಾಡುತ್ತಾ, ವ್ರತಗಳನ್ನು ಧರಿಸಿ, ನನ್ನ ಅನುಗ್ರಹಕ್ಕಾಗಿ ಪ್ರಯತ್ನವನ್ನು ಮಾಡುತ್ತಾ, ನನಗೆ ನಮಸ್ಕಾರವನ್ನು ಮಾಡುತ್ತಾ, ನಿತ್ಯವೂ ಭಕ್ತಿಯಿಂದ ಯುಕ್ತರಾಗಿ ನನ್ನ ಉಪಾಸನೆಯನ್ನು ಮಾಡುತ್ತಾರೆ.

ಜ್ಞಾನಯಜ್ಞೇನ ಚಾಪ್ಯನ್ಯೇ ಯಜಂತೋ ಮಾಮುಪಾಸತೇ ।
ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋಮುಖಮ್ ॥೧೫॥

ಇನ್ನು ಕೆಲವರು ಜ್ಞಾನಯಜ್ಞದಿಂದ ನನ್ನನ್ನು ಪೂಜಿಸುತ್ತಾ ಉಪಾಸನೆಯನ್ನು ಮಾಡುತ್ತಾರೆ. ನನ್ನ ರೂಪ-ಗುಣಕ್ರಿಯಾದಿಗಳಲ್ಲಿ ಅಭೇದವನ್ನೂ, ಜೀವಜಡಾತ್ಮಕವಾದ ಪ್ರಪಂಚದಿಂದ ಭೇದವನ್ನೂ ತಿಳಿದು ಶ್ರವಣ-ಮನನ-ನಿಧಿಧ್ಯಾಸನಗಳಿಂದ ಅನೇಕ ಪ್ರಕಾರಗಳಿಂದ ಸರ್ವತ್ರಸರ್ವಾವಯವವುಳ್ಳ ನನ್ನನ್ನು ಉಪಾಸನೆ ಮಾಡುತ್ತಾರೆ.

ಅಹಂ ಕ್ರತುರಹಂ ಯಜ್ಞಃ ಸ್ವಧಾಹಮಹಮೌಷಧಮ್ ।
ಮಂತ್ರೋಽಹಮಹಮೇವಾಜ್ಯಮಹಮಗ್ನಿರಹಂ ಹುತಮ್ ॥೧೬॥

ನಾನೇ ಕ್ರತು, ನಾನೇ ಯಜ್ಞ, ನಾನೇ ಪಿತೃನ್ನವಾದ ಸ್ವಧಾ, ನಾನೇ ಔಷಧ, ನಾನೇ ಮಂತ್ರ, ನಾನೇ ಆಜ್ಯ, ನಾನೇ ಅಗ್ನಿ, ನಾನೇ ಹುತ. (ಕ್ರತು ಮೊದಲಾದವುಗಳೆಲ್ಲವೂ ನನ್ನಿಂದ ನಿಯತವಾಗಿವೆ, ನಾನು ಅವುಗಳಲ್ಲಿ ಸನ್ನಿಹಿತವಾಗಿದ್ದೇನೆ ಎಂದು ತಾತ್ಪರ್ಯ).

ಪಿತಾಽಹಮಸ್ಯ ಜಗತೋ ಮಾತಾ ಧಾತಾ ಪಿತಾಮಹಃ ।
ವೇದ್ಯಂ ಪವಿತ್ರಮೋಂಕಾರ ಋಕ್‌ಸಾಮ ಯಜುರೇವ ಚ ॥೧೭॥

ನಾನು ಈ ಜಗತ್ತಿನ ತಂದೆ, ನಾನು ತಾಯಿ, ನಾನೇ ಪೋಷಕನಾದವನು, ನಾನೇ ಪಿತಾಮಹನಂತೆ ಪೂಜ್ಯನಾದವನು. ನಾನೇ ಪವಿತ್ರವಾದ ವೇದ್ಯನಾದವನು. ನಾನೇ ಓಂಕಾರವಾಚ್ಯನಾದವನು. ಪೂಜನೀಯನಾದ್ದರಿಂದ ನಾನು ಋಕ್ ಎನಿಸಿಕೊಳ್ಳುತ್ತೇನೆ. ಎಲ್ಲ ರೂಪಗಳಲ್ಲಿಯೂ ಸಮನಾಗಿರುವುದರಿಂದ ಸಾಮ. ಯಜ್ಞಗಳಲ್ಲಿ ಪೂಜ್ಯನಾದುದರಿಂದ ಯಜುಸ್ ಎನಿಸಿಕೊಳ್ಳುತ್ತೇನೆ.

ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್ ।
ಪ್ರಭವಃ ಪ್ರಲಯಃ ಸ್ಥಾನಂ ನಿಧಾನಂ ಬೀಜಮವ್ಯಯಮ್ ॥೧೮॥

ನಾನೇ ಮುಮುಕ್ಷುಗಳಿಂದ ಗಮ್ಯನಾದವನು, ನಾನೇ ಪೋಷಕನಾದವನು, ಎಲ್ಲವನ್ನೂ ನೇರವಾಗಿ ನೋಡುವವನು, ಎಲ್ಲರಿಗೂ ಆಶ್ರಯನಾದವನು, ಭಯದಿಂದ ರಕ್ಷಿಸುವವನು, ಅನಿಮಿತ್ತವಾಗಿ ಉಪಕಾರವನ್ನು ಮಾಡುವವನು, ಸೃಷ್ಟಿ-ಸಂಹಾರ-ಸ್ಥಿತಿಗಳಿಗೆ ಕಾರಣನಾದವನು, ಎಲ್ಲವನ್ನೂ ಧರಿಸಿರುವವನು, ಶಾಶ್ವತನಾದವನು ಮತ್ತು ಈ ಜಗತ್ತಿಗೆ ವ್ಯಂಜಕನಾದ ಬೀಜದಂತಿರುವವನು.

ತಪಾಮ್ಯಹಮಹಂ ವರ್ಷಂ ನಿಗೃಹ್ಣಾಮ್ಯುತ್‌ಸೃಜಾಮಿ ಚ ।
ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ ॥೧೯॥

ಎಲೈ ಅರ್ಜುನನೇ, ನಾನೇ ಸೂರ್ಯನಲ್ಲಿ ನಿಂತು ತಾಪವನ್ನು ಉಂಟುಮಾಡುವವನು. ನಾನು ಮೇಘಚಕ್ರದಲ್ಲಿದ್ದು ಮಳೆಯನ್ನು ಸುರಿಸುತ್ತೇನೆ ಮತ್ತು ನಿಲ್ಲಿಸುತ್ತೇನೆ. ಪ್ರಳಯಕಾಲದಲ್ಲಿ ಎಲ್ಲವನ್ನೂ ಸಂಹಾರ ಮಾಡುವುದರಿಂದ ಮೃತ್ಯು. ಭಕ್ತರಿಗೆ ಮರಣವನ್ನು ಪರಿಹಾರ ಮಾಡುವುದರಿಂದ ಅಮೃತ. ಕಾರ್ಯಸಮೂಹವೆಲ್ಲವೂ ನಾನೇ. ಕಾರಣ ಸಮೂಹವೂ ನಾನೇ. (ಕಾರ್ಯಕಾರಣ ಸಮೂಹಗಳಲ್ಲಿ ಇದ್ದು ನಿಯಂತ್ರಿಸುವವನು ನಾನೇ ಎಂದು ಅಭಿಪ್ರಾಯ).

ತ್ರೈವಿದ್ಯಾ ಮಾಂ ಸೋಮಪಾಃ ಪೂತಪಾಪಾ;
ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯಂತೇ ।
ತೇ ಪುಣ್ಯಮಾಸಾದ್ಯ ಸುರೇಂದ್ರಲೋಕಂ
ಅಶ್ನಂತಿ ದಿವ್ಯಾನ್ ದಿವಿ ದೇವಭೋಗಾನ್ ॥೨೦॥

ಕೇವಲ ಋಕ್-ಯಜುಸ್-ಸಾಮ ವಿದ್ಯೆಗಳಲ್ಲಿ ನಿರತರಾದ ಸೋಮಪಾನವನ್ನು ಮಾಡುವವರು ಯಜ್ಞಗಳಿಂದ ನನ್ನನ್ನು ಪೂಜಿಸಿ, ಪಾಪಗಳಿಂದ ನಿರ್ಮುಕ್ತರಾಗಿ ಸ್ವರ್ಗವನ್ನು ಪ್ರಾರ್ಥಿಸುತ್ತಾರೆ. ಅವರು ಅದರಿಂದ ಉಂಟಾದ ಪುಣ್ಯವನ್ನು ಹೊಂದಿ ಇಂದ್ರಲೋಕವನ್ನು ಸೇರಿ ಸ್ವರ್ಗದಲ್ಲಿ ದಿವ್ಯವಾದ ದೇವಭೋಗಗಳನ್ನು ಭೋಗಿಸುತ್ತಾರೆ.

ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ
ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ ।
ಏವಂ ತ್ರಯೀಧರ್ಮಮನುಪ್ರಪನ್ನಾ
ಗತಾಗತಂ ಕಾಮಕಾಮಾ ಲಭಂತೇ ॥೨೧॥

ವಿಶಾಲವಾದ ಸ್ವರ್ಗಲೋಕದಲ್ಲಿ ಅವರು ಸುಖಗಳನ್ನು ಅನುಭವಿಸಿ ತಮ್ಮ ಪುಣ್ಯವು ಕ್ಷಯವಾದ ಮೇಲೆ ಪುನಃ ಮನುಷ್ಯಲೋಕಕ್ಕೆ ಬರುತ್ತಾರೆ. ಹೀಗೆ ಮೂರು ವೇದಗಳಲ್ಲಿ ಮೇಲೆ ಮಾತ್ರ ತೋರುವ ಧರ್ಮಗಳನ್ನು ಮಾತ್ರ ತಿಳಿದು ಅನುಷ್ಠಾನ ಮಾಡುವವರು ಭೋಗಗಳ ಆಸೆಯಿಂದ ಇಂತಹ ಗಮನಾಗಮನವನ್ನು ಪಡೆಯುತ್ತಾರೆ.

ಯಜ್ಞಗಳನ್ನು ಮಾಡಿ ಕೊನೆಯಲ್ಲಿ ಅದನ್ನು ವಿಷ್ಣುವಿಗೆ ಅರ್ಪಣೆ ಮಾಡಿದರೂ ಅವರಿಗೆ ಭೋಗಗಳಲ್ಲಿ ಆಸಕ್ತಿ ಇರುವುದರಿಂದ ಅವರು ಪುನಃ ಜನ್ಮವನ್ನು ಪಡೆದು, ಯಜ್ಞವನ್ನು ಮಾಡಿ ಸ್ವರ್ಗ ಮತ್ತು ಮನುಷ್ಯಲೋಕಗಳಲ್ಲಿಯೇ ತಿರುಗುತ್ತಿರುತ್ತಾರೆ ಎಂದು ಅಭಿಪ್ರಾಯ.

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥೨೨॥

ಯಾವ ಪುರುಷರು ಬೇರೆ ಏನನ್ನೂ ಚಿಂತಿಸದೇ ನನ್ನನ್ನೇ ಚೆನ್ನಾಗಿ ಉಪಾಸನೆ ಮಾಡುತ್ತಾರೆಯೋ ಅಂತಹ ನನ್ನಲ್ಲಿ ಯೋಗಯುಕ್ತರಾದ ಅವರ ಯೋಗಕ್ಷೇಮದ ಭಾರವನ್ನು ನಿತ್ಯವೂ ನಾನು ಧರಿಸುತ್ತೇನೆ.

ಯೇಽಪ್ಯನ್ಯದೇವತಾ ಭಕ್ತಾ ಯಜಂತೇ ಶ್ರದ್ಧಯಾನ್ವಿತಾಃ ।
ತೇಽಪಿ ಮಾಮೇವ ಕೌಂತೇಯ ಯಜಂತ್ಯವಿಧಿಪೂರ್ವಕಮ್ ॥೨೩॥

ಯಾವ ಅನ್ಯದೇವತೆಗಳ ಭಕ್ತರಿದ್ದಾರೆಯೋ ಅವರು ಅನ್ಯದೇವತೆಗಳ ಮೇಲಿನ ಶ್ರದ್ಧೆಯಿಂದ ಆ ದೇವತೆಗಳನ್ನು ಪೂಜಿಸಿದರೂ ಎಲೈ ಕೌಂತೇಯನೇ, ಅವರು ನನ್ನನ್ನೇ ವಿಧಿಪೂರ್ವಕವಲ್ಲದ ರೀತಿಯಲ್ಲಿ ಪೂಜಿಸುತ್ತಾರೆ.

ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ।
ನ ತು ಮಾಮಭಿಜಾನಂತಿ ತತ್ತ್ವೇನಾತಶ್ಚ್ಯವಂತಿ ತೇ ॥೨೪॥

ನಾನು ಎಲ್ಲ ಯಜ್ಞಗಳ ಭೋಕ್ತೃ ಮತ್ತು ಸ್ವಾಮಿ. ನನ್ನನ್ನು ಸರ್ವಯಜ್ಞಭೋಕ್ತೃ ಎಂದೂ ಮತ್ತು ಪ್ರಭುವೆಂದೂ ಅವರು ತಿಳಿಯುವುದಿಲ್ಲ. ಆದ್ದರಿಂದ ಅವರು ತಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತಾರೆ (ಈ ಜ್ಞಾನಶೂನ್ಯತೆಯನ್ನೇ ಹಿಂದಿನ ಶ್ಲೋಕದಲ್ಲಿ ಅವಿಧಿ ಪೂರ್ವಕಂ ಎಂದು ಹೇಳಿದ್ದಾರೆ).

ಯಾಂತಿ ದೇವವ್ರತಾ ದೇವಾನ್ ಪಿತೄನ್ ಯಾಂತಿ ಪಿತೃವ್ರತಾಃ ।
ಭೂತಾನಿ ಯಾಂತಿ ಭೂತೇಜ್ಯಾ ಯಾಂತಿ ಮದ್ಯಾಜಿನೋಽಪಿ ಮಾಮ್ ॥

ದೇವತೆಗಳನ್ನು ಉದ್ದೇಶಿಸಿ ವ್ರತವನ್ನು ಮಾಡುವವರು ದೇವತೆಗಳನ್ನು ಹೊಂದುತ್ತಾರೆ. ಅದರಂತೆ ಪಿತೃವ್ರತವನ್ನು ಮಾಡುವವರು ಪಿತೃಗಳನ್ನು ಹೊಂದುತ್ತಾರೆ. ಭೂತಗಳನ್ನು ಪೂಜಿಸುವವರು ಭೂತಗಳನ್ನು ಹೊಂದುತ್ತಾರೆ. ನನ್ನನ್ನು ಪೂಜಿಸುವವರು ನನ್ನನ್ನೇ ಹೊಂದುತ್ತಾರೆ.

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥೨೬॥

ಯಾವನು ಜಿತಚಿತ್ತನಾಗಿ ಭಕ್ತಿಯಿಂದ ನನಗೆ ಪತ್ರ, ಪುಷ್ಪ, ಫಲ, ಜಲಗಳನ್ನು ಅರ್ಪಿಸುತ್ತಾನೆಯೋ ಅವನ ಆ ಸಮರ್ಪಣೆಯನ್ನು ನಾನು ಸ್ವೀಕರಿಸುತ್ತೇನೆ.

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥೨೭॥

ಎಲೈ ಕೌಂತೇಯನೇ, ನೀನು ಏನು ಮಾಡುತ್ತೀಯೋ, ಏನು ತಿನ್ನುತ್ತೀಯೋ, ಏನು ಹೋಮವನ್ನು ಮಾಡುತ್ತೀಯೋ, ಏನು ದಾನವನ್ನು ಮಾಡುತ್ತೀಯೋ, ಏನು ತಪಸ್ಸನ್ನು ಮಾಡುತ್ತೀಯೋ, ಅದೆಲ್ಲವನ್ನೂ ನನಗೆ ಅರ್ಪಿಸು.

ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ ।
ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ ॥೨೮॥

ಹೀಗೆ ಮಾಡಿದರೆ ಕರ್ಮನಿಬಂಧನಗಳಾದ (ಕರ್ಮದಿಂದ ನಿಯಮೇನ ಉಂಟಾಗುವ) ಶುಭಾಶುಭಫಲಗಳಿಂದ ನಿರ್ಮುಕ್ತನಾಗುವಿ. ಕರ್ಮಗಳನ್ನು ಹರಿಯಲ್ಲಿ ಚೆನ್ನಾಗಿ ಅರ್ಪಿಸುವ ಇಂತಹ ಸಂನ್ಯಾಸ ಯೋಗದಿಂದ ಕೂಡಿದವನಾಗಿ ನೀನು ಮುಕ್ತನಾಗಿ ನನ್ನನ್ನು ಹೊಂದುವಿ.

ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥

ನಾನು ಎಲ್ಲ ಜೀವರಾಶಿಗಳಿಗೂ ಸಮನಾದವನು. ಅವರವರು ಮಾಡಿದ ಪುಣ್ಯ-ಪಾಪ ಕರ್ಮಗಳನ್ನು ಮೀರಿ ನನಗೆ ಯಾರೂ ದ್ವೇಷ ವಿಷಯರೂ ಇಲ್ಲ, ಪ್ರೀತಿ

ವಿಷಯರೂ ಇಲ್ಲ. ಯಾರು ನನ್ನನ್ನು ಭಕ್ತಿಯಿಂದ ಪೂಜಿಸುತ್ತಾರೋ, ಅವರು ನನ್ನಲ್ಲಿಯೇ ಇರುತ್ತಾರೆ. ನಾನೂ ಅವರಲ್ಲಿ ಇರುತ್ತೇನೆ (ಯಾರು ನನ್ನನ್ನು ದ್ವೇಷ ಮಾಡುತ್ತಾರೋ ನಾನು ಅವರಲ್ಲಿ ಇಲ್ಲ, ಅವರೂ ನನ್ನಲ್ಲಿ ಇಲ್ಲ, ಆದ್ದರಿಂದಲೇ ಅರ್ಜುನಾದಿಗಳ ಸ್ವೀಕಾರ, ಕಂಸಾದಿಗಳ ವಧ ಎಂದು ಅಧ್ಯಾಯ).

ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥೩೦॥

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥೩೧॥

ಬಹಳ ದುರಾಚಾರವನ್ನು ಮಾಡುತ್ತಿದ್ದರೂ, ಬೇರೆ ಯಾರನ್ನೂ ಭಜಿಸದ ನನ್ನನ್ನೇ ಭಜಿಸಿದರೆ ಅವನನ್ನು ಸಾಧು ಎಂದೇ ತಿಳಿಯಬೇಕು. ಅವನ ಜ್ಞಾನವು ಸಂಯಾಗಿದೆ ಎಂದು ಅರ್ಥ. ಅವನು ತೀಕ್ಷ್ರವಾಗಿ ಧರ್ಮಾತ್ಮನಾಗುತ್ತಾನೆ ಮತ್ತು ಶಾಶ್ವತವಾದ ಶಾಂತಿಯನ್ನೂ ಪಡೆಯುತ್ತಾನೆ. ಕೌಂತೇಯನೇ, ನನ್ನ ಭಕ್ತನು ಎಂದೂ ನಾಶವನ್ನು ಹೊಂದುವುದಿಲ್ಲ ಎಂದು ನೀನು ಪ್ರತಿಜ್ಞೆಯನ್ನು ಮಾಡು.

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಮ್ ॥೩೨॥

ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ ।
ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್ ॥೩೩॥

ಎಲೈ ಪಾರ್ಥನೇ, ಪಾಪಯೋನಿಗಳಲ್ಲಿ ಜನಿಸಿದ ನನ್ನನ್ನು ಆಶ್ರಯಿಸಿದ ಸ್ತ್ರೀಯರೂ, ವೈಶ್ಯರೂ, ಶೂದ್ರರೂ ಸಹ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾರೆ. ಇನ್ನು ಪುಣ್ಯಶೀಲರೂ, ಭಕ್ತರೂ ಆದ ಬ್ರಾಹ್ಮಣರು, ಭಕ್ತರು, ರಾಜರ್ಷಿಗಳು ಸದ್ಗತಿಗಳನ್ನು ಹೊಂದುವುದರಲ್ಲಿ ಏನು ಹೇಳಬೇಕು. ಅನಿತ್ಯವೂ ಮತ್ತು ದುಃಖಪೂರಿತವೂ ಆದ ಈ ಲೋಕವನ್ನು ತೊಂದಿ ನನ್ನನ್ನು ಭಜಿಸು.

ದೇವತೆಗಳನ್ನು ಉದ್ದೇಶಿಸಿ ವ್ರತವನ್ನು ಮಾಡುವವರು ದೇವತೆಗಳನ್ನು ಹೊಂದುತ್ತಾರೆ. ಅದರಂತೆ ಪಿತೃವ್ರತವನ್ನು ಮಾಡುವವರು ಪಿತೃಗಳನ್ನು ಹೊಂದುತ್ತಾರೆ. ಭೂತಗಳನ್ನು ಪೂಜಿಸುವವರು ಭೂತಗಳನ್ನು ಹೊಂದುತ್ತಾರೆ. ನನ್ನನ್ನು ಪೂಜಿಸುವವರು ನನ್ನನ್ನೇ ಹೊಂದುತ್ತಾರೆ.

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥೨೬॥

ಯಾವನು ಜಿತಚಿತ್ತನಾಗಿ ಭಕ್ತಿಯಿಂದ ನನಗೆ ಪತ್ರ, ಪುಷ್ಪ, ಫಲ, ಜಲಗಳನ್ನು ಅರ್ಪಿಸುತ್ತಾನೆಯೋ ಅವನ ಆ ಸಮರ್ಪಣೆಯನ್ನು ನಾನು ಸ್ವೀಕರಿಸುತ್ತೇನೆ.

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥೨೭॥

ಎಲೈ ಕೌಂತೇಯನೇ, ನೀನು ಏನು ಮಾಡುತ್ತೀಯೋ, ಏನು ತಿನ್ನುತ್ತೀಯೋ, ಏನು ಹೋಮವನ್ನು ಮಾಡುತ್ತೀಯೋ, ಏನು ದಾನವನ್ನು ಮಾಡುತ್ತೀಯೋ, ಏನು ತಪಸ್ಸನ್ನು ಮಾಡುತ್ತೀಯೋ, ಅದೆಲ್ಲವನ್ನೂ ನನಗೆ ಅರ್ಪಿಸು.

ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ ।
ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ ॥೨೮॥

ಹೀಗೆ ಮಾಡಿದರೆ ಕರ್ಮಸಿಬಂಧನಗಳಾದ (ಕರ್ಮದಿಂದ ನಿಯಮೇನ ಉಂಟಾಗುವ) ಶುಭಾಶುಭಫಲಗಳಿಂದ ನಿರ್ಮುಕ್ತನಾಗುವಿ. ಕರ್ಮಗಳನ್ನು ಹರಿಯಲ್ಲಿ ಚೆನ್ನಾಗಿ ಅರ್ಪಿಸುವ ಇಂತಹ ಸಂನ್ಯಾಸ ಯೋಗದಿಂದ ಕೂಡಿದವನಾಗಿ ನೀನು ಮುಕ್ತನಾಗಿ ನನ್ನನ್ನು ಹೊಂದುವಿ.

ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥

ನಾನು ಎಲ್ಲ ಜೀವರಾಶಿಗಳಿಗೂ ಸಮನಾದವನು. ಅವರವರು ಮಾಡಿದ ಪುಣ್ಯ-ಪಾಪ ಕರ್ಮಗಳನ್ನು ಮೀರಿ ನನಗೆ ಯಾರೂ ದ್ವೇಷ ವಿಷಯರೂ ಇಲ್ಲ, ಪ್ರೀತಿ

ವಿಷಯರೂ ಇಲ್ಲ. ಯಾರು ನನ್ನನ್ನು ಭಕ್ತಿಯಿಂದ ಪೂಜಿಸುತ್ತಾರೋ, ಅವರು ನನ್ನಲ್ಲಿಯೇ ಇರುತ್ತಾರೆ. ನಾನೂ ಅವರಲ್ಲಿ ಇರುತ್ತೇನೆ (ಯಾರು ನನ್ನನ್ನು ದ್ವೇಷ ಮಾಡುತ್ತಾರೋ ನಾನು ಅವರಲ್ಲಿ ಇಲ್ಲ, ಅವರೂ ನನ್ನಲ್ಲಿ ಇಲ್ಲ. ಆದ್ದರಿಂದಲೇ ಅರ್ಜುನಾದಿಗಳ ಸ್ವೀಕಾರ, ಕಂಸಾದಿಗಳ ವಧೆ ಎಂದು ಅಭಿಪ್ರಾಯ).

ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥೩೦॥

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥೩೧॥

ಬಹಳ ದುರಾಚಾರವನ್ನು ಮಾಡುತ್ತಿದ್ದರೂ, ಬೇರೆ ಯಾರನ್ನೂ ಭಜಿಸದೆ ನನ್ನನ್ನೇ ಭಜಿಸಿದರೆ ಅವನನ್ನು ಸಾಧು ಎಂದೇ ತಿಳಿಯಬೇಕು. ಅವನ ಜ್ಞಾನವು ಸರಿಯಾಗಿದೆ ಎಂದು ಅರ್ಥ. ಅವನು ಶೀಘ್ರವಾಗಿ ಧರ್ಮಾತ್ಮನಾಗುತ್ತಾನೆ ಮತ್ತು ಶಾಶ್ವತವಾದ ಶಾಂತಿಯನ್ನೂ ಪಡೆಯುತ್ತಾನೆ. ಕೌಂತೇಯನೇ, ನನ್ನ ಭಕ್ತನು ಎಂದೂ ನಾಶವನ್ನು ಹೊಂದುವುದಿಲ್ಲ ಎಂದು ನೀನು ಪ್ರತಿಜ್ಞೆಯನ್ನು ಮಾಡು.

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಮ್ ॥೩೨॥

ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ ।
ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್ ॥೩೩॥

ಎಲೈ ಪಾರ್ಥನೇ, ಪಾಪಯೋನಿಗಳಲ್ಲಿ ಜನಿಸಿದ ನನ್ನನ್ನು ಆಶ್ರಯಿಸಿದ ಸ್ತ್ರೀಯರೂ, ವೈಶ್ಯರೂ, ಶೂದ್ರರೂ ಸಹ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾರೆ. ಇನ್ನು ಪುಣ್ಯಶೀಲರೂ, ಭಕ್ತರೂ ಆದ ಬ್ರಾಹ್ಮಣರು, ಭಕ್ತರು, ರಾಜರ್ಷಿಗಳು ಸದ್ಗತಿಗಳನ್ನು ಹೊಂದುವುದರಲ್ಲಿ ಏನು ಹೇಳಬೇಕು. ಅನಿತ್ಯವೂ ಮತ್ತು ದುಃಖಪೂರಿತವೂ ಆದ ಈ ಲೋಕವನ್ನು ಹೊಂದಿ ನನ್ನನ್ನು ಭಜಿಸು.

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ ॥೩೪॥

ನನ್ನಲ್ಲೇ ಮನಸ್ಸನ್ನಿಡು, ನನ್ನ ಭಕ್ತನಾಗು, ನನ್ನನ್ನು ಪೂಜಿಸು, ನನಗೆ ನಮಸ್ಕಾರವನ್ನು ಮಾಡು. ಹೀಗೆ ನನ್ನಲ್ಲಿಯೇ ಪರಾಯಣನಾಗಿದ್ದು ನಿನ್ನನ್ನು ನನ್ನಲ್ಲಿ ಯೋಜಿಸಿದರೆ ನನ್ನನ್ನೇ ಹೊಂದುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಏಕತ್ರಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಅಷ್ಟಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೆರಡನೆಯ ಅಧ್ಯಾಯ

ಭಗವದ್ಗೀತಾ – ವಿಭೂತಿಯೋಗ.

ಶ್ರೀಭಗವಾನ್

ಭೂಯ ಏವ ಮಹಾಬಾಹೋ ಶೃಣು ಮೇ ಪರಮಂ ವಚಃ ।
ಯತ್ತೇಽಹಂ ಪ್ರೀಯಮಾಣಾಯ ವಕ್ಷ್ಯಾಮಿ ಹಿತಕಾಮ್ಯಯಾ ॥೧॥

ಶ್ರೀಭಗವಾನ್– ಎಲೈ ಮಹಾಬಾಹುವೇ, ನಿನ್ನ ಮೇಲಿನ ಪ್ರೀತಿಯಿಂದ ನಿನ್ನ ಹಿತವನ್ನು ಬಯಸಿ, ನಿನಗೆ ಹೇಳಲಿರುವ ನನ್ನ ಶ್ರೇಷ್ಠವಾದ ಮಾತುಗಳನ್ನು ಪುನಃ ಕೇಳುವವನಾಗು.

ನ ಮೇ ವಿದುಃ ಸುರಗಣಾಃ ಪ್ರಭವಂ ನ ಮಹರ್ಷಯಃ ।
ಅಹಮಾದಿರ್ಹಿ ದೇವಾನಾಂ ಮಹರ್ಷೀಣಾಂ ಚ ಸರ್ವಶಃ ॥೨॥

ಸುರಗಗಳಾಗಲೀ ಅಥವಾ ಮಹರ್ಷಿಗಳಾಗಲೀ ನನ್ನ ಪ್ರಭಾವವನ್ನು (ಸಾಮರ್ಥ್ಯವನ್ನು) ತಿಳಿದಿಲ್ಲ. ನಾನು ಎಲ್ಲಾ ದೇವತೆಗಳಿಗೂ, ಮಹರ್ಷಿಗಳಿಗೂ ಮೊದಲಿನವನು (ಜನಕನಾದವನು).

ಯೋ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಮ್ ।
ಅಸಂಮೂಢಃ ಸ ಮರ್ತ್ಯೇಷು ಸರ್ವಪಾಪೈಃ ಪ್ರಮುಚ್ಯತೇ ॥೩॥

ಮನುಷ್ಯರಲ್ಲಿ ಯಾವನು ನನ್ನನ್ನು ಜನ್ಮರಹಿತನೆಂದೂ, ಅನಾದಿ ಎಂದೂ, ಸರ್ವಲೋಕ ಮಹೇಶ್ವರನೆಂದೂ ಯಾವ ಭ್ರಾಂತಿಯೂ ಇಲ್ಲದೆ ತಿಳಿಯುತ್ತಾನೆಯೋ ಅವನು ಸರ್ವಪಾಪದಿಂದಲೂ ನಿರ್ಮುಕ್ತನಾಗುತ್ತಾನೆ.

ಬುದ್ಧಿರ್ಜ್ಞಾನಮಸಂಮೋಹಃ ಕ್ಷಮಾ ಸತ್ಯಂ ದಮಃ ಶಮಃ ।
ಸುಖಂ ದುಃಖಂ ಭವೋಽಭಾವೋ ಭಯಂ ಚಾಭಯಮೇವ ಚ ॥೪॥

ಅಹಿಂಸಾ ಸಮತಾ ತುಷ್ಟಿಸ್ತಪೋ ದಾನಂ ಯಶೋಽಯಶಃ ।
ಭವಂತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ ॥೫॥

ಬುದ್ಧಿ, ಜ್ಞಾನ, ಭ್ರಾಂತಿಯ ಅಭಾವ, ಕ್ಷಮೆ, ಸತ್ಯವಚನ, ಇಂದ್ರಿಯನಿಗ್ರಹ, ಭಗವನ್ನಿಷ್ಠೆ, ಸುಖ, ದುಃಖ, ಉತ್ಪತ್ತಿ, ನಾಶ, ಭಯ, ಅಭಯ, ಅಹಿಂಸೆ, ಸಮತ್ವ, ತೃಪ್ತಿ, ತಪಸ್ಸು, ದಾನ, ಕೀರ್ತಿ, ಅಪಕೀರ್ತಿ ಈ ಬಹುವಿಧವಾದ ಭಾವಗಳೆಲ್ಲವೂ ಜೀವರಿಗೆ ನನ್ನಿಂದಲೇ ಆಗುತ್ತವೆ.

ಮಹರ್ಷಯಃ ಸಪ್ತ ಪೂರ್ವೇ ಚತ್ವಾರೋ ಮನವಸ್ತಥಾ ।
ಮದ್ಭಾವಾ ಮಾನಸಾ ಜಾತಾ ಯೇಷಾಂ ಲೋಕ ಇಮಾಃ ಪ್ರಜಾಃ ॥

ಹಿಂದಿನ ಏಳು ಮಹರ್ಷಿಗಳು ಎಂದರೆ ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ ಪುಲಹ, ಕ್ರತು, ವಸಿಷ್ಠ ಇವರು ಪೂರ್ವಮನ್ವಂತರದ ಮಹರ್ಷಿಗಳು. ಸ್ವಾಯಂಭುವ, ಸ್ವಾರೋಚಿಷ, ರೈವತ, ಉತ್ತಮ ಎಂಬ ನಾಲ್ಕು ಮನುಗಳು ನನ್ನಲ್ಲಿ ಭಕ್ತಿಯನ್ನು ಹೊಂದಿ ನನ್ನ ಮನಸ್ಸಿಗೆ ಪ್ರಿಯರಾದರು. ಲೋಕದಲ್ಲಿ ಎಲ್ಲ ಪ್ರಜೆಗಳೂ ಅವರಿಂದಲೇ ಜನಿಸಿದವರುಗಳು.

ಏತಾಂ ವಿಭೂತಿಂ ಯೋಗಂ ಚ ಮಮ ಯೋ ವೇತ್ತಿ ತತ್ತ್ವತಃ ।
ಸೋಽವಿಕಂಪೇನ ಯೋಗೇನ ಯುಜ್ಯತೇ ನಾತ್ರ ಸಂಶಯಃ ॥೭॥

ನನ್ನ ಈ ವಿಭೂತಿಯನ್ನು (ವಿಶೇಷ ಸನ್ನಿಧಾನವನ್ನು) ಮತ್ತು ಯೋಗ ಎಂದರೆ ಉಪಾಯವನ್ನು (ಅಥವಾ ಸಾಮರ್ಥ್ಯವನ್ನು) ಯಾವನು ಸರಿಯಾಗಿ

ತಿಳಿಯುತ್ತಾನೆಯೋ ಅವನು ನಿಶ್ಚಲವಾದ ಯೋಗವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ।
ಇತಿ ಮತ್ವಾ ಭಜಂತೇ ಮಾಂ ಬುಧಾ ಭಾವಸಮನ್ವಿತಾಃ ॥೮॥

ನಾನು ಸರ್ವಕ್ಕೂ ಉತ್ಪಾದಕನಾದವನು. ನನ್ನಿಂದಲೇ ಎಲ್ಲವೂ ಪ್ರವೃತ್ತಿಯನ್ನು ಪಡೆಯುತ್ತವೆ ಎಂದು ತಿಳಿದು ಬುಧರು ಭಕ್ತಿಸಮನ್ವಿತರಾಗಿ ನನ್ನನ್ನು ಭಜಿಸುತ್ತಾರೆ.

ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯಂತಃ ಪರಸ್ಪರಮ್ ।
ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ ॥೯॥

ತಮ್ಮ ಚಿತ್ತವನ್ನೂ ಮತ್ತು ಇಂದ್ರಿಯಗಳನ್ನೂ ನನ್ನಲ್ಲಿಯೇ ಇಟ್ಟು ಒಬ್ಬರಿಗೊಬ್ಬರು ನಿತ್ಯವೂ ನನ್ನ ಸ್ವರೂಪವನ್ನು ತಿಳಿಸುತ್ತಾ ಮತ್ತು ನನ್ನ ಮಹಿಮೆಗಳನ್ನು ಹೇಳುತ್ತಾ ಸಂತೋಷ ಪಡುತ್ತಾರೆ ಮತ್ತು ಸುಖಪಡುತ್ತಾರೆ.

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ ॥೧೦॥

ಹೀಗೆ ಸತತವಾಗಿ ನನ್ನಲ್ಲಿ ಮನೋಯೋಗಯುಕ್ತರಾಗಿ ಪ್ರೀತಿಯಿಂದ ಭಜನೆ ಮಾಡುವ ಅವರಿಗೆ ನಾನು ನನ್ನನ್ನು ಹೊಂದಲು ಸಾಧ್ಯವಾಗುವಂತಹ ಬುದ್ಧಿಯೋಗವನ್ನು ಕೊಡುತ್ತೇನೆ.

ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥೧೧॥

ಅವರ ಮೇಲಿನ ಅನುಕಂಪದಿಂದಲೇ ನಾನು ಆ ಜೀವರ ಚಿತ್ತದಲ್ಲಿ ಇದ್ದು ಪ್ರಕಾಶಿಸುವ ಜ್ಞಾನದೀಪದಿಂದ ಅಜ್ಞಾನದಿಂದ ಉಂಟಾದ ಅಂಧಕಾರ ರೂಪವಾದ ಅವರ ಸಂಶಯ, ವಿಪರೀತ ಜ್ಞಾನಗಳನ್ನು ನಾಶಮಾಡುತ್ತೇನೆ.

ಅರ್ಜುನಃ

ಪರಂ ಬ್ರಹ್ಮ ಪರಂ ಧಾಮ ಪವಿತ್ರಂ ಪರಮಂ ಭವಾನ್ ।
ಪುರುಷಂ ಶಾಶ್ವತಂ ದಿವ್ಯಮಾದಿದೇವಮಜಂ ವಿಭುಮ್ ॥೧೨॥

ಆಹುಸ್ತ್ವಾ ಮೃಷಯಃ ಸರ್ವೇ ದೇವರ್ಷಿರ್ನಾರದಸ್ತಥಾ ।
ಅಸಿತೋ ದೇವಲೋ ವ್ಯಾಸಃ ಸ್ವಯಂ ಚೈವ ಬ್ರವೀಷಿ ಮೇ ॥೧೩॥

ಅರ್ಜುನ– ನೀನು ಪರಬ್ರಹ್ಮ, ಶ್ರೇಷ್ಠವಾದ ಆಶ್ರಯ, ಪರಮ ಪವಿತ್ರನಾದವನು, ಶಾಶ್ವತ ಪುರುಷನು, ದಿವ್ಯನು, ಆದಿದೇವನು, ಜನ್ಮರಹಿತನು, ವ್ಯಾಪ್ತನಾದವನು ಎಂದು ಎಲ್ಲ ಋಷಿಗಳೂ ಮತ್ತು ದೇವರ್ಷಿಗಳಾದ ನಾರದರೂ ಅಸಿತ, ದೇವಲ ಮತ್ತು ವ್ಯಾಸರೂ ಹೇಳುತ್ತಾರೆ. ಸ್ವತಃ ನೀನೂ ನನಗೆ ಹೇಳುತ್ತಿದ್ದೀಯೆ.

ಸರ್ವಮೇತದೃತಂ ಮನ್ಯೇ ಯನ್ಮಾಂ ವದಸಿ ಕೇಶವ ।
ನ ಹಿ ತೇ ಭಗವನ್ ವ್ಯಕ್ತಿಂ ವಿದುರ್ದೇವಾ ನ ದಾನವಾಃ ॥೧೪॥

ಎಲೈ ಕೇಶವನೇ, ನೀನು ನನಗೆ ಹೇಳುವುದೆಲ್ಲವನ್ನೂ ಸತ್ಯವೆಂದೇ ತಿಳಿದಿದ್ದೇನೆ. ಎಲೈ ಭಗವಂತನೇ, ದೇವತೆಗಳಾಗಲೀ ಅಥವಾ ದಾನವರಾಗಲೀ ನಿನ್ನ ಅವತಾರವನ್ನು ತಿಳಿದಿಲ್ಲ.

ಸ್ವಯಮೇವಾತ್ಮನಾऽऽತ್ಮಾನಂ ವೇತ್ಥ ತ್ವಂ ಪುರುಷೋತ್ತಮ ।
ಭೂತಭಾವನ ಭೂತೇಶ ದೇವದೇವ ಜಗತ್ಪತೇ ॥೧೫॥

ವಕ್ತುಮರ್ಹಸ್ಯಶೇಷೇಣ ದಿವ್ಯಾ ಹ್ಯಾತ್ಮವಿಭೂತಯಃ ।
ಯಾಭಿರ್ವಿಭೂತಿಭಿರ್ಲೋಕಾನಿಮಾಂಸ್ತ್ವಂ ವ್ಯಾಪ್ಯ ತಿಷ್ಠಸಿ ॥೧೬॥

ಎಲೈ ಪುರುಷೋತ್ತಮನೇ, ನೀನು ನೀನಾಗಿಯೇ ನಿನ್ನನ್ನು ತಿಳಿದಿದ್ದೀಯೆ. ಜಗತ್ತಿನ ಉತ್ಪಾದಕನೇ, ಜಗತ್ತಿನ ಸ್ವಾಮಿಯೇ, ದೇವದೇವನೇ, ಜಗತ್ಪಾಲಕನೇ, ನಿನ್ನ ದಿವ್ಯವಾದ ವಿಭೂತಿಗಳನ್ನು ನನಗೆ ಸಮಗ್ರವಾಗಿ ಹೇಳಬೇಕು. ಯಾವ ವಿಭೂತಿ ರೂಪಗಳಿಂದ ಈ ಲೋಕಗಳನ್ನು ನೀನು ವ್ಯಾಪಿಸಿಕೊಂಡಿದ್ದೀಯೋ ಅಂತಹ ರೂಪಗಳನ್ನು ಹೇಳು.

ಕಥಂ ವಿದ್ಯಾಮಹಂ ಯೋಗಿಂಸ್ತ್ವಾಂ ಸದಾ ಪರಿಚಿಂತಯನ್ ।
ಕೇಷು ಕೇಷು ಚ ಭಾವೇಷು ಚಿಂತ್ಯೋऽಸಿ ಭಗವನ್ ಮಯಾ ॥೧೭॥

ಎಲೈ ಯೋಗಿಯೇ, ನಿನ್ನನ್ನು ಯಾವಾಗಲೂ ಚಿಂತಿಸುವ ನಾನು ನಿನ್ನನ್ನು ಹೇಗೆ ತಿಳಿದೇನು? ಎಲೈ ಭಗವಂತನೇ, ಯಾವ ಯಾವ ವಸ್ತುಗಳಲ್ಲಿ ನಿನ್ನನ್ನು ನಾನು ಚಿಂತಿಸಬೇಕು?

ವಿಸ್ತರೇಣಾತ್ಮನೋ ಯೋಗಂ ವಿಭೂತಿಂ ಚ ಜನಾರ್ದನ ।
ಭೂಯಃ ಕಥಯ ತೃಪ್ತಿರ್ಹಿ ಶೃಣ್ವತೋ ನಾಸ್ತಿ ಮೇಽಮೃತಮ್ ॥೧೮॥

ಎಲೈ ಜನಾರ್ದನನೇ, ನಿನ್ನ ಸಾಮರ್ಥ್ಯವನ್ನು ಮತ್ತು ವಿಭೂತಿರೂಪವನ್ನು ಇನ್ನೂ ವಿಸ್ತಾರವಾಗಿ ಹೇಳು. ಅಮೃತದಂತಹ ನಿನ್ನ ಉಪದೇಶವನ್ನು ಕೇಳುವ ನನಗೆ ಅಲಂಬುದ್ಧಿಯೇ ಉಂಟಾಗುತ್ತಿಲ್ಲ.

ಶ್ರೀಭಗವಾನ್

ಹಂತ ತೇ ಕಥಯಿಷ್ಯಾಮಿ ದಿವ್ಯಾ ಹ್ಯಾತ್ಮವಿಭೂತಯಃ ।
ಪ್ರಾಧಾನ್ಯತಃ ಕುರುಶ್ರೇಷ್ಠ ನಾಸ್ತ್ಯಂತೋ ವಿಸ್ತರಸ್ಯ ಮೇ ॥೧೯॥

ಶ್ರೀಭಗವಾನ್– ಎಲೈ ಕುರುಶ್ರೇಷ್ಠನೇ, ಸಂತೋಷ. ನಾನು ಪ್ರಧಾನವಾದ ನನ್ನ ದಿವ್ಯ ವಿಭೂತಿಗಳನ್ನು ಹೇಳುವೆನು. ವಿಸ್ತಾರವಾಗಿ ಹೇಳಲು ಹೊರಟರೆ ಅದಕ್ಕೆ ಕೊನೆಯೇ ಇರುವುದಿಲ್ಲ.

ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।
ಅಹಮಾದಿಶ್ಚ ಮಧ್ಯಂ ಚ ಭೂತಾನಾಮಂತ ಏವ ಚ ॥೨೦॥

ಎಲೈ ಗುಡಾಕೇಶನೇ, ನಾನು ಎಲ್ಲಾ ಚೇತನಗಳ ಹೃದಯಗುಹೆಯಲ್ಲಿ ಇರುವ ಪರಮಾತ್ಮ. ಇದು ಜಡಗಳಿಗಿಂತಲೂ ಚೇತನಗಳಲ್ಲಿ ಇರುವ ವಿಶೇಷವಾದ ವಿಭೂತಿ ರೂಪ. ನಾನು ಸೃಷ್ಟಿಕರ್ತ, ಸ್ಥಿತಿಕರ್ತ ಮತ್ತು ಜೀವರ ವಿನಾಶಕರ್ತನೂ ಆಗಿದ್ದೇನೆ.

ವಿಶೇಷ ವಿಚಾರ– ಮುಂದೆ ಹೇಳುವ ವಿಭೂತಿಗಳಲ್ಲಿ ವಿಷ್ಣು, ಕಪಿಲ, ವ್ಯಾಸ, ವಾಸುದೇವ, ರಾಮ ಈ ಐದು ಸ್ವರೂಪವಿಭೂತಿಗಳು. ಉಳಿದವುಗಳು ಆಯಾ ವಸ್ತುಗಳಲ್ಲಿ ವಿಶೇಷವಾಗಿ ಸನ್ನಿಹಿತವಾದ ವಿಭೂತಿಗಳು. ಸರ್ವೈಕ್ಯವಾದಿಗಳು ಆಯಾ ಗಣಶ್ರೇಷ್ಠನಾದ ಒಬ್ಬೊಬ್ಬನಿಂದ ಐಕ್ಯವನ್ನು ಹೇಳುವುದು ಅಸಂಗತವಾದ್ದರಿಂದ ಸನ್ನಿಧಾನ ವಿಶೇಷದಿಂದಲೇ ಇಂತಹ ವಿಭೂತಿರೂಪಕಥನವೆಂದು ಎಲ್ಲರೂ ಅಂಗೀಕರಿಸಬೇಕು. ಜೊತೆಗೆ 'ಕೇಷು ಕೇಷು ಚ ಭಾವೇಷು' ಎಂದು ಯಾವ ಯಾವ ವಸ್ತುಗಳಲ್ಲಿ ನಿನ್ನನ್ನು ಚಿಂತಿಸಬೇಕು ಎಂದು ಅರ್ಜುನನ ಪ್ರಶ್ನರೂಪವಾದ ಉಪಕ್ರಮವಿದೆ. ಆದ್ದರಿಂದಲೂ ಆಯಾ ವಸ್ತುವಿನಲ್ಲಿರುವ ಸನ್ನಿಧಾನವನ್ನೇ ವಿಭೂತಿ ಎಂದು ಅಂಗೀಕರಿಸಬೇಕು.

ಆದಿತ್ಯಾನಾಮಹಂ ವಿಷ್ಣುರ್ಜ್ಯೋತಿಷಾಂ ರವಿರಂಶುಮಾನ್ ।
ಮರೀಚಿರ್ಮರುತಾಮಸ್ಮಿ ನಕ್ಷತ್ರಾಣಾಮಹಂ ಶಶೀ ॥೨೧॥

ಅದಿತಿಯ ಮಕ್ಕಳಲ್ಲಿ ನಾನು ವಿಷ್ಣುವಾಗಿದ್ದೇನೆ. ಜ್ಯೋತಿಸ್ಸುಗಳಲ್ಲಿ ಕಿರಣಗಳಿಂದ ಕೂಡಿದ ರವಿಯಾಗಿದ್ದೇನೆ. ಮರುತ್ತುಗಳಲ್ಲಿ ಮರೀಚಿನಾಮಕನಾದ ಶ್ರೇಷ್ಠವಾದ ಮರುತ್ತಾಗಿದ್ದೇನೆ. ನಕ್ಷತ್ರಗಳಲ್ಲಿ ಚಂದ್ರನಾಗಿದ್ದೇನೆ.

ವೇದಾನಾಂ ಸಾಮವೇದೋಽಸ್ಮಿ ದೇವಾನಾಮಸ್ಮಿ ವಾಸವಃ ।
ಇಂದ್ರಿಯಾಣಾಂ ಮನಶ್ಚಾಸ್ಮಿ ಭೂತಾನಾಮಸ್ಮಿ ಚೇತನಾ ॥೨೨॥

ವೇದಗಳಲ್ಲಿ ಸಾಮವೇದವಾಗಿದ್ದೇನೆ. ದೇವತೆಗಳಲ್ಲಿ ಇಂದ್ರನಾಗಿದ್ದೇನೆ. ಇಂದ್ರಿಯಗಳಲ್ಲಿ ಮನಸ್ಸಾಗಿದ್ದೇನೆ. ಚೇತನರಲ್ಲಿ ಜ್ಞಾನವಾಗಿದ್ದೇನೆ.

ರುದ್ರಾಣಾಂ ಶಂಕರಶ್ಚಾಸ್ಮಿ ವಿತ್ತೇಶೋ ಯಕ್ಷರಕ್ಷಸಾಮ್ ।
ವಸೂನಾಂ ಪಾವಕಶ್ಚಾಸ್ಮಿ ಮೇರುಃ ಶಿಖರಿಣಾಮಹಮ್ ॥೨೩॥

ರುದ್ರರಲ್ಲಿ ಶಂಕರನಾಗಿದ್ದೇನೆ. ಯಕ್ಷ-ರಾಕ್ಷಸರಲ್ಲಿ ಕುಬೇರನಾಗಿದ್ದೇನೆ. ವಸುಗಳಲ್ಲಿ ಅಗ್ನಿಯಾಗಿದ್ದೇನೆ. ಶಿಖರವುಳ್ಳವುಗಳಲ್ಲಿ ನಾನು ಮೇರುವಾಗಿದ್ದೇನೆ.

ಪುರೋಧಸಾಂ ಚ ಮುಖ್ಯಂ ಮಾಂ ವಿದ್ಧಿ ಪಾರ್ಥ ಬೃಹಸ್ಪತಿಮ್ ।
ಸೇನಾನೀನಾಮಹಂ ಸ್ಕಂದಃ ಸರಸಾಮಸ್ಮಿ ಸಾಗರಃ ॥೨೪॥

ಪುರೋಹಿತರಲ್ಲಿ ನಾನು ಮುಖ್ಯನಾದ ಬೃಹಸ್ಪತಿಯಾಗಿದ್ದೇನೆ. ಸೇನಾ ನಾಯಕರಲ್ಲಿ ನಾನು ಷಣ್ಮುಖನಾಗಿದ್ದೇನೆ. ಸರೋವರಗಳಲ್ಲಿ ಸಾಗರವಾಗಿದ್ದೇನೆ.

ಮಹರ್ಷೀಣಾಂ ಭೃಗುರಹಂ ಗಿರಾಮಸ್ಮ್ಯೇಕಮಕ್ಷರಮ್ ।
ಯಜ್ಞಾನಾಂ ಜಪಯಜ್ಞೋಽಸ್ಮಿ ಸ್ಥಾವರಾಣಾಂ ಹಿಮಾಲಯಃ ॥೨೫॥

ಮಹರ್ಷಿಗಳಲ್ಲಿ ಭೃಗುವಾಗಿದ್ದೇನೆ. ವಚನಗಳಲ್ಲಿ ಓಂಕಾರವಾಗಿದ್ದೇನೆ. ಯಜ್ಞಗಳಲ್ಲಿ ಜಪಯಜ್ಞವಾಗಿದ್ದೇನೆ. ಸ್ಥಿರವಾದ ಪದಾರ್ಥಗಳಲ್ಲಿ ಹಿಮಾಲಯವಾಗಿದ್ದೇನೆ.

ಅಶ್ವತ್ಥಃ ಸರ್ವವೃಕ್ಷಾಣಾಂ ದೇವರ್ಷೀಣಾಂ ಚ ನಾರದಃ ।
ಗಂಧರ್ವಾಣಾಂ ಚಿತ್ರರಥಃ ಸಿದ್ಧಾನಾಂ ಕಪಿಲೋ ಮುನಿಃ ॥೨೬॥

ಸರ್ವವೃಕ್ಷಗಳಲ್ಲಿ ಅಶ್ವತ್ಥನಾಗಿದ್ದೇನೆ. ದೇವರ್ಷಿಗಳಲ್ಲಿ ನಾರದನಾಗಿದ್ದೇನೆ. ಗಂಧರ್ವರಲ್ಲಿ ಚಿತ್ರರಥನಾಗಿದ್ದೇನೆ. ಸಿದ್ಧರಲ್ಲಿ ಕಪಿಲನಾಗಿದ್ದೇನೆ.

ಉಚ್ಚೈಃಶ್ರವಸಮಶ್ವಾನಾಂ ವಿದ್ಧಿ ಮಾಮಮೃತೋದ್ಭವಮ್ ।
ಐರಾವತಂ ಗಜೇಂದ್ರಾಣಾಂ ನರಾಣಾಂ ಚ ನರಾಧಿಪಮ್ ॥೨೭॥

ಅಶ್ವಗಳಲ್ಲಿ ನನ್ನನ್ನು ಅಮೃತ ಮಥನ ಕಾಲದಲ್ಲಿ ಉದ್ಭವಿಸಿದ ಉಚ್ಚೈಃಶ್ರವಸ್ ಎಂದು ತಿಳಿ. ಗಜೇಂದ್ರಗಳಲ್ಲಿ ಐರಾವತನಾಗಿದ್ದೇನೆ. ಮನುಷ್ಯರಲ್ಲಿ ಚಕ್ರವರ್ತಿಯಾಗಿದ್ದೇನೆ.

ಆಯುಧಾನಾಮಹಂ ವಜ್ರಂ ಧೇನೂನಾಮಸ್ಮಿ ಕಾಮಧುಕ್ ।
ಪ್ರಜನಶ್ಚಾಸ್ಮಿ ಕಂದರ್ಪಃ ಸರ್ಪಾಣಾಮಸ್ಮಿ ವಾಸುಕಿಃ ॥೨೮॥

ಆಯುಧಗಳಲ್ಲಿ ವಜ್ರವಾಗಿದ್ದೇನೆ. ಧೇನುಗಳಲ್ಲಿ ಕಾಮಧೇನುವಾಗಿದ್ದೇನೆ. ಪ್ರಜನನ ಕಾರಣಗಳಲ್ಲಿ ಮನ್ಮಥನಾಗಿದ್ದೇನೆ. ಒಂದೇ ತಲೆಯುಳ್ಳ ಸರ್ಪಗಳಲ್ಲಿ ವಾಸುಕಿಯಾಗಿದ್ದೇನೆ.

ಅನಂತಶ್ಚಾಸ್ಮಿ ನಾಗಾನಾಂ ವರುಣೋ ಯಾದಸಾಮಹಮ್ ।
ಪಿತೃಣಾಮರ್ಯಮಾ ಚಾಸ್ಮಿ ಯಮಃ ಸಂಯಮತಾಮಹಮ್ ॥೨೯॥

ಅನೇಕ ಶಿರಸ್ಸುಳ್ಳ ಸರ್ಪಗಳಲ್ಲಿ ಶೇಷನಾಗಿದ್ದೇನೆ. ಜಲಚರಗಳಲ್ಲಿ ನಾನು ವರುಣನಾಗಿದ್ದೇನೆ. ಪಿತೃಗಳಲ್ಲಿ ಅರ್ಯಮನಾಗಿದ್ದೇನೆ. ನಿಯಮನವನ್ನು ಮಾಡುವವರಲ್ಲಿ ನಾನು ಯಮನಾಗಿದ್ದೇನೆ.

ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ ಕಾಲಃ ಕಲಯತಾಮಹಮ್ ।
ಮೃಗಾಣಾಂ ಚ ಮೃಗೇಂದ್ರೋಽಹಂ ವೈನತೇಯಶ್ಚ ಪಕ್ಷಿಣಾಮ್ ॥೩೦॥

ದೈತ್ಯರಲ್ಲಿ ಪ್ರಹ್ಲಾದನಾಗಿದ್ದೇನೆ. ಬಂಧನಾದಿಗಳನ್ನು ಮಾಡುವವರಲ್ಲಿ ನಾನು ಕಾಲನಾಗಿದ್ದೇನೆ. ಮೃಗಗಳಲ್ಲಿ ಸಿಂಹನಾಗಿದ್ದೇನೆ. ಪಕ್ಷಿಗಳಲ್ಲಿ ಗರುಡನಾಗಿದ್ದೇನೆ.

ಪವನಃ ಪವತಾಮಸ್ಮಿ ರಾಮಃ ಶಸ್ತ್ರಭೃತಾಮಹಮ್ ।
ಝಷಾಣಾಂ ಮಕರಶ್ಚಾಸ್ಮಿ ಸ್ರೋತಸಾಮಸ್ಮಿ ಜಾಹ್ನವೀ ॥೩೧॥

ಪವಿತ್ರೀಕರಿಸುವವರಲ್ಲಿ ಅಥವಾ ವೇಗವುಳ್ಳವರಲ್ಲಿ ನಾನು ಪವನನಾಗಿದ್ದೇನೆ. ಶಸ್ತ್ರಧಾರಿಗಳಲ್ಲಿ ನಾನು ಪರಶುರಾಮನಾಗಿದ್ದೇನೆ. ಮೀನುಗಳಲ್ಲಿ ನಾನು ಮೊಸಳೆಯಾಗಿದ್ದೇನೆ. ನದಿಗಳಲ್ಲಿ ಜಾಹ್ನವಿಯಾಗಿದ್ದೇನೆ.

ಸರ್ಗಾಣಾಮಾದಿರಂತಶ್ಚ ಮಧ್ಯಂ ಚೈವಾಹಮರ್ಜುನ ।
ಅಧ್ಯಾತ್ಮವಿದ್ಯಾ ವಿದ್ಯಾನಾಂ ವಾದಃ ಪ್ರವದತಾಮಹಮ್ ॥೩೨॥

ಎಲೈ ಅರ್ಜುನನೇ, ನಾನು ಸೃಷ್ಟಿಸಲ್ಪಡುವ ಎಲ್ಲಾ ವಸ್ತುಗಳಿಗೂ ಆದಿಯೂ, ಅಂತವೂ ಮತ್ತು ಮಧ್ಯನೂ ಆಗಿದ್ದೇನೆ. ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆಯಾಗಿದ್ದೇನೆ. ವಾದ, ಜಲ್ಪವಿತಂಡ ಕಥೆಗಳಲ್ಲಿ ವಾದವಾಗಿದ್ದೇನೆ.

ಅಕ್ಷರಾಣಾಮಕಾರೋಽಸ್ಮಿ ದ್ವಂದ್ವಃ ಸಾಮಾಸಿಕಸ್ಯ ಚ ।
ಅಹಮೇವಾಕ್ಷಯಃ ಕಾಲೋ ಧಾತಾಽಹಂ ವಿಶ್ವತೋಮುಖಃ ॥೩೩॥

ಅಕ್ಷರಗಳಲ್ಲಿ ಅಕಾರನಾಗಿದ್ದೇನೆ. ಸಮಾಸಗಳಲ್ಲಿ ದ್ವಂದ್ವಸಮಾಸವಾಗಿದ್ದೇನೆ. ನಾನೇ ಅಕ್ಷಯವಾದ ಕಾಲನಾಗಿದ್ದೇನೆ. ಸರ್ವತ್ರಸರ್ವಾವಯವಗಳುಳ್ಳ ನಾನು ಪೋಷಕನಾಗಿದ್ದೇನೆ.

ಮೃತ್ಯುಃ ಸರ್ವಹರಶ್ಚಾಹಮುದ್ಭವಶ್ಚ ಭವಿಷ್ಯತಾಮ್ ।
ಕೀರ್ತಿಃ ಶ್ರೀರ್ವಾಕ್ಚ ನಾರೀಣಾಂ ಸ್ಮೃತಿರ್ಮೇಧಾ ಧೃತಿಃ ಕ್ಷಮಾ ॥೩೪॥

ನಾನು ಸರ್ವಸಂಹಾರಕನಾದ ಮೃತ್ಯುವಾಗಿದ್ದೇನೆ. ಜನಿಸಲಿರುವ ವಸ್ತುಗಳ ಉತ್ಪತ್ತಿಯಾಗಿದ್ದೇನೆ. ನಾರಿಯರಲ್ಲಿ ಶ್ರೇಷ್ಠವಾದ ಲಕ್ಷ್ಮಿಯ ರೂಪಗಳಾದ ಕೀರ್ತಿ, ಶ್ರೀ, ವಾಕ್, ಸ್ಮೃತಿ, ಮೇಧಾ, ಧೃತಿ, ಕ್ಷಮಾ ಎಲ್ಲವೂ ಆಗಿದ್ದೇನೆ.

ಬೃಹತ್ಸಾಮ ತಥಾ ಸಾಮ್ನಾಂ ಗಾಯತ್ರೀ ಛಂದಸಾಮಹಮ್ ।
ಮಾಸಾನಾಂ ಮಾರ್ಗಶೀರ್ಷೋಽಹಮ್ ಋತೂನಾಂ ಕುಸುಮಾಕರಃ ॥

ಸಾಮಗಳಲ್ಲಿ ಬೃಹತ್ಸಾಮನಾಗಿದ್ದೇನೆ. ಛಂದಸ್ಸುಗಳಲ್ಲಿ ಗಾಯತ್ರಿಯಾಗಿದ್ದೇನೆ. ಮಾಸಗಳಲ್ಲಿ ಮಾರ್ಗಶೀರ್ಷ ಮಾಸವೂ, ಋತುಗಳಲ್ಲಿ ವಸಂತ ಋತುವೂ ಆಗಿದ್ದೇನೆ.

ದ್ಯೂತಂ ಛಲಯತಾಮಸ್ಮಿ ತೇಜಸ್ತೇಜಸ್ವಿನಾಮಹಮ್ ।
ಜಯೋಽಸ್ಮಿ ವ್ಯವಸಾಯೋಽಸ್ಮಿ ಸತ್ತ್ವಂ ಸತ್ತ್ವವತಾಮಹಮ್ ॥೩೬॥

ಕಪಟಗಳಲ್ಲಿ ನಾನು ದ್ಯೂತನಾಗಿದ್ದೇನೆ. ತೇಜಸ್ವಿಗಳಲ್ಲಿ ನಾನು ತೇಜಸ್ವಾಗಿದ್ದೇನೆ. ಜಯಿಸುವವರಲ್ಲಿ ನಾನು ಜಯನೂ, ನಿಶ್ಚಿತ ಜ್ಞಾನವುಳ್ಳವರಲ್ಲಿ ನಾನು ನಿಶ್ಚಿತ ಜ್ಞಾನನೂ, ಸಾರವಾದ ಸ್ವರೂಪವುಳ್ಳವರಲ್ಲಿ ನಾನು ಅಂತಹ ಸಾರನೂ ಆಗಿದ್ದೇನೆ.

ವೃಷ್ಣೀನಾಂ ವಾಸುದೇವೋಽಸ್ಮಿ ಪಾಂಡವಾನಾಂ ಧನಂಜಯಃ ।
ಮುನೀನಾಮಪ್ಯಹಂ ವ್ಯಾಸಃ ಕವೀನಾಮುಶನಾ ಕವಿಃ ॥೩೭॥

ವೃಷ್ಣಿಗಳಲ್ಲಿ ವಾಸುದೇವನಾಗಿದ್ದೇನೆ. ಪಾಂಡವರಲ್ಲಿ ಅರ್ಜುನನಾಗಿದ್ದೇನೆ. ಮುನಿಗಳಲ್ಲಿ ವ್ಯಾಸನಾಗಿದ್ದೇನೆ. ಕವಿಗಳಲ್ಲಿ ಶುಕ್ರನಾಗಿದ್ದೇನೆ.

ದಂಡೋ ದಮಯತಾಮಸ್ಮಿ ನೀತಿರಸ್ಮಿ ಜಿಗೀಷತಾಮ್ ।
ಮೌನಂ ಚೈವಾಸ್ಮಿ ಗುಹ್ಯಾನಾಂ ಜ್ಞಾನಂ ಜ್ಞಾನವತಾಮಹಮ್ ॥೩೮॥

ನಿಯಂತ್ರಣ ಮಾಡುವವರಲ್ಲಿ ನಾನು ದಂಡನಾಗಿದ್ದೇನೆ. ಜಯವನ್ನು ಬಯಸುವವರಲ್ಲಿ ನಾನು ಅವರ ನೀತಿಯಾಗಿದ್ದೇನೆ. ಮುಚ್ಚಿಡಬೇಕಾದ ವಸ್ತುಗಳಲ್ಲಿ ನಾನು ಮೌನವಾಗಿದ್ದೇನೆ. ಜ್ಞಾನವುಳ್ಳವರಲ್ಲಿ ನಾನು ಜ್ಞಾನನಾಗಿದ್ದೇನೆ.

ವಿಶೇಷ ವಿಚಾರ– ಇಲ್ಲಿ ಚಂದ್ರಾದಿಗಳಲ್ಲಿ ವಿಜಾತೀಯ ಶ್ರೇಷ್ಠತತ್ವವಾದ ವಿಭೂತಿ ರೂಪವು ಹೇಳಲ್ಪಟ್ಟಿದೆ. ಏಕೆಂದರೆ ನಕ್ಷತ್ರಾದಿಗಳು ಚಂದ್ರಾದಿಗಳಿಗಿಂತ ವಿಜಾತೀಯ ವಿದವುಗಳು. 'ಸತ್ವಂ ಸತ್ವವತಾಂ' ಮೊದಲಾದವುಗಳಲ್ಲಿ ಆಯಾ ಧರ್ಮಿಗಳಲ್ಲಿ ಸತ್ತಾ ದಿ ರೂಪ ಶ್ರೇಷ್ಠ ಧರ್ಮವನ್ನು ಕೊಡುವ ವಿಭೂತಿರೂಪವು ಹೇಳಲ್ಪಟ್ಟಿದೆ. 'ರುದ್ರಾಣಾಂ ಶಂಕರಃ' ಇತ್ಯಾದಿಗಳಲ್ಲಿ ಸಜಾತೀಯರಲ್ಲಿ ಶ್ರೇಷ್ಠತ್ವವನ್ನು ಕೊಡುವ ವಿಭೂತಿರೂಪವು ಹೇಳಲ್ಪಟ್ಟಿದೆ. ವಾಸವ, ಉಶನಾ, ಧನಂಜಯ, ಯಜ್ಞ, ವಜ್ರ, ಸಾಮವೇದಗಳಲ್ಲಿ ಸಜಾತೀಯ ವಿಕದೇಶಗಳಲ್ಲಿ ಆಧಿಕ್ಯವನ್ನು ತಂದುಕೊಡುವ ವಿಭೂತಿರೂಪವು ಹೇಳಲ್ಪಟ್ಟಿದೆ. ವಿಕೆಂದರೆ ಅವುಗಳಲ್ಲಿ ಸಜಾತೀಯ ಸರ್ವಶ್ರೇಷ್ಠತೆಯು ಇಲ್ಲ. ದೇವತೆಗಳಲ್ಲಿ ಮತ್ತು ಕವಿತ್ವಾದಿ ಗುಣಗಳಲ್ಲಿ ಬ್ರಹ್ಮದೇವರು ಶ್ರೇಷ್ಠರಾದವರು. ಪಾರ್ಥರಲ್ಲಿ ಭೀಮನು ಶ್ರೇಷ್ಠನಾದವನು. ಯಜ್ಞಗಳಲ್ಲಿ ಜ್ಞಾನಯಜ್ಞವು ಶ್ರೇಷ್ಠವಾದುದು. ಆಯುಧಗಳಲ್ಲಿ ಸುದರ್ಶನವು ಶ್ರೇಷ್ಠವಾದುದು. ವೇದಗಳಲ್ಲಿ ಋಗ್ವೇದವು ಶ್ರೇಷ್ಠವಾದುದು. ಆದ್ದರಿಂದ ಹೀಗೆ ಬೇರೆ ಬೇರೆ ರೀತಿಯಲ್ಲಿ ವಿಭೂತಿರೂಪಗಳನ್ನು ತಿಳಿಯಬೇಕು.

ಯಚ್ಚಾಪಿ ಸರ್ವಭೂತಾನಾಂ ಬೀಜಂ ತದಹಮರ್ಜುನ ।
ನ ತದಸ್ತಿ ವಿನಾ ಯತ್ ಸ್ಯಾನ್ಮಯಾ ಭೂತಂ ಚರಾಚರಮ್ ॥೩೯॥

ಎಲೈ ಅರ್ಜುನನೇ, ಎಲ್ಲ ವಸ್ತುಗಳಿಗೂ ಏನು ಕಾರಣವಿದೆಯೋ ಅದು ನಾನೇ ಆಗಿದ್ದೇನೆ. ನನ್ನಿಂದ ವ್ಯಾಪ್ತವಾಗದಿರುವ ಯಾವ ಚರಾಚರ ವಸ್ತುವೂ ಇಲ್ಲ.

ನಾನ್ತೋಽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ ।
ಏಷ ತೂದ್ದೇಶತಃ ಪ್ರೋಕ್ತೋ ವಿಭೂತೇರ್ವಿಸ್ತರೋ ಮಯಾ ॥೪೦॥

ಎಲೈ ಪರಂತಪನೇ, ನನ್ನ ದಿವ್ಯವಿಭೂತಿಗಳಿಗೆ ಕೊನೆಯೇ ಇಲ್ಲ. ವಿಸ್ತಾರವಾದ ಆ ನನ್ನ ವಿಭೂತಿಗಳನ್ನು ನಿನಗೆ ಸಂಕ್ಷೇಪವಾಗಿ ಹೇಳಿದ್ದೇನೆ.

ಯದ್ಯದ್ ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಂಶಸಂಭವಮ್ ॥೪೧॥

ಯಾವ ಯಾವ ವಸ್ತುಗಳು ವಿಶೇಷವಾದ ತೇಜಸ್ಸನ್ನು, ಕಾಂತಿಯನ್ನು ಹೊಂದಿ ಶ್ರೇಷ್ಠವಾಗಿರುತ್ತವೆಯೋ, ಅವುಗಳೆಲ್ಲವನ್ನೂ ನನ್ನ ತೇಜೋಂಶದಿಂದ ಆ ಮಹಿಮೆಯನ್ನು ಪಡೆದವುಗಳು ಎಂದೇ ತಿಳಿ.

ಅಥ ವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ ।
ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ ॥೪೨॥

ಅರ್ಜುನನೇ, ಇಷ್ಟು ವಿಸ್ತಾರವಾಗಿ ತಿಳಿದು ಏನು ಪ್ರಯೋಜನ? ನಾನು ಈ ಸಮಸ್ತವಾದ ಜಗತ್ತನ್ನು ಒಂದು ಅಂಶದಿಂದ ವ್ಯಾಪಿಸಿದ್ದೇನೆ. (ನಾನು ಪೂರ್ಣವಾಗಿ ವ್ಯಾಪಿಸಲು ಎಷ್ಟು ಜಗತ್ತುಗಳು ಬಂದರೂ ಸಾಧ್ಯವಾಗುವುದಿಲ್ಲ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ದ್ವಾತ್ರಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಏಕೋನವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ಮೂರನೆಯ ಅಧ್ಯಾಯ

ಭಗವದ್ಗೀತಾ – ವಿಶ್ವರೂಪದರ್ಶನ.

ಅರ್ಜುನಃ

ಮದನುಗ್ರಹಾಯ ಪರಮಂ ಗುಹ್ಯಮಧ್ಯಾತ್ಮಸಂಜ್ಞಿತಮ್ ।
ಯತ್ ತ್ವಯೋಕ್ತಂ ವಚಸ್ತೇನ ಮೋಹೋಽಯಂ ವಿಗತೋ ಮಮ ॥೧॥

ಅರ್ಜುನ– ನನ್ನನ್ನು ಅನುಗ್ರಹಿಸಲು ನೀನು ಹೇಳಿದ ಅಧ್ಯಾತ್ಮನಾಮಕವಾದ ಪರಮ ರಹಸ್ಯ ವಚನಗಳಿಂದ ನನ್ನ ಈ ಮೋಹವು ನಾಶವನ್ನು ಹೊಂದಿತು.

ಭವಾಪ್ಯಯೌ ಹಿ ಭೂತಾನಾಂ ಶ್ರುತೌ ವಿಸ್ತರಶೋ ಮಯಾ ।
ತ್ವತ್ತಃ ಕಮಲಪತ್ರಾಕ್ಷ ಮಾಹಾತ್ಮ್ಯಮಪಿ ಚಾವ್ಯಯಮ್ ॥೨॥

ಎಲೈ ಕಮಲಪತ್ರಾಕ್ಷನೇ, ನಿನ್ನಿಂದ ನಾನು ವಿಸ್ತಾರವಾಗಿ ಎಲ್ಲ ಭೂತಗಳ ಉತ್ಪತ್ತಿ, ನಾಶಗಳನ್ನೂ ಮತ್ತು ಶಾಶ್ವತವಾದ ನಿನ್ನ ಮಹಿಮೆಯನ್ನೂ ಕೇಳಿದೆನು.

ಏವಮೇತದ್ ಯಥಾऽऽತ್ಥ ತ್ವಮಾತ್ಮಾನಂ ಪರಮೇಶ್ವರ ।
ದ್ರಷ್ಟುಮಿಚ್ಛಾಮಿ ತೇ ರೂಪಮೈಶ್ವರಂ ಪುರುಷೋತ್ತಮ ॥೩॥

ಎಲೈ ಪರಮೇಶ್ವರನೇ, ನೀನು ನಿನ್ನ ವಿಷಯದಲ್ಲಿ ಏನು ಹೇಳಿದ್ದೀಯೋ ಅದೆಲ್ಲವೂ ಹಾಗೆಯೇ ಸರಿ. ಎಲೈ ಪುರುಷೋತ್ತಮನೇ, ನಿನ್ನ ಪರಮೈಶ್ವರ್ಯಸಹಿತವಾದ ರೂಪವನ್ನು ನಾನು ನೋಡಲು ಇಚ್ಛಿಸುತ್ತೇನೆ.

ಮನ್ಯಸೇ ಯದಿ ತಚ್ಛಕ್ಯಂ ಮಯಾ ದ್ರಷ್ಟುಮಿತಿ ಪ್ರಭೋ ।
ಯೋಗೇಶ್ವರ ತತೋ ಮೇ ತ್ವಂ ದರ್ಶಯಾತ್ಮಾನಮವ್ಯಯಮ್ ॥೪॥

ಎಲೈ ಪ್ರಭುವೇ, ಅದನ್ನು ನಾನು ನೋಡಲು ಸಾಧ್ಯ ಎಂದು ನೀನು ತಿಳಿಯುವುದಾದರೆ ಎಲೈ ಯೋಗೇಶ್ವರನೇ, ನನಗೆ ಆ ನಿನ್ನ ಶಾಶ್ವತವಾದ ರೂಪವನ್ನು ತೋರಿಸು.

ಶ್ರೀಭಗವಾನ್

ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ ।
ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ ॥೫॥

ಶ್ರೀಭಗವಾನ್– ಪಾರ್ಥನೇ, ನಾನಾ ವಿಧವಾದ ದಿವ್ಯಗಳಾದ ಅನೇಕ ವರ್ಣಗಳನ್ನೂ, ಅನೇಕ ಆಕೃತಿಗಳನ್ನೂ ಹೊಂದಿರುವ ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಗಳಲ್ಲಿರುವ ನನ್ನ ರೂಪಗಳನ್ನು ನೋಡು.

ಪಶ್ಯಾದಿತ್ಯಾನ್ ವಸೂನ್ ರುದ್ರಾನ್ ಅಶ್ವಿನೌ ಮರುತಸ್ತಥಾ ।
ಬಹೂನ್ಯದೃಷ್ಟಪೂರ್ವಾಣಿ ಪಶ್ಯಾಶ್ಚರ್ಯಾಣಿ ಭಾರತ ॥೬॥

ಎಲೈ ಭಾರತನೇ, ಆದಿತ್ಯರನ್ನೂ, ವಸುಗಳನ್ನೂ, ರುದ್ರರನ್ನೂ, ಅಶ್ವಿನಿಗಳನ್ನೂ, ಹಾಗೆಯೇ ಮರುತ್ತುಗಳನ್ನೂ ನನ್ನಲ್ಲಿನೋಡು. ನೀನು ಹಿಂದೆ ಎಂದೂ ನೋಡದಿರುವ ಆಶ್ಚರ್ಯಕರವಾದ ಅನೇಕ ವಸ್ತುಗಳನ್ನು ನೋಡು.

ಇಹೈಕಸ್ಥಂ ಜಗತ್ ಕೃತ್ಸ್ನಂ ಪಶ್ಯಾದ್ಯ ಸಚರಾಚರಮ್ ।
ಮಮ ದೇಹೇ ಗುಡಾಕೇಶ ಯಚ್ಚಾನ್ಯದ್ ದ್ರಷ್ಟುಮಿಚ್ಛಸಿ ॥೭॥

ಎಲೈ ಗುಡಾಕೇಶನೇ (ನಿದ್ರೆಯನ್ನು ಗೆದ್ದವನೇ), ಈ ನನ್ನ ದೇಹದಲ್ಲಿ ಒಂದೇ ಕಡೆಯಲ್ಲಿ ಇರುವ ಸ್ಥಾವರ-ಜಂಗಮ ಸಹಿತವಾದ ಸಕಲ ಜಗತ್ತನ್ನೂ ಈ ದಿನ ನೋಡು ಮತ್ತು ಬೇರೆ ಏನನ್ನು ನೋಡಲು ಬಯಸುವಿಯೋ ಅವೆಲ್ಲವನ್ನೂ ನೋಡು.

ನ ತು ಮಾಂ ಶಕ್ಯಸೇ ದ್ರಷ್ಟುಮನೇನೈವ ಸ್ವಚಕ್ಷುಷಾ ।
ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಮ್ ॥೮॥

ಈ ನಿನ್ನ ಕಣ್ಣುಗಳಿಂದಲೇ ನನ್ನನ್ನು ನೋಡಲು ನಿನಗೆ ಸಾಧ್ಯವಾಗುವುದಿಲ್ಲ. ನಿನಗೆ ದಿವ್ಯದೃಷ್ಟಿಯನ್ನು ಕೊಡುತ್ತೇನೆ. ನನ್ನ ಯೋಗೈಶ್ವರ್ಯವಿಶಿಷ್ಟವಾದ ರೂಪವನ್ನು ನೋಡು.

ಸಂಜಯಃ

ಏವಮುಕ್ತ್ವಾ ತತೋ ರಾಜನ್ ಮಹಾಯೋಗೇಶ್ವರೋ ಹರಿಃ ।
ದರ್ಶಯಾಮಾಸ ಪಾರ್ಥಾಯ ಪರಮಂ ರೂಪಮೈಶ್ವರಮ್ ॥೯॥

ಸಂಜಯ– ಎಲೈ ರಾಜನೇ, ಮಹಾಯೋಗೇಶ್ವರನಾದ ಹರಿಯು ಹೀಗೆ ಹೇಳಿ ಅರ್ಜುನನಿಗೆ ತನ್ನ ಪರಮೈಶ್ವರ್ಯ ವಿಶಿಷ್ಟವಾದ ರೂಪವನ್ನು ತೋರಿಸಿದನು.

ಅನೇಕವಕ್ತ್ರನಯನಮ್ ಅನೇಕಾದ್ಭುತದರ್ಶನಮ್ ।
ಅನೇಕದಿವ್ಯಾಭರಣಂ ದಿವ್ಯಾನೇಕೋದ್ಯತಾಯುಧಮ್ ॥೧೦॥

ದಿವ್ಯಮಾಲ್ಯಾಂಬರಧರಂ ದಿವ್ಯಗಂಧಾನುಲೇಪನಮ್ ।
ಸರ್ವಾಶ್ಚರ್ಯಮಯಂ ದೇವಮನಂತಂ ವಿಶ್ವತೋಮುಖಿಮ್ ॥೧೧॥

ಅನೇಕ ಮುಖಿಗಳು, ಅನೇಕ ಕಣ್ಣುಗಳು, ಅನೇಕ ಅದ್ಭುತ ವಸ್ತುಗಳು, ಅನೇಕ ದಿವ್ಯಾಭರಣಗಳನ್ನು ಧರಿಸಿದ, ದಿವ್ಯವಾದ ಅನೇಕ ಆಯುಧಗಳನ್ನು ಎತ್ತಿಹಿಡಿದ, ದಿವ್ಯಮಾಲೆ ಮತ್ತು ವಸ್ತುಗಳನ್ನು ಧರಿಸಿದ, ದಿವ್ಯಗಂಧಗಳಿಂದ ಅನುಲಿಪ್ತನಾದ, ಸರ್ವಾಶ್ಚರ್ಯಮಯವಾದ, ಅನಂತನಾದ, ವಿಶ್ವತೋಮುಖನಾದ, ಕ್ರೀಡಾದಿ ಗುಣವಿಶಿಷ್ಟವಾದ (ತನ್ನ ರೂಪವನ್ನು ತೋರಿಸಿದನು) ದೇವನನ್ನು ನೋಡಿದನು.

ದಿವಿ ಸೂರ್ಯಸಹಸ್ರಸ್ಯ ಭವೇದ್ ಯುಗಪದುತ್ಥಿತಾ ।
ಯದಿ ಭಾಃ ಸದೃಶೀ ಸಾ ಸ್ಯಾದ್ ಭಾಸಸ್ತಸ್ಯ ಮಹಾತ್ಮನಃ ॥೧೨॥

ಆಕಾಶದಲ್ಲಿ ಸಹಸ್ರ ಸೂರ್ಯರು ಒಂದೇ ಕಾಲದಲ್ಲಿ ಉದಯಿಸಿದರೆ ಎಂತಹ ಪ್ರಕಾಶವಿರಬಹುದೋ, ಆ ಮಹಾತ್ಮನ ಪ್ರಕಾಶವು ಅದಕ್ಕೆ ಸದೃಶವಾಗಿದ್ದಿತು.

ತತ್ರೈಕಸ್ಥಂ ಜಗತ್ ಕೃತ್ಸ್ನಂ ಪ್ರವಿಭಕ್ತಮನೇಕಧಾ ।
ಅಪಶ್ಯದ್ ದೇವದೇವಸ್ಯ ಶರೀರೇ ಪಾಂಡವಸ್ತದಾ ॥೧೩॥

ಪಾಂಡವನಾದ ಅರ್ಜುನನು ಆ ದೇವದೇವನ ಶರೀರದಲ್ಲಿ ಒಂದೇ ಕಡೆಯಲ್ಲಿ ಅನೇಕ ಭೇದಭಿನ್ನವಾದ ಸಮಸ್ತವಾದ ಜಗತ್ತನ್ನೂ ಆಗ ನೋಡಿದನು.

ತತಃ ಸ ವಿಸ್ಮಯಾವಿಷ್ಟೋ ಹೃಷ್ಟರೋಮಾ ಧನಂಜಯಃ ।
ಪ್ರಣಮ್ಯ ಶಿರಸಾ ದೇವಂ ಕೃತಾಂಜಲಿರಭಾಷತ ॥೧೪॥

ಆಗ ಧನಂಜಯನು ವಿಸ್ಮಯದಿಂದ ಕೂಡಿದವನಾಗಿ ರೋಮಾಂಚವನ್ನು ಹೊಂದಿ ಆ ದೇವನಿಗೆ ಶಿರಸಾ ಪ್ರಣಾಮವನ್ನು ಮಾಡಿ ಕೈಗಳನ್ನು ಮುಗಿದು ಮಾತನಾಡಿದನು.

ಪಶ್ಯಾಮಿ ದೇವಾಂಸ್ತವ ದೇವ ದೇಹೇ
ಸರ್ವಾಂಸ್ತಥಾ ಭೂತವಿಶೇಷಸಂಘಾನ್ ।
ಬ್ರಹ್ಮಾಣಮೀಶಂ ಕಮಲಾಸನಸ್ಥಂ
ಋಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾನ್ ॥೧೫॥

ಎಲೈ ದೇವನೇ, ನಿನ್ನ ದೇಹದಲ್ಲಿ ಎಲ್ಲಾ ಭೂತವಿಶೇಷ ಗಣಗಳನ್ನೂ, ಕಮಲಾಸನದಲ್ಲಿರುವ ಬ್ರಹ್ಮನನ್ನೂ, ರುದ್ರನನ್ನೂ, ಋಷಿಗಳನ್ನೂ, ಎಲ್ಲಾ ದಿವ್ಯವಾದ ಸರ್ಪಗಳನ್ನೂ ನೋಡುತ್ತಿದ್ದೇನೆ.

ಅನೇಕಬಾಹೂದರವಕ್ತ್ರನೇತ್ರಂ
ಪಶ್ಯಾಮಿ ತ್ವಾ ಸರ್ವತೋऽನಂತರೂಪಮ್ ।
ನಾಂತಂ ನ ಮಧ್ಯಂ ನ ಪುನಸ್ತವಾದಿಂ
ಪಶ್ಯಾಮಿ ವಿಶ್ವೇಶ್ವರ ವಿಶ್ವರೂಪ ॥೧೬॥

ಅನೇಕ ಬಾಹುಗಳು, ಅನೇಕ ಉದರಗಳು, ಅನೇಕ ವದನಗಳು ಮತ್ತು ಅನೇಕ ನೇತ್ರಗಳುಳ್ಳ, ಎಲ್ಲ ದಿಕ್ಕುಗಳಲ್ಲಿಯೂ ಅನಂತವಾದ ರೂಪವುಳ್ಳ ನಿನ್ನನ್ನು ನೋಡುತ್ತಿದ್ದೇನೆ. ಎಲೈ ವಿಶ್ವೇಶ್ವರನೇ, ಎಲೈ ವಿಶ್ವರೂಪನೇ, ನಿನ್ನ ರೂಪಕ್ಕೆ ಆದಿಯನ್ನಾಗಲೀ, ಅಂತವನ್ನಾಗಲೀ, ಮಧ್ಯವನ್ನಾಗಲೀ ನಾನು ಕಾಣುತ್ತಿಲ್ಲ.

ಕಿರೀಟಿನಂ ಗದಿನಂ ಚಕ್ರಿಣಂ ಚ
ತೇಜೋರಾಶಿಂ ಸರ್ವತೋ ದೀಪ್ತಿಮಂತಮ್ ।
ಪಶ್ಯಾಮಿ ತ್ವಾಂ ದುರ್ನಿರೀಕ್ಷ್ಯಂ ಸಮಂತಾದ್
ದೀಪ್ತಾನಲಾರ್ಕದ್ಯುತಿಮಪ್ರಮೇಯಮ್ ॥೧೭॥

ಕಿರೀಟವನ್ನು ಧರಿಸಿದ, ಗದೆಯನ್ನು ಚಕ್ರವನ್ನು ಧರಿಸಿದ, ಸರ್ವಕಡೆಯಲ್ಲಿಯೂ ಪ್ರಕಾಶಿಸುವ, ನೋಡಲು ಕಷ್ಟಸಾಧ್ಯವಾದ, ಎಲ್ಲ ಕಡೆಗಳಲ್ಲಿಯೂ ಜ್ವಲಿಸುವ ಅಗ್ನಿ-ಸೂರ್ಯರ ಕಾಂತಿಯನ್ನು ಹೊಂದಿರುವ. ಅಪ್ರಮೇಯವಾದ (ತಿಳಿಯಲು ಅಸಾಧ್ಯವಾದ) ತೇಜೋರಾಶಿಯಾದ ನಿನ್ನನ್ನು ನೋಡುತ್ತಿದ್ದೇನೆ.

ತ್ವಮಕ್ಷರಂ ಪರಮಂ ವೇದಿತವ್ಯಂ
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್ ।
ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ
ಸನಾತನಸ್ತ್ವಂ ಪುರುಷೋ ಮತೋ ಮೇ ॥೧೮॥

ನೀನು ಅಕ್ಷರನಾಮಕನಾದವನು. ನೀನೇ ಜ್ಞೇಯವಸ್ತುಗಳಲ್ಲಿ ಶ್ರೇಷ್ಠನಾದವನು. ನೀನೇ ಈ ವಿಶ್ವಕ್ಕೆ ಪರಮ ಧಾರಕನಾದವನು. ನೀನು ಚ್ಯುತಿರಹಿತನಾದವನು. ಶಾಶ್ವತ ಧರ್ಮರಕ್ಷಕನಾದವನು. ನೀನೇ ವೇದಪ್ರತಿಪಾದ್ಯನಾದ ಪುರುಷನೆಂದು ನನ್ನ ಅಭಿಪ್ರಾಯ.

ಅನಾದಿಮಧ್ಯಾಂತಮನಂತವೀರ್ಯಮ್
ಅನಂತಬಾಹುಂ ಶಶಿಸೂರ್ಯನೇತ್ರಮ್ ।
ಪಶ್ಯಾಮಿ ತ್ವಾಂ ದೀಪ್ತಹುತಾಶವಕ್ತ್ರಂ
ಸ್ವತೇಜಸಾ ವಿಶ್ವಮಿದಂ ತಪಂತಮ್ ॥೧೯॥

ಆದಿ,ಮಧ್ಯಾಂತಶೂನ್ಯವಾದ, ಅನಂತ ಸಾಮರ್ಥ್ಯವುಳ್ಳ, ಅನಂತ ಬಾಹುಗಳಿಂದ ಕೂಡಿದ, ಚಂದ್ರ-ಸೂರ್ಯರನ್ನು ಚಕ್ಷುಸ್ಸಿನಲ್ಲಿ ಹೊಂದಿದ, ಜ್ವಲಿಸುವ ಅಗ್ನಿಯನ್ನು ಮುಖದಲ್ಲಿ ಧರಿಸಿದ ನಿನ್ನ ತೇಜಸ್ಸಿನಿಂದ ಈ ವಿಶ್ವವನ್ನು ದಹಿಸುತ್ತಿರುವ ನಿನ್ನನ್ನು ನೋಡುತ್ತಿದ್ದೇನೆ.

ದ್ಯಾವಾಪೃಥಿವ್ಯೋರಿದಮಂತರಂ ಹಿ
ವ್ಯಾಪ್ತಂ ತ್ವಯೈಕೇನ ದಿಶಶ್ಚ ಸರ್ವಾಃ ।
ದೃಷ್ಟ್ವಾದ್ಭುತಂ ರೂಪಮಿದಂ ತವೋಗ್ರಂ
ಲೋಕತ್ರಯಂ ಪ್ರವ್ಯಥಿತಂ ಮಹಾತ್ಮನ್ ॥೨೦॥

ಭೂಮಿ ಮತ್ತು ಅಂತರಿಕ್ಷಗಳ ನಡುವ ಎಷ್ಟು ಪ್ರದೇಶವಿದೆಯೋ ಅದೆಲ್ಲವನ್ನೂ ಮತ್ತು ಎಲ್ಲ ದಿಕ್ಕುಗಳನ್ನೂ ನೀನು ಈ ನಿನ್ನ ಒಂದೇ ರೂಪದಿಂದ ವ್ಯಾಪಿಸಿದ್ದೀಯೆ. ಎಲೈ ಮಹಾತ್ಮನೇ, ಈ ನಿನ್ನ ಅದ್ಭುತವಾದ ಮತ್ತು ಘೋರವಾದ ರೂಪವನ್ನು ನೋಡಿ ಮೂರು ಲೋಕಗಳೂ ಬಹಳ ವ್ಯಥೆಯನ್ನು ಹೊಂದಿವೆ.

ಅಮೀ ಹಿ ತ್ವಾ ಸುರಸಂಘಾ ವಿಶಂತಿ
ಕೇಚಿದ್ ಭೀತಾಃ ಪ್ರಾಂಜಲಯೋ ಗೃಣಂತಿ ।
ಸ್ವಸ್ತೀತ್ಯುಕ್ತ್ವಾ ಮಹರ್ಷಿಸಿದ್ಧಸಂಘಾಃ
ಸ್ತುವಂತಿ ತ್ವಾಂ ಸ್ತುತಿಭಿಃ ಪುಷ್ಕಲಾಭಿಃ ॥೨೧॥

ಈ ದೇವತಾ ಗಣಗಳು ನಿನ್ನನ್ನು ಪ್ರವೇಶ ಮಾಡುತ್ತಿವೆ. ಕೆಲವರು ಭಯಗೊಂಡು ಕೈಗಳನ್ನು ಮುಗಿದು ಸ್ತೋತ್ರ ಮಾಡುತ್ತಿದ್ದಾರೆ. ಮಹರ್ಷಿ-ಸಿದ್ಧರ ಸಮೂಹಗಳು ಶುಭವಾಗಲಿ ಎಂದು ಹೇಳುತ್ತಾ, ಪುಷ್ಕಲವಾದ ಸ್ತೋತ್ರಗಳಿಂದ ನಿನ್ನನ್ನು ಸ್ತೋತ್ರ ಮಾಡುತ್ತಿವೆ.

ರುದ್ರಾದಿತ್ಯಾ ವಸವೋ ಯೇ ಚ ಸಾಧ್ಯಾ
ವಿಶ್ವೇऽಶ್ವಿನೌ ಮರುತಶ್ಚೋಷ್ಮಪಾಶ್ಚ ।
ಗಂಧರ್ವಯಕ್ಷಾಸುರಸಿದ್ಧಸಂಘಾ
ವೀಕ್ಷಂತೇ ತ್ವಾಂ ವಿಸ್ಮಿತಾಶ್ಚೈವ ಸರ್ವೇ ॥೨೨॥

ರುದ್ರರು, ಆದಿತ್ಯರು, ವಸುಗಳು, ಸಾಧ್ಯರು, ವಿಶ್ವೇದೇವತೆಗಳು, ಅಶ್ವಿನಿಗಳು, ಮರುತ್ತುಗಳು, ಒಕ್ಕಗಳು, ಗಂಧರ್ವರ, ಯಕ್ಷರ, ಅಸುರರ ಮತ್ತು ಸಿದ್ಧರ ಸಮೂಹಗಳ ಎಲ್ಲರೂ ವಿಸ್ಮಿತರಾಗಿ ನಿನ್ನನ್ನು ನೋಡುತ್ತಿದ್ದಾರೆ.

ರೂಪಂ ಮಹತ್ ತೇ ಬಹುವಕ್ತ್ರನೇತ್ರಂ
ಮಹಾಬಾಹೋ ಬಹುಬಾಹೂರುಪಾದಮ್ ।
ಬಹೂದರಂ ಬಹುದಂಷ್ಟ್ರಾಕರಾಲಂ
ದೃಷ್ಟ್ವಾ ಲೋಕಾಃ ಪ್ರವ್ಯಥಿತಾಸ್ತಥಾಹಮ್ ॥೨೩॥

ಎಲೈ ಮಹಾಬಾಹುವೇ, ಅನೇಕ ವದನ, ನೇತ್ರಗಳನ್ನು ಹೊಂದಿರುವ, ಅನೇಕ ಬಾಹುಗಳು, ತೊಡೆಗಳು ಮತ್ತು ಪಾದಗಳನ್ನು ಹೊಂದಿರುವ, ಅನೇಕ ಉದರಗಳನ್ನು ಹೊಂದಿರುವ, ಅನೇಕ ಕೋರೆದಾಡೆಗಳಿಂದ ಕರಾಳವಾಗಿರುವ ಈ ನಿನ್ನ ಬೃಹತ್ತಾದ ರೂಪವನ್ನು ನೋಡಿ ಎಲ್ಲ ಲೋಕಗಳೂ ಮತ್ತು ನಾನೂ ಬಹಳ ವ್ಯಥೆಯಿಂದ ಕೂಡಿದ್ದೇವೆ.

ನಭಸ್ಪೃಶಂ ದೀಪ್ತಮನೇಕವರ್ಣಂ
ವ್ಯಾತ್ತಾನನಂ ದೀಪ್ತವಿಶಾಲನೇತ್ರಮ್ ।
ದೃಷ್ಟ್ವಾ ಹಿ ತ್ವಾಂ ಪ್ರವ್ಯಥಿತಾಂತರಾತ್ಮಾ
ಧೃತಿಂ ನ ವಿಂದಾಮಿ ಶಮಂ ಚ ವಿಷ್ಣೋ ॥೨೪॥

ಎಲೈ ವಿಷ್ಣುವೇ ಆಕಾಶವನ್ನು ಮುಟ್ಟುತ್ತಿರುವ, ಜ್ವಲಿಸುತ್ತಿರುವ, ಅನೇಕ ವರ್ಣಗಳಿಂದ ಕೂಡಿರುವ, ಬಾಯಿ ತೆರೆದಿರುವ, ಜ್ವಲಿಸುವ ವಿಶಾಲವಾದ ನೇತ್ರವುಳ್ಳ ನಿನ್ನನ್ನು ನೋಡಿ ಮನಸ್ಸಿನಲ್ಲಿ ವ್ಯಥೆಯುಳ್ಳವನಾಗಿ, ನಾನು ಧೈರ್ಯವನ್ನಾಗಲೀ, ಸಮಾಧಾನವನ್ನಾಗಲೀ ಹೊಂದುತ್ತಿಲ್ಲ.

ದಂಷ್ಟ್ರಾಕರಾಲಾನಿ ಚ ತೇ ಮುಖಾನಿ ದೃಷ್ಟ್ವೈವ ಕಾಲಾನಲಸನ್ನಿಭಾನಿ ।
ದಿಶೋ ನ ಜಾನೇ ನ ಲಭೇ ಚ ಶರ್ಮ ಪ್ರಸೀದ ದೇವೇಶ ಜಗನ್ನಿವಾಸ ॥

ಕೋರೆದಾಡೆಗಳಿಂದ ಕರಾಳವಾದ, ಕಾಲಾಗ್ನಿಗೆ ಸದೃಶವಾಗಿ ಹೊಳೆಯುವ ನಿನ್ನ ಮುಖಗಳನ್ನು ನೋಡಿ ನನಗೆ ದಿಕ್ಕುಗಳು ತಿಳಿಯುತ್ತಿಲ್ಲ. ಮನಸ್ಸಿಗೆ ಸುಖವೇ ಆಗುತ್ತಿಲ್ಲ. ಎಲೈ ಜಗನ್ನಿವಾಸನೇ, ದೇವೇಶನೇ, ಪ್ರಸನ್ನನಾಗು.

ಅಮೀ ಚ ತ್ವಾಂ ಧೃತರಾಷ್ಟ್ರಸ್ಯ ಪುತ್ರಾಃ
ಸರ್ವೇ ಸಹೈವಾವನಿಪಾಲಸಂಘೈಃ ।
ಭೀಷ್ಮೋ ದ್ರೋಣಃ ಸೂತಪುತ್ರಸ್ತಥಾಽಸೌ
ಸಹಾಸ್ಮದೀಯೈರಪಿ ಯೋಧಮುಖ್ಯೈಃ ॥೨೬॥

ವಕ್ತ್ರಾಣಿ ತೇ ತ್ವರಮಾಣಾ ವಿಶಂತಿ
ದಂಷ್ಟ್ರಾಕರಾಲಾನಿ ಭಯಾನಕಾನಿ ।
ಕೇಚಿದ್ ವಿಲಗ್ನಾ ದಶನಾಂತರೇಷು
ಸಂದೃಶ್ಯಂತೇ ಚೂರ್ಣಿತೈರುತ್ತಮಾಂಗೈಃ ॥೨೭॥

ರಾಜರ ಗಣಗಳಿಂದ ಕೂಡಿದ ಈ ಎಲ್ಲ ಧೃತರಾಷ್ಟ್ರಪುತ್ರರು, ಭೀಷ್ಮ-ದ್ರೋಣ, ಹಾಗೆಯೇ ಈ ಕರ್ಣ ಇವರು ನಮ್ಮ ಶ್ರೇಷ್ಠ ಯೋಧರಿಂದ ಕೂಡಿದವರಾಗಿ ತ್ವರೆಯಿಂದ ದಂಷ್ಟ್ರಾಕರಾಲವೂ, ಭಯಾನಕವೂ ಆದ ನಿನ್ನ ಮುಖಗಳನ್ನು ಪ್ರವೇಶಿಸುತ್ತಿದ್ದಾರೆ.

ಇನ್ನು ಕೆಲವರು ನಿನ್ನ ಕೋರೆದಾಡೆಗಳ ಮಧ್ಯದಲ್ಲಿ ಸಿಕ್ಕಿ ಪುಡಿ ಪುಡಿಯಾದ ಶಿರಸ್ಸುಳ್ಳವರಾಗಿ ಕಾಣುತ್ತಿದ್ದಾರೆ.

ಯಥಾ ನದೀನಾಂ ಬಹವೋಽಂಬುವೇಗಾಃ
ಸಮುದ್ರಮೇವಾಭಿಮುಖಾ ದ್ರವಂತಿ ।
ತಥಾ ತವಾಮೀ ನರಲೋಕವೀರಾ
ವಿಶಂತಿ ವಕ್ತ್ರಾಣ್ಯಭಿವಿಜ್ವಲಂತಿ ॥೨೮॥

ಹೇಗೆ ನದಿಗಳ ಅನೇಕ ಜಲಪ್ರವಾಹಗಳು ಸಮುದ್ರಾಭಿಮುಖವಾಗಿಯೇ ಶೀಘ್ರವಾಗಿ ಹರಿಯುತ್ತವೆಯೋ, ಹಾಗೆ ಈ ನರಲೋಕವೀರರು ಜ್ವಲಿಸುತ್ತಿರುವ ನಿನ್ನ ಮುಖಗಳನ್ನು ಪ್ರವೇಶಿಸುತ್ತಿದ್ದಾರೆ.

ಯಥಾ ಪ್ರದೀಪ್ತಂ ಜ್ವಲನಂ ಪತಂಗಾ
ವಿಶಂತಿ ನಾಶಾಯ ಸಮೃದ್ಧವೇಗಾಃ ।
ತಥೈವ ನಾಶಾಯ ವಿಶಂತಿ ಲೋಕಾಃ
ತವಾಪಿ ವಕ್ತ್ರಾಣಿ ಸಮೃದ್ಧವೇಗಾಃ ॥೨೯॥

ಹೇಗೆ ಪತಂಗಗಳು ವೇಗದಿಂದ ಕೂಡಿದವುಗಳಾಗಿ ತಮ್ಮ ನಾಶಕ್ಕಾಗಿ ಜ್ವಲಿಸುವ ಅಗ್ನಿಯನ್ನು ಪ್ರವೇಶಿಸುತ್ತವೆಯೋ ಹಾಗೆಯೇ ಈ ಲೋಕಗಳು ಸಮೃದ್ಧವಾದ ವೀರರಿಂದ ಕೂಡಿದವುಗಳಾಗಿ ತಮ್ಮ ನಾಶಕ್ಕಾಗಿ ನಿನ್ನ ವದನಗಳನ್ನು ಪ್ರವೇಶಿಸುತ್ತಿವೆ.

ಲೇಲಿಹ್ಯಸೇ ಗ್ರಸಮಾನಃ ಸಮಂತಾತ್
ಲೋಕಾನ್ ಸಮಗ್ರಾನ್ ವದನೈರ್ಜ್ವಲದ್ಭಿಃ ।
ತೇಜೋಭಿರಾಪೂರ್ಯ ಜಗತ್ ಸಮಗ್ರಂ
ಭಾಸಸ್ತವೋಗ್ರಾಃ ಪ್ರತಪಂತಿ ವಿಷ್ಣೋ ॥೩೦॥

ಎಲ್ಲ ಲೋಕಗಳನ್ನೂ ನಿನ್ನ ಜ್ವಲಿಸುವ ವದನಗಳಿಂದ ಎಲ್ಲ ಕಡೆಗಳಲ್ಲಿಯೂ ನುಂಗುತ್ತಾ ನೀನು ನಾಲಿಗೆಯಿಂದ ಬಾಯಿ ತುದಿಗಳನ್ನು ಸವರಿಕೊಳ್ಳುತ್ತಿದ್ದೀಯೆ. ಎಲೈ ವಿಷ್ಣುವೇ, ಈ ನಿನ್ನ ಉಗ್ರವಾದ ತೇಜಸ್ಸು ಸಮಗ್ರವಾದ ಜಗತ್ತನ್ನು ನುಂಗಿ ಬಹಳ ತಾಪವನ್ನು ಉಂಟುಮಾಡುತ್ತಿದೆ.

ಆಖ್ಯಾಹಿ ಮೇ ಕೋ ಭವಾನುಗ್ರರೂಪೋ
ನಮೋಽಸ್ತು ತೇ ದೇವವರ ಪ್ರಸೀದ ।
ವಿಜ್ಞಾತುಮಿಚ್ಛಾಮಿ ಭವಂತಮಾದ್ಯಂ
ನ ಹಿ ಪ್ರಜಾನಾಮಿ ತವ ಪ್ರವೃತ್ತಿಮ್ ॥೩೧॥

ಈ ಉಗ್ರರೂಪವನ್ನು ಧರಿಸಿದ ನೀನು ಯಾರೆಂದು ನನಗೆ ಹೇಳು. ಎಲೈ ದೇವಶ್ರೇಷ್ಠನೇ, ನಿನಗೆ ನಮಸ್ಕಾರ. ಪ್ರಸನ್ನನಾಗು. ಶ್ರೇಷ್ಠನಾದ ನಿನ್ನನ್ನು ನಾನು ತಿಳಿದುಕೊಳ್ಳಲು ಇಚ್ಛಿಸುತ್ತೇನೆ. ಈ ನಿನ್ನ ನಡವಳಿಕೆಯು ನನಗೆ ಅರ್ಥವಾಗುತ್ತಿಲ್ಲ.

ಶ್ರೀಭಗವಾನ್

ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ
ಲೋಕಾನ್ ಸಮಾಹರ್ತುಮಿಹ ಪ್ರವೃತ್ತಃ ।
ಋತೇಽಪಿ ತ್ವಾ ನ ಭವಿಷ್ಯಂತಿ ಸರ್ವೇ
ಯೇಽವಸ್ಥಿತಾಃ ಪ್ರತ್ಯನೀಕೇಷು ಯೋಧಾಃ ॥೩೨॥

ಶ್ರೀಭಗವಾನ್– ನಾನು ಲೋಕಕ್ಷಯಕಾರಕನಾದ ಕಾಲರೂಪನಾಗಿ ಪ್ರವೃದ್ಧನಾಗಿದ್ದೇನೆ. ಲೋಕಗಳನ್ನು ಸಂಹರಿಸಲು ಇಲ್ಲಿ ಪ್ರವೃತ್ತನಾಗಿದ್ದೇನೆ. ಶತ್ರುಗಳ ಸೈನ್ಯದಲ್ಲಿ ಯಾವ ಯೋಧರಿದ್ದಾರೆಯೋ ಅವರೆಲ್ಲರೂ ನೀನಿಲ್ಲದಿದ್ದರೂ ಯಾರೂ ಉಳಿಯುವುದಿಲ್ಲ.

ತಸ್ಮಾತ್ ತ್ವಮುತ್ತಿಷ್ಠ ಯಶೋ ಲಭಸ್ವ
ಜಿತ್ವಾ ಶತ್ರೂನ್ ಭುಂಕ್ಷ್ವ ರಾಜ್ಯಂ ಸಮೃದ್ಧಮ್ ।
ಮಯೈವೈತೇ ನಿಹತಾಃ ಪೂರ್ವಮೇವ
ನಿಮಿತ್ತಮಾತ್ರಂ ಭವ ಸವ್ಯಸಾಚಿನ್ ॥೩೩॥

ಆದ್ದರಿಂದ ನೀನು ಎದ್ದೇಳು. ಕೀರ್ತಿಯನ್ನು ಹೊಂದುವವನಾಗು. ಶತ್ರುಗಳನ್ನು ಜಯಿಸಿ ಸಮೃದ್ಧವಾದ ರಾಜ್ಯವನ್ನು ಭೋಗಿಸು. ಎಲೈ ಸವ್ಯಸಾಚಿಯೇ, ನಾನೇ ಇವರನ್ನು ಮೊದಲೇ ಕೊಂದಿದ್ದೇನೆ. ನೀನು ನಿನ್ನ ವ್ಯಾಪಾರವನ್ನು ಮಾಡಿ ಅವರ ವಧೆಯಲ್ಲಿ ಕೇವಲ ನಿಮಿತ್ತಮಾತ್ರನಾಗು.

ದ್ರೋಣಂ ಚ ಭೀಷ್ಮಂ ಚ ಜಯದ್ರಥಂ ಚ
ಕರ್ಣಂ ತಥಾನ್ಯಾನಪಿ ಯೋಧವೀರಾನ್ ।
ಮಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾ
ಯುಧ್ಯಸ್ವ ಜೇತಾಸಿ ರಣೇ ಸಪತ್ನಾನ್ ॥೩೪॥

ನನ್ನಿಂದ ಹತರಾದ ದ್ರೋಣ, ಭೀಷ್ಮ, ಜಯದ್ರಥ, ಕರ್ಣ ಮತ್ತು ಉಳಿದ ವೀರ ಯೋಧರು ಎಲ್ಲರನ್ನೂ ನೀನು ಸಂಹರಿಸು. ವ್ಯಥೆಯನ್ನು ಪಡಬೇಡ. ಯುದ್ಧವನ್ನು ಮಾಡು. ಯುದ್ಧದಲ್ಲಿ ಶತ್ರುಗಳನ್ನು ಗೆಲ್ಲುವಿ.

ಸಂಜಯಃ

ಏತಚ್ಛ್ರುತ್ವಾ ವಚನಂ ಕೇಶವಸ್ಯ
ಕೃತಾಂಜಲಿರ್ವೇಪಮಾನಃ ಕಿರೀಟೀ ।
ನಮಸ್ಕೃತ್ವಾ ಭೂಯ ಏವಾಹ ಕೃಷ್ಣಂ
ಸಗದ್ಗದಂ ಭೀತಭೀತಃ ಪ್ರಣಮ್ಯ ॥೩೫॥

ಸಂಜಯ– ಕೇಶವನ ಈ ಮಾತುಗಳನ್ನು ಕೇಳಿ ಅರ್ಜುನನು ಕೈಗಳನ್ನು ಮುಗಿದು ನಡುಗುತ್ತಾ ನಮಸ್ಕಾರವನ್ನು ಮಾಡಿ ಗದ್ಗದ ಕಂಠದಿಂದ, ಭೀತ ಭೀತನಾಗಿ ಪುನಃ ನಮಸ್ಕರಿಸಿ ಕೃಷ್ಣನನ್ನು ಕುರಿತು ಹೇಳಿದನು.

ಅರ್ಜುನಃ

ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ
ಜಗತ್ ಪ್ರಹೃಷ್ಯತ್ಯನುರಜ್ಯತೇ ಚ ।
ರಕ್ಷಾಂಸಿ ಭೀತಾನಿ ದಿಶೋ ದ್ರವಂತಿ
ಸರ್ವೇ ನಮಸ್ಯಂತಿ ಚ ಸಿದ್ಧಸಂಘಾಃ ॥೩೬॥

ಅರ್ಜುನ– ಎಲೈ ಹೃಷೀಕೇಶನೇ (ಇಂದ್ರಿಯಾಧಿಪತಿಯೇ), ನಿನ್ನ ಕೀರ್ತನೆಯಿಂದ ಜಗತ್ತು ಸಂತೋಷಪಟ್ಟು ನಿನ್ನಲ್ಲಿ ಅನುರಕ್ತವಾಗುತ್ತದೆ ಎಂಬುದು ಬಹಳ ಯುಕ್ತವಾದುದು. ರಾಕ್ಷಸರು ಭೀತರಾಗಿ ದಿಕ್ಕು, ದಿಕ್ಕುಗಳಿಗೆ ಓಡುತ್ತಿದ್ದಾರೆ. ಸಿದ್ಧ ಸಂಘಗಳೆಲ್ಲವೂ ನಿನಗೆ ನಮಸ್ಕರಿಸುತ್ತಿವೆ.

ಕಸ್ಮಾಚ್ಚ ತೇ ನ ನಮೇರನ್ ಮಹಾತ್ಮನ್
ಗರೀಯಸೇ ಬ್ರಹ್ಮಣೋಽಪ್ಯಾದಿಕರ್ತ್ರೇ ।
ಅನಂತ ದೇವೇಶ ಜಗನ್ನಿವಾಸ
ತ್ವಮಕ್ಷರಂ ಸದಸತ್ತತ್ಪರಂ ಯತ್ ॥೩೭॥

ಎಲೈ ಮಹಾತ್ಮನೇ, ಸರ್ವೋತ್ತಮನಾದ ಬ್ರಹ್ಮದೇವರಿಗೂ ಸೃಷ್ಟಿಕರ್ತನಾದ ನಿನಗೆ ಅವರು ಏಕೆ ನಮಸ್ಕಾರವನ್ನು ಮಾಡಲಾರರು? ಅನಂತನೇ, ದೇವೇಶನೇ, ಜಗದಾಶ್ರಯನೇ, ನೀನೇ ಅಕ್ಷರ, ವ್ಯಕ್ತಾವ್ಯಕ್ತ ಪ್ರಪಂಚದಲ್ಲಿ ಇರುವವನು ಮತ್ತು ಅದಕ್ಕಿಂತಲೂ ಉತ್ತಮನಾದವನು.

ತ್ವಮಾದಿದೇವಃ ಪುರುಷಃ ಪುರಾಣಃ
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್ ।
ವೇತ್ತಾಽಸಿ ವೇದ್ಯಂ ಚ ಪರಂ ಚ ಧಾಮ
ತ್ವಯಾ ತತಂ ವಿಶ್ವಮನಂತರೂಪ ॥೩೮॥

ನೀನು ಆದಿದೇವ. ಪುರಾಣಪುರುಷ. ನೀನು ಈ ಜಗತ್ತಿಗೆ ಶ್ರೇಷ್ಠನಾದ ಧಾರಕನಾದವನು. ನೀನು ಸರ್ವಜ್ಞನಾದವನು. ನೀನೇ ಜ್ಞೇಯವಸ್ತುಗಳಲ್ಲಿ ಶ್ರೇಷ್ಠನಾದವನು. ನೀನೇ ಶ್ರೇಷ್ಠವಾದ ಆಶ್ರಯನಾದವನು. ಎಲೈ ಅನಂತರೂಪನೇ, ನಿನ್ನಿಂದ ವಿಶ್ವವು ವ್ಯಾಪ್ತವಾಗಿದೆ.

ವಾಯುರ್ಯಮೋಽಗ್ನಿರ್ವರುಣಃ ಶಶಾಂಕಃ
ಪ್ರಜಾಪತಿಸ್ತ್ವಂ ಪ್ರಪಿತಾಮಹಶ್ಚ ।
ನಮೋ ನಮಸ್ತೇಽಸ್ತು ಸಹಸ್ರಕೃತ್ವಃ
ಪುನಶ್ಚ ಭೂಯೋಽಪಿ ನಮೋ ನಮಸ್ತೇ ॥೩೯॥

ನೀನೇ ವಾಯು, ಯಮ, ಅಗ್ನಿ, ವರುಣ, ಶಶಾಂಕ, ಪ್ರಜಾಪತಿ, ಪ್ರಪಿತಾಮಹರಾದ ಬ್ರಹ್ಮ (ವಾಯ್ವಾದಿ ಶಬ್ದದಿಂದ ವಾಚ್ಯನಾದವನು). ನಿನಗೆ ಸಾವಿರ ಬಾರಿ ಪುನಃ ಪುನಃ ನಮಸ್ಕಾರಗಳಿರಲಿ. ಪುನಃ ಇನ್ನೂ ನಮಸ್ಕಾರಗಳನ್ನು ಮಾಡುವೆನು.

ನಮಃ ಪುರಸ್ತಾದಥ ಪೃಷ್ಠತಸ್ತೇ
ನಮೋಽಸ್ತು ತೇ ಸರ್ವತ ಏವ ಸರ್ವ ।
ಅನಂತವೀರ್ಯಾಮಿತವಿಕ್ರಮಸ್ತ್ವಂ
ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ ॥೪೦॥

ನಿನಗೆ ಮುಂದಿನಿಂದ ನಮಸ್ಕಾರ, ಹಿಂದಿನಿಂದಲೂ ನಮಸ್ಕಾರ. ಎಲೈ ಸರ್ವನೇ, ನಿನಗೆ ಎಲ್ಲ ಕಡೆಗಳಿಂದಲೂ ನಮಸ್ಕಾರ. ಅನಂತಸಾಮರ್ಥ್ಯವನ್ನು ಮತ್ತು ಅಪರಿಮಿತ ಪರಾಕ್ರಮವನ್ನು ಹೊಂದಿದ ನೀನು ಎಲ್ಲವನ್ನೂ ವ್ಯಾಪಿಸಿದ್ದೀಯೆ. ಆದ್ದರಿಂದ 'ಸರ್ವ' ಎಂಬ ಶಬ್ದದಿಂದ ಕರೆಸಿಕೊಳ್ಳುತ್ತೀಯೆ.

ವಿಶೇಷ ವಿಚಾರ– ತಾನೇ ಮಾಡಿದ 'ಸರ್ವ' ಎಂಬ ಸಂಬೋಧನೆಗೆ ಎಲ್ಲವನ್ನೂ ವ್ಯಾಪಿಸಿರುವುದರಿಂದ ನೀನು 'ಸರ್ವ' ಎಂದು ಕರೆಸಿಕೊಳ್ಳುತ್ತೀಯೆ ಎಂದು ಅರ್ಜುನನೇ ವ್ಯಾಖ್ಯಾನ ಮಾಡುತ್ತಾನೆ ಎಂಬುದು ಗಮನಿಸಬೇಕಾದ ಅಂಶ.

ಸಖೇತಿ ಮತ್ವಾ ಪ್ರಸಭಂ ಯದುಕ್ತಂ
ಹೇ ಕೃಷ್ಣ ಹೇ ಯಾದವ ಹೇ ಸಖೇತಿ ।
ಅಜಾನತಾ ಮಹಿಮಾನಂ ತವೇದಂ
ಮಯಾ ಪ್ರಮಾದಾತ್ ಪ್ರಣಯೇನ ವಾಪಿ ॥೪೧॥

ಯಚ್ಚಾವಹಾಸಾರ್ಥಮಸತ್ಕತೋಽಸಿ
ವಿಹಾರಶಯ್ಯಾಸನಭೋಜನೇಷು ।
ಏಕೋಽಥ ವಾಽಪ್ಯಚ್ಯುತ ತತ್ ಸಮಕ್ಷಂ
ತತ್ ಕ್ಷಾಮಯೇ ತ್ವಾಮಹಮಪ್ರಮೇಯಮ್ ॥೪೨॥

ನೀನು ನನ್ನ ಸ್ನೇಹಿತನೆಂದು ತಿಳಿದು ಬಹುಮಾನರಹಿತನಾಗಿ ಹೇ ಕೃಷ್ಣ, ಹೇ ಯಾದವ, ಹೇ ಮಿತ್ರ ಎಂದು ಈ ನಿನ್ನ ಮಹಿಮೆಯನ್ನು ತಿಳಿಯದೆ ನಾನು ಏನು ಹೇಳಿದ್ದೇನೆಯೋ ಅಥವಾ ಪ್ರಮಾದದಿಂದ ಅಥವಾ ಸ್ನೇಹದಿಂದ ಯಾವ ಅಪಚಾರವನ್ನು ಮಾಡಿದ್ದೇನೆಯೋ ಮತ್ತು ವಿಹಾರ, ಶಯ್ಯಾ, ಆಸನ, ಭೋಜನ ಸಮಯಗಳಲ್ಲಿ ಅಪಹಾಸ್ಯಕ್ಕಾಗಿ ಯಾವ ಅಗೌರವವನ್ನು ಏಕಾಂತದಲ್ಲಾಗಲೀ ಅಥವಾ ಅನೇಕರ ಸಮಕ್ಷಮದಲ್ಲಾಗಲೀ ತೋರಿಸಿದ್ದೇನೆಯೋ, ಎಲೈ ಅಚ್ಯುತನೇ, ಅಪ್ರಮೇಯನಾದ ನಿನ್ನನ್ನು ಅದಕ್ಕಾಗಿ ನಾನು ಕ್ಷಮೆ ಕೇಳುತ್ತಿದ್ದೇನೆ.

ಪಿತಾಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ।
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ
ಲೋಕತ್ರಯೇಽಪ್ಯಪ್ರತಿಮಪ್ರಭಾವ ॥೪೩॥

ಎಲೈ ಅಸದೃಶಸಾಮರ್ಥ್ಯವುಳ್ಳವನೇ, ಈ ಚರಾಚರವಾದ ಪ್ರಪಂಚಕ್ಕೆ ನೀನು ತಂದೆಯಾಗಿದ್ದೀಯೆ. ಈ ಜಗತ್ತಿಗೆ ನೀನು ಪೂಜ್ಯನಾದವನು, ಶ್ರೇಷ್ಠನಾದ ಗುರುವು. ನಿನಗೆ ಸಮಾನರಾದವರು ಯಾರೂ ಇಲ್ಲ, ಇನ್ನು ಅಧಿಕನಾದ ಇನ್ನೊಬ್ಬನು ಲೋಕತ್ರಯದಲ್ಲೇ ಆದರೂ ಎಲ್ಲಿಂದ ಬರಬೇಕು?

ತಸ್ಮಾತ್ ಪ್ರಣಮ್ಯ ಪ್ರಣಿಧಾಯ ಕಾಯಂ
ಪ್ರಸಾದಯೇ ತ್ವಾಮಹಮೀಶಮೀಡ್ಯಮ್ ।
ಪಿತೇವ ಪುತ್ರಸ್ಯ ಸಖೇವ ಸಖ್ಯುಃ
ಪ್ರಿಯಃ ಪ್ರಿಯಾಯಾರ್ಹಸಿ ದೇವ ಸೋಢುಮ್ ॥೪೪॥

ಆದ್ದರಿಂದ ನಮಸ್ಕಾರವನ್ನು ಮಾಡಿ ನನ್ನ ದೇಹವನ್ನು ನಿನ್ನ ಮುಂದೆ ಸಮರ್ಪಣೆಯನ್ನು ಮಾಡಿ ಈಶನೂ, ಸ್ತುತ್ಯನೂ ಆದ ನಿನ್ನನ್ನು ಪ್ರಸನ್ನನಾಗು ಎಂದು ಬೇಡುತ್ತಿದ್ದೇನೆ. ತಂದೆಯು ಮಗನನ್ನು ಕ್ಷಮಿಸಿದಂತೆ, ಸ್ನೇಹಿತನು ಸ್ನೇಹಿತನ ತಪ್ಪುಗಳನ್ನು ಕ್ಷಮಿಸುವಂತೆ, ಪ್ರಿಯನು ಪ್ರಿಯೆಯ ಅಪರಾಧವನ್ನು ಕ್ಷಮಿಸುವಂತೆ ಎಲೈ ದೇವನೇ, ನನ್ನ ಅಪರಾಧವನ್ನು ಸಹಿಸಿ ಕ್ಷಮಿಸಬೇಕು.

ಅದೃಷ್ಟಪೂರ್ವಂ ಹೃಷಿತೋಽಸ್ಮಿ ದೃಷ್ಟ್ವಾ
ಭಯೇನ ಚ ಪ್ರವ್ಯಥಿತಂ ಮನೋ ಮೇ ।
ತದೇವ ಮೇ ದರ್ಶಯ ದೇವ ರೂಪಂ
ಪ್ರಸೀದ ದೇವೇಶ ಜಗನ್ನಿವಾಸ ॥೪೫॥

ಹಿಂದೆ ಎಂದೂ ನೋಡದ ಈ ರೂಪವನ್ನು ನೋಡಿ ಹರ್ಷಗೊಂಡಿದ್ದೇನೆ. ಭಯದಿಂದ ನನ್ನ ಮನಸ್ಸು ವ್ಯಥೆಗೆ ಒಳಗಾಗಿದೆ. ಎಲೈ ಜಗನ್ನಿವಾಸನೇ, ದೇವೇಶನೇ, ದೇವನೇ, ನಿನ್ನ ಮೊದಲಿನ ರೂಪವನ್ನೇ ನನಗೆ ತೋರಿಸು.

ಕಿರೀಟಿನಂ ಗದಿನಂ ಚಕ್ರಹಸ್ತಂ
ಇಚ್ಛಾಮಿ ತ್ವಾಂ ದ್ರಷ್ಟುಮಹಂ ತಥೈವ ।
ತೇನೈವ ರೂಪೇಣ ಚತುರ್ಭುಜೇನ
ಸಹಸ್ರಬಾಹೋ ಭವ ವಿಶ್ವಮೂರ್ತೇ ॥೪೬॥

ಕಿರೀಟ, ಗದೆಗಳನ್ನು ಧರಿಸಿದ, ಕೈಯಲ್ಲಿ ಚಕ್ರವನ್ನು ಹಿಡಿದ ನಿನ್ನ ಮೊದಲಿನ ರೂಪವನ್ನು ನಾನು ಹಾಗೆಯೇ ನೋಡಲು ಇಚ್ಛಿಸುತ್ತೇನೆ. ಎಲೈ ಸಹಸ್ರಬಾಹುವೇ, ಎಲೈ ವಿಶ್ವಮೂರ್ತಿಯೇ, ನಿನ್ನ ಮೊದಲಿನ ನಾಲ್ಕುಭುಜದ ರೂಪವನ್ನೇ ಧರಿಸುವವನಾಗು.

ಶ್ರೀಭಗವಾನ್

ಮಯಾ ಪ್ರಸನ್ನೇನ ತವಾರ್ಜುನೇದಂ
ರೂಪಂ ಪರಂ ದರ್ಶಿತಮಾತ್ಮಯೋಗಾತ್ ।
ತೇಜೋಮಯಂ ವಿಶ್ವಮನಂತಮಾದ್ಯಂ
ಯನ್ಮೇ ತ್ವದನ್ಯೇನ ನ ದೃಷ್ಟಪೂರ್ವಮ್ ॥೪೭॥

ಶ್ರೀಭಗವಾನ್– ಎಲೈ ಅರ್ಜುನನೇ, ಪ್ರಸನ್ನನಾದ ನಾನು ನನ್ನ ಆತ್ಮ ಸಾಮರ್ಥ್ಯದಿಂದ ತೇಜೋಮಯವೂ, ಪೂರ್ಣವೂ, ಅನಂತವೂ, ಆದ್ಯವೂ ಆದ ಈ ಶ್ರೇಷ್ಠವಾದ ರೂಪವನ್ನು ನಿನಗೆ ತೋರಿಸಿದ್ದೇನೆ. ಈ ರೂಪವು ಇನ್ನೊಬ್ಬರಿಂದ ಹಿಂದೆ ನೋಡಲ್ಪಟ್ಟಿಲ್ಲ.

ವಿಶೇಷ ವಿಚಾರ– ಬ್ರಹ್ಮಾದಿ ದೇವತೆಗಳು ವಿಶ್ವರೂಪವನ್ನು ನೋಡಿದ್ದರೂ, ಅರ್ಜುನನ ಯೋಗ್ಯತೆಗೆ ಸುಯಾದದ್ದು ಮಾತ್ರ ತೋರುವ ಈ ವಿಶ್ವರೂಪವನ್ನು ನೋಡಿಲ್ಲ ಎಂದು ಅಭಿಪ್ರಾಯ.

ನ ವೇದಯಜ್ಞಾಧ್ಯಯನೈರ್ನ ದಾನೈಃ
ನ ಚ ಕ್ರಿಯಾಭಿರ್ನ ತಪೋಭಿರುಗ್ರೈಃ ।
ಏವಂರೂಪಃ ಶಕ್ಯ ಅಹಂ ನೃಲೋಕೇ
ದ್ರಷ್ಟುಂ ತ್ವದನ್ಯೇನ ಕುರುಪ್ರವೀರ ॥೪೮॥

ಎಲೈ ಕುರುಪ್ರವೀರನೇ, ಇಂತಹ ರೂಪವುಳ್ಳ ನನ್ನನ್ನು ನಿನ್ನನ್ನು ಬಿಟ್ಟು ಬೇರೆ ಯಾವ ಮನುಷ್ಯನೇ ಆಗಲೀ, ವೇದಗಳಿಂದಲಾಗಲೀ, ಯಜ್ಞಗಳಿಂದಾಗಲೀ, ಅಧ್ಯಯನಗಳಿಂದಾಗಲೀ, ದಾನಗಳಿಂದಾಗಲೀ, ಘನಕರ್ಮದಿಂದಾಗಲೀ, ಉಗ್ರವಾದ ತಪಸ್ಸಿನಿಂದಾಗಲೀ ನೋಡಲು ಸಾಧ್ಯವಿಲ್ಲ.

ಮಾ ತೇ ವ್ಯಥಾ ಮಾ ಚ ವಿಮೂಢಭಾವೋ
ದೃಷ್ಟ್ವಾ ರೂಪಂ ಘೋರಮೀದೃಙ್‌ಮಮೇದಮ್ ।
ವ್ಯಪೇತಭೀಃ ಪ್ರೀತಮನಾಃ ಪುನಸ್ತ್ವಂ
ತದೇವ ಮೇ ರೂಪಮಿದಂ ಪ್ರಪಶ್ಯ ॥೪೯॥

ಇಂತಹ ಈ ನನ್ನ ಘೋರ ರೂಪವನ್ನು ನೋಡಿ ವ್ಯಥೆ ಪಡಬೇಡ. ಮೋಹವನ್ನೂ ಹೊಂದಬೇಡ. ಭಯದಿಂದ ನಿರ್ಮುಕ್ತನಾಗಿ ಸಂತೋಷಗೊಂಡ ಮನಸ್ಸಿನಿಂದ ನನ್ನ ಮೊದಲಿನ ಈ ರೂಪವನ್ನೇ ಪುನಃ ನೋಡುವವನಾಗು.

ಸಂಜಯಃ

ಇತ್ಯರ್ಜುನಂ ವಾಸುದೇವಸ್ತಥೋಕ್ತ್ವಾ
ಸ್ವಕಂ ರೂಪಂ ದರ್ಶಯಾಮಾಸ ಭೂಯಃ ।
ಆಶ್ವಾಸಯಾಮಾಸ ಚ ಭೀತಮೇನಂ
ಭೂತ್ವಾ ಪುನಃ ಸೌಮ್ಯವಪುರ್ಮಹಾತ್ಮಾ ॥೫೦॥

ಸಂಜಯ– ವಾಸುದೇವನು ಹೀಗೆ ಅರ್ಜುನನಿಗೆ ಹೇಳಿ ಪುನಃ ತನ್ನ ಮೊದಲಿನ ರೂಪವನ್ನು ತೋರಿಸಿದನು. ಮಹಾತ್ಮನಾದ ಅವನು ಪುನಃ ಸೌಮ್ಯವಾದ ರೂಪವನ್ನು ಧರಿಸಿ ಭಯಗೊಂಡಿದ್ದ ಅರ್ಜುನನಿಗೆ ಸಮಾಧಾನವನ್ನು ಮಾಡಿದನು.

ಅರ್ಜುನಃ

ದೃಷ್ಟ್ವೇದಂ ಮಾನುಷಂ ರೂಪಂ ತವ ಸೌಮ್ಯಂ ಜನಾರ್ದನ ।
ಇದಾನೀಮಸ್ಮಿ ಸಂವೃತ್ತಃ ಸಚೇತಾಃ ಪ್ರಕೃತಿಂ ಗತಃ ॥೫೧॥

ಅರ್ಜುನ– ಎಲೈ ಜನಾರ್ದನನೇ, ಮನುಷ್ಯರ ರೂಪಕ್ಕೆ ಸದೃಶವಾದ ಈ ನಿನ್ನ ಸೌಮ್ಯರೂಪವನ್ನು ನೋಡಿ ಈಗ ಸಮಾಧಾನಗೊಂಡಿದ್ದೇನೆ. ನನ್ನ ಜ್ಞಾನವು ಸರಿಯಾಗಿದೆ. ನನ್ನ ಮೊದಲಿನ ಸ್ವಭಾವವು ಹಿಂದಿರುಗಿ ಬಂದಿದೆ.

ಶ್ರೀಭಗವಾನ್

ಸುದುರ್ದರ್ಶಮಿದಂ ರೂಪಂ ದೃಷ್ಟವಾನಸಿ ಯನ್ಮಮ ।
ದೇವಾ ಅಪ್ಯಸ್ಯ ರೂಪಸ್ಯ ನಿತ್ಯಂ ದರ್ಶನಕಾಂಕ್ಷಿಣಃ ॥೫೨॥

ಶ್ರೀಭಗವಾನ್– ನೋಡಲು ಬಹಳ ಕಷ್ಟವಾದ್ದವಾದ ಈ ನನ್ನ ರೂಪವನ್ನು ನೀನು ಏನು ನೋಡಿದ್ದೀಯೋ ಆ ರೂಪವನ್ನು ನೋಡಲು ದೇವತೆಗಳು ನಿತ್ಯವೂ ಆಸೆ ಪಡುತ್ತಾರೆ.

ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ ।
ಶಕ್ಯ ಏವಂವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ ॥೫೩॥

ನೀನು ನನ್ನನ್ನು ಹೇಗೆ ನೋಡಿದ್ದೀಯೋ ಹಾಗೆ ನೋಡಲು ವೇದಗಳಿಂದಾಗಲೀ, ತಪಸ್ಸಿನಿಂದಾಗಲೀ, ದಾನದಿಂದಾಗಲೀ ಅಥವಾ ಪೂಜೆಯಿಂದಾಗಲೀ ಸಾಧ್ಯವಿಲ್ಲ.

ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋऽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥೫೪॥

ಎಲೈ ಅರ್ಜುನನೇ, ಪರಂತಪನೇ, ಅನನ್ಯವಾದ ಭಕ್ತಿಯಿಂದ ಮಾತ್ರ ನನ್ನನ್ನು ಹೀಗೆ ನೋಡಲು ಮತ್ತು ಯಥಾರ್ಥವಾಗಿ ತಿಳಿಯಲು ಮತ್ತು ಪ್ರವೇಶಿಸಲು ಸಾಧ್ಯವಾಗುತ್ತದೆ.

ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ ।
ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ ॥೫೫॥

ಎಲೈ ಪಾಂಡವನೇ, ನನಗೆ ಪ್ರಿಯವಾದ ಕರ್ಮಗಳನ್ನು ಮಾಡಿ ನನ್ನ ಸರ್ವೋತ್ತಮತ್ವವನ್ನು ತಿಳಿದು, ನನ್ನ ಭಕ್ತನಾಗಿ, ವಿಷಯಗಳಲ್ಲಿ ಸ್ನೇಹವನ್ನು ತೊರೆದು, ಸರ್ವಭೂತಗಳಲ್ಲೂ ವೈರವನ್ನು ತೊರೆದವನು ನನ್ನನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ವೈಯಾಸ್ಕ್ಯಾಂ
ಭೀಷ್ಮಪರ್ವಣಿ ತ್ರಯಸ್ತ್ರಿಂಶೋऽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ನಾಲ್ಕನೆಯ ಅಧ್ಯಾಯ

ಭಗವದ್ಗೀತಾ – ಭಕ್ತಿಯೋಗ.

ಲಕ್ಷ್ಯಯ ಉಪಾಸಕನಿಗಿಂತ ಹರಿಯ ಉಪಾಸಕನ ಶ್ರೇಷ್ಠತ್ವ ಕಥನ.

ಅರ್ಜುನಃ

ಏವಂ ಸತತಯುಕ್ತಾ ಯೇ ಭಕ್ತಾಸ್ತಾ ಂ ಪರ್ಯುಪಾಸತೇ ।
ಯೇ ಚಾಪ್ಯಕ್ಷರಮವ್ಯಕ್ತಂ ತೇಷಾಂ ಕೇ ಯೋಗವಿತ್ತಮಾಃ ॥೧॥

ಅರ್ಜುನ– ಹೀಗೆ ಭಕ್ತಿಯುಕ್ತರಾಗಿ ಯಾರು ನಿನ್ನನ್ನು ಸತತವಾಗಿ ಉಪಾಸನೆ ಮಾಡುತ್ತಾರೆಯೋ ಮತ್ತು ಯಾರು ಅಕ್ಷರಶಬ್ದವಾಚ್ಯಳಾದ, ಅವ್ಯಕ್ತತತ್ತಾ ಭಿಮಾನಿಯಾದ ಲಕ್ಷ್ಯಯನ್ನು ಉಪಾಸನೆ ಮಾಡುತ್ತಾರೆಯೋ, ಅವರಲ್ಲಿ ಶ್ರೇಷ್ಠರಾದ ಯೋಗಿಗಳು ಯಾರು?

ಶ್ರೀಭಗವಾನ್

ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ ॥೨॥

ಶ್ರೀಭಗವಾನ್– ನನ್ನಲ್ಲೇ ಮನಸ್ಸನ್ನು ಇಟ್ಟು ಶ್ರೇಷ್ಠವಾದ ಶ್ರದ್ಧೆಯಿಂದ ಕೂಡಿದವರಾಗಿ ಯಾರು ನಿತ್ಯವೂ ಕರ್ಮ-ಧ್ಯಾನ-ಯೋಗಗಳಿಂದ ಯುಕ್ತರಾಗಿ ನನ್ನನ್ನು ಉಪಾಸನೆ ಮಾಡುತ್ತಾರೆಯೋ ಅವರು ಅವರಿಬ್ಬರಲ್ಲಿ ಶ್ರೇಷ್ಠರಾದವರು ಎಂದು ನನ್ನ ಅಭಿಪ್ರಾಯ.

ಯೇ ತ್ವಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ ।
ಸರ್ವತ್ರಗಮಚಿಂತ್ಯಂ ಚ ಕೂಟಸ್ಥಮಚಲಂ ಧ್ರುವಮ್ ॥೩॥

ಸನ್ನಿಯಮ್ಯೇಂದ್ರಿಯಗ್ರಾಮಂ ಸರ್ವತ್ರ ಸಮಬುದ್ಧಯಃ ।
ತೇ ಪ್ರಾಪ್ನುವಂತಿ ಮಾಮೇವ ಸರ್ವಭೂತಹಿತೇ ರತಾಃ ॥೪॥

ಯಾರು ಇಂದ್ರಿಯಸಮೂಹವನ್ನೆಲ್ಲಾ ನಿಯಂತ್ರಿಸಿ ಎಲ್ಲ ಕಡೆಗಳಲ್ಲಿಯೂ ಸಮಬುದ್ಧಿಯನ್ನು ಹೊಂದಿ, ಸರ್ವತ್ರ ವ್ಯಾಪ್ತವೂ, ಅಚಿಂತ್ಯವೂ ಆದ ಅವ್ಯಕ್ತತತ್ವಕ್ಕೆ ಅಭಿಮಾನಿಯಾದ ನಿರ್ವಿಕಾರಳೂ, ಅಚಲಳೂ, ಸ್ಥಿರಳೂ ಆದ ಲಕ್ಷ್ಯಯನ್ನು ಉಪಾಸನೆ

ಮಾಡುತ್ತಾರೆಯೋ ಸರ್ವಭೂತಹಿತದಲ್ಲಿ ಆಸಕ್ತರಾದ ಅವರು ಲಕ್ಷ್ಮಿಯ ಉಪಾಸನೆಯನ್ನು ಮಾಡಿ ಲಕ್ಷ್ಮಿಯ ದ್ವಾರಾ ನನ್ನನ್ನು ಉಪಾಸನೆ ಮಾಡಿ, ನನ್ನನ್ನೇ ಹೊಂದುತ್ತಾರೆ.

ಕ್ಲೇಶೋऽಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಮ್ ।
ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ ॥೫॥

ಅವ್ಯಕ್ತತತ್ವದ ಉಪಾಸನೆಯಲ್ಲಿ ಆಸಕ್ತರಾದ ಯೋಗಿಗಳಿಗೆ ಹೆಚ್ಚು ಕ್ಲೇಶವಿದೆ. ಅವ್ಯಕ್ತತತ್ವದ ದ್ವಾರಾ ಸಂಪಾದನೆ ಮಾಡಿದ ಗತಿಯು ಹೆಚ್ಚು ದುಃಖದಿಂದ ಕೂಡಿರುತ್ತದೆ. ಏಕೆಂದರೆ ಅವರು ಲಕ್ಷ್ಮಿಯ ಪ್ರೀತ್ಯರ್ಥವಾಗಿ ದೇಹದಂಡನಾದಿ ತಪಸ್ಸನ್ನು ಮಾಡಿ ಪುನಃ ನನ್ನ ಪ್ರೀತಿಗಾಗಿಯೂ ಹಾಗೆಯೇ ಮಾಡುತ್ತಾರೆ. ಹಾಗಾದರೆ ಅವರು ಏಕೆ ಹಾಗೆ ಮಾಡುತ್ತಾರೆ ಎಂದು ಪ್ರಶ್ನೆ ಮಾಡಿದರೆ, ಅವರ ಯೋಗ್ಯತೆಯೇ ಅಂತಹದು. ಅವರು ಸ್ವಲ್ಪ ಐಹಿಕಲೋಕದ ಆಶಾಪೂರ್ವಕವಾಗಿ ಪರಲೋಕದ ಆಸೆಯನ್ನು ಹೊಂದಿರುತ್ತಾರೆ. ಆದ್ದರಿಂದ ಹಾಗೆ ಮಾಡುತ್ತಾರೆ ಎಂದು ಉತ್ತರ.

ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥೬॥

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನಚಿರಾತ್ ಪಾರ್ಥ ಮಯ್ಯಾವೇಶಿತಚೇತಸಾಮ್ ॥೭॥

ಯಾರು ನನ್ನನ್ನೇ ಸರ್ವೋತ್ತಮನೆಂದು ತಿಳಿದು ಎಲ್ಲ ಕರ್ಮಗಳನ್ನೂ ನನ್ನಲ್ಲಿ ಸಮರ್ಪಿಸಿ ಅನನ್ಯವಾದ ಯೋಗದಿಂದ ನನ್ನನ್ನು ಧ್ಯಾನ ಮಾಡುತ್ತಾ ಉಪಾಸನೆ ಮಾಡುತ್ತಾರೆಯೋ, ಎಲೈ ಪಾರ್ಥನೇ, ಅಂತಹ ನನ್ನಲ್ಲೇ ಆಸಕ್ತವಾದ ಚಿತ್ತವುಳ್ಳ ಭಕ್ತರನ್ನು ನಾನು ಮೃತ್ಯುರೂಪವಾದ ಸಂಸಾರಸಾಗರದಿಂದ ಬೇಗ ಮೇಲಕ್ಕೆ ಎತ್ತುತ್ತೇನೆ.

ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥೮॥

ನನ್ನಲ್ಲಿಯೇ ಮನಸ್ಸನ್ನು ಇಡು. ನನ್ನಲ್ಲಿ ಬುದ್ಧಿಯನ್ನು ಇಡು. ಅಲ್ಲಿಂದ ಮುಂದಕ್ಕೆ ನನ್ನಲ್ಲಿಯೇ ವಾಸಿಸುವಿ. ಇದರಲ್ಲಿ ಸಂಶಯವಿಲ್ಲ.

ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಮ್ ।
ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಂ ಧನಂಜಯ ॥೯॥

ಎಲೈ ಧನಂಜಯನೇ, ಒಂದು ಪಕ್ಷ ನನ್ನಲ್ಲಿ ಚಿತ್ತವನ್ನು ಸ್ಥಿರವಾಗಿ ಇಡಲು ಅಸಮರ್ಥನಾದರೆ ಮನಸ್ಸನ್ನು ವಿಷಯಗಳಿಂದ ಹಿಂದೆ ಎಳೆದುಕೊಂಡು ಪುನಃ ಭಗವಂತನಲ್ಲಿಯೇ ಇಡುವ ಅಭ್ಯಾಸ ರೂಪವಾದ ಉಪಾಯದಿಂದ ನನ್ನನ್ನು ಹೊಂದಲು ಬಯಸು.

ಅಭ್ಯಾಸೇಽಪ್ಯಸಮರ್ಥೋಽಸಿ ಮತ್ಕರ್ಮಪರಮೋ ಭವ ।
ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ ॥೧೦॥

ಅಂತಹ ಅಭ್ಯಾಸವನ್ನು ಮಾಡಲು ಅಸಮರ್ಥನಾದರೆ ನನ್ನ ಪೂಜಾದಿ ಕರ್ಮವನ್ನು ಶ್ರದ್ಧೆಯಿಂದ ಮಾಡು. ನನ್ನ ಪ್ರೀತ್ಯರ್ಥವಾಗಿ ಅಂತಹ ಕರ್ಮಗಳನ್ನು ಮಾಡಿದರೂ ಸಿದ್ಧಿಯನ್ನು ಹೊಂದುವಿ.

ಅಥೈತದಪ್ಯಶಕ್ತೋಽಸಿ ಕರ್ತುಂ ಮದ್ಯೋಗಮಾಶ್ರಿತಃ ।
ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್ ॥೧೧॥

ಒಂದು ಪಕ್ಷ ನನ್ನ ಯೋಗವನ್ನು ಆಶ್ರಯಿಸಿ ಇದನ್ನೂ ಮಾಡಲು ಅಸಮರ್ಥನಾದರೆ ಚಿತ್ತವನ್ನು ನಿಯಂತ್ರಿಸಿ ಸರ್ವಕರ್ಮಗಳ ಫಲವಾದ ಸ್ವರ್ಗ-ಧನ-ಕನಕಾದಿಗಳಲ್ಲಿ ಆಸೆಯನ್ನು ಬಿಡು. (ವೈರಾಗ್ಯವನ್ನೇ ಮಾಡು ಎಂದು ಅರ್ಥ).

ಶ್ರೇಯೋ ಹಿ ಜ್ಞಾನಮಭ್ಯಾಸಾದ್ ಜ್ಞಾನಾದ್ ಧ್ಯಾನಂ ವಿಶಿಷ್ಯತೇ ।
ಧ್ಯಾನಾತ್ಕರ್ಮಫಲತ್ಯಾಗಸ್ತ್ಯಾಗಾತ್ ಶಾಂತಿರನಂತರಮ್ ॥೧೨॥

ಕೇವಲ ಅರ್ಥಾನುಸಂಧಾನ ರಹಿತವಾದ ವೇದಗಳ ಅಭ್ಯಾಸಕ್ಕಿಂತಲೂ ಅದರ ಅರ್ಥಜ್ಞಾನವು ಶ್ರೇಷ್ಠವಾದುದು. ಜ್ಞಾನಕ್ಕಿಂತಲೂ ಧ್ಯಾನವು ಶ್ರೇಷ್ಠವಾದುದು. ಧ್ಯಾನಕ್ಕಿಂತಲೂ ಕರ್ಮಫಲಗಳ ಪರಿತ್ಯಾಗವು ಶ್ರೇಷ್ಠವಾದುದು. ಅಂತಹ ಪರಿತ್ಯಾಗವನ್ನು ಮಾಡಿದ ಮೇಲೆ ಬುದ್ಧಿಯು ನನ್ನಲ್ಲಿಯೇ ನಿಲ್ಲುತ್ತದೆ.

ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ ।
ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ ॥೧೩॥

ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ ।
ಮಯ್ಯರ್ಪಿತಮನೋಬುದ್ಧಿರ್ಯೋ ಮದ್ಭಕ್ತಃ ಸ ಮೇ ಪ್ರಿಯಃ ॥೧೪॥

ಯಾವ ಪ್ರಾಣಿಗಳಲ್ಲಿಯೂ ದ್ವೇಷವನ್ನು ಮಾಡದೆ, ಸ್ನೇಹ ಮತ್ತು ಕರುಣೆಯಿಂದ ಕೂಡಿದವನಾಗಿ, ಅಹಂಕಾರ-ಮಮಕಾರಗಳನ್ನು ತೊರೆದು, ಸುಖ-ದುಃಖಗಳಲ್ಲಿ ಸಮಾನನಾಗಿದ್ದು, ಇನ್ನೊಬ್ಬರನ್ನು ಕ್ಷಮಿಸುವ ಸ್ವಭಾವವನ್ನು ಹೊಂದಿ, ಅಪ್ರಯತ್ನದಿಂದ ಲಭ್ಯವಾದುದರಲ್ಲಿ ತೃಪ್ತಿಯನ್ನು ಹೊಂದಿ, ತತ್ತ ಜ್ಞಾನದ ವಿಷಯದಲ್ಲಿ ದೃಢವಾದ ನಿಶ್ಚಯವನ್ನು ಹೊಂದಿ, ಜಿತಮನಸ್ಸುಳ್ಳ, ಸತತವಾಗಿ ನನ್ನಲ್ಲಿ ಮನೋಬುದ್ಧಿಯನ್ನು ಅರ್ಚಿಸುವ ನನ್ನ ಭಕ್ತನು ನನಗೆ ಪ್ರಿಯನಾದವನು.

ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ ।
ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಃ ಸ ಚ ಮೇ ಪ್ರಿಯಃ ॥

ಯಾವನನ್ನು ನೋಡಿದರೆ ಲೋಕವು ಹೆದರುವುದಿಲ್ಲವೋ, ಯಾವನು ಲೋಕಕ್ಕೆ ಹೆದರುವುದಿಲ್ಲವೋ ಮತ್ತು ಹರ್ಷ-ಕ್ರೋಧ-ಭಯ-ಉದ್ವೇಗಗಳಿಂದ ಮುಕ್ತನಾಗಿರುತ್ತಾನೆಯೋ ಅವನು ನನಗೆ ಪ್ರಿಯನಾದವನು.

ಅನಪೇಕ್ಷಃ ಶುಚಿರ್ದಕ್ಷ ಉದಾಸೀನೋ ಗತವ್ಯಥಃ ।
ಸರ್ವಾರಂಭಪರಿತ್ಯಾಗೀ ಯೋ ಮದ್ಭಕ್ತಃ ಸ ಮೇ ಪ್ರಿಯಃ ॥೧೬॥

ಬಹಳ ವಸ್ತುಗಳನ್ನು ಅಪೇಕ್ಷಿಸದೆ ಶುಚಿಯೂ, ದಕ್ಷನೂ, ವಿಷಯಗಳಲ್ಲಿ ಆಸಕ್ತರಹಿತನೂ, ವ್ಯಥೆಯಿಲ್ಲದವನೂ, ಎಲ್ಲಾ ಕಾಮ್ಯ ಕರ್ಮಗಳನ್ನು ಪರಿತ್ಯಾಗ ಮಾಡಿದವನೂ ಆದ ನನ್ನ ಭಕ್ತನು ನನಗೆ ಪ್ರಿಯನಾದವನು.

ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ ।
ಶುಭಾಶುಭಪರಿತ್ಯಾಗೀ ಭಕ್ತಿಮಾನ್ ಯಃ ಸ ಮೇ ಪ್ರಿಯಃ ॥೧೭॥

ಯಾವನು ಸುಖ ಸಾಧನವು ಒದಗಿದಾಗ ಹರ್ಷ ಪಡುವುದಿಲ್ಲವೋ, ದುಃಖ ಸಾಧನವು ಒದಗಿದಾಗ ದ್ವೇಷ ಮಾಡುವುದಿಲ್ಲವೋ, ಶೋಕಪಡುವುದಿಲ್ಲವೋ, ಏನನ್ನೂ ಬಯಸುವುದಿಲ್ಲವೋ, ಕಾಮ್ಯವಾದ ಶುಭವನ್ನು ಮತ್ತು ಅಶುಭವನ್ನು ಸರ್ವಾತ್ಮನಾ ತ್ಯಾಗಮಾಡುತ್ತಾನೆಯೋ ಅಂತಹ ಭಕ್ತನು ನನಗೆ ಪ್ರಿಯನಾದವನು.

ಸಮಃ ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ ।
ಶೀತೋಷ್ಣಸುಖದುಃಖೇಷು ಸಮಃ ಸಂಗವಿವರ್ಜಿತಃ ॥೧೮॥

ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್ ।
ಅನಿಕೇತಃ ಸ್ಥಿರಮತಿರ್ಭಕ್ತಿಮಾನ್ ಮೇ ಪ್ರಿಯೋ ನರಃ ॥೧೯॥

ಶತ್ರು-ಮಿತ್ರರಲ್ಲಿ ಸಮನಾಗಿದ್ದು, ಹಾಗೆಯೇ ಮಾನಾಪಮಾನಗಳಲ್ಲಿಯೂ, ಶೀತೋಷ್ಣ ಸುಖ-ದುಃಖಾದಿಗಳಲ್ಲಿಯೂ ಸಮನಾಗಿದ್ದು, ವಿಷಯದ ಭೋಗಗಳಲ್ಲಿ ಸ್ನೇಹವನ್ನು ಹೊಂದದವನಾಗಿ ನಿಂದಾಸ್ತುತಿಗಳಲ್ಲಿ ಸಮಾನನಾಗಿದ್ದು ಮೌನಿಯಾಗಿ ಅಪ್ರಯತ್ನದಿಂದ ಒದಗಿದುದರಲ್ಲಿ ತೃಪ್ತಿಯನ್ನು ಹೊಂದಿ ಪರಮಾತ್ಮನೇ ತನಗೆ ಆಶ್ರಯನೆಂದು ತಿಳಿದು ಸ್ಥಿರವಾದ ಭಕ್ತಿಯುಳ್ಳ ಮನುಷ್ಯನು ನನಗೆ ಪ್ರಿಯನಾದವನು.

ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ ।
ಶ್ರದ್ದಧಾನಾ ಮತ್ಪರಮಾ ಭಕ್ತಾಸ್ತೇऽತೀವ ಮೇ ಪ್ರಿಯಾಃ ॥೨೦॥

ಯಾರು ಭಗವತ್ಸಂಬಂಧಿಯಾದ, ಮೋಕ್ಷಸಾಧಕವಾದ, 'ಅದ್ವೇಷ್ಟಾಸರ್ವ-ಭೂತಾನಾಂ' ಇತ್ಯಾದಿಗಳಲ್ಲಿ ಹೇಳಿದ ಗುಣಗಳನ್ನು ಹೊಂದಿ ಶ್ರದ್ಧೆಯಿಂದ ನನ್ನನ್ನೇ ಸರ್ವೋತ್ತಮನೆಂದು ತಿಳಿದು ಭಕ್ತರಾಗಿ ನನ್ನ ಉಪಾಸನೆಯನ್ನು ಮಾಡುತ್ತಾರೆಯೋ ಅವರು ನನಗೆ ಪ್ರಿಯರಾದವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಚತುಸ್ತ್ರಿಂಶೋऽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಏಕಪಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಮೂವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೈದನೆಯ ಅಧ್ಯಾಯ

ಭಗವದ್ಗೀತಾ – ಕ್ಷೇತ್ರ-ಕ್ಷೇತ್ರಜ್ಞವಿಭಾಗಯೋಗ.

ಅರ್ಜುನಃ

ಪುರುಷಂ ಪ್ರಕೃತಿಂ ಚೈವ ಕ್ಷೇತ್ರಂ ಕ್ಷೇತ್ರಜ್ಞಮೇವ ಚ ।
ಏತದ್ ವೇದಿತುಮಿಚ್ಛಾಮಿ ಜ್ಞಾನಂ ಜ್ಞೇಯಂ ಚ ಕೇಶವ ॥೧॥

ಅರ್ಜುನ– ಎಲೈ ಕೇಶವನೇ, ನಾನು ಪುರುಷ, ಪ್ರಕೃತಿ, ಕ್ಷೇತ್ರ, ಕ್ಷೇತ್ರಜ್ಞ, ಜ್ಞಾನ ಮತ್ತು ಜ್ಞೇಯ ಇವುಗಳನ್ನು ತಿಳಿದುಕೊಳ್ಳಲು ಇಚ್ಛಿಸುತ್ತೇನೆ.

ವಿಶೇಷ ವಿಚಾರ– ಪ್ರಕೃತಿ ಎಂದರೆ ಮೂಲಕ್ಷೇತ್ರ. ಕ್ಷೇತ್ರವೆಂದರೆ ಲಿಂಗದೇಹರೂಪವಾಗಿ ಪ್ರಕೃತಿಯ ವಿಕಾರವಾದುದು ಮತ್ತು ಪುರುಷನಿಗೆ ಸ್ಥೂಲದೇಹ ಸಂಬಂಧರೂಪವಾದ ವಿಕಾರವನ್ನು ಉಂಟುಮಾಡುವಂತಹದು. ಪುರುಷಶಬ್ದದಿಂದ ಜೀವನನ್ನು ಪ್ರತ್ಯೇಕವಾಗಿ ಗ್ರಹಣ ಮಾಡಿರುವುದರಿಂದ ಕ್ಷೇತ್ರಜ್ಞ ಎಂದರೆ ಜೀವನ ಹೃದಯಕಮಲದಲ್ಲಿದ್ದು, ಕ್ಷೇತ್ರ ಶಬ್ದವಾಚ್ಯವಾದ ಎಲ್ಲದರ ವಿಕಾರವನ್ನು ಸಾಕ್ಷಿಯಾಗಿ ನೋಡುವ ಪರಮಾತ್ಮನ ರೂಪ. ಜ್ಞಾನ ಎಂದರೆ ಜ್ಞಾನಸಾಧನ ಮತ್ತು ಜ್ಞಾನಕಾರ್ಯ. ಜ್ಞೇಯ ಎಂದರೆ ಆ ಜ್ಞಾನಕ್ಕೆ ವಿಷಯನಾದ ಮೋಕ್ಷದಾಯಕನಾದ ಪರಮಾತ್ಮ. ಇದನ್ನು ತಿಳಿಯಲು ಇಚ್ಛಿಸುತ್ತೇನೆ ಎಂದು ಪ್ರತ್ಯೇಕವಾಗಿ ಇಟ್ಟುಕೊಳ್ಳಬೇಕು. ಮೂಲಕಾರಣವಾದ ಪ್ರಕೃತಿಯು ಮತ್ತು ಪುರುಷ ಶಬ್ದವಾಚ್ಯನಾದ ಜೀವನು ವಿಕಾರವನ್ನು ಹೊಂದುವುದರಿಂದ ವಿಕಾರಾಭಿಮಾನಿಗಳಾಗಿ ಅವರು ಕ್ಷೇತ್ರಪದದಿಂದಲೂ ಸಂಗೃಹೀತವಾಗುವುದರಿಂದ ಕ್ಷೇತ್ರ ನಿರೂಪಣವೂ ಸಹ ಪ್ರಕೃತಿ ಪುರುಷನ ನಿರೂಪಣೆ ಆದ ಕಾರಣದಿಂದಲೂ, ಪ್ರಕೃತಿ ಪುರುಷ ವಿಕಾರ ರೂಪ ಕ್ಷೇತ್ರವೇ ಮಹಾಸಂಸಾರಕ್ಕೆ ಕಾರಣವಾದುದರಿಂದಲೂ, ಜ್ಞಾನಿಗಳಿಗೆ ಅತ್ಯಂತ ಶತ್ರುವಾದುದರಿಂದಲೂ, ಅಲ್ಲಿಯೇ ವೈರಾಗ್ಯವನ್ನು ಉಂಟುಮಾಡಲು ಸಕಲ ಜಡಾಜಡಾತ್ಮಕ ಪ್ರಪಂಚವು ಕ್ಷೇತ್ರಶಬ್ದದಿಂದ ಗೃಹೀತವಾಗುತ್ತದೆ. ಪುರುಷಶಬ್ದದಿಂದ ಜೀವನನ್ನು ಬೇರೆಯಾಗಿ ಹೇಳಿರುವುದರಿಂದ ಕ್ಷೇತ್ರಜ್ಞನು ಯಾರು ಎಂಬ ಶಂಕೆಗೆ 'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ' ಎಂದು ಮುಂದೆ ಹೇಳಲಿದ್ದಾರೆ. ತನ್ನ ಮುಖವನ್ನೂ, ತನ್ನ ಬೆನ್ನನ್ನೂ, ತನ್ನ ದೇಹದಲ್ಲಿರುವ ತನ್ನ ಸ್ಥಿತಿಯನ್ನೂ ತಿಳಿಯದ, ಕೇವಲ ತನ್ನ ಉದರವನ್ನು ಮಾತ್ರ ಕಾಣುವ ಜೀವನು ಇಲ್ಲಿ ಕ್ಷೇತ್ರಜ್ಞನಲ್ಲ. ಆದರೆ ದೇಹಿಗಳ ಹೃದಯ ಕಮಲದಲ್ಲಿದ್ದು ಒಳಗೆ ಮತ್ತು ಹೊರಗೆ ಎರಡರನ್ನೂ ಸ್ವತಂತ್ರವಾಗಿ ನೋಡುವ ಪರಮಾತ್ಮನೇ ಕ್ಷೇತ್ರಜ್ಞ. ಇಲ್ಲವಿದ್ದರೆ

ಸುಷುಪ್ತಿ ದೆಶೆಯಲ್ಲಿ ಕ್ಷೇತ್ರಜ್ಞ ಇಲ್ಲದಿರುವುದರಿಂದ ದೇಹಪಾತವಾಗುವ ಪ್ರಸಂಗವಿದೆ ಮತ್ತು ಜೀವನೇ ಕ್ಷೇತ್ರಜ್ಞನಾದರೆ ಇಂದ್ರಾವತಾರವಾದ ಕಾರಣದಿಂದ ಜೀವಶ್ರೇಷ್ಠನಾದ ಅರ್ಜುನನು ಸುತರಾಂ ಕ್ಷೇತ್ರಜ್ಞನಾಗುವುದರಿಂದ ನಾನು ಇದನ್ನು ತಿಳಿಯಲು ಬಯಸುತ್ತೇನೆ ಎಂಬ ಪ್ರಶ್ನೆಯು ಉಪಪನ್ನವಾಗುವುದಿಲ್ಲ.

ಶ್ರೀಭಗವಾನ್

ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ ।
ಏತದ್ ಯೋ ವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ ॥೨॥

ಶ್ರೀಭಗವಾನ್– ಎಲೈ ಕೌಂತೇಯನೇ, ಈ ಶರೀರವನ್ನು ಕ್ಷೇತ್ರವೆಂದು ಹೇಳುತ್ತಾರೆ. ಇದನ್ನು ಯಾವನು ಸರಿಯಾಗಿ ತಿಳಿಯುತ್ತಾನೆಯೋ ಅವನನ್ನು ಜ್ಞಾನಿಗಳು ಕ್ಷೇತ್ರಜ್ಞನೆಂದು ಹೇಳುತ್ತಾರೆ.

ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ ।
ಕ್ಷೇತ್ರಕ್ಷೇತ್ರಜ್ಞಯೋರ್ಜ್ಞಾನಂ ಯತ್ ತಜ್ಜ್ಞಾನಂ ಮತಂ ಮಮ ॥೩॥

ಎಲೈ ಭಾರತನೇ, ಎಲ್ಲ ಕ್ಷೇತ್ರಗಳಲ್ಲಿ ಕ್ಷೇತ್ರಜ್ಞನಾದವನು ನಾನೇ ಎಂದು ತಿಳಿ. ಕ್ಷೇತ್ರಕ್ಷೇತ್ರಜ್ಞರ ಜ್ಞಾನವೇನಿದೆಯೋ ಅದೇ ಸರಿಯಾದ ಜ್ಞಾನವೆಂದು ನನ್ನ ಅಭಿಪ್ರಾಯ.

ತತ್ಕ್ಷೇತ್ರಂ ಯಚ್ಚ ಯಾದೃಕ್ಚ ಯದ್ವಿಕಾರಿ ಯತಶ್ಚ ಯತ್ ।
ಸ ಚ ಯೋ ಯತ್ಪ್ರಭಾವಶ್ಚ ತತ್ಸಮಾಸೇನ ಮೇ ಶೃಣು ॥೪॥

ಆ ಕ್ಷೇತ್ರವು ಯಾವ ಸ್ವರೂಪವುಳ್ಳದ್ದು ಎಂದರೆ ಪಾಂಚಭೌತಿಕ ಕರ-ಚರಣಾದಿ ಮಾತ್ರಗಳು ಕ್ಷೇತ್ರವೇ ಅಥವಾ ಇಂದ್ರಿಯಗಳು, ಇಂದ್ರಿಯಾರ್ಥಗಳು ಮತ್ತು ಪಂಚಭೂತಗಳಿಂದ ಸೇರಿದ ಕ್ಷೇತ್ರವು ಕ್ಷೇತ್ರವೇ ಎಂದು ತಿಳಿ. 'ಯಾದೃಕ್' ಹೊರಗೆ ಹೇಗಿದೆ, ಒಳಗೆ ಹೇಗಿದೆ ಎಂದು ಕೇಳು. 'ಯದ್ವಿಕಾರಿ' ಎಂತಹ ವಿಕಾರದಿಂದ ತುಂಬಿದೆ ಎಂದು ಕೇಳು. 'ಯತಶ್ಚ ಯತ್' ಆ ಕ್ಷೇತ್ರದಲ್ಲಿ ಏನೇನು ಉತ್ಪನ್ನವಾಗುತ್ತದೆಯೋ ಅದು ಯಾವುದರಿಂದ ಉತ್ಪನ್ನವಾಗುತ್ತದೆ ಎಂದು ಕೇಳು. ಕ್ಷೇತ್ರಜ್ಞನಾದ ಆ ಪರಮಾತ್ಮನಾದರೂ ಸ್ಥೂಲರೂಪದಿಂದ ಯಾವನು, ಎಂತಹ ಸಾಮರ್ಥ್ಯವುಳ್ಳವನು ಎಂಬುದನ್ನು ಸಂಕ್ಷೇಪವಾಗಿ ಕೇಳು.

ವಿಶೇಷ ವಿಚಾರ– ಯತ್ ಎಂಬುದಕ್ಕೆ 'ಮಹಾಭೂತಾನಿ' ಎಂಬುದರಿಂದ ಹಿಡಿದು, 'ಸಂಘಾತಶ್ಚೇತನಾ ಧೃತಿಃ' ಎಂಬುದರವರೆಗೆ ಹೇಳುವ ಎಲ್ಲವೂ ಉತ್ತರವಾಗಿದೆ. **('ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವ ಚ । ಇಂದ್ರಿಯಾಣಿ ದಶೈಕಂ ಚ ಪಂಚ ಚೇಂದ್ರಿಯಗೋಚರಾಃ । ಇಚ್ಛಾದ್ವೇಷಃ ಸುಖಂ ದುಃಖಂ ಸಂಘಾತಶ್ಚೇತನಾ ಧೃತಿಃ।** ಏತತ್ ಕ್ಷೇತ್ರಂ' ಎಂದು ಎಲ್ಲವನ್ನೂ ಕ್ಷೇತ್ರವೆಂದು ಹೇಳಿರುವುದರಿಂದ ಇಷ್ಟು ವಿಶೇಷಭರಿತವಾದ ಕ್ಷೇತ್ರವನ್ನು ಜೀವನು ಹೇಗೆ ತಿಳಿಯುತ್ತಾನೆ ಎಂದು ಅಭಿಪ್ರಾಯ. **'ಯತಶ್ಚಯತ್'** ಎಂಬ ಪ್ರಶ್ನೆಗೆ **'ಅವ್ಯಕ್ತಂ ಮಹಾಭೂತಾನಿ'** ಎಂಬುದು ಉತ್ತರ. ಅವ್ಯಕ್ತದಿಂದ ಪಂಚಮಹಾಭೂತಗಳು, ಪಂಚಮಹಾಭೂತಗಳಿಂದ ದೇಹದಲ್ಲಿರುವ ಪಾರ್ಥಿವ ಜಲಾದಿ ಅಂಶಗಳು ಎಂದು ಅರ್ಥ. **'ಯಾದೃಕ್'** ಎಂಬ ಪ್ರಶ್ನೆಗೆ ಅಹಂಕಾರ, ಬುದ್ಧಿ ಮತ್ತು ಒಂದು ಮನಸ್ಸು ಒಳಗೆ, ಮತ್ತು ಹತ್ತು ಇಂದ್ರಿಯಗಳು, ಐದು ಇಂದ್ರಿಯ ವಿಷಯಗಳು ಹೊರಗೆ ಎಂದು ಉತ್ತರ. **'ಯದ್ವಿಕಾರಿ'** ಎಂಬುದಕ್ಕೆ **'ಇಚ್ಛಾದ್ವೇಷಃ ಸುಖಂ ದುಃಖಂ ಸಂಘಾತಶ್ಚೇತನಾ ಧೃತಿಃ'** ಎಂಬುದು ಉತ್ತರ. ಅಭಿಮಾನಿಯಾಗಿ ಜೀವನಿಗೆ ದೇಹದ ಸಂಬಂಧವು ಸಂಘಾತ ಎನಿಸಿಕೊಳ್ಳುತ್ತದೆ. ಚೇತನ ಎಂದರೆ ಜ್ಞಾನ. ಧೃತಿ ಎಂದರೆ ದೇಹಧಾರಣ. ಕ್ಷೇತ್ರಜ್ಞನ ಜ್ಞಾನವೇ ಮೋಕ್ಷಕ್ಕೆ ಕಾರಣವಾದುದರಿಂದ **'ಸ ಚ ಯೋ ಯತ್ಪ್ರಭಾವಶ್ಚ'** ಎಂಬ ಪ್ರಶ್ನೆಗೆ ಉತ್ತರವು ಜ್ಞೇಯವಾದ ವಸ್ತುವಿನ ಕಥನ ರೂಪವಾಗುವುದರಿಂದ ಅದನ್ನು ವಿಸ್ತಾರವಾಗಿ **'ಅಮಾನಿತ್ವ'** ಇತ್ಯಾದಿಯಾಗಿ ಹೇಳುತ್ತಾರೆ. ಜ್ಞಾನದ ಕಾರಣಗಳು ಎಷ್ಟುವೆಯೋ ಮತ್ತು ಕಾರ್ಯವು ಎಷ್ಟುವೆಯೋ ಅವೆಲ್ಲವೂ ಜ್ಞಾನ ಪದದಿಂದ ಗೃಹೀತವಾಗುತ್ತವೆ. ಆದ್ದರಿಂದಲೇ **'ಏತತ್ ವೇದಿತುಮಿಚ್ಛಾಮಿ'** ಎಂದು ಜ್ಞಾನದ ಜ್ಞಾನವಿಷಯದಲ್ಲಿಯೂ ಪ್ರಶ್ನೆ ಇದೆ.

ಋಷಿಭಿರ್ಬಹುಧಾ ಗೀತಂ ಛಂದೋಭಿರ್ವಿವಿಧೈಃ ಪೃಥಕ್ ।
ಬ್ರಹ್ಮಸೂತ್ರಪದೈಶ್ಚೈವ ಹೇತುಮದ್ಭಿರ್ವಿನಿಶ್ಚಿತೈಃ ॥೫॥

ಈ ಕ್ಷೇತ್ರ-ಕ್ಷೇತ್ರಜ್ಞ ಸ್ವರೂಪಾದಿಗಳು ಋಷಿಗಳಿಂದ, ವೇದಮಂತ್ರಗಳಿಂದ ಬಹಳವಾಗಿ ಗಾನ ಮಾಡಲ್ಪಟ್ಟವೆ. ಹೇತುಯುಕ್ತವಾದ ಬ್ರಹ್ಮಸೂತ್ರ ಪದಗಳಿಂದಲೂ ನಿಶ್ಚಯ ಮಾಡಲ್ಪಟ್ಟವೆ (ಆದ್ದರಿಂದ ಇದು ಅತ್ಯಂತ ಪ್ರಾಮಾಣಿಕ ಎಂದು ಅಭಿಪ್ರಾಯ).

ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವ ಚ ।
ಇಂದ್ರಿಯಾಣಿ ದಶೈಕಂ ಚ ಪಂಚ ಚೇಂದ್ರಿಯಗೋಚರಾಃ ॥೬॥

ಇಚ್ಛಾ ದ್ವೇಷಃ ಸುಖಂ ದುಃಖಂ ಸಂಘಾತಶ್ಚೇತನಾ ಧೃತಿಃ ।
ಏತತ್ ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಮ್ ॥೭॥

ಮಹಾಭೂತಗಳು, ಅಹಂಕಾರ, ಬುದ್ಧಿ, ಅವ್ಯಕ್ತತತ್ತ್ವ, ಹತ್ತು ಇಂದ್ರಿಯಗಳು, ಒಂದು ಮನಸ್ಸು, ಐದು ಇಂದ್ರಿಯ ವಿಷಯಗಳು, ಇಚ್ಛಾ, ದ್ವೇಷ, ಸುಖ, ದುಃಖ, ಜೀವರಿಗೆ ದೇಹದಲ್ಲಿನ ಅಭಿಮಾನ, ಜ್ಞಾನ, ದೇಹಧಾರಣ ಇವು ಸಂಕ್ಷೇಪವಾಗಿ ವಿಕಾರಸಹಿತವಾದ ಕ್ಷೇತ್ರಗಳೆಂದು ಹೇಳಲ್ಪಡುತ್ತವೆ.

ಅಮಾನಿತ್ವಮದಂಭಿತ್ವಮಹಿಂಸಾ ಕ್ಷಾಂತಿರಾರ್ಜವಮ್ ।
ಆಚಾರ್ಯೋಪಾಸನಂ ಶೌಚಂ ಸ್ಥೈರ್ಯಮಾತ್ಮವಿನಿಗ್ರಹಃ ॥೮॥

ತನ್ನ ಶ್ಲಾಘನೆ ಮಾಡಿಕೊಳ್ಳದಿರುವುದು, ತಾನು ಅಲ್ಪನೆಂದು ತಿಳಿದುಕೊಂಡರೂ ಮಹತ್ವವನ್ನು ಪ್ರದರ್ಶನ ಮಾಡದಿರುವುದು, ಅಹಿಂಸೆ, ಸಹನೆ, ಮನೋ-ವಾಕ್-ಕಾಯ ವ್ಯಾಪಾರಗಳಲ್ಲಿ ಏಕರೂಪತೆ, ಜ್ಞಾನಿಗಳ ಸೇವೆ, ಬಾಹ್ಯಾಂತರ ಶುದ್ಧಿ, ಅಪಾಯ ಬಂದರೂ ತನ್ನ ಧರ್ಮದಿಂದ ಚ್ಯುತನಾಗದಿರುವ ಸ್ಥೈರ್ಯ, ಮನೋನಿಗ್ರಹ;

ಇಂದ್ರಿಯಾರ್ಥೇಷು ವೈರಾಗ್ಯಮನಹಂಕಾರ ಏವ ಚ ।
ಜನ್ಮಮೃತ್ಯುಜರಾವ್ಯಾಧಿದುಃಖದೋಷಾನುದರ್ಶನಮ್ ॥೯॥

ಇಂದ್ರಿಯ ವಿಷಯಗಳಲ್ಲಿ ವೈರಾಗ್ಯ , ತನ್ನಲ್ಲಿ ಇಲ್ಲದಿರುವ ಗುಣಗಳನ್ನು ತನ್ನಲ್ಲಿ ಭಾವಿಸದಿರುವಿಕೆ-ಇದಕ್ಕೆ ಅಹಂಕಾರ ಎಂದು ಹೆಸರು, ಜನನ-ಮರಣ-ಮುಪ್ಪು-ವ್ಯಾಧಿ ಇವುಗಳಲ್ಲಿರುವ ದುಃಖ ಮತ್ತು ದೋಷಗಳ ದರ್ಶನ;

ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು ।
ನಿತ್ಯಂ ಚ ಸಮಚಿತ್ತತ್ವಮಿಷ್ಟಾನಿಷ್ಟೋಪಪತ್ತಿಷು ॥೧೦॥

ಭಾರ್ಯಾ ಪುತ್ರಾದಿಗಳಲ್ಲಿ ಅತಿಪಕ್ವ ಸ್ನೇಹವಿಲ್ಲದಿರುವುದು, ಇಷ್ಟಾನಿಷ್ಟಗಳು ಉಂಟಾದಾಗ ಯಾವಾಗಲೂ ಸಮಚಿತ್ತದಿಂದಿರುವುದು;

ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।
ವಿವಿಕ್ತದೇಶಸೇವಿತ್ವಮರತಿರ್ಜನಸಂಸದಿ ॥೧೧॥

ನನ್ನಲ್ಲಿ ರಮಾ-ಬ್ರಹ್ಮಾದಿಗಳಿಗಿಂತಲೂ ಹೆಚ್ಚಿನ ಚಲಿಸದಿರುವ ಭಕ್ತಿಯನ್ನು ಮಾಡುವುದು, ಏಕಾಂತ ದೇಶದಲ್ಲಿ ವಾಸ ಮಾಡುವುದು, ಜನರ ಸಮುದಾಯವನ್ನು ಇಷ್ಟಪಡದಿರುವುದು;

ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಮ್ ।
ಏತಜ್ಜ್ಞಾನಮಿತಿ ಪ್ರೋಕ್ತಮಜ್ಞಾನಂ ಯದತೋಽನ್ಯಥಾ ॥೧೨॥

ಅಧ್ಯಾತ್ಮ ಜ್ಞಾನದಲ್ಲಿ ನಿಯತವಾಗಿ ಇರುವುದು, ಅವರೋಕ್ಷ ಜ್ಞಾನಕ್ಕಾಗಿ ಶಾಸ್ತ್ರಪರ್ಯಾಲೋಚನೆ ಮಾಡುವುದು, ಇವೆಲ್ಲವೂ ಜ್ಞಾನವೆಂದು ಹೇಳಲ್ಪಡುತ್ತವೆ. ಇದಕ್ಕಿಂತ ವಿರುದ್ಧವಾದುದು ಅಜ್ಞಾನ.

ಜ್ಞೇಯಂ ಯತ್ ತತ್ ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಮೃತಮಶ್ನುತೇ ।
ಅನಾದಿಮತ್ಪರಂ ಬ್ರಹ್ಮ ನ ಸತ್ ತನ್ನಾಸದುಚ್ಯತೇ ॥೧೩॥

ನಾನು ಇನ್ನು ನಿನಗೆ ಜ್ಞೇಯವನ್ನು ಹೇಳುವೆನು. ಅದನ್ನು ತಿಳಿದು ಮುಕ್ತನಾಗುವಿ. ಜ್ಞೇಯವಾದವನು ಪರಬ್ರಹ್ಮ. ಅವನು ಜೀವನಂತೆ ಜನ್ಯವಾದ ದೇಹೇಂದ್ರಿಯಾದಿಗಳನ್ನು ಹೊಂದಿದವನಲ್ಲ. ಅವನು ಮೂರ್ತನೂ ಅಲ್ಲ, ಅಮೂರ್ತನೂ ಅಲ್ಲ.

ಸರ್ವತಃಪಾಣಿಪಾದಂ ತತ್ ಸರ್ವತೋಽಕ್ಷಿಶಿರೋಮುಖಮ್ ।
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೧೪॥

ಅವನು ಎಲ್ಲ ಕಡೆಗಳಲ್ಲಿಯೂ ಹಸ್ತ-ಪಾದಗಳನ್ನು, ಅಕ್ಷಿ-ಶಿರಸ್ಸು ಮತ್ತು ಮುಖಗಳನ್ನು ಹೊಂದಿದವನು. ಎಲ್ಲ ಕಡೆಗಳಲ್ಲಿಯೂ ಶ್ರೋತ್ರವನ್ನು ಹೊಂದಿದವನು. ಎಲ್ಲವನ್ನೂ ವ್ಯಾಪಿಸಿದ್ದಾನೆ.

ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತಮ್ ।
ಅಸಕ್ತಂ ಸರ್ವಭೃಚ್ಚೈವ ನಿರ್ಗುಣಂ ಗುಣಭೋಕ್ತೃ ಚ ॥೧೫॥

ಎಲ್ಲ ಇಂದ್ರಿಯಗಳನ್ನು ಮತ್ತು ಅವುಗಳ ಗುಣಗಳನ್ನು (ವಿಷಯಗಳನ್ನು) ಪ್ರಕಾಶಿಸುವವನು. ಪ್ರಾಕೃತವಾದ ಸರ್ವೇಂದ್ರಿಯ ರಹಿತನಾದವನು.

ನಿರ್ಲೇಪನಾದವನು, ಸರ್ವಧಾರಕನಾದವನು, ಸತ್ವಾದಿ ಗುಣರಹಿತನಾದವನು, ಸ್ವರೂಪಭೂತವಾದ ಆನಂದಾದಿ ಗುಣಗಳನ್ನು ಅನುಭವಿಸುವವನು.

ವಿಶೇಷ ವಿಚಾರ– 'ಸರ್ವೇಂದ್ರಿಯ ವಿವರ್ಜಿತವ್' ಎಂಬ ಪದಕ್ಕೆ ಎಲ್ಲ ಇಂದ್ರಿಯಗಳಿಂದಲೂ ರಹಿತನಾದವನು ಎಂದು ಅರ್ಥವನ್ನು ಮಾಡಿದರೆ **'ಸರ್ವತಃ ಪಾಣಿಪಾದಂ ತತ್'** ಎಂಬ ಹಿಂದಿನ ವಚನದಿಂದ ವಿರೋಧವು ಬರುತ್ತದೆ. ಆದ್ದರಿಂದ ಪ್ರಾಕೃತವಾದ ಇಂದ್ರಿಯಗಳಿಂದ ರಹಿತನಾದವನು ಎಂದು ಅರ್ಥವನ್ನು ಮಾಡಬೇಕು. 'ನಿರ್ಗುಣ' ಎಂಬ ಶಬ್ದಕ್ಕೆ ಸತ್ವಾದಿ ಗುಣರಹಿತ ಮತ್ತು ಪ್ರಾಕೃತ ಗುಣರಹಿತ ಎಂದು ಅರ್ಥವನ್ನು ಮಾಡಬೇಕು. ಅವನಿಗೆ ಸರ್ವಥಾ ಗುಣವಿಲ್ಲಎಂಬ ಶಂಕೆಯನ್ನು ಪರಿಹಾರ ಮಾಡುವುದಕ್ಕಾಗಿಯೇ 'ಗುಣಭೋಕ್ಷ' ಎಂದು ಹೇಳಿದ್ದಾರೆ. ತನ್ನ ಸ್ವರೂಪಭೂತವಾದ ಆನಂದಾದಿ ಗುಣಗಳನ್ನೂ ಜೀವನ ಕರ್ಮಜನ್ಯವಾದ ಶುಭಗುಣಗಳನ್ನೂ ಪರಮಾತ್ಮನು ಭೋಗಿಸುತ್ತಾನೆ.

ಬಹಿರಂತಶ್ಚ ಭೂತಾನಾಮಚರಂ ಚರಮೇವ ಚ ।
ಸೂಕ್ಷ್ಮತ್ವಾತ್ ತದವಿಜ್ಞೇಯಂ ದೂರಸ್ಥಂ ಚಾಂತಿಕೇ ಚ ತತ್ ॥೧೬॥

ಅದು ಎಲ್ಲ ಜೀವರ ಒಳಗೂ ಮತ್ತು ಹೊರಗೂ ಇರುವ ವಸ್ತು. ವಿಕಾರವಿಲ್ಲದಿರುವುದರಿಂದ ಅಚರ ಎನಿಸುತ್ತದೆ. ಸರ್ವತ್ರ ಸಂಚಾರ ಮಾಡುವುದರಿಂದ ಚರ ಎನಿಸುತ್ತದೆ. ಬಹಳ ಸೂಕ್ಷ್ಮವಾದುದರಿಂದ ಅದು ಅವಿಜ್ಞೇಯವಾದುದು. ಅದು ಜೀವನಿಗೆ ಅತ್ಯಂತ ಸಮೀಪದಲ್ಲಿಯೂ ಮತ್ತು ಅತ್ಯಂತ ದೂರದಲ್ಲಿಯೂ ಇದೆ.

ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಮ್ ।
ಭೂತಭರ್ತೃ ಚ ತಜ್ಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ ॥೧೭॥

ಆ ಕ್ಷೇತ್ರಜ್ಞ ವಸ್ತುವು ಬೇರೆ ಬೇರೆ ಜೀವರಲ್ಲಿದ್ದರೂ ತನ್ನಲ್ಲಿ ಭೇದರಹಿತವಾಗಿದೆ. ಜೀವರಲ್ಲಿ ಕ್ಷೇತ್ರಜ್ಞನಿದ್ದಾನೆ ಎಂದು ಆಧಾರಾಧೇಯ ಭಾವವನ್ನು ಹೇಳಿರುವುದರಿಂದ ಜೀವರಿಗೂ ಮತ್ತು ಪರಮಾತ್ಮನಿಗೂ ಭೇದವು ಇದ್ದೇ ಇದೆ. ಆಲ್ಲದೇ 'ಯದಾ ಭೂತ ಪೃಥಗ್ಭಾವಂ ಏಕಸ್ಥಂ' ಎಂಬ ಮುಂದೆ ಬರುವ ಶ್ಲೋಕದಲ್ಲಿ ಏಕತ್ವಪರತ್ವಾದಿ ಯುಕ್ತ ಬ್ರಹ್ಮನಲ್ಲಿ ಜೀವ-ಭೇದವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಆದರೂ ಭೇದ ಪ್ರತಿನಿಧಿಯಾದ

ವಿಶೇಷ ಬಲದಿಂದ ವಿಭಕ್ತವಾದಂತೆ ಇದೆ. ಆ ಕ್ಷೇತ್ರಜ್ಞ ಮನುವನ್ನು ಎಲ್ಲ ಜೀವರನ್ನು ಮತ್ತು ಜಡವನ್ನು ಧರಿಸಿರುವುದು, ಜಗತ್ತನ್ನು ಸಂಹಾರ ಮಾಡುವುದು ಮತ್ತು ಸೃಷ್ಟಿಯನ್ನು ಮಾಡುವುದೆಂದು ತಿಳಿಯಬೇಕು.

ಜ್ಯೋತಿಷಾಮಪಿ ತಜ್ಜ್ಯೋತಿಸ್ತಮಸಃ ಪರಮುಚ್ಯತೇ ।
ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವಸ್ಯ ವಿಷ್ಠಿತಮ್ ॥೧೮॥

ಅದು ಜ್ಯೋತೀರೂಪವಾದ ಸೂರ್ಯಾದಿಗಳಿಗೂ ಜ್ಯೋತಿಷ್ಪ್ರದವಾಗಿದೆ. ಅದು ಪ್ರಕೃತಿಗಿಂತಲೂ ಶ್ರೇಷ್ಠವಾಗಿದೆ. ಜ್ಞಾನರೂಪವಾಗಿದೆ. ಜ್ಞೇಯವೂ ಮತ್ತು ಜ್ಞಾನಗಮ್ಯವೂ ಆಗಿದೆ. ಎಲ್ಲ ಜೀವಸಮೂಹದ ಹೃದಯದಲ್ಲಿ ಪ್ರತಿಷ್ಠಿತ ಎಂದರೆ ವಿಶೇಷವಾಗಿ ಸ್ಥಿತವಾಗಿದೆ.

ಇತಿ ಕ್ಷೇತ್ರಂ ತಥಾ ಜ್ಞಾನಂ ಜ್ಞೇಯಂ ಚೋಕ್ತಂ ಸಮಾಸತಃ ।
ಮದ್ಭಕ್ತ ಏತದ್ ವಿಜ್ಞಾಯ ಮದ್ಭಾವಾಯೋಪಪದ್ಯತೇ ॥೧೯॥

ಹೀಗೆ ನಾನು ನಿನಗೆ ಕ್ಷೇತ್ರವನ್ನೂ, ಜ್ಞಾನವನ್ನೂ ಮತ್ತು ಜ್ಞೇಯವನ್ನೂ ಸಂಕ್ಷೇಪವಾಗಿ ಹೇಳಿದ್ದೇನೆ. ಇದನ್ನು ತಿಳಿದ ನನ್ನ ಭಕ್ತನು ನನ್ನಲ್ಲಿ ಭಕ್ತಿಯನ್ನು ಹೊಂದುತ್ತಾನೆ.

ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ ।
ವಿಕಾರಾಂಶ್ಚ ಗುಣಾಂಶ್ಚೈವ ವಿದ್ಧಿ ಪ್ರಕೃತಿಸಂಭವಾನ್ ॥೨೦॥

ಪ್ರಕೃತಿ ಮತ್ತು ಪುರುಷ ಇಬ್ಬರನ್ನೂ ಅನಾದಿ ಎಂದು ತಿಳಿ. ವಿಕಾರ ಮತ್ತು ಗುಣಗಳು ಎಂದರೆ ಮಹದಾದಿ ವಿಕಾರಗಳು ಮತ್ತು ಸತ್ವಾದಿ ಗುಣಗಳು ಪ್ರಕೃತಿಯಿಂದ ಉಂಟಾದವು ಎಂದು ತಿಳಿ.

ವಿಶೇಷ ವಿಚಾರ– ಇಲ್ಲಿ ಪ್ರಕೃತಿ ಶಬ್ದದಿಂದ ಜಡಪ್ರಕೃತಿಯನ್ನೂ ಮತ್ತು ಚಿತ್‌ಪ್ರಕೃತಿಯಾದ ಲಕ್ಷ್ಮೀದೇವಿಯನ್ನೂ ತೆಗೆದುಕೊಳ್ಳಬೇಕು. ಪುರುಷ ಶಬ್ದದಿಂದ ಜೀವನನ್ನೂ ಮತ್ತು ಪರಮಾತ್ಮನನ್ನೂ ತೆಗೆದುಕೊಳ್ಳಬೇಕು.

ಕಾರ್ಯಕಾರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ।
ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ ॥೨೧॥

ಕಾರ್ಯವೆಂದರೆ ಶರೀರ. ಕಾರಣವೆಂದರೆ ಇಂದ್ರಿಯಾದಿಗಳು. ಜೀವನಿಗೆ ದೇಹೇಂದ್ರಿಯಾದಿ ಕರ್ತೃತ್ವವು ಏನಿದೆಯೋ ಅದಕ್ಕೆ ಕಾರಣಳಾದವಳು ಚಿತ್‌ಪ್ರಕೃತಿ ಎನಿಸುವ ಲಕ್ಷ್ಮೀದೇವಿ. ಸುಖ-ದುಃಖಗಳನ್ನು ಭೋಗಿಸುವ ವಿಷಯದಲ್ಲಿ, ಎಂದರೆ ಜೀವನು ಪ್ರಕೃತಿವಿಕಾರವಾದ ಸುಖ-ದುಃಖಗಳನ್ನು ತನ್ನದು ಎಂದು ಸಾಕ್ಷಾತ್ಕರಿಸುವ ಭೋಗದ ವಿಷಯದಲ್ಲಿ ಪರಮಾತ್ಮನೇ ಕಾರಣನಾದವನು. ಇಲ್ಲಿ ಪರಮಾತ್ಮನು ಸರ್ವಕಾರಣನಾದುದರಿಂದ ಜೀವನಲ್ಲಿರುವ ದೇಹೇಂದ್ರಿಯಾದಿ ಕರ್ತೃತ್ವಕ್ಕೆ ಕಾರಣನಾದರೂ ಹಾಗೆ ಲಕ್ಷ್ಮೀದೇವಿಗೆ ಕೇವಲ ಸುಖ-ದುಃಖ-ಭೋಗ-ದಾನಕ್ಕೆ ಕಾರಣತ್ವವಿದ್ದರೂ, ಸುಃಖ-ದುಃಖ-ಭೋಗ-ದಾನದಲ್ಲಿ ಲಕ್ಷ್ಮಿಯ ಪ್ರವೃತ್ತಿಯು ಅಲ್ಪವಾದುದು. ಕಾರ್ಯಕಾರಣಕರ್ತೃತ್ವದ ವಿಷಯದಲ್ಲಿ ಅದಕ್ಕಿಂತ ಅಧಿಕವಾದ ಪ್ರವೃತ್ತಿಯು ಅವಳಿಗಿದೆ. ಸುಖ-ದುಃಖ-ಭೋಗ-ದಾನ ವಿಷಯದಲ್ಲಿ ಪರಮಾತ್ಮನೇ ಅತಿಶಯವಾಗಿ ಕರ್ತೃ. ಅಲ್ಲಿ ಲಕ್ಷ್ಮೀದೇವಿಯ ಪ್ರವೃತ್ತಿಯು ಅಲ್ಪ. ಆದ್ದರಿಂದ ಸುಖ-ದುಃಖ- ಭೋಗ ವಿಷಯದಲ್ಲಿ ಪರಮಾತ್ಮನೇ ಕಾರಣ ಎಂದು ಹೇಳಲ್ಪಡುತ್ತದೆ.

ಅಥವಾ ಪುರುಷ ಎಂದರೆ ಜೀವನೇ ತನ್ನ ಸುಖ-ದುಃಖ-ಭೋಗಗಳಿಗೆ ಕಾರಣ ಎಂದೂ ಹೇಳಬಹುದು. ಜೀವನ ಪ್ರಾಕೃತ ಸುಖ-ದುಃಖಗಳ ಭೋಗವು ಪರಮಾತ್ಮನಿಗೆ ಇಲ್ಲವಾದ್ದರಿಂದ ಪುರುಷ ಶಬ್ದಕ್ಕೆ ಜೀವ ಎಂದೂ ಅರ್ಥಮಾಡಬಹುದು.

ಪುರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ ಪ್ರಕೃತಿಜಾನ್ ಗುಣಾನ್ ।
ಕಾರಣಂ ಗುಣಸಂಗೋಽಸ್ಯ ಸದಸದ್ಯೋನಿಜನ್ಮಸು ॥೨೨॥

ಪುರುಷನೆನಿಸುವ ಜೀವನು ಪ್ರಾಕೃತ ದೇಹದಲ್ಲಿದ್ದು ಪ್ರಕೃತಿಯಿಂದ ಉಂಟಾದ ಗುಣಗಳನ್ನು ಭೋಗಿಸುತ್ತಾನೆ. ಉಚ್ಚ ಮತ್ತು ನೀಚ ಯೋನಿಗಳಲ್ಲಿ ಅವನ ಜನ್ಮಕ್ಕೆ ಅವನಿಗೆ ಆ ಗುಣಗಳಲ್ಲಿರುವ ಸ್ನೇಹವು ಕಾರಣವಾದುದು.

ಉಪದ್ರಷ್ಟಾನುಮಂತಾ ಚ ಭರ್ತಾ ಭೋಕ್ತಾ ಮಹೇಶ್ವರಃ ।
ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ ಪುರುಷಃ ಪರಃ ॥೨೩॥

ಪರಮಪುರುಷನನ್ನು ಈ ದೇಹದಲ್ಲಿಯೇ ಇರುವ ಪರಮಾತ್ಮನೆಂದೂ ಹೇಳುತ್ತಾನೆ. ಅವನು ಎಲ್ಲರಿಗಿಂತಲೂ ಮೇಲಿದ್ದು ಜೀವನ ಸಮೀಪದಲ್ಲಿದ್ದು ಎಲ್ಲವನ್ನೂ ನೇರವಾಗಿ

ನೋಡುವವನು. ಅನುಮಂತಾ= ಜೀವನಿಗೆ ಆಯಾ ಕಾರ್ಯಗಳಲ್ಲಿ ಪ್ರವೃತ್ತಿ ಮಾಡುವಂತೆ ಪ್ರೇರಿಸುವವನು. ಭರ್ತಾ= ಧಾರಣನಾದವನು, ಸರ್ವಪೋಷ ಎಂದು ಅಭಿಪ್ರಾಯ. ಭೋಕ್ತಾ= ಸರ್ವಕರ್ಮಫಲಪ್ರದನನ್ನು ಭೋಗಿಸುವವನು. ಮಹಾತ್ಮೆ ಉಳ್ಳವನಾದ್ದರಿಂದ ಅವನು ಮಹೇಶ್ವರ.

ಯ ಏವಂ ವೇತ್ತಿ ಪುರುಷಂ ಪ್ರಕೃತಿಂ ಚ ಗುಣೈಃ ಸಹ ।
ಸರ್ವಥಾ ವರ್ತಮಾನೋಽಪಿ ನ ಸ ಭೂಯೋಽಭಿಜಾಯತೇ ॥೨೪॥

ಯಾವನು ಈ ರೀತಿಯಲ್ಲಿ ಪುರುಷನನ್ನು ಮತ್ತು ಗುಣಗಳಿಂದ ಕೂಡಿದ ಪ್ರಕೃತಿಯನ್ನು ತಿಳಿಯುತ್ತಾನೆಯೋ ಅಂತಹ ಜ್ಞಾನಿಯು ಯಾವ ರೀತಿಯಲ್ಲಿ ಕರ್ಮಾಚರಣೆಯನ್ನು ಮಾಡಿದರೂ (ಒಂದು ವೇಳೆ ಪಾಪಕರ್ಮವನ್ನು ಆಚರಿಸಿದರೂ) ಪುನಃ ಜನ್ಮವನ್ನು ಪಡೆಯುವುದಿಲ್ಲ.

ಧ್ಯಾನೇನಾತ್ಮನಿ ಪಶ್ಯಂತಿ ಕೇಚಿದಾತ್ಮಾನಮಾತ್ಮನಾ ।
ಅನ್ಯೇ ಸಾಂಖ್ಯೇನ ಯೋಗೇನ ಕರ್ಮಯೋಗೇನ ಚಾಪರೇ ॥೨೫॥

ಕೆಲವರು ಧ್ಯಾನದಿಂದ ತಮ್ಮ ದೇಹದಲ್ಲಿಯೇ ಪರಮಾತ್ಮನನ್ನು ನೋಡುತ್ತಾರೆ. ಇನ್ನು ಕೆಲವರು ಬುದ್ಧಿಯಿಂದಲೇ ತಮ್ಮ ದೇಹದಲ್ಲಿ ಪರಮಾತ್ಮನನ್ನು ನೋಡುತ್ತಾರೆ. ಇನ್ನು ಕೆಲವರು ಜ್ಞಾನಯೋಗದಿಂದಲೂ, ಇನ್ನು ಕೆಲವರು ಕರ್ಮಯೋಗದಿಂದಲೂ ನೋಡುತ್ತಾರೆ.

ಅನ್ಯೇ ತ್ವೇವಮಜಾನಂತಃ ಶ್ರುತ್ವಾನ್ಯೇಭ್ಯ ಉಪಾಸತೇ ।
ತೇಽಪಿ ಚಾತಿತರಂತ್ಯೇವ ಮೃತ್ಯುಂ ಶ್ರುತಿಪರಾಯಣಾಃ ॥೨೬॥

ಅಂತಹ ಪ್ರತಿಭಾ ಸಾಮರ್ಥ್ಯವಿಲ್ಲದ ಮನುಷ್ಯರು ದೊಡ್ಡವರಿಂದ ಶ್ರವಣವನ್ನು ಮಾಡಿ ಉಪಾಸನೆಯನ್ನು ಮಾಡುತ್ತಾರೆ. ಹೀಗೆ ಶ್ರವಣಾದ್ಧ ಯವರಲ್ಲಿ ನಿರತರಾದ ಅವರೂ ಸಹ ಸಂಸಾರ ರೂಪವಾದ ಮೃತ್ಯುವನ್ನು ದಾಟಿಯೇ ದಾಟುತ್ತಾರೆ.

ಯಾವತ್ ಸಂಜಾಯತೇ ಕಿಂಚಿತ್ ಸತ್ತ್ವಂ ಸ್ಥಾವರಜಂಗಮಮ್ ।
ಕ್ಷೇತ್ರಕ್ಷೇತ್ರಜ್ಞಸಂಯೋಗಾತ್ ತದ್ವಿದ್ಧಿ ಭರತರ್ಷಭ ॥೨೭॥

ಎಲೈ ಭರತರ್ಷಭನೇ, ಸ್ಥಾವರ-ಜಂಗಮಾತ್ಮಕವಾದ ಯಾವ ಪ್ರಾಣಿಯು ಜನಿಸಿದರೂ ಅದು ಕ್ಷೇತ್ರಳಾದ ಲಕ್ಷ್ಮೀದೇವಿಯ ಮತ್ತು ಕ್ಷೇತ್ರಜ್ಞನಾದ ಪರಮಾತ್ಮನ ಸಂಯೋಗದಿಂದ ಉಂಟಾದುದೆಂದು ತಿಳಿ.

ಬೀಜದಿಂದ ಅಂಕುರವು ಜನಿಸಿದಂತೆ ರೇತಸ್ಸು ವಿಕಾರವನ್ನು ಹೊಂದಿ ಸ್ಥಾವರ-ಜಂಗಮ ಪ್ರಾಣಿಗಳು ಜನನ ಹೊಂದಿದಾಗ ಕ್ಷೇತ್ರದಂತಿರುವ ಲಕ್ಷ್ಮೀದೇವಿಯು ಕೃಷೀವಲನಂತೆ ಇರುತ್ತಾಳೆ. ಆ ರೇತಸ್ಸಿಗೆ ವಿಕಾರವನ್ನು ಉಂಟುಮಾಡಿ ದೇಹದಂತೆ ಪರಿಣಾಮವನ್ನು ಮಾಡುವವನು ಪರಮಾತ್ಮ.

ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಮ್ ।
ವಿನಶ್ಯತ್ಸ್ವವಿನಶ್ಯಂತಂ ಯಃ ಪಶ್ಯತಿ ಸ ಪಶ್ಯತಿ ॥೨೮॥

ಯಾವನು ಸರ್ವಭೂತಗಳಲ್ಲಿ ಇರುವ ಪರಮೇಶ್ವರನನ್ನು ತನ್ನ ಗುಣಗಳಿಂದ ನ್ಯೂನಾಧಿಕ ಭಾವವು ಇಲ್ಲದವನೆಂದು ಮತ್ತು ವಿನಾಶವನ್ನು ಹೊಂದುವ ವಸ್ತುವಿನಲ್ಲಿ ಇರುವ ಅವನು ವಿನಾಶವಿಲ್ಲದವನು ಎಂದು ತಿಳಿಯುತ್ತಾನೋ ಅವನೇ ಸರಿಯಾದ ಜ್ಞಾನವುಳ್ಳವನು.

ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಮ್ ।
ನ ಹಿನಸ್ಯಾತ್ಮನಾऽऽತ್ಮಾನಂ ತತೋ ಯಾತಿ ಪರಾಂ ಗತಿಮ್ ॥೨೯॥

ಯಾವನು ಸರ್ವತ್ರ ಅವಸ್ಥಿತನಾದ ಈಶ್ವರನು ಸರ್ವತ್ರ ನಿರ್ದೋಷಾಶೇಷ ಗುಣಪೂರ್ಣ ಎಂದು ತಿಳಿಯುತ್ತಾನೆಯೋ ಅವನು ತನ್ನ ಬುದ್ಧಿಯಿಂದ ತನ್ನನ್ನು ನರಕಕ್ಕೆ ಈಡು ಮಾಡಿಕೊಳ್ಳುವುದಿಲ್ಲ. ಅದರಿಂದ ಅವನು ಶ್ರೇಷ್ಠವಾದ ಗತಿಯಾದ ಮೋಕ್ಷವನ್ನು ಹೊಂದುತ್ತಾನೆ.

ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ ।
ಯಃ ಪಶ್ಯತಿ ತಥಾತ್ಮಾನಮಕರ್ತಾರಂ ಸ ಪಶ್ಯತಿ ॥೩೦॥

ಜೀವರ ಸಾತ್ವಿಕ, ರಾಜಸ, ತಾಮಸ ಸ್ವಭಾವಗಳಿಂದಲೇ ಆಯಾ ಜೀವರಿಂದ ಮಾಡಲ್ಪಡುವ ಪುಣ್ಯ-ಪಾಪ ಮಿಶ್ರಕರ್ಮಗಳನ್ನು ಯಾವನು ತಿಳಿಯುತ್ತಾನೆಯೋ

ಹಾಗೆಯೇ ಕರ್ಮವನ್ನು ಮಾಡುವ ಜೀವರು ಪರತಂತ್ರರಾದುದರಿಂದ ನಿಯಾಮಕನ ಅಪೇಕ್ಷೆ ಇರುವುದರಿಂದ ಅಂತಹ ಪ್ರಕೃತಿಯ ನಿಯಮನಕ್ಕಾಗಿ ಜೀವರ ಹೃದಯದಲ್ಲಿದ್ದರೂ ಆ ಕರ್ಮಗಳ ಫಲಗಳಲ್ಲಿ ರಾಗ-ದ್ವೇಷಾದಿಗಳು ಇಲ್ಲದಿರುವುದರಿಂದ ಪರಮಾತ್ಮನು ಕರ್ತೃವಾದರೂ ಕರ್ತೃವಲ್ಲ. ಹೀಗೆ ಪರಮಾತ್ಮನನ್ನು ಯಾವನು ತಿಳಿಯುತ್ತಾನೆಯೋ ಅವನೇ ಸರಿಯಾದ ಜ್ಞಾನಿ.

ಯದಾ ಭೂತಪೃಥಗ್ಭಾವಮೇಕಸ್ಥಮನುಪಶ್ಯತಿ ।
ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ ॥೩೧॥

ಯಾವಾಗ ಒಬ್ಬ ಬ್ರಹ್ಮನಲ್ಲಿ ಆಶ್ರಯಿಸಿಕೊಂಡಿರುವ ಜೀವರಲ್ಲಿ ಭೇದವನ್ನೂ, ಆ ಬ್ರಹ್ಮನಿಂದಲೇ ಜೀವ-ಜಡಾತ್ಮಕವಾದ ಪ್ರಪಂಚದ ವಿಸ್ತಾರವನ್ನು ತಿಳಿಯುತ್ತಾನೆಯೋ ಆಗ ಜೀವನು ಬ್ರಹ್ಮಪ್ರಾಪ್ತಿಯನ್ನು ಹೊಂದುತ್ತಾನೆ.

ಅನಾದಿತ್ವಾನ್ನಿರ್ಗುಣತ್ವಾತ್ ಪರಮಾತ್ಮಾಯಮವ್ಯಯಃ ।
ಶರೀರಸ್ಥೋಽಪಿ ಕೌಂತೇಯ ನ ಕರೋತಿ ನ ಲಿಪ್ಯತೇ ॥೩೨॥

ಅನಾದಿತ್ವಾತ್ ಎಂದರೆ ದೇಹದ ಜೊತೆಯಲ್ಲಿ ಹುಟ್ಟುವ ಜೀವನಂತೆ ಜೀವನ ದೇಹದ ಜನ್ಮ ಉಂಟಾದಾಗ ತನ್ನ ಜನ್ಮವಾಗದಿರುವುದರಿಂದ, ನಿರ್ಗುಣತ್ವಾತ್ ಎಂದರೆ ತ್ರಿವಿಧ ಜೀವರಂತೆ ಸತ್ವಾದಿಗುಣ ರಹಿತನಾದುದರಿಂದ ಪರಮಾತ್ಮನು ಕರ್ತೃವಾದರೂ, ನ ಕರೋತಿ- ಕರ್ತೃವಲ್ಲ. ಜೀವದೇಹವು ಜನಿಸಿದಾಗ ತನಗೆ ಜನ್ಮವು ಇಲ್ಲದಿರುವುದರಿಂದ ಪಾಪವನ್ನು ಮಾಡುವ ಜೀವನ ದೇಹವು ತನ್ನ ದೇಹವಲ್ಲವಾದ್ದರಿಂದ ಆ ಪಾಪಕರ್ಮವು ಪರಮಾತ್ಮನಿಗೆ ಇಲ್ಲ. ಆದ್ದರಿಂದಲೇ ಅವನು ಪಾಪದ ಲೇಪವನ್ನು ಹೊಂದುವುದಿಲ್ಲ. ಕ್ರೂರ ಪುರುಷನು ತನ್ನ ತೋಳಿನಿಂದ ಒಬ್ಬನಿಗೆ ಕೆನ್ನೆಗೆ ಹೊಡೆದರೆ ಅದರ ಫಲವು ಶಾಂತ ಪುರುಷನಿಗೆ ಬರುವುದಿಲ್ಲ. ಅಥವಾ ಶಿಷ್ಯರಿಗೆ ವಿದ್ಯೋಪದೇಶ ಮಾಡುವ ಗುರುವು ಶಿಷ್ಯರುಗಳು ವಿವಾದ ಮಾಡಿದರೆ ತಾನು ವಿವಾದ ಮಾಡಿದವನಾಗುವುದಿಲ್ಲ ಅಥವಾ ಶಿಷ್ಯರಿಗೆ ಪರಾಜಯವಾದರೆ ತಾನು ಪರಾಜಿತನಾಗುವುದಿಲ್ಲ.

ಯಥಾ ಸರ್ವಗತಂ ಸೌಕ್ಷ್ಮ್ಯಾದಾಕಾಶಂ ನೋಪಲಿಪ್ಯತೇ ।
ಸರ್ವತ್ರಾವಸ್ಥಿತೋ ದೇಹೇ ತಥಾऽऽತ್ಮಾ ನೋಪಲಿಪ್ಯತೇ ॥೩೩॥

ಹೇಗೆ ಆಕಾಶವು ಸರ್ವಗತವಾದರೂ ಸೂಕ್ಷ್ಮವಾದುದರಿಂದ ಯಾವ ಲೇಪಕ್ಕೂ ಒಳಗಾಗುವುದಿಲ್ಲವೋ ಅದರಂತೆ ನೀಚೋಚ್ಚಾದಿ ಸರ್ವದೇಹಗಳಲ್ಲಿದ್ದರೂ ಸಹ ಪರಮಾತ್ಮನು ಪುಣ್ಯ-ಪಾಪಗಳಿಂದ ಲಿಪ್ತನಾಗುವುದಿಲ್ಲ.

ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ ।
ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ ॥೩೪॥

ಎಲೈ ಭಾರತನೇ, ಹೇಗೆ ಒಬ್ಬ ಸೂರ್ಯನು ಈ ಸಮಸ್ತವಾದ ಲೋಕವನ್ನು ಪ್ರಕಾಶಿಸುತ್ತಾನೆಯೋ ಅದರಂತೆ, ಕ್ಷೇತ್ರನಿಯಾಮಕನಾದ ಪರಮಾತ್ಮನು ಸಮಸ್ತವಾದ ಕ್ಷೇತ್ರವನ್ನು ಪ್ರಕಾಶಿಸುತ್ತಾನೆ.

ಕ್ಷೇತ್ರಕ್ಷೇತ್ರಜ್ಞಯೋರೇವಮಂತರಂ ಜ್ಞಾನಚಕ್ಷುಷಾ ।
ಭೂತಪ್ರಕೃತಿಮೋಕ್ಷಂ ಚ ಯೇ ವಿದುರ್ಯಾಂತಿ ತೇ ಪರಮ್ ॥೩೫॥

ಹೀಗೆ ಜ್ಞಾನದೃಷ್ಟಿಯಿಂದ ಯಾರು ಕ್ಷೇತ್ರ-ಕ್ಷೇತ್ರಜ್ಞರ ವಿಭಾಗವನ್ನು ತಿಳಿಯುತ್ತಾರೋ ಮತ್ತು ಜೀವರಿಗೆ ಪರಮಾತ್ಮನ ಅನುಗ್ರಹದಿಂದ ಜಡಪ್ರಕೃತಿಯಿಂದ ಮೋಕ್ಷವನ್ನು ತಿಳಿಯುತ್ತಾರೆಯೋ ಅವರೇ ಸರ್ವೋತ್ತಮನಾದ ನಾರಾಯಣನನ್ನು ಹೊಂದುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಪಂಚತ್ರಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತಾರನೆಯ ಅಧ್ಯಾಯ

ಭಗವದ್ಗೀತಾ – ಗುಣತ್ರಯವಿಭಾಗಯೋಗ.

ಶ್ರೀಭಗವಾನ್

ಪರಂ ಭೂಯಃ ಪ್ರವಕ್ಷ್ಯಾಮಿ ಜ್ಞಾನಾನಾಂ ಜ್ಞಾನಮುತ್ತಮಮ್ ।
ಯಜ್ಜ್ಞಾತ್ವಾ ಮುನಯಃ ಸರ್ವೇ ಪರಾಂ ಸಿದ್ಧಿಮಿತೋ ಗತಾಃ ॥೧॥

ಶ್ರೀಭಗವಾನ್– ಯಾವ ಜ್ಞಾನವನ್ನು ಪಡೆದು ಎಲ್ಲ ಋಷಿಗಳೂ ಶ್ರೇಷ್ಠವಾದ ಸಿದ್ಧಿಯನ್ನು ಪಡೆದು ಸಂಸಾರದಿಂದ ಮುಕ್ತರಾದರೋ ಅಂತಹ ಜ್ಞಾನಗಳಲ್ಲಿ ಶ್ರೇಷ್ಠವಾದ ಜ್ಞಾನವನ್ನು ನಿನಗೆ ಪುನಃ ಉಪದೇಶಿಸುವೆನು.

ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ ।
ಸರ್ಗೇಽಪಿ ನೋಪಜಾಯಂತೇ ಪ್ರಲಯೇ ನ ವ್ಯಥಂತಿ ಚ ॥೨॥

ಈ ಜ್ಞಾನವನ್ನು ಆಶ್ರಯಿಸಿ ನನ್ನ ಸಾಧರ್ಮ್ಯವನ್ನು ಹೊಂದಿದವರು ಸೃಷ್ಟಿಕಾಲದಲ್ಲಿ ಜನಿಸುವುದಿಲ್ಲ, ಪ್ರಳಯಕಾಲದಲ್ಲಿ ಮರಣರೂಪವಾದ ವ್ಯಥೆಯನ್ನೂ ಹೊಂದುವುದಿಲ್ಲ.

ಮಮ ಯೋನಿರ್ಮಹದ್‌ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಮ್ ।
ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ ॥೩॥

ಸಕಲ ವೇದಗಳಿಗೆ ಮುಖ್ಯಾಭಿಮಾನಿಯಾದ ಲಕ್ಷ್ಮೀದೇವಿಯು ನನ್ನ ಪತ್ನಿ. ಅವಳಲ್ಲಿ ನಾನು ಗರ್ಭಾಧಾನವನ್ನು ಮಾಡುತ್ತೇನೆ. ಎಲೈ ಭಾರತನೇ, ಅನಂತರ ಎಲ್ಲ ಜೀವರ ಉತ್ಪತ್ತಿಯಾಗುತ್ತದೆ.

ಸರ್ವಯೋನಿಷು ಕೌಂತೇಯ ಮೂರ್ತಯಃ ಸಂಭವಂತಿ ಯಾಃ ।
ತಾಸಾಂ ಬ್ರಹ್ಮ ಮಹದ್ಯೋನಿರಹಂ ಬೀಜಪ್ರದಃ ಪಿತಾ ॥೪॥

ಎಲೈ ಕೌಂತೇಯನೇ, ಎಲ್ಲ ಯೋನಿಗಳಲ್ಲಿಯೂ ಯಾವ ಉತ್ಪತ್ತಿಗಳು ಸಂಭವಿಸುತ್ತವೆಯೋ ಅವುಗಳಿಗೆ ನಾನು ಬೀಜಪ್ರದನಾದ ತಂದೆ, ಲಕ್ಷ್ಮೀದೇವಿಯು ದೊಡ್ಡತಾಯಿ.

ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್ ॥೫॥

ಎಲೈ ಮಹಾಬಾಹುವೇ, ಪ್ರಕೃತಿಜನ್ಯವಾದ ಸತ್ವ-ರಜಸ್-ತಮ ಎಂಬ ಮೂರು ಗುಣಗಳು ಶಾಶ್ವತನಾದ ಜೀವನನ್ನು ದೇಹದಲ್ಲಿ ಬಂಧಿಸುತ್ತವೆ.

ತತ್ರ ಸತ್ತ್ವಂ ನಿರ್ಮಲತ್ವಾತ್ ಪ್ರಕಾಶಕಮನಾಮಯಮ್ ।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ ॥೬॥

ಎಲೈ ಅನಘನೇ, ಅವುಗಳಲ್ಲಿ ಸತ್ತ್ವವು ನಿರ್ಮಲವೂ, ಪ್ರಕಾಶಕವೂ ಮತ್ತು ದೋಷರಹಿತವೂ ಆದುದರಿಂದ ಪ್ರಾಕೃತ ಸುಖಸಂಗವನ್ನು ಮತ್ತು ಪ್ರಾಕೃತವಾದ ಜ್ಞಾನದ ಸಂಗವನ್ನು ಉಂಟುಮಾಡುತ್ತದೆ.

ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಮ್ ।
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಮ್ ॥೭॥

ರಜೋಗುಣವು ಸ್ನೇಹಾತ್ಮಕವಾದುದು. ಅದನ್ನು ಆಸೆಯಿಂದ ಉಂಟಾದುದು ಎಂದು ತಿಳಿ. ಎಲೈ ಕೌಂತೇಯನೇ, ಅದು ಜೀವನನ್ನು ಕಾಮ್ಯಕರ್ಮವನ್ನುಂಟು ಮಾಡಿ ಬಂಧಿಸುತ್ತದೆ.

ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಮ್ ।
ಪ್ರಮಾದಾಲಸ್ಯನಿದ್ರಾಭಿಸ್ತನ್ನಿಬಧ್ನಾತಿ ಭಾರತ ॥೮॥

ಎಲೈ ಭಾರತನೇ, ತಮೋಗುಣವು ಅಜ್ಞಾನಕ್ಕೆ ಜನಕವಾದುದು. ಅದು ಎಲ್ಲ ಜೀವರಿಗೂ ಮೋಹ ಎಂದರೆ ಪ್ರಮಾದವನ್ನುಂಟು ಮಾಡುತ್ತದೆ ಎಂದು ತಿಳಿ. ಎಲೈ ಭಾರತನೇ, ಅದು ಪ್ರಮಾದ, ಆಲಸ್ಯ ಮತ್ತು ನಿದ್ರೆಗಳಿಂದ ಜೀವರನ್ನು ಬಂಧಿಸುತ್ತದೆ.

ಸತ್ತ್ವಂ ಸುಖೇ ಸಂಜಯತಿ ರಜಃ ಕರ್ಮಣಿ ಭಾರತ ।
ಜ್ಞಾನಮಾವೃತ್ಯ ತು ತಮಃ ಪ್ರಮಾದೇ ಸಂಜಯತ್ಯುತ ॥೯॥

ಎಲೈ ಭಾರತನೇ, ಸತ್ತ್ವಗುಣವು ಜೀವನನ್ನು ಪ್ರಾಕೃತ ಸುಖದಲ್ಲಿ ಪ್ರವೃತ್ತಿ ಮಾಡುವಂತೆ ಮಾಡುತ್ತದೆ. ರಜೋಗುಣವು ಕರ್ಮಗಳಲ್ಲಿ ಪ್ರವೃತ್ತಿಯನ್ನು ಉಂಟುಮಾಡುತ್ತದೆ. ತಮೋಗುಣವು ಜೀವನ ಜ್ಞಾನವನ್ನು ಪ್ರತಿಬಂಧಿಸಿ ಪ್ರಮಾದವನ್ನೂ, ಆಲಸ್ಯಾದಿಗಳನ್ನೂ ಉಂಟುಮಾಡುತ್ತದೆ.

ರಜಸ್ತಮಶ್ಚಾಭಿಭೂಯ ಸತ್ತ್ವಂ ಭವತಿ ಭಾರತ ।
ರಜಃ ಸತ್ತ್ವಂ ತಮಶ್ಚೈವ ತಮಃ ಸತ್ತ್ವಂ ರಜಸ್ತಥಾ ॥೧೦॥

ಸರ್ವದ್ವಾರೇಷು ದೇಹೇಽಸ್ಮಿನ್ ಪ್ರಕಾಶ ಉಪಜಾಯತೇ ।
ಜ್ಞಾನಂ ಯದಾ ತದಾ ವಿದ್ಯಾದ್ ವಿವೃದ್ಧಂ ಸತ್ತ್ವಮಿತ್ಯುತ ॥೧೧॥

ಎಲೈ ಭಾರತನೇ, ಸತ್ವಗುಣವು ಪ್ರಬಲವಾದಾಗ ರಜೋಗುಣ ಮತ್ತು ತಮೋಗುಣಗಳನ್ನು ಮೆಟ್ಟಿ ತನ್ನ ಕಾರ್ಯವನ್ನು ಮಾಡುತ್ತದೆ. ರಜೋಗುಣವು ಪ್ರಬಲವಾದಾಗ ಸತ್ವ ಮತ್ತು ತಮೋಗುಣಗಳನ್ನು ಮೆಟ್ಟಿ ತನ್ನ ಕಾರ್ಯವನ್ನು ಮಾಡುತ್ತದೆ. ತಮೋಗುಣವು ಪ್ರಬಲವಾದಾಗ ಸತ್ವಮತ್ತು ರಜೋಗುಣಗಳನ್ನು ಮೆಟ್ಟಿ ತನ್ನ ಕಾರ್ಯವನ್ನು ಮಾಡುತ್ತದೆ. ಸತ್ವಗುಣವು ಪ್ರಬಲವಾದಾಗ ಈ ದೇಹದಲ್ಲಿ ಚಕ್ಷುರಾದಿ ನವದ್ವಾರಗಳಲ್ಲಿ ಸ್ಪಷ್ಟವಾಗಿ ಸತ್ವವೇ ತೋರುತ್ತದೆ (ಸತ್ವಗುಣದ ಕಾರ್ಯವೇ ತೋರುತ್ತದೆ). ಇದು ಉತ್ತಮರ ಸ್ವಭಾವ. ತಮೋಗುಣವು ರಜೋಗುಣ ಮತ್ತು ಸತ್ವಗುಣಗಳನ್ನು ಪ್ರತಿಬಂಧಿಸಿ ಸರ್ವದ್ವಾರಗಳಲ್ಲಿ ಅಜ್ಞಾನಾದಿ ರೂಪವಾದ ತಮೋಗುಣದ ಕಾರ್ಯವನ್ನೇ ತೋರಿಸುತ್ತದೆ. ಇದು ಅಧಮರ ಸ್ವಭಾವ. ಹಾಗೆಯೇ ರಜೋಗುಣವು ಸತ್ವಗುಣ ಮತ್ತು ತಮೋಗುಣಗಳನ್ನು ಮೆಟ್ಟಿ ಸ್ಪಷ್ಟವಾಗಿ ರಜೋಗುಣದ ಕಾರ್ಯಗಳನ್ನು ತೋರಿಸುತ್ತದೆ. ಇದು ಮಧ್ಯಮರ ಸ್ವಭಾವ.

ಲೋಭಃ ಪ್ರವೃತ್ತಿರಾರಂಭಃ ಕರ್ಮಣಾಮಶಮಃ ಸ್ಪೃಹಾ ।
ರಜಸ್ಯೇತಾನಿ ಜಾಯಂತೇ ವಿವೃದ್ಧೇ ಭರತರ್ಷಭ ॥೧೨॥

ಎಲೈ ಭರತಶ್ರೇಷ್ಠನೇ, ರಜೋಗುಣವು ಪ್ರಬಲವಾದಾಗ ಲೋಭ, ಕಾರ್ಯೋನ್ಮುಖತೆ, ಕಾಮ್ಯಕರ್ಮಗಳ ಪ್ರಾರಂಭ, ಅತೃಪ್ತಿ, ಆಸೆ ಇವುಗಳು ಉಂಟಾಗುತ್ತವೆ.

ಅಪ್ರಕಾಶೋऽಪ್ರವೃತ್ತಿಶ್ಚ ಪ್ರಮಾದೋ ಮೋಹ ಏವ ಚ ।
ತಮಸ್ಯೇತಾನಿ ಜಾಯಂತೇ ವಿವೃದ್ಧೇ ಕುರುನಂದನ ॥೧೩॥

ಎಲೈ ಕುರುನಂದನನೇ, ತಮೋಗುಣವು ಅಭಿವೃದ್ಧವಾದಾಗ ಅಜ್ಞಾನ, ಪ್ರವೃತ್ತಿ ಇಲ್ಲದಿರುವಿಕೆ (ಆಲಸ್ಯ), ಪ್ರಮಾದ (ಮಿಥ್ಯಾಜ್ಞಾನ) ಮತ್ತು ಮೋಹ (ವಿಸ್ಮೃತಿ) ಉಂಟಾಗುತ್ತವೆ.

ಯದಾ ಸತ್ತ್ವೇ ಪ್ರವೃದ್ಧೇ ತು ಪ್ರಲಯಂ ಯಾತಿ ದೇಹಭೃತ್ ।
ತದೋತ್ತಮವಿದಾಂ ಲೋಕಾನಮಲಾನ್ ಪ್ರತಿಪದ್ಯತೇ ॥೧೪॥

ಸತ್ವಗುಣವು ಪ್ರವೃದ್ಧವಾದಾಗ, ದೇಹತ್ಯಾಗವನ್ನು ಮಾಡುವ ಜೀವನು ಉತ್ತಮ ಜ್ಞಾನಿಗಳು ಪಡೆಯುವ ನಿರ್ಮಲವಾದ ಲೋಕಗಳನ್ನು ಪಡೆಯುತ್ತಾನೆ.

ರಜಸಿ ಪ್ರಲಯಂ ಗತ್ವಾ ಕರ್ಮಸಂಗಿಷು ಜಾಯತೇ ।
ತಥಾ ಪ್ರಲೀನಸ್ತಮಸಿ ಮೂಢಯೋನಿಷು ಜಾಯತೇ ॥೧೫॥

ರಜೋಗುಣವು ಪ್ರವೃದ್ಧವಾದಾಗ ದೇಹತ್ಯಾಗವನ್ನು ಮಾಡುವವನು ಕರ್ಮಸಂಗಿಗಳಲ್ಲಿ ಜನಿಸುತ್ತಾನೆ. ಅದರಂತೆ ತಮೋಗುಣವು ಪ್ರವೃದ್ಧವಾದಾಗ ದೇಹತ್ಯಾಗ ಮಾಡುವವನು ಮೂಢಯೋನಿಗಳಲ್ಲಿ ಜನಿಸುತ್ತಾನೆ.

ಕರ್ಮಣಃ ಸುಕೃತಸ್ಯಾಹುಃ ಸಾತ್ತ್ವಿಕಂ ನಿರ್ಮಲಂ ಫಲಮ್ ।
ರಜಸಸ್ತು ಫಲಂ ದುಃಖಮಜ್ಞಾನಂ ತಮಸಃ ಫಲಮ್ ॥೧೬॥

ಆಚರಿಸಿದ ಶುಭಕರ್ಮಗಳಿಗೆ ಸಾತ್ವಿಕ ಗುಣದ ನಿರ್ಮಲವಾದ ಸುಖವು ಫಲವೆಂದು ಹೇಳುತ್ತಾರೆ. ರಾಜಸಕಾರ್ಯದ ಫಲವು ದುಃಖ ಮತ್ತು ತಾಮಸ ಕರ್ಮಗಳ ಫಲವು ಅಜ್ಞಾನ.

ಸತ್ತ್ವಾತ್ ಸಂಜಾಯತೇ ಜ್ಞಾನಂ ರಜಸೋ ಲೋಭ ಏವ ಚ ।
ಪ್ರಮಾದಮೋಹೌ ತಮಸೋ ಭವತೋಽಜ್ಞಾನಮೇವ ಚ ॥೧೭॥

ಸತ್ವಗುಣದಿಂದ ಜ್ಞಾನವು ಉಂಟಾಗುತ್ತದೆ. ರಜೋಗುಣದಿಂದ ಲೋಭವು ಉಂಟಾಗುತ್ತದೆ. ತಮೋಗುಣದಿಂದ ಪ್ರಮಾದ, ಮೋಹ ಮತ್ತು ಅಜ್ಞಾನಗಳು ಉಂಟಾಗುತ್ತವೆ.

ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ ।
ಜಘನ್ಯಗುಣವೃತ್ತಿಸ್ಥಾ ಅಧೋ ಗಚ್ಛಂತಿ ತಾಮಸಾಃ ॥೧೮॥

ಸತ್ವಗುಣವುಳ್ಳವರು ಊರ್ಧ್ವಲೋಕಗಳಿಗೆ ಹೋಗುತ್ತಾರೆ. ರಾಜಸರು ಮಧ್ಯ ಲೋಕಗಳಲ್ಲಿ ಇರುತ್ತಾರೆ. ಕೊನೆಯ ಗುಣವಾದ ತಮೋಗುಣದ ಸ್ವಭಾವವುಳ್ಳವರು ಅಧೋಲೋಕಗಳಿಗೆ ಹೋಗುತ್ತಾರೆ.

ನಾನ್ಯಂ ಗುಣೇಭ್ಯಃ ಕರ್ತಾರಂ ಯದಾ ದ್ರಷ್ಟಾನುಪಶ್ಯತಿ ।
ಗುಣೇಭ್ಯಶ್ಚ ಪರಂ ವೇತ್ತಿ ಮದ್ಭಾವಂ ಸೋಽಧಿಗಚ್ಛತಿ ॥೧೯॥

ಯಾವಾಗ ಜೀವನು ತನಗೆ ಉಂಟಾಗುವ ಸುಖ-ದುಃಖಗಳಿಗೆ ತಾನೇ ಕಾರಣ, ತನ್ನ ಅಪರಾಧವೇ ಕಾರಣ ಹೊರತಾಗಿ ಇದರಲ್ಲಿ ಹರಿಯ ಅಪರಾಧವು ಏನೂ ಇಲ್ಲ ಎಂದು ತಿಳಿಯುತ್ತಾನೆಯೋ ಮತ್ತು ಹರಿಯು ಗುಣಗಳನ್ನು ಮೀರಿದವನು ಎಂದು ತಿಳಿಯುತ್ತಾನೆಯೋ ಆಗ ಅವನು ನನ್ನಲ್ಲಿ ಭಕ್ತಿಯನ್ನು ಹೊಂದುತ್ತಾನೆ.

ಗುಣಾನೇತಾನತೀತ್ಯ ತ್ರೀನ್ ದೇಹೀ ದೇಹಸಮುದ್ಭವಾನ್ ।
ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಽಮೃತಮಶ್ನುತೇ ॥೨೦॥

ಜೀವನು ದೇಹವನ್ನು ಉಂಟುಮಾಡುವ ಈ ಮೂರುಗುಣಗಳನ್ನು ಹರಿಯ ಅನುಗ್ರಹದಿಂದಲೇ ದಾಟಿ, ಜನನ-ಮರಣ-ಜರಾ-ದುಃಖಗಳಿಂದ ನಿರ್ಮುಕ್ತನಾಗಿ ಮೋಕ್ಷವನ್ನು ಪಡೆಯುತ್ತಾನೆ.

ಅರ್ಜುನಃ

ಕೈರ್ಲಿಂಗೈಸ್ತ್ರೀನ್ ಗುಣಾನೇತಾನತೀತೋ ಭವತಿ ಪ್ರಭೋ ।
ಕಿಮಾಚಾರಃ ಕಥಂ ಚೈತಾಂಸ್ತ್ರೀನ್ ಗುಣಾನತಿವರ್ತತೇ ॥೨೧॥

ಅರ್ಜುನ– ಎಲೈ ಪ್ರಭುವೇ, ಈ ಮೂರುಗುಣಗಳನ್ನೂ ದಾಟಿದವನ ಲಕ್ಷಣಗಳೇನು? ಅವನ ಆಚಾರವು ಹೇಗಿರುತ್ತದೆ? ಅವನು ಹೇಗೆ ಈ ಮೂರು ಗುಣಗಳನ್ನು ದಾಟುತ್ತಾನೆ?

ಶ್ರೀಭಗವಾನ್

ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ ।
ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಂಕ್ಷತಿ ॥೨೨॥

ಶ್ರೀಭಗವಾನ್– ಎಲೈ ಪಾಂಡವನೇ, ಯದೃಚ್ಛೆಯಿಂದ ಪ್ರಾಪ್ತವಾದ ಅಥವಾ ನಿವೃತ್ತವಾದ ಸತ್ವಗುಣದ ಕಾರ್ಯವಾದ ಪ್ರಕಾಶವನ್ನಾಗಲೀ, ರಜೋಗುಣದ ಕಾರ್ಯವಾದ ಪ್ರವೃತ್ತಿಯನ್ನಾಗಲೀ, ತಮೋಗುಣದ ಕಾರ್ಯವಾದ ಮೋಹವನ್ನಾಗಲೀ ಅವನು ದ್ವೇಷಿಸುವುದೂ ಇಲ್ಲ ಅಥವಾ ಬಯಸುವುದೂ ಇಲ್ಲ.

ಉದಾಸೀನವದಾಸೀನೋ ಗುಣೈರ್ಯೋ ನ ವಿಚಾಲ್ಯತೇ ।
ಗುಣಾ ವರ್ತಂತ ಇತ್ಯೇವ ಯೋಽವತಿಷ್ಠತಿ ನೇಂಗತೇ ॥೨೩॥

ಯಾವನು ಉದಾಸೀನನಂತೆ ನಿರ್ಲಿಪ್ತನಾಗಿದ್ದು, ಗುಣಗಳಿಂದ ಕ್ಷೋಭೆಗೆ ಒಳಗಾಗುವುದಿಲ್ಲವೋ, ಗುಣಗಳು ತಮ್ಮ ಕಾರ್ಯಗಳಲ್ಲಿ ತೊಡಗಿವೆ ಎಂದು ತಿಳಿದು ನಿಶ್ಚಲನಾಗಿರುತ್ತಾನೆಯೋ ಅವನು ಗುಣಗಳನ್ನು ದಾಟುತ್ತಾನೆ.

ಸಮದುಃಖಸುಖಃ ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ ।
ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿಂದಾತ್ಮಸಂಸ್ತುತಿಃ ॥೨೪॥

ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ ।
ಸರ್ವಾರಂಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ ॥೨೫॥

ಸುಖ-ದುಃಖಗಳಲ್ಲಿ ಸಮನಾಗಿ, ಶಾಂತಚಿತ್ತನಾಗಿ, ಲೋಷ್ಟಾಶ್ಮಕಾಂಚನಗಳಲ್ಲಿ ಸಮಾನವಾದ ದೃಷ್ಟಿಯುಳ್ಳವನಾಗಿ, ಪ್ರಿಯಾಪ್ರಿಯಗಳಲ್ಲಿಯೂ, ನಿಂದಾ-ಸ್ತುತಿಗಳಲ್ಲಿಯೂ ಸಮಾನನಾಗಿದ್ದು, ಹಾಗೆಯೇ ಮಾನಾಪಮಾನಗಳಲ್ಲಿಯೂ, ಶತ್ರು-ಮಿತ್ರ ಪಕ್ಷಗಳಲ್ಲಿಯೂ ಸಮಾನನಾಗಿದ್ದು, ಯಾವ ಕಾಮ್ಯಕರ್ಮವನ್ನೂ ಆರಂಭ ಮಾಡದೆ ಇರುವವನು ಗುಣಾತೀತನೆಂದು ಹೇಳಲ್ಪಡುತ್ತಾನೆ.

ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।
ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥೨೬॥

ಮತ್ತು ಯಾವನು ಅವ್ಯಭಿಚರಿತವಾದ ಭಕ್ತಿಯೋಗದಿಂದ ನನ್ನನ್ನು ಉಪಾಸನೆ ಮಾಡುತ್ತಾನೆಯೋ ಅವನು ಈ ಮೂರುಗುಣಗಳನ್ನು ಮೀರಿ ತನಗೆ ಯೋಗ್ಯವಾದ ಪೂರ್ಣತ್ವವನ್ನೂ ಅಥವಾ ಪರಮಾತ್ಮನ ಸಾನ್ನಿಧ್ಯವನ್ನು ಹೊಂದಲು ಸಮರ್ಥನಾಗುತ್ತಾನೆ.

ವಿಶೇಷ ವಿಚಾರ– 'ಸ್ಯಾತ್ ಬ್ರಹ್ಮಭೂಯೋ ಬ್ರಹ್ಮತ್ವಂ ಬ್ರಹ್ಮಸಾಯುಜ್ಯಮಿತ್ಯಪಿ' ಎಂದು ಕೋಶವಿರುವುದರಿಂದ ಬ್ರಹ್ಮಭೂಯ ಶಬ್ದಕ್ಕೆ ಬ್ರಹ್ಮಸಾಯುಜ್ಯ ಎಂದೂ ಅರ್ಥವನ್ನು ಮಾಡಬಹುದು.

ಬ್ರಹ್ಮಣೋ ಹಿ ಪ್ರತಿಷ್ಠಾಹಮಮೃತಸ್ಯಾವ್ಯಯಸ್ಯ ಚ ।
ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾಂತಿಕಸ್ಯ ಚ ॥೨೭॥

ಪೂರ್ಣಸುಖರೂಪನಾದ ಮುಕ್ತನಿಗೆ ನಾನು ಆಧಾರನಾಗಿದ್ದೇನೆ. ನಾನು ಶಾಶ್ವತವಾದ ಮೋಕ್ಷಕ್ಕೂ ಆಧಾರನಾಗಿದ್ದೇನೆ. ಶಾಶ್ವತವಾದ ಧರ್ಮಕ್ಕೂ ಮತ್ತು ದುಃಖ ಅಮಿಶ್ರಿತವಾದ ಸುಖಕ್ಕೂ ನಾನು ಆಧಾರನಾಗಿದ್ದೇನೆ.

ವಿಶೇಷ ವಿವರ– 'ಬ್ರಹ್ಮಣೋ ಹಿ ಪ್ರತಿಷ್ಠಾ' ಎಂದು ಹೇಳುವುದರಿಂದ ಹಿಂದಿನ ಶ್ಲೋಕದಲ್ಲಿ ಹೇಳುವ 'ಬ್ರಹ್ಮಭೂಯ' ಶಬ್ದಕ್ಕೆ ಬ್ರಹ್ಮತ್ವ ಎಂದು ಅರ್ಥಮಾಡಿದರೂ ಅದು ಪೂರ್ಣ ಸುಖರೂಪವಾದ ಮುಕ್ತಜೀವತ್ವವೇ ಸರಿ. 'ಬ್ರಹ್ಮಾಣಿ ಜೀವಾಃ ಸರ್ವೇ ಽಪಿ' ಎಂದು ಎಲ್ಲ ಜೀವರನ್ನೂ ಬ್ರಹ್ಮಶಬ್ದವಾಚ್ಯರೆಂದು ಹೇಳುವುದರಿಂದ ಬ್ರಹ್ಮ ಶಬ್ದದಿಂದ ಮುಕ್ತಜೀವರನ್ನು ತೆಗೆದುಕೊಳ್ಳಲು ಯಾವ ಅನುಪಪತ್ತಿಯೂ ಇರುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಷಷ್ಠಿತಮೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ತ್ರಯೋವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೇಳನೆಯ ಅಧ್ಯಾಯ

ಭಗವದ್ಗೀತಾ – ಪುರುಷೋತ್ತಮಯೋಗ.

ಶ್ರೀಭಗವಾನ್

ಊರ್ಧ್ವಮೂಲಮಧಃಶಾಖಮಶ್ವತ್ಥಂ ಪ್ರಾಹುರವ್ಯಯಮ್ ।
ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್ ॥೧॥

ಶ್ರೀಭಗವಾನ್– ಈ ಸಂಸಾರವೆಂಬ ವೃಕ್ಷವು ಊರ್ಧ್ವ ಎಂದರೆ ಶ್ರೇಷ್ಠವಾದ ಮಹತ್ತತ್ತ್ವಕ್ಕಿಂತಲೂ ಮೇಲಿರುವ ಸತ್ವಾದಿ ಗುಣಗಳು. ಅವುಗಳ ಅಭಿಮಾನಿಯಾದ ಲಕ್ಷ್ಮೀ ಮತ್ತು ಪರಮಾತ್ಮನನ್ನು ಮೂಲವಾಗಿ ಹೊಂದಿದೆ. ಕೊಂಬೆಯ ಸ್ಥಾನದಲ್ಲಿರುವ ದೇವರ್ಷಿ, ಮನುಷ್ಯ, ಪಶು, ಪಕ್ಷಿ, ರಾಕ್ಷಸ-ದಾನವಾದಿಗಳು, ನಾನಾ ಯೋನಿಗಳು

ಕೆಳಗೆ ಹಬ್ಬಿವೆ. ಒಂದೇ ರೀತಿ ಇರುವುದಿಲ್ಲವಾದ್ದರಿಂದ ಇವುಗಳಿಗೆ ಅಶ್ವತ್ಥ ಎಂದು ಹೆಸರು. ಈ ಅಶ್ವತ್ಥ ವೃಕ್ಷಕ್ಕೆ ವೇದಗಳೇ ಎಲೆಗಳ ಸ್ಥಾನದಲ್ಲಿವೆ.

ಅಧಶ್ಚೋರ್ಧ್ವಂ ಪ್ರಸೃತಾಸ್ತಸ್ಯ ಶಾಖಾ
ಗುಣಪ್ರವೃದ್ಧಾ ವಿಷಯಪ್ರವಾಲಾಃ ।
ಅಧಶ್ಚ ಮೂಲಾನ್ಯನುಸಂತತಾನಿ
ಕರ್ಮಾನುಬಂಧೀನಿ ಮನುಷ್ಯಲೋಕೇ ॥೨॥

ಅದರ ಕೊಂಬೆಗಳು ಸತ್ಯಲೋಕದಿಂದ ಆರಂಭಿಸಿ ಕೆಳಗಿನ ಮನುಷ್ಯ ಲೋಕದವರೆಗೂ, ಮನುಷ್ಯಲೋಕದಿಂದ ಆರಂಭಿಸಿ ಕೆಳಗಿನ ಪಾತಾಳ ಲೋಕದವರೆಗೂ ಹಬ್ಬಿವೆ. ಆ ಕೊಂಬೆಗಳು ರೂಪ-ರಸಾದಿ ಗುಣಗಳಿಂದ ಅಭಿವೃದ್ಧಿಯನ್ನು ಹೊಂದಿ ತ್ರಕ್‌ಚಂದನಾದಿ ವಿಷಯಗಳೆಂಬ ಚಿಗುರುಗಳನ್ನು ಹೊಂದಿವೆ. ಕೆಳಭಾಗದಲ್ಲಿ ಶಾಖೆಯ ಸಂಧಿ ಸಂಧಿಯಲ್ಲಿಯೂ ಉತ್ತಮ-ಅಧಮ-ಮಧ್ಯಮ ಜೀವರ ಯೋಗ್ಯತೆಯನ್ನು ಅನುಸರಿಸಿ ಪುಣ್ಯ-ಪಾಪ ಮಿಶ್ರರೂಪವಾದ ಕರ್ಮವನ್ನು ಮಾಡಿಸುವ ಗುಣತ್ರಯರೂಪವಾದ ಮೂಲ (ಬೇರುಗಳು) ಸೇರಿಕೊಂಡಿವೆ. ಸತ್ಯಲೋಕದಿಂದ ಆರಂಭಿಸಿ ಪಾತಾಳ ಲೋಕದವರೆಗೂ ಗುಣತ್ರಯದ ಸಂಬಂಧದಿಂದಲೇ ಜೀವರ ಪ್ರವೃತ್ತಿ ಎಂದು ಅಭಿಪ್ರಾಯ.

ನ ರೂಪಮಸ್ಯೇಹ ತಥೋಪಲಭ್ಯತೇ
ನಾಂತೋ ನ ಚಾದಿರ್ನ ಚ ಸಂಪ್ರತಿಷ್ಠಾ ।
ಅಶ್ವತ್ಥಮೇನಂ ಸುವಿರೂಢಮೂಲ-
ಮಸಂಗಶಸ್ತ್ರೇಣ ದೃಢೇನ ಛಿತ್ತ್ವಾ ॥೩॥

ತತಃ ಪದಂ ತತ್ಪರಿಮಾರ್ಗಿತವ್ಯಂ
ಯಸ್ಮಿನ್ ಗತಾ ನ ನಿವರ್ತಂತಿ ಭೂಯಃ ।
ತಮೇವ ಚಾದ್ಯಂ ಪುರುಷಂ ಪ್ರಪದ್ಯೇ
ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ ॥೪॥

ಈ ಅಶ್ವತ್ಥ ವೃಕ್ಷಕ್ಕೆ ಇಂತಹದೇ ರೂಪವೆಂದು ತಿಳಿದು ಬರುವುದಿಲ್ಲ. ಅದಕ್ಕೆ ಅಂತವಾಗಲೀ, ಆದಿಯಾಗಲೀ, ಆಧಾರವಾಗಲೀ ಕಾಣುವುದಿಲ್ಲ. ಹೀಗೆ ದೃಢವಾಗಿ

ಬೇರೂರಿದ ಈ ಅಶ್ವತ್ಥವೃಕ್ಷವನ್ನು ದೃಢವಾದ ಅಸಂಗ ಶಸ್ತ್ರದಿಂದ ಕತ್ತರಿಸಿ ಅನಂತರ ಎಲ್ಲಿಗೆ ಹೋದರೆ ಪುನಃ ಹಿಂದಿರುಗುವುದಿಲ್ಲವೋ ಅಂತಹ ನಾರಾಯಣಾಖ್ಯನಾದ ಪರಬ್ರಹ್ಮನನ್ನು ಹುಡುಕಬೇಕು. ಯಾವ ಕಾರಣದಿಂದ ಅನಾದಿಕಾಲದಿಂದ ಉಂಟಾದ ಎಲ್ಲ ಪ್ರವೃತ್ತಿಗಳೂ ನಾರಾಯಣನಿಂದಲೇ ಆಗುತ್ತವೆಯೋ, ಅಂತಹ ನಾರಾಯಣನನ್ನೇ ಹೊಂದುತ್ತೇನೆ ಎಂದು ಮನಸ್ಸಿನಲ್ಲಿ ನಿಶ್ಚಯಿಸಿ ಅನ್ವೇಷಣೆ ಮಾಡಬೇಕು.

ನಿರ್ಮಾನಮೋಹಾ ಜಿತಸಂಗದೋಷಾ
ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ ।
ದ್ವಂದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈಃ
ಗಚ್ಛಂತ್ಯಮೂಢಾಃ ಪದಮವ್ಯಯಂ ತತ್ ॥೫॥

ಅಹಂಕಾರ ಮತ್ತು ಮೋಹವನ್ನು ತ್ಯಜಿಸಿ, ಸಂಗದೋಷಗಳನ್ನು ಜಯಿಸಿ, ಕಾಮಗಳನ್ನು ನಾಶಮಾಡಿ, ಸುಖದುಃಖರೂಪವಾದ ದ್ವಂದ್ವದಿಂದ ಮುಕ್ತರಾಗಿ ಅಧ್ಯಾತ್ಮನಿಷ್ಠರಾದವರು ಶಾಶ್ವತನಾದ ಗಮ್ಯನಾದ ಅವನನ್ನು ಹೊಂದುತ್ತಾರೆ.

ನ ತದ್ ಭಾಸಯತೇ ಸೂರ್ಯೋ ನ ಶಶಾಂಕೋ ನ ಪಾವಕಃ ।
ಯದ್ಗತ್ವಾ ನ ನಿವರ್ತಂತೇ ತದ್ ಧಾಮ ಪರಮಂ ಮಮ ॥೬॥

ಅಲ್ಲಿ ಸೂರ್ಯನಾಗಲೀ, ಚಂದ್ರನಾಗಲೀ, ಅಗ್ನಿಯಾಗಲೀ ಪ್ರಕಾಶಿಸುವುದಿಲ್ಲ. ಎಲ್ಲಿಗೆ ಹೋದರೆ ಹಿಂದಿರುಗಿ ಬರುವುದಿಲ್ಲವೋ ಅದು ನನ್ನ ಶ್ರೇಷ್ಠವಾದ ಆವಾಸಸ್ಥಾನ.

ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ ।
ಮನಃಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ ॥೭॥

ಅನಾದಿನಿತ್ಯವಾದ ನನ್ನ ಭಿನ್ನಾಂಶವೇ ಜೀವಲೋಕದಲ್ಲಿ ಜೀವ ಎಂಬ ಹೆಸರಿನಿಂದ ಇರುತ್ತದೆ. ಆ ಜೀವನಲ್ಲಿರುವ ಭಗವದ್‌ರೂಪವು ಪ್ರಕೃತಿಯಲ್ಲಿರುವ ಮನಸ್ಸೇ ಮೊದಲಾದ ಆರು ಜ್ಞಾನೇಂದ್ರಿಯಗಳನ್ನು ಜೀವ ಶರೀರದಿಂದ ಹೊರಗೆ ಎಳೆಯುತ್ತದೆ.

ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ ।
ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್ ॥೮॥

ಜಡಕ್ಕೆ ಪ್ರಭುವಾದ ಜೀವನು ಯಾವಾಗ ಶರೀರವನ್ನು ಹೊಂದುತ್ತಾನೆಯೋ ಮತ್ತು ಯಾವಾಗ ಶರೀರದಿಂದ ನಿರ್ಗಮಿಸುತ್ತಾನೆಯೋ, ಆಗ ವಾಯುವು ಪುಷ್ಪಗಳಿಂದ ಗಂಧವನ್ನು ತೆಗೆದುಕೊಂಡಂತೆ ಈ ಇಂದ್ರಿಯಗಳನ್ನು ತೆಗೆದುಕೊಂಡು ಹೋಗುತ್ತಾನೆ.

ವಿಶೇಷ ವಿವರ– ಈ ಎರಡು ಶ್ಲೋಕಗಳಲ್ಲಿ ಜೀವನವಿಷಯದಲ್ಲಿ ಅನ್ಯಯವು ಸುಲಭವಾಗಿದೆ. ಪರವಾದಿಗಳ ನಿರಾಕರಣೆಗಾಗಿ ಲಕ್ಷಾಲಂಕಾರದಲ್ಲಿ ವಾದಿರಾಜರು ಪರಮಾತ್ಮನ ವಿಷಯವಾಗಿಯೂ ಯೋಜನೆಯನ್ನು ಮಾಡುತ್ತಾರೆ. ಭಾರತದಲ್ಲಿ ಎಲ್ಲ ಕಡೆಯಲ್ಲಿಯೂ ಹತ್ತು ಅರ್ಥಗಳಿವೆ ಎಂದು ಪ್ರಾಚೀನರ ಉಕ್ತಿಯಿದೆಯಷ್ಟೆ. ಯತ್= ಯಾವಾಗ, ಶರೀರಮಾಪ್ನೋತಿ= ಜೀವನ ಉತ್ಪತ್ತಿ ಸಮಯದಲ್ಲಿ ಶರೀರವನ್ನು ಹೊಂದುತ್ತಾನೆಯೋ ಆಗ, ಜೀವಧೂತಃ= ಜೀವರಲ್ಲಿ ಸ್ನೇಹಿತನಾದ, ಮಮೈವಾಂಶಃ= ನನ್ನ ಸ್ವರೂಪಾಂಶವೇ, ಪ್ರಕೃತಿಸ್ಥಾನಿ= ಜಡಪ್ರಕೃತಿಯಲ್ಲಿರುವ, ಮನಃಷಷ್ಠಾನಿ ಇಂದ್ರಿಯಾಣಿ= ಮನಸ್ಸು ಮೊದಲಾದ ಆರು ಜ್ಞಾನೇಂದ್ರಿಯಗಳನ್ನು, ಕರ್ಷತಿ= ಜೀವ ಶರೀರದ ಕಡೆಗೆ ಎಳೆಯುತ್ತದೆ. ಆ ಇಂದ್ರಿಯಗಳನ್ನು ಪ್ರಕೃತಿಯಿಂದ ಎಳೆದು ಪರಿಣಾಮವನ್ನು ಹೊಂದುವ ಜೀವದೇಹದಲ್ಲಿ ಗರ್ಭವಾಸದ ಏದನೆಯ ತಿಂಗಳಿನಲ್ಲಿ ಚಚ್ಚುರಾದಿ ಇಂದ್ರಿಯ ಸ್ಥಾನಗಳಲ್ಲಿ ಪರಿಣಾಮಗೊಳಿಸುತ್ತದೆ. ಯಾವಾಗ ಜೀವನು ಶರೀರದಿಂದ ಉತ್ಕ್ರಾಂತಿಯನ್ನು ಹೊಂದುತ್ತಾನೆಯೋ, ಆಗಲೂ ಈಶ್ವರನು ಆಶ್ರಯಾತ್= ಪುಷ್ಪ ಮೊದಲಾದ ಆಶ್ರಯದಿಂದ, ವಾಯುಃ ಗಂಧಾನಿವ= ವಾಯುವು ಗಂಧವನ್ನು ತೆಗೆದುಕೊಳ್ಳುವಂತೆ, ಏತಾನಿ ಗೃಹೀತ್ವಾ= ಈ ಸೂಕ್ಷ್ಮರೂಪವಾದ ಇಂದ್ರಿಯಗಳನ್ನು ಲಿಂಗದೇಹದಿಂದ ತೆಗೆದುಕೊಂಡು, ಸಂಯಾತಿ= ಪ್ರಯಾಣ ಮಾಡುತ್ತಾನೆ. ಸೂಕ್ಷ್ಮರೂಪದಿಂದ ತೆಗೆದುಕೊಳ್ಳುತ್ತಾನೆಂದು ಸೂಚಿಸಲು ವಾಯುವು ಗಂಧವನ್ನು ತೆಗೆದುಕೊಂಡಂತೆ ಎಂದು ಹೇಳಿದ್ದಾರೆ. 'ಶರೀರಸ್ಥೋಽಪಿ ಕೌಂತೇಯ ನ ಕರೋತಿ ನ ಲಿಪ್ಯತೇ', 'ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ', 'ಉದಾಸೀನವದಾಸೀನಂ', 'ಅಸಕ್ತಂ ತೇಷು ಕರ್ಮಸು' ಎಂಬ ನಿರವಕಾಶ ವಚನವಿರುವುದರಿಂದ ನಾವು ಹೇಳಿದುದೇ ನಿಜವಾದ ಅರ್ಥ. ಈಶ್ವರನೇ ಜೀವನಾಗಿ ಸಂಸಾರದಲ್ಲಿ ತಿರುಗುತ್ತಾನೆ ಎಂಬ ಅರ್ಥವು ಮನಸ್ಸಿನಿಂದ ಸ್ಮರಿಸಲೂ ಯೋಗ್ಯವಲ್ಲ. ಏಕೆಂದರೆ ಸ್ಪಷ್ಟವಾಗಿ ಈಶ್ವರ ಪದದ ಪ್ರಯೋಗವಿದೆ. ಮತ್ತು ನೀರಿನ ಗುಳ್ಳೆಯ ಆಕಾರದಲ್ಲಿರುವ ಶುಕ್ಲಶೋಣಿತಗಳ ಮಿಶ್ರಣದಲ್ಲಿ ನಿಶ್ಚೇಷ್ಟವಾಗಿ ಕುಳಿತಿರುವ ಜೀವನು ಪ್ರಕೃತಿಯಲ್ಲಿರುವ ಇಂದ್ರಿಯಗಳನ್ನು ಆಕರ್ಷಣೆಯನ್ನು ಮಾಡುವ ಸಾಮರ್ಥ್ಯಹೀನನಾಗಿರುವುದರಿಂದ ಇನ್ನು ಜೀವಸ್ನೇಹಿತನಾದ ಪರಮಾತ್ಮನ ಸೃಷ್ಟಿ-ಸಂಹಾರ ಕೌಶಲವೆಂದೇ ಅರ್ಥಮಾಡಬೇಕು.

ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ ॥೯॥

ಈ ಪರಮಾತ್ಮನು ಶ್ರೋತ್ರ, ಚಕ್ಷುಸ್, ಸ್ಪರ್ಶ, ರಸನ, ಘ್ರಾಣ ಮತ್ತು ಮನಸ್ಸು ಈ ಇಂದ್ರಿಯಗಳಲ್ಲಿ ಅಧಿಷ್ಠಿತನಾಗಿ ಜೀವನ ವಿಷಯಭೋಗಕ್ಕಾಗಿ ಉಂಟಾಗುವ ಸುಖ ರಸವನ್ನು ಮಾತ್ರ ಭೋಗಿಸುತ್ತಾನೆ. ದುಃಖವನ್ನು ಎಂದೂ ಭೋಗಿಸುವುದಿಲ್ಲ.

ಉತ್ಕ್ರಾಮಂತಂ ಸ್ಥಿತಂ ವಾಪಿ ಭುಂಜಾನಂ ವಾ ಗುಣಾನ್ವಿತಮ್ ।
ವಿಮೂಢಾ ನಾನುಪಶ್ಯಂತಿ ಪಶ್ಯಂತಿ ಜ್ಞಾನಚಕ್ಷುಷಃ ॥೧೦॥

ತನ್ನ ಉತ್ಕ್ರಮಣ ಸಮಯದಲ್ಲಿ ಜೊತೆಯಲ್ಲೇ ಉತ್ಕ್ರಾಂತನಾಗುವ, ತಾನು ಇರುವ ಸಮಯದಲ್ಲಿ ಜೊತೆಯಲ್ಲೇ ಇರುವ, ತಾನು ಭೋಗಿಸುವ ಸಮಯದಲ್ಲಿ ಜೊತೆಯಲ್ಲಿಯೇ ಭೋಗಿಸುವ, ಆನಂದಾದಿ ಗುಣಯುತನಾದ ಪರಮಾತ್ಮನನ್ನು ವಿಮೂಢರಾದ ಜೀವರು ಕಾಣುವುದಿಲ್ಲ. ಜ್ಞಾನದೃಷ್ಟಿಯುಳ್ಳವರು ಕಾಣುತ್ತಾರೆ.

ಯತಂತೋ ಯೋಗಿನಶ್ಚೈನಂ ಪಶ್ಯಂತ್ಯಾತ್ಮನ್ಯವಸ್ಥಿತಮ್ ।
ಯತಂತೋಽಪ್ಯಕೃತಾತ್ಮಾನೋ ನೈನಂ ಪಶ್ಯಂತ್ಯಚೇತಸಃ ॥೧೧॥

ತಮ್ಮಲ್ಲಿಯೇ ಅವಸ್ಥಿತನಾದ ಈ ಪರಮಾತ್ಮನನ್ನು ಪ್ರಯತ್ನಶೀಲರಾದ ಯೋಗಿಗಳು ಕಾಣುತ್ತಾರೆ. ಮನೋನಿಗ್ರಹವಿಲ್ಲದ, ಸರಿಯಾದ ಜ್ಞಾನವಿಲ್ಲದ ಅಯೋಗಿಗಳು ಪ್ರಯತ್ನಪಟ್ಟರೂ ಇವನನ್ನು ನೋಡುವುದಿಲ್ಲ.

ಯದಾದಿತ್ಯಗತಂ ತೇಜೋ ಜಗದ್ ಭಾಸಯತೇಽಖಿಲಮ್ ।
ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್ ॥೧೨॥

ಸೂರ್ಯನಲ್ಲಿ ಸಮಸ್ತವಾದ ಜಗತ್ತನ್ನು ಪ್ರಕಾಶಿಸುವ ಯಾವ ತೇಜಸ್ಸಿದೆಯೋ, ಚಂದ್ರನಲ್ಲಿ ಮತ್ತು ಅಗ್ನಿಯಲ್ಲಿ ಯಾವ ತೇಜಸ್ಸಿದೆಯೋ ಅವೆಲ್ಲವನ್ನೂ ನನ್ನ ಅಧೀನವೆಂದೇ ತಿಳಿ.

ಗಾಮಾವಿಶ್ಯ ಚ ಭೂತಾನಿ ಧಾರಯಾಮ್ಯಹಮೋಜಸಾ ।
ಪುಷ್ಣಾಮಿ ಚೌಷಧೀಃ ಸರ್ವಾಃ ಸೋಮೋ ಭೂತ್ವಾ ರಸಾತ್ಮಕಃ ॥೧೩॥

ನಾನು ಭೂಮಿಯಲ್ಲಿ ಸನ್ನಿಹಿತನಾಗಿ ನನ್ನ ಸಾಮರ್ಥ್ಯದಿಂದ ಎಲ್ಲ ಜೀವರನ್ನೂ ಧರಿಸುತ್ತೇನೆ. ರಸನಿಯಾಮಕನಾದ ಚಂದ್ರನಲ್ಲಿ ಇದ್ದು, ಎಲ್ಲಾ ಓಷಧಿಗಳನ್ನೂ ಪೋಷಿಸುತ್ತೇನೆ.

ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ।
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್ ॥೧೪॥

ನಾನು ವೈಶ್ವಾನರ ನಾಮಕ ಅಗ್ನಿಯಲ್ಲಿ ಸನ್ನಿಹಿತನಾಗಿ ಜೀವರ ದೇಹದಲ್ಲಿದ್ದು, ಪ್ರಾಣಾಪಾನ ಸಹಿತನಾಗಿ ಚತುರ್ವಿಧವಾದ ಅನ್ನವನ್ನು ಪಚನ ಮಾಡುತ್ತೇನೆ.

ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟೋ
ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ ।
ವೇದೈಶ್ಚ ಸರ್ವೈರಹಮೇವ ವೇದ್ಯೋ
ವೇದಾಂತಕೃದ್ ವೇದವಿದೇವ ಚಾಹಮ್ ॥೧೫॥

ನಾನು ಎಲ್ಲರ ಹೃದಯದಲ್ಲಿ ಸನ್ನಿಹಿತನಾಗಿದ್ದೇನೆ. ಜೀವರ ಸ್ಮರಣೆ, ಜ್ಞಾನ, ವಿಸ್ಮೃತಿ ಎಲ್ಲವೂ ನನ್ನಿಂದಲೇ ಆಗುತ್ತದೆ. ನಾನು ಎಲ್ಲವೇದದಿಂದಲೂ ಪ್ರತಿಪಾದ್ಯನಾದವನು. ನಾನು ಬ್ರಹ್ಮಸೂತ್ರವನ್ನು ರಚಿಸಿದವನು. ಆದರೆ ವೇದಗಳನ್ನು ತಿಳಿದವನು ಮಾತ್ರ (ರಚಿಸಿದವನಲ್ಲ).

ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ।
ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥೧೬॥

ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥೧೭॥

ಈ ಲೋಕದಲ್ಲಿ ಕ್ಷರ, ಅಕ್ಷರ ಎಂಬ ಇಬ್ಬರು ಪುರುಷರಿದ್ದಾರೆ. ಶರೀರ ನಾಶವಾಗುವ ಕಾರಣದಿಂದ ಬ್ರಹ್ಮಾದಿ ಎಲ್ಲಾ ಚೇತನರೂ ಕ್ಷರರು. ನಿರ್ವಿಕಾರಳಾದ ಲಕ್ಷ್ಮೀದೇವಿಯು ಅಕ್ಷರಳೆನಿಸುತ್ತಾಳೆ. ಅವರಿಬ್ಬರಿಗಿಂತಲೂ ಉತ್ತಮನಾದ ಪುರುಷನು ಇನ್ನೊಬ್ಬನು. ಅವನನ್ನು ಪರಮಾತ್ಮನೆಂದು ಕರೆಯುತ್ತಾರೆ. ಅವನು ಲೋಕತ್ರಯವನ್ನು ಪ್ರವೇಶಿಸಿ

ಅದನ್ನು ಧರಿಸಿದ್ದಾನೆ. ಲೋಕತ್ರಯವು ನಾಶವನ್ನು ಹೊಂದಿದರೂ ಅವನು ನಾಶವನ್ನು ಹೊಂದುವುದಿಲ್ಲ. ಏಕೆಂದರೆ ಅವನಿಗೆ ಅಂತಹ ಸಾಮರ್ಥ್ಯವಿದೆ.

ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥೧೮॥

ಯಾವ ಕಾರಣದಿಂದ ನಾನು ಕ್ಷರವನ್ನು ಮೀರಿದ್ದೇನೆಯೋ, ಅಕ್ಷರಕ್ಕಿಂತಲೂ ಉತ್ತಮನಾಗಿದ್ದೇನೆಯೋ ಆ ಕಾರಣದಿಂದ ನನ್ನನ್ನು ಪೌರುಷೇಯ ಗ್ರಂಥಗಳಲ್ಲಿ ಮತ್ತು ವೇದಗಳಲ್ಲಿ ಪರಮಾತ್ಮನೆಂದು ಕರೆಯುತ್ತಾರೆ.

ಯೋ ಮಾಮೇವಮಸಮ್ಮೂಢೋ ಜಾನಾತಿ ಪುರುಷೋತ್ತಮಮ್ ।
ಸ ಸರ್ವವಿದ್ ಭಜತಿ ಮಾಂ ಸರ್ವಭಾವೇನ ಭಾರತ ॥೧೯॥

ಎಲೈ ಭಾರತನೇ, ಈ ನನ್ನ ಪುರುಷೋತ್ತಮತ್ವವು ವ್ಯಾವಹಾರಿಕವಾದುದಲ್ಲ. ಯಾವನು ನನ್ನನ್ನು ಈ ರೀತಿಯಲ್ಲಿ ಪುರುಷೋತ್ತಮನೆಂದು ಸಂಮೋಹವಿಲ್ಲದೆ ತಿಳಿಯುತ್ತಾನೆಯೋ, ಅವನು ಎಲ್ಲವನ್ನೂ ತಿಳಿದವನಾಗಿ ನನ್ನನ್ನು ಸರ್ವಪ್ರಕಾರದಿಂದ ಭಜಿಸಿದವನಾಗುತ್ತಾನೆ.

ವಿಶೇಷ ವಿಚಾರ– ವ್ಯಾವಹಾರಿಕವಾದುದು, ಮಾಯಾಮಯವಾದುದರಿಂದ ಅದು ಸಂಮೋಹವಾದುದು. ಅಸಮ್ಮೂಢ ಎಂಬ ಪದದಿಂದ ಪುರುಷೋತ್ತಮತ್ವಾದಿಗಳು ವ್ಯಾವಹಾರಿಕವಲ್ಲ ಎಂದು ಹೇಳಿದ್ದಾರೆ. ಜಡ-ದೇಹಾದಿಗಳು ನಶ್ವರವೆಂದೂ, ಕ್ಷರಾಕ್ಷರ ಚೇತನರನ್ನು ಭೃತ್ಯರೆಂದೂ, ತಾನು (ಕೃಷ್ಣನು) ಉತ್ತಮನೆಂದೂ ತಿಳಿಯುವ ಜ್ಞಾನಿಯು 'ಸರ್ವವಿದ್' ಎಲ್ಲವನ್ನೂ ತಿಳಿದವನು ಎಂದು ಹೇಳಿದ್ದಾರೆ. ಮಾಯಾಮಯ ವಸ್ತುವನ್ನು ತಿಳಿದವನು ಸರ್ವಜ್ಞನಲ್ಲ. ಸರ್ವಭಾವೇನ ಎಂದರೆ ಸರ್ವಪ್ರಕಾರದಿಂದ ಅಥವಾ ಸರ್ವಮನೋವೃತ್ತಿಗಳಿಂದ ಎಂದು ಅರ್ಥ. ಅಥವಾ ಹಿಂದೆ ಹೇಳಿದ ಪ್ರಮೇಯವನ್ನು ಅನುಸರಿಸಿ ಸರ್ವೋತ್ತಮತ್ವೇನ ಎಂದು ಅರ್ಥ. ಶಾಕಪಾರ್ಥಿವಾದಿ ಸಮಾಸದಲ್ಲಿ ಮಧ್ಯೆ ಪ್ರಿಯಶಬ್ದವನ್ನು ಅಧ್ಯಾಹಾರ ಮಾಡಿದಂತೆ 'ಸರ್ವಭಾವೀನ' ಎಂಬುದಕ್ಕೆ 'ಸರ್ವಗುಣ ಭಾವೇನ' ಎಂದು ಮಾಡಿ, ಸರ್ವೋತ್ತಮತ್ವ ಉಪಲಕ್ಷಿತವಾದ ಸಮಸ್ತ ಗುಣಗಳ ಇರುವಿಕೆಯಿಂದ ಎಂದು ಅರ್ಥ ಮಾಡಬೇಕು. ಸಮಸ್ತ ಗುಣಗಳು ಇವೆ ಎಂದು ಯಾವನು ಉಪಾಸನೆ ಮಾಡುತ್ತಾನೆಯೋ ಎಂದು ಅಭಿಪ್ರಾಯ. 'ಭಾವಃ ಪದಾರ್ಥೇ

ಸತ್ತಾಯಾಂ' ಎಂದು ಕೋಶವಿದೆ. ನನ್ನ ಸರ್ವೋತ್ತಮತ್ವಜ್ಞಾನವೇ ದೊಡ್ಡ ಸೇವೆ ಎಂದು ಅಭಿಪ್ರಾಯ. ಸರ್ವಭಾವೇನ ಎಂಬುದಕ್ಕೆ ನಾನೇ ಸರ್ವರೂಪವುಳ್ಳವನಾಗಿ ಎಂಬ ಅರ್ಥವು, 'ಭಜತಿ' ಎಂಬಲ್ಲಿರುವ ಸೇವಾತ್ಮಕವಾದ 'ಭಜ' ಧಾತುವಿಗೆ ವಿರುದ್ಧವಾದುದು. ಮತ್ತು ಪೂರ್ವಶ್ಲೋಕದಲ್ಲಿ ಹೇಳಿದ ಸರ್ವೋತ್ತಮತ್ವಕ್ಕೂ ವಿರುದ್ಧವಾದುದರಿಂದ ಅದು ಅನರ್ಥಕಾರಿಯಾದುದು.

ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾನಘ ।
ವಿತದ್‌ಬುದ್ಧ್ಯಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ॥೨೦॥

ಎಲೈ ಅನಘನೇ, ಇದು ಅತ್ಯಂತ ರಹಸ್ಯವಾದ ಶಾಸ್ತ್ರ. ಇದನ್ನು ನಾನು ನಿನಗೆ ಹೇಳಿದ್ದೇನೆ. ಎಲೈ ಭಾರತನೇ, ಇದನ್ನು ತಿಳಿದು ನೀನು ಅಪರೋಕ್ಷಜ್ಞಾನಿಯೂ ಮತ್ತು ಮುಕ್ತನೂ ಆಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಸಪ್ತತ್ರಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೆಂಟನೆಯ ಅಧ್ಯಾಯ

ಭಗವದ್ಗೀತಾ – ದೈವಾಸುರಸಂಪದ್ವಿಭಾಗಯೋಗ.

ಶ್ರೀಭಗವಾನ್

ಅಭಯಂ ಸತ್ತ್ವಸಂಶುದ್ಧಿರ್ಜ್ಞಾನಯೋಗವ್ಯವಸ್ಥಿತಿಃ ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್ ॥೧॥

ಅಹಿಂಸಾ ಸತ್ಯಮಕ್ರೋಧಸ್ತ್ಯಾಗಃ ಶಾಂತಿರಪೈಶುನಮ್ ।
ದಯಾ ಭೂತೇಷ್ವಲೋಲುತ್ವಂ ಮಾರ್ದವಂ ಹ್ರೀರಚಾಪಲಮ್ ॥೨॥

ತೇಜಃ ಕ್ಷಮಾ ಧೃತಿಃ ಶೌಚಮದ್ರೋಹೋ ನಾತಿಮಾನಿತಾ ।
ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ ॥೩॥

ಶ್ರೀಭಗವಾನ್– ಎಲೈ ಭಾರತನೇ, ನಿರ್ಭಯತ್ವ, ಚಿತ್ತಶುದ್ಧಿ, ಜ್ಞಾನಯೋಗದಲ್ಲಿ ಸರ್ವದಾ ಸ್ಥಿತಿ, ದಾನ, ಇಂದ್ರಿಯನಿಗ್ರಹ, ಯಜ್ಞಾಚರಣೆ, ಯೋಗಾಭ್ಯಾಸ, ತಪಸ್ಸು, ಮನೋವಾಕ್ ಕಾಯಗಳಲ್ಲಿ ಋಜುತನ, ಅಹಿಂಸೆ, ಸತ್ಯ, ಅಕ್ರೋಧ, ತ್ಯಾಗ, ಶಾಂತಿ, ಚಾಡಿ ಹೇಳದಿರುವಿಕೆ, ದಯೆ, ವಿಷಯಾಸಕ್ತಿರಾಹಿತ್ಯ, ಮೃದುತನ, ಕೆಟ್ಟ ಕೆಲಸವನ್ನು ಮಾಡುವುದಕ್ಕೆ ನಾಚಿಕೆ, ಅಚಾಂಚಲ್ಯ, ತೇಜಸ್ಸು, ಕ್ಷಮಾ, ಧೈರ್ಯ, ಶುಚಿತ್ವ, ದ್ರೋಹವನ್ನು ಮಾಡದಿರುವುದು, ಅಹಂಕಾರರಾಹಿತ್ಯ ಇವು ದೈವೀ ಸಂಪತ್ತಿನಲ್ಲಿ ಜನಿಸಿದ ಮನುಷ್ಯನಿಗೆ ಇರುತ್ತವೆ.

ದಂಭೋ ದರ್ಪೋ೯ತಿ(ಭ)ಮಾನಶ್ಚ ಕ್ರೋಧಃ ಪಾರುಷ್ಯಮೇವ ಚ ।
ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್ ॥೪॥

ಎಲೈ ಪಾರ್ಥನೇ, ಡಂಭ, ದರ್ಪ, ಅಹಂಕಾರ, ಕ್ರೋಧ, ಮಾತುಗಳಲ್ಲಿ ಒರಟುತನ, ಅಜ್ಞಾನ ಇವುಗಳು ಆಸುರೀ ಸಂಪತ್ತಿನಿಂದ ಜನಿಸಿದವನ ಲಕ್ಷಣಗಳಾಗಿರುತ್ತವೆ.

ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ ।
ಮಾ ಶುಚಃ ಸಂಪದಂ ದೈವೀಮಭಿಜಾತೋಽಸಿ ಪಾಂಡವ ॥೫॥

ಎಲೈ ಪಾಂಡವನೇ, ದೈವೀ ಸಂಪತ್ತು ಮೋಕ್ಷಕ್ಕೂ, ಆಸುರೀ ಸಂಪತ್ತು ಬಹಳ ದುಃಖ ಸಂಬಂಧರೂಪವಾದ ಅಂಧಂತಮಸ್ಸಿಗೂ ಕಾರಣವೆಂದು ತಿಳಿಯಲ್ಪಡುತ್ತದೆ. ನೀನು ವ್ಯಥೆಪಡಬೇಡ, ದೈವೀಸಂಪತ್ತಿನಲ್ಲಿ ಜನಿಸಿದ್ದೀಯೆ.

ದ್ವೌ ಭೂತಸರ್ಗೌ ಲೋಕೇಽಸ್ಮಿನ್ ದೈವ ಆಸುರ ಏವ ಚ ।
ದೈವೋ ವಿಸ್ತರಶಃ ಪ್ರೋಕ್ತ ಆಸುರಂ ಪಾರ್ಥ ಮೇ ಶೃಣು ॥೬॥

ಈ ಲೋಕದಲ್ಲಿ ಜೀವರ ಸೃಷ್ಟಿ, ದೈವ ಮತ್ತು ಆಸುರ ಎಂದು ಎರಡು ವಿಧವಾದುದು. ದೈವಸೃಷ್ಟಿಯನ್ನು ವಿಸ್ತಾರವಾಗಿ ಹೇಳಿದ್ದೇನೆ. ಎಲೈ ಪಾರ್ಥನೇ, ಆಸುರ ಸೃಷ್ಟಿಯನ್ನು ಕೇಳು.

ಪ್ರವೃತ್ತಿಂ ಚ ನಿವೃತ್ತಿಂ ಚ ಜನಾ ನ ವಿದುರಾಸುರಾಃ ।
ನ ಶೌಚಂ ನಾಪಿ ಚಾಚಾರೋ ನ ಸತ್ಯಂ ತೇಷು ವಿದ್ಯತೇ ॥೭॥

ಅಸುರ ಜನರು ವಿಹಿತವಾದುದರಲ್ಲಿ ಪ್ರವೃತ್ತಿಯನ್ನೂ, ನಿಷಿದ್ಧವಾದುದರಲ್ಲಿ ನಿವೃತ್ತಿಯನ್ನೂ ತಿಳಿಯುವುದಿಲ್ಲ. ಅವರಲ್ಲಿ ಶೌಚವಾಗಲೀ, ಒಳ್ಳೆಯ ಆಚರವಾಗಲೀ ಅಥವಾ ಸತ್ಯವಾಗಲೀ ಇರುವುದಿಲ್ಲ.

ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಮ್ ।
ಅಪರಸ್ಪರಸಂಭೂತಂ ಕಿಮನ್ಯತ್ ಕಾಮಹೈತುಕಮ್ ॥೮॥

ಅವರು ಜಗತ್ತು ಅಸತ್ಯ, ಎಂದರೆ ಮಿಥ್ಯಾಭೂತವಾದುದು, ಅಪ್ರತಿಷ್ಠ- ಕೊನೆಯಲ್ಲಿ ಉಳಿಯದಿರುವುದು, ಜ್ಞಾನಬಾಧ್ಯ; ಅನೀಶ್ವರ- ಸರ್ವಾಭೇದವನ್ನು ಹೇಳುವುದರಿಂದ ಈಶ್ವರಹಿತವಾದುದು; ಅಪರಸ್ಪರ ಸಂಭೂತ- ಮಣ್ಣಿನಿಂದ ಘಟ, ನೂಲಿನಿಂದ ಪಟ ಇತ್ಯಾದಿ ರೂಪವಾಗಿ ಪರಸ್ಪರವಾಗಿ ಕಾರ್ಯಕಾರಣಭಾವರಹಿತವಾದುದು; ಮತ್ತೇನೆಂದರೆ ಕಾಮಹೇತುಕಂ- ಕಾಮ ಎಂದರೆ ತಮ್ಮ ಮನಸ್ಸಿಗೆ ಬಂದಂತೆ ಪರಿಕಲ್ಪಿತವಾದ ಅಜ್ಞಾನ, ಆ ಅಜ್ಞಾನವೇ ಕಾರಣವಾಗಿ ಉಳ್ಳಂತಹದು, ಬ್ರಹ್ಮಾಶ್ರಿತವಾದ ಅಜ್ಞಾನವೇ ಘಟ-ಪಟಾದಿ ಜಗದ್‌ರೂಪದಿಂದ ಪರಿಣಾಮವನ್ನು ಹೊಂದುತ್ತದೆ. ಹೊರತಾಗಿ ಆಯಾ ವಸ್ತುಗಳ ಅವಯವಪರಂಪರೆಯಿಂದ ಆದಿ ಸೃಷ್ಟಿಯಲ್ಲೇ ಆಯಾ ಕಾರ್ಯಗಳು ಉಂಟಾಗುವುದಿಲ್ಲ ಎಂದು ಹೇಳುತ್ತಾರೆ. ಕಾ-ಅಮಾ ಎಂದು ಪರಚ್ಛೇದ. ಕಾ ಎಂದರೆ ಕುತ್ಸಿತವಾದ, ಅಮಾ- ಅಜ್ಞಾನವು ಯಾವುದಕ್ಕಿದೆಯೋ ಅದು ಕಾಮ ಎಂದರೆ ಶಬಲಬ್ರಹ್ಮ. ಅಂತಹ ಶಬಲಬ್ರಹ್ಮನಿಂದ ಉಂಟಾದುದು. ಅನ್ಯತ್- ಸದಸದ್ವಿಲಕ್ಷಣವಾದುದು. ಇತ್ಯಾದಿ ರೂಪದಲ್ಲಿ ಅವರು ಹೇಳುತ್ತಾರೆ.

ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋऽಲ್ಪಬುದ್ಧಯಃ ।
ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯ ಜಗತೋऽಹಿತಾಃ ॥೯॥

ಇಂತಹ ಜ್ಞಾನವನ್ನು ಹೊಂದಿ ದುಷ್ಚಿತ್ತರಾಗಿ ಅಲ್ಪಜ್ಞಾನವುಳ್ಳವರಾಗಿ, ಉಗ್ರ ಕರ್ಮವನ್ನು ಮಾಡುತ್ತಾ, ಕಲಿಯುಗಾದಿಗಳಲ್ಲಿ ಜಗತ್ತಿಗೆ ಶತ್ರುಗಳಾಗಿ ಜಗತ್ತಿನ ಅನಿಷ್ಟಕ್ಕೆ ಕಾರಣರಾಗುತ್ತಾರೆ.

ಕಾಮಮಾಶ್ರಿತ್ಯ ದುಷ್ಪೂರಂ ದಂಭಮಾನಮದಾನ್ವಿತಾಃ ।
ಮೋಹಾದ್ ಗೃಹೀತ್ವಾಽಸದ್‌ಗ್ರಾಹಾನ್ ಪ್ರವರ್ತಂತೇಽಶುಚಿವ್ರತಾಃ ॥

ಪೂರೈಸಲು ಅಸಾಧ್ಯವಾದ ಕಾಮಗಳನ್ನು ಹೊಂದಿ, ದಂಭ, ಅಹಂಕಾರ ಮತ್ತು ಮದಗಳಿಂದ ಕೂಡಿ ಮಿಥ್ಯಾಜ್ಞಾನ ಸ್ವಭಾವದಿಂದ ಪೂರ್ವಾಗ್ರಹವನ್ನು ಹೊಂದಿ ಅಶುಚಿವ್ರತವನ್ನು ಮಾಡಿ ವಿತ್ತ ಭೋಗಗಳಿಗಾಗಿ ಪ್ರವೃತ್ತಿ ಮಾಡುತ್ತಾರೆ.

ಚಿಂತಾಮಪರಿಮೇಯಾಂ ಚ ಪ್ರಲಯಾಂತಾಮುಪಾಶ್ರಿತಾಃ ।
ಕಾಮೋಪಭೋಗಪರಮಾ ಏತಾವದಿತಿ ನಿಶ್ಚಿತಾಃ ॥೧೧॥

ಪ್ರಲಯಕಾಲದವರೆಗೂ ಪರಿಮಿತಿ ಇಲ್ಲದಷ್ಟು ಚಿಂತೆಗಳನ್ನು ಹೊಂದಿ ಕಾಮೋಪಭೋಗವೇ ದೊಡ್ಡ ಪುರುಷಾರ್ಥವೆಂದು ತಿಳಿದಿರುತ್ತಾರೆ.

ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ ।
ಈಹಂತೇ ಕಾಮಭೋಗಾರ್ಥಮನ್ಯಾಯೇನಾರ್ಥಸಂಚಯಾನ್ ॥೧೨॥

ನೂರಾರು ಆಶಾ-ಪಾಶಗಳಿಂದ ಬದ್ಧರಾಗಿ ಕಾಮ-ಕ್ರೋಧ ಪರಾಯಣರಾಗಿ ಕಾಮಭೋಗಾರ್ಥವಾಗಿ ಅನ್ಯಾಯದಿಂದ ದ್ರವ್ಯವನ್ನು ಸಂಪಾದಿಸಲು ಪ್ರಯತ್ನ ಪಡುತ್ತಾರೆ.

ವಿಶೇಷ ವಿಚಾರ– ಆಶಾಪಾಶ ಬಂಧನವು ಪರಾಪರತತ್ವದ್ರೋಹ ಮೂಲವಾದುದು. ಸಾಂಸಾರಿಕ ದೋಷಗಳು ಅವರಲ್ಲಿಯೇ ಅಧಿಕವಾಗಿರುತ್ತವೆ ಎಂದು ಅಭಿಪ್ರಾಯ.

ಇದಮದ್ಯ ಮಯಾ ಲಬ್ಧಮಿದಂ ಪ್ರಾಪ್ಸ್ಯೇ ಮನೋರಥಮ್ ।
ಇದಮಸ್ತೀದಮಪಿ ಮೇ ಭವಿಷ್ಯತಿ ಪುನರ್ಧನಮ್ ॥೧೩॥

ಅಸೌ ಮಯಾ ಹತಃ ಶತ್ರುರ್ಹನಿಷ್ಯೇ ಚಾಪರಾನಪಿ ।
ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ॥೧೪॥

ಈ ದಿನ ಇದನ್ನು ನಾನು ಪಡೆದಿದ್ದೇನೆ, ಈ ಮನೋರಥವನ್ನು ಪೂರೈಸಿಕೊಳ್ಳುವೆ. ಇಷ್ಟು ಧನ ನನ್ನಲ್ಲಿದೆ, ನನಗೆ ಪುನಃ ಧನ ಉಂಟಾಗುತ್ತದೆ. ಈ ಶತ್ರುವನ್ನು ಕೊಂದಿದ್ದೇನೆ, ಬೇರೆ ಶತ್ರುಗಳನ್ನೂ ಕೊಲ್ಲುವೆನು. ನಾನೇ ಈಶ್ವರ, ನಾನೇ ಭೋಗಿ, ಸಿದ್ಧನಾದವನು, ಬಲಿಷ್ಠನಾದವನು, ಸುಖೀ.

ವಿಶೇಷ ವಿಚಾರ– ಜಗದೀಶ್ವರನು ನನಗಿಂತ ಅಭಿನ್ನನಾದವನು. ನನಗಿಂತ ಭಿನ್ನನಾದ ಜಗದೀಶ್ವರನು ಇಲ್ಲ ಎಂದು ಪರತತ್ವಪಿಷಯದಲ್ಲಿ ದ್ರೋಹವನ್ನು ಮಾಡುತ್ತಾರೆ. ಜಗತ್ತು ಮಿಥ್ಯಾ ಎಂದು ಹೇಳಿ, ಅಪರತತ್ತ್ವದ ಪಿಷಯದಲ್ಲಿಯೂ ದ್ರೋಹವನ್ನು ಮಾಡುತ್ತಾರೆ ಎಂದು ಅಭಿಪ್ರಾಯ.

ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ ।
ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ ಇತ್ಯಜ್ಞಾನವಿಮೋಹಿತಾಃ ॥೧೫॥

ನಾನು ಧನಾಢ್ಯನಾಗಿದ್ದೇನೆ. ಒಳ್ಳೆಯ ಕುಲದಲ್ಲಿ ಜನಿಸಿದ್ದೇನೆ. ನನ್ನಂತಹವರು ಯಾರಿದ್ದಾರೆ? ಯಾಗವನ್ನು ಮಾಡುವೆನು. ದಾನವನ್ನು ಮಾಡುವೆನು. ಅನಂತರ ಸುಖ ಪಡುವೆನು ಮುಂತಾದ ಅಜ್ಞಾನಗಳಿಂದ ಬಹಳವಾಗಿ ಮೋಹಿತರಾಗಿರುತ್ತಾರೆ.

ಅನೇಕಚಿತ್ತವಿಭ್ರಾಂತಾ ಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ ॥೧೬॥

ಅನೇಕ ಚಿತ್ತಭ್ರಾಂತಿಗೆ ಒಳಗಾಗಿ, ಮೋಹಜಾಲಗಳಿಂದ ಆವೃತರಾಗಿ, ಕಾಮ ಭೋಗಗಳಲ್ಲಿಯೇ ಪ್ರವೃತ್ತರಾಗಿ, ಅಶುಚಿಯಾದ ನರಕದಲ್ಲಿ ಬೀಳುತ್ತಾರೆ.

ಆತ್ಮಸಂಭಾವಿತಾಃ ಸ್ತಬ್ಧಾ ಧನಮಾನಮದಾನ್ವಿತಾಃ ।
ಯಜಂತೇ ನಾಮಯಜ್ಞೈಸ್ತೇ ದಂಭೇನಾವಿಧಿಪೂರ್ವಕಮ್ ॥೧೭॥

ತಮ್ಮನ್ನು ತಾವೇ ದೊಡ್ಡವರೆಂದು ತಿಳಿದು ಉತ್ತಮರ ಜೊತೆಯಲ್ಲಿ ಸರಿಯಾಗಿ ಮಾತನಾಡದೇ, ಧನ-ಅಹಂಕಾರ ಮತ್ತು ಮದಗಳಿಂದ ಕೂಡಿದವರಾಗಿ ಶಾಸ್ತ್ರ ವಿಹಿತವಲ್ಲದ ರೀತಿಯಲ್ಲಿ ದಂಭದಿಂದ ಅವರು ಯಜ್ಞಗಳನ್ನೂ ಮಾಡುತ್ತಾರೆ.

ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಚ ಸಂಶ್ರಿತಾಃ ।
ಮಾಮಾತ್ಮಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ ॥೧೮॥

ಅಹಂಕಾರವನ್ನೂ, ಬಲವನ್ನೂ, ದರ್ಪವನ್ನೂ, ಕಾಮ-ಕ್ರೋಧವನ್ನೂ ಆಶ್ರಯಿಸಿ ನನ್ನನ್ನು ತಮ್ಮ ದೇಹದಲ್ಲಿಯೂ, ಪರದೇಹದಲ್ಲಿಯೂ ದ್ವೇಷ ಮಾಡುತ್ತಾ ಅಸೂಯೆಯನ್ನು ಮಾಡುತ್ತಾರೆ.

ವಿಶೇಷ ವಿಚಾರ– ತನ್ನ ದೇಹದಲ್ಲಿ ಪ್ರದ್ವೇಷ ಎಂದರೆ ತಾನು ಬ್ರಹ್ಮರೂಪನಾದುದರಿಂದ ನಾನು ಅನುಭವಿಸುವ ದುಃಖವು ಹರಿಯದೇ ಎಂದು ತಮ್ಮ ದೋಷಗಳನ್ನು ಭಗವಂತನಲ್ಲಿ ಆರೋಪಿಸುವುದು. ಪರದೇಹದಲ್ಲಿ ಪ್ರದ್ವೇಷ ಎಂದರೆ ಎಲ್ಲರೂ ಬ್ರಹ್ಮರೆಂದು ತಿಳಿದು ಅವರವರ ದೋಷಗಳನ್ನು ಬ್ರಹ್ಮನಲ್ಲಿ ಆರೋಪಿಸುವುದು.

ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥೧೯॥

ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।
ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್॥೨೦।

ಅಂತಹ ಕ್ರೂರರಾದ, ನನ್ನನ್ನು ದ್ವೇಷ ಮಾಡುವ ನರಾಧಮರನ್ನು ನಾನು ಸತತವಾಗಿ ಅಶುಭವಾದ ಆಸುರ ಯೋನಿಗಳಲ್ಲಿಯೇ ಎಸೆಯುತ್ತೇನೆ. ಎಲೈ ಕೌಂತೇಯನೇ, ಆಸುರಯೋನಿಗಳನ್ನು ಹೊಂದಿದ ಆ ಮೂಢರು ಜನ್ಮಜನ್ಮಗಳಲ್ಲಿ ನನ್ನನ್ನು ಹೊಂದದೆಯೇ ಅಧೋಗತಿಯನ್ನು ಹೊಂದುತ್ತಾರೆ.

ವಿಶೇಷ ವಿಚಾರ– 'ಅಜಸ್ರಂಕ್ಷಿಪಾಮಿ' ಎಂದರೆ ಕ್ಷಿಪ ನಿರಸನೇ ಎಂದು ಧಾತುವಿರುವುದರಿಂದ ಅವರಿಗೆ ಜ್ಞಾನಾದಿ ಗುಣಗಳನ್ನು ನಿರಸನ ಮಾಡುತ್ತೇನೆ ಎಂದು ಅರ್ಥ. ಅಜಸ್ರಂಕ್ಷಿಪಾಮಿ ಆಸುರೀಷ್ವೇವ ಯೋನಿಷು ಮೂಢಾ ಜನ್ಮನಿ ಜನ್ಮನಿ' ಎಂಬ ಮಾತುಗಳನ್ನು ಹೇಳಿ ಆಸುರ ಸ್ವಭಾವವುಳ್ಳ ಜೀವರಿಗೆ ಸಂಸಾರಾವಸ್ಥೆಯಲ್ಲಿ ನಿಯಮೇನ ನೀಚಯೋನಿಗಳಲ್ಲಿಯೇ ಉತ್ಪತ್ತಿ ಮತ್ತು ಮಿಥ್ಯಾಜ್ಞಾನಾದಿ ದೋಷಗಳಿಗೆ ಜನ್ಮ ಜನ್ಮಗಳಲ್ಲಿ ಅಭಿವೃದ್ಧಿಯೇ ಉಂಟಾಗುತ್ತದೆ. ಆದ್ದರಿಂದ ಅವರು ತಮಸ್ಸಾಧನಗಳಲ್ಲಿಯೇ ನಿರತರಾಗಿರುತ್ತಾರೆ. ಅವರಿಗೆ ಮೋಕ್ಷಸಾಧನ ಪ್ರಯತ್ನವಂತೂ ಅಪ್ಪಮ ರಸದಂತಾಗುತ್ತದೆ ಎಂದು ನಿಯಮಪ್ರತಿಪಾದಕವಾದ ಈ ಮೇಲಿನ ಮೂರು ಪ್ರಯೋಗಗಳಿಂದ

ಸೂಚಿಸುತ್ತಾರೆ. 'ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್' ಎಂಬುದರಿಂದ ಮೋಕ್ಷಾಭಾವನಿಯಮವೂ ತಮಃ ಪ್ರಾಪ್ತಿ ನಿಯಮವೂ ಹೇಳಲ್ಪಡುತ್ತದೆ ಎಂದು ತಿಳಿಯಬೇಕು. ಆದ್ದರಿಂದ ಜೀವರ ಉತ್ತಮಾಧಮ ರೂಪವಾದ ದ್ವೈವಿಧ್ಯವು ಯಾವಾಗಲೂ ವ್ಯತ್ಯಾಸ ಹೊಂದುವುದಿಲ್ಲ ಎಂದು ಅಭಿಪ್ರಾಯ.

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।
ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್ ॥೨೧॥

ಕಾಮ, ಕ್ರೋಧ ಮತ್ತು ಲೋಭಗಳು ನರಕಕ್ಕೆ ಮೂರು ವಿಧವಾದ ದ್ವಾರಗಳು ಮತ್ತು ಆತ್ಮನಾಶಕ್ಕೆ ಕಾರಣವಾದವುಗಳು. ಆದ್ದರಿಂದ ಆ ಮೂರನ್ನೂ ಬಿಡತಕ್ಕದ್ದು.

ವಿಶೇಷ ವಿಚಾರ– ಕಾಮ ಎಂದರೆ ಯಾವುದೋ ಆಸೆಯಲ್ಲ. ತಮೋದ್ವಾರೈಸ್ತ್ರಿಭಿಃ ಎಂದು ಹೇಳುವುದರಿಂದ ನಾನೇ ಅಚ್ಯುತ, ನಾನೇ ಶಿವ ಎಂಬ ಮೊದಲಾದ ಭಾವಗಳಿಂದ ಜಗತ್ತಿಗೆ ತಾಯಿಯರಾದ ಅವರ ಪತ್ನಿಯರಲ್ಲಿ ಕಾಮವೇ ಕಾಮಶಬ್ದಾರ್ಥ. ಕ್ರೋಧ ಎಂದರೆ ವಿಷ್ಣು-ವೈಷ್ಣವರ ದ್ವೇಷ. ಲೋಭ ಎಂದರೆ ನಿರವಧಿಕವಾದ ಭಗವಂತನ ಆನಂದಾದಿಗುಣಗಳಲ್ಲಿ ಅದು ತಮ್ಮದಾಗಬೇಕೆಂಬ ಆಸೆ.

ಏತೈರ್ವಿಮುಕ್ತಃ ಕೌಂತೇಯ ತಮೋದ್ವಾರೈಸ್ತ್ರಿಭಿರ್ನರಃ ।
ಆಚರತ್ಯಾತ್ಮನಃ ಶ್ರೇಯಸ್ತತೋ ಯಾತಿ ಪರಾಂ ಗತಿಮ್ ॥೨೨॥

ಎಲೈ ಕೌಂತೇಯನೇ, ಈ ಮೂರು ತಮೋದ್ವಾರಗಳಿಂದ ವಿಮುಕ್ತನಾಗಿ ದೈವೀ ಸಂಪತ್ತಿನಲ್ಲಿ ಜನಿಸಿದವನು ಶ್ರೇಯಸ್ಸಾಧನವನ್ನು ಆಚರಿಸಿ ಅನಂತರ ಮೋಕ್ಷವನ್ನು ಪಡೆಯುತ್ತಾನೆ.

ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಮ್ ॥೨೩॥

ಯಾವನು ಶಾಸ್ತ್ರವಿಧಿಯನ್ನು ಉಲ್ಲಂಘಿಸಿ ತನ್ನ ಮನಸ್ಸಿಗೆ ಬಂದಂತೆ ಕರ್ಮಗಳನ್ನು ಮಾಡುತ್ತಾನೆಯೋ, ಅವನು ಯಾವ ಸಿದ್ಧಿಯನ್ನೂ ಹೊಂದುವುದಿಲ್ಲ. ಈ ಲೋಕದಲ್ಲಿ ಸುಖವನ್ನಾಗಲೀ, ಪರಲೋಕದಲ್ಲಿ ಗತಿಯನ್ನಾಗಲೀ ಹೊಂದುವುದಿಲ್ಲ.

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ॥೨೪॥

ಆದ್ದರಿಂದ ಇದು ಕರ್ತವ್ಯ, ಇದು ಅಕರ್ತವ್ಯ ಎಂಬ ವಿಷಯದಲ್ಲಿ ನಿನಗೆ ಶಾಸ್ತ್ರವೇ ಪ್ರಮಾಣವಾದುದು. ಶಾಸ್ತ್ರವು ಯಾವುದನ್ನು ವಿಧಾನ ಮಾಡಿದೆಯೋ ಅದನ್ನು ತಿಳಿದು ಅದರಂತೆ ನೀನು ಕರ್ಮವನ್ನು ಆಚರಿಸುವುದು ಯೋಗ್ಯವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಅಷ್ಟಾತ್ರಿಂಶೋऽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಪಂಚವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊಂಬತ್ತನೆಯ ಅಧ್ಯಾಯ

ಭಗವದ್ಗೀತಾ – ಶ್ರದ್ಧಾತ್ರಯವಿಭಾಗ.

ಅರ್ಜುನಃ

ಯೇ ಶಾಸ್ತ್ರವಿಧಿಮುತ್ಸೃಜ್ಯ ಯಜಂತೇ ಶ್ರದ್ಧಯಾऽನ್ವಿತಾಃ ।
ತೇಷಾಂ ನಿಷ್ಠಾ ತು ಕಾ ಕೃಷ್ಣ ಸತ್ತ್ವಮಾಹೋ ರಜಸ್ತಮಃ ॥೧॥

ಅರ್ಜುನ– ಎಲೈ ಕೃಷ್ಣನೇ, ಯಾರು ಶಾಸ್ತ್ರವಿಧಿಗಳನ್ನು ಮೀರಿ ಶ್ರದ್ಧೆಯಿಂದ ಕೂಡಿ ಭಗವದಾರಾಧನೆಯನ್ನು ಮಾಡುತ್ತಾರೆಯೋ, ಅವರ ಸ್ಥಿತಿ (ಸ್ವಭಾವವು) ಎಂತಹದು? ಸಾತ್ವಿಕವೋ, ರಾಜಸವೋ ಅಥವಾ ತಾಮಸವೋ?

ಶ್ರೀಭಗವಾನ್

ತ್ರಿವಿಧಾ ಭವತಿ ಶ್ರದ್ಧಾ ದೇಹಿನಾಂ ಸಾ ಸ್ವಭಾವಜಾ ।
ಸಾತ್ತ್ವಿಕೀ ರಾಜಸೀ ಚೈವ ತಾಮಸೀ ಚೇತಿ ತಾಂ ಶೃಣು ॥೨॥

ಶ್ರೀಭಗವಾನ್– ಜೀವರಿಗೆ ಸ್ವಾಭಾವಿಕವಾದ ಶ್ರದ್ಧೆಯು ಸಾತ್ವಿಕ, ರಾಜಸ ಮತ್ತು ತಾಮಸ ಎಂದು ಮೂರು ವಿಧವಾಗಿದೆ. ಅದನ್ನು ನೀನು ಕೇಳುವವನಾಗು.

ವಿಶೇಷ ವಿಚಾರ– ಸ್ವಾಭಾವಿಕವಾಗಿಯೇ ಜೀವರು ಸಾತ್ವಿಕಾದಿ ವಿಭಾಗವುಳ್ಳವರು. ಇಲ್ಲದಿದ್ದರೆ ದೈತ್ಯರು ತಾಮಸರು, ಮನುಷ್ಯರು ರಾಜಸರು ಮತ್ತು ದೇವತೆಗಳು ಸಾತ್ವಿಕರು ಎಂಬ ನಿಯತವಾದ ವಿಭಾಗವು ಹೇಗೆ ಕೂಡುತ್ತದೆ ಎಂದು ಅಭಿಪ್ರಾಯ.

ಸತ್ತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ ।
ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ ॥೩॥

ಎಲೈ ಭಾರತನೇ, ಉತ್ತಮ ಜೀವರಾದ ಎಲ್ಲರಿಗೂ ಶ್ರದ್ಧೆಯು, ಆ ಜೀವ ಸ್ವರೂಪಕ್ಕೆ ಅನುರೂಪವಾಗಿ ಸಾತ್ವಿಕವಾಗಿರುತ್ತದೆ. ಜೀವರು ಶ್ರದ್ಧಾಸ್ವರೂಪರೇ ಆಗಿರುತ್ತಾರೆ. ಯಾವ ಜೀವನಿಗೆ ಎಂತಹ ಶ್ರದ್ಧೆ ಇದೆಯೋ ಅವನು ಅಂತಹವನೇ ಆಗಿರುತ್ತಾನೆ.

ಯಜಂತೇ ಸಾತ್ತ್ವಿಕಾ ದೇವಾನ್ ಯಕ್ಷರಕ್ಷಾಂಸಿ ರಾಜಸಾಃ ।
ಪ್ರೇತಾನ್ ಭೂತಗಣಾಂಶ್ಚಾನ್ಯೇ ಯಜಂತೇ ತಾಮಸಾ ಜನಾಃ ॥೪॥

ಸಾತ್ವಿಕರು ದೇವತೆಗಳನ್ನೂ, ರಾಜಸರು ಯಕ್ಷ-ರಾಕ್ಷಸರನ್ನೂ, ಉಳಿದ ತಾಮಸ ಜನರು ಪ್ರೇತಗಳನ್ನೂ ಮತ್ತು ಭೂತಗಳನ್ನೂ ಪೂಜಿಸುತ್ತಾರೆ.

ಅಶಾಸ್ತ್ರವಿಹಿತಂ ಘೋರಂ ತಪ್ಯಂತೇ ಯೇ ತಪೋ ಜನಾಃ ।
ದಂಭಾಹಂಕಾರಸಂಯುಕ್ತಾಃ ಕಾಮರಾಗಬಲಾನ್ವಿತಾಃ ॥೫॥

ಕರ್ಶಯಂತಃ ಶರೀರಸ್ಥಂ ಭೂತಗ್ರಾಮಮಚೇತಸಃ ।
ಮಾಂ ಚೈವಾಂತಃಶರೀರಸ್ಥಂ ತಾನ್ ವಿದ್ಧ್ಯಾಸುರನಿಶ್ಚಯಾನ್ ॥೬॥

ಯಾರು ಶಾಸ್ತ್ರವಿಹಿತವಲ್ಲದ ರೀತಿಯಲ್ಲಿ ಘೋರ ತಪಸ್ಸನ್ನು ಮಾಡುತ್ತಾರೋ, ಕಾಮ ಮತ್ತು ರಾಗಗಳ ಬಲದಿಂದ ಕೂಡಿದವರಾಗಿ ದಂಭ ಮತ್ತು ಅಹಂಕಾರಗಳಿಂದ ಕೂಡಿ ವ್ರತ-ಉಪವಾಸಗಳಿಂದ ದೇಹವನ್ನು ಶೋಷಿಸುತ್ತಾ, ದೇಹಗಳಲ್ಲಿರುವ ಪಂಚಮಹಾಭೂತಗಳನ್ನು ಅಥವಾ ತತ್ತ್ವಾಭಿಮಾನಿ ದೇವತೆಗಳ ಸಮೂಹವನ್ನು ಮತ್ತು ದೇಹದ ಒಳಗಿರುವ ನನ್ನನ್ನೂ ವಿಹಿತವಾದ ಪ್ರಾಣಾಗ್ನಿ ಹೋತ್ರಾದಿಗಳನ್ನು ಮಾಡದೆ ಚಿತ್ತಕ್ಷೋಭಯುಕ್ತರನ್ನಾಗಿ ಮಾಡುತ್ತಾ, ಶರೀರದಲ್ಲೇ ಇರುವ ನನ್ನನ್ನು ಅಲ್ಪಗುಣ ಉಳ್ಳವನೆಂದು ಚಿಂತನೆ ಮಾಡುತ್ತಾ, ತಪಸ್ಸನ್ನು ಮಾಡುತ್ತಾರೆಯೋ ಅಂತಹವರನ್ನು ಆಸುರರು, ತಮಃಪ್ರಾಪ್ತಿಯೋಗ್ಯರು ಎಂದು ತಿಳಿ.

ಆಹಾರಸ್ತ್ವಪಿ ಸರ್ವಸ್ಯ ತ್ರಿವಿಧೋ ಭವತಿ ಪ್ರಿಯಃ ।
ಯಜ್ಞಸ್ತಪಸ್ತಥಾ ದಾನಂ ತೇಷಾಂ ಭೇದಮಿಮಂ ಶೃಣು ॥೭॥

ಎಲ್ಲಜೀವರಿಗೂ ಪ್ರಿಯವಾದ ಆಹಾರವೂ, ಯಜ್ಞ-ದಾನ-ತಪಸ್ಸುಗಳೂ ಮೂರು ವಿಧವಾಗಿರುತ್ತವೆ. ಅವುಗಳ ಈ ವಿಭಾಗವನ್ನು ಕೇಳು.

ಆಯುಃಸತ್ತ್ವಬಲಾರೋಗ್ಯಸುಖಪ್ರೀತಿವಿವರ್ಧನಾಃ ।
ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾಃ ಸಾತ್ತ್ವಿಕಪ್ರಿಯಾಃ ॥೮॥

ಆಯುಸ್ಸು, ಸಾಧುಗುಣ, ಶಕ್ತಿ, ಭೋಗಕಾಲೀನವಾದ ಸುಖ, ಇವುಗಳನ್ನು ಅಭಿವೃದ್ಧಿಪಡಿಸುವ ಮಧುರ ರಸಪ್ರಧಾನವಾದ, ಸ್ನೇಹಯುಕ್ತವಾದ, ಬಹುಕಾಲದವರೆಗೆ ಗುಣಪ್ರದವಾದ, ಮನೋಹರವಾದ ಆಹಾರಗಳು ಸಾತ್ವಿಕರಿಗೆ ಪ್ರಿಯವಾದವುಗಳು.

ಕಟ್ವಾಮ್ಲಲವಣಾತ್ಯುಷ್ಣತೀಕ್ಷ್ಣರೂಕ್ಷವಿದಾಹಿನಃ ।
ಆಹಾರಾ ರಾಜಸಸ್ಯೇಷ್ಟಾ ದುಃಖಶೋಕಾಮಯಪ್ರದಾಃ ॥೯॥

ಖಾರ, ಉಪ್ಪು, ಹುಳಿ, ಬಹಳ ಬಿಸಿ, ಉಷ್ಣತೆಯನ್ನು ಉಂಟುಮಾಡುವವು, ಶೋಷಣೆಯನ್ನು ಉಂಟುಮಾಡುವ ಆಹಾರಗಳು ರಾಜಸರಿಗೆ ಇಷ್ಟವಾದವುಗಳು. ಅವು ದುಃಖ-ಶೋಕಗಳನ್ನು, ರೋಗಗಳನ್ನು ತಂದುಕೊಡುತ್ತವೆ.

ಯಾತಯಾಮಂ ಗತರಸಂ ಪೂತಿ ಪರ್ಯುಷಿತಂ ಚ ಯತ್ ।
ಉಚ್ಛಿಷ್ಟಮಪಿ ಚಾಮೇಧ್ಯಂ ಭೋಜನಂ ತಾಮಸಪ್ರಿಯಮ್ ॥೧೦॥

ಅಡುಗೆ ಮಾಡಿ ಒಂದು ಯಾಮ ಕಳೆದ ಆಹಾರ, ರಸವನ್ನು ಕಳೆದುಕೊಂಡ ಆಹಾರ, ದುರ್ವಾಸನೆಯುಳ್ಳದ್ದು, ಹಳಸಿ ಹೋಗಿರುವುದು, ಭಾರ್ಯಾದಿಗಳ ಜೊತೆಯಲ್ಲಿ ಒಂದೇ ಪಾತ್ರೆಯಲ್ಲಿ ಊಟ ಮಾಡುವ ಉಚ್ಛಿಷ್ಟ, ಅಪವಿತ್ರವಾದ ಸೋರೆಕಾಯಿ, ಬದನೆ ಮೊದಲಾದ ಆಹಾರಗಳು ತಾಮಸರಿಗೆ ಪ್ರಿಯವಾದವುಗಳು.

ಅಫಲಾಕಾಂಕ್ಷಿಭಿರ್ಯಜ್ಞೋ ವಿಧಿದೃಷ್ಟೋ ಯ ಇಜ್ಯತೇ ।
ಯಷ್ಟವ್ಯಮೇವೇತಿ ಮನಃ ಸಮಾಧಾಯ ಸ ಸಾತ್ತ್ವಿಕಃ ॥೧೧॥

ಯಾರು ವಿಧಿಗೆ ಅನುಗುಣವಾಗಿ ನಾವು ಯಜ್ಞವನ್ನು ಮಾಡಲೇಬೇಕೆಂದು ತಿಳಿದು ಫಲಾಪೇಕ್ಷೆಯನ್ನು ತ್ಯಜಿಸಿ ಸಮಾಧಾನವುಳ್ಳ ಮನಸ್ಸಿನಿಂದ ಯಜ್ಞವನ್ನು ಮಾಡುತ್ತಾರೋ ಆ ಯಜ್ಞವು ಸಾತ್ವಿಕವಾದುದು.

ಅಭಿಸಂಧಾಯ ತು ಫಲಂ ದಂಭಾರ್ಥಮಪಿ ಚೈವ ಯತ್ ।
ಇಜ್ಯತೇ ಭರತಶ್ರೇಷ್ಠ ತಂ ಯಜ್ಞಂ ವಿದ್ಧಿ ರಾಜಸಮ್ ॥೧೨॥

ಫಲಾಪೇಕ್ಷೆಯಿಂದ ಕೂಡಿ ಅಥವಾ ದಂಭಾರ್ಥವಾಗಿ ಯಾವ ಯಜ್ಞವು ನಡೆಯುತ್ತದೆಯೋ, ಎಲೈ ಭರತಶ್ರೇಷ್ಠನೇ, ಅದನ್ನು ರಾಜಸವೆಂದು ತಿಳಿ.

ವಿಧಿಹೀನಮಸೃಷ್ಟಾನ್ನಂ ಮಂತ್ರಹೀನಮದಕ್ಷಿಣಮ್ ।
ಶ್ರದ್ಧಾವಿರಹಿತಂ ಯಜ್ಞಂ ತಾಮಸಂ ಪರಿಚಕ್ಷತೇ ॥೧೩॥

ವೇದದಲ್ಲಿ ವಿಹಿತವಲ್ಲದ, ಯಕ್ಷ-ರಾಕ್ಷಸಾದಿ ಪೂಜಾದಿಗಳು, ಅನ್ನದಾನವಿಲ್ಲದೆ, ಮಂತ್ರಯುಕ್ತವಾಗದೆ, ದಕ್ಷಿಣೆಯಿಲ್ಲದೆ, ಶ್ರದ್ಧೆಯಿಲ್ಲದೆ ಮಾಡುವ ಪೂಜೆಗಳು (ಯಜ್ಞವು) ತಾಮಸವೆನಿಸುತ್ತವೆ.

ದೇವದ್ವಿಜಗುರುಪ್ರಾಜ್ಞಪೂಜನಂ ಶೌಚಮಾರ್ಜವಮ್ ।
ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪ ಉಚ್ಯತೇ ॥೧೪॥

ದೇವ-ಬ್ರಾಹ್ಮಣ, ಗುರು ಮತ್ತು ಜ್ಞಾನಿಗಳ ಪೂಜೆ, ಅಂತರ್ಬಹಿಶುಚಿತ್ವ, ಆರ್ಜವ, ಬ್ರಹ್ಮಚರ್ಯ, ಅಹಿಂಸಾ ಇವು ದೈಹಿಕವಾದ ತಪಸ್ಸು ಎನಿಸುತ್ತವೆ.

ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್ ।
ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ ॥೧೫॥

ಇನ್ನೊಬ್ಬರಿಗೆ ಉದ್ವೇಗವನ್ನುಂಟು ಮಾಡದ, ಸತ್ಯವೂ, ಪ್ರಿಯವೂ, ಹಿತವೂ ಆದ ವಚನಗಳು ಮತ್ತು ವೇದಾಭ್ಯಾಸಾದಿಗಳು ವಾಙ್ಮಯವಾದ ತಪಸ್ಸು ಎನಿಸುತ್ತವೆ.

ಮನಃಪ್ರಸಾದಃ ಸೌಮ್ಯತ್ವಂ ಮೌನಮಾತ್ಮವಿನಿಗ್ರಹಃ ।
ಭಾವಸಂಶುದ್ಧಿರಿತ್ಯೇತತ್ ತಪೋ ಮಾನಸಮುಚ್ಯತೇ ॥೧೬॥

ಮನಸ್ಸಿನ ಪ್ರಸನ್ನತೆ, ಸೌಮ್ಯಭಾವ, ಮನನಶೀಲತೆ, ಪರಮಾತ್ಮನಲ್ಲಿ ಮನಸ್ಸನ್ನು ಇಡುವಿಕೆ, ಮನಸ್ಸಿನ ಆಸೆಗಳ ಶುದ್ಧಿ ಇದು ಮಾನಸ ತಪಸ್ಸು ಎನಿಸುತ್ತದೆ.

ಶ್ರದ್ಧಯಾ ಪರಯಾ ತಪ್ತಂ ತಪಸ್ತತ್ ತ್ರಿವಿಧಂ ನರೈಃ ।
ಅಫಲಾಕಾಂಕ್ಷಿಭಿರ್ಯುಕ್ತೈಃ ಸಾತ್ತ್ವಿಕಂ ಪರಿಚಕ್ಷತೇ ॥೧೭॥

ಫಲದ ಆಸೆಯನ್ನು ಮಾಡದೆ ಪರಮಾತ್ಮನನ್ನು ಚಿಂತಿಸುತ್ತಾ, ಶ್ರೇಷ್ಠವಾದ ಶ್ರದ್ಧೆಯಿಂದ ಮಾಡಿದ ಮಾನಸಿಕ, ವಾಚಿಕ ಮತ್ತು ಕಾಯಿಕ ತಪಸ್ಸುಗಳನ್ನು ಸಾತ್ವಿಕವೆಂದು ಹೇಳುತ್ತಾರೆ.

ಸತ್ಕಾರಮಾನಪೂಜಾರ್ಥಂ ತಪೋ ದಂಭೇನ ಚೈವ ಯತ್ ।
ಕ್ರಿಯತೇ ತದಿಹ ಪ್ರೋಕ್ತಂ ರಾಜಸಂ ಚಲಮಧ್ರುವಮ್ ॥೧೮॥

ಸತ್ಕಾರ, ಸಮ್ಮಾನ ಮತ್ತು ಪೂಜೆಯನ್ನು ಪಡೆಯುವುದಕ್ಕಾಗಿ ಅಥವಾ ದಂಭದಿಂದ ಯಾವ ತಪಸ್ಸನ್ನು ಮಾಡುತ್ತಾರೆಯೋ ಅದನ್ನು ರಾಜಸವೆನ್ನುತ್ತಾರೆ. ಅದರ ಫಲವು ಅನಿತ್ಯವಾದುದು ಮತ್ತು ಚಂಚಲವಾದುದು.

ಮೂಢಗ್ರಾಹೇಣಾತ್ಮನೋ ಯತ್ ಪೀಡಯಾ ಕ್ರಿಯತೇ ತಪಃ ।
ಪರಸ್ಯೋತ್ಸಾದನಾರ್ಥಂ ವಾ ತತ್ ತಾಮಸಮುದಾಹೃತಮ್ ॥೧೯॥

ಪಿಶಾಚಾದಿಗಳಲ್ಲಿ ದುರಾಗ್ರಹವನ್ನು ಹೊಂದಿ, ದೇಹವನ್ನು ಪೀಡಿಸಿ ಅಥವಾ ಇನ್ನೊಬ್ಬರ ವಿನಾಶಕ್ಕಾಗಿ ಮಾಡುವ ತಪಸ್ಸು ತಾಮಸವೆನಿಸುತ್ತದೆ.

ದಾತವ್ಯಮಿತಿ ಯದ್ದಾನಂ ದೀಯತೇಽನುಪಕಾರಿಣೇ ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್ ॥೨೦॥

ದಾನವನ್ನು ಮಾಡಲೇಬೇಕೆಂದು ತಿಳಿದು ತಮಗೆ ಉಪಕಾರವನ್ನು ಮಾಡದ ಸತ್ಪಾತ್ರನಿಗೆ, ಒಳ್ಳೆಯ ದೇಶ-ಕಾಲಗಳಲ್ಲಿ ಮಾಡುವ ದಾನವು ಸಾತ್ವಿಕವೆನಿಸುತ್ತದೆ.

ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ ।
ದೀಯತೇ ಚ ಪರಿಕ್ಲಿಷ್ಟಂ ತದ್ದಾನಂ ರಾಜಸಂ ಸ್ಮೃತಮ್ ॥೨೧॥

ದಾನ ತೆಗೆದುಕೊಳ್ಳುವವರಿಂದ ಪ್ರತ್ಯುಪಕಾರವನ್ನು ಬಯಸಿ ಅಥವಾ ಫಲವನ್ನು ಸಂಕಲ್ಪಿಸಿ, ಮನಃಕ್ಲೇಶಸಹಿತವಾಗಿ ಕೊಡುವ ದಾನವು ರಾಜಸವೆನಿಸುತ್ತದೆ.

ಅದೇಶಕಾಲೇ ಯದ್‌ದಾನಮಪಾತ್ರೇಭ್ಯಶ್ಚ ದೀಯತೇ ।
ಅಸತ್ಕೃತಮವಜ್ಞಾತಂ ತತ್ ತಾಮಸಮುದಾಹೃತಮ್ ॥೨೨॥

ಅನುಚಿತ ದೇಶ-ಕಾಲಗಳಲ್ಲಿ ಅಪಾತ್ರರಲ್ಲಿ ಕೊಡುವ ದಾನವು ಮತ್ತು ಸತ್ಕಾರರಹಿತವಾಗಿ ಅಥವಾ ಅವಮಾನ ಸಹಿತವಾಗಿ ಕೊಡುವ ದಾನವು ತಾಮಸವೆನಿಸುತ್ತದೆ.

ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ ।
ಬ್ರಾಹ್ಮಣಾಸ್ತೇನ ವೇದಾಶ್ಚ ಯಜ್ಞಾಶ್ಚ ವಿಹಿತಾಃ ಪುರಾ ॥೨೩॥

ಓಂ, ತತ್, ಸತ್ ಎಂಬುದು ಬ್ರಹ್ಮನ ಮೂರು ವಿಧವಾದ ನಾಮಗಳು. ಅದರಿಂದ ಬ್ರಾಹ್ಮಣರಿಗೆ ತತ್ಪೂರ್ವಕವಾಗಿಯೇ ಉಪನಯನಾದಿ ಸಂಸ್ಕಾರಗಳು ನಡೆಯುತ್ತವೆ. ವೇದಗಳು ಮತ್ತು ಯಜ್ಞಗಳು ಪ್ರವೃತ್ತವಾಗುತ್ತವೆ. ಬ್ರಹ್ಮನು ಗುಣಪೂರ್ಣನಾದ್ದರಿಂದ ಓಂ ಎಂದೂ, ವ್ಯಾಪ್ತನಾದ್ದರಿಂದ ತತ್ ಎಂದೂ, ಸದಾ ವಿದ್ಯಮಾನನೂ, ನಿರ್ದೋಷನಾದ್ದರಿಂದ ಸತ್ ಎಂದೂ ಕರೆಯಲ್ಪಡುತ್ತಾನೆ.

ತಸ್ಮಾದೋಮಿತ್ಯುದಾಹೃತ್ಯ ಯಜ್ಞದಾನತಪಃಕ್ರಿಯಾಃ ।
ಪ್ರವರ್ತಂತೇ ವಿಧಾನೋಕ್ತಾಃ ಸತತಂ ಬ್ರಹ್ಮವಾದಿನಾಮ್ ॥೨೪॥

ಆದ್ದರಿಂದ ಓಂ ಎಂದು ಉಚ್ಚಾರ ಮಾಡಿಯೇ ಶಾಸ್ತ್ರವಿಧಾನಕ್ಕೆ ಅನುಗುಣವಾದ ಬ್ರಾಹ್ಮಣರ ಯಜ್ಞ-ದಾನ-ತಪಸ್ಸು ಮುಂತಾದ ಕ್ರಿಯೆಗಳು ಯಾವಾಗಲೂ ನಡೆಯುತ್ತವೆ.

ತದಿತ್ಯನಭಿಸಂಧಾಯ ಫಲಂ ಯಜ್ಞತಪಃಕ್ರಿಯಾಃ ।
ದಾನಕ್ರಿಯಾಶ್ಚ ವಿವಿಧಾಃ ಕ್ರಿಯಂತೇ ಮೋಕ್ಷಕಾಂಕ್ಷಿಭಿಃ ॥೨೫॥

ಮೋಕ್ಷಾಕಾಂಕ್ಷಿಗಳು ಪರೋಕ್ಷನಾದ ಕಾರಣದಿಂದ ಹರಿಯನ್ನು ತತ್ ಎಂದು ಅನುಸಂಧಾನ ಮಾಡಿ, ಸ್ವರ್ಗಾದಿ ಫಲವನ್ನು ಉದ್ದೇಶಿಸದೆ ಯಜ್ಞ, ತಪಸ್ಸು ಮೊದಲಾದ ಕ್ರಿಯೆಗಳನ್ನೂ, ವಿವಿಧವಾದ ದಾನಕ್ರಿಯೆಗಳನ್ನೂ ಮಾಡುತ್ತಾರೆ.

ಸದ್ಭಾವೇ ಸಾಧುಭಾವೇ ಚ ಸದಿತ್ಯೇತತ್ ಪ್ರಯುಜ್ಯತೇ ।
ಪ್ರಶಸ್ತೇ ಕರ್ಮಣಿ ತಥಾ ಸಚ್ಛಬ್ದಃ ಪಾರ್ಥ ಯುಜ್ಯತೇ ॥೨೬॥

ಯಾವಾಗಲೂ ವಿದ್ಯಮಾನವಾದ ಕಾರಣದಿಂದ ಮತ್ತು ದೋಷರಹಿತವಾದ ಕಾರಣದಿಂದ ಬ್ರಹ್ಮನಲ್ಲಿ ಸತ್ ಎಂಬ ಶಬ್ದವು ಪ್ರವೃತ್ತವಾಗುತ್ತದೆ. ಎಲೈ ಪಾರ್ಥನೇ, ಪ್ರಶಸ್ತವಾದ ಕರ್ಮವೂ ಸಹ ಸಚ್ಛಬ್ದದಿಂದ ಹೇಳಲ್ಪಡುತ್ತದೆ.

ಯಜ್ಞೇ ತಪಸಿ ದಾನೇ ಚ ಸ್ಥಿತಿಃ ಸದಿತಿ ಚೋಚ್ಯತೇ ।
ಕರ್ಮ ಚೈವ ತದರ್ಥೀಯಂ ಸದಿತ್ಯೇವಾಭಿಧೀಯತೇ ॥೨೭॥

ಯಜ್ಞ, ತಪಸ್ಸು ಮತ್ತು ದಾನಗಳಲ್ಲಿ ನಿಷ್ಠೆಯು ಸತ್ ಎಂದು ಕರೆಸಿಕೊಳ್ಳಲ್ಪಡುತ್ತದೆ. ಯಜ್ಞಾದಿ ಅಂಗವಾದ ಪ್ರೋಕ್ಷಣ ಅವಘಾತ ಕ್ರಿಯೆಯೂ ಸಹ ಸಚ್ಛಬ್ದದಿಂದ ಹೇಳಲ್ಪಡುತ್ತದೆ.

ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತಂ ಕೃತಂ ಚ ಯತ್ ।
ಅಸದಿತ್ಯುಚ್ಯತೇ ಪಾರ್ಥ ನ ಚ ತತ್ ಪ್ರೇತ್ಯ ನೋ ಇಹ ॥೨೮॥

ಎಲೈ ಪಾರ್ಥನೇ, ಶ್ರದ್ಧೆಯಿಲ್ಲದೆ ಮಾಡಿದ ಹೋಮ, ದಾನ, ತಪಸ್ಸು ಅಥವಾ ಯಾವುದೇ ಕರ್ಮ ಅಸತ್ ಎನಿಸಿಕೊಳ್ಳುತ್ತದೆ. ಆದರಿಂದ ಈ ಲೋಕದಲ್ಲಾಗಲೀ, ಪರಲೋಕದಲ್ಲಾಗಲೀ ಯಾವ ಫಲವೂ ಇಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಏಕೋನಚತ್ವಾರಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಷಡ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಮೂವತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತನೆಯ ಅಧ್ಯಾಯ

ಭಗವದ್ಗೀತಾ – ಸಂನ್ಯಾಸಯೋಗ. ಅರ್ಜುನಪ್ರಬೋಧ.

ಅರ್ಜುನಃ

ಸಂನ್ಯಾಸಸ್ಯ ಮಹಾಬಾಹೋ ತತ್ತ್ವಮಿಚ್ಛಾಮಿ ವೇದಿತುಮ್ ।
ತ್ಯಾಗಸ್ಯ ಚ ಹೃಷೀಕೇಶ ಪೃಥಕ್ ಕೇಶಿನಿಷೂದನ ॥೧॥

ಅರ್ಜುನ– ಎಲೈ ಮಹಾಬಾಹುವೇ, ಹೃಷೀಕೇಶನೇ, ಕೇಶಿ ಸಂಹಾರಿಯೇ, ಸಂನ್ಯಾಸ ಮತ್ತು ತ್ಯಾಗಗಳ ತತ್ತ್ವವನ್ನು ನಾನು ತಿಳಿಯಲು ಇಚ್ಛಿಸುತ್ತೇನೆ.

ಶ್ರೀಭಗವಾನ್

ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ ।
ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ ॥೨॥

ಶ್ರೀಭಗವಾನ್– ಕಾಮ್ಯಕರ್ಮಗಳ ತ್ಯಾಗವನ್ನು ಸಂನ್ಯಾಸವೆಂದು ಜ್ಞಾನಿಗಳು ತಿಳಿಯುತ್ತಾರೆ. ಎಲ್ಲ ಕರ್ಮಗಳ ಫಲೋದ್ದೇಶ ತ್ಯಾಗವನ್ನು ಕರ್ಮತ್ಯಾಗವೆಂದು ವಿವೇಕಿಗಳು ಹೇಳುತ್ತಾರೆ.

ವಿಶೇಷ ವಿಚಾರ– ವೈಕಲ್ಪಿಕ ಕಾಮ್ಯಗಳಾದ ಜ್ಯೋತಿಷ್ಟೋಮಾದಿಗಳನ್ನು ಸ್ವರ್ಗಾದಿ ಫಲದ ಇಚ್ಛೆ ಇಲ್ಲದೆ ಮಾಡುವುದು ಕರ್ಮಸಂನ್ಯಾಸ. ನಿಯತಕಾಮ್ಯಗಳಾದ ಕಾರ್ಯಗಳನ್ನು ಮಾಡದೆ ಇರುವುದೇ ಕರ್ಮತ್ಯಾಗ ಎಂದೂ ಅಭಿಪ್ರಾಯ.

ತ್ಯಾಜ್ಯಂ ದೋಷವದಿತ್ಯೇಕೇ ಕರ್ಮ ಪ್ರಾಹುರ್ಮನೀಷಿಣಃ ।
ಯಜ್ಞದಾನತಪಃಕರ್ಮ ನ ತ್ಯಾಜ್ಯಮಿತಿ ಚಾಪರೇ ॥೩॥

ಕಾಮನಾ ರೂಪವಾದ ದೋಷವಿರುವುದರಿಂದ ಯಜ್ಞದಾನತಪಃ ಕರ್ಮಗಳನ್ನು ಮಾಡಬಾರದು ಎಂದು ಕೆಲವು ಜ್ಞಾನಿಗಳು ಹೇಳುತ್ತಾರೆ. ಯಜ್ಞದಾನತಪಃ ಕರ್ಮಗಳನ್ನು ಪರಿತ್ಯಾಗ ಮಾಡಬಾರದು, ಫಲಕಾಮನೆಯನ್ನು ಮಾತ್ರ ಪರಿತ್ಯಾಗ ಮಾಡಬೇಕು ಎಂದು ಇನ್ನು ಕೆಲವು ಜ್ಞಾನಿಗಳು ಹೇಳುತ್ತಾರೆ.

ನಿಶ್ಚಯಂ ಶೃಣು ಮೇ ತತ್ರ ತ್ಯಾಗೇ ಭರತಸತ್ತಮ ।
ತ್ಯಾಗೋ ಹಿ ಪುರುಷವ್ಯಾಘ್ರ ತ್ರಿವಿಧಃ ಸಂಪ್ರಕೀರ್ತಿತಃ ॥೪॥

ಎಲೈ ಭರತಶ್ರೇಷ್ಠನೇ, ತ್ಯಾಗದ ವಿಷಯದಲ್ಲಿ ಇಂತಹ ತ್ಯಾಗವನ್ನೇ ಮಾಡಬೇಕು ಎಂಬ ನನ್ನ ನಿಶ್ಚಯವನ್ನು ಕೇಳು. ಪುರುಷವ್ಯಾಘ್ರನೇ, ತ್ಯಾಗವು ಮೂರುವಿಧವಾದುದು ಎಂದು ಹೇಳಲ್ಪಡುತ್ತದೆ.

ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ।
ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥೫॥

ಯಜ್ಞ, ದಾನ ಮತ್ತು ತಪಸ್ಸುಗಳು ಜ್ಞಾನಿಗಳ ದೃಷ್ಟಿಯಲ್ಲಿ ಪವಿತ್ರವಾದವು. ಅವುಗಳನ್ನು ಪರಿತ್ಯಾಗ ಮಾಡಬಾರದು, ಮಾಡಲೇಬೇಕು.

ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ ।
ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಮ್ ॥೬॥

ಈ ಕರ್ಮಗಳನ್ನೂ ಸಹ ಫಲಾಪೇಕ್ಷಾರಹಿತವಾಗಿ ಫಲಗಳಲ್ಲಿ ಉದಾಸೀನನಾಗಿ ಮಾಡಲೇಬೇಕು ಎಂಬುದು ನನ್ನ ನಿಶ್ಚಿತವಾದ ಅಭಿಪ್ರಾಯ.

ವಿಶೇಷ ವಿಚಾರ– ಲೋಕದ ಸಾಮಾನ್ಯಜನರ ಸಂತೋಷಕ್ಕಾಗಿ ಫಲತ್ಯಾಗವನ್ನು ಮಾಡಿ ಮನಸ್ಸಿನಲ್ಲಿ ಮಾತ್ರ ಅದನ್ನೇ ಚಿಂತಿಸಿ ಯಜ್ಞಾದಿಗಳನ್ನು ಮಾಡಬಾರದು.

ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ ।
ಮೋಹಾತ್ ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ ॥೭॥

ನಿಯತವಾದ ಕರ್ಮಗಳಿಗೆ ಪರಿತ್ಯಾಗವು ಕೂಡುವುದಿಲ್ಲ. ಮೋಹದಿಂದ ಅದರ ಪರಿತ್ಯಾಗವು ತಾಮಸವೆನಿಸುತ್ತದೆ.

ವಿಶೇಷ ವಿಚಾರ– ಆದ್ದರಿಂದಲೇ ಪ್ರಾಜ್ಞರಾದವರು ಮೊದಲು ಮಲಾಪಹಾರಿ ಸ್ನಾನವನ್ನು ಮಾಡಿ, ಅನಂತರ ಶುದ್ಧಸ್ನಾನವನ್ನು ಮಾಡುತ್ತಾರೆ. ಅಥವಾ ಸಂನ್ಯಾಸಿಗಳು ನಿಷ್ಕ್ರಿಯರು ಅಥವಾ ಜ್ಞಾನಿಗಳು ಎಂಬ ಭ್ರಾಂತಿಯಿಂದ ಕೆಲವು ಸಂನ್ಯಾಸಿಗಳೂ ನಿಯತವಾದ ಗಾಯತ್ರೀ ಜಪವನ್ನು ಮಾಡದಿರುವುದು ನಿಯತಸಂನ್ಯಾಸ ಎನಿಸುತ್ತದೆ. ಅಂತಹ ಸಂನ್ಯಾಸವನ್ನು ಮಾಡಬಾರದು.

ದುಃಖಮಿತ್ಯೇವ ಯತ್ಕರ್ಮ ಕಾಯಕ್ಲೇಶಭಯಾತ್ ತ್ಯಜೇತ್ ।
ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್ ॥೮॥

ಈ ಕರ್ಮವು ದುಃಖಕರವಾದುದು ಎಂದು ಹೇಳಿ ದೇಹಕ್ಕೆ ಉಂಟಾಗುವ ಕ್ಲೇಶಕ್ಕೆ ಹೆದರಿ ಯಾವ ಕರ್ಮಗಳನ್ನು ತ್ಯಾಗ ಮಾಡುತ್ತಾನೆಯೋ ಅದನ್ನು ರಾಜಸ ತ್ಯಾಗವೆಂದು ಹೇಳುತ್ತಾರೆ. ಆ ತ್ಯಾಗದಿಂದ ತ್ಯಾಗದ ಫಲವು ಉಂಟಾಗುವುದಿಲ್ಲ.

ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇಽರ್ಜುನ ।
ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ತ್ವಿಕೋ ಮತಃ ॥೯॥

ಎಲೈ ಅರ್ಜುನನೇ, ಇದು ಮಾಡಲೇಬೇಕಾದುದು ಎಂದು ತಿಳಿದು ನಿಯತವಾದ ಕರ್ಮವನ್ನು ಫಲಾಪೇಕ್ಷೆ ಇಲ್ಲದೆ, ಫಲದಲ್ಲಿ ಸ್ನೇಹವನ್ನು ತೊರೆದು ಮಾಡುವ ತ್ಯಾಗವು ಸಾತ್ವಿಕವೆನಿಸುತ್ತದೆ.

ನ ದ್ವೇಷ್ಟ್ಯಕುಶಲಂ ಕರ್ಮ ಕುಶಲೇ ನಾನುಷಜ್ಜತೇ ।
ತ್ಯಾಗೀ ಸತ್ತ್ವಸಮಾವಿಷ್ಟೋ ಮೇಧಾವೀ ಛಿನ್ನಸಂಶಯಃ ॥೧೦॥

ಅಕುಶಲರು ಮಾಡಿದ ಕರ್ಮವನ್ನು ದ್ವೇಷಿಸದೆ ಕುಶಲಕರ್ಮಗಳಿಂದ ಉಂಟಾದ ಪುಣ್ಯಫಲದಲ್ಲಿ ಸ್ನೇಹವನ್ನು ಮಾಡದೆ ಸತ್ವ ಸಹಿತನಾಗಿ ತ್ಯಾಗವನ್ನು ಮಾಡುವವನು ಎಲ್ಲ ಸಂಶಯಗಳನ್ನೂ ಕಳೆದುಕೊಂಡು ಮೇಧಾವಿಯಾಗುತ್ತಾನೆ.

ನ ಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ ।
ಯಸ್ತು ಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೇ ॥೧೧॥

ದೇಹವನ್ನು ಧರಿಸಿದ ಯಾವನೂ ಎಲ್ಲ ಕರ್ಮಗಳನ್ನೂ ಸಂಪೂರ್ಣವಾಗಿ ಬಿಡಲು ಸಾಧ್ಯವಿಲ್ಲ. ಯಾವನು ಕರ್ಮಫಲವನ್ನು ತ್ಯಾಗ ಮಾಡುತ್ತಾನೆಯೋ ಅವನೇ ತ್ಯಾಗಿ ಎಂದು ಹೇಳಲ್ಪಡುತ್ತಾನೆ.

ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಮ್ ।
ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸಂನ್ಯಾಸಿನಾಂ ಕ್ವಚಿತ್ ॥೧೨॥

ಕರ್ಮಗಳಿಗೆ ಇಷ್ಟ-ಅನಿಷ್ಟ ಮತ್ತು ಮಿಶ್ರವಾದ ಮೂರುವಿಧವಾದ ಫಲಗಳಿವೆ. (ಮಿಶ್ರವೆಂದರೆ ಭೂಲೋಕದಲ್ಲಿ ಅನುಭವಿಸಲ್ಪಡುವ ಸುಖ-ದುಃಖಾತ್ಮಕವಾದ ಫಲ. ತ್ಯಾಗ ಮಾಡದವರಿಗೆ ಈ ಫಲಗಳು ಮರಣಾನಂತರದಲ್ಲಿ ಉಂಟಾಗುತ್ತದೆ. ಕರ್ಮ

ತ್ಯಾಗ ಮಾಡಿದವರಿಗೆ ಈ ಫಲಗಳು ಉಂಟಾಗುವುದಿಲ್ಲ. ಭಗವತ್ಪ್ರೀತಿಯೇ ಉಂಟಾಗುತ್ತದೆ).

ಪಂಚೈತಾನಿ ಮಹಾಬಾಹೋ ಕಾರಣಾನಿ ನಿಬೋಧ ಮೇ ।
ಸಾಂಖ್ಯೇ ಕೃತಾಂತೇ ಪ್ರೋಕ್ತಾನಿ ಸಿದ್ಧಯೇ ಸರ್ವಕರ್ಮಣಾಮ್ ॥೧೩॥

ಎಲೈ ಮಹಾಬಾಹುವೇ, ಯಾವುದೇ ಕಾರ್ಯವು ಸಿದ್ಧಿಸುವುದಕ್ಕೆ ಯಥಾರ್ಥ ಜ್ಞಾನಸಿದ್ಧಾಂತದಲ್ಲಿ ಐದು ಕಾರಣಗಳು ಹೇಳಲ್ಪಡುತ್ತವೆ. ಅವುಗಳನ್ನು ಕೇಳು.

ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್ ।
ವಿವಿಧಾ ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್ ॥೧೪॥

ಅಧಿಷ್ಠಾನ= ಆಶ್ರಯವಾದ ಭೂಮಿ, ಕರ್ತಾ= ಯಜಮಾನ, ಪೃಥಗ್ವಿಧಮ್ ಕರಣಂ= ವ್ರೀಹಿಯವಾದಿಗಳು, ಚೇಷ್ಟಾ= ಮಂತ್ರ ಹೋಮಾದಿ ಚೇಷ್ಟೆಗಳು, ದೈವ= ಉದ್ದೇಶ್ಯ ದೇವತೆ ಅಥವಾ ಕರ್ಮಪ್ರಯೋಜಕನಾದ ದೇವ. ಈ ಐದು ಎಲ್ಲ ಸಿದ್ಧಿಗೂ ಕಾರಣವಾಗಿರುತ್ತವೆ.

ಶರೀರವಾಙ್ಮನೋಭಿರ್ಯತ್ಕರ್ಮ ಪ್ರಾರಭತೇ ನರಃ ।
ನ್ಯಾಯ್ಯಂ ವಾ ವಿಪರೀತಂ ವಾ ಪಂಚೈತೇ ತಸ್ಯ ಹೇತವಃ ॥೧೫॥

ಶರೀರದಿಂದಾಗಲೀ, ವಾಕ್‌ನಿಂದಾಗಲೀ ಅಥವಾ ಮನಸ್ಸಿನಿಂದಾಗಲೀ ಮನುಷ್ಯನು ಯಾವ ಕರ್ಮವನ್ನು ಮಾಡಿದರೂ ಅದು ಸತ್ಕರ್ಮವಾಗಲೀ ಅಥವಾ ದುಷ್ಕರ್ಮವಾಗಲೀ ಈ ಐದು ಅದಕ್ಕೆ ಕಾರಣಗಳಾಗುತ್ತವೆ.

ತತ್ರೈವಂ ಸತಿ ಕರ್ತಾರಮಾತ್ಮಾನಂ ಕೇವಲಂ ತು ಯಃ ।
ಪಶ್ಯತ್ಯಕೃತಬುದ್ಧಿತ್ವಾನ್ನ ಸ ಪಶ್ಯತಿ ದುರ್ಮತಿಃ ॥೧೬॥

ಹೀಗಿರುವಾಗ ಯಾವನು ತನ್ನನ್ನೇ ಸ್ವತಂತ್ರ ಕರ್ತೃ ಎಂದು ತಿಳಿಯುತ್ತಾನೆಯೋ ಅವನು ಅಶಿಕ್ಷಿತಬುದ್ಧಿಯುಳ್ಳವನಾದ್ದರಿಂದ ದುರ್ಮತಿಯಾಗಿ ತತ್ತ್ವ ಜ್ಞಾನವನ್ನು ಹೊಂದುವುದಿಲ್ಲ.

ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।
ಹತ್ವಾಪಿ ಸ ಇಮಾನ್ ಲೋಕಾನ್ ನ ಹಂತಿ ನ ನಿಬಧ್ಯತೇ ॥೧೭॥

ಯಾವನು ಅಹಂಕಾರ ಶೂನ್ಯನಾಗಿರುತ್ತಾನೆಯೋ, ಬುದ್ಧಿಯು ರಾಗಾದಿಗಳಿಂದ ಕಲುಷಿತವಾಗುವುದಿಲ್ಲವೋ, ಅಂತಹವನು ಮೂರುಲೋಕಗಳನ್ನು ಕೊಂದರೂ ಅವನಿಗೆ ಅದರ ದುಷ್ಫಲವಿಲ್ಲ, ಅದರಿಂದ ಬಂಧನವೂ ಇಲ್ಲ.

ಜ್ಞಾನಂ ಜ್ಞೇಯಂ ಪರಿಜ್ಞಾತಾ ತ್ರಿವಿಧಾ ಕರ್ಮಚೋದನಾ ।
ಕರಣಂ ಕರ್ಮ ಕರ್ತೇತಿ ತ್ರಿವಿಧಃ ಕರ್ಮಸಂಗ್ರಹಃ ॥೧೮॥

ಕರ್ಮದ ವಿಷಯದಲ್ಲಿ ಈಶ್ವರ ಪ್ರೇರಣೆಯು ಜ್ಞಾನ-ಜ್ಞೇಯ-ಪರಿಜ್ಞಾತ ಎಂದು ಮೂರುವಿಧವಾದುದು. ಜ್ಞಾನವೆಂದರೆ ವಿಧಿವಿಷಯವಾದ ಜ್ಞಾನ. ಜ್ಞೇಯ ಎಂದರೆ ಪುರುಷಾರ್ಥರೂಪವಾದುದು ಅಥವಾ ಚೇಷ್ಟಾಪ್ರಯತ್ನರೂಪ ಪ್ರವೃತ್ತಿರೂಪವಾದುದು. ಪರಿಜ್ಞಾತಾ ಎಂದರೆ ಈಶ್ವರ ಸನ್ನಿಹಿತವಾದ ಜೀವರಾಶಿ. ಕರಣ, ಕರ್ಮ ಮತ್ತು ಕರ್ತೃ ಎಂದು ಕರ್ಮಕಾರಣಗಳ ಸಂಗ್ರಹವು ಮೂರುವಿಧ. ಕರಣ ಎಂದರೆ ದೇಹೇಂದ್ರಿಯಾದಿಗಳು, ಕರ್ಮ ಎಂದರೆ ಹಸ್ತಾದಿ ಚೇಷ್ಟಾ, ಕರ್ತಾ ಎಂದರೆ ಜೀವರಾಶಿ. ಇದು ಹಿಂದೆ ಹೇಳಿದ ಐದು ಕಾರಣಗಳಲ್ಲಿ ಈ ಕರ್ಮಕಾರಣ ಸಂಕ್ಷೇಪವು ಪ್ರಧಾನವಾದುದು ಎಂಬ ಅಭಿಪ್ರಾಯದಿಂದ. ಅಥವಾ ಜ್ಞಾನ ಎಂದರೆ ಕರ್ಮಕಾಂಡ ತತ್ತ್ವಾರ್ಥಜ್ಞಾನ, ಜ್ಞೇಯ ಎಂದರೆ ಜ್ಯೋತಿಷ್ಟೋಮಾದಿ ಕರ್ಮ, ಪರಿಜ್ಞಾತಾ ಎಂದರೆ ಕರ್ಮಮೀಮಾಂಸಾ ಕುಶಲನಾದ ಯಜಮಾನ ಎಂದೂ ಹೇಳಬಹುದು. ಹಾಗೆಯೇ ಕರಣ ಎಂದರೆ ಕರ್ಮದ ಆಚರಣೆ, ಕರ್ಮ ಎಂದರೆ ಜ್ಯೋತಿಷ್ಟೋಮಾದಿ ಕರ್ಮ ಮತ್ತು ಕರ್ತಾ ಎಂದರೆ ಯಜಮಾನ. ಈ ಮೂರು ರೀತಿಯಾದ ಕರ್ಮ ಸಂಗ್ರಹವೆಂದೂ ಅಭಿಪ್ರಾಯ.

ಜ್ಞಾನಂ ಕರ್ಮ ಚ ಕರ್ತಾ ಚ ತ್ರಿಧೈವ ಗುಣಭೇದತಃ ।
ಪ್ರೋಚ್ಯತೇ ಗುಣಸಂಖ್ಯಾನೇ ಯಥಾವತ್ ಶೃಣು ತಾನ್ಯಪಿ ॥೧೯॥

ಜ್ಞಾನ, ಕರ್ಮ, ಕರ್ತೃ - ಈ ಮೂರು ಅವುಗಳ ಗುಣಭೇದದಿಂದ ಮೂರು ವಿಧವಾದುದೆಂದು ಪಂಚರಾತ್ರಾಗಮದಲ್ಲಿ ಹೇಳಲ್ಪಡುತ್ತದೆ. ಅದನ್ನೂ ಸರಿಯಾಗಿ ಕೇಳುವವನಾಗು.

ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ ।
ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ತ್ವಿಕಮ್ ॥೨೦॥

ಭಿನ್ನ ಭಿನ್ನವಾದ ಸರ್ವಭೂತಗಳಲ್ಲಿ ಸ್ಥಾನಭೇದವಿದ್ದರೂ ತನ್ನಲ್ಲಿ ಭೇದರಹಿತನಾದ, ನಾಶರಹಿತನಾದ ನಾರಾಯಣರೂಪವಾದ ಪದಾರ್ಥವನ್ನು ಯಾವ ಜ್ಞಾನವು ವಿಷಯೀಕರಿಸುತ್ತದೆಯೋ ಅದನ್ನು ಸಾತ್ವಿಕ ಜ್ಞಾನವೆಂದು ತಿಳಿ.

ಪೃಥಕ್ತ್ವೇನ ತು ಯಜ್ಜ್ಞಾನಂ ನಾನಾಭಾವಾನ್ ಪೃಥಗ್ವಿಧಾನ್ ।
ವೇತ್ತಿ ಸರ್ವೇಷು ಭೂತೇಷು ತಜ್ಜ್ಞಾನಂ ವಿದ್ಧಿ ರಾಜಸಮ್ ॥೨೧॥

ಯಾವ ಜ್ಞಾನವು ಜೀವ-ಜಡಾದಿ ನಾನಾ ಪದಾರ್ಥಗಳನ್ನು ಪರಸ್ಪರ ಭೇದವುಳ್ಳದ್ದೆಂದು ವಿಷಯೀಕರಿಸುತ್ತದೆಯೋ ಆದರಂತೆ ಅವುಗಳಲ್ಲಿರುವ ಪರಮಾತ್ಮನ ರೂಪಗಳನ್ನು ವಿಷಯೀಕರಿಸುತ್ತದೆಯೋ ಆದು ಸದಸನ್ನಿಶ್ರವಾದುದರಿಂದ ರಾಜಸ ಜ್ಞಾನ.

ಯತ್ತು ಕೃತ್ಸ್ನವದೇಕಸ್ಮಿನ್ ಕಾರ್ಯೇ ಸಕ್ತಮಹೈತುಕಮ್ ।
ಅತತ್ತ್ವಾರ್ಥವದಲ್ಪಂ ಚ ತತ್ತಾಮಸಮುದಾಹೃತಮ್ ॥೨೨॥

ಯಾವ ಜ್ಞಾನವು ಅಹೇತುಕಂ ಎಂದರೆ ನಿತ್ಯಮುಕ್ತವಾದ ಕಾರಣದಿಂದ ಸಂಸಾರ ಹೇತುಭೂತವಾದ ಅವಿದ್ಯಾಕಾಮಕರ್ಮಾದಿ ರಹಿತವೋ ಅಂತಹ ಪರಬ್ರಹ್ಮನನ್ನು ಯಾವ ಜ್ಞಾನವು ಕೃತ್ಸ್ನವತ್= ಅವಿದ್ಯಾ ಕಾಮಕರ್ಮಾದಿ ಸಕಲ ದೋಷಗಳಿಗೂ ಆಶ್ರಯವಾದುದು ಎಂದೂ, ಅತತ್ತ್ವಾರ್ಥವತ್= ಮಿಥ್ಯಾಭೂತವಾದ ಕರ-ಚರಣಾದಿಗಳನ್ನು ಹೊಂದಿರುವುದೂ ಎಂದೂ, ಏಕಸ್ಮಿನ್ ಕಾರ್ಯೇ= ಜಗತ್ತಿನ ಆರೋಪಾತ್ಮಕವಾದ ಕಾರ್ಯದಲ್ಲಿ, ಸಕ್ತಂ= ಆಸಕ್ತವೆಂದೂ, ಅಲ್ಪಂ= ತುಚ್ಛ ಜೀವಾಭಿನ್ನವಾದುದೆಂದೂ ವಿಷಯೀಕರಿಸುತ್ತದೆಯೋ ಆ ಜ್ಞಾನವು ತಾಮಸವೆನಿಸುತ್ತದೆ.

ನಿಯತಂ ಸಂಗರಹಿತಮರಾಗದ್ವೇಷತಃ ಕೃತಮ್ ।
ಅಫಲಪ್ರೇಪ್ಸುನಾ ಕರ್ಮ ಯತ್ ತತ್ ಸಾತ್ತ್ವಿಕಮುಚ್ಯತೇ ॥೨೩॥

ನಿಯತವಾದ, ಫಲದಲ್ಲಿ ಸ್ನೇಹರಹಿತವಾದ, ರಾಗ-ದ್ವೇಷರಹಿತವಾದ, ಫಲಾಪೇಕ್ಷಾ ರಹಿತವಾಗಿ ಮಾಡಿದ ಕರ್ಮವು ಸಾತ್ವಿಕವೆನಿಸುತ್ತದೆ.

ಯತ್ತು ಕಾಮೇಪ್ಸುನಾ ಕರ್ಮ ಸಾಹಂಕಾರೇಣ ವಾ ಪುನಃ ।
ಕ್ರಿಯತೇ ಬಹುಲಾಯಾಸಂ ತದ್ರಾಜಸಮುದಾಹೃತಮ್ ॥೨೪॥

ಯಾವ ಕರ್ಮವು ಫಲಾಪೇಕ್ಷೆಯಿಂದ ಅಥವಾ ಅಹಂಕಾರದಿಂದ ಮತ್ತು ಬಹಳ ಪ್ರಯಾಸದಿಂದ ಮಾಡಲ್ಪಡುತ್ತದೆಯೋ ಅದು ರಾಜಸವೆನಿಸುತ್ತದೆ.

ಅನುಬಂಧಂ ಕ್ಷಯಂ ಹಿಂಸಾಮನವೇಕ್ಷ್ಯ ಚ ಪೌರುಷಮ್ ।
ಮೋಹಾದಾರಭ್ಯತೇ ಕರ್ಮ ಯತ್ ತತ್ ತಾಮಸಮುಚ್ಯತೇ ॥೨೫॥

ಕರ್ಮದ ಫಲವನ್ನೂ, ಕರ್ಮದಿಂದ ಉಂಟಾಗುವ ಕ್ಷಯವನ್ನೂ, ಹಿಂಸೆಯನ್ನೂ, ತನ್ನ ಸಾಮರ್ಥ್ಯವನ್ನೂ ಗಮನಿಸದೆ ಮೋಹದಿಂದ ಪ್ರಾರಂಭಿಸುವ ಕರ್ಮವು ತಾಮಸವೆನಿಸುತ್ತದೆ. ಸುಂದೋಪಸುಂದರು ಪರಸ್ಪರ ಸ್ನೇಹವನ್ನು ಗಮನಿಸಲಿಲ್ಲ. ಭಸ್ಮಾಸುರನು ವರವನ್ನು ಕೊಟ್ಟ ಈಶ್ವರಸ್ನೇಹವನ್ನು ಗಮನಿಸಲಿಲ್ಲ. ಹಿರಣ್ಯಾಕ್ಷನು ಲೋಕದ ಕ್ಷಯವನ್ನೂ, ಜರಾಸಂಧನು ಪ್ರಾಣಹಿಂಸೆಯನ್ನೂ, ದುರ್ಯೋಧನನು ತನ್ನ ಸಾಮರ್ಥ್ಯವನ್ನೂ ಗಮನಿಸದೆ ಕಾರ್ಯಗಳನ್ನು ಆರಂಭಿಸಿದರು. ಅವೆಲ್ಲವೂ ತಾಮಸ ಕರ್ಮ ಎಂದು ಅಭಿಪ್ರಾಯ.

ಮುಕ್ತಸಂಗೋಽನಹಂವಾದೀ ಧೃತ್ಯುತ್ಸಾಹಸಮನ್ವಿತಃ ।
ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ ಕರ್ತಾ ಸಾತ್ತ್ವಿಕ ಉಚ್ಯತೇ ॥೨೬॥

ಫಲಸ್ನೇಹರಹಿತನಾಗಿ ತನ್ನನ್ನು ತಾನು ಹೊಗಳಿಕೊಳ್ಳದ ಧೈರ್ಯ ಮತ್ತು ಉತ್ಸಾಹಗಳಿಂದ ಕೂಡಿ, ಕರ್ಮದ ಸಿದ್ಧಿ ಮತ್ತು ಅಸಿದ್ಧಿಗಳಲ್ಲಿ ನಿರ್ವಿಕಾರನಾಗಿ ಕರ್ಮವನ್ನು ಮಾಡುವವನು ಸಾತ್ವಿಕನೆನಿಸುತ್ತಾನೆ.

ರಾಗೀ ಕರ್ಮಫಲಪ್ರೇಪ್ಸುರ್ಲುಬ್ಧೋ ಹಿಂಸಾತ್ಮಕೋಽಶುಚಿಃ ।
ಹರ್ಷಶೋಕಾನ್ವಿತಃ ಕರ್ತಾ ರಾಜಸಃ ಪರಿಕೀರ್ತಿತಃ ॥೨೭॥

ಕರ್ಮದ ಫಲದಲ್ಲಿ ಸ್ನೇಹವನ್ನು ಹೊಂದಿ ಆ ಫಲವನ್ನು ಬಯಸಿ, ಲೋಭವುಳ್ಳವನಾಗಿ ಹಿಂಸಾತ್ಮಕನಾಗಿ, ಅಶುಚಿಯಾಗಿ ಕರ್ಮಫಲವು ಸಿದ್ಧವಾದರೆ ಹರ್ಷವನ್ನೂ, ಸಿದ್ಧವಾಗದಿದ್ದರೆ ಶೋಕವನ್ನೂ ಹೊಂದುವ ಕರ್ತೃವು ರಾಜಸನೆನಿಸುತ್ತಾನೆ.

ಅಯುಕ್ತಃ ಪ್ರಾಕೃತಃ ಸ್ತಬ್ಧಃ ಶಠೋ ನೈಕೃತಿಕೋऽಲಸಃ ।
ವಿಷಾದೀ ದೀರ್ಘಸೂತ್ರೀ ಚ ಕರ್ತಾ ತಾಮಸ ಉಚ್ಯತೇ ॥೨೮॥

ವಿವೇಕಗಳ ಜೊತೆಯಲ್ಲಿ ಸೇರದೆ ಪ್ರಕೃತಿಯಿಂದ ಬದ್ಧನಾಗಿ, ಸ್ತಬ್ಧನಾಗಿ, ಗೂಢದ್ವೇಷವನ್ನು ಹೊಂದಿ, ಕಪಟನಾಗಿ, ಆಲಸ್ಯವನ್ನು ಹೊಂದಿ, ವಿಷಾದ ಪಡುತ್ತಾ, ಇನ್ನೊಬ್ಬರ ದೋಷವನ್ನು ಬಹುಕಾಲ ಎಣಿಸುವ ಕರ್ತೃವು ತಾಮಸನೆನಿಸುತ್ತಾನೆ.

ಬುದ್ಧೇರ್ಭೇದಂ ಧೃತೇಶ್ಚೈವ ಗುಣತಸ್ತ್ರಿವಿಧಂ ಶೃಣು ।
ಪ್ರೋಚ್ಯಮಾನಮಶೇಷೇಣ ಪೃಥಕ್ತ್ವೇನ ಧನಂಜಯ ॥೨೯॥

ಎಲೈ ಧನಂಜಯನೇ, ಬುದ್ಧಿ ಮತ್ತು ಧೈರ್ಯದ ಭೇದಗಳನ್ನು ಅವುಗಳ ಗುಣವಿಭಾಗದಿಂದ ಬಿಡಿಬಿಡಿಯಾಗಿ ಹೇಳುತ್ತೇನೆ. ಅದನ್ನು ಪೂರ್ಣವಾಗಿ ಕೇಳು.

ಪ್ರವೃತ್ತಿಂ ಚ ನಿವೃತ್ತಿಂ ಚ ಕಾರ್ಯಾಕಾರ್ಯೇ ಭಯಾಭಯೇ ।
ಬಂಧಂ ಮೋಕ್ಷಂ ಚ ಯಾ ವೇತ್ತಿ ಬುದ್ಧಿಃ ಸಾ ಪಾರ್ಥ ಸಾತ್ತ್ವಿಕೀ ॥೩೦॥

ಎಲೈ ಪಾರ್ಥನೇ, ಮೂಲಪ್ರಕೃತಿಯನ್ನೂ, ಅದರ ವಿಕಾರ ಅಥವಾ ಜಗತ್ತನ್ನೂ, ಕಾರ್ಯ-ಅಕಾರ್ಯಗಳನ್ನೂ, ಭಯ-ಅಭಯಗಳನ್ನೂ, ಬಂಧ-ಮೋಕ್ಷಗಳನ್ನೂ ತಿಳಿಯುವ ಬುದ್ಧಿಯು ಸಾತ್ವಿಕವೆನಿಸುತ್ತದೆ.

ಯಯಾ ಧರ್ಮಮಧರ್ಮಂ ಚ ಕಾರ್ಯಂ ಚಾಕಾರ್ಯಮೇವ ಚ ।
ಅಯಥಾವತ್ ಪ್ರಜಾನಾತಿ ಬುದ್ಧಿಃ ಸಾ ಪಾರ್ಥ ರಾಜಸೀ ॥೩೧॥

ಯಾವ ಬುದ್ಧಿಯು ಧರ್ಮಾಧರ್ಮಗಳನ್ನೂ, ಕಾರ್ಯಾಕಾರ್ಯಗಳನ್ನೂ ಸರಿಯಾಗಿ ತಿಳಿಯುವುದಿಲ್ಲವೋ ಅಥವಾ ಸಂಸಾರಮಗ್ನವಾದ ಕಾರಣದಿಂದ ತಿಳಿಯುವ ಪ್ರಯತ್ನವನ್ನೇ ಮಾಡುವುದಿಲ್ಲವೋ, ಎಲೈ ಪಾರ್ಥನೇ, ಆ ಬುದ್ಧಿಯು ರಾಜಸವೆನಿಸುತ್ತದೆ.

ಅಧರ್ಮಂ ಧರ್ಮಮಿತಿ ಯಾ ಮನ್ಯತೇ ತಮಸಾऽऽವೃತಾ ।
ಸರ್ವಾರ್ಥಾನ್ ವಿಪರೀತಾಂಶ್ಚ ಬುದ್ಧಿಃ ಸಾ ಪಾರ್ಥ ತಾಮಸೀ ॥೩೨॥

ತಮೋಗುಣದಿಂದ ಆವೃತವಾಗಿ ಯಾವ ಬುದ್ಧಿಯು ಅಧರ್ಮವನ್ನು ಧರ್ಮವೆಂದೂ ಮತ್ತು ಎಲ್ಲವನ್ನೂ ವಿಪರೀತವಾಗಿ ತಿಳಿಯುತ್ತದೆಯೋ ಎಲೈ ಪಾರ್ಥನೇ, ಅದು ತಾಮಸವಾದ ಬುದ್ಧಿ.

ಧೃತ್ಯಾ ಯಯಾ ಧಾರಯತೇ ಮನಃಪ್ರಾಣೇಂದ್ರಿಯಕ್ರಿಯಾಃ ।
ಯೋಗೇನಾವ್ಯಭಿಚಾರಿಣ್ಯಾ ಧೃತಿಃ ಸಾ ಪಾರ್ಥ ಸಾತ್ತ್ವಿಕೀ ॥೩೩॥

ಎಲೈ ಪಾರ್ಥನೇ, ಯಾವ ಧಾರಣೆಯು (ಧೈರ್ಯವು) ಮನಸ್ಸು, ಪ್ರಾಣೇಂದ್ರಿಯ ಕ್ರಿಯೆಗಳು ಎಲ್ಲವನ್ನೂ ಅವ್ಯಭಚರಿತವಾದ ಯೋಗದಿಂದ ಧರಿಸುತ್ತದೆಯೋ ಆ ಧಾರಣೆಯು ಸಾತ್ತಿಕವಾದುದು.

ಯಯಾ ತು ಧರ್ಮಕಾಮಾರ್ಥಾನ್ ಧೃತ್ಯಾ ಧಾರಯತೇऽರ್ಜುನ ।
ಪ್ರಸಂಗೇನ ಫಲಾಕಾಂಕ್ಷೀ ಧೃತಿಃ ಸಾ ಪಾರ್ಥ ರಾಜಸೀ ॥೩೪॥

ಯಾವ ಧಾರಣೆಯು ಧರ್ಮಾರ್ಥಕಾಮಗಳನ್ನು ಧರಿಸುತ್ತದೆಯೋ, ಬಹಳ ಆಸೆಯಿಂದ ಫಲವನ್ನು ಬಯಸುತ್ತದೆಯೋ ಆ ಧಾರಣೆಯು ಎಲೈ ಅರ್ಜುನನೇ, ರಾಜಸವಾದುದು.

ಯಯಾ ಸ್ವಪ್ನಂ ಭಯಂ ಶೋಕಂ ವಿಷಾದಂ ಮದಮೇವ ಚ ।
ನ ವಿಮುಂಚತಿ ದುರ್ಮೇಧಾ ಧೃತಿಃ ಸಾ ಪಾರ್ಥ ತಾಮಸೀ ॥೩೫॥

ದುರ್ಬುದ್ಧಿಯುಳ್ಳ ಯಾವನು ಯಾವ ಧಾರಣೆಯಿಂದ ಸ್ವಪ್ನ, ಭಯ, ಶೋಕ, ವಿಷಾದ, ಮದಗಳನ್ನು ಪರಿತ್ಯಾಗ ಮಾಡುವುದಿಲ್ಲವೋ ಎಲೈ ಪಾರ್ಥನೇ, ಆ ಧಾರಣೆಯು ತಾಮಸವಾದುದು.

ಸುಖಂ ತ್ವಿದಾನೀಂ ತ್ರಿವಿಧಂ ಶೃಣು ಮೇ ಭರತರ್ಷಭ ।
ಅಭ್ಯಾಸಾದ್ ರಮತೇ ಯತ್ರ ದುಃಖಾಂತಂ ಚ ನಿಗಚ್ಛತಿ ॥೩೬॥

ಎಲೈ ಭರತಶ್ರೇಷ್ಠನೇ, ಎಲ್ಲಿ ಅಭ್ಯಾಸದಿಂದ ಪುನಃ ಪುನಃ ಸಂತೋಷ ಪಡುತ್ತಾನೆಯೋ, ದುಃಖದ ಪರಿಹಾರವನ್ನು ಹೊಂದುತ್ತಾನೆಯೋ, ಅಂತಹ ಮೂರುವಿಧವಾದ ಸುಖವನ್ನು ಕೇಳುವವನಾಗು.

ಯತ್ತದಗ್ರೇ ವಿಷಮಿವ ಪರಿಣಾಮೇऽಮೃತೋಪಮಮ್ ।
ತತ್ಸುಖಂ ಸಾತ್ತ್ವಿಕಂ ಪ್ರೋಕ್ತಮಾತ್ಮಬುದ್ಧಿಪ್ರಸಾದಜಮ್ ॥೩೭॥

ಯಾವ ಸುಖವು ಮೊದಲು ವಿಷದಂತೆ ಕಹಿಯಾಗಿಯೂ, ಪರಿಣಾಮದಲ್ಲಿ ಅಮೃತದಂತೆ ಮಧುರವಾಗಿಯೂ ಇದ್ದು ವಿಷ್ಣುವಿನ ಅನುಗ್ರಹದಿಂದ ಮತ್ತು ಬುದ್ಧಿಯ ಪ್ರಸನ್ನತೆಯಿಂದ ಉಂಟಾಗಿದೆಯೋ ಆ ಸುಖವು ಸಾತ್ವಿಕವಾದುದು.

ವಿಷಯೇಂದ್ರಿಯಸಂಯೋಗಾತ್ ಯತ್ ತದಗ್ರೇऽಮೃತೋಪಮಮ್ ।
ಪರಿಣಾಮೇ ವಿಷಮಿವ ತತ್ಸುಖಂ ರಾಜಸಂ ಸ್ಮೃತಮ್ ॥೩೮॥

ವಿಷಯೇಂದ್ರಿಯ ಸಂಪರ್ಕದಿಂದ ಯಾವುದು ಮೊದಲು ಮಧುರವಾಗಿ ಕಾಣುತ್ತದೆಯೋ, ಪರಿಣಾಮದಲ್ಲಿ ವಿಷದಂತೆ ಕೇಡನ್ನು ಉಂಟುಮಾಡುತ್ತದೆಯೋ ಅದು ರಾಜಸವಾದ ಸುಖ.

ಯದಗ್ರೇ ಚಾನುಬಂಧೇ ಚ ಸುಖಂ ಮೋಹನಮಾತ್ಮನಃ ।
ನಿದ್ರಾಲಸ್ಯಪ್ರಮಾದೋತ್ಥಂ ತತ್ ತಾಮಸಮುದಾಹೃತಮ್ ॥೩೯॥

ಯಾವ ಸುಖವು ಅನುಭವಿಸುವಾಗಲೂ ಮತ್ತು ಪರಿಣಾಮದಲ್ಲಿಯೂ ಜೀವನಿಗೆ ಮೋಹವನ್ನು ಉಂಟುಮಾಡುತ್ತವೆಯೋ, ನಿದ್ರೆ-ಆಲಸ್ಯ-ಪ್ರಮಾದಗಳಿಂದ ಉಂಟಾಗುತ್ತವೆಯೋ ಅಂತಹ ಸುಖವು ತಾಮಸವಾದುದು.

ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾ ಪುನಃ ।
ಸತ್ತ್ವಂ ಪ್ರಕೃತಿಜೈರ್ಮುಕ್ತಂ ಯದೇಭಿಃ ಸ್ಯಾತ್ತ್ರಿಭಿರ್ಗುಣೈಃ ॥೪೦॥

ಭೂಮಿಯಲ್ಲಾಗಲೀ, ಸ್ವರ್ಗದಲ್ಲಾಗಲೀ, ದೇವತೆಗಳಲ್ಲಾಗಲೀ ಈ ಪ್ರಕೃತಿಯ ಮೂರು ಗುಣಗಳಿಂದ ರಹಿತವಾದ ವಸ್ತುವು ಯಾವುದೂ ಇಲ್ಲ.

ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ ॥೪೧॥

ಎಲೈ ಪರಂತಪನೇ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಿಗೆ ಅವರ ಸ್ವಭಾವಕ್ಕೆ ಅನುಗುಣವಾಗಿ ಕರ್ಮಗಳು ಭಿನ್ನ ಭಿನ್ನವಾಗಿವೆ.

ಶಮೋ ದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಮ್ ॥೪೨॥

ಶಮ, ದಮ, ತಪಸ್ಸು, ಶೌಚ, ಕ್ಷಮೆ, ಆರ್ಜವ, ಜ್ಞಾನ, ವಿಜ್ಞಾನ, ಆಸ್ತಿಕ್ಯ ಇದೆಲ್ಲವೂ ಸ್ವಾಭಾವಿಕವಾದ ಬ್ರಾಹ್ಮಣ ಕರ್ಮಗಳು.

ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಮ್ ।
ದಾನಮೀಶ್ವರಭಾವಶ್ಚ ಕ್ಷತ್ರಕರ್ಮ ಸ್ವಭಾವಜಮ್ ॥೪೩॥

ಶೌರ್ಯ, ತೇಜಸ್ಸು, ಧೈರ್ಯ, ದಕ್ಷತೆ, ಯುದ್ಧದಲ್ಲಿ ಹಿಂದಿರುಗದಿರುವಿಕೆ, ದಾನ ದುಷ್ಟರನ್ನು ದಂಡಿಸುವಿಕೆ (ತಾನು ಸಮರ್ಥನೆಂಬ ಬುದ್ಧಿ) ಇದು ಕ್ಷತ್ರಿಯರಿಗೆ ಸ್ವಾಭಾವಿಕವಾದ ಕರ್ಮ.

ಕೃಷಿಗೋರಕ್ಷವಾಣಿಜ್ಯಂ ವೈಶ್ಯಕರ್ಮ ಸ್ವಭಾವಜಮ್ ।
ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಮ್ ॥೪೪॥

ಕೃಷಿ, ಗೋರಕ್ಷ ಮತ್ತು ವಾಣಿಜ್ಯ ಇದು ವೈಶ್ಯರಿಗೆ ಸ್ವಾಭಾವಿಕವಾದ ಕರ್ಮಗಳು. ಪರಿಚರ್ಯೆಯು ಶೂದ್ರರಿಗೆ ಸ್ವಾಭಾವಿಕವಾದ ಕರ್ಮ.

ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ।
ಸ್ವಕರ್ಮನಿರತಃ ಸಿದ್ಧಿಂ ಯಥಾ ವಿಂದತಿ ತತ್ ಶೃಣು ॥೪೫॥

ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾದವರು ಒಳ್ಳೆಯ ಸಿದ್ಧಿಯನ್ನು ಪಡೆಯುತ್ತಾರೆ. ತಮ್ಮ ಕರ್ಮದಲ್ಲಿ ನಿರತನಾದವನು ಹೇಗೆ ಸಿದ್ಧಿಯನ್ನು ಪಡೆಯುತ್ತಾನೆ ಎಂದು ಕೇಳು.

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥೪೬॥

ಯಾವ ಪರಮಾತ್ಮನಿಂದ ಎಲ್ಲ ಪ್ರಾಣಿಗಳಿಗೂ ಪ್ರವೃತ್ತಿ ಉಂಟಾಗುತ್ತದೆಯೋ, ಯಾವನು ಈ ಜಗತ್ತೆಲ್ಲವನ್ನೂ ವ್ಯಾಪಿಸಿದ್ದಾನೆಯೋ ಅಂತಹ ಪರಮಾತ್ಮನನ್ನು ತನ್ನ ಕರ್ಮದಿಂದ ಅರ್ಚಿಸುವ ಮನುಷ್ಯನು ಸಿದ್ಧಿಯನ್ನು ಪಡೆಯುತ್ತಾನೆ.

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಭಾವನಿಯತಂ ಕರ್ಮ ಕುರ್ವನ್ ನಾಪ್ನೋತಿ ಕಿಲ್ಬಿಷಮ್ ॥೪೭॥

ಅಂಗವಿಕಲವಾಗಿ ಅನುಷ್ಠಾನ ಮಾಡಿದ ಸ್ವಧರ್ಮವು ಸರ್ವಾಂಗಸಹಿತವಾಗಿ ಅನುಷ್ಠಾನ ಮಾಡಿದ ಪರಧರ್ಮಕ್ಕಿಂತ ಶ್ರೇಷ್ಠವಾದುದು. ತನ್ನ ಸ್ವಭಾವಕ್ಕೆ ನಿಯತವಾದ ಕರ್ಮವನ್ನು ಮಾಡುವವನು ಪಾಪಕ್ಕೆ ಗುರಿಯಾಗುವುದಿಲ್ಲ.

ಸಹಜಂ ಕರ್ಮ ಕೌಂತೇಯ ಸದೋಷಮಪಿ ನ ತ್ಯಜೇತ್ ।
ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ ॥೪೮॥

ಕೌಂತೇಯನೇ, ಕರ್ಮವು ಸಹಜವಾದುದು. ಅದು ದೋಷದಿಂದ ಕೂಡಿದ್ದರೂ ಅದನ್ನು ಬಿಡಬಾರದು. ಅಗ್ನಿಯು ಧೂಮದಿಂದ ಆವೃತವಾದಂತೆ ಎಲ್ಲ ಕರ್ಮದ ಉಪಕ್ರಮಗಳು ದೋಷದಿಂದ ಕೂಡಿರುತ್ತವೆ.

ಅಸಕ್ತಬುದ್ಧಿಃ ಸರ್ವತ್ರ ಜಿತಾತ್ಮಾ ವಿಗತಸ್ಪೃಹಃ ।
ನೈಷ್ಕರ್ಮ್ಯಸಿದ್ಧಿಂ ಪರಮಾಂ ಸಂನ್ಯಾಸೇನಾಧಿಗಚ್ಛತಿ ॥೪೯॥

ಎಲ್ಲ ವಿಷಯಗಳಲ್ಲಿಯೂ ಸ್ನೇಹವನ್ನು ತೊರೆದು ಮನೋಜಯವನ್ನು ಹೊಂದಿ, ಕರ್ಮದ ಫಲದಲ್ಲಿ ಆಸೆಯನ್ನು ಮಾಡದೆ, ಕರ್ಮವನ್ನು ಹರಿಸಮರ್ಪಣೆ ಮಾಡುವುದರಿಂದ ಶ್ರೇಷ್ಠವಾದ ನೈಷ್ಕರ್ಮ್ಯಸಿದ್ಧಿಯನ್ನು ಹೊಂದುತ್ತಾನೆ.

ಸಿದ್ಧಿಂ ಪ್ರಾಪ್ತೋ ಯಥಾ ಬ್ರಹ್ಮ ತಥಾಪ್ನೋತಿ ನಿಬೋಧ ಮೇ ।
ಸಮಾಸೇನೈವ ಕೌಂತೇಯ ನಿಷ್ಠಾ ಜ್ಞಾನಸ್ಯ ಯಾ ಪರಾ ॥೫೦॥

ಎಲೈ ಕೌಂತೇಯನೇ, ಅಂತಹ ಸಿದ್ಧಿಯನ್ನು ಪಡೆದವನು ಹೇಗೆ ಬ್ರಹ್ಮನನ್ನು ಹೊಂದುತ್ತಾನೆ ಎಂಬುದನ್ನು ನನ್ನಿಂದ ತಿಳಿ. ಹಾಗೆಯೇ ಜ್ಞಾನದ ಪರಾಕಾಷ್ಠೆ ಎಂಬುದು ಏನು ಎಂಬುದನ್ನೂ ಸಂಕ್ಷೇಪವಾಗಿ ತಿಳಿ.

ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾSSತ್ಮಾನಂ ನಿಯಮ್ಯ ಚ ।
ಶಬ್ದಾದೀನ್ ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ ॥೫೧॥

ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ ।
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ॥೫೨॥

ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್ ।
ವಿಮುಚ್ಯ ನಿರ್ಮಮಃ ಶಾಂತೋ ಬ್ರಹ್ಮಭೂಯಾಯ ಕಲ್ಪತೇ ॥೫೩॥

ವಿಶುದ್ಧವಾದ ಬುದ್ಧಿಯಿಂದ ಕೂಡಿದವನಾಗಿ, ಧೈರ್ಯದಿಂದ ಚಿತ್ತವನ್ನು ನಿಗ್ರಹಿಸಿ, ಶಬ್ದಾದಿ ವಿಷಯಗಳನ್ನು ಪರಿತ್ಯಜಿಸಿ, ರಾಗ-ದ್ವೇಷಗಳನ್ನು ದೂರಮಾಡಿ, ಏಕಾಂತ ವಾಸಿಯಾಗಿ, ಅಲ್ಪಾಹಾರಿಯಾಗಿ, ವಾಕ್-ಕಾಯ-ಮನಸ್ಸುಗಳನ್ನು ನಿಯಂತ್ರಿಸಿ, ವೈರಾಗ್ಯದಿಂದ ಕೂಡಿ ನಿತ್ಯವೂ ಧ್ಯಾನ-ಯೋಗಪರನಾಗಿ, ಅಹಂಕಾರವನ್ನೂ, ಬಲ-ದರ್ಪ-ಕಾಮ-ಕ್ರೋಧಗಳನ್ನೂ, ಪರಿವಾರದಲ್ಲಿ ಸ್ನೇಹವನ್ನೂ ಮಮಕಾರವನ್ನೂ ತೊರೆದು, ಮಮಕಾರದಲ್ಲಿ ಶಾಂತನಾದವನು ಬ್ರಹ್ಮಸಾಯುಜ್ಯವನ್ನು ಪಡೆಯುತ್ತಾನೆ.

ವಿಶೇಷ ವಿಚಾರ– ಬ್ರಹ್ಮಭೂಃ ಎಂದರೆ ವೈಕುಂಠ. ಯಾ ಪ್ರಾಪಣೇ ಎಂಬ ಧಾತುವಿರುವುದರಿಂದ ವೈಕುಂಠಲೋಕಕ್ಕೆ ಹೋಗಲು ಸಮರ್ಥನಾಗುತ್ತಾನೆ ಎಂದು ಅರ್ಥ.

ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ ।
ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಮ್ ॥೫೪॥

ಬ್ರಹ್ಮನಲ್ಲೇ ಮನಸ್ಸಿನಿಂದ ನೆಲೆನಿಂತ ಪ್ರಸನ್ನವಾದ ಮನಸ್ಸುಳ್ಳ ಅವನು ಶೋಕವನ್ನೂ, ಆಸೆಯನ್ನೂ ಪಡುವುದಿಲ್ಲ. ಎಲ್ಲ ಪ್ರಾಣಗಳ ವಿಷಯದಲ್ಲಿಯೂ ಸಮಾನನಾಗಿರುತ್ತಾನೆ. ನನ್ನಲ್ಲಿ ಶ್ರೇಷ್ಠವಾದ ಭಕ್ತಿಯನ್ನು ಪಡೆಯುತ್ತಾನೆ.

ವಿಶೇಷ ವಿಚಾರ– ಬ್ರಹ್ಮಭೂತ ಶಬ್ದಕ್ಕೆ ಬ್ರಹ್ಮಭುವಿಭೂತಃ' ಎಂದು ವಿಗ್ರಹವನ್ನು ಮಾಡಿ ವೈಕುಂಠಾದಿ ಲೋಕಗಳಲ್ಲಿ ಆಶ್ರಿತನಾದವನು ಎಂದೂ ಅರ್ಥವನ್ನು ಮಾಡಬಹುದು. ಪರಬ್ರಹ್ಮನೇ ಆಗುತ್ತಾನೆ ಎಂಬ ಅರ್ಥವು 'ಸಿದ್ಧಿಂ ಪ್ರಾಪ್ತೋ ಯಥಾ ಬ್ರಹ್ಮಾ ತಥಾಪ್ನೋತಿ ನಿಬೋಧಮೇ' ಎಂಬ ಉಪಕ್ರಮದಿಂದಲೂ, 'ಮದ್ಭಕ್ತಿಂ ಲಭತೇ ಪರಾಮ್' ಎಂಬ ಮಧ್ಯವಾಕ್ಯದಿಂದಲೂ, 'ತತೋ ಮಾಂ ತತ್ತ್ವತೋ ಜ್ಞಾತ್ವಾ' ಎಂಬ ಉಪಸಂಹಾರದಿಂದಲೂ ವಿರೋಧ ಬರುವುದರಿಂದಲೂ ಅಲ್ಲದೇ 'ಇದಂ ಜ್ಞಾನ ಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ' ಎಂದು ಭಗವಂತನು ಸ್ಪಷ್ಟವಾಗಿ ತನ್ನ ಸಾಧರ್ಮ್ಯವನ್ನೇ ಹೇಳಿರುವುದರಿಂದಲೂ ಅತ್ಯಂತ ಅಯುಕ್ತವಾದುದು.

ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್ ॥೫೫॥

ಭಕ್ತಿಯಿಂದ ಅವನು ನನ್ನ ನಿಜವಾದ ಸ್ವರೂಪವನ್ನು ತಿಳಿಯುತ್ತಾನೆ. ಅನಂತರ ಯಥಾರ್ಥ ಜ್ಞಾನವನ್ನು ಪಡೆದ ಅವನು ನನ್ನಲ್ಲಿ ಪ್ರವೇಶ ಮಾಡುತ್ತಾನೆ.

ಸರ್ವಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ ।
ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಮ್ ॥೫೬॥

ನನ್ನನ್ನು ಆಶ್ರಯಿಸಿ ಎಲ್ಲ ಕರ್ಮಗಳನ್ನೂ ಯಾವಾಗಲೂ ಮಾಡುವವನು ನನ್ನ ಅನುಗ್ರಹದಿಂದ ಶಾಶ್ವತವೂ, ಹ್ರಾಸ ರಹಿತವೂ ಆದ ಸ್ಥಾನವನ್ನು ಪಡೆಯುತ್ತಾನೆ.

ಚೇತಸಾ ಸರ್ವಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಃ ।
ಬುದ್ಧಿಯೋಗಮುಪಾಶ್ರಿತ್ಯ ಮಚ್ಚಿತ್ತಃ ಸತತಂ ಭವ ॥೫೭॥

ನನ್ನನ್ನು ಸರ್ವೋತ್ತಮನೆಂದು ತಿಳಿದು ಎಲ್ಲ ಕರ್ಮಗಳನ್ನೂ ಮನಸ್ಸಿನಲ್ಲಿಯೇ ನನ್ನಲ್ಲಿ ಸಮರ್ಪಿಸಿ ಬುದ್ಧಿಯೋಗವನ್ನು ಆಶ್ರಯಿಸಿ ಚಿತ್ತದಲ್ಲಿ ಯಾವಾಗಲೂ ನನ್ನ ಚಿಂತನೆಯಲ್ಲಿಯೇ ಇರುವವನಾಗು.

ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ ತರಿಷ್ಯಸಿ ।
ಅಥ ಚೇತ್ತ್ವಮಹಂಕಾರಾನ್ನ ಶ್ರೋಷ್ಯಸಿ ವಿನಂಕ್ಷ್ಯಸಿ ॥೫೮॥

ನನ್ನಲ್ಲಿಯೇ ಚಿತ್ತವನ್ನು ಇಡುವವನು ನನ್ನ ಅನುಗ್ರಹದಿಂದ ಎಲ್ಲ ಕಷ್ಟಗಳನ್ನೂ ದಾಟುವನು. ಅಹಂಕಾರದಿಂದ ನೀನು ನನ್ನ ಮಾತುಗಳನ್ನು ಕೇಳದಿದ್ದರೆ ವಿನಾಶವನ್ನು ಹೊಂದುವಿ.

ಯದಹಂಕಾರಮಾಶ್ರಿತ್ಯ ನ ಯೋತ್ಸ್ಯ ಇತಿ ಮನ್ಯಸೇ ।
ಮಿಥ್ಯೈಷ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ ॥೫೯॥

ಅಹಂಕಾರವನ್ನು ಅವಲಂಬಿಸಿ ನಾನು ಯುದ್ಧಮಾಡುವುದಿಲ್ಲ ಎಂದು ಏನು ತಿಳಿದಿದ್ದೀಯೋ ಆ ನಿನ್ನ ನಿಶ್ಚಯವು ಸುಳ್ಳಾಗುವುದು. ಈಶ್ವರೇಚ್ಛೆಯು ನಿನ್ನನ್ನು ಯುದ್ಧದಲ್ಲಿ ತೊಡಗಿಸುತ್ತದೆ.

ಸ್ವಭಾವಜೇನ ಕೌಂತೇಯ ನಿಬದ್ಧಃ ಸ್ವೇನ ಕರ್ಮಣಾ ।
ಕರ್ತುಂ ನೇಚ್ಛಸಿ ಯನ್ಮೋಹಾತ್ ಕರಿಷ್ಯಸ್ಯವಶೋಽಪಿ ತತ್ ॥೬೦॥

ಎಲೈ ಕೌಂತೇಯನೇ, ನಿನ್ನ ಕರ್ಮದಿಂದ ಉಂಟಾದ ಸಂಸ್ಕಾರದಿಂದ ಬದ್ಧನಾಗಿ ಯಾವುದನ್ನು ಮಾಡುವುದಿಲ್ಲವೆಂದು ಮೋಹದಿಂದ ಹೇಳುತ್ತೀಯೋ ಅದನ್ನು ವಿಷ್ಣುವಶನಾಗಿ ನೀನು ಮಾಡುವಿ.

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥೬೧॥

ಎಲೈ ಅರ್ಜುನನೇ, ಈಶ್ವರನು ಸರ್ವಪ್ರಾಣಿಗಳ ಹೃದಯಪ್ರದೇಶದಲ್ಲಿ ಯಂತ್ರಾರೂಢ ಪ್ರತಿಮೆಗಳಂತೆ ಅವರನ್ನು ತಿರುಗಿಸುತ್ತಾ ತನ್ನ ಇಚ್ಛೆಯಿಂದಲೇ ಅವಸ್ಥಿತನಾಗಿದ್ದಾನೆ.

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್ಪ್ರಸಾದಾತ್ ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥೬೨॥

ಎಲೈ ಭಾರತನೇ, ಅವನಿಗೇ ಸರ್ವರೀತಿಯಲ್ಲೂ ಶರಣಾಗತನಾಗು. ಅವನ ಅನುಗ್ರಹದಿಂದ ಶ್ರೇಷ್ಠವಾದ ಸುಖವನ್ನೂ ಮತ್ತು ಶಾಶ್ವತವಾದ ಸ್ಥಾನವನ್ನೂ ಹೊಂದುವಿ.

ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ ಗುಹ್ಯತರಂ ಮಯಾ ।
ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು ॥೬೩॥

ರಹಸ್ಯಗಳಲ್ಲಿ ಅತ್ಯಂತ ರಹಸ್ಯವಾದ ಈ ಜ್ಞಾನವನ್ನು ನಾನು ನಿನಗೆ ಉಪದೇಶ ಮಾಡಿದ್ದೇನೆ. ಇದನ್ನು ಪೂರ್ಣವಾಗಿ ವಿಮರ್ಶೆ ಮಾಡಿ ನಿನಗೆ ಇಚ್ಛೆ ಬಂದಂತೆ ಮಾಡು.

ಸರ್ವಗುಹ್ಯತಮಂ ಭೂಯಃ ಶೃಣು ಮೇ ಪರಮಂ ವಚಃ ।
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್ ॥೬೪॥

ಎಲ್ಲದಕ್ಕಿಂತಲೂ ಅತ್ಯಂತ ರಹಸ್ಯವಾದ ಈ ಶ್ರೇಷ್ಠವಾದ ಮಾತುಗಳನ್ನು ಇನ್ನೊಮ್ಮೆ ಕೇಳು. ನನಗೆ ನೀನು ಬಹಳ ಪ್ರಿಯನಾದವನು ಎಂಬ ಕಾರಣದಿಂದ ನಿನಗೆ ಹಿತವನ್ನು ಹೇಳುವೆನು.

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥೬೫॥

ನನ್ನಲ್ಲಿಯೇ ಮನಸ್ಸನ್ನು ಇಡು, ನನ್ನನ್ನು ಪೂಜಿಸು, ನನಗೆ ನಮಸ್ಕಾರವನ್ನು ಮಾಡು. ನೀನು ನನ್ನನ್ನೇ ಹೊಂದುವಿ. ಇದನ್ನು ಸತ್ಯವಾಗಿ ನಿನಗೆ ಪ್ರತಿಜ್ಞೆ ಮಾಡುತ್ತಿದ್ದೇನೆ, ನೀನು ನನಗೆ ಪ್ರಿಯನಾದವನು.

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥೬೬॥

ಸರ್ವಧರ್ಮಗಳನ್ನೂ ಆಚರಿಸಿ, ಫಲದ ಆಸೆಯನ್ನು ಪರಿತ್ಯಾಗ ಮಾಡಿ ನನಗೊಬ್ಬನಿಗೇ ಶರಣಾಗತನಾಗು. ನಾನು ನಿನ್ನನ್ನು ಎಲ್ಲ ಪಾಪಗಳಿಂದಲೂ ಬಿಡಿಸುವೆನು, ಶೋಕಪಡಬೇಡ.

ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ ।
ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ ॥೬೭॥

ಈ ದಿವ್ಯವಾದ ಜ್ಞಾನವನ್ನು ತಪಸ್ಸನ್ನು ಮಾಡದವನಿಗೆ, ಭಕ್ತನಲ್ಲದವನಿಗೆ, ಗುರು ಶುಶ್ರೂಷೆಯನ್ನು ಮಾಡದವನಿಗೆ, ನನ್ನನ್ನು ದ್ವೇಷಿಸುವವನಿಗೆ ಎಂದೂ ಹೇಳಬಾರದು.

ಯ ಇದಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।
ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ ॥೬೮॥

ನ ಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ ।
ಭವಿತಾ ನ ಚ ಮೇ ತಸ್ಮಾದನ್ಯಃ ಪ್ರಿಯತರೋ ಭುವಿ ॥೬೯॥

ಯಾವನು ಈ ಪರಮಗುಹ್ಯವನ್ನು ನನ್ನ ಭಕ್ತರಿಗೆ ಉಪದೇಶ ಮಾಡುತ್ತಾನೆಯೋ ಅವನು ನನ್ನಲ್ಲಿ ಶ್ರೇಷ್ಠವಾದ ಭಕ್ತಿಯನ್ನು ಹೊಂದಿ ನನ್ನನ್ನೇ ಹೊಂದುವುದರಲ್ಲಿ

ಸಂಶಯವಿಲ್ಲ. ನನಗೆ ಮನುಷ್ಯರಲ್ಲಿ ಅವನಿಗಿಂತ ಪ್ರಿಯತರನಾದವನು ಅಥವಾ ಹಿತವನ್ನು ಮಾಡುವವನು ಯಾವನೂ ಇರುವುದಿಲ್ಲ.

ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ ।
ಜ್ಞಾನಯಜ್ಞೇನ ತೇನಾಹಮಿಷ್ಟಃ ಸ್ಯಾಮಿತಿ ಮೇ ಮತಿಃ ॥೭೦॥

ಈ ನಮ್ಮಿಬ್ಬರ ಧರ್ಮಸಂವಾದವನ್ನು ಯಾವನು ಅಧ್ಯಯನ ಮಾಡುತ್ತಾನೆಯೋ ಅವನು ಜ್ಞಾನಯಜ್ಞದಿಂದ ನನ್ನನ್ನು ಪೂಜಿಸಿದ್ದಾನೆ ಎಂದು ನನ್ನ ಅಭಿಪ್ರಾಯ.

ಶ್ರದ್ಧಾವಾನನಸೂಯಶ್ಚ ಶೃಣುಯಾದಪಿ ಯೋ ನರಃ ।
ಸೋಽಪಿ ಮುಕ್ತಃ ಶುಭಾಂಲ್ಲೋಕಾನ್ ಪ್ರಾಪ್ನುಯಾತ್ ಪುಣ್ಯಕರ್ಮಣಾಮ್॥

ಶ್ರದ್ಧೆಯನ್ನು ಹೊಂದಿ, ಅಸೂಯೆ ಪಡದೆ ಯಾವ ಮನುಷ್ಯನು ಈ ಉಪದೇಶವನ್ನು ಶ್ರವಣ ಮಾಡುತ್ತಾನೆಯೋ ಅವನೂ ಪಾಪದಿಂದ ಮುಕ್ತನಾಗಿ ಪುಣ್ಯಕರ್ಮಿಗಳು ಪಡೆಯುವ ಶುಭಲೋಕಗಳನ್ನು ಹೊಂದಿಯಾನು.

ಕಚ್ಚಿದೇತತ್ ಶ್ರುತಂ ಪಾರ್ಥ ತ್ವಯೈಕಾಗ್ರೇಣ ಚೇತಸಾ ।
ಕಚ್ಚಿದಜ್ಞಾನಸಂಮೋಹಃ ಪ್ರನಷ್ಟಸ್ತೇ ಧನಂಜಯ ॥೭೨॥

ಎಲೈ ಪಾರ್ಥನೇ, ಏಕಾಗ್ರವಾದ ಮನಸ್ಸಿನಿಂದ ನಾನು ಹೇಳಿದುದನ್ನು ಕೇಳಿದೆಯಾ? ಧನಂಜಯನೇ, ಅಜ್ಞಾನದಿಂದ ಉಂಟಾದ ನಿನ್ನ ಭ್ರಾಂತಿಯು ನಾಶವನ್ನು ಹೊಂದಿತೇ?

ಅರ್ಜುನಃ

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ ।
ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ ॥೭೩॥

ಅರ್ಜುನ– ಅಚ್ಯುತನೇ, ನಿನ್ನ ಅನುಗ್ರಹದಿಂದ ನನ್ನ ಮೋಹವು ನಾಶವಾಗಿದೆ. ದಿವ್ಯಜ್ಞಾನದ ಸ್ಮರಣೆಯು ಉಂಟಾಗಿದೆ. ಸಂಶಯವನ್ನು ಕಳೆದುಕೊಂಡಿದ್ದೇನೆ. ನಿನ್ನ ಮಾತಿನಂತೆ ನಡೆದುಕೊಳ್ಳುವೆನು.

ಸಂಜಯಃ

ಇತ್ಯಹಂ ವಾಸುದೇವಸ್ಯ ಪಾರ್ಥಸ್ಯ ಚ ಮಹಾತ್ಮನಃ ।
ಸಂವಾದಮಿಮಮಶ್ರೌಷಮದ್ಭುತಂ ರೋಮಹರ್ಷಣಮ್ ॥೭೪॥

ಸಂಜಯ– ಹೀಗೆ ನಾನು ಮಹಾತ್ಮನಾದ ವಾಸುದೇವನ ಅದ್ಭುತವೂ, ರೋಮಾಂಚಕಾರಿಯೂ ಆದ ಈ ಸಂವಾದವನ್ನು ಕೇಳಿದೆನು.

ವ್ಯಾಸಪ್ರಸಾದಾತ್ ಶ್ರುತವಾನೇತದ್ ಗುಹ್ಯಮಹಂ ಪರಮ್ ।
ಯೋಗಂ ಯೋಗೇಶ್ವರಾತ್ ಕೃಷ್ಣಾತ್ ಸಾಕ್ಷಾತ್ ಕಥಯತಃ ಸ್ವಯಮ್ ॥

ಯೋಗೇಶ್ವರನಾದ ಕೃಷ್ಣನು ಸಾಕ್ಷಾತ್ ತಾನೇ ಹೇಳುವ ರಹಸ್ಯವಾದ, ಶ್ರೇಷ್ಠವಾದ ಈ ಯೋಗಗಳನ್ನು ವೇದವ್ಯಾಸದೇವರ ಅನುಗ್ರಹದಿಂದ ನಾನು ಕೇಳಿದೆನು.

ರಾಜನ್ ಸಂಸ್ಮೃತ್ಯ ಸಂಸ್ಮೃತ್ಯ ಸಂವಾದಮಿಮಮದ್ಭುತಮ್ ।
ಕೇಶವಾರ್ಜುನಯೋಃ ಪುಣ್ಯಂ ಹೃಷ್ಯಾಮಿ ಚ ಮುಹುರ್ಮುಹುಃ॥೭೬॥

ಎಲೈ ರಾಜನೇ, ಕೇಶವಾರ್ಜುನರ ಈ ಪವಿತ್ರವಾದ ಮತ್ತು ಅದ್ಭುತವಾದ ಸಂವಾದವನ್ನು ಸ್ಮರಿಸಿ, ಸ್ಮರಿಸಿ ನಾನು ಪುನಃ ಪುನಃ ಸಂತೋಷಗೊಳ್ಳುತ್ತಿದ್ದೇನೆ.

ತಚ್ಚ ಸಂಸ್ಮೃತ್ಯ ಸಂಸ್ಮೃತ್ಯ ರೂಪಮತ್ಯದ್ಭುತಂ ಹರೇಃ ।
ವಿಸ್ಮಯೋ ಮೇ ಮಹಾನ್ ರಾಜನ್ ಹೃಷ್ಯಾಮಿ ಚ ಪುನಃ ಪುನಃ॥೭೭॥

ರಾಜನೇ, ಹರಿಯ ಆ ಅದ್ಭುತವಾದ ವಿಶ್ವರೂಪವನ್ನು ಸ್ಮರಿಸಿ, ಸ್ಮರಿಸಿ ನನಗೆ ಇನ್ನೂ ಆಶ್ಚರ್ಯವಾಗುತ್ತಿದೆ ಮತ್ತು ಪುನಃ ಪುನಃ ಸಂತೋಷಗೊಳ್ಳುತ್ತಿದ್ದೇನೆ.

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥೭೮॥

ಎಲ್ಲಿ ಯೋಗೇಶ್ವರನಾದ ಕೃಷ್ಣನಿದ್ದಾನೋ ಮತ್ತು ಧನುರ್ಧಾರಿಯಾದ ಅರ್ಜುನನಿದ್ದಾನೋ ಅಲ್ಲಿಯೇ ಧನ-ಕನಕಾದಿ ಸಂಪತ್ತು, ಯುದ್ಧದಲ್ಲಿ ವಿಜಯ, ರಾಜೈಶ್ವರ್ಯ ಪ್ರಾಪ್ತಿ ಶಾಶ್ವತವಾಗಿ ಇರುತ್ತದೆ ಎಂದು ನನ್ನ ಅಭಿಪ್ರಾಯ.

ಸ್ನಾತಂ ಗೀತಾಮೃತಾಂಭೋಧೌ ಪೀತಂ ಜ್ಞಾನಾಮೃತಂ ಮಯಾ ।
ಧೂತಂ ವಿಷಂ ಭವೋದ್ಭೂತಂ ಪೂತಂ ತೇನಾಖಿಲಂ ಕುಲಮ್ ॥

ಗೀತಾಮೃತ ಸಮುದ್ರದಲ್ಲಿ ಸ್ನಾನವನ್ನು ಮಾಡಿ, ಜ್ಞಾನಾಮೃತವನ್ನು ಪಾನ ಮಾಡಿ, ಸಂಸಾರದಿಂದ ಉಂಟಾದ ವಿಷವನ್ನು ಹೋಗಲಾಡಿಸಿ ಎಲ್ಲ ಕುಲವನ್ನೂ ಪವಿತ್ರೀಕರಿಸಿದ್ದಾಯಿತು (ಲಕ್ಷಾಲಂಕಾರ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಚತ್ವಾರಿಂಶೋಽಧ್ಯಾಯಃ ॥

॥ ಭಗವದ್ಗೀತಾಪರ್ವಣಿ ಸಪ್ತವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನಲವತ್ತನೆಯ ಅಧ್ಯಾಯ ಮುಗಿಯಿತು.

॥ಸಮಾಪ್ತಂ ಭಗವದ್ಗೀತಾಪರ್ವ ॥

★ ★ ★ ★ ★

೪. ಭೀಷ್ಮವಧಪರ್ವ

ಪ್ರಥಮಯುದ್ಧದಿವಸಃ

ನಲವತ್ತೊಂದನೆಯ ಅಧ್ಯಾಯ

ಭೀಷ್ಮ-ದ್ರೋಣ-ಕೃಪ-ಶಲ್ಯರಿಂದ ಅನುಮತಿಯನ್ನು ಪಡೆದು
ಯುಧಿಷ್ಠಿರನಿಂದ ಪುನಃ ತನ್ನ ರಥದಲ್ಲಿ ಸ್ಥಿತಿ.

ಸಂಜಯಃ

ತತೋ ಧನಂಜಯಂ ದೃಷ್ಟ್ವಾ ಬಾಣಗಾಂಡೀವಧಾರಿಣಮ್ ।
ಪುನರೇವ ಮಹಾನಾದಂ ವ್ಯಸೃಜಂತ ಮಹಾರಥಾಃ ॥೧॥

ಸಂಜಯ– ಆಗ ಗಾಂಡೀವ ಧನುಸ್ಸು ಮತ್ತು ಬಾಣಗಳನ್ನು ಹಿಡಿದ ಧನಂಜಯನನ್ನು ನೋಡಿ ಮಹಾರಥರೆಲ್ಲರೂ ಪುನಃ ಮಹಾನಾದವನ್ನು ಮಾಡಿದರು.

ಪಾಂಡವಾಃ ಸೋಮಕಾಶ್ಚೈವ ಯೇ ಚೈಷಾಮನುಯಾಯಿನಃ ।
ದಧ್ಮುಶ್ಚ ಮುದಿತಾಃ ಶಂಖಾನ್ ವೀರಾಃ ಸಾಗರಸಂಭವಾನ್ ॥೨॥

ಪಾಂಡವರು, ಸೋಮಕರು ಮತ್ತು ಅವರ ಅನುಯಾಯಿಗಳಾದ ವೀರರು ಸಂತೋಷದಿಂದ ಸಮುದ್ರಜನ್ಯವಾದ ಶಂಖಗಳನ್ನು ಊದಿದರು.

ತತೋ ಭೇರ್ಯಶ್ಚ ಪೇಶ್ಯಶ್ಚ ಕ್ರಕಚಾ ಗೋವಿಷಾಣಿಕಾಃ ।
ಸಹಸೈವಾಭ್ಯಹನ್ಯಂತ ತತಃ ಶಬ್ದೋ ಮಹಾನಭೂತ್ ॥೩॥

ಅನಂತರ ಭೇರಿಗಳು, ಪೇಶಿಗಳು, ಕ್ರಕಚಗಳು, ಗೋವಿಷಾಣಿಕಗಳು ತಕ್ಷಣ ದಾರಿಸಲ್ಪಟ್ಟವು. ಅದರಿಂದ ದೊಡ್ಡ ಶಬ್ದ ಉಂಟಾಯಿತು.

ಅಥ ದೇವಾಃ ಸಗಂಧರ್ವಾಃ ಪಿತರಶ್ಚ ಜನೇಶ್ವರ ।
ಸಿದ್ಧಚಾರಣಸಂಘಾಶ್ಚ ಸಮೀಯುಸ್ತೇ ದಿದೃಕ್ಷಯಾ ॥೪॥

ಆಗ ಎಲೈ ಜನೇಶ್ವರನೇ, ಗಂಧರ್ವರಿಂದ ಸಹಿತರಾದ ದೇವತೆಗಳು, ಪಿತೃಗಳು, ಸಿದ್ಧ-ಚಾರಣ ಸಮೂಹಗಳು ಯುದ್ಧವನ್ನು ನೋಡಲು ಬಯಸಿ ಬಂದರು.

ಋಷಯಶ್ಚ ಮಹಾಭಾಗಾಃ ಪುರಸ್ಕೃತ್ಯ ಶತಕ್ರತುಮ್ ।
ಸಮೀಯುಸ್ತತ್ರ ಸಹಿತಾ ದ್ರಷ್ಟುಂ ತದ್ದೈತಸಂ ಮಹತ್ ॥೫॥

ಮಹಾನುಭಾವರಾದ ಋಷಿಗಳೂ ಸಹ ಇಂದ್ರನನ್ನು ಮುಂದೆ ಮಾಡಿಕೊಂಡು ಆ ದೊಡ್ಡ ಯುದ್ಧವನ್ನು ನೋಡಲು ಎಲ್ಲರೂ ಸಹಿತರಾಗಿ ಬಂದರು.

ಪ್ರಬೋಧಿತಃ ಸ ತು ತದಾ ವಿಷ್ಣುನಾ ವಿಶ್ವಮೂರ್ತಿನಾ ।
ಅವಿನಾಶಿಸ್ವರೂಪಂ ಚ ದೃಷ್ಟ್ವಾ ತತ್ತ್ವೇನ ಫಲ್ಗುನಃ ।
ಕೃಷ್ಣಂ ಚೇಮಂ ಜಗದ್ರೂಪಂ ಜ್ಞಾತ್ವಾ ಯುದ್ಧೋದ್ಯತೋಽಭವತ್ ॥೬॥

ವಿಶ್ವರೂಪವನ್ನು ಧರಿಸಿದ ವಿಷ್ಣುವಿನಿಂದ ಪ್ರಬೋಧಗೊಂಡ ಅರ್ಜುನನು ಜೀವರ ಅವಿನಾಶಿ ಸ್ವರೂಪವನ್ನು ಚೆನ್ನಾಗಿ ತಿಳಿದು, ಜಗತ್ತನ್ನು ತನ್ನ ಶರೀರದಲ್ಲಿ ಧರಿಸಿದ ಕಾರಣದಿಂದ ಜಗದ್ರೂಪನಾದ ಕೃಷ್ಣನನ್ನು ತಿಳಿದು ಯುದ್ಧಕ್ಕೆ ಸನ್ನದ್ಧನಾದನು.

ತತೋ ಯುಧಿಷ್ಠಿರೋ ದೃಷ್ಟ್ವಾ ಯುದ್ಧಾಯ ಸುಸಮುದ್ಯತೇ ।
ತೇ ಸೇನೇ ಸಾಗರಪ್ರಖ್ಯೇ ಮುಹುಃ ಪ್ರಚಲಿತೇ ನೃಪ ॥೭॥

ವಿಮುಚ್ಯ ಕವಚಂ ವೀರೋ ನಿಕ್ಷಿಪ್ಯ ಚ ವರಾಯುಧಮ್ ।
ಅವರುಹ್ಯ ರಥಾತ್ ತೂರ್ಣಂ ಪದ್ಭ್ಯಾಮೇವ ಕೃತಾಂಜಲಿಃ ॥೮॥

ಪಿತಾಮಹಮಭಿಪ್ರೇಕ್ಷ್ಯ ಧರ್ಮರಾಜೋ ಯುಧಿಷ್ಠಿರಃ ।
ವಾಗ್ಯತಃ ಪ್ರಯಯೌ ಯೇನ ಪ್ರಾಙ್ಮುಖೋ ರಿಪುವಾಹಿನೀಮ್ ॥೯॥

ಎಲೈ ರಾಜನೇ, ಆಗ ಯುಧಿಷ್ಠಿರನು ಯುದ್ಧಕ್ಕೆ ಸನ್ನದ್ಧನಾಗಿ ಪುನಃ ಮುಂದುವರಿಯುತ್ತಿದ್ದ ಸಾಗರ ಸದೃಶವಾದ ಆ ಎರಡು ಸೈನ್ಯಗಳನ್ನು ನೋಡಿ ವೀರನಾದ ಧರ್ಮರಾಜನಾದ ಯುಧಿಷ್ಠಿರನು ತನ್ನ ಕವಚವನ್ನು ಬಿಚ್ಚಿ ಆಯುಧಗಳನ್ನು ಕೆಳಗಿಟ್ಟು ರಥದಿಂದ ಇಳಿದು ಕೈಗಳನ್ನು ಮುಗಿದು, ಪಾದಗಳಿಂದಲೇ ನಡೆಯುತ್ತಾ ಪಿತಾಮಹರಾದ ಭೀಷ್ಮರನ್ನು ಉದ್ದೇಶಿಸಿ ಮೌನವಾಗಿ ಪೂರ್ವಾಭಿಮುಖವಾಗಿ ಶತ್ರುಸೈನ್ಯದ ಕಡೆಗೆ ನಡೆದನು.

ತಂ ಪ್ರಯಾಂತಮಭಿಪ್ರೇಕ್ಷ್ಯ ಕುಂತೀಪುತ್ರೋ ಧನಂಜಯಃ ।
ಅವತೀರ್ಯ ರಥಾತ್ ತೂರ್ಣಂ ಭ್ರಾತೃಭಿಃ ಸಹಿತೋಽನ್ವಯಾತ್ ॥

ವಾಸುದೇವಶ್ಚ ಭಗವಾನ್ ಪೃಷ್ಠತೋಽನುಜಗಾಮ ಹ ।
ಯಥಾಮುಖ್ಯಾಶ್ಚ ರಾಜಾನಸ್ತಮನ್ವಾಜಗ್ಮುರುತ್ಸುಕಾಃ ॥೧೦॥

ಹಾಗೆ ಹೊರಟ ಯುಧಿಷ್ಠಿರನನ್ನು ನೋಡಿ ಕುಂತೀಪುತ್ರನಾದ ಧನಂಜಯನು ಶೀಘ್ರವಾಗಿ ತನ್ನ ರಥದಿಂದ ಇಳಿದು ಸಹೋದರರ ಜೊತೆಯಲ್ಲಿ ಅವನನ್ನು ಹಿಂಬಾಲಿಸಿದನು. ಭಗವಂತನಾದ ವಾಸುದೇವನೂ ಅವನ ಹಿಂದೆ ಹೋದನು. ಪ್ರಧಾನರಾದ ರಾಜರೂ ಸಹ ಉತ್ಸುಕತೆಯಿಂದ ಅವನನ್ನು ಹಿಂಬಾಲಿಸಿದರು.

ಅರ್ಜುನಃ

ಕಿಂ ತೇ ವ್ಯವಸಿತಂ ರಾಜನ್ ಯದಸ್ಮಾನಪಹಾಯ ವೈ ।
ಪದ್ಭ್ಯಾಮೇವ ಪ್ರಯಾತೋಽಸಿ ಪ್ರಾಙ್ಮುಖೋ ರಿಪುವಾಹಿನೀಮ್ ॥

ಅರ್ಜುನ– ರಾಜನೇ, ನಿನ್ನ ಅಭಿಪ್ರಾಯವೇನು? ನಮ್ಮನ್ನು ಬಿಟ್ಟುನಡೆದುಕೊಂಡೇ ಪೂರ್ವಾಭಿಮುಖವಾಗಿ ಶತ್ರುಸೈನ್ಯದ ಬಳಿಗೆ ಹೊರಟಿದ್ದೀಯೆ!

ಭೀಮಸೇನಃ

ಕ್ವ ಗಮಿಷ್ಯಸಿ ರಾಜೇಂದ್ರ ನಿಕ್ಷಿಪ್ತಕವಚಾಯುಧಃ ।
ದಂಸತೇಷ್ವರಿಸೈನ್ಯೇಷು ಭ್ರಾತೄಸುತ್ಸೃಜ್ಯ ಪಾರ್ಥಿವ ॥೧೩॥

ಭೀಮಸೇನ- ಎಲೈ ರಾಜೇಂದ್ರನೇ, ಪಾರ್ಥಿವನೇ, ಕವಚ ಮತ್ತು ಆಯುಧಗಳನ್ನು ತ್ಯಜಿಸಿ, ಸಹೋದರರನ್ನೂ ಬಿಟ್ಟು ಶತ್ರುಸೈನ್ಯಗಳು ಕವಚಾಯುಧಗಳಿಂದ ಸನ್ನದ್ಧವಾಗಿರುವಾಗ ಎಲ್ಲಿಗೆ ಹೋಗುವಿ?

ನಕುಲಃ

ಏವಂಗತೇ ತ್ವಯಿ ಜ್ಯೇಷ್ಠೇ ಮಮ ಭ್ರಾತರಿ ಭಾರತ ।
ಭೀರ್ಮೇ ದುನೋತಿ ಹೃದಯಂ ಬ್ರೂಹಿ ಗಂತಾ ಭವಾನ್ ಕ್ವ ನು ॥

ನಕುಲ- ಎಲೈ ಭಾರತನೇ, ನನ್ನ ಹಿರಿಯಣ್ಣನಾದ ನೀನು ಹೀಗೆ ಮಾಡುತ್ತಿರಲು ನನ್ನ ಮನಸ್ಸನ್ನು ಭಯವು ಕಲಕುತ್ತಿದೆ. ನೀನು ಎಲ್ಲಿಗೆ ಹೊರಟಿರುವಿ ಎಂದು ಹೇಳು.

ಸಹದೇವಃ

ಅಸ್ಮಿನ್ ರಣಸಮೂಹೇ ವೈ ವರ್ತಮಾನೇ ಮಹಾಭಯೇ ।
ಯೋದ್ಧವ್ಯೇ ಕ್ವ ನು ಗಂತಾಸಿ ಶತ್ರೂನಭಿಮುಖೋ ನೃಪ ॥೧೫॥

ಸಹದೇವ- ಮಹಾಭಯಂಕರವಾದ ಈ ಯುದ್ಧವು ಸನ್ನದ್ಧವಾಗಿರಲು ಯುದ್ಧವನ್ನು ಮಾಡಬೇಕಾದಾಗ ಶತ್ರುಗಳಿಗೆ ಅಭಿಮುಖವಾಗಿ ನೀನು ಎಲ್ಲಿಗೆ ಹೋಗುವಿ?

ಸಂಜಯಃ

ಏವಮಾಭಾಷ್ಯಮಾಣೋಽಪಿ ಭ್ರಾತೃಭಿಃ ಕುರುನಂದನ ।
ನೋವಾಚ ವಾಗ್ಮತಃ ಕಿಂಚಿದ್ ಗಚ್ಛತ್ಯೇವ ಯುಧಿಷ್ಠಿರಃ ॥೧೬॥

ಸಂಜಯ- ಎಲೈ ಕುರುನಂದನನೇ, ಹೀಗೆ ಸಹೋದರರಿಂದ ಮಾತನಾಡಿಸಲ್ಪಟ್ಟರೂ ಯುಧಿಷ್ಠಿರನು ಏನನ್ನೂ ಮಾತನಾಡಲಿಲ್ಲ. ಮೌನವಾಗಿ ಮುಂದೆ ನಡೆದೇ ನಡೆದನು.

ತಾನುವಾಚ ಮಹಾಪ್ರಾಜ್ಞೋ ವಾಸುದೇವೋ ಮಹಾಮನಾಃ ।
ಅಭಿಪ್ರಾಯೋಽಸ್ಯ ವಿಜ್ಞಾತೋ ಮಯೇತಿ ಪ್ರಹಸನ್ನಿವ ॥೧೭॥

ಮಹಾಪ್ರಾಜ್ಞನೂ, ಧೈರ್ಯಶಾಲಿಯೂ ಆದ ಕೃಷ್ಣನು ಅವರನ್ನು ಕುರಿತು ನಗುವವನಂತೆ ಯುಧಿಷ್ಠಿರನ ಅಭಿಪ್ರಾಯವು ನನಗೆ ತಿಳಿದಿದೆ ಎಂದು ಹೇಳಿದನು.

ಏಷ ಭೀಷ್ಮಂ ತಥಾ ದ್ರೋಣಂ ಗೌತಮಂ ಶಲ್ಯಮೇವ ಚ ।
ಅನುಮಾನ್ಯ ಗುರೂನ್ ಸರ್ವಾನ್ ಯೋತ್ಸ್ಯತೇ ಪಾರ್ಥಿವೋಽರಿಭಃ ॥

ಈ ಯುಧಿಷ್ಠಿರ ರಾಜನು ಭೀಷ್ಮ-ದ್ರೋಣ-ಕೃಪ-ಶಲ್ಯ ಮತ್ತು ಎಲ್ಲಾ ಹಿರಿಯರ ಅನುಮತಿಯನ್ನು ಪಡೆದು ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವನು.

ಶ್ರೂಯತೇ ಹಿ ಪುರಾಕಲ್ಪೇ ಗುರೂನನನುಮಾನ್ಯ ಯಃ ।
ಯುಧ್ಯತೇ ಸ ಭವೇದ್ ವ್ಯಕ್ತಮಪಧ್ಯಾತೋ ಮಹರ್ತಭಿಃ ॥೧೯॥

ಯಾವನು ಗುರುಗಳ ಅನುಮತಿಯನ್ನು ಪಡೆಯದೆ ಯುದ್ಧವನ್ನು ಮಾಡುತ್ತಾನೆಯೋ ಅವನು ಮಹಾನುಭಾವರಾದ ಅವರಿಂದ ಸ್ಪಷ್ಟವಾಗಿ ಶಾಪಕ್ಕೆ ಒಳಗಾಗುತ್ತಾನೆಂದು ನಾವು ಹಿಂದಿನ ಕಾಲದ ಘಟನೆಗಳನ್ನು ಕೇಳಿದ್ದೇವೆ.

ಅನುಮಾನ್ಯ ಯಥಾಶಾಸ್ತ್ರಂ ಯಸ್ತು ಯುಧ್ಯೇನ್ಮಹರ್ತಭಿಃ ।
ಧ್ರುವಸ್ತಸ್ಯ ಜಯೋ ಯುದ್ಧೇ ಭವೇದಿತಿ ಮತಿರ್ಮಮ ॥೨೦॥

ಹಿರಿಯರ ಅನುಮತಿಯನ್ನು ಶಾಸ್ತ್ರೋಕ್ತವಾಗಿ ಪಡೆದು ಆ ಮಹಾನುಭಾವರ ಜೊತೆಯಲ್ಲಿ ಯುದ್ಧವನ್ನು ಮಾಡಿದರೂ ಅವನಿಗೆ ಯುದ್ಧದಲ್ಲಿ ಖಂಡಿತವಾಗಿ ಜಯವಾಗುತ್ತದೆ ಎಂದು ನನ್ನ ಅಭಿಪ್ರಾಯ.

ಏವಂ ಬ್ರುವತಿ ಕೃಷ್ಣೇ ತು ಧಾರ್ತರಾಷ್ಟ್ರಬಮೂಂ ಪ್ರತಿ ।
ಹಾಹಾಕಾರೋ ಮಹಾನಾಸೀನ್ನಿಃಶಬ್ದಾಸ್ತ್ವಪರೇಽಭವನ್ ॥೨೧॥

ಕೃಷ್ಣನು ಹೀಗೆ ಹೇಳುತ್ತಿರಲು ದುರ್ಯೋಧನನ ಸೈನ್ಯದಲ್ಲಿ ದೊಡ್ಡ ಹಾಹಾಕಾರ ಉಂಟಾಯಿತು. ಪಾಂಡವ ಯೋಧರು ನಿಶ್ಶಬ್ದರಾದರು.

ದೃಷ್ಟ್ವಾ ಯುಧಿಷ್ಠಿರಂ ದೂರಾದ್ ಧಾರ್ತರಾಷ್ಟ್ರಸ್ಯ ಸೈನಿಕಾಃ ।
ಮಿಥಃ ಸಂಕಥಯಾಂಚಕ್ರುರ್ನೈಷೋಽರ್ಹತಿ ಕುಲಪಾಂಸನಃ ॥೨೨॥

ಯುಧಿಷ್ಠಿರನನ್ನು ನೋಡಿದ ದುರ್ಯೋಧನನ ಸೈನಿಕರು ಕುಲಪಾಂಸನನಾದ ಇವನು ಅಯೋಗ್ಯನಾದವನು ಎಂದು ಪರಸ್ಪರವಾಗಿ ಮಾತನಾಡಿಕೊಂಡರು.

ವ್ಯಕ್ತಂ ಭೀತ ಇವಾಭ್ಯೇತಿ ರಾಜಾಽಸೌ ಭೀಷ್ಮಮಂತಿಕಾತ್ ।
ಯುಧಿಷ್ಠಿರಃ ಸಸೋದರ್ಯಃ ಶರಣಾರ್ಥಂ ಪ್ರಯಾಚಕಃ ॥೨೩॥

ಯುಧಿಷ್ಠಿರನು ತನ್ನ ತಮ್ಮಂದಿರೊಡನೆ ಸ್ಪಷ್ಟವಾಗಿ ಭೀತನಾಗಿ ರಕ್ಷಣೆಯನ್ನು ಬೇಡುವುದಕ್ಕಾಗಿ ಭೀಷ್ಮರ ಬಳಿಗೆ ಬರುತ್ತಿದ್ದಾನೆ.

ಧನಂಜಯೇ ಕಥಂ ನಾಥೇ ಪಾಂಡವೇ ಚ ವೃಕೋದರೇ ।
ನಕುಲೇ ಸಹದೇವೇ ಚ ಭೀತೋಽಭ್ಯೇತಿ ಚ ಪಾಂಡವಃ ॥೨೪॥

ಅರ್ಜುನನೂ ಮತ್ತು ಪಾಂಡುಪುತ್ರನಾದ ವೃಕೋದರನು ನಾಥರಾಗಿರುವಾಗ, ನಕುಲ-ಸಹದೇವರೂ ನಾಥರಾಗಿರುವಾಗ ಪಾಂಡವನಾದ ಯುಧಿಷ್ಠಿರನು ಹೇಗೆ ಭೀತನಾಗಿ ಬರುತ್ತಿದ್ದಾನೆ?

ನ ನೂನಂ ಕ್ಷತ್ರಿಯಕುಲೇ ಜಾತಃ ಸಂಪ್ರಥಿತೇ ಭುವಿ ।
ಯಥಾಸ್ಯ ಹೃದಯಂ ಭೀತಮಲ್ಪಸತ್ತ್ವಸ್ಯ ಸಂಯುಗೇ ॥೨೫॥

ಯುದ್ಧದಲ್ಲಿ ಅಲ್ಪಧೈರ್ಯವುಳ್ಳ ಇವನ ಹೃದಯವು ಭಯಗ್ರಸ್ತನಾಗಿರುವುದನ್ನು ನೋಡಿದರೆ ಇವನು ಭೂಮಿಯಲ್ಲಿ ಪ್ರಸಿದ್ಧವಾದ ಕ್ಷತ್ರಿಯ ಕುಲದಲ್ಲಿ ಜನಿಸಿಲ್ಲವೆಂದು ತೋರುತ್ತದೆ (ಎಂದು ಮಾತನಾಡಿಕೊಂಡರು).

ತತಸ್ತೇ ಕ್ಷತ್ರಿಯಾಃ ಸರ್ವೇ ಪ್ರಶಂಸಂತಿ ಸ್ಮ ಕೌರವಾನ್ ।
ಹೃಷ್ಟಾಃ ಸುಮನಸೋ ಭೂತ್ವಾ ಚೈಲಾನಿ ದುಧುವುಃ ಪೃಥಕ್ ॥೨೬॥

ಆಗ ಆ ಕ್ಷತ್ರಿಯರೆಲ್ಲರೂ ಕೌರವರನ್ನು ಹೊಗಳಿದರು. ಸಂತೋಷಗೊಂಡು ಪ್ರಸನ್ನ ಮನಸ್ಕರಾಗಿ ತಮ್ಮ ವಸ್ತ್ರಗಳನ್ನು ಬೇರೆ ಬೇರೆಯಾಗಿ ಹಾರಿಸಿದರು.

ವ್ಯನಿಂದಂತ ತತಃ ಸರ್ವೇ ಯೋಧಾಸ್ತತ್ರ ವಿಶಾಂಪತೇ ।
ಯುಧಿಷ್ಠಿರಂ ಸಸೋದರ್ಯಂ ಸಹಿತಂ ಕೇಶವೇನ ಹ ॥೨೭॥

ಆಗ ಎಲೈ ರಾಜನೇ, ಅಲ್ಲಿದ್ದ ಎಲ್ಲ ಯೋಧರೂ, ಸೋದರರಿಂದ ಮತ್ತು ಕೃಷ್ಣನಿಂದ ಸಹಿತರಾದ ಯುಧಿಷ್ಠಿರನನ್ನು ನಿಂದಿಸಿದರು.

ತತಸ್ತತ್ ಕೌರವಂ ಸೈನ್ಯಂ ಧಿಕೃತ್ವಾ ತು ಯುಧಿಷ್ಠಿರಮ್ ।
ನಿಃಶಬ್ದಮಭವತ್ ತೂರ್ಣಂ ಪುನರೇವ ವಿಶಾಂಪತೇ ॥೨೮॥

ಎಲೈ ರಾಜನೇ, ಆಗ ಆ ಕೌರವ ಸೈನ್ಯವು ಯುಧಿಷ್ಠಿರನನ್ನು ಧಿಕ್ಕರಿಸಿ ಪುನಃ ಬೇಗ ನಿಶ್ಶಬ್ದವಾಯಿತು.

ಕಂ ನು ವಕ್ಷ್ಯತಿ ರಾಜಾಽಸೌ ಕಂ ಭೀಷ್ಮಃ ಪ್ರತಿವಕ್ಷ್ಯತಿ ।
ಕಂ ಭೀಮಃ ಸಮರಶ್ಲಾಘೀ ಕಂ ನು ಕೃಷ್ಣಾರ್ಜುನಾವಿತಿ ॥೨೯॥

ವಿವಕ್ಷಿತಂ ಕಿಮಸ್ಯೇತಿ ಸಂಶಯಃ ಸುಮಹಾನಭೂತ್ ।
ಉಭಯೋಃ ಸೇನಯೋ ರಾಜನ್ ಯುಧಿಷ್ಠಿರಕೃತೇ ತದಾ ॥೩೦॥

ಎಲೈ ರಾಜನೇ, ಈ ರಾಜನು ಏನು ಹೇಳುವನು? ಭೀಷ್ಮರು ಏನು ಉತ್ತರವನ್ನು ಕೊಡುವರು? ಸಮರಶ್ಲಾಘಿಯಾದ ಭೀಮನಾಗಲೀ, ಕೃಷ್ಣಾರ್ಜುನರಾಗಲೀ ಏನು ಮಾಡುವರು? ಇವನು ಏನು ಮಾತನಾಡುವ ಅಭಿಪ್ರಾಯವನ್ನು ಹೊಂದಿದ್ದಾನೆ ಎಂದು ಉಭಯ ಸೈನ್ಯಗಳಿಗೂ ಯುಧಿಷ್ಠಿರನ ವಿಷಯದಲ್ಲಿ ದೊಡ್ಡ ಸಂಶಯವುಂಟಾಯಿತು.

ಸ ವಿಗಾಹ್ಯ ಚಮೂಂ ಶತ್ರೋಃ ಶರಶಕ್ತಿಸಮಾಕುಲಾಮ್ ।
ಭೀಷ್ಮಮೇವಾಭ್ಯಯಾತ್ ತೂರ್ಣಂ ಭ್ರಾತೃಭಿಃ ಪರಿವಾರಿತಃ ॥೩೧॥

ಆ ಯುಧಿಷ್ಠಿರನಾದರೂ ಶಕ್ತಿ, ಬಾಣಗಳಿಂದ ತುಂಬಿದ್ದ ಶತ್ರುಸೈನ್ಯವನ್ನು ಪ್ರವೇಶಿಸಿ ಭ್ರಾತೃಗಳಿಂದ ಸಹಿತನಾಗಿ ಶೀಘ್ರವಾಗಿ ಭೀಷ್ಮರ ಕಡೆಗೇ ಬಂದನು.

ತಮುವಾಚ ತತಃ ಪಾದೌ ಕರಾಭ್ಯಾಂ ಪೀಡ್ಯ ಪಾಂಡವಃ ।
ಭೀಷ್ಮಂ ಶಾಂತನವಂ ರಾಜಾ ಯುದ್ಧಾಯ ಸಮುಪಸ್ಥಿತಮ್ ॥೩೨॥

ಯುದ್ಧಕ್ಕೆ ಸನ್ನದ್ಧರಾದ ಶಂತನು ಪುತ್ರರಾದ ಭೀಷ್ಮರ ಪಾದಗಳನ್ನು ತನ್ನ ಕೈಗಳಿಂದ ಒತ್ತಿ ಪಾಂಡವನಾದ ಧರ್ಮರಾಜನು ಅವರನ್ನು ಕುರಿತು ಮಾತನಾಡಿದನು.

ಯುಧಿಷ್ಠಿರಃ

ಆಮಂತ್ರಯೇ ತ್ವಾಂ ದುರ್ಧರ್ಷ ಯೋತ್ಸ್ಯೇ ತಾತ ತ್ವಯಾ ಸಹ ।
ಅನುಜಾನೀಹಿ ಮಾಂ ತಾತ ಆಶಿಷಶ್ಚ ಪ್ರಯೋಜಯ ॥೩೩॥

ಯುಧಿಷ್ಠಿರ– ಎಲೈ ಸೋಲಿಸಲು ಅಸಾಧ್ಯನಾದವನೇ, ನಿನ್ನ ಅನುಮತಿಯನ್ನು ಬೇಡುತ್ತೇನೆ. ತಾತನೇ, ನಿನ್ನ ಜೊತೆಯಲ್ಲಿ ಯುದ್ಧವನ್ನು ಮಾಡುವೆನು. ನನಗೆ ಅನುಮತಿಯನ್ನು ಕೊಡು ಮತ್ತು ಆಶೀರ್ವಾದವನ್ನು ಮಾಡು.

ಭೀಷ್ಮಃ

ಯದ್ಯೇವಂ ನಾಭಿಗಚ್ಛೇಥಾ ಯುಧಿ ಮಾಂ ಪೃಥಿವೀಪತೇ ।
ಶಪೇಯಂ ತ್ವಾಂ ಮಹಾರಾಜ ಪರಾಭಾವಾಯ ಭಾರತ ॥೩೪॥

ಭೀಷ್ಮ– ಎಲೈ ಮಹಾರಾಜನೇ, ಭಾರತನೇ, ಯುದ್ಧದಲ್ಲಿ ಹೀಗೆ ನನ್ನ ಬಳಿಗೆ ಬರದಿದ್ದರೆ ನಿನಗೆ ಪರಾಭವ ಉಂಟಾಗಲೆಂದು ನಾನು ಶಾಪವನ್ನು ಕೊಡುತ್ತಿದ್ದೆ.

ಪ್ರೀತೋಽಸ್ಮಿ ಪುತ್ರ ಯುಧ್ಯಸ್ವ ಜಯಮಾಪ್ನುಹಿ ಪಾಂಡವ ।
ಯತ್ ತೇಽಭಿಲಷಿತಂ ಚಾನ್ಯತ್ ತದವಾಪ್ನುಹಿ ಸಂಯುಗೇ ॥೩೫॥

ಪುತ್ರನೇ, ನಾನು ಪ್ರಸನ್ನನಾಗಿದ್ದೇನೆ. ಪಾಂಡವನೇ, ಜಯವನ್ನು ಹೊಂದು. ಯುದ್ಧದಲ್ಲಿ ನೀನು ಬೇರೆ ಏನನ್ನು ಅಪೇಕ್ಷಿಸುತ್ತೀಯೋ ಅದನ್ನೂ ಪಡೆಯುವವನಾಗು.

ವ್ರಿಯತಾಂ ಚ ವರಃ ಪಾರ್ಥ ಕಿಮಸ್ಮತ್ತೋಽಭಿಕಾಂಕ್ಷಸಿ ।
ಏವಂ ಗತೇ ಮಹಾರಾಜ ನ ತವಾಸ್ತಿ ಪರಾಜಯಃ ॥೩೬॥

ಎಲೈ ಪಾರ್ಥನೇ, ನನ್ನಿಂದ ನಿನಗೆ ಅಭಿಮತವಾದ ವರವನ್ನು ಕೇಳು. ಮಹಾರಾಜನೇ, ನಿನ್ನ ನಡತೆಯು ಹೀಗಿರುವಾಗ ನಿನಗೆ ಪರಾಜಯವಿಲ್ಲ.

ಅರ್ಥಸ್ಯ ಪುರುಷೋ ದಾಸೋ ದಾಸಸ್ತ್ವರ್ಥೋ ನ ಕಸ್ಯಚಿತ್ ।
ಇತಿ ಸತ್ಯಂ ಮಹಾರಾಜ ಬದ್ಧೋಽಸ್ಮ್ಯರ್ಥೇನ ಕೌರವೈಃ ॥೩೭॥

ಅತಸ್ತ್ವಾಂ ಕ್ಲೀಬವದ್ ವಾಕ್ಯಂ ಬ್ರುವೀಮಿ ಕುರುನಂದನ ।
ಕೃತೋಽಸ್ಮ್ಯರ್ಥೇನ ಕೌರವ್ಯ ಯುದ್ಧಾದನ್ಯತ್ ಕಿಮಿಚ್ಛಸಿ ॥೩೮॥

ಅರ್ಥಕ್ಕೆ ಪುರುಷನು ದಾಸನಾಗುತ್ತಾನೆ. ಅರ್ಥವು ಯಾರಿಗೂ ದಾಸನಾಗುವುದಿಲ್ಲ. ಮಹಾರಾಜನೇ, ಇದು ಸತ್ಯವಾದ ಮಾತು. ನಾನು ಕೌರವರಿಂದ ಅರ್ಥದ ನಿಮಿತ್ತದಿಂದಾಗಿ ಬದ್ಧನಾಗಿದ್ದೇನೆ. ಎಲೈ ಕುರುನಂದನನೇ, ಆದ್ದರಿಂದ ನಪುಂಸಕನಂತೆ

ನಿನ್ನನ್ನು ಕುರಿತು ಮಾತನಾಡುತ್ತಿದ್ದೇನೆ. ಕೌರವ್ಯನೇ, ಅರ್ಥದಿಂದ ನಾನು ಅಪಹರಿಸಲ್ಪಟ್ಟಿದ್ದೇನೆ. ಯುದ್ಧವನ್ನು ಬಿಟ್ಟು (ನಮ್ಮ ಪರವಾಗಿ ಯುದ್ಧವನ್ನು ಮಾಡು ಎಂಬ ಬೇಡಿಕೆಯನ್ನು ಬಿಟ್ಟು) ಬೇರೆ ಏನನ್ನು ಬಯಸುತ್ತೀಯೆ?

ಯುಧಿಷ್ಠಿರಃ

ಮಂತ್ರಯಸ್ವ ಮಹಾಪ್ರಾಜ್ಞ ಹಿತೈಷೀ ಮಮ ನಿತ್ಯಶಃ ।
ಯುಧ್ಯಸ್ವ ಕೌರವಸ್ಯಾರ್ಥೇ ಮಮೈಷ ಸತತಂ ವರಃ ॥೩೯॥

ಯುಧಿಷ್ಠಿರ– ಮಹಾಪ್ರಾಜ್ಞನೇ, ನಿತ್ಯವೂ ನನಗೆ ಹಿತೈಷಿಯಾಗಿದ್ದು ನನಗೆ ಶುಭಾತಂಸನೆಯನ್ನು ಮಾಡು, ಕೌರವರ ಸಲುವಾಗಿ ಯುದ್ಧವನ್ನು ಮಾಡು. ಇದೇ ನಾನು ಬೇಡುವ ವರ.

ಭೀಷ್ಮಃ

ರಾಜನ್ ಕಿಮತ್ರ ಸಾಹ್ಯಂ ತೇ ಕರೋಮಿ ಕುರುನಂದನ ।
ಕಾಮಂ ಯೋತ್ಸ್ಯೇ ಪರಸ್ಯಾರ್ಥೇ ಬ್ರೂಹಿ ಯತ್ ತೇ ವಿವಕ್ಷಿತಮ್ ॥

ಭೀಷ್ಮ– ರಾಜನೇ, ಕುರುನಂದನನೇ, ನಾನು ಕೌರವರ ಸಲುವಾಗಿ ಅವಶ್ಯವಾಗಿ ಯುದ್ಧವನ್ನು ಮಾಡುವೆನು. ನಿನ್ನ ಮನಸ್ಸಿನಲ್ಲಿ ಏನಿದೆ ಎಂದು ಹೇಳು. ನಾನು ನಿನಗೆ ಯಾವ ಸಹಾಯವನ್ನು ಮಾಡಲಿ?

ಯುಧಿಷ್ಠಿರಃ

ಕಥಂ ಜಯೇಯಂ ಸಂಗ್ರಾಮೇ ಭವಂತಮಪರಾಜಿತಮ್ ।
ವಿತನ್ಮೇ ಮಂತ್ರಯ ಹಿತಂ ಯದಿ ತ್ರೇಯಃ ಪ್ರಪತ್ಯಸಿ ॥೪೦॥

ಯುಧಿಷ್ಠಿರ– ಎಂದೂ ಪರಾಜಯವನ್ನು ಹೊಂದದ ನಿಮ್ಮನ್ನು ನಾನು ಯುದ್ಧದಲ್ಲಿ ಹೇಗೆ ಜಯಿಸಿಯೇನು? ನನ್ನ ತ್ರೇಯಸ್ಸನ್ನು ಬಯಸುವುದಾದರೆ ನನಗೆ ಇದನ್ನು ಹೇಳಿ.

ಭೀಷ್ಮಃ

ನ ತಂ ಪತ್ಯಾಮಿ ಕೌಂತೇಯ ಯೋ ಮಾಂ ಯುಧ್ಯಂತಮಾಹವೇ ।
ವಿಜಯೇತ ಪುಮಾನ್ ಕ್ಷಿದಪಿ ಸಾಕ್ಷಾಚ್ಛಕ್ರಶುಃ ॥೪೨॥

ಭೀಷ್ಮ– ಎಲೈ ಕೌಂತೇಯನೇ, ನಾನು ರಣರಂಗದಲ್ಲಿ ಯುದ್ಧವನ್ನು ಮಾಡುವಾಗ ಸಾಕ್ಷಾತ್ ಇಂದ್ರನೇ ಆದರೂ ನನ್ನನ್ನು ಜಯಿಸುವ ಯಾವ ಶತ್ರುವೂ ನನಗೆ ಕಾಣುವುದಿಲ್ಲ.

ಯುಧಿಷ್ಠಿರ

ಹಂತ ಪೃಚ್ಛಾಮಿ ತಸ್ಮಾತ್ ತ್ವಾಂ ಪಿತಾಮಹ ನಮೋऽಸ್ತು ತೇ ।
ಜಯೋಪಾಯಂ ಬ್ರವೀಹಿ ತ್ವಮಾತ್ಮನಃ ಸಮರೇ ಪರೈಃ ॥೪೩॥

ಯುಧಿಷ್ಠಿರ– ಸಂತೋಷ. ಆದ್ದರಿಂದಲೇ ನಿನ್ನನ್ನು ಕೇಳುತ್ತಿದ್ದೇನೆ. ಪಿತಾಮಹರೇ, ನಿಮಗೆ ನಮಸ್ಕಾರ. ಯುದ್ಧದಲ್ಲಿ ಶತ್ರುಗಳು ನಿಮ್ಮನ್ನು ಜಯಿಸುವ ಉಪಾಯವನ್ನು ಹೇಳಿ.

ಭೀಷ್ಮಃ

ನ ಶತ್ರುಂ ತಾತ ಪಶ್ಯಾಮಿ ಸಮರೇ ಯೋ ಜಯೇತ ಮಾಮ್ ।
ನ ತಾವನ್ಮತ್ಕಾಲೋ ಮೇ ಪುನರಾಗಮನಂ ಕುರು ॥೪೪॥

ಭೀಷ್ಮ– ಪ್ರೀತಿಪಾತ್ರನೇ, ಯುದ್ಧದಲ್ಲಿ ನನ್ನನ್ನು ಗೆಲ್ಲುವ ಯಾವ ಶತ್ರುವನ್ನೂ ನಾನು ಕಾಣುವುದಿಲ್ಲ. ಈಗಂತೂ ನನ್ನ ಮೃತ್ಯುಕಾಲವಿಲ್ಲ, ಪುನಃ ನನ್ನ ಬಳಿಗೆ ಬಾ.

ಸಂಜಯಃ

ತತೋ ಯುಧಿಷ್ಠಿರೋ ವಾಕ್ಯಂ ಭೀಷ್ಮಸ್ಯ ಕುರುನಂದನ ।
ಶಿರಸಾ ಪ್ರತಿಜಗ್ರಾಹ ಭೂಯಸ್ತಮಭವಾದ್ಯ ಚ ॥೪೫॥

ಪ್ರಾಯಾತ್ ಪುನರ್ಮಹಾಬಾಹುರಾಚಾರ್ಯಸ್ಯ ರಥಂ ಪ್ರತಿ ।
ಪಶ್ಯತಾಂ ಸರ್ವಸೈನ್ಯಾನಾಂ ಮಧ್ಯೇನ ಭ್ರಾತೃಭಿಃ ಸಹ ॥೪೬॥

ಸಂಜಯ– ಎಲೈ ಕುರುನಂದನನೇ, ಆಗ ಯುಧಿಷ್ಠಿರನು ಭೀಷ್ಮರ ವಾಕ್ಯವನ್ನು ಶಿರಸಾ ಧರಿಸಿ ಪುನಃ ಅವರಿಗೆ ನಮಸ್ಕಾರ ಮಾಡಿ ಎಲ್ಲಸೈನ್ಯವು ನೋಡುತ್ತಿರುವಂತೆಯೇ ಆ ಸೈನ್ಯದ ಮಧ್ಯದಿಂದ ಸಹೋದರಸಹಿತನಾಗಿ ಮಹಾಬಾಹುವಾದ ಅವನು ಆಚಾರ್ಯರಾದ ದ್ರೋಣರ ರಥದ ಕಡೆಗೆ ನಡೆದನು.

ಸ ದ್ರೋಣಮಭಿವಾದ್ಯಾಥ ಕೃತ್ವಾ ಚೈವ ಪ್ರದಕ್ಷಿಣಮ್ ।
ಉವಾಚ ವಾಚಾ ದುರ್ಧರ್ಷಮಾತ್ಮನಿಶ್ರೇಯಸಂ ವಚಃ ॥೪೭॥

ಅವನು ದ್ರೋಣರಿಗೆ ಪ್ರದಕ್ಷಿಣೆಯನ್ನು ಮಾಡಿ, ನಮಸ್ಕಾರವನ್ನು ಮಾಡಿ, ಸೋಲಿಸಲು ಅಸಾಧ್ಯರಾದ ಅವರನ್ನು ಕುರಿತು ತನಗೆ ಶ್ರೇಯಸ್ಸುಂಟಾಗುವ ಮಾತುಗಳನ್ನು ಅವರ ಬಳಿ ಆಡಿದನು.

ಆಮಂತ್ರಯೇ ತ್ವಾಂ ಭಗವನ್ ಯೋತ್ಸ್ಯೇ ಏಗತಕಲ್ಮಷಃ ।
ಜಯೇಯಂ ಚ ರಿಪೂನ್ ಸರ್ವಾನನುಜ್ಞಾತಸ್ತ್ವಯಾ ದ್ವಿಜ ॥೪೮॥

ಪೂಜ್ಯರೇ, ನಾನು ಯಾವ ದೋಷವೂ ಇಲ್ಲದವನಾಗಿ ನಿಮ್ಮ ಜೊತೆಯಲ್ಲಿ ಯುದ್ಧವನ್ನು ಮಾಡುವೆನು. ಎಲೈ ಬ್ರಾಹ್ಮಣರೇ, ನಿಮ್ಮ ಅನುಜ್ಞೆಯನ್ನು ಪಡೆದು ನಾನು ಎಲ್ಲ ಶತ್ರುಗಳನ್ನೂ ಗೆದ್ದೇನು!

ದ್ರೋಣಃ

ಯದಿ ಮಾಂ ನಾಭಿಗಚ್ಛೇಥಾ ಯುದ್ಧಾಯ ಕೃತನಿಶ್ಚಯಃ ।
ಶಪೇಯಂ ತ್ವಾಂ ಮಹಾರಾಜ ಪರಾಭವಾಯ ಸರ್ವಶಃ ॥೪೯॥

ದ್ರೋಣ– ಎಲೈ ಮಹಾರಾಜನೇ, ಯುದ್ಧವನ್ನು ನಿಶ್ಚಯಿಸಿ ನೀನು ನನ್ನ ಬಳಿಗೆ ಬರದಿದ್ದರೆ ನಿನಗೆ ಸರ್ವರೀತಿಯಲ್ಲಿಯೂ ಪರಾಭವ ಉಂಟಾಗಲೆಂದು ನಾನು ಶಾಪವನ್ನು ಕೊಡುತ್ತಿದ್ದೆ.

ತದ್ ಯುಧಿಷ್ಠಿರ ತುಷ್ಟೋಽಸ್ಮಿ ಪೂಜಿತಶ್ಚ ತ್ವಯಾನಘ ।
ಅನುಜಾನಾಮಿ ಯುಧ್ಯಸ್ವ ವಿಜಯಂ ಸಮವಾಪ್ನುಹಿ ॥೫೦॥

ಆದ್ದರಿಂದ ಯುಧಿಷ್ಠಿರನೇ, ಅನಘನೇ, ನಾನು ನಿನ್ನ ನಡತೆಯಿಂದ ಸಂತುಷ್ಟನಾಗಿದ್ದೇನೆ. ನಿನ್ನಿಂದ ಪೂಜಿತನಾಗಿದ್ದೇನೆ. ನಿನಗೆ ಅನುಮತಿಯನ್ನು ಕೊಡುತ್ತಿದ್ದೇನೆ. ಯುದ್ಧವನ್ನು ಮಾಡಿ ವಿಜಯವನ್ನು ಹೊಂದು.

ಕರವಾಣಿ ಚ ತೇ ಕಾಮಂ ಬ್ರೂಹಿ ಯತ್ ತೇಽಭಿಕಾಂಕ್ಷಿತಮ್ ।
ಏವಂ ಗತೇ ಮಹಾರಾಜ ಯುದ್ಧಾದನ್ಯತ್ ಕಿಮಿಚ್ಛಸಿ ॥೫೧॥

ನಿನ್ನ ಮನಸ್ಸಿನಲ್ಲಿ ಏನಿದೆ ಎಂದು ಹೇಳು. ನಿನ್ನ ಆಸೆಯನ್ನು ನಾನು ನೆರವೇರಿಸುವೆನು. ಮಹಾರಾಜನೇ, ಇಂತಹ ಪರಿಸ್ಥಿತಿ ಇರುವಾಗ ಯುದ್ಧವನ್ನು ಬಿಟ್ಟು ಬೇರೆ ಏನನ್ನು ಬಯಸುವಿ?

ಅರ್ಥಸ್ಯ ಪುರುಷೋ ದಾಸೋ ದಾಸಸ್ತ್ವರ್ಥೋ ನ ಕಸ್ಯಚಿತ್ ।
ಇತಿ ಸತ್ಯಂ ಮಹಾರಾಜ ಬದ್ಧೋಽಸ್ಮ್ಯರ್ಥೇನ ಕೌರವೈಃ ॥೫೨॥

ಅತಸ್ತಾ ಂ ಕ್ಲೀಬವದ್ ಬ್ರೂಮೋ ಯುದ್ಧಾದನ್ಯತ್ ಕಿಮಿಚ್ಛಸಿ ।
ಯೋತ್ಸ್ಯಾಮಿ ಕೌರವಸ್ಯಾರ್ಥೇ ತವಾಶಾಸ್ಯೋ ಜಯೋ ಮಯಾ॥೫೩॥

ಅರ್ಥಕ್ಕೆ ಪುರುಷನು ದಾಸನಾಗುತ್ತಾನೆ, ಅರ್ಥವು ಯಾರಿಗೂ ದಾಸನಾಗುವುದಿಲ್ಲ. ಮಹಾರಾಜನೇ, ಇದು ಸತ್ಯವಾದ ಮಾತು. ಅರ್ಥದ ನಿಮಿತ್ತದಿಂದಾಗಿ ಕೌರವರಿಂದ ಬದ್ಧನಾಗಿದ್ದೇನೆ. ಆದ್ದರಿಂದ ನಾವು ಯುದ್ಧವನ್ನು ಬಿಟ್ಟು ಬೇರೆ ಏನನ್ನು ಬಯಸುತ್ತೀಯೆ ಎಂದು ನಪುಂಸಕರಂತೆ ಕೇಳುತ್ತಿದ್ದೇವೆ. ನಾನು ಕೌರವರ ಸಲುವಾಗಿ ಯುದ್ಧವನ್ನು ಮಾಡುವೆನು. ನಿನಗೆ ಜಯವನ್ನು ಬಯಸುವೆನು.

ಯುಧಿಷ್ಠಿರಃ

ಜಯಮಾಶಾಸ್ಸ್ವ ಮೇ ಬ್ರಹ್ಮನ್ ಮಂತ್ರಯಸ್ವ ಚ ಮದ್ಧಿತಮ್ ।
ಯುಧ್ಯಸ್ವ ಕೌರವಸ್ಯಾರ್ಥೇ ವರ ಏಷ ವೃತೋ ಮಯಾ ॥೫೪॥

ಯುಧಿಷ್ಠಿರ– ಬ್ರಾಹ್ಮಣರೇ, ನನಗೆ ಜಯದ ಆಶೀರ್ವಾದವನ್ನು ಮಾಡಿ. ನನ್ನ ಹಿತವನ್ನು ಆಲೋಚನೆ ಮಾಡುವವರಾಗಿ, ಕೌರವರ ಸಲುವಾಗಿ ಯುದ್ಧವನ್ನು ಮಾಡಿ. ಇದೇ ನಾನು ಬೇಡುವ ವರ.

ದ್ರೋಣಃ

ಧ್ರುವಸ್ತೇ ವಿಜಯೋ ರಾಜನ್ ಯಸ್ಯ ಮಂತ್ರೀ ಹರಿಸ್ತವ ।
ಅಹಂ ಚ ತ್ವಾಭ್ಯಜಾನಾಮಿ ರಣೇ ಶತ್ರೂನ್ ವಿಜೇಷ್ಯಸಿ ॥೫೫॥

ಯತೋ ಧರ್ಮಸ್ತತಃ ಕೃಷ್ಣೋ ಯತಃ ಕೃಷ್ಣಸ್ತತೋ ಜಯಃ ।
ಯುಧ್ಯಸ್ವ ಗಚ್ಛ ಕೌಂತೇಯ ಪೃಚ್ಛ ಮಾಂ ಕಿಂ ಬ್ರವೀಮಿ ತೇ ॥೫೬॥

ದ್ರೋಣ– ರಾಜನೇ, ಯಾವ ನಿನಗೆ ಹರಿಯು ಮಂತ್ರಿಯಾಗಿದ್ದಾನೆಯೋ, ಅಂತಹ ನಿನಗೆ ಜಯವು ನಿಶ್ಚಿತವಾದುದು. ನಾನೂ ನಿನಗೆ ಅನುಮತಿಯನ್ನು ಕೊಡುತ್ತಿದ್ದೇನೆ. ನೀನು ಯುದ್ಧದಲ್ಲಿ ಶತ್ರುಗಳನ್ನು ಗೆಲ್ಲುವಿ. ಎಲ್ಲಿ ಧರ್ಮವಿದೆಯೋ ಅಲ್ಲಿ ಕೃಷ್ಣನಿದ್ದಾನೆ. ಎಲ್ಲಿ ಕೃಷ್ಣನಿದ್ದಾನೆಯೋ ಅಲ್ಲಿ ಜಯವಿದೆ. ಕೌಂತೇಯನೇ, ಹೋಗಿ ಯುದ್ಧವನ್ನು ಮಾಡು. ಬೇರೆ ಏನಾದರೂ ಕೇಳುವುದಿದ್ದರೆ ಕೇಳು, ನಿನಗೆ ಏನು ಹೇಳಲಿ?

ಯುಧಿಷ್ಠಿರಃ

ಪೃಚ್ಛಾಮಿ ತ್ವಾಂ ದ್ವಿಜಶ್ರೇಷ್ಠ ಶೃಣು ಮೇ ಯದ್ ವಿವಕ್ಷಿತಮ್ ।
ಕಥಂ ಜಯೇಯಂ ಸಂಗ್ರಾಮೇ ಭವಂತಮಪರಾಜಿತಮ್ ॥೫೭॥

ಯುಧಿಷ್ಠಿರ– ಎಲೈ ಬ್ರಾಹ್ಮಣ ಶ್ರೇಷ್ಠರೇ, ನಿಮ್ಮನ್ನು ಕೇಳುತ್ತೇನೆ, ನನ್ನ ಅಭಿಪ್ರಾಯವು ಏನಿದೆ ಎಂದು ಕೇಳಿ. ಯುದ್ಧದಲ್ಲಿ ಎಂದೂ ಪರಾಜಯವನ್ನು ಹೊಂದದ ನಿಮ್ಮನ್ನು ನಾನು ಹೇಗೆ ಗೆದ್ದೇನು?

ದ್ರೋಣಃ

ನ ತೇऽಸ್ತಿ ವಿಜಯಸ್ತಾವದ್ ಯಾವದ್ ಯುಧ್ಯಾಮ್ಯಹಂ ರಣೇ ।
ಮಮಾಶು ನಿಧನೇ ರಾಜನ್ ಯತಸ್ವ ಸಹ ಸೋದರೈಃ ॥೫೮॥

ದ್ರೋಣ– ಎಲೈ ರಾಜನೇ, ನಾನು ಯುದ್ಧ ಮಾಡುವ ತನಕ ನಿನಗೆ ಜಯ ಉಂಟಾಗುವುದಿಲ್ಲ. ನೀನು ತಮ್ಮಂದಿರ ಜೊತೆಯಲ್ಲಿ ಬೇಗ ನನ್ನನ್ನು ವಧೆಯನ್ನು ಮಾಡಲು ಪ್ರಯತ್ನವನ್ನು ಪಡು.

ಯುಧಿಷ್ಠಿರಃ

ಹಂತ ತಸ್ಮಾನ್ಮಹಾಬಾಹೋ ವಧೋಪಾಯಂ ವದಾತ್ಮನಃ ।
ಆಚಾರ್ಯ ಪ್ರಣಿಪತ್ಯೈಷ ಪೃಚ್ಛಾಮಿ ತ್ವಾಂ ನಮೋऽಸ್ತು ತೇ ॥೫೯॥

ಯುಧಿಷ್ಠಿರ– ಸಂತೋಷ. ಆದ್ದರಿಂದಲೇ ಮಹಾಬಾಹುಗಳೇ, ನಿಮ್ಮ ವಧೋಪಾಯವನ್ನು ಕೇಳುತ್ತಿದ್ದೇನೆ. ಆಚಾರ್ಯರೇ, ನಿಮಗೆ ನಮಸ್ಕಾರವನ್ನು ಮಾಡಿ ಕೇಳುತ್ತಿದ್ದೇನೆ, ಪುನಃ ನಿಮಗೆ ನಮಸ್ಕಾರಗಳು.

ದ್ರೋಣ:

ನ ತ್ವಂ ತಾತ ಹನ್ಮಿ ಯೋ ಮಾಂ ಹನ್ಯಾದ್ ರಣೇ ಪುಮಾನ್ ।
ಯುದ್ಧಮಾತ್ರಂ ಮಮಂತ್ಯಂ ಶರಮೋಕ್ಷಾದೃತೇ ನಹಿ ॥೬೦॥

ಮಾಶೇ ಸ್ತ್ರಿಯಮಹಂ ರಾಜನ್ ಶೃಣುತಸ್ಯಾಮಿತೌಜಸಮ್ ।
ಹನ್ಯಾಮ್ಯೇ ಯುಧಿ ಯೋಧಾನಾಂ ಸಹಸ್ರಾಣಿ ಬ್ರವೀಮಿ ತೇ ॥೬೧॥

ದ್ರೋಣ- ನಾನು ಸುಪ್ತನಿಂದ ಬಾಣಗಳ ಮಳೆಯನ್ನು ಸುರಿಸುತ್ತಾ ಯುದ್ಧವನ್ನು ಮಾಡುತ್ತಿರುವಾಗ ನನ್ನನ್ನು ಗೆಲ್ಲುವ ಯಾವ ಶತ್ರುವೂ ನನಗೆ ಕಾಣುವುದಿಲ್ಲ. ಎಲೈ ರಾಜನೇ, ನಾನು ಪ್ರಾಯೋಪವೇಶವನ್ನು ಮಾಡಿ ಏಕಾಗ್ರನಾಗಿ ಶಸ್ತ್ರಸಂನ್ಯಾಸವನ್ನು ಮಾಡಿದ ಒಂದು ಸಂದರ್ಭವನ್ನು ಬಿಟ್ಟು ಯುದ್ಧದಲ್ಲಿ ಯಾವ ಯೋಧನೂ ನನ್ನನ್ನು ಕೊಲ್ಲಲಾರ. ಈ ಮಾತನ್ನು ಸತ್ಯವಾಗಿ ಹೇಳುತ್ತಿದ್ದೇನೆ.

ಶೃಣ್ವತಃ ಬಾಣಂ ರಾಜೇ ಜಹ್ಯಾಂ ಪ್ರಾಣಾ ಸಮಾಹಿತಮ್ಯಸಮ್ ।
ಧೃಷ್ಟದ್ಯುಮ್ನಾತ್ ಋತಾದೇವ ಸತ್ಯಂ ಬ್ರವೀಮಿ ತೇ ॥೬೨॥

ಅತ್ಯಂತ ಅಸ್ಯವಾದ ಮಾತನ್ನು ಕೇಳಿ, ನಾನು ಯುದ್ಧದಲ್ಲಿ ಶಸ್ತ್ರಸಂನ್ಯಾಸವನ್ನು ಮಾಡಿಯೇನು! ಅಂತಹ ಮಾತನ್ನು ಆಡುವ ಪುರುಷ ಮಾತನ್ನು ನಾನು ನಂಬುವೆನು. ಇದು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ಸಂಜಯ:

ಏವಮ್ ಶ್ರುತ್ವಾ ಮಹಾರಾಜ ಭಾರದ್ವಾಜಸ್ಯ ಧೀಮತಃ ।
ಅಬ್ರವೀನ್ನ ಪರಾಜಿಷ್ಣೋಃ ಸಾಯಾಯುಧ್ಯಸ್ಯ ಸ್ವಯಂ ॥೬೩॥

ಸಂಜಯ- ಎಲೈ ಮಹಾರಾಜನೇ, ಮೇಧಾವಿಗಳಾದ ದ್ರೋಣರ ಈ ಮಾತುಗಳನ್ನು ಕೇಳಿ ಅವರ ಅಮತಿಯನ್ನು ಪಡೆದು ಯುಧಿಷ್ಠಿರನು ಕೃಪಾಚಾರ್ಯರ ಬಳಿಗೆ ಹೋದನು.

ತೋऽಧಿಕಾಶ್ಯ ಕೃಪಂ ರಾಜಾ ಶೂರಾ ಶೂರ ಸ್ವದರ್ಶನಮ್ ।
ಉವಾಚ ದುರ್ಲಭತಮಂ ವಾಕ್ಯಂ ವಾಕ್ಯವಿಶಾರದಃ ॥೬೪॥

ರಾಜನೂ, ವಾಕ್ಯವಿಶಾರದನೂ ಆದ ಅವನು ಕೃಪಾಚಾರ್ಯರಿಗೆ ಪ್ರದಕ್ಷಿಣೆ ನಮಸ್ಕಾರವನ್ನು ಮಾಡಿ ಸೋಲಿಸಲು ಅತ್ಯಂತ ದುಷ್ಕರರಾದ ಅವರನ್ನು ಕುರಿತು ಮಾತನಾಡಿದನು.

ಅನುಮಾನಯೇ ತ್ವಾಂ ಯೋತ್ಸ್ಯಾಮಿ ಗುರೋ ವಿಗತಕಲ್ಮಷಃ ।
ಜಯೇಯಂ ಚ ರಿಪೂನ್ ಸರ್ವಾನಸುಖಾತ್ಸ್ಯಯಾನಘ ॥೬೫॥

ಗುರುಗಳೇ, ಯಾವ ದೋಷವೂ ಇಲ್ಲದವನಾಗಿ ನಾನು ಯುದ್ಧವನ್ನು ಮಾಡುವೆನು. ನಿಮ್ಮ ಅನುಮತಿಯನ್ನು ಬೇಡುತ್ತಿದ್ದೇನೆ. ಎಲೈ ಅನಘರೇ, ನಿಮ್ಮ ಅನುಮತಿಯನ್ನು ಪಡೆದು ನಾನು ಎಲ್ಲ ಶತ್ರುಗಳನ್ನೂ ಗೆದ್ದೇನು.

ಕೃಪಃ

ಯದಿ ಮಾಂ ನಾಭಿಗಚ್ಛೇಥಾ ಯುದ್ಧಾಯ ಕೃತನಿಶ್ಚಯಃ ।
ಶಪೇಯಂ ತ್ವಾಂ ಮಹಾರಾಜ ಪರಾಭಾವಾಯ ಸರ್ವತಃ ॥೬೬॥

ಕೃಪ– ಮಹಾರಾಜನೇ, ಯುದ್ಧವನ್ನು ನಿಶ್ಚಯಿಸಿ ನನ್ನ ಬಳಿಗೆ ಬರದಿದ್ದರೆ ನಿನಗೆ ಸರ್ವವಿಧದಲ್ಲಿಯೂ ಪರಾಭವವುಂಟಾಗಲೆಂದು ಶಪಿಸುತ್ತಿದ್ದೆ.

ಅರ್ಥಸ್ಯ ಪುರುಷೋ ದಾಸೋ ದಾಸಸ್ತ್ವರ್ಥೋ ನ ಕಸ್ಯಚಿತ್ ।
ಇತಿ ಸತ್ಯಂ ಮಹಾರಾಜ ಬದ್ಧೋಽಸ್ಮ್ಯರ್ಥೇನ ಕೌರವೈಃ ॥೬೭॥

ತೇಷಾಮರ್ಥೇ ಮಹಾರಾಜ ಯೋದ್ಧವ್ಯಮಿತಿ ಮೇ ಮತಿಃ ।
ಅತಸ್ತ್ವಾಂ ಕ್ಲೀಬವದ್ ಬ್ರೂಮಿ ಯುದ್ಧಾದನೃತ ಕಿಮಿಚ್ಛಸಿ ॥೬೮॥

ಪುರುಷನು ಅರ್ಥಕ್ಕೆ ದಾಸನಾದವನು, ಅರ್ಥವು ಯಾರಿಗೂ ದಾಸನಾಗುವುದಿಲ್ಲ. ಎಲೈ ಮಹಾರಾಜನೇ, ಈ ಮಾತು ಸತ್ಯವಾದುದು. ನಾನು ಕೌರವರಿಂದ ಅರ್ಥದ ನಿಮಿತ್ತದಿಂದ ಬದ್ಧನಾಗಿದ್ದೇನೆ. ಮಹಾರಾಜನೇ, ನಾನು ಕೌರವರ ಪರವಾಗಿ ಯುದ್ಧವನ್ನು ಮಾಡುತ್ತೇನೆ ಎಂಬ ಅಭಿಪ್ರಾಯವನ್ನು ಹೊಂದಿದ್ದೇನೆ. ಆದ್ದರಿಂದ ನಾನು ಯುದ್ಧವನ್ನು ಬಿಟ್ಟು ಬೇರೆ ಏನನ್ನು ಬಯಸುತ್ತೀಯೆ ಎಂದು ನಪುಂಸಕರಂತೆ ನಿನ್ನನ್ನು ಕೇಳುತ್ತಿದ್ದೇನೆ.

ಯುಧಿಷ್ಠಿರಃ

ಶಂಸ ಭೂಮಿಂ ಶೇ ಶಾಸ್ತಾದಾಚಾರ್ಯ ಕೃಪು ಮೇ ದುಃ ॥೬೯॥

ಅಮೃಷ್ಯ ಸ್ಥವಿರೋ ರಾಜಾ ಸೋದಾಸ ಗುರುಶಾಸನಃ ।

ಯುಧಿಷ್ಠಿರ– ಆಚಾರ್ಯರೇ, ಸಂತೋಷ. ನಿನ್ನ ಮಾತನ್ನು ಕೇಳಿ ಎಂದು ಹೇಳಿ ರಾಜನು ವಿಸರ್ಜಿಸಾಗಿ ವಿಸರ್ಜಿಸಾಗಿ ಮಾತನಾಡಲಿಲ್ಲ.

ಸಂಜಯಃ

ತಂ ಗೌತಮಃ ಪ್ರಶ್ರಿತಾಃ ವಿಶ್ವಾಯಸ್ಯ ವಿಸರ್ಜಿತಮ್ ।
ಅವಧ್ಯೋಽಸಿ ಮಹೀಪಾಲ ಯುದ್ಧಸ್ಯ ಜಯಮಾಪ್ನುಹಿ ॥೭೦॥

ಸಂಜಯ– ಕೃಪಾಚಾರ್ಯರು ಅವನ ಅಧ್ಯಾಯವನ್ನು ತೀರಿದು ಅವನನ್ನು ಕುರಿತು ರಾಜನೇ, ನಾನು ಅವಧ್ಯನಾದವನು. ನೀನು ಯುದ್ಧವನ್ನು ಮಾಡಿ ಜಯವನ್ನು ಹೊಂದು.

ಕೃತಸ್ತ್ವಾಗಮನಾಜ್ಞಂ ಜಯಂ ಶತ್ರ ಸರಾಧಿಪ ।
ಆಚಾರ್ಯೋ ಸದೋತ್ಸಾಯ ಸ್ವಮೇತದ್ ಬ್ರವೀಮಿ ತೇ ॥೭೧॥

ಎಲೈ ರಾಜನೇ, ನಿನ್ನ ಆಗಮನದಿಂದ ನಾನು ಸಂತೋಷಗೊಂಡಿದ್ದೇನೆ. ನಿನಗೆ ಪ್ರತಿನಿತ್ಯವೂ ಪ್ರಾತಃಕಾಲದಲ್ಲಿ ಎದ್ದು ಜಯವನ್ನು ಬಯಸುವೆನು. ಇದನ್ನು ಸತ್ಯವಾಗಿ ನಿನಗೆ ಹೇಳುತ್ತಿದ್ದೇನೆ.

ವಿಶಿಷ್ಟಾಸ್ತಾ ಮಹಾರಾಜ ಗೌತಮಸ್ಯ ದುಷ್ಕರಾ ।
ಅನುಮಾನ್ಯ ಕೃಪಂ ರಾಜಾ ಪ್ರಯಯೌ ಯೇನ ಮದ್ರರಾಟ್ ॥೭೨॥

ಎಲೈ ಮಹಾರಾಜನೇ, ಗೌತಮರಾದ ಕೃಪಾಚಾರ್ಯರ ಈ ಮಾತನ್ನು ಕೇಳಿ ರಾಜಾದ ಯುಧಿಷ್ಠಿರನು ಅವರ ಅನುಮತಿಯನ್ನು ಪಡೆದು ಶಲ್ಯನಿದ್ದಲ್ಲಿಗೆ ಹೊರಟನು.

ಸ ಶಲ್ಯಮಭಿವಾದ್ಯಾಥ ಕೃತ್ವಾ ಚಾಭಿಪ್ರದಕ್ಷಿಣಮ್ ।
ಉವಾಚ ರಾಜಾ ಮದ್ರೇಶಮಾಪ್ತಕೃತ್ಯೇಯಸಂ ದುಃ ॥೭೩॥

ರಾಜನಾದ ಅವನು ಶಲ್ಯನಿಗೆ ಪ್ರದಕ್ಷಿಣೆ ನಮಸ್ಕಾರವನ್ನು ಮಾಡಿ ತನ್ನ ಶ್ರೇಯಸ್ಸನ್ನು ಸಾಧಿಸುವ ಮಾತನ್ನು ಆಡಿದನು.

ಅನುಮಾನಯೇ ತ್ವಾಂ ಯೋತ್ಸ್ಯಾಮಿ ಗುರೋ ವಿಗತಕಲ್ಮಷಃ ।
ಜಯೇಯಂ ಚ ಮಹಾರಾಜ ಅನುಜ್ಞಾತಸ್ತ್ವಯಾ ರಿಪೂನ್ ॥೭೪॥

ಎಲೈ ಗುರುವೇ (ಸೋದರಮಾವನೇ), ನಾನು ದೋಷರಹಿತನಾಗಿ ಯುದ್ಧವನ್ನು ಮಾಡುವೆನು. ನಿನ್ನ ಅನುಮತಿಯನ್ನು ಬೇಡುತ್ತಿದ್ದೇನೆ. ಮಹಾರಾಜನೇ, ನಿನ್ನ ಅನುಮತಿಯನ್ನು ಪಡೆದು ನಾನು ಶತ್ರುಗಳನ್ನು ಗೆಲ್ಲುವೆನು.

ಶಲ್ಯಃ

ಯದಿ ಮಾಂ ನಾಭಿಗಚ್ಛೇಥಾ ಯುದ್ಧಾಯ ಕೃತನಿಶ್ಚಯಃ ।
ಶಪೇಯಂ ತ್ವಾಂ ಮಹಾರಾಜ ಪರಾಭಾವಾಯ ವೈ ರಣೇ ॥೭೫॥

ಶಲ್ಯ– ಎಲೈ ಮಹಾರಾಜನೇ, ಯುದ್ಧವನ್ನು ನಿಶ್ಚಯಿಸಿ ನನ್ನ ಬಳಿಗೆ ನೀನು ಬರದಿದ್ದರೆ ನಿನಗೆ ಯುದ್ಧದಲ್ಲಿ ಸೋಲಾಗಲೆಂದು ನಾನು ಶಾಪವನ್ನು ಕೊಡುತ್ತಿದ್ದೆ.

ತುಷ್ಟೋಽಸ್ಮಿ ಪೂಜಿತಶ್ಚಾಸ್ಮಿ ಯತ್ ಕಾಂಕ್ಷಸಿ ತದಸ್ತು ತೇ ।
ಅನುಜಾನಾಮಿ ಚೈವ ತ್ವಾಂ ಯುಧ್ಯಸ್ವ ಜಯಮಾಪ್ನುಹಿ ॥೭೬॥

ನಾನು ಸಂತುಷ್ಟನಾಗಿದ್ದೇನೆ. ನಿನ್ನಿಂದ ಗೌರವಿಸಲ್ಪಟ್ಟಿದ್ದೇನೆ. ನೀನು ಏನು ಬಯಸುವಿಯೋ ಅದು ನಿನಗೆ ಸಿದ್ಧಿಸಲಿ. ನಿನಗೆ ಅನುಮತಿಯನ್ನು ಕೊಡುತ್ತಿದ್ದೇನೆ. ಯುದ್ಧವನ್ನು ಮಾಡಿ ಜಯವನ್ನು ಹೊಂದು.

ಬ್ರೂಹಿ ಚೈವ ಪರಂ ವೀರ ಕೇನಾರ್ಥಃ ಕಂ ದದಾಮಿ ತೇ ।
ಏವಂ ಗತೇ ಮಹಾರಾಜ ಯುದ್ಧಾದನ್ಯತ್ ಕಿಮಿಚ್ಛಸಿ ॥೭೭॥

ಎಲೈ ವೀರನೇ, ಅದಲ್ಲದೆ ಬೇರೆ ನಿನಗೆ ಏನಾಗಬೇಕೆಂದು ಇದೆ ಎಂದು ಹೇಳು. ಅದನ್ನೂ ನಿನಗೆ ಕೊಡುವೆನು. ಮಹಾರಾಜನೇ, ಪರಿಸ್ಥಿತಿಯು ಹೀಗಿರುವಾಗ ಯುದ್ಧವನ್ನು ಬಿಟ್ಟು ಬೇರೆ ಏನನ್ನು ಬಯಸುತ್ತೀಯೆ?

ಅರ್ಥಸ್ಯ ಪುರುಷೋ ದಾಸೋ ದಾಸಸ್ತ್ವರ್ಥೋ ನ ಕಸ್ಯಚಿತ್ ।
ಇತಿ ಸತ್ಯಂ ಮಹಾರಾಜ ಬದ್ಧೋಽಸ್ಮ್ಯರ್ಥೇನ ಕೌರವೈಃ ॥೭೮॥

ಕರಿಷ್ಯಾಮಿ ಹಿ ತೇ ಕಾಮಂ ಭಾಗಿನೇಯ ಯಥೇಪ್ಸಿತಮ್ ।
ಬ್ರವೀಮ್ಯತಃ ಕ್ಲೀಬವತ್ ತ್ವಾಂ ಯುದ್ಧಾದನ್ಯತ್ ಕಿಮಿಚ್ಛಸಿ ॥೭೯॥

ಮಹಾರಾಜನೇ, ಪುರುಷನು ಅರ್ಥಕ್ಕೆ ದಾಸನಾಗುತ್ತಾನೆ. ಅರ್ಥವು ಯಾರಿಗೂ ದಾಸನಾಗುವುದಿಲ್ಲ ಎಂಬ ಮಾತು ಸತ್ಯವಾದುದು. ಕೌರವರಿಂದ ನಾನು ಅರ್ಥದ ನಿಮಿತ್ತದಿಂದಾಗಿ ಬದ್ಧನಾಗಿದ್ದೇನೆ. ಸೋದರಳಿಯನೇ, ನಿನಗೆ ಇಷ್ಟವಾದಂತೆ ನಿನ್ನ ಆಸೆಯನ್ನು ನೆರವೇರಿಸುವೆನು. ಆದ್ದರಿಂದ ನಪುಂಸಕನಂತೆ ಯುದ್ಧವನ್ನು ಬಿಟ್ಟು (ನಿನ್ನ ಸಲುವಾಗಿ ಯುದ್ಧವನ್ನು ಮಾಡು ಎನ್ನುವುದನ್ನು ಬಿಟ್ಟು) ಬೇರೆ ಏನನ್ನು ಬಯಸುತ್ತೀಯೆ?

ಯುಧಿಷ್ಠಿರಃ

ಮಂತ್ರಯಸ್ವ ಮಹಾರಾಜ ನಿತ್ಯಂ ಮದ್ಧಿತಮುತ್ತಮಮ್ ।
ಕಾಮಂ ಯುಧ್ಯ ಪರಸ್ಯಾರ್ಥೇ ವರಮೇತದ್ ವೃಣೋಮ್ಯಹಮ್ ॥

ಯುಧಿಷ್ಠಿರ– ಮಹಾರಾಜನೇ, ನಿತ್ಯವೂ ನನ್ನ ಹಿತವನ್ನು ಚಿಂತಿಸಿ ಕೌರವರ ಪರವಾಗಿ ಯುದ್ಧವನ್ನು ಮಾಡು. ಇದೇ ನಾನು ಬೇಡುವ ವರ.

ಶಲ್ಯಃ

ಬ್ರೂಹಿ ಕಿಮತ್ರ ಸಾಹ್ಯಂ ತೇ ಕರೋಮಿ ನೃಪಸತ್ತಮ ।
ಕಾಮಂ ಯೋತ್ಸ್ಯೇ ಪರಸ್ಯಾರ್ಥೇ ವೃತೋಽಸ್ಮ್ಯರ್ಥೇನ ಕೌರವೈಃ ॥೮೧॥

ಶಲ್ಯ– ರಾಜಶ್ರೇಷ್ಠನೇ, ಈ ಯುದ್ಧದ ವಿಷಯದಲ್ಲಿ ನಾನು ನಿನಗೆ ಏನು ಸಹಾಯವನ್ನು ಮಾಡಲಿ ಎಂದು ಹೇಳು. ನಾನು ಕೌರವರ ಪರವಾಗಿ ನನ್ನ ಇಚ್ಛೆಯಿಂದಲೇ ಯುದ್ಧಮಾಡುವೆನು. ಅರ್ಥದಿಂದಾಗಿ ನನ್ನನ್ನು ಕೌರವರು ವರಿಸಿದ್ದಾರೆ.

ಯುಧಿಷ್ಠಿರಃ

ಸ ಏವ ಮೇ ವರಃ ಸತ್ಯ ಉದ್ಯೋಗೇ ಯಸ್ತ್ವಯಾ ಕೃತಃ ।
ಸೂತಪುತ್ರಸ್ಯ ಸಂಗ್ರಾಮೇ ಕಾರ್ಯಃ ತೇಜೋವಧಸ್ತ್ವಯಾ ॥೮೨॥

ಯುಧಿಷ್ಠಿರ– ಸೇನ್ಯೋದ್ಯಮ ಕಾಲದಲ್ಲಿ ನಾನು ಏನು ಕೇಳಿದೆನೋ ಅದೇ ನಾನು ನಿನ್ನಿಂದ ಬಯಸುವ ವರ. ಯುದ್ಧದಲ್ಲಿ ನೀನು ಸೂತಪುತ್ರನಾದ ಕರ್ಣನ ತೇಜೋವಧೆಯನ್ನು ಮಾಡಬೇಕು.

ಶಲ್ಯಃ

ಸಂಪತ್ಸ್ಯತ್ಯೇಷ ತೇ ಕಾಮಃ ಕುಂತೀಪುತ್ರ ಯಥೇಪ್ಸಿತಃ ।
ಗಚ್ಛ ಯುಧ್ಯಸ್ವ ವಿಸ್ರಬ್ಧಂ ಪ್ರತಿಜಾನೇ ಜಯಂ ತವ ॥೮೩॥

ಶಲ್ಯ– ಎಲೈ ಕುಂತೀಪುತ್ರನೇ, ನಿನಗೆ ಇಷ್ಟವಾದ ಈ ಆಸೆಯು ನೆರವೇರುವುದು. ಹೋಗಿ ನಿಶ್ಚಿಂತೆಯಾಗಿ ಯುದ್ಧವನ್ನು ಮಾಡು. ನಿನ್ನ ಜಯವನ್ನು ನಾನು ಪ್ರತಿಜ್ಞೆ ಮಾಡುತ್ತೇನೆ.

ಸಂಜಯಃ

ಅನುಮಾನ್ಯಾಥ ಕೌಂತೇಯೋ ಮಾತುಲಂ ಮದ್ರಕೇಶ್ವರಮ್ ।
ನಿರ್ಜಗಾಮ ಮಹಾಸೈನ್ಯಾದ್ ಭ್ರಾತೃಭಿಃ ಪರಿವಾರಿತಃ ॥೮೪॥

ಸಂಜಯ– ಕೌಂತೇಯನಾದ ಯುಧಿಷ್ಠಿರನು, ಮದ್ರರಾಜನೂ, ಸೋದರ ಮಾವನೂ ಆದ ಶಲ್ಯನ ಅನುಮತಿಯನ್ನು ಪಡೆದು ಸಹೋದರರಿಂದ ಪರಿವಾರಿತನಾಗಿ ಕೌರವರ ದೊಡ್ಡ ಸೈನ್ಯದಿಂದ ಹೊರಬಂದನು.

ವಾಸುದೇವಸ್ತು ರಾಧೇಯಮಾಹವೇಽಭಿಜಗಾಮ ವೈ ।
ತತ ಏನಮುವಾಚೇದಂ ಪಾಂಡವಾರ್ಥೇ ಗದಾಗ್ರಜಃ ॥೮೫॥

ಗದಾಗ್ರಜನಾದ ಕೃಷ್ಣನಾದರೂ ಯುದ್ಧದಲ್ಲಿ ಕರ್ಣನ ಸಮೀಪಕ್ಕೆ ಹೋಗಿ ಪಾಂಡವರ ಸಲುವಾಗಿ ಕರ್ಣನನ್ನು ಕುರಿತು ಈ ಮಾತನ್ನು ಆಡಿದನು.

ಶ್ರುತಂ ಮೇ ಕರ್ಣ ಭೀಷ್ಮಸ್ಯ ದ್ವೇಷಾತ್ ಕಿಲ ನ ಯೋತ್ಸ್ಯಸಿ ।
ಅಸ್ಮಾನ್ ವರಯ ರಾಧೇಯ ಯಾವದ್ ಭೀಷ್ಮೋ ನ ಹನ್ಯತೇ ॥೮೬॥

ಕರ್ಣನೇ, ಭೀಷ್ಮರ ಮೇಲಿನ ದ್ವೇಷದಿಂದ ನೀನು ಯುದ್ಧವನ್ನು ಮಾಡುವುದಿಲ್ಲ ಎಂದು ನಾನು ಕೇಳಿದ್ದೇನೆ. ಎಲೈ ರಾಧೇಯನೇ, ಆದ್ದರಿಂದ ಭೀಷ್ಮರ ವಧೆಯಾಗುವವರಗೆ ನಮ್ಮ ಪರವಾಗಿ ಯುದ್ಧವನ್ನು ಮಾಡು.

ಹತೇ ತು ಭೀಷ್ಮೇ ರಾಧೇಯ ಪುನರೇಷ್ಯಸಿ ಸಂಯುಗೇ ।
ಧಾರ್ತರಾಷ್ಟ್ರಸ್ಯ ಸಾಹಾಯ್ಯಂ ಯದಿ ಪಶ್ಯಸಿ ಚೇತ್ತಮಮ್ ॥೮೭॥

ರಾಧೇಯನೇ, ಭೀಷ್ಮರು ಹತರಾದ ಮೇಲೆ ಪುನಃ ಯುದ್ಧವನ್ನು ಮಾಡಿ ನಿನಗೆ ಸರಿ ಎಂದು ತೋರಿದರೆ ದುರ್ಯೋಧನನಿಗೆ ಸಹಾಯವನ್ನು ಮಾಡುವಿ.

ಕರ್ಣಃ

ನ ವಿಪ್ರಿಯಂ ಕರಿಷ್ಯಾಮಿ ಧಾರ್ತರಾಷ್ಟ್ರಸ್ಯ ಕೇಶವ ।
ತ್ಯಕ್ತಪ್ರಾಣಂ ಹಿ ಮಾಂ ವಿದ್ಧಿ ದುರ್ಯೋಧನಹಿತೈಷಿಣಮ್ ॥೮೮॥

ಕರ್ಣ– ಎಲೈ ಕೇಶವನೇ, ನಾನು ದುರ್ಯೋಧನನಿಗೆ ಎಂದೂ ಅಪ್ರಿಯವನ್ನು ಮಾಡುವುದಿಲ್ಲ. ನಾನು ದುರ್ಯೋಧನನ ಹಿತೈಷಿ ಮತ್ತು ಅವನ ಸಲುವಾಗಿ ಪ್ರಾಣವನ್ನೂ ಬಿಡಲು ಸಿದ್ಧ ಎಂದು ತಿಳಿ.

ಸಂಜಯಃ

ತಚ್ಛ್ರುತ್ವಾ ವಚನಂ ಕೃಷ್ಣಃ ಸಂನ್ಯವರ್ತತ ಭಾರತ ।
ಯುಧಿಷ್ಠಿರಪುರೋಗೈಶ್ಚ ಪಾಂಡವೈಃ ಸಹ ಸಂಗತಃ ॥೮೯॥

ಸಂಜಯ– ಎಲೈ ಭಾರತನೇ, ಅದನ್ನು ಕೇಳಿ ಹಿಂದಿರುಗಿದ ಕೃಷ್ಣನು ಯುಧಿಷ್ಠಿರನೇ ಮೊದಲಾದ ಪಾಂಡವರ ಜೊತೆಯಲ್ಲಿ ಸೇರಿಕೊಂಡನು.

ಅಥ ಸೈನ್ಯಸ್ಯ ಮಧ್ಯೇ ತು ಪ್ರಾಕ್ರೋಶತ್ ಪಾಂಡವಾಗ್ರಜಃ ।
ಯೋಽಸ್ಮಾನ್ ವೃಣೋತಿ ತದಹಂ ವರಯೇ ಸಾಹ್ಯಕಾರಣಾತ್ ॥೯೦॥

ಅನಂತರ ಸೈನ್ಯದ ಮಧ್ಯದಲ್ಲಿ ನಿಂತು ಪಾಂಡವಾಗ್ರಜನಾದ ಯುಧಿಷ್ಠಿರನು ಯಾವನು ನಮ್ಮ ಪಕ್ಷಕ್ಕೆ ಬರುತ್ತಾನೆಯೋ ಅವನನ್ನು ಯುದ್ಧದಲ್ಲಿ ನಮಗೆ ಸಹಾಯವನ್ನು ಮಾಡಲು ಸ್ವೀಕರಿಸುತ್ತೇನೆ ಎಂದು ಗಟ್ಟಿಯಾಗಿ ಹೇಳಿದನು.

ಅಥ ತಾನ್ ಸಮಭಿಪ್ರೇಕ್ಷ್ಯ ಯುಯುತ್ಸುರಿದಮಬ್ರವೀತ್ ।
ಪ್ರೀತಾತ್ಮಾ ಧರ್ಮರಾಜಾನಂ ಕುಂತೀಪುತ್ರಂ ಯುಧಿಷ್ಠಿರಮ್ ॥೯೧॥

ಆಗ ಅವರನ್ನು ನೋಡಿ ಸಂತೋಷಗೊಂಡ ಯುಯುತ್ಸುವು ಕುಂತೀಪುತ್ರನಾದ ಯುಧಿಷ್ಠಿರನನ್ನು ಕುರಿತು ಈ ಮಾತನ್ನಾಡಿದನು.

ಅಹಂ ಯೋತ್ಸ್ಯಾಮಿ ಮಿಷತಃ ಸಂಯುಗೇ ಧಾರ್ತರಾಷ್ಟ್ರಜಾನ್ ।
ಯುಷ್ಮದರ್ಥೇ ಮಹಾರಾಜ ಯದಿ ಮಾಂ ವೃಣುಷೇಽನಘ ॥೯೨॥

ಎಲೈ ಮಹಾರಾಜನೇ, ಎಲೈ ಅನಘನೇ, ನೀನು ನನ್ನನ್ನು ಸ್ವೀಕರಿಸುವುದಾದರೆ ನಾನು ದುರ್ಯೋಧನಾದಿಗಳು ನೋಡುತ್ತಿರುವಂತೆಯೇ ನಿಮ್ಮ ಪರವಾಗಿ ಯುದ್ಧವನ್ನು ಮಾಡುವೆನು.

ಯುಧಿಷ್ಠಿರಃ

ಏಹ್ಯೇಹಿ ಸರ್ವೇ ಯೋತ್ಸ್ಯಾಮಸ್ತವ ಭ್ರಾತೄನಪಂಡಿತಾನ್ ।
ಯುಯುತ್ಸೋ ವಾಸುದೇವಶ್ಚ ವಯಂ ಚ ಬ್ರೂಮ ಸರ್ವತಃ ॥೯೩॥

ಯುಧಿಷ್ಠಿರ– ಎಲೈ ಯುಯುತ್ಸುವೇ, ಬಾ ಬಾ. ಎಲ್ಲರೂ ಸೇರಿ ಅವಿವೇಕಿಗಳಾದ ನಿನ್ನ ಸಹೋದರರ ಜೊತೆಯಲ್ಲಿ ಯುದ್ಧವನ್ನು ಮಾಡೋಣ. ಕೃಷ್ಣನೂ ಮತ್ತು ನಾವೂ ನಿನ್ನನ್ನು ಆಹ್ವಾನಿಸುತ್ತಿದ್ದೇವೆ.

ವೃಣೋಮಿ ತ್ವಾಂ ಮಹಾಬಾಹೋ ಯುಧ್ಯಸ್ವ ಮಮ ಕಾರಣಾತ್ ।
ತ್ವಯಿ ಪಿಂಡಶ್ಚ ತಂತುಶ್ಚ ಧೃತರಾಷ್ಟ್ರಸ್ಯ ದೃಶ್ಯತೇ ॥೯೪॥

ಎಲೈ ಮಹಾಬಾಹುವೇ, ನಿನ್ನನ್ನು ನಾನು ಸ್ವೀಕರಿಸುತ್ತೇನೆ. ನನ್ನ ಪರವಾಗಿ ಯುದ್ಧವನ್ನು ಮಾಡು. ಧೃತರಾಷ್ಟ್ರನ ಪಿಂಡವೂ ಮತ್ತು ಸಂತಾನವೂ ನಿನ್ನಲ್ಲಿಯೇ ಕಾಣುತ್ತಿದೆ.

ಭಜಸ್ವಾಸ್ಮಾನ್ ರಾಜಪುತ್ರ ಭಜಮಾನಾನ್ ಮಹಾದ್ಯುತೇ ।
ನ ಭವಿಷ್ಯತಿ ದುರ್ಬುದ್ಧಿರ್ಧಾರ್ತರಾಷ್ಟ್ರೋಽತ್ಯಮರ್ಷಣಃ ॥೯೫॥

ಎಲೈ ರಾಜಪುತ್ರನೇ, ಮಹಾದ್ಯುತಿಯೇ, ನಿನ್ನಲ್ಲಿ ಪ್ರೀತಿ ಇರುವ ನಮ್ಮನ್ನು ಪ್ರೀತಿಯಿಂದ ಸೇವಿಸು. ದುರ್ಬುದ್ಧಿಯೂ, ಕ್ರೋಧಶೀಲನೂ ಆದ ದುರ್ಯೋಧನನು ಭೂಮಿಯ ಮೇಲೆ ಬದುಕುವುದಿಲ್ಲ.

ಸಂಜಯಃ

ತತೋ ಯುಯುತ್ಸುಃ ಕೌರವ್ಯಃ ಪರಿತ್ಯಜ್ಯ ಸುತಾಂಸ್ತವ ।
ಜಗಾಮ ಪಾಂಡುಪುತ್ರಾಣಾಂ ಸೇನಾಂ ವಿಶ್ರಾವ್ಯ ದುಂದುಭಿಮ್ ॥೯೬॥

ಸಂಜಯ– ಆಗ ಕೌರವನಾದ ಯುಯುತ್ಸುವು ನಿನ್ನ ಮಕ್ಕಳ ಪಕ್ಷವನ್ನು ತೊರೆದು ದುಂದುಭಿಯನ್ನು ಬಾರಿಸಿ ಘೋಷಿಸಿ ಪಾಂಡವರ ಸೈನ್ಯವನ್ನು ಸೇರಿದನು.

ತತೋ ಯುಧಿಷ್ಠಿರೋ ರಾಜಾ ಸಂಪ್ರಹೃಷ್ಟಃ ಸಹಾನುಜೈಃ ।
ಜಗ್ರಾಹ ಕವಚಂ ಭೂಯೋ ದೀಪ್ತಿಮತ್ ಕನಕೋಜ್ಜ್ವಲಮ್ ॥೯೭॥

ಅನಂತರ ರಾಜನಾದ ಯುಧಿಷ್ಠಿರನು ತಮ್ಮಂದಿರ ಜೊತೆಯಲ್ಲಿ ಸಂತೋಷಗೊಂಡು ಸುವರ್ಣಕಾಂತಿಯಿಂದ ಪ್ರಕಾಶಿಸುವ ತನ್ನ ಕವಚವನ್ನು ಪುನಃ ಧರಿಸಿದನು.

ಪ್ರತ್ಯಪದ್ಯಂತ ತೇ ಸರ್ವೇ ರಥಾನ್ ಸ್ವಾನ್ ಪುರುಷರ್ಷಭಾಃ ।
ತತೋ ವ್ಯೂಹಂ ಯಥಾಪೂರ್ವಂ ಪ್ರತ್ಯವ್ಯೂಹಂತ ತೇ ಪುನಃ ॥೯೮॥

ಪುರುಷರ್ಷಭರಾದ ಪಾಂಡವರೆಲ್ಲರೂ ತಮ್ಮ ತಮ್ಮ ರಥಗಳಿಗೆ ಹಿಂದಿರುಗಿದರು. ಅನಂತರ ಅವರು ಮೊದಲಿನಂತೆಯೇ ಪ್ರತಿವ್ಯೂಹವನ್ನು ರಚಿಸಿದರು.

ಅವಾದಯನ್ ದುಂದುಭೀಂಶ್ಚ ಶತಶಶ್ಚೈವ ಪುಷ್ಕರಾನ್ ।
ಸಿಂಹನಾದಾಂಶ್ಚ ವಿವಿಧಾನ್ ವಿನೇದುಃ ಪುರುಷರ್ಷಭಾಃ ॥೯೯॥

ಪುರುಷಶ್ರೇಷ್ಠರಾದ ಅವರು ದುಂದುಭಿಗಳನ್ನೂ, ನೂರಾರು ಸಂಖ್ಯೆಯಲ್ಲಿ ಪುಷ್ಕರಗಳನ್ನೂ ಮೊಳಗಿಸಿ ಅನೇಕ ವಿಧವಾದ ಸಿಂಹನಾದಗಳನ್ನು ಮಾಡಿದರು.

ರಥಸ್ಥಾನ್ ಪುರುಷವ್ಯಾಘ್ರಾನ್ ಪಾಂಡವಾನ್ ಪ್ರೇಕ್ಷ್ಯ ಪಾರ್ಥಿವಾಃ ।
ಧೃಷ್ಟದ್ಯುಮ್ನಾದಯಃ ಸರ್ವೇ ಪುನರ್ಜಹೃಷಿರೇ ಮುದಾ ॥೧೦೦॥

ರಥದಲ್ಲಿ ಕುಳಿತ ಪುರುಷವ್ಯಾಘ್ರರಾದ ಪಾಂಡವರನ್ನು ನೋಡಿ ಧೃಷ್ಟದ್ಯುಮ್ನ ಮೊದಲಾದ ಎಲ್ಲ ರಾಜರೂ ಪುನಃ ಸಂತೋಷಗೊಂಡರು.

ಗೌರವಂ ಪಾಂಡುಪುತ್ರಾಣಾಂ ಮಾನ್ಯಾನ್ ಮಾನಯತಾಂ ಚ ತಾನ್ ।
ದೃಷ್ಟ್ವಾ ಮಹೀಕ್ಷಿತಸ್ತತ್ರ ಪೂಜಯಾಂ ಚಕ್ರಿರೇಭೃಶಮ್ ॥೧೦೧॥

ಮಾನ್ಯರಾದವರನ್ನು ಪೂಜಿಸುವ ಪಾಂಡುಪುತ್ರರ ಗೌರವವನ್ನು ನೆರೆದಿದ್ದ ರಾಜರು ನೋಡಿ ಅಲ್ಲಿ ಪಾಂಡವರನ್ನು ಚೆನ್ನಾಗಿ ಪೂಜಿಸಿದರು.

ಸೌಹೃದಂ ಚ ಕೃಪಾಂ ಚೈವ ಪ್ರಾಪ್ತಕಾಲಂ ಮಹಾತ್ಮನಾಮ್ ।
ದಯಾಂ ಚ ಜ್ಞಾತಿಷು ಪರಾಂ ಕಥಯಾಂಚಕ್ರಿರೇ ನೃಪಾಃ ॥೧೦೨॥

ರಾಜರು ಪಾಂಡವರ ಸ್ನೇಹವನ್ನು, ಮಹಾತ್ಮರ ಕೃಪೆಯನ್ನು, ಮಹಾತ್ಮರಾದ ಅವರು ಯೋಗ್ಯಕಾಲದಲ್ಲಿ ತೋರಿಸಿದ ಶ್ರೇಷ್ಠವಾದ ಜ್ಞಾತಿಗಳಲ್ಲಿ ದಯೆಯನ್ನು ಪರಸ್ಪರವಾಗಿ ಮಾತನಾಡಿಕೊಂಡರು.

ಸಾಧು ಸಾಧ್ವಿತಿ ಸರ್ವತ್ರ ನಿಶ್ಚೇರುಃ ಸ್ತುತಿಸಂಹಿತಾಃ ।
ವಾಚಃ ಪುಣ್ಯಾಃ ಕೀರ್ತಿಮತಾಂ ಮನೋಹೃದಯಹರ್ಷಣೀಃ ॥೧೦೩॥

ಕೀರ್ತಿವಂತರಾದ ಆ ಪಾಂಡವರಿಗೆ ಎಲ್ಲ ಕಡೆಗಳಿಂದಲೂ 'ಸಾಧು ಸಾಧು' ಎಂಬ ಸ್ತುತಿ ಸಹಿತವಾದ ಮನಸ್ಸು ಮತ್ತು ಹೃದಯವನ್ನು ಸಂತೋಷಪಡಿಸುವ ಪವಿತ್ರವಾದ ಮಾತುಗಳು ಹೊರಹೊಮ್ಮಿದವು.

ಮ್ಲೇಚ್ಛಾರ್ಯಾಶ್ಚ ಯೇ ತತ್ರ ದದೃಶುಃ ಶುಭ್ರವೃತ್ತದಾ ।
ವೃತ್ತಂ ತತ್ ಪಾಂಡುಪುತ್ರಾಣಾಂ ರುರುದುಸ್ತೇ ಸಗದ್ಗದಾಃ ॥೧೦೪॥

ಅಲ್ಲಿ ಸೇರಿದ್ದ ಮ್ಲೇಚ್ಛರು ಮತ್ತು ಆರ್ಯರೂ ಸಹ ಪಾಂಡುಪುತ್ರರ ನಡತೆಯನ್ನು ನೋಡಿ ಮತ್ತು ಕೇಳಿ ಗದ್ಗದವಾದ ಕಂಠದಿಂದ ರೋದಿಸಿದರು.

ತತೋ ಜಘ್ನುರ್ಮಹಾಭೇರೀಃ ಶತಶಶ್ಚೈವ ಪುಷ್ಕರಾನ್ ।
ಶಂಖಾಂಶ್ಚ ಗೋಕ್ಷೀರನಿಭಾನ್ ದಧ್ಮುರ್ಹೃಷ್ಟಾ ಮನುಷ್ಯಾಃ ॥೧೦೫॥

ಅನಂತರ ಧೈರ್ಯಶಾಲಿಗಳಾದ ಅವರು ನೂರಾರು ಸಂಖ್ಯೆಯಲ್ಲಿ ದೊಡ್ಡ ಭೇರಿಗಳನ್ನೂ, ಪುಷ್ಕರಗಳನ್ನೂ, ಗೋಕ್ಷೀರದಂತೆ ಶ್ವೇತವರ್ಣದಿಂದ ಕೂಡಿದ ಶಂಖಗಳನ್ನೂ ಸಂತೋಷದಿಂದ ಊದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ವಿಕುಟ್ಟನಿಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೆರಡನೆಯ ಅಧ್ಯಾಯ

ಯುದ್ಧದ ಪ್ರಾರಂಭ. ಭೀಮಸೇನನ ವಿಜೃಂಭಣೆ.

ಧೃತರಾಷ್ಟ್ರಃ

ಏವಂ ವ್ಯೂಢೇಷ್ವನೀಕೇಷು ಮಾಮಕೇಷ್ವಿತರೇಷು ಚ ।
ಕೇ ಪೂರ್ವಂ ಪ್ರಾಹರಂಸ್ತತ್ರ ಕುರವಃ ಪಾಂಡವಾಸ್ತಥಾ ॥೧॥

ಧೃತರಾಷ್ಟ್ರ– ಹೀಗೆ ನಮ್ಮ ಮತ್ತು ಪರರ ಸೈನ್ಯಗಳು ವ್ಯೂಹಗೊಂಡ ಮೇಲೆ ಮೊದಲು ಯಾರು ಪ್ರಹಾರವನ್ನು ಮಾಡಿದರು? ಕೌರವರೋ ಅಥವಾ ಪಾಂಡವರೋ?

ಸಂಜಯಃ

ಭ್ರಾತೃಭಿಃ ಸಹಿತೋ ರಾಜನ್ ಪುತ್ರೋ ದುರ್ಯೋಧನಸ್ತವ ।
ಭೀಷ್ಮಂ ಪ್ರಮುಖಿತಃ ಕೃತ್ವಾ ಪ್ರಯಯೌ ಸಹ ಸೇನಯಾ ॥೨॥

ಸಂಜಯ– ಎಲೈ ರಾಜನೇ, ನಿನ್ನ ಪುತ್ರನಾದ ದುರ್ಯೋಧನನು ತಮ್ಮಂದಿರಿಂದ ಸಹಿತನಾಗಿ ಭೀಷ್ಮರನ್ನು ಮುಂದೆ ಮಾಡಿಕೊಂಡು ಸೈನ್ಯದ ಜೊತೆಯಲ್ಲಿ ಹೊರಟನು.

ತಥೈವ ಪಾಂಡವಾಃ ಸರ್ವೇ ಭೀಮಸೇನಪುರೋಗಮಾಃ ।
ಭೀಷ್ಮೇಣ ಯುದ್ಧಮಿಚ್ಛಂತಃ ಪ್ರಯಯುರ್ಹೃಷ್ಟಮಾನಸಾಃ ॥೩॥

ಹಾಗೆಯೇ ಭೀಮಸೇನನನ್ನು ಮುಂದೆ ಮಾಡಿಕೊಂಡ ಎಲ್ಲ ಪಾಂಡವರು ಭೀಷ್ಮರ ಜೊತೆಯಲ್ಲಿ ಯುದ್ಧವನ್ನು ಬಯಸುತ್ತಾ ಸಂತೋಷಗೊಂಡ ಮನಸ್ಸಿನಿಂದ ಮುಂದೆ ಹೊರಟರು.

ಕ್ಷ್ವೇಡಾಃ ಕಿಲಕಿಲಾಶಬ್ದಾಃ ಕೃಕವಾ ಗೋವಿಷಾಣಿಕಾಃ ।
ಭೇರೀಮೃದಂಗಮುರಜಾ ಹಯಕುಂಜರನಿಸ್ವನಾಃ ॥೪॥

ಉಭಯೋಃ ಸೇನಯೋ ರಾಜಂಸ್ತತಸ್ತೇऽಸ್ಮಾನ್ ಸಮಾದ್ರವನ್ ।
ವಯಂ ಪ್ರತಿನದಂತಶ್ಚ ತದಾಸೀತ್ ತುಮುಲಂ ಮಹತ್ ॥೫॥

ಭಟರ ಗರ್ಜನೆಗಳು, ಕೋಲಾಹಲ ಶಬ್ದಗಳು, ಕೃಕವ, ಗೋವಿಷಾಣ, ಭೇರೀ, ಮೃದಂಗ, ಮುರಜ ಮೊದಲಾದ ವಾದ್ಯವಿಶೇಷಗಳು, ಅಶ್ವ-ಗಜಗಳ ನಾದಗಳು

ಇವು ಎರಡು ಸೈನ್ಯಗಳಲ್ಲೂ ಉಂಟಾದವು. ರಾಜನೇ, ಅನಂತರ ಅವರು ನಮ್ಮ ಮೇಲೆ ಎರಗಿದರು. ನಾವೂ ಸಹ ನಿಮಗೆ ಪ್ರತಿಯಾಗಿ ನಾವಿದ್ದೇವೆ ಎಂದು ಹೇಳುತ್ತಾ ಸಂತೋಷಪಡುತ್ತಾ ಮುಂದೆ ನಡೆದೆವು.

ಮಹಾಂತ್ಯನೀಕಾನಿ ಮಹಾಸಮುಚ್ಛ್ರಯೇ
ಸಮಾಗಮೇ ಪಾಂಡವಧಾರ್ತರಾಷ್ಟ್ರಯೋಃ ।
ಚಕಂಪಿರೇ ಶಂಖಮೃದಂಗನಿಸ್ವನೈಃ
ಪ್ರಕಂಪಿತಾನೀವ ವನಾನಿ ವಾಯುನಾ ॥೬॥

ಆಗ ದೊಡ್ಡ ಸಂಘರ್ಷ ಉಂಟಾಯಿತು. ಪಾಂಡವ, ಕೌರವರ ಎರಡು ದೊಡ್ಡ ಸೈನ್ಯಗಳ ಸಮಾಗಮ ಉಂಟಾದ ಶಂಖ ಮೃದಂಗಾದಿ ಶಬ್ದಗಳಿಂದ ಎರಡು ದೊಡ್ಡ ಸೈನ್ಯಗಳೂ ಬಿರುಗಾಳಿಗೆ ಕಂಪಿಸುವ ಕಾಡುಗಳಂತೆ ಕಂಪಿಸಿದವು.

ನರೇಂದ್ರನಾಗಾಶ್ವರಥಾಕುಲಾನಾಮ್
ಅಭ್ಯಾಯತೀನಾಮಶಿವೇ ಮುಹೂರ್ತೇ ।
ಬಭೂವ ಘೋಷಸ್ತುಮುಲಶ್ಚಮೂನಾಂ
ವಾತೋದ್ಧೂತಾನಾಮಿವ ಸಾಗರಾಣಾಮ್ ॥೭॥

ರಾಜರು, ಗಜಗಳು, ಅಶ್ವ-ರಥಗಳು ಇವುಗಳು ವಿಸ್ತಾರವಾಗಿ ಹಬ್ಬರುವ ಆ ಅಮಂಗಳ ಮುಹೂರ್ತದಲ್ಲಿ ಸೈನ್ಯಗಳ ತೀವ್ರವಾದ ಘೋಷಗಳು ಬಿರುಗಾಳಿಗೆ ಎದ್ದ ಸಾಗರಗಳ ಅಲೆಗಳಂತೆ ಅದ್ಭುತವಾಗಿದ್ದಿತು.

ತಸ್ಮಿನ್ ಸಮುತ್ಥಿತೇ ಶಬ್ದೇ ತುಮುಲೇ ಲೋಮಹರ್ಷಣೇ ।
ಭೀಮಸೇನೋ ಮಹಾಬಾಹುಃ ಪ್ರಾಣದದ್ ಗೋವೃಷೋ ಯಥಾ ॥

ಶಂಖದುಂದುಭಿನಿರ್ಘೋಷಂ ವಾರಣಾನಾಂ ಚ ಬೃಂಹಿತಮ್ ।
ಸಿಂಹನಾದಂ ಚ ಸೈನ್ಯಾನಾಂ ಭೀಮಸೇನರವೋऽಧ್ಯಭೂತ್ ॥೯॥

ರೋಮಾಂಚಕಾರಿಯಾದ, ತೀವ್ರವಾದ ಆ ಕೋಲಾಹಲ ಶಬ್ದವು ಉಂಟಾದಾಗ ಮಹಾಬಾಹುವಾದ ಭೀಮಸೇನನು ಗೂಳಿಯಂತೆ ಗರ್ಜಿಸಿದನು. ಭೀಮಸೇನನ ಗರ್ಜನೆಯು ಶಂಖ-ದುಂದುಭಿಗಳ ಘೋಷಗಳನ್ನೂ, ಆನೆಗಳ ಗರ್ಜನೆಗಳನ್ನೂ, ಸೈನಿಕರ ಸಿಂಹನಾದವನ್ನೂ ಮುಳುಗಿಸಿತು.

ಹಯಾನಾಂ ಹೇಷಮಾಣಾನಾಮನೀಕೇಷು ಸಹಸ್ರಶಃ ।
ಸರ್ವಾನ್ ಪರಾಭವಚ್ಛಬ್ದಾನ್ ಭೀಮಸೇನಸ್ಯ ನಿಸ್ವನಃ ॥೧೦॥

ಭೀಮಸೇನನ ಗರ್ಜನೆಯು ಸಹಸ್ರ ಸಂಖ್ಯೆಯಲ್ಲಿ ಸೈನ್ಯದಲ್ಲಿ ಹೇಷಾರವ ಮಾಡುತ್ತಿದ್ದ ಎಲ್ಲ ಅಶ್ವಗಳ ಧ್ವನಿಯನ್ನೂ ಮೀರಿಸಿ ಕೇಳಿ ಬರುತ್ತಿದ್ದಿತು.

ತಂ ಶ್ರುತ್ವಾ ನಿನದಂ ತಸ್ಯ ಸೈನ್ಯಾಸ್ತವ ವಿತತ್ರಸುಃ ।
ಜೀಮೂತಸ್ಯೇವ ನದತಃ ಶಕ್ರಾಶನಿಸಮಸ್ವನಮ್ ॥೧೧॥

ಮೇಘಗಳ ಗರ್ಜನೆಯಂತೆ ಕೇಳಿಬರುವ ಇಂದ್ರನ ವಜ್ರಾಯುಧದ ಘೋಷಕ್ಕೆ ಸಮವಾದ ಭೀಮಸೇನನ ಆ ನಿನಾದವನ್ನು ಕೇಳಿ ನಿನ್ನ ಸೈನ್ಯಗಳು ಹೆದರಿಹೋದವು.

ವಾಹನಾನಿ ಚ ಸರ್ವಾಣಿ ಶಕೃನ್ಮೂತ್ರಂ ಪ್ರಸುಸ್ರುವುಃ ।
ಶಬ್ದೇನ ತಸ್ಯ ವೀರಸ್ಯ ಸಿಂಹಸ್ಯೇವೇತರೇ ಮೃಗಾಃ ॥೧೨॥

ಸಿಂಹದ ಗರ್ಜನೆಗೆ ಇತರ ಮೃಗಗಳು ಹೆದರುವಂತೆ ಆ ವೀರನಾದ ಭೀಮಸೇನನ ಗರ್ಜನೆಯ ನಾದಕ್ಕೆ ಅಶ್ವ-ಗಜ ಮೊದಲಾದ ವಾಹನಗಳು ಮಲ-ಮೂತ್ರಗಳನ್ನು ವಿಸರ್ಜಿಸಿದವು.

ದರ್ಶಯನ್ ಘೋರಮಾತ್ಮಾನಂ ಮಹಾಭ್ರಮಿವ ನಾದಯನ್ ।
ವಿಭೀಷಯಂಸ್ತವ ಸುತಾಂಸ್ತವ ಸೇನಾಂ ಸಮಭ್ಯಯಾತ್ ॥೧೩॥

ಅವನು ಭಯಂಕರವಾದ ತನ್ನ ರೂಪವನ್ನು ತೋರಿಸುತ್ತಾ! ದೊಡ್ಡ ಮೇಘದಂತೆ ಗರ್ಜಿಸುತ್ತಾ! ನಿನ್ನ ಪುತ್ರರನ್ನು ಹೆದರಿಸುತ್ತಾ! ನಿನ್ನ ಸೈನ್ಯದ ಮೇಲೆ ಎರಗಿದನು.

ತಮಾಯಾಂತಂ ಮಹೇಷ್ವಾಸಂ ಸೋದರ್ಯಾಃ ಪರ್ಯವಾರಯನ್ ।
ಛಾದಯಂತಃ ಶರವ್ರಾತೈರ್ಮೇಘಾ ಇವ ದಿವಾಕರಮ್ ॥೧೪॥

ಹೀಗೆ ಮುಂದೆ ಬರುತ್ತಿರುವ ಮಹಾಧನುರ್ಧಾರಿಯಾದ ಆ ಭೀಮಸೇನನನ್ನು ಮೇಘಗಳು ಸೂರ್ಯನನ್ನು ಸುತ್ತುವರಿದಂತೆ ನಿನ್ನ ಮಕ್ಕಳು ಬಾಣಗಳ ಸಮೂಹದಿಂದ ಸುತ್ತುವರಿದರು.

ದುರ್ಯೋಧನಶ್ಚ ಪುತ್ರಸ್ತೇ ದುರ್ಮುಖೋ ದುಃಸಹಃ ಶಲಃ ।
ದುಃಶಾಸನಶ್ಚಾವಿರಥಸ್ತಥಾ ದುರ್ಮರ್ಷಣೋ ನೃಪ ॥೧೫॥

ವಿವಿಂಶತಿಶ್ಚಿತ್ರಸೇನೋ ವಿಕರ್ಣಶ್ಚ ಮಹಾರಥಃ ।
ಪುರುಮಿತ್ರೋ ಜಯೋ ಭೋಜಃ ಸೌಮದತ್ತಿಶ್ಚ ವೀರ್ಯವಾನ್ ॥೧೬॥

ಮಹಾಚಾಪಾನಿ ಧುನ್ವಂತೋ ಜಲದಾ ಇವ ವಿದ್ಯುತಃ ।
ಆದದಾನಾಶ್ಚ ನಾರಾಚಾನ್ ನಿರ್ಮುಕ್ತಾಶೀವಿಷೋಪಮಾನ್ ॥೧೭॥

ನಿನ್ನ ಪುತ್ರನಾದ ದುರ್ಯೋಧನ, ದುರ್ಮುಖ, ದುಃಸಹ, ಶಲ, ಅತಿರಥನಾದ ದುಶ್ಶಾಸನ, ಹಾಗೆಯೇ ದುರ್ಮರ್ಷಣ, ವಿವಿಂಶತಿ, ಚಿತ್ರಸೇನ, ಮಹಾರಥನಾದ ವಿಕರ್ಣ, ಪುರುಮಿತ್ರ, ಜಯ, ಭೋಜ, ಸೋಮದತ್ತನ ಮಗನಾದ ಭೂರಿಶ್ರವ ಇವರು ತಮ್ಮ ದೊಡ್ಡ ಧನುಸ್ಸುಗಳನ್ನು ಕೊಡವುತ್ತಾ, ಪೊರೆಯನ್ನು ಬಿಟ್ಟ ಸರ್ಪದಂತಿದ್ದ ಮೇಘಗಳಿಂದ ಹೊರಟ ಮಿಂಚಿನಂತಿರುವ ಬಾಣಗಳನ್ನು ಬತ್ತಳಿಕೆಗಳಿಂದ ತೆಗೆಯುತ್ತಾ ಸುತ್ತುವರಿದರು.

ಅಥ ತಾನ್ ದ್ರೌಪದೀಪುತ್ರಾಃ ಸೌಭದ್ರಶ್ಚ ಮಹಾರಥಃ ।
ನಕುಲಃ ಸಹದೇವಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ॥೧೮॥

ಧಾರ್ತರಾಷ್ಟ್ರಾನ್ ಪ್ರತಿಯಯುರರ್ದಯಂತಃ ಶಿತೈಃ ಶರೈಃ ।
ವಜ್ರೈರಿವ ಮಹಾವೇಗೈಃ ಶಿಖರಾಣಿ ಧರಾಭೃತಾಮ್ ॥೧೯॥

ಆಗ ದ್ರೌಪದಿಯ ಮಕ್ಕಳು, ಮಹಾರಥನಾದ ಅಭಿಮನ್ಯು, ನಕುಲ-ಸಹದೇವರು ಮತ್ತು ದ್ರುಪದನ ಮಗನಾದ ಧೃಷ್ಟದ್ಯುಮ್ನ ಇವರು ಮಹಾವೇಗವುಳ್ಳ ವಜ್ರಾಯುಧಗಳು ಪರ್ವತದ ಶಿಖರಗಳನ್ನು ಕುರಿತು ಹೊರಟಂತೆ ಹರಿತವಾದ ಬಾಣಗಳನ್ನು ತೆಗೆದುಕೊಂಡು ನಿನ್ನ ಪುತ್ರರನ್ನು ಮರ್ದಿಸುತ್ತಾ ಪ್ರತಿಯಾಗಿ ಸಾಗಿದರು.

ತುಮುಲಂ ಪ್ರಥಮಸಮ್ಮರ್ದೇ ಭೀಮಜ್ಯಾತಲನಿಸ್ವನೇ ।
ತಾವಕಾನಾಂ ಪರೇಷಾಂ ಚ ನಾಮೀತ್ ಕಶ್ಚ ಪರಾಙ್ಮುಖಃ ॥೨೦॥

ಭಯಂಕರವಾದ, ಹೆದೆಯ ಮತ್ತು ಹುರಿಗಳಗಳ ಶಬ್ದದಿಂದ ಕೂಡಿದ ಮೊದಲಿನ ಸಂಘರ್ಷದಲ್ಲಿ ನಿನ್ನ ಸೈನ್ಯದಲ್ಲಾಗಲೀ ಅಥವಾ ಪಾಂಡವರ ಸೈನ್ಯದಲ್ಲಾಗಲೀ ಯಾರೂ ಪರಾಙ್ಮುಖರಾಗಲಿಲ್ಲ.

ಲಾಘವಂ ದ್ರೋಣಶಿಷ್ಯಾಣಾಮಪಶ್ಯಂ ಭರತರ್ಷಭ ।
ನಿಮಿತ್ತವೇಧಿನಾಂ ರಾಜನ್ ಶರಾನುತ್ಸೃಜತಾಂ ಭೃಶಮ್ ॥೨೧॥

ರಾಜನೇ, ನಾನು ಅಲ್ಲಿ ನಿಮಿತ್ತ ವೇಧಿಗಳಾಗಿ, ಸತತವಾಗಿ ಶರಗಳನ್ನು ಪ್ರಯೋಗಿಸುವ ದ್ರೋಣಶಿಷ್ಯರ ಕೌಶಲವನ್ನು ನೋಡಿದೆನು.

ನೋಪಶಾಮ್ಯತಿ ನಿರ್ಘೋಷೋ ಧನುಷಾಂ ಕೂಜತಾಂ ತಥಾ ।
ವಿನಿಶ್ಚೇರುಃ ಶರಾ ದೀಪ್ತಾ ಜ್ಯೋತೀಂಷೀವ ನಭಸ್ತಳಾತ್ ॥೨೨॥

ನಾದ ಮಾಡುವ ಧನುಸ್ಸುಗಳ ಶಬ್ದವು ನಿಲ್ಲುತ್ತಲೇ ಇರಲಿಲ್ಲ. ಆಕಾಶದಿಂದ ಜ್ಯೋತಿಗಳು ಹೊರಟಂತೆ ದೀಪ್ತವಾದ ಶರಗಳು ಧನುಸ್ಸುಗಳಿಂದ ಹೊರಹೊಮ್ಮಿದವು.

ಸರ್ವೇ ತ್ವನ್ಯೇ ಮಹೀಪಾಲಾಃ ಪ್ರೇಕ್ಷಕಾ ಇವ ಭಾರತ ।
ದದೃಶುರ್ದರ್ಶನೀಯಂ ತಂ ಭೀಮಂ ಜ್ಞಾತಿಸಮಾಗಮಮ್ ॥೨೩॥

ಎಲೈ ಭಾರತನೇ, ಉಳಿದ ರಾಜರೆಲ್ಲರೂ ನೋಡಲು ಮನೋಹರವಾಗಿದ್ದ ಭಯಂಕರವಾದ ಆ ದಾಯಾದಿಗಳ ಸಮಾಗಮವನ್ನು ಪ್ರೇಕ್ಷಕರಂತೆ ನೋಡಿದರು.

ತತಸ್ತೇ ಜಾತಸಂರಂಭಾಃ ಪರಸ್ಪರಕೃತಾಗಸಃ ।
ಅನ್ಯೋನ್ಯಸ್ಪರ್ಧಯಾ ರಾಜನ್ ವ್ಯಾಯಚ್ಛಂತ ಮಹಾರಥಾಃ ॥೨೪॥

ರಾಜನೇ, ಅನಂತರ ಆ ಮಹಾರಥರು ಕ್ರೋಧವನ್ನು ತಂದುಕೊಂಡು ಪರಸ್ಪರವಾಗಿ ಹಿಂಸೆಯನ್ನು ಮಾಡುತ್ತಾ ಅನ್ಯೋನ್ಯ ಸ್ಪರ್ಧೆಯಿಂದ ಪ್ರಹಾರಗಳಲ್ಲಿ ತೊಡಗಿದರು.

ಕುರುಪಾಂಡವಸೇನೇ ತೇ ಹಸ್ತ್ಯಶ್ವರಥಸಂಕುಲೇ ।
ಶುಶುಭಾತೇ ರಣೇಽತೀವ ಪಟೇ ಚಿತ್ರಗತೇ ಇವ ॥೨೫॥

ಗಜ-ಅಶ್ವ-ರಥಗಳಿಂದ ನಿಬಿಡವಾದ ಆ ಕುರು-ಪಾಂಡವ ಸೈನ್ಯಗಳು ಯುದ್ಧದಲ್ಲಿ ಬಟ್ಟೆಯ ಮೇಲೆ ಬರೆದ ಚಿತ್ರಗಳಂತೆ ಶೋಭಿಸಿದವು.

ತತಸ್ತೇ ಪಾರ್ಥಿವಾಃ ಸರ್ವೇ ಪ್ರಗೃಹೀತಶರಾಸನಾಃ ।
ಸಹಸೈನ್ಯಾಃ ಸಮಾಪೇತುಃ ಪುತ್ರಸ್ಯ ತವ ಶಾಸನಾತ್ ॥೨೬॥

ಅನಂತರ ನಿನ್ನ ಮಗನ ಶಾಸನದಂತೆ ಎಲ್ಲ ರಾಜರೂ ತಮ್ಮ ಸೈನ್ಯದ ಜೊತೆಯಲ್ಲಿ ಧನುಸ್ಸುಗಳನ್ನು ಕೈಯಲ್ಲಿ ಹಿಡಿದು ಪಾಂಡವರ ಸೈನ್ಯದ ಮೇಲೆ ಎರಗಿದರು.

ಯುಧಿಷ್ಠಿರೇಣ ಚಾದಿಷ್ಟಾಃ ಪಾರ್ಥಿವಾಸ್ತೇ ಸಹಸ್ರಶಃ ।
ವಿನದಂತಃ ಸಮಾಪೇತುಃ ಪುತ್ರಸ್ಯ ತವ ವಾಹಿನೀಮ್ ॥೨೭॥

ಯುಧಿಷ್ಠಿರನಿಂದ ಆದೇಶವನ್ನು ಪಡೆದ ಸಹಸ್ರಾರು ಸಂಖ್ಯೆಯ ಆ ರಾಜರು ಸಿಂಹನಾದವನ್ನು ಮಾಡುತ್ತಾ ನಿನ್ನ ಮಗನ ಸೈನ್ಯದ ಮೇಲೆ ಎರಗಿದರು.

ಉಭಯೋಃ ಸೇನಯೋಸ್ತೀವ್ರಃ ಸೈನ್ಯಾನಾಂ ಸ ಸಮಾಗಮಃ ।
ಅಂತರ್ಧೀಯತ ಚಾದಿತ್ಯಃ ಸೈನ್ಯೇನ ರಜಸಾವೃತಃ ॥೨೮॥

ಎರಡು ಸೈನ್ಯಗಳಿಗೂ ತೀವ್ರವಾದ ಸಮಾಗಮ ಉಂಟಾಯಿತು. ಸೈನ್ಯದ ಚಲನೆಯಿಂದ ಎದ್ದ ಧೂಳಿನಿಂದ ಸೂರ್ಯನು ಅಂತರ್ಧಾನವನ್ನು ಹೊಂದಿದನು.

ಪ್ರಯುದ್ಧಾನಾಂ ಪ್ರಭಗ್ನಾನಾಂ ಪುನರಾವರ್ತತಾಮಪಿ ।
ನಾತ್ರ ಸ್ವೇಷಾಂ ಪರೇಷಾಂ ವಾ ವಿಶೇಷಃ ಸಮಜಾಯತ ॥೨೯॥

ಯುದ್ಧ ಮಾಡುವ, ಅವಯವಗಳನ್ನು ಕಳೆದುಕೊಳ್ಳುವ ಮತ್ತು ಸ್ವಲ್ಪ ಸಮಯ ಹೊರಗೆ ಹೋಗಿ ಹಿಂದಿರುಗುವ ಎರಡು ಸೈನ್ಯಗಳ ಯೋಧರಲ್ಲಿ ಯಾವ ಅತಿಶಯವೂ ಕಂಡುಬರಲಿಲ್ಲ.

ತಸ್ಮಿಂಸ್ತು ತುಮುಲೇ ಯುದ್ಧೇ ವರ್ತಮಾನೇ ಮಹಾಭಯೇ ।
ಅತಿ ಸರ್ವಾಣ್ಯನೀಕಾನಿ ಪಿತಾ ತೇಽಭವ್ಯರೋಚತ ॥೩೦॥

ಮಹಾಭಯಂಕರವಾದ ಅಂತಹ ತೀವ್ರ ಯುದ್ಧವು ನಡೆಯುತ್ತಿರುವಾಗ ಎಲ್ಲ ಸೈನ್ಯಗಳಿಗಿಂತಲೂ ಅಧಿಕವಾಗಿ ನಿನ್ನ ತಂದೆಯಾದ ಭೀಷ್ಮರು ಶೋಭಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ದ್ವಿಚತ್ವಾರಿಂಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೂರನೆಯ ಅಧ್ಯಾಯ

ಪ್ರಥಮ ದಿವಸದ ಯುದ್ಧದ ವರ್ಣನೆ.

ಸಂಜಯಃ

ಪೂರ್ವಾಹ್ಣೇ ತಸ್ಯ ರೌದ್ರಸ್ಯ ಯುದ್ಧಮಹ್ನೋ ವಿಶಾಂಪತೇ ।
ಪ್ರಾವರ್ತತ ಮಹಾಘೋರಂ ರಾಜ್ಞಾಂ ದೇಹಾವಕರ್ತನಮ್ ॥೧॥

ಸಂಜಯ– ಎಲೈ ರಾಜನೇ, ಆ ಭಯಂಕರ ದಿವಸದ ಪ್ರಾತಃಕಾಲದಲ್ಲಿ ರಾಜರ ದೇಹಗಳನ್ನು ಕತ್ತರಿಸುವಂತಹ ಬಹಳ ಘೋರವಾದ ಯುದ್ಧವು ಪ್ರಾರಂಭವಾಯಿತು.

ಕುರೂಣಾಂ ಪಾಂಡವಾನಾಂ ಚ ಸಂಗ್ರಾಮೇ ವಿಜಿಗೀಷತಾಮ್ ।
ಸಿಂಹಾನಾಮಿವ ಸಂಹ್ರಾದೋ ದಿವಮುರ್ವೀಂ ಚ ನಾದಯನ್ ॥೨॥

ಯುದ್ಧದಲ್ಲಿ ಜಯವನ್ನು ಪಡೆಯಲು ಬಯಸಿದ ಕುರುಗಳ ಮತ್ತು ಪಾಂಡವರ ಸಿಂಹ ಗರ್ಜನೆಗಳಂತಹ ಗರ್ಜನೆಗಳು ಭೂಮಿಯಲ್ಲಿ ಮತ್ತು ಆಕಾಶದಲ್ಲಿ ಪ್ರತಿಧ್ವನಿಸಿದವು.

ಆಸೀತ್ ತಲತಲಾಶಬ್ದಸ್ತಳಶಂಖಿರವೈಃ ಸಹ ।
ಜಜ್ಞಿರೇ ಸಿಂಹನಾದಾಶ್ಚ ಶೂರಾಣಾಂ ಪ್ರತಿಗರ್ಜತಾಮ್ ॥೩॥

ತಳತ್ರಾಭಿಹತಾಶ್ಚೈವ ಜ್ಯಾಶಬ್ದಾ ಭರತರ್ಷಭ ।
ಪತ್ತೀನಾಂ ಪಾದಶಬ್ದಾಶ್ಚ ವಾಜಿನಾಂ ಚ ಮಹಾಸ್ವನಾಃ ॥೪॥

ತೋತ್ತ್ರಾಂಕುಶನಿಪಾತಾಶ್ಚ ಆಯುಧಾನಾಂ ಚ ನಿಸ್ವನಾಃ ।
ಘಂಟಾಶಬ್ದಾಶ್ಚ ನಾಗಾನಾಮನ್ಯೋನ್ಯಮಭಿಧಾವತಾಮ್ ॥೫॥

ಹಸ್ತತಳಗಳ ಶಬ್ದಗಳಿಂದ, ಶಂಖ ಶಬ್ದಗಳಿಂದ ಸೇರಿದ ದೊಡ್ಡ ಕೋಲಾಹಲವು ಉಂಟಾಯಿತು. ಪ್ರತಿಯಾಗಿ ಗರ್ಜಿಸುವ ಶೂರರ ಸಿಂಹನಾದಗಳೂ ಉಂಟಾದವು. ಹಸ್ತರಕ್ಷಣೆ (Gloves) ಗಳನ್ನು ಹೆದೆಗಳಿಗೆ ಉಜ್ಜುವುದರಿಂದ ಉಂಟಾಗುವ ಶಬ್ದವು, ಪದಾತಿಗಳ ಪಾದ ಶಬ್ದಗಳು, ಅಶ್ವಗಳ ಮಹಾ ಹೇಷಾರವಗಳು ಉಂಟಾದವು. ಎಲೈ ಭರತಶ್ರೇಷ್ಠನೇ, ಚಾವಟಿ ಮತ್ತು ಅಂಕುಶಗಳು ಬಿದ್ದ ಶಬ್ದಗಳು, ಆಯುಧಗಳ ಶಬ್ದಗಳು, ಪರಸ್ಪರವಾಗಿ ಮುನ್ನುಗ್ಗುವ ಗಜಗಳ ಕೊರಳಿನ ಘಂಟಾಶಬ್ದವು ಉಂಟಾದವು.

ತಸ್ಮಿನ್ ಸಮುದಿತೇ ಶಬ್ದೇ ತುಮುಲೇ ಲೋಮಹರ್ಷಣೇ ।
ಬಭೂವ ರಥನಿರ್ಘೋಷಃ ಪರ್ಜನ್ಯನಿನದೋಪಮಃ ॥೬॥

ರೋಮಹರ್ಷಣವೂ ಮತ್ತು ತೀವ್ರವೂ ಆದ ಆ ಶಬ್ದಸಮುದಾಯದಲ್ಲಿ ಪರ್ಜನ್ಯ ಘೋಷದಂತಿದ್ದ ರಥನಿರ್ಘೋಷಗಳೂ ಉಂಟಾದವು.

ತೇ ಮನಃ ಕ್ರೂರಮಾಧಾಯ ಸಮಭಿತ್ಯಕ್ತಜೀವಿತಾಃ ।
ಪಾಂಡವಾನಭ್ಯವರ್ತಂತ ಸರ್ವ ಏವೋಚ್ಛ್ರಿತಧ್ವಜಾಃ ॥೭॥

ಕೌರವರ ಸೈನ್ಯದವರೆಲ್ಲರೂ ಮನಸ್ಸಿಗೆ ಕ್ರೌರ್ಯವನ್ನು ತಂದುಕೊಂಡು ಜೀವನದ ಆಸೆಯನ್ನು ತೊರೆದು ತಮ್ಮ ರಥಗಳ ಧ್ವಜಗಳನ್ನು ಮೇಲೆತ್ತಿ ಪಾಂಡವರ ಮೇಲೆ ಎರಗಿದರು.

ಸ್ವಯಂ ಶಾಂತನವೋ ರಾಜನ್ನಭ್ಯಧಾವದ್ ಧನಂಜಯಮ್ ।
ಪ್ರಗೃಹ್ಯ ಕಾರ್ಮುಕಂ ಘೋರಂ ಕಾಲದಂಡೋಪಮಂ ರಣೇ ॥೮॥

ಎಲೈ ರಾಜನೇ, ಭೀಷ್ಮರು ಕಾಲದಂಡದಂತಿದ್ದ ಘೋರವಾದ ಧನುಸ್ಸನ್ನು ಹಿಡಿದು ಯುದ್ಧದಲ್ಲಿ ಧನಂಜಯನ ಕಡೆಗೆ ಸ್ವತಃ ಧಾವಿಸಿದರು.

ಅರ್ಜುನೋಽಪಿ ಧನುರ್ಗೃಹ್ಯ ಗಾಂಡೀವಂ ಲೋಕವಿಶ್ರುತಮ್ ।
ಅಭ್ಯಧಾವತ ತೇಜಸ್ವೀ ಗಾಂಗೇಯಂ ರಣಮೂರ್ಧನಿ ॥೯॥

ಪರಾಕ್ರಮಿಯಾದ ಅರ್ಜುನನೂ ಸಹ ಆ ಶ್ರೇಷ್ಠವಾದ ಯುದ್ಧದಲ್ಲಿ ಲೋಕವಿಖ್ಯಾತವಾದ ಗಾಂಡೀವ ಧನುಸ್ಸನ್ನು ಹಿಡಿದುಕೊಂಡು ಭೀಷ್ಮರ ಕಡೆಗೆ ಧಾವಿಸಿದನು.

ತಾವುಭೌ ಕುರುಶಾರ್ದೂಲೌ ಪರಸ್ಪರವಧೈಷಿಣೌ ।
ಗಾಂಗೇಯಸ್ತು ರಣೇ ಪಾರ್ಥಂ ವಿದ್ವಾ ನಾಕಂಪಯದ್ ಬಲೀ ।
ತಥೈವ ಪಾಂಡವೋ ರಾಜನ್ ಭೀಷ್ಮಂ ನಾಕಂಪಯದ್ ಯುಧಿ ॥೧೦॥

ಪರಸ್ಪರ ವಧೆಯನ್ನು ಬಯಸಿದ ಆ ಇಬ್ಬರು ಕುರುಶ್ರೇಷ್ಠರು ಬಾಣಗಳನ್ನು ಪ್ರಯೋಗಿಸಿದರು. ಬಲಿಷ್ಠರಾದ ಭೀಷ್ಮರು ಯುದ್ಧದಲ್ಲಿ ಅರ್ಜುನನ ಮೇಲೆ ಬಾಣ

ಪ್ರಯೋಗವನ್ನು ಮಾಡಿದರೂ ಅವನನ್ನು ಅಲುಗಾಡಿಸಲೂ ಸಾಧ್ಯವಾಗಲಿಲ್ಲ. ಹಾಗೆಯೇ ಪಾಂಡುಪುತ್ರನಾದ ಅರ್ಜುನನೂ ಸಹ ಯುದ್ಧದಲ್ಲಿ ಭೀಷ್ಮರನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ.

ಸಾತ್ಯಕಿಶ್ಚ ಮಹೇಷ್ವಾಸಃ ಕೃತವರ್ಮಾಣಮಭ್ಯಯಾತ್ ।
ತಯೋಃ ಸಮಭವದ್ ಯುದ್ಧಂ ತುಮುಲಂ ಲೋಮಹರ್ಷಣಮ್ ॥

ಮಹಾಧನುರ್ಧಾರಿಯಾದ ಸಾತ್ಯಕಿಯು ಕೃತವರ್ಮನ ಜೊತೆಯಲ್ಲಿ ಯುದ್ಧ ಮಾಡಿದನು. ಅವರಿಬ್ಬರಿಗೂ ತೀವ್ರವೂ, ರೋಮಾಂಚಕಾರಿಯೂ ಆದ ಯುದ್ಧವು ಜರುಗಿತು.

ಸಾತ್ಯಕಿಃ ಕೃತವರ್ಮಾಣಂ ಕೃತವರ್ಮಾ ಚ ಸಾತ್ಯಕಿಮ್ ।
ಆನರ್ಚ್ಛತುಃ ಶರೈಘೋರೈಸ್ತಕ್ಷಮಾಣೌ ಪರಸ್ಪರಮ್ ॥೧೨॥

ಸಾತ್ಯಕಿಯು ಕೃತವರ್ಮನನ್ನೂ ಮತ್ತು ಕೃತವರ್ಮನು ಸಾತ್ಯಕಿಯನ್ನೂ ಪರಸ್ಪರವಾಗಿ ಘೋರವಾದ ಬಾಣಗಳನ್ನು ಪ್ರಯೋಗಿಸಿ ದೇಹಗಳಲ್ಲಿ ಗಾಯವನ್ನು ಉಂಟುಮಾಡಿದರು.

ತೌ ಶರಾಚಿತಸರ್ವಾಂಗೌ ಶುಶುಭಾತೇ ಮಹಾಬಲೌ ।
ವಸಂತೇ ಪುಷ್ಪಶಬಲೌ ಪುಷ್ಪಿತಾವಿವ ಕಿಂಶುಕೌ ॥೧೩॥

ದೇಹದಲ್ಲಿ ಎಲ್ಲಾ ಕಡೆಯಲ್ಲಿಯೂ ಬಾಣಗಳನ್ನು ನೆಟ್ಟ ಮಹಾಬಲಿಷ್ಠರಾದ ಅವರಿಬ್ಬರು ವಸಂತಕಾಲದಲ್ಲಿ ಕೆಂಪು ಪುಷ್ಪಗಳಿಂದ ಕೂಡಿದ ಮುತ್ತುಗದ ಮರಗಳಂತೆ ಶೋಭಿಸಿದರು.

ಅಭಿಮನ್ಯುರ್ಮಹೇಷ್ವಾಸೋ ಬೃಹದ್ಬಲಮಯೋಧಯತ್ ।
ತತಃ ಕೋಸಲಕೋ ರಾಜಾ ಸೌಭದ್ರಸ್ಯ ವಿಶಾಂಪತೇ ।
ಧ್ವಜಂ ಚಿಚ್ಛೇದ ಸಮರೇ ಸಾರಥಿಂ ಚ ನ್ಯಪಾತಯತ್ ॥೧೪॥

ಮಹಾಧನುರ್ಧಾರಿಯಾದ ಅಭಿಮನ್ಯುವು ಕೋಸಲ ದೇಶದ ರಾಜನಾದ ಬೃಹದ್ಬಲನ ಜೊತೆಯಲ್ಲಿ ಯುದ್ಧ ಮಾಡಿದನು. ಎಲೈ ರಾಜನೇ, ಬೃಹದ್ಬಲನು ಅಭಿಮನ್ಯುವಿನ ಧ್ವಜವನ್ನು ಕತ್ತರಿಸಿ ಅವನ ರಥದ ಸಾರಥಿಯನ್ನು ಉರುಳಿಸಿದನು.

ಸೌಭದ್ರಸ್ತು ತತಃ ಕ್ರುದ್ಧಃ ಪಾತಿತೇ ರಥಸಾರಥೌ ।
ಬೃಹದ್ಬಲಂ ಮಹಾರಾಜ ಏವ್ಯಾಧ ನವಭಿಃ ಶರೈಃ ॥೧೫॥

ಎಲೈ ಮಹಾರಾಜನೇ, ತನ್ನ ರಥದ ಸಾರಥಿಯು ಕೆಳಗೆ ಉರುಳಿಸಲ್ಪಡುತ್ತಿರಲು ಅಭಿಮನ್ಯುವು ಕ್ರುದ್ಧನಾಗಿ ಬೃಹದ್ಬಲನ ಮೇಲೆ ಒಂಬತ್ತು ಬಾಣಗಳನ್ನು ಪ್ರಯೋಗಿಸಿದನು.

ಅಥಾಪರಾಭ್ಯಾಂ ಭಲ್ಲಾಭ್ಯಾಂ ಪೀತಾಭ್ಯಾಮರಿಮರ್ದನಃ ।
ಧ್ವಜಮೇಕೇನ ಚಿಚ್ಛೇದ ಪಾರ್ಷ್ಣಿಮೇಕೇನ ಸಾರಥಿಮ್ ।
ಅನ್ಯೋನ್ಯಂ ಚ ಶರೈಸ್ತೀಕ್ಷ್ಣೈಃ ಕ್ರುದ್ಧೌ ರಾಜಂಸ್ತತಕ್ಷತುಃ ॥೧೬॥

ಶತ್ರುಮರ್ದನನಾದ ಅವನು ಹೊಳೆಯುವ ಎರಡು ಭಲ್ಲಗಳನ್ನು ತೆಗೆದುಕೊಂಡು ಒಂದರಿಂದ ಬೃಹದ್ಬಲನ ಧ್ವಜವನ್ನೂ, ಇನ್ನೊಂದರಿಂದ ಅವನ ಒಂದು ಪಕ್ಕದ ಸಾರಥಿಯನ್ನೂ ಕತ್ತರಿಸಿದನು. ರಾಜನೇ, ಅವರು ಕ್ರುದ್ಧರಾಗಿ ಪರಸ್ಪರವಾಗಿ ತೀಕ್ಷ್ಣವಾದ ಬಾಣಗಳಿಂದ ಒಬ್ಬರನ್ನೊಬ್ಬರು ಘಾಸಿಗೊಳಿಸಿದರು.

ಮಾನಿನಂ ಸಮರೇ ದೃಪ್ತಂ ಕೃತವೈರಂ ಮಹಾರಥಮ್ ।
ಭೀಮಸೇನಸ್ತವ ಸುತಂ ದುರ್ಯೋಧನಮಯೋಧಯತ್ ॥೧೭॥

ಅಹಂಕಾರಿಯೂ, ಯುದ್ಧದಲ್ಲಿ ದರ್ಪಿಷ್ಠನೂ, ಬಹಳ ವೈರವನ್ನು ಮಾಡಿದವನೂ, ಮಹಾರಥನೂ ಆದ ನಿನ್ನ ಪುತ್ರನಾದ ದುರ್ಯೋಧನನ ಜೊತೆಯಲ್ಲಿ ಭೀಮಸೇನನು ಯುದ್ಧವನ್ನು ಮಾಡಿದನು.

ತಾವುಭೌ ನರಶಾರ್ದೂಲೌ ಕುರುಮುಖ್ಯೌ ಮಹಾಬಲೌ ।
ಅನ್ಯೋನ್ಯಂ ಶರವರ್ಷಾಭ್ಯಾಂ ವವೃಷಾತೇ ರಣಾಜಿರೇ ॥೧೮॥

ನರಶ್ರೇಷ್ಠರೂ, ಕುರುಶ್ರೇಷ್ಠರೂ, ಮಹಾಬಲಿಷ್ಠರೂ ಆದ ಅವರಿಬ್ಬರೂ ಯುದ್ಧಭೂಮಿಯಲ್ಲಿ ಪರಸ್ಪರವಾಗಿ ಬಾಣಗಳ ಮಳೆಯನ್ನು ಕರೆದರು.

ತೌ ತು ವೀಕ್ಷ್ಯ ಮಹಾತ್ಮಾನೌ ಕೃತಿನೌ ಚಿತ್ರಯೋಧಿನೌ ।
ವಿಸ್ಮಯಃ ಸರ್ವಭೂತಾನಾಂ ಸಮಪದ್ಯತ ಭಾರತ ॥೧೯॥

ಎಲೈ ಭಾರತನೇ, ವಿಚಿತ್ರವಾಗಿ ಯುದ್ಧವನ್ನು ಮಾಡುವವರೂ, ಕುಶಲರೂ, ಮಹಾಪ್ರಯತ್ನಶೀಲರೂ ಆದ ಅವರಿಬ್ಬರನ್ನೂ ನೋಡಿ ಎಲ್ಲರಿಗೂ ವಿಸ್ಮಯ ಉಂಟಾಯಿತು.

ದುಷ್ಕರ್ಣಸ್ತು ನಕುಲಂ ಪ್ರತ್ಯುದ್ಯಾಯ ಮಹಾರಥಮ್ ।
ಅವಿಧ್ಯತ್ ನಿಶಿತೈರ್ಬಾಣೈರ್ಮರ್ಮಭೇದಿಭಿಃ ॥೨೦॥

ದುಷ್ಕರ್ಣನು ಮಹಾರಥನಾದ ನಕುಲನ ಜೊತೆಯಲ್ಲಿ ಯುದ್ಧವನ್ನು ಮಾಡಿ ತೀಕ್ಷ್ಣವಾದ ಮರ್ಮಭೇದಿಗಳಾದ ಅನೇಕ ಬಾಣಗಳಿಂದ ಅವನನ್ನು ಘಾಸಿಗೊಳಿಸಿದನು.

ತಸ್ಯ ಮಾದ್ರೀಸುತಃ ಕೇತುಂ ಸಶರಂ ಚ ಶರಾಸನಮ್ ।
ಚಿಚ್ಛೇದ ನಿಶಿತೈರ್ಬಾಣೈಃ ಪ್ರಹಸನ್ನಿವ ಭಾರತ ।
ಅಥೈನಂ ಪಂಚವಿಂಶತ್ಯಾ ಕ್ಷುದ್ರಕಾಣಾಂ ಸಮಾರ್ದಯತ್ ॥೨೧॥

ಎಲೈ ಭಾರತನೇ, ಅದಕ್ಕೆ ಪ್ರತಿಯಾಗಿ ಮಾದ್ರೀಸುತನಾದ ನಕುಲನು ತೀಕ್ಷ್ಣವಾದ ಬಾಣಗಳಿಂದ ಅವನ ಧ್ವಜವನ್ನೂ, ಬಿಲ್ಲು-ಬಾಣಗಳನ್ನೂ ನಗುತ್ತಲೇ ಕತ್ತರಿಸಿದನು ಮತ್ತು ಇಪ್ಪತ್ತೈದು ಸಣ್ಣ ಬಾಣಗಳನ್ನು ಪ್ರಯೋಗಿಸಿ ಅವನನ್ನು ಹಿಂಸಿಸಿದನು.

ಪುತ್ರಸ್ತು ತವ ದುರ್ಧರ್ಷೋ ನಕುಲಸ್ಯ ಮಹಾಹವೇ ।
ಯುಗೇಷಾಂ ಚಿಚ್ಛಿದೇ ಬಾಣೈರ್ಧ್ವಜಂ ಚೈವ ಸಕಾತರಯತ್ ॥೨೨॥

ಸೋಲಿಸಲು ಅಸಾಧ್ಯನಾದ ನಿನ್ನ ಪುತ್ರನು ಆ ದೊಡ್ಡ ಯುದ್ಧದಲ್ಲಿ ನಕುಲನ ರಥದ ನೊಗ ಮತ್ತು ಮೂಗುಗಳನ್ನೂ ಮತ್ತು ಧ್ವಜವನ್ನೂ ಬಾಣಗಳಿಂದ ಕತ್ತರಿಸಿ ಶಿಥಿಲಿಸಿದನು.

ದುರ್ಮುಖಃ ಸಹದೇವಂ ತು ಪ್ರತ್ಯುದ್ಯಾಯ ಮಹಾಬಲಮ್ ।
ವಿವ್ಯಾಧ ಶರವರ್ಷೇಣ ಯತಮಾನಂ ಮಹಾಹವೇ ॥೨೩॥

ದುರ್ಮುಖನು ಮಹಾಬಲನಾದ ಸಹದೇವನ ಮೇಲೆ ಎರಗಿ ಮಹಾಯುದ್ಧದಲ್ಲಿ ಬಹಳ ಪ್ರಯತ್ನಶಾಲಿಯಾಗಿದ್ದ ಅವನನ್ನು ಬಾಣಗಳ ಮಳೆಯನ್ನು ಸುರಿಸಿ ಅವನ ಜೊತೆಯಲ್ಲಿ ಯುದ್ಧ ಮಾಡಿದನು.

ಸಹದೇವಸ್ತತೋ ವೀರೋ ದುರ್ಮುಖಸ್ಯ ಮಹಾಹವೇ ।
ಶರೇಣ ಭೃಶತೀಕ್ಷ್ಣೇನ ಹಾತಯಾಮಾಸ ಸಾರಥಿಮ್ ॥೨೪॥

ವೀರನಾದ ಸಹದೇವನು ಆಗ ದೊಡ್ಡ ಯುದ್ಧದಲ್ಲಿ ತೀಕ್ಷ್ಣವಾದ ಬಾಣದಿಂದ ದುರ್ಮುಖನ ಸಾರಥಿಯನ್ನು ರಥದಿಂದ ಉರುಳಿಸಿದನು.

ತಾವನ್ಯೋನ್ಯಂ ಸಮಾಸಾದ್ಯ ಸಮರೇ ಯುದ್ಧದುರ್ಮದೌ ।
ತ್ರಾಸಯೇತಾಂ ಶರೈಘೋರೈಃ ಕೃತಪ್ರತಿಕೃತೈಷಿಣೌ ॥೨೫॥

ಯುದ್ಧ ದುರ್ಮದರೂ, ಒಬ್ಬರು ಮಾಡಿದ್ದಕ್ಕೆ ಇನ್ನೊಬ್ಬರು ಪ್ರತಿಯಾಗಿ ಮಾಡಲು ಬಯಸುವವರೂ ಆದ ಅವರಿಬ್ಬರೂ ಯುದ್ಧದಲ್ಲಿ ಪರಸ್ಪರವಾಗಿ ಸಂಧಿಸಿ ಘೋರವಾದ ಬಾಣ ಪ್ರಯೋಗಗಳಿಂದ ಪರಸ್ಪರವಾಗಿ ಹೆದರಿಸಿದರು.

ಯುಧಿಷ್ಠಿರಃ ಸ್ವಯಂ ರಾಜಾ ಮದ್ರರಾಜಾನಮಭ್ಯಯಾತ್ ।
ತಸ್ಯ ಮದ್ರಾಧಿಪಶ್ಚಾಪಂ ದ್ವಿಧಾ ಚಿಚ್ಛೇದ ಮಾರಿಷ ॥೨೬॥

ರಾಜನಾದ ಯುಧಿಷ್ಠಿರನು ತಾನೇ ಶಲ್ಯನ ಜೊತೆಯಲ್ಲಿ ಯುದ್ಧಕ್ಕೆ ಹೋದನು. ಮದ್ರರಾಜನಾದ ಶಲ್ಯನು ಯುಧಿಷ್ಠಿರನ ಬಿಲ್ಲನ್ನು ಎರಡು ಭಾಗವಾಗಿ ಕತ್ತರಿಸಿದನು.

ತದಪಾಸ್ಯ ಧನುಶ್ಛಿನ್ನಂ ಕುಂತೀಪುತ್ರೋ ಯುಧಿಷ್ಠಿರಃ ।
ಅನ್ಯತ್ಕಾರ್ಮುಕಮಾದಾಯ ವೇಗವದ್ ಬಲವತ್ತರಮ್ ॥೨೭॥

ತತೋ ಮದ್ರೇಶ್ವರಂ ರಾಜಾ ಶರೈಃ ಸನ್ನತಪರ್ವಭಿಃ ।
ಛಾದಯಾಮಾಸ ಸಂಕ್ರುದ್ಧಸ್ತಿಷ್ಠೇತಿ ಚಾಬ್ರವೀತ್ ॥೨೮॥

ಕುಂತೀಪುತ್ರನಾದ ಯುಧಿಷ್ಠಿರನು ಕತ್ತರಿಸಿ ಹೋದ ಆ ಧನುಸ್ಸನ್ನು ಬಿಟ್ಟು ಇನ್ನೊಂದು ದೃಢವಾದ ಮತ್ತು ವೇಗಶಾಲಿಯಾದ ಧನುಸ್ಸನ್ನು ತೆಗೆದುಕೊಂಡು ಯುದ್ಧ ಮಾಡಿದನು. ಆಗ ಶಲ್ಯರಾಜನನ್ನು ಬಾಗಿದ ತುದಿಯುಳ್ಳ ಬಾಣಗಳಿಂದ 'ನಿಲ್ಲು, ನಿಲ್ಲು' ಎಂದು ಹೇಳುತ್ತಾ ಧರ್ಮರಾಜನು ಮುಚ್ಚಿಹಾಕಿದನು.

ಧೃಷ್ಟದ್ಯುಮ್ನಸ್ತತೋ ದ್ರೋಣಮಭ್ಯದ್ರವತ ಭಾರತ ।
ತಸ್ಯ ದ್ರೋಣಃ ಸುಸಂಕ್ರುದ್ಧಃ ಪರಾಸುಕರಣಂ ಧೃಢಮ್ ।
ತ್ರಿಧಾ ಚಿಚ್ಛೇದ ಸಮರೇ ಯತಮಾನಸ್ಯ ಕಾರ್ಮುಕಮ್ ॥೨೯॥

ಎಲೈ ಭಾರತನೇ, ಧೃಷ್ಟದ್ಯುಮ್ನನು ದ್ರೋಣರ ಮೇಲೆ ಎರಗಿದನು. ದ್ರೋಣರು ಬಹಳ ಕ್ರೋಧಗೊಂಡವರಾಗಿ ಯುದ್ಧದಲ್ಲಿ ಬಹಳ ಪ್ರಯತ್ನವನ್ನು ಮಾಡುತ್ತಿದ್ದ ಧೃಷ್ಟದ್ಯುಮ್ನನ ಪ್ರಾಣಾಂತಕವಾದ, ದೃಢವಾದ ಬಿಲ್ಲನ್ನು ಮೂರು ಭಾಗವಾಗಿ ಕತ್ತರಿಸಿದರು.

ಶರಂ ಚೈವ ಮಹಾಘೋರಂ ಕಾಲದಂಡಮಿವಾಪರಮ್ ।
ಪ್ರೇಷಯಾಮಾಸ ಸಮರೇ ಸೋಽಸ್ಯ ಕಾಯೇ ನ್ಯಮಜ್ಜತ ॥೩೦॥

ಮತ್ತು ಯಮದಂಡದಂತಿದ್ದ ಮಹಾಘೋರವಾದ ಇನ್ನೊಂದು ಬಾಣವನ್ನು ಅವನ ಮೇಲೆ ಪ್ರಯೋಗಿಸಿದರು. ಅದು ಧೃಷ್ಟದ್ಯುಮ್ನನ ಶರೀರದಲ್ಲಿ ನಾಟಿತು.

ಅಥಾನ್ಯದ್ ಧನುರಾದಾಯ ಸಾಯಕಾಂಶ್ಚ ಚತುರ್ದಶ ।
ದ್ರೋಣಂ ದ್ರುಪದಪುತ್ರಸ್ತು ಪ್ರತಿವಿವ್ಯಾಧ ಸಂಯುಗೇ ।
ತಾವನ್ಯೋನ್ಯಂ ಸುಸಂಕ್ರುದ್ಧೌ ಚಕ್ರತುಃ ಸುಭೃಶಂ ರಣಮ್ ॥೩೧॥

ಆಗ ದ್ರುಪದ ಪುತ್ರನಾದ ಧೃಷ್ಟದ್ಯುಮ್ನನು ಇನ್ನೊಂದು ಧನುಸ್ಸನ್ನು, ಹದಿನಾಲ್ಕು ಬಾಣಗಳನ್ನು ತೆಗೆದುಕೊಂಡು ದ್ರೋಣರ ಜೊತೆಯಲ್ಲಿ ಪ್ರತಿಯಾಗಿ ಯುದ್ಧವನ್ನು ಮಾಡಿದನು. ಪರಸ್ಪರ ಸಂಕ್ರುದ್ಧರಾದ ಅವರಿಬ್ಬರೂ ತೀವ್ರವಾದ ಯುದ್ಧವನ್ನು ಮಾಡಿದರು.

ಸೌಮದತ್ತಿಂ ರಣೇ ಶಂಖೋ ರಭಸಂ ರಭಸೋ ಯುಧಿ ।
ಪ್ರತ್ಯುದ್ಯಯೌ ಮಹಾರಾಜ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೩೨॥

ಎಲೈ ಮಹಾರಾಜನೇ, ವೇಗಶಾಲಿಯಾದ ಶಂಖರಾಜನು ವೇಗಶಾಲಿಯಾದ ಸೋಮದತ್ತನ ಪುತ್ರನಾದ ಭೂರಿಶ್ರವನ ಮೇಲೆ ಯುದ್ಧದಲ್ಲಿ ಎರಗಿ ನಿಲ್ಲು, ನಿಲ್ಲು ಎಂದು ಹೇಳಿದನು.

ತಸ್ಯ ವೈ ದಕ್ಷಿಣಂ ವೀರೋ ನಿರ್ಬಿಭೇದ ರಣೇ ಭುಜಮ್ ।
ಸೌಮದತ್ತಿಸ್ತಥಾ ಶಂಖಂ ಜತ್ರುದೇಶೇ ಸಮಾಹನತ್ ॥೩೩॥

ವೀರನಾದ ಶಂಖನು ಅವನ ಬಲಭುಜವನ್ನು ತೀವ್ರವಾಗಿ ಗಾಯಗೊಳಿಸಿದನು. ಆಗ ಭೂರಿಶ್ರವನು ಶಂಖನನ್ನು ಅವನ ಭುಜದ ಮೂಲದಲ್ಲಿ ಹೊಡೆದನು.

ತಯೋಃ ಸಮಭವದ್ ಯುದ್ಧಂ ಘೋರರೂಪಂ ವಿಶಾಂಪತೇ ।
ದೃಪ್ತಯೋಃ ಸಮರೇ ತೂರ್ಣಂ ವೃತ್ರವಾಸವಯೋರಿವ ॥೩೪॥

ಎಲೈ ರಾಜನೇ, ಸಮರದಲ್ಲಿ ದರ್ಪಶಾಲಿಗಳಾದ ಅವರಿಬ್ಬರಿಗೂ ವೃತ್ರ ಮತ್ತು ವಾಸವರಿಗೆ ನಡೆದಂತೆ ಶೀಘ್ರವಾದ ಮತ್ತು ಘೋರವಾದ ಯುದ್ಧವು ಜರುಗಿತು.

ಬಾಹ್ಲೀಕಂ ತು ರಣೇ ಕ್ರುದ್ಧಂ ಕ್ರುದ್ಧರೂಪೋ ವಿಶಾಂಪತೇ ।
ಅಭ್ಯದ್ರವದಮೇಯಾತ್ಮಾ ಧೃಷ್ಟಕೇತುರ್ಮಹಾರಥಃ ॥೩೫॥

ಎಲೈ ರಾಜನೇ, ಅಪರಿಮಿತ ಪ್ರಯತ್ನಶಾಲಿಯಾದ ಮಹಾರಥನಾದ ಧೃಷ್ಟಕೇತುವು ಕ್ರೋಧಗೊಂಡು ಯುದ್ಧದಲ್ಲಿ ಕ್ರುದ್ಧನಾದ ಬಾಹ್ಲೀಕನ ಕಡೆಗೆ ಧಾವಿಸಿದನು.

ಬಾಹ್ಲೀಕಸ್ತು ತತೋ ರಾಜನ್ ಧೃಷ್ಟಕೇತುಮಮರ್ಷಣಮ್ ।
ಶರೈರ್ಬಹುಭಿರಾನರ್ಚ್ಛತ್ ಸಿಂಹನಾದಮಥಾನದತ್ ॥೩೬॥

ಎಲೈ ರಾಜನೇ, ಆಗ ಬಾಹ್ಲೀಕನು ಕ್ರೋಧಗೊಂಡ ಧೃಷ್ಟಕೇತುವನ್ನು ಅನೇಕ ಬಾಣಗಳಿಂದ ಘಾಸಿಗೊಳಿಸಿ ಸಿಂಹನಾದವನ್ನು ಮಾಡಿದನು.

ಚೇದಿರಾಜಸ್ತು ಸಂಕ್ರುದ್ಧೋ ಬಾಹ್ಲೀಕಂ ನವಭಿಃ ಶರೈಃ ।
ವಿವ್ಯಾಧ ಸಮರೇ ತೂರ್ಣಂ ಮತ್ತೋ ಮತ್ತಮಿವ ದ್ವಿಪಮ್ ॥೩೭॥

ಚೇದಿರಾಜನಾದ ಧೃಷ್ಟಕೇತುವು ಕ್ರೋಧಗೊಂಡು ಮದಿಸಿದ ಗಜದ ಜೊತೆಯಲ್ಲಿ ಯುದ್ಧಮಾಡುವಂತೆ ಒಂಬತ್ತು ಬಾಣಗಳನ್ನು ಶೀಘ್ರವಾಗಿ ಅವನ ಮೇಲೆ ಪ್ರಯೋಗಿಸಿದನು.

ತೌ ತತ್ರ ಸಮರೇ ಕ್ರುದ್ಧೌ ನರ್ದಂತೌ ಚ ಮುಹುರ್ಮುಹುಃ ।
ಸಮೀಯತುಃ ಸುಸಂಕ್ರುದ್ಧಾವಂಗಾರಕಬುಧಾವಿವ ॥೩೮॥

ಅವರಿಬ್ಬರೂ ಯುದ್ಧದಲ್ಲಿ ಪುನಃ ಪುನಃ ಕ್ರುದ್ಧರಾಗಿ ಗರ್ಜಿಸುತ್ತಾ ಅಂಗಾರಕ ಮತ್ತು ಬುಧರಂತೆ ಪರಸ್ಪರವಾಗಿ ಎರಗಿದರು.

ರಾಕ್ಷಸಂ ಕ್ರೂರಕರ್ಮಾಣಂ ಕ್ರೂರಕರ್ಮಾ ಘಟೋತ್ಕಚಃ ।
ಅಲಂಬುಸಂ ಪ್ರತ್ಯುದಿಯಾದ್ ಬಲಂ ಶಕ್ರ ಇವಾಹವೇ ॥೩೯॥

ಕ್ರೂರಕರ್ಮನಾದ ಘಟೋತ್ಕಚನು, ಕ್ರೂರಕರ್ಮನಾದ ಅಲಂಬುಸ ರಾಕ್ಷಸನ ಮೇಲೆ ಇಂದ್ರನು ಬಲಾಸುರನ ಮೇಲೆ ಎರಗಿದಂತೆ ಎರಗಿದನು.

ಘಟೋತ್ಕಚಸ್ತು ಸಂಕ್ರುದ್ಧೋ ರಾಕ್ಷಸಂ ತಂ ಮಹಾಬಲಮ್ ।
ಸವತ್ಯಾ ಸಾಯಕೈಸ್ತೀಕ್ಷ್ಣೈರ್ದಾರಯಾಮಾಸ ಭಾರತ ॥೪೦॥

ಎಲೈ ಭಾರತನೇ, ಬಹಳ ಕೋಪಗೊಂಡ ಘಟೋತ್ಕಚನು ಆ ಮಹಾಬಲನಾದ ರಾಕ್ಷಸನನ್ನು ತೊಂಬತ್ತು ಬಾಣಗಳಿಂದ ಹರಿದು ಹಾಕಿದಂತೆ ಮಾಡಿದನು.

ಅಲಂಬುಸಸ್ತು ಸಮರೇ ಭೈಮಸೇನಿಂ ಮಹಾಬಲಮ್ ।
ಬಹುಧಾ ವಾರಯಾಮಾಸ ಶರೈಃ ಸನ್ನತಪರ್ವಭಿಃ ॥೪೧॥

ಅಲಂಬುಸನಾದರೂ ಯುದ್ಧದಲ್ಲಿ ಮಹಾಬಲನಾದ ಘಟೋತ್ಕಚನ ಮೇಲೆ ಬಾಗಿದ ತುದಿಯುಳ್ಳ ಅನೇಕ ಬಾಣಗಳನ್ನು ಪ್ರಯೋಗಿಸಿ ಅವನನ್ನು ಅನೇಕ ರೀತಿಯಲ್ಲಿ ತಡೆದನು.

ವ್ಯಭ್ರಾಜೇತಾಂ ತತಸ್ತೌ ತು ಸಂಯುಗೇ ಶರವಿಕ್ಷತೌ ।
ಯಥಾ ದೇವಾಸುರೇ ಯುದ್ಧೇ ಬಲಶಕ್ರೌ ಮಹಾಬಲೌ ॥೪೨॥

ಬಾಣಗಳಿಂದ ಗಾಯಗೊಂಡ ಅವರಿಬ್ಬರೂ ದೇವಾಸುರಯುದ್ಧದಲ್ಲಿ ಮಹಾಬಲಿಷ್ಠರಾದ ಬಲಾಸುರ ಮತ್ತು ಇಂದ್ರನಂತೆ ಶೋಭಿಸಿದರು.

ಶಿಖಂಡೀ ಸಮರೇ ರಾಜನ್ ದ್ರೌಣಿಮಭ್ಯುದ್ಯಯೌ ಬಲೀ ।
ಅಶ್ವತ್ಥಾಮಾ ತತಃ ಕ್ರುದ್ಧಃ ಶಿಖಂಡಿನಮವಸ್ಥಿತಮ್ ॥೪೩॥

ಸಾರಾಚೇನ ಸುತೀಕ್ಷ್ಣೇನ ಭೃಶಂ ವಿದ್ಧ್ವಾ ವ್ಯಕಂಪಯತ್ ।
ಶಿಖಂಡ್ಯಪಿ ತತೋ ರಾಜನ್ ದ್ರೋಣಪುತ್ರಮತಾಡಯತ್ ॥೪೪॥

ಎಲೈ ರಾಜನೇ, ಬಲಿಷ್ಠನಾದ ಶಿಖಂಡಿಯು ಯುದ್ಧದಲ್ಲಿ ದ್ರೋಣಪುತ್ರರಾದ ಅಶ್ವತ್ಥಾಮರ ಮೇಲೆ ಎರಗಿದನು. ಅಶ್ವತ್ಥಾಮರು ಕ್ರೋಧಗೊಂಡು ಎದುರಿಗೆ ನಿಂತ ಶಿಖಂಡಿಯ ಮೇಲೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗ ಮಾಡಿ ಅವನನ್ನು ಚೆನ್ನಾಗಿ ಗಾಯ ಮಾಡಿ ನಡುಗಿಸಿದರು. ರಾಜನೇ, ಆಗ ಶಿಖಂಡಿಯು ದ್ರೋಣ ಪುತ್ರರ ಮೇಲೆ ಬಾಣ ಪ್ರಯೋಗವನ್ನು ಮಾಡಿದನು.

ಸಾಯಕೇನ ಸುಪೀತೇನ ತೀಕ್ಷ್ಣೇನ ನಿಶಿತೇನ ಚ ।
ತೌ ಜಘ್ನತುಸ್ತದಾನ್ಯೋನ್ಯಂ ಶರೈರ್ಬಹುವಿಧೈರ್ಮೃಧೇ ॥೪೫॥

ಬಹಳ ಹಳದಿಯ ಬಣ್ಣವನ್ನು ಹೊಂದಿದ್ದ ತೀಕ್ಷ್ಣವಾದ ಬಾಣಗಳಿಂದ ಮತ್ತು ಇನ್ನೂ ಅನೇಕ ವಿಧವಾದ ಬಾಣಗಳಿಂದ ಯುದ್ಧದಲ್ಲಿ ಅವರು ಪರಸ್ಪರವಾಗಿ ಹೊಡದಾಡಿದರು.

ಭಗದತ್ತಂ ರಣೇ ಶೂರಂ ವಿರಾಟೋ ವಾಹಿನೀಪತಿಃ ।
ಅಭ್ಯಯಾತ್ ತ್ವರಿತೋ ರಾಜನ್ ತತೋ ಯುದ್ಧಮವರ್ತತ ॥೪೬॥

ಎಲೈ ರಾಜನೇ, ಶೂರನಾದ ಭಗದತ್ತನ ಮೇಲೆ ಅಕ್ಷೋಹಿಣಿ ಪತಿಯಾದ ವಿರಾಟನು ಶೀಘ್ರವಾಗಿ ಎರಗಿದನು. ಆನಂತರ ಅವರಿಬ್ಬರ ಯುದ್ಧವು ಪ್ರಾರಂಭವಾಯಿತು.

ವಿರಾಟೋ ಭಗದತ್ತೇನ ಶರವರ್ಷೇಣ ತಾಡಿತಃ ।
ಅಭ್ಯವರ್ಷತ್ ಸುಸಂಕ್ರುದ್ಧೋ ಮೇಘೋ ವೃಷ್ಟ್ಯಾ ಇವಾಚಲಮ್ ॥

ಭಗದತ್ತನ ಬಾಣಗಳ ವರ್ಷದಿಂದ ಹೊಡೆಯಲ್ಪಟ್ಟ ವಿರಾಟನು ಬಹಳ ಕೋಪಗೊಂಡು ಮೇಘವು ಬೆಟ್ಟಗಳ ಮೇಲೆ ಸುರಿಸಿದಂತೆ ಅವನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ಭಗದತ್ತಸ್ತತಸ್ತೂರ್ಣಂ ವಿರಾಟಂ ಪೃಥಿವೀಪತಿಮ್ ।
ಛಾದಯಾಮಾಸ ಸಮರೇ ಮೇಘಃ ಸೂರ್ಯಮಿವೋದಿತಮ್ ॥೪೮॥

ಆಗ ಭಗದತ್ತನು ವಿರಾಟರಾಜನನ್ನು ಶೀಘ್ರವಾಗಿ ಮೋಡವು ಸೂರ್ಯನನ್ನು ಮುಚ್ಚುವಂತೆ ತನ್ನ ಬಾಣಗಳ ಮಳೆಯಿಂದ ಮುಚ್ಚಿಹಾಕಿದನು.

ಬೃಹತ್‌ಕ್ಷತ್ರಂ ತು ಕೈಕೇಯಂ ಕೃಪಃ ಶಾರದ್ವತೋ ಯಯೌ ।
ತಂ ಕೃಪಃ ಶರವರ್ಷೇಣ ಛಾದಯಾಮಾಸ ಭಾರತ ॥೪೯॥

ಕೈಕೇಯರಾಜನಾದ ಬೃಹತ್‌ಕ್ಷತ್ರನ ಜೊತೆಯಲ್ಲಿ ಕೃಪಾಚಾರ್ಯರು ಯುದ್ಧವನ್ನು ಮಾಡಿದರು. ಎಲೈ ಭಾರತನೇ, ಕೃಪಾಚಾರ್ಯರು ಅವನನ್ನು ಬಾಣಗಳ ಮಳೆಯಿಂದ ಮುಚ್ಚಿಹಾಕಿದರು.

ಕ್ರೂರಕರ್ಮನಾದ ಘಟೋತ್ಕಚನು, ಕ್ರೂರಕರ್ಮನಾದ ಅಲಂಬುಸ ರಾಕ್ಷಸನ ಮೇಲೆ ಇಂದ್ರನು ಬಲಾಸುರನ ಮೇಲೆ ಎರಗಿದಂತೆ ಎರಗಿದನು.

ಘಟೋತ್ಕಚಸ್ತು ಸಂಕ್ರುದ್ಧೋ ರಾಕ್ಷಸಂ ತಂ ಮಹಾಬಲಮ್ ।
ನವತ್ಯಾ ಸಾಯಕೈಸ್ತೀಕ್ಷ್ಣೈರ್ದಾರಯಾಮಾಸ ಭಾರತ ॥೪೦॥

ಎಲೈ ಭಾರತನೇ, ಬಹಳ ಕೋಪಗೊಂಡ ಘಟೋತ್ಕಚನು ಆ ಮಹಾಬಲನಾದ ರಾಕ್ಷಸನನ್ನು ತೊಂಬತ್ತು ಬಾಣಗಳಿಂದ ಹರಿದು ಹಾಕಿದಂತೆ ಮಾಡಿದನು.

ಅಲಂಬುಸಸ್ತು ಸಮರೇ ಭೈಮಸೇನಿಂ ಮಹಾಬಲಮ್ ।
ಬಹುಧಾ ವಾರಯಾಮಾಸ ಶರೈಃ ಸನ್ನತಪರ್ವಭಿಃ ॥೪೧॥

ಅಲಂಬುಸನಾದರೂ ಯುದ್ಧದಲ್ಲಿ ಮಹಾಬಲನಾದ ಘಟೋತ್ಕಚನ ಮೇಲೆ ಬಾಗಿದ ತುದಿಯುಳ್ಳ ಅನೇಕ ಬಾಣಗಳನ್ನು ಪ್ರಯೋಗಿಸಿ ಅವನನ್ನು ಅನೇಕ ರೀತಿಯಲ್ಲಿ ತಡೆದನು.

ವ್ಯಭ್ರಾಜೇತಾಂ ತತಸ್ತೌ ತು ಸಂಯುಗೇ ಶರವಿಕ್ಷತೌ ।
ಯಥಾ ದೇವಾಸುರೇ ಯುದ್ಧೇ ಬಲಶಕ್ರೌ ಮಹಾಬಲೌ ॥೪೨॥

ಬಾಣಗಳಿಂದ ಗಾಯಗೊಂಡ ಅವರಿಬ್ಬರೂ ದೇವಾಸುರಯುದ್ಧದಲ್ಲಿ ಮಹಾಬಲಿಷ್ಠರಾದ ಬಲಾಸುರ ಮತ್ತು ಇಂದ್ರನಂತೆ ಶೋಭಿಸಿದರು.

ಶಿಖಂಡೀ ಸಮರೇ ರಾಜನ್ ದ್ರೌಣಿಮಭ್ಯುದ್ಯಯೌ ಬಲೀ ।
ಅಶ್ವತ್ಥಾಮಾ ತತಃ ಕ್ರುದ್ಧಃ ಶಿಖಂಡಿನಮವಸ್ಥಿತಮ್ ॥೪೩॥

ನಾರಾಚೇನ ಸುತೀಕ್ಷ್ಣೇನ ಭೃಶಂ ವಿದ್ಧ್ವಾ ವ್ಯಕಂಪಯತ್ ।
ಶಿಖಂಡ್ಯಪಿ ತತೋ ರಾಜನ್ ದ್ರೋಣಪುತ್ರಮತಾಡಯತ್ ॥೪೪॥

ಎಲೈ ರಾಜನೇ, ಬಲಿಷ್ಠನಾದ ಶಿಖಂಡಿಯು ಯುದ್ಧದಲ್ಲಿ ದ್ರೋಣಪುತ್ರರಾದ ಅಶ್ವತ್ಥಾಮರ ಮೇಲೆ ಎರಗಿದನು. ಅಶ್ವತ್ಥಾಮರು ಕ್ರೋಧಗೊಂಡು ಎದುರಿಗೆ ನಿಂತ ಶಿಖಂಡಿಯ ಮೇಲೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗ ಮಾಡಿ ಅವನನ್ನು ಚೆನ್ನಾಗಿ ಗಾಯ ಮಾಡಿ ನಡುಗಿಸಿದರು. ರಾಜನೇ, ಆಗ ಶಿಖಂಡಿಯು ದ್ರೋಣ ಪುತ್ರರ ಮೇಲೆ ಬಾಣ ಪ್ರಯೋಗವನ್ನು ಮಾಡಿದನು.

ಸಾಯಕೇನ ಸುಪೀತೇನ ತೀಕ್ಷ್ಣೇನ ನಿಶಿತೇನ ಚ ।
ತೌ ಜಘ್ನತುಸ್ತದಾನ್ಯೋನ್ಯಂ ಶರೈರ್ಬಹುವಿಧೈರ್ಮೃಧೇ ॥೯೫॥

ಬಹಳ ಹಳದಿಯ ಬಣ್ಣವನ್ನು ಹೊಂದಿದ್ದ ತೀಕ್ಷ್ಣವಾದ ಬಾಣಗಳಿಂದ ಮತ್ತು ಇನ್ನೂ ಅನೇಕ ವಿಧವಾದ ಬಾಣಗಳಿಂದ ಯುದ್ಧದಲ್ಲಿ ಅವರು ಪರಸ್ಪರವಾಗಿ ಹೊಡೆದಾಡಿದರು.

ಭಗದತ್ತಂ ರಣೇ ಶೂರಂ ವಿರಾಟೋ ವಾಹಿನೀಪತಿಃ ।
ಅಭ್ಯಯಾತ್ ತ್ವರಿತೋ ರಾಜನ್ ತತೋ ಯುದ್ಧಮವರ್ತತ ॥೯೬॥

ಎಲೈ ರಾಜನೇ, ಶೂರನಾದ ಭಗದತ್ತನ ಮೇಲೆ ಅಕ್ಷೋಹಿಣಿ ಪತಿಯಾದ ವಿರಾಟನು ಶೀಘ್ರವಾಗಿ ಎರಗಿದನು. ಆನಂತರ ಅವರಿಬ್ಬರ ಯುದ್ಧವು ಪ್ರಾರಂಭವಾಯಿತು.

ವಿರಾಟೋ ಭಗದತ್ತೇನ ಶರವರ್ಷೇಣ ತಾಡಿತಃ ।
ಅಭ್ಯವರ್ಷತ್ ಸುಸಂಕ್ರುದ್ಧೋ ಮೇಘೋ ವೃಷ್ಟ್ಯಾ ಇವಾಚಲಮ್ ॥

ಭಗದತ್ತನ ಬಾಣಗಳ ವರ್ಷದಿಂದ ಹೊಡೆಯಲ್ಪಟ್ಟ ವಿರಾಟನು ಬಹಳ ಕೋಪಗೊಂಡು ಮೇಘವು ಬೆಟ್ಟಗಳ ಮೇಲೆ ಸುರಿಸಿದಂತೆ ಅವನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ಭಗದತ್ತಸ್ತತಸ್ತೂರ್ಣಂ ವಿರಾಟಂ ಪೃಥಿವೀಪತಿಮ್ ।
ಛಾದಯಾಮಾಸ ಸಮರೇ ಮೇಘಃ ಸೂರ್ಯಮಿವೋದಿತಮ್ ॥೯೮॥

ಆಗ ಭಗದತ್ತನು ವಿರಾಟರಾಜನನ್ನು ಶೀಘ್ರವಾಗಿ ಮೋಡವು ಸೂರ್ಯನನ್ನು ಮುಚ್ಚುವಂತೆ ತನ್ನ ಬಾಣಗಳ ಮಳೆಯಿಂದ ಮುಚ್ಚಿಹಾಕಿದನು.

ಬೃಹತ್ಕ್ಷತ್ರಂ ತು ಕೈಕೇಯಂ ಕೃಪಃ ಶಾರದ್ವತೋ ಯಯೌ ।
ತಂ ಕೃಪಃ ಶರವರ್ಷೇಣ ಛಾದಯಾಮಾಸ ಭಾರತ ॥೯೯॥

ಕೈಕೇಯರಾಜನಾದ ಬೃಹತ್ಕ್ಷತ್ರನ ಜೊತೆಯಲ್ಲಿ ಕೃಪಾಚಾರ್ಯರು ಯುದ್ಧವನ್ನು ಮಾಡಿದರು. ಎಲೈ ಭಾರತನೇ, ಕೃಪಾಚಾರ್ಯರು ಅವನನ್ನು ಬಾಣಗಳ ಮಳೆಯಿಂದ ಮುಚ್ಚಿಹಾಕಿದರು.

ಗೌತಮಂ ಕೇಕಯಃ ಕ್ರುದ್ಧಃ ಶರವೃಷ್ಟ್ಯಾಭ್ಯಪೂರಯತ್ ।
ತಾವನ್ಯೋನ್ಯಂ ಹಯಾನ್ ಹತ್ವಾ ಧನುಷೀ ವಿನಿಕೃತ್ಯ ವೈ ॥೫೦॥

ವಿರಥಾವಸಿಯುದ್ಧಾಯ ಸಮೀಯತುರಮರ್ಷಣೌ ।
ತಯೋಸ್ತದಭವದ್ ಯುದ್ಧಂ ಘೋರರೂಪಂ ಸುದಾರುಣಮ್ ॥೫೧॥

ಕ್ರುದ್ಧನಾದ ಕೇಕಯ ರಾಜನು ಕೃಪಾಚಾರ್ಯರನ್ನು ಬಾಣದ ಮಳೆಯಿಂದ ಮುಚ್ಚಿ ಹಾಕಿದನು. ಅವರಿಬ್ಬರೂ ಪರಸ್ಪರವಾಗಿ ರಥಾಶ್ವಗಳನ್ನು ಕೊಂದು, ಧನುಸ್ಸುಗಳನ್ನು ಕತ್ತರಿಸಿ, ರಥವನ್ನು ಕಳೆದುಕೊಂಡು, ಖಡ್ಗಯುದ್ಧಕ್ಕಾಗಿ ಕೋಪಗೊಂಡು ಒಬ್ಬರನ್ನೊಬ್ಬರು ಎದುರಿಸಿದರು. ಅವರಿಬ್ಬರಿಗೂ ಘೋರವೂ, ಅತಿಭಯಂಕರವೂ ಆದ ಖಡ್ಗಯುದ್ಧವು ನಡೆಯಿತು.

ದ್ರುಪದಸ್ತು ತತೋ ರಾಜಾ ಸೈಂಧವಂ ವೈ ಜಯದ್ರಥಮ್ ।
ಅಭ್ಯುದ್ಯಯೌ ಸಂಪ್ರಹೃಷ್ಯೋ ಹೃಷ್ಟರೂಪಂ ಪರಂತಪ ॥೫೨॥

ಎಲೈ ಪರಂತಪನೇ, ಆಗ ಯುದ್ಧದಲ್ಲಿ ದ್ರುಪದನು ಬಹಳ ಸಂತೋಷಗೊಂಡು ಸಿಂಧುದೇಶದ ರಾಜನಾದ, ಸಂತೋಷದಿಂದ ಕೂಡಿದ ಜಯದ್ರಥನ ಮೇಲೆ ಯುದ್ಧಕ್ಕೆ ಹೋದನು.

ತತಃ ಸೈಂಧವಕೋ ರಾಜಾ ದ್ರುಪದಂ ವಿಶಿಖೈಸ್ತ್ರಿಭಿಃ ।
ತಾಡಯಾಮಾಸ ಸಮರೇ ಸ ಚ ತಂ ಪ್ರತ್ಯವಿಧ್ಯತ ॥೫೩॥

ಸಿಂಧುರಾಜನಾದ ಜಯದ್ರಥನು ಮೂರು ಬಾಣಗಳನ್ನು ಪ್ರಯೋಗಿಸಿ ದ್ರುಪದನನ್ನು ಹೊಡೆದನು. ದ್ರುಪದನಾದರೂ ಯುದ್ಧದಲ್ಲಿ ಪ್ರತಿಯಾಗಿ ಅವನ ಮೇಲೆ ಬಾಣ ಪ್ರಯೋಗವನ್ನು ಮಾಡಿದನು.

ತಯೋಃ ಸಮಭವದ್ ಯುದ್ಧಂ ಘೋರರೂಪಂ ಸುದಾರುಣಮ್ ।
ಈಕ್ಷತೃಪ್ರೀತಿಜನನಂ ಶುಕ್ರಾಂಗಾರಕಯೋರಿವ ॥೫೪॥

ಶುಕ್ರ-ಅಂಗಾರಕರಂತಿದ್ದ ಅವರಿಬ್ಬರಿಗೂ ನೋಡುವವರಿಗೆ ಸಂತೋಷವನ್ನುಂಟು ಮಾಡುವಂತೆ ಘೋರವೂ ಮತ್ತು ಅತ್ಯಂತ ದಾರುಣವೂ ಆದ ಯುದ್ಧವು ಜರುಗಿತು.

ವಿಕರ್ಣಸ್ತು ಸುತಸ್ತುಭ್ಯಂ ಸುತಸೋಮಂ ಮಹಾಬಲಮ್ ।
ಅಭ್ಯಯಾಜ್ಜವನೈರಶ್ವೈಸ್ತತೋ ಯುದ್ಧಮವರ್ತತ ॥೫೫॥

ನಿನ್ನ ಮಗನಾದ ವಿಕರ್ಣನು ಭೀಮಸೇನನ ಮಗನಾದ, ಮಹಾಬಲನಾದ ಸುತಸೋಮನನ್ನು ಕುರಿತು ಮಹಾವೇಗಶಾಲಿಯಾದ ಅಶ್ವಗಳನ್ನು ಹೂಡಿದ ರಥದಲ್ಲಿ ಧಾವಿಸಿದನು. ಅನಂತರ ಅವರಿಬ್ಬರಿಗೂ ಯುದ್ಧವು ನಡೆಯಿತು.

ವಿಕರ್ಣಃ ಸುತಸೋಮಂ ತು ವಿದ್ವಾ ನಾಕಂಪಯಚ್ಛರೈಃ ।
ಸುತಸೋಮೋ ವಿಕರ್ಣಂ ಚ ತದದ್ಭುತಮಿವಾಭವತ್ ॥೫೬॥

ವಿಕರ್ಣನು ಸುತಸೋಮನ ಮೇಲೆ ಬಾಣ ಪ್ರಯೋಗವನ್ನು ಮಾಡಿ ಅವನನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ. ಸುತಸೋಮನೂ ವಿಕರ್ಣನನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ. ಅದು ಅದ್ಭುತವಾಗಿದ್ದಿತು.

ಸುಶರ್ಮಾಣಂ ನರವ್ಯಾಘ್ರಂ ಚೇಕಿತಾನೋ ಮಹಾರಥಃ ।
ಅಭ್ಯದ್ರವತ್ ಸುಸಂಕ್ರುದ್ಧಃ ಪಾಂಡವಾರ್ಥೇ ಪರಾಕ್ರಮೀ ॥೫೭॥

ಮಹಾರಥನೂ, ಪರಾಕ್ರಮಿಯೂ ಆದ ಚೇಕಿತಾನನು ಬಹಳ ಕೋಪಗೊಂಡು ಪಾಂಡವರ ಸಲುವಾಗಿ ನರವ್ಯಾಘ್ರನಾದ ಸುಶರ್ಮನ ಮೇಲೆ ಎರಗಿದನು.

ಸುಶರ್ಮಾ ತು ಮಹಾರಾಜ ಚೇಕಿತಾನಂ ಮಹಾರಥಮ್ ।
ಮಹತಾ ಶರವರ್ಷೇಣ ವಾರಯಾಮಾಸ ಸಂಯುಗೇ ॥೫೮॥

ಎಲೈ ಮಹಾರಾಜನೇ, ಸುಶರ್ಮನಾದರೂ ಮಹಾರಥನಾದ ಚೇಕಿತಾನನನ್ನು ಯುದ್ಧದಲ್ಲಿ ದೊಡ್ಡ ಬಾಣಗಳ ಮಳೆಯನ್ನು ಸುರಿಸಿ ಅವನನ್ನು ತಡೆದನು.

ಚೇಕಿತಾನೋಽಪಿ ಸಂರಬ್ಧಃ ಸುಶರ್ಮಾಣಂ ಮಹಾಹವೇ ।
ಪ್ರಾಚ್ಛಾದಯತ್ ತಮ್ ಇಷುಭಿರ್ಮಹಾಮೇಘ ಇವಾಚಲಮ್ ॥೫೯॥

ಚೇಕಿತಾನನೂ ಸಹ ಕ್ರೋಧಗೊಂಡು ಆ ದೊಡ್ಡ ಯುದ್ಧದಲ್ಲಿ ಮಹಾಮೇಘವು ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ಬಾಣ ಪ್ರಯೋಗವನ್ನು ಮಾಡಿ ಅವನನ್ನು ಮುಚ್ಚಿಹಾಕಿದನು.

ಶಕುನಿಃ ಪ್ರತಿವಿಂಧ್ಯಂ ತು ಪರಾಕ್ರಾಂತಂ ಪರಾಕ್ರಮೀ ।
ಅಭ್ಯದ್ರವತ ರಾಜೇಂದ್ರ ಮತ್ತೋ ಮತ್ತಮಿವ ದ್ವಿಪಮ್ ॥೬೦॥

ಎಲೈ ರಾಜನೇ, ಪರಾಕ್ರಮಶಾಲಿಯಾದ ಶಕುನಿಯು, ಪರಾಕ್ರಮಶಾಲಿಯಾದ ಯುಧಿಷ್ಠಿರನ ಪುತ್ರನಾದ ಪ್ರತಿವಿಂಧ್ಯನ ಮೇಲೆ ಮದಗಜವು ಮದಗಜದ ಮೇಲೆ ಎರಗಿದಂತೆ ಎರಗಿದನು.

ಯೌಧಿಷ್ಠಿರಸ್ತು ಸಂಕ್ರುದ್ಧಃ ಸೌಬಲಂ ನಿಶಿತೈಃ ಶರೈಃ ।
ವ್ಯದಾರಯತ ಸಂಗ್ರಾಮೇ ಮಘವಾನಿವ ದಾನವಮ್ ॥೬೧॥

ಯುಧಿಷ್ಠಿರನ ಮಗನಾದ ಪ್ರತಿವಿಂಧ್ಯನು ಕ್ರುದ್ಧನಾಗಿ ಯುದ್ಧದಲ್ಲಿ ಶಕುನಿಯನ್ನು ನಿಶಿತವಾದ ಬಾಣಗಳಿಂದ ಇಂದ್ರನು ದಾನವರನ್ನು ಸೀಳಿದಂತೆ ಸೀಳಿದನು.

ಶಕುನಿಃ ಪ್ರತಿವಿಂಧ್ಯಂ ತು ಪ್ರತಿವಿಧ್ಯಂತಮಾಹವೇ ।
ವ್ಯದಾರಯನ್ ಮಹಾಪ್ರಾಜ್ಞಃ ಶರೈಃ ಸನ್ನತಪರ್ವಭಿಃ ॥೬೨॥

ಎಲೈ ಮಹಾಪ್ರಾಜ್ಞನೇ, ತನ್ನ ಎದುರಿಗೆ ಯುದ್ಧ ಮಾಡುತ್ತಿದ್ದ ಪ್ರತಿವಿಂಧ್ಯನನ್ನು ಶಕುನಿಯು ಬಾಗಿದ ತುದಿಗಳುಳ್ಳ ಬಾಣಗಳಿಂದ ಗಾಯಗೊಳಿಸಿದನು.

ಸುದಕ್ಷಿಣಂ ತು ರಾಜೇಂದ್ರ ಕಾಂಬೋಜಾನಾಂ ಮಹಾರಥಮ್ ।
ಶ್ರುತಕರ್ಮಾ ಪರಾಕ್ರಾಂತಮಭ್ಯದ್ರವತ ಸಂಯುಗೇ ॥೬೩॥

ಎಲೈ ರಾಜೇಂದ್ರನೇ, ಕಾಂಬೋಜ ರಾಜನೂ, ಮಹಾರಥನೂ, ಪರಾಕ್ರಮಶಾಲಿಯೂ ಆದ ಸುದಕ್ಷಿಣನನ್ನು ಸಹದೇವನ ಮಗನಾದ ಶ್ರುತಕರ್ಮನನ್ನು ಎದುರಿಸಿದನು.

ಸುದಕ್ಷಿಣಸ್ತು ಸಮರೇ ಸಾಹದೇವಿಂ ಮಹಾರಥಮ್ ।
ವಿದ್ಧ್ವಾ ನಾಕಂಪಯತ ವೈ ಮೈನಾಕಮಿವ ಪರ್ವತಮ್ ॥೬೪॥

ಸುದಕ್ಷಿಣನಾದರೂ ಯುದ್ಧದಲ್ಲಿ ಮಹಾರಥನಾದ ಶ್ರುತಕರ್ಮನನ್ನು ಬಾಣಗಳಿಂದ ಹೊಡೆದರೂ ಮೈನಾಕ ಪರ್ವತದಂತೆ ಸ್ಥಿರವಾಗಿದ್ದ ಅವನನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ.

ಶ್ರುತಕರ್ಮಾ ತತಃ ಕ್ರುದ್ಧಃ ಕಾಂಬೋಜಾನಾಂ ಮಹಾರಥಮ್ ।
ಶರೈರ್ಬಹುಭಿರಾನರ್ಚ್ಛದ್ ದಾರಯನ್ನಿವ ಸರ್ವಶಃ ॥೬೫॥

ಆಗ ಕೋಪಗೊಂಡ ಶ್ರುತಕರ್ಮನು ಕಾಂಬೋಜರ ಮಹಾರಥನಾದ ಸುದಕ್ಷಿಣನನ್ನು ಅನೇಕ ಬಾಣಗಳಿಂದ ಸೀಳುವವನಂತೆ ಎಲ್ಲ ಕಡೆಗಳಲ್ಲಿಯೂ ಗಾಯಗೊಳಿಸಿದನು.

ಇರಾವಾನಥ ಸಂಕ್ರುದ್ಧಃ ಶ್ರುತಾಯುಷಮಮರ್ಷಣಮ್ ।
ಪ್ರತ್ಯುದ್ಯಯೌ ರಣೇ ಯತ್ತೋ ಯತ್ತರೂಪಂ ಪರಂತಪಃ ॥೬೬॥

ಅರ್ಜುನನ ಮಗನಾದ ಇರಾವಂತನು ಕೋಪಗೊಂಡು ಸನ್ನದ್ಧನಾಗಿದ್ದ ಶ್ರುತಾಯುವಿನ ಮೇಲೆ ತಾನೂ ಸನ್ನದ್ಧನಾಗಿ ಯುದ್ಧದಲ್ಲಿ ಎರಗಿದನು.

ಆರ್ಜುನಿಸ್ತಸ್ಯ ಸಮರೇ ಹಯಾನ್ ಹತ್ವಾ ಮಹಾರಥಃ ।
ನನಾದ ಸುಮಹನ್ನಾದಂ ತೇ ಸೈನ್ಯಾನ್ಯಸ್ಯ ಪೂಜಯನ್ ॥೬೭॥

ಮಹಾರಥನಾದ ಅರ್ಜುನನ ಪುತ್ರನು ಯುದ್ಧದಲ್ಲಿ ಅವನ ಕುದುರೆಗಳನ್ನು ಕೊಂದು ದೊಡ್ಡನಾದವನ್ನು ಮಾಡಿದನು. ನಿನ್ನ ಸೈನ್ಯವೂ ಸಹ ಇರಾವಂತನ ವೀರಕರ್ಮವನ್ನು ಪೂಜಿಸಿತು.

ಶ್ರುತಾಯುಸ್ತ್ವಥ ಸಂಕ್ರುದ್ಧಃ ಫಾಲ್ಗುನೇಃ ಸಮರೇ ಹಯಾನ್ ।
ನಿಜಘಾನ ಗದಾಗ್ರೇಣ ತತೋ ಯುದ್ಧಮವರ್ತತ ॥೬೮॥

ಆಗ ಶ್ರುತಾಯುವು ಕ್ರೋಧಗೊಂಡು ಇರಾವಂತನ ರಥದ ಕುದುರೆಗಳನ್ನು ತನ್ನ ಗದೆಯ ಅಗ್ರಭಾಗದಿಂದ ಕೊಂದನು. ಅನಂತರ ಯುದ್ಧವು ಮುಂದುವರೆಯಿತು.

ವಿಂದಾನುವಿಂದಾವಾವಂತ್ಯೌ ಕುಂತಿಭೋಜಂ ಮಹಾರಥಮ್ ।
ಸಸೇನಂ ಸಸುತಂ ವೀರಂ ಸಂಸಸಜ್ಜತುರಾಹವೇ ॥೬೯॥

ಅವಂತಿದೇಶದ ವಿಂದಾನುವಿಂದರು ಯುದ್ಧದಲ್ಲಿ ತನ್ನ ಸೇನೆ ಮತ್ತು ಮಕ್ಕಳಿಂದ ಕೂಡಿದ ಮಹಾರಥನಾದ ಕುಂತಿಭೋಜನ ಜೊತೆಯಲ್ಲಿ ಸೆಣಸಿದರು.

ತತ್ರಾದ್ಭುತಮಪಶ್ಯಾಮ ಆವಂತ್ಯಾನಾಂ ಪರಾಕ್ರಮಮ್ ।
ಯದಯುಧ್ಯನ್ ಸ್ಥಿರಾ ಭೂತ್ವಾ ಮಹತ್ಯಾ ಸೇನಯಾ ಸಹ ॥೭೦॥

ಅವಂತಿದೇಶದ ಸೈನಿಕರು ಸ್ಥಿರವಾಗಿ ನಿಂತು ದೊಡ್ಡ ಸೈನ್ಯದ ಜೊತೆಯಲ್ಲಿ ಯುದ್ಧ ಮಾಡಿದ ಅವರ ಅದ್ಭುತ ಪರಾಕ್ರಮವನ್ನು ಅಲ್ಲಿ ನೋಡಿದೆವು.

ಅನುವಿಂದಸ್ತು ಗದಯಾ ಕುಂತಿಭೋಜಮತಾಡಯತ್ ।
ಕುಂತಿಭೋಜಸ್ತತಸ್ತೂರ್ಣಂ ಶರವ್ರಾತೈರವಾಕಿರತ್ ॥೭೧॥

ಅನುವಿಂದನು ಕುಂತಿಭೋಜನನ್ನು ಗದೆಯಿಂದ ಹೊಡೆದನು. ಕುಂತಿಭೋಜನು ಶೀಘ್ರವಾಗಿ ಬಾಣಗಳ ಸಮೂಹವನ್ನು ಅವನ ಮೇಲೆ ಸುರಿಸಿದನು.

ಕುಂತಿಭೋಜಸುತಶ್ಚಾಪಿ ವಿಂದಂ ವಿವ್ಯಾಧ ಸಾಯಕೈಃ ।
ಸ ಚ ತಂ ಪ್ರತಿವಿವ್ಯಾಧ ತದದ್ಭುತಮಿವಾಭವತ್ ॥೭೨॥

ಕುಂತಿಭೋಜನ ಪುತ್ರನೂ ಸಹ ವಿಂದನ ಜೊತೆಯಲ್ಲಿ ಬಾಣಗಳಿಂದ ಯುದ್ಧ ಮಾಡಿದನು. ವಿಂದನೂ ಸಹ ಅದಕ್ಕೆ ಪ್ರತಿಯಾಗಿ ಬಾಣಗಳನ್ನು ಪ್ರಯೋಗಿಸಿದನು. ಅದು ಅದ್ಭುತವಾಗಿದ್ದಿತು.

ಕೇಕಯಾ ಭ್ರಾತರಃ ಪಂಚ ಗಾಂಧಾರಾನ್ ಪಂಚ ಮಾರಿಷ ।
ಸಸೈನ್ಯಾಸ್ತೇ ಸಸೈನ್ಯಾಂಶ್ಚ ಯೋಧಯಾಮಾಸುರಾಹವೇ ॥೭೩॥

ಎಲೈ ವೀರನೇ, ಕೇಕಯದೇಶದ ಐವರು ಸಹೋದರರು ತಮ್ಮ ಸೈನ್ಯಗಳಿಂದ ಕೂಡಿ, ತಮ್ಮ ಸೈನ್ಯದಿಂದ ಕೂಡಿದ ಗಾಂಧಾರದೇಶದ ಐವರು ರಾಜರೊಡನೆ ಯುದ್ಧವನ್ನು ಮಾಡಿದರು.

ವೀರಬಾಹುಶ್ಚ ತೇ ಪುತ್ರೋ ವೈರಾಟಂ ರಥಸತ್ತಮಮ್ ।
ಉತ್ತರಂ ಯೋಧಯಾಮಾಸ ವಿವ್ಯಾಧ ನಿಶಿತೈಃ ಶರೈಃ ।
ಉತ್ತರಶ್ಚಾಪಿ ತಂ ಧೀರಂ ವಿವ್ಯಾಧ ನಿಶಿತೈಃ ಶರೈಃ ॥೭೪॥

ನಿನ್ನ ಪುತ್ರನಾದ ವೀರಬಾಹುವು ವಿರಾಟನ ಪುತ್ರನಾದ ರಥಶ್ರೇಷ್ಠನಾದ ಉತ್ತರನ ಜೊತೆಯಲ್ಲಿ ಹರಿತವಾದ ಬಾಣಗಳಿಂದ ಯುದ್ಧಮಾಡಿದನು. ಉತ್ತರನೂ ಸಹ ಅವನನ್ನು ಹರಿತವಾದ ಬಾಣಗಳಿಂದ ಘೋರವಾಗಿ ಯುದ್ಧ ಮಾಡಿ ವ್ಯಥೆ ಪಡಿಸಿದನು.

ಚೇದಿರಾಟ್ ಸಮರೇ ರಾಜನ್ನುಲೂಕಂ ಸಮಭಿದ್ರವತ್ ।
ಉಲೂಕಶ್ಚಾಪಿ ತಂ ಬಾಣೈರ್ನಿಶಿತೈರ್ಯೋಮವಾಹಿಭಿಃ ॥೭೫॥

ಎಲೈ ರಾಜನೇ, ಚೇದಿರಾಜನು ಯುದ್ಧದಲ್ಲಿ ಉಲೂಕನ ಮೇಲೆ ಧಾವಿಸಿದನು. ಉಲೂಕನೂ ಸಹ ಕೂದಲನ್ನು ಸೀಳುವಂತಹ ಬಾಣಗಳಿಂದ ಅವನ ಜೊತೆಯಲ್ಲಿ ಯುದ್ಧ ಮಾಡಿದನು.

ತಯೋರ್ಯುದ್ಧಂ ಸಮಭವದ್ ಘೋರರೂಪಂ ವಿಶಾಂಪತೇ ।
ದಾರಯೇತಾಂ ಸುಸಂಕ್ರುದ್ಧಾವನ್ಯೋನ್ಯಮಪರಾಜಿತೌ ॥೭೬॥

ಎಲೈ ರಾಜನೇ, ಅವರಿಬ್ಬರಿಗೂ ಘೋರವಾದ ಯುದ್ಧವು ನಡೆಯಿತು. ಅಪರಾಜಿತರಾದ ಅವರಿಬ್ಬರೂ ಬಹಳ ಕ್ರುದ್ಧರಾಗಿ ಪರಸ್ಪರವಾಗಿ ಒಬ್ಬರನ್ನೊಬ್ಬರು ಸೀಳಿ ಗಾಯಗೊಳಿಸಿದರು.

ಏವಂ ದ್ವಂದ್ವಸಹಸ್ರಾಣಿ ರಥವಾರಣವಾಜಿನಾಮ್ ।
ಪದಾತೀನಾಂ ಚ ಸಮರೇ ತವ ತೇಷಾಂ ಚ ಸಂಕುಲಮ್ ॥೭೭॥

ಹೀಗೆ ಯುದ್ಧದಲ್ಲಿ ಪದಾತಿಗಳಿಗೂ, ರಥಗಳಿಗೂ, ಗಜಗಳಿಗೂ ಮತ್ತು ಅಶ್ವಗಳಿಗೂ ನಿನ್ನ ಮತ್ತು ಅವರ ಸೈನ್ಯದಲ್ಲಿ ಸಹಸ್ರಾರು ಸಂಖ್ಯೆಯ ದ್ವಂದ್ವ ಯುದ್ಧವು ನಡೆಯಿತು.

ಮುಹೂರ್ತಮಿವ ತದ್ಯುದ್ಧಮಾಸೀನ್ಮಧುರದರ್ಶನಮ್ ।
ತತ ಉನ್ಮತ್ತವದ್ ರಾಜನ್ ನ ಪ್ರಾಜ್ಞಾಯತ ಕಿಂಚನ ॥೭೮॥

ಎಲೈ ರಾಜನೇ, ಒಂದು ಮುಹೂರ್ತದ ಕಾಲ ಆ ಯುದ್ಧವು ನೋಡಲು ಮಧುರವಾಗಿದ್ದಿತು. ಅನಂತರ ಹುಚ್ಚೆದ್ದಂತೆ ಏನೂ ತಿಳಿಯಲಿಲ್ಲ.

ಗಜೋ ಗಜೇನ ಸಮರೇ ರಥೀ ಚ ರಥಿನಂ ಯಯೌ ।
ಅಶ್ವೋಽಶ್ವಂ ಸಮಭಿಪ್ರೇತ್ಯ ಪದಾತಿಶ್ಚ ಪದಾತಿನಮ್ ॥೭೯॥

ಗಜವು ಗಜದ ಜೊತೆಯಲ್ಲಿಯೂ, ರಥಿಯು ರಥಿಕನ ಜೊತೆಯಲ್ಲಿಯೂ, ಅಶ್ವಾರೋಹಿಯು ಅಶ್ವಾರೋಹಿಯ ಜೊತೆಯಲ್ಲಿಯೂ, ಪದಾತಿಯು ಪದಾತಿಯ ಜೊತೆಯಲ್ಲಿಯೂ ಒಬ್ಬರನ್ನೊಬ್ಬರು ಉದ್ದೇಶಿಸಿ ಮುನ್ನುಗ್ಗಿದರು.

ತತೋ ಯುದ್ಧಂ ಸುದುರ್ಧರ್ಷಂ ವ್ಯಾಕುಲಂ ಸಮಪದ್ಯತ ।
ಶೂರಾಣಾಂ ಸಮರೇ ತತ್ರ ಸಮಾಸಾದ್ಯ ಪರಸ್ಪರಮ್ ॥೮೦॥

ಆಗ ಪರಸ್ಪರವಾಗಿ ಮುನ್ನುಗ್ಗಿ ಯುದ್ಧಮಾಡುವ ಶೂರರಿಂದ ಯುದ್ಧದಲ್ಲಿ ಎಲ್ಲವೂ ಕಲಸಿ ಹೋಯಿತು.

ತತ್ರ ದೇವರ್ಷಯಃ ಸಿದ್ಧಾಶ್ಚಾರಣಾಶ್ಚ ಸಮಾಗತಾಃ ।
ಪ್ರೈಕ್ಷಂತ ತದ್ ರಣಂ ಘೋರಂ ದೇವಾಸುರರಣೋಪಮಮ್ ॥೮೧॥

ತತೋ ದಂತಿಸಹಸ್ರಾಣಿ ರಥಾನಾಂ ಚಾಪಿ ಮಾರಿಷ ।
ಅಶ್ವಿನಾಃ ಪುರುಷೌಘಾಶ್ಚ ವಿಪರೀತಂ ಸಮಾಯಯುಃ ॥೮೨॥

ಅಲ್ಲಿ ಸಮಾಗತರಾಗಿದ್ದ ದೇವರ್ಷಿಗಳು ಮತ್ತು ಸಿದ್ಧರು ದೇವಾಸುರ ಯುದ್ಧಕ್ಕೆ ಸದೃಶವಾದ ಆ ಘೋರವಾದ ಯುದ್ಧವನ್ನು ನೋಡಿದರು. ಆನಂತರ ಸಹಸ್ರ ಗಜಗಳು, ಸಹಸ್ರ ರಥಗಳು, ಸಹಸ್ರ ಅಶ್ವಗಳು, ಪದಾತಿಗಳು ವಿಪರೀತವಾಗಿ ಒಬ್ಬರನ್ನೊಬ್ಬರು ಎದುರಿಸಿದರು.

ವಿಶೇಷ ವಿಚಾರ– ಗಜಗಳು ಗಜಗಳನ್ನು ಬಿಟ್ಟು ರಥಗಳೊಡನೆ, ರಥಗಳು ರಥಗಳನ್ನು ಬಿಟ್ಟು ಗಜಗಳೊಡನೆ ಹೀಗೆ ತಮ್ಮ ಸಮಾನರಾದವರನ್ನು ಬಿಟ್ಟು ಬೇರೆಯವರ ಜೊತೆಯಲ್ಲಿ ಯುದ್ಧವು ಪ್ರವೃತ್ತವಾಯಿತು.

ತತ್ರ ತತ್ರೈವ ದೃಶ್ಯಂತೇ ರಥವಾರಣಪತ್ತಯಃ ।
ಸಾದಿನಶ್ಚ ನರವ್ಯಾಘ್ರ ಯುಧ್ಯಮಾನಾ ಮುಹುರ್ಮುಹುಃ ॥೮೩॥

ಎಲೈ ನರವ್ಯಾಘ್ರನೇ, ಅಲ್ಲಲ್ಲಿ ರಥ-ಗಜ-ಪದಾತಿಗಳು, ಅಶ್ವಾರೋಹಿಗಳು ಪುನಃ ಪುನಃ ಯುದ್ಧ ಮಾಡುವುದು ಕಂಡುಬಂದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ತ್ರಿಚತ್ವಾರಿಂಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ನಾಲ್ಕನೆಯ ಅಧ್ಯಾಯ

ಪ್ರಥಮ ದಿವಸದ ಯುದ್ಧದ ವರ್ಣನೆ.

ಸಂಜಯಃ

ರಾಜನ್ ಶತಸಹಸ್ರಾಣಿ ತತ್ರತತ್ರ ತದಾತದಾ ।
ನಿರ್ಮರ್ಯಾದಂ ಪ್ರಯುದ್ಧಾನಿ ತತ್ತೇ ವಕ್ಷ್ಯಾಮಿ ಭಾರತ ॥೧॥

ಸಂಜಯ– ಎಲೈ ರಾಜನೇ, ಭಾರತನೇ, ಆಗ ಅಲ್ಲಲ್ಲಿ ಲಕ್ಷಾದಿ ಸಂಖ್ಯೆಯಲ್ಲಿ ಮರ್ಯಾದೆಯನ್ನು ಮೀರಿದ ಯುದ್ಧಗಳು ನಡೆದವು. ಅದನ್ನು ನಿನಗೆ ಹೇಳುವೆನು.

ನ ಪುತ್ರಃ ಪಿತರಂ ಜಜ್ಞೇ ನ ಪಿತಾ ಪುತ್ರಮೌರಸಮ್ ।
ನ ಭ್ರಾತಾ ಭ್ರಾತರಂ ತತ್ರ ಸ್ವಕೀಯಂ ನ ಚ ಮಾತುಲಃ ॥೨॥

ಅಲ್ಲಿ ಮಗನು ತಂದೆಯನ್ನು ತಿಳಿಯಲಿಲ್ಲ. ತಂದೆಯಾದರೂ ತಿರಸ ಪುತ್ರನನ್ನು ತಿಳಿಯಲಿಲ್ಲ. ಸಹೋದರನು ಸಹೋದರನನ್ನು, ಸೋದರಮಾವನು ಸೋದರಳಿಯನನ್ನು ತಿಳಿಯಲಿಲ್ಲ.

ಮಾತುಲಂ ನ ಚ ಸ್ವಕೀಯೋ ನ ಸಖಾಯಂ ಸಖಾ ತಥಾ ।
ಆವಿಷ್ಟಾ ಇವ ಯುಧ್ಯಂತೇ ಪಾಂಡವಾಃ ಕುರುಭಿಃ ಸಹ ॥೩॥

ಸೋದರಳಿಯನು ಸೋದರ ಮಾವನನ್ನು, ಸ್ನೇಹಿತನು ಸ್ನೇಹಿತನನ್ನು ತಿಳಿಯಲಿಲ್ಲ. ಪಿಶಾಚಿ ಹಿಡಿದವರಂತೆ ಪಾಂಡವರು ಕೌರವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ರಥಾನೀಕಂ ನರವ್ಯಾಘ್ರಾಃ ಕೇಚಿದಭ್ಯಪತನ್ ರಥೈಃ ।
ಅಭಜ್ಯಂತ ಯುಗ್ಯೈರೇವ ಯುಗಾನಿ ಭರತರ್ಷಭ ॥೪॥

ಕೆಲವು ನರಶ್ರೇಷ್ಠರು ರಥದ ಸಮೂಹದ ಮೇಲೆ ತಮ್ಮ ರಥಗಳಿಂದ ಎರಗಿ ಬಿದ್ದರು. ಎಲೈ ಭರತರ್ಷಭನೇ, ನೊಗಗಳು ನೊಗಗಳ ಘರ್ಷಣೆಯಿಂದಲೇ ಮುರಿದು ಹೋದವು.

ರಥೇಷಾಶ್ಚ ರಥೇಷಾಭಿಃ ಕೂಬರಾ ರಥಕೂಬರೈಃ ।
ಸಂಹತಾಃ ಸಂಹತೈಃ ಕೇಚಿತ್ ಪರಸ್ಪರಜಘಾಂಸವಃ ॥೫॥

ರಥದ ಮೂಕಿಗಳು ಮೂಕಿಗಳಿಂದಲೂ, ಈಷ್ಟಿ (ಈರಚಿ) ಮರಗಳು ಈಷ್ಟಿ ಮರಗಳಿಂದಲೂ ಘಟ್ಟಿಸಲ್ಪಟ್ಟವು.

ನ ಶೇಕುಶ್ಚಲಿತುಂ ಕೇಚಿತ್ ಸನ್ನಿಪತ್ಯ ರಥಾ ರಥೈಃ ।
ಪ್ರಭಿನ್ನಾಸ್ತು ಮಹಾಕಾಯಾಃ ಸನ್ನಿಪತ್ಯ ಗಜಾ ಗಜೈಃ ॥೬॥

ಪರಸ್ಪರ ಕೊಲ್ಲುವ ಇಚ್ಛೆಯುಳ್ಳ ಅವರಲ್ಲಿ ಕೆಲವರು ರಥಗಳಿಗೆ ರಥಗಳನ್ನು ಘಟ್ಟಿಸಿ ಚಲಿಸಲೂ ಸಾಧ್ಯವಾಗಲಿಲ್ಲ. ದೊಡ್ಡ ಶರೀರವುಳ್ಳ ಗಜಗಳು ಪ್ರತಿಗಜಗಳ ಜೊತೆಯಲ್ಲಿ ಸಂಘಟ್ಟಿಸಿ ಗಾಯಗೊಂಡವು.

ಬಹುಧಾ ದಾರಯನ್ ಕ್ರುದ್ಧಾ ವಿಷಾಣೈರಿತರೇತರಮ್ ।
ಸತೋಮರಪತಾಕೈಶ್ಚ ವಾರಣಾಃ ಪರವಾರಣೈಃ ॥೭॥

ತೋಮರ, ಪತಾಕೆಗಳಿಂದ ಕೂಡಿದ ಗಜಗಳು ಕ್ರೋಧಗೊಂಡು ಪ್ರತಿಗಜಗಳ ಜೊತೆಯಲ್ಲಿ ಎದುರಿಸಿ ದಂತಗಳಿಂದ ಅನೇಕ ರೀತಿಯಲ್ಲಿ ಗಾಯಗಳನ್ನು ಮಾಡಿದವು.

ಅಭಿಸೃತ್ಯ ಮಹಾರಾಜ ವೇಗವದ್ಭಿರ್ಮಹಾಗಜೈಃ ।
ದಂತೈರಭಿಹತಾಸ್ತತ್ರ ಚುಕ್ರುಶುಃ ಪರಮಾತುರಾಃ ॥೮॥

ಎಲೈ ಮಹಾರಾಜನೇ, ವೇಗದಿಂದ ಓಡಿಬಂದು ದಂತಗಳಿಂದ ತಿವಿಯಲ್ಪಟ್ಟ ಪ್ರತಿಗಜಗಳು ಬಹಳ ನೋವಿನಿಂದ ನರಳಿದವು.

ಅಭಿನೀತಾಶ್ಚ ಶಿಕ್ಷಾಭಿಸ್ತೋತ್ತ್ರಾಂಕುಶಸಮಾಹತಾಃ ।
ಸುಪ್ರಭಿನ್ನಾಃ ಪ್ರಭಿನ್ನಾನಾಂ ಸಮ್ಮುಖಾಭಿಮುಖಾ ಯಯುಃ ॥೯॥

ಚೆನ್ನಾಗಿ ಶಿಕ್ಷಿತವಾದ ಗಜಗಳು ಅಂಕುಶ ಮತ್ತು ಬೇರೆ ಆಯುಧಗಳಿಂದ ಹೊಡೆಯಲ್ಪಟ್ಟು ಬಹಳ ಗಾಯಗೊಂಡಿದ್ದರೂ, ಗಾಯಗೊಂಡ ಪ್ರತಿಗಜಗಳನ್ನು ಎದುರಿಸಿ ಮುಂದೆ ನಡೆದವು.

ಪ್ರಭಿನ್ನೈರಪಿ ಸಂಸಕ್ತಾಃ ಕೇಚಿತ್ ತತ್ರ ಮಹಾಗಜಾಃ ।
ಕ್ರೌಂಚವನ್ನಿನದಂ ಮುಕ್ತ್ವಾ ಪ್ರಾದ್ರವಂತ ತತಸ್ತತಃ ॥೧೦॥

ಗಾಯಗೊಂಡ ಪ್ರತಿಗಜಗಳ ಜೊತೆಯಲ್ಲಿ ಹೋರಾಡಿದ ಮಹಾಗಜಗಳು ಕ್ರೌಂಚ ಪಕ್ಷಿಯಂತೆ ನಿನಾದವನ್ನು ಮಾಡುತ್ತಾ ಅಲ್ಲಿಂದ ಓಡಿಹೋದವು.

ಸಮ್ಯಕ್ ಪ್ರಣೀತಾ ನಾಗಾಶ್ಚ ಪ್ರಭಿನ್ನಕರಟಾಮುಖಾಃ ।
ಋಷ್ಟಿತೋಮರನಾರಾಚೈರ್ನಿರ್ವಿದ್ಧಾ ವರವಾರಣಾಃ ॥೧೧॥

ವಿನೇದುರ್ಭಿನ್ನಮರ್ಮಾಣೋ ನಿಪೇತುಶ್ಚ ಗತಾಸವಃ ।
ಪ್ರಾದ್ರವಂತ ದಿಶಃ ಕೇಚಿನ್ನದಂತೋ ಭೈರವಾನ್ ರವಾನ್ ॥೧೨॥

ಚೆನ್ನಾಗಿ ಶಿಕ್ಷಿತವಾದ, ಮದೋದಕವು ಸುರಿಯುವ ಕುಂಭಸ್ಥಲವುಳ್ಳ ಶ್ರೇಷ್ಠವಾದ ಗಜಗಳು, ಋಷ್ಟಿ, ತೋಮರ ಮತ್ತು ಬಾಣಗಳಿಂದ ಚೆನ್ನಾಗಿ ಹೊಡೆಯಲ್ಪಟ್ಟವುಗಳಾಗಿ ತಮ್ಮ ಮರ್ಮಸ್ಥಾನಗಳು ಭಿನ್ನವಾಗಿ ಗರ್ಜಿಸುತ್ತಾ ಪ್ರಾಣಗಳನ್ನು ಕಳೆದುಕೊಂಡು ಬಿದ್ದವು. ಇನ್ನು ಕೆಲವು ಆನೆಗಳು ಭಯಂಕರವಾಗಿ ಗರ್ಜಿಸುತ್ತಾ ದಿಕ್ಕು ದಿಕ್ಕುಗಳಿಗೆ ಓಡಿ ಹೋದವು.

ಗಜಾನಾಂ ಪಾದರಕ್ಷಾಸ್ತು ವ್ಯೂಢೋರಸ್ಕಾಃ ಪ್ರಹಾರಿಣಃ ।
ಋಷ್ಟಿಭಿಶ್ಚ ಧನುರ್ಭಿಶ್ಚ ವಿಮಲೈಶ್ಚ ಪರಶ್ವಧೈಃ ॥೧೩॥

ಗದಾಭಿರ್ಮುಸಲೈಶ್ಚೈವ ಭಿಂಡಿಪಾಲೈಃ ಸತೋಮರೈಃ ।
ಆಯಸೈಃ ಪರಿಘೈಶ್ಚೈವ ನಿಸ್ತ್ರಿಂಶೈರ್ವಿಮಲೈಃ ಶಿತೈಃ ॥೧೪॥

ಪ್ರಗೃಹೀತೈಃ ಸುಸಂರಬ್ಧಾ ಧಾವಮಾನಾಸ್ತತಸ್ತತಃ ।
ವ್ಯದೃಶ್ಯಂತ ಮಹಾರಾಜ ಪರಸ್ಪರಜಿಘಾಂಸವಃ ॥೧೫॥

ಎಲೈ ಮಹಾರಾಜನೇ, ಗಜಗಳ ಪಾದರಕ್ಷಕರಾದ, ವಿಸ್ತಾರ ವಕ್ಷಸ್ಥಲವುಳ್ಳ ಸೈನಿಕರು ಋಷ್ಟಿಗಳನ್ನು, ಧನುಸ್ಸುಗಳನ್ನು, ವಿಮಲವಾದ ಗಂಡು ಕೊಡಲಿಗಳನ್ನು, ಗದೆಗಳನ್ನು, ಮುಸಲಗಳನ್ನು, ಭಿಂಡಿಪಾಲಗಳನ್ನು, ತೋಮರಗಳನ್ನು, ಕಬ್ಬಿಣದ ಒನಕೆಗಳನ್ನು, ವಿಮಲವಾದ ನಿಶಿತವಾದ ಖಡ್ಗಗಳನ್ನೂ ಹಿಡಿದು ಬಹಳ ಕೋಪದಿಂದ ಪರಸ್ಪರರನ್ನು ಕೊಲ್ಲುವ ಇಚ್ಛೆಯಿಂದ ಅಲ್ಲಿಂದಿಲ್ಲಿ ಓಡಾಡುವುದು ಕಂಡು ಬಂದಿತು.

ರಾಜಮಾನಾಶ್ಚ ನಿಸ್ತ್ರಿಂಶಾಃ ಸಂಪಿಕ್ತಾ ನರಶೋಣಿತೈಃ ।
ಪ್ರತ್ಯದೃಶ್ಯಂತ ಶೂರಾಣಾಮನ್ಯೋನ್ಯಮಭಿಧಾವತಾಮ್ ॥೧೬॥

ಪರಸ್ಪರವಾಗಿ ಮೇಲೆರಗುವ ಶೂರರ ಖಡ್ಗಗಳು ಮನುಷ್ಯರಕ್ತದಿಂದ ನೆನೆದು ಶೋಭಿಸುತ್ತಿದ್ದವು.

ಅವಕ್ಷಿಪ್ತಾವಧೂತಾನಾಮಸೀನಾಂ ವೀರಬಾಹುಭಿಃ ।
ಸಂಜಜ್ಞೇ ತುಮುಲಃ ಶಬ್ದಃ ಪತತಾಂ ಪರಮರ್ಮಸು ॥೧೭॥

ವೀರರ ಬಾಹುಗಳಿಂದ ಕೆಳಗೆ ಎಸೆಯಲ್ಪಟ್ಟು ಅಥವಾ ಕೊಡವಲ್ಪಟ್ಟು ಶತ್ರುಗಳ ಮರ್ಮಸ್ಥಾನಗಳಲ್ಲಿ ಬೀಳುವ ಖಡ್ಗಗಳ ಶಬ್ದವು ತೀವ್ರವಾಗಿದ್ದಿತು.

ಗದಾಮುಸಲರುಗ್ಣಾನಾಂ ಭಿನ್ನಾನಾಂ ಚ ವರಾಸಿಭಿಃ ।
ದಂತಿದಂತಾವಭಿನ್ನಾನಾಂ ಮೃದಿತಾನಾಂ ಚ ದಂತಿಭಿಃ ॥೧೮॥

ತತ್ರತತ್ರ ನರೌಘಾಣಾಂ ಕ್ರೋಶತಾಮಿತರೇತರಮ್ ।
ಶುಶ್ರುವುರ್ದಾರುಣಾ ವಾಚಃ ಪ್ರೇತಾನಾಮಿವ ಭಾರತ ॥೧೯॥

ಎಲೈ ಭಾರತನೇ, ಗದಾ-ಮುಸಲಗಳಿಂದಲೂ, ಶ್ರೇಷ್ಠವಾದ ಕತ್ತಿಗಳಿಂದಲೂ ಕತ್ತರಿಸಲ್ಪಟ್ಟು, ಗಜಗಳ ದಂತಗಳಿಂದ ತಿವಿಯಲ್ಪಟ್ಟು, ಗದೆಗಳಿಂದ ತಿವಿಯಲ್ಪಟ್ಟ ಪರಸ್ಪರವಾಗಿ ಕಿರುಚುವ ಸೈನಿಕ ಸಮುದಾಯಗಳ ದಾರುಣವಾದ ಮಾತುಗಳು ಮರಣ ಹೊಂದಿದ ಪ್ರೇತಗಳ ಮಾತುಗಳಂತೆ ದಾರುಣವಾಗಿ ಕೇಳಿಬಂದವು.

ಹಯೈರಪಿ ಹಯಾರೋಹಾಶ್ಚಾಮರಾಪೀಡಧಾರಿಭಿಃ ।
ಹಂಸೈರಿವ ಮಹಾವೇಗೈರನ್ಯೋನ್ಯಮಭಿದುದ್ರುವುಃ ॥೨೦॥

ಅಶ್ವಾರೋಹಿಗಳ ಮೇಲೆ ಚಾಮರ ಮತ್ತು ತಲೆಯ ಮೇಲೆ ಹೂಗೊಂಚಲನ್ನು ಧರಿಸಿದ ಅಶ್ವಾರೋಹಿಗಳು, ಮಹಾವೇಗವುಳ್ಳ ಹಂಸಗಳ ಜೊತೆಯಲ್ಲಿ ಹಂಸಗಳು ಸೇರಿದಂತೆ ಪರಸ್ಪರವಾಗಿ ಒಬ್ಬರ ಕಡೆಗೆ ಒಬ್ಬರು ಓಡಿದರು.

ತೈರ್ವಿಮುಕ್ತಾ ಮಹಾಪ್ರಾಸಾ ಜಾಂಬೂನದವಿಭೂಷಣಾಃ ।
ಆಶುಗಾ ವಿಮಲಾಸ್ತೀಕ್ಷ್ಣಾಃ ಸಂಪೇತುರ್ಭುಜಗೋಪಮಾಃ ॥೨೧॥

ಅವರು ಪ್ರಯೋಗಿಸಿದ ಸುವರ್ಣಾಲಂಕೃತವಾದ, ವೇಗವಾಗಿ ಸಂಚರಿಸುವ, ನಿರ್ಮಲವೂ ಮತ್ತು ನಿಶಿತವೂ ಆಗಿದ್ದು ಸರ್ಪಗಳನ್ನು ಹೋಲುವ ದೊಡ್ಡ ಪ್ರಾಸಗಳು (ಈಟಿಗಳು) ಶತ್ರು ಸೈನಿಕರ ಮೇಲೆ ಬಿದ್ದವು.

ಅಶ್ವೈರಗ್ರ್ಯೈವಯೈಃ ಕೇಚಿದಾಪ್ಲುತ್ಯ ಮಹತೋ ರಥಾನ್ ।
ಶಿರಾಂಸ್ಯಾದದಿರೇ ವೀರಾ ರಥಿನಾಮಶ್ವಸಾದಿನಃ ॥೨೨॥

ಕೆಲವು ಅಶ್ವಾರೋಹಿಗಳು ಶ್ರೇಷ್ಠವಾದ ವೇಗವುಳ್ಳ ಅಶ್ವಗಳಿಂದ ದೊಡ್ಡ ರಥಗಳಿಗೆ ಹಾರಿ ಆ ವೀರರು ರಥಿಕರ ಶಿರಸ್ಸುಗಳನ್ನು ಕತ್ತರಿಸಿದರು.

ಬಹೂನಪಿ ಹಯಾರೋಹಾನ್ ಭಲ್ಲೈಃ ಸನ್ನತಪರ್ವಭಿಃ ।
ರಥೀ ಜಘಾನ ಸಂಪ್ರಾಪ್ಯ ಬಾಣಗೋಚರಮಾಗತಾನ್ ॥೨೩॥

ತನ್ನ ಬಾಣದ ವ್ಯಾಪ್ತಿಗೆ ಬಂದ ಅನೇಕ ಅಶ್ವಾರೋಹಿಗಳನ್ನು ರಥಿಯು ಸಮೀಪಿಸಿ ಬಾಗಿದ ತುದಿಯುಳ್ಳ ಭಲ್ಲಗಳಿಂದ ಅವರನ್ನು ಕೊಂದನು.

ನಗಮೇಘಪ್ರತೀಕಾಶಾಶ್ಚಿಕ್ಷಿಪ್ಯ ತುರಗಾನ್ ಗಜಾಃ ।
ಪಾದೈರೇವಾವಮೃದ್ನಂತ ಮತ್ತಾಃ ಕನಕಭೂಷಣಾಃ ॥೨೪॥

ಕನಕಭೂಷಣವುಳ್ಳ ಪರ್ವತದಂತೆ ಮತ್ತು ಮೇಘದಂತೆ ಕಾಣುತ್ತಿದ್ದ ಮದಗಜಗಳು ಅಶ್ವಗಳನ್ನು ಎಸೆದು ತಮ್ಮ ಪಾದಗಳಿಂದ ಅವುಗಳನ್ನು ತುಳಿದವು.

ಪಾಟ್ಯಮಾನೇಷು ಕುಂಭೇಷು ಪಾರ್ಶ್ವೇಷ್ವಪಿ ಚ ವಾರಣಾಃ ।
ಪ್ರಾಸೈರ್ವಿನಿಹತಾಃ ಕೇಚಿದ್ ವಿನೇದುಃ ಪರಮಾತುರಾಃ ॥೨೫॥

ಪಕ್ಕದಲ್ಲಿದ್ದ ಗಜಗಳ ಕುಂಭಸ್ಥಲಗಳು ಸೀಳಲ್ಪಡುತ್ತಿದ್ದರೂ ಸಹ ಈಟಿಗಳಿಂದ ಹತವಾದ ಇನ್ನು ಕೆಲವು ಗಜಗಳು ಪರಮವೇದನೆಯಿಂದ ಗರ್ಜಿಸಿದವು.

ಸಾಶ್ವಾರೋಹಾನ್ ಹಯಾನ್ ಕೇಚಿದುಸ್ಥಾಃ ವರವಾರಣಾಃ ।
ಸಹಸಾ ಚಿಚ್ಚಿಪುಸ್ತತ್ರ ಸಂಕುಲೇ ಭೈರವೇ ಸತಿ ॥೨೬॥

ಆ ಭಯಂಕರವಾದ ಸಮಾವೇಶದಲ್ಲಿ ಕೆಲವು ಶ್ರೇಷ್ಠ ಗಜಗಳು ಅಶ್ವಾರೋಹಿಗಳಿಂದ ಕೂಡಿದ ಅಶ್ವಗಳನ್ನು ಪರಾಭವಗೊಳಿಸಿ ಹಿಡಿದು ದೂರ ಎಸೆದವು.

ಸಾಶ್ವಾರೋಹಾನ್ ವಿಷಾಣಾಗ್ರೈರುತ್ಪಿಪ್ಯ ತುರಗಾನ್ ದ್ವಿಪಾಃ ।
ರಥಿನೋಽನಮೃದ್ನಂತಃ ಸಧ್ವಜಾನ್ ಪರಿಚಕ್ರಮುಃ ॥೨೭॥

ಗಜಗಳು, ಅಶ್ವಾರೋಹಿ ಸಹಿತವಾದ ಅಶ್ವಗಳನ್ನು ತಮ್ಮ ದಂತದ ತುದಿಗಳಿಂದ ಎಸೆದು ಧ್ವಜದಿಂದ ಕೂಡಿದ ರಥಸಮೂಹಗಳನ್ನು ಪುಡಿ ಮಾಡುತ್ತಾ ತಿರುಗಾಡಿದವು.

ಪುಂಸ್ತ್ವದಭಮದತ್ತಾಶ್ಚ ಕೇಚಿದತ್ರ ಮಹಾಗಜಾಃ ।
ಸಾಶ್ವಾರೋಹಾನ್ರಥಾನ್ ಜಘ್ನುಃ ಕರೈಃ ಸಚರಣೈಸ್ತಥಾ ॥೨೮॥

ಮದಿಸಿದ ಕೆಲವು ಮಹಾಗಜಗಳು (ಗಂಡಾನೆಗಳು) ತಮ್ಮ ಸೊಂಡಿಲುಗಳಿಂದಲೂ ಮತ್ತು ಪಾದಗಳಿಂದಲೂ ಅಶ್ವಾರೋಹಿಗಳಿಂದ ಸಹಿತವಾದ ಅಶ್ವಗಳನ್ನು ಕೊಂದವು.

ಕೇಚಿದಾಪ್ಲುತ್ಯ ಕರಿಣಃ ಸಾಶ್ವಾನಪಿ ರಥಾನ್ ಕರೈಃ ।
ವಿಕರ್ಷಂತೋ ದಿಶಃ ಸರ್ವಾಃ ಸಮೀಯುಃ ಸರ್ವಶಬ್ದಗಾಃ ॥೨೯॥

ಕೆಲವು ಆನೆಗಳು ಅಶ್ವ ಸಹಿತವಾಗಿ ರಥಗಳನ್ನು ತಮ್ಮ ಸೊಂಡಿಲಿನಿಂದ ಹಿಡಿದು ಎಳೆಯುತ್ತಾ ಎಲ್ಲ ಕಡೆಯಲ್ಲಿಯೂ ಶಬ್ದ ಮಾಡುತ್ತಾ, ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸಿದವು.

ಆಶುಗಾ ವಿಮಲಾಸ್ತೀಕ್ಷ್ಣಾಃ ಸಂಪೇತುರ್ಭುಜಗೋಪಮಾಃ ।
ನರಾಶ್ವಕಾಯಾನ್ನಿರ್ಭಿದ್ಯ ಲೋಹಾನಿ ಕವಚಾನಿ ಚ ॥೩೦॥

ಶೀಘ್ರವಾದ ವೇಗವುಳ್ಳ ವಿಮಲವಾದ, ತೀಕ್ಷ್ಣವಾದ, ಸರ್ಪಗಳನ್ನು ಹೋಲುವ ಬಾಣಗಳು ನರರ ಮತ್ತು ಅಶ್ವಗಳ ದೇಹವನ್ನು ಭೇದಿಸಿ, ಲೋಹಮಯವಾದ ಕವಚಗಳನ್ನೂ ಭೇದಿಸಿ ಸಾಗಿದವು.

ನಿಪೇತುರ್ವಿಮಲಾಃ ಶಕ್ತ್ಯೋ ವೀರಬಾಹುಭಿರರ್ಪಿತಾಃ ।
ಮಹೋಲ್ಕಾಪ್ರತಿಮಾ ಘೋರಾಸ್ತತ್ರ ತತ್ರ ವಿಶಾಂಪತೇ ॥೩೧॥

ಎಲೈ ರಾಜನೇ, ವೀರಬಾಹುಗಳಿಂದ ಪ್ರಯೋಗಿಸಲ್ಪಟ್ಟ ದೊಡ್ಡ ಉಲ್ಕೆಗೆ ಸದೃಶವಾದ, ಘೋರವೂ, ಸ್ವಚ್ಛವೂ ಆದ ಶಕ್ತ್ಯಾಯುಧಗಳು ಅಲ್ಲಲ್ಲಿ ಬಿದ್ದವು.

ದ್ವೀಪಿಚರ್ಮಾವಸದ್ಭಿಶ್ಚ ವ್ಯಾಘ್ರಚರ್ಮಶಯೈರಪಿ ।
ವಿಕೋಶೈರ್ವಿಮಲೈಃ ಖಡ್ಗೈರಭ್ಯಜಘ್ನುಃ ಪರಾನ್ ರಣೇ ॥೩೨॥

ಚಿರತೆಯ ಚರ್ಮಗಳಿಂದ ಮತ್ತು ವ್ಯಾಘ್ರಚರ್ಮಗಳಿಂದ ಕೂಡಿದ ಹಿಡಿಯುಳ್ಳ, ಒರೆಯಿಂದ ಎಳೆದ ವಿಮಲವಾದ ಖಡ್ಗಗಳಿಂದ ಯೋಧರು ಶತ್ರುಗಳ ಸೈನ್ಯದಲ್ಲಿ ಸಂಹರಿಸಿದರು.

ಅಭಿಪುತಮಭಿಕ್ರುದ್ಧಮೇಕಪಾರ್ಶ್ವವದಾರಿತಮ್ ।
ವಿದರ್ಶಯಂತಃ ಸಂಪೇತುಃ ಖಡ್ಗಚರ್ಮಪರಶ್ವಧೈಃ ॥೩೩॥

ಖಡ್ಗ, ಚರ್ಮ, ಪರಶ್ವಧಗಳಿಂದ ಬಹಳವಾಗಿ ಗಾಯಗೊಂಡ ಯೋಧರು ಸೀಳಿ ಹೋದ ತಮ್ಮ ಒಂದು ಪಾರ್ಶ್ವವನ್ನು ತೋರಿಸುತ್ತಾ ಕ್ರೋಧಗೊಂಡು ಮುನ್ನುಗ್ಗಿದರು.

ಶಕ್ತಿಭಿರ್ದಾರಿತಾಃ ಕೇಚಿತ್ ಸಂ(ಭ)ಭಿನ್ನಾಶ್ಚ ಪರಶ್ವಧೈಃ ।
ಹಸ್ತಿಭಿರ್ಮಥಿತಾಃ ಕೇಚಿತ್ ಕ್ಷುಣ್ಣಾಶ್ಚಾನ್ಯೇ ತುರಂಗಮೈಃ ॥೩೪॥

ಕೆಲವರು ಶಕ್ತ್ಯಾಯುಧಗಳಿಂದ ಸೀಳಲ್ಪಟ್ಟರು. ಇನ್ನು ಕೆಲವರು ಪರಶ್ವಧಗಳಿಂದ ಛೇದಿಸಲ್ಪಟ್ಟರು. ಕೆಲವರು ಆನೆಗಳಿಂದ ತುಳಿಯಲ್ಪಟ್ಟರು. ಇನ್ನು ಕೆಲವರು ಅಶ್ವಗಳಿಂದ ಪುಡಿಮಾಡಲ್ಪಟ್ಟರು.

ರಥನೇಮಿನಿಕೃತ್ತಾಶ್ಚ ನಿಕೃತ್ತಾ ನಿಶಿತೈಃ ಶರೈಃ ।
ವಿಕ್ರೋಶಂತಿ ನರಾ ರಾಜನ್ ತತ್ರತತ್ರ ಸ್ಮ ಬಾಂಧವಾನ್ ॥೩೫॥

ಎಲೈ ರಾಜನೇ, ರಥಚಕ್ರದ ಗಾಲಿಗಳಿಂದ ಗಾಯಗೊಂಡ, ನಿಶಿತವಾದ ಬಾಣಗಳಿಂದ ಗಾಯಗೊಂಡ ಯೋಧರು ಸಹಾಯಕ್ಕಾಗಿ ತಮ್ಮ ಬಂಧುಗಳನ್ನು ಉದ್ದೇಶಿಸಿ ಕಿರುಚುತ್ತಿದ್ದರು.

ಪುತ್ರಾನನ್ಯೇ ಪಿತೄನನ್ಯೇ ಭ್ರಾತೄಂಶ್ಚ ಸಹ ಬಾಂಧವೈಃ ।
ಮಾತುಲಾನ್ ಭಾಗಿನೇಯಾಂಶ್ಚ ಪರಾನಪಿ ಚ ಸಂಯುಗೇ ॥೩೬॥

ಇನ್ನು ಕೆಲವರು ತಮ್ಮ ಪುತ್ರರನ್ನೂ, ಕೆಲವರು ಪಿತೃಗಳನ್ನೂ, ಕೆಲವರು ಬಾಂಧವ ಸಹಿತರಾದ ತಮ್ಮ ಸಹೋದರರರನ್ನೂ, ಇನ್ನು ಕೆಲವರು ಸೋದರ ಮಾವರನ್ನೂ, ಸೋದರ ಅಳಿಯಂದಿರನ್ನೂ, ಇನ್ನು ಕೆಲವರು ಶತ್ರುಗಳನ್ನೂ ಸಹ ಸಹಾಯಕ್ಕಾಗಿ ಕರೆಯುತ್ತಿದ್ದರು.

ವಿಕೀರ್ಣಾಂತ್ರಾಃ ಸುಬಹವೋ ಭಗ್ನಸಕ್ಥಾಶ್ಚ ಭಾರತ ।
ಬಾಹುಭಿಃ ಸುಭುಜಾಚ್ಚಿನ್ನೈಃ ಪಾರ್ಶ್ವೇಷು ಚ ವಿದಾರಿತಾಃ ।
ಕ್ರಂದಂತಃ ಸಮದೃಶ್ಯಂತ ತೃಷಿತಾ ಜೀವಿತೇಪ್ಸವಃ ॥೩೭॥

ಅನೇಕರು ತಮ್ಮ ಕರುಳು ಚೆಲ್ಲಾಪಿಲ್ಲಿಯಾಗಿ, ತೊಡೆಗಳು ಮುರಿದು, ಬಾಹುಗಳು ಭುಜಗಳು ಕತ್ತರಿಸಲ್ಪಟ್ಟು, ಪಕ್ಕೆಗಳಲ್ಲಿ ಸೀಳಲ್ಪಟ್ಟ ಯೋಧರು ಬಾಯಾರಿ ಬದುಕಲು ಬಯಸಿ ಗೋಳಾಡುತ್ತಿದ್ದುದು ಕಂಡುಬಂದಿತು.

ತೃಷ್ಣಾಪರಿಗತಾಃ ಕೇಚಿದಲ್ಪಸತ್ತ್ವಾ ವಿಶಾಂಪತೇ ।
ಭೂಮೌ ನಿಪತಿತಾಃ ಸಂಖೇ ಜಲಮೇವ ಯಯಾಚಿರೇ ॥೩೮॥

ಎಲೈ ರಾಜನೇ, ಅಲ್ಪ ಬಲವುಳ್ಳ ಕೆಲವರು ಯುದ್ಧದಲ್ಲಿ ಭೂಮಿಯ ಮೇಲೆ ಬಿದ್ದುನೀರಡಿಕೆಯಿಂದ ಬಳಲಿ ನೀರನ್ನೇ ಯಾಚಿಸಿದರು.

ರುಧಿರೌಘಪರಿಕ್ಷಿನ್ನಾಃ ಕ್ಲಿಶ್ಯಮಾನಾಶ್ಚ ಭಾರತ ।
ವ್ಯನಿಂದನ್ ಭೃಶಮಾತ್ಮಾನಂ ತವ ಪುತ್ರಾಂಶ್ಚ ಸಂಗತಾನ್ ॥೩೯॥

ಎಲೈ ಭಾರತನೇ, ರಕ್ತದ ಮಡುವಿನಲ್ಲಿನೆನೆದು ಕ್ಲೇಶ ಪಡುತ್ತಿದ್ದ ಅವರು ತಮ್ಮನ್ನೂ ನಿನ್ನ ಪುತ್ರರನ್ನೂ ಮತ್ತು ಯುದ್ಧಕ್ಕಾಗಿ ಬಂದ ರಾಜರನ್ನೂ ನಿಂದಿಸಿದರು.

ಅಪರೇ ಕ್ಷತ್ರಿಯಾಃ ಶೂರಾಃ ಕೃತವೈರಾಃ ಪರಸ್ಪರಮ್ ।
ನೈವ ಶಸ್ತ್ರಂ ವಿಮುಂಚಂತಿ ನೈವ ಕ್ರಂದಂತಿ ಮಾರಿಷ ।
ತರ್ಜಯಂತಿ ಚ ಸಂಹೃಷ್ಟಾಸ್ತತ್ರ ತತ್ರ ಪರಸ್ಪರಮ್ ॥೪೦॥

ನಿರ್ದಶ್ಯ ದಶನೈಶ್ಚಾಪಿ ಕ್ರೋಧಾತ್ ಸ್ವದಶನಚ್ಛದಾನ್ ।
ಭ್ರುಕುಟೀಕುಟಿಲೈರ್ವಕ್ತ್ರೈಃ ಪ್ರೇಕ್ಷಂತೇ ಚ ಪರಸ್ಪರಮ್ ॥೪೧॥

ಎಲೈ ವೀರನೇ, ಇನ್ನು ಕೆಲವು ಶೂರರೂ, ಪರಸ್ಪರವಾಗಿ ವೈರವನ್ನು ಮಾಡಿದವರೂ ಆದ ಕ್ಷತ್ರಿಯರು ತಮ್ಮ ಹಸ್ತದಿಂದ ಶಸ್ತ್ರಗಳನ್ನು ಬಿಡಲಿಲ್ಲ. ಗೋಳಾಟವನ್ನೂ ಮಾಡಲಿಲ್ಲ. ಸಂತೋಷದಿಂದ ಶತ್ರುಗಳನ್ನು ಹೆದರಿಸುತ್ತಿದ್ದರು. ಕ್ರೋಧದಿಂದ ತಮ್ಮ ಹಲ್ಲುಗಳಿಂದ ತುಟಿಗಳನ್ನು ಕಚ್ಚಿ, ಹುಬ್ಬುಗಳನ್ನು ಗಂಟಿಕ್ಕಿದ ಮುಖಗಳನ್ನು ಪರಸ್ಪರವಾಗಿ ದೃಷ್ಟಿಸಿ ನೋಡಿದರು.

ಅಪರೇ ಕ್ಲಿಶ್ಯಮಾನಾಸ್ತು ವ್ರಣಾರ್ತಾಃ ಶರಪೀಡಿತಾಃ ।
ನಿಷ್ಕೂಜಾಃ ಸಮಪದ್ಯಂತ ದೃಢತ್ವಾ ಮಹಾಬಲಾಃ ॥೪೨॥

ಇನ್ನು ಕೆಲವು ದೃಢವಾದ ಸ್ಥೈರ್ಯವುಳ್ಳ ಮಹಾಬಲಿಷ್ಠರಾದವರು ಬಾಣಗಳಿಂದ ಪೀಡಿತರಾಗಿ ವ್ರಣಗಳ ನೋವನ್ನು ಅನುಭವಿಸುತ್ತಿದ್ದರೂ ಮೌನವಾಗಿದ್ದರು.

ಅನ್ಯೇ ತು ವಿರಥಾಃ ಶೂರಾ ರಥಮನ್ಯಸ್ಯ ಸಂಯುಗೇ ।
ಪ್ರಾರ್ಥಯಾನಾ ನಿಪತಿತಾಃ ಸಂಕ್ಷುಣ್ಣಾ ವರವಾರಣೈಃ ।
ಅಶೋಭಂತ ಮಹಾರಾಜ ಪುಷ್ಪಿತಾ ಇವ ಕಿಂಶುಕಾಃ ॥೪೩॥

ಎಲೈ ಮಹಾರಾಜನೇ, ರಥವನ್ನು ಕಳೆದುಕೊಂಡ ಕೆಲವು ಶೂರರು ಇನ್ನೊಬ್ಬರ ರಥವನ್ನು ಬೇಡುತ್ತಾ ನೆಲದ ಮೇಲೆ ಬಿದ್ದು ಶ್ರೇಷ್ಠವಾದ ಗಜಗಳ ಕಾಲಿಗೆ ಸಿಕ್ಕಿ ಗಾಯಗೊಂಡು ಹೂವರಳಿದ ಮುತ್ತುಗಗಳಂತೆ ಶೋಭಿಸಿದರು.

ಸಂಬಭೂವುರನೀಕೇಷು ಬಹವೋ ಭೈರವಸ್ವನಾಃ ।
ವರ್ತಮಾನೇ ಮಹಾಭೀಮೇ ತಸ್ಮಿನ್ ವೀರವರಕ್ಷಯೇ ॥೪೪॥

ಶ್ರೇಷ್ಠರಾದ ವೀರರ ವಿನಾಶ ಉಂಟಾಗುವ ಅಂತಹ ಭಯಂಕರವಾದ ಯುದ್ಧವು ನಡೆಯುತ್ತಿರಲು ಅನೇಕ ಸ್ಥಳಗಳಲ್ಲಿ ಅನೇಕ ಭೇರಿ ನಿನಾದಗಳು ಮೂಡಿ ಬಂದವು.

ಅಹನತ್ ತು ಪಿತಾ ಪುತ್ರಂ ಪುತ್ರಶ್ಚ ಪಿತರಂ ರಣೇ ।
ಸ್ವಸ್ರೀಯೋ ಮಾತುಲಂ ಚಾಪಿ ಸ್ವಸ್ರೀಯಂ ಚಾಪಿ ಮಾತುಲಃ ॥೪೫॥

ತಂದೆಯು ಮಗನನ್ನು ಕೊಂದನು. ಯುದ್ಧದಲ್ಲಿ ಮಗನು ತಂದೆಯನ್ನು ಕೊಂದನು. ಸೋದರಳಿಯನು ಸೋದರಮಾವನನ್ನು, ಸೋದರಮಾವನು ಸೋದರಳಿಯನನ್ನು ಕೊಂದನು.

ಸುಹೃದಂ ಚ ಸುಹೃ ರಾಜನ್ ಸಂಬಂಧೀ ಬಾಂಧವಂ ತಥಾ ।
ಏವಂ ಯುಧ್ಯಿಷ್ಮರೇ ತತ್ರ ಕುರವಃ ಪಾಂಡವೈಃ ಸಹ ॥೪೬॥

ಎಲೈ ರಾಜನೇ, ಸ್ನೇಹಿತನು ಸ್ನೇಹಿತನನ್ನು, ಬಂಧುವು ಬಂಧುವನ್ನು ಕೊಂದನು. ಹೀಗೆ ಕುರುಗಳು ಅಲ್ಲಿ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ವರ್ತಮಾನೇ ಭಯೇ ತಸ್ಮಿನ್ ನಿರ್ಮರ್ಯಾದೇ ಮಹಾಹವೇ ।
ಭೀಷ್ಮಮಾಸಾದ್ಯ ಪಾರ್ಥಾನಾಂ ವಾಹಿನೀ ಸಮಕಂಪತ ॥೪೭॥

ಎಲ್ಲ ಎಲ್ಲೆಗಳನ್ನೂ ಮೀರಿದ ಭಯಂಕರವಾದ ಮಹಾಯುದ್ಧವು ಅಲ್ಲಿ ನಡೆಯುತ್ತಿರಲು ಪಾಂಡವರ ಸೈನ್ಯವು ಭೀಷ್ಮರನ್ನು ಸಮೀಪಿಸಿ ನಡುಗಿತು.

ಕೇತುನಾ ಪಂಚತಾರೇಣ ತಾಳೇನ ಭರತರ್ಷಭ ।
ರಾಜತೇನ ಮಹಾಬಾಹುರುಚ್ಛ್ರಿತೇನ ಮಹಾಹವೇ ।
ಬಭೌ ಭೀಷ್ಮಸ್ತದಾ ರಾಜನ್ ಚಂದ್ರಮಾ ಇವ ಮೇರುಣಾ ॥೪೮॥

ಎಲೈ ಭರತಶ್ರೇಷ್ಠನೇ, ಆಗ ಮಹಾಬಾಹುಗಳಾದ ಭೀಷ್ಮರು ಪಂಚನಕ್ಷತ್ರಗಳಿಂದ ಕೂಡಿದ ರಜತಮಯವಾದ ತಾಳಧ್ವಜವನ್ನು ಹೊಂದಿದ ಮಹಾರಥದಲ್ಲಿ ಮೇರುಪರ್ವತದ ಜೊತೆಯಲ್ಲಿರುವ ಚಂದ್ರನಂತೆ ಶೋಭಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಚತುಶ್ಚತ್ವಾರಿಂಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನಲವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ – ಅಧ್ಯಾಯಃ ೨೫

ಅಥ ವ್ಯೂಢೇಷ್ವನೀಕೇಷು ನದನ್ ವಾಯುಸುತೋಽಭ್ಯಯಾತ್ ।
ಸಮಿತಿಂ ಧಾರ್ತರಾಷ್ಟ್ರಾಣಾಂ ತೇ ತಂ ಸರ್ವೇಽಭ್ಯವಾರಯನ್ ॥೧೮॥

ಬಳಿಕ ಸೈನ್ಯಗಳು ಯುದ್ಧಕ್ಕೆ ತೊಡಗಿದಾಗ ಭೀಮ ಘರ್ಜಿಸುತ್ತ ಕೌರವರ ಸೈನ್ಯವನ್ನು ಆಕ್ರಮಿಸಿದ. ಅವರು ಅವನನ್ನು ಎದುರಿಸಿದರು.

ಸಸೃಜುಃ ಶರವೃಷ್ಟಿಂ ಚ ಭೀಮಸೇನಸ್ಯ ಮೂರ್ಧನಿ ।
ಕ್ಷಿಪ್ರಂ ನೈವ ಪ್ರಹರ್ತವ್ಯಂ ಜ್ಞಾತಿಷು ಪ್ರಹರತ್ಸ್ವಪಿ ।
ಇತ್ಯೇವಾಪ್ರಹರತ್ಯಸ್ಮಿನ್ ಶತ್ರುಭಿಃ ಶರವಿಕ್ಷತೇ ॥೧೯॥

ಅಮುಚನ್ ಧಾರ್ತರಾಷ್ಟ್ರೇಷು ಶಸ್ತ್ರವೃಷ್ಟಿಂ ದುರಾಸದಮ್ ।
ಸೌಭದ್ರಪ್ರಮುಖಾ ವೀರಾಃ ಸರ್ವೇ ಪಾಂಡುಸುತಾತ್ಮಜಾಃ ॥೨೦॥

ಕೌರವರು ಭೀಮನ ತಲೆಯ ಮೇಲೆ ಬಾಣಗಳ ಮಳೆಗರೆದರು. ಬಂಧುಗಳು ಹೊಡೆಯುತ್ತಿದ್ದರೂ ಪ್ರತಿಯಾಗಿ ಕೂಡಲೇ ಹೊಡೆಯಬಾರದೆಂದೇ ಭೀಮ ಹೊಡೆಯದೆ ನಿಂತು ಶತ್ರುಗಳ ಬಾಣಗಳಿಂದ ಜರ್ಜರಿತನಾಗದೇ ನಿಂತ. ಆಗ ಅಭಿಮನ್ಯು ಮುಂತಾದ ವೀರರಾದ ಎಲ್ಲ ಪಾಂಡವ ಪುತ್ರರೂ ಕೌರವರ ಮೇಲೆ ಸಹಿಸಲಸಾಧ್ಯವಾದ ಬಾಣಗಳ ಮಳೆಗರೆದರು.

ಅಪೀಡಯಂಸ್ತಾನ್ ಶಸ್ತ್ರೌಘೈರ್ಧಾರ್ತರಾಷ್ಟ್ರಾಃ ಸಮಂತತಃ ।
ರರಕ್ಷ ತಾನ್ ವಾಯುಸುತೋ ವಿಸೃಜನ್ ಶರಸಂಚಯಾನ್ ॥೨೧॥

ತತ್ರ ಭೀಮಶರೈರ್ನುನ್ನಾ ಧಾರ್ತರಾಷ್ಟ್ರಾಃ ಸಮಂತತಃ ।
ಭಗ್ನಾಸ್ತಾನಥ ಗಾಂಗೇಯೋ ದಿವ್ಯಾಸ್ತ್ರವಿದಧಾರಯತ್ ॥೨೨॥

ಅಥ ದ್ವಂದ್ವಾನಿ ಯುದ್ಧಾನಿ ಬಭೂವುರ್ವಿಜಿಗೀಷತಾಮ್ ।
ದ್ರೋಣಪಾರ್ಷತಯೋಶ್ಚೈವ ಶೈನೇಯಕೃತವರ್ಮಣೋಃ ॥೨೩॥

ಅಭಿಮನ್ಯು ಮುಂತಾದವರನ್ನು ಕೌರವರು ಎಲ್ಲ ಕಡೆ ಶಸ್ತ್ರಸಮೂಹಗಳಿಂದ ಪೀಡಿಸಿದರು. ಅವರನ್ನು ಭೀಮನೇ ಬಾಣ ಸಮೂಹಗಳನ್ನೆಸೆಯುತ್ತ ರಕ್ಷಿಸಿದ. ಆಗ ಭೀಮನ ಬಾಣಗಳಿಂದ ಕೌರವರು ಎಲ್ಲ ಕಡೆ ಪಲಾಯನ ಮಾಡುವಂತಾಯಿತು. ಸೋತ ಅವರನ್ನು ದಿವ್ಯಾಸ್ತ್ರವೇತ್ತರಾದ ಭೀಷ್ಮರು ಸ್ಥಿರವಾಗಿ ನಿಲ್ಲಿಸಿದರು. ಬಳಿಕ ಜಯೇಚ್ಛುಗಳಾದ ವೀರರ ದ್ವಂದ್ವಯುದ್ಧಗಳು ನಡೆದವು.

ದುಃಶಾಸನೇನ ವೀರಸ್ಯ ಮಾದ್ರೇಯಸ್ಯ ಯವೀಯಸಃ ।
ನಕುಲಸ್ಯ ವಿಕರ್ಣಸ್ಯ ಕಾರ್ಷ್ಣೇಯೈರ್ದುರ್ಮುಖಾದಿನಾಮ್ ॥೨೪॥

ವೃತ್ತೇ ದ್ವಂದ್ವಮಹಾಯುದ್ಧೇ ತತ್ರ ಧರ್ಮಜಪಕ್ಷಗಾಃ ।
ಜತಾ ವಿನೈವ ಶೈನೇಯಂ ಸೋಽಜಯದ್ ಹೃದಿಕಾತ್ಮಜಮ್ ॥೨೫॥

ಅಥ ಭೀಷ್ಮದ್ರೋಣಮುಖೈರ್ಭಗದತ್ತಾದಿಭಿಸ್ತಥಾ ।
ವಿದ್ರಾಷ್ಯಮಾಣಂ ಸ್ವಬಲಂ ಸ್ಥಾಪಯಾಮಾಸ ಮಾರುತಿಃ ॥೨೬॥

ದ್ರೋಣಂ ಚ ಭಗದತ್ತಂ ಚ ಕೃಪಂ ದುರ್ಯೋಧನಂ ತಥಾ ।
ಕೇವಲಂ ಬಾಹುವೀರ್ಯೇಣ ವ್ಯಜಯದ್ ಭೀಮವಿಕ್ರಮಃ ॥೨೭॥

ಹತ್ವೋತ್ತರಂ ಮದ್ರರಾಜೋ ವ್ಯದ್ರಾವಯದನೀಕಿನೀಮ್ ॥೨೮॥

ದ್ರೋಣ ದ್ರುಪದರಿಗೂ ಸಾತ್ಯಕಿ ಕೃತವರ್ಮರಿಗೂ ದುಶ್ಶಾಸನ ಸಹದೇವರಿಗೂ ನಕುಲ ವಿಕರ್ಣರಿಗೂ, ದ್ರೌಪದೀ ಪುತ್ರರು ದುರ್ಮುಖ ಮುಂತಾದವರಿಗೂ ಮಹಾ ದ್ವಂದ್ವಯುದ್ಧ ನಡೆಯಲು ಧರ್ಮರಾಜನ ಪಕ್ಷದವರು ಸಾತ್ಯಕಿ ಹೊರತಾಗಿ ಎಲ್ಲರೂ ಪರಾಜಿತರಾದರು. ಸಾತ್ಯಕಿ ಕೃತವರ್ಮನನ್ನು ಗೆದ್ದ. ಭಯಂಕರ ಪರಾಕ್ರಮಿಯಾದ ಭೀಮ ತನ್ನ ಸೈನ್ಯವನ್ನು ಭೀಷ್ಮ-ದ್ರೋಣಾದಿಗಳೂ ಭಗದತ್ತಾದಿಗಳೂ ಓಡಿಸಿದಾಗ ತಡೆದು ನಿಲ್ಲಿಸಿದ. ದ್ರೋಣ ಭಗದತ್ತ ಕೃಪ ದುರ್ಯೋಧನರನ್ನು ಕೇವಲ ಬಾಹುಬಲದಿಂದ ಗೆದ್ದ. ಶಲ್ಯ ಉತ್ತರ ಕುಮಾರನನ್ನು ಕೊಂದು ಸೇನೆಯನ್ನು ಓಡಿಸಿದ.

★ ★ ★ ★ ★

ನಲವತ್ತೈದನೆಯ ಅಧ್ಯಾಯ

ಮೊದಲನೆಯ ದಿವಸದ ಯುದ್ಧದಲ್ಲಿ ಭೀಷ್ಮರ ಮೇಲುಗೈ, ಪಾಂಡವರಿಂದ ಸಾಯಂಕಾಲದಲ್ಲಿ ಸೇನಾ ಅವಹಾರ.

ಸಂಜಯಃ

ಗತಪೂರ್ವಾಹ್ಣಭೂಯಿಷ್ಠೇ ತಸ್ಮಿನ್ನಹನಿ ದಾರುಣೇ ।
ವರ್ತಮಾನೇ ಮಹಾರೌದ್ರೇ ಮಹಾವೀರವರಕ್ಷಯೇ ॥೧॥

ದುರ್ಮುಖಃ ಕೃತವರ್ಮಾ ಚ ಕೃಪಃ ಶಲ್ಯೋ ವಿವಿಂಶತಿಃ ।
ಭೀಷ್ಮಂ ಜುಗುಪುರಾಸಾದ್ಯ ತವ ಪುತ್ರೇಣ ಚೋದಿತಾಃ ॥೨॥

ಸಂಜಯ- ಎಲೈ ರಾಜನೇ, ಶ್ರೇಷ್ಠರಾದ ವೀರರ ವಿನಾಶಕಾರಿಯಾದ ಆ ಭಯಂಕರವೂ, ದಾರುಣವೂ ಆದ ದಿವಸದಲ್ಲಿ ಪ್ರಾತಃಕಾಲದ ಬಹುಭಾಗವು ಕಳೆಯುತ್ತಿರಲು ನಿನ್ನ ಪುತ್ರನಿಂದ ಪ್ರೇರಿತರಾದ ದುರ್ಮುಖ, ಕೃತವರ್ಮಾ, ಕೃಪ, ಶಲ್ಯ ಮತ್ತು ವಿವಿಂಶತಿ ಇವರು ಭೀಷ್ಮರ ಸಮೀಪಕ್ಕೆ ಬಂದು ಅವರನ್ನು ರಕ್ಷಿಸಿದರು.

ಏತೈರತಿರಥೈರ್ಗುಪ್ತಃ ಪಂಚಭಿರ್ಭರತರ್ಷಭ ।
ಪಾಂಡವಾನಾಮನೀಕಾನಿ ವಿಜಗಾಹೇ ಮಹಾರಥಃ ॥೩॥

ಎಲೈ ಭರತರ್ಷಭನೇ, ಈ ಐವರು ಅತಿರಥರಿಂದ ರಕ್ಷಿತರಾಗಿ, ಮಹಾರಥರಾದ ಭೀಷ್ಮರು ಪಾಂಡವರ ಸೈನ್ಯವನ್ನು ಪ್ರವೇಶಿಸಿದರು.

ಚೇದಿಕಾಶಿಕರೂಷೇಷು ಪಾಂಚಾಲೇಷು ಚ ಭಾರತ ।
ಭೀಷ್ಮಸ್ಯ ಬಹುಧಾ ತಾಳಶ್ಚರನ್ ಕೇತುರದೃಶ್ಯತ ॥೪॥

ಎಲೈ ಭಾರತನೇ, ಚೇದಿ, ಕಾಶಿ, ಕರೂಷ ಸೈನ್ಯಗಳಲ್ಲಿಯೂ, ಪಾಂಚಾಲ ಸೈನ್ಯಗಳಲ್ಲಿಯೂ ಬಹಳವಾಗಿ ಸಂಚರಿಸುವ ಭೀಷ್ಮರ ತಾಳಧ್ವಜವು ಕಂಡುಬರುತ್ತಿದ್ದಿತು.

ಶಿರಾಂಸಿ ಚ ತದಾ ಭೀಷ್ಮೋ ಬಾಹೂಂಶ್ಚಾಪಿ ಸಹಾಯುಧಾನ್ ।
ನಿಚಕರ್ತ ಮಹಾವೇಗೈರ್ಭಲ್ಲೈಃ ಸನ್ನತಪರ್ವಭಿಃ ॥೫॥

ಆಗ ಭೀಷ್ಮರು ಬಾಗಿದ ತುದಿಯುಳ್ಳ ಮಹಾವೇಗವುಳ್ಳ ಭಲ್ಲಗಳಿಂದ ಯೋಧರ ಶಿರಸ್ಸುಗಳನ್ನೂ ಮತ್ತು ಆಯುಧ ಸಹಿತವಾದ ಬಾಹುಗಳನ್ನೂ ಕತ್ತರಿಸಿದರು.

ನೃತ್ಯತೋ ರಥಮಾರ್ಗೇಷು ಭೀಷ್ಮಸ್ಯ ಭರತರ್ಷಭ ।
ಕೇಚಿದಾರ್ತಸ್ವರಂ ಚಕ್ರುರ್ನಾಗಾ ಮರ್ಮಣಿ ತಾಡಿತಾಃ ॥೬॥

ಎಲೈ ಭರತರ್ಷಭನೇ, ರಥಮಾರ್ಗಗಳಲ್ಲಿ ನರ್ತನ ಮಾಡುವ ಭೀಷ್ಮರನ್ನು ನೋಡಿ ಅವರಿಂದ ಮರ್ಮದಲ್ಲಿ ತಾಡಿತವಾದ ಕೆಲವು ಗಜಗಳು ಆರ್ತಸ್ವರ ಮಾಡಿದವು.

ಅಭಿಮನ್ಯುಃ ಸುಸಂಕ್ರುದ್ಧಃ ಪಿಶಂಗೈಸ್ತುರಗೋತ್ತಮೈಃ ।
ಸಂಯುಕ್ತಂ ರಥಮಾಸ್ಥಾಯ ಪ್ರಾಯಾದ್ ಭೀಷ್ಮರಥಂ ಪ್ರತಿ ॥೭॥

ಅಭಿಮನ್ಯುವು ಬಹಳ ಕೋಪಗೊಂಡು ಕಂದುಬಣ್ಣದ ಕುದುರೆಗಳನ್ನು ಹೂಡಿದ್ದ ತನ್ನ ರಥವನ್ನು ಏರಿ ಭೀಷ್ಮರ ರಥದ ಕಡೆಗೆ ಹೊರಟನು.

ಜಾಂಬೂನದವಿಚಿತ್ರೇಣ ಕರ್ಣಿಕಾರೇಣ ಕೇತುನಾ ।
ಅಭ್ಯವರ್ಷತ ಭೀಷ್ಮಂ ಚ ತಾಂಶ್ಚೈವ ರಥಸತ್ತಮಾನ್ ॥೮॥

ಸುವರ್ಣಾಲಂಕೃತವಾದ, ಕರ್ಣಿಕಾರ ವೃಕ್ಷಧ್ವಜದಿಂದ ಕೂಡಿದ ರಥದಲ್ಲಿದ್ದ ಅವನು ಭೀಷ್ಮರನ್ನೂ ಮತ್ತು ಅವರ ರಕ್ಷಕರಾದ ಆ ರಥಶ್ರೇಷ್ಠರನ್ನೂ ಉದ್ದೇಶಿಸಿ ಬಾಣಗಳ ಮಳೆಯನ್ನು ಸುರಿಸಿದನು.

ಸ ತಾಳಕೇತೋಸ್ತೀಕ್ಷ್ಣೇನ ಕೇತುಮಾಹತ್ಯ ಪತ್ತ್ರಿಣಾ ।
ಭೀಷ್ಮೇಣ ಯುಯುಧೇ ವೀರಸ್ತಸ್ಯ ಚಾನುಚರೈಃ ಸಹ ॥೯॥

ಆ ವೀರನು ತಾಳಧ್ವಜರಾದ ಭೀಷ್ಮರ ಧ್ವಜವನ್ನು ಬಾಣದಿಂದ ಕೆಡವಿ ಭೀಷ್ಮರ ಅನುಚರರ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಕೃತವರ್ಮಾಣಮೇಕೇನ ಶಲ್ಯಂ ಪಂಚಭಿರಾಯಸೈಃ ।
ವಿದ್ಧ್ವಾ ಸವಭಿರಾನರ್ಚ್ಛ ತಾಗ್ರೈಃ ಪ್ರಪಿತಾಮಹಮ್ ॥೧೦॥

ಕೃತವರ್ಮನನ್ನು ಒಂದು ಬಾಣದಿಂದಲೂ, ಶಲ್ಯನನ್ನು ಅಯೋಮಯವಾದ ಐದು ಬಾಣಗಳಿಂದಲೂ ಪ್ರಹಾರ ಮಾಡಿ, ತಮ್ಮ ಮುತ್ತಾತರಾದ ಭೀಷ್ಮರ ಮೇಲೆ ಹರಿತವಾದ ಅಲಗುಳ್ಳ ಒಂಬತ್ತು ಬಾಣಗಳನ್ನು ಪ್ರಯೋಗಿಸಿದನು.

ಪೂರ್ಣಾಯತವಿಸೃಷ್ಟೇನ ಸಮ್ಯಕ್ ಪ್ರಣಿಹಿತೇನ ಚ ।
ಧ್ವಜಮೇಕೇನ ವಿವ್ಯಾಧ ಜಾಂಬೂನದವಿಭೂಷಿತಮ್ ॥೧೧॥

ಬಿಲ್ಲನ್ನು ಪೂರ್ಣವಾಗಿ ಎಳೆದು ಗುರಿಯಿಟ್ಟು ಪ್ರಯೋಗಿಸಿದ ಒಂದು ಬಾಣದಿಂದ ಭೀಷ್ಮರ ಸುವರ್ಣಾಲಂಕೃತವಾದ ಧ್ವಜಕ್ಕೆ ಹೊಡೆದನು.

ದುರ್ಮುಖಸ್ಯ ತು ಭಲ್ಲೇನ ಸರ್ವಾವರಣಭೇದಿನಾ ।
ಜಹಾರ ಸಾರಥೇಃ ಕಾಯಾಚ್ಛಿರಃ ಸನ್ನತಪರ್ವಣಾ ॥೧೨॥

ಬಾಗಿದ ತುದಿಯುಳ್ಳ ಸರ್ವಾವರಣಗಳನ್ನೂ ಭೇದಿಸುವ ಭಲ್ಲದಿಂದ ದುರ್ಮುಖನ ಸಾರಥಿಯ ದೇಹದಿಂದ ಅವನ ಶಿರಸ್ಸನ್ನು ಬೇರ್ಪಡಿಸಿದನು.

ಧನುಶ್ಚಿಚ್ಛೇದ ಭಲ್ಲೇನ ಕಾರ್ತಸ್ವರವಿಭೂಷಿತಮ್ ।
ಕೃಪಸ್ಯ ನಿಶಿತಾಗ್ರೇಣ ತಾಂಶ್ಚ ತೀಕ್ಷ್ಣಮುಖೈಃ ಶರೈಃ ॥೧೩॥

ಸುವರ್ಣಭೂಷಿತವಾದ ಕೃಪಾಚಾರ್ಯರ ಧನುಸ್ಸನ್ನು ಹರಿತವಾದ ತುದಿಯುಳ್ಳ ಭಲ್ಲದಿಂದ ಕತ್ತರಿಸಿ ಭೀಷ್ಮರ ರಥದ ರಕ್ಷಕರ ಮೇಲೆಯೂ ತೀಕ್ಷ್ಣ ಮುಖವುಳ್ಳ ಬಾಣಗಳನ್ನು ಪ್ರಯೋಗಿಸಿದನು.

ಜಘಾನ ಪರಮಕ್ರುದ್ಧೋ ನೃತ್ಯನ್ನಿವ ಮಹಾರಥಃ ।
ತಸ್ಯ ಲಾಘವಮುದ್ವೀಕ್ಷ್ಯ ತುತುಷುರ್ದೇವತಾ ಅಪಿ ॥೧೪॥

ಮಹಾರಥನಾದ ಅವನು ಪರಮ ಕ್ರುದ್ಧನಾಗಿ ನರ್ತನವನ್ನು ಮಾಡುವವನಂತೆ ಶತ್ರುಗಳನ್ನು ಸಂಹರಿಸಿದನು. ಅವನ ಕ್ಷಿಪ್ರತೆಯನ್ನು ನೋಡಿ ದೇವತೆಗಳೂ ಸಂತೋಷಗೊಂಡರು.

ಲಬ್ಧಲಕ್ಷ್ಯತಯಾ ಕಾರ್ಷ್ಣೇಃ ಸರ್ವೇ ಭೀಷ್ಮಮುಖಾ ರಥಾಃ ।
ಸತ್ತ್ವವಂತಮಮನ್ಯಂತ ಸಾಕ್ಷಾದಿವ ಧನಂಜಯಮ್ ॥೧೫॥

ಅರ್ಜುನನ ಮಗನಾದ ಅಭಿಮನ್ಯುವು ಲಕ್ಷ್ಯವನ್ನು ತಪ್ಪದಿರುವುದನ್ನು ನೋಡಿ ಭೀಷ್ಮರೇ ಮೊದಲಾದ ಮಹಾರಥರು ಅವನನ್ನು ಬಲವುಳ್ಳವನೆಂದೂ, ಸಾಕ್ಷಾತ್ ಅರ್ಜುನನಂತೆ ಇರುವವನೆಂದೂ ತಿಳಿದರು.

ತಸ್ಯ ಲಾಘವಮಾರ್ಗಸ್ಥಮಲಾತಸದೃಶಪ್ರಭಮ್ ।
ದಿಶಃ ಪರ್ಯಪತಚ್ಚಾಪಂ ಗಾಂಡೀವಮಿವ ಘೋಷವತ್ ॥೧೬॥

ಅಲಾತ ಚಕ್ರದ ಕಾಂತಿಯನ್ನು ಹೊಂದಿದ್ದ, ಕ್ಷಿಪ್ರವಾದ ಅವನ ಧನುಸ್ಸು ಗಾಂಡೀವ ಧನುಸ್ಸಿನಂತೆ ಘೋಷವುಳ್ಳದ್ದಾಗಿ ತನ್ನಿಂದ ಹೊರಹೊಮ್ಮಿದ ಬಾಣಗಳನ್ನು ದಿಕ್ಕು ದಿಕ್ಕುಗಳಿಗೆ ಕಳುಹಿಸಿತು.

ತಮಾಸಾದ್ಯ ಮಹಾವೇಗೈರ್ಭೀಷ್ಮೋ ನವಭಿರಾಶುಗೈಃ ।
ವಿವ್ಯಾಧ ಸಮರೇ ತೂರ್ಣಮಾರ್ಜುನಿಂ ಪರವೀರಹಾ ॥೧೭॥

ಪರಶತ್ರುಗಳನ್ನು ಸಂಹರಿಸುವ ಭೀಷ್ಮರು ಅರ್ಜುನನ ಮಗನಾದ ಅವನನ್ನು ಯುದ್ಧದಲ್ಲಿ ಸಮೀಪಿಸಿ ಶೀಘ್ರಗಾಮಿಗಳಾದ ಮಹಾವೇಗವುಳ್ಳ ಒಂಬತ್ತು ಬಾಣಗಳಿಂದ ಅವನನ್ನು ಹೊಡೆದರು.

ಧ್ವಜಂ ಚಾಸ್ಯ ತ್ರಿಭಿರ್ಭಲ್ಲೈಶ್ಚಿಚ್ಛೇದ ಪರಮೌಜಸಃ ।
ಸಾರಥಿಂ ಚ ತ್ರಿಭಿರ್ಬಾಣೈರಾಜಘಾನ ಯತವ್ರತಃ ॥೧೮॥

ದೃಢವ್ರತರಾದ ಭೀಷ್ಮರು ಮೂರು ಭಲ್ಲಗಳಿಂದ ಪರಮಶಕ್ತಿಶಾಲಿಯಾದ ಅವನ ಧ್ವಜವನ್ನೂ ಮತ್ತು ಮೂರು ಬಾಣಗಳಿಂದ ಅವನ ಸಾರಥಿಯನ್ನೂ ಹೊಡೆದು ಉರುಳಿಸಿದರು.

ತಥೈವ ಕೃತವರ್ಮಾ ಚ ಕೃಪಃ ಶಲ್ಯಶ್ಚ ಮಾರಿಷ ।
ವಿದ್ಧ್ವಾ ನಾಕಂಪಯತ್ ಕಾರ್ಷ್ಣಿಂ ಮೈನಾಕಮಿವ ಪರ್ವತಮ್ ॥೧೯॥

ಹಾಗೆಯೇ ಎಲೈ ವೀರನೇ, ಕೃತವರ್ಮನೂ, ಕೃಪರೂ ಮತ್ತು ಶಲ್ಯನೂ ಅರ್ಜುನನ ಪುತ್ರನಾದ ಅವನ ಮೇಲೆ ಬಾಣಪ್ರಯೋಗವನ್ನು ಮಾಡಿದರೂ ಮೈನಾಕ ಪರ್ವತದಂತಿದ್ದ ಅವನನ್ನು ಅಲುಗಾಡಿಸಲೂ ಸಾಧ್ಯವಾಗಲಿಲ್ಲ.

ಸ ತೈಃ ಪರಿವೃತಃ ಶೂರೋ ಧಾರ್ತರಾಷ್ಟ್ರೈರ್ಮಹಾರಥೈಃ ।
ವವರ್ಷ ಶರವರ್ಷಾಣಿ ಕಾರ್ಷ್ಣಿಃ ಪಂಚರಥಾನ್ ಪ್ರತಿ ॥೨೦॥

ಧೃತರಾಷ್ಟ್ರಪುತ್ರರಾದ ಐವರು ಮಹಾರಥರಿಂದ ಸುತ್ತುವರಿಯಲ್ಪಟ್ಟ ಅರ್ಜುನನ ಪುತ್ರನಾದ ಆ ಶೂರನು ಆ ಐದು ರಥಗಳ ಮೇಲೆ ಬಾಣಗಳ ಮಳೆಯನ್ನು ಕರೆದನು.

ತತಸ್ತೇಷಾಂ ಮಹಾಸ್ತ್ರಾಣಿ ಸಂವಾರ್ಯ ಶರವೃಷ್ಟಿಭಿಃ ।
ನನಾದ ಬಲವಾನ್ ಕಾರ್ಷ್ಣಿರ್ಭೀಷ್ಮಾಯ ವಿಸೃಜನ್ ಶರಾನ್ ॥೨೧॥

ಅನಂತರ ತನ್ನ ಬಾಣಗಳ ಮಳೆಯಿಂದ ಅವರ ಮಹಾಸ್ತ್ರಗಳನ್ನು ನಿವಾರಿಸಿ ಭೀಷ್ಮರ ಮೇಲೆ ಬಾಣ ಪ್ರಯೋಗವನ್ನು ಮಾಡುತ್ತಾ, ಬಲಿಷ್ಠನೂ, ಅರ್ಜುನಪುತ್ರನೂ ಆದ ಅವನು ಸಿಂಹನಾದವನ್ನು ಮಾಡಿದನು.

ತತ್ರಾಸ್ಯ ಸುಮಹದ್ ರಾಜನ್ ಬಾಹ್ವೋರ್ಬಲಮದೃಶ್ಯತ ।
ಯತಮಾನಸ್ಯ ಸಮರೇ ಭೀಷ್ಮಮರ್ದಯತಃ ಶರೈಃ ॥೨೨॥

ಯುದ್ಧದಲ್ಲಿ ಪ್ರಯತ್ನಶೀಲನಾಗಿ ಬಾಣಗಳಿಂದ ಭೀಷ್ಮರನ್ನು ಹಿಂಸಿಸುತ್ತಿದ್ದ ಅವನ ಬಾಹುಗಳ ದೊಡ್ಡ ಬಲವು ಅಲ್ಲಿ ಕಂಡುಬಂದಿತು.

ಪರಾಕ್ರಾಂತಸ್ಯ ತಸ್ಯೈವ ಭೀಷ್ಮೋಽಪಿ ಪ್ರಾಹಿಣೋಚ್ಛರಾನ್ ।
ಸ ತಾಂಶ್ಚಿಚ್ಛೇದ ಸಮರೇ ಭೀಷ್ಮಚಾಪಚ್ಯುತಾನ್ ಶರಾನ್ ॥೨೩॥

ಪರಾಕ್ರಮಶಾಲಿಯಾದ ಅವನ ಮೇಲೆ ಭೀಷ್ಮರೂ ಬಾಣಗಳನ್ನು ಪ್ರಯೋಗಿಸಿದರು. ಯುದ್ಧದಲ್ಲಿ ಭೀಷ್ಮರ ಬಿಲ್ಲಿನಿಂದ ಹೊರಹೊಮ್ಮಿದ ಆ ಬಾಣಗಳನ್ನು ಅವನು ಕತ್ತರಿಸಿ ಹಾಕಿದನು.

ತತೋ ಧ್ವಜಮಮೋಘೇಷುರ್ಭೀಷ್ಮಸ್ಯ ನವಭಿಃ ಶರೈಃ ।
ಚಿಚ್ಛೇದ ಸಮರೇ ವೀರಸ್ತತ ಉಚ್ಚುಕ್ರುಶುರ್ಜನಾಃ ॥೨೪॥

ಅನಂತರ ಅಮೋಘ ಬಾಣಗಳುಳ್ಳ ಆ ವೀರನು ಒಂಬತ್ತು ಬಾಣಗಳಿಂದ ಭೀಷ್ಮರ ರಥದ ಧ್ವಜವನ್ನು ಕತ್ತರಿಸಿದನು. ಆಗ (ಪಾಂಡವರ ಸೇನೆಯ) ಯೋಧರು ಗಟ್ಟಿಯಾಗಿ ನಾದವನ್ನು ಮಾಡಿದರು.

ಸ ರಾಜತೋ ಮಹಾಸ್ಕಂಧಸ್ತಾಲೋ ಹೇಮವಿಭೂಷಿತಃ ।
ಸೌಭದ್ರವಿಶಿಖೈಶ್ಛಿನ್ನಃ ಪಪಾತ ಭುವಿ ಭಾರತ ॥೨೫॥

ಎಲೈ ಭಾರತನೇ, ಸುವರ್ಣಭೂಷಿತವಾದ, ರಜತಮಯವಾದ, ದೊಡ್ಡ ಕೊಂಬೆಗಳಿಂದ ಕೂಡಿದ್ದ ಆ ತಾಳವೃಕ್ಷದ ಧ್ವಜವು ಅಭಿಮನ್ಯುವಿನ ಬಾಣಗಳಿಂದ ಕತ್ತರಿಸಲ್ಪಟ್ಟು ಭೂಮಿಯಲ್ಲಿ ಬಿದ್ದಿತು.

ಧ್ವಜಂ ಸೌಭದ್ರವಿಶಿಖೈಃ ಪತಿತಂ ಭರತರ್ಷಭ ।
ದೃಷ್ಟ್ವಾ ಭೀಮೋಽನದದ್ ಹೃಷ್ಟಃ ಸೌಭದ್ರಮಭಿಹರ್ಷಯನ್ ॥೨೬॥

ಎಲೈ ಭರತರ್ಷಭನೇ, ಭೀಷ್ಮರ ಧ್ವಜವು ಅಭಿಮನ್ಯುವಿನ ಬಾಣಗಳಿಂದ ನೆಲದ ಮೇಲೆ ಬಿದ್ದುದನ್ನು ನೋಡಿ ಸಂತೋಷಗೊಂಡ ಭೀಮನು ಅಭಿಮನ್ಯುವನ್ನು ಸಂತೋಷಪಡಿಸುವವನಾಗಿ ಸಂತೋಷದಿಂದ ಸಿಂಹನಾದವನ್ನು ಮಾಡಿದನು.

ಅಥ ಭೀಷ್ಮೋ ಮಹಾಸ್ತ್ರಾಣಿ ದಿವ್ಯಾನಿ ಚ ಬಹೂನಿ ಚ ।
ಪ್ರಾದುಶ್ಚಕ್ರೇ ಮಹಾರೌದ್ರಃ ಕ್ಷಣೇ ತಸ್ಮಿನ್ ಮಹಾಬಲಃ ॥೨೭॥

ಆ ಕ್ಷಣದಲ್ಲಿ ಮಹಾಬಲರೂ, ಮಹಾಭಯಂಕರರೂ ಆದ ಭೀಷ್ಮರು ದಿವ್ಯವಾದ ಅನೇಕ ಮಹಾಸ್ತ್ರಗಳನ್ನು ಪ್ರಾದುರ್ಭಾವಗೊಳಿಸಿದರು.

ತತಃ ಶತಸಹಸ್ರೇಣ ಸೌಭದ್ರಂ ಪ್ರಪಿತಾಮಹಃ ।
ಅವಾಕಿರದಮೇಯಾತ್ಮಾ ಶರಾಣಾಂ ನತಪರ್ವಣಾಮ್ ॥೨೮॥

ಮುತ್ತಜ್ಜನೂ ಮತ್ತು ಅಪಾರಶಕ್ತಿಯುಳ್ಳವರೂ ಆದ ಅವರು ಅಭಿಮನ್ಯುವಿನ ಮೇಲೆ ಬಾಗಿದ ತುದಿಯುಳ್ಳ ಒಂದುಲಕ್ಷ ಬಾಣಗಳ ಮಳೆಯನ್ನು ಸುರಿಸಿದರು.

ತತೋ ದಶ ಮಹೇಷ್ವಾಸಾಃ ಪಾಂಡವಾನಾಂ ಮಹಾರಥಾಃ ।
ರಕ್ಷಾರ್ಥಮಭ್ಯಧಾವಂತ ಸೌಭದ್ರಂ ತ್ವರಿತಾ ರಥೈಃ ॥೨೯॥

ಆಗ ಪಾಂಡವರ ಹತ್ತು ಜನ ಮಹಾರಥರು, ಮಹಾಧನುರ್ಧಾರಿಗಳಾಗಿ ಶೀಘ್ರವಾಗಿ ಅಭಿಮನ್ಯುವನ್ನು ರಕ್ಷಿಸಲು ತಮ್ಮ ರಥಗಳಿಂದ ಅವನೆಡೆಗೆ ಬಂದರು.

ವಿರಾಟಃ ಸಹ ಪುತ್ರೇಣ ದ್ರುಪದ್ಯುಮ್ನಶ್ಚ ಪಾರ್ಷತಃ ।
ಭೀಮಶ್ಚ ಕೇಕಯಾಶ್ಚೈವ ಸಾತ್ಯಕಿಶ್ಚ ವಿಶಾಂಪತೇ ॥೩೦॥

ಎಲೈ ರಾಜನೇ, ಪುತ್ರನಿಂದ ಸಹಿತನಾದ ವಿರಾಟನು, ದ್ರುಪದನ ಮಗನಾದ ಧೃಷ್ಟದ್ಯುಮ್ನನು, ಭೀಮ, ಕೇಕಯರು ಮತ್ತು ಸಾತ್ಯಕಿಯು ಅವನೆಡೆಗೆ ಬಂದರು.

ಜವೇನಾಪತತಾಂ ತೇಷಾಂ ಭೀಷ್ಮಃ ಶಾಂತನವೋ ರಣೇ ।
ಪಾಂಚಾಲ್ಯಂ ತ್ರಿಭಿರಾನರ್ಚ್ಛತ್ ಸಾತ್ಯಕಿಂ ನಿಶಿತೈಃ ಶರೈಃ ॥೩೧॥

ಅವರು ವೇಗವಾಗಿ ಅಭಿಮನ್ಯುವಿನ ಕಡೆಗೆ ಬರುತ್ತಿದ್ದಂತೆ ಶಂತನು ಪುತ್ರರಾದ ಭೀಷ್ಮರು ಯುದ್ಧದಲ್ಲಿ ದ್ರುಪದನನ್ನು ಮತ್ತು ಸಾತ್ಯಕಿಯನ್ನು ಮೂರು ಮೂರು ಹರಿತವಾದ ಬಾಣಗಳಿಂದ ಹಿಂಸಿಸಿದರು.

ಪೂರ್ಣಾಯತವಿಸೃಷ್ಟೇನ ಕ್ಷುರೇಣ ನಿಶಿತೇನ ಚ ।
ಧ್ವಜಮೇಕೇನ ಚಿಚ್ಛೇದ ಭೀಮಸೇನಸ್ಯ ಪತ್ರಿಣಾ ॥೩೨॥

ಬಿಲ್ಲನ್ನು ಪೂರ್ಣವಾಗಿ ಎಳೆದು ಪ್ರಯೋಗಿಸಿದ ಪತ್ರಸಹಿತವಾದ ಒಂದು ನಿಶಿತವಾದ ಕ್ಷುರದಿಂದ ಭೀಮಸೇನನ ಧ್ವಜವನ್ನು ಕತ್ತರಿಸಿದರು.

ಜಾಂಬೂನದಮಯಃ ಕೇತುಃ ಕೇಸರೀ ನರಸತ್ತಮ ।
ಪಪಾತ ಭೀಮಸೇನಸ್ಯ ಭೀಷ್ಮೇಣ ಮಥಿತೋ ರಥಾತ್ ॥೩೩॥

ಎಲೈ ನರಶ್ರೇಷ್ಠನೇ, ಸುವರ್ಣಮಯವಾದ ಭೀಮಸೇನನ ಸಿಂಹಧ್ವಜವು ಭೀಷ್ಮರಿಂದ ಮಥಿತವಾಗಿ ರಥದಿಂದ ಕೆಳಗೆ ಬಿದ್ದಿತು.

ಭೀಮಸೇನಸ್ತ್ರಿಭಿರ್ವಿದ್ಧ್ವಾ ಭೀಷ್ಮಂ ಶಾಂತನವಂ ರಣೇ ।
ಕೃಪಮೇಕೇನ ವಿವ್ಯಾಧ ಕೃತವರ್ಮಾಣಮಷ್ಟಭಿಃ ॥೩೪॥

ಭೀಮಸೇನನು ಮೂರು ಬಾಣಗಳನ್ನು ಪ್ರಯೋಗಿಸಿ ಯುದ್ಧದಲ್ಲಿ ಭೀಷ್ಮರನ್ನು ಹೊಡೆದು, ಒಂದು ಬಾಣದಿಂದ ಕೃಪರನ್ನೂ ಮತ್ತು ಎಂಟು ಬಾಣಗಳಿಂದ ಕೃತವರ್ಮನನ್ನೂ ಹೊಡೆದನು.

ಪ್ರಗೃಹೀತಾಗ್ರಹಸ್ತೇನ ವೈರಾಟರಪಿ ದಂತಿನಾ ।
ಅಭ್ಯದ್ರವತ ರಾಜಾನಂ ಮದ್ರಾಧಿಪತಿಮುತ್ತರಃ ॥೩೫॥

ವಿರಾಟ ಪುತ್ರನಾದ ಉತ್ತರನು ತನ್ನ ಸೊಂಡಿಲಿನ ಮುಂಭಾಗವನ್ನು ಎತ್ತಿದ ಆನೆಯ ಮೇಲೆ ಕುಳಿತು ಮದ್ರರಾಜನಾದ ಶಲ್ಯನ ಕಡೆಗೆ ಧಾವಿಸಿದನು.

ತಸ್ಯ ವಾರಣರಾಜಸ್ಯ ಜವೇನಾಪತತೋ ರಥೀ ।
ಶಲ್ಯೋ ನಿವಾರಯಾಮಾಸ ವೇಗಮಪ್ರತಿಮಂ ರಣೇ ॥೩೬॥

ರಥಿಯಾದ ಶಲ್ಯನು ವೇಗದಿಂದ ತನ್ನ ಮೇಲೆ ಎರಗುತ್ತಿರುವ ಆ ಗಜರಾಜನ ಅಸದೃಶ ವೇಗವನ್ನು ತಡೆದನು.

ತಸ್ಯ ಕ್ರುದ್ಧಃ ಸ ನಾಗೇಂದ್ರೋ ಬೃಹತಃ ಸಾಧುವಾಹಿನಃ ।
ಪದಾ ಯುಗಮಧಿಷ್ಠಾಯ ದಶಾನ ಚತುರೋ ಹಯಾನ್ ॥೩೭॥

ಅದರಿಂದ ಅವನ ಮೇಲೆ ಸಿಟ್ಟುಗೊಂಡ ಆ ಶ್ರೇಷ್ಠ ಗಜವು ದೃಢವೂ, ಚೆನ್ನಾಗಿ ರಥವನ್ನು ಎಳೆಯುವವೂ ಆದ ಅವನ ರಥದ ನಾಲ್ಕು ಕುದುರೆಗಳನ್ನು ನೊಗದ ಮೇಲೆ ತನ್ನ ಪಾದಗಳನ್ನಿಟ್ಟುಕೊಂದಿತು.

ಸ ಹತಾಶ್ವೇ ರಥೇ ತಿಷ್ಠನ್ ಮದ್ರಾಧಿಪತಿರಾಯಸೀಮ್ ।
ಉತ್ತರಾಂತಕರೀಂ ಶಕ್ತಿಂ ಚಿಕ್ಷೇಪ ಭುಜಗೋಪಮಾಮ್ ॥೩೮॥

ಹತಾಶ್ವನಾದ ಮದ್ರರಾಜನು ರಥದಲ್ಲಿ ಕುಳಿತು ಉತ್ತರನನ್ನು ವಿನಾಶ ಮಾಡುವ ಸರ್ಪದಂತಿದ್ದ ಅಯೋಮಯವಾದ ಶಕ್ತಿಯನ್ನು ಉತ್ತರನ ಮೇಲೆ ಪ್ರಯೋಗಿಸಿದನು.

ತಯಾ ಭಿನ್ನತನುತ್ರಾಣಃ ಪ್ರವಿಶ್ಯ ವಿಪುಲಂ ತಮಃ ।
ಸ ಪಪಾತ ಗಜಸ್ಕಂಧಾತ್ ಪ್ರಮುಕ್ತಾಂಕುಶತೋಮರಃ ॥೩೯॥

ಅದರಿಂದ ತನ್ನ ಕವಚವು ಸೀಳಿ ಹಸ್ತದಲ್ಲಿದ್ದ ಅಂಕುಶ, ತೋಮರಗಳನ್ನು ನೆಲಕ್ಕೆ ಹಾಕಿ ಗಜದ ಕೊರಳಿನಿಂದ ಕೆಳಗೆ ಬಿದ್ದು ಉತ್ತರನು ಅತ್ಯಂತ ಮೂರ್ಛೆ ಹೊಂದಿದನು.

ಸಮಾದಾಯ ಚ ಶಲ್ಯೋಽಸಿಮವಪ್ಲುತ್ಯ ರಥೋತ್ತಮಾತ್ ।
ವಾರಣೇಂದ್ರಸ್ಯ ವಿಕ್ರಮ್ಯ ಚಚ್ಛೇದಾಥ ಮಹಾಕರಮ್ ॥೪೦॥

ಭಿನ್ನಮರ್ಮಾ ಶರವ್ರಾತೈಶ್ಚಿನ್ನಹಸ್ತಃ ಸ ವಾರಣಃ ।
ಭೀಮಮಾರ್ತಸ್ವರಂ ಕೃತ್ವಾ ಪಪಾತ ಚ ಮಮಾರ ಚ ॥೪೧॥

ಶಲ್ಯನು ತನ್ನ ಶ್ರೇಷ್ಠ ರಥದಿಂದ ಕೆಳಗೆ ಹಾರಿ, ಕೈಯಲ್ಲಿ ಖಡ್ಗವನ್ನು ತೆಗೆದುಕೊಂಡು ತನ್ನ ಪರಾಕ್ರಮದಿಂದ ಆ ಗಜೇಂದ್ರನ ದೊಡ್ಡ ಸೊಂಡಿಲನ್ನು ಕತ್ತರಿಸಿದನು. ಬಾಣಗಳ ಸಮೂಹದಿಂದ ಮರ್ಮಸ್ಥಲಗಳಲ್ಲಿ ಗಾಯಗೊಂಡಿದ್ದ ಆ ಗಜವು ಈಗ ಸೊಂಡಿಲು ಕತ್ತರಿಸಲ್ಪಡುತ್ತಿರಲು ಭಯಂಕರವಾದ ಆರ್ತನಾದವನ್ನು ಮಾಡಿ ಬಿದ್ದು ಮರಣ ಹೊಂದಿತು.

ಏತದೀದೃಶಕಂ ಕೃತ್ವಾ ಮದ್ರರಾಜೋ ಮಹಾರಥಃ ।
ಆರುರೋಹ ರಥಂ ತೂರ್ಣಂ ಭಾಸ್ವರಂ ಕೃತವರ್ಮಣಃ ॥೪೨॥

ಮಹಾರಥನಾದ ಮದ್ರರಾಜನು ಇಂತಹ ಈ ಕಾರ್ಯವನ್ನು ಮಾಡಿ ಶೀಘ್ರವಾಗಿ ಕೃತವರ್ಮನ ಪ್ರಕಾಶಮಾನವಾದ ರಥವನ್ನು ಏರಿದನು.

ಉತ್ತರಂ ನಿಹತಂ ದೃಷ್ಟ್ವಾ ವೈರಾಟಿರ್ಭ್ರಾತರಂ ಶುಭಮ್ ।
ಕೃತವರ್ಮಾಣಾ ಚ ಸಹಿತಂ ದೃಷ್ಟ್ವಾ ಶಲ್ಯಮವಸ್ಥಿತಮ್ ।
ಶಂಖಃ ಕ್ರೋಧಾತ್ ಪ್ರಜಜ್ವಾಲ ಹವಿಷಾ ಹವ್ಯವಾಡಿವ ॥೪೩॥

ತನ್ನ ಶುಭ ಸಹೋದರನಾದ ಉತ್ತರನು ಹತನಾದುದನ್ನು ನೋಡಿ, ಶಲ್ಯನು ಕೃತವರ್ಮನ ಜೊತೆಯಲ್ಲಿ ಇರುವುದನ್ನು ನೋಡಿ ವಿರಾಟನ ಮಗನಾದ ಶಂಖನು ಹವಿಸ್ಸಿನಿಂದ ಉರಿಯುವ ಅಗ್ನಿಯಂತೆ ಕ್ರೋಧದಿಂದ ಜ್ವಲಿಸಿದನು.

ಸ ವಿಸ್ಫಾರ್ಯ ಮಹಚ್ಚಾಪಂ ಕಾರ್ತಸ್ವರವಿಭೂಷಿತಮ್ ।
ಅಭ್ಯಧಾವಜ್ಜಿಘಾಂಸನ್ ವೈ ಶಲ್ಯಂ ಮದ್ರಾಧಿಪಂ ಬಲೀ ॥೪೪॥

ಬಲಿಷ್ಠನಾದ ಅವನು ಸುವರ್ಣವಿಭೂಷಿತವಾದ ತನ್ನ ದೊಡ್ಡ ಚಾಪವನ್ನು ಎಳೆದು ಮದ್ರರಾಜನಾದ ಶಲ್ಯನನ್ನು ಕೊಲ್ಲುವ ಇಚ್ಛೆಯಿಂದ ಅವನ ಕಡೆಗೆ ಧಾವಿಸಿದನು.

ಮಹತಾ ರಥವಂಶೇನ ಸಮಂತಾತ್ ಪರಿವಾರಿತಃ ।
ಸೃಜನ್ ಬಾಣಮಯಂ ವರ್ಷಂ ಪ್ರಾಯಾತ್ ಶಲ್ಯರಥಂ ಪ್ರತಿ ॥೪೫॥

ಅನೇಕ ರಥಸಮೂಹಗಳಿಂದ ಸುತ್ತಲೂ ಪರಿವಾರಿತನಾಗಿ, ಬಾಣಗಳ ಮಳೆಯನ್ನು ಸುರಿಸುತ್ತಾ ಅವನು ಶಲ್ಯನ ರಥದ ಕಡೆಗೆ ಧಾವಿಸಿದನು.

ತಮಾಪತಂತಂ ಸಂಪ್ರೇಕ್ಷ್ಯ ಮತ್ತವಾರಣವಿಕ್ರಮಮ್ ।
ತಾವಕಾನಾಂ ರಥಾಃ ಸಪ್ತ ಸಮಂತಾತ್ ಪರ್ಯವಾರಯನ್ ।
ಮದ್ರರಾಜಂ ಪರೀಪ್ಸಂತೋ ಮೃತ್ಯೋರ್ದಂಷ್ಟ್ರಾಂತರಂ ಗತಮ್ ॥೪೬॥

ಮದಗಜದಂತೆ ಪರಾಕ್ರಮವುಳ್ಳ ಅವನು ಹಾಗೆ ಮೇಲೆರಗುತ್ತಿರುವುದನ್ನು ನೋಡಿ, ಮೃತ್ಯುವಿನ ದವಡೆಗೆ ಸಿಕ್ಕಿದ ಮದ್ರರಾಜನನ್ನು ರಕ್ಷಿಸಲು ಬಯಸಿ, ನಿನ್ನ ಸಪ್ತರಥರು ಅವನನ್ನು ಎಲ್ಲ ಕಡೆಯಿಂದಲೂ ಸುತ್ತುವರಿದರು.

ತತೋ ಭೀಷ್ಮೋ ಮಹಾಬಾಹುರ್ವಿನದ್ಯ ಜಲದೋ ಯಥಾ ।
ತಾಳಮಾತ್ರಂ ಧನುರ್ಗೃಹ್ಯ ಶಂಖಮಭ್ಯದ್ರವದ್ ರಣೇ ॥೪೭॥

ಆಗ ಮಹಾಬಾಹುಗಳಾದ ಭೀಷ್ಮರು ಮೇಘದಂತೆ ಗರ್ಜಿಸುತ್ತಾ, ತಾಳ ಪ್ರಮಾಣದ ಧನುಸ್ಸನ್ನು ಹಿಡಿದುಕೊಂಡು ಯುದ್ಧದಲ್ಲಿ ಶಂಖನ ಕಡೆಗೆ ಧಾವಿಸಿದರು.

ತಮುದ್ಯತಮುದೀಕ್ಷ್ಯಾಥ ಮಹೇಷ್ವಾಸಂ ಮಹಾಬಲಮ್ ।
ಸಂತ್ರಸ್ತಾ ಪಾಂಡವೀ ಸೇನಾ ವಾತವೇಗಹತೇವ ನೌಃ ॥೪೮॥

ಮಹಾಬಲಿಷ್ಠರೂ, ಮಹಾಧನುರ್ಧಾರಿಗಳೂ ಮತ್ತು ಪ್ರಯತ್ನಶೀಲರೂ ಆದ ಅವರನ್ನು ನೋಡಿ ಪಾಂಡವ ಸೇನೆಯು ಬಿರುಗಾಳಿಯ ವೇಗಕ್ಕೆ ಸಿಕ್ಕಿದ ನಾವೆಯಂತೆ ಹೆದರಿತು.

ತತ್ರಾರ್ಜುನಃ ಸಂತ್ವರಿತಃ ಶಂಖಸ್ಯಾಪೀತ್ ಪುರಃಸರಃ ।
ಭೀಷ್ಮಾದ್ ರಕ್ಷ್ಯೋಽಯಮದ್ಯೇತಿ ತತೋ ಯುದ್ಧಮವರ್ತತ ॥೪೯॥

ಅಲ್ಲಿ ಅರ್ಜುನನು ಶಂಖನನ್ನು ಭೀಷ್ಮರಿಂದ ರಕ್ಷಿಸಬೇಕೆಂದು ತಿಳಿದು ಶೀಘ್ರವಾಗಿ ಶಂಖನ ಮುಂದೆ ಬಂದನು. ಅನಂತರ ಯುದ್ಧವು ನಡೆಯಿತು.

ಹಾಹಾಕಾರೋ ಮಹಾನಾಸೀದ್ ಯೋಧಾನಾಂ ಯುಧಿ ಯುಧ್ಯತಾಮ್ ।
ತೇಜಸ್ತೇಜಸಿ ಸಂಪ್ಲಕ್ತಮಿತ್ಯೇವಂ ವಿಸ್ಮಯಂ ಯಯುಃ ॥೫೦॥

ಆಗ ಆ ಯುದ್ಧದಲ್ಲಿ ಯುದ್ಧ ಮಾಡುವ ಯೋಧರಿಗೆ ದೊಡ್ಡ ಹಾಹಾಕಾರ (ಶಲ್ಯನ ಎದುರಿಗೆ ಅರ್ಜುನನು ಬಂದದ್ದನ್ನು ನೋಡಿ) ಉಂಟಾಯಿತು. ತೇಜಸ್ಸು, ತೇಜಸ್ಸಿನ ಜೊತೆಯಲ್ಲಿ ಸೇರಿದಂತಾಯಿತು ಎನ್ನುತ್ತಾ ವಿಸ್ಮಯವನ್ನು ಹೊಂದಿದರು.

ಅಥ ಶಲ್ಯೋ ಗದಾಪಾಣಿರವತೀರ್ಯ ಮಹಾರಥಾತ್ ।
ಶಂಖಸ್ಯ ಚತುರೋ ವಾಹಾನಹನದ್ ಭರತರ್ಷಭ ॥೫೧॥

ಎಲೈ ಭರತಶ್ರೇಷ್ಠನೇ, ಅನಂತರ ಶಲ್ಯನು ಕೈಯಲ್ಲಿ ಗದೆಯನ್ನು ಹಿಡಿದು ತನ್ನ ದೊಡ್ಡ ರಥದಿಂದ ಇಳಿದು ಶಂಖನ ನಾಲ್ಕು ಕುದುರೆಗಳನ್ನು ಕೊಂದನು.

ಸ ಹತಾಶ್ವಾದ್ ರಥಾತ್ ತೂರ್ಣಂ ಖಡ್ಗಮಾದಾಯ ವಿದ್ರುತಃ ।
ಬೀಭತ್ಸೋಃ ಸ್ಯಂದನಂ ಪ್ರಾಪ್ಯ ತತಃ ಶಾಂತಿಮವಿಂದತ ॥೫೨॥

ಕುದುರೆಗಳು ಕೊಲ್ಲಲ್ಪಡುತ್ತಿರಲು ಶಂಖನು ತನ್ನ ರಥದಿಂದ ಶೀಘ್ರವಾಗಿ ಕೆಳಗೆ ಇಳಿದು ಖಡ್ಗವನ್ನು ಹಿಡಿದು ಓಡಿ ಅರ್ಜುನನ ರಥವನ್ನು ಸೇರಿ ಶಾಂತಿಯನ್ನು ಹೊಂದಿದನು.

ತತೋ ಭೀಷ್ಮರಥಾತ್ ತೂರ್ಣಮುತ್ಪತಂತಿ ಪತತ್ರಿಣಃ ।
ಯೈರಂತರಿಕ್ಷಂ ಭೂಮಿಶ್ಚ ಸರ್ವತಃ ಸಮವಸ್ತೃತಮ್ ॥೫೩॥

ಅನಂತರ ಭೀಷ್ಮ ರಥದಿಂದ ಶೀಘ್ರವಾಗಿ ಬಾಣಗಳು ಬರಲು ಪ್ರಾರಂಭಿಸಿದವು. ಅವು ಅಂತರಿಕ್ಷವನ್ನು ಮತ್ತು ಭೂಮಿಯನ್ನು ಎಲ್ಲ ಕಡೆಗಳಲ್ಲಿಯೂ ಮುಚ್ಚಿ ಹಾಕಿದವು.

ಪಾಂಚಾಲಾನಥ ಮತ್ಸ್ಯಾಂಶ್ಚ ಕೇಕಯಾಂಶ್ಚ ಪ್ರಭದ್ರಕಾನ್ ।
ಭೀಷ್ಮಃ ಪ್ರಹರತಾಂ ಶ್ರೇಷ್ಠಃ ಪಾತಯಾಮಾಸ ಮಾರ್ಗಣೈಃ ॥೫೪॥

ಪ್ರಹಾರ ಮಾಡುವವರಲ್ಲಿ ಶ್ರೇಷ್ಠರಾದ ಭೀಷ್ಮರು ತಮ್ಮ ಬಾಣಗಳಿಂದ ಪಾಂಚಾಲರನ್ನೂ, ಮತ್ಸ್ಯರನ್ನೂ, ಕೇಕಯರನ್ನೂ, ಪ್ರಭದ್ರಕರನ್ನೂ ಹೊಡೆದು ಉರುಳಿಸಿದರು.

ಉತ್ಸೃಜ್ಯ ಸಮರೇ ತೂರ್ಣಂ ಪಾಂಡವಂ ಸವ್ಯಸಾಚಿನಮ್ ।
ಅಭ್ಯದ್ರವತ ಪಾಂಚಾಲ್ಯಂ ದ್ರುಪದಂ ಸೇನಯಾ ವೃತಮ್ ।
ಪ್ರಿಯಂ ಸಂಬಂಧಿನಂ ರಾಜನ್ ಶರಾನವಕಿರನ್ ಬಹೂನ್ ॥೫೫॥

ಎಲೈ ರಾಜನೇ, ಭೀಷ್ಮರು ಸವ್ಯಸಾಚಿಯಾದ ಪಾಂಡವ ಅರ್ಜುನನನ್ನು ಯುದ್ಧದಲ್ಲಿ ಶೀಘ್ರವಾಗಿ ಬಿಟ್ಟು, ಸೇನೆಯಿಂದ ಪರಿವೃತನಾದ ಪಾಂಚಾಲನಾದ ದ್ರುಪದನ ಕಡೆಗೆ ಧಾವಿಸಿದರು. ಪ್ರಿಯನೂ, ಸಂಬಂಧಿಯೂ ಆದ ಅವನ ಮೇಲೆ ಅನೇಕ ಬಾಣಗಳ ಮಳೆಯನ್ನು ಕರೆದರು.

ಅಗ್ನಿನೇವ ಪ್ರದಗ್ಧಾನಿ ವನಾನಿ ಶಿಶಿರಾತ್ಯಯೇ ।
ಶರದಗ್ಧಾನ್ಯದೃಶ್ಯಂತ ಸೈನ್ಯಾನಿ ದ್ರುಪದಸ್ಯ ಹ ।
ಅತಿಷ್ಠತ ರಣೇ ಭೀಷ್ಮೋ ವಿಧೂಮ ಇವ ಪಾವಕಃ ॥೫೬॥

ಶಿಶಿರ ಋತುವು ಮುಗಿದ ಮೇಲೆ ಅಗ್ನಿಯಿಂದ ಸುಟ್ಟ ವನದಂತೆ ದ್ರುಪದನ ಸೈನ್ಯವು ಭೀಷ್ಮರ ಶರಗಳಿಂದ ದಗ್ಧವಾದುದು ಕಂಡುಬಂದಿತು. ಭೀಷ್ಮರು ಧೂಮವಿಲ್ಲದ ಅಗ್ನಿಯಂತೆ ರಣರಂಗದಲ್ಲಿ ನಿಂತರು.

ಮಧ್ಯಂದಿನೇ ಯಥಾದಿತ್ಯಂ ತಪಂತಮಿವ ತೇಜಸಾ ।
ನ ಶೇಕುಃ ಪಾಂಡವೇಯಸ್ಯ ಯೋಧಾ ಭೀಷ್ಮಂ ನಿರೀಕ್ಷಿತುಮ್ ॥೫೭॥

ಮಧ್ಯಾಹ್ನ ಕಾಲದಲ್ಲಿ ತನ್ನ ತೇಜಸ್ಸಿನಿಂದ ಸುಡುತ್ತಿರುವ ಸೂರ್ಯನನ್ನು ಹೇಗೆ ನೋಡಲು ಸಾಧ್ಯವಿಲ್ಲವೋ, ಹಾಗೆ ಪಾಂಡವರ ಸೇನೆಯ ಯೋಧರು ಭೀಷ್ಮರನ್ನು ನೋಡುವುದಕ್ಕೂ ಸಾಧ್ಯವಾಗಲಿಲ್ಲ.

ವೀಕ್ಷಾಂಚಕ್ರುಃ ಸಮಂತಾತ್ ತೇ ಪಾಂಡವಾ ಭಯಪೀಡಿತಾಃ ।
ತ್ರಾತಾರಂ ನಾಧ್ಯಗಚ್ಛಂತ ಗಾವಃ ಶೀತಾರ್ದಿತಾ ಇವ ॥೫೮॥

ಭಯಪೀಡಿತರಾದ ಪಾಂಡವರು ಎಲ್ಲ ಕಡೆಯಲ್ಲಿಯೂ ನೋಡಿದರು. ಹಿಮ ಬಾಧೆಗೆ ಒಳಗಾದ ಗೋವುಗಳಂತೆ ಅವರು ಯಾವ ರಕ್ಷಕರನ್ನೂ ಕಾಣಲಿಲ್ಲ.

ಹತವಿಪ್ರದ್ರುತೇ ಸೈನ್ಯೇ ನಿರುತ್ಸಾಹೇ ವಿಮರ್ದಿತೇ ।
ಹಾಹಾಕಾರೋ ಮಹಾನಾಸೀತ್ ಪಾಂಡುಸೈನ್ಯೇಷು ಭಾರತ ॥೫೯॥

ಎಲೈ ಭಾರತನೇ, ಸೈನ್ಯವು ವಿಮರ್ದನಕ್ಕೆ ಒಳಗಾಗಿ, ಸ್ವಲ್ಪ ಭಾಗವು ಹತವಾಗಿ, ಸ್ವಲ್ಪ ಭಾಗವು ನಿರುತ್ಸಾಹದಿಂದ ಓಡಿ ಹೋಗುತ್ತಿರಲು ಪಾಂಡವರ ಸೈನ್ಯದಲ್ಲಿ ದೊಡ್ಡ ಹಾಹಾಕಾರವುಂಟಾಯಿತು.

ತತೋ ಭೀಷ್ಮಃ ಶಾಂತನವೋ ನಿತ್ಯಂ ಮಂಡಲಕಾರ್ಮುಕಃ ।
ಮುಮೋಚ ಬಾಣಾನ್ ದೀಪ್ತಾಗ್ರಾನಹೀನಾಶೀವಿಷಾನಿವ ॥೬೦॥

ಆಗ ಶಂತನು ಪುತ್ರರಾದ ಭೀಷ್ಮರು ಯಾವಾಗಲೂ ಮಂಡಲಾಕಾರದ ಧನುಸ್ಸನ್ನು ಹೊಂದಿದವರಾಗಿ ದೀಪ್ತವಾದ ತುದಿಯುಳ್ಳ ವಿಷ ಸರ್ಪಗಳಂತಿದ್ದ ಬಾಣಗಳನ್ನು ಪಾಂಡವರ ಸೈನ್ಯದ ಮೇಲೆ ಪ್ರಯೋಗಿಸಿದರು.

ಶರೈರೇಕಾಯನೀಕುರ್ವನ್ ದಿಶಃ ಸರ್ವಾ ಯತವ್ರತಃ ।
ಜಘಾನ ಪಾಂಡವರಥಾನಾದಿಶ್ಯಾದಿಶ್ಯ ಭಾರತ ॥೬೧॥

ಎಲೈ ಭಾರತನೇ, ನಿಯತವ್ರತರಾದ ಭೀಷ್ಮರು ಎಲ್ಲ ದಿಕ್ಕುಗಳನ್ನೂ ತಮ್ಮ ಬಾಣಗಳಿಂದ ಒಂದೇ ಆಶ್ರಯವನ್ನಾಗಿ ಮಾಡುತ್ತಾ ಪಾಂಡವರ ರಥರನ್ನು ಹೇಳಿ ಹೇಳಿ ಹೊಡೆದರು.

ತತಃ ಸೈನ್ಯೇಷು ಭಗ್ನೇಷು ಮಥಿತೇಷು ಚ ಸರ್ವಶಃ ।
ಪ್ರಾಪ್ತೇ ಚಾಸ್ತಂ ದಿನಕರೇ ನ ಪ್ರಾಜ್ಞಾಯತ ಕಿಂಚನ ॥೬೨॥

ಆಗ ಎಲ್ಲ ಕಡೆಯಲ್ಲಿಯೂ ಪಾಂಡವರ ಸೈನ್ಯವು ಕಲಕಲ್ಬಟ್ಟು ಭಗ್ನವಾಗಿ ಸೂರ್ಯನು ಮುಳುಗುವ ಸಮಯವು ಬರುತ್ತಿರಲು ಯಾವುದೂ ಕಾಣಲಿಲ್ಲ.

ಭೀಷ್ಮಂ ಚ ಸಮುದೀರ್ಯಂತಂ ದೃಷ್ಟ್ವಾ ಪಾರ್ಥಾ ಮಹಾಹವೇ ।
ಅವಹಾರಮಕುರ್ವಂತ ಸೈನ್ಯಾನಾಂ ಭರತರ್ಷಭ ॥೬೩॥

ಎಲೈ ಭರತರ್ಷಭನೇ, ಆ ದೊಡ್ಡ ಯುದ್ಧದಲ್ಲಿ ವಿಜೃಂಭಿಸುತ್ತಿರುವ ಭೀಷ್ಮರನ್ನು ನೋಡಿ ಪಾಂಡವರು ತಮ್ಮ ಸೈನ್ಯವನ್ನು ಅವಹಾರ ಮಾಡಿದರು (ಹಿಂದಕ್ಕೆ ತೆಗೆದುಕೊಂಡರು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಪಂಚಚತ್ವಾರಿಂಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತಾರನೆಯ ಅಧ್ಯಾಯ

ಕೃಷ್ಣನಿಂದ ಯುಧಿಷ್ಠಿರನ ಸಮಾಶ್ವಾಸನೆ. ದ್ವಿತೀಯ ದಿವಸ ಯುದ್ಧಕ್ಕಾಗಿ ಪಾಂಡವರ ಉದ್ಯಮ.

ಸಂಜಯಃ

ಕೃತೇಽವಹಾರೇ ಸೈನ್ಯಾನಾಂ ಪ್ರಥಮೇ ಭರತರ್ಷಭ ।
ಭೀಷ್ಮೇ ಚ ಯುಧಿ ಸಂರಬ್ಧೇ ಹೃಷ್ಟೇ ದುರ್ಯೋಧನೇ ತಥಾ ॥೧॥

ಧರ್ಮರಾಜಸ್ತತಸ್ತೂರ್ಣಮಭಿಗಮ್ಯ ಜನಾರ್ದನಮ್ ।
ಭ್ರಾತೃಭಿಃ ಸಹಿತಃ ಸರ್ವೈಃ ಸರ್ವೈಶ್ಚೈವ ಜನೇಶ್ವರೈಃ ॥೨॥

ಶುಚಾ ಪರಮಯಾ ಯುಕ್ತಶ್ಚಿಂತಯಾನಃ ಪರಾಜಯಮ್ ।
ವಾರ್ಷ್ಣೇಯಮಬ್ರವೀದ್ ರಾಜನ್ ದೃಷ್ಟ್ವಾ ಭೀಷ್ಮಸ್ಯ ವಿಕ್ರಮಮ್ ॥೩॥

ಸಂಜಯ– ಎಲೈ ಭರತರ್ಷಭನೇ, ಭೀಷ್ಮರು ಯುದ್ಧದಲ್ಲಿ ಸಂಕ್ರುದ್ಧರಾಗಿ ದುರ್ಯೋಧನನು ಸಂತೋಷದಿಂದ ಕೂಡಿದವನಾಗಿ ಪ್ರಥಮ ದಿವಸದಲ್ಲಿ ಪಾಂಡವರು ತಮ್ಮ ಸೈನ್ಯವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿರಲು ಧರ್ಮರಾಜನು ಶೀಘ್ರವಾಗಿ ಎಲ್ಲಾ ಸಹೋದರರ ಜೊತೆಯಲ್ಲಿ ಮತ್ತು ಎಲ್ಲಾ ರಾಜರ ಜೊತೆಯಲ್ಲಿ ಕೃಷ್ಣನನ್ನು ಸಂಧಿಸಿ ಭೀಷ್ಮವಿಕ್ರಮವನ್ನು ನೋಡಿ, ತಮ್ಮ ಪರಾಜಯವನ್ನು ಚಿಂತಿಸುತ್ತಾ, ಪರಮಶೋಕದಿಂದ ಕೂಡಿದವನಾಗಿ ಕೃಷ್ಣನನ್ನು ಕುರಿತು ಮಾತನಾಡಿದನು.

ಕೃಷ್ಣ ಪಶ್ಯ ಮಹೇಷ್ವಾಸಂ ಭೀಷ್ಮಂ ಭೀಮಪರಾಕ್ರಮಮ್ ।
ಶರೈರ್ದಹಂತಂ ಸೈನ್ಯಂ ಮೇ ಗ್ರೀಷ್ಮೇ ಕಕ್ಷಮಿವಾನಲಮ್ ॥೪॥

ಭಯಂಕರ ಪರಾಕ್ರಮವುಳ್ಳ ಮಹಾಧನುರ್ಧಾರಿಗಳಾದ ಭೀಷ್ಮರು ಗ್ರೀಷ್ಮ ಋತುವಿನಲ್ಲಿ ಅಗ್ನಿಯು ಹುಲ್ಲುಗಾವಲನ್ನು ಸುಟ್ಟಂತೆ ತಮ್ಮ ಬಾಣಗಳಿಂದ ನನ್ನ ಸೈನ್ಯವನ್ನು ಸುಡುವುದನ್ನು ನೋಡು.

ಕಥಮೇನಂ ಮಹಾತ್ಮಾನಂ ಶಕ್ನ್ಯಾಮಃ ಪ್ರತಿವೀಕ್ಷಿತುಮ್ ।
ಲೇಲಿಹ್ಯಮಾನಂ ಸೈನ್ಯಂ ಮೇ ಹವಿಷ್ಮಂತಮಿವಾನಲಮ್ ॥೫॥

ಹವಿಸ್ಸನ್ನು ಹಾಕಿದ ಅಗ್ನಿಯಂತೆ ನನ್ನ ಸೈನ್ಯವನ್ನು ನುಂಗುತ್ತಿರುವ ಈ ಮಹಾನುಭಾವರನ್ನು ನಾವು ಪ್ರತಿಯಾಗಿ ನೋಡಲು ಹೇಗೆ ಶಕ್ಯವಾದೀತು?

ಏತಂ ಹಿ ಪುರುಷವ್ಯಾಘ್ರಂ ಧನುಷ್ಮಂತಂ ಮಹಾಬಲಮ್ ।
ದೃಷ್ಟ್ವಾ ವಿಪ್ರದ್ರುತಂ ಸೈನ್ಯಂ ಮದೀಯಂ ಮಾರ್ಗಣಾಹತಮ್ ॥೬॥

ಅವರ ಬಾಣಗಳಿಂದ ಚೆನ್ನಾಗಿ ಪ್ರಹರಿಸಲ್ಪಟ್ಟ ನನ್ನ ಸೈನ್ಯವು ಮಹಾಬಲಿಷ್ಠರೂ, ಪುರುಷವ್ಯಾಘ್ರರೂ ಧನುರ್ಧಾರಿಗಳೂ ಆದ ಇವರನ್ನು ನೋಡಿ ಓಡಿಹೋಯಿತು.

ಶಕ್ಯೋ ಜೇತುಂ ಯಮಃ ಕ್ರುದ್ಧೋ ವಜ್ರಪಾಣಿಶ್ಚ ಸಂಯುಗೇ ।
ವರುಣಃ ಪಾಶಭೃಚ್ಚಾಪಿ ಕುಬೇರೋ ವಾ ಗದಾಧರಃ ॥೭॥

ನ ತು ಭೀಷ್ಮೋ ಮಹಾತೇಜಾಃ ಶಕ್ಯೋ ಜೇತುಂ ಮಹಾಬಲಃ ।
ಸೋಽಹಮೇವಂ ಗತೇ ಮಗ್ನೋ ಭೀಷ್ಮಾಗಾಧಜಲೇಽಪ್ಲವಃ ॥೮॥

ಕೋಪಗೊಂಡ ಯಮನನ್ನು ಜಯಿಸುವುದು ಸಾಧ್ಯ. ಯುದ್ಧದಲ್ಲಿ ವಜ್ರಪಾಣಿಯಾದ ಇಂದ್ರನನ್ನೂ ಗೆಲ್ಲಬಹುದು. ಪಾಶಧಾರಿಯಾದ ವರುಣನನ್ನಾಗಲೀ, ಗದಾಧಾರಿಯಾದ ಕುಬೇರನನ್ನಾಗಲೀ ಗೆಲ್ಲಬಹುದು. ಆದರೆ ಮಹಾಬಲರೂ, ಮಹಾ ತೇಜಸ್ವಿಗಳೂ ಆದ ಭೀಷ್ಮರನ್ನು ಗೆಲ್ಲಲು ಸಾಧ್ಯವಿಲ್ಲ. ಪರಿಸ್ಥಿತಿಯು ಹೀಗಿರುವಾಗ ನಾನು ಭೀಷ್ಮರೆಂಬ ಅಗಾಧವಾದ ಜಲದಲ್ಲಿ ದೋಣಿ ಇಲ್ಲದೆ ಮುಳುಗಿ ಹೋಗಿದ್ದೇನೆ.

ಆತ್ಮನೋ ಬುದ್ಧಿದೌರ್ಬಲ್ಯಾದ್ ಭೀಷ್ಮಮಾಸಾದ್ಯ ಕೇಶವ ।
ವನಂ ಯಾಸ್ಯಾಮಿ ಗೋವಿಂದ ಶ್ರೇಯೋ ಮೇ ತತ್ರ ಜೀವಿತುಮ್ ॥೯॥

ಎಲೈ ಕೇಶವನೇ, ಭೀಷ್ಮರನ್ನು ಸಮೀಪಿಸಿದರೆ ನನ್ನ ಬುದ್ಧಿಯೇ ದುರ್ಬಲವಾಗುವುದರಿಂದ ಎಲೈ ಗೋವಿಂದನೇ, ನಾನು ಕಾಡಿಗೆ ಹೋಗುವೆನು. ನಾನು ಅಲ್ಲಿ ಜೀವಿಸುವುದು ಒಳ್ಳೆಯದು.

ನ ತ್ವಿಮಾನ್ ಪೃಥಿವೀಪಾಲಾನ್ ದಾತುಂ ಭೀಷ್ಮಾಯ ಮೃತ್ಯವೇ ।
ಕ್ಷಪಯಿಷ್ಯತಿ ಸೇನಾಂ ಮೇ ಕೃಷ್ಣ ಭೀಷ್ಮೋ ಮಹಾಸ್ತ್ರವಿತ್ ॥೧೦॥

ಆದರೆ ಈ ರಾಜರನ್ನು ಭೀಷ್ಮರೆಂಬ ಮೃತ್ಯುವಿಗೆ ಕೊಡಲಾರೆ. ಎಲೈ ಕೃಷ್ಣನೇ, ಮಹಾಸ್ತ್ರವೇತ್ತರಾದ ಭೀಷ್ಮರು ನನ್ನ ಸೈನ್ಯವನ್ನು ನಾಶಮಾಡುವರು.

ಯಥಾऽನಲಂ ಪ್ರಜ್ವಲಿತಂ ಪತಂಗಾಃ ಸಮಭಿದ್ರುತಾಃ ।
ವಿನಾಶಾಯೈವ ಗಚ್ಛಂತಿ ತಥಾ ಮೇ ಸೈನಿಕೋ ಜನಃ ॥೧೧॥

ದೀಪ್ತವಾದ ಅಗ್ನಿಯನ್ನು ಹೇಗೆ ಪತಂಗಗಳು ತಮ್ಮ ವಿನಾಶಕ್ಕಾಗಿಯೇ ವೇಗದಿಂದ ಪ್ರವೇಶಿಸುತ್ತವೆಯೋ ಹಾಗೆ ನನ್ನ ಸೈನಿಕ ಜನರೂ ಹೋಗುತ್ತಾರೆ.

ಕ್ಷಯಂ ನೀತೋऽಸ್ಮಿ ವಾರ್ಷ್ಣೇಯ ರಾಜ್ಯಹೇತೋಃ ಪರಾಕ್ರಮೀ ।
ಭ್ರಾತರಶ್ಚೈವ ಮೇ ವೀರಾಃ ಕರ್ಶಿತಾಃ ಶರಪೀಡಿತಾಃ ॥೧೨॥

ಎಲೈ ವಾರ್ಷ್ಣೇಯನೇ, ಪರಾಕ್ರಮಿಯಾದ ನಾನು ರಾಜ್ಯದ ಕಾರಣದಿಂದಾಗಿ ವಿನಾಶವನ್ನು ಹೊಂದಿದ್ದೇನೆ. ಕಷ್ಟಕ್ಕೆ ಒಳಗಾದ, ಬಾಣಪೀಡಿತರಾದ, ವೀರರಾದ ನನ್ನ ತಮ್ಮಂದಿರೂ ಸಹ ಹಾಗೆಯೇ ಸರಿ.

ಮತ್ಕೃತೇ ಭ್ರಾತೃಸೌಹಾರ್ದಾದ್ ರಾಜ್ಯಾದ್ ಭ್ರಷ್ಟಾಸ್ಮಥಾ ಸುಖಾತ್ ।
ಜೀವಿತಂ ಬಹು ಮನ್ಯೇಽಹಂ ಜೀವಿತಂ ಹ್ಯದ್ಯ ದುರ್ಲಭಮ್ ॥೧೩॥

ಅವರು ಅಣ್ಣನಾದ ನನ್ನ ಮೇಲಿನ ಸ್ನೇಹದಿಂದ ನನ್ನ ಸಲುವಾಗಿ ರಾಜ್ಯದಿಂದಲೂ ಮತ್ತು ಸುಖದಿಂದಲೂ ಭ್ರಷ್ಟರಾಗಿದ್ದಾರೆ. ನಾನು ಜೀವನವು ಶ್ರೇಷ್ಠವೆಂದು ತಿಳಿಯುತ್ತೇನೆ. ಆದರೆ ಈ ದಿನ ಜೀವನವೇ ದುರ್ಲಭವಾಗಿದೆ.

ಜೀವಿತಸ್ಯ ಹಿ ಶೇಷೇಣ ತಪಸ್ತಪ್ಸ್ಯಾಮಿ ದುಶ್ಚರಮ್ ।
ನ ಘಾತಯಿಷ್ಯಾಮಿ ರಣೇ ಮಿತ್ರಾಣೀಮಾನಿ ಕೇಶವ ॥೧೪॥

ಶೇಷಾಯುಷ್ಯದಿಂದ ನಾನು ದುಶ್ಚರವಾದ ತಪಸ್ಸನ್ನು ಮಾಡುವೆನು. ಎಲೈ ಕೇಶವನೇ, ನನ್ನ ಮಿತ್ರರಾದ ಈ ರಾಜರನ್ನು ಯುದ್ಧದಲ್ಲಿ ಕೊಲ್ಲಿಸಲಾರೆ.

ರಥಾನ್ ಮೇ ಬಹುಸಾಹಸ್ರಾನ್ ದಿವ್ಯೈರಸ್ತ್ರೈರ್ಮಹಾಬಲಃ ।
ಘಾತಯತ್ಯನಿಶಂ ಭೀಷ್ಮಃ ಪ್ರವರಾಣಾಂ ಪ್ರಹಾರಿಣಾಮ್ ॥೧೫॥

ಮಹಾಬಲರಾದ, ಅನೇಕ ಸಹಸ್ರ ರಥಗಳನ್ನು ಪ್ರಹಾರ ಮಾಡುವವರಲ್ಲಿ ಶ್ರೇಷ್ಠರಾದ ಭೀಷ್ಮರು ತಮ್ಮ ದಿವ್ಯಾಸ್ತ್ರಗಳಿಂದ ನನ್ನ ಅನೇಕ ಸಹಸ್ರ ಯೋಧರನ್ನು ಸತತವಾಗಿ ಸಂಹರಿಸುತ್ತಿದ್ದಾರೆ.

ಕಿಂ ನು ಕೃತ್ವಾ ಕೃತಂ ಮೇ ಸ್ಯಾದ್ ಬ್ರೂಹಿ ಮಾಧವ ಮಾಚಿರಮ್ ।
ಮಧ್ಯಸ್ಥಮಿವ ಪಶ್ಯಾಮಿ ಸಮರೇ ಸವ್ಯಸಾಚಿನಮ್ ॥೧೬॥

ಎಲೈ ಮಾಧವನೇ, ಏನು ಮಾಡಿದರೆ ನನಗೆ ಕ್ಷೇಮವಾಗುತ್ತದೆ ಎಂದು ಶೀಘ್ರವಾಗಿ ಹೇಳು. ಸವ್ಯಸಾಚಿಯಾದ ಅರ್ಜುನನು ಯುದ್ಧದಲ್ಲಿ ತಟಸ್ಥನಾಗಿರುವಂತೆ ತೋರುತ್ತದೆ.

ಏಕೋ ಭೀಮಃ ಪರಂ ಶಕ್ತ್ಯಾ ಯುಧ್ಯತ್ಯೇಷ ಮಹಾಭುಜಃ ।
ಕೇವಲಂ ಬಾಹುವೀರ್ಯೇಣ ಕ್ಷತ್ರಧರ್ಮಮನುಸ್ಮರನ್ ॥೧೭॥

ಮಹಾಭುಜನಾದ ಭೀಮನೊಬ್ಬನೇ ಕ್ಷತ್ರಿಯ ಧರ್ಮವನ್ನು ಸ್ಮರಿಸಿ ಕೇವಲ ತನ್ನ ಬಾಹುವೀರ್ಯದಿಂದ ಶಕ್ತಿಯನ್ನು ಮೀರಿ ಯುದ್ಧವನ್ನು ಮಾಡುತ್ತಿದ್ದಾನೆ.

ಗದಯಾ ವೀರಘಾತಿನ್ಯಾ ಯಥೋತ್ಸಾಹಂ ಮಹಾಮನಾಃ ।
ಕರೋತ್ಯಸುಕರಂ ಕರ್ಮ ಗಜಾಶ್ವರಥಪತ್ತಿಷು ॥೧೮॥

ಮಹಾಧೈರ್ಯಶಾಲಿಯಾದ ಅವನು ವೀರರನ್ನು ಕೊಲ್ಲುವ ತನ್ನ ಗದೆಯಿಂದ ತನ್ನ ಉತ್ಸಾಹಕ್ಕೆ ಅನುಗುಣವಾಗಿ ಗಜಾಶ್ವರಥ ಪದಾತಿಗಳ ವಿಷಯದಲ್ಲಿ ದುಷ್ಕರವಾದ ಕಾರ್ಯವನ್ನು ಮಾಡುತ್ತಿದ್ದಾನೆ.

ನಾಲಮೇಷ ಕ್ಷಯಂ ಕರ್ತುಂ ಪರಸೈನ್ಯಸ್ಯ ಮಾರಿಷ ।
ಆರ್ಜವೇನೈವ ಯುದ್ಧೇನ ವೀರ ವರ್ಷಶತೈರಪಿ ॥೧೯॥

ಆದರೆ ಎಲೈ ವೀರನೇ, ಭೀಮಸೇನನು ಋಜುಮಾರ್ಗದಿಂದ ನೂರು ವರ್ಷಗಳ ಕಾಲ ಯುದ್ಧವನ್ನು ಮಾಡಿದರೂ ಪರಸೈನ್ಯವನ್ನು ನಾಶ ಮಾಡಲು ಸಾಧ್ಯವಾಗುವುದಿಲ್ಲ.

ಏಕೋऽಸ್ತ್ರವಿತ್ ಸಖಾ ತೇऽಯಂ ಸೋऽಷ್ಮಾನ್ ಸಮುಪೇಕ್ಷತೇ ।
ನಿರ್ದಹ್ಯಮಾನಾನ್ ಭೀಷ್ಮೇಣ ದ್ರೋಣೇನ ಚ ಮಹಾತ್ಮನಾ ॥೨೦॥

ಅಸ್ತ್ರವನ್ನು ತಿಳಿದವನು ಒಬ್ಬನೇ, ಅವನು ನಿನ್ನ ಸ್ನೇಹಿತ. ಮಹಾತ್ಮರಾದ ಭೀಷ್ಮರಿಂದಲೂ, ದ್ರೋಣರಿಂದಲೂ, ದಹಿಸಲ್ಪಡುವ ನಮ್ಮನ್ನು ನೋಡಿ ಅವನು ಉದಾಸೀನನಾಗಿದ್ದಾನೆ.

ದಿವ್ಯಾನ್ಯಸ್ತ್ರಾಣಿ ಭೀಷ್ಮಸ್ಯ ದ್ರೋಣಸ್ಯ ಚ ಮಹಾತ್ಮನಃ ।
ಧಕ್ಷ್ಯಂತಿ ಕ್ಷತ್ರಿಯಾನ್ ಸರ್ವಾನ್ ಪ್ರಯುಕ್ತಾನಿ ಪುನಃ ಪುನಃ ॥೨೧॥

ಪುನಃ ಪುನಃ ಪ್ರಯೋಗಿಸುವ ಮಹಾನುಭಾವರಾದ ಭೀಷ್ಮರ ಮತ್ತು ದ್ರೋಣರ ದಿವ್ಯಾಸ್ತ್ರಗಳು ಎಲ್ಲಾ ಕ್ಷತ್ರಿಯರನ್ನು ಸುಟ್ಟುಹಾಕುವುವು.

ಕೃಷ್ಣ ಭೀಷ್ಮಃ ಸುಸಂರಬ್ಧಃ ಸಹಿತಃ ಸರ್ವಪಾರ್ಥಿವೈಃ ।
ಕ್ಷಪಯಿಷ್ಯತಿ ನೋ ನೂನಂ ಯಾದೃಶೋऽಸ್ಯ ಪರಾಕ್ರಮಃ ॥೨೨॥

ಎಲೈ ಕೃಷ್ಣನೇ, ಭೀಷ್ಮರ ಪರಾಕ್ರಮವು ಹೇಗಿದೆ ಎಂದು ನೋಡಿದರೆ, ಸಿಟ್ಟುಗೊಂಡ ಅವರು ಎಲ್ಲಾ ರಾಜರ ಜೊತೆಯಲ್ಲಿ ಕೂಡಿ ನಮ್ಮನ್ನು ವಿನಾಶ ಮಾಡುವರು ಎಂದು ನಿಶ್ಚಿತವಾಗಿ ತೋರುತ್ತಿದೆ.

ಸ ತ್ವಂ ಪಶ್ಯ ಮಹೇಷ್ವಾಸಂ ಯೋಗೀಶ್ವರ ಮಹಾರಥಮ್ ।
ಯೋ ಭೀಷ್ಮಂ ಶಮಯೇತ್ ಸಂಖೇ ದಾವಾಗ್ನಿಂ ಜಲದೋ ಯಥಾ ॥

ಎಲೈ ಯೋಗೀಶ್ವರನೇ, ಮಹಾರಥರೂ, ಮಹೇಷ್ವಾಸರೂ ಆದ ಭೀಷ್ಮರನ್ನು ದಾವಾಗ್ನಿಯನ್ನು ಮೋಡವು ಶಾಂತಗೊಳಿಸಿದಂತೆ ಯುದ್ಧದಲ್ಲಿ ಶಾಂತಗೊಳಿಸುವವರು ಯಾರಾದರೂ ಇದ್ದಾರೆಯೇ ಎಂದು ಆಲೋಚಿಸು.

ತವ ಪ್ರಸಾದಾದ್ ಗೋವಿಂದ ಪಾಂಡವಾ ನಿಹತದ್ವಿಷಃ ।
ಸ್ವರಾಜ್ಯಮನುಸಂಪ್ರಾಪ್ತಾ ಮೋದಿಷ್ಯಂತಿ ಸಬಾಂಧವಾಃ ॥೨೪॥

ಏವಮುಕ್ತ್ವಾ ತತಃ ಪಾರ್ಥೋ ಧ್ಯಾಯನ್ನಾಸ್ತೇ ಮಹಾಮನಾಃ ।
ಚಿರಮಂತರ್ಮನಾ ಭೂತ್ವಾ ಶೋಕೋಪಹತಚೇತನಃ ॥೨೫॥

ಎಲೈ ಗೋವಿಂದನೇ, ನಿನ್ನ ಅನುಗ್ರಹದಿಂದ ಪಾಂಡವರು ಶತ್ರುಗಳನ್ನು ಕೊಂದು, ತಮ್ಮ ರಾಜ್ಯವನ್ನು ಹೊಂದಿ, ಬಾಂಧವರ ಜೊತೆಯಲ್ಲಿ ಸಂತೋಷ ಪಡುವರು. ಹೀಗೆ ಹೇಳಿ ಮಹಾಧೈರ್ಯಶಾಲಿಯಾದ ಯುಧಿಷ್ಠಿರನು ದುಃಖದಿಂದ ಕೂಡಿದ ಮನಸ್ಸುಳ್ಳವನಾಗಿ ಅಂತರ್ಮುಖಿಯಾಗಿ ಯೋಚನೆ ಮಾಡುತ್ತಾ ಬಹಳ ಕಾಲ ಕುಳಿತನು.

ಶೋಕಾರ್ತಂ ಪಾಂಡವಂ ಜ್ಞಾತ್ವಾ ದುಃಖೇನ ಹತಚೇತಸಮ್ ।
ಅಬ್ರವೀತ್ ತತ್ರ ಗೋವಿಂದೋ ಹರ್ಷಯನ್ ಸರ್ವಪಾಂಡವಾನ್ ॥

ಶೋಕಾರ್ತನಾದ ಯುಧಿಷ್ಠಿರನು ದುಃಖದಿಂದ ಕೂಡಿದ ಮನಸ್ಸುಳ್ಳವನಾಗಿದ್ದಾನೆಂದು ತಿಳಿದು ಗೋವಿಂದನು ಅಲ್ಲಿ ಎಲ್ಲ ಪಾಂಡವರಿಗೂ ಸಂತೋಷವನ್ನುಂಟು ಮಾಡುತ್ತಾ ಮಾತನಾಡಿದನು.

ಮಾ ಶುಚೋ ಭರತಶ್ರೇಷ್ಠ ನ ತ್ವಂ ಶೋಚಿತುಮರ್ಹಸಿ ।
ಯಸ್ಯ ತೇ ಭ್ರಾತರಃ ಶೂರಾಃ ಸರ್ವಲೋಕಸ್ಯ ಧನ್ವಿನಃ ॥೨೭॥

ಅಹಂ ಚ ಪ್ರಿಯಕೃದ್ ರಾಜನ್ ಸಾತ್ಯಕಿಶ್ಚ ಮಹಾರಥಃ ।
ವಿರಾಟದ್ರುಪದೌ ವೃದ್ಧೌ ಧೃಷ್ಟದ್ಯುಮ್ನಶ್ಚ ಪಾರ್ಷತಃ ॥೨೮॥

ಎಲೈ ಭರತಶ್ರೇಷ್ಠನೇ, ದುಃಖ ಪಡಬೇಡ. ಯಾವ ನಿನ್ನ ತಮ್ಮಂದಿರು ಸರ್ವಲೋಕದ ಶ್ರೇಷ್ಠ ಧನುರ್ಧಾರಿಗಳೋ ಶೂರರೋ, ಅಂತಹ ನೀನು ದುಃಖಿಪಡಲು ಅರ್ಹನಲ್ಲ. ಎಲೈ ರಾಜನೇ, ಮತ್ತು ನಾನೂ, ಮಹಾರಥನಾದ ಸಾತ್ಯಕಿಯೂ, ವೃದ್ಧರಾದ ವಿರಾಟದ್ರುಪದರೂ, ದ್ರುಪದನ ಮಗನಾದ ಧೃಷ್ಟದ್ಯುಮ್ನನೂ ಸಹ ನಿನಗೆ ಪ್ರಿಯವನ್ನು ಉಂಟುಮಾಡುತ್ತೇವೆ.

ತಥೈವ ಸಬಲಾಃ ಸರ್ವೇ ರಾಜಾನೋ ರಾಜಸತ್ತಮ ।
ತ್ವತ್ಪ್ರಸಾದಂ ಪ್ರತೀಕ್ಷಂತೇ ತ್ವದ್ಗತಾಶ್ಚ ವಿಶಾಂಪತೇ ॥೨೯॥

ಎಲೈ ರಾಜಶ್ರೇಷ್ಠನೇ, ಪ್ರಜೆಗಳ ಒಡೆಯನೇ, ಹಾಗೆಯೇ ತಮ್ಮ ತಮ್ಮ ಸೈನ್ಯಗಳಿಂದ ಕೂಡಿದ ಎಲ್ಲಾ ರಾಜರು ನಿನ್ನಲ್ಲಿ ನಿಷ್ಠೆಯುಳ್ಳವರಾಗಿ ನಿನ್ನ ಅನುಗ್ರಹವನ್ನೇ ನಿರೀಕ್ಷಿಸುತ್ತಿದ್ದಾರೆ.

ಏಷ ತೇ ಪಾರ್ಷತೋ ನಿತ್ಯಂ ಹಿತಕಾಮಃ ಪ್ರಿಯೇ ರತಃ ।
ಸೇನಾಪತ್ಯಮನುಪ್ರಾಪ್ತೋ ಧೃಷ್ಟದ್ಯುಮ್ನೋ ಮಹಾಬಲಃ ।
ಶಿಖಂಡೀ ಚ ಮಹಾಬಾಹೋ ಭೀಷ್ಮಸ್ಯ ನಿಧನಂ ಕಿಲ ॥೩೦॥

ಮಹಾಬಲನಾದ, ದ್ರುಪದನ ಮಗನಾದ ಈ ಧೃಷ್ಟದ್ಯುಮ್ನನು ಯಾವಾಗಲೂ ನಿನ್ನ ಹಿತವನ್ನು ಬಯಸಿ, ನಿನ್ನ ಪ್ರಿಯದಲ್ಲೇ ರತನಾಗಿ ನಿನ್ನ ಸೇನಾಪತ್ಯವನ್ನು ಸ್ವೀಕರಿಸಿದ್ದಾನೆ. ಎಲೈ ಮಹಾಬಾಹುವೇ, ಶಿಖಂಡಿಯು ಭೀಷ್ಮರ ಮೃತ್ಯುವಷ್ಟೆ!

ಏತಚ್ಛ್ರುತ್ವಾ ತತೋ ರಾಜಾ ಧೃಷ್ಟದ್ಯುಮ್ನಂ ಮಹಾರಥಮ್ ।
ಅಬ್ರವೀತ್ ಸಮಿತೌ ತಸ್ಯಾಂ ವಾಸುದೇವಸ್ಯ ಶೃಣ್ವತಃ ॥೩೧॥

ಈ ಮಾತನ್ನು ಕೇಳಿದ ರಾಜನು ಮಹಾರಥನಾದ ಧೃಷ್ಟದ್ಯುಮ್ನನನ್ನು ಕುರಿತು ಆ ಸಭೆಯಲ್ಲಿ ಕೃಷ್ಣನು ಕೇಳುವಂತೆ ಮಾತನಾಡಿದನು.

ಧೃಷ್ಟದ್ಯುಮ್ನ ನಿಬೋಧೇದಂ ಯತ್ತ್ವಾ ವಕ್ಷ್ಯಾಮಿ ಮಾರಿಷ ।
ನಾತಿಕ್ರಮ್ಯಂ ಭವೇತ್ ತಚ್ಚ ವಚನಂ ಮಮ ಭಾಷಿತಮ್ ।
ಭವಾನ್ ಸೇನಾಪತಿರ್ಮಹ್ಯಂ ವಾಸುದೇವೇನ ಸಮ್ಮತಃ ॥೩೨॥

ವೀರನಾದ ಧೃಷ್ಟದ್ಯುಮ್ನನೇ, ನಾನು ನಿನಗೆ ಹೇಳುವ ಮಾತನ್ನು ಗಮನಿಸು. ನನ್ನ ಮಾತನ್ನು ನೀನು ಮೀರಬಾರದು. ನೀನು ಕೃಷ್ಣನಿಗೆ ಸಮ್ಮತನಾದ ನನ್ನ ಸೇನಾಪತಿ.

ಕಾರ್ತಿಕೇಯೋ ಯಥಾ ನಿತ್ಯಂ ದೇವಾನಾಮಭವತ್ ಪುರಾ ।
ತಥಾ ತ್ವಮಪಿ ಪಾಂಡೂನಾಂ ಸೇನಾನೀಃ ಪುರುಷರ್ಷಭ ॥೩೩॥

ಎಲೈ ಪುರುಷರ್ಷಭನೇ, ಹಿಂದೆ ಷಣ್ಮುಖನು ದೇವತೆಗಳಿಗೆ ಯಾವಾಗಲೂ ಹೇಗೆ ಸೇನಾಪತಿಯಾಗಿದ್ದನೋ, ಹಾಗೆ ನೀನು ಪಾಂಡವರಿಗೆ ಸೇನಾಪತಿಯಾಗಿದ್ದೀಯೆ.

ಸ ತ್ವಂ ಪುರುಷಶಾರ್ದೂಲ ವಿಕ್ರಮ್ಯ ಜಹಿ ಕೌರವಾನ್ ।
ಅಹಂ ಚ ತ್ವಾನುಯಾಸ್ಯಾಮಿ ಭೀಮಃ ಕೃಷ್ಣಶ್ಚ ಮಾರಿಷ ॥೩೪॥

ಮಾದ್ರೀಪುತ್ರೌ ಚ ಸಹಿತೌ ದ್ರೌಪದೇಯಾಶ್ಚ ದಂಶಿತಾಃ ।
ಯೇ ಚಾನ್ಯೇ ಪೃಥಿವೀಪಾಲಾಃ ಪ್ರಧಾನಾಃ ಪುರುಷರ್ಷಭ ॥೩೫॥

ಎಲೈ ಪುರುಷಶಾರ್ದೂಲನೇ, ಅಂತಹ ನೀನು ಪರಾಕ್ರಮವನ್ನು ತೋರಿ ಕೌರವರನ್ನು ಸಂಹರಿಸು. ಎಲೈ ಮಾನ್ಯನೇ, ನಾನು ನಿನ್ನನ್ನು ಹಿಂಬಾಲಿಸುವೆನು. ಭೀಮ ಮತ್ತು ಕೃಷ್ಣರು ಹಿಂಬಾಲಿಸುವರು. ಮಾದ್ರೀಪುತ್ರರಾದ ನಕುಲ-ಸಹದೇವರು, ದ್ರೌಪದಿಯ ಐದು ಮಕ್ಕಳು ಮತ್ತು ಉಳಿದ ಯಾವ ಪ್ರಧಾನರಾದ ರಾಜರಿದ್ದರೋ ಅವರೂ ಸಹ ಎಲೈ ಪುರುಷಶ್ರೇಷ್ಠನೇ, ಶಸ್ತ್ರಕವಚಧಾರಿಗಳಾಗಿ ನಿನ್ನನ್ನು ಹಿಂಬಾಲಿಸುವರು.

ತತ ಉದ್ಧರ್ಷಯನ್ ಸರ್ವಾನ್ ಧೃಷ್ಟದ್ಯುಮ್ನೋಽಭ್ಯಭಾಷತ ॥೩೬॥

ಆಗ ಎಲ್ಲರನ್ನೂ ಹುರಿದುಂಬಿಸುತ್ತಾ ಧೃಷ್ಟದ್ಯುಮ್ನನು ಮಾತನಾಡಿದನು.

ಅಹಂ ದ್ರೋಣಾಂತಕಃ ಪಾರ್ಥ ವಿಹಿತಃ ಶಂಭುನಾ ಪುರಾ ।
ರಣೇ ಭೀಷ್ಮಂ ತಥಾ ದ್ರೋಣಂ ಕೃಪಂ ಶಲ್ಯಂ ಜಯದ್ರಥಮ್ ।
ಸರ್ವಾನದ್ಯ ರಣೇ ಧೃಷ್ಣಾನ್ ಪ್ರತಿಯೋತ್ಸ್ಯಾಮಿ ಪಾರ್ಥಿವ ॥೩೭॥

ಎಲೈ ರಾಜನೇ, ನಾನು ಈ ದಿನ ರಣದರ್ಪವನ್ನು ಹೊಂದಿರುವ ಭೀಷ್ಮರು, ದ್ರೋಣರು, ಕೃಪರು, ಶಲ್ಯ , ಜಯದ್ರಥ ಮತ್ತು ಎಲ್ಲರನ್ನೂ ಎದುರಿಸಿ ಯುದ್ಧವನ್ನು ಮಾಡುವೆನು.

ಅಘೋತ್ಕುಷ್ಟಂ ಮಹೇಷ್ವಾಸೈಃ ಪಾಂಡವೈರ್ಯುದ್ಧದುರ್ಮದೈಃ ।
ಸಮುದ್ಯತೇ ಪಾರ್ಥಿವೇಂದ್ರೇ ಪಾರ್ಷತೇ ಶತ್ರುಸೂದನೇ ॥೩೮॥

ಎಲೈ ರಾಜಶ್ರೇಷ್ಠನೇ, ಶತ್ರುಸಂಹಾರಕನಾದ ಧೃಷ್ಟದ್ಯುಮ್ನನು ಹೀಗೆ ಘೋಷಿಸುತ್ತಿರಲು ಯುದ್ಧದುರ್ಮದರಾದ ಮಹಾಧನುರ್ಧಾರಿಗಳಾದ ಪಾಂಡವರೆಲ್ಲರೂ ಸಂತೋಷದ ಘೋಷವನ್ನು ಮಾಡಿದರು.

ತಮಬ್ರವೀತ್ ತತಃ ಪಾರ್ಥಃ ಪಾರ್ಷತಂ ಪೃತನಾಪತಿಮ್ ।
ವ್ಯೂಹಃ ಕ್ರೌಂಚಾರುಣೋ ನಾಮ ಸರ್ವಶತ್ರುನಿಬರ್ಹಣಃ ॥೩೯॥

ಯಂ ಬೃಹಸ್ಪತಿರಿಂದ್ರಾಯ ತದಾ ದೇವಾಸುರೇಽಬ್ರವೀತ್ ।
ತಂ ಯಥಾವತ್ ಪ್ರತಿವ್ಯೂಹ ಪರಾನೀಕವಿನಾಶನಮ್ ।
ಅದೃಷ್ಟಪೂರ್ವಂ ರಾಜಾನಃ ಪಶ್ಯಂತು ಕುರುಭಿಃ ಸಹ ॥೪೦॥

ಆಗ ಯುಧಿಷ್ಠಿರನು ಸೇನಾಪತಿಯಾದ ಧೃಷ್ಟದ್ಯುಮ್ನನನ್ನು ಕುರಿತು ಹೀಗೆ ಮಾತನಾಡಿದನು. ದೇವಾಸುರ ಯುದ್ಧದಲ್ಲಿ ಬೃಹಸ್ಪತಿಗಳು ಇಂದ್ರನಿಗೆ ಹೇಳಿದ ಸರ್ವಶತ್ರು ನಿವಾರಕವಾದ ಕ್ರೌಂಚಾರುಣ ಎಂಬ ಪಕ್ಷವ್ಯೂಹವಿದೆ. ಶತ್ರುಸೈನ್ಯ ವಿನಾಶಕವಾದ ಅದನ್ನು ಅವರ ವ್ಯೂಹಕ್ಕೆ ಪ್ರತಿಯಾಗಿ ನೀನು ಸರಿಯಾಗಿ ಹೂಡುವವನಾಗು. ಹಿಂದೆ ಎಂದೂ ನೋಡದ ಆ ವ್ಯೂಹವನ್ನು ಕುರುಗಳ ಜೊತೆಯಲ್ಲಿ ರಾಜರು ನೋಡಲಿ.

ತಥೋಕ್ತಃ ಸ ನೃದೇವೇನ ವಿಷ್ಣುರ್ವಜ್ರಭೃತಾ ಇವ ।
ಪ್ರಭಾತೇ ಸರ್ವಸೈನ್ಯಾನಾಮಗ್ರೇ ಚಕ್ರೇ ಧನಂಜಯಮ್ ॥೪೧॥

ರಾಜನಾದ ಯುಧಿಷ್ಠಿರನಿಂದ ಇಂದ್ರನಿಂದ ವಿಷ್ಣುವು ಹೇಳಲ್ಪಟ್ಟಂತೆ ಆ ರೀತಿ ಹೇಳಲ್ಪಟ್ಟ ಧೃಷ್ಟದ್ಯುಮ್ನನು ಪ್ರಾತಃಕಾಲದಲ್ಲಿ ಸರ್ವಸೇನೆಗಳ ಮುಂಭಾಗದಲ್ಲಿ ಅರ್ಜುನನನ್ನು ನಿಲ್ಲಿಸಿದನು.

ಆದಿತ್ಯಪಥಗಃ ಕೇತುಸ್ತಸ್ಯಾದ್ಭುತಮನೋರಮಃ ।
ಶಾಸನಾತ್ ಪುರುಹೂತಸ್ಯ ನಿರ್ಮಿತೋ ವಿಶ್ವಕರ್ಮಣಾ ॥೪೨॥

ಇಂದ್ರನ ಅಪ್ಪಣೆಯಂತೆ ವಿಶ್ವಕರ್ಮನಿಂದ ನಿರ್ಮಿತವಾದ ಆದಿತ್ಯಪಥಗಾಮಿಯಾದ ಅರ್ಜುನನ ರಥದ ಧ್ವಜವು ಅದ್ಭುತವೂ, ಮನೋರಮವೂ ಆಗಿದ್ದಿತು.

ಇಂದ್ರಾಯುಧಸವರ್ಣಾಭಿಃ ಪತಾಕಾಭಿರಲಂಕೃತಃ ।
ಆಕಾಶಗ ಇವಾಕಾಶೇ ಗಂಧರ್ವನಗರೋಪಮಃ ।
ನೃತ್ಯಮಾನ ಇವಾಭಾತಿ ರಥಚರ್ಯಾಸು ಮಾರಿಷ ॥೪೩॥

ಎಲೈ ವೀರನೇ, ಕಾಮನಬಿಲ್ಲಿನ ಬಣ್ಣಗಳಿಂದ ಕೂಡಿದ ಪತಾಕೆಗಳಿಂದ ಅಲಂಕೃತವಾದ, ಆಕಾಶದಲ್ಲಿ ಹೋಗುವ ವಿಮಾನವನ್ನು ಹೋಲುವ, ಗಂಧರ್ವ ನಗರದಂತಿದ್ದ ಅವನ ರಥವು ರಥಮಾರ್ಗಗಳಲ್ಲಿ ನರ್ತಿಸುವಂತೆ ಕಾಣುತ್ತಿದ್ದಿತು.

ತೇನ ರತ್ನವತಾ ಪಾರ್ಥಃ ಸ ಚ ಗಾಂಡೀವಧನ್ವನಾ ।
ಬಭೂವ ಪರಮೋಪೇತಃ ಸ್ವಯಂಭೂರಿವ ಭಾನುನಾ ॥೪೪॥

ರತ್ನಾಲಂಕೃತವಾದ ಆ ರಥದಿಂದ, ಅರ್ಜುನನು ಗಾಂಡೀವ ಧನುರ್ಧಾರಿಯಾದ ಅರ್ಜುನನಿಂದ, ಆ ರಥವು ಕಿರಣಗಳಿಂದ ಕೂಡಿದ ಸೂರ್ಯನಂತೆ ಪರಮ ಕಾಂತಿಯುಕ್ತವಾಗಿ ಶೋಭಿಸಿತು.

ಶಿರೋऽಭೂದ್ ದ್ರುಪದೋ ರಾಜಾ ಮಹತ್ಯಾ ಸೇನಯಾ ವೃತಃ ।
ಕುಂತಿಭೋಜಶ್ಚ ಚೈದ್ಯಶ್ಚ ಚಕ್ಷುಷ್ಯಾಸ್ತಾಂ ಜನೇಶ್ವರ ॥೪೫॥

ಆ ಪಕ್ಷಿವ್ಯೂಹದ ಶಿರೋಭಾಗದಲ್ಲಿ ದೊಡ್ಡ ಸೈನ್ಯದಿಂದ ಕೂಡಿದ್ದ ದ್ರುಪದ ರಾಜನಿದ್ದನು. ಎಲೈ ಜನೇಶ್ವರನೇ, ಕುಂತಿಭೋಜ ಮತ್ತು ಧೃಷ್ಟಕೇತು ಇವರು ಚಕ್ಷುಸ್ಸಿನ ಸ್ಥಾನದಲ್ಲಿದ್ದರು.

ದಾಶಾರ್ಣಕಾಃ ಪ್ರಯಾಗಾಶ್ಚ ದಾಶೇರಕಗಣೈಃ ಸಹ ।
ಅನೂಪಗಾಃ ಕಿರಾತಾಶ್ಚ ಗ್ರೀವಾಯಾಂ ಭರತರ್ಷಭ ॥೪೬॥

ಎಲೈ ಭರತಶ್ರೇಷ್ಠನೇ, ದಶಾರ್ಣದೇಶದ ಯೋಧರು, ಪ್ರಯಾಗ ದೇಶದವರು, ದಾಶೇರಕರು, ಅನೂಪಗರು, ಕಿರಾತರು ಈ ಯೋಧರೆಲ್ಲರೂ ಪಕ್ಷಿಯ ಕತ್ತಿನ ಭಾಗದಲ್ಲಿದ್ದರು.

ಪಟಚ್ಚರೈಶ್ಚ ಹುಂಡೈಶ್ಚ ರಾಜನ್ ಪೌರವಕೈಸ್ತಥಾ ।
ನಿಷಾದ್ಯೈಃ ಸಹಿತಶ್ಚಾಪಿ ಪೃಷ್ಠಮಾಸೀದ್ ಯುಧಿಷ್ಠಿರಃ ॥೪೭॥

ಎಲೈ ರಾಜನೇ, ಪಟಚ್ಚರರು, ಹುಂಡರು, ಪೌರವಕರು (ಇವರು ಇನ್ನೊಂದು ದೇಶವಿಶೇಷದವರು), ನಿಷಾದರು, ಇವರ ಜೊತೆಯಲ್ಲಿ ಯುಧಿಷ್ಠಿರನು ಪೃಷ್ಠಭಾಗದಲ್ಲಿದ್ದನು.

ಪಕ್ಷೌ ತು ಭೀಮಸೇನಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ದ್ರೌಪದೇಯಾಭಿಮನ್ಯುಶ್ಚ ಸಾತ್ಯಕಿಶ್ಚ ಮಹಾರಥಃ ॥೪೮॥

ಅದರ ರೆಕ್ಕೆಗಳ ಸ್ಥಾನದಲ್ಲಿ ಭೀಮಸೇನ, ದ್ರುಪದಪುತ್ರನಾದ ಧೃಷ್ಟದ್ಯುಮ್ನ, ದ್ರೌಪದಿಯ ಮಕ್ಕಳು, ಅಭಿಮನ್ಯು ಮತ್ತು ಮಹಾರಥನಾದ ಸಾತ್ಯಕಿಯು ಇದ್ದರು.

ಪಿಶಾಚಾ ದರದಾಶ್ಚೈವ ಪುಂಡ್ರಾಃ ಕುಂಡೀವಿಷೈಃ ಸಹ ।
ಮಡಕಾ ಕಡಕಾಶ್ಚೈವ ತಂಗಣಾಃ ಪರತಂಗಣಾಃ ॥೪೯॥

ಬಾಹ್ಲಿಕಾಸ್ತಿತ್ತಿರಾಶ್ಚೈವ ಚೋಲಾಃ ಪಾಂಡ್ಯಾಶ್ಚ ಭಾರತ ।
ಏತೇ ಜನಪದಾ ರಾಜನ್ ದಕ್ಷಿಣಂ ಪಕ್ಷಮಾಶ್ರಿತಾಃ ॥೫೦॥

ಪಿಶಾಚರು, ದರದರು, ಪುಂಡ್ರರು, ಕುಂಡೀವಿಷರು, ಮಡಕರು, ಕಡಕರು, ತಂಗಣರು, ಪರತಂಗಣರು, ಬಾಹ್ಲಿಕರು, ತಿತ್ತಿರರು, ಚೋಲರು, ಪಾಂಡ್ಯರು, ಎಲೈ ಭಾರತನೇ, ರಾಜನೇ, ಈ ದೇಶದವರೆಲ್ಲರೂ ಬಲಭಾಗದ ರೆಕ್ಕೆಯ ಸ್ಥಾನದಲ್ಲಿದ್ದರು.

ಅಗ್ನಿವೇಶ್ಯಾ ಜಗತ್ತುಂಡಾಃ ಪಲದಾಶಾಶ್ಚ ಭಾರತ ।
ಶಬರಾಸ್ತುಂಬುಪಾಶ್ಚೈವ ವತ್ಸಾಶ್ಚ ಸಹ ನಾಕುಲೈಃ ।
ನಕುಲಃ ಸಹದೇವಶ್ಚ ವಾಮಂ ಪಾರ್ಶ್ವಂ ಸಮಾಶ್ರಿತಾಃ ॥೫೧॥

ಎಲೈ ಭಾರತನೇ, ಅಗ್ನಿವೇಶ್ಯರು, ಜಗತ್ತುಂಡರು, ಪಲದಾಶರು, ಶಬರರು, ತುಂಬುಪರು, ವತ್ಸರು, ನಾಕುಲರು ಮತ್ತು ನಕುಲ-ಸಹದೇವರು ಪಕ್ಷಿಯ ಎಡಭಾಗದ ರೆಕ್ಕೆಯನ್ನು ಆಶ್ರಯಿಸಿದ್ದರು.

ರಥಾನಾಮಯುತಂ ಪಕ್ಷೌ ಶಿರಶ್ಚ ನಿಯುತಂ ತಥಾ ।
ಪೃಷ್ಠಮರ್ಬುದಮೇವಾಸೀತ್ ಸಹಸ್ರಾಣಿ ಚ ವಿಂಶತಿಃ ।
ಗ್ರೀವಾಯಾಂ ನಿಯುತಂ ಚಾಪಿ ಸಹಸ್ರಾಣಿ ಚ ಸಪ್ತತಿಃ ॥೫೨॥

ಪಕ್ಷಿಯ ರೆಕ್ಕೆಗಳ ಸ್ಥಾನದಲ್ಲಿ ಹತ್ತುಸಹಸ್ರ ರಥಗಳು, ಶಿರಃಸ್ಥಾನದಲ್ಲಿ ಇಪ್ಪತ್ತು ಸಹಸ್ರ ರಥಗಳು, ಪೃಷ್ಠಭಾಗದಲ್ಲಿ ಒಂದು ಲಕ್ಷದ ಇಪ್ಪತ್ತು ಸಹಸ್ರ ರಥಗಳು, ಕತ್ತಿನ ಸ್ಥಾನದಲ್ಲಿ ಇಪ್ಪತ್ತು ಸಹಸ್ರ ಮತ್ತು ಎಪ್ಪತ್ತು ಸಹಸ್ರ ರಥಗಳು ಇದ್ದವು (ಲಕ್ಷಾಲಂಕಾರ).

ಪಕ್ಷಕೋಟಿಪ್ರಪಕ್ಷೇಷು ಪಕ್ಷಾಂತೇಷು ಚ ವಾರಣಾಃ ।
ಜಗ್ಮುಃ ಪರಿವೃತಾ ರಾಜನ್ ಚಲಂತ ಇವ ಪರ್ವತಾಃ ॥೫೩॥

ಎಲೈ ರಾಜನೇ, ಪಕ್ಷ (ರೆಕ್ಕೆ) ಗಳ ಸಂಧಿಗಳಲ್ಲಿ ಮತ್ತು ಪಕ್ಷಗಳ ಕೊನೆಯಲ್ಲಿ ಚಲಿಸುವ ಪರ್ವತಗಳಂತೆ ಗಜಗಳು ಹೊರಟವು.

ಜಘನಂ ಪಾಲಯಾಮಾಸ ವಿರಾಟಃ ಸಹ ಕೇಕಯೈಃ ।
ಕಾಶಿರಾಜಶ್ಚ ಶೈಬ್ಯಶ್ಚ ರಥಾನಾಮಯುತೈಸ್ತ್ರಿಭಿಃ ॥೫೪॥

ವಿರಾಟನು ಕೇಕಯರ ಜೊತೆಯಲ್ಲಿ ಪಕ್ಷಿಯ ಕಟ ಪ್ರದೇಶವನ್ನು ರಕ್ಷಿಸಿದನು. ಕಾಶಿರಾಜನೂ, ಶೈಬ್ಯನೂ ಮೂವತ್ತು ಸಾವಿರ ರಥಗಳಿಂದ ಕಟ ಪ್ರದೇಶವನ್ನು ರಕ್ಷಿಸಿದರು.

ಏವಮೇತಂ ಮಹಾವ್ಯೂಹಂ ವ್ಯೂಹ್ಯ ಭಾರತ ಪಾಂಡವಾಃ ।
ಸೂರ್ಯೋದಯನಮಿಚ್ಛಂತಃ ಸ್ಥಿತಾ ಯುದ್ಧಾಯ ದಂಸಿತಾಃ ॥೫೫॥

ಎಲೈ ಭಾರತನೇ, ಹೀಗೆ ಪಾಂಡವರು ಮಹಾವ್ಯೂಹವನ್ನು ರಚಿಸಿ ಯುದ್ಧಕ್ಕೆ ಸನ್ನದ್ಧರಾಗಿ ಸೂರ್ಯೋದಯವನ್ನು ನಿರೀಕ್ಷಿಸುತ್ತಾ ನಿಂತರು.

ತೇಷಾಮಾದಿತ್ಯವರ್ಣಾನಿ ವಿಮಲಾನಿ ಮಹಾಂತಿ ಚ ।
ಶ್ವೇತಚ್ಛತ್ರಾಣ್ಯಶೋಭಂತ ವಾರಣೇಷು ರಥೇಷು ಚ ॥೫೬॥

ಗಜಗಳಲ್ಲಿಯೂ ಮತ್ತು ರಥಗಳಲ್ಲಿಯೂ ಅವರ ಸೂರ್ಯನ ವರ್ಣದಿಂದ ಕೂಡಿದ ಶುದ್ಧವಾದ ಮತ್ತು ದೊಡ್ಡದಾದ ಶ್ವೇತಚ್ಛತ್ರಗಳು ಶೋಭಿಸಿದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಷಟ್‌ಚತ್ವಾರಿಂಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೇಳನೆಯ ಅಧ್ಯಾಯ

ದ್ವಿತೀಯ ದಿವಸದ ಯುದ್ಧಕ್ಕಾಗಿ ಕೌರವರ ಸಮಾಗಮ.

ಸಂಜಯಃ

ಕ್ರೌಂಚಂ ತತೋ ಮಹಾವ್ಯೂಹಮಭೇದ್ಯಂ ತನಯಸ್ತವ ।
ವ್ಯೂಢಂ ದೃಷ್ಟ್ವಾ ಮಹಾಘೋರಂ ಪಾರ್ಥೇನಾಮಿತತೇಜಸಾ ॥೧॥

ಆಚಾರ್ಯಮುಪಸಂಗಮ್ಯ ಕೃಪಂ ಶಲ್ಯಂ ಚ ಮಾರಿಷ ।
ಸೌಮದತ್ತಿಂ ವಿಕರ್ಣಂ ಚ ಅಶ್ವತ್ಥಾಮಾನಮೇವ ಚ ॥೨॥

ದುಃಶಾಸನಾದೀನ್ ಭ್ರಾತೃಂಶ್ಚ ಸ ಸರ್ವಾನೇವ ಭಾರತ ।
ಅನ್ಯಾಂಶ್ಚ ಸುಬಹೂನ್ ಶೂರಾನ್ ಯುದ್ಧಾಯ ಸಮುಪಾಗತಾನ್॥೩॥

ಪ್ರಾಹೇದಂ ವಚನಂ ಕಾಲೇ ಹರ್ಷಯನ್ ತನಯಸ್ತವ ।

ಸಂಜಯ– ಎಲೈ ಪೂಜ್ಯನೇ, ನಿನ್ನ ಪುತ್ರನು ಅಮಿತಪರಾಕ್ರಮಿಯಾದ ಯುಧಿಷ್ಠಿರನು ರಚಿಸಿದ ಅಭೇದ್ಯವೂ, ಮಹಾಘೋರವೂ ಆದ ಕ್ರೌಂಚವ್ಯೂಹವನ್ನು ನೋಡಿ ದ್ರೋಣಾಚಾರ್ಯರನ್ನೂ, ಕೃಪಾಚಾರ್ಯನನ್ನೂ, ಸೌಮದತ್ತಿ, ವಿಕರ್ಣ, ಅಶ್ವತ್ಥಾಮರು, ದುಶ್ಶಾಸನಾದಿ ಸಹೋದರರನ್ನೂ, ಯುದ್ಧಕ್ಕಾಗಿ ಬಂದಿದ್ದ ಇನ್ನೂ ಉಳಿದ ಅನೇಕ ಶೂರರನ್ನೂ ಸಮೀಪಿಸಿ, ಅವರನ್ನು ಸಂತೋಷಪಡಿಸುತ್ತಾ ಯೋಗ್ಯವಾದ ಕಾಲದಲ್ಲಿ ಈ ಮಾತನ್ನು ಆಡಿದನು.

ನಾನಾಶಸ್ತ್ರಪ್ರಹರಣಾಃ ಸರ್ವೇ ಶಸ್ತ್ರಾಸ್ತ್ರವೇದಿನಃ ॥೪॥

ಏಕೈಕಶಃ ಸಮರ್ಥಾ ಹಿ ಯೂಯಂ ಸರ್ವೇ ಮಹಾರಥಾಃ ।
ಪಾಂಡುಪುತ್ರಾನ್ ರಣೇ ಹಂತುಂ ಸೈನ್ಯಾನ್ ಕಿಮು ಸಂಹತಾಃ ॥೫॥

ಮಹಾರಥರಾದ ನೀವೆಲ್ಲರೂ ಶಸ್ತ್ರಾಸ್ತ್ರಗಳನ್ನು ತಿಳಿದವರು. ನಾನಾ ವಿಧವಾದ ಶಸ್ತ್ರಗಳನ್ನು ಹೊಂದಿರುವವರು. ನಿಮ್ಮಲ್ಲಿ ಒಬ್ಬೊಬ್ಬರೂ ಸೈನ್ಯಸಹಿತರಾದ ಪಾಂಡವರನ್ನು ಯುದ್ಧದಲ್ಲಿ ಕೊಲ್ಲಲು ಸಮರ್ಥರಾಗಿದ್ದೀರಿ. ಇನ್ನು ಎಲ್ಲರೂ ಒಟ್ಟುಗೂಡಿದ ಮೇಲೆ ಹೇಳುವುದೇನಿದೆ?

ಪಕ್ಷಿಯ ರೆಕ್ಕೆಗಳ ಸ್ಥಾನದಲ್ಲಿ ಹತ್ತುಸಹಸ್ರ ರಥಗಳು, ಶಿರಃಸ್ಥಾನದಲ್ಲಿ ಇಪ್ಪತ್ತು ಸಹಸ್ರ ರಥಗಳು, ಪೃಷ್ಠಭಾಗದಲ್ಲಿ ಒಂದು ಲಕ್ಷದ ಇಪ್ಪತ್ತು ಸಹಸ್ರ ರಥಗಳು, ಕತ್ತಿನ ಸ್ಥಾನದಲ್ಲಿ ಇಪ್ಪತ್ತು ಸಹಸ್ರ ಮತ್ತು ಎಪ್ಪತ್ತು ಸಹಸ್ರ ರಥಗಳು ಇದ್ದವು (ಲಕ್ಷಾಲಂಕಾರ).

ಪಕ್ಷಕೋಟಿಪ್ರಪಕ್ಷೇಷು ಪಕ್ಷಾಂತೇಷು ಚ ವಾರಣಾಃ ।
ಜಗ್ಮುಃ ಪರಿವೃತಾ ರಾಜನ್ ಚಲಂತ ಇವ ಪರ್ವತಾಃ ॥೫೩॥

ಎಲೈ ರಾಜನೇ, ಪಕ್ಷ (ರೆಕ್ಕೆ) ಗಳ ಸಂಧಿಗಳಲ್ಲಿ ಮತ್ತು ಪಕ್ಷಗಳ ಕೊನೆಯಲ್ಲಿ ಚಲಿಸುವ ಪರ್ವತಗಳಂತೆ ಗಜಗಳು ಹೊರಟವು.

ಜಘನಂ ಪಾಲಯಾಮಾಸ ವಿರಾಟಃ ಸಹ ಕೇಕಯೈಃ ।
ಕಾಶಿರಾಜಶ್ಚ ಶೈಬ್ಯಶ್ಚ ರಥಾನಾಮಯುತೈಸ್ತ್ರಿಭಿಃ ॥೫೪॥

ವಿರಾಟನು ಕೇಕಯರ ಜೊತೆಯಲ್ಲಿ ಪಕ್ಷಿಯ ಕಟಿ ಪ್ರದೇಶವನ್ನು ರಕ್ಷಿಸಿದನು. ಕಾಶಿರಾಜನೂ, ಶೈಬ್ಯನೂ ಮೂವತ್ತು ಸಾವಿರ ರಥಗಳಿಂದ ಕಟಿ ಪ್ರದೇಶವನ್ನು ರಕ್ಷಿಸಿದರು.

ಏವಮೇತಂ ಮಹಾವ್ಯೂಹಂ ವ್ಯೂಹ್ಯ ಭಾರತ ಪಾಂಡವಾಃ ।
ಸೂರ್ಯೋದಯನಮಿಚ್ಛಂತಃ ಸ್ಥಿತಾ ಯುದ್ಧಾಯ ದಂಸಿತಾಃ ॥೫೫॥

ಎಲೈ ಭಾರತನೇ, ಹೀಗೆ ಪಾಂಡವರು ಮಹಾವ್ಯೂಹವನ್ನು ರಚಿಸಿ ಯುದ್ಧಕ್ಕೆ ಸನ್ನದ್ಧರಾಗಿ ಸೂರ್ಯೋದಯವನ್ನು ನಿರೀಕ್ಷಿಸುತ್ತಾ ನಿಂತರು.

ತೇಷಾಮಾದಿತ್ಯವರ್ಣಾನಿ ವಿಮಲಾನಿ ಮಹಾಂತಿ ಚ ।
ಶ್ವೇತಚ್ಛತ್ರಾಣ್ಯಶೋಭಂತ ವಾರಣೇಷು ರಥೇಷು ಚ ॥೫೬॥

ಗಜಗಳಲ್ಲಿಯೂ ಮತ್ತು ರಥಗಳಲ್ಲಿಯೂ ಅವರ ಸೂರ್ಯನ ವರ್ಣದಿಂದ ಕೂಡಿದ ಶುದ್ಧವಾದ ಮತ್ತು ದೊಡ್ಡದಾದ ಶ್ವೇತಚ್ಛತ್ರಗಳು ಶೋಭಿಸಿದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಷಟ್‌ಚತ್ವಾರಿಂಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೇಳನೆಯ ಅಧ್ಯಾಯ

ದ್ವಿತೀಯ ದಿವಸದ ಯುದ್ಧಕ್ಕಾಗಿ ಕೌರವರ ಸಮಾಗಮ.

ಸಂಜಯಃ

ಕ್ರೌಂಚಂ ತತೋ ಮಹಾವ್ಯೂಹಮಭೇದ್ಯಂ ತನಯಸ್ತವ ।
ವ್ಯೂಢಂ ದೃಷ್ಟ್ವಾ ಮಹಾಘೋರಂ ಪಾರ್ಥೇನಾಮಿತತೇಜಸಾ ॥೧॥

ಆಚಾರ್ಯಮುಪಸಂಗಮ್ಯ ಕೃಪಂ ಶಲ್ಯಂ ಚ ಮಾರಿಷ ।
ಸೌಮದತ್ತಿಂ ವಿಕರ್ಣಂ ಚ ಅಶ್ವತ್ಥಾಮಾನಮೇವ ಚ ॥೨॥

ದುಃಶಾಸನಾದೀನ್ ಭ್ರಾತ್ಸಂಶ್ಚ ಸ ಸರ್ವಾನೇವ ಭಾರತ ।
ಅನ್ಯಾಂಶ್ಚ ಸುಬಹೂನ್ ಶೂರಾನ್ ಯುದ್ಧಾಯ ಸಮುಪಾಗತಾನ್॥೩॥

ಪ್ರಾಹೇದಂ ವಚನಂ ಕಾಲೇ ಹರ್ಷಯನ್ ತನಯಸ್ತವ ।

ಸಂಜಯ– ಎಲೈ ಪೂಜ್ಯನೇ, ನಿನ್ನ ಪುತ್ರನು ಅಮಿತಪರಾಕ್ರಮಿಯಾದ ಯುಧಿಷ್ಠಿರನು ರಚಿಸಿದ ಅಭೇದ್ಯವೂ, ಮಹಾಘೋರವೂ ಆದ ಕ್ರೌಂಚವ್ಯೂಹವನ್ನು ನೋಡಿ ದ್ರೋಣಾಚಾರ್ಯರನ್ನೂ, ಕೃಪಾಚಾರ್ಯನನ್ನೂ, ಸೌಮದತ್ತಿ, ವಿಕರ್ಣ, ಅಶ್ವತ್ಥಾಮರು, ದುಶ್ಶಾಸನಾದಿ ಸಹೋದರರನ್ನೂ, ಯುದ್ಧಕ್ಕಾಗಿ ಬಂದಿದ್ದ ಇನ್ನೂ ಉಳಿದ ಅನೇಕ ಶೂರರನ್ನೂ ಸಮೀಪಿಸಿ, ಅವರನ್ನು ಸಂತೋಷಪಡಿಸುತ್ತಾ ಯೋಗ್ಯವಾದ ಕಾಲದಲ್ಲಿ ಈ ಮಾತನ್ನು ಆಡಿದನು.

ನಾನಾಶಸ್ತ್ರಪ್ರಹರಣಾಃ ಸರ್ವೇ ಶಸ್ತ್ರಾಸ್ತ್ರವೇದಿನಃ ॥೪॥

ವಿಕೈಕಶಃ ಸಮರ್ಥಾ ಹಿ ಯೂಯಂ ಸರ್ವೇ ಮಹಾರಥಾಃ ।
ಪಾಂಡುಪುತ್ರಾನ್ ರಣೇ ಹಂತುಂ ಸಸೈನ್ಯಾನ್ ಕಿಮು ಸಂಹತಾಃ ॥೫॥

ಮಹಾರಥರಾದ ನೀವೆಲ್ಲರೂ ಶಸ್ತ್ರಾಸ್ತ್ರಗಳನ್ನು ತಿಳಿದವರು. ನಾನಾ ವಿಧವಾದ ಶಸ್ತ್ರಗಳನ್ನು ಹೊಂದಿರುವವರು. ನಿಮ್ಮಲ್ಲಿ ಒಬ್ಬೊಬ್ಬರೂ ಸೈನ್ಯಸಹಿತರಾದ ಪಾಂಡವರನ್ನು ಯುದ್ಧದಲ್ಲಿ ಕೊಲ್ಲಲು ಸಮರ್ಥರಾಗಿದ್ದೀರಿ. ಇನ್ನು ಎಲ್ಲರೂ ಒಟ್ಟುಗೂಡಿದ ಮೇಲೆ ಹೇಳುವುದೇನಿದೆ?

ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಮ್ ।
ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಪಾರ್ಥಿವಸತ್ತಮಾಃ ॥೬॥

ಎಲೈ ರಾಜಶ್ರೇಷ್ಠರೇ, ಭೀಷ್ಮರಿಂದ ರಕ್ಷಿತವಾದ ಈ ನಮ್ಮ ಸೈನ್ಯವು ಅಸಮರ್ಥವೆನಿಸುತ್ತದೆ. ಈ ಪಾಂಡವರ ಸೈನ್ಯವು ಸಮರ್ಥವಾಗಿದೆ.

ಸಂಸ್ಥಾನಾಃ ಶೂರಸೇನಾಶ್ಚ ವೇಣಿಕಾಃ ಕುಕುರಾಸ್ತಥಾ ।
ಆರೇವತಾಸ್ತ್ರಿಗರ್ತಾಶ್ಚ ಮದ್ರಕಾ ಯವನಾಸ್ತಥಾ ॥೭॥

ಶತ್ರುಂಜಯೇನ ಸಹಿತಾಸ್ತಥಾ ದುಃಶಾಸನೇನ ಚ ।
ವಿಕರ್ಣೇನ ಚ ವೀರೇಣ ತಥಾ ನಂದೋಪನಂದಕೈಃ ॥೮॥

ಚಿತ್ರಸೇನೇನ ಸಹಿತಾಃ ಸಹಿತಾಃ ಪಾಣಿಭದ್ರಕೈಃ ।
ಭೀಷ್ಮಮೇವಾಭಿರಕ್ಷಂತು ಸಹ ಸೈನ್ಯಪುರಸ್ಕೃತಾಃ ॥೯॥

ಸಂಸ್ಥಾನರೂ, ಶೂರಸೇನರೂ, ವೇಣಿಕರೂ, ಕುಕುರರೂ, ಆರೇವಕರೂ, ತ್ರಿಗರ್ತರೂ, ಮದ್ರಕರೂ, ಯವನರೂ ಇವರು ಶತ್ರುಗಳನ್ನು ಗೆಲ್ಲುವ ದುಶ್ಶಾಸನನಿಂದಲೂ, ವೀರನಾದ ವಿಕರ್ಣನಿಂದಲೂ ಹಾಗೆಯೇ ನಂದೋಪನಂದರಿಂದಲೂ, ಚಿತ್ರಸೇನನಿಂದಲೂ, ಪಾಣಿಭದ್ರಕರಿಂದಲೂ ತಮ್ಮ ತಮ್ಮ ಸೈನ್ಯಗಳಿಂದಲೂ ಸಹಿತರಾಗಿ ಭೀಷ್ಮರನ್ನೇ ರಕ್ಷಿಸಿ.

ತತೋ ದ್ರೋಣಶ್ಚ ಭೀಷ್ಮಶ್ಚ ತವ ಪುತ್ರಶ್ಚ ಮಾರಿಷ ।
ಅವ್ಯೂಹಂತ ಮಹಾವ್ಯೂಹಂ ಪಾಂಡೂನಾಂ ಪ್ರತಿಬಾಧನೇ ॥೧೦॥

ಎಲೈ ಪೂಜ್ಯನೇ, ಅನಂತರ ದ್ರೋಣರು, ಭೀಷ್ಮರು ಮತ್ತು ನಿನ್ನ ಪುತ್ರನು ಸೇರಿ ಪಾಂಡವರ ವ್ಯೂಹವನ್ನು ಪ್ರತಿಯಾಗಿ ಬಾಧಿಸಲು ಇನ್ನೊಂದು ಮಹಾವ್ಯೂಹವನ್ನು ರಚಿಸಿದರು.

ಭೀಷ್ಮಃ ಸೈನ್ಯೇನ ಮಹತಾ ಸಮಂತಾತ್ ಪರಿವಾರಿತಃ ।
ಯಯೌ ಪ್ರಕರ್ಷನ್ ಮಹತೀಂ ವಾಹಿನೀಂ ಸುರರಾಡಿವ ॥೧೧॥

ಭೀಷ್ಮರು ದೊಡ್ಡ ಸೈನ್ಯದಿಂದ ಪರಿವೃತರಾಗಿ ದೇವೇಂದ್ರನಂತೆ ಆ ದೊಡ್ಡ ಸೈನ್ಯವನ್ನು ನಡೆಸುತ್ತಾ ಹೊರಟರು.

ತಮನ್ವಯಾನ್ಮಹೇಷ್ವಾಸೋ ಭಾರದ್ವಾಜಃ ಪ್ರತಾಪವಾನ್ ।
ಕುಂತಲೈಶ್ಚ ದಶಾರ್ಣೈಶ್ಚ ಮಾಗಧೈಶ್ಚ ವಿಶಾಂಪತೇ ॥೧೨॥

ವಿದರ್ಭೈರ್ಮೇಕಲೈಶ್ಚೈವ ಕರ್ಣಪ್ರಾವರಣೈರಪಿ ।
ಸಹಿತಾಃ ಸರ್ವಸೈನ್ಯೇನ ಭೀಷ್ಮಮಾಹವಶೋಭಿನಮ್ ॥೧೩॥

ಗಾಂಧಾರಾಃ ಸಿಂಧುಸೌವೀರಾಃ ಶಿಬಯೋಽಥ ವಸಾತಯಃ ।
ಶಕುನಿಶ್ಚ ಸ್ವಸೈನ್ಯೇನ ಭಾರದ್ವಾಜಮಪಾಲಯತ್ ॥೧೪॥

ಎಲೈ ರಾಜನೇ, ಮಹಾಧನುರ್ಧಾರಿಯಾದ, ಪ್ರತಾಪಶಾಲಿಯಾದ ದ್ರೋಣರು ಕುಂತಲರಿಂದಲೂ, ದಶಾರ್ಣರಿಂದಲೂ, ಮಾಗಧರಿಂದಲೂ, ವಿದರ್ಭರಿಂದಲೂ, ಮೇಕಲರಿಂದಲೂ, ಕರ್ಣಪ್ರಾವರಣರಿಂದಲೂ ಸಹಿತರಾಗಿ ಯುದ್ಧದಲ್ಲಿ ಶೋಭಿಸುವ ಭೀಷ್ಮರನ್ನು ಹಿಂಬಾಲಿಸಿದರು. ಗಾಂಧಾರರು, ಸಿಂಧುಸೌವೀರರೂ, ಶಿಬಿಗಳೂ, ವಸಾತಿಗಳೂ ಮತ್ತು ತನ್ನ ಸೈನ್ಯದಿಂದ ಕೂಡಿದ ಶಕುನಿಯೂ ದ್ರೋಣರನ್ನು ರಕ್ಷಿಸಿದರು.

ತತೋ ದುರ್ಯೋಧನೋ ರಾಜಾ ಸಹಿತಃ ಸರ್ವಸೋದರೈಃ ।
ಅಶ್ವತ್ಥಕೈರ್ವಿಕರ್ಣೈಶ್ಚ ತಥಾ ಶರ್ಮಿಲಕೋಸಲೈಃ ॥೧೫॥

ದರದೈಶ್ಚೂಚುಪೈಶ್ಚೈವ ತಥಾ ಕ್ಷುದ್ರಕಮಾಲವೈಃ ।
ಅಭ್ಯರಕ್ಷತ ಸಂಹೃಷ್ಟಃ ಸೌಬಲೇಯಸ್ಯ ವಾಹಿನೀಮ್ ॥೧೬॥

ಆಗ ರಾಜನಾದ ದುರ್ಯೋಧನನು ಎಲ್ಲ ಸಹೋದರರಿಂದಲೂ, ಅಶ್ವತ್ಥಕರಿಂದಲೂ, ವಿಕರ್ಣರಿಂದಲೂ, ಶರ್ಮಿಲರಿಂದಲೂ, ಕೋಸಲರಿಂದಲೂ, ದರದರಿಂದಲೂ, ಚೂಚುಪರಿಂದಲೂ, ಕ್ಷುದ್ರಕಮಾಲವರಿಂದಲೂ ಸಹಿತನಾಗಿ ಸಂತೋಷದಿಂದ ಶಕುನಿಯ ಸೈನ್ಯವನ್ನು ರಕ್ಷಿಸಿದನು.

ಭೂರಿಶ್ರವಾಃ ಶಲಃ ಶಲ್ಯೋ ಭಗದತ್ತಶ್ಚ ಮಾರಿಷ ।
ವಿಂದಾನುವಿಂದಾವಾವಂತ್ಯೌ ವಾಮಂ ಪಾರ್ಶ್ವಮಪಾಲಯನ್ ॥೧೭॥

ಎಲೈ ಮಾನ್ಯನೇ, ಭೂರಿಶ್ರವ, ಶಲ, ಶಲ್ಯ , ಭಗದತ್ತ ಮತ್ತು ಅವಂತಿ ದೇಶದ ವಿಂದಾನುವಿಂದರು ಸೈನ್ಯದ ಎಡಪಾರ್ಶ್ವವನ್ನು ರಕ್ಷಿಸಿದರು.

ಸೌಮದತ್ತಿಃ ಸುಶರ್ಮಾ ಚ ಕಾಂಬೋಜಶ್ಚ ಸುದಕ್ಷಿಣಃ ।
ಶತಾಯುಶ್ಚ ಶ್ರುತಾಯುಶ್ಚ ದಕ್ಷಿಣಂ ಪಾರ್ಶ್ವಮಾಸ್ಥಿತಾಃ ॥೧೮॥

ಸೌಮದತ್ತಿ (ಭೂರಿಶ್ರವ), ಸುಶರ್ಮಾ, ಕಾಂಬೋಜ ದೇಶದ ಸುದಕ್ಷಿಣ, ಶತಾಯು, ಶ್ರುತಾಯು ಇವರು ಸೈನ್ಯದ ದಕ್ಷಿಣ ಭಾಗದಲ್ಲಿ ಅವಸ್ಥಿತರಾದರು.

ಅಶ್ವತ್ಥಾಮಾ ಕೃಪಶ್ಚೈವ ಕೃತವರ್ಮಾ ಚ ಸಾತ್ವತಃ ।
ಮಹತ್ಯಾ ಸೇನಯಾ ಸಾರ್ಧಂ ಸೇನಾಪೃಷ್ಠೇ ವ್ಯವಸ್ಥಿತಾಃ ॥೧೯॥

ಅಶ್ವತ್ಥಾಮರು, ಕೃಪರು, ಸಾತ್ವತ ಕುಲದ ಕೃತವರ್ಮ ಇವರು ದೊಡ್ಡ ಸೈನ್ಯದ ಜೊತೆಯಲ್ಲಿ ಸೈನ್ಯದ ಹಿಂಭಾಗದಲ್ಲಿ ಅವಸ್ಥಿತರಾದರು.

ಪೃಷ್ಠಗೋಪಾಸ್ತು ತಸ್ಯಾಸನ್ನಾನಾದೇಶ್ಯಾ ಜನೇಶ್ವರಾಃ ।
ಕೇತುಮಾನ್ ವಸುದಾನಶ್ಚ ಪುತ್ರಃ ಕಾಶ್ಯಸ್ಯ ಚಾಭಿಭೂಃ ॥೨೦॥

ಆ ಸೈನ್ಯಕ್ಕೆ ಕೇತುಮಾನ್, ವಸುದಾನ, ಶತ್ರುಗಳನ್ನು ಸೋಲಿಸುವ ಕಾಶಿರಾಜನ ಪುತ್ರ, ಇನ್ನೂ ಅನೇಕ ದೇಶದ ರಾಜರು ಹಿಂಭಾಗದಿಂದ ರಕ್ಷಕರಾದರು.

ತತಸ್ತೇ ತಾವಕಾಃ ಸರ್ವೇ ಹೃಷ್ಟಾ ಯುದ್ಧಾಯ ಭಾರತ ।
ದಧ್ಮುಃ ಶಂಖಾನ್ ಮುದಾ ಯುಕ್ತಾಃ ಸಿಂಹನಾದಾಂಶ್ಚ ನಾದಯನ್ ॥

ಎಲೈ ಭಾರತನೇ, ಅನಂತರ ನಿನ್ನವರೆಲ್ಲರೂ ಸಂತೋಷಗೊಂಡು ಯುದ್ಧಕ್ಕಾಗಿ ತಮ್ಮ ಶಂಖಗಳನ್ನು ಊದಿ ಸಿಂಹನಾದಗಳನ್ನು ಮಾಡಿದರು.

ತೇಷಾಂ ಶ್ರುತ್ವಾ ತು ಹೃಷ್ಟಾನಾಂ ಕುರುವೃದ್ಧಃ ಪಿತಾಮಹಃ ।
ಸಿಂಹನಾದಂ ವಿನದ್ಯೋಚ್ಚೈಃ ಶಂಖಂ ದಧ್ಮೌ ಪ್ರತಾಪವಾನ್ ॥೨೨॥

ಕುರುವೃದ್ಧರೂ, ಪಿತಾಮಹರೂ ಆದ ಭೀಷ್ಮರು ಸಂತೋಷಗೊಂಡ ಅವರ ಶಂಖಧ್ವನಿಗಳನ್ನು ಕೇಳಿ ತಾವೂ ಸಿಂಹನಾದವನ್ನು ಮಾಡಿ ಪ್ರತಾಪಶಾಲಿಗಳಾದ ಅವರು ತಮ್ಮ ಶಂಖವನ್ನು ಊದಿದರು.

ತತಃ ಶಂಖಾಶ್ಚ ಭೇರ್ಯಶ್ಚ ಪೇಶ್ಯಶ್ಚ ವಿವಿಧಾಃ ಪರೈಃ ।
ಆನಕಾಶ್ಚಾಭ್ಯಹನ್ಯಂತ ಸ ಶಬ್ದಸ್ತುಮುಲೋಽಭವತ್ ॥೨೩॥

ಅನಂತರ ಪಾಂಡವರ ಪಕ್ಷದಲ್ಲಿ ಶಂಖಗಳು, ಭೇರಿಗಳು, ವಿವಿಧವಾದ ಪೇಶಿಗಳು, ಆನಕಗಳು ಊದಲ್ಪಟ್ಟವು ಮತ್ತು ಬಾರಿಸಲ್ಪಟ್ಟವು. ಆ ಶಬ್ದವು ಬಹಳ ತೀವ್ರವಾಗಿದ್ದಿತು.

ತತಃ ಶ್ವೇತೈರ್ಹಯೈರ್ಯುಕ್ತೇ ಮಹತಿ ಸ್ಯಂದನೇ ಸ್ಥಿತೌ ।
ಪ್ರದಧ್ಮತುಃ ಶಂಖವರೌ ಹೇಮರತ್ನಪರಿಷ್ಕೃತೌ ॥೨೪॥

ಅನಂತರ ಶ್ವೇತಾಶ್ವಗಳನ್ನು ಹೂಡಿದ ದೊಡ್ಡ ರಥದಲ್ಲಿ ಕುಳಿತು ಕೃಷ್ಣಾರ್ಜುನರು ಹೇಮರತ್ನಾಲಂಕೃತವಾದ ತಮ್ಮ ಶ್ರೇಷ್ಠ ಶಂಖಗಳನ್ನು ಊದಿದರು.

ಪಾಂಚಜನ್ಯಂ ಹೃಷೀಕೇಶೋ ದೇವದತ್ತಂ ಧನಂಜಯಃ ।
ಪೌಂಡ್ರಂ ದಧ್ಮೌ ಮಹಾಶಂಖಂ ಭೀಮಕರ್ಮಾ ವೃಕೋದರಃ ॥೨೫॥

ಅನಂತವಿಜಯಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ನಕುಲಃ ಸಹದೇವಶ್ಚ ಸುಘೋಷಮಣಿಪುಷ್ಪಕೌ ॥೨೬॥

ಹೃಷೀಕೇಶನು ಪಾಂಚಜನ್ಯವನ್ನೂ, ಧನಂಜಯನು ದೇವದತ್ತವನ್ನೂ, ಭಯಂಕರ ಕಾರ್ಯವನ್ನು ಮಾಡುವ ಭೀಮಸೇನನು ಪೌಂಡ್ರವೆಂಬ ಮಹಾಶಂಖವನ್ನೂ ಊದಿದರು. ಕುಂತೀಪುತ್ರನಾದ ಯುಧಿಷ್ಠಿರರಾಜನು ಅನಂತವಿಜಯವೆಂಬ ಶಂಖವನ್ನೂ, ನಕುಲ-ಸಹದೇವರು ಕ್ರಮವಾಗಿ ಸುಘೋಷ ಮತ್ತು ಮಣಿಪುಷ್ಪಕ ಎಂಬ ಶಂಖಗಳನ್ನೂ ಊದಿದರು.

ಕಾಶಿರಾಜಶ್ಚ ಶೈಬ್ಯಶ್ಚ ಶಿಖಂಡೀ ಚ ಮಹಾರಥಃ ।
ಧೃಷ್ಟದ್ಯುಮ್ನೋ ವಿರಾಟಶ್ಚ ಸಾತ್ಯಕಿಶ್ಚ ಮಹಾಯಶಾಃ ॥೨೭॥

ಪಾಂಚಾಲ್ಯಶ್ಚ ಮಹೇಷ್ವಾಸೋ ದ್ರೌಪದ್ಯಾಃ ಪಂಚ ಚಾತ್ಮಜಾಃ ।
ಸರ್ವೇ ದಧ್ಮುರ್ಮಹಾಶಂಖಾನ್ ಸಿಂಹನಾದಾಂಶ್ಚ ನೇದಿರೇ ॥೨೮॥

ಕಾಶಿರಾಜ, ಶೈಬ್ಯ, ಮಹಾರಥನಾದ ಶಿಖಂಡಿ, ಧೃಷ್ಟದ್ಯುಮ್ನ, ವಿರಾಟ, ಕೀರ್ತಿವಂತನಾದ ಸಾತ್ಯಕಿ, ಮಹಾಧನುರ್ಧಾರಿಯಾದ ದ್ರುಪದ, ದ್ರೌಪದಿಯ ಐವರು ಮಕ್ಕಳು ಎಲ್ಲರೂ ತಮ್ಮ ದೊಡ್ಡ ಶಂಖಗಳನ್ನು ಊದಿ ಸಿಂಹನಾದಗಳನ್ನು ಮಾಡಿದರು.

ಸ ಘೋಷಃ ಸುಮಹಾಂಸ್ತತ್ರ ವೀರೈಸ್ತೈಃ ಸಮುದೀರಿತಃ ।
ನಭಶ್ಚ ಪೃಥಿವೀಂ ಚೈವ ತುಮುಲೋ ವ್ಯನುನಾದಯನ್ ॥೨೯॥

ಆ ವೀರರು ಉಂಟುಮಾಡಿದ ಆ ತೀವ್ರವಾದ ಘೋಷವು ಭೂಮಿ ಮತ್ತು ಆಕಾಶದಲ್ಲಿ ಪ್ರತಿಧ್ವನಿಸಿತು.

ಏವಮೇತೇ ಮಹಾರಾಜ ಪ್ರಹೃಷ್ಟಾಃ ಕುರುಪಾಂಡವಾಃ ।
ಪುನರ್ಯುದ್ಧಾಯ ಸಂಜಗ್ಮುಸ್ತಾಪಯಾನಾಃ ಪರಸ್ಪರಮ್ ॥೩೦॥

ಎಲೈ ಮಹಾರಾಜನೇ, ಹೀಗೆ ಈ ಕುರು-ಪಾಂಡವರು ಸಂತೋಷದಿಂದ ಒಬ್ಬರನ್ನೊಬ್ಬರು ಸಂತಾಪಗೊಳಿಸುತ್ತಾ, ಪುನಃ ಯುದ್ಧಕ್ಕಾಗಿ ಸೇರಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಸಪ್ತಚತ್ವಾರಿಂಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೆಂಟನೆಯ ಅಧ್ಯಾಯ

ದ್ವಿತೀಯದಿವಸದ ಯುದ್ಧ. ಭೀಷ್ಮಾರ್ಜುನರ ಪರಾಕ್ರಮ.

ಧೃತರಾಷ್ಟ್ರಃ

ಏವಂ ವ್ಯೂಢೇಷ್ವನೀಕೇಷು ಮಾಮಕೇಷ್ವಿತರೇಷು ಚ ।
ಕಥಂ ಪ್ರಹರತಾಂ ಶ್ರೇಷ್ಠಾಃ ಸಂಪ್ರಹಾರಂ ಪ್ರಚಕ್ರಿರೇ ॥೧॥

ಧೃತರಾಷ್ಟ್ರ- ನನ್ನವರು ಮತ್ತು ಇತರರು ಹೀಗೆ ಸೈನ್ಯಗಳನ್ನು ವ್ಯೂಹವನ್ನು ಮಾಡಿದ ಮೇಲೆ ಯುದ್ಧ ಮಾಡುವವರಲ್ಲಿ ಶ್ರೇಷ್ಠರಾದ ಯೋಧರು ಹೇಗೆ ಯುದ್ಧವನ್ನು ಮಾಡಿದರು?

ಸಂಜಯಃ

ಸಮಂ ವ್ಯೂಢೇಷ್ವನೀಕೇಷು ಸಂನದ್ಧಾ ರುಚಿರಧ್ವಜಾಃ ।
ಅಪಾರಮಿವ ಸಂದೃಶ್ಯ ಸಾಗರಪ್ರತಿಮಂ ಬಲಮ್ ॥೨॥

ತೇಷಾಂ ಮಧ್ಯೇ ಸ್ಥಿತೋ ರಾಜಾ ಪುತ್ರೋ ದುರ್ಯೋಧನಸ್ತವ ।
ಅಬ್ರವೀತ್ ತಾವಕಾನ್ ಸರ್ವಾನ್ ಯುಧ್ಯಧ್ವಮಿತಿ ದಂಶಿತಾಃ ॥೩॥

ಸಂಜಯ– ಹೀಗೆ ಸೈನ್ಯಗಳು ಸನ್ನದ್ಧವಾಗಿ, ಮನೋಹರವಾದ ಧ್ವಜಗಳಿಂದ ಕೂಡಿ ವ್ಯೂಹಗೊಂಡ ಮೇಲೆ ಅಪಾರವಾದ ಸಾಗರದಂತಿದ್ದ ಆ ಸೈನ್ಯವನ್ನು ನೋಡಿ ನಿನ್ನ ಪುತ್ರನಾದ ದುರ್ಯೋಧನನು ಆ ಸೈನ್ಯದ ಮಧ್ಯದಲ್ಲಿ ನಿಂತು ನಿನ್ನವರೆಲ್ಲರನ್ನೂ ಕುರಿತು ಸನ್ನದ್ಧರಾಗಿ ಯುದ್ಧವನ್ನು ಮಾಡಿ ಎಂದು ಹೇಳಿದನು.

ತೇ ಮನಃ ಕ್ರೂರಮಾಸ್ಥಾಯ ಸಮಭಿತ್ಯಕ್ತಜೀವಿತಾಃ ।
ಪಾಂಡವಾನಭ್ಯವರ್ತಂತ ಸರ್ವ ಏವೋಚ್ಛ್ರಿತಧ್ವಜಾಃ ॥೪॥

ಅವರೆಲ್ಲರೂ ತಮ್ಮ ಧ್ವಜಗಳನ್ನು ಏರಿಸಿ, ಜೀವದ ಮೇಲಿನ ಆಸೆಯನ್ನು ತೊರೆದು, ಮನಸ್ಸನ್ನು ಕ್ರೂರಗೊಳಿಸಿ ಪಾಂಡವರ ಕಡೆಗೆ ಧಾವಿಸಿದರು.

ತತೋ ಯುದ್ಧಂ ಸಮಭವತ್ ತುಮುಲಂ ರೋಮಹರ್ಷಣಮ್ ।
ತಾವಕಾನಾಂ ಪರೇಷಾಂ ಚ ವ್ಯತಿಷಕ್ತರಥದ್ವಿಪಮ್ ॥೫॥

ಅನಂತರ ನಿನ್ನವರಿಗೂ ಮತ್ತು ಪರರಿಗೂ ರಥ-ಗಜಗಳು ಪರಸ್ಪರ ಮಿಶ್ರಿತವಾಗಿ ತೀವ್ರವೂ, ರೋಮಾಂಚಕಾರಿಯೂ ಆದ ಯುದ್ಧವು ನಡೆಯಿತು.

ಮುಕ್ತಾಸ್ತು ರಥಿಭಿರ್ಬಾಣಾ ರುಗ್ಮಪುಂಖಾಃ ಸುತೇಜನಾಃ ।
ಸನ್ನಿಪೇತುರಕುಂಠಾಗ್ರಾ ನಾಗೇಷು ಚ ಹಯೇಷು ಚ ॥೬॥

ರಥಿಕರು ಪ್ರಯೋಗಿಸಿದ, ಸುವರ್ಣಪುಂಖಗಳಿದ್ದ, ವೇಗಶಾಲಿಗಳಾದ ಹರಿತವಾದ ತುದಿಗಳುಳ್ಳ ಬಾಣಗಳು ಗಜಗಳಲ್ಲಿ ಮತ್ತು ಹಯಗಳಲ್ಲಿ ನಾಟಿದವು.

ತಥಾ ಪ್ರವೃತ್ತೇ ಸಂಗ್ರಾಮೇ ಧನುರುದ್ಯಮ್ಯ ದಂಶಿತಃ ।
ಅಭಿಮನ್ಯುರ್ಮಹಾಬಾಹುರ್ಭೀಷ್ಮೋ ಭೀಮಪರಾಕ್ರಮಃ ॥೭॥

ಸೌಭದ್ರೇ ಭೀಮಸೇನೇ ಚ ಶೈನೇಯೇ ಚ ಮಹಾರಥೇ ।
ಕೇಕಯೇ ಚ ವಿರಾಟೇ ಚ ಧೃಷ್ಟದ್ಯುಮ್ನೇ ಚ ಪಾರ್ಷತೇ ॥೮॥

ವಿತೇಷು ನರವೀರೇಷು ಚೇದಿಮತ್ಸ್ಯೇಷು ಚಾಧಿತಃ ।
ವವರ್ಷ ಶರವರ್ಷಾಣಿ ವೃದ್ಧಃ ಕುರುಪಿತಾಮಹಃ ॥೯॥

ಯುದ್ಧವು ಹಾಗೆ ಪ್ರವೃತ್ತವಾಗುತ್ತಿರಲು ಕವಚವನ್ನು ಧರಿಸಿ ಸನ್ನದ್ಧರಾದ, ಮಹಾಕೋಪದಿಂದ ಕೂಡಿದ, ಭಯಂಕರ ಪರಾಕ್ರಮವುಳ್ಳ ಮಹಾಬಾಹುಗಳಾದ ಭೀಷ್ಮರು ಅಭಿಮನ್ಯು, ಭೀಮಸೇನ, ಮಹಾರಥನಾದ ಸಾತ್ಯಕಿ, ಕೇಕಯ ರಾಜ, ವಿರಾಟ, ಮತ್ತು ದ್ರುಪದನ ಮಗನಾದ ಧೃಷ್ಟದ್ಯುಮ್ನ ಈ ವೀರರ ಮೇಲೆಯೂ, ಚೇದಿಗಳ ಮತ್ತು ಮತ್ಸ್ಯರ ಸೇನೆಯ ಮೇಲೆಯೂ, ವೃದ್ಧರೂ-ಕುರು ಪಿತಾಮಹರೂ ಆದ ಅವರು ಬಾಣಗಳ ಮಳೆಯನ್ನು ಕರೆದರು.

ಪ್ರಾಕಂಪತ ಮಹಾವ್ಯೂಹಸ್ತಸ್ಮಿನ್ ವೀರಸಮಾಗಮೇ ।
ಸರ್ವೇಷಾಮೇವ ಸೈನ್ಯಾನಾಮಾಸೀದ್ ವ್ಯತಿಕರೋ ಮಹಾನ್ ॥೧೦॥

ಹಾಗೆ ವೀರಸಮಾಗಮ ಉಂಟಾದಾಗ ಆ ಮಹಾವ್ಯೂಹವು ನಡುಗಿತು. ಎಲ್ಲ ಸೈನ್ಯಗಳಿಗೂ ಪರಸ್ಪರ ಮಿಶ್ರಣವುಂಟಾಯಿತು.

ಸಾದಿತಧ್ವಜನಾಗಾಶ್ಚ ಹತಪ್ರವರವಾಜಿನಃ ।
ವಿಪ್ರಯಾತರಥಾನೀಕಾಃ ಸಮಪದ್ಯಂತ ಪಾಂಡವಾಃ ॥೧೧॥

ಪಾಂಡವರ ಧ್ವಜಸಹಿತವಾದ ಗಜಗಳು ನಾಶಹೊಂದಿದವು. ಶ್ರೇಷ್ಠವಾದ ಅಶ್ವಗಳು ನಾಶ ಹೊಂದಿದವು. ರಥ ಸಮೂಹಗಳು ದೂರ ಓಡಿದವು.

ಅರ್ಜುನಸ್ತು ನರವ್ಯಾಘ್ರೋ ದೃಷ್ಟ್ವಾ ಭೀಷ್ಮಂ ಮಹಾರಥಮ್ ।
ವಾರ್ಷ್ಣೇಯಮಬ್ರವೀತ್ ಕ್ರುದ್ಧೋ ಯಾಹಿ ಯತ್ರ ಪಿತಾಮಹಃ ॥೧೨॥

ನರವ್ಯಾಘ್ರನಾದ ಅರ್ಜುನನಾದರೂ ಮಹಾರಥರಾದ ಭೀಷ್ಮರನ್ನು ನೋಡಿ ಕೋಪಗೊಂಡು ಕೃಷ್ಣನನ್ನು ಕುರಿತು, ಭೀಷ್ಮರು ಇರುವಲ್ಲಿಗೆ ರಥವನ್ನು ನಡೆಸು ಎಂದು ಹೇಳಿದನು.

ಏಷ ಭೀಷ್ಮಃ ಸುಸಂಕ್ರುದ್ಧೋ ವಾರ್ಷ್ಣೇಯ ಮಮ ವಾಹಿನೀಮ್ ।
ನಾಶಯಿಷ್ಯತಿ ಸುವ್ಯಕ್ತಂ ದುರ್ಯೋಧನಹಿತೇ ರತಃ ॥೧೩॥

ಎಲೈ ಕೃಷ್ಣನೇ, ದುರ್ಯೋಧನನ ಹಿತದಲ್ಲಿ ಆಸಕ್ತರಾದ ಈ ಭೀಷ್ಮರು ಸ್ಪಷ್ಟವಾಗಿ ನನ್ನ ಸೈನ್ಯವನ್ನು ನಾಶಗೊಳಿಸುತ್ತಿದ್ದಾರೆ.

ಏಷ ದ್ರೋಣಃ ಕೃಪಃ ಶಲ್ಯೋ ವಿಕರ್ಣಶ್ಚ ಜನಾರ್ದನ ।
ಧಾರ್ತರಾಷ್ಟ್ರಾಶ್ಚ ಸಹಿತಾ ದುರ್ಯೋಧನಪುರೋಗಮಾಃ ॥೧೪॥

ಪಾಂಚಾಲಾನ್ ನಿಹನಿಷ್ಯಂತಿ ರಕ್ಷಿತಾ ದೃಢಧನ್ವನಾ ।
ಸೋಽಹಂ ಭೀಷ್ಮಂ ಗಮಿಷ್ಯಾಮಿ ಸೈನ್ಯಹೇತೋರ್ಜನಾರ್ದನ ॥೧೫॥

ಎಲೈ ಜನಾರ್ದನನೇ, ಈ ದ್ರೋಣ, ಕೃಪ, ಶಲ್ಯ, ವಿಕರ್ಣ, ದುರ್ಯೋಧನ ಮೊದಲಾದ ಧೃತರಾಷ್ಟ್ರಪುತ್ರರು ಎಲ್ಲರೂ ದೃಢವಾದ ಧನುಸ್ಸುಳ್ಳ ಭೀಷ್ಮರಿಂದ ರಕ್ಷಿತರಾಗಿ ಪಾಂಚಾಲರನ್ನು ಸಂಹರಿಸುತ್ತಿದ್ದಾರೆ. ಎಲೈ ಜನಾರ್ದನನೇ, ನಾನು ನನ್ನ ಸೈನ್ಯವನ್ನು ರಕ್ಷಿಸುವ ಸಲುವಾಗಿ ಭೀಷ್ಮರ ಬಳಿಗೆ ಹೋಗುವೆನು.

ತಮಬ್ರವೀದ್ ವಾಸುದೇವೋ ಯತ್ತೋ ಭವ ಧನಂಜಯ ।
ಏಷ ತ್ವಾ ಪ್ರಾಪಯೇ ವೀರ ಪಿತಾಮಹರಥಂ ಪ್ರತಿ ॥೧೬॥

ವಾಸುದೇವನು ಅವನನ್ನು ಕುರಿತು ಧನಂಜಯನೇ, ಎಚ್ಚರಿಕೆಯಿಂದಿರು. ವೀರನೇ, ಪಿತಾಮಹರ ರಥದ ಕಡೆಗೆ ಇದೋ ನಿನ್ನನ್ನು ಕರೆದೊಯ್ಯುತ್ತಿದ್ದೇನೆ ಎಂದು ಹೇಳಿದನು.

ಏವಮುಕ್ತ್ವಾ ತತಃ ಶೌರೀ ರಥಂ ತಂ ಲೋಕವಿಶ್ರುತಮ್ ।
ಪ್ರಾಪಯಾಮಾಸ ಭೀಷ್ಮಸ್ಯ ರಥಂ ಪ್ರತಿ ಜನೇಶ್ವರ ॥೧೭॥

ಎಲೈ ಜನೇಶ್ವರನೇ, ಹೀಗೆ ಹೇಳಿ ಶೌರಿಯಾದ ಕೃಷ್ಣನು ಲೋಕವಿಖ್ಯಾತವಾದ ಆ ರಥವನ್ನು ಭೀಷ್ಮರ ರಥದ ಕಡೆಗೆ ನಡೆಸಿದನು.

ಚಂಚದ್ ಬಹುಪತಾಕೇನ ಬಲಾಕಾವರ್ಣವಾಜಿನಾ ।
ಸಮುಚ್ಛ್ರಿತಮಹಾಭೀಮನದದ್ವಾನರಕೇತುನಾ ।
ಮಹತಾ ಮೇಘನಾದೇನ ರಥೇನಾದಿತ್ಯವರ್ಚಸಾ ॥೧೮॥

ವಿನಿಘ್ನನ್ ಕೌರವಾನೀಕಂ ಶೂರಸೇನಾಂಶ್ಚ ಪಾಂಡವಃ ।
ಆಯಾಚ್ಛರಾನ್ ಸುದನ್ ಶೀಘ್ರಂ ಸುಹೃಚ್ಛೋಕವಿನಾಶನಃ ॥೧೯॥

ಅರ್ಜುನನು ಚಲಿಸುವ ಅನೇಕ ಪತಾಕೆಗಳಿಂದ ಕೂಡಿದ, ಬಲಾಕಪಕ್ಷಿಗಳಂತೆ ಶ್ವೇತವರ್ಣಗಳಿಂದ ಕೂಡಿದ ಅಶ್ವಗಳನ್ನು ಹೂಡಿದ, ಎತ್ತರವಾದ ಧ್ವಜದಲ್ಲಿ ಗರ್ಜಿಸುವ

ಕಪಿಯಿಂದ ಕೂಡಿದ, ಸೂರ್ಯನ ಕಾಂತಿಯುಳ್ಳ, ಮೇಘಗಳ ಮಹಾನಾದದಂತೆ ನಾದವನ್ನು ಹೊಂದಿದ, ರಥದಲ್ಲಿ ಕುಳಿತು ಕೌರವರ ಸೈನ್ಯವನ್ನೂ, ಶೂರಸೇನರನ್ನೂ ಸಂಹರಿಸುತ್ತಾ, ಸುಹೃದರ ಶೋಕವಿನಾಶಕನಾದ ಅವನು ಶೀಘ್ರವಾಗಿ ಬಾಣಗಳನ್ನು ಪ್ರಯೋಗಿಸುತ್ತಾ ಭೀಷ್ಮರ ಕಡೆಗೆ ಬಂದನು.

ತಮಾಪತಂತಂ ವೇಗೇನ ಪ್ರಭಿನ್ನಮಿವ ವಾರಣಮ್ ।
ಪ್ರಾಸಯಾನಂ ರಣೇ ಶೂರಾನ್ ಪಾತಯಂತಂ ಚ ಸಾಯಕೈಃ ॥೨೦॥

ಸೈಂಧವಪ್ರಮುಖೈರ್ಭೀಷ್ಮಃ ಪ್ರಾಚ್ಯಸೌವೀರಕೇತಯೈಃ ।
ಸಹಸಾ ಪ್ರತ್ಯುದೀಯಾಯ ಭೀಷ್ಮಃ ಶಾಂತನವೋऽರ್ಜುನಮ್ ॥೨೧॥

ಮದಿಸಿದ ಗಜದಂತೆ ವೇಗದಿಂದ ಧಾವಿಸಿ ಬರುತ್ತಿದ್ದಂತಹ, ಯುದ್ಧದಲ್ಲಿ ಶೂರರನ್ನು ಭಯಗೊಳಿಸಿ ಬಾಣಗಳನ್ನು ಬೀಳಿಸುತ್ತಿದ್ದಂತಹ, ಅರ್ಜುನನನ್ನು ನೋಡಿ ಸೈಂಧವ ಮೊದಲಾದವರಿಂದಲೂ, ಪೂರ್ವದಿಕ್ಕಿನ ರಾಜರಿಂದಲೂ, ಸೌವೀರ-ಕೇಕಯ ರಾಜರಿಂದಲೂ ರಕ್ಷಿತರಾದ ಶಂತನು ಪುತ್ರರಾದ ಭೀಷ್ಮರು ವೇಗವಾಗಿ ಅವನ ಕಡೆಗೆ ಧಾವಿಸಿದರು.

ಕೋ ಹಿ ಗಾಂಡೀವಧನ್ವಾನಮನ್ಯಃ ಕುರುಪಿತಾಮಹಾತ್ ।
ದ್ರೋಣಮೇಕರ್ಣಾಭ್ಯಾಂ ವಾ ರಥಃ ಸಂಯಾತುಮರ್ಹತಿ ॥೨೨॥

ಕುರುಪಿತಾಮಹರಾದ ಭೀಷ್ಮರನ್ನು ಬಿಟ್ಟು ಅಥವಾ ದ್ರೋಣ-ಕರ್ಣರನ್ನು ಬಿಟ್ಟು ಇನ್ನು ಯಾವ ರಥಿಯು ಗಾಂಡೀವ ಧನುರ್ಧಾರಿಯಾದ ಅರ್ಜುನನ ಕಡೆಗೆ ಹೋಗಲು ಸಮರ್ಥನಾಗುತ್ತಾನೆ?

ತತೋ ಭೀಷ್ಮೋ ಮಹಾರಾಜ ಕೌರವಾಣಾಂ ಪಿತಾಮಹಃ ।
ಅರ್ಜುನಂ ಸಪ್ತಸಪ್ತತ್ಯಾ ಸಾರಾಚಾನಾಂ ಸಮಾವೃಣೋತ್ ॥೨೩॥

ದ್ರೋಣಶ್ಚ ಪಂಚವಿಂಶತ್ಯಾ ಕೃಪಃ ಪಂಚಾಶತಾ ಶರೈಃ ।
ದುರ್ಯೋಧನಶ್ಚತುಃಷಷ್ಟ್ಯಾ ಶಲ್ಯಶ್ಚ ನವಭಿಃ ಶರೈಃ ॥೨೪॥

ಸೈಂಧವೋ ನವಭಿಶ್ಚಾಪಿ ಶಕುನಿಶ್ಚಾಪಿ ಪಂಚಭಿಃ ।
ಆರ್ತಾಯನಿಸ್ತ್ರಿಭಿರ್ಹಲ್ಯೈ ರಾಜನ್ ವಿವ್ಯಾಧ ಪಾಂಡವಮ್ ॥೨೫॥

ಎಲೈ ಮಹಾರಾಜನೇ, ಆಗ ಕೌರವರ ಪಿತಾಮಹರಾದ ಭೀಷ್ಮರು ಅರ್ಜುನನನ್ನು ಎಪ್ಪತ್ತೇಳು ನಾರಾಚಗಳಿಂದ ಮುಚ್ಚಿಹಾಕಿದರು. ದ್ರೋಣರು ಇಪ್ಪತ್ತೈದು ಬಾಣಗಳಿಂದಲೂ, ಕೃಪರು ಏವತ್ತು ಬಾಣಗಳಿಂದಲೂ, ದುರ್ಯೋಧನನು ಅರವತ್ನಾಲ್ಕು ಬಾಣಗಳಿಂದಲೂ, ಶಲ್ಯನು ಒಂಬತ್ತು ಬಾಣಗಳಿಂದಲೂ, ಸೈಂಧವನು ಒಂಬತ್ತು ಬಾಣಗಳಿಂದಲೂ, ಶಕುನಿಯು ಐದು ಬಾಣಗಳಿಂದಲೂ, ಋತಾಯನ ಪುತ್ರನಾದ ಶಲ್ಯನು ಮೂರು ಭಲ್ಲಗಳಿಂದಲೂ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಸ ತೈರ್ವಿದ್ಧೋ ಮಹೇಷ್ವಾಸಃ ಸಮಂತಾನ್ನಿಶಿತೈಃ ಶರೈಃ ।
ನ ವಿವ್ಯಥೇ ಮಹಾಬಾಹುರ್ಭದ್ಯಮಾನ ಇವಾಚಲಃ ॥೨೬॥

ಮಹಾಧನುರ್ಧಾರಿಯಾದ ಅರ್ಜುನನು ಎಲ್ಲ ಕಡೆಗಳಿಂದಲೂ ಹರಿತವಾದ ಬಾಣಗಳಿಂದ ಅವರಿಂದ ಗಾಯಗೊಳಿಸಲ್ಪಟ್ಟರೂ, ಮಹಾಬಾಹುವಾದ ಅವನು ತನ್ನ ಮೇಲೆ ಬಾಣಗಳನ್ನು ಪ್ರಯೋಗಿಸಿದ ಪರ್ವತದಂತೆ ವ್ಯಥೆಯಿಲ್ಲದೆ ನಿಂತನು.

ಸ ಭೀಷ್ಮಂ ಪಂಚವಿಂಶತ್ಯಾ ಕೃಪಂ ಚ ನವಭಿಃ ಶರೈಃ ।
ದ್ರೋಣಂ ಷಷ್ಟ್ಯಾ ನರವ್ಯಾಘ್ರೋ ವಿಕರ್ಣಂ ಚ ತ್ರಿಭಿಃ ಶರೈಃ ॥೨೭॥

ಆರ್ತಾಯನಿಂ ತ್ರಿಭಿರ್ಬಾಣೈ ರಾಜಾನಂ ಚಾಪಿ ಪಂಚಭಿಃ ।
ಪ್ರತ್ಯವಿಧ್ಯದಮೇಯಾತ್ಮಾ ಕಿರೀಟೀ ಭರತರ್ಷಭ ॥೨೮॥

ಎಲೈ ಭರತಶ್ರೇಷ್ಠನೇ, ನರವ್ಯಾಘ್ರನೂ, ಮಹಾಪ್ರಯತ್ನಶಾಲಿಯೂ ಆದ ಕಿರೀಟಿಯು ಭೀಷ್ಮರನ್ನು ಇಪ್ಪತ್ತೈದು ಬಾಣಗಳಿಂದಲೂ, ಕೃಪರನ್ನು ಒಂಬತ್ತು ಬಾಣಗಳಿಂದಲೂ, ದ್ರೋಣರನ್ನು ಅರವತ್ತು ಬಾಣಗಳಿಂದಲೂ, ವಿಕರ್ಣನನ್ನು ಮೂರು ಬಾಣಗಳಿಂದಲೂ, ಶಲ್ಯನನ್ನು ಮೂರು ಬಾಣಗಳಿಂದಲೂ, ದುರ್ಯೋಧನನನ್ನು ಐದು ಬಾಣಗಳಿಂದಲೂ ಪ್ರತಿಯಾಗಿ ಹಿಂಸಿಸಿದನು.

ತಂ ಸಾತ್ಯಕಿರ್ವಿರಾಟಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ದ್ರೌಪದೇಯಾಭಿಮನ್ಯುಶ್ಚ ಪರಿವವ್ರುರ್ಧನಂಜಯಮ್ ॥೨೯॥

ಸಾತ್ಯಕಿ, ವಿರಾಟ, ಪಾರ್ಷತನಾದ ಧೃಷ್ಟದ್ಯುಮ್ನ, ದ್ರೌಪದಿಯ ಐದು ಮಕ್ಕಳು ಮತ್ತು ಅಭಿಮನ್ಯುವೂ ಸಹ ಅರ್ಜುನನನ್ನು ರಕ್ಷಿಸಲು ಅವನನ್ನು ಸುತ್ತುವರಿದರು.

ತತೋ ದ್ರೋಣಂ ಮಹೇಷ್ವಾಸಂ ಗಾಂಗೇಯಸ್ಯ ಪ್ರಿಯೇ ರತಮ್ ।
ಅಭ್ಯವರ್ಷತ ಪಾಂಚಾಲ್ಯಃ ಸಂಯುಕ್ತಃ ಸಹ ಸೋಮಕೈಃ ॥೩೦॥

ಅನಂತರ ಸೋಮಕರಿಂದ ಸಹಿತನಾದ ಧೃಷ್ಟದ್ಯುಮ್ನನು ಭೀಷ್ಮರ ಪ್ರಿಯದಲ್ಲಿಯೇ ಆಸಕ್ತರಾದ ಮಹಾಧನುರ್ಧಾರಿಗಳಾದ ದ್ರೋಣರ ಮೇಲೆ ಬಾಣಗಳ ಮಳೆಯನ್ನು ಕರೆದನು.

ಭೀಷ್ಮಸ್ತು ರಥಿನಾಂ ಶ್ರೇಷ್ಠಸ್ತೂರ್ಣಂ ವಿವ್ಯಾಧ ಪಾಂಡವಮ್ ।
ಅಶೀತ್ಯಾ ನಿಶಿತೈರ್ಬಾಣೈಸ್ತತೋऽಕ್ರೋಶಂತ ತಾವಕಾಃ ॥೩೧॥

ರಥಿಕರಲ್ಲಿ ಶ್ರೇಷ್ಠರಾದ ಭೀಷ್ಮರಾದರೂ ಶೀಘ್ರವಾಗಿ ತೀಕ್ಷ್ಣವಾದ ಎಂಬತ್ತು ಬಾಣಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದರು. ಆಗ ನಿನ್ನವರೆಲ್ಲರೂ ಹರ್ಷೋದ್ಗಾರವನ್ನು ಮಾಡಿದರು.

ತೇಷಾಂ ತು ನಿನದಂ ಶ್ರುತ್ವಾ ಪ್ರಹೃಷ್ಟಾನಾಂ ಪ್ರಹೃಷ್ಟವತ್ ।
ಪ್ರವಿವೇಶ ತತೋ ಮಧ್ಯಂ ರಥಸಿಂಹಃ ಪ್ರತಾಪವಾನ್ ॥೩೨॥

ಸಂತೋಷದಿಂದ ಕೂಡಿದ ಅವರ ಹರ್ಷ ಶಬ್ದವನ್ನು ಕೇಳಿ ರಥಸಿಂಹನೂ ಮತ್ತು ಪ್ರತಾಪಶಾಲಿಯೂ ಆದ ಅರ್ಜುನನು ಅವರ ಮಧ್ಯವನ್ನು ಪ್ರವೇಶಿಸಿದನು.

ತೇಷಾಂ ತು ರಥಸಿಂಹಾನಾಂ ಮಧ್ಯಂ ಪ್ರಾಪ್ಯ ಧನಂಜಯಃ ।
ಚಿಕ್ರೀಡ ಧನುಷಾ ರಾಜನ್ ಲಕ್ಷ್ಯಂ ಕೃತ್ವಾ ಮಹಾರಥಾನ್ ॥೩೩॥

ಎಲೈ ರಾಜನೇ, ಧನಂಜಯನು ಆ ರಥಸಿಂಹರ ಮಧ್ಯವನ್ನು ಪ್ರವೇಶಿಸಿ, ಆ ಮಹಾರಥರನ್ನು ಲಕ್ಷ್ಯವಾಗಿ ಮಾಡಿ ತನ್ನ ಧನುಸ್ಸಿನಿಂದ ಆಟವಾಡಿದನು.

ತತೋ ದುರ್ಯೋಧನೋ ರಾಜಾ ಭೀಷ್ಮಮಾಹ ಜನೇಶ್ವರಃ ।
ಪೀಡ್ಯಮಾನಂ ಸ್ವಕಂ ಸೈನ್ಯಂ ದೃಷ್ಟ್ವಾ ಪಾರ್ಥೇನ ಸಂಯುಗೇ ॥೩೪॥

ಎಲೈ ಜನೇಶ್ವರನೇ, ಆಗ ರಾಜನಾದ ದುರ್ಯೋಧನನು ತನ್ನ ಸೈನ್ಯವು ಯುದ್ಧದಲ್ಲಿ ಅರ್ಜುನನಿಂದ ಪೀಡಿಸಲ್ಪಡುವುದನ್ನು ನೋಡಿ ಭೀಷ್ಮರನ್ನು ಕುರಿತು ಹೇಳಿದನು.

ಏಷ ಪಾಂಡುಸುತಸ್ತಾತ ಕೃಷ್ಣೇನ ಸಹಿತೋ ಬಲೀ ।
ಯತತಾಂ ಸರ್ವಸೈನ್ಯಾನಾಂ ಮೂಲಂ ನಃ ಪರಿಕೃಂತತಿ ।
ತ್ವಯಿ ಜೀವತಿ ಗಾಂಗೇಯೇ ದ್ರೋಣೇ ಚ ರಥಿನಾಂ ವರೇ ॥೩೫॥

ಎಲೈ ತಾತನೇ, ಗಂಗಾಪುತ್ರರಾದ ನೀವು ಬದುಕಿರುವಾಗ, ರಥಿಶ್ರೇಷ್ಠರಾದ ದ್ರೋಣರು ಬದುಕಿರುವಾಗ ನನ್ನ ಸರ್ವಸೈನ್ಯವೂ ಪ್ರಯತ್ನಪಡುತ್ತಿದ್ದರೂ ಕೃಷ್ಣನಿಂದ ಸಹಿತನಾದ, ಬಲಿಷ್ಠನಾದ, ಪಾಂಡುಪುತ್ರನಾದ ಅರ್ಜುನನು ನಮ್ಮ ಸೈನ್ಯದ ಮೂಲವನ್ನೇ ಕತ್ತರಿಸುತ್ತಿದ್ದಾನೆ.

ತ್ವತ್ಕೃತೇ ಹ್ಯೇಷ ಕರ್ಣೋಽಪಿ ನ್ಯಸ್ತಶಸ್ತ್ರೋ ಮಹಾರಥಃ ।
ನ ಯುಧ್ಯತಿ ರಣೇ ಪಾರ್ಥಂ ಹಿತಕಾಮಃ ಸದಾ ಮಮ ॥೩೬॥

ಯಾವಾಗಲೂ ನನ್ನ ಹಿತದಲ್ಲಿಯೇ ರಥನಾದ, ಮಹಾರಥನಾದ ಈ ಕರ್ಣನೂ ಕೂಡ ನಿಮ್ಮ ಕಾರಣದಿಂದಾಗಿ ಶಸ್ತ್ರಸಂನ್ಯಾಸವನ್ನು ಮಾಡಿ ಯುದ್ಧವನ್ನು ಮಾಡುತ್ತಿಲ್ಲ.

ಸ ತಥಾ ಕುರು ಗಾಂಗೇಯ ಯಥಾ ಹನ್ಯೇತ ಫಲ್ಗುನಃ ।
ಏವಮುಕ್ತಸ್ತತೋ ರಾಜನ್ಪಿತಾ ದೇವವ್ರತಸ್ತವ ।
ಧಿಕ್ ಕ್ಷತ್ರಧರ್ಮಮಿತ್ಯುಕ್ತ್ವಾ ಯಯೌ ಪಾರ್ಥರಥಂ ಪ್ರತಿ ॥೩೭॥

ಎಲೈ ಗಂಗಾಪುತ್ರರೇ, ಅರ್ಜುನನ ವಧೆಯಾಗುವಂತೆ ಹೇಗಾದರೂ ಮಾಡಿ. ಎಲೈ ರಾಜನೇ, ದುರ್ಯೋಧನನಿಂದ ಹೀಗೆ ಹೇಳಲ್ಪಟ್ಟ ದೇವವ್ರತರಾದ ನಿನ್ನ ತಂದೆಯು ಕ್ಷತ್ರಧರ್ಮಕ್ಕೆ ಧಿಕ್ಕಾರವಿರಲಿ ಎಂದು ಹೇಳುತ್ತಾ, ಅರ್ಜುನನ ರಥದ ಕಡೆಗೆ ಹೊರಟರು.

ಉಭೌ ಶ್ವೇತಹಯೌ ರಾಜನ್ ಸಂಸಕ್ತೌ ದೃಶ್ಯ ಪಾರ್ಥಿವಾಃ ।
ಸಿಂಹನಾದಾನ್ ಭೃಶಂ ಚಕ್ರುಃ ಶಂಖಶಬ್ದಾಂಶ್ಚ ಭಾರತ ॥೩೮॥

ಎಲೈ ರಾಜನೇ, ಶ್ವೇತಹಯಗಳಿಂದ ಕೂಡಿದ ರಥದಲ್ಲಿ ಕುಳಿತ ಅವರಿಬ್ಬರೂ ಪರಸ್ಪರ ಸಂಪತ್ತರಾದುದನ್ನು ನೋಡಿ ಎಲೈ ಭಾರತನೇ, ರಾಜರು ಗಟ್ಟಿಯಾಗಿ ಸಿಂಹನಾದವನ್ನು ಮಾಡಿ ಶಂಖ ಶಬ್ದವನ್ನೂ ಮಾಡಿದರು.

ದ್ರೌಣಿರ್ದುರ್ಯೋಧನಶ್ಚೈವ ವಿಕರ್ಣಶ್ಚ ತವಾತ್ಮಜಃ ।
ಪರಿವಾರ್ಯ ರಣೇ ಭೀಷ್ಮಂ ಸ್ಥಿತಾ ಯುದ್ಧಾಯ ಮಾರಿಷ ॥೩೯॥

ಅಶ್ವತ್ಥಾಮ, ದುರ್ಯೋಧನ, ನಿನ್ನ ಪುತ್ರನಾದ ವಿಕರ್ಣ ಇವರು ಎಲೈ ಪೂಜ್ಯನೇ, ಭೀಷ್ಮರನ್ನು ಸುತ್ತುವರಿದು ಯುದ್ಧಕ್ಕಾಗಿ ನಿಂತರು.

ತಥೈವ ಪಾಂಡವಾಃ ಸರ್ವೇ ಪರಿವಾರ್ಯ ಧನಂಜಯಮ್ ।
ಸ್ಥಿತಾ ಯುದ್ಧಾಯ ಮಹತೇ ತತೋ ಯುದ್ಧಮವರ್ತತ ॥೪೦॥

ಹಾಗೆಯೇ, ಪಾಂಡವರೆಲ್ಲರೂ ಅರ್ಜುನನನ್ನು ಸುತ್ತುವರಿದು ಯುದ್ಧಕ್ಕೆ ಸಿದ್ಧರಾಗಿ ನಿಂತರು. ಆನಂತರ ಯುದ್ಧವು ಪ್ರವೃತ್ತವಾಯಿತು.

ಗಾಂಗೇಯಸ್ತು ರಣೇ ಪಾರ್ಥಮಾಸಕ್ಷ್ಯತ್ ನವಭಿಃ ಶರೈಃ ।
ತಮರ್ಜುನಃ ಪ್ರತ್ಯವಿಧ್ಯದ್ ದಶಭಿರ್ಮರ್ಮವೇಧಿಭಿಃ ॥೪೧॥

ಭೀಷ್ಮರು ಅರ್ಜುನನ ಮೇಲೆ ಒಂಭತ್ತು ಬಾಣಗಳನ್ನು ಪ್ರಯೋಗಿಸಿದರು. ಅದಕ್ಕೆ ಪ್ರತಿಯಾಗಿ ಅರ್ಜುನನು ಮರ್ಮಭೇದಿಗಳಾದ ಹತ್ತು ಬಾಣಗಳನ್ನು ಅವರ ಮೇಲೆ ಪ್ರಯೋಗಿಸಿದನು.

ತತಃ ಶರಸಹಸ್ರೇಣ ಸುಪ್ರಯುಕ್ತೇನ ಪಾಂಡವಃ ।
ಅರ್ಜುನಃ ಸಮರಶ್ಲಾಘೀ ಭೀಷ್ಮಾವಾರಯದ್ ದಿಶಃ ॥೪೨॥

ಆನಂತರ ಪಾಂಡುಪುತ್ರನಾದ ಯುದ್ಧಶ್ಲಾಘಿಯಾದ ಅರ್ಜುನನು ಸಹಸ್ರ ಬಾಣಗಳನ್ನು ಪ್ರಯೋಗಿಸಿ ಭೀಷ್ಮರನ್ನು ಎಲ್ಲಾ ದಿಕ್ಕುಗಳಿಂದಲೂ ಮುಚ್ಚಿದನು.

ಶರಜಾಲಂ ತತಸ್ತತ್ತು ಶರಜಾಲೇನ ಕೌರವ ।
ವಾರಯಾಮಾಸ ಪಾರ್ಥಸ್ಯ ಭೀಷ್ಮಃ ಶಾಂತನವಸ್ತಥಾ ॥೪೩॥

ಎಲೈ ಕೌರವನೇ, ಶಂತನು ಪುತ್ರರಾದ ಭೀಷ್ಮರು ಆಗ ಅರ್ಜುನನು ಹೆಣೆದ ಬಾಣಗಳ ಬಲೆಯನ್ನು ತಮ್ಮ ಬಾಣಗಳ ಬಲೆಯಿಂದಲೇ ನಿವಾರಿಸಿದರು.

ಉಭೌ ಪರಮಸಂಹೃಷ್ಟಾವುಭೌ ಯುದ್ಧಾಭಿನಂದಿನೌ ।
ನಿರ್ವಿಶೇಷಮಯುಧ್ಯೇತಾಂ ಕೃತಪ್ರತಿಕೃತೈಷಿಣೌ ॥೪೪॥

ಇಬ್ಬರೂ ಪರಮ ಸಂತೋಷದಿಂದ ಕೂಡಿದವರಾಗಿ ಯುದ್ಧವನ್ನು ಆಸ್ವಾದಿಸುತ್ತಾ ಒಬ್ಬರು ಮಾಡಿದುದಕ್ಕೆ ಇನ್ನೊಬ್ಬರು ಪ್ರತೀಕಾರ ಮಾಡುತ್ತಾ, ಒಬ್ಬರನ್ನೊಬ್ಬರು ಮೀರದೇಯುದ್ಧವನ್ನು ಮಾಡಿದರು.

ಭೀಷ್ಮಚಾಪವಿಮುಕ್ತಾನಿ ಶರಜಾಲಾನಿ ಸಂಘಶಃ ।
ಶೀರ್ಯಮಾಣಾನ್ಯದೃಶ್ಯಂತ ಭಿನ್ನಾನ್ಯರ್ಜುನಸಾಯಕೈಃ ॥೪೫॥

ಭೀಷ್ಮರು ಪ್ರಯೋಗ ಮಾಡಿದ ಬಾಣಗಳ ಸಮೂಹಗಳು ಅರ್ಜುನನ ಬಾಣಗಳಿಂದ ಸಮೂಹ ಸಮೂಹವಾಗಿ ನಾಶ ಹೊಂದುವುದು ಕಂಡುಬಂದಿತು.

ತಥೈವಾರ್ಜುನಮುಕ್ತಾನಿ ಶರಜಾಲಾನಿ ಭಾಗಶಃ ।
ಗಾಂಗೇಯಶರನುನ್ನಾನಿ ನ್ಯಪತಂತ ಮಹೀತಲೇ ॥೪೬॥

ಹಾಗೆಯೇ, ಅರ್ಜುನನು ಪ್ರಯೋಗಿಸಿದ ಬಾಣಗಳ ಸಮೂಹಗಳೂ ಸಹ ಭೀಷ್ಮರ ಬಾಣಗಳಿಂದ ಕತ್ತರಿಸಲ್ಪಟ್ಟು ತುಂಡು ತುಂಡಾಗಿ ಭೂಮಿಯ ಮೇಲೆ ಬಿದ್ದವು.

ಅರ್ಜುನಃ ಪಂಚವಿಂಶತ್ಯಾ ಭೀಷ್ಮಮಾರ್ಚ್ಛಚ್ಛಿತೈಃ ಶರೈಃ ।
ಭೀಷ್ಮೋಽಪಿ ಸಮರೇ ಪಾರ್ಥಂ ವಿವ್ಯಾಧ ತ್ರಿಂಶತಾ ಶರೈಃ ॥೪೭॥

ಅರ್ಜುನನು ಹರಿತವಾದ ಇಪ್ಪತ್ತೈದು ಬಾಣಗಳಿಂದ ಭೀಷ್ಮರನ್ನು ಹಿಂಸಿಸಿದನು. ಭೀಷ್ಮರೂ ಸಹ ಯುದ್ಧದಲ್ಲಿ ಮೂವತ್ತು ಬಾಣಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದರು.

ಅನ್ಯೋನ್ಯಸ್ಯ ಹಯಾನ್ ವಿದ್ವಾ ಧ್ವಜೌ ಚ ಸುಮಹಾಬಲೌ ।
ರಥೇಷಾಂ ರಥಚಕ್ರೇ ಚ ಚಿಕ್ರೀಡತುರರಿಂದಮೌ ॥೪೮॥

ಅರಿಂದಮರೂ, ಮಹಾಬಲಶಾಲಿಗಳೂ ಆದ ಅವರಿಬ್ಬರೂ ಪರಸ್ಪರವಾಗಿ ರಥಾಶ್ವಗಳನ್ನು ಕೊಂದು ಧ್ವಜಗಳನ್ನೂ, ರಥದ ಚಕ್ರಗಳನ್ನೂ ಮತ್ತು ರಥದ ಮೂಕೆಗಳನ್ನೂ ಕತ್ತರಿಸಿ ಆಟವಾಡಿದರು.

ತತಃ ಕ್ರುದ್ಧೋ ಮಹಾರಾಜ ಭೀಷ್ಮಃ ಪ್ರಹರತಾಂ ವರಃ ।
ವಾಸುದೇವಂ ತ್ರಿಭಿರ್ಬಾಣೈರಾಜಘಾನ ಸ್ತನಾಂತರೇ ॥೪೯॥

ಎಲೈ ಮಹಾರಾಜನೇ, ಆಗ ಯುದ್ಧ ಮಾಡುವವರಲ್ಲಿ ಶ್ರೇಷ್ಠರಾದ ಭೀಷ್ಮರು ಕೋಪಗೊಂಡು ಕೃಷ್ಣನನ್ನು ಮೂರು ಬಾಣಗಳಿಂದ ಸ್ತನಗಳ ಮಧ್ಯದಲ್ಲಿ ಹೊಡೆದರು.

ಭೀಷ್ಮಚಾಪಚ್ಯುತೈರ್ಬಾಣೈರ್ನಿರ್ವಿದ್ಧೋ ಮಧುಸೂದನಃ ।
ವಿರರಾಜ ರಣೇ ರಾಜನ್ ಸಪುಷ್ಪ ಇವ ಕಿಂಶುಕಃ ॥೫೦॥

ಎಲೈ ರಾಜನೇ, ಭೀಷ್ಮರ ಧನುಸ್ಸಿನಿಂದ ಹೊರಹೊಮ್ಮಿದ ಬಾಣಗಳಿಂದ ತಾಡಿತನಾದ ಮಧುಸೂದನನು ಪುಷ್ಪಿತವಾದ ಕಿಂಶುಕವೃಕ್ಷದಂತೆ ಶೋಭಿಸಿದನು.

ತತೋऽರ್ಜುನೋ ಭೃಶಂ ಕ್ರುದ್ಧೋ ನಿರ್ವಿದ್ಧಂ ಪ್ರೇಕ್ಷ್ಯ ಮಾಧವಮ್ ।
ಗಾಂಗೇಯಸಾರಥಿಂ ಸಂಖ್ಯೇ ನಿರ್ಬಿಭೇದ ತ್ರಿಭಿಃ ಶರೈಃ ॥೫೧॥

ಆಗ ಅರ್ಜುನನು ಕೃಷ್ಣನು ಬಾಣಪ್ರಯೋಗಕ್ಕೆ ಗುರಿಯಾದುದನ್ನು ನೋಡಿ ಕೋಪಗೊಂಡು ಭೀಷ್ಮರ ಸಾರಥಿಯನ್ನು ಮೂರು ಬಾಣಗಳಿಂದ ಗಾಯಗೊಳಿಸಿದನು.

ಯತಮಾನೌ ತು ತೌ ವೀರಾವನ್ಯೋನ್ಯಸ್ಯ ವಧಂ ಪ್ರತಿ ।
ನಾಶಕ್ನುತಾಂ ತದಾನ್ಯೋನ್ಯಮಭಿಸಂಧಾತುಮಾಹವೇ ॥೫೨॥

ಅವರಿಬ್ಬರೂ ಪರಸ್ಪರ ವಧೆಗಾಗಿ ಪ್ರಯತ್ನಪಟ್ಟರೂ ಯುದ್ಧದಲ್ಲಿ ಅದನ್ನು ಪರಸ್ಪರವಾಗಿ ಸಾಧಿಸಲು ಸಾಧ್ಯವಾಗಲಿಲ್ಲ.

ಮಂಡಲಾನಿ ವಿಚಿತ್ರಾಣಿ ಗತಪ್ರತ್ಯಾಗತಾನಿ ಚ ।
ಅದರ್ಶಯೇತಾಂ ಬಹುಧಾ ಸೂತಸಾಮರ್ಥ್ಯಲಾಘವಾತ್ ॥೫೩॥

ಸೂತರ ಸಾಮರ್ಥ್ಯ ಮತ್ತು ಕ್ಷಿಪ್ರತೆಯಿಂದ ಅವರಿಬ್ಬರೂ ವಿಚಿತ್ರವಾದ ಅನೇಕ ಯುದ್ಧ ಮಾರ್ಗಗಳನ್ನೂ ಮುಂದೆ ಹೋಗಿ ಹಿಂದೆ ಬರುವ ರೀತಿಗಳನ್ನೂ ಅನೇಕ ರೀತಿಯಲ್ಲಿ ತೋರಿಸಿದರು.

ಅಂತರಂ ಚ ಪ್ರಹಾರೇಷು ತರ್ಕಯಂತೌ ಮಹಾರಥೌ ।
ರಾಜನ್ನಂತರಮಾರ್ಗಸ್ಥೌ ಸ್ಥಿತಾವಾಸ್ತಾಂ ಮುಹುರ್ಮುಹುಃ ॥೫೪॥

ಎಲೈ ರಾಜನೇ, ಮಹಾರಥರಾದ ಅವರಿಬ್ಬರೂ ಇನ್ನೊಬ್ಬರ ಪ್ರಹಾರದ ಮಧ್ಯದಲ್ಲಿ ಒಂದು ದೋಷವನ್ನು ಹುಡುಕುತ್ತಾ ಪುನಃ ಪುನಃ ಮಂಡಲ ಮಾರ್ಗಮಧ್ಯದಲ್ಲಿಯೇ ನಿಲ್ಲುತ್ತಿದ್ದರು.

ಉಭೌ ಸಿಂಹರವೋನ್ಮಿಶ್ರಂ ಶಂಖಶಬ್ದಂ ಪ್ರಚಕ್ರತುಃ ।
ತಥೈವ ಚಾಪನಿರ್ಘೋಷಂ ಚಕ್ರತುಸ್ತೌ ಮಹಾರಥೌ ॥೫೫॥

ಇಬ್ಬರೂ ಸಿಂಹನಾದ ಮಿಶ್ರಿತವಾದ ಶಂಖಶಬ್ದವನ್ನು ಮಾಡಿದರು. ಹಾಗೆಯೇ ಮಹಾರಥರಾದ ಅವರಿಬ್ಬರೂ ಧನುಸ್ಸಿನ ಘೋಷವನ್ನೂ ಉಂಟುಮಾಡಿದರು.

ತಯೋಃ ಶಂಖಪ್ರಣಾದೇನ ರಥನೇಮಿಸ್ವನೇನ ಚ ।
ದಾರಿತಾ ಸಹಸಾ ಭೂಮಿಶ್ಚಕಂಪ ಚ ನನಾದ ಚ ॥೫೬॥

ಅವರಿಬ್ಬರ ಶಂಖನಾದದಿಂದಲೂ ಮತ್ತು ರಥಘೋಷದಿಂದಲೂ ಭೂಮಿಯು ಬಿರಿದು ನಡುಗಿ ಗುಡುಗಿತು.

ನ ತಯೋರಂತರಂ ಕಶ್ಚಿದ್ ದದೃಶೇ ಭರತರ್ಷಭ ।
ಬಲಿನೌ ಸಮರೇ ಶೂರಾವನ್ಯೋನ್ಯಸದೃಶಾವುಭೌ ॥೫೭॥

ಎಲೈ ಭರತಶ್ರೇಷ್ಠನೇ, ಬಲಿಷ್ಠರೂ, ಯುದ್ಧದಲ್ಲಿ ಶೂರರೂ ಪರಸ್ಪರ ಸದೃಶರೂ ಆದ ಅವರಿಬ್ಬರ ಮಧ್ಯದಲ್ಲಿ ಯಾವ ವ್ಯತ್ಯಾಸವೂ ಕಾಣಲಿಲ್ಲ.

ಚಿಹ್ನಮಾತ್ರೇಣ ಭೀಷ್ಮಂ ತು ಪ್ರಜಘ್ನುಸ್ತತ್ರ ಕೌರವಾಃ ।
ತಥಾ ಪಾಂಡುಸುತಾಃ ಪಾರ್ಥಂ ಚಿಹ್ನಮಾತ್ರೇಣ ಜಜ್ಞಿರೇ ॥೫೮॥

ಕೌರವರು ಭೀಷ್ಮರನ್ನು ಕೇವಲ ಅವರ ಚಿಹ್ನೆಯಿಂದ ತಿಳಿಯುತ್ತಿದ್ದರು. ಹಾಗೆಯೇ ಪಾಂಡವರು ಕೇವಲ ಅರ್ಜುನನ ಚಿಹ್ನೆಗಳಿಂದ ಅರ್ಜುನನನ್ನು ತಿಳಿಯುತ್ತಿದ್ದರು.

ತಯೋರ್ನ್ಯವರಯೋ ರಾಜನ್ ದೃಶ್ಯ ತಾದೃಕ್ಪರಾಕ್ರಮಮ್ ।
ವಿಸ್ಮಯಂ ಸರ್ವಭೂತಾನಿ ಜಗ್ಮುರ್ಭಾರತ ಸಂಯುಗೇ ॥೫೯॥

ಎಲೈ ರಾಜನೇ, ಭಾರತನೇ, ನರಶ್ರೇಷ್ಠರಾದ ಅವರಿಬ್ಬರ ಅಂತಹ ಪರಾಕ್ರಮವನ್ನು ನೋಡಿ ಆ ಯುದ್ಧಭೂಮಿಯಲ್ಲಿ ಎಲ್ಲರೂ ವಿಸ್ಮಯವನ್ನು ಹೊಂದಿದರು.

ನ ತಯೋರ್ವಿವರಂ ಕಶ್ಚಿದ್ ರಣೇ ಪಶ್ಯತಿ ಭಾರತ ।
ಧರ್ಮೇ ಸ್ಥಿತಸ್ಯ ಹಿ ಯಥಾ ನ ಕಶ್ಚಿದ್ ವೃಜಿನಂ ಕ್ವಚಿತ್ ॥೬೦॥

ಎಲೈ ಭಾರತನೇ, ಧರ್ಮಿಷ್ಠನಾದ ಪುರುಷನಲ್ಲಿ ಹೇಗೆ ಪಾಪವು ಕಂಡುಬರುವುದಿಲ್ಲವೋ, ಅದರಂತೆ ಅವರಿಬ್ಬರ ಯುದ್ಧದಲ್ಲಿ ಯಾವ ಛಿದ್ರವೂ ಕಂಡುಬರಲಿಲ್ಲ.

ಉಭೌ ಹಿ ಶರಜಾಲೇನ ತಾವದೃಶ್ಯೌ ಬಭೂವತುಃ ।
ಪ್ರಕಾಶೌ ಚ ಪುನಸ್ತೂರ್ಣಂ ಬಭೂವತುರುಭೌ ರಣೇ ॥೬೧॥

ಅವರಿಬ್ಬರೂ ಬಾಣಗಳ ಸಮೂಹದಿಂದ ಅದೃಶ್ಯರಾಗುತ್ತಿದ್ದರು. ಪುನಃ ಯುದ್ಧಭೂಮಿಯಲ್ಲಿ (ಆ ಬಾಣಗಳನ್ನು ಸಂಹರಿಸಿ) ಎಲ್ಲರ ಕಣ್ಣಿಗೆ ಕಾಣುತ್ತಿದ್ದರು.

ತತ್ರ ದೇವಾಃ ಸಗಂಧರ್ವಾಶ್ಚಾರಣಾಶ್ಚ ಸಹರ್ಷಿಭಿಃ ।
ಅನ್ಯೋನ್ಯಂ ಪ್ರತ್ಯಭಾಷಂತ ತಯೋರ್ದೃಷ್ಟ್ವಾ ಪರಾಕ್ರಮಮ್ ॥೬೨॥

ಅಲ್ಲಿ ಅವರ ಪರಾಕ್ರಮವನ್ನು ನೋಡಿ ಗಂಧರ್ವರಿಂದ, ಚಾರಣರಿಂದ ಮತ್ತು ಋಷಿಗಳಿಂದ ಸಹಿತರಾದ ದೇವತೆಗಳು ಪರಸ್ಪರವಾಗಿ ಮಾತನಾಡಿಕೊಂಡರು.

ನ ಶಕ್ಯೌ ಯುಧಿ ಸಂರಬ್ಧೌ ಜೇತುಮೇತೌ ಮಹಾರಥೌ ।
ಸದೇವಾಸುರಗಂಧರ್ವೈರ್ಲೋಕೈರಪಿ ಕಥಂಚನ ॥೬೩॥

ದೇವಾಸುರಗಂಧರ್ವ ಸಹಿತವಾದ ಎಲ್ಲ ಲೋಕಗಳಿಂದಲೂ ಮಹಾರಥರೂ ಮತ್ತು ಕೋಪಗೊಂಡವರೂ ಆದ ಇವರಿಬ್ಬರು ಯುದ್ಧದಲ್ಲಿ ಸೋಲಿಸಲ್ಪಡಲು ಸಾಧ್ಯವಿಲ್ಲ.

ಆಶ್ಚರ್ಯಭೂತಂ ಲೋಕೇಷು ಯುದ್ಧಮೇತನ್ಮಹಾದ್ಭುತಮ್ ।
ನೈತಾದೃಶಾನಿ ಯುದ್ಧಾನಿ ಭವಿಷ್ಯಂತಿ ಕಥಂಚನ ॥೬೪॥

ಇವರಿಬ್ಬರ ಈ ಯುದ್ಧವು ಬಹಳ ಅದ್ಭುತವಾದುದು. ಮೂರುಲೋಕದಲ್ಲಿ ಆಶ್ಚರ್ಯಕರವಾದುದು. ಇಂತಹ ಯುದ್ಧವು ಎಂದೂ ನಡೆಯುವುದಿಲ್ಲ.

ನಾಪಿ ಶಕ್ಯೋ ರಣೇ ಜೇತುಂ ಭೀಷ್ಮಃ ಪಾರ್ಥೇನ ಧೀಮತಾ ।
ಸಧನುಶ್ಚ ರಥಸ್ಥಶ್ಚ ಪ್ರವಪನ್ ಸಾಯಕಾನ್ ರಣೇ ॥೬೫॥

ರಥದಲ್ಲಿ ಕುಳಿತು, ಧನುಸ್ಸನ್ನು ಹಿಡಿದು, ಬಾಣಗಳ ಮಳೆಯನ್ನು ಸುರಿಸುವ ಭೀಷ್ಮರು ಮೇಧಾವಿಯಾದ ಅರ್ಜುನನಿಂದ ಯುದ್ಧದಲ್ಲಿ ಸೋಲಿಸಲ್ಪಡಲು ಸಾಧ್ಯವಿಲ್ಲ.

ತಥೈವ ಪಾಂಡವಂ ಯುದ್ಧೇ ದೇವೈರಪಿ ದುರಾಸದಮ್ ।
ನ ವಿಜೇತುಂ ರಣೇ ಭೀಷ್ಮ ಉತ್ಸಹೇತ ಧನುರ್ಧರಮ್ ॥೬೬॥

ಹಾಗೆಯೇ, ದೇವತೆಗಳೂ ಹತ್ತಿರ ಸುಳಿಯಲಾರದ ಧನುರ್ಧಾರಿಯಾದ ಪಾಂಡುಪುತ್ರನಾದ ಅರ್ಜುನನನ್ನು ಭೀಷ್ಮರೂ ಯುದ್ಧದಲ್ಲಿ ಜಯಿಸಲಾರರು.

ಇತಿ ಸ್ಮ ವಾಚಃ ಶ್ರೂಯಂತೇ ಪ್ರೋಚ್ಚರಂತ್ಯಸ್ತತಸ್ತತಃ ।
ಗಾಂಗೇಯಾರ್ಜುನಯೋಃ ಸಂಖೇ ಸ್ತವಯುಕ್ತಾ ವಿಶಾಂಪತೇ ॥೬೭॥

ಎಲೈ ರಾಜನೇ, ಭೀಷ್ಮಾರ್ಜುನರ ಯುದ್ಧವು ನಡೆಯುತ್ತಿದ್ದಾಗ ಅವರ ಪ್ರಶಂಸಾ ರೂಪವಾದ ಇಂತಹ ಮಾತುಗಳು ಅಲ್ಲಲ್ಲಿ ಕೇಳಿಬಂದವು.

ತ್ವದೀಯಾಸ್ತು ತತೋ ಯೋಧಾಃ ಪಾಂಡವೇಯಾಶ್ಚ ಭಾರತ ।
ಅನ್ಯೋನ್ಯಂ ಸಮರೇ ಜಘ್ನುಸ್ತತ್ರ ಪರಾಕ್ರಮೇ ॥೬೮॥

ಎಲೈ ಭಾರತನೇ, ಭೀಷ್ಮಾರ್ಜುನರು ಹಾಗೆ ಪರಾಕ್ರಮವನ್ನು ತೋರಿಸುತ್ತಿದ್ದಾಗ, ನಿನ್ನ ಮತ್ತು ಪಾಂಡವರ ಸೈನಿಕರು ಯುದ್ಧದಲ್ಲಿ ಪರಸ್ಪರವಾಗಿ ಪ್ರಹಾರ ಮಾಡಿದರು.

ಶಿತಧಾರೈಸ್ತಥಾ ಖಡ್ಗೈರ್ವಿಮಲೈಶ್ಚ ಪರಶ್ವಧೈಃ ।
ಶರೈರನ್ಯೈಶ್ಚ ಬಹುಭಿಃ ಶಸ್ತ್ರೈರ್ನಾನಾವಿಧೈರ್ಯುಧಿ ।
ಉಭಯೋಃ ಸೇನಯೋರ್ವೀರಾ ಸ್ಸಕೃಂತಂತ ಪರಸ್ಪರಮ್ ॥೬೯॥

ಹರಿತವಾದ ಅಲುಗುಳ್ಳ ಖಡ್ಗಗಳಿಂದಲೂ, ವಿಮಲವಾದ ಪರಶ್ವಧಗಳಿಂದಲೂ, ಅನೇಕ ಬಾಣಗಳಿಂದಲೂ, ನಾನಾವಿಧವಾದ ಶಸ್ತ್ರಗಳಿಂದಲೂ, ಎರಡೂ ಸೈನ್ಯದ ವೀರರು ಯುದ್ಧದಲ್ಲಿ ಒಬ್ಬರನ್ನೊಬ್ಬರು ಕತ್ತರಿಸಿದರು.

ವರ್ತಮಾನೇ ತಥಾ ಘೋರೇ ತಸ್ಮಿನ್ ಯುದ್ಧೇ ಸುದಾರುಣೇ ।
ದ್ರೋಣಪಾಂಚಾಲ್ಯಯೋ ರಾಜನ್ ಮಹಾನಾಸೀತ್ ಸಮಾಗಮಃ ॥

ಎಲೈ ರಾಜನೇ, ಅಂತಹ ಘೋರವೂ ಮತ್ತು ಅತ್ಯಂತ ದಾರುಣವೂ ಆದ ಯುದ್ಧವು ನಡೆಯುತ್ತಿರಲು ದ್ರೋಣ ಮತ್ತು ಧೃಷ್ಟದ್ಯುಮ್ನರಿಗೆ ದೊಡ್ಡ ಸಮಾಗಮ ಉಂಟಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಅಷ್ಟಚತ್ವಾರಿಂಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೊಂಬತ್ತನೆಯ ಅಧ್ಯಾಯ

ದ್ರೋಣ-ಧೃಷ್ಟದ್ಯುಮ್ನರ ಯುದ್ಧ.

ಧೃತರಾಷ್ಟ್ರ:

ಕಥಂ ದ್ರೋಣೋ ಮಹೇಷ್ವಾಸಃ ಪಾಂಚಾಲ್ಯಶ್ಚಾಪಿ ಪಾರ್ಷತಃ ।
ರಣೇ ಸಮೀಯತುರ್ಯತ್ತೌ ತನ್ಮಾಚಕ್ಷ್ವ ಸಂಜಯ ॥೧॥

ಧೃತರಾಷ್ಟ್ರ- ಎಲೈ ಸಂಜಯನೇ, ಮಹಾಧನುರ್ಧಾರಿಗಳಾದ ದ್ರೋಣರು ಮತ್ತು ಪಾಂಚಾಲ ದೇಶದ ಧೃಷ್ಟದ್ಯುಮ್ನನು ಯುದ್ಧದಲ್ಲಿ ಒಬ್ಬರನ್ನೊಬ್ಬರು ಹೇಗೆ ಎದುರಿಸಿದರು ಎಂದು ನನಗೆ ಹೇಳು.

ದಿಷ್ಟಮೇವ ಪರಂ ಮನ್ಯೇ ಪೌರುಷಾದಪಿ ಸಂಜಯ ।
ಯತ್ರ ಶಾಂತನವೋ ಭೀಷ್ಮೋ ನಾತರದ್ ಯುಧಿ ಪಾಂಡವಮ್ ॥೨॥

ಎಲೈ ಸಂಜಯನೇ, ಶಂತನು ಪುತ್ರರಾದ ಭೀಷ್ಮರು ಯುದ್ಧದಲ್ಲಿ ಅರ್ಜುನನನ್ನು ಸೋಲಿಸಲು ಸಾಧ್ಯವಾಗಲಿಲ್ಲವೆಂದ ಮೇಲೆ ನಾನು ಪುರುಷ ಪ್ರಯತ್ನಕ್ಕಿಂತಲೂ ವಿಧಿಯೇ ಬಲಿಷ್ಠವೆಂದು ತಿಳಿಯುತ್ತೇನೆ.

ಭೀಷ್ಮೋ ಹಿ ಸಮರೇ ಕ್ರುದ್ಧೋ ಹನ್ಯಾಲ್ಲೋಕಾಂಶ್ಚರಾಚರಾನ್ ।
ಸ ಕಥಂ ಪಾಂಡವಂ ಯುದ್ಧೇ ನಾತರತ್ ಸಂಜಯೌಜಸಾ ॥೩॥

ಕ್ರುದ್ಧರಾದ ಭೀಷ್ಮರು ಯುದ್ಧದಲ್ಲಿ ಸ್ಥಾವರ-ಜಂಗಮ ಸಹಿತವಾದ ಲೋಕಗಳನ್ನೆಲ್ಲಾ ಕೊಂದಾರು! ಅಂತಹವರು ಯುದ್ಧದಲ್ಲಿ ತಮ್ಮ ಪರಾಕ್ರಮದಿಂದ ಪಾಂಡವನಾದ ಅರ್ಜುನನನ್ನು ಏಕೆ ಮೀರಲಿಲ್ಲ?

ಸಂಜಯಃ

ಶೃಣು ರಾಜನ್ ಸ್ಥಿರೋ ಭೂತ್ವಾ ಯುದ್ಧಮೇತತ್ ಸುದಾರುಣಮ್ ।
ನ ಶಕ್ಯಃ ಪಾಂಡವೋ ಜೇತುಂ ದೇವೈರಪಿ ಸವಾಸವೈಃ ॥೪॥

ಸಂಜಯ– ರಾಜನೇ, ಸ್ಥಿರವಾಗಿ ಕುಳಿತು ಬಹಳ ದಾರುಣವಾದ ಈ ಯುದ್ಧವನ್ನು ಕೇಳು. ಇಂದ್ರನಿಂದ ಸಹಿತರಾದ ದೇವತೆಗಳೂ ಸಹ ಅರ್ಜುನನನ್ನು ಗೆಲ್ಲಲಾರರು.

ದ್ರೋಣಸ್ತು ನಿಶಿತೈರ್ಬಾಣೈರ್ದೃಷ್ಟದ್ಯುಮ್ನಮಯೋಧಯತ್ ।
ಸಾರಥಿಂ ಚಾಸ್ಯ ಭಲ್ಲೇನ ರಥನೀಡಾದಪಾತಯತ್ ॥೫॥

ದ್ರೋಣರು ಹರಿತವಾದ ಬಾಣಗಳಿಂದ ಧೃಷ್ಟದ್ಯುಮ್ನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು. ರಥದ ಮುಂಭಾಗದಲ್ಲಿ ಕುಳಿತಿದ್ದ ಅವನ ಸಾರಥಿಯನ್ನು ಭಲ್ಲದಿಂದ ಕೆಳಗೆ ಕೆಡವಿದರು.

ತಸ್ಮಾಥ ಚತುರೋ ವಾಹಾಂಶ್ಚತುರ್ಭಿಃ ಸಾಯಕೋತ್ತಮೈಃ ।
ಪೀಡಯಾಮಾಸ ಸಂಕ್ರುದ್ಧೋ ಧೃಷ್ಟದ್ಯುಮ್ನಸ್ಯ ಮಾರಿಷ ॥೬॥

ಎಲೈ ಪೂಜ್ಯನೇ, ಬಹಳ ಕೋಪಗೊಂಡ ಅವರು ಧೃಷ್ಟದ್ಯುಮ್ನನ ನಾಲ್ಕು ಕುದುರೆಗಳನ್ನು ಗುರಿ ಮಾಡಿ ಶ್ರೇಷ್ಠವಾದ ನಾಲ್ಕು ಬಾಣಗಳನ್ನು ಪ್ರಯೋಗಿಸಿದರು.

ಧೃಷ್ಟದ್ಯುಮ್ನಸ್ತತೋ ದ್ರೋಣಂ ನವತ್ಯಾ ನಿಶಿತೈಃ ಶರೈಃ ।
ವಿವ್ಯಾಧ ಪ್ರಹಸನ್ ವೀರಸ್ತಿಷ್ಠೇತಿ ಚಾಬ್ರವೀತ್ ॥೭॥

ಆಗ ವೀರನಾದ ಧೃಷ್ಟದ್ಯುಮ್ನನು ತೊಂಬತ್ತು ಬಾಣಗಳನ್ನು ದ್ರೋಣರ ಮೇಲೆ ಪ್ರಯೋಗಿಸಿ ನಗುತ್ತಾ ನಿಲ್ಲು ನಿಲ್ಲು ಎಂದು ಹೇಳಿದನು.

ತತಃ ಪುನರಮೇಯಾತ್ಮಾ ಭಾರದ್ವಾಜಃ ಪ್ರತಾಪವಾನ್ ।
ಶರೈಃ ಪ್ರಚ್ಛಾದಯಾಮಾಸ ಧೃಷ್ಟದ್ಯುಮ್ನಮಮರ್ಷಣಮ್ ॥೮॥

ಆಗ ತಿಳಿಯಲು ಅಸಾಧ್ಯವಾದ ಮಹಿಮೆಯುಳ್ಳವರೂ, ಪ್ರತಾಪಶಾಲಿಗಳೂ ಆದ ದ್ರೋಣರು ಕೋಪಗೊಂಡು ಧೃಷ್ಟದ್ಯುಮ್ನನನ್ನು ಬಾಣಗಳಿಂದ ಮುಚ್ಚಿಹಾಕಿದರು.

ಆದದೇ ಚ ಶರಂ ಘೋರಂ ಪಾರ್ಷತಸ್ಯ ವಧಂ ಪ್ರತಿ ।
ಶಕ್ರಾಶನಿಸಮಸ್ಪರ್ಶಂ ಮೃತ್ಯುದಂಡಮಿವಾಪರಮ್ ॥೯॥

ಮತ್ತು ಇಂದ್ರನ ವಜ್ರಾಯುಧಕ್ಕೆ ಸಮನಾದ ಮೃತ್ಯುದಂಡದಂತಿದ್ದ ಇನ್ನೊಂದು ಘೋರವಾದ ಬಾಣವನ್ನು ಧೃಷ್ಟದ್ಯುಮ್ನನ ವಧೆಗಾಗಿ ಕೈಯಲ್ಲಿ ತೆಗೆದುಕೊಂಡರು.

ಹಾಹಾಕಾರೋ ಮಹಾನಾಸೀತ್ ಸರ್ವಸೈನ್ಯಸ್ಯ ಭಾರತ ।
ತಮಿಷುಂ ಸಂಧಿತಂ ದೃಷ್ಟ್ವಾ ಭಾರದ್ವಾಜೇನ ಸಂಯುಗೇ ॥೧೦॥

ಯುದ್ಧದಲ್ಲಿ ದ್ರೋಣರು ಆ ಬಾಣವನ್ನು ಬಿಲ್ಲಿಗೆ ಹೂಡಿದುದನ್ನು ನೋಡಿ ಎಲೈ ಭಾರತನೇ, ಎಲ್ಲಸೈನ್ಯದಲ್ಲಿಯೂ ದೊಡ್ಡ ಹಾಹಾಕಾರ ಉಂಟಾಯಿತು.

ತತ್ರಾದ್ಭುತಮಪಶ್ಯಾಮ ಧೃಷ್ಟದ್ಯುಮ್ನಸ್ಯ ಪೌರುಷಮ್ ।
ಯದೇಕಃ ಸಮರೇ ವೀರಸ್ತಸ್ಥೌ ಗಿರಿರಿವಾಚಲಃ ॥೧೧॥

ವೀರನಾದ ಧೃಷ್ಟದ್ಯುಮ್ನನು ಒಬ್ಬನೇ ಯುದ್ಧದಲ್ಲಿ ಪರ್ವತದಂತೆ ಅಲುಗಾಡದೆ ನಿಂತ ಅವನ ಅದ್ಭುತವಾದ ಪೌರುಷವನ್ನು ಅಲ್ಲಿ ನಾವು ನೋಡಿದೆವು.

ತಂ ಚ ದೀಪ್ತಂ ಶರಂ ಘೋರಮಾಯಾಂತಂ ಮೃತ್ಯುಮಾತ್ಮನಃ ।
ಚಿಚ್ಛೇದ ಶರವೃಷ್ಟಿಂ ಚ ಭಾರದ್ವಾಜೇ ಮುಮೋಚ ಹ ॥೧೨॥

ಮೃತ್ಯುವಿನಂತೆ ತನ್ನ ಕಡೆಗೆ ಬರುತ್ತಿದ್ದ ಆ ಘೋರವೂ, ದೀಪ್ತವೂ ಆದ ಬಾಣವನ್ನು ಕತ್ತರಿಸಿ ಅವನು ದ್ರೋಣರ ಮೇಲೆ ಬಾಣಗಳ ಮಳೆಯನ್ನು ಕರೆದನು.

ತತ ಉಚ್ಚುಕ್ರುಶುಃ ಸರ್ವೇ ಪಾಂಚಾಲಾಃ ಪಾಂಡವೈಃ ಸಹ ।
ಧೃಷ್ಟದ್ಯುಮ್ನೇನ ತತ್ಕರ್ಮ ಕೃತಂ ದೃಷ್ಟ್ವಾ ಸುದುಷ್ಕರಮ್ ॥೧೩॥

ಧೃಷ್ಟದ್ಯುಮ್ನನು ಅಂತಹ ದುಷ್ಕರವಾದ ಕಾರ್ಯವನ್ನು ಮಾಡಿದುದನ್ನು ನೋಡಿ ಪಾಂಡವರ ಜೊತೆಯಲ್ಲಿ ಸೇರಿದ ಎಲ್ಲಾ ಪಾಂಚಾಲರೂ ಹರ್ಷೋದ್ಗಾರವನ್ನು ಮಾಡಿದರು.

ತತಃ ಶಕ್ತಿಂ ಮಹಾವೇಗಾಂ ಸ್ವರ್ಣವೈಡೂರ್ಯಭೂಷಿತಾಮ್ ।
ದ್ರೋಣಸ್ಯ ನಿಧನಾಕಾಂಕ್ಷೀ ಚಿಕ್ಷೇಪ ಸ ಪರಾಕ್ರಮೀ ॥೧೪॥

ಅನಂತರ ಪರಾಕ್ರಮಶಾಲಿಯಾದ ಅವನು ದ್ರೋಣರ ವಧೆಯನ್ನು ಉದ್ದೇಶಿಸಿ ಸ್ವರ್ಣ-ವೈಡೂರ್ಯಗಳಿಂದ ಅಲಂಕೃತವಾದ ಮಹಾವೇಗವುಳ್ಳ ಶಕ್ತ್ಯಾಯುಧನ್ನು ತೆಗೆದುಕೊಂಡನು.

ತಾಮಾಪತಂತೀಂ ಸಹಸಾ ಶಕ್ತಿಂ ಕನಕಭೂಷಣಾಮ್ ।
ತ್ರಿಧಾ ಚಿಕ್ಷೇಪ ಸಮರೇ ಭಾರದ್ವಾಜೋ ಹಸನ್ನಿವ ॥೧೫॥

ಸುವರ್ಣಭೂಷಿತವಾದ ತಮ್ಮ ಕಡೆಗೆ ಬರುತ್ತಿದ್ದ ಆ ಶಕ್ತ್ಯಾಯುಧವನ್ನು ದ್ರೋಣರು ನಗುವವರಂತೆ ಮೂರುಭಾಗಗಳಾಗಿ ಕತ್ತರಿಸಿದರು.

ಶಕ್ತಿಂ ವಿನಿಹತಾಂ ದೃಷ್ಟ್ವಾ ಧೃಷ್ಟದ್ಯುಮ್ನಃ ಪ್ರತಾಪವಾನ್ ।
ವವರ್ಷ ಶರವರ್ಷಾಣಿ ದ್ರೋಣಂ ಪ್ರತಿ ಜನೇಶ್ವರ ॥೧೬॥

ಎಲೈ ರಾಜನೇ, ಶಕ್ತಿಯು ಹತವಾದುದನ್ನು ನೋಡಿ ಪ್ರತಾಪಶಾಲಿಯಾದ ಧೃಷ್ಟದ್ಯುಮ್ನನು ದ್ರೋಣರ ಮೇಲೆ ಬಾಣಗಳ ಮಳೆಯನ್ನು ಕರೆದನು.

ಶರವರ್ಷಂ ತತಸ್ತಂ ತು ಸನ್ನಿವಾರ್ಯ ಮಹಾಯಶಾಃ ।
ದ್ರೋಣೋ ದ್ರುಪದಪುತ್ರಸ್ಯ ಮಧ್ಯೇ ಚಿಚ್ಛೇದ ಕಾರ್ಮುಕಮ್ ॥೧೭॥

ಮಹಾಕೀರ್ತಿವಂತರಾದ ದ್ರೋಣರು ಆಗ ಆ ಬಾಣಗಳ ಮಳೆಯನ್ನು ತಡೆದು ದ್ರುಪದ ಪುತ್ರನಾದ ಧೃಷ್ಟದ್ಯುಮ್ನನ ಧನುಸ್ಸನ್ನು ಮಧ್ಯದಲ್ಲಿ ಕತ್ತರಿಸಿದರು.

ಸ ಛಿನ್ನಧನ್ವಾ ಸಮರೇ ಗದಾಂ ಗುರ್ವೀಂ ಮಹಾಯಶಾಃ ।
ದ್ರೋಣಾಯ ಪ್ರೇಷಯಾಮಾಸ ಗಿರಿಸಾರಮಯೀಂ ಬಲೀ ॥೧೮॥

ತನ್ನ ಧನುಸ್ಸು ಕತ್ತರಿಸಲ್ಪಡುತ್ತಿರಲು ಮಹಾಕೀರ್ತಿವಂತನಾದ, ಬಲಿಷ್ಠನಾದ ಧೃಷ್ಟದ್ಯುಮ್ನನು ಪರ್ವತದ ಸಾರದಂತಿದ್ದ ದೊಡ್ಡ ಗದೆಯನ್ನು ತೆಗೆದುಕೊಂಡು ದ್ರೋಣರ ಮೇಲೆ ಎಸೆದನು.

ಸಾ ಗದಾ ವೇಗವನ್ಮುಕ್ತಾ ಪ್ರಾಯಾದ್ ದ್ರೋಣಜಿಘಾಂಸಯಾ ।
ತತ್ರಾದ್ಭುತಮಪಶ್ಯಾಮ ಭಾರದ್ವಾಜಸ್ಯ ವಿಕ್ರಮಮ್ ॥೧೯॥

ದ್ರೋಣರನ್ನು ಕೊಲ್ಲುವ ಉದ್ದೇಶದಿಂದ ವೇಗವಾಗಿ ಪ್ರಯೋಗಿಸಲ್ಪಟ್ಟ ಆ ಗದೆಯು ದ್ರೋಣರ ಬಳಿಗೆ ಸಾಗಿತು. ಆಗ ದ್ರೋಣರ ಅದ್ಭುತವಾದ ಪರಾಕ್ರಮವನ್ನು ನೋಡಿದೆವು.

ಲಾಘವಾದ್ ವ್ಯಂಸಯಾಮಾಸ ಗದಾಂ ಹೇಮವಿಭೂಷಿತಾಮ್ ।
ವ್ಯಂಸಯಿತ್ವಾ ಗದಾಂ ತಾಂ ಚ ಪ್ರೇಷಯಾಮಾಸ ಪಾರ್ಷತೇ ॥೨೦॥

ಭಲ್ಲಾನ್ ಸುನಿಶಿತಾನ್ ಪೀತಾನ್ ಸ್ವರ್ಣಪುಂಖಾನ್ ಶಿಲಾಶಿತಾನ್ ।
ತೇ ತಸ್ಯ ಕವಚಂ ಭಿತ್ತ್ವಾ ಪಪುಃ ಶೋಣಿತಮಾಹವೇ ॥೨೧॥

ದ್ರೋಣರು ತಮ್ಮ ಚುರುಕುತನದಿಂದ ಸುವರ್ಣಭೂಷಿತವಾದ ಆ ಗದೆಯನ್ನು ತಪ್ಪಿಸಿದರು. ಆ ಗದೆಯಿಂದ ತಪ್ಪಿಸಿಕೊಂಡು ಧೃಷ್ಟದ್ಯುಮ್ನನ ಮೇಲೆ ಬಹಳ ಹರಿತವಾದ, ಹಳದಿ ಬಣ್ಣದಿಂದ ಕೂಡಿದ, ಸ್ವರ್ಣಪುಂಖವಿರುವ, ಕಲ್ಲಿನಲ್ಲಿ ಸಾಣೆ ಹಿಡಿದ ಭಲ್ಲಗಳನ್ನು ಪ್ರಯೋಗಿಸಿದರು. ಆ ಭಲ್ಲಗಳು ಯುದ್ಧದಲ್ಲಿ ಧೃಷ್ಟದ್ಯುಮ್ನನ ಕವಚವನ್ನು ಭೇದಿಸಿ ಅವನ ರಕ್ತವನ್ನು ಕುಡಿದವು.

ಅಥಾನ್ಯದ್ಧನುರಾದಾಯ ಧೃಷ್ಟದ್ಯುಮ್ನೋ ಮಹಾಮನಾಃ ।
ದ್ರೋಣಂ ಯುಧಿ ಪರಾಕ್ರಮ್ಯ ಶರೈರ್ವಿವ್ಯಾಧ ಪಂಚಭಿಃ ॥೨೨॥

ಆಗ ಧೈರ್ಯಶಾಲಿಯಾದ ಧೃಷ್ಟದ್ಯುಮ್ನನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ತನ್ನ ಪರಾಕ್ರಮದಿಂದ ದ್ರೋಣರ ಮೇಲೆ ಐದು ಬಾಣಗಳನ್ನು ಪ್ರಯೋಗಿಸಿದನು.

ರುಧಿರಾಕ್ತೌ ತತಸ್ತೌ ತು ಶುಶುಭಾತೇ ನರರ್ಷಭೌ ।
ವಸಂತಸಮಯೇ ರಾಜನ್ ಪುಷ್ಪಿತಾವಿವ ಕಿಂಶುಕೌ ॥೨೩॥

ಎಲೈ ರಾಜನೇ, ಆಗ ರಕ್ತದಿಂದ ಕೊಯ್ದ ಆ ಇಬ್ಬರು ನರಶ್ರೇಷ್ಠರೂ ವಸಂತ ಕಾಲದಲ್ಲಿ ಹೂವರಳಿದ ಮುತ್ತುಗದ ಮರದಂತೆ ಶೋಭಿಸಿದರು.

ಅಮರ್ಷಿತಸ್ತತೋ ರಾಜನ್ ಪರಾಕ್ರಮ್ಯ ಚಮೂಮುಖೇ ।
ದ್ರೋಣೋ ದ್ರುಪದಪುತ್ರಸ್ಯ ಪುನಶ್ಚಿಚ್ಛೇದ ಕಾರ್ಮುಕಮ್ ॥೨೪॥

ಎಲೈ ರಾಜನೇ, ಯುದ್ಧಮುಖದಲ್ಲಿ ಕೋಪಗೊಂಡ ದ್ರೋಣರು ಪುನಃ ದ್ರುಪದ ಪುತ್ರನಾದ ಧೃಷ್ಟದ್ಯುಮ್ನನ ಬಿಲ್ಲನ್ನು ಕತ್ತರಿಸಿದರು.

ಅಥೈನಂ ಭಿನ್ನಧನ್ವಾನಂ ಶರೈಃ ಸನ್ನತಪರ್ವಭಿಃ ।
ಅವಾಕಿರದಮೇಯಾತ್ಮಾ ವೃಷ್ಟ್ಯಾ ಮೇಘ ಇವಾಚಲಮ್ ॥೨೫॥

ಮಹಾಮಹಿಮರಾದ ದ್ರೋಣರು ಕತ್ತರಿಸಿದ ಧನುಸ್ಸುಳ್ಳ ಧೃಷ್ಟದ್ಯುಮ್ನನ ಮೇಲೆ ಮೋಡವು ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ಬಾಗಿದ ತುದಿಗಳುಳ್ಳ ಬಾಣದಿಂದ ಅವನನ್ನು ಬಾಣಗಳ ವರ್ಷಕ್ಕೆ ಗುರಿಮಾಡಿದರು.

ಸಾರಥಿಂ ಚಾಸ್ಯ ಭಲ್ಲೇನ ರಥನೀಡಾದಪಾತಯತ್ ।
ಅಥಾಸ್ಯ ಚತುರೋ ವಾಹಾಂಶ್ಚತುರ್ಭಿರ್ನಿಶಿತೈಃ ಶರೈಃ ॥೨೬॥

ಪಾತಯಾಮಾಸ ಸಮರೇ ಸಿಂಹನಾದಂ ನನಾದ ಚ ।
ತತೋಽಪರೇಣ ಭಲ್ಲೇನ ಹಸ್ತಾಚ್ಚಾಪಮಥಾಚ್ಛಿನತ್ ॥೨೭॥

ಅವನ ಸಾರಥಿಯನ್ನು ಭಲ್ಲದಿಂದ ರಥದ ಮುಂಭಾಗದಿಂದ ಕೆಡವಿದರು. ಅನಂತರ ಅವನ ನಾಲ್ಕು ಕುದುರೆಗಳನ್ನು ನಾಲ್ಕು ಹರಿತವಾದ ಬಾಣಗಳಿಂದ ಕೆಡವಿ ಯುದ್ಧದಲ್ಲಿ ಸಿಂಹನಾದವನ್ನು ಮಾಡಿದರು. ಅನಂತರ ಇನ್ನೊಂದು ಭಲ್ಲವನ್ನು ತೆಗೆದುಕೊಂಡು ಅವನ ಕೈಯಲ್ಲಿದ್ದ ಧನುಸ್ಸನ್ನು ಕತ್ತರಿಸಿದರು.

ಸ ಚ್ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಗದಾಪಾಣಿರವಾರೋಹತ್ ಖ್ಯಾಪಯನ್ ಪೌರುಷಂ ಮಹತ್ ॥೨೮॥

ತನ್ನ ಧನುಸ್ಸು ಕತ್ತರಿಸಲ್ಪಡುತ್ತಿರಲು ರಥವನ್ನೂ, ಅಶ್ವಗಳನ್ನೂ ಮತ್ತು ಸಾರಥಿಯನ್ನೂ ಕಳೆದುಕೊಂಡ ಅವನು ತನ್ನ ದೊಡ್ಡ ಪೌರುಷವನ್ನು ತೋರಿಸುತ್ತಾ ಗದೆಯನ್ನು ಹಿಡಿದುಕೊಂಡು ರಥದಿಂದ ಇಳಿದನು.

ತಾಮಸ್ಯ ವಿಶಿಖೈಸ್ತೂರ್ಣಂ ಪಾತಯಾಮಾಸ ಭಾರತ ।
ರಥಾದವರೂಢಸ್ಯ ತದದ್ಭುತಮಿವಾಭವತ್ ॥೨೯॥

ಎಲೈ ಭಾರತನೇ, ಅವನು ರಥದಿಂದ ಇಳಿಯುತ್ತಿರುವಂತೆಯೇ ಅವನ ಕೈಯಲ್ಲಿದ್ದ ಗದೆಯನ್ನು ದ್ರೋಣರು ತಮ್ಮ ಬಾಣಗಳಿಂದ ಶೀಘ್ರವಾಗಿ ಕೆಡವಿದರು. ಆ ದೃಶ್ಯವು ಅದ್ಭುತವಾಗಿದ್ದಿತು.

ತತಃ ಸ ವಿಪುಲಂ ಚರ್ಮ ಶತಚಂದ್ರಂ ಚ ಭಾನುಮತ್ ।
ಖಡ್ಗಂ ಚ ವಿಪುಲಂ ದಿವ್ಯಂ ಪ್ರಗೃಹ್ಯ ಸುಭುಜೋ ಬಲೀ ॥೩೦॥

ಅಭಿದುದ್ರಾವ ವೇಗೇನ ದ್ರೋಣಸ್ಯ ವಧಕಾಂಕ್ಷಯಾ ।
ಆಮಿಷಾರ್ಥೀ ಯಥಾ ಸಿಂಹೋ ವನೇ ಮತ್ತಮಿವ ದ್ವಿಪಮ್ ॥೩೧॥

ಅನಂತರ ಒಳ್ಳೆಯ ಭುಜವುಳ್ಳವನೂ ಮತ್ತು ಬಲಿಷ್ಠನೂ ಆದ ಧೃಷ್ಟದ್ಯುಮ್ನನು ಶತಚಂದ್ರ ಚಿಹ್ನೆಗಳಿಂದ ಕೂಡಿದ ಪ್ರಕಾಶಮಾನವಾದ, ವಿಸ್ತಾರವಾದ ಗುರಾಣಿಯನ್ನು ಮತ್ತು ದಿವ್ಯವಾದ ಅಗಲವಾದ ಖಡ್ಗವನ್ನು ತೆಗೆದುಕೊಂಡು ದ್ರೋಣರ ವಧೆಯನ್ನು ಆಶಿಸಿ ಕಾಡಿನಲ್ಲಿ ಮಾಂಸವನ್ನು ಬಯಸುವ ಸಿಂಹವು ಮದಗಜದ ಕಡೆಗೆ ಹೋಗುವಂತೆ ವೇಗವಾಗಿ ಅವರ ಕಡೆಗೆ ಧಾವಿಸಿದನು.

ತತ್ರಾದ್ಭುತಮಪಶ್ಯಾಮ ಭಾರದ್ವಾಜಸ್ಯ ಪೌರುಷಮ್ ।
ಲಾಘವಂ ಚಾಸ್ತ್ರಯೋಗಂ ಚ ಬಲಂ ಬಾಹ್ವೋಶ್ಚ ಭಾರತ ॥೩೨॥

ಯದೇನಂ ಶರವರ್ಷೇಣ ವಾರಯಾಮಾಸ ಪಾರ್ಷತಮ್ ।
ನ ಶಶಾಕ ತತೋ ಗಂತುಂ ಬಲವಾನಪಿ ಸಂಯುಗೇ ॥೩೩॥

ಎಲೈ ಭಾರತನೇ, ಆಗ ದ್ರೋಣರು ತಮ್ಮ ಬಾಣಗಳ ಮಳೆಯಿಂದ ಧೃಷ್ಟದ್ಯುಮ್ನನನ್ನು ತಡೆದ ದ್ರೋಣರ ಅದ್ಭುತವಾದ ಪೌರುಷವನ್ನೂ, ಚುರುಕುತನವನ್ನೂ, ಅಸ್ತ್ರಕೌಶಲವನ್ನೂ ಮತ್ತು ಬಾಹುಬಲವನ್ನೂ ನೋಡಿದೆವು.

ತತ್ರ ಸ್ಥಿತಮಪಶ್ಯಾಮ ಧೃಷ್ಟದ್ಯುಮ್ನಂ ಮಹಾರಥಮ್ ।
ವಾರಯಾಣಂ ಶರೌಘಾಂಶ್ಚ ವರ್ಮಣಾ ಕೃತಹಸ್ತವತ್ ॥೩೪॥

ಮಹಾರಥನಾದ ಧೃಷ್ಟದ್ಯುಮ್ನನಾದರೂ ಅಲ್ಲಿಯೇ ನಿಂತು ಪಳಗಿದ ಹಸ್ತವುಳ್ಳವನಂತೆ ತನ್ನ ಗುರಾಣಿಯಿಂದ ದ್ರೋಣರ ಬಾಣಗಳ ಸಮೂಹವನ್ನು ನಿವಾರಿಸುವುದನ್ನು ನೋಡಿದೆವು. ಧೃಷ್ಟದ್ಯುಮ್ನನು ಬಲಿಷ್ಠನಾದರೂ ಯುದ್ಧದಲ್ಲಿ ಮುಂದೆ ಬರಲು ಸಾಧ್ಯವಾಗಲಿಲ್ಲ.

ತತೋ ಭೀಮೋ ಮಹಾಬಾಹುಃ ಸಹಸಾಭ್ಯಪತದ್ ಬಲೀ ।
ಸಾಹಾಯ್ಯಕಾರೀ ಸಮರೇ ಪಾರ್ಷತಸ್ಯ ಮಹಾತ್ಮನಃ ॥೩೫॥

ಆಗ ಮಹಾಬಾಹುವೂ, ಬಲಿಷ್ಠನೂ ಆದ ಭೀಮಸೇನನು ಯುದ್ಧದಲ್ಲಿ ಮಹಾತ್ಮನಾದ ಧೃಷ್ಟದ್ಯುಮ್ನನಿಗೆ ಸಹಾಯವನ್ನು ಮಾಡಲು ತಕ್ಷಣ ಅಲ್ಲಿಗೆ ಧಾವಿಸಿ ಬಂದನು.

ಸ ದ್ರೋಣಂ ನಿಶಿತೈರ್ಬಾಣೈ ರಾಜನ್ ವಿವ್ಯಾಧ ಸಪ್ತಭಿಃ ।
ಪಾರ್ಷತಂ ಚ ತದಾ ತೂರ್ಣಮನ್ಯಮಾರೋಪಯದ್ ರಥಮ್ ॥೩೬॥

ಎಲೈ ರಾಜನೇ, ಅವನು ದ್ರೋಣರ ಮೇಲೆ ಏಳು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಶೀಘ್ರವಾಗಿ ಧೃಷ್ಟದ್ಯುಮ್ನನನ್ನು ಆಗ ಇನ್ನೊಂದು ರಥಕ್ಕೆ ಹತ್ತಿಸಿದನು.

ತತೋ ದುರ್ಯೋಧನೋ ರಾಜಾ ಕಳಿಂಗಂ ಸಮಚೋದಯತ್ ।
ಸೈನ್ಯೇನ ಮಹತಾ ಯುಕ್ತಂ ಭಾರದ್ವಾಜಸ್ಯ ರಕ್ಷಣೇ ॥೩೭॥

ಆಗ ರಾಜನಾದ ದುರ್ಯೋಧನನು ತನ್ನ ದೊಡ್ಡ ಸೈನ್ಯದಿಂದ ಕೂಡಿದ ಕಳಿಂಗ ರಾಜನನ್ನು ದ್ರೋಣರ ರಕ್ಷಣೆಗಾಗಿ ಆದೇಶಿಸಿದನು.

ತತಃ ಸಾ ಮಹತೀ ಸೇನಾ ಕಳಿಂಗಾನಾಂ ಜನೇಶ್ವರ ।
ಭೀಮಮಭ್ಯುದ್ಯಯೌ ತೂರ್ಣಂ ತವ ಪುತ್ರಸ್ಯ ಶಾಸನಾತ್ ॥೩೮॥

ಎಲೈ ರಾಜನೇ, ಆಗ ನಿನ್ನ ಪುತ್ರನ ಆಜ್ಞೆಯಂತೆ ಕಳಿಂಗರ ದೊಡ್ಡ ಸೈನ್ಯವು ಶೀಘ್ರವಾಗಿ ಭೀಮನ ಕಡೆಗೆ ಧಾವಿಸಿತು.

ಪಾಂಚಾಲ್ಯಮಭಿಸಂತ್ಯಜ್ಯ ದ್ರೋಣೋಽಪಿ ರಥಿನಾಂ ವರಃ ।
ವಿರಾಟದ್ರುಪದೌ ವೃದ್ಧೌ ಯೋಧಯಾಮಾಸ ಸಂಗತೌ ।
ಧೃಷ್ಟದ್ಯುಮ್ನೋಽಪಿ ಸಮರೇ ಧರ್ಮರಾಜಂ ಸಮಭ್ಯಯಾತ್ ॥೩೯॥

ರಥಿಶ್ರೇಷ್ಠರಾದ ದ್ರೋಣರೂ ಸಹ ಧೃಷ್ಟದ್ಯುಮ್ನನನ್ನು ಬಿಟ್ಟು ಜೊತೆಯಲ್ಲಿ ಯುದ್ಧ ಮಾಡುತ್ತಿದ್ದ ವೃದ್ಧರಾದ ವಿರಾಟ-ದ್ರುಪದರ ಜೊತೆಯಲ್ಲಿ ಯುದ್ಧವನ್ನು ಮಾಡಿದರು. ಧೃಷ್ಟದ್ಯುಮ್ನನೂ ಸಹ ಯುದ್ಧದಲ್ಲಿ ಯುಧಿಷ್ಠಿರನು ಇದ್ದ ಕಡೆಗೆ ಹೋದನು.

ತತಃ ಪ್ರವವೃತೇ ಯುದ್ಧಂ ತುಮುಲಂ ಲೋಮಹರ್ಷಣಮ್ ।
ಕಳಿಂಗಾನಾಂ ಚ ಸಮರೇ ಭೀಮಸ್ಯ ಚ ಮಹಾತ್ಮನಃ ।
ಜಗತಃ ಪ್ರಕ್ಷಯಕರಂ ಘೋರರೂಪಂ ಭಯಾನಕಮ್ ॥೪೦॥

ಅನಂತರ ಕಳಿಂಗರ ಸೈನ್ಯಕ್ಕೂ ಮಹಾತ್ಮನಾದ ಭೀಮಸೇನನಿಗೂ ಜಗತ್ತಿಗೆ ನಾಶಕರವೂ, ಘೋರವೂ, ಭಯಂಕರವೂ, ತೀವ್ರವೂ ಮತ್ತು ರೋಮಾಂಚಕಾರಿಯೂ ಆದ ಯುದ್ಧವು ಜರುಗಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಏಕೋನಪಂಚಾಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತನೆಯ ಅಧ್ಯಾಯ

ಕಳಿಂಗರ ಜೊತೆಯಲ್ಲಿ ಯುದ್ಧವನ್ನು ಮಾಡುವ
ಭೀಮಸೇನನ ಖಡ್ಗಯುದ್ಧಕೌಶಲ.

ಧೃತರಾಷ್ಟ್ರಃ

ತಥಾ ಪ್ರತಿಸಮಾದಿಷ್ಟಃ ಕಳಿಂಗೋ ವಾಹಿನೀಪತಿಃ ।
ಕಥಮದ್ಭುತಕರ್ಮಾಣಂ ಭೀಮಸೇನಂ ಮಹಾಬಲಮ್ ॥೧॥

ಚರಂತಂ ಗದಯಾ ವೀರಂ ದಂಡಪಾಣಮಿವಾಂತಕಮ್ ।
ಯೋಧಯಾಮಾಸ ಸಮರೇ ಕಳಿಂಗಃ ಸಹ ಸೇನಯಾ ॥೨॥

ಧೃತರಾಷ್ಟ್ರ– ಹೀಗೆ ದುರ್ಯೋಧನನಿಂದ ಆಜ್ಞಾಪಿಸಲ್ಪಟ್ಟ ಸೇನಾಪತಿಯಾದ ಕಳಿಂಗನು ಅದ್ಭುತ ಕಾರ್ಯವನ್ನು ಮಾಡುವವನೂ, ಮಹಾಬಲನೂ, ವೀರನೂ, ದಂಡಹಸ್ತನಾದ ಯಮನಂತೆ ಇರುವವನೂ, ಗದೆಯನ್ನು ಹಿಡಿದು ತಿರುಗುವವನೂ ಆದ ಭೀಮಸೇನನ ಜೊತೆಯಲ್ಲಿ ತನ್ನ ಸೈನ್ಯದಿಂದೊಡಗೂಡಿ ಹೇಗೆ ಯುದ್ಧವನ್ನು ಮಾಡಿದನು?

ಸಂಜಯಃ

ಪುತ್ರೇಣ ತವ ರಾಜೇಂದ್ರ ಸ ತಥೋಕ್ತೋ ಮಹಾಬಲಃ ।
ಮಹತ್ಯಾ ಸೇನಯಾ ಗುಪ್ತಃ ಪ್ರಾಯಾದ್ ಭೀಮರಥಂ ಪ್ರತಿ ॥೩॥

ಸಂಜಯ– ಎಲೈ ರಾಜೇಂದ್ರನೇ, ನಿನ್ನ ಪುತ್ರನಿಂದ ಹಾಗೆ ಹೇಳಲ್ಪಟ್ಟ ಮಹಾಬಲನಾದ ಕಳಿಂಗ ರಾಜನು ದೊಡ್ಡ ಸೈನ್ಯದಿಂದ ರಕ್ಷಿತನಾಗಿ ಭೀಮಸೇನನ ರಥದ ಕಡೆಗೆ ಹೊರಟನು.

ತಾಮಾಪತಂತೀಂ ಸಹಸಾ ಕಳಿಂಗಾನಾಂ ಮಹಾಚಮೂಮ್ ।
ರಥನಾಗಾಶ್ವಕಲಿಲಾಂ ಪ್ರಗೃಹೀತಮಹಾಯುಧಾಮ್ ॥೪॥

ಭೀಮಸೇನಃ ಕಳಿಂಗಾನಾಮಾರ್ಚ್ಛದ್ ಭಾರತ ವಾಹಿನೀಮ್ ।
ಕೇತುಮಂತಂ ಚ ನೈಷಾದಿಮಾಯಾಂತಂ ಸಹ ಚೇದಿಭಿಃ ॥೫॥

ರಥ-ಗಜ-ಅಶ್ವಗಳಿಂದ ನಿಬಿಡವಾದ, ಮಹಾಯುಧಗಳನ್ನು ಧರಿಸಿದ ಕಳಿಂಗರ ದೊಡ್ಡ ಸೈನ್ಯವು ತಕ್ಷಣ ಬರುತ್ತಿರುವುದನ್ನು ನೋಡಿ, ಹಾಗೆಯೇ ನಿಷಾದಾಧಿಪತಿಯಾದ ಕೇತುಮಂತನೂ ಚೇದಿಗಳ ಸೈನ್ಯದ ಜೊತೆಯಲ್ಲಿ ಬರುತ್ತಿರುವುದನ್ನು ನೋಡಿ ಎಲೈ ಭಾರತನೇ, ಭೀಮಸೇನನು ಕಳಿಂಗರ ಸೈನ್ಯದ ಮೇಲೆ ಎರಗಿದನು.

ತತಃ ಶ್ರುತಾಯುಃ ಸಂಕ್ರುದ್ಧೋ ರಾಜ್ಞಾ ಕೇತುಮತಾ ಸಹ ।
ಆಸಸಾದ ರಣೇ ಭೀಮಂ ವ್ಯೂಢಾನೀಕೇಷು ಚೇದಿಷು ॥೬॥

ಆಗ ಚೇದಿಗಳ ಸೈನ್ಯವು ವ್ಯೂಹಗೊಂಡಿರಲು ಕೋಪಗೊಂಡ ಶ್ರುತಾಯು ರಾಜನು ಕೇತುಮಾನ್ ರಾಜನ ಜೊತೆಯಲ್ಲಿಯುದ್ಧದಲ್ಲಿ ಭೀಮನನ್ನು ಸಮೀಪಿಸಿದನು.

ರಥೈರನೇಕಸಾಹಸ್ರೈಃ ಕಳಿಂಗಾನಾಂ ಜನಾಧಿಪಃ ।
ಅಯುತೇನ ಗಜಾನಾಂ ಚ ನಿಷಾದ್ಯೈಃ ಸಹ ಕೇತುಮಾನ್ ।
ಭೀಮಸೇನಂ ರಣೇ ರಾಜನ್ ಸಮಂತಾತ್ ಪರ್ಯವಾರಯತ್ ॥೭॥

ಎಲೈ ರಾಜನೇ, ಕಳಿಂಗ ದೇಶಾಧಿಪತಿಯಾದ ಶ್ರುತಾಯುವು ಅನೇಕ ಸಹಸ್ರ ರಥಗಳಿಂದಲೂ, ನಿಷಾದಾಧಿಪತಿಯಾದ ಕೇತುಮಂತನು ಹತ್ತುಸಹಸ್ರ ಗಜಗಳಿಂದಲೂ ರಣರಂಗದಲ್ಲಿ ಭೀಮಸೇನನನ್ನು ಎಲ್ಲ ಕಡೆಯಿಂದಲೂ ಸುತ್ತುವರಿದರು.

ಚೇದಿಮತ್ಸ್ಯಕರೂಷಾಶ್ಚ ಭೀಮಸೇನಪುರೋಗಮಾಃ ।
ಅಭ್ಯವರ್ತಂತ ಸಹಸಾ ನಿಷಾದಾನ್ ಸಹ ರಾಜಭಿಃ ॥೮॥

ಚೇದಿ, ಮತ್ಸ್ಯ, ಕರೂಷ ಸೈನ್ಯಗಳು ಭೀಮಸೇನನನ್ನು ಮುಂದೆ ಮಾಡಿಕೊಂಡು ರಾಜರಿಂದ ಕೂಡಿದ ನಿಷಾದರ ಸೈನ್ಯದ ಕಡೆಗೆ ತಕ್ಷಣ ಧಾವಿಸಿದವು.

ತತಃ ಪ್ರವವೃತೇ ಯುದ್ಧಂ ಘೋರರೂಪಂ ಭಯಾನಕಮ್ ।
ಪ್ರಜಾನನ್ನ ಚ ಯೋಧಾನ್ ಸ್ವಾನ್ ಪರಸ್ಪರಜಿಘಾಂಸಯಾ ॥೯॥

ಅನಂತರ ಭಯಂಕರವೂ ಮತ್ತು ಘೋರವೂ ಆದ ಯುದ್ಧವು ಪ್ರಾರಂಭವಾಯಿತು. ಪರಸ್ಪರ ಕೊಲ್ಲುವ ಆಸೆಯನ್ನು ಹೊಂದಿದ್ದ ಸೈನಿಕರು ತಮ್ಮ ಯೋಧರನ್ನೂ ತಿಳಿಯಲಿಲ್ಲ.

ಘೋರಮಾಸೀತ್ ತತೋ ಯುದ್ಧಂ ಭೀಮಸ್ಯ ಸಹಸಾ ಪರೈಃ ।
ಯಥೇಂದ್ರಸ್ಯ ಮಹಾರಾಜ ಮಹತ್ಯಾ ದೈತ್ಯಸೇನಯಾ ॥೧೦॥

ಎಲೈ ಮಹಾರಾಜನೇ, ದೊಡ್ಡ ದೈತ್ಯಸೈನ್ಯದ ಜೊತೆಯಲ್ಲಿ ಇಂದ್ರನಿಗೆ ಯುದ್ಧವಾದಂತೆ ಭೀಮಸೇನನಿಗೆ ಶತ್ರುಗಳ ಜೊತೆಯಲ್ಲಿ ತಕ್ಷಣದಲ್ಲಿಯೇ ಘೋರವಾದ ಯುದ್ಧವು ಉಂಟಾಯಿತು.

ತಸ್ಯ ಸೈನ್ಯಸ್ಯ ಸಂಗ್ರಾಮೇ ಯುಧ್ಯಮಾನಸ್ಯ ಭಾರತ ।
ಬಭೂವ ಸುಮಹಾನ್ ಶಬ್ದಃ ಸಾಗರಸ್ಯೇವ ಗರ್ಜತಃ ॥೧೧॥

ಎಲೈ ಭಾರತನೇ, ಆ ಸೈನ್ಯದ ಜೊತೆಯಲ್ಲಿ ಯುದ್ಧ ಮಾಡುತ್ತಿದ್ದ ಭೀಮನ ಬಹಳ ದೊಡ್ಡದಾದ ನಾದವು ಸಾಗರದ ಗರ್ಜನೆಯಂತಿದ್ದಿತು.

ಅನ್ಯೋನ್ಯಸ್ಯ ತದಾ ಯೋಧಾ ನಿಘ್ನಂತಂತೋ ವಿಶಾಂಪತೇ ।
ಮಹೀಂ ಚಕ್ರುಶ್ಚಿತಾಂ ಸರ್ವಾಂ ಶಶಶೋಣಿತಸನ್ನಿಭಾಮ್ ॥೧೨॥

ಎಲೈ ರಾಜನೇ, ಯೋಧರು ಪರಸ್ಪರವಾಗಿ ಕತ್ತರಿಸುತ್ತಾ ಭೂಮಿಯ ಮೇಲೆ ಮೊಲದ ರಕ್ತದಂತೆ ಕೆಂಪಾದ ಶರೀರಗಳನ್ನು ರಾಶಿ ಮಾಡಿದರು.

ಯೋಧಾಂಶ್ಚ ಸ್ವಾನ್ ಪರಾನ್ ವಾಪಿ ನಾಭ್ಯಜಾನನ್ ಜಿಘಾಂಸಯಾ ।
ಸ್ವನಹ್ಯಾದದತೇ ಸ್ವಾಶ್ಚ ಶೂರಾಃ ಸಮರದುರ್ಜಯಾಃ ॥೧೩॥

ಯೋಧರು ಪರಸ್ಪರವಾಗಿ ಕೊಲ್ಲುವ ಇಚ್ಛೆಯುಳ್ಳವರಾಗಿ ತಮ್ಮವರನ್ನೂ ಅಥವಾ ಶತ್ರುಗಳನ್ನೂ ಗುರುತಿಸಲಿಲ್ಲ. ಸಮರದುರ್ಜಯರಾದ ಶೂರರು ತಮ್ಮ ಸೈನ್ಯದ ಯೋಧರನ್ನೇ ಎದುರಿಸಿ ಯುದ್ಧವನ್ನು ಮಾಡಿದರು.

ವಿಮರ್ದಃ ಸುಮಹಾನಾಸೀದರ್ವತಾಂ ಬಹುಭಿಃ ಸಹ ।
ಕಳಿಂಗೈಃ ಸಹ ಚೇದೀನಾಂ ನಿಷಾದೈಶ್ಚ ವಿಶಾಂಪತೇ ॥೧೪॥

ಎಲೈ ರಾಜನೇ, ಬಹುಸೈನ್ಯವುಳ್ಳ ಕಳಿಂಗರು ಮತ್ತು ನಿಷಾದರ ಜೊತೆಯಲ್ಲಿ ಅಲ್ಪಸೈನ್ಯವುಳ್ಳ ಭೀಮನ ಚೇದಿ ಯೋಧರಿಗೆ ಬಹಳ ದೊಡ್ಡ ಸಂಘರ್ಷವು ಉಂಟಾಯಿತು.

ಕೃತ್ವಾ ಪುರುಷಕಾರಂ ತು ಯಥಾಶಕ್ತಿ ಮಹಾಬಲಾಃ ।
ಭೀಮಸೇನಂ ಪರಿತ್ಯಜ್ಯ ಸನ್ನ್ಯವರ್ತಂತ ಚೇದಯಃ ॥೧೫॥

ಮಹಾಬಲರಾದ ಚೇದಿಗಳು ತಮ್ಮ ಶಕ್ತಿಯಿದ್ದಷ್ಟು ಪ್ರಯತ್ನವನ್ನು ಮಾಡಿ ಅನಂತರ ಭೀಮಸೇನನನ್ನು ಬಿಟ್ಟು ಹಿಂದಿರುಗಿದರು.

ಸರ್ವೈಃ ಕಳಿಂಗೈರಾಸನ್ನಃ ಸನ್ನಿವೃತ್ತೇಷು ಚೇದಿಷು ।
ಸ್ವಬಾಹುಬಲಮಾಸ್ಥಾಯ ನ ನ್ಯವರ್ತತ ಪಾಂಡವಃ ॥೧೬॥

ಚೇದಿಗಳು ಹಿಂದಿರುಗಿದ ಮೇಲೆ ಎಲ್ಲ ಕಳಿಂಗ ಸೈನ್ಯದಿಂದ ಆವೃತನಾದ ಭೀಮಸೇನನು ತನ್ನ ಬಾಹುಬಲವನ್ನು ಆಶ್ರಯಿಸಿ ಹಿಂದಿರುಗಲಿಲ್ಲ.

ನ ಚಚಾಲ ರಥೋಪಸ್ಥಾದ್ ಭೀಮಸೇನೋ ಮಹಾಬಲಃ ।
ಶಿತೈರವಾಕಿರನ್ ಬಾಣೈಃ ಕಳಿಂಗಾನಾಂ ವರೂಥಿನೀಮ್ ॥೧೭॥

ಮಹಾಬಲನಾದ ಭೀಮಸೇನನು ತನ್ನ ರಥದ ಮುಂಭಾಗದಿಂದ ಅಲುಗಾಡಲಿಲ್ಲ. ಕಳಿಂಗರ ಸೈನ್ಯದ ಮೇಲೆ ಹರಿತವಾದ ಬಾಣಗಳನ್ನು ಸುರಿಸಿದನು.

ಕಳಿಂಗಸ್ತು ಮಹೇಷ್ವಾಸಃ ಪುತ್ರಶ್ಚಾಸ್ಯ ಮಹಾರಥಃ ।
ಶಕ್ರದೇವ ಇತಿ ಖ್ಯಾತೋ ಜಘ್ನತುಃ ಪಾಂಡವಂ ಶರೈಃ ॥೧೮॥

ಮಹಾಧನುರ್ಧಾರಿಯಾದ ಕಳಿಂಗನೂ ಮತ್ತು ಅವನ ಪುತ್ರನಾದ ಮಹಾರಥನಾದ ಶಕ್ರದೇವನೂ ಸಹ ಭೀಮಸೇನನ ಮೇಲೆ ಬಾಣಗಳನ್ನು ಪ್ರಯೋಗಿಸಿದರು.

ತತೋ ಭೀಮೋ ಮಹಾಬಾಹುರ್ವಿಧುನ್ವನ್ ರುಚಿರಂ ಧನುಃ ।
ಯೋಧಯಾಮಾಸ ಕಾಳಿಂಗಾನ್ ಸ್ವಬಾಹುಬಲಮಾಶ್ರಿತಃ ॥೧೯॥

ಆಗ ಮಹಾಬಾಹುವಾದ ಭೀಮಸೇನನು ತನ್ನ ಬಾಹುಬಲವನ್ನೇ ಆಶ್ರಯಿಸಿ ತನ್ನ ಮನೋಹರವಾದ ಧನುಸ್ಸನ್ನು ಕಂಪಿಸುತ್ತಾ ಕಾಳಿಂಗರ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಶಕ್ರದೇವಸ್ತು ಸಮರೇ ವಿಸೃಜನ್ಸಾಯಕಾನ್ಬಹೂನ್ ।
ಅಶ್ವಾನ್ ಜಘಾನ ಸಮರೇ ಭೀಮಸೇನಸ್ಯ ಸಾಯಕೈಃ ।
ವವರ್ಷ ಶರವರ್ಷಾಣಿ ತಪಾಂತೇ ಜಲದೋ ಯಥಾ ॥೨೦॥

ಶಕ್ರದೇವನು ಯುದ್ಧದಲ್ಲಿ ಅನೇಕ ಬಾಣಗಳನ್ನು ಪ್ರಯೋಗಿಸುತ್ತಾ ತನ್ನ ಬಾಣಗಳಿಂದ ಭೀಮಸೇನನ ರಥದ ಅಶ್ವಗಳನ್ನು ಕೊಂದು, ಬೇಸಿಗೆಯು ಕಳೆದ ಮೇಲೆ ಮೋಡಗಳು ಮಳೆಯನ್ನು ಸುರಿಸುವಂತೆ ಭೀಮಸೇನನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ತಂ ದೃಷ್ಟ್ವಾ ವಿರಥಂ ತತ್ರ ಭೀಮಸೇನಮರಿಂದಮಮ್ ।
ಶಕ್ರದೇವೋಽಭಿದುದ್ರಾವ ಶಿತೈರವಾಕಿರನ್ ಶರೈಃ ।
ಭೀಮಸ್ಯೋಪರಿ ರಾಜೇಂದ್ರ ಶಕ್ರದೇವೋ ಮಹಾಬಲಃ ॥೨೧॥

ಅರಿಂದಮನಾದ ಭೀಮಸೇನನು ರಥವನ್ನು ಕಳೆದುಕೊಂಡುದನ್ನು ನೋಡಿ ಎಲೈ ರಾಜೇಂದ್ರನೇ, ಮಹಾಬಲನಾದ ಶಕ್ರದೇವನು ಭೀಮಸೇನನ ಕಡೆಗೆ ಸಾಗಿ ತೀಕ್ಷ್ಣವಾದ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು.

ಹತಾಶ್ವೇ ತು ರಥೇ ತಿಷ್ಠನ್ ಭೀಮಸೇನೋ ಮಹಾಬಲಃ ।
ಶಕ್ರದೇವಾಯ ಚಿಕ್ಷೇಪ ಸರ್ವಶಕ್ತ್ಯಾಯಸೀಂ ಗದಾಮ್ ॥೨೨॥

ಮಹಾಬಲನಾದ ಭೀಮಸೇನನು ಅಶ್ವಗಳಿಲ್ಲದ ರಥದಲ್ಲಿಯೇ ನಿಂತು ಶಕ್ರದೇವನ ಮೇಲೆ ಯಾವಾಗಲೂ ನೆಲುವಿನಲ್ಲಿಯೇ ಇರುತ್ತಿದ್ದ ಕಬ್ಬಿಣದ ಗದೆಯನ್ನು ಎಸೆದನು.

ಸ ತಯಾ ನಿಹತೋ ರಾಜನ್ ಕಳಿಂಗಸ್ಯ ಸುತೋ ರಥಾತ್ ।
ಸಧ್ವಜಃ ಸಹ ಸೂತೇನ ಜಗಾಮ ಧರಣೀತಳಮ್ ॥೨೩॥

ಎಲೈ ರಾಜನೇ, ಆ ಗದೆಯಿಂದ ಹೊಡೆಯಲ್ಪಟ್ಟ ಕಳಿಂಗರಾಜನ ಮಗನು ರಥದ ಧ್ವಜ ಮತ್ತು ಸೂತರ ಜೊತೆಯಲ್ಲಿ ರಥದಿಂದ ಕೆಳಗೆ ಭೂಮಿಯ ಮೇಲೆ ಉರುಳಿದನು.

ಹತಮಾತ್ಮಸುತಂ ದೃಷ್ಟ್ವಾ ಕಳಿಂಗಾನಾಂ ಜನಾಧಿಪಃ ।
ರಥೈರನೇಕಸಾಹಸ್ರೈರ್ಭೀಮಸ್ಯಾವಾರಯದ್ ದಿಶಃ ॥೨೪॥

ಎಲೈ ಜನಾಧಿಪತಿಯೇ, ತನ್ನ ಪುತ್ರನು ಹತನಾದುದನ್ನು ನೋಡಿ ಕಳಿಂಗರಾಜನು ಅನೇಕ ಸಹಸ್ರ ರಥಗಳಿಂದ ಭೀಮಸೇನನನ್ನು ಎಲ್ಲ ದಿಕ್ಕುಗಳಲ್ಲಿಯೂ ಮುಚ್ಚಿದನು.

ತತೋ ಭೀಮೋ ಮಹಾಬಾಹುರ್ಗುರ್ವೀಂ ತ್ಯಕ್ತ್ವಾ ಮಹಾಗದಾಮ್ ।
ಉದ್ಬಿಭರ್ಹಾಥ ನಿಸ್ತ್ರಿಂಶಂ ಚಿಕೀರ್ಷುಃ ಕರ್ಮ ದಾರುಣಮ್ ॥೨೫॥

ಚರ್ಮ ಚಾಪ್ರತಿಮಂ ರಾಜನ್ನಾರ್ಷಭಂ ಪುರುಷರ್ಷಭ ।
ನಕ್ಷತ್ರೈರರ್ಧಚಂದ್ರೈಶ್ಚ ತಾಂಶಕುಂಭಮಯೈಶ್ಚಿತಮ್ ॥೨೬॥

ಆಗ ಮಹಾಬಾಹುವಾದ ಭೀಮಸೇನನು ತನ್ನ ದೊಡ್ಡ ಗದೆಯನ್ನು ಬಿಟ್ಟು ದಾರುಣವಾದ ಕರ್ಮವನ್ನು ಮಾಡಲು ಬಯಸಿ ಒರೆಯಿಂದ ಖಡ್ಗವನ್ನು ಎಳೆದನು. ಎಲೈ ಪುರುಷಶ್ರೇಷ್ಠನೇ, ಹಾಗೆಯೇ ಸುವರ್ಣಮಯವಾದ ನಕ್ಷತ್ರದಿಂದಲೂ ಮತ್ತು ಅರ್ಧಚಂದ್ರದಿಂದಲೂ ಅಲಂಕೃತವಾದ ಎತ್ತಿನ ಚರ್ಮದ ಹಿಡಿಯುಳ್ಳ ಗುರಾಣಿಯನ್ನೂ ಕೈಯಲ್ಲಿ ತೆಗೆದುಕೊಂಡನು.

ಕಳಿಂಗಸ್ತು ತತಃ ಕ್ರುದ್ಧೋ ಧನುರ್ಜ್ಯಾಮವಮೃಜ್ಯ ಹ ।
ಪ್ರಗೃಹ್ಯ ಚ ಶರಂ ಘೋರಮೇಕಂ ಸರ್ಪವಿಷೋಪಮಮ್ ।
ಪ್ರಾಹಿಣೋದ್ ಭೀಮಸೇನಾಯ ವಧಾಕಾಂಕ್ಷೀ ಜನೇಶ್ವರಃ ॥೨೭॥

ಎಲೈ ಜನೇಶ್ವರನೇ, ಕಳಿಂಗನಾದರೂ ಆಗ ಕೋಪಗೊಂಡು ತನ್ನ ಧನುಸ್ಸಿನ ಹೆದೆಯನ್ನು ನೇವರಿಸಿ ಸರ್ಪವಿಷದಂತಿದ್ದ ಒಂದು ಘೋರವಾದ ಬಾಣವನ್ನು ತೆಗೆದುಕೊಂಡು ಭೀಮಸೇನನ ವಧೆ ಮಾಡಲು ಬಯಸಿ ಆ ಬಾಣವನ್ನು ಭೀಮಸೇನನ ಮೇಲೆ ಪ್ರಯೋಗಿಸಿದನು.

ತಮಾಪತಂತಂ ವೇಗೇನ ಪ್ರೇರಿತಂ ನಿಶಿತಂ ಶರಮ್ ।
ಭೀಮಸೇನೋ ದ್ವಿಧಾ ರಾಜನ್ ಚಿಚ್ಛೇದ ವಿಪುಲಾಸಿನಾ ।
ಉದಕ್ರೋಶಚ್ಚ ಸಂಹೃಷ್ಟಸ್ತ್ರಾಸಯಾನೋ ವರೂಥಿನೀಮ್ ॥೨೮॥

ಎಲೈ ರಾಜನೇ, ತನ್ನ ಕಡೆಗೆ ವೇಗವಾಗಿ ಬರುತ್ತಿದ್ದ ಆ ಹರಿತವಾದ ಬಾಣವನ್ನು ಭೀಮಸೇನನು ತನ್ನ ವಿಸ್ತಾರವಾದ ಖಡ್ಗದಿಂದ ಎರಡು ಭಾಗವಾಗಿ ಕತ್ತರಿಸಿದನು ಮತ್ತು ಶತ್ರುಸೈನ್ಯವನ್ನು ಧಯಗೊಳಿಸುತ್ತಾ ಸಂತೋಷದಿಂದ ಕೇಕೆ ಹಾಕಿದನು.

ಕಳಿಂಗಸ್ತು ತತಃ ಕ್ರುದ್ಧೋ ಭೀಮಸೇನಾಯ ಸಂಯುಗೇ ।
ತೋಮರಾನ್ ಪ್ರಾಹಿಣೋಚ್ಛೀಘ್ರಂ ಚತುರ್ದಶ ಶಿಲಾಶಿತಾನ್ ॥೨೯॥

ಆಗ ಕಳಿಂಗನು ಯುದ್ಧದಲ್ಲಿ ಕೋಪಗೊಂಡು ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಹದಿನಾಲ್ಕು ತೋಮರಗಳನ್ನು ಶೀಘ್ರವಾಗಿ ಭೀಮಸೇನನ ಮೇಲೆ ಪ್ರಯೋಗಿಸಿದನು.

ತಾನಪ್ರಾಪ್ತಾನ್ ಮಹಾಬಾಹುಃ ಖಗತಾನೇವ ಪಾಂಡವಃ ।
ಚಿಚ್ಛೇದ ಸಹಸಾ ರಾಜನ್ನಸಂಭ್ರಾಂತೋ ವರಾಸಿನಾ ॥೩೦॥

ಎಲೈ ರಾಜನೇ, ಆ ತೋಮರಗಳು ತನ್ನ ಬಳಿಗೆ ಬರುವುದಕ್ಕಿಂತ ಮೊದಲೇ ಮಹಾಬಾಹುವಾದ ಭೀಮಸೇನನು ಯಾವ ಗಾಬರಿಯೂ ಇಲ್ಲದೆ ತನ್ನ ಶ್ರೇಷ್ಠವಾದ ಖಡ್ಗದಿಂದ ಅವುಗಳನ್ನು ಕತ್ತರಿಸಿದನು.

ನಿಕೃತ್ಯ ತು ರಣೇ ಭೀಮಸ್ತೋಮರಾನ್ ವೈ ಚತುರ್ದಶ ।
ಭಾನುಮಂತಮಭಿದ್ರುತ್ಯ ಪ್ರಾದ್ರವತ್ ಪುರುಷರ್ಷಭಃ ॥೩೧॥

ಭೀಮಸೇನನು ಆ ಹದಿನಾಲ್ಕು ತೋಮರಗಳನ್ನು ನಿವಾರಿಸಿ ಭಾನುಮಂತನನ್ನು ಉದ್ದೇಶಿಸಿ ಪುರುಷಶ್ರೇಷ್ಠನಾದ ಅವನು ಅವನ ಕಡೆಗೆ ಓಡಿದನು (ಕಳಿಂಗ ರಾಜನಿಗೇ ಭಾನುಮಾನ್ ಎಂಬ ಇನ್ನೊಂದು ಹೆಸರು ಇದೆ).

ಭಾನುಮಾಂಸ್ತು ತತೋ ಭೀಮಂ ಶರವರ್ಷೇಣ ಛಾದಯನ್ ।
ನನಾದ ಬಲವನ್ನಾದಂ ನಾದಯಾನೋ ನಭಸ್ತಳಮ್ ॥೩೨॥

ಭಾನುಮಂತನಾದರೂ ಭೀಮಸೇನನನ್ನು ಬಾಣಗಳ ಮಳೆಯಿಂದ ಮುಚ್ಚಿಹಾಕುತ್ತಾ ಆಕಾಶವು ಪ್ರತಿಧ್ವನಿಸುವಂತಹ ಬಲಿಷ್ಠವಾದ ನಾದವನ್ನು ಮಾಡಿದನು.

ನ ತಂ ಸ ಮಮೃಷೇ ಭೀಮಃ ಸಿಂಹನಾದಂ ಮಹಾರಣೇ ।
ತತಃ ಸ್ವರೇಣ ಮಹತಾ ವಿನನಾದ ಮಹಾಸ್ವನಮ್ ॥೩೩॥

ಆ ಭೀಮಸೇನನು ಮಹಾಯುದ್ಧದಲ್ಲಿ ಆ ಸಿಂಹನಾದವನ್ನು ಸಹಿಸಲಿಲ್ಲ. ತಾನೂ ಸಹ ದೊಡ್ಡ ಸ್ವರದಿಂದ ದೊಡ್ಡ ಗರ್ಜನೆಯನ್ನು ಮಾಡಿದನು.

ಎಲೈ ಜನಾಧಿಪತಿಯೇ, ತನ್ನ ಪುತ್ರನು ಹತನಾದುದನ್ನು ನೋಡಿ ಕಳಿಂಗರಾಜನು ಅನೇಕ ಸಹಸ್ರ ರಥಗಳಿಂದ ಭೀಮಸೇನನನ್ನು ಎಲ್ಲ ದಿಕ್ಕುಗಳಲ್ಲಿಯೂ ಮುಚ್ಚಿದನು.

ತತೋ ಭೀಮೋ ಮಹಾಬಾಹುರ್ಗುರ್ವೀಂ ತ್ಯಕ್ತ್ವಾ ಮಹಾಗದಾಮ್ ।
ಉದ್ಬರ್ಹಾಥ ನಿಸ್ತ್ರಿಂಶಂ ಚಿಕೀರ್ಷುಃ ಕರ್ಮ ದಾರುಣಮ್ ॥೨೫॥

ಚರ್ಮ ಚಾಪ್ರತಿಮಂ ರಾಜನ್ನಾರ್ಷಭಂ ಪುರುಷರ್ಷಭ ।
ನಕ್ಷತ್ರೈರರ್ಧಚಂದ್ರೈಶ್ಚ ಶಾತಕುಂಭಮಯೈಶ್ಚಿತಮ್ ॥೨೬॥

ಆಗ ಮಹಾಬಾಹುವಾದ ಭೀಮಸೇನನು ತನ್ನ ದೊಡ್ಡ ಗದೆಯನ್ನು ಬಿಟ್ಟು ದಾರುಣವಾದ ಕರ್ಮವನ್ನು ಮಾಡಲು ಬಯಸಿ ಒರೆಯಿಂದ ಖಡ್ಗವನ್ನು ಎಳೆದನು. ಎಲೈ ಪುರುಷಶ್ರೇಷ್ಠನೇ, ಹಾಗೆಯೇ ಸುವರ್ಣಮಯವಾದ ನಕ್ಷತ್ರದಿಂದಲೂ ಮತ್ತು ಅರ್ಧಚಂದ್ರದಿಂದಲೂ ಅಲಂಕೃತವಾದ ಎತ್ತಿನ ಚರ್ಮದ ಹಿಡಿಯುಳ್ಳ ಗುರಾಣಿಯನ್ನೂ ಕೈಯಲ್ಲಿ ತೆಗೆದುಕೊಂಡನು.

ಕಳಿಂಗಸ್ತು ತತಃ ಕ್ರುದ್ಧೋ ಧನುರ್ಜ್ಯಾಮವಮೃಜ್ಯ ಹ ।
ಪ್ರಗೃಹ್ಯ ಚ ಶರಂ ಘೋರಮೇಕಂ ಸರ್ಪವಿಷೋಪಮಮ್ ।
ಪ್ರಾಹಿಣೋದ್ ಭೀಮಸೇನಾಯ ವಧಾಕಾಂಕ್ಷೀ ಜನೇಶ್ವರಃ ॥೨೭॥

ಎಲೈ ಜನೇಶ್ವರನೇ, ಕಳಿಂಗನಾದರೂ ಆಗ ಕೋಪಗೊಂಡು ತನ್ನ ಧನುಸ್ಸಿನ ಹೆದೆಯನ್ನು ನೇವರಿಸಿ ಸರ್ಪವಿಷದಂತಿದ್ದ ಒಂದು ಘೋರವಾದ ಬಾಣವನ್ನು ತೆಗೆದುಕೊಂಡು ಭೀಮಸೇನನ ವಧೆ ಮಾಡಲು ಬಯಸಿ ಆ ಬಾಣವನ್ನು ಭೀಮಸೇನನ ಮೇಲೆ ಪ್ರಯೋಗಿಸಿದನು.

ತಮಾಪತಂತಂ ವೇಗೇನ ಪ್ರೇರಿತಂ ನಿಶಿತಂ ಶರಮ್ ।
ಭೀಮಸೇನೋ ದ್ವಿಧಾ ರಾಜನ್ ಚಿಚ್ಛೇದ ವಿಪುಲಾಸಿನಾ ।
ಉದಕ್ರೋಶಚ್ಚ ಸಂಹೃಷ್ಟಸ್ತ್ರಾಪಯಾನೋ ವರೂಥಿನೀಮ್ ॥೨೮॥

ಎಲೈ ರಾಜನೇ, ತನ್ನ ಕಡೆಗೆ ವೇಗವಾಗಿ ಬರುತ್ತಿದ್ದ ಆ ಹರಿತವಾದ ಬಾಣವನ್ನು ಭೀಮಸೇನನು ತನ್ನ ವಿಸ್ತಾರವಾದ ಖಡ್ಗದಿಂದ ಎರಡು ಭಾಗವಾಗಿ ಕತ್ತರಿಸಿದನು ಮತ್ತು ಶತ್ರುಸೈನ್ಯವನ್ನು ಭಯಗೊಳಿಸುತ್ತಾ ಸಂತೋಷದಿಂದ ಕೇಕೆ ಹಾಕಿದನು.

ಕಳಿಂಗಸ್ತು ತತಃ ಕ್ರುದ್ಧೋ ಭೀಮಸೇನಾಯ ಸಂಯುಗೇ ।
ತೋಮರಾನ್ ಪ್ರಾಹಿಣೋಚ್ಛೀಘ್ರಂ ಚತುರ್ದಶ ಶಿಲಾಶಿತಾನ್ ॥೨೯॥

ಆಗ ಕಳಿಂಗನು ಯುದ್ಧದಲ್ಲಿ ಕೋಪಗೊಂಡು ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಹದಿನಾಲ್ಕು ತೋಮರಗಳನ್ನು ಶೀಘ್ರವಾಗಿ ಭೀಮಸೇನನ ಮೇಲೆ ಪ್ರಯೋಗಿಸಿದನು.

ತಾನಪ್ರಾಪ್ತಾನ್ ಮಹಾಬಾಹುಃ ಖಗತಾನೇವ ಪಾಂಡವಃ ।
ಚಿಚ್ಛೇದ ಸಹಸಾ ರಾಜನ್ನಸಂಭ್ರಾಂತೋ ವರಾಸಿನಾ ॥೩೦॥

ಎಲೈ ರಾಜನೇ, ಆ ತೋಮರಗಳು ತನ್ನ ಬಳಿಗೆ ಬರುವುದಕ್ಕಿಂತ ಮೊದಲೇ ಮಹಾಬಾಹುವಾದ ಭೀಮಸೇನನು ಯಾವ ಗಾಬರಿಯೂ ಇಲ್ಲದೆ ತನ್ನ ಶ್ರೇಷ್ಠವಾದ ಖಡ್ಗದಿಂದ ಅವುಗಳನ್ನು ಕತ್ತರಿಸಿದನು.

ನಿಕೃತ್ಯ ತು ರಣೇ ಭೀಮಸ್ತೋಮರಾನ್ ವೈ ಚತುರ್ದಶ ।
ಭಾನುಮಂತಮಭಿದ್ರುತ್ಯ ಪ್ರಾದ್ರವತ್ ಪುರುಷರ್ಷಭಃ ॥೩೧॥

ಭೀಮಸೇನನು ಆ ಹದಿನಾಲ್ಕು ತೋಮರಗಳನ್ನು ನಿವಾರಿಸಿ ಭಾನುಮಂತನನ್ನು ಉದ್ದೇಶಿಸಿ ಪುರುಷಶ್ರೇಷ್ಠನಾದ ಅವನು ಅವನ ಕಡೆಗೆ ಓಡಿದನು (ಕಳಿಂಗ ರಾಜನಿಗೇ ಭಾನುಮಾನ್ ಎಂಬ ಇನ್ನೊಂದು ಹೆಸರು ಇದೆ).

ಭಾನುಮಾಂಸ್ತು ತತೋ ಭೀಮಂ ಶರವರ್ಷೇಣ ಛಾದಯನ್ ।
ನನಾದ ಬಲವನ್ನಾದಂ ನಾದಯಾನೋ ನಭಸ್ತಳಮ್ ॥೩೨॥

ಭಾನುಮಂತನಾದರೂ ಭೀಮಸೇನನನ್ನು ಬಾಣಗಳ ಮಳೆಯಿಂದ ಮುಚ್ಚಿಹಾಕುತ್ತಾ ಆಕಾಶವು ಪ್ರತಿಧ್ವನಿಸುವಂತಹ ಬಲಿಷ್ಠವಾದ ನಾದವನ್ನು ಮಾಡಿದನು.

ನ ತಂ ಸ ಮಮೃಷೇ ಭೀಮಃ ಸಿಂಹನಾದಂ ಮಹಾರಣೇ ।
ತತಃ ಸ್ವರೇಣ ಮಹತಾ ವಿನನಾದ ಮಹಾಸ್ವನಮ್ ॥೩೩॥

ಆ ಭೀಮಸೇನನು ಮಹಾಯುದ್ಧದಲ್ಲಿ ಆ ಸಿಂಹನಾದವನ್ನು ಸಹಿಸಲಿಲ್ಲ. ತಾನೂ ಸಹ ದೊಡ್ಡ ಸ್ವರದಿಂದ ದೊಡ್ಡ ಗರ್ಜನೆಯನ್ನು ಮಾಡಿದನು.

ತೇನ ಶಬ್ದೇನ ವಿತ್ರಸ್ತಾ ಕಳಿಂಗಾನಾಂ ವರೂಥಿನೀ ।
ನ ಭೀಮಂ ಸಮರೇ ಮೇನೇ ಮಾನುಷಂ ಭರತರ್ಷಭ ॥೩೪॥

ಎಲೈ ಭರತಶ್ರೇಷ್ಠನೇ, ಆ ಗರ್ಜನೆಯಿಂದ ಹೆದರಿಹೋದ ಕಳಿಂಗರ ಸೇನೆಯು ಭೀಮನನ್ನು ಮನುಷ್ಯನೆಂದು ತಿಳಿಯಲಿಲ್ಲ.

ತತೋ ಭೀಮೋ ಮಹಾರಾಜ ನದಿತ್ವಾ ವಿಪುಲಂ ಸ್ವನಮ್ ।
ಸಾಸಿರ್ವೇಗಾದವಪ್ಲುತ್ಯ ದಂತಾಭ್ಯಾಂ ವಾರಣೋತ್ತಮಮ್ ॥೩೫॥

ಆರುರೋಹ ತತೋ ಮಧ್ಯಂ ನಾಗರಾಜಸ್ಯ ಮಾರಿಷ ।
ಖಡ್ಗೇನ ಪೃಥುನಾ ಮಧ್ಯೇ ಭಾನುಮಂತಮಥಾಚ್ಛಿನತ್ ॥೩೬॥

ಎಲೈ ಮಹಾರಾಜನೇ, ಭೀಮಸೇನನು ಹಾಗೆ ಮಹಾಗರ್ಜನೆಯನ್ನು ಮಾಡಿ, ಕೈಯಲ್ಲಿ ಕತ್ತಿಯನ್ನು ಹಿಡಿದು ಶೀಘ್ರವಾಗಿ ರಥದಿಂದ ಧುಮುಕಿ ಭಾನುಮಂತನು ಕುಳಿತಿದ್ದ ಆನೆಯ ದಂತಗಳ ಮೇಲಿಂದ ಆನೆಯನ್ನು ಏರಿ, ತನ್ನ ವಿಪುಲವಾದ ಖಡ್ಗದಿಂದ ಭಾನುಮಂತನನ್ನು ಮಧ್ಯದಲ್ಲಿ ಕತ್ತರಿಸಿದನು.

ಸೋಽಂತರಾಯುಧಿನಂ ಹತ್ವಾ ರಾಜಪುತ್ರಮರಿಂದಮಃ ।
ಗುರುಭಾರಸಹಸ್ಕಂಧೇ ನಾಗಸ್ಯಾಸಿಮಪಾತಯತ್ ॥೩೭॥

ಎಲೈ ಪೂಜ್ಯನೇ, ಅರಿಂದಮನಾದ ಅವನು ಆಯುಧಧಾರಿಯಾಗಿದ್ದ ರಾಜಪುತ್ರನಾದ ಭಾನುಮಂತನನ್ನು ಕೊಂದು ದೊಡ್ಡ ಭಾರವನ್ನು ಹೊರಲು ಸಮರ್ಥವಾದ ಗಜದ ಭುಜದಲ್ಲಿ ಆ ಖಡ್ಗವನ್ನು ಪ್ರಯೋಗಿಸಿದನು.

ಛಿನ್ನಸ್ಕಂಧಃ ಸ ವಿನದನ್ ಪಪಾತ ಗಜಯೂಥಪಃ ।
ಆರುಗ್ಣಃ ಸಿಂಧುವೇಗೇನ ಸಾನುಮಾನಿವ ಪರ್ವತಃ ॥೩೮॥

ಗಜಯೂಥಪತಿಯಾದ ಆ ಗಜವು ಭುಜವು ಕತ್ತರಿಸಲ್ಪಡುತ್ತಿರಲು ಘೀಳಿಡುತ್ತಾ ಸಿಂಧುನದಿಯ ವೇಗದಿಂದ ಶಿಖರ ಸಹಿತವಾದ ಪರ್ವತವು ಕೊಚ್ಚಿ ಹೋಗುವಂತೆ ನೆಲದ ಮೇಲೆ ಉರುಳಿತು.

ತತಸ್ತಸ್ಮಾದವಪ್ಲುತ್ಯ ಗಜಾದ್ ಭಾರತ ಭಾರತಃ ।
ಖಡ್ಗಪಾಣಿರದೀನಾತ್ಮಾ ತಿಷ್ಠದ್ ಭುವಿ ದಮಿತಃ ॥೩೯॥

ಎಲೈ ಭಾರತನೇ, ಅನಂತರ ಭರತವಂಶದಲ್ಲಿ ಜನಿಸಿದ ಭೀಮಸೇನನು ಆ ಗಜದಿಂದ ಕೆಳಗೆ ಹಾರಿ, ಕೈಯಲ್ಲಿ ಕತ್ತಿಯನ್ನು ಹಿಡಿದು ಯುದ್ಧ ಮಾಡಲು ಸಿದ್ಧನಾಗಿ ಧೈರ್ಯದಿಂದ ಭೂಮಿಯ ಮೇಲೆ ನಿಂತನು.

ಸ ಚಚಾರ ಬಹೂನ್ ಮಾರ್ಗಾನಭೀತಃ ಪಾತಯನ್ ಗಜಾನ್ ।
ಅಗ್ನಿಚಕ್ರಮಿವಾವಿದ್ಧಂ ಸರ್ವತಃ ಪ್ರತ್ಯದೃಶ್ಯತ ॥೪೦॥

ಅವನು ನಿರ್ಭಯನಾಗಿ ಗಜಗಳನ್ನು ಉರುಳಿಸುತ್ತಾ ಅನೇಕ ಖಡ್ಗಮಾರ್ಗಗಳಲ್ಲಿ ಸಂಚರಿಸಿದನು. ತಿರುಗಿಸುತ್ತಿರುವ ಅಗ್ನಿಚಕ್ರದಂತೆ (ಅಲಾತ ಚಕ್ರದಂತೆ) ಎಲ್ಲ ಕಡೆಯಲ್ಲಿಯೂ ಕಂಡುಬಂದನು.

ಅಶ್ವವೃಂದೇಷು ನಾಗೇಷು ರಥಾನೀಕೇಷು ಚಾಭಿಭೂಃ ।
ಪದಾತೀನಾಂ ಚ ಸಂಘೇಷು ವಿನಿಘ್ನನ್ ಶೋಣಿತೋಕ್ಷಿತಃ ।
ಶ್ಯೇನವದ್ ವ್ಯಚರದ್ ಭೀಮೋ ರಣೇ ರಿಪುಬಲೋತ್ಕಟಃ ॥೪೧॥

ಅಶ್ವಸಮೂಹಗಳಲ್ಲಿ, ಗಜಸಮೂಹಗಳಲ್ಲಿ, ರಥಸಮೂಹಗಳಲ್ಲಿ, ಪದಾತಿಗಳ ಸಮೂಹಗಳಲ್ಲಿ ಶತ್ರುಸಂಹಾರಕನೂ, ರಕ್ತಸಿಕ್ತನೂ ಆದ ಭೀಮಸೇನನು ಯುದ್ಧದಲ್ಲಿ ಉತ್ಕಟವಾದ ಬಲವನ್ನು ಹೊಂದಿದವನಾಗಿ ಗಿಡುಗನಂತೆ ಸಂಚರಿಸಿದನು.

ಛಿಂದಂಸ್ತೇಷಾಂ ಶರೀರಾಣಿ ಶಿರಾಂಸಿ ಚ ಮಹಾಹವಃ ।
ಖಡ್ಗೇನ ಶಿತಧಾರೇಣ ಸಂಯುಗೇ ಗಜಯೋಧಿನಾಮ್ ॥೪೨॥

ಪದಾತಿರೇಕಃ ಸಂಕ್ರುದ್ಧಃ ಶತ್ರೂಣಾಂ ಭಯವರ್ಧನಃ ।
ಮೋಹಯಾಮಾಸ ಚ ತದಾ ಕಾಲಾಂತಕಯಮೋಪಮಃ ॥೪೩॥

ಮಹಾವೇಗವುಳ್ಳ, ಶತ್ರುಗಳಿಗೆ ಭಯವನ್ನು ಹೆಚ್ಚಿಸುವ ಅವನು ಶತ್ರುಸೈನಿಕರ ಶಿರಸ್ಸುಗಳನ್ನೂ ಮತ್ತು ಶರೀರಗಳನ್ನು ಹರಿತವಾದ ಅಲುಗುಳ್ಳ ಖಡ್ಗದಿಂದ ಕತ್ತರಿಸುತ್ತಾ ಕೋಪದಿಂದ ಪದಾತಿಯಾಗಿ ಒಬ್ಬನೇ ಸಂಚರಿಸುತ್ತಾ ಕಾಲಾಂತಕನಾದ ಯಮನಂತೆ ಶತ್ರುಗಳನ್ನು ಮೋಹಗೊಳಿಸಿದನು.

ಮೂಢಾಶ್ಚ ತೇ ತಮೇವಾಜೌ ವಿನದಂತಃ ಸಮಾದ್ರವನ್ ।
ಸಾಸಿಮುತ್ತಮವೇಗೇನ ವಿಚರಂತಂ ಮಹಾರಣೇ ॥೪೪॥

ಮೋಹಕ್ಕೆ ಒಳಗಾದ ಶತ್ರುಗಳು ಗರ್ಜಿಸುತ್ತಾ, ಕೈಯಲ್ಲಿ ಖಡ್ಗವನ್ನು ಹಿಡಿದು ಮಹಾರಣರಂಗದಲ್ಲಿ ಸಂಚರಿಸುತ್ತಿದ್ದ ಭೀಮಸೇನನ ಕಡೆಗೇ ಓಡಿ ಬಂದರು.

ನಿಕೃತ್ಯ ರಥಿನಾಮಾಜೌ ರಥೇಷಾಶ್ಚ ಯುಗಾನಿ ಚ ।
ಜಘಾನ ರಥಿನಶ್ಚಾಪಿ ಬಲವಾನರಿಮರ್ದನಃ ॥೪೫॥

ಬಲಿಷ್ಠನೂ, ಅರಿಮರ್ದನನೂ ಆದ ಭೀಮಸೇನನು ಯುದ್ಧದಲ್ಲಿ ರಥಿಕರ ರಥದ ಮೂಕಿಗಳನ್ನೂ ಮತ್ತು ನೊಗಗಳನ್ನೂ ಕತ್ತರಿಸಿ ಅನಂತರ ರಥಿಕರನ್ನೂ ಕತ್ತರಿಸಿದನು.

ಭೀಮಸೇನಶ್ಚರನ್ ಮಾರ್ಗಾನ್ ಸುಬಹೂನ್ ಪ್ರತ್ಯದೃಶ್ಯತ ।
ಭ್ರಾಂತಮುದ್ಭ್ರಾಂತಮಾವಿದ್ಧಮಾಪ್ಲವಂ ಪ್ರಸೃತಂ ಪ್ಲವಮ್ ।
ಸಂಯತಂ ಸಮುದೀಯಂ ಚ ದರ್ಶಯಾಮಾಸ ಪಾಂಡವಃ ॥೪೬॥

ಭೀಮಸೇನನು ಯುದ್ಧಮಾಡುತ್ತಾ ಅನೇಕ ಮಾರ್ಗಗಳನ್ನು ಪ್ರದರ್ಶಿಸಿದನು. ನೆಲದ ಮೇಲೆ ತಿರುಗುವುದು, ಅಂತರಿಕ್ಷದಲ್ಲಿ ತಿರುಗುವುದು, ಖಡ್ಗವನ್ನು ಹಿಡಿದು ಶತ್ರುಗಳಿಗೆ ಅಭಿಮುಖವಾಗಿ ಹೋಗುವುದು, ಹಿಂದಿರುಗಿ ಹಾರಿ ಬರುವುದು, ಹಾರಿ ಶತ್ರುಗಳ ಕಡೆಗೆ ಹೋಗುವುದು, ಬಲ-ಎಡ ಭಾಗಗಳಲ್ಲಿ ಸಮಾನವಾಗಿ ಸಂಚರಿಸುವುದು, ತನ್ನ ಶರೀರವನ್ನು ಗುರಾಣಿಯಿಂದ ರಕ್ಷಿಸಿಕೊಳ್ಳುವುದು, ಹಾರಿ ಮೇಲಕ್ಕೆ ಹೋಗುವುದು ಮೊದಲಾದ ಖಡ್ಗಾಭ್ಯಾಸ ಕೌಶಲವನ್ನು ಭೀಮಸೇನನು ತೋರಿಸಿದನು.

ಕೇಚಿದಗ್ರಾಸಿನಾ ಛಿನ್ನಾಃ ಪಾಂಡವೇನ ಮಹಾತ್ಮನಾ ।
ವಿನೇದುರ್ಭಿನ್ನಮರ್ಮಾಣೋ ನಿಪೇತುಶ್ಚ ಗತಾಸವಃ ॥೪೭॥

ಪಾಂಡುಪುತ್ರನೂ, ಮಹಾತ್ಮನೂ ಆದ ಭೀಮಸೇನನ ಕತ್ತಿಯ ತುದಿಯಿಂದ ಕತ್ತರಿಸಲ್ಪಟ್ಟ ಶತ್ರುಯೋಧರು ಮರ್ಮಗಳಲ್ಲಿ ಹತರಾಗಿ ಕಿರುಚಿ ಪ್ರಾಣವನ್ನು ಕಳೆದುಕೊಂಡು ಬಿದ್ದರು.

ಭಿನ್ನದಂತಾಗ್ರಹಸ್ತಾಶ್ಚ ಭಿನ್ನಕುಂಭಾಸ್ತಥಾಪರೇ ।
ವಿಯೋಧಾಃ ಸ್ವಾನ್ಯನೀಕಾನಿ ಜಘ್ನುರ್ಭಾರತ ವಾರಣಾಃ ।
ನಿಪೇತುರುರ್ವ್ಯಾಂ ಚ ತಥಾ ವಿನದಂತೋ ಮಹಾರವಾನ್ ॥೪೮॥

ಎಲೈ ಭಾರತನೇ, ಗಜಗಳು ತಮ್ಮ ದಂತಗಳನ್ನೂ ಮತ್ತು ಸೊಂಡಿಲನ್ನೂ ಕತ್ತರಿಸಿ ಕಳೆದುಕೊಂಡು, ಇನ್ನು ಕೆಲವು ಗಜಗಳು ಕುಂಭಸ್ಥಲಗಳಲ್ಲಿ ಹೊಡೆಯಲ್ಪಟ್ಟು ಯೋಧರಿಲ್ಲದೆ ಮಹಾಗರ್ಜನೆಯನ್ನು ಮಾಡಿ ಭೂಮಿಯ ಮೇಲೆ ಬೀಳುತ್ತಾ ತಮ್ಮ ಸೈನಿಕರನ್ನೇ ಕೊಂದವು.

ಭಿನ್ನಾಂಶ್ಚ ತೋಮರಾಂಶ್ಚಾಪಾನ್ ಮಹಾಮಾತ್ರಶಿರಾಂಸಿ ಚ ।
ಪ್ರದಿಶೋ ವಾತಿಚಿತ್ರಾಸ್ತಾಃ ಕಕ್ಷ್ಯಾಶ್ಚ ಕನಕೋಜ್ಜ್ವಲಾಃ ॥೪೯॥

ಗ್ರೈವೇಯಾಣ್ಯಥ ಶಕ್ತೀಶ್ಚ ಪತಾಕಾಃ ಕಣಪಾಸ್ತಥಾ ।
ತೂಣೀರಾಣ್ಯಥ ಯಂತ್ರಾಣಿ ವಿಚಿತ್ರಾಣಿ ಧನೂಂಷಿ ಚ ॥೫೦॥

ಅಗ್ನಿಕುಂಡಾನಿ ಶುಭ್ರಾಣಿ ತೋತ್ರಾಂಶ್ಚೈವಾಂಕುಶೈಃ ಸಹ ।
ಘಂಟಾಶ್ಚ ವಿವಿಧಾ ರಾಜನ್ ಹೇಮಗರ್ಭಾನ್ತ್ಸರೂನಪಿ ।
ಪತತಃ ಪತಿತಾಂಶ್ಚೈವ ಪಶ್ಯಾಮಃ ಸಹ ಸಾದಿಭಿಃ ॥೫೧॥

ಕತ್ತರಿಸಿದ ತೋಮರಗಳು, ಧನುಸ್ಸುಗಳು, ಮಹಾಮಾತ್ರರ ಶಿರಸ್ಸುಗಳು, ಗಜರಕ್ಷಕರು, ಸುವರ್ಣಮಯವಾದ ವಿಚಿತ್ರವಾದ ಸರಪಣಿಗಳು, ಕಂಠಗಳ ಆಭರಣಗಳು, ಶಕ್ತ್ಯಾಯುಧಗಳು, ಗಜದ ಮೇಲೆ ಹೊದಿಸುವ ಕಂಬಳಿಗಳು, ಬತ್ತಳಿಕೆಗಳು, ವಿಚಿತ್ರವಾದ ಯಂತ್ರಗಳು, ಧನುಸ್ಸುಗಳು, ಶುಭ್ರವಾದ ಅಗ್ನಿಕುಂಡಗಳು, ಚಾವಟಿಗಳು, ಅಂಕುಶಗಳು, ವಿವಿಧವಾದ ಘಂಟೆಗಳು, ಸುವರ್ಣಾಲಂಕೃತವಾದ ಹಿಡಿಗಳು ಇವು ನೆಲದ ಮೇಲೆ ಬಿದ್ದಿರುವುದನ್ನೂ, ಅಶ್ವಾರೋಹಿಗಳ ಜೊತೆಯಲ್ಲಿ ಬೀಳುತ್ತಿರುವುದನ್ನೂ ನಾವು ನೋಡಿದೆವು.

ಭಿನ್ನಗಾತ್ರಾವರಕರೈರ್ನಿಹತೈಶ್ಚಾಪಿ ವಾರಣೈಃ ।
ಆಸೀತ್ ತಸ್ಮಿನ್ ಸಮಾಸ್ತೀರ್ಣಾ ಪತಿತೈರ್ಭೂರ್ನಗೈರಿವ ॥೫೨॥

ತಮ್ಮ ಬೆನ್ನಿನ ಮೇಲೆ ಹೊದಿಸುವ ಕಂಬಳಿಗಳನ್ನೂ ಮತ್ತು ಸೊಂಡಿಲುಗಳನ್ನು ಕತ್ತರಿಸಿಹೊಂಡ ಗಜಗಳ ಶರೀರದಿಂದ ಯುದ್ಧಭೂಮಿಯು ಪರ್ವತಗಳಿಂದ ಹರಡಿದಂತಾಯಿತು.

ಏವಮೈಷ್ಟ ಮಹಾನಾಗಾನ್ ಮಮರ್ದಾಶ್ವಾನ್ ನರರ್ಷಭಃ ।
ಆಸ್ಥಾರೋಹವರಾಂಶ್ಚಾಪಿ ಪಾತಯಾಮಾಸ ಭಾರತ ।
ತದ್ ಭೀರೂಣಾಮಭಯದಮ್ ಯುದ್ಧಂ ತಸ್ಯ ತೇಷಾಂ ಚ ಭಾರತ ॥೫೩॥

ಎಲೈ ಭಾರತನೇ, ನರಶ್ರೇಷ್ಠನಾದ ಭೀಮಸೇನನು ಹೀಗೆ ಮಹಾಗಜಗಳನ್ನು ನಾಶಮಾಡಿ ಶ್ರೇಷ್ಠರಾದ ಅಶ್ವಾರೋಹಿಗಳನ್ನೂ ನೆಲಕ್ಕೆ ಉರುಳಿಸಿದನು. ಎಲೈ ಭಾರತನೇ, ಅವನಿಗೂ ಮತ್ತು ಶತ್ರುಗಳಿಗೂ ಘೋರವಾದ ಯುದ್ಧವು ಉಂಟಾಯಿತು.

ಖಲೀನಾನಿ ವಿಚಿತ್ರಾಣಿ ಕಕ್ಷಾಶ್ಚ ಕನಕೋಜ್ಜ್ವಲಾಃ ।
ಪರಿಷ್ತೋಮಾಶ್ಚ ಹ್ರಾಸಾಶ್ಚ ಋಷ್ಟಯಶ್ಚ ಮಹಾಧನಾಃ ॥೫೪॥

ಕವಚಾನ್ಯಥ ಚರ್ಮಾಣಿ ಚಿತ್ರಾಣ್ಯಾಸ್ತರಣಾನಿ ಚ ।
ತತ್ರ ತತ್ರಾಪವಿದ್ಧಾನಿ ದದೃಶುಃ ಪುರುಷಾ ಮಹಾಹವೇ ॥೫೫॥

ವಿಚಿತ್ರವಾದ ಧ್ವಜ ಪತಾಕೆಗಳು, ಸುವರ್ಣಮಯವಾದ ಚಾವಟಿಗಳು, ವಾಹನಗಳ ಮೇಲೆ ಹಾಸುವ ಕಂಬಳಿಗಳು, ಈಟಿಗಳು, ಬೆಲೆಬಾಳುವ ಋಷ್ಟಿಗಳು, ಕವಚಗಳು, ಗುರಾಣಿಗಳು, ವಿಚಿತ್ರವಾದ ಹಾಸುಗಳು ಇವುಗಳು ರಣಭೂಮಿಯಲ್ಲಿ ಅಲ್ಲಲ್ಲಿ ಎಸೆಯಲ್ಪಟ್ಟಿರುವುದು ಕಂಡುಬಂದಿತು.

ಕ್ಷೋಣಯಂಶ್ಚೈರ್ವಿಚಿತ್ರೈಶ್ಚ ಶಸ್ತ್ರೈಶ್ಚ ವಿಮಲೈಸ್ತಥಾ ।
ಸ ಚಕ್ರೇ ಪಾಂಡವಾಂ ತೀರ್ಣಾಂ ಶಬಲೈಃ ಕುಸುಮೈರಿವ ॥೫೬॥

ವಿಚಿತ್ರವಾದ ಗಜ-ಯಂತ್ರಗಳನ್ನು, ವಿಮಲವಾದ ಶಸ್ತ್ರಗಳನ್ನು ಭೂಮಿಯ ಮೇಲೆ ಹರಡಿ ಭೀಮಸೇನನು ಭೂಮಿಯನ್ನು ಅನೇಕ ವರ್ಣದ ಪುಷ್ಪಗಳಿಂದ ಹರಡಿದಂತೆ ಮಾಡಿದನು.

ಆಪ್ಲುತ್ಯ ರಥಿನಃ ಕಾಂಶ್ಚಿತ್ ಪರಾಮೃಶ್ಯ ಮಹಾಬಲಃ ।
ಪಾತಯಾಮಾಸ ಖಡ್ಗೇನ ಸಧ್ವಜಾನಪಿ ಪಾಂಡವಃ ॥೫೭॥

ಮಹಾಬಲನಾದ ಪಾಂಡುಪುತ್ರನಾದ ಅವನು ರಥಕ್ಕೆ ಹಾರಿ ರಥಿಕರನ್ನು ಹಿಡಿದುಕೊಂಡು ತನ್ನ ಖಡ್ಗದಿಂದ ಧ್ವಜವನ್ನೂ ಮತ್ತು ಆ ರಥಿಕರನ್ನೂ ಕತ್ತರಿಸಿ ಉರುಳಿಸಿದನು.

ಮುಹುರುತ್ಪತತೋ ದಿಕ್ಷು ಧಾವತಶ್ಚ ಯಶಸ್ವಿನಃ ।
ಮಾರ್ಗಾಂಶ್ಚ ಚರತಶ್ಚಿತ್ರಾನ್ ವ್ಯಸ್ಮಯಂತ ರಣೇ ಜನಾಃ ॥೫೮॥

ಕೀರ್ತಿಶಾಲಿಯಾದ ಅವನು ಯುದ್ಧದಲ್ಲಿ ಮೇಲಕ್ಕೆ ಹಾರುವುದು, ದಿಕ್ಕುದಿಕ್ಕುಗಳಲ್ಲಿ ಓಡುವುದು, ಅನೇಕ ವಿಚಿತ್ರವಾದ ಮಾರ್ಗಗಳಲ್ಲಿ ಸಂಚರಿಸುವುದು ಇವುಗಳನ್ನು ನೋಡಿ ಜನರು ವಿಸ್ಮಯಗೊಂಡರು.

ನಿಜಘಾನ ಪದಾ ಕಾಂಶ್ಚಿದಾಕ್ಷಿಪ್ಯಾನ್ಯಾನಪೋಥಯತ್ ।
ಖಡ್ಗೇನಾನ್ಯಾಂಶ್ಚ ಚಿಚ್ಛೇದ ನಾದೇನಾನ್ಯಾಂಶ್ಚ ಭೀಷಯನ್ ॥೫೯॥

ಊರುವೇಗೇನ ಚಾಪ್ಯನ್ಯಾನ್ ಪಾತಯಾಮಾಸ ಭೂತಲೇ ।
ಅಪರೇ ಚೈನಮಾಲೋಕ್ಯ ಭಯಾತ್ ಪಂಚತ್ವಮಾಗತಾಃ ॥೬೦॥

ಆ ಭೀಮಸೇನನು ಪಾದದಿಂದ ಕೆಲವರನ್ನು ಸಂಹರಿಸಿದನು. ಇನ್ನು ಕೆಲವರನ್ನು ಮೇಲಕ್ಕೆಸೆದು ಮರ್ದಿಸಿದನು. ಇನ್ನು ಕೆಲವರನ್ನು ಖಡ್ಗದಿಂದ ಕತ್ತರಿಸಿದನು. ಇನ್ನು ಕೆಲವರನ್ನು ತನ್ನ ಗರ್ಜನೆಯಿಂದಲೇ ಹೆದರಿಸಿ ಸಂಹರಿಸಿದನು. ಇನ್ನು ಕೆಲವರನ್ನು ತನ್ನ ತೊಡೆಗಳ ವೇಗದಿಂದಲೇ ಭೂಮಿಯ ಮೇಲೆ ಕೆಡವಿದನು. ಇನ್ನು ಕೆಲವರು ಅವನನ್ನು ನೋಡುತ್ತಲೇ ಭಯದಿಂದ ಪ್ರಾಣತ್ಯಾಗವನ್ನು ಮಾಡಿದರು.

ಏವಂ ಸಾ ಬಹುಲಾ ಸೇನಾ ಕಳಿಂಗಾನಾಂ ತರಸ್ವಿನಾಮ್ ।
ಪರಿವಾರ್ಯ ರಣೇ ಭೀಷ್ಮಂ ಭೀಮಸೇನಮುಪಾದ್ರವತ್ ॥೬೧॥

ಹೀಗೆ ಕಳಿಂಗರ ಬಹಳ ದೊಡ್ಡದಾದ ಮತ್ತು ವೇಗಶಾಲಿಯಾದ ಆ ಸೈನ್ಯವು ಭೀಷ್ಮರನ್ನು ರಕ್ಷಿಸಿಕೊಂಡು ರಣರಂಗದಲ್ಲಿ ಭೀಮಸೇನನ ಕಡೆಗೆ ಬಂದಿತು.

ತಮ್ಮ ಬೆನ್ನಿನ ಮೇಲೆ ಹೊದಿಸುವ ಕಂಬಳಿಗಳನ್ನೂ ಮತ್ತು ಸೊಂಡಿಲುಗಳನ್ನು ಕತ್ತರಿಸಿಕೊಂಡ ಗಜಗಳ ಶರೀರದಿಂದ ಯುದ್ಧಭೂಮಿಯು ಪರ್ವತಗಳಿಂದ ಹರಡಿದಂತಾಯಿತು.

ಏವಮೈರಾವಂ ಮಹಾನಾಗಾನ್ ಮಮರ್ದಾಶ್ವಾನ್ ನರರ್ಷಭಃ ।
ಅಶ್ವಾರೋಹವರಾಂಶ್ಚಾಪಿ ಹಾತಯಾಮಾಸ ಭಾರತ ।
ತದ್ ಘೋರಮಭವದ್ ಯುದ್ಧಂ ತಸ್ಯ ತೇಷಾಂ ಚ ಭಾರತ ॥೫೩॥

ಎಲೈ ಭಾರತನೇ, ನರಶ್ರೇಷ್ಠನಾದ ಭೀಮಸೇನನು ಹೀಗೆ ಮಹಾಗಜಗಳನ್ನು ನಾಶಮಾಡಿ ಶ್ರೇಷ್ಠರಾದ ಅಶ್ವಾರೋಹಿಗಳನ್ನೂ ನೆಲಕ್ಕೆ ಉರುಳಿಸಿದನು. ಎಲೈ ಭಾರತನೇ, ಅವನಿಗೂ ಮತ್ತು ಶತ್ರುಗಳಿಗೂ ಘೋರವಾದ ಯುದ್ಧವು ಉಂಟಾಯಿತು.

ಖಲೀನಾನಿ ವಿಚಿತ್ರಾಣಿ ಕಶಾಶ್ಚ ಕನಕೋಜ್ಜ್ವಲಾಃ ।
ಪರಿಸ್ತೋಮಾಶ್ಚ ಹ್ರಾಸಾಶ್ಚ ಋಷ್ಟಯಶ್ಚ ಮಹಾಧನಾಃ ॥೫೪॥

ಕವಚಾನ್ಯಥ ಚರ್ಮಾಣಿ ಚಿತ್ರಾಣ್ಯಾಸ್ತರಣಾನಿ ಚ ।
ತತ್ರ ತತ್ರಾಪವಿದ್ಧಾನಿ ವ್ಯದೃಶ್ಯಂತ ಮಹಾಹವೇ ॥೫೫॥

ವಿಚಿತ್ರವಾದ ಧ್ವಜ ಪತಾಕೆಗಳು, ಸುವರ್ಣಮಯವಾದ ಚಾವಟಗಳು, ವಾಹನಗಳ ಮೇಲೆ ಹಾಸುವ ಕಂಬಳಿಗಳು, ಈಟಿಗಳು, ಬೆಲೆಬಾಳುವ ಋಷ್ಟಿಗಳು, ಕವಚಗಳು, ಗುರಾಣಿಗಳು, ವಿಚಿತ್ರವಾದ ಹಾಸುಗಳು ಇವುಗಳು ರಣಭೂಮಿಯಲ್ಲಿ ಅಲ್ಲಲ್ಲಿ ಎಸೆಯಲ್ಪಟ್ಟಿರುವುದು ಕಂಡುಬಂದಿತು.

ಕ್ರೋಥಯಂತ್ಸೈರ್ವಿಚಿತ್ರೈಶ್ಚ ಶಸ್ತ್ರೈಶ್ಚ ವಿಮಲೈಸ್ತಥಾ ।
ಸ ಚಕ್ರೇ ವಸುಧಾಂ ಕೀರ್ಣಾಂ ಶಬಲೈಃ ಕುಸುಮೈರಿವ ॥೫೬॥

ವಿಚಿತ್ರವಾದ ಗಜ-ಯಂತ್ರಗಳನ್ನು, ವಿಮಲವಾದ ಶಸ್ತ್ರಗಳನ್ನು ಭೂಮಿಯ ಮೇಲೆ ಹರಡಿ ಭೀಮಸೇನನು ಭೂಮಿಯನ್ನು ಅನೇಕ ವರ್ಣದ ಪುಷ್ಪಗಳಿಂದ ಹರಡಿದಂತೆ ಮಾಡಿದನು.

ಆಪ್ಲುತ್ಯ ರಥಿನಃ ಕಾಂಶ್ಚಿತ್ ಪರಾಮೃಶ್ಯ ಮಹಾಬಲಃ ।
ಪಾತಯಾಮಾಸ ಖಡ್ಗೇನ ಸಧ್ವಜಾನಪಿ ಪಾಂಡವಃ ॥೫೭॥

ಮಹಾಬಲನಾದ ಪಾಂಡುಪುತ್ರನಾದ ಅವನು ರಥಕ್ಕೆ ಹಾರಿ ರಥಿಕರನ್ನು ಹಿಡಿದುಕೊಂಡು ತನ್ನ ಖಡ್ಗದಿಂದ ಧ್ವಜವನ್ನೂ ಮತ್ತು ಆ ರಥಿಕರನ್ನೂ ಕತ್ತರಿಸಿ ಉರುಳಿಸಿದನು.

ಮುಹುರುತ್ಪತತೋ ದಿಕ್ಷು ಧಾವತಶ್ಚ ಯಶಸ್ವಿನಃ ।
ಮಾರ್ಗಾಂಶ್ಚ ಚರತಶ್ಚಿತ್ರಾನ್ ವ್ಯಸ್ಮಯಂತ ರಣೇ ಜನಾಃ ॥೫೮॥

ಕೀರ್ತಿಶಾಲಿಯಾದ ಅವನು ಯುದ್ಧದಲ್ಲಿ ಮೇಲಕ್ಕೆ ಹಾರುವುದು, ದಿಕ್ಕುದಿಕ್ಕುಗಳಲ್ಲಿ ಓಡುವುದು, ಅನೇಕ ವಿಚಿತ್ರವಾದ ಮಾರ್ಗಗಳಲ್ಲಿ ಸಂಚರಿಸುವುದು ಇವುಗಳನ್ನು ನೋಡಿ ಜನರು ವಿಸ್ಮಯಗೊಂಡರು.

ನಿಜಘಾನ ಪದಾ ಕಾಂಶ್ಚಿದಾಕ್ಷಿಪ್ಯಾನ್ಯಾನಪೋಥಯತ್ ।
ಖಡ್ಗೇನಾನ್ಯಾಂಶ್ಚ ಚಿಚ್ಛೇದ ನಾದೇನಾನ್ಯಾಂಶ್ಚ ಭೀಷಯನ್ ॥೫೯॥

ಊರುವೇಗೇನ ಚಾಪ್ಯನ್ಯಾನ್ ಪಾತಯಾಮಾಸ ಭೂತಲೇ ।
ಅಪರೇ ಚ್ಛಿನಮಾಲೋಕ್ಯ ಭಯಾತ್ ಪಂಚತ್ವಮಾಗತಾಃ ॥೬೦॥

ಆ ಭೀಮಸೇನನು ಪಾದದಿಂದ ಕೆಲವರನ್ನು ಸಂಹರಿಸಿದನು. ಇನ್ನು ಕೆಲವರನ್ನು ಮೇಲಕ್ಕೆಸೆದು ಮರ್ದಿಸಿದನು. ಇನ್ನು ಕೆಲವರನ್ನು ಖಡ್ಗದಿಂದ ಕತ್ತರಿಸಿದನು. ಇನ್ನು ಕೆಲವರನ್ನು ತನ್ನ ಗರ್ಜನೆಯಿಂದಲೇ ಹೆದರಿಸಿ ಸಂಹರಿಸಿದನು. ಇನ್ನು ಕೆಲವರನ್ನು ತನ್ನ ತೊಡೆಗಳ ವೇಗದಿಂದಲೇ ಭೂಮಿಯ ಮೇಲೆ ಕೆಡವಿದನು. ಇನ್ನು ಕೆಲವರು ಅವನನ್ನು ನೋಡುತ್ತಲೇ ಭಯದಿಂದ ಪ್ರಾಣತ್ಯಾಗವನ್ನು ಮಾಡಿದರು.

ಏವಂ ಸಾ ಬಹುಲಾ ಸೇನಾ ಕಳಿಂಗಾನಾಂ ತರಸ್ವಿನಾಮ್ ।
ಪರಿವಾರ್ಯ ರಣೇ ಭೀಷ್ಮಂ ಭೀಮಸೇನಮುಪಾದ್ರವತ್ ॥೬೧॥

ಹೀಗೆ ಕಳಿಂಗರ ಬಹಳ ದೊಡ್ಡದಾದ ಮತ್ತು ವೇಗಶಾಲಿಯಾದ ಆ ಸೈನ್ಯವು ಭೀಷ್ಮರನ್ನು ರಕ್ಷಿಸಿಕೊಂಡು ರಣರಂಗದಲ್ಲಿ ಭೀಮಸೇನನ ಕಡೆಗೆ ಬಂದಿತು.

ತತಃ ಕಲಿಂಗಸೈನ್ಯಾನಾಂ ಪ್ರಮುಖೇ ಭರತರ್ಷಭ ।
ಶ್ರುತಾಯುಷಮಭಿಪ್ರೇಕ್ಷ್ಯ ಭೀಮಸೇನಃ ಸಮಭ್ಯಯಾತ್ ॥೬೨॥

ಎಲೈ ಭರತಶ್ರೇಷ್ಠನೇ, ಆಗ ಭೀಮಸೇನನು ಕಳಿಂಗರ ಸೈನ್ಯದ ಮುಂಭಾಗದಲ್ಲಿ ಶ್ರುತಾಯುವನ್ನು ನೋಡಿ ಅವನ ಕಡೆಗೆ ಧಾವಿಸಿದನು.

ತಮಾಯಾಂತಮಭಿಪ್ರೇಕ್ಷ್ಯ ಕಳಿಂಗೋ ನವಭಿಃ ಶರೈಃ ।
ಭೀಮಸೇನಮಮೇಯಾತ್ಮಾ ಪ್ರತ್ಯವಿಧ್ಯತ್ ಸ್ತನಾಂತರೇ ॥೬೩॥

ತನ್ನ ಕಡೆಗೆ ಬರುತ್ತಿರುವ ಭೀಮಸೇನನನ್ನು ನೋಡಿ ಮಹಾಬಲಶಾಲಿಯಾದ ಕಳಿಂಗನು ಒಂಬತ್ತು ಬಾಣಗಳಿಂದ ಭೀಮಸೇನನಿಗೆ ಸ್ತನಗಳ ಮಧ್ಯದಲ್ಲಿ ಹೊಡೆದನು.

ಕಳಿಂಗಬಾಣಾಭಿಹತಸ್ತೋತ್ತ್ರಾರ್ದಿತ ಇವ ದ್ವಿಪಃ ।
ಭೀಮಸೇನಃ ಪ್ರಜಜ್ವಾಲ ಕ್ರೋಧೇನಾಗ್ನಿರಿವೇಂಧನೈಃ ॥೬೪॥

ಕಳಿಂಗನ ಬಾಣಗಳಿಂದ ಹೊಡೆಯಲ್ಪಟ್ಟ ಭೀಮಸೇನನು ಅಂಕುಶದಿಂದ ಹಿಂಸಿಸಿದ ಆನೆಯಂತೆ, ಕಟ್ಟಿಗೆಯನ್ನು ಹಾಕಿದ ಅಗ್ನಿಯಂತೆ ಕ್ರೋಧದಿಂದ ಉರಿದನು.

ಅಥಾಶೋಕಃ ಸಮಾದಾಯ ರಥಂ ಹೇಮಪರಿಷ್ಕೃತಮ್ ।
ಭೀಮಂ ಸಂಪಾದಯಾಮಾಸ ರಥೇನ ರಥಸಾರಥಿಃ ॥೬೫॥

ಅನಂತರ ಭೀಮನ ರಥಸಾರಥಿಯಾದ ವಿಶೋಕನು ಸುವರ್ಣಾಲಂಕೃತವಾದ ರಥವನ್ನು ತಂದು ಭೀಮನಿಗೆ ಒದಗಿಸಿದನು.

ತಮಾರುಹ್ಯ ರಥಂ ತೂರ್ಣಂ ಕೌಂತೇಯಃ ಶತ್ರುಸೂದನಃ ।
ಕಳಿಂಗಮಭಿದುದ್ರಾವ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೬೬॥

ಕುಂತೀಪುತ್ರನೂ, ಶತ್ರುಸೂದನನೂ ಆದ ಭೀಮನು ಶೀಘ್ರವಾಗಿ ಆ ರಥವನ್ನೇರಿ ಕಳಿಂಗನ ಬಳಿಗೆ ಸಾಗಿ ನಿಲ್ಲು, ನಿಲ್ಲು ಎಂದು ಹೇಳಿದನು.

ತತಃ ಶ್ರುತಾಯುರ್ಬಲವಾನ್ ಭೀಮಾಯ ನಿಶಿತಾನ್ ಶರಾನ್ ।
ಪ್ರೇಷಯಾಮಾಸ ಸಂಕ್ರುದ್ಧೋ ದರ್ಶಯನ್ ಪಾಣಿಲಾಘವಮ್ ॥೬೭॥

ಆಗ ಬಲಿಷ್ಠನಾದ ಶ್ರುತಾಯುವು ಕೋಪಗೊಂಡು ತನ್ನ ಹಸ್ತಕೌಶಲವನ್ನು ತೋರಿಸುತ್ತಾ ಭೀಮನ ಮೇಲೆ ಹರಿತವಾದ ಬಾಣಗಳನ್ನು ಪ್ರಯೋಗಿಸಿದನು.

ಸ ಕಾರ್ಮುಕವರೋತ್ಸೃಷ್ಟೈರ್ನವಭಿರ್ನಿಶಿತೈಃ ಶರೈಃ ।
ಸಮಾಹತೋ ಭೃಶಂ ರಾಜನ್ ಕಳಿಂಗೇನ ಮಹಾಯಶಾಃ ।
ಸಂಚುಕ್ರುಧೇ ಭೃಶಂ ಭೀಮೋ ದಂಡಾಹತ ಇವೋರಗಃ ॥೬೮॥

ಶ್ರೇಷ್ಠವಾದ ಧನುಸ್ಸಿನಿಂದ ಹೊರಹೊಮ್ಮಿದ ಕಳಿಂಗನ ಆ ಒಂಬತ್ತು ಬಾಣಗಳಿಂದ ಬಲವಾಗಿ ಹೊಡೆಯಲ್ಪಟ್ಟ ಮಹಾಕೀರ್ತಿವಂತನಾದ ಭೀಮಸೇನನು ಎಲೈ ರಾಜನೇ, ಕೋಲಿನಿಂದ ಹೊಡೆದ ಸರ್ಪದಂತೆ ಬಹಳ ಕೋಪಗೊಂಡನು.

ಕ್ರುದ್ಧಶ್ಚ ಚಾಪಮಾಯಮ್ಯ ಬಲವದ್ ಬಲಿನಾಂ ವರಃ ।
ಕಳಿಂಗಮವಧೀತ್ ಪಾರ್ಥೋ ಭೀಮಃ ಸಪ್ತಭಿರಾಯಸೈಃ ॥೬೯॥

ಬಲಿಷ್ಠರಲ್ಲಿ ಶ್ರೇಷ್ಠನಾದ ಭೀಮನು ಕೋಪಗೊಂಡು ತನ್ನ ಧನುಸ್ಸನ್ನು ಬಲವಾಗಿ ಬಗ್ಗಿಸಿ ಕಳಿಂಗನ ಮೇಲೆ ಏಳು ಆಯೋಮಯವಾದ ಬಾಣಗಳನ್ನು ಪ್ರಯೋಗಿಸಿದನು.

ಕ್ಷುರಾಭ್ಯಾಂ ಚಕ್ರರಕ್ಷೌ ಚ ಕಳಿಂಗಸ್ಯ ಮಹಾಬಲೌ ।
ಸತ್ಯದೇವಂ ಚ ಸತ್ಯಂ ಚ ಪ್ರಾಹಿಣೋದ್ ಯಮಸಾದನಮ್ ॥೭೦॥

ಕಳಿಂಗನ ರಥದ ಚಕ್ರರಕ್ಷಕರಾದ, ಮಹಾಬಲಿಷ್ಠರಾದ ಸತ್ಯದೇವ ಮತ್ತು ಸತ್ಯ ಎಂಬ ಇಬ್ಬರನ್ನೂ ಕ್ಷುರಗಳಿಂದ (ಸಣ್ಣ ಕತ್ತಿಗಳಿಂದ) ಯಮಪಟ್ಟಣಕ್ಕೆ ಕಳುಹಿಸಿದನು.

ತತಃ ಪುನರಮೇಯಾತ್ಮಾ ನಾರಾಚೈರ್ನಿಶಿತೈಸ್ತ್ರಿಭಿಃ ।
ಕೇತುಮಂತಂ ರಣೇ ಭೀಮೋऽಗಮಯದ್ ಯಮಸಾದನಮ್ ॥೭೧॥

ಅನಂತರ ಅಪರಿಮಿತ ಪರಾಕ್ರಮಿಯಾದ ಭೀಮಸೇನನು ಮೂರು ಹರಿತವಾದ ನಾರಾಚಗಳಿಂದ ರಣರಂಗದಲ್ಲಿ ಕೇತುಮಂತನನ್ನು ಯಮಪಟ್ಟಣಕ್ಕೆ ಕಳುಹಿಸಿದನು.

ತತಃ ಕಳಿಂಗಾಃ ಸಂಕ್ರುದ್ಧಾ ಭೀಮಸೇನಮಮರ್ಷಣಮ್ ।
ಅನೀಕೈರ್ಬಹುಸಾಹಸ್ರೈಃ ಕ್ಷತ್ರಿಯಾಃ ಸಮವಾರಯನ್ ॥೭೨॥

ತತಃ ಕಲಿಂಗಸೈನ್ಯಾನಾಂ ಪ್ರಮುಖೇ ಭರತರ್ಷಭ ।
ಶ್ರುತಾಯುಷಮಭಿಪ್ರೇಕ್ಷ್ಯ ಭೀಮಸೇನಃ ಸಮಭ್ಯಯಾತ್ ॥೬೨॥

ಎಲೈ ಭರತಶ್ರೇಷ್ಠನೇ, ಆಗ ಭೀಮಸೇನನು ಕಳಿಂಗರ ಸೈನ್ಯದ ಮುಂಭಾಗದಲ್ಲಿ ಶ್ರುತಾಯುವನ್ನು ನೋಡಿ ಅವನ ಕಡೆಗೆ ಧಾವಿಸಿದನು.

ತಮಾಯಾಂತಮಭಿಪ್ರೇಕ್ಷ್ಯ ಕಳಿಂಗೋ ನವಭಿಃ ಶರೈಃ ।
ಭೀಮಸೇನಮಮೇಯಾತ್ಮಾ ಪ್ರತ್ಯವಿಧ್ಯತ್ ಸ್ತನಾಂತರೇ ॥೬೩॥

ತನ್ನ ಕಡೆಗೆ ಬರುತ್ತಿರುವ ಭೀಮಸೇನನನ್ನು ನೋಡಿ ಮಹಾಬಲಶಾಲಿಯಾದ ಕಳಿಂಗನು ಒಂಬತ್ತು ಬಾಣಗಳಿಂದ ಭೀಮಸೇನನಿಗೆ ಸ್ತನಗಳ ಮಧ್ಯದಲ್ಲಿ ಹೊಡೆದನು.

ಕಳಿಂಗಬಾಣಾಭಿಹತಸ್ತೋತ್ತರ್ದಿತ ಇವ ದ್ವಿಪಃ ।
ಭೀಮಸೇನಃ ಪ್ರಜಜ್ವಾಲ ಕ್ರೋಧೇನಾಗ್ನಿರಿವೇಂಧನೈಃ ॥೬೪॥

ಕಳಿಂಗನ ಬಾಣಗಳಿಂದ ಹೊಡೆಯಲ್ಪಟ್ಟ ಭೀಮಸೇನನು ಅಂಕುಶದಿಂದ ಹಿಂಸಿಸಿದ ಆನೆಯಂತೆ, ಕಟ್ಟಗೆಯನ್ನು ಹಾಕಿದ ಅಗ್ನಿಯಂತೆ ಕ್ರೋಧದಿಂದ ಉರಿದನು.

ಅಥಾಶೋಕಃ ಸಮಾದಾಯ ರಥಂ ಹೇಮಪರಿಷ್ಕೃತಮ್ ।
ಭೀಮಂ ಸಂಪಾದಯಾಮಾಸ ರಥೇನ ರಥಸಾರಥಿಃ ॥೬೫॥

ಆನಂತರ ಭೀಮನ ರಥಸಾರಥಿಯಾದ ವಿಶೋಕನು ಸುವರ್ಣಾಲಂಕೃತವಾದ ರಥವನ್ನು ತಂದು ಭೀಮನಿಗೆ ಒದಗಿಸಿದನು.

ತಮಾರುಹ್ಯ ರಥಂ ತೂರ್ಣಂ ಕೌಂತೇಯಃ ಶತ್ರುಸೂದನಃ ।
ಕಳಿಂಗಮಭಿದುದ್ರಾವ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೬೬॥

ಕುಂತೀಪುತ್ರನೂ, ಶತ್ರುಸೂದನನೂ ಆದ ಭೀಮನು ಶೀಘ್ರವಾಗಿ ಆ ರಥವನ್ನೇರಿ ಕಳಿಂಗನ ಬಳಿಗೆ ಸಾಗಿ ನಿಲ್ಲು, ನಿಲ್ಲು ಎಂದು ಹೇಳಿದನು.

ತತಃ ಶ್ರುತಾಯುರ್ಬಲವಾನ್ ಭೀಮಾಯ ನಿಶಿತಾನ್ ಶರಾನ್ ।
ಪ್ರೇಷಯಾಮಾಸ ಸಂಕ್ರುದ್ಧೋ ದರ್ಶಯನ್ ಪಾಣಿಲಾಘವಮ್ ॥೬೭॥

ಆಗ ಬಲಿಷ್ಠನಾದ ಶ್ರುತಾಯುವು ಕೋಪಗೊಂಡು ತನ್ನ ಹಸ್ತಕೌಶಲವನ್ನು ತೋರಿಸುತ್ತಾ ಭೀಮನ ಮೇಲೆ ಹರಿತವಾದ ಬಾಣಗಳನ್ನು ಪ್ರಯೋಗಿಸಿದನು.

ಸ ಕಾರ್ಮುಕವರೋತ್ಸೃಷ್ಟೈರ್ನವಭಿರ್ನಿಶಿತೈಃ ಶರೈಃ ।
ಸಮಾಹತೋ ಭೃಶಂ ರಾಜನ್ ಕಳಿಂಗೇನ ಮಹಾಯಶಾಃ ।
ಸಂಚುಕ್ರುಧೇ ಭೃಶಂ ಭೀಮೋ ದಂಡಾಹತ ಇವೋರಗಃ ॥೬೮॥

ಶ್ರೇಷ್ಠವಾದ ಧನುಸ್ಸಿನಿಂದ ಹೊರಹೊಮ್ಮಿದ ಕಳಿಂಗನ ಆ ಒಂಬತ್ತು ಬಾಣಗಳಿಂದ ಬಲವಾಗಿ ಹೊಡೆಯಲ್ಪಟ್ಟ ಮಹಾಕೀರ್ತಿವಂತನಾದ ಭೀಮಸೇನನು ಎಲೈ ರಾಜನೇ, ಕೋಲಿನಿಂದ ಹೊಡೆದ ಸರ್ಪದಂತೆ ಬಹಳ ಕೋಪಗೊಂಡನು.

ಕ್ರುದ್ಧಶ್ಚ ಚಾಪಮಾಯಮ್ಯ ಬಲವದ್ ಬಲಿನಾಂ ವರಃ ।
ಕಳಿಂಗಮವಧೀತ್ ಪಾರ್ಥೋ ಭೀಮಃ ಸಪ್ತಭಿರಾಯಸೈಃ ॥೬೯॥

ಬಲಿಷ್ಠರಲ್ಲಿ ಶ್ರೇಷ್ಠನಾದ ಭೀಮನು ಕೋಪಗೊಂಡು ತನ್ನ ಧನುಸ್ಸನ್ನು ಬಲವಾಗಿ ಬಗ್ಗಿಸಿ ಕಳಿಂಗನ ಮೇಲೆ ಏಳು ಅಯೋಮಯವಾದ ಬಾಣಗಳನ್ನು ಪ್ರಯೋಗಿಸಿದನು.

ಕ್ಷುರಾಭ್ಯಾಂ ಚಕ್ರರಕ್ಷೌ ಚ ಕಳಿಂಗಸ್ಯ ಮಹಾಬಲೌ ।
ಸತ್ಯದೇವಂ ಚ ಸತ್ಯಂ ಚ ಪ್ರಾಹಿಣೋದ್ ಯಮಸಾದನಮ್ ॥೭೦॥

ಕಳಿಂಗನ ರಥದ ಚಕ್ರರಕ್ಷಕರಾದ, ಮಹಾಬಲಿಷ್ಠರಾದ ಸತ್ಯದೇವ ಮತ್ತು ಸತ್ಯ ಎಂಬ ಇಬ್ಬರನ್ನೂ ಕ್ಷುರಗಳಿಂದ (ಸಣ್ಣ ಕತ್ತಿಗಳಿಂದ) ಯಮಪಟ್ಟಣಕ್ಕೆ ಕಳುಹಿಸಿದನು.

ತತಃ ಪುನರಮೇಯಾತ್ಮಾ ನಾರಾಚೈರ್ನಿಶಿತೈಸ್ತ್ರಿಭಿಃ ।
ಕೇತುಮಂತಂ ರಣೇ ಭೀಮೋऽಗಮಯದ್ ಯಮಸಾದನಮ್ ॥೭೧॥

ಅನಂತರ ಅಪರಿಮಿತ ಪರಾಕ್ರಮಿಯಾದ ಭೀಮಸೇನನು ಮೂರು ಹರಿತವಾದ ನಾರಾಚಗಳಿಂದ ರಣರಂಗದಲ್ಲಿ ಕೇತುಮಂತನನ್ನು ಯಮಪಟ್ಟಣಕ್ಕೆ ಕಳುಹಿಸಿದನು.

ತತಃ ಕಳಿಂಗಾಃ ಸಂಕ್ರುದ್ಧಾ ಭೀಮಸೇನಮಮರ್ಷಣಮ್ ।
ಅನೀಕೈರ್ಬಹುಸಾಹಸ್ರೈಃ ಕ್ಷತ್ರಿಯಾಃ ಸಮವಾರಯನ್ ॥೭೨॥

ಆಗ ಕಳಿಂಗ ದೇಶದ ಅನೇಕ ಸಹಸ್ರ ಕ್ಷತ್ರಿಯರು ಕೋಪಗೊಂಡಿದ್ದ ಭೀಮಸೇನನನ್ನು ತಾವೂ ಕೋಪಗೊಂಡು ಸುತ್ತುವರಿದರು.

ತತಃ ಶಕ್ತಿಗದಾಖಡ್ಗತೋಮರರ್ಷ್ಟಿಪರಶ್ವಧೈಃ ।
ಕಳಿಂಗಾಶ್ಚ ತತೋ ರಾಜನ್ ಭೀಮಸೇನಮವಾಕಿರನ್ ॥೭೩॥

ಎಲೈ ರಾಜನೇ, ಅನಂತರ ಕಳಿಂಗರು ಭೀಮಸೇನನ ಮೇಲೆ ಶಕ್ತಿ, ಗದೆ, ಖಡ್ಗ, ತೋಮರ, ಋಷ್ಟಿ, ಪರಶ್ವಧ ಈ ಆಯುಧಗಳ ಮಳೆಯನ್ನು ಸುರಿಸಿದರು.

ಸನ್ನಿವಾರ್ಯ ಸ ತಾಂ ಘೋರಾಂ ಶರವೃಷ್ಟಿಂ ಸಮುತ್ಥಿತಾಮ್ ।
ಗದಾಮಾದಾಯ ತರಸಾ ಪರಿಪ್ಲುತ್ಯ ಮಹಾಬಲಃ ।
ಭೀಮಃ ಸಪ್ತಶತಾನ್ ವೀರಾನನಯದ್ ಯಮಸಾದನಮ್ ॥೭೪॥

ಆ ಸೈನಿಕರಿಂದ ಉಂಟಾದ ಘೋರವಾದ ಆ ಬಾಣಗಳ ಮಳೆಯನ್ನು ನಿವಾರಿಸಿ ಮಹಾಬಲನಾದ ಭೀಮಸೇನನು ಗದೆಯನ್ನು ತೆಗೆದುಕೊಂಡು ಎಲ್ಲ ಕಡೆಯಲ್ಲಿಯೂ ಹಾರಿ ಕಳಿಂಗರ ಏಳು ನೂರು ವೀರರನ್ನು ಯಮಪಟ್ಟಣಕ್ಕೆ ಕಳುಹಿಸಿದನು.

ಪುನಶ್ಚೈವ ದ್ವಿಸಾಹಸ್ರಾನ್ ಕಳಿಂಗಾನರಿಮರ್ದನಃ ।
ಪ್ರಾಹಿಣೋನ್ಮೃತ್ಯುಲೋಕಾಯ ತದದ್ಭುತಮಿವಾಭವತ್ ॥೭೫॥

ಶತ್ರುಮರ್ದನನಾದ ಅವನು ಪುನಃ ಎರಡು ಸಹಸ್ರ ಕಾಳಿಂಗರನ್ನು ಮೃತ್ಯುಲೋಕಕ್ಕೆ ಕಳುಹಿಸಿದನು. ಅದು ಅದ್ಭುತವಾಗಿದ್ದಿತು.

ಏವಂ ಸ ತಾನ್ಯನೀಕಾನಿ ಕಳಿಂಗಾನಾಂ ಪುನಃ ಪುನಃ ।
ಬಿಭೇದ ಸಮರೇ ವೀರಃ ಪ್ರೇಕ್ಷ್ಯ ಭೀಷ್ಮಂ ಮಹಾವ್ರತಮ್ ॥೭೬॥

ಹೀಗೆ ವೀರನಾದ ಆ ಭೀಮನು ಮಹಾರಥರಾದ ಭೀಷ್ಮರನ್ನು ನೋಡುತ್ತಾ ಪುನಃ ಪುನಃ ಕಳಿಂಗರ ಸೈನ್ಯಗಳನ್ನು ಭೇದಿಸಿದನು.

ಹತಾರೋಹಾಶ್ಚ ಮಾತಂಗಾಃ ಪಾಂಡವೇನ ಮಹಾತ್ಮನಾ ।
ವಿಪ್ರಜಗ್ಮುರನೀಕೇಷು ಮೇಘಾ ವಾತಹತಾ ಇವ ।
ಮೃದ್ನಂತಃ ಸ್ವಾನ್ಯನೀಕಾನಿ ವಿನದಂತಃ ಶರಾತುರಾಃ ॥೭೭॥

ಮಹಾತ್ಮನಾದ ಪಾಂಡುಪುತ್ರನಾದ ಭೀಮಸೇನನಿಂದ ಗಜಾರೋಹಿಗಳು ಹತರಾಗುತ್ತಿರಲು ಆ ಗಜಗಳು ಗಾಳಿಗೆ ಸಿಕ್ಕಿದ ಮೋಡದಂತೆ ತಮ್ಮ ಸೈನ್ಯಗಳಲ್ಲಿಯೇ ಓಡುತ್ತಾ ಬಾಣಗಳಿಂದ ಉಂಟಾದ ನೋವುಗಳಿಂದ ಗರ್ಜಿಸುತ್ತಾ ತಮ್ಮ ಸೈನ್ಯವನ್ನೇ ತುಳಿದು ನಾಶಮಾಡಿದವು.

ತತೋ ಭೀಮೋ ಮಹಾಬಾಹುಃ ಶಂಖಂ ಪ್ರಾಧ್ಮಾಪಯದ್ ಬಲೀ ।
ಸರ್ವಕಾಳಿಂಗಸೈನ್ಯಾನಾಂ ಮನಾಂಸಿ ಸಮಕಂಪಯತ್ ॥೭೮॥

ಆನಂತರ ಬಲಿಷ್ಠನೂ, ಮಹಾಬಾಹುವೂ ಆದ ಭೀಮಸೇನನು ಶಂಖವನ್ನು ಊದಿದನು ಮತ್ತು ಅದರಿಂದ ಕಳಿಂಗ ಸೈನ್ಯದ ಎಲ್ಲ ಯೋಧರ ಮನಸ್ಸನ್ನೂ ನಡುಗಿಸಿದನು.

ಮೋಹಶ್ಚಾಪಿ ಕಳಿಂಗಾನಾಮಾವಿವೇಶ ಪರಂತಪ ।
ಪ್ರಾಕಂಪಂತ ಚ ಸೈನ್ಯಾನಿ ವಾಹನಾನಿ ಚ ಸರ್ವತಃ ॥೭೯॥

ಎಲೈ ಪರಂತಪನೇ, ಕಳಿಂಗ ಯೋಧರಿಗೆ ಮೋಹವುಂಟಾಯಿತು. ಸೈನ್ಯಗಳು ಮತ್ತು ಎಲ್ಲಾ ವಾಹನಗಳು ನಡುಗಿದವು.

ಭೀಮೇನ ಸಮರೇ ರಾಜನ್ ಗಜೇಂದ್ರೇಣೇವ ಸರ್ವತಃ ।
ಮಾರ್ಗಾನ್ ಬಹೂನ್ ವಿಚರತಾ ಧಾಮತಾ ಚ ತತಸ್ತತಃ ।
ಮುಹುರುತ್ಪತತಾ ಚೈವ ಸಮ್ಮೋಹಃ ಸಮಜಾಯತ ॥೮೦॥

ಎಲೈ ರಾಜನೇ, ರಣರಂಗದಲ್ಲಿ ಎಲ್ಲ ಕಡೆಗಳಲ್ಲಿಯೂ ವಿವಿಧವಾದ ಅನೇಕ ಮಾರ್ಗಗಳಲ್ಲಿ ಸಂಚರಿಸಿ ಅಲ್ಲಿಂದಿಲ್ಲಿಗೆ ಓಡುತ್ತಾ ಪುನಃ ಪುನಃ ಮೇಲೆ ಹಾರುವ ಭೀಮಸೇನನನ್ನು ನೋಡಿ ಶತ್ರುಗಳಿಗೆ ಮೋಹವುಂಟಾಯಿತು.

ಭೀಮಸೇನಭಯತ್ರಸ್ತಂ ಸೈನ್ಯಂ ಚ ಸಮಕಂಪತ ।
ಕ್ಷೋಭ್ಯಮಾಣಮಸಂಬಾಧಂ ಗ್ರಾಹೇಣೇವ ಮಹತ್ಸರಃ ॥೮೧॥

ದೊಡ್ಡ ಮೊಸಳೆಯಿಂದ ಕಲಕಲ್ಪಟ್ಟ ದೊಡ್ಡ ಸರೋವರದಂತೆ ಭೀಮಸೇನನ ಭಯದಿಂದ ಶತ್ರುಸೈನ್ಯವು ಕ್ಷೋಭೆಗೊಂಡಿತು.

ಶ್ರುತಕೀರ್ತಿ ಚ ವೀರೋಽಸೌ ಭೀಮಸೇನಮುಖಾಸ್ತ್ರಿಭಿಃ ।
ಶ್ರುತಾಯುಧಶ್ಚ ಸಂಕ್ರುದ್ಧಃ ವಿದ್ಧ್ವಾಽಸ್ಯಂ ಚ ಸಂಖಯತಃ ॥೧೨॥

ಸತ್ಯಸಂ[illegible]ಸೋಽಥೈನಂ ಪಾಂಡವಾನಾಂ ಧ್ವಜೋನಘಃ ।
ಅಪೂಪಿಯತ್ ಶಾಸ್ತ್ರಿಭಿಸ್ತಾಂ ಯುದ್ಧದುರ್ಮದ ಪಾರ್ಥಿವಃ ॥೧೩॥

ಅದ್ಭುತಕಾರ್ಮುಕವನ್ನು ಮೂಡುವ ಭೀಮಸೇನನಿಂದ ಪರವೀರರು ಭಯಗೊಳ್ಳಲುದ್ಯುಕ್ತರಲು. ಅದರಲ್ಲಿ ಕೆಲವರು ಹಿಂದೆ ಬರುತ್ತಿರಲು, ಇನ್ನು ಕೆಲವ ಯೋಧರು ಗುಂಪು ಗುಂಪಾಗಿ ಓಡಿಹೋಗುತ್ತಿರಲು ಪಾಂಡವರ ಸೇನಾಪತಿಯಾದ ದೃಷ್ಟದ್ಯುಮ್ನನು ತನ್ನ ಸೈನ್ಯವನ್ನು ತಿರುಗು ಯುದ್ಧವನ್ನು ಮುಂದುವರಿಸು ಎಂದು ಹೇಳಿದನು.

ಸೇನಾಪತಿವಚಃ ಶ್ರುತ್ವಾ ತಿಮಿಂಡಿಪ್ರಮುಖಾ ಗಣಾಃ ।
ಭೀಮಮೇವಾಭ್ಯವರ್ತಂತ ರಥಾನೀಕೈಃ ಪ್ರಹಾರಿಭಿಃ ॥೧೪॥

ಸೇನಾಪತಿಯ ಮಾತುಗಳನ್ನು ಕೇಳಿ ತಿಮಿಂಡಿಯೇ ಮೊದಲಾದ ಗುಂಪುಗಳು ಪ್ರಹಾರವನ್ನು ಮಾಡುವ ರಥಗಳ ಸಮೂಹದಿಂದ ಕೂಡಿ ಭೀಮನ ಕಡೆಗೆ ಬಂದವು.

ಧರ್ಮರಾಜಸ್ಯ ತಾಂ ಸರ್ವಾಮಪಹಾಯ ಪಾಂಡವಃ ।
ಮಹತಾ ಮೇಘವರ್ಷೇಣ ಪಾಣಿನೇನ ಪೃಷತ್ಕಃ ॥೧೫॥

ಪಾಂಡುಪುತ್ರನಾದ ಧರ್ಮರಾಜನು ಮೋಡದ ಬಣ್ಣವನ್ನು ಹೊಂದಿದ್ದ ಗಜಗಳ ದೊಡ್ಡ ಸಮೂಹದಿಂದ ಹಿಂದೆ ನಿಂತು ಅವರಿಗೆ ಬೆಂಬಲನಾದನು.

ಏವಂ ಸಂಚೋದ್ಯ ಸರ್ವಾಗಾಃ ಶಾಸ್ತ್ರವೀಣಾಃ ಪಾರ್ಥಿವಾಃ ।
ಭೀಮಸೇನಸ್ಯ ಜಗ್ರಾಹ ಪಾರ್ಶ್ವಂ ಸತ್ಯಧೃತೇರಥಾಮ್ ॥೧೬॥

ಹೀಗೆ ದೃಷ್ಟದ್ಯುಮ್ನನು ತನ್ನ ಎಲ್ಲಾ ಸೈನ್ಯಗಳನ್ನೂ ಪ್ರಚೋದಿಸಿ ಸತ್ಯಧೃತಿಗೆ ಯೋಗ್ಯವಾದ ಭೀಮಸೇನನ ಪಾರ್ಶ್ವವನ್ನು ಹೊಂದಿದನು.

ಶ ಚ ಪಾಂಚಾಲರಾಜಸ್ಯ ರೋಷೇ ಕಟ್ಟಸ್ಯ ವಿದ್ಧವೇ ।
ಭೀಮಾಚ್ಛಸ್ತ್ರಶರೌಘಸ್ಯ ಜ್ಯಾಘೋಷಸ್ಯ ಕ್ಷಯಕ್ಷತಮಃ ॥೧೭॥

ಪಾಂಚಾಲರಾಜನಾದ ಧೃಷ್ಟದ್ಯುಮ್ನನಿಗೆ ಭೀಮ ಮತ್ತು ಸಾತ್ಯಕಿಯನ್ನು ಬಿಟ್ಟು ಪ್ರಾಣಗಳಿಗಿಂತಲೂ ಪ್ರಿಯಕಾರಿಯಾದ ಇನ್ನೊಬ್ಬರು ಯಾರೂ ಇಲ್ಲ.

ಸೋಽಪಶ್ಯತ್ ತಂ ಕಳಿಂಗೇಷು ಚರಂತಮರಿಸೂದನಮ್ ।
ಭೀಮಸೇನಂ ಮಹಾಬಾಹುಂ ಪಾರ್ಷತಃ ಪರವೀರಹಾ ॥೪೮॥

ಪರವೀರಘಾತಕನಾದ ಧೃಷ್ಟದ್ಯುಮ್ನನು ಮಹಾಬಾಹುವೂ, ಶತ್ರುಸೂದನನೂ ಆದ ಭೀಮಸೇನನು ಕಳಿಂಗರ ಸೈನ್ಯದಲ್ಲಿ ಸಂಚರಿಸುತ್ತಿರುವುದನ್ನು ನೋಡಿದನು.

ನನರ್ದ ಬಹುಧಾ ರಾಜನ್ ಹೃಷ್ಟಶ್ಚಾಪೀತ್ ಪರಂತಪಃ ।
ಶಂಖಂ ದಧ್ಮೌ ಚ ಸಮರೇ ಸಿಂಹನಾದಂ ನನಾದ ಚ ॥೪೯॥

ಎಲೈ ರಾಜನೇ, ಪರಂತಪನಾದ ಅವನು ಸಂತೋಷಗೊಂಡು ಅನೇಕ ರೀತಿಯಲ್ಲಿ ಗರ್ಜಿಸಿದನು. ಯುದ್ಧಭೂಮಿಯಲ್ಲಿ ಶಂಖವನ್ನು ಊದಿ ಸಿಂಹನಾದವನ್ನು ಮಾಡಿದನು.

ಸ ಚ ಪಾರಾವತಾಶ್ವಸ್ಯ ರಥೇ ಹೇಮಪರಿಷ್ಕೃತೇ ।
ಕೋವಿದಾರಧ್ವಜಂ ದೃಷ್ಟ್ವಾ ಭೀಮಸೇನಃ ಸಮಾಶ್ವಸತ್ ॥೫೦॥

ಪಾರಾವತಾಶ್ವ (ಪಾರಿವಾಳದ ಬಣ್ಣದ ಅಶ್ವ)ಗಳುಳ್ಳ ಸುವರ್ಣಾಲಂಕೃತವುಳ್ಳ, ಕೋವಿದಾರಧ್ವಜವನ್ನು ಹೊಂದಿದ ರಥದಲ್ಲಿ ಧೃಷ್ಟದ್ಯುಮ್ನನನ್ನು ನೋಡಿ ಭೀಮಸೇನನು ಸಮಾಧಾನವನ್ನು ಹೊಂದಿದನು.

ಧೃಷ್ಟದ್ಯುಮ್ನಸ್ತು ತಂ ದೃಷ್ಟ್ವಾ ಕಳಿಂಗೈಃ ಸಮಭಿದ್ರುತಮ್ ।
ಭೀಮಸೇನಮಮೇಯಾತ್ಮಾ ತ್ರಾಣಾಯಾಜೌ ಸಮಭ್ಯಯಾತ್ ॥೫೧॥

ಕಳಿಂಗರಿಂದ ಸುತ್ತುವರಿಯಲ್ಪಟ್ಟ ಭೀಮಸೇನನನ್ನು ನೋಡಿ ಅಪರಿಮಿತ ಪರಾಕ್ರಮಿಯಾದ ಧೃಷ್ಟದ್ಯುಮ್ನನು ಭೀಮಸೇನನನ್ನು ರಕ್ಷಿಸಲು ರಣರಂಗದಲ್ಲಿ ಅವನ ಸಮೀಪಕ್ಕೆ ಬಂದನು.

ತೌ ದೂರಾತ್ ಸಾತ್ಯಕಿರ್ದೃಷ್ಟ್ವಾ ಧೃಷ್ಟದ್ಯುಮ್ನವ್ಯಕೋದರೌ ।
ಕಳಿಂಗಾನ್ ಸಮರೇ ವೀರೌ ಯೋಧಯಂತೌ ಮನಸ್ವಿನೌ ॥೫೨॥

ತ್ರಾಯತೇಷು ಚ ವೀರೇಷು ಭೀಮೇನಾದ್ಭುತಕರ್ಮಣಾ ।
ಪುನರಾವರ್ತಮಾನೇಷು ವಿದ್ರವತ್ಸು ಚ ಸಂಘಶಃ ॥೮೨॥

ಸರ್ವಾ[illegible]ಯೋಧೇಷು ಪಾಂಡೂನಾಂ ಧೃಷ್ಟದ್ಯುಮ್ನಃ ಪತಿಃ ।
ಅಬ್ರವೀತ್ ಸ್ವಾನ್ಯನೀಕಾನಿ ಯುಧ್ಯಧ್ವಮಿತಿ ಪಾರ್ಷತಃ ॥೮೩॥

ಅದ್ಭುತಕಾರ್ಯವನ್ನು ಮಾಡುವ ಭೀಮಸೇನನಿಂದ ಪರವೀರರು ಭಯಗೊಳಿಸಲ್ಪಡುತ್ತಿರಲು, ಅದರಲ್ಲಿ ಕೆಲವರು ಹಿಂದೆ ಬರುತ್ತಿರಲು, ಇನ್ನು ಕೆಲವು ಯೋಧರು ಗುಂಪು ಗುಂಪಾಗಿ ಓಡಿಹೋಗುತ್ತಿರಲು ಪಾಂಡವರ ಸೇನಾಪತಿಯಾದ ಧೃಷ್ಟದ್ಯುಮ್ನನು ತನ್ನ ಸೈನ್ಯವನ್ನು ಕುರಿತು ಯುದ್ಧವನ್ನು ಮುಂದುವರಿಸಿ ಎಂದು ಹೇಳಿದನು.

ಸೇನಾಪತಿವಚಃ ಶ್ರುತ್ವಾ ಶಿಖಂಡಿಪ್ರಮುಖಾ ಗಣಾಃ ।
ಭೀಮಮೇವಾಭ್ಯವರ್ತಂತ ರಥಾನೀಕೈಃ ಪ್ರಹಾರಿಭಿಃ ॥೮೪॥

ಸೇನಾಪತಿಯ ಮಾತುಗಳನ್ನು ಕೇಳಿ ಶಿಖಂಡಿಯೇ ಮೊದಲಾದ ಗುಂಪುಗಳು ಪ್ರಹಾರವನ್ನು ಮಾಡುವ ರಥಗಳ ಸಮೂಹದಿಂದ ಕೂಡಿ ಭೀಮನ ಕಡೆಗೆ ಬಂದವು.

ಧರ್ಮರಾಜಶ್ಚ ತಾನ್ ಸರ್ವಾನುಪಜಗ್ರಾಹ ಪಾಂಡವಃ ।
ಮಹತಾ ಮೇಘವರ್ಣೇನ ನಾಗಾನೀಕೇನ ಪೃಷ್ಠತಃ ॥೮೫॥

ಪಾಂಡುಪುತ್ರನಾದ ಧರ್ಮರಾಜನು ಮೋಡದ ಬಣ್ಣವನ್ನು ಹೊಂದಿದ್ದ ಗಜಗಳ ದೊಡ್ಡ ಸಮೂಹದಿಂದ ಹಿಂದೆ ನಿಂತು ಅವರಿಗೆ ಬೆಂಬಲನಾದನು.

ಏವಂ ಸಂಚೋದ್ಯ ಸರ್ವಾಣಿ ಸ್ವಾನ್ಯನೀಕಾನಿ ಪಾರ್ಷತಃ ।
ಭೀಮಸೇನಸ್ಯ ಜಗ್ರಾಹ ಪಾರ್ಷ್ಣಿಂ ಸತ್ಪುರುಷೋಚಿತಾಮ್ ॥೮೬॥

ಹೀಗೆ ಧೃಷ್ಟದ್ಯುಮ್ನನು ತನ್ನ ಎಲ್ಲಾ ಸೈನ್ಯಗಳನ್ನೂ ಪ್ರಚೋದಿಸಿ ಸತ್ಪುರುಷರಿಗೆ ಯೋಗ್ಯವಾದ ಭೀಮಸೇನನ ಪಾರ್ಶ್ವವನ್ನು ಹೊಂದಿದನು.

ನ ಹಿ ಪಾಂಚಾಲರಾಜಸ್ಯ ಲೋಕೇ ಕಶ್ಚನ ವಿದ್ಯತೇ ।
ಭೀಮಸಾತ್ಯಕಯೋರಸ್ಯಃ ಪ್ರಾಣೇಭ್ಯಃ ಪ್ರಿಯಕೃತ್ತಮಃ ॥೮೭॥

ಪಾಂಚಾಲರಾಜನಾದ ಧೃಷ್ಟದ್ಯುಮ್ನನಿಗೆ ಭೀಮ ಮತ್ತು ಸಾತ್ಯಕಿಯನ್ನು ಬಿಟ್ಟು ಪ್ರಾಣಗಳಿಗಿಂತಲೂ ಪ್ರಿಯಕಾರಿಯಾದ ಇನ್ನೊಬ್ಬರು ಯಾರೂ ಇಲ್ಲ.

ಸೋಽಪಶ್ಯತ್ ತಂ ಕಳಿಂಗೇಷು ಚರಂತಮರಿಸೂದನಮ್ ।
ಭೀಮಸೇನಂ ಮಹಾಬಾಹುಂ ಪಾರ್ಷತಃ ಪರವೀರಹಾ ॥೮೮॥

ಪರವೀರಘಾತಕನಾದ ಧೃಷ್ಟದ್ಯುಮ್ನನು ಮಹಾಬಾಹುವೂ, ಶತ್ರುಸೂದನನೂ ಆದ ಭೀಮಸೇನನು ಕಳಿಂಗರ ಸೈನ್ಯದಲ್ಲಿ ಸಂಚರಿಸುತ್ತಿರುವುದನ್ನು ನೋಡಿದನು.

ನನರ್ದ ಬಹುಧಾ ರಾಜನ್ ಹೃಷ್ಟಶ್ಚಾಸೀತ್ ಪರಂತಪಃ ।
ಶಂಖಂ ದಧ್ಮೌ ಚ ಸಮರೇ ಸಿಂಹನಾದಂ ನನಾದ ಚ ॥೮೯॥

ಎಲೈ ರಾಜನೇ, ಪರಂತಪನಾದ ಅವನು ಸಂತೋಷಗೊಂಡು ಅನೇಕ ರೀತಿಯಲ್ಲಿ ಗರ್ಜಿಸಿದನು. ಯುದ್ಧಭೂಮಿಯಲ್ಲಿ ಶಂಖವನ್ನು ಊದಿ ಸಿಂಹನಾದವನ್ನು ಮಾಡಿದನು.

ಸ ಚ ಪಾರಾವತಾಶ್ವಸ್ಯ ರಥೇ ಹೇಮಪರಿಷ್ಕೃತೇ ।
ಕೋವಿದಾರಧ್ವಜಂ ದೃಷ್ಟ್ವಾ ಭೀಮಸೇನಃ ಸಮಾಶ್ವಸತ್ ॥೯೦॥

ಪಾರಾವತಾಶ್ವ (ಪಾರಿವಾಳದ ಬಣ್ಣದ ಅಶ್ವ)ಗಳುಳ್ಳ ಸುವರ್ಣಾಲಂಕೃತವುಳ್ಳ, ಕೋವಿದಾರಧ್ವಜವನ್ನು ಹೊಂದಿದ ರಥದಲ್ಲಿ ಧೃಷ್ಟದ್ಯುಮ್ನನನ್ನು ನೋಡಿ ಭೀಮಸೇನನು ಸಮಾಧಾನವನ್ನು ಹೊಂದಿದನು.

ಧೃಷ್ಟದ್ಯುಮ್ನಸ್ತು ತಂ ದೃಷ್ಟ್ವಾ ಕಳಿಂಗೈಃ ಸಮಭಿದ್ರುತಮ್ ।
ಭೀಮಸೇನಮಮೇಯಾತ್ಮಾ ತ್ರಾಣಾಯಾಜೌ ಸಮಭ್ಯಯಾತ್ ॥೯೧॥

ಕಳಿಂಗರಿಂದ ಸುತ್ತುವರಿಯಲ್ಪಟ್ಟ ಭೀಮಸೇನನನ್ನು ನೋಡಿ ಅಪರಿಮಿತ ಪರಾಕ್ರಮಿಯಾದ ಧೃಷ್ಟದ್ಯುಮ್ನನು ಭೀಮಸೇನನನ್ನು ರಕ್ಷಿಸಲು ರಣರಂಗದಲ್ಲಿ ಅವನ ಸಮೀಪಕ್ಕೆ ಬಂದನು.

ತೌ ದೂರಾತ್ ಸಾತ್ಯಕಿರ್ದೃಷ್ಟ್ವಾ ಧೃಷ್ಟದ್ಯುಮ್ನವೃಕೋದರೌ ।
ಕಳಿಂಗಾನ್ ಸಮರೇ ಏರೌ ಯೋಧಯಂತೌ ಮನಸ್ವಿನೌ ॥೯೨॥

ಸ ತತ್ರ ಗತ್ವಾ ಶೈನೇಯೋ ಜವೇನ ಜಯತಾಂ ವರಃ ।
ಪಾರ್ಥಪಾರ್ಷತಯೋಃ ಪಾರ್ಶ್ವಂ ಜಗ್ರಾಹ ಪುರುಷರ್ಷಭಃ ॥೯೩॥

ದೃಷ್ಟದ್ಯುಮ್ನ ಮತ್ತು ಭೀಮಸೇನರು ಜೊತೆಯಲ್ಲಿರುವುದನ್ನು ಮತ್ತು ವೀರರೂ, ಧೈರ್ಯಶಾಲಿಗಳೂ ಆದ ಅವರು ಕಳಿಂಗರ ಜೊತೆಯಲ್ಲಿ ಯುದ್ಧವನ್ನು ಮಾಡುವುದನ್ನೂ ದೂರದಿಂದಲೇ ನೋಡಿದ ಜಯಿಸುವವರಲ್ಲಿ ಶ್ರೇಷ್ಠನಾದವನೂ, ಪುರುಷ ಶ್ರೇಷ್ಠನೂ ಆದ ಸಾತ್ಯಕಿಯು ಅಲ್ಲಿಗೆ ಶೀಘ್ರವಾಗಿ ಹೋಗಿ ಭೀಮಸೇನ ಮತ್ತು ದೃಷ್ಟದ್ಯುಮ್ನರ ಪಾರ್ಶ್ವವನ್ನು ತಲುಪಿದನು.

ಸ ಕೃತ್ವಾ ಕದನಂ ತತ್ರ ಪ್ರಗೃಹೀತಶರಾಸನಃ ।
ಆಸ್ಥಿತೋ ರೌದ್ರಮಾತ್ಮಾನಂ ಜಘಾನ ಸಮರೇ ಪರಾನ್ ॥೯೪॥

ಕೈಯಲ್ಲಿ ಧನುಸ್ಸನ್ನು ಹಿಡಿದ ಅವನು ಭಯಂಕರವಾದ ಶರೀರವನ್ನು ಧರಿಸಿ, ಘೋರವಾದ ಯುದ್ಧವನ್ನು ಮಾಡಿ ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸಿದನು.

ಕಳಿಂಗಪ್ರಭವಾಂ ಚೈವ ಮಾಂಸಶೋಣಿತಕರ್ದಮಾಮ್ ।
ರುಧಿರಸ್ಯಂದಿನೀಂ ತತ್ರ ಭೀಮಃ ಪ್ರಾವರ್ತಯನ್ ನದೀಮ್ ॥೯೫॥

ಅಂತರೇಣ ಕಳಿಂಗಾನಾಂ ಪಾಂಡವಾನಾಂ ಚ ವಾಹಿನೀಮ್ ।

ಕಳಿಂಗ ಯೋಧರಿಂದ ಹೊರಹೊಮ್ಮಿದ ಮಾಂಸ ಮತ್ತು ಶೋಣಿತಗಳ ಕೆಸರುಳ್ಳ ರಕ್ತಮಯವಾದ ನದಿಯನ್ನು ಅಲ್ಲಿ ಭೀಮಸೇನನು ಕಳಿಂಗರ ಮತ್ತು ಪಾಂಡವರ ಸೈನ್ಯದ ಮಧ್ಯದಲ್ಲಿ ಹರಿಸಿದನು.

ಸಂತತಾರ ಸುದುಸ್ತಾರಾಂ ಭೀಮಸೇನೋ ಮಹಾಬಲಃ ॥೯೬॥

ಮಹಾಬಲನಾದ ಭೀಮಸೇನನು ದಾಟಲು ಅಸಾಧ್ಯವಾದ ಕಳಿಂಗರ ಸೇನೆಯನ್ನು ದಾಟಿದನು.

ಭೀಮಸೇನಂ ತಥಾ ದೃಷ್ಟ್ವಾ ಪ್ರಾಕ್ರೋಶಂಸ್ತಾವಕಾ ನೃಪ ।
ಕಾಲೋಽಯಂ ಭೀಮರೂಪೇಣ ಕಳಿಂಗೈಃ ಸಹ ಯುದ್ಧ್ಯತೇ ॥೯೭॥

ಹಾಗಿದ್ದ ಭೀಮಸೇನನನ್ನು ನೋಡಿ ಎಲೈ ರಾಜನೇ, ನಿನ್ನವರು ಮೃತ್ಯುವೇ ಭೀಮನ ರೂಪದಿಂದ ಕಳಿಂಗರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದೆ ಎಂದು ಕಿರುಚಿದರು.

ತತಃ ಶಾಂತನವೋ ಭೀಷ್ಮಃ ಶ್ರುತ್ವಾ ತಂ ನಿನದಂ ರಣೇ ।
ಅಭ್ಯಯಾತ್ ತ್ವರಿತೋ ಭೀಮಂ ವ್ಯೂಢಾನೀಕಃ ಸಮಂತತಃ ॥೯೮॥

ಆಗ ಶಂತನು ಪುತ್ರರಾದ ಭೀಷ್ಮರು ರಣರಂಗದಲ್ಲಿ ಆ ನಿನಾದವನ್ನು ಕೇಳಿ ಎಲ್ಲ ಕಡೆಯಲ್ಲಿಯೂ ಸೈನ್ಯದಿಂದ ವ್ಯೂಹಗೊಂಡಿದ್ದ ಭೀಮನ ಕಡೆಗೆ ತೀಘ್ರವಾಗಿ ಬಂದರು.

ತಂ ಸಾತ್ಯಕಿರ್ಭೀಮಸೇನೋ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಅಭ್ಯದ್ರವಂತ ಭೀಷ್ಮಸ್ಯ ರಥಂ ಹೇಮಪರಿಷ್ಕೃತಮ್ ॥೯೯॥

ಸಾತ್ಯಕಿ, ಭೀಮಸೇನ ಮತ್ತು ದ್ರುಪದನ ಮಗನಾದ ಧೃಷ್ಟದ್ಯುಮ್ನ ಈ ಮೂವರು ಸುವರ್ಣಾಲಂಕೃತವಾದ ಭೀಷ್ಮರ ರಥದ ಕಡೆಗೆ ಮುನ್ನುಗ್ಗಿದರು.

ಪರಿವಾರ್ಯ ಚ ತೇ ಸರ್ವೇ ಗಾಂಗೇಯಂ ರಭಸಂ ರಣೇ ।
ತ್ರಿಭಿಸ್ತ್ರಿಭಿಃ ಶರೈಘೋರೈರ್ಭೀಷ್ಮಮಾನರ್ಚ್ಛುರಂಜಸಾ ॥೧೦೦॥

ಅವರೆಲ್ಲರೂ ವೇಗಶಾಲಿಯಾದ ಭೀಷ್ಮರನ್ನು ಯುದ್ಧಭೂಮಿಯಲ್ಲಿ ಸುತ್ತುವರಿದು ಮೂರು ಮೂರು ಘೋರವಾದ ಬಾಣಗಳಿಂದ ಭೀಷ್ಮರನ್ನು ಚೆನ್ನಾಗಿ ಹಿಂಸಿಸಿದರು.

ಪ್ರತ್ಯವಿಧ್ಯತ ತಾನ್ ಸರ್ವಾನ್ ಪಿತಾ ದೇವವ್ರತಸ್ತವ ।
ಯತಮಾನಾನ್ ಮಹೇಷ್ವಾಸಾನ್ ತ್ರಿಭಿಸ್ತ್ರಿಭಿರಜಿಹ್ಮಗೈಃ ॥೧೦೧॥

ನಿನ್ನ ತಂದೆಯಾದ ದೇವವ್ರತರು ತಮ್ಮ ಜೊತೆಯಲ್ಲಿ ಯುದ್ಧವನ್ನು ಮಾಡಲು ಪ್ರಯತ್ನಪಡುತ್ತಿದ್ದ ಆ ಮೂವರು ಧನುರ್ಧಾರಿಗಳ ಮೇಲೆಯೂ ನೇರವಾಗಿ ಸಾಗುವ ಮೂರುಮೂರು ಬಾಣಗಳನ್ನು ಪ್ರಯೋಗಿಸಿ ಅವರನ್ನು ವೇಧಿಸಿದರು.

ತತಃ ಶರಸಹಸ್ರೇಣ ಸನ್ನಿವಾರ್ಯ ಮಹಾರಥಾನ್ ।
ಹಯಾನ್ ಕಾಂಚನಸನ್ನಾಹಾನ್ ಭೀಮಸ್ಯ ನ್ಯಹನಚ್ಛರೈಃ ॥೧೦೨॥

ಅನಂತರ ಮಹಾರಥರಾದ ಅವರನ್ನು ಒಂದು ಸಹಸ್ರ ಬಾಣಗಳಿಂದ ತಡೆದು ಸುವರ್ಣಾಲಂಕೃತವಾಗಿದ್ದ ಭೀಮಸೇನನ ರಥದ ಕುದುರೆಗಳನ್ನು ಬಾಣಗಳಿಂದ ಕೊಂದರು.

ಹತಾಶ್ವೇ ತು ರಥೇ ತಿಷ್ಠನ್ ಭೀಮಸೇನಃ ಪ್ರತಾಪವಾನ್ ।
ಶಕ್ತಿಂ ಚಿಕ್ಷೇಪ ತರಸಾ ಗಾಂಗೇಯಸ್ಯ ರಥಂ ಪ್ರತಿ ॥೧೦೩॥

ಪ್ರತಾಪಶಾಲಿಯಾದ ಭೀಮಸೇನನು ಅಶ್ವಗಳನ್ನು ಕಳೆದುಕೊಂಡು ರಥದಲ್ಲಿಯೇ ನಿಂತು ಭೀಷ್ಮರ ರಥದ ಮೇಲೆ ವೇಗವಾಗಿ ಶಕ್ತ್ಯಾಯುಧವನ್ನು ಎಸೆದನು.

ಅಪ್ರಾಪ್ತಾಮೇವ ತಾಂ ಶಕ್ತಿಂ ಪಿತಾ ದೇವವ್ರತಸ್ತವ ।
ತ್ರಿಧಾ ಚಿಚ್ಛೇದ ಸಮರೇ ಸಾ ಪೃಥಿವ್ಯಾಮಶೀರ್ಯತ ॥೧೦೪॥

ನಿನ್ನ ತಂದೆಯಾದ ದೇವವ್ರತರು ತಮ್ಮ ಬಳಿಗೆ ಬರುವುದಕ್ಕಿಂತ ಮೊದಲೇ ಆ ಶಕ್ತಿಯನ್ನು ಮೂರುಭಾಗವಾಗಿ ಕತ್ತರಿಸಿದರು. ಅದು ಭೂಮಿಯ ಮೇಲೆ ಬಿದ್ದು ನಾಶವನ್ನು ಹೊಂದಿತು.

ತತಃ ಶೈಕ್ಯಾಯಸೀಂ ಗುರ್ವೀಂ ಪ್ರಗೃಹ್ಯ ಬಲವದ್ ಗದಾಮ್ ।
ಭೀಮಸೇನೋ ರಥಾತ್ ತೂರ್ಣಂ ಪುಪ್ಲುವೇ ಮನುಜರ್ಷಭ ॥೧೦೫॥

ಎಲೈ ಮನುಜಶ್ರೇಷ್ಠನೇ, ಅನಂತರ ಭೀಮಸೇನನು ನೆಲುವಿನಲ್ಲಿಟ್ಟಿದ್ದ ಭಾರವಾದ ಕಬ್ಬಿಣದ ಗದೆಯನ್ನು ಹಿಡಿದು ತನ್ನ ರಥದಿಂದ ಶೀಘ್ರವಾಗಿ ಹಾರಿದನು.

ಸಾತ್ಯಕೋಽಪಿ ತತಸ್ತೂರ್ಣಂ ಭೀಮಸ್ಯ ಪ್ರಿಯಕಾಮ್ಯಯಾ ।
ಸಾರಥಿಂ ಕುರುವೃದ್ಧಸ್ಯ ಪಾತಯಾಮಾಸ ಸಾಯಕೈಃ ॥೧೦೬॥

ಸಾತ್ಯಕಿಯೂ ಸಹ ಭೀಮನಿಗೆ ಹಿತವನ್ನು ಮಾಡಲು ಬಯಸಿ ಶೀಘ್ರವಾಗಿ ಕುರುವೃದ್ಧರಾದ ಭೀಷ್ಮರ ಸಾರಥಿಯನ್ನು ಬಾಣಗಳಿಂದ ಹೊಡೆದುರುಳಿಸಿದನು.

ಭೀಷ್ಮಸ್ತು ನಿಹತೇ ತಸ್ಮಿನ್ ಸಾರಥೌ ರಥಿನಾಂ ವರಃ ।
ವಾತಾಯಮಾನೈಸ್ತೈರಶ್ವೈರಪನೀತೋ ರಣಾಜಿರಾತ್ ॥೧೦೭॥

ರಥಿಶ್ರೇಷ್ಠರಾದ ಭೀಷ್ಮರ ಸಾರಥಿಯು ಹಾಗೆ ಕೊಲ್ಲಲ್ಪಡುತ್ತಿರಲು ವಾಯುವೇಗವುಳ್ಳ ಭೀಷ್ಮರ ಕುದುರೆಗಳು ಭೀಷ್ಮರನ್ನು ಯುದ್ಧಭೂಮಿಯಿಂದ ಹೊರಗೆ ಕರದುಕೊಂಡು ಹೋದವು.

ಭೀಮಸೇನಸ್ತತೋ ರಾಜನ್ನಪನೀತೇ ಮಹಾವ್ರತೇ ।
ಪ್ರಜಜ್ವಾಲ ಯಥಾ ವಹ್ನಿರ್ದಹನ್ ಕ್ಷಮಿವೈಧಿತಃ ॥೧೦೮॥

ಎಲೈ ರಾಜನೇ, ಮಹಾವ್ರತರಾದ ಭೀಷ್ಮರು ರಣರಂಗದಿಂದ ಅಪಯಾನವನ್ನು ಮಾಡಿದಾಗ ಪ್ರವೃದ್ಧವಾದ ಅಗ್ನಿಯು ಹುಲ್ಲಿನ ರಾಶಿಯನ್ನು ಸುಡುವಂತೆ ಭೀಮಸೇನನು ಕೋಪದಿಂದ ಉರಿದನು.

ಸ ಹತ್ವಾ ಸರ್ವಕಾಳಿಂಗಾನ್ ಸೇನಾಮಧ್ಯೇ ವ್ಯತಿಷ್ಠತ ।
ನೈನಮಭ್ಯುತ್ಸಹನ್ ಕೇಚಿತ್ ತಾವಕಾ ಭರತರ್ಷಭ ॥೧೦೯॥

ಎಲೈ ಭರತಶ್ರೇಷ್ಠನೇ, ಅವನು ಎಲ್ಲ ಕಾಳಿಂಗರನ್ನೂ ಸಂಹರಿಸಿ ಸೇನೆಯ ಮಧ್ಯದಲ್ಲಿ ನಿಂತನು. ನಿನ್ನವರು ಯಾರೂ ಅವನ ಬಳಿಗೆ ಹೋಗಲು ಧೈರ್ಯವನ್ನು ಹೊಂದಿರಲಿಲ್ಲ.

ಧೃಷ್ಟದ್ಯುಮ್ನಸ್ತಮಾರೋಪ್ಯ ಸ್ವರಥೇ ರಥಿನಾಂ ವರಃ ।
ಪಶ್ಯತಾಂ ಸರ್ವಸೈನ್ಯಾನಾಮಪೋವಾಹ ಯಶಸ್ವಿನಮ್ ॥೧೧೦॥

ರಥಿಕರಲ್ಲಿ ಶ್ರೇಷ್ಠನಾದ ಧೃಷ್ಟದ್ಯುಮ್ನನು ಕೀರ್ತಿವಂತನಾದ ಭೀಮಸೇನನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಎಲ್ಲ ಸೈನ್ಯವು ನೋಡುತ್ತಿರುವಂತೆಯೇ ದೂರ ಹೋದನು.

ಸಂಪೂಜ್ಯಮಾನಃ ಪಾಂಚಾಲ್ಯೈರ್ಮತ್ಸ್ಯೈಶ್ಚ ಭರತರ್ಷಭ ।
ಧೃಷ್ಟದ್ಯುಮ್ನಂ ಪರಿಷ್ವಜ್ಯ ಸಮೇಯಾದಥ ಸಾತ್ಯಕಿಮ್ ॥೧೧೧॥

ಎಲೈ ಭರತಶ್ರೇಷ್ಠನೇ, ಭೀಮಸೇನನು ಪಾಂಚಾಲರಿಂದಲೂ ಮತ್ತು ಮತ್ಸ್ಯರಿಂದಲೂ ಪೂಜಿತನಾಗಿ ಧೃಷ್ಟದ್ಯುಮ್ನನನ್ನು ಆಲಿಂಗಿಸಿ ಸಾತ್ಯಕಿಯ ಜೊತೆಯಲ್ಲಿ ಸೇರಿದನು.

ಅಥಾಬ್ರವೀದ್ ಭೀಮಸೇನಂ ಸಾತ್ಯಕಿಃ ಸತ್ಯವಿಕ್ರಮಃ ।
ಪ್ರಹರ್ಷಯನ್ ಯದುವ್ಯಾಘ್ರೋ ಧೃಷ್ಟದ್ಯುಮ್ನಸ್ಯ ಪಶ್ಯತಃ ॥೧೧೨॥

ಆಗ ಸತ್ಯಪರಾಕ್ರಮಿಯಾದ, ಯದುಶ್ರೇಷ್ಠನಾದ ಸಾತ್ಯಕಿಯು ಧೃಷ್ಟದ್ಯುಮ್ನನು ನೋಡುತ್ತಿರುವಂತೆಯೇ ಭೀಮಸೇನನಿಗೆ ಸಂತೋಷವನ್ನುಂಟು ಮಾಡುತ್ತಾ ಮಾತನಾಡಿದನು.

ದಿಷ್ಟ್ಯಾ ಕಳಿಂಗರಾಜಶ್ಚ ರಾಜಪುತ್ರಶ್ಚ ಕೇತುಮಾನ್ ।
ಶಕ್ರದೇವಶ್ಚ ಕಾಳಿಂಗಃ ಕಳಿಂಗಾಶ್ಚ ಮೃಧೇ ಹತಾಃ ॥೧೧೩॥

ದೇವರ ದಯೆಯಿಂದ ಕಳಿಂಗರಾಜನೂ, ರಾಜಪುತ್ರನಾದ ಕೇತುಮಂತನೂ, ಶಕ್ರದೇವನೂ ಮತ್ತು ಕಳಿಂಗರೆಲ್ಲರೂ ಯುದ್ಧದಲ್ಲಿ ಹತರಾದರು.

ಸ್ವಬಾಹುಬಲವೀರ್ಯೇಣ ನಾಗಾಶ್ವರಥಸಂಕುಲಃ ।
ಮಹಾವ್ಯೂಹಃ ಕಳಿಂಗಾನಾಮೇಕೇನ ಮೃದಿತಸ್ತ್ವಯಾ ॥೧೧೪॥

ನೀನು ನಿನ್ನ ಬಾಹುಬಲ ಮತ್ತು ಪರಾಕ್ರಮವನ್ನೇ ಆಶ್ರಯಿಸಿ, ಗಜಾಶ್ವರಥಗಳಿಂದ ನಿಬಿಡವಾದ ಮಹಾವ್ಯೂಹರೂಪವಾದ ಕಳಿಂಗರ ಸೈನ್ಯವನ್ನು ಒಬ್ಬನೇ ನಾಶಗೊಳಿಸಿದೆ.

ಏವಮುಕ್ತ್ವಾ ಶಿನೇರ್ನಪ್ತಾ ದೀರ್ಘಬಾಹುರರಿಂದಮಃ ।
ರಥಾದ್ ರಥಮಭಿದ್ರುತ್ಯ ಪರ್ಯಷ್ವಜತ ಪಾಂಡವಮ್ ॥೧೧೫॥

ಹೀಗೆ ಹೇಳಿ ಶಿನಿಯ ಪುತ್ರನೂ, ದೀರ್ಘಬಾಹುವೂ, ಅರಿಂದಮನೂ ಆದ ಸಾತ್ಯಕಿಯು ತನ್ನ ರಥದಿಂದ ಧೃಷ್ಟದ್ಯುಮ್ನನ ರಥಕ್ಕೆ ಹಾರಿ ಭೀಮಸೇನನನ್ನು ಆಲಿಂಗಿಸಿದನು.

ತತಃ ಸ್ವರಥಮಾರುಹ್ಯ ಪುನರೇವ ಮಹಾರಥಃ ।
ತಾವಕಾನವಧೀತ್ ಕ್ರುದ್ಧೋ ಭೀಮಸ್ಯ ಬಲಮಾದಧತ್ ॥೧೧೬॥

ಅನಂತರ ಮಹಾರಥನಾದ ಸಾತ್ಯಕಿಯು ಪುನಃ ತನ್ನ ರಥವನ್ನು ಏರಿ ಕ್ರುದ್ಧನಾಗಿ ಭೀಮನಿಗೆ ಬಲವನ್ನುಂಟು ಮಾಡುತ್ತಾ ನಿನ್ನ ಸೈನಿಕರನ್ನು ಸಂಹರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಪಂಚಾಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಐವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೊಂದನೆಯ ಅಧ್ಯಾಯ

ಅಭಿಮನ್ಯು ಮತ್ತು ಅರ್ಜುನರ ಪರಾಕ್ರಮ. ಭೀಷ್ಮರಿಂದ ಸೈನ್ಯಾವಹಾರ.

ಸಂಜಯಃ

ಗತಾಪರಾಹ್ಣಭೂಯಿಷ್ಠೇ ತಸ್ಮಿನ್ನಹನಿ ಭಾರತ ।
ರಥನಾಗಾಶ್ವಪತ್ತೀನಾಂ ಸಾದಿನಾಂ ಚ ಮಹಾಕ್ಷಯೇ ॥೧॥

ದ್ರೋಣಪುತ್ರೇಣ ಶಲ್ಯೇನ ಕೃಪೇಣ ಚ ಮಹಾತ್ಮನಾ ।
ಸಮಸಜ್ಜತ ಪಾಂಚಾಲ್ಯಸ್ತ್ರಿಭಿರೇತೈರ್ಮಹಾರಥೈಃ ॥೨॥

ಸಂಜಯ– ಎಲೈ ಭಾರತನೇ, ಆ ದಿವಸದ ಮಧ್ಯಾಹ್ನದಲ್ಲಿ ಬಹುಭಾಗವು ಕಳೆದಿರಲು ರಥಗಳು, ಗಜಗಳು, ಅಶ್ವಗಳು, ಅಶ್ವಾರೋಹಿಗಳು ಮತ್ತು ಪದಾತಿಗಳು ಬಹಳ ವಿನಾಶವನ್ನು ಹೊಂದುತ್ತಿರಲು ಧೃಷ್ಟದ್ಯುಮ್ನನು ಮಹಾರಥರಾದ ಅಶ್ವತ್ಥಾಮರನ್ನು, ಶಲ್ಯನನ್ನು, ಮಹಾತ್ಮರಾದ ಕೃಪರನ್ನು ಎದುರಿಸಿ ಯುದ್ಧವನ್ನು ಮಾಡಿದನು.

ಸ ಲೋಕವಿದಿತಾನಶ್ವಾನ್ ನಿಜಘಾನ ಮಹಾಬಲಃ ।
ದ್ರೌಣೇಃ ಪಾಂಚಾಲದಾಯಾದಃ ಶಿತೈರ್ದಶಭಿರಾಶುಗೈಃ ॥೩॥

ಪಾಂಚಾಲದೇಶದ ರಾಜಕುಮಾರನಾದ, ಮಹಾಬಲನಾದ ಅವನು ಶೀಘ್ರಗಾಮಿಗಳಾದ ಹರಿತವಾದ ಹತ್ತು ಬಾಣಗಳಿಂದ ಅಶ್ವತ್ಥಾಮರ ಲೋಕವಿಖ್ಯಾತವಾದ ಅಶ್ವಗಳನ್ನು ಸಂಹರಿಸಿದನು.

ತತಃ ಶಲ್ಯರಥಂ ತೂರ್ಣಮಾಸ್ಥಾಯ ಹತವಾಹನಃ ।
ದ್ರೌಣಿಃ ಪಾಂಚಾಲದಾಯಾದಮಭ್ಯವರ್ಷದಥೇಷುಭಿಃ ॥೪॥

ತನ್ನ ರಥದ ವಾಹನಗಳು ನಾಶವನ್ನು ಹೊಂದುತ್ತಿರಲು ಅಶ್ವತ್ಥಾಮರು ಶೀಘ್ರವಾಗಿ ಶಲ್ಯನ ರಥವನ್ನು ಏರಿ ಧೃಷ್ಟದ್ಯುಮ್ನನ ಮೇಲೆ ಬಾಣಗಳ ಮಳೆಯನ್ನು ಕರೆದರು.

ಧೃಷ್ಟದ್ಯುಮ್ನಂ ತು ಸಂಸಕ್ತಂ ದ್ರೌಣಿನಾ ದೃಶ್ಯ ಭಾರತ ।
ಸೌಭದ್ರೋಽಭ್ಯಪತತ್ ತೂರ್ಣಂ ವಿಕಿರನ್ ನಿಶಿತಾನ್ ಶರಾನ್ ॥೫॥

ಎಲೈ ಭಾರತನೇ, ಧೃಷ್ಟದ್ಯುಮ್ನನು ಅಶ್ವತ್ಥಾಮರ ಜೊತೆಯಲ್ಲಿ ಸೆಣಸುತ್ತಿರುವುದನ್ನು ನೋಡಿ ಅಭಿಮನ್ಯುವು ಶೀಘ್ರವಾಗಿ ಹರಿತವಾದ ಬಾಣಗಳನ್ನು ಪ್ರಯೋಗಿಸುತ್ತಾ ಅಲ್ಲಿಗೆ ಧಾವಿಸಿದನು.

ಸ ಶಲ್ಯಂ ಪಂಚವಿಂಶತ್ಯಾ ಕೃಪಂ ಚ ನವಭಿಃ ಶರೈಃ ।
ಅಶ್ವತ್ಥಾಮಾನಮಷ್ಟಾಭಿರ್ವಿವ್ಯಾಧ ಪುರುಷರ್ಷಭ ॥೬॥

ಎಲೈ ಪುರುಷಶ್ರೇಷ್ಠನೇ, ಅವನು ಶಲ್ಯನನ್ನು ಇಪ್ಪತ್ತೈದು ಬಾಣಗಳಿಂದಲೂ, ಕೃಪರನ್ನು ಒಂಭತ್ತು ಬಾಣಗಳಿಂದಲೂ, ಅಶ್ವತ್ಥಾಮರನ್ನು ಎಂಟು ಬಾಣಗಳಿಂದಲೂ ಘಾಸಿಗೊಳಿಸಿದನು.

ಆರ್ಜುನಿಂ ತು ತತಸ್ತೂರ್ಣಂ ದ್ರೌಣಿರ್ವಿವ್ಯಾಧ ಪತ್ರಿಣಾ ।
ಶಲ್ಯೋ ದ್ವಾದಶಭಿಶ್ಚೈವ ಕೃಪಶ್ಚ ನಿಶಿತೈಸ್ತ್ರಿಭಿಃ ॥೭॥

ಆಗ ಅಶ್ವತ್ಥಾಮಾಚಾರ್ಯರು ಶೀಘ್ರವಾಗಿ ಅಭಿಮನ್ಯುವಿನ ಮೇಲೆ ಬಾಣಗಳ ಪ್ರಯೋಗವನ್ನು ಮಾಡಿದರು. ಶಲ್ಯನು ಹನ್ನೆರಡು ಬಾಣಗಳಿಂದಲೂ, ಕೃಪರು ಹರಿತವಾದ ಮೂರು ಬಾಣಗಳಿಂದಲೂ ಅವನನ್ನು ಘಾಸಿಗೊಳಿಸಿದರು.

ಲಕ್ಷಣಸ್ತವ ಪೌತ್ರಸ್ತು ತವ ಪೌತ್ರಮವಸ್ಥಿತಮ್ ।
ಅಭ್ಯವರ್ತತ ಸಂಹೃಷ್ಟಸ್ತತೋ ಯುದ್ಧಮವರ್ತತ ॥೮॥

ನಿನ್ನ ಪೌತ್ರನಾದ ಲಕ್ಷಣನು ಯುದ್ಧದಲ್ಲಿ ನಿಂತ ಇನ್ನೊಬ್ಬ ಪೌತ್ರನಾದ ಅಭಿಮನ್ಯುವಿನ ಕಡೆಗೆ ಸಂತೋಷದಿಂದ ಸಾಗಿದನು. ಅನಂತರ ಯುದ್ಧವು ನಡೆಯಿತು.

ದೌರ್ಯೋಧನಿಸ್ತು ಸಂಕ್ರುದ್ಧಃ ಸೌಭದ್ರಂ ನವಭಿಃ ಶರೈಃ ।
ವಿವ್ಯಾಧ ಸಮರೇ ರಾಜನ್ ತದದ್ಭುತಮಿವಾಭವತ್ ॥೯॥

ದುರ್ಯೋಧನನ ಪುತ್ರನಾದ ಲಕ್ಷಣನು ಕೋಪಗೊಂಡು ಅಭಿಮನ್ಯುವನ್ನು ಒಂಬತ್ತು ಬಾಣಗಳಿಂದ ಪೀಡಿಸಿದನು. ರಾಜನೇ, ರಣರಂಗದಲ್ಲಿ ಅದು ಅದ್ಭುತವಾದಂತೆ ಇದ್ದಿತು.

ಅಭಿಮನ್ಯುಸ್ತು ಸಂಕ್ರುದ್ಧೋ ಭ್ರಾತರಂ ಭರತರ್ಷಭ ।
ಶರೈಃ ಪಂಚಾಶತಾ ರಾಜನ್ ಕ್ಷಿಪ್ರಹಸ್ತೋಽಭ್ಯವಿಧ್ಯತ ॥೧೦॥

ಎಲೈ ರಾಜನೇ, ಭರತಶ್ರೇಷ್ಠನೇ, ಅಭಿಮನ್ಯುವಾದರೂ ಬಹಳ ಕೋಪಗೊಂಡು ಕ್ಷಿಪ್ರಹಸ್ತವುಳ್ಳ ಅವನು ತನ್ನ ಸಹೋದರನನ್ನು ಐವತ್ತು ಬಾಣಗಳಿಂದ ಘಾಸಿಗೊಳಿಸಿದನು.

ಲಕ್ಷ್ಮಣೋಽಪಿ ತತಸ್ತಸ್ಯ ಧನುಶ್ಚಿಚ್ಛೇದ ಪತ್ರಿಣಾ ।
ಮುಷ್ಟಿದೇಶೇ ಮಹಾರಾಜ ತತ ಉಚ್ಚುಕ್ರುಶುರ್ಜನಾಃ ॥೧೧॥

ಅನಂತರ ಲಕ್ಷ್ಮಣನೂ ಸಹ ಪತ್ರಿಯಿಂದ ಅವನ ಧನುಸ್ಸನ್ನು ಮುಷ್ಟಿದೇಶದಲ್ಲಿ ಕತ್ತರಿಸಿದನು. ಎಲೈ ಮಹಾರಾಜನೇ, ಆಗ ಜನರು ಹರ್ಷೋದ್ಗಾರವನ್ನು ಮಾಡಿದರು.

ತದ್ವಿಹಾಯ ಧನುಶ್ಛಿನ್ನಂ ಸೌಭದ್ರಃ ಪರವೀರಹಾ ।
ಅನ್ಯದಾದತ್ತವಾಂಶ್ಚಿತ್ರಂ ಕಾರ್ಮುಕಂ ವೇಗವತ್ತರಮ್ ॥೧೨॥

ವೀರಶತ್ರುಘಾತಕನಾದ ಅಭಿಮನ್ಯುವು ಕತ್ತರಿಸಲ್ಪಟ್ಟ ಧನುಸ್ಸನ್ನು ಬಿಟ್ಟು ಬಹಳ ವೇಗವುಳ್ಳ ಇನ್ನೊಂದು ವಿಚಿತ್ರವಾದ ಧನುಸ್ಸನ್ನು ತೆಗೆದುಕೊಂಡನು.

ತೌ ತತ್ರ ಸಮರೇ ಹೃಷ್ಟೌ ಕೃತಪ್ರತಿಕೃತೈಷಿಣೌ ।
ಅನ್ಯೋನ್ಯಂ ವಿಶಿಖೈಸ್ತೀಕ್ಷ್ಣೈರ್ಜಘ್ನತುಃ ಪುರುಷರ್ಷಭೌ ॥೧೩॥

ಪುರುಷಶ್ರೇಷ್ಠರಾದ ಅವರಿಬ್ಬರೂ ಸಂತೋಷದಿಂದ ಕೂಡಿದವರಾಗಿ ಒಬ್ಬರು ಮಾಡಿದುದಕ್ಕೆ ಇನ್ನೊಬ್ಬರು ಪ್ರತೀಕಾರವನ್ನು ಮಾಡುತ್ತಾ ರಣರಂಗದಲ್ಲಿ ತೀಕ್ಷ್ಣವಾದ ಬಾಣಗಳಿಂದ ಹೊಡೆದರು.

ತತೋ ದುರ್ಯೋಧನೋ ರಾಜಾ ದೃಷ್ಟ್ವಾ ಪುತ್ರಂ ಮಹಾರಥಮ್ ।
ಪೀಡಿತಂ ತವ ಪೌತ್ರೇಣ ಪ್ರಾಯಾತ್ ತತ್ರ ಜನೇಶ್ವರಃ ॥೧೪॥

ಅನಂತರ ಜನೇಶ್ವರನಾದ ದುರ್ಯೋಧನರಾಜನು ಮಹಾರಥನಾದ ತನ್ನ ಪುತ್ರನು ನಿನ್ನ ಪೌತ್ರನಿಂದ ಪೀಡಿಸಲ್ಪಡುವುದನ್ನು ನೋಡಿ ಅಲ್ಲಿಗೆ ಹೋದನು.

ಸಂನಿವೃತ್ತೇ ತವ ಸುತೇ ಸರ್ವ ಏವ ಜನಾಧಿಪಾಃ ।
ಆರ್ಜುನಿಂ ರಥವಂಶೇನ ಸಮಂತಾತ್ ಪರ್ಯವಾರಯನ್ ॥೧೫॥

ನಿನ್ನ ಪುತ್ರನು ಅಲ್ಲಿಗೆ ಬಂದಮೇಲೆ ಎಲ್ಲ ರಾಜರೂ ತಮ್ಮ ರಥಸಮೂಹಗಳಿಂದ ಅಭಿಮನ್ಯುವನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದರು.

ಸ ತೈಃ ಪರಿವೃತಃ ಶೂರೈಃ ಶೂರೋ ಯುಧಿ ಸುದುರ್ಜಯೈಃ ।
ನ ಸ್ಮ ವಿವ್ಯಥತೇ ರಾಜನ್ ಕೃಷ್ಣತುಲ್ಯಪರಾಕ್ರಮಃ ॥೧೬॥

ಎಲೈ ರಾಜನೇ, ಯುದ್ಧದಲ್ಲಿ ದುರ್ಜಯರಾದ ಅನೇಕ ಶೂರರಿಂದ ಸುತ್ತುವರಿಯಲ್ಪಟ್ಟರೂ ಸಹ ಕೃಷ್ಣನಿಗೆ ಸಮಾನವಾದ ಪರಾಕ್ರಮವುಳ್ಳ ಅಭಿಮನ್ಯುವು ವ್ಯಥೆ ಪಡಲಿಲ್ಲ.

ಸೌಭದ್ರಮಥ ಸಂಸಕ್ತಂ ತತ್ರ ದೃಷ್ಟ್ವಾ ಧನಂಜಯಃ ।
ಅಭಿದುದ್ರಾವ ಸಂಕ್ರುದ್ಧಸ್ತ್ರಾತುಕಾಮಃ ಸ್ವಮಾತ್ಮಜಮ್ ॥೧೭॥

ಅಭಿಮನ್ಯುವು ಆ ಮಹಾರಥರ ಎದುರಿನಲ್ಲಿರುವುದನ್ನು ನೋಡಿದ ಧನಂಜಯನು ತನ್ನ ಪುತ್ರನನ್ನು ರಕ್ಷಿಸುವ ಉದ್ದೇಶದಿಂದ ಕೋಪಗೊಂಡು ಅಲ್ಲಿಗೆ ಧಾವಿಸಿದನು.

ತತಃ ಸರಥನಾಗಾಶ್ವಾ ಭೀಷ್ಮದ್ರೋಣಪುರೋಗಮಾಃ ।
ಅಭ್ಯವರ್ತಂತ ರಾಜಾನಃ ಸಹಿತಾಃ ಸವ್ಯಸಾಚಿನಮ್ ॥೧೮॥

ಆಗ ಭೀಷ್ಮ-ದ್ರೋಣರೇ ಮೊದಲಾದ ಎಲ್ಲ ರಥನಾಗಾಶ್ವಗಳು ಮತ್ತು ರಾಜರು ಒಟ್ಟಾಗಿ ಅರ್ಜುನನ ಮೇಲೆ ಎರಗಿದರು.

ಉದ್ಧೂತಂ ಸಹಸಾ ಭೌಮಂ ನಾಗಾಶ್ವರಥಸಾದಿಭಿಃ ।
ದಿವಾಕರಪಥಂ ಪ್ರಾಪ್ಯ ರಜಸ್ತೀವ್ರಮದೃಶ್ಯತ ॥೧೯॥

ಗಜಾಶ್ವರಥಗಳಿಂದ ಮತ್ತು ಅಶ್ವಾರೋಹಿಗಳಿಂದ ಮೇಲೆದ್ದ ಭೂಮಿಯ ಧೂಳು ಸೂರ್ಯನ ಮಾರ್ಗವನ್ನು ತಲುಪಿ ತೀವ್ರವಾಗಿರುವುದು ಕಂಡುಬಂದಿತು.

ತಾನಿ ನಾಗಸಹಸ್ರಾಣಿ ಭೂಮಿಪಾಲಶತಾನಿ ಚ ।
ತಸ್ಯ ಬಾಣಪಥಂ ಪ್ರಾಪ್ಯ ನಾಭ್ಯವರ್ತಂತ ಸರ್ವಶಃ ॥೨೦॥

ಅರ್ಜುನನ ಬಾಣಪಥಕ್ಕೆ ಸಿಲುಕಿದ ಸಹಸ್ರ ಗಜಗಳಾಗಲೀ, ನೂರು ರಾಜರಾಗಲೀ ಯಾವ ಕಡೆಯಿಂದಲೂ ಅವನ ಬಳಿಗೆ ಮುಂದುವರಿಯಲು ಸಾಧ್ಯವಾಗಲಿಲ್ಲ.

ಪ್ರಣೇದುಃ ಸರ್ವಭೂತಾನಿ ಬಭೂವುಸ್ತಿಮಿರಾ ದಿಶಃ ।
ಕುರೂಣಾಮನಯಸ್ತೀವ್ರಃ ಸಮದೃಶ್ಯತ ದಾರುಣಃ ॥೨೧॥

ಎಲ್ಲ ಪ್ರಾಣಿಗಳೂ ಗಟ್ಟಿಯಾದ ನಾದವನ್ನು ಮಾಡಿದವು. ದಿಕ್ಕುಗಳು ಕತ್ತಲೆಯಿಂದ ತುಂಬಿದವು. ಕುರುಸೈನ್ಯದಲ್ಲಿ ದಾರುಣವಾದ ಮತ್ತು ತೀವ್ರವಾದ ಕ್ಷಯವು ಕಂಡುಬಂದಿತು.

ನಾಪ್ಯಂತರಿಕ್ಷಂ ನ ದಿಶೋ ನ ಭೂಮಿರ್ನ ಚ ಭಾಸ್ಕರಃ ।
ಪ್ರಜಜ್ಞೇ ಭರತಶ್ರೇಷ್ಠ ಶರಸಂಘೈಃ ಕಿರೀಟಿನಃ ॥೨೨॥

ಎಲೈ ಭರತಶ್ರೇಷ್ಠನೇ, ಅರ್ಜುನನ ಬಾಣಗಳ ಸಮೂಹದಿಂದಾಗಿ ಅಂತರಿಕ್ಷವಾಗಲೀ, ದಿಕ್ಕುಗಳಾಗಲೀ, ಭೂಮಿಯಾಗಲೀ, ಸೂರ್ಯನಾಗಲೀ ಕಾಣಲಿಲ್ಲ.

ಸಾದಿತಧ್ವಜನಾಗಾಸ್ತು ಹತಾಶ್ವಾ ರಥಿನೋ ಭೃಶಮ್ ।
ವಿಪ್ರದ್ರುತರಥಾಃ ಕೇಚಿದ್ ದೃಶ್ಯಂತೇ ರಥಯೂಥಪಾಃ ॥೨೩॥

ಗಜಗಳು ತಮ್ಮ ಧ್ವಜಗಳನ್ನು ಕಳೆದುಕೊಂಡವು. ರಥಿಕರು ತಮ್ಮ ಅಶ್ವಗಳನ್ನು ಕಳೆದುಕೊಂಡರು. ಇನ್ನು ಕೆಲವು ರಥಯೂಥಪರು ದಿಕ್ಕಾಪಾಲಾಗಿ ಓಡಿದರು.

ವಿರಥಾ ರಥಿನಶ್ಚಾನ್ಯೇ ಧಾವಮಾನಾಃ ಸಮಂತತಃ ।
ತತ್ರ ತತ್ರೈವ ದೃಶ್ಯಂತೇ ಸಾಯುಧಾಃ ಸಾಂಗದೈರ್ಭುಜೈಃ ॥೨೪॥

ರಥವನ್ನು ಕಳೆದುಕೊಂಡ ಇನ್ನು ಕೆಲವು ರಥಿಕರು ಎಲ್ಲ ಕಡೆಯಲ್ಲಿಯೂ ಓಡುತ್ತಾ ಅಲ್ಲಲ್ಲಿ ಆಯುಧಗಳಿಂದಲೂ, ಅಂಗದಗಳಿಂದಲೂ ಸಹಿತವಾದ ಅವರ ಭುಜಗಳು ಕಂಡುಬಂದವು.

ಹಯಾರೋಹಾ ಹಯಾಂಸ್ಯಕ್ತ್ವಾ ಗಜಾರೋಹಾಶ್ಚ ದಂತಿನಃ ।
ಅರ್ಜುನಸ್ಯ ಭಯಾದ್ ರಾಜನ್ ಸಮಂತಾದ್ ವಿಪ್ರದುದ್ರುವುಃ ॥೨೫॥

ಎಲೈ ರಾಜನೇ, ಅಶ್ವಾರೋಹಿಗಳು ಅಶ್ವವನ್ನು ಬಿಟ್ಟು ಗಜಾರೋಹಿಗಳು ಗಜಗಳನ್ನು ಬಿಟ್ಟು ಅರ್ಜುನನ ಭಯದಿಂದ ಎಲ್ಲ ಕಡೆಗಳಲ್ಲಿಯೂ ಓಡಿ ಹೋದರು.

ರಥೇಭ್ಯಶ್ಚ ಗಜೇಭ್ಯಶ್ಚ ಹಯೇಭ್ಯಶ್ಚ ನರಾಧಿಪಾಃ ।
ಪತಿತಾಃ ಪಾತ್ಯಮಾನಾಶ್ಚ ದೃಶ್ಯಂತೇऽರ್ಜುನತಾಡಿತಾಃ ॥೨೬॥

ಅರ್ಜುನನ ಬಾಣಗಳಿಂದ ಪೀಡಿತರಾಗಿ ರಥಗಳಿಂದಲೂ, ಗಜಗಳಿಂದಲೂ, ಅಶ್ವಗಳಿಂದಲೂ ಕೆಳಗೆ ಬಿದ್ದಿರುವ ಮತ್ತು ಕೆಳಗೆ ಬೀಳುತ್ತಿರುವ ರಾಜರು ಕಂಡುಬಂದರು.

ಸಗದಾನುದ್ಯತಾನ್ ಬಾಹೂನ್ ಸಖಡ್ಗಾಂಶ್ಚ ವಿಶಾಂಪತೇ ।
ಸಪ್ರಾಸಾಂಶ್ಚ ಸತೂಣೀರಾನ್ ಸಶರಾನ್ ಸಶರಾಸನಾನ್ ॥೨೭॥

ಸಾಂಕುಶಾನ್ ಸಪತಾಕಾಂಶ್ಚ ತತ್ರತತ್ರಾರ್ಜುನೋ ನೃಣಾಮ್ ।
ನಿಚಕರ್ತ ಶರೈರುಗ್ರೈ ರೌದ್ರಂ ಬಿಭ್ರದ್ ವಪುಸ್ತದಾ ॥೨೮॥

ಅರ್ಜುನನು ಭಯಂಕರವಾದ ರೂಪವನ್ನು ಧರಿಸಿ ಶತ್ರುಯೋಧರ ಗದೆಯನ್ನು ಎತ್ತಿದ ಬಾಹುಗಳನ್ನೂ, ಖಡ್ಗ ಸಹಿತವಾದ ಬಾಹುಗಳನ್ನೂ ಪ್ರಾಸಗಳಿಂದ, ತೂಣೀರಗಳಿಂದ, ಬಾಣಗಳಿಂದ, ಬಿಲ್ಲುಗಳಿಂದ, ಅಂಕುಶಗಳಿಂದ ಮತ್ತು ಪತಾಕೆಗಳಿಂದ ಸಹಿತವಾದ ಬಾಹುಗಳನ್ನೂ ತನ್ನ ಉಗ್ರವಾದ ಬಾಣಗಳಿಂದ ಅಲ್ಲಲ್ಲಿ ಕತ್ತರಿಸಿದನು.

ಪರಿಘಾಣಾಂ ಪ್ರವೃದ್ಧಾನಾಂ ಮುದ್ಗರಾಣಾಂ ಚ ಮಾರಿಷ ।
ಪ್ರಾಸಾನಾಂ ಭಿಂಡಿಪಾಲಾನಾಂ ನಿಸ್ತ್ರಿಂಶಾನಾಂ ಚ ಸಂಯುಗೇ ॥೨೯॥

ಪರಶ್ವಧಾನಾಂ ತೀಕ್ಷ್ಣಾನಾಂ ತೋಮರಾಣಾಂ ಚ ಭಾರತ ।
ವರ್ಮಣಾಂ ಚಾಪವಿದ್ಧಾನಾಂ ಕವಚಾನಾಂ ಚ ಭೂತಳೇ ॥೩೦॥

ಧ್ವಜಾನಾಂ ಚರ್ಮಣಾಂ ಚೈವ ವ್ಯಜನಾನಾಂ ಚ ಸರ್ವಶಃ ।
ಛತ್ರಾಣಾಂ ಹೇಮದಂಡಾನಾಂ ಚಾಮರಾಣಾಂ ಚ ಭಾರತ ॥೩೧॥

ಪ್ರತೋದಾನಾಂ ಕಶಾನಾಂ ಚ ಯೋಕ್ತ್ರಾಣಾಂ ಚೈವ ಮಾರಿಷ ।
ರಾಶಯಶ್ಚಾತ್ರ ದೃಶ್ಯಂತೇ ವಿನಿಕೀರ್ಣಾ ರಣಕ್ಷಿತೌ ॥೩೨॥

ಎಲೈ ಭಾರತನೇ, ಪೂಜ್ಯನೇ, ಪರಿಘಗಳ, ಮುದ್ಗರಗಳ, ಪ್ರಾಸಗಳ, ಭಿಂಡಿಪಾಲಗಳ, ಖಡ್ಗಗಳ, ತೀಕ್ಷ್ಣವಾದ ಪರಶ್ವಧಗಳ, ತೋಮರಗಳ, ತ್ಯಜಿಸಿದ

ಕವಚಗಳ, ಧ್ವಜಗಳ, ಗುರಾಣಿಗಳ, ವ್ಯಜನಗಳ, ಹೇಮದಂಡಗಳುಳ್ಳ ಛತ್ರಗಳ, ಚಾಮರಗಳ, ಚಾವಟಿಗಳ, ಅಂಕುಶಗಳ, ಕಡಗೂಟಗಳ ರಾಶಿಗಳು ರಣರಂಗದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು ಕಂಡುಬಂದಿತು.

ನಾಸೀತ್ ತತ್ರ ಪುಮಾನ್ ಕಶ್ಚಿತ್ ತವ ಸೈನ್ಯಸ್ಯ ಭಾರತ ।
ಯೋಽರ್ಜುನಂ ಸಮರೇ ಶೂರಂ ಪ್ರತ್ಯುದ್ಯಾಯಾತ್ ಕಥಂಚನ ॥೩೩॥

ಎಲೈ ಭಾರತನೇ, ನಿನ್ನ ಸೈನ್ಯದಲ್ಲಿ ಶೂರನಾದ ಅರ್ಜುನನನ್ನು ಯುದ್ಧದಲ್ಲಿ ಎದುರಿಸಬಹುದಾದ ಒಬ್ಬ ಪುರುಷನೂ ಇರಲಿಲ್ಲ.

ಯೋ ಯೋ ಹಿ ಸಮರೇ ಪಾರ್ಥಂ ಪ್ರತ್ಯುದ್ಯಾತಿ ವಿಶಾಂ ಪತೇ ।
ಸಸ ವೈ ವಿಶಿಖೈಸ್ತೀಕ್ಷ್ಣೈಃ ಪರಲೋಕಾಯ ನೀಯತೇ ॥೩೪॥

ಎಲೈ ರಾಜನೇ, ಯಾವ ಯಾವನು ಅರ್ಜುನನನ್ನು ಎದುರಿಸಿ ಅವನ ಮುಂದೆ ಹೋದನೋ, ಅವನು ಅರ್ಜುನನಿಂದ ತೀಕ್ಷ್ಣವಾದ ಬಾಣಗಳಿಂದ ಪರಲೋಕಕ್ಕೆ ಕಳುಸಲ್ಪಟ್ಟನು.

ತೇಷು ವಿದ್ರವಮಾಣೇಷು ತವ ಯೋಧೇಷು ಸರ್ವಶಃ ।
ಅರ್ಜುನೋ ವಾಸುದೇವಶ್ಚ ದಧ್ಮತುರ್ವಾರಿಜೋತ್ತಮೌ ॥೩೫॥

ನಿನ್ನ ಯೋಧರು ಎಲ್ಲ ಕಡೆಗಳಲ್ಲಿಯೂ ಓಡಿಹೋಗುತ್ತಿರಲು ಅರ್ಜುನನೂ ಮತ್ತು ಕೃಷ್ಣನೂ ತಮ್ಮ ಶ್ರೇಷ್ಠವಾದ ಶಂಖಗಳನ್ನು ಊದಿದರು.

ತತ್ ಪ್ರಭಗ್ನಂ ಬಲಂ ದೃಷ್ಟ್ವಾ ಪಿತಾ ದೇವವ್ರತಸ್ತವ ।
ಅಬ್ರವೀತ್ ಸಮರೇ ಶೂರಂ ಭಾರದ್ವಾಜಂ ಸ್ಥಯನ್ನಿವ ॥೩೬॥

ತನ್ನ ಸೈನ್ಯವು ಭಗ್ನವಾದುದನ್ನು ನೋಡಿ ನಿನ್ನ ತಂದೆಯಾದ ದೇವವ್ರತನು ರಣರಂಗದಲ್ಲಿ ದ್ರೋಣರನ್ನು ಕುರಿತು ನಗುವವನಂತೆ ಮಾತನಾಡಿದನು.

ಏಷ ಪಾಂಡುಸುತೋ ವೀರಃ ಕೃಷ್ಣೇನ ಸಹಿತೋ ಬಲೀ ।
ತಥಾ ಕರೋತಿ ಸೈನ್ಯಾನಿ ಯಥಾ ಕುರ್ಯಾದ್ ಧನಂಜಯಃ ॥೩೭॥

ರಥೇಭ್ಯಶ್ಚ ಗಜೇಭ್ಯಶ್ಚ ಹಯೇಭ್ಯಶ್ಚ ನರಾಧಿಪಾಃ ।
ಪತಿತಾಃ ಪಾತ್ಯಮಾನಾಶ್ಚ ದೃಶ್ಯಂತೇ ಽರ್ಜುನತಾಡಿತಾಃ ॥೨೬॥

ಅರ್ಜುನನ ಬಾಣಗಳಿಂದ ಪೀಡಿತರಾಗಿ ರಥಗಳಿಂದಲೂ, ಗಜಗಳಿಂದಲೂ, ಅಶ್ವಗಳಿಂದಲೂ ಕೆಳಗೆ ಬಿದ್ದಿರುವ ಮತ್ತು ಕೆಳಗೆ ಬೀಳುತ್ತಿರುವ ರಾಜರು ಕಂಡುಬಂದರು.

ಸಗದಾನುದ್ಯತಾನ್ ಬಾಹೂನ್ ಸಖಡ್ಗಾಂಶ್ಚ ವಿಶಾಂಪತೇ ।
ಸಪ್ರಾಸಾಂಶ್ಚ ಸತೂಣೀರಾನ್ ಸಶರಾನ್ ಸಶರಾಸನಾನ್ ॥೨೭॥

ಸಾಂಕುಶಾನ್ ಸಪತಾಕಾಂಶ್ಚ ತತ್ರತತ್ರಾರ್ಜುನೋ ನೃಣಾಮ್ ।
ನಿಚಕರ್ತ ಶರೈರುಗ್ರೈ ರೌದ್ರಂ ಬಿಭ್ರದ್ ವಪುಸ್ತದಾ ॥೨೮॥

ಅರ್ಜುನನು ಭಯಂಕರವಾದ ರೂಪವನ್ನು ಧರಿಸಿ ಶತ್ರುಯೋಧರ ಗದೆಯನ್ನು ಎತ್ತಿದ ಬಾಹುಗಳನ್ನೂ, ಖಡ್ಗ ಸಹಿತವಾದ ಬಾಹುಗಳನ್ನೂ ಪ್ರಾಸಗಳಿಂದ, ತೂಣೀರಗಳಿಂದ, ಬಾಣಗಳಿಂದ, ಬಿಲ್ಲುಗಳಿಂದ, ಅಂಕುಶಗಳಿಂದ ಮತ್ತು ಪತಾಕೆಗಳಿಂದ ಸಹಿತವಾದ ಬಾಹುಗಳನ್ನೂ ತನ್ನ ಉಗ್ರವಾದ ಬಾಣಗಳಿಂದ ಅಲ್ಲಲ್ಲಿ ಕತ್ತರಿಸಿದನು.

ಪರಿಘಾಣಾಂ ಪ್ರವೃದ್ಧಾನಾಂ ಮುದ್ಗರಾಣಾಂ ಚ ಮಾರಿಷ ।
ಪ್ರಾಸಾನಾಂ ಭಿಂಡಿಪಾಲಾನಾಂ ನಿಸ್ತ್ರಿಂಶಾನಾಂ ಚ ಸಂಯುಗೇ ॥೨೯॥

ಪರಶ್ವಧಾನಾಂ ತೀಕ್ಷ್ಣಾನಾಂ ತೋಮರಾಣಾಂ ಚ ಭಾರತ ।
ವರ್ಮಣಾಂ ಚಾಪವಿದ್ಧಾನಾಂ ಕವಚಾನಾಂ ಚ ಭೂತಳೇ ॥೩೦॥

ಧ್ವಜಾನಾಂ ಚರ್ಮಣಾಂ ಚೈವ ವ್ಯಜನಾನಾಂ ಚ ಸರ್ವಶಃ ।
ಛತ್ರಾಣಾಂ ಹೇಮದಂಡಾನಾಂ ಚಾಮರಾಣಾಂ ಚ ಭಾರತ ॥೩೧॥

ಪ್ರತೋದಾನಾಂ ಕಶಾನಾಂ ಚ ಯೋಕ್ತ್ರಾಣಾಂ ಚೈವ ಮಾರಿಷ ।
ರಾಶಯಶ್ಚಾತ್ರ ದೃಶ್ಯಂತೇ ವಿನಿಕೀರ್ಣಾ ರಣಕ್ಷಿತೌ ॥೩೨॥

ಎಲೈ ಭಾರತನೇ, ಪೂಜ್ಯನೇ, ಪರಿಘಗಳ, ಮುದ್ಗರಗಳ, ಪ್ರಾಸಗಳ, ಭಿಂಡಿಪಾಲಗಳ, ಖಡ್ಗಗಳ, ತೀಕ್ಷ್ಣವಾದ ಪರಶ್ವಧಗಳ, ತೋಮರಗಳ, ತ್ಯಜಿಸಿದ

ಕವಚಗಳ, ಧ್ವಜಗಳ, ಗುರಾಣಿಗಳ, ವ್ಯಜನಗಳ, ಹೇಮದಂಡಗಳುಳ್ಳ ಛತ್ರಗಳ, ಚಾಮರಗಳ, ಚಾವಟಿಗಳ, ಅಂಕುಶಗಳ, ಕಡಗೂಟಗಳ ರಾಶಿಗಳು ರಣರಂಗದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು ಕಂಡುಬಂದಿತು.

ನಾಸೀತ್ ತತ್ರ ಪುಮಾನ್ ಕಶ್ಚಿತ್ ತವ ಸೈನ್ಯಸ್ಯ ಭಾರತ ।
ಯೋಽರ್ಜುನಂ ಸಮರೇ ಶೂರಂ ಪ್ರತ್ಯುದ್ಯಾಯಾತ್ ಕಥಂಚನ ॥೩೩॥

ಎಲೈ ಭಾರತನೇ, ನಿನ್ನ ಸೈನ್ಯದಲ್ಲಿ ಶೂರನಾದ ಅರ್ಜುನನನ್ನು ಯುದ್ಧದಲ್ಲಿ ಎದುರಿಸಬಹುದಾದ ಒಬ್ಬ ಪುರುಷನೂ ಇರಲಿಲ್ಲ.

ಯೋ ಯೋ ಹಿ ಸಮರೇ ಪಾರ್ಥಂ ಪ್ರತ್ಯುದ್ಯಾತಿ ವಿಶಾಂ ಪತೇ ।
ಸಸ ವೈ ವಿಶಿಖೈಸ್ತೀಕ್ಷ್ಣೈಃ ಪರಲೋಕಾಯ ನೀಯತೇ ॥೩೪॥

ಎಲೈ ರಾಜನೇ, ಯಾವ ಯಾವನು ಅರ್ಜುನನನ್ನು ಎದುರಿಸಿ ಅವನ ಮುಂದೆ ಹೋದನೋ, ಅವನು ಅರ್ಜುನನಿಂದ ತೀಕ್ಷ್ಣವಾದ ಬಾಣಗಳಿಂದ ಪರಲೋಕಕ್ಕೆ ಕಳುಸಲ್ಪಟ್ಟನು.

ತೇಷು ವಿದ್ರವಮಾಣೇಷು ತವ ಯೋಧೇಷು ಸರ್ವಶಃ ।
ಅರ್ಜುನೋ ವಾಸುದೇವಶ್ಚ ದಧ್ಮತುರ್ವಾರಿಜೋತ್ತಮೌ ॥೩೫॥

ನಿನ್ನ ಯೋಧರು ಎಲ್ಲ ಕಡೆಗಳಲ್ಲಿಯೂ ಓಡಿಹೋಗುತ್ತಿರಲು ಅರ್ಜುನನೂ ಮತ್ತು ಕೃಷ್ಣನೂ ತಮ್ಮ ಶ್ರೇಷ್ಠವಾದ ಶಂಖಗಳನ್ನು ಊದಿದರು.

ತತ್ ಪ್ರಭಗ್ನಂ ಬಲಂ ದೃಷ್ಟ್ವಾ ಪಿತಾ ದೇವವ್ರತಸ್ತವ ।
ಅಬ್ರವೀತ್ ಸಮರೇ ಶೂರಂ ಭಾರದ್ವಾಜಂ ಸ್ಥಯನ್ನಿವ ॥೩೬॥

ತನ್ನ ಸೈನ್ಯವು ಭಗ್ನವಾದುದನ್ನು ನೋಡಿ ನಿನ್ನ ತಂದೆಯಾದ ದೇವವ್ರತನು ರಣರಂಗದಲ್ಲಿ ದ್ರೋಣರನ್ನು ಕುರಿತು ನಗುವವನಂತೆ ಮಾತನಾಡಿದನು.

ಏಷ ಪಾಂಡುಸುತೋ ವೀರಃ ಕೃಷ್ಣೇನ ಸಹಿತೋ ಬಲೀ ।
ತಥಾ ಕರೋತಿ ಸೈನ್ಯಾನಿ ಯಥಾ ಕುರ್ಯಾದ್ ಧನಂಜಯಃ ॥೩೭॥

ಕೃಷ್ಣನಿಂದ ಸಹಿತನಾದ, ಬಲಿಷ್ಠನಾದ, ಪಾಂಡುಸುತನಾದ, ವೀರನಾದ ಅರ್ಜುನನು ಅಗ್ನಿಯಂತೆ ನಮ್ಮ ಸೈನ್ಯವನ್ನು ನಾಶಗೊಳಿಸುತ್ತಿದ್ದಾನೆ (ಸುಡುತ್ತಿದ್ದಾನೆ).

ನ ಹ್ಯೇಷ ಸಮರೇ ಶಕ್ಯೋ ಜೇತುಮದ್ಯ ಕಥಂಚನ ।
ಯಥಾಸ್ಯ ದೃಶ್ಯತೇ ರೂಪಂ ಕಾಲಾಂತಕಯಮೋಪಮಮ್ ॥೩೮॥

ಕಾಲಾಂತಕನಾದ ಯಮನಂತಿರುವ ಅವನ ಈ ರೂಪವನ್ನು ನೋಡಿದರೆ ಈ ದಿನ ಯಾರೂ ಅವನನ್ನು ಜಯಿಸಲು ಸಾಧ್ಯವಿಲ್ಲ.

ನ ನಿವರ್ತಯಿತುಂ ಚಾಪಿ ಶಕ್ಯೇಯಂ ಮಹತೀ ಚಮೂಃ ।
ಅನ್ಯೋನ್ಯಪ್ರೇಕ್ಷಯಾ ಹ್ಯಸ್ಯ ದ್ರವತೀಯಂ ವರೂಥಿನೀ ॥೩೯॥

ಈ ದೊಡ್ಡ ಸೈನ್ಯವನ್ನು ಹಿಂದಿರುಗಿಸಲೂ ಸಾಧ್ಯವಿಲ್ಲ. ಈ ಸೈನ್ಯವು ಪರಸ್ಪರವಾಗಿ ನೋಡುತ್ತಾ ಮುಂದೆ ಸಾಗುತ್ತಿದೆ.

ಏಷ ಚಾಸ್ತಂ ಗಿರಿಶ್ರೇಷ್ಠಂ ಭಾನುಮಾನ್ ಪ್ರತಿಪದ್ಯತೇ ।
ವಪೂಂಷಿ ಸರ್ವಲೋಕಸ್ಯ ಸಂಹರನ್ನಿವ ಸರ್ವಥಾ ॥೪೦॥

ಸೂರ್ಯನು ಎಲ್ಲ ಲೋಕಗಳ ವ್ಯಾಪಾರವನ್ನು ಸಂಹಾರ ಮಾಡುತ್ತಾ ಅಸ್ತಗಿರಿಯನ್ನು ತಲುಪಿದ್ದಾನೆ.

ತತ್ರಾವಹಾರಂ ಸಂಪ್ರಾಪ್ತಂ ಮನ್ಯೇಽಹಂ ಪುರುಷರ್ಷಭ ।
ಶ್ರಾಂತಾ ಭೀತಾಶ್ಚ ಸೋ ಯೋಧಾ ನ ಯೋತ್ಸ್ಯಂತಿ ಕಥಂಚನ ॥೪೧॥

ಎಲೈ ಪುರುಷಶ್ರೇಷ್ಠರೇ, ಸೈನ್ಯವನ್ನು ಹಿಂದೆ ತೆಗೆದುಕೊಳ್ಳುವುದು ಉಚಿತವೆಂದು ನಾನು ಭಾವಿಸುತ್ತೇನೆ. ಹೆದರಿ ಬಳಲಿದ ನಮ್ಮ ಯೋಧರು ಯಾವ ಕಾರಣದಿಂದಲೂ ಯುದ್ಧವನ್ನು ಮಾಡುವುದಿಲ್ಲ.

ಏವಮುಕ್ತ್ವಾ ತತೋ ಭೀಷ್ಮೋ ದ್ರೋಣಮಾಚಾರ್ಯಸತ್ತಮಮ್ ।
ಅವಹಾರಮಥೋ ಚಕ್ರೇ ತಾವಕಾನಾಂ ಮಹಾರಥಃ ॥೪೨॥

ಆಚಾರ್ಯಶ್ರೇಷ್ಠರಾದ ದ್ರೋಣರನ್ನು ಕುರಿತು ಹೀಗೆ ಹೇಳಿ ಮಹಾರಥರಾದ ಭೀಷ್ಮರು ನಿನ್ನ ಸೈನ್ಯದ ಅವಹಾರವನ್ನು ಮಾಡಿದರು.

ತತೋಽವಹಾರಃ ಸೈನ್ಯಾನಾಂ ತವ ತೇಷಾಂ ಚ ಭಾರತ ।
ಅಸ್ತಂ ಗಚ್ಛತಿ ಸೂರ್ಯೇಽಭೂತ್ ಸಂಧ್ಯಾಕಾಲೇ ಚ ವರ್ತತಿ ॥೪೩॥

ಎಲೈ ಭಾರತನೇ, ಸೂರ್ಯಾಸ್ತನಾಗಿ ಸಂಧ್ಯಾಕಾಲವು ಉಂಟಾಗುತ್ತಿರಲು ನಿನ್ನ ಮತ್ತು ಅವರ ಸೈನ್ಯಗಳು ಅವಹಾರವನ್ನು ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಏಕಪಂಚಾಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

ಭೀಷ್ಮರ ಸೈನಾಪತ್ಯದಲ್ಲಿ ಎರಡನೆಯ ದಿನದ ಯುದ್ಧವು ಮುಗಿಯಿತು.

★ ★ ★ ★ ★

ಐವತ್ತೆರಡನೆಯ ಅಧ್ಯಾಯ

ಮೂರನೆಯ ದಿವಸ ಯುದ್ಧದ ಪ್ರಾರಂಭ. ಭೀಷ್ಮರಿಂದ ಗರುಡವ್ಯೂಹದ ಮತ್ತು ಅರ್ಜುನನಿಂದ ಅರ್ಧಚಂದ್ರವ್ಯೂಹದ ರಚನೆ.

ಸಂಜಯಃ

ಪ್ರಭಾತಾಯಾಂ ತು ಶರ್ವರ್ಯಾಂ ಭೀಷ್ಮಃ ಶಾಂತನವಸ್ತತಃ ।
ಅನೀಕಾನ್ಯನುಸಂಯಾನೇ ವ್ಯಾದಿದೇಶಾಥ ಭಾರತ ॥೧॥

ಸಂಜಯ– ಎಲೈ ಭಾರತನೇ, ರಾತ್ರಿಯು ಕಳೆದು ಪ್ರಾತಃಕಾಲವಾಗುತ್ತಿರಲು ಶಂತನು ಪುತ್ರರಾದ ಭೀಷ್ಮರು ತಮ್ಮ ಸೈನ್ಯವನ್ನು ಯುದ್ಧರಂಗಕ್ಕೆ ಹೊರಡಲು ಆದೇಶಿಸಿದರು.

ಗಾರುಡಂ ಚ ಮಹಾವ್ಯೂಹಂ ಚಕ್ರೇ ಶಾಂತನವಸ್ತದಾ ।
ಪುತ್ರಾಣಾಂ ತೇ ಜಯಾಕಾಂಕ್ಷೀ ಭೀಷ್ಮಃ ಕುರುಪಿತಾಮಹಃ ॥೨॥

ನಿನ್ನ ಪುತ್ರನ ಜಯಾಕಾಂಕ್ಷಿಗಳಾದ ಕುರುಕುಲಪಿತಾಮಹರಾದ ಶಂತನು ಪುತ್ರರಾದ ಭೀಷ್ಮರು ಆಗ ಗಾರುಡ ವ್ಯೂಹವೆಂಬ ದೊಡ್ಡ ವ್ಯೂಹವನ್ನು ರಚಿಸಿದರು.

ಗರುಡಸ್ಯ ಸ್ವಯಂ ತುಂಡೇ ಪಿತಾ ದೇವವ್ರತಸ್ತವ ।
ಚಕ್ಷುಷೀ ಚ ಭರದ್ವಾಜಃ ಕೃತವರ್ಮಾ ಚ ಸಾತ್ವತಃ ॥೩॥

ಗರುಡನ ಕೊಕ್ಕಿನ ಸ್ಥಾನದಲ್ಲಿ ನಿಮ್ಮ ತಂದೆಯಾದ ದೇವವ್ರತರು ಸ್ವತಃ ಇದ್ದರು. ಕಣ್ಣುಗಳ ಸ್ಥಾನದಲ್ಲಿ ದ್ರೋಣರು ಮತ್ತು ಸಾತ್ವತನಾದ ಕೃತವರ್ಮರು ಇದ್ದರು.

ಅಶ್ವತ್ಥಾಮಾ ಕೃಪಶ್ಚೈವ ಶೀರ್ಷಮಾಸ್ತಾಂ ಯಶಸ್ವಿನೌ ।
ತ್ರಿಗರ್ತೈರ್ಮತ್ಸ್ಯಕೈಕೇಯೈರ್ವಾಟಧಾನೈಶ್ಚ ಸಂಯುತೌ ॥೪॥

ಭೂರಿಶ್ರವಾಃ ಶಲಃ ಶಲ್ಯೋ ಭಗದತ್ತಶ್ಚ ಮಾರಿಷ ।
ಮದ್ರಕಾಃ ಸಿಂಧುಸೌವೀರಾಸ್ತಥಾ ಪಂಚನದಾಶ್ಚ ಯೇ ॥೫॥

ಜಯದ್ರಥೇನ ಸಹಿತಾ ಗ್ರೀವಾಯಾಂ ಸನ್ನಿವೇಶಿತಾಃ ।
ಪೃಷ್ಠೇ ದುರ್ಯೋಧನೋ ರಾಜಾ ಸೋದರೈಃ ಸಾನುಗೈರ್ವೃತಃ ॥೬॥

ಕೀರ್ತಿಶಾಲಿಗಳಾದ ಅಶ್ವತ್ಥಾಮ ಮತ್ತು ಕೃಪರು ತ್ರಿಗರ್ತರಿಂದಲೂ, ಮತ್ಸ್ಯ-ಕೈಕೇಯ ವಾಟಧಾನರಿಂದಲೂ ಕೂಡಿಕೊಂಡು ಶಿರಸ್ಸಿನ ಸ್ಥಾನದಲ್ಲಿದ್ದರು. ಜಯದ್ರಥನಿಂದ ಸಹಿತರಾದ ಭೂರಿಶ್ರವ, ಶಲ, ಶಲ್ಯ, ಭಗದತ್ತ, ಮದ್ರಕರು, ಸಿಂಧು-ಸೌವೀರರು ಮತ್ತು ಪಂಚನದರು ಕತ್ತಿನ ಸ್ಥಾನದಲ್ಲಿ ಇದ್ದರು. ಎಲೈ ಪೂಜ್ಯನೇ, ದುರ್ಯೋಧನ ರಾಜನು ತನ್ನ ತಮ್ಮಂದಿರಿಂದಲೂ ಮತ್ತು ಅನುಯಾಯಿಗಳಿಂದಲೂ ಸಹಿತನಾಗಿ ಹಿಂಭಾಗದಲ್ಲಿದ್ದನು.

ವಿಂದಾನುವಿಂದಾವಾವಂತ್ಯೌ ಕಾಂಬೋಜಶ್ಚ ಶಕೈಃ ಸಹ ।
ಪುಚ್ಛಮಾಸನ್ ಮಹಾರಾಜ ಶೂರಸೇನಾಶ್ಚ ಸರ್ವಶಃ ॥೭॥

ಅವಂತಿದೇಶದ ವಿಂದಾನುವಿಂದರು, ಶಕರಿಂದ ಕೂಡಿದ ಕಾಂಬೋಜ ರಾಜ ಮತ್ತು ಎಲ್ಲಾ ಶೂರಸೇನರು ಎಲೈ ಮಹಾರಾಜನೇ, ಪಕ್ಷಿಯ ಪುಚ್ಛ ಸ್ಥಾನದಲ್ಲಿದ್ದರು.

ಮಾಗಧಾಶ್ಚ ಕಳಿಂಗಾಶ್ಚ ದಾಶೇರಕಗಣೈಃ ಸಹ ।
ದಕ್ಷಿಣಂ ಪಕ್ಷಮಾಸಾದ್ಯ ಸ್ಥಿತಾ ವ್ಯೂಹಸ್ಯ ದಂಶಿತಾಃ ॥೮॥

ದಾಶೇಯರ ಸಮೂಹದಿಂದ ಸಹಿತರಾದ ಕಳಿಂಗರು ಮತ್ತು ಮಾಗಧರು, ಶಸ್ತ್ರ-ಕವಚ ಧಾರಿಗಳಾಗಿ ಪಕ್ಷಿಯ ಬಲಭಾಗದ ರೆಕ್ಕೆಯ ವ್ಯೂಹದಲ್ಲಿ ನಿಂತರು.

ಕಾನನಾಶ್ಚ ಏಕುಂಜಾಶ್ಚ ಮುಕ್ತಾಃ ಪುಂಡ್ರಾವಿಷೈಃ ಸಹಾ ।
ಬೃಹದ್ಬಲೇನ ಸಹಿತಾ ವಾಮಂ ಪಕ್ಷಮುಪಾಶ್ರಿತಾಃ ॥೯॥

ಬೃಹದ್ಬಲನಿಂದ ಸಹಿತನಾದ ಕಾನನರು, ಏಕುಂಜರು, ಮುಕ್ತರು, ಪುಂಡ್ರರು ಮತ್ತು ವಿಷರು ವ್ಯೂಹದ ಎಡಭಾಗವನ್ನು ಆಶ್ರಯಿಸಿದರು.

ವ್ಯೂಢಂ ದೃಷ್ಟ್ವಾ ತು ತತ್ಸೈನ್ಯಂ ಸವ್ಯಸಾಚೀ ಪರಂತಪಃ ।
ಧೃಷ್ಟದ್ಯುಮ್ನೇನ ಸಹಿತಃ ಪ್ರತ್ಯವ್ಯೂಹತ ಸಂಯುಗೇ ।
ಅರ್ಧಚಂದ್ರೇಣ ವ್ಯೂಹೇನ ವ್ಯೂಹಂ ತಮತಿದಾರುಣಮ್ ॥೧೦॥

ಪರಂತಪನಾದ ಅರ್ಜುನನು ಭೀಷ್ಮರು ರಚಿಸಿದ ಆ ಸೈನ್ಯದ ವ್ಯೂಹವನ್ನು ನೋಡಿ ಧೃಷ್ಟದ್ಯುಮ್ನನಿಂದ ಸಹಿತನಾಗಿ ರಣರಂಗದಲ್ಲಿ ಬಹಳ ದಾರುಣವಾದ ಅರ್ಧಚಂದ್ರ ವ್ಯೂಹವನ್ನು ಪ್ರತಿವ್ಯೂಹವಾಗಿ ರಚಿಸಿದನು.

ದಕ್ಷಿಣಂ ಶೃಂಗಮಾಸ್ಥಾಯ ಭೀಮಸೇನೋ ವ್ಯರೋಚತ ।
ನಾನಾಶಸ್ತ್ರೌಘಸಂಪನ್ನೈರ್ನಾನಾದೇಶ್ಯೈರ್ನರಾಧಿಪೈರ್ವೃತಃ ॥೧೧॥

ನಾನಾ ಶಸ್ತ್ರಗಳಿಂದ ಸಂಪನ್ನರಾದ, ನಾನಾ ದೇಶಗಳ ರಾಜರಿಂದ ಪರಿವೃತನಾದ ಭೀಮಸೇನನು ಆ ವ್ಯೂಹದ ಬಲಭಾಗದ ಶೃಂಗವನ್ನು ಆಶ್ರಯಿಸಿ ಶೋಭಿಸಿದನು.

ತದನ್ವೇವ ವಿರಾಟಶ್ಚ ದ್ರುಪದಶ್ಚ ಮಹಾರಥಃ ।
ತದನಂತರಮೇವಾಸೀನ್ನೀಲೋ ಲೀಲಾಯುಧೈಃ ಸಹ ॥೧೨॥

ಅವನ ನಂತರದಲ್ಲಿಯೇ ಮಹಾರಥರಾದ ವಿರಾಟ ಮತ್ತು ದ್ರುಪದರು, ಅವರ ನಂತರ ಲೀಲಾಯುಧರಿಂದ ಕೂಡಿದ ನೀಲರಾಜನು ಇದ್ದರು.

ನೀಲಾದನಂತರಂ ಚೈವ ಧೃಷ್ಟಕೇತುರ್ಮಹಾರಥಃ ।
ಚೇದಿಕಾಶಿಕರೂಷೈಶ್ಚ ಪೌರವೈಶ್ಚಾಭಿಸಂವೃತಃ ॥೧೩॥

ನೀಲನ ಅನಂತರದಲ್ಲಿ ಮಹಾರಥನಾದ ಧೃಷ್ಟಕೇತುವು, ಚೇದಿಗಳು, ಕಾಶಿ-ಕರೂಷಿಕರಿಂದ ಮತ್ತು ಪೌರವರಿಂದ ಸುತ್ತುವರಿಯಲ್ಪಟ್ಟು ನಿಂತನು.

ಧೃಷ್ಟದ್ಯುಮ್ನಃ ಶಿಖಂಡೀ ಚ ಪಾಂಚಾಲಾಶ್ಚ ಪ್ರಭದ್ರಕಾಃ ।
ಮಧ್ಯೇ ಸೈನ್ಯಸ್ಯ ಮಹತಃ ಸ್ಥಿತಾ ಯುದ್ಧಾಯ ಭಾರತ ॥೧೪॥

ಎಲೈ ಭಾರತನೇ, ಧೃಷ್ಟದ್ಯುಮ್ನ, ಶಿಖಂಡೀ, ಪಾಂಚಾಲ ಮತ್ತು ಪ್ರಭದ್ರಕ ಯೋಧರು ಆ ದೊಡ್ಡ ಸೈನ್ಯದ ಮಧ್ಯದಲ್ಲಿ ಅರ್ಧಚಂದ್ರ ವ್ಯೂಹದ ಮಧ್ಯಭಾಗದಲ್ಲಿ ಯುದ್ಧಕ್ಕಾಗಿ ನಿಂತರು.

ತಥೈವ ಧರ್ಮರಾಜೋಽಪಿ ಗಜಾನೀಕೇನ ಸಂವೃತಃ ।
ತತಸ್ತು ಸಾತ್ಯಕೀ ರಾಜನ್ ದ್ರೌಪದ್ಯಾಃ ಪಂಚ ಚಾತ್ಮಜಾಃ ॥೧೫॥

ಎಲೈ ರಾಜನೇ, ಹಾಗೆಯೇ ಗಜಸೈನ್ಯದಿಂದ ಕೂಡಿದ ಧರ್ಮರಾಜನೂ ಅವನ ಹಿಂದೆ ಸಾತ್ಯಕಿಯೂ ಮತ್ತು ದ್ರೌಪದಿಯ ಐದು ಮಕ್ಕಳೂ ಇದ್ದರು.

ಅಭಿಮನ್ಯುಸ್ತತಸ್ಫೂರ್ಜನ್ನಿರಾವಾಂಶ್ಚ ತತಃ ಪರಮ್ ।
ಭೈಮಸೇನಿಸ್ತತೋ ರಾಜನ್ ಕೇಕಯಾಶ್ಚ ಮಹಾರಥಾಃ ॥೧೬॥

ಎಲೈ ರಾಜನೇ, ಅವನ ಅನಂತರದಲ್ಲಿ ಅಭಿಮನ್ಯುವೂ ಅನಂತರ ಶೀಘ್ರಕಾರಿಯಾದ ಇರಾವಂತನೂ, ಅನಂತರ ಘಟೋತ್ಕಚನೂ ಮತ್ತು ಮಹಾರಥರಾದ ಕೇಕಯ ಸಹೋದರರೂ ಇದ್ದರು.

ತತೋಽಭೂದ್ ದ್ವಿಪದಾಂ ಶ್ರೇಷ್ಠೋ ವಾಮಂ ಪಾರ್ಶ್ವಮುಪಾಶ್ರಿತಃ ।
ಸರ್ವಸ್ಯ ಜಗತೋ ಗೋಪ್ತಾ ಗೋಪ್ತಾ ಯಸ್ಯ ಜನಾರ್ದನಃ ॥೧೭॥

ಅನಂತರ ದ್ವಿಪದರಲ್ಲಿ ಶ್ರೇಷ್ಠರಾದ ಸರ್ವಜಗದ್ರಕ್ಷಕನಾದ, ಹಾಗೆಯೇ ವ್ಯೂಹ ರಕ್ಷಕನಾದ ಜನಾರ್ದನನನ್ನು ಸಾರಥಿಯಾಗಿ ಹೊಂದಿ ಅರ್ಜುನನು ವಾಮ ಪಾರ್ಶ್ವದಲ್ಲಿ ಇದ್ದನು.

ಏವಮೇತನ್ಮಹಾವ್ಯೂಹಂ ಪ್ರತ್ಯವ್ಯೂಹಂತ ಪಾಂಡವಾಃ ।
ವಧಾರ್ಥಂ ತವ ಪುತ್ರಾಣಾಂ ತತ್ಪಕ್ಷಂ ಯೇ ಚ ಸಂಗತಾಃ ॥೧೮॥

ತತಃ ಪ್ರವವೃತೇ ಯುದ್ಧಂ ವ್ಯತಿಷಕ್ತರಥದ್ವಿಪಮ್ ॥೧೯॥

ಹೀಗೆ ನಿನ್ನ ಮಕ್ಕಳು ಮತ್ತು ಅವರ ಅನುಯಾಯಿಗಳ ವಧೆಗಾಗಿ ಪಾಂಡವರು ಈ ಮಹಾವ್ಯೂಹವನ್ನು ಭೀಷ್ಮರ ವ್ಯೂಹಕ್ಕೆ ಪ್ರತಿಯಾಗಿ ಹೂಡಿದರು. ಅನಂತರ ರಥ ಗಜಗಳು ಪರಸ್ಪರ ಮಿಶ್ರಿತವಾಗಿ ಯುದ್ಧವು ಆರಂಭವಾಯಿತು.

ಹಯೌಘಾಶ್ಚ ರಥೌಘಾಶ್ಚ ತತ್ರ ತತ್ರ ವಿಶಾಂಪತೇ ।
ಸಂಪತಂತಃ ಸ್ಮ ದೃಶ್ಯಂತೇ ನಿಘ್ನಮಾನಾಃ ಪರಸ್ಪರಮ್ ॥೨೦॥

ಎಲೈ ರಾಜನೇ, ಪರಸ್ಪರವಾಗಿ ಹೊಡೆಯಲ್ಪಟ್ಟು ಅಲ್ಲಲ್ಲಿ ಬೀಳುತ್ತಿರುವ ಅಶ್ವಗಳ ಸಮೂಹಗಳು ಮತ್ತು ರಥಗಳ ಸಮೂಹಗಳು ಕಂಡುಬಂದವು.

ಧಾವತಾಂ ಚ ರಥೌಘಾನಾಂ ನಿಘ್ನತಾಂ ಚ ಪೃಥಕ್ ಪೃಥಕ್ ।
ಬಭೂವ ತುಮುಲಃ ಶಬ್ದೋ ಏಮಿಶ್ರೋ ದುಂದುಭಿಸ್ವನೈಃ ॥೨೧॥

ದಿವಸ್ಪೃಶ್ ನರವೀರಾಣಾಂ ನಿಘ್ನತಾಮಿತರೇತರಮ್ ।
ಸಂಪ್ರಹಾರೇ ಸುತುಮುಲೇ ತವ ತೇಷಾಂ ಚ ಭಾರತ ॥೨೨॥

ಓಡುವ ರಥಗಳಿಂದ ಉಂಟಾದ ಮತ್ತು ಪರಸ್ಪರ ಪ್ರಹಾರದಿಂದ ಉಂಟಾದ ಶಬ್ದಗಳು ದುಂದುಭಿ ನಾದಗಳಿಂದ ಮಿಶ್ರಿತವಾಗಿ ತೀವ್ರವಾಗಿದ್ದವು. ಎಲೈ ಭಾರತನೇ, ನರವೀರರು ಪರಸ್ಪರವಾಗಿ ಒಬ್ಬರನ್ನೊಬ್ಬರು ಸಂಹರಿಸುವಾಗ ಆ ಪ್ರಹಾರದಲ್ಲಿ ಉಂಟಾದ ತೀವ್ರವಾದ ಶಬ್ದವು ಆಕಾಶವನ್ನು ಮುಟ್ಟುತ್ತಿದ್ದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ದ್ವಿಪಂಚಾಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ಮೂರನೆಯ ಅಧ್ಯಾಯ

ತೃತೀಯ ದಿವಸದ ಮುಂದುವರಿದ ಯುದ್ಧ

ಸಂಜಯಃ

ತತೋ ವ್ಯೂಢೇಷ್ವನೀಕೇಷು ತಾವಕೇಷ್ವಿತರೇಷು ಚ ।
ಧನಂಜಯೋ ರಥಾನೀಕಮವಧೀತ್ ತವ ಭಾರತ ।
ಶರೈರತಿರಥೋ ಯುದ್ಧೇ ಪಾತಯನ್ ರಥಯೂಥಪಾನ್ ॥೧॥

ಸಂಜಯ– ಎಲೈ ಭಾರತನೇ, ಆನಂತರ ನಿನ್ನವರು ಮತ್ತು ಪರರು ಸೈನ್ಯ ವ್ಯೂಹವನ್ನು ರಚಿಸಿದ ಮೇಲೆ ಅತಿರಥನಾದ ಧನಂಜಯನು ಯುದ್ಧದಲ್ಲಿ ರಥಶ್ರೇಷ್ಠರನ್ನು ಬಾಣಗಳಿಂದ ಕೆಡವುತ್ತಾ ರಥಸಮೂಹವನ್ನು ವಧಿಸಿದನು.

ತೇ ವಧ್ಯಮಾನಾಃ ಪಾರ್ಥೇನ ಕಾಲೇನೇವ ಯುಗಕ್ಷಯೇ ।
ಧಾರ್ತರಾಷ್ಟ್ರಾ ರಣೇ ಯತ್ತಾಃ ಪಾಂಡವಾನ್ ಪ್ರತ್ಯಯೋಧಯನ್ ।
ಪ್ರಾರ್ಥಯಾನಾ ಯಶೋ ದೀಪ್ತಂ ಮೃತ್ಯುಂ ಕೃತ್ವಾನಿವರ್ತನಮ್ ॥೨॥

ಯುಗಾಂತ ಕಾಲದಲ್ಲಿ ಮೃತ್ಯುವಿನಿಂದ ಹತರಾಗುವ ಪ್ರಜೆಗಳಂತೆ ಅರ್ಜುನನಿಂದ ಪ್ರಹರಿಸಲ್ಪಟ್ಟ ಧೃತರಾಷ್ಟ್ರ ಪುತ್ರರು ಪ್ರಕಾಶಮಾನವಾದ ಕೀರ್ತಿಯನ್ನು ಆಶಿಸುತ್ತಾ, ಮನಸ್ಸಿನಲ್ಲಿ ನಿವೃತ್ತಿಯಿಲ್ಲದ ಮೃತ್ಯುವನ್ನು ಚಿಂತಿಸಿ, ಎಚ್ಚರಿಕೆಯಿಂದ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಏಕಾಗ್ರಮನಸೋ ಭೂತ್ವಾ ಪಾಂಡವಾನಾಂ ವರೂಥಿನೀಮ್ ।
ಬಭಂಜುರ್ಬಹುಶೋ ರಾಜಂಸ್ತೇ ಚಾಭಜ್ಯಂತ ಸಂಯುಗೇ ॥೩॥

ಎಲೈ ರಾಜನೇ, ಒಂದೇ ಮನಸ್ಸುಳ್ಳವರಾಗಿ ಅವರು ಪಾಂಡವರ ಸೈನ್ಯವನ್ನು ಅನೇಕ ಬಾರಿ ಭಗ್ನಗೊಳಿಸಿದರು ಮತ್ತು ಪಾಂಡವರಿಂದ ಯುದ್ಧದಲ್ಲಿ ತಾವೂ ಭಂಗವನ್ನು ಹೊಂದಿದರು.

ದ್ರವದ್ಭಿರಥ ಭಗ್ನೈಶ್ಚ ಪರಿವರ್ತದ್ಭಿರೇವ ಚ ।
ಪಾಂಡವೈಃ ಕೌರವೈಶ್ಚೈವ ನ ಪ್ರಾಜ್ಞಾಯತ ಕಿಂಚನ ॥೪॥

ಪಾಂಡವರಿಂದ ಕೌರವರು ಓಡುತ್ತಿರಲು, ಭಗ್ನರಾಗುತ್ತಿರಲು ಮತ್ತು ಹಿಂದಿರುಗುತ್ತಿರಲು ಏನೂ ತಿಳಿಯಲಿಲ್ಲ.

ಉದತಿಷ್ಠದ್ ರಜೋ ಭೌಮಂ ಛಾದಯಾನಂ ದಿವಾಕರಮ್ ।
ದಿಶಃ ಪ್ರತಿದಿಶೋ ವಾಪಿ ತನ್ನ ಜಜ್ಞುಃ ಕಥಂಚನ ॥೫॥

ಭೂಮಿಯ ಧೂಳು ಸೂರ್ಯನನ್ನು ಮುಚ್ಚಿತು. ದಿಕ್ಕುಗಳಾಗಲೀ, ವಿದಿಕ್ಕುಗಳಾಗಲೀ ಯಾರಿಗೂ ತಿಳಿಯಲಿಲ್ಲ.

ಅನುಮಾನೇನ ಸಂಜ್ಞಾಭಿರ್ನಾಮಗೋತ್ರೈಶ್ಚ ಸಂಯುಗೇ ।
ವರ್ತತೇ ಸ್ಮ ತದಾ ಯುದ್ಧಂ ತತ್ರತತ್ರ ವಿಶಾಂಪತೇ ॥೬॥

ಎಲೈ ರಾಜನೇ, ಆಗ ಊಹೆಯಿಂದಲೂ, ಸಂಜ್ಞೆಗಳಿಂದಲೂ, ನಾಮ-ಗೋತ್ರಗಳಿಂದಲೂ ಅಲ್ಲಲ್ಲಿ ಯುದ್ಧವು ಜರುಗಿತು.

ನ ವ್ಯೂಹೋ ಭಿದ್ಯತೇ ತತ್ರ ಕೌರವಾಣಾಂ ಕಥಂಚನ ।
ರಕ್ಷಿತಃ ಸತ್ಯಸಂಧೇನ ಭಾರದ್ವಾಜೇನ ಧೀಮತಾ ॥೭॥

ಸತ್ಯಸಂಧರಾದ ಮತ್ತು ಮೇಧಾವಿಗಳಾದ ದ್ರೋಣರಿಂದ ರಕ್ಷಿಸಲ್ಪಟ್ಟ ಕೌರವರ ವ್ಯೂಹವು ಯಾವ ರೀತಿಯಿಂದಲೂ ಭಗ್ನವಾಗಲಿಲ್ಲ.

ತಥೈವ ಪಾಂಡವೇಯಾನಾಂ ರಕ್ಷಿತಃ ಸವ್ಯಸಾಚಿನಾ ।
ನಾಭಿದ್ಯತ ಮಹಾವ್ಯೂಹೋ ಭೀಮೇನ ಚ ಪರಂತಪ ॥೮॥

ಹಾಗೆಯೇ ಸವ್ಯಸಾಚಿಯಾದ ಅರ್ಜುನನಿಂದಲೂ ಮತ್ತು ಭೀಮನಿಂದಲೂ ಚೆನ್ನಾಗಿ ರಕ್ಷಿಸಲ್ಪಟ್ಟ ಪಾಂಡವರ ಮಹಾವ್ಯೂಹವೂ ಸಹ ಭಗ್ನವಾಗಲಿಲ್ಲ.

ಸೇನಾಗ್ರಾದಭಿನಿಷ್ಪತ್ಯ ಪ್ರಾಯುದ್ಧ್ಯಂತ್ತತ್ರ ಮಾನವಾಃ ।
ಉಭಯೋಃ ಸೇನಯೋ ರಾಜನ್ ವ್ಯತಿಷಕ್ತರಥದ್ವಿಪಾಃ ॥೯॥

ಎಲೈ ರಾಜನೇ, ಎರಡು ಸೇನೆಗಳ ಯೋಧರು ಸೇನೆಯ ಮುಂಭಾಗದಿಂದ ಹೊರಬಂದು ರಥ-ಗಜಗಳನ್ನು ಪರಸ್ಪರವಾಗಿ ಘಟ್ಟಿಸಿ ಯುದ್ಧವನ್ನು ಮಾಡಿದರು.

ಹಯಾರೋಹೈರ್ಹಯಾರೋಹಾಃ ಪಾತ್ಯಂತೇ ಸ್ಮ ಮಹಾಹವೇ ।
ಋಷ್ಟಿಭಿರ್ವಿಮಲಾಗ್ರಾಭಿಃ ಪ್ರಾಸೈರಪಿ ಚ ಸಂಯುಗೇ ॥೧೦॥

ಆ ಮಹಾಯುದ್ಧದಲ್ಲಿ ಅಶ್ವಾರೋಹಿಗಳು ವಿಮಲವಾದ ತುದಿಯುಳ್ಳ ಋಷ್ಟಿಗಳಿಂದಲೂ, ಪ್ರಾಸಗಳಿಂದಲೂ ಉರುಳಿಸಲ್ಪಟ್ಟರು.

ರಥೀ ರಥಿನಮಾಸಾದ್ಯ ಶರೈಃ ಕನಕಭೂಷಣೈಃ ।
ಪಾತಯಾಮಾಸ ಸಮರೇ ತಸ್ಮಿನ್ನತಿಭಯಂಕರೇ ॥೧೧॥

ಆ ಅತಿಭಯಂಕರವಾದ ಯುದ್ಧದಲ್ಲಿ ರಥಿಯು ಇನ್ನೊಬ್ಬ ರಥಿಯನ್ನು ಸಮೀಪಿಸಿ ಚೀಲದಿಂದ ಅಲಂಕೃತವಾಗಿದ್ದ ಬಾಣದಿಂದ ಅವನನ್ನು ನೆಲಕ್ಕೆ ಕೆಡವಿದನು.

ಗಜಾರೋಹಾ ಗಜಾರೋಹಾನ್ ನಾರಾಚಶರತೋಮರೈಃ ।
ಸಂಸಕ್ತಾಃ ಪಾತಯಾಮಾಸುಸ್ತವ ತೇಷಾಂ ಚ ಸಂಘಶಃ ॥೧೨॥

ನಿನ್ನ ಮತ್ತು ಅವರ ಗಜಾರೋಹಿಗಳು ಗಜಾರೋಹಿಗಳ ಜೊತೆಯಲ್ಲಿ ಸಂಘರ್ಷವನ್ನು ಹೊಂದಿ ನಾರಾಚಶರತೋಮರಗಳಿಂದ ಗುಂಪುಗುಂಪುಗಳಲ್ಲಿ ಒಬ್ಬರನ್ನೊಬ್ಬರು ಬೀಳಿಸಿದರು.

ಕಶ್ಚಿದುತ್ಪತ್ಯ ಸಮರೇ ವರವಾರಣಮಾಸ್ಥಿತಃ ।
ಕೇಶಪಕ್ಷೇ ಪರಾಮೃಶ್ಯ ಜಹಾರ ಸಮರೇ ಶಿರಃ ॥೧೩॥

ಶ್ರೇಷ್ಠವಾದ ಗಜವನ್ನು ಏರಿದ ಒಬ್ಬ ಯೋಧನು ಯುದ್ಧದಲ್ಲಿ ಹಾರಿ ಇನ್ನೊಬ್ಬ ಗಜಾರೋಹಿಯನ್ನು ಕೇಶಪಕ್ಷಗಳಲ್ಲಿ ಹಿಡಿದು ಅವನ ಶಿರಸ್ಸನ್ನು ಕತ್ತರಿಸಿದನು.

ಅನ್ಯೇ ದ್ವಿರದದಂತಾಗ್ರನಿರ್ಭಿನ್ನಹೃದಯಾ ರಣೇ ।
ವೇಮುಶ್ಚ ರುಧಿರಂ ವೀರಾ ನಿಃಶ್ವಸಂತಃ ಸಮಂತತಃ ॥೧೪॥

ಇನ್ನು ಕೆಲವರು ಆನೆಗಳ ದಂತದ ಅಗ್ರಭಾಗದಿಂದ ತಮ್ಮ ಹೃದಯವು ಒಡೆದು ನಿಟ್ಟುಸಿರನ್ನು ಬಿಡುತ್ತಾ ಎಲ್ಲ ಕಡೆಗಳಲ್ಲಿಯೂ ರಕ್ತವನ್ನು ಕಾರುತ್ತಿದ್ದರು.

ಕಶ್ಚಿತ್ ಕರಿವಿಷಾಣಸ್ಥೋ ವೀರೋ ರಣವಿಶಾರದಃ ।
ಪ್ರಾವೇಪಚ್ಛಕ್ತಿನಿರ್ಭಿನ್ನೋ ಗಜಶಿಕ್ಷಾಸ್ತ್ರವೇದಿನಾ ॥೧೫॥

ಆನೆಯ ದಂತದ ಮೇಲೆ ಕುಳಿತಿದ್ದ ಒಬ್ಬ ರಣವಿಶಾರದನು ಗಜಶಿಕ್ಷೆ ಮತ್ತು ಅಸ್ತ್ರಗಳನ್ನು ತಿಳಿದ ಪ್ರತಿವೀರನು ಪ್ರಯೋಗಿಸಿದ ಶಕ್ತಿಯಿಂದ ನಿರ್ಭಿನ್ನನಾಗಿ ಅಲ್ಲಿಯೇ ಕಂಪಿಸಿದನು.

ಪತ್ತಿಸಂಘಾ ರಣೇ ಪತ್ತೀನ್ ಭಿಂಡಿಪಾಲಪರಶ್ವಧೈಃ ।
ನ್ಯಪಾತಯಂತ ಸಂಹೃಷ್ಟಾಃ ಪರಸ್ಪರಕೃತಾಗಸಃ ॥೧೬॥

ಪದಾತಿಗಳ ಸಮೂಹವು ಕಬ್ಬಿಣದಿಂದ ಮಾಡಿದ ಭಿಂಡಿಪಾಲ ಮತ್ತು ಪರಶ್ವಧಗಳಿಂದ ಸಂತೋಷದಿಂದ ಕೂಡಿ ಪರಸ್ಪರವಾಗಿ ಒಬ್ಬರನ್ನೊಬ್ಬರು ಕೆಡವಿದರು.

ರಥೀ ಚ ಸಮರೇ ರಾಜನ್ನಾಪದ್ಯ ಗಜಯೋಧಿನಮ್ ।
ಸಗಜಂ ಪಾತಯಾಮಾಸ ಗಜೇ ಚ ರಥಿನಂ ರಥಾತ್ ॥೧೭॥

ಎಲೈ ರಾಜನೇ, ರಥಿಕನು ಗಜಾರೋಹಿಯನ್ನು ಸಮೀಪಿಸಿ ಗಜದ ಜೊತೆಯಲ್ಲಿ ಅವನನ್ನು ನೆಲಕ್ಕೆ ಉರುಳಿಸಿದನು. ಗಜಾರೋಹಿಯೂ ಸಹ ರಥಿಕನನ್ನು ರಥದಿಂದ ಉರುಳಿಸಿದನು.

ರಥಿನಂ ಚ ಹಯಾರೋಹಃ ಪ್ರಾಸೇನ ಭರತರ್ಷಭ ।
ಪಾತಯಾಮಾಸ ಸಮರೇ ರಥೀ ಚ ಹಯಸಾದಿನಮ್ ॥೧೮॥

ಎಲೈ ಭರತಶ್ರೇಷ್ಠನೇ, ಅಶ್ವಾರೋಹಿಯಾದವನು ಪ್ರಾಸದಿಂದ ರಣರಂಗದಲ್ಲಿ ರಥಿಕನನ್ನು ರಥದಿಂದ ಉರುಳಿಸಿದನು. ರಥಿಕನೂ ಸಹ ಅಶ್ವಾರೋಹಿಯನ್ನು ಉರುಳಿಸಿದನು.

ಪದಾತೀ ರಥಿನಂ ಸಂಖ್ಯೇ ರಥೀ ಚಾಪಿ ಪದಾತಿನಮ್ ।
ನ್ಯಪಾತಯತ್ ಶಿತೈಃ ಶಸ್ತ್ರೈಃ ಸೇನಯೋರುಭಯೋರಪಿ ॥೧೯॥

ಆ ಯುದ್ಧದಲ್ಲಿ ಎರಡು ಸೈನ್ಯಗಳಲ್ಲಿಯೂ ನಿಶಿತವಾದ ಶಸ್ತ್ರಗಳಿಂದ ಪದಾತಿಯು ರಥಿಕನನ್ನೂ, ರಥಿಕನು ಪದಾತಿಯನ್ನೂ ಬೀಳಿಸಿದರು.

ಗಜಾರೋಹಾ ಹಯಾರೋಹಾನ್ ಪಾತಯಾಂಚಕ್ರಿರೇ ತದಾ ।
ಹಯಾರೋಹಾ ಗಜಸ್ಥಾಂಶ್ಚ ತದದ್ಭುತಮಿವಾಭವತ್ ॥೨೦॥

ಗಜಾರೋಹಿಗಳು ಅಶ್ವಾರೋಹಿಗಳನ್ನು ಕೆಡವಿದರು. ಆಗ ಅಶ್ವಾರೋಹಿಗಳೂ ಗಜಾರೋಹಿಗಳನ್ನು ಕೆಡವಿದರು. ಅದು ಅದ್ಭುತವಾಗಿದ್ದಿತು.

ಗಜಾರೋಹವರೈಶ್ಚಾಪಿ ತತ್ರತತ್ರ ಪದಾತಯಃ ।
ಪಾತ್ಯಮಾನಾ ವ್ಯದೃಶ್ಯಂತ ತೈಶ್ಚಾಪಿ ಗಜಯೋಧಿನಃ ॥೨೧॥

ಶ್ರೇಷ್ಠರಾದ ಗಜಾರೋಹಿಗಳು ಅಲ್ಲಲ್ಲಿ ಪದಾತಿಗಳನ್ನು ಕೆಡವುತ್ತಿರುವುದು ಕಂಡುಬಂದಿತು. ಆ ಪದಾತಿಗಳಿಂದ ಗಜಯೋಧಿಗಳು ನೆಲಕ್ಕೆ ಉರುಳಿದರು.

ಪತ್ತಿಸಂಘಾ ಹಯಾರೋಹ್ಯೈಃ ಸಾದಿಸಂಘಾಶ್ಚ ಪತ್ತಿಭಿಃ ।
ಪಾತ್ಯಮಾನಾ ವ್ಯದೃಶ್ಯಂತ ಶತಶೋಽಥ ಸಹಸ್ರಶಃ ॥೨೨॥

ಪದಾತಿಗಳ ಸಮೂಹವು ಅಶ್ವಾರೋಹಿಗಳಿಂದಲೂ, ಅಶ್ವಾರೋಹಿಗಳ ಸಮೂಹವು ಪದಾತಿಗಳಿಂದಲೂ ಉರುಳಿ ಬೀಳುವುದು ಶತಸಂಖ್ಯೆಯಲ್ಲಿ, ಸಹಸ್ರ ಸಂಖ್ಯೆಯಲ್ಲಿ ಕಂಡುಬಂದಿತು.

ಧ್ವಜೈಸ್ತತ್ರಾಪವಿದ್ಧೈಶ್ಚ ಕಾರ್ಮುಕೈಸ್ತೋಮರೈಸ್ತಥಾ ।
ಪ್ರಾಸೈಸ್ತಥಾ ಗದಾಭಿಶ್ಚ ಪರಿಘೈಃ ಕಂಪನೈಸ್ತಥಾ ॥೨೩॥

ಶಕ್ತಿಭಿಃ ಕವಚೈಶ್ಚಿತ್ರೈಃ ಕಣಪೈರಂಕುಶೈರಪಿ ।
ನಿಸ್ತ್ರಿಂಶೈರ್ವಿಮಲೈಶ್ಚಾಪಿ ಸ್ವರ್ಣಾಪುಂಖೈಃ ಶರೈಸ್ತಥಾ ॥೨೪॥

ಪರಿಸ್ತೋಮೈಃ ಕುಥಾಭಿಶ್ಚ ಕಂಬಲೈಶ್ಚ ಮಹಾಧನೈಃ ।
ಭೂರ್ಭಾತಿ ಭರತಶ್ರೇಷ್ಠ ಸ್ರಗ್ದಾಮೈರಿವ ಚಿತ್ರಿತಾ ॥೨೫॥

ಅಲ್ಲಲ್ಲಿ ಎಸೆದ ಧ್ವಜಗಳು, ಕಾರ್ಮುಕಗಳು, ತೋಮರಗಳು, ಪ್ರಾಸಗಳು, ಗದೆಗಳು, ಪರಿಘಗಳು, ಕಂಪನಗಳು, ಶಕ್ತಿಗಳು, ವಿಚಿತ್ರವಾದ ಕವಚಗಳು, ಹಾಸುಗಳು, ಅಂಕುಶಗಳು, ಸ್ವಚ್ಛವಾದ ಖಡ್ಗಗಳು, ಸುವರ್ಣಪುಂಖವುಳ್ಳ ಶರಗಳು, ಪರಿಸ್ತೋಮಗಳು, ಆನೆಯ ಮೇಲೆ ಹಾಸುವ ರತ್ನಕಂಬಳಿಗಳು, ಬೆಲೆಬಾಳುವ ಕಂಬಳಿಗಳು ಇವುಗಳಿಂದ ಎಲೈ ಭರತಶ್ರೇಷ್ಠನೇ, ರಣಭೂಮಿಯು ಪುಷ್ಪಮಾಲೆಗಳಿಂದ ಕೂಡಿರುವಂತೆ ವಿಚಿತ್ರವಾಗಿ ಕಾಣುತ್ತಿದ್ದಿತು.

ನರಾಶ್ವಕಾಯೈಃ ಪತಿತೈರ್ದಂತಿಭಿಶ್ಚ ಮಹಾಹವೇ ।
ಅಗಮ್ಯರೂಪಾ ಪೃಥಿವೀ ಮಾಂಸಶೋಣಿತಕರ್ದಮಾ ॥೨೬॥

ಆ ಮಹಾಯುದ್ಧದಲ್ಲಿ ನೆಲದ ಮೇಲೆ ಬಿದ್ದ ಯೋಧರ ಮತ್ತು ಅಶ್ವಗಳ ಶರೀರದಿಂದಲೂ, ಗಜಗಳ ಶರೀರದಿಂದಲೂ, ಮಾಂಸರಕ್ತರೂಪವಾದ ಕೆಸರನ್ನುಳ್ಳ ಆ ರಣಭೂಮಿಯು ನಡೆಯಲು ಅಸಾಧ್ಯವಾಗಿದ್ದಿತು.

ಪ್ರಶಶಾಮ ರಜೋ ಭೌಮಂ ವ್ಯಕ್ಷಿತಂ ರಣಶೋಣಿತೈಃ ।
ದಿಶಶ್ಚ ವಿಮಲಾಃ ಸರ್ವಾಃ ಸಂಬಭೂವುರ್ಜನೇಶ್ವರ ॥೨೭॥

ಎಲೈ ಜನೇಶ್ವರನೇ, ಭೂಮಿಯ ಧೂಳು ಯುದ್ಧದ ರಕ್ತದಿಂದ ನೆನೆದು ಅಡಗಿತು. ಎಲ್ಲ ದಿಕ್ಕುಗಳೂ ಧೂಳನ್ನು ಕಳೆದುಕೊಂಡು ಸ್ವಚ್ಛವಾದವು.

ಉತ್ಥಿತಾನ್ಯಗಣೇಯಾನಿ ಕಬಂಧಾನಿ ಸಮಂತತಃ ।
ಚಿಹ್ನಭೂತಾನಿ ಜಗತೋ ವಿನಾಶಾರ್ಥಾಯ ಭಾರತ ॥೨೮॥

ಎಲೈ ಭಾರತನೇ, ಜಗತ್ತಿನ ವಿನಾಶಕ್ಕೆ ಚಿಹ್ನೆಯಂತೆ ರುಂಡಗಳು ಎಲ್ಲ ಕಡೆಗಳಲ್ಲಿಯೂ ಅಸಂಖ್ಯವಾಗಿ ಮೇಲೆದ್ದವು.

ತಸ್ಮಿನ್ ಯುದ್ಧೇ ಮಹಾರೌದ್ರೇ ವರ್ತಮಾನೇ ಸುದಾರುಣೇ ।
ಪ್ರತ್ಯದೃಶ್ಯಂತ ರಥಿನೋ ಧಾವಮಾನಾಃ ಸಮಂತತಃ ॥೨೯॥

ಮಹಾಭಯಂಕರವೂ, ಅತ್ಯಂತ ದಾರುಣವೂ ಆದ ಆ ಯುದ್ಧವು ನಡೆಯುತ್ತಿರಲು ರಥಿಕರು ಎಲ್ಲ ಕಡೆಗಳಲ್ಲಿಯೂ ಓಡುತ್ತಿರುವುದು ಕಂಡುಬಂದಿತು.

ತತೋ ದ್ರೋಣಶ್ಚ ಭೀಷ್ಮಶ್ಚ ಸೈಂಧವಶ್ಚ ಜಯದ್ರಥಃ ।
ಪುರುಮಿತ್ರೋ ವಿಕರ್ಣಶ್ಚ ಶಕುನಿಶ್ಚಾಪಿ ಸೌಬಲಃ ॥೩೦॥

ಏತೇ ಸಮರದುರ್ಧರ್ಷಾಃ ಸಿಂಹತುಲ್ಯಪರಾಕ್ರಮಾಃ ।
ಪಾಂಡವಾನಾಮನೀಕಾನಿ ಬಭಂಜುಃ ಸ್ಮ ಪುನಃ ಪುನಃ ॥೩೧॥

ಅನಂತರ ದ್ರೋಣರು, ಭೀಷ್ಮರು, ಸಿಂಧುದೇಶದ ಜಯದ್ರಥ, ಪುರುಮಿತ್ರ, ವಿಕರ್ಣ, ಸೌಬಲನಾದ ಶಕುನಿ-ಸಿಂಹಪರಾಕ್ರಮವುಳ್ಳವರೂ ಯುದ್ಧದಲ್ಲಿ ಸೋಲಿಸಲು ಅಸಾಧ್ಯರೂ ಆದ ಇವರು ಪಾಂಡವರ ಸೈನ್ಯವನ್ನು ಪುನಃ ಪುನಃ ಭಗ್ನಗೊಳಿಸಿದರು.

ತಥೈವ ಭೀಮಸೇನೋಽಪಿ ರಾಕ್ಷಸಶ್ಚ ಘಟೋತ್ಕಚಃ ।
ಸಾತ್ಯಕಿಶ್ಚೇಕಿತಾನಶ್ಚ ದ್ರೌಪದೇಯಾಶ್ಚ ಭಾರತ ॥೩೨॥

ತಾವಕಾಂಸ್ತವ ಪುತ್ರಾಂಶ್ಚ ಸಹಿತಾನ್ ಸರ್ವರಾಜಭಿಃ ।
ದ್ರಾವಯಾಮಾಸುರಾಜೌ ತೇ ತ್ರಿದಶಾ ದಾನವಾನಿವ ॥೩೩॥

ಎಲೈ ಭಾರತನೇ, ಹಾಗೆಯೇ ಭೀಮಸೇನ, ರಾಕ್ಷಸನಾದ ಘಟೋತ್ಕಚ, ಸಾತ್ಯಕಿ, ಚೇಕಿತಾನ, ದ್ರೌಪದಿಯ ಐವರು ಮಕ್ಕಳು ಇವರು ಎಲ್ಲಾ ರಾಜರಿಂದಲೂ ಸಹಿತರಾದ ನಿನ್ನ ಪುತ್ರರನ್ನು ದೇವತೆಗಳು ದಾನವರನ್ನು ಓಡಿಸಿದಂತೆ ರಣರಂಗದಿಂದ ಓಡಿಸಿದರು.

ತಥಾ ತೇ ಸಮರೇಽನ್ಯೋನ್ಯಂ ನಿಘ್ನಂತಃ ಕ್ಷತ್ರಿಯರ್ಷಭಾಃ ।
ರಕ್ತೋಕ್ಷಿತಾ ಘೋರರೂಪಾ ವಿರೇಜುರ್ದಾನವಾ ಇವ ॥೩೪॥

ಹಾಗೆಯೇ ಆ ಕ್ಷತ್ರಿಯಶ್ರೇಷ್ಠರು ಪರಸ್ಪರವಾಗಿ ಪ್ರಹಾರವನ್ನು ಮಾಡುತ್ತಾ ರಕ್ತದಿಂದ ತೋಯಿಸಲ್ಪಟ್ಟು ಘೋರರೂಪವನ್ನು ಧರಿಸಿ ದಾನವರಂತೆ ವಿರಾಜಿಸಿದರು.

ವಿನಿರ್ಜಿತ್ಯ ರಿಪೂನ್ ವೀರಾಃ ಸೇನಯೋರುಭಯೋರಪಿ ।
ವ್ಯದೃಶ್ಯಂತ ಮಹಾಮಾತ್ರಾ ಗ್ರಹಾ ಇವ ನಭಸ್ತಲೇ ॥೩೫॥

ಗಜಾರೋಹಿಗಳಾದ, ವೀರರಾದ ಪ್ರಧಾನರು ಎರಡು ಸೈನ್ಯಗಳಲ್ಲಿಯೂ ತಮ್ಮ ಶತ್ರುಗಳನ್ನು ಸೋಲಿಸಿ ಆಕಾಶದಲ್ಲಿರುವ ಗ್ರಹಗಳಂತೆ ಕಂಡುಬಂದರು.

ತತೋ ರಥಸಹಸ್ರೇಣ ಪುತ್ರೋ ದುರ್ಯೋಧನಸ್ತವ ।
ಅಭ್ಯಯಾತ್ ಪಾಂಡವಾನ್ ಯುದ್ಧೇ ರಾಕ್ಷಸಂ ಚ ಘಟೋತ್ಕಚಮ್ ॥

ಆಗ ನಿನ್ನ ಪುತ್ರನಾದ ದುರ್ಯೋಧನನು ಯುದ್ಧದಲ್ಲಿ ಒಂದು ಸಹಸ್ರ ರಥಗಳ ಜೊತೆಯಲ್ಲಿ ಪಾಂಡವರ ಮತ್ತು ರಾಕ್ಷಸನಾದ ಘಟೋತ್ಕಚನ ಮೇಲೆ ಎರಗಿದನು.

ತಥೈವ ಪಾಂಡವಾಃ ಸರ್ವೇ ಮಹತ್ಯಾ ಸೇನಯಾ ಸಹ ।
ದ್ರೋಣಭೀಷ್ಮೌ ರಣೇ ಶೂರೌ ಪ್ರತ್ಯುದ್ಯಯುರರಿಂದಮೌ ॥೩೭॥

ಹಾಗೆಯೇ, ಎಲ್ಲ ಪಾಂಡವರೂ ಸಹ ದೊಡ್ಡ ಸೈನ್ಯದಿಂದ ಕೂಡಿದವರಾಗಿ ಅರಿಂದಮರೂ ಮತ್ತು ಶೂರರೂ ಆದ ದ್ರೋಣ-ಭೀಷ್ಮರನ್ನು ಕುರಿತು ರಣರಂಗದಲ್ಲಿ ಧಾವಿಸಿದರು.

ಕಿರೀಟೀ ತು ಯಯೌ ಕ್ರುದ್ಧಃ ಸಮರ್ಥಾನ್ ಪಾರ್ಥಿವೋತ್ತಮಾನ್ ।
ಆರ್ಜುನಿಃ ಸಾತ್ಯಕಿಶ್ಚೈವ ಯಯತುಃ ಸೌಬಲಂ ಬಲಮ್ ॥೩೮॥

ಅರ್ಜುನನು ಕ್ರುದ್ಧನಾಗಿ ಸಮರ್ಥರಾದ ಶ್ರೇಷ್ಠರಾಜರ ಮೇಲೆ ಹೋದನು. ಅಭಿಮನ್ಯು ಮತ್ತು ಸಾತ್ಯಕಿ ಇವರು ಶಕುನಿಯ ಸೈನ್ಯದ ಮೇಲೆ ಪ್ರಹಾರ ಮಾಡಲು ಹೊರಟರು.

ತತಃ ಪ್ರವವೃತೇ ಭೂಯಃ ಸಂಗ್ರಾಮೋ ಲೋಮಹರ್ಷಣಃ ।
ತಾವಕಾನಾಂ ಪರೇಷಾಂ ಚ ಸಮರೇ ವಿಜಿಗೀಷತಾಮ್ ॥೩೯॥

ಅನಂತರ ಯುದ್ಧದಲ್ಲಿ ಜಯವನ್ನು ಬಯಸಿದ ನಿನ್ನವರಿಗೂ ಮತ್ತು ಪರರಿಗೂ ರೋಮಾಂಚಕಾರಿಯಾದ ಯುದ್ಧವು ಪುನಃ ನಡೆಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ತ್ರಿಪಂಚಾಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಐವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ - ೨೫ನೇ ಅಧ್ಯಾಯ

ಅಥ ಭೀಷ್ಮಮುದೀರ್ಣಾಸ್ತ್ರಂ ದ್ರಾವಯಂತಂ ವರೂಥಿನೀಮ್ ।
ಸಸೌಮದತ್ತಿಂ ಸೌಭದ್ರಸಹಾಯೋಽರ್ಜುನ ಆಸದತ್ ॥೩೯॥

ಸೌಭದ್ರಂ ತತ್ರ ವಿಕ್ರಾಂತಮತೀತ್ಯ ದ್ಯುಸರಿತ್ಸುತಃ ।
ದ್ರಾವಯಾಮಾಸ ಪಾಂಚಾಲಾನ್ ಪಶ್ಯತಃ ಸವ್ಯಸಾಚಿನಃ ॥೪೦॥

ಬಳಿಕ ಮಹಾ ಅಸ್ತ್ರಗಳನ್ನು ಪ್ರಯೋಗಿಸಿ ಸೈನ್ಯವನ್ನು ಅಟ್ಟುತ್ತಿದ್ದ ಭೀಷ್ಮರನ್ನೂ ಸೌಮದತ್ತಿಯನ್ನೂ ಅಭಿಮನ್ಯು ಸಮೇತನಾದ ಅರ್ಜುನನು ಸಮೀಪಿಸಿದನು. ಪರಾಕ್ರಮ ತೋರುತ್ತಿದ್ದ ಅಭಿಮನ್ಯುವನ್ನು ಬಿಟ್ಟು ಭೀಷ್ಮರು ಅರ್ಜುನನು ನೋಡುತ್ತಿದ್ದಂತೆಯೇ ಪಾಂಚಾಲರನ್ನು ಓಡಿಸಿದರು.

ತಸ್ಯ ವಿಕ್ರಮಮಾಲಕ್ಷ್ಯ ಪಾರ್ಥಂ ತದ್ಗೌರವಾನುಗಮ್ ।
ದೃಷ್ಟ್ವಾ ಯುಧಿಷ್ಠಿರೋ ರಾಜಾ ಕ್ರುದ್ಧಃ ಸೇನಾಮಪಾಹರತ್ ॥೩೧॥

ರಾಜನಾದ ಯುಧಿಷ್ಠಿರನು ಭೀಷ್ಮರ ಪರಾಕ್ರಮವನ್ನೂ ಅರ್ಜುನನು ಭೀಷ್ಮರ ಬಗ್ಗೆ ಗೌರವ ಭಾವನೆಯನ್ನು ಅನುಸರಿಸಿದುದನ್ನೂ ಕಂಡು ಕುಪಿತನಾಗಿ ಸೈನ್ಯವನ್ನು ಹಿಂದೆ ಕರೆಸಿಕೊಂಡನು.

ರಾತ್ರೌ ಯುಧಿಷ್ಠಿರಶ್ಚಿಂತಾಮಾಪ್ಯ ಪಾರ್ಥಂ ವ್ಯಗರ್ಹಯತ್ ।
ಸ ಕೃಷ್ಣಾದ್ಯೈಃ ಸಾಂತ್ವಿತಶ್ಚ ಪುನರ್ಯುದ್ಧಾಯ ನಿರ್ಯಯೌ ॥೩೨॥

ರಾತ್ರಿಯಲ್ಲಿ ಯುಧಿಷ್ಠಿರನು ಚಿಂತೆಗೊಳಗಾಗಿ ಅರ್ಜುನನನ್ನು ತೆಗಳಿದನು. ಕೃಷ್ಣ ಮುಂತಾದವರು ಸಮಾಧಾನ ಮಾಡಿದ ಬಳಿಕ ಪುನಃ ಯುದ್ಧಕ್ಕೆ ಹೊರಟನು.

ಏವಂ ಭೀಷ್ಮೋ ದಶಾಹಾನಿ ಸೇನಾಪತ್ಯಂ ಚಕಾರ ಹ ।
ಕೃತ್ವಾऽಪಿ ಪಾಂಡವೈರ್ಯುದ್ಧಂ ತತ್ ಕರ್ತುಮಕೃತೋಪಮಮ್ ॥೩೩॥

ಕರ್ಣೋऽರ್ಧರಥ ಇತ್ಯುಕ್ತ್ವಾ ಯಾವದ್ ಯುದ್ಧಾತ್ ಪ್ರಯಾಪಿತಃ ।
ತಾವತ್ ತ್ವಂ ಯೋತ್ಸ್ಯಸೇ ತಾವನ್ನ ಯೋತ್ಸ್ಯಾಮೀತಿ ನಿರ್ಗತೇ ॥೩೪॥

ಕರ್ಣೇऽಯುತರಥಾನಾಂ ಸ ನಿತ್ಯಶೋ ವಧಮಾಹವೇ ।
ಪ್ರತಿಜಜ್ಞೇऽಕರೋತ್ ತಚ್ಚ ಪುನಶ್ಚಾಪ್ತವಿದಾಂ ವರಃ ॥೩೫॥

ಹೀಗೆ ಭೀಷ್ಮರು ಹತ್ತು ದಿನವೂ ಸೇನಾಧಿಪತ್ಯ ನಿರ್ವಹಿಸಿದ ತಾವು ಪಾಂಡವರೊಡನೆ ಯುದ್ಧ ಮಾಡಿ ಅದನ್ನು ಅನುಪಮವಾಗಿಸುವುದಕ್ಕಾಗಿ ಕರ್ಣನನ್ನು ಅರ್ಧರಥನೆಂದು ನಿಂದಿಸಿ ರಣರಂಗದಿಂದ ಹೊರಗೆ ಮಾಡಿದ್ದರು. ನೀವು ಯುದ್ಧ ಮಾಡುವಷ್ಟು ಕಾಲ ನಾನು ಯುದ್ಧ ಮಾಡೆನೆನ್ನುತ್ತಾ ಕರ್ಣನು ಹೊರಟುಹೋದಾಗ ಭೀಷ್ಮರು ತಾನು ಪ್ರತಿದಿನ ಹತ್ತು ಸಾವಿರ ರಥಿಕರನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿದರು. ಅದನ್ನು ನಡೆಸಿಯೂ ಕೊಟ್ಟರು. ಮಾತ್ರವಲ್ಲದೆ ಅಸ್ತವೇತ್ತರಲ್ಲಿ ಅಗ್ರಗಣ್ಯರಾದ ಭೀಷ್ಮರು ಇನ್ನೂ ಹೆಚ್ಚು ಯೋಧರನ್ನು ವಧಿಸಿದರು.

ಸುಸಮರ್ಥಾವಪಿ ವಧೇ ತಸ್ಯ ಭೀಮಸೇನಧನಂಜಯೌ ।
ಸ್ನೇಹೇನ ಯಂತ್ರಿತೌ ತಸ್ಯ ಗೌರವಾಚ್ಚಾನ್ವವರ್ತತಾಮ್ ॥೩೬॥

ಭೀಮಾರ್ಜುನರು ಭೀಷ್ಮರ ವಧೆಗೆ ಬಹಳಸಮರ್ಥರೇ ಆದರೂ ಅವರ ಮೇಲಿನ ಪ್ರೀತಿಯಿಂದ ಬದ್ಧರಾದುದರಿಂದಲೂ ಪಿತಾಮಹರೆಂಬ ಗೌರವ ಭಾವನೆ ಇದ್ದುದರಿಂದಲೂ ಅವರಿಗೆ ಅನುಕೂಲರಾಗಿಯೇ ವರ್ತಿಸಿದರು.

ಬಭೂವುಸ್ತತ್ರ ಯುದ್ಧಾನಿ ಚಿತ್ರಾಣಿ ಸುಬಹೂನಿ ಚ ।
ತಾನ್ಯಂಬರೇ ವಿಮಾನಸ್ಥಾ ಬ್ರಹ್ಮರುದ್ರಪುರಸ್ಸರಾಃ ॥೩೭॥

ಅಪಶ್ಯನ್ ದೇವತಾಃ ಸರ್ವಾಃ ಗಂಧರ್ವಾಪ್ಸರಸೋಽಸುರಾಃ ॥೩೮॥

ಆಗ ಆಶ್ಚರ್ಯಕರವಾದ ಬಹಳ ಯುದ್ಧಗಳು ನಡೆದುವು. ಅವುಗಳನ್ನು ಆಕಾಶದಲ್ಲಿ ವಿಮಾನಗಳಲ್ಲಿ ಕುಳಿತು ಬ್ರಹ್ಮರುದ್ರಾದಿ ದೇವತೆಗಳೂ ಗಂಧರ್ವರೂ ಅಪ್ಸರೆಯರೂ ಅಸುರರೂ ಎಲ್ಲರೂ ನೋಡಿದರು.

ಧೃಷ್ಟದ್ಯುಮ್ನೋ ಮಹೇಷ್ವಾಸಃ ಪ್ರತಿವ್ಯೂಹ್ಯಾಽಪಗಾಸುತಮ್ ।
ಚಕ್ರೇ ಯುದ್ಧಾನಿ ಸುಬಹೂನ್ಯಜೇಯಃ ಶತ್ರುಭೀ ರಣೇ ॥೩೯॥

ಯುದ್ಧದಲ್ಲಿ ಶತ್ರುಗಳಿಂದ ಅಜೇಯನಾದ ಮಹಾಧನುರ್ಧಾರಿಯಾದ ಧೃಷ್ಟದ್ಯುಮ್ನನು ಭೀಷ್ಮರನ್ನು ಎದುರಿಸಿ ಬಹಳ ಯುದ್ಧಗಳನ್ನು ಮಾಡಿದನು.

ತತ್ರೋದ್ಧಾರ ಕೃಷ್ಣೋಽಪಿ ಫಲ್ಗುನಂ ಮೃದುಯೋಧಿನಮ್ ।
ದೃಷ್ಟ್ವಾ ಚಕ್ರಂ ತಥೋದ್ಯಮ್ಯ ಬಾಹುಂ ಭೀಷ್ಮಾಯ ಜಗ್ಮಿವಾನ್ ॥೪೦॥

ಮರುದಿನ ಅರ್ಜುನನು ಮೃದುವಾಗಿ ಯುದ್ಧ ಮಾಡುತ್ತಿದ್ದುದನ್ನು ಕಂಡು ಕೃಷ್ಣನು ಚಕ್ರವನ್ನೆತ್ತಿದನು. ತೋಳೆತ್ತಿ ಭೀಷ್ಮನ ಕಡೆಗೆ ನಡೆದನು.

ತೇನ ಸ್ತುತೋ ಗೃಹೀತಶ್ಚ ಫಲ್ಗುನೇನ ಪ್ರಣಮ್ಯ ಚ ।
ಪ್ರಾರ್ಥಿತೋ ರಥಮಾರೂಢಃ ಪುನಃ ಶಂಖಮಪೂರಯತ್ ॥೪೧॥

ಭೀಷ್ಮರು ಸ್ತೋತ್ರ ಮಾಡಿದಾಗ ಅರ್ಜುನನೂ ನಮಿಸಿ ಕೈಹಿಡಿದು ಬೇಡಿಕೊಂಡಾಗ ತಿರುಗಿ ರಥವನ್ನೇರಿ ಶಂಖನಾದ ಮಾಡಿದನು.

ತತೋ ಭೀಷ್ಮೋऽರ್ಜುನಶ್ಚೈವ ಶಸ್ತ್ರೌಘೈರಭ್ಯವರ್ಷತಾಮ್ ।
ಅಯತ್ನೇನ ಜಿತಶ್ಚೈವ ಫಲ್ಗುನೇನಾऽಪಗಾಸುತಃ ॥೪೨॥

ಅಯುತಾನಿ ಸುಬಹೂನ್ಯಾಜೌ ರಥಾನಾಂ ನಿಜಘಾನ ಚ ॥೪೩॥

ಬಳಿಕ ಭೀಷ್ಮರೂ ಅರ್ಜುನನೂ ಪರಸ್ಪರ ಶಸ್ತ್ರಾಸ್ತ್ರಗಳ ಮಳೆಯನ್ನು ಸುರಿಸಿದರು. ಅರ್ಜುನನಿಂದ ಭೀಷ್ಮರು ಅಯತ್ನವಾಗಿ ಪರಾಜಿತರಾದರೂ ಅನೇಕ ಹತ್ತು ಸಾವಿರ ರಥಿಕರನ್ನು ಯುದ್ಧದಲ್ಲಿ ಸಂಹರಿಸಿದರು.

★ ★ ★ ★ ★

ಐವತ್ತಾಲ್ಕನೆಯ ಅಧ್ಯಾಯ

ಭೀಮಸೇನ, ಘಟೋತ್ಕಚ ಮತ್ತು ಅರ್ಜುನರ ಪರಾಕ್ರಮ. ಭೀಷ್ಮರನ್ನು ಕುರಿತು ದುರ್ಯೋಧನನ ಕ್ರೂರ ವಚನಗಳು ಮತ್ತು ಭೀಷ್ಮರ ಪ್ರತಿಜ್ಞೆ.

ಸಂಜಯಃ

ತತಸ್ತೇ ಪಾರ್ಥಿವಾಃ ಕ್ರುದ್ಧಾಃ ಫಲ್ಗುನಂ ವೀಕ್ಷ್ಯ ಸಂಯುಗೇ ।
ರಥೈರನೇಕಸಾಹಸ್ರೈಃ ಸಮಂತಾತ್ ಪರ್ಯವಾರಯನ್ ॥೧॥

ಸಂಜಯ– ಅನಂತರ ಆ ರಾಜರು ಯುದ್ಧಭೂಮಿಯಲ್ಲಿ ಅರ್ಜುನನನ್ನು ನೋಡಿ ಕೋಪಗೊಂಡು ಅನೇಕ ಸಹಸ್ರ ರಥಗಳಿಂದ ಎಲ್ಲ ಕಡೆಗಳಿಂದಲೂ ಅರ್ಜುನನನ್ನು ಸುತ್ತುವರಿದರು.

ಅಥೈನಂ ರಥವೃಂದೇನ ಕೋಷ್ಟಕೀಕೃತ್ಯ ಭಾರತ ।
ಶರೈಃ ಸುಬಹುಸಾಹಸ್ರೈಃ ಸಮಂತಾದಭ್ಯವಾರಯನ್ ॥೨॥

ಎಲೈ ಭಾರತನೇ, ಅನಂತರ ತಮ್ಮ ರಥಸಮೂಹದಿಂದ ಅರ್ಜುನನನ್ನು ಒಳಗೆ ಕೂಡಿಹಾಕಿಕೊಂಡು ಅನೇಕ ಸಹಸ್ರ ಬಾಣಗಳಿಂದ ಎಲ್ಲ ಕಡೆಗಳಿಂದಲೂ ಅವನನ್ನು ತಡೆದರು.

ಶಕ್ತೀಶ್ಚ ವಿಮಲಾಸ್ತೀಕ್ಷ್ಣಾ ಗದಾಶ್ಚ ಪರಿಘೈಃ ಸಹ ।
ಪ್ರಾಸಾನ್ ಪರಶ್ವಧಾಂಶ್ಚೈವ ಮುದ್ಗರಾನ್ ಮುಸಲಾನಪಿ ।
ಚಿಕ್ಷಿಪುಃ ಸಮರೇ ಕ್ರುದ್ಧಾಃ ಫಲ್ಗುನಸ್ಯ ರಥಂ ಪ್ರತಿ ॥೩॥

ವಿಮಲವಾದ ಮತ್ತು ತೀಕ್ಷ್ಣವಾದ ಶಕ್ತ್ಯಾಯುಧಗಳನ್ನು, ಪರಿಘಗಳಿಂದ ಕೂಡಿದ ಗದೆಗಳನ್ನು, ಪ್ರಾಸಗಳನ್ನು, ಪರಶ್ವಧಗಳನ್ನು, ಮುದ್ಗರಗಳನ್ನು, ಮುಸಲಗಳನ್ನು ಕೋಪದಿಂದ ಅರ್ಜುನನ ರಥದ ಮೇಲೆ ರಣರಂಗದಲ್ಲಿ ಪ್ರಯೋಗಿಸಿದರು.

ಶಸ್ತ್ರಾಣಾಮಥ ತಾಂ ವೃಷ್ಟಿಂ ಶಲಭಾನಾಮಿವಾಯತಿಮ್ ।
ರುರೋಧ ಸರ್ವತಃ ಪಾರ್ಥಃ ಶರೈಃ ಕನಕಭೂಷಣೈಃ ॥೪॥

ಪತಂಗಗಳಂತೆ ಬರುತ್ತಿರುವ ಆ ವಿಸ್ತಾರವಾದ ಬಾಣಗಳ ವೃಷ್ಟಿಯನ್ನು ಕನಕಭೂಷಿತವಾದ ತನ್ನ ಬಾಣಗಳಿಂದ ಅರ್ಜುನನು ಎಲ್ಲ ಕಡೆಗಳಲ್ಲಿಯೂ ತಡೆದನು.

ತತ್ರ ತಲ್ಲಾಘವಂ ದೃಷ್ಟ್ವಾ ಬೀಭತ್ಸೋರತಿಮಾನುಷಮ್ ।
ದೇವದಾನವಗಂಧರ್ವಾಃ ಪಿಶಾಚೋರಗರಾಕ್ಷಸಾಃ ।
ಸಾಧು ಸಾಧ್ವಿತಿ ರಾಜೇಂದ್ರ ಫಲ್ಗುನಂ ಪ್ರತ್ಯಪೂಜಯನ್ ॥೫॥

ಎಲೈ ರಾಜೇಂದ್ರನೇ, ಅರ್ಜುನನ ಮನುಷ್ಯರನ್ನು ಮೀರಿದ ಆ ಶೀಘ್ರಕಾರಿತ್ವವನ್ನು ನೋಡಿ ದೇವದಾನವಗಂಧರ್ವರು, ಪಿಶಾಚೋರಗರಾಕ್ಷಸರು ಸಾಧು ಸಾಧು ಎಂದು ಹೇಳುತ್ತಾ ಅರ್ಜುನನನ್ನು ಗೌರವಿಸಿದರು.

ಸಾತ್ಯಕಿಂ ಚಾಭಿಮನ್ಯುಂ ಚ ಮಹತ್ಯಾ ಸೇನಯಾ ಸಹ ।
ಗಾಂಧಾರಾಃ ಸಮರೇ ಶೂರಾ ರುರುಧುಃ ಸಹಸೌಬಲಾಃ ॥೬॥

ಗಾಂಧಾರ ದೇಶದ ಶೂರರು ಸೌಬಲರಿಂದ ಸಹಿತರಾಗಿ ದೊಡ್ಡ ಸೈನ್ಯದಿಂದ ಕೂಡಿ ಸಾತ್ಯಕಿಯನ್ನೂ ಮತ್ತು ಅಭಿಮನ್ಯುವನ್ನೂ ತಡೆದರು.

ತತ್ರ ಸೌಬಲಕಾಃ ಕ್ರುದ್ಧಾ ವಾರ್ಷ್ಣೇಯಸ್ಯ ರಥೋತ್ತಮಮ್ ।
ತಿಲಶಶ್ಚಿಚ್ಛಿದುಃ ಕ್ರೋಧಾಚ್ಛಸ್ತ್ರೈರ್ನಾನಾವಿಧೈರ್ಯುಧಿ ॥೭॥

ಅಲ್ಲಿ ಸೌಬಲ ಯೋಧರು ರಣರಂಗದಲ್ಲಿ ನಾನಾವಿಧವಾದ ಶಸ್ತ್ರಗಳನ್ನು ಪ್ರಯೋಗಿಸಿ ಸಾತ್ಯಕಿಯ ಶ್ರೇಷ್ಠವಾದ ರಥವನ್ನು ಎಳ್ಳಿನಷ್ಟು ಸಣ್ಣ ಚೂರುಗಳಾಗಿ ಪುಡಿಮಾಡಿದರು.

ಸಾತ್ಯಕಿಸ್ತು ರಥಂ ತ್ಯಕ್ತ್ವಾ ವರ್ತಮಾನೇ ಮಹಾಭಯೇ ।
ಅಭಿಮನ್ಯೋ ರಥಂ ತೂರ್ಣಮಾರುರೋಹ ಪರಂತಪಃ ॥೮॥

ಪರಂತಪನಾದ ಸಾತ್ಯಕಿಯಾದರೂ ಅಂತಹ ದೊಡ್ಡ ಭಯವುಂಟಾಗುತ್ತಿರಲು ತನ್ನ ರಥವನ್ನು ಬಿಟ್ಟು ಶೀಘ್ರವಾಗಿ ಅಭಿಮನ್ಯುವಿನ ರಥವನ್ನು ಏರಿದನು.

ತಾವೇಕರಥಸಂಯುಕ್ತೌ ಸೌಬಲೇಯಸ್ಯ ವಾಹಿನೀಮ್ ।
ವ್ಯಧಮೇತಾಂ ಶಿತೈಸ್ತೂರ್ಣಂ ಶರೈಃ ಸನ್ನತಪರ್ವಭಿಃ ॥೯॥

ಅವರಿಬ್ಬರೂ ಜೊತೆಯಾಗಿ ಒಂದು ರಥವನ್ನು ಏರಿ ಬಾಗಿದ ತುದಿಯುಳ್ಳ ಹರಿತವಾದ ಬಾಣಗಳಿಂದ ಶೀಘ್ರವಾಗಿ ಶಕುನಿಯ ಸೈನ್ಯವನ್ನು ನಾಶಗೊಳಿಸಿದರು.

ದ್ರೋಣಭೀಷ್ಮೌ ರಣೇ ಯತ್ತೌ ಧರ್ಮರಾಜಸ್ಯ ವಾಹಿನೀಮ್ ।
ನಾಶಯೇತಾಂ ಶರೈಸ್ತೀಕ್ಷ್ಣೈಃ ಕಂಕಪತ್ರಪರಿಚ್ಛದೈಃ ॥೧೦॥

ದ್ರೋಣ-ಭೀಷ್ಮರು ಎಚ್ಚರಿಕೆಯಿಂದ ಕಂಕಪತ್ರಗಳಿಂದ ಆವೃತವಾದ ತೀಕ್ಷ್ಣವಾದ ಬಾಣಗಳಿಂದ ರಣರಂಗದಲ್ಲಿ ಧರ್ಮರಾಜನ ಸೈನ್ಯವನ್ನು ನಾಶಮಾಡಿದರು.

ತತೋ ಧರ್ಮಸುತೋ ರಾಜಾ ಮಾದ್ರೀಪುತ್ರೌ ಚ ಪಾಂಡವೌ ।
ಮಿಷತಾಂ ಸರ್ವಸೈನ್ಯಾನಾಂ ದ್ರೋಣಾನೀಕಮುಪಾದ್ರವನ್ ॥೧೧॥

ಆಗ ಧರ್ಮಸುತನಾದ ಯುಧಿಷ್ಠಿರನೂ, ಮಾದ್ರೀ ಮಕ್ಕಳಾದ ಪಾಂಡವರೂ ಎಲ್ಲಸೈನ್ಯಗಳು ನೋಡುತ್ತಿರುವಂತೆಯೇ ದ್ರೋಣರ ಸೈನ್ಯದ ಮೇಲೆ ಧಾವಿಸಿದರು.

ತತ್ಸಾಸೀತ್ ಸುಮಹದ್ ಯುದ್ಧಂ ತುಮುಲಂ ಲೋಮಹರ್ಷಣಮ್ ।
ಯಥಾ ದೇವಾಸುರಂ ಯುದ್ಧಂ ಪೂರ್ವಮಾಸೀತ್ ಸುದಾರುಣಮ್ ॥

ಹಿಂದೆ ದೇವಾಸುರರಿಗೆ ನಡೆದ ದಾರುಣವಾದ ಯುದ್ಧದಂತೆ ಅಲ್ಲಿ ರೋಮಾಂಚಕಾರಿಯೂ ಮತ್ತು ತೀವ್ರವೂ ಆದ ದೊಡ್ಡ ಯುದ್ಧವು ಸಂಭವಿಸಿತು.

ಕುರ್ವಾಣೌ ತು ಮಹತ್ಕರ್ಮ ಭೀಮಸೇನಘಟೋತ್ಕಚೌ ।
ದುರ್ಯೋಧನಸ್ತತೋऽಭ್ಯೇತ್ಯ ತಾವುಭಾವವ್ಯವಾರಯತ್ ॥೧೩॥

ತತ್ರಾದ್ಭುತಮಪಶ್ಯಾಮ ಹೈಡಿಂಬಸ್ಯ ಪರಾಕ್ರಮಮ್ ।
ಅತೀತ್ಯ ಪಿತರಂ ಯುದ್ಧೇ ಯದಯುಧ್ಯತ ಭಾರತ ॥೧೪॥

ಮಹತ್ಕಾರ್ಯಗಳನ್ನು ಮಾಡುತ್ತಿದ್ದ ಭೀಮಸೇನ, ಘಟೋತ್ಕಚರನ್ನು ದುರ್ಯೋಧನನು ಸಮೀಪಿಸಿ ಅವರಿಬ್ಬರನ್ನೂ ತಡೆದನು. ಎಲೈ ಭಾರತನೇ, ಅಲ್ಲಿ ಯುದ್ಧದಲ್ಲಿ ತಂದೆಯಾದ ಭೀಮನನ್ನು ಮೀರಿಸಿದ ಘಟೋತ್ಕಚನ ಅದ್ಭುತವಾದ ಪರಾಕ್ರಮವನ್ನು ನೋಡಿದೆವು.

ಭೀಮಸೇನಸ್ತು ಸಂಕ್ರುದ್ಧೋ ದುರ್ಯೋಧನಮಮರ್ಷಣಮ್ ।
ಹೃದ್ಯವಿಧ್ಯತ್ ಪೃಷತ್ಕೇನ ಪ್ರಹಸನ್ನಿವ ಪಾಂಡವಃ ॥೧೫॥

ಭೀಮಸೇನನಾದರೂ ಬಹಳ ಕೋಪಗೊಂಡು ನಗುವವನಂತೆ ಕ್ರೋಧಶೀಲನಾದ ದುರ್ಯೋಧನನಿಗೆ ತನ್ನ ಬಾಣದಿಂದ ಹೃದಯದಲ್ಲಿ ಹೊಡೆದನು.

ತತೋ ದುರ್ಯೋಧನೋ ರಾಜಾ ಪ್ರಹಾರವರಮೋಹಿತಃ ।
ನಿಪಸಾದ ರಥೋಪಸ್ಥೇ ಕಶ್ಮಲಂ ಚ ಜಗಾಮ ಹ ॥೧೬॥

ಆಗ ಆ ಶ್ರೇಷ್ಠವಾದ ಪ್ರಹಾರದಿಂದ ಮೋಹಕ್ಕೆ ಒಳಗಾದ ದುರ್ಯೋಧನ ರಾಜನು ರಥದ ಮಧ್ಯಭಾಗದಲ್ಲಿ ಕುಸಿದು ಮೂರ್ಛೆ ಹೋದನು.

ತಂ ವಿಸಂಜ್ಞಮಥೋ ಜ್ಞಾತ್ವಾ ತ್ವರಮಾಣೋऽಸ್ಯ ಸಾರಥಿಃ ।
ಅಪೋವಾಹ ರಣಾದ್ ರಾಜನ್ ತತಃ ಸೈನ್ಯಮಭಿದ್ರುತ ॥೧೭॥

ಅವನು ಮೂರ್ಛೆ ಹೋದುದನ್ನು ತಿಳಿದ ಅವನ ಸಾರಥಿಯು ಎಲೈ ರಾಜನೇ, ಅವನನ್ನು ಬೇಗ ರಣರಂಗದಿಂದ ಹೊರಗೆ ಕರೆದುಕೊಂಡು ಹೋದನು. ಅನಂತರ ಕೌರವ ಸೈನ್ಯವು ಭಗ್ನವಾಯಿತು.

ತತಸ್ತಾಂ ಕೌರವೀಂ ಸೇನಾಂ ದ್ರವಮಾಣಾಂ ಸಮಂತತಃ ।
ನಿಘ್ನನ್ ಭೀಮಃ ಶರೈಸ್ತೀಕ್ಷ್ಣೈರನುವವ್ರಾಜ ಪೃಷ್ಠತಃ ॥೧೮॥

ಆಗ ಎಲ್ಲ ಕಡೆಗಳಲ್ಲಿಯೂ ಓಡುತ್ತಿದ್ದ ಆ ಕೌರವಸೈನ್ಯವನ್ನು ಹಿಂಬಾಲಿಸಿ, ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ ಭೀಮಸೇನನು ಅದರ ಹಿಂದೆ ನಡೆದನು.

ಪಾರ್ಷತಶ್ಚ ರಥಶ್ರೇಷ್ಠೋ ಧರ್ಮಪುತ್ರಶ್ಚ ಪಾಂಡವಃ ।
ದ್ರೋಣಸ್ಯ ಪಶ್ಯತಃ ಸೈನ್ಯಂ ಗಾಂಗೇಯಸ್ಯ ಚ ಪಶ್ಯತಃ ।
ಜಘ್ನತುರ್ವಿಶಿಖೈಸ್ತೀಕ್ಷ್ಣೈಃ ಪರಾನೀಕವಿಶಾತನೈಃ ॥೧೯॥

ರಥಶ್ರೇಷ್ಠನಾದ ಧೃಷ್ಟದ್ಯುಮ್ನನೂ ಮತ್ತು ಪಾಂಡುಪುತ್ರನಾದ ಧರ್ಮರಾಜನೂ ದ್ರೋಣರು ಮತ್ತು ಭೀಷ್ಮರು ನೋಡುತ್ತಿರುವಂತೆಯೇ ಕೌರವರ ಸೈನ್ಯವನ್ನು ಶತ್ರುಸೈನ್ಯವನ್ನು ನಾಶಮಾಡುವ ತೀಕ್ಷ್ಣವಾದ ಬಾಣಗಳಿಂದ ಘಾಸಿಗೊಳಿಸಿದರು.

ದ್ರವಮಾಣಂ ತು ತತ್ಸೈನ್ಯಂ ತವ ಪುತ್ರಸ್ಯ ಸಂಯುಗೇ ।
ನಾಶಕ್ನುತಾಂ ವಾರಯಿತುಂ ಭೀಷ್ಮದ್ರೋಣೌ ಮಹಾರಥೌ ॥೨೦॥

ಯುದ್ಧಭೂಮಿಯಿಂದ ಓಡುತ್ತಿದ್ದ ನಿನ್ನ ಪುತ್ರನ ಸೈನ್ಯವನ್ನು ಮಹಾರಥರಾದ ಭೀಷ್ಮ-ದ್ರೋಣರು ತಡೆಯಲು ಸಾಧ್ಯವಾಗಲಿಲ್ಲ.

ವಾರ್ಯಮಾಣಂ ಹಿ ಭೀಷ್ಮೇಣ ದ್ರೋಣೇನ ಚ ವಿಶಾಂಪತೇ ।
ವಿದ್ರವತ್ಯೇವ ತತ್ಸೈನ್ಯಂ ಪಶ್ಯತೋರ್ದ್ರೋಣಭೀಷ್ಮಯೋಃ ॥೨೧॥

ಎಲೈ ರಾಜನೇ, ಭೀಷ್ಮರು ಮತ್ತು ದ್ರೋಣರು ನಿಷೇಧ ಮಾಡುತ್ತಿದ್ದರೂ ಆ ಸೈನ್ಯವು ಅವರಿಬ್ಬರ ಎದುರಿಗೇ ಓಡುತ್ತಿದ್ದಿತು.

ತತೋ ರಥಸಹಸ್ರೇಷು ವಿದ್ರವತ್ಸು ತತಸ್ತತಃ ।
ತಾವಾಸ್ಥಿತಾವೇಕರಥಂ ಸೌಭದ್ರಶಿನಿಪುಂಗವೌ ।
ಸೌಬಲೀಂ ಸಮರೇ ಸೇನಾಂ ಶಾತಯೇತಾಂ ಸಮಂತತಃ ॥೨೨॥

ಹೀಗೆ ಸಹಸ್ರ ರಥಗಳು ಅಲ್ಲಲ್ಲಿ ಓಡಿ ಹೋದಮೇಲೆ ಒಂದೇ ರಥದಲ್ಲಿದ್ದ ಅಭಿಮನ್ಯು ಮತ್ತು ಸಾತ್ಯಕಿಯರು ಶಕುನಿಯ ಸೈನ್ಯದ ಮೇಲೆ ದಾಳಿ ಮಾಡಿ ಎಲ್ಲ ಕಡೆಗಳಿಂದಲೂ ನಾಶಗೊಳಿಸಿದರು.

ಶುಶುಭಾತೇ ತದಾ ತೌ ತು ಶೈನೇಯಕುರುಪುಂಗವೌ ।
ಅಮಾವಾಸ್ಯಾಂ ಗತೌ ಯದ್ವತ್ ಸೋಮಸೂರ್ಯೌ ನಭಸ್ತಲೇ ॥೨೩॥

ಆಗ ಸಾತ್ಯಕಿ ಮತ್ತು ಕುರುಶ್ರೇಷ್ಠನಾದ ಅಭಿಮನ್ಯುವು ಅಮಾವಾಸ್ಯೆಯ ದಿವಸ ಚಂದ್ರ-ಸೂರ್ಯರು ಒಟ್ಟಿಗೆ ಆಕಾಶದಲ್ಲಿ ಬಂದಂತೆ ಶೋಭಿಸಿದರು.

ಅರ್ಜುನಸ್ತು ತತಃ ಕ್ರುದ್ಧಸ್ತವ ಸೈನ್ಯಂ ವಿಶಾಂಪತೇ ।
ವವರ್ಷ ಶರವರ್ಷೇಣ ಧಾರಾಭಿರಿವ ತೋಯದಃ ॥೨೪॥

ಎಲೈ ರಾಜನೇ, ಆಗ ಅರ್ಜುನನು ಕ್ರೋಧದಿಂದ ಕೂಡಿದವನಾಗಿ ಮೋಡವು ಮಳೆಯನ್ನು ಸುರಿಸಿದಂತೆ ನಿನ್ನ ಸೈನ್ಯದ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ವಧ್ಯಮಾನಂ ತತಸ್ತತ್ತು ಶರೈಃ ಪಾರ್ಥಸ್ಯ ಸಂಯುಗೇ ।
ದುದ್ರಾವ ಕೌರವಂ ಸೈನ್ಯಂ ವಿಷಾದಭಯಕಂಪಿತಮ್ ॥೨೫॥

ರಣರಂಗದಲ್ಲಿ ಅರ್ಜುನನ ಪ್ರಹಾರಕ್ಕೆ ಒಳಗಾದ ಆ ಕೌರವ ಸೈನ್ಯವು ವಿಷಾದ ಮತ್ತು ಭಯಗಳಿಂದ ನಡುಗುತ್ತಾ ಓಡಿಹೋಯಿತು.

ದ್ರವತಸ್ತಾನ್ ಸಮಾಲೋಕ್ಯ ಭೀಷ್ಮದ್ರೋಣೌ ಮಹಾರಥೌ ।
ನ್ಯವಾರಯೇತಾಂ ಸಂರಬ್ಧೌ ದುರ್ಯೋಧನಹಿತೈಷಿಣೌ ॥೨೬॥

ಓಡಿಹೋಗುತ್ತಿರುವ ಆ ಸೈನ್ಯವನ್ನು ನೋಡಿ ಕೋಪಗೊಂಡವರೂ ಮತ್ತು ದುರ್ಯೋಧನನ ಹಿತೈಷಿಗಳೂ ಆದ ಮಹಾರಥರಾದ ಭೀಷ್ಮ-ದ್ರೋಣರು ಅವರನ್ನು ನಿಷೇಧಿಸಿದರು.

ತತೋ ದುರ್ಯೋಧನೋ ರಾಜಾ ಸಮಾಶ್ವಸ್ಯ ವಿಶಾಂಪತೇ ।
ನ್ಯವರ್ತಯತ ತತ್ ಸೈನ್ಯಂ ದ್ರವಮಾಣಂ ಸಮಂತತಃ ॥೨೭॥

ಎಲೈ ರಾಜನೇ, ಆ ವೇಳೆಗೆ ದುರ್ಯೋಧನನು ಸುಧಾರಿಸಿಕೊಂಡು ಪುನಃ ಸಂಜ್ಞೆಯನ್ನು ಪಡೆದು ಎಲ್ಲ ಕಡೆಗಳಲ್ಲಿಯೂ ಓಡುತ್ತಿದ್ದ ಆ ಸೈನ್ಯವನ್ನು ಹಿಂದಿರುಗಿಸಿದನು.

ಯತ್ರಯತ್ರ ಸುತಂ ತುಭ್ಯಂ ಯೋಯಃ ಪಶ್ಯತಿ ಭಾರತ ।
ತತ್ರತತ್ರ ನ್ಯವರ್ತಂತ ಕ್ಷತ್ರಿಯಾಣಾಂ ಮಹಾರಥಾಃ ॥೨೮॥

ಎಲೈ ಭಾರತನೇ, ನಿನ್ನ ಪುತ್ರನು ಎಲ್ಲೆಲ್ಲಿ ದೃಷ್ಟಿಯನ್ನು ಹಾಯಿಸಿದನೋ ಅಲ್ಲಲ್ಲಿಂದ ಮಹಾರಥರಾದ ಕ್ಷತ್ರಿಯರು ಹಿಂದಿರುಗಿದರು.

ತಾನ್ ನಿವೃತ್ತಾನ್ ಸಮೀಕ್ಷ್ಯೈವ ತತೋಽನ್ಯೇಽಪೀತರೇ ಜನಾಃ ।
ಅನ್ಯೋನ್ಯಸ್ಪರ್ಧಯಾ ರಾಜನ್ ಲಜ್ಜಯಾನ್ಯೇಽವತಸ್ಥಿರೇ ॥೨೯॥

ಎಲೈ ರಾಜನೇ, ಹಿಂದಿರುಗಿದ ಆ ರಾಜರನ್ನು ನೋಡಿ ಉಳಿದ ರಾಜರೂ ಮತ್ತು ಸಾಧಾರಣ ಯೋಧರೂ ಪರಸ್ಪರ ಸ್ಪರ್ಧೆಯಿಂದಲೂ, ಇನ್ನು ಕೆಲವರು ಲಜ್ಜೆಯಿಂದಲೂ ಅಲ್ಲಿಯೇ ನಿಂತರು.

ಪುನರಾವರ್ತತಾಂ ತೇಷಾಂ ವೇಗ ಆಸೀದ್ ವಿಶಾಂಪತೇ ।
ಪೂರ್ಯತಃ ಸಾಗರಸ್ಯೇವ ಚಂದ್ರಸ್ಯೋದಯನಂ ಪ್ರತಿ ॥೩೦॥

ಎಲೈ ರಾಜನೇ, ಅಲ್ಲಿಂದ ರಣಭೂಮಿಗೆ ಹಿಂದಿರುಗುವ ಅವರ ವೇಗವು ಚಂದ್ರೋದಯದಲ್ಲಿ ತುಂಬಿ ಉಕ್ಕುವ ಸಾಗರದ ವೇಗದಂತೆ ಇದ್ದಿತು.

ಸಂನಿವೃತ್ತಾಂಸ್ತತಸ್ತಾಂಸ್ತು ದೃಷ್ಟ್ವಾ ರಾಜಾ ಸುಯೋಧನಃ ।
ಅಬ್ರವೀತ್ ತ್ವರಿತೋ ಗತ್ವಾ ಭೀಷ್ಮಂ ಶಾಂತನವಂ ವಚಃ ॥೩೧॥

ಹಿಂದಿರುಗಿದ ಅವರನ್ನು ನೋಡಿ ರಾಜನಾದ ಸುಯೋಧನನು ಶೀಘ್ರವಾಗಿ ಶಂತನು ಪುತ್ರರಾದ ಭೀಷ್ಮರ ಬಳಿಗೆ ಹೋಗಿ ಮಾತನಾಡಿದನು.

ಪಿತಾಮಹ ನಿಬೋಧೇದಂ ಯತ್ತ್ವಾ ವಕ್ಷ್ಯಾಮಿ ಭಾರತ ।
ನಾನುರೂಪಮಹಂ ಮನ್ಯೇ ತ್ವಯಿ ಜೀವತಿ ಕೌರವ ॥೩೨॥

ಪಿತಾಮಹರೇ, ಭಾರತರೇ, ನಾನು ಹೇಳುವ ಈ ಮಾತುಗಳನ್ನು ಗಮನಿಸಿ ತಿಳಿಯಿರಿ. ಎಲೈ ಕೌರವರೇ, ನೀವು ಬದುಕಿರುವಾಗ ಇದು ಯೋಗ್ಯವಲ್ಲವೆಂದು ಭಾವಿಸುತ್ತೇನೆ.

ದ್ರೋಣೇ ಜಾಸ್ತವಿದಾಂ ಶ್ರೇಷ್ಠೇ ಸಪುತ್ರೇ ಸುಹೃದ್ಗಣೇ ।
ಕೃಪೇ ಚೈವ ಮಹೇಷ್ವಾಸೇ ದ್ರವತೀಯಂ ವರೂಥಿನೀ ॥೩೩॥

ಪುತ್ರರಿಂದ ಮತ್ತು ಸುಹೃದ್ಜನರಿಂದ ಕೂಡಿದ ಅಸ್ತ್ರವೇತ್ತರಲ್ಲಿ ಶ್ರೇಷ್ಠರಾದ ದ್ರೋಣರು ಇರುವಾಗ, ಮಹಾಧನುರ್ಧಾರಿಗಳಾದ ಕೃಪರೂ ಇರುವಾಗ ಈ ಸೈನ್ಯವು ಓಡಿಹೋಗುತ್ತಿದೆ.

ನ ಪಾಂಡವಾಃ ಪ್ರತಿಬಲಾಸ್ತವ ಮನ್ಯೇ ಕಥಂಚನ ।
ತಥಾ ದ್ರೋಣಸ್ಯ ಸಂಗ್ರಾಮೇ ದ್ರೌಣೇರ್ವಾ ಕೃಪಸ್ಯ ವ ॥೩೪॥

ಪಾಂಡವರು ನಿಮಗಾಗಲೀ ಅಥವಾ ದ್ರೋಣರಿಗಾಗಲೀ, ಅಶ್ವತ್ಥಾಮರಿಗಾಗಲೀ ಅಥವಾ ಕೃಪರಿಗಾಗಲೀ ಯುದ್ಧದಲ್ಲಿ ಸರಿಸಾಟಿಯಲ್ಲವೆಂದು ನಾನು ತಿಳಿಯುತ್ತೇನೆ.

ಅನುಗ್ರಾಹ್ಯಾಃ ಪಾಂಡುಸುತಾ ನೂನಂ ತವ ಪಿತಾಮಹ ।
ಯಥೇಮಾಂ ಕ್ಷಮಸೇ ವೀರ ವಧ್ಯಮಾನಾಂ ವರೂಥಿನೀಮ್ ॥೩೫॥

ಎಲೈ ಪಿತಾಮಹರೇ, ವೀರರೇ, ನೀವು ಈ ನನ್ನ ಸೈನ್ಯವು ನಾಶ ಹೊಂದುತ್ತಿರುವುದನ್ನು ನೋಡಿ ಕ್ಷಮೆಯನ್ನು ತಳೆದಿರುವಾಗ ನಿಮಗೆ ಪಾಂಡವರ ಮೇಲೆ ಅನುಗ್ರಹ ಬುದ್ಧಿಯಿದೆ ಎಂದು ಭಾವಿಸುತ್ತೇನೆ.

ಸೋಽಹ್ಮಿ ವಾಚ್ಯಸ್ತ್ವಯಾ ರಾಜನ್ ಪೂರ್ವಮೇವ ಸಮಾಗಮೇ ।
ನ ಯೋತ್ಸ್ಯೇ ಪಾಂಡವಾನ್ ಸಂಖೇ ಸಾಪಿ ಪಾರ್ಷತಸಾತ್ಯಕೀ ॥೩೬॥

ಎಲೈ ರಾಜರೇ, ನಾನು ನಿಮ್ಮನ್ನು ಭೇಟಿ ಮಾಡಿದಾಗ ಮೊದಲೇ ನಾನು ಪಾಂಡವರ ಜೊತೆಯಲ್ಲಾಗಲೀ, ಧೃಷ್ಟದ್ಯುಮ್ನ ಅಥವಾ ಸಾತ್ಯಕಿಯ ಜೊತೆಯಾಗಲೀ ಯುದ್ಧವನ್ನು ಮಾಡುವುದಿಲ್ಲ ಎಂದು ನೀವು ಹೇಳಬೇಕಾಗಿದ್ದಿತು.

ಶ್ರುತ್ವಾ ತು ವಚನಂ ತುಭ್ಯಮಾಚಾರ್ಯಸ್ಯ ಕೃಪಸ್ಯ ವ ।
ಕರ್ಣೇನ ಸಹಿತಃ ಕೃತ್ಯಂ ಚಿಂತಯಾನಸ್ತದೈವ ಹಿ ॥೩೭॥

ಆಗ ನಿಮ್ಮ ಮಾತನ್ನು ಕೇಳಿ, ಹಾಗೆಯೇ ದ್ರೋಣಾಚಾರ್ಯರ ಹಾಗೂ ಕೃಪರ ಮಾತನ್ನು ಕೇಳಿ ಕರ್ಣನ ಜೊತೆಯಲ್ಲಿ ಮುಂದೆ ಮಾಡಬೇಕಾದ ಕಾರ್ಯದ ಮಂತ್ರಾಲೋಚನೆಯನ್ನು ಮಾಡುತ್ತಿದ್ದೆ.

ಯದಿ ನಾಹಂ ಪರಿತ್ಯಾಜ್ಯೋ ಯುವಾಭ್ಯಾಮಿಹ ಸಂಯುಗೇ ।
ವಿಕ್ರಮೇಣಾನುರೂಪೇಣ ಯುಧ್ಯೇತಾಂ ಪುರುಷರ್ಷಭೌ ॥೩೮॥

ಈ ಯುದ್ಧದಲ್ಲಿ ನಾನು ನಿಮ್ಮಿಂದ ಪರಿತ್ಯಾಜ್ಯನಲ್ಲದಿದ್ದರೆ ಪುರುಷಶ್ರೇಷ್ಠರಾದ ನೀವಿಬ್ಬರೂ ನಿಮಗೆ ಯೋಗ್ಯವಾದ ಪರಾಕ್ರಮವನ್ನು ತೋರಿ ಯುದ್ಧವನ್ನು ಮಾಡಿ.

ವಿಹಸ್ಯೈವಂ ವಚೋ ಭೀಷ್ಮಃ ಪ್ರಹಸನ್ ವೈ ಮುಹುರ್ಮುಹುಃ ।
ಅಬ್ರವೀತ್ ತನಯಂ ತುಭ್ಯಂ ಕ್ರೋಧಾದುದ್ವೃತ್ಯ ಚಕ್ಷುಷೀ ॥೩೯॥

ಈ ಮಾತುಗಳನ್ನು ಕೇಳಿ ಭೀಷ್ಮರು ಮತ್ತೆ ಮತ್ತೆ ನಗುತ್ತಾ ಕೋಪದಿಂದ ಕಣ್ಣುಗಳನ್ನು ಅರಳಿಸಿ ನಿನ್ನ ಪುತ್ರನನ್ನು ಕುರಿತು ಮಾತನಾಡಿದರು.

ಬಹುಶೋ ಹಿ ಮಯಾ ರಾಜಂಸ್ತಥ್ಯಮುಕ್ತಂ ಹಿತಂ ವಚಃ ।
ಅಜೇಯಾಃ ಪಾಂಡವಾ ಯುದ್ಧೇ ದೇವೈರಪಿ ಸವಾಸವೈಃ ॥೪೦॥

ಎಲೈ ರಾಜನೇ, ನಾನು ನಿನಗೆ ಅನೇಕ ಬಾರಿ ಪಾಂಡವರು ಯುದ್ಧದಲ್ಲಿ ಇಂದ್ರ ಸಹಿತರಾದ ದೇವತೆಗಳಿಂದಲೂ ಅಜೇಯರಾದವರು ಎಂಬ ಹಿತವಚನವನ್ನು ಹೇಳಿದ್ದೇನೆ.

ಯತ್ತು ಶಕ್ಯಂ ಮಯಾ ಕರ್ತುಂ ವೃದ್ಧೇನಾದ್ಯ ನೃಪೋತ್ತಮ ।
ಕರಿಷ್ಯಾಮಿ ಯಥಾಶಕ್ತಿ ಪ್ರೇಕ್ಷೇದಾನೀಂ ಸಬಾಂಧವಃ ॥೪೧॥

ಎಲೈ ರಾಜಶ್ರೇಷ್ಠನೇ, ವೃದ್ಧನಾದ ನಾನು ಏನು ಮಾಡಲು ಸಾಧ್ಯವೋ ಅಷ್ಟನ್ನು ಮಾತ್ರ ನನ್ನ ಶಕ್ತಿಗೆ ಅನುಗುಣವಾಗಿ ಮಾಡುವೆನು. ಅದನ್ನು ನೀನು ನಿನ್ನ ಬಂಧುಗಳ ಜೊತೆಯಲ್ಲಿ ನೋಡುವವನಾಗು.

ಅದ್ಯ ಪಾಂಡುಸುತಾನ್ ಸರ್ವಾನ್ ಸೈನ್ಯಾನ್ ಸಹ ಬಂಧುಭಿಃ ।
ಮಿಷತೋ ವಾರಯಿಷ್ಯಾಮಿ ಸರ್ವಲೋಕಸ್ಯ ಪಶ್ಯತಃ ॥೪೨॥

ಈ ದಿನ ನೀನು ನೋಡುವಂತೆ ಮತ್ತು ಎಲ್ಲ ಲೋಕಗಳು ನೋಡುತ್ತಿರುವಂತೆ ನಾನು ಸೈನ್ಯದಿಂದ ಮತ್ತು ಬಂಧುಗಳಿಂದ ಕೂಡಿದ ಎಲ್ಲಾ ಪಾಂಡುಪುತ್ರರನ್ನೂ ತಡೆಯುವೆನು.

ಏವಮುಕ್ತೇ ತು ಭೀಷ್ಮೇಣ ಪುತ್ರಾಸ್ತವ ಜನೇಶ್ವರ ।
ದಧ್ಮುಃ ಶಂಖಾನ್ ಮುದಾ ಯುಕ್ತಾ ಭೇರೀಶ್ಚ ಜಘ್ನಿರೇ ಭೃಶಮ್ ॥೪೩॥

ಎಲೈ ಜನೇಶ್ವರನೇ, ಭೀಷ್ಮರು ಹೀಗೆ ಹೇಳುತ್ತಿರಲು ನಿನ್ನ ಪುತ್ರರು ಸಂತೋಷದಿಂದ ಕೂಡಿದವರಾಗಿ ಶಂಖಗಳನ್ನು ಊದಿದರು, ಭೇರಿಗಳನ್ನೂ ತೀವ್ರವಾಗಿ ಬಾರಿಸಿದರು.

ಪಾಂಡವಾಽಪಿ ತತೋ ರಾಜನ್ ಶ್ರುತ್ವಾ ತಂ ನಿನದಂ ಮಹತ್ ।
ದಧ್ಮುಃ ಶಂಖಾಂಶ್ಚ ಭೇರೀಶ್ಚ ಮುರಜಾಂಶ್ಚ ವ್ಯನಾದಯನ್ ॥೪೪॥

ಎಲೈ ರಾಜನೇ, ಪಾಂಡವರೂ ಸಹ ಆ ದೊಡ್ಡ ಶಬ್ದವನ್ನು ಕೇಳಿ ತಮ್ಮ ಶಂಖಗಳನ್ನು ಊದಿದರು. ಭೇರಿಗಳನ್ನು ಮತ್ತು ಮುರಜಗಳನ್ನು ಬಾರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಚತುಃಪಂಚಾಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೈದನೆಯ ಅಧ್ಯಾಯ

ಯುದ್ಧದಲ್ಲಿ ಭೀಷ್ಮರ ಪರಾಕ್ರಮ. ಕೃಷ್ಣನಿಂದ ಚಕ್ರಧಾರಣ.
ಪರಾಜಿತರಾದ ಭೀಷ್ಮರಿಂದ ಸೈನ್ಯಾವಹಾರ.

ಧೃತರಾಷ್ಟ್ರಃ

ಪ್ರತಿಜ್ಞಾತೇ ತು ಭೀಷ್ಮೇಣ ತಸ್ಮಿನ್ ಯುದ್ಧೇ ಸುದಾರುಣೇ ।
ಕ್ರೋಧಿತೋ ಮಮ ಪುತ್ರೇಣ ದುಃಖಿತೇನ ವಿಶೇಷತಃ ॥೧॥

ಭೀಷ್ಮಃ ಕಿಮಕರೋತ್ ತತ್ರ ಪಾಂಡವೇಯೇಷು ಸಂಜಯ ।
ಪಿತಾಮಹೇ ವಾ ಪಾಂಚಾಲಾಸ್ತನ್ಮಾಚಕ್ಷ್ವ ಸಂಜಯ ॥೨॥

ಧೃತರಾಷ್ಟ್ರ– ಆ ದಾರುಣವಾದ ಯುದ್ಧದಲ್ಲಿ ಭೀಷ್ಮರು ಪ್ರತಿಜ್ಞೆಯನ್ನು ಮಾಡಿದ ಮೇಲೆ ದುಃಖಿತನಾದ ನನ್ನ ಪುತ್ರನ ಮಾತುಗಳಿಂದ ವಿಶೇಷವಾಗಿ ಕ್ರೋಧವನ್ನು ತಳೆದ

ಯದಿ ನಾಹಂ ಪರಿತ್ಯಾಜ್ಯೋ ಯುವಾಭ್ಯಾಮಿಹ ಸಂಯುಗೇ ।
ವಿಕ್ರಮೇಣಾನುರೂಪೇಣ ಯುಧ್ಯೇತಾಂ ಪುರುಷರ್ಷಭೌ ॥೩೮॥

ಈ ಯುದ್ಧದಲ್ಲಿ ನಾನು ನಿಮ್ಮಿಂದ ಪರಿತ್ಯಾಜ್ಯನಲ್ಲದಿದ್ದರೆ ಪುರುಷಶ್ರೇಷ್ಠರಾದ ನೀವಿಬ್ಬರೂ ನಿಮಗೆ ಯೋಗ್ಯವಾದ ಪರಾಕ್ರಮವನ್ನು ತೋರಿ ಯುದ್ಧವನ್ನು ಮಾಡಿ.

ಏತಚ್ಛ್ರುತ್ವಾ ವಚೋ ಭೀಷ್ಮಃ ಪ್ರಹಸನ್ ವೈ ಮುಹುರ್ಮುಹುಃ ।
ಅಬ್ರವೀತ್ ತನಯಂ ತುಭ್ಯಂ ಕ್ರೋಧಾದುದ್ವೃತ್ಯ ಚಕ್ಷುಷೀ ॥೩೯॥

ಈ ಮಾತುಗಳನ್ನು ಕೇಳಿ ಭೀಷ್ಮರು ಮತ್ತೆ ಮತ್ತೆ ನಗುತ್ತಾ ಕೋಪದಿಂದ ಕಣ್ಣುಗಳನ್ನು ಅರಳಿಸಿ ನಿನ್ನ ಪುತ್ರನನ್ನು ಕುರಿತು ಮಾತನಾಡಿದರು.

ಬಹುಶೋ ಹಿ ಮಯಾ ರಾಜಂಸ್ತಥ್ಯಮುಕ್ತಂ ಹಿತಂ ವಚಃ ।
ಅಜೇಯಾಃ ಪಾಂಡವಾ ಯುದ್ಧೇ ದೇವೈರಪಿ ಸವಾಸವೈಃ ॥೪೦॥

ಎಲೈ ರಾಜನೇ, ನಾನು ನಿನಗೆ ಅನೇಕ ಬಾರಿ ಪಾಂಡವರು ಯುದ್ಧದಲ್ಲಿ ಇಂದ್ರ ಸಹಿತರಾದ ದೇವತೆಗಳಿಂದಲೂ ಅಜೇಯರಾದವರು ಎಂಬ ಹಿತವಚನವನ್ನು ಹೇಳಿದ್ದೇನೆ.

ಯತ್ತು ಶಕ್ಯಂ ಮಯಾ ಕರ್ತುಂ ವೃದ್ಧೇನಾದ್ಯ ನೃಪೋತ್ತಮ ।
ಕರಿಷ್ಯಾಮಿ ಯಥಾಶಕ್ತಿ ಪ್ರೇಕ್ಷೇದಾನೀಂ ಸಬಾಂಧವಃ ॥೪೧॥

ಎಲೈ ರಾಜಶ್ರೇಷ್ಠನೇ, ವೃದ್ಧನಾದ ನಾನು ಏನು ಮಾಡಲು ಸಾಧ್ಯವೋ ಅಷ್ಟನ್ನು ಮಾತ್ರ ನನ್ನ ಶಕ್ತಿಗೆ ಅನುಗುಣವಾಗಿ ಮಾಡುವೆನು. ಅದನ್ನು ನೀನು ನಿನ್ನ ಬಂಧುಗಳ ಜೊತೆಯಲ್ಲಿ ನೋಡುವವನಾಗು.

ಅದ್ಯ ಪಾಂಡುಸುತಾನ್ ಸರ್ವಾನ್ ಸಸೈನ್ಯಾನ್ ಸಹ ಬಂಧುಭಿಃ ।
ಮಿಷತೋ ವಾರಯಿಷ್ಯಾಮಿ ಸರ್ವಲೋಕಸ್ಯ ಪಶ್ಯತಃ ॥೪೨॥

ಈ ದಿನ ನೀನು ನೋಡುವಂತೆ ಮತ್ತು ಎಲ್ಲ ಲೋಕಗಳು ನೋಡುತ್ತಿರುವಂತೆ ನಾನು ಸೈನ್ಯದಿಂದ ಮತ್ತು ಬಂಧುಗಳಿಂದ ಕೂಡಿದ ಎಲ್ಲಾ ಪಾಂಡುಪುತ್ರರನ್ನೂ ತಡೆಯುವೆನು.

ಏವಮುಕ್ತೇ ತು ಭೀಷ್ಮೇಣ ಪುತ್ರಾಸ್ತವ ಜನೇಶ್ವರ ।
ದಧ್ಮುಃ ಶಂಖಾನ್ ಮುದಾ ಯುಕ್ತಾ ಭೇರೀಶ್ಚ ಜಘ್ನುರೇ ಭೃಶಮ್ ॥೪೩॥

ಎಲೈ ಜನೇಶ್ವರನೇ, ಭೀಷ್ಮರು ಹೀಗೆ ಹೇಳುತ್ತಿರಲು ನಿನ್ನ ಪುತ್ರರು ಸಂತೋಷದಿಂದ ಕೂಡಿದವರಾಗಿ ಶಂಖಗಳನ್ನು ಊದಿದರು, ಭೇರಿಗಳನ್ನೂ ತೀವ್ರವಾಗಿ ಬಾರಿಸಿದರು.

ಪಾಂಡವಾಽಪಿ ತತೋ ರಾಜನ್ ಶ್ರುತ್ವಾ ತಂ ನಿನದಂ ಮಹತ್ ।
ದಧ್ಮುಃ ಶಂಖಾಂಶ್ಚ ಭೇರೀಶ್ಚ ಮುರಜಾಂಶ್ಚ ವ್ಯನಾದಯನ್ ॥೪೪॥

ಎಲೈ ರಾಜನೇ, ಪಾಂಡವರೂ ಸಹ ಆ ದೊಡ್ಡ ಶಬ್ದವನ್ನು ಕೇಳಿ ತಮ್ಮ ಶಂಖಗಳನ್ನು ಊದಿದರು. ಭೇರಿಗಳನ್ನು ಮತ್ತು ಮುರಜಗಳನ್ನು ಬಾರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಚತುಃಪಂಚಾಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಏವತ್ತಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಏವತ್ತೈದನೆಯ ಅಧ್ಯಾಯ

ಯುದ್ಧದಲ್ಲಿ ಭೀಷ್ಮರ ಪರಾಕ್ರಮ. ಕೃಷ್ಣನಿಂದ ಚಕ್ರಧಾರಣ.
ಪರಾಜಿತರಾದ ಭೀಷ್ಮರಿಂದ ಸೈನ್ಯಾವಹಾರ.

ಧೃತರಾಷ್ಟ್ರಃ

ಪ್ರತಿಜ್ಞಾತೇ ತು ಭೀಷ್ಮೇಣ ತಸ್ಮಿನ್ ಯುದ್ಧೇ ಸುದಾರುಣೇ ।
ಕ್ರೋಧಿತೋ ಮಮ ಪುತ್ರೇಣ ದುಃಖಿತೇನ ವಿಶೇಷತಃ ॥೧॥

ಭೀಷ್ಮಃ ಕಿಮಕರೋತ್ ತತ್ರ ಪಾಂಡವೇಯೇಷು ಸಂಜಯ ।
ಪಿತಾಮಹೇ ವಾ ಪಾಂಚಾಲಾಸ್ತನ್ಮಾಚಕ್ಷ್ವ ಸಂಜಯ ॥೨॥

ಧೃತರಾಷ್ಟ್ರ- ಆ ದಾರುಣವಾದ ಯುದ್ಧದಲ್ಲಿ ಭೀಷ್ಮರು ಪ್ರತಿಜ್ಞೆಯನ್ನು ಮಾಡಿದ ಮೇಲೆ ದುಃಖಿತನಾದ ನನ್ನ ಪುತ್ರನ ಮಾತುಗಳಿಂದ ವಿಶೇಷವಾಗಿ ಕ್ರೋಧವನ್ನು ತಳೆದ

ಭೀಷ್ಮರು ಪಾಂಡವರ ಸೈನ್ಯದಲ್ಲಿ ಏನು ಮಾಡಿದರು? ಎಲೈ ಸಂಜಯನೇ, ಪಾಂಚಾಲರಾದರೂ ಭೀಷ್ಮನಿಗೆ ಏನು ಮಾಡಿದರು ಎಂಬುದನ್ನು ನನಗೆ ಹೇಳು.

ಸಂಜಯಃ

ಗತಪೂರ್ವಾಹ್ಣಭೂಯಿಷ್ಠೇ ತಸ್ಮಿನ್ನಹನಿ ಭಾರತ ।
ಜಯಂ ಪ್ರಾಪ್ತೇಷು ಹೃಷ್ಟೇಷು ಪಾಂಡವೇಷು ಮಹಾತ್ಮಸು ॥೩॥

ಸರ್ವಧರ್ಮವಿಶೇಷಜ್ಞಃ ಪಿತಾ ದೇವವ್ರತಸ್ತವ ।
ಅಭ್ಯಯಾಜ್ಜವನೈರಶ್ವೈಃ ಪಾಂಡವಾನಾಮನೀಕಿನೀಮ್ ।
ಮಹತ್ಯಾ ಸೇನಯಾ ಗುಪ್ತಸ್ತವ ಪುತ್ರೈಶ್ಚ ಸರ್ವಶಃ ॥೪॥

ಸಂಜಯ– ಎಲೈ ಭಾರತನೇ, ಆ ದಿನದ ಪ್ರಾತಃಕಾಲವು ಸಾಕಷ್ಟು ಕಳೆಯುತ್ತಿರಲು ಮಹಾತ್ಮರಾದ ಪಾಂಡವರು ಜಯವನ್ನು ಹೊಂದಿ, ಸಂತೋಷದಿಂದಿರಲು ಎಲ್ಲಾ ಧರ್ಮವಿಶೇಷಗಳನ್ನು ತಿಳಿದ ನಿನ್ನ ತಂದೆಯಾದ ದೇವವ್ರತನು ದೊಡ್ಡ ಸೈನ್ಯದಿಂದಲೂ ಮತ್ತು ನಿನ್ನ ಪುತ್ರರಿಂದಲೂ ಎಲ್ಲಕಡೆಗಳಲ್ಲಿಯೂ ರಕ್ಷಿತನಾಗಿ ವೇಗವಾದ ಅಶ್ವಗಳಿಂದ ಪಾಂಡವರ ಸೈನ್ಯವನ್ನು ಪ್ರವೇಶಿಸಿದನು.

ಪ್ರಾವರ್ತತ ತತೋ ಯುದ್ಧಂ ತುಮುಲಂ ಲೋಮಹರ್ಷಣಮ್ ।
ಅಸ್ಮಾಕಂ ಪಾಂಡವೈಃ ಸಾರ್ಧಮನಯಾತ್ ತವ ಭಾರತ ॥೫॥

ಎಲೈ ಭಾರತನೇ, ಪಾಂಡವರಿಗೆ ಮತ್ತು ನಮಗೂ ನಿನ್ನ ದುರ್ನೀತಿಯಿಂದಾಗಿ ರೋಮಾಂಚಕಾರಿಯಾದ, ತೀವ್ರವಾದ ಯುದ್ಧವು ಜರುಗಿತು.

ಧನುಷಾಂ ಕೂಜತಾಂ ತತ್ರ ತಳಾನಾಂ ಚಾಭಿಹನ್ಯತಾಮ್ ।
ಮಹಾನ್ ಸಮಭವಚ್ಛಬ್ದೋ ಗಿರೀಣಾಮಿವ ದೀರ್ಯತಾಮ್ ॥೬॥

ಅಲ್ಲಿ ಧನುಸ್ಸಿನ ಶಬ್ದಗಳು ಮತ್ತು ಚಪ್ಪಾಳೆಯ ಶಬ್ದಗಳು ಪರ್ವತಗಳು ಬಿರಿದಂತೆ ದೊಡ್ಡದಾಗಿ ಕೇಳಿಬರುತ್ತಿದ್ದವು.

ತಿಷ್ಠ ತಿಷ್ಠೋಽಸ್ಮಿ ವಿದ್ಧ್ಯೇನಂ ನಿವರ್ತಸ್ವ ಸ್ಥಿರೋ ಭವ ।
ಸ್ಥಿತೋಽಸ್ಮಿ ಪ್ರಹರಸ್ವೇತಿ ಶಬ್ದಾಃ ಶ್ರೂಯಂತ ಸರ್ವಶಃ ॥೭॥

ನಿಲ್ಲು, ನಿಂತಿದ್ದೇನೆ, ಇವನಿಗೆ ಹೊಡೆ, ಹಿಂತಿರುಗು, ಸ್ಥಿರವಾಗಿರು, ಸ್ಥಿರವಾಗಿದ್ದೇನೆ, ಪ್ರಹಾರವನ್ನು ಮಾಡು ಮೊದಲಾದ ಶಬ್ದಗಳು ಎಲ್ಲ ಕಡೆಗಳಿಂದಲೂ ಕೇಳಿ ಬಂದವು.

ಕಾಂಚನೇಷು ತನುತ್ರೇಷು ಕಿರೀಟೇಷು ಧ್ವಜೇಷು ಚ ।
ಶಿಲಾನಾಮಿವ ಶೈಲೇಷು ಪತತಾಮಭವತ್ ಸ್ವನಃ ॥೮॥

ಸುವರ್ಣಮಯವಾದ ಕವಚಗಳ ಮೇಲೆ, ಕಿರೀಟಗಳ ಮೇಲೆ ಮತ್ತು ಧ್ವಜಗಳ ಮೇಲೆ ಬಿದ್ದ ಶಸ್ತ್ರಗಳ ಶಬ್ದವು ಪರ್ವತದ ಮೇಲೆ ಬಿದ್ದ ಶಿಲೆಗಳ ಶಬ್ದದಂತೆ ಇದ್ದಿತು.

ಪತಿತಾನ್ಯುತ್ತಮಾಂಗಾನಿ ಬಾಹವಶ್ಚ ವಿಭೂಷಿತಾಃ ।
ವ್ಯಚೇಷ್ಟಂತ ಮಹೀಂ ಪ್ರಾಪ್ಯ ತತೋಽಥ ಸಹಸೈವ ಹಃ ॥೯॥

ಕತ್ತರಿಸಲ್ಪಟ್ಟ ಶಿರಸ್ಸುಗಳು ಮತ್ತು ಅಲಂಕೃತವಾದ ಬಾಹುಗಳು ಭೂಮಿಯ ಮೇಲೆ ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಉರುಳಾಡಿದವು.

ಹೃತೋತ್ತಮಾಂಗಾಃ ಕೇಚಿತ್ತು ತಥೈವೋದ್ಯತಕಾರ್ಮುಕಾಃ ।
ಪ್ರಗೃಹೀತಾಯುಧಾಶ್ಚಾಪಿ ತಸ್ಥುಃ ಪುರುಷಸತ್ತಮಾಃ ॥೧೦॥

ಕೆಲವು ಪುರುಷಶ್ರೇಷ್ಠರು ಶಿರಸ್ಸು ಕತ್ತರಿಸಿ ಹೋಗಿದ್ದರೂ ಕೈಯಲ್ಲಿ ಎತ್ತಿದ ಧನುಸ್ಸನ್ನು ಹಿಡಿದು ಮತ್ತು ಆಯುಧಗಳನ್ನು ಹಿಡಿದು ಹಾಗೆಯೇ ನಿಂತಿದ್ದರು.

ಪ್ರಾವರ್ತತ ಮಹಾವೇಗಾ ನದೀ ರುಧಿರವಾಹಿನೀ ।
ಮಾತಂಗಾಂಗಶಿಲಾ ರೌದ್ರಾ ಮಾಂಸಶೋಣಿತವರ್ದಮಾ ॥೧೧॥

ವರಾಶ್ವನರನಾಗಾನಾಂ ಶರೀರಪ್ರಭವಾ ತದಾ ।
ಪರಲೋಕಾರ್ಣವಮುಖೇ ಗೃಧ್ರಗೋಮಾಯುಮೋದಿನೀ ॥೧೨॥

ಗಜಗಳ ಅಂಗಗಳೆಂಬ ಶಿಲೆಗಳುಳ್ಳ, ಮಾಂಸ-ರಕ್ತವೆಂಬ ಕೆಸರುಳ್ಳ, ಶ್ರೇಷ್ಠವಾದ, ಅಶ್ವ-ಗಜ-ಮನುಷ್ಯರ ಶರೀರದಿಂದ ಉಂಟಾದ, ಪರಲೋಕವೆಂಬ ಸಮುದ್ರಕ್ಕೆ ಅಭಿಮುಖವಾದ, ಹದ್ದು-ನರಿಗಳಿಗೆ ಸಂತೋಷವನ್ನು ಕೊಡುವ ಭಯಂಕರವಾದ ರಕ್ತವಾಹಿನಿಯಾದ ನದಿಯು ಮಹಾವೇಗದಿಂದ ಹರಿಯಿತು.

ನ ದೃಷ್ಟಂ ನ ಶ್ರುತಂ ಚಾಪಿ ಯುದ್ಧಮೇತಾದೃಶಂ ನೃಪ ।
ಯಥಾ ತವ ಸುತಾನಾಂ ಚ ಪಾಂಡವಾನಾಂ ಚ ಭಾರತ ॥೧೩॥

ಎಲೈ ಭಾರತನೇ, ರಾಜನೇ, ನಿನ್ನ ಮಕ್ಕಳಿಗೂ ಮತ್ತು ಪಾಂಡವರಿಗೂ ನಡೆದ ಇಂತಹ ಯುದ್ಧಕ್ಕೆ ಸದೃಶವಾದ ಯುದ್ಧವನ್ನು ಹಿಂದೆ ಯಾರೂ ನೋಡಿರಲಿಲ್ಲ ಅಥವಾ ಕೇಳಿರಲಿಲ್ಲ.

ನಾಪೀದ್ ರಥಪಥಸ್ತತ್ರ ಯೋದ್ಧೃಯೋಧಿ ನಿಪಾತಿತೈಃ ।
ಗಜೈಶ್ಚ ಪತಿತೈರ್ನೀಲೈರ್ಗಿರಿಶೃಂಗೈರಿವಾವೃತಮ್ ॥೧೪॥

ನೆಲದ ಮೇಲೆ ಉರುಳಿದ ಯೋಧರ ಶರೀರದಿಂದಲೂ, ನೀಲ ಪರ್ವತಗಳ ಶಿಖರದಂತಿದ್ದ ಗಜ-ಶರೀರಗಳಿಂದಲೂ ಆವೃತವಾದ ರಣಭೂಮಿಯಲ್ಲಿ ಅಲ್ಲಿ ರಥಮಾರ್ಗವೇ ಇರಲಿಲ್ಲ.

ವಿಚಿತ್ರೈಃ ಕವಚೈಶ್ಚಿತ್ರೈರ್ಧ್ವಜೈಶ್ಚಿತ್ರೈಶ್ಚ ಮಾರಿಷ ।
ಶುಶುಭೇ ತದ್ರಣಸ್ಥಾನಂ ಶರದೀವ ನಭಸ್ತಲಮ್ ॥೧೫॥

ಎಲೈಪೂಜ್ಯನೇ, ಚೆಲ್ಲಾಡಿದ ಕವಚಗಳಿಂದಲೂ, ವಿಚಿತ್ರ ಧ್ವಜ-ಛತ್ರಗಳಿಂದಲೂ ಕೂಡಿದ ಆ ರಣರಂಗವು ಶರತ್ಕಾಲದ ಆಕಾಶದಂತೆ ಶೋಭಿಸಿತು.

ವಿನಿರ್ಭಿನ್ನಾಃ ಶರೈಃ ಕೇಚಿದಂತ್ರಪೀಡಾವಿಕರ್ಷಿಣಃ ।
ಅಛಿನ್ನಾಃ ಸಮರೇ ಶತ್ರೂನಭ್ಯಧಾವಂತ ದಂಶಿತಾಃ ॥೧೬॥

ಕೆಲವರು ಶತ್ರುಗಳ ಬಾಣದಿಂದ ಗಾಯಗೊಂಡು ಕತ್ತರಿಸಿದ ತಲೆಗಳನ್ನು ಕರುಳಿನ ಮಾಲೆಗಳಿಂದ ಎಳೆದು ಹಾಕುತ್ತಾ ಶಸ್ತ್ರಕವಚಯುಕ್ತರಾಗಿ ನಿರ್ಭಯರಾಗಿ ಶತ್ರುಗಳ ಮೇಲೆ ಎರಗುತ್ತಿದ್ದರು.

ತಾತ ಭ್ರಾತಃ ಸಖೇ ಬಂಧೋ ವಯಸ್ಯ ಮಮ ಮಾತುಲ ।
ಮಾ ಮಾಂ ಪರಿತ್ಯಜೇತ್ಯನ್ಯೇ ಚುಕ್ರುಶುಃ ಪತಿತಾ ರಣೇ ॥೧೭॥

ತಂದೆಯೇ, ಸಹೋದರನೇ, ಸ್ನೇಹಿತನೇ, ಬಂಧುವೇ, ಮಿತ್ರನೇ, ನನ್ನ ಸೋದರ ಮಾವನೇ, ನನ್ನನ್ನು ಪರಿತ್ಯಜಿಸಬೇಡ ಎಂದು ರಣರಂಗದಲ್ಲಿ ಕೆಳಗೆ ಬಿದ್ದವರು ಕಿರುಚುತ್ತಿದ್ದರು.

ಅಥಾವಾಚ್ಯೇಽಹಂ ಮಾ ಗಚ್ಛ ಕಿಂ ಭೀತೋಽಸಿ ಕ್ವ ಯಾಸ್ಯಸಿ ।
ಸ್ಥಿತೋಽಹಂ ಸಮರೇ ಮಾ ಭೈರಿತಿ ಚಾನ್ಯೇ ಏಚುಕ್ರುಶುಃ ॥೧೮॥

ಇನ್ನು ಕೆಲವರು ಓಡಿ ಬಾ, ಸಮೀಪಕ್ಕೆ ಬಾ, ಹೋಗಬೇಡ, ಹೆದರಿದ್ದೀಯಾ? ಎಲ್ಲಿಗೆ ಹೋಗುವಿ? ನಾನು ರಣರಂಗದಲ್ಲಿ ಸ್ಥಿರವಾಗಿದ್ದೇನೆ, ಹೆದರಬೇಡ ಎಂದು ಕಿರುಚುತ್ತಿದ್ದರು.

ತತ್ರ ಭೀಷ್ಮಃ ಶಾಂತನವೋ ನಿತ್ಯಂ ಮಂಡಲಕಾರ್ಮುಕಃ ।
ಮುಮೋಚ ಬಾಣಾನ್ ದೀಪ್ತಾಗ್ರಾನಹೀನಾಶೀವಿಷಾನಿವ ॥೧೯॥

ಆ ರಣರಂಗದಲ್ಲಿ ಶಂತನು ಪುತ್ರರಾದ ಭೀಷ್ಮರು ತಮ್ಮ ಧನುಸ್ಸನ್ನು ಯಾವಾಗಲೂ ಮಂಡಲಾಕಾರವಾಗಿ ಬಗ್ಗಿಸಿ ದೃಷ್ಟಿವಿಷವುಳ್ಳ ಸರ್ಪದಂತಿದ್ದ ಪ್ರಕಾಶಮಾನವಾದ ಬಾಣಗಳನ್ನು ಪ್ರಯೋಗಿಸಿದರು.

ಶರೈರೇಕಾಯನೀಕುರ್ವನ್ ದಿಶಃ ಸರ್ವಾ ಯತವ್ರತಃ ।
ಜಘಾನ ಪಾಂಡವರಥಾನಾದಿಶ್ಯಾದಿಶ್ಯ ಭಾರತ ॥೨೦॥

ಎಲೈ ಭಾರತನೇ, ನಿಯತವ್ರತವುಳ್ಳ ಅವರು ಎಲ್ಲ ದಿಕ್ಕುಗಳನ್ನೂ ತಮ್ಮ ಬಾಣಗಳಿಂದ ಒಂದುಗೂಡಿಸುತ್ತಾ (ಒಂದೇ ರೀತಿಯಾಗಿ ಮಾಡುತ್ತಾ) ಪಾಂಡವರ ರಥರನ್ನು ಹೇಳಿ, ಹೇಳಿ ಕೊಂದರು.

ಸ ನೃತ್ಯನ್ ವೈ ರಥೋಪಸ್ಥೇ ದರ್ಶಯನ್ ಪಾಣಿಲಾಘವಮ್ ।
ಅಲಾತಚಕ್ರವದ್ ರಾಜನ್ ತತ್ರತತ್ರ ಸ್ಮ ದೃಶ್ಯತೇ ॥೨೧॥

ಎಲೈ ರಾಜನೇ, ಅವರು ರಥದ ಮುಂಭಾಗದಲ್ಲಿ ನೃತ್ಯವನ್ನು ಮಾಡುತ್ತಾ, ತಮ್ಮ ಹಸ್ತಲಾಘವವನ್ನು ತೋರಿಸುತ್ತಾ, ಅಲಾತಚಕ್ರದಂತೆ (ಕೊಳ್ಳಿಯ ಚಕ್ರದಂತೆ) ಎಲ್ಲ ಕಡೆಯಲ್ಲಿಯೂ ಕಂಡುಬಂದರು.

ತಮೇಕಂ ಸಮರೇ ಶೂರಂ ಪಾಂಡವಾಃ ಸೃಂಜಯಾಸ್ತಥಾ ।
ಅನೇಕಶತಸಾಹಸ್ರಂ ಸಮಪಶ್ಯಂತ ಲಾಘವಾತ್ ॥೨೨॥

ಆ ಒಬ್ಬರು ಶೂರರಾದ ಭೀಷ್ಮರನ್ನೇ ಪಾಂಡವರು ಮತ್ತು ಸೃಂಜಯರು ಅವರ ವೇಗದಿಂದ (ಲಾಘವದಿಂದ) ಅನೇಕಶತಸಹಸ್ರರೆಂದು ತಿಳಿದರು.

ಮಾಯಾಕೃತಾತ್ಮಾನಮಿವ ಭೀಷ್ಮಂ ತತ್ರ ಸ್ಮ ಮೇನಿರೇ ।
ಪೂರ್ವಸ್ಯಾಂ ದಿಶಿ ತಂ ದೃಷ್ಟ್ವಾ ಪ್ರತೀಚ್ಯಾಂ ದದೃಶುರ್ಜನಾಃ ॥೨೩॥

ಉದೀಚ್ಯಾಂ ಚೈನಮಾಲೋಕ್ಯ ದಕ್ಷಿಣಸ್ಯಾಂ ಪುನಃ ಪ್ರಭೋ ।
ಏವಂ ಸ ಸಮರೇ ವೀರೋ ಗಾಂಗೇಯಃ ಪ್ರತ್ಯದೃಶ್ಯತ ॥೨೪॥

ಮಾಯೆಯಿಂದ ಭೀಷ್ಮರು ತಮ್ಮನ್ನು ಬಹುವಾಗಿ ಮಾಡಿಕೊಂಡಿದ್ದಾರೆ ಎಂದು ತಿಳಿದರು. ಪೂರ್ವದಿಕ್ಕಿನಲ್ಲಿ ಅವರನ್ನು ನೋಡಿದ ಜನರು ಪುನಃ ಪಶ್ಚಿಮ ದಿಕ್ಕಿನಲ್ಲಿಯೂ ನೋಡಿದರು. ಎಲೈ ಪ್ರಭುವೇ, ಉತ್ತರದಿಕ್ಕಿನಲ್ಲಿ ಅವರನ್ನು ನೋಡಿ ಪುನಃ ದಕ್ಷಿಣ ದಿಕ್ಕಿನಲ್ಲಿಯೂ ನೋಡಿದರು. ವೀರರಾದ ಭೀಷ್ಮರು ರಣರಂಗದಲ್ಲಿ ಹೀಗೆ ತೋರಿದರು.

ನ ಚೈನಂ ಪಾಂಡವೇಯಾನಾಂ ಕಶ್ಚಿಚ್ಚಕ್ನೋತಿ ವೀಕ್ಷಿತುಮ್ ।
ವಿಶಿಖಾನೇವ ಪಶ್ಯಂತಿ ಭೀಷ್ಮಚಾಪಚ್ಯುತಾನ್ ಬಹೂನ್ ॥೨೫॥

ಪಾಂಡವರ ಸೈನ್ಯದಲ್ಲಿ ಯಾವೊಬ್ಬನೂ ಭೀಷ್ಮರನ್ನು ನೋಡಲು ಸಾಧ್ಯವಾಗಲಿಲ್ಲ. ಭೀಷ್ಮರ ಧನುಸ್ಸಿನಿಂದ ಹೊರಹೊಮ್ಮಿದ ಅನೇಕ ಬಾಣಗಳು ಮಾತ್ರ ಕಾಣುತ್ತಿದ್ದವು.

ಕುರ್ವಾಣಂ ಸಮರೇ ಕರ್ಮ ಸೂದಯಾನಂ ಚ ವಾಹಿನೀಮ್ ।
ವ್ಯಾಕ್ರೋಶಂತ ರಣೇ ತತ್ರ ವೀರಾ ಬಹುವಿಧಂ ಬಹು ।
ಅಮಾನುಷೇಣ ರೂಪೇಣ ಚರಂತಂ ಪಿತರಂ ತವ ॥೨೬॥

ಯುದ್ಧದಲ್ಲಿ ಅದ್ಭುತ ಕರ್ಮವನ್ನು ಮಾಡಿ ಶತ್ರುಸೈನ್ಯವನ್ನು ನಾಶಮಾಡುತ್ತಾ ಅಮಾನುಷ ರೂಪದಿಂದ ಸಂಚರಿಸುತ್ತಿದ್ದ ನಿನ್ನ ತಂದೆಯನ್ನು ನೋಡಿ ರಣರಂಗದಲ್ಲಿ ವೀರರು ಬಹುವಿಧವಾಗಿ ಅನೇಕ ಬಾರಿ ಕಿರುಚಿದರು.

ಶಲಭಾ ಇವ ರಾಜಾನಃ ಪತಂತಿ ವಿಧಿಚೋದಿತಾಃ ।
ಭೀಷ್ಮಾಗ್ನಿಮಭಿ ಸಂಕ್ರುದ್ಧಂ ವಿನಾಶಾಯ ಸಹಸ್ರಶಃ ॥೨೭॥

ಪತಂಗಗಳಂತೆ ವಿಧಿಚೋದಿತರಾದ ರಾಜರು ಕೋಪಗೊಂಡ ಭೀಷ್ಮರೆಂಬ ಅಗ್ನಿಯ ಮುಖದಲ್ಲಿ ಸಹಸ್ರ ಸಂಖ್ಯೆಯಲ್ಲಿ ತಮ್ಮ ವಿನಾಶಕ್ಕಾಗಿ ಬಿದ್ದರು.

ನ ಹಿ ಮೋಘಃ ಶರಃ ಕಶ್ಚಿದಾಸೀದ್ ಭೀಷ್ಮಸ್ಯ ಸಂಯುಗೇ ।
ನರನಾಗಾಶ್ವಕಾಯೇಷು ಬಹುತ್ವಾಲ್ಲಘುವೇಧಿನಃ ॥೨೮॥

ಗಜ, ಮನುಷ್ಯ ಮತ್ತು ಅಶ್ವಗಳ ಶರೀರಗಳನ್ನು ಉದ್ದೇಶಿಸಿ ಭೀಷ್ಮರು ಪ್ರಯೋಗಿಸಿದ ಬಹುಬಾಣಗಳಲ್ಲಿ ಕ್ಷಿಪ್ರವಾಗಿ ಪ್ರಯೋಗಿಸುವ ಅವರ ಯಾವ ಬಾಣವೂ ವ್ಯರ್ಥವಾಗಲಿಲ್ಲ.

ಭಿನತ್ತ್ಯೇಕೇನ ಬಾಣೇನ ಸುಮುಕ್ತೇನ ಪತತ್ರಿಣಾ ।
ಗಜಕಂಕಟಸನ್ನಾಹಂ ವಜ್ರೀಣೇವಾಚಲೋತ್ತಮಮ್ ॥೨೯॥

ರೆಕ್ಕೆಗಳಿರುವ ಒಂದೇ ಬಾಣವನ್ನು ಚೆನ್ನಾಗಿ ಪ್ರಯೋಗಿಸಿ ವಜ್ರಾಯುಧದಿಂದ ಶ್ರೇಷ್ಠವಾದ ಪರ್ವತವನ್ನು ಸೀಳಿದಂತೆ ಗಜಗಳ ಸಮೂಹವನ್ನು ಅವರು ಸೀಳಿದರು.

ದ್ವೌ ತ್ರೀನಪಿ ಗಜಾರೋಹಾನ್ ಪಿಂಡಿತಾನ್ ವರ್ಮಿತಾನಪಿ ।
ನಾರಾಚೇನ ಸುತೀಕ್ಷ್ಣೇನ ನಿಜಘಾನ ಪಿತಾ ತವ ॥೩೦॥

ಇಬ್ಬರು ಅಥವಾ ಮೂವರು ಗಜಾರೋಹಿಗಳು ಕವಚಗಳನ್ನು ಧರಿಸಿ ಒಟ್ಟಿಗೇ ಬಂದರೂ ತೀಕ್ಷ್ಣವಾದ ಒಂದೇ ನಾರಾಚದಿಂದ ನಿನ್ನ ತಂದೆಯು ಅವರನ್ನು ಸಂಹರಿಸಿದರು.

ಯೋ ಯೋ ಭೀಷ್ಮಂ ನರವ್ಯಾಘ್ರಮಭ್ಯೇತಿ ಯುಧಿ ಕಶ್ಚನ ।
ಮುಹೂರ್ತದೃಷ್ಟಃ ಸ ಮಯಾ ಪಾತಿತೋ ಭುವಿ ದೃಶ್ಯತೇ ॥೩೧॥

ಯಾರು ಯಾರು ನರವ್ಯಾಘ್ರರಾದ ಭೀಷ್ಮರ ಜೊತೆಯಲ್ಲಿ ಯುದ್ಧ ಮಾಡಲು ರಣರಂಗದಲ್ಲಿ ಅವರ ಸಮೀಪಕ್ಕೆ ಬರುತ್ತಾರೆಯೋ ಅವರನ್ನು ನಾನು ಒಂದು ಮುಹೂರ್ತ ನೋಡುವಷ್ಟರಲ್ಲಿ ಅವರು ಭೂಮಿಯ ಮೇಲೆ ಬಿದ್ದಿರುವುದು ಕಂಡು ಬರುತ್ತಿದ್ದಿತು.

ಏವಂ ಸಾ ಧರ್ಮರಾಜಸ್ಯ ವರ್ಧಮಾನಾ ಮಹಾಚಮೂಃ ।
ಭೀಷ್ಮೇಣಾತುಲವೀರ್ಯೇಣ ವ್ಯಶೀರ್ಯತ ಸಹಸ್ರಧಾ ॥೩೨॥

ಹೀಗೆ ಅತುಲ ಪರಾಕ್ರಮಿಗಳಾದ ಭೀಷ್ಮರಿಂದ ವಧಿಸಲ್ಪಟ್ಟ ಧರ್ಮರಾಜನ ದೊಡ್ಡ ಸೈನ್ಯವು ಸಾವಿರ ಪಾಲಾಗಿ ಓಡಿದು ಹೋಯಿತು.

ಪ್ರಕೀರ್ಯತ ಮಹಾಸೇನಾ ಶರವರ್ಷಾಭಿತಾಪಿತಾ ।
ಪಶ್ಯತೋ ವಾಸುದೇವಸ್ಯ ಪಾರ್ಥಸ್ಯ ಚ ಮಹಾತ್ಮನಃ ॥೩೩॥

ಭೀಷ್ಮರ ಬಾಣದ ಮಳೆಗೆ ತತ್ತರಿಸಿದ ಆ ಮಹಾಸೈನ್ಯವು ಮಹಾತ್ಮರಾದ ಕೃಷ್ಣಾರ್ಜುನರು ನೋಡುತ್ತಿರುವಂತೆಯೇ ಚದುರಿ ಹೋಯಿತು.

ಯತಮಾನಾಪಿ ತೇ ವೀರಾ ದ್ರವಮಾಣಾನ್ ಮಹಾರಥಾನ್ ।
ನಾಶಕ್ನುವನ್ ವಾರಯಿತುಂ ಭೀಷ್ಮಬಾಣಪ್ರಪೀಡಿತಾನ್ ॥೩೪॥

ಆ ವೀರರು ಓಡಿ ಹೋಗುತ್ತಿದ್ದ ಮಹಾರಥರನ್ನು ನಿಲ್ಲಿಸಲು ಪ್ರಯತ್ನಪಟ್ಟರೂ ಭೀಷ್ಮರ ಬಾಣಗಳಿಂದ ಚೆನ್ನಾಗಿ ಪೀಡಿತರಾದ ಅವರನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ.

ಮಹೇಂದ್ರಸಮವೀರ್ಯೇಣ ವಧ್ಯಮಾನಾ ಮಹಾಚಮೂಃ ।
ಅಭಜ್ಯತ ಮಹಾರಾಜ ನ ಚ ದ್ವೌ ಸಹ ಧಾವತಃ ॥೩೫॥

ಎಲೈ ಮಹಾರಾಜನೇ, ಮಹೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಭೀಷ್ಮರಿಂದ ವಧಿಸಲ್ಪಟ್ಟ ಆ ದೊಡ್ಡ ಸೈನ್ಯವು ಓಡಿದು ಹೋಯಿತು. ಯಾರಿಬ್ಬರೂ ಜೊತೆಯಲ್ಲಿ ಓಡುತ್ತಿರಲಿಲ್ಲ.

ಆವಿದ್ಧನರನಾಗಾಶ್ವಂ ಪತಿತಧ್ವಜಕೂಬರಮ್ ।
ಅನೀಕಂ ಪಾಂಡುಪುತ್ರಾಣಾಂ ಹಾಹಾಭೂತಮಚೇತನಮ್ ॥೩೬॥

ಬಹಳವಾಗಿ ಪ್ರಹಾರವನ್ನು ಹೊಂದಿದ ನರನಾಗಾಶ್ವವನ್ನುಳ್ಳ ಧ್ವಜಗಳಿಂದ ಮತ್ತು ನೆಲಕ್ಕುರುಳಿದ ಕೂಬರಗಳಿಂದ ಕೂಡ ಪಾಂಡುಪುತ್ರರ ಸೈನ್ಯವು ಸಂಜ್ಞೆಯನ್ನು ಕಳೆದುಕೊಂಡು ಹಾಹಾಕಾರವನ್ನು ಮಾಡಿತು.

ಜಘಾನಾತ್ರ ಪಿತಾ ಪುತ್ರಂ ಪುತ್ರಶ್ಚ ಪಿತರಂ ತಥಾ ।
ಪ್ರಿಯಂ ಸಖಾಯಂ ಚಾಕ್ರಂದೇ ಸಖಾ ದೈವಬಲಾತ್‌ಕೃತಃ ॥೩೭॥

ಆ ರಣರಂಗದಲ್ಲಿ ತಂದೆಯು ಮಗನನ್ನು ಸಂಹರಿಸಿದನು, ಹಾಗೆಯೇ ಪುತ್ರನು ತಂದೆಯನ್ನು ಸಂಹರಿಸಿದನು. ಎಲ್ಲರೂ ನೋವಿನಿಂದ ಕಿರುಚುತ್ತಿದ್ದ ಆ ರಣರಂಗದಲ್ಲಿ ವಿಧಿವಶನಾಗಿ ಸ್ನೇಹಿತನು ತನ್ನ ಪ್ರಿಯಮಿತ್ರನನ್ನೇ ಕೊಂದನು.

ವಿಮುಚ್ಯ ಕವಚಾನನ್ಯೇ ಪಾಂಡುಪುತ್ರಸ್ಯ ಸೈನಿಕಾಃ ।
ಪ್ರಕೀರ್ಯ ಕೇಶಾನ್ ಧಾವಂತಃ ಪ್ರತ್ಯದೃಶ್ಯಂತ ಭಾರತ ॥೩೮॥

ಎಲೈ ಭಾರತನೇ, ಪಾಂಡುಪುತ್ರನ ಇನ್ನು ಕೆಲವು ಸೈನಿಕರು ಕವಚಗಳನ್ನು ಬಿಚ್ಚಿ ತಲೆಕೂದಲುಗಳನ್ನು ಕೆದರಿಕೊಂಡು ಓಡುತ್ತಿರುವುದು ಕಂಡುಬಂದಿತು.

ತದ್ಗೋಕುಲಮಿವೋದ್ಭ್ರಾಂತಮುದ್ಭ್ರಾಂತರಥಯೂಥಪಮ್ ।
ದದೃಶೇ ಪಾಂಡುಪುತ್ರಸ್ಯ ಸೈನ್ಯಮಾರ್ತಸ್ವರಂ ತದಾ ॥೩೯॥

ಗಾಬರಿಗೊಳಗಾದ ಗೋ-ಸಮೂಹದಂತೆ ಬಹಳವಾಗಿ ಗಾಬರಿಗೊಂಡ ರಥಯೂಥಪರನ್ನು ಹೊಂದಿದ ಪಾಂಡುಪುತ್ರರ ಸೈನ್ಯವು ಆರ್ತಸ್ವರವನ್ನು ಮಾಡುತ್ತಿರುವುದು ಆಗ ಕಂಡುಬಂದಿತು.

ಪ್ರಭಜ್ಯಮಾನಂ ತತ್ಸೈನ್ಯಂ ದೃಷ್ಟ್ವಾ ದೇವಕಿನಂದನಃ ।
ಉವಾಚ ಪಾರ್ಥಂ ಬೀಭತ್ಸುಂ ನಿಗೃಹ್ಯ ರಥಮುತ್ತಮಮ್ ॥೪೦॥

ಆ ಸೈನ್ಯವು ಹೀಗೆ ಭಗ್ನವಾಗುತ್ತಿರುವುದನ್ನು ನೋಡಿದ ದೇವಕಿನಂದನನಾದ ಕೃಷ್ಣನು ತನ್ನ ಶ್ರೇಷ್ಠವಾದ ರಥವನ್ನು ನಿಲ್ಲಿಸಿ ಅರ್ಜುನನನ್ನು ಕುರಿತು ಮಾತನಾಡಿದನು.

ಅಯಂ ಸ ಕಾಲಃ ಸಂಪ್ರಾಪ್ತಃ ಪಾರ್ಥ ಯಃ ಕಾಂಕ್ಷಿತಸ್ತ್ವಯಾ ।
ಪ್ರಹರಾಸ್ಮೈ ನರವ್ಯಾಘ್ರ ನ ಚೇನ್ಮೋಹಾದ್ ವಿಮುಹ್ಯಸೇ ॥೪೧॥

ಎಲೈ ಪಾರ್ಥನೇ, ನೀನು ಬಯಸುತ್ತಿದ್ದ ಕಾಲವು ಈಗ ಪ್ರಾಪ್ತವಾಗಿದೆ. ನರವ್ಯಾಘ್ರನೇ, ನೀನು ಮೋಹಕ್ಕೆ ಒಳಗಾಗದಿದ್ದರೆ ಈ ಭೀಷ್ಮರ ಮೇಲೆ ಪ್ರಹಾರವನ್ನು ಮಾಡು.

ಯತ್ ತ್ವಯಾ ಕಥಿತಂ ವೀರ ಪುರಾ ರಾಜ್ಞಾಂ ಸಮಾಗಮೇ ।
ಭೀಷ್ಮದ್ರೋಣಮುಖಾನ್ ಸರ್ವಾನ್ ಧಾರ್ತರಾಷ್ಟ್ರಸ್ಯ ಸೈನಿಕಾನ್ ॥೪೨॥

ಸಾನುಬಂಧಾನ್ ಹನಿಷ್ಯಾಮಿ ಯೇ ಮಾಂ ಯೋತ್ಸ್ಯಂತಿ ಸಂಯುಗೇ ।
ಇತಿ ತತ್ಕುರು ಕೌಂತೇಯ ಸತ್ಯಂ ವಾಕ್ಯಮರಿಂದಮ ॥೪೩॥

ಎಲೈ ವೀರನೇ, ನೀನು ಹಿಂದೆ ರಾಜರ ಸಮುದಾಯದಲ್ಲಿ ನನ್ನ ಜೊತೆಯಲ್ಲಿ ಯುದ್ಧಮಾಡುವ ಭೀಷ್ಮ-ದ್ರೋಣರೇ ಮೊದಲಾದ ದುರ್ಯೋಧನನ ಸೈನಿಕರೆಲ್ಲರನ್ನೂ ಅವರ ಪರಿವಾರದೊಡನೆ ಕೊಲ್ಲುವೆನು ಎಂದು ಹೇಳಿದ್ದೆಯಷ್ಟೆ? ಎಲೈ ಕೌಂತೇಯನೆ, ಅರಿಂದಮನೇ, ಆ ಮಾತನ್ನು ಈಗ ಸತ್ಯವನ್ನಾಗಿ ಮಾಡು.

ಬೀಭತ್ಸೋ ಪಶ್ಯ ಸೈನ್ಯಂ ಸ್ವಂ ಭಜ್ಯಮಾನಂ ಸಮಂತತಃ ।
ದ್ರವತಶ್ಚ ಮಹೀಪಾಲಾನ್ ಸರ್ವಾನ್ ಯೌಧಿಷ್ಠಿರೇ ಬಲೇ ॥೪೪॥

ಎಲೈ ಬೀಭತ್ಸುವೇ, ನಿನ್ನ ಸೈನ್ಯವು ಎಲ್ಲ ಕಡೆಗಳಲ್ಲಿಯೂ ಭಗ್ನವಾಗುತ್ತಿರುವುದನ್ನು ನೋಡು. ಧರ್ಮರಾಜನ ಸೈನ್ಯದಲ್ಲಿ ಎಲ್ಲ ರಾಜರೂ ಓಡುತ್ತಿರುವುದನ್ನೂ ನೋಡು.

ದೃಷ್ಟ್ವಾ ಹಿ ಸಮರೇ ಭೀಷ್ಮಂ ವ್ಯಾತ್ತಾನನಮಿವಾಂತಕಮ್ ।
ಭಯಾರ್ತಾಃ ಸಂಪ್ರಣಶ್ಯಂತಿ ಸಿಂಹಂ ಕ್ಷುದ್ರಮೃಗಾ ಇವ ॥೪೫॥

ಬಾಯನ್ನು ತೆರೆದ ಅಂತಕನಂತಿರುವ ಭೀಷ್ಮರನ್ನು ಯುದ್ಧದಲ್ಲಿನೋಡಿ ಭಯದಿಂದ ಕೂಡಿದ ಯೋಧರು ಸಿಂಹವನ್ನು ನೋಡಿದ ಕ್ಷುದ್ರಮೃಗಗಳಂತೆ ನಾಶವನ್ನು ಹೊಂದುತ್ತಿದ್ದಾರೆ.

ವಿವಮುಕ್ತಃ ಪ್ರತ್ಯುವಾಚ ವಾಸುದೇವಂ ಧನಂಜಯಃ ।
ಚೋದಯಾಶ್ವಾನ್ ಯತೋ ಭೀಷ್ಮೋ ವಿಗಾಹ್ಯೈತದ್ ಬಲಾರ್ಣವಮ್ ॥

ಹೀಗೆ ವಾಸುದೇವನಿಂದ ಹೇಳಲ್ಪಟ್ಟ ಧನಂಜಯನು, ಅವನನ್ನು ಕುರಿತು ಭೀಷ್ಮರು ಎಲ್ಲಿದ್ದಾರೆಯೋ ಅಲ್ಲಿಗೆ ಈ ಸೈನ್ಯವೆಂಬ ಸಾಗರವನ್ನು ಪ್ರವೇಶಿಸಿ ನನ್ನ ಅಶ್ವಗಳನ್ನು ಕೊಂಡೊಯ್ಯುವವನಾಗು ಎಂದು ಹೇಳಿದನು.

ತತೋಽಶ್ವಾನ್ ರಜತಪ್ರಖ್ಯಾಂಶ್ಚೋದಯಾಮಾಸ ಮಾಧವಃ ।
ಯತೋ ಭೀಷ್ಮರಥೋ ರಾಜನ್ ದುಷ್ಪ್ರೇಕ್ಷ್ಯೋ ರಶ್ಮಿಮಾನಿವ ॥೪೭॥

ಎಲೈ ರಾಜನೇ, ಆಗ ಮಾಧವನು ಸೂರ್ಯನಂತೆ ನೋಡಲು ಅಸಾಧ್ಯವಾಗಿದ್ದ ಭೀಷ್ಮರಥವಿದ್ದ ಕಡೆಗೆ ಅರ್ಜುನನ ಬೆಳ್ಳಿ ಬಣ್ಣದ ಕುದುರೆಗಳನ್ನು ಪ್ರಚೋದಿಸಿದನು.

ತತಸ್ತತ್ಪುನರಾವೃತ್ತಂ ಯುಧಿಷ್ಠಿರಬಲಂ ಮಹತ್ ।
ದೃಷ್ಟ್ವಾ ಪಾರ್ಥಂ ಮಹಾಬಾಹುಂ ಭೀಷ್ಮಾಯೋದ್ಯಂತಮಾಹವೇ ॥೪೮॥

ಮಹಾಬಾಹುವಾದ ಅರ್ಜುನನು ಯುದ್ಧದಲ್ಲಿ ಭೀಷ್ಮರ ಕಡೆಗೆ ಧಾವಿಸುವುದನ್ನು ನೋಡಿ ಆ ಯುಧಿಷ್ಠಿರನ ದೊಡ್ಡ ಸೈನ್ಯವು ಹಿಂದಿರುಗಿತು.

ತತೋ ಭೀಷ್ಮಃ ಕುರುಶ್ರೇಷ್ಠಃ ಸಿಂಹವದ್ ವಿನದನ್ ಮುಹುಃ ।
ಧನಂಜಯರಥಂ ತೂರ್ಣಂ ಶರವರ್ಷೈರವಾಕಿರತ್ ॥೪೯॥

ಆಗ ಕುರುಶ್ರೇಷ್ಠರಾದ ಭೀಷ್ಮರು ಸಿಂಹದಂತೆ ಪುನಃ ಪುನಃ ಗರ್ಜಿಸುತ್ತಾ ಅರ್ಜುನನ ರಥದ ಮೇಲೆ ಶೀಘ್ರವಾಗಿ ಬಾಣಗಳ ಮಳೆಯನ್ನು ಕರೆದರು.

ಕ್ಷಣೇನ ಸ ರಥಸ್ತಸ್ಯ ಸಹಯಃ ಸಹಸಾರಥಿಃ ।
ಶರವರ್ಷೇಣ ಮಹತಾ ಸಂವೃತ್ತೋ ನ ಪ್ರಕಾಶತೇ ॥೫೦॥

ಅಶ್ವ ಮತ್ತು ಸಾರಥಿಯಿಂದ ಕೂಡಿದ ಆ ರಥವು ಭೀಷ್ಮರು ಪ್ರಯೋಗಿಸಿದ ಬಾಣಗಳ ಮಳೆಯಿಂದ ಒಂದು ಕ್ಷಣದಲ್ಲಿ ಆವೃತವಾಗಿ ಕಾಣದಾಯಿತು.

ವಾಸುದೇವಸ್ತ್ವಸಂಭ್ರಾಂತೋ ಧೈರ್ಯಮಾಸ್ಥಾಯ ಸತ್ತ್ವವಾನ್ ।
ಚೋದಯಾಮಾಸ ತಾನಶ್ವಾನ್ ವಿತುನ್ನಾನ್ ಭೀಷ್ಮಸಾಯಕೈಃ ॥೫೧॥

ಧೈರ್ಯಶಾಲಿಯಾದ ವಾಸುದೇವನು ಧೈರ್ಯವನ್ನು ಅವಲಂಬಿಸಿ ಗಾಬರಿಗೊಳ್ಳದೆ ಭೀಷ್ಮರ ಬಾಣದಿಂದ ಪೀಡಿತವಾದ ಅರ್ಜುನನ ಆ ಅಶ್ವಗಳನ್ನು ಮುಂದೆ ನಡೆಸಿದನು.

ತತಃ ಪಾರ್ಥೋ ಧನುರ್ಗೃಹ್ಯ ದಿವ್ಯಂ ಜಲದನಿಸ್ವನಮ್ ।
ಪಾತಯಾಮಾಸ ಭೀಷ್ಮಸ್ಯ ಧನುಶ್ಚಿತ್ತ್ವಾ ತ್ರಿಭಿಃ ಶರೈಃ ॥೫೨॥

ಆಗ ಮೋಡದಂತೆ ಗರ್ಜಿಸುವ ತನ್ನ ದಿವ್ಯವಾದ ಧನುಸ್ಸನ್ನು ತೆಗೆದುಕೊಂಡು ಅರ್ಜುನನು ಮೂರುಬಾಣಗಳನ್ನು ಪ್ರಯೋಗಿಸಿ ಭೀಷ್ಮರ ಧನುಸ್ಸನ್ನು ಕತ್ತರಿಸಿ ನೆಲಕ್ಕೆ ಬೀಳಿಸಿದನು.

ಸ ಚ್ಚಿನ್ನಧನ್ವಾ ಕೌರವ್ಯಃ ಪುನರನ್ಯನ್ಮಹದ್ಧನುಃ ।
ನಿಮೇಷಾಂತರಮಾತ್ರೇಣ ಸಜ್ಯಂ ಚಕ್ರೇ ಪಿತಾ ತವ ॥೫೩॥

ನಿನ್ನ ತಂದೆಯಾದ ಭೀಷ್ಮರು ತಮ್ಮ ಧನುಸ್ಸು ಕತ್ತರಿಸಲ್ಪಡಲು ಇನ್ನೊಂದು ದೊಡ್ಡ ಧನುಸ್ಸನ್ನು ತೆಗೆದುಕೊಂಡು ಕಣ್ಣುಮುಚ್ಚಿ ಬಿಡುವಷ್ಟರಲ್ಲಿ ಅದಕ್ಕೆ ಹೆದೆ ಏರಿಸಿದರು.

ವಿಚಕರ್ಷ ತತೋ ದೋರ್ಭ್ಯಾಂ ಧನುರ್ಜಲದನಿಸ್ವನಮ್ ।
ಅಥಾಸ್ಯ ತದಪಿ ಕ್ಷುದ್ರಚ್ಛೇದ ಧನುರರ್ಜುನಃ ॥೫೪॥

ಮೇಘಗರ್ಜನೆಯನ್ನು ಹೊಂದಿದ್ದ ಆ ಧನುಸ್ಸನ್ನು ಎರಡು ತೋಳುಗಳಿಂದಲೂ ಎಳೆದರು. ಕೋಪಗೊಂಡ ಅರ್ಜುನನು ಆ ಧನುಸ್ಸನ್ನೂ ಕತ್ತರಿಸಿದನು.

ತಸ್ಯ ತತ್ ಪೂಜಯಾಮಾಸ ಲಾಘವಂ ಶಂತನೋಃ ಸುತಃ ।
ಸಾಧು ಪಾರ್ಥ ಮಹಾಬಾಹೋ ಸಾಧು ಭೋ ಪಾಂಡುನಂದನ ॥೫೫॥

ಅರ್ಜುನನ ಆ ಚುರುಕುತನವನ್ನು ಶಂತನು ಪುತ್ರರಾದ ಭೀಷ್ಮರು ಗೌರವಿಸಿದರು. ಮಹಾಬಾಹುವಾದ ಅರ್ಜುನನೇ, ಸಾಧು. ಎಲೈ ಪಾಂಡುನಂದನನೇ, ಸಾಧು.

ತ್ವಯ್ಯೇವೈತದ್ ಯುಕ್ತರೂಪಂ ಮಹತ್ ಕರ್ಮ ಧನಂಜಯ ।
ಪ್ರೀತೋಽಸ್ಮಿ ಸುದೃಢಂ ಪುತ್ರ ಕುರು ಯುದ್ಧಂ ಮಯಾ ಸಹ ॥೫೬॥

ಧನಂಜಯನೇ, ಇಂತಹ ಮಹತ್ಕಾರ್ಯವು ನಿನಗೇ ಯೋಗ್ಯವಾಗಿದೆ. ಪುತ್ರನೇ, ನಾನು ಬಹಳವಾಗಿ ಸಂತೋಷಗೊಂಡಿದ್ದೇನೆ. ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡು.

ಇತಿ ಪಾರ್ಥಂ ಪ್ರಶಸ್ಯಾಥ ಪ್ರಗೃಹ್ಯಾನ್ಯನ್ಮಹದ್ಧನುಃ ।
ಮುಮೋಚ ಸಮರೇ ವೀರಃ ಶರಾನ್ ಪಾರ್ಥರಥಂ ಪ್ರತಿ ॥೫೭॥

ಹೀಗೆ ಅರ್ಜುನನನ್ನು ಪ್ರಶಂಸಿಸಿ, ಇನ್ನೊಂದು ದೊಡ್ಡದಾದ ಧನುಸ್ಸನ್ನು ತೆಗೆದುಕೊಂಡು ವೀರರಾದ ಅವರು ಅರ್ಜುನನ ರಥದ ಮೇಲೆ ಬಾಣಗಳನ್ನು ಪ್ರಯೋಗಿಸಿದರು.

ಅದರ್ಶಯದ್ ವಾಸುದೇವೋ ಹಯಯಾನೇ ಪರಂ ಬಲಮ್ ।
ಮೋಘಾನ್ ಕುರ್ವನ್ ಶರಾಂಸ್ತಸ್ಯ ಮಂಡಲಾನ್ಯಚರಲ್ಲಘು ॥೫೮॥

ಕೃಷ್ಣನು ಕ್ಷಿಪ್ರವಾಗಿ ಮಂಡಲಗಳಲ್ಲಿ ಸಂಚರಿಸಿ ಭೀಷ್ಮರ ಬಾಣಗಳನ್ನು ವ್ಯರ್ಥವನ್ನಾಗಿ ಮಾಡಿ ಸಾರಥ್ಯದಲ್ಲಿ ತನ್ನ ನಿಸ್ಸೀಮ ಕೌಶಲವನ್ನು ತೋರಿಸಿದನು.

ತಥಾಪಿ ಭೀಷ್ಮಃ ಸುದೃಢಂ ವಾಸುದೇವಧನಂಜಯೌ ।
ವಿವ್ಯಾಧ ನಿಶಿತೈರ್ಬಾಣೈಃ ಸರ್ವಗಾತ್ರೇಷು ಮಾರಿಷ ॥೫೯॥

ಎಲೈ ಪೂಜ್ಯನೇ, ಆದರೂ ಭೀಷ್ಮರು ಹರಿತವಾದ ಬಾಣಗಳಿಂದ ವಾಸುದೇವಾರ್ಜುನರನ್ನು ಶರೀರದಲ್ಲೆಲ್ಲಾ ಘಾಸಿಗೊಳಿಸಿದರು.

ಶುಶುಭಾತೇ ನರವ್ಯಾಘ್ರೌ ತೌ ಭೀಷ್ಮಶರವಿಕ್ಷತೌ ।
ಗೋವೃಷಾವಿವ ನರ್ದಂತೌ ವಿಷಾಣೋಲ್ಲಿಖಿತಾಂತಿತೌ ॥೬೦॥

ಭೀಷ್ಮರ ಬಾಣಗಳಿಂದ ಗಾಯಗೊಂಡ ಆ ಇಬ್ಬರು ನರಶ್ರೇಷ್ಠರು ಕೊಂಬುಗಳಿಂದ ಗಾಯಗೊಂಡು ಗರ್ಜಿಸುವ ಎರಡು ಗೂಳಿಗಳಂತೆ ಶೋಭಿಸಿದರು.

ಪುನಶ್ಚಾಪಿ ಸುಸಂಕ್ರುದ್ಧಃ ಶರೈಃ ಸನ್ನತಪರ್ವಭಿಃ ।
ಕೃಷ್ಣಯೋರ್ಯುಧಿ ಸಂರಬ್ಧೋ ಭೀಷ್ಮೋ ವ್ಯವಾರಯದ್ ದಿಶಃ ॥೬೧॥

ಭೀಷ್ಮರು ಪುನಃ ಬಹಳ ಕ್ರುದ್ಧರಾಗಿ ಬಾಗಿದ ತುದಿಯುಳ್ಳ ಬಾಣಗಳಿಂದ ರಣರಂಗದಲ್ಲಿ ಕೃಷ್ಣಾರ್ಜುನರ ಎಲ್ಲ ದಿಕ್ಕುಗಳನ್ನೂ ಮುಚ್ಚಿಹಾಕಿದರು.

ವಾರ್ಷ್ಣೇಯಂ ಚ ಶರೈಸ್ತೀಕ್ಷ್ಣೈಃ ಕಂಪಯಾಮಾಸ ರೋಷಿತಃ ।
ಮುಹುರಭ್ಯುತ್ಸ್ಮಯನ್ ಭೀಷ್ಮಃ ಪ್ರಹಸ್ಯ ಸ್ವನವತ್ ತದಾ ॥೬೨॥

ಭೀಷ್ಮರು ಮುಗುಳ್ನಗೆಯನ್ನು ನಕ್ಕು, ಆನಂತರ ಗಟ್ಟಿಯಾಗಿ ನಕ್ಕು ರೋಷದಿಂದ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಕೃಷ್ಣನನ್ನು ಅಲುಗಾಡಿಸಿದರು.

ತತಃ ಕೃಷ್ಣಸ್ತು ಸಮರೇ ದೃಷ್ಟ್ವಾ ಭೀಷ್ಮಪರಾಕ್ರಮಮ್ ।
ಸಂಪ್ರೇಕ್ಷ್ಯ ಚ ಮಹಾಬಾಹುಃ ಪಾರ್ಥಸ್ಯ ಮೃದುಯುದ್ಧತಾಮ್ ॥೬೩॥

ಭೀಷ್ಮಂ ಚ ಶರವರ್ಷಾಣಿ ಸೃಜಂತಮನಿಶಂ ಯುಧಿ ।
ಪ್ರತಪಂತಮಿವಾದಿತ್ಯಂ ಮಧ್ಯಮಾಸಾದ್ಯ ಸೇನಯೋಃ ॥೬೪॥

ವರಾಸ್ತರಾನ್ ವಿನಿಘ್ನಂತಂ ಪಾಂಡುಪುತ್ರಸ್ಯ ಸೈನಿಕಾನ್ ।
ಯುಗಾಂತಮಿವ ಕುರ್ವಾಣಂ ಭೀಷ್ಮಂ ಯೌಧಿಷ್ಠಿರೇ ಬಲೇ ॥೬೫॥

ಅಮೃಷ್ಯಮಾಣೋ ಭಗವಾನ್ ಕೇಶವಃ ಪರವೀರಹಾ ।
ಅಚಿಂತಯದಮೇಯಾತ್ಮಾ ನಾಸ್ತಿ ಯೌಧಿಷ್ಠಿರಂ ಬಲಮ್ ॥೬೬॥

ಆಗ ಮಹಾಬಾಹುವಾದ ಕೃಷ್ಣನು ಭೀಷ್ಮರ ಪರಾಕ್ರಮವನ್ನೂ, ಅರ್ಜುನನ ಮೃದು ಯುದ್ಧವನ್ನೂ, ಭೀಷ್ಮರು ಸತತವಾಗಿ ಬಾಣ ಪ್ರಯೋಗವನ್ನು ಮಾಡಿ ಜ್ವಲಿಸುವ ಸೂರ್ಯನಂತೆ ಸೈನ್ಯವನ್ನು ಕಲಕುತ್ತಿರುವುದನ್ನೂ, ಪಾಂಡವರ ಸೈನಿಕರಲ್ಲಿ ಶ್ರೇಷ್ಠರಾದವರನ್ನು ಆರಿಸಿ ಆರಿಸಿ ಸಂಹರಿಸುತ್ತಿರುವುದನ್ನೂ, ಯುಧಿಷ್ಠಿರನ ಸೈನ್ಯದಲ್ಲಿ ಯುಗಾಂತವನ್ನು ತಂದುಕೊಡುವವನಂತೆ ಇರುವ ಭೀಷ್ಮರನ್ನು ನೋಡಿ ಸಹಿಸದೆ ಪರವೀರಘಾತಕನೂ, ಭಗವಂತನೂ, ಕೇಶವನೂ, ಅಚಿಂತ್ಯ ಮಹಿಮೆಯುಳ್ಳವನು ಆದ ಅವನು ಯುಧಿಷ್ಠಿರನ ಸೈನ್ಯವು ಇಲ್ಲವೆಂದು ತಿಳಿದನು.

ಏಕಾಹ್ನಾ ಹಿ ರಣೇ ಭೀಷ್ಮೋ ನಾಶಯೇದ್ ದೇವದಾನವಾನ್ ।
ಕಿಮು ಪಾಂಡುಸುತಾನ್ ಯುದ್ಧೇ ಸಬಲಾನ್ ಸಪದಾನುಗಾನ್ ॥೬೭॥

ಭೀಷ್ಮರು ಒಂದು ದಿನದಲ್ಲಿ ದೇವದಾನವರನ್ನು ನಾಶಮಾಡಿಯಾರು! ಹೀಗಿರುವಾಗ ರಣರಂಗದಲ್ಲಿ ಸೈನ್ಯ ಮತ್ತು ಪದಾತಿಗಳಿಂದ ಸಹಿತರಾದ ಪಾಂಡುಸುತರನ್ನು ನಾಶ ಮಾಡುವುದು ಯಾವ ದೊಡ್ಡ ವಿಷಯ?

ದ್ರವತೇ ಚ ಮಹತ್ ಸೈನ್ಯಂ ಪಾಂಡವಸ್ಯ ಮಹಾತ್ಮನಃ ।
ಏತೇ ಚ ಕೌರವಾಸ್ತೂರ್ಣಂ ಪ್ರಭಗ್ನಾನ್ ದೃಶ್ಯ ಸೋಮಕಾನ್ ।
ಆದ್ರವಂತಿ ರಣೇ ಹೃಷ್ಟಾ ಹರ್ಷಯಂತಃ ಪಿತಾಮಹಮ್ ॥೬೮॥

ಮಹಾತ್ಮನಾದ ಯುಧಿಷ್ಠಿರನ ದೊಡ್ಡ ಸೈನ್ಯವು ಓಡಿ ಹೋಗುತ್ತಿದೆ. ಈ ಕೌರವರಾದರೂ ಶೀಘ್ರವಾಗಿ ಭಗ್ನರಾದ ಸೋಮಕರನ್ನು ನೋಡಿ ಪಿತಾಮಹರಾದ ಭೀಷ್ಮರಿಗೆ ಸಂತೋಷವನ್ನುಂಟು ಮಾಡುತ್ತಾ ತಾವು ಸಂತೋಷದಿಂದ ಕೂಡಿದವರಾಗಿ ರಣರಂಗದಲ್ಲಿ ಅವರನ್ನು ಅಟ್ಟಿಸಿಕೊಂಡು ಓಡುತ್ತಿದ್ದಾರೆ.

ಸೋಽಹಂ ಭೀಷ್ಮಂ ನಿಹನ್ಮ್ಯದ್ಯ ಪಾಂಡವಾರ್ಥಾಯ ದಂಶಿತಃ ।
ಭಾರಮೇತಂ ವಿನೇಷ್ಯಾಮಿ ಪಾಂಡವಾನಾಂ ಮಹಾತ್ಮನಾಮ್ ॥೬೯॥

ಆದ್ದರಿಂದ ಈ ದಿನ ನಾನು ಶಸ್ತ್ರವನ್ನು ಧರಿಸಿ, ಈ ದಿನ ಪಾಂಡವರ ಸಲುವಾಗಿ ಭೀಷ್ಮರನ್ನು ಕೊಲ್ಲುತ್ತೇನೆ. ಮಹಾತ್ಮರಾದ ಪಾಂಡವರ ಈ ದೊಡ್ಡ ಭಾರವನ್ನು ಇಳಿಸುವೆನು.

ಅರ್ಜುನೋಽಪಿ ಶರೈಸ್ತೀಕ್ಷ್ಣೈರ್ವಧ್ಯಮಾನೋ ಹಿ ಸಂಯುಗೇ ।
ಕರ್ತವ್ಯಂ ನಾಭಿಜಾನಾತಿ ರಣೇ ಭೀಷ್ಮಸ್ಯ ಗೌರವಾತ್ ॥೭೦॥

ಅರ್ಜುನನೂ ಸಹ ತೀಕ್ಷ್ಣವಾದ ಬಾಣದಿಂದ ಹೊಡೆಯಲ್ಪಟ್ಟು ಭೀಷ್ಮರ ಮೇಲಿನ ಗೌರವದಿಂದ ರಣರಂಗದಲ್ಲಿ ಏನು ಮಾಡಬೇಕೆಂದು ತಿಳಿಯುತ್ತಿಲ್ಲ (ಎಂದು ಚಿಂತಿಸಿದನು).

ತಥಾ ಚಿಂತಯತಸ್ತಸ್ಯ ಭೂಯ ಏವ ಪಿತಾಮಹಃ ।
ಪ್ರೇಷಯಾಮಾಸ ಸಂಕ್ರುದ್ಧಃ ಶರಾನ್ ಪಾರ್ಥರಥಂ ಪ್ರತಿ ॥೭೧॥

ಕೃಷ್ಣನು ಹಾಗೆ ಚಿಂತಿಸುತ್ತಿರುವಂತೆಯೇ ಪಿತಾಮಹರಾದ ಭೀಷ್ಮರು ಬಹಳ ಕೋಪಗೊಂಡು ಅರ್ಜುನನ ರಥದ ಮೇಲೆ ಬಾಣಗಳನ್ನು ಪ್ರಯೋಗಿಸಿದರು.

ತೇಷಾಂ ಬಹುತ್ವಾದ್ಧಿ ಭೃಶಂ ಶರಾಣಾಂ
ದಿಶೋಽಥ ಸರ್ವಾಃ ಪಿಹಿತಾ ಬಭೂವುಃ ।
ನ ಚಾಂತರಿಕ್ಷಂ ನ ದಿಶೋ ನ ಭೂಮಿ-
ರ್ನ ಭಾಸ್ಕರೋಽದೃಶ್ಯತ ರಶ್ಮಿಮಾಲೀ ।
ವವುಶ್ಚ ವಾತಾಸ್ತುಮುಲಾಃ ಸಧೂಮಾ
ದಿಶಶ್ಚ ಸರ್ವಾಃ ಕ್ಷುಭಿತಾ ಬಭೂವುಃ ॥೭೨॥

ಆ ಬಾಣಗಳ ಸಂಖ್ಯೆಯು ಬಹಳವಾಗಿ ಇದ್ದುದರಿಂದ ಎಲ್ಲ ದಿಕ್ಕುಗಳೂ ಅವುಗಳಿಂದ ಮುಚ್ಚಹೋದವು. ಅಂತರಿಕ್ಷವಾಗಲೀ, ದಿಕ್ಕುಗಳಾಗಲೀ, ಭೂಮಿಯಾಗಲೀ, ಕಿರಣಗಳ ಮಾಲೆಯನ್ನು ಧರಿಸಿದ ಸೂರ್ಯನಾಗಲೀ ಕಾಣಲಿಲ್ಲ. ಧೂಮಸಹಿತವಾದ, ತೀವ್ರವಾದ ಎಲ್ಲ ದಿಕ್ಕುಗಳೂ ಕ್ಷೋಭೆಗೊಂಡವು.

ತಾನ್ ವಾಸವಾನಂತರಜೋ ನಿತಮ್ಯ
ನರೇಂದ್ರಮುಖ್ಯಾನ್ ದ್ರವತಃ ಸಮಂತಾತ್ ।
ಪಾರ್ಥಸ್ಯ ದೃಷ್ಟ್ವಾ ಮೃದುಯುದ್ಧತಾಂ ಚ
ಭೀಷ್ಮಂ ಚ ಸಂಖೇ ಸಮುದೀರ್ಯಮಾಣಮ್ ॥೮೦॥

ಅಮೃಷ್ಯಮಾಣಃ ಸ ತತೋ ಮಹಾತ್ಮಾ
ಯಶಸ್ವಿನಂ ಸರ್ವದಾಶಾರ್ಹಭರ್ತಾ ।
ಉವಾಚ ಶೈನೇಯಮಭಿಪ್ರಶಂಸನ್
ದೃಷ್ಟ್ವಾ ಕುರೂನಾಪತತಃ ಸಮಂತಾತ್ ॥೮೧॥

ಇಂದ್ರನ ತಮ್ಮನಾದ ಕೃಷ್ಣನು ಅಂತಹ ಯುಧಿಷ್ಠಿರನ ಯೋಧರನ್ನು ನೋಡಿ ಅರ್ಜುನನು ಮೃದುವಾಗಿ ಯುದ್ಧಮಾಡುವುದನ್ನೂ, ಭೀಷ್ಮರು ರಣರಂಗದಲ್ಲಿ ವಿಜೃಂಭಿಸುತ್ತಿರುವುದನ್ನೂ ನೋಡಿ ಸಹಿಸದೆ ಮಹಾತ್ಮನೂ, ಎಲ್ಲ ದಾಶಾರ್ಹರಿಗೆ ಒಡೆಯನೂ ಆದ ಅವನು ಕೀರ್ತಿಶಾಲಿಯಾದ ಸಾತ್ಯಕಿಯನ್ನು ನೋಡಿ ಕುರುಗಳು ಎಲ್ಲ ಕಡೆಯಿಂದಲೂ ಪಾಂಡವರ ಮೇಲೆ ಎರಗುತ್ತಿರುವುದನ್ನು ನೋಡಿ ಮಾತನಾಡಿದನು.

ಯೇ ಯಾಂತಿ ಯಾಂತ್ಯೇವ ಶಿನಿಪ್ರವೀರ
ಯೇಽಪಿ ಸ್ಥಿತಾಃ ಸಾತ್ವತ ತೇಽಪಿ ಯಾಂತು ।
ಭೀಷ್ಮಂ ರಥಾತ್ ಪಶ್ಯ ನಿಪಾತ್ಯಮಾನಂ
ದ್ರೋಣಂ ಚ ಸಂಖೇ ಸಗಣಂ ಮಯಾದ್ಯ ॥೮೨॥

ಎಲೈ ಶಿನಿಪ್ರವೀರನಾದ ಸಾತ್ಯಕಿಯೇ, ಯಾರು ಹೋಗುತ್ತಿದ್ದಾರೋ ಅವರು ಹೊರಟೇ ಹೋಗಲಿ. ಎಲೈ ಸಾತ್ವತನೇ, ಯಾರು ರಣರಂಗದಲ್ಲಿ ಇನ್ನೂ ಇದ್ದಾರೆಯೋ ಅವರೂ ಹೊರಟು ಹೋಗಲಿ. ಈ ದಿನ ಯುದ್ಧದಲ್ಲಿ ತಮ್ಮ ಪರಿವಾರ ಸಹಿತರಾಗಿ ಭೀಷ್ಮರು ಮತ್ತು ದ್ರೋಣರು ಸನ್ನಿಂದ ರಥದಿಂದ ಬೀಳಿಸಲ್ಪಡುವುದನ್ನು ನೋಡು.

ನಾಸೌ ರಥಃ ಸಾತ್ವತ ಕೌರವಾಣಾಂ
ಕುದ್ಧಸ್ಯ ಮುಕ್ತೇಷು ರಣೇಽದ್ಯ ಕಶ್ಚಿತ್ ।

ತಸ್ಮಾದಹಂ ಗೃಹ್ಯ ರಥಾಂಗಮುಗ್ರಂ
ಪ್ರಾಣಂ ಹರಿಷ್ಯಾಮಿ ಮಹಾವ್ರತಸ್ಯ ॥೮೩॥

ಎಲೈ ಸಾತ್ವತನೇ, ಕೌರವರ ಮಹಾರಥರಲ್ಲಿ ಯಾವನೂ ಈ ದಿವಸ ರಣರಂಗದಲ್ಲಿ ಕ್ರುದ್ಧನಾದ ನನ್ನಿಂದ ಪಾರಾಗುವುದಿಲ್ಲ. ಆದ್ದರಿಂದ ಈ ದಿನ ನಾನು ಘೋರವಾದ ಚಕ್ರವನ್ನು ಧರಿಸಿ ಮಹಾವ್ರತರಾದ ಭೀಷ್ಮರ ಪ್ರಾಣವನ್ನು ಸಂಹರಿಸುವೆನು.

ನಿಹತ್ಯ ಭೀಷ್ಮಂ ಸಗಣಂ ತಥಾಜೌ
ದ್ರೋಣಂ ಚ ಶೈನೇಯ ರಥಪ್ರವೀರಮ್ ।
ಪ್ರೀತಿಂ ಕರಿಷ್ಯಾಮಿ ಧನಂಜಯಸ್ಯ
ರಾಜ್ಞಶ್ಚ ಭೀಮಸ್ಯ ತಥಾಶ್ವಿನೋಶ್ಚ ॥೮೪॥

ಎಲೈ ಶೈನೇಯನೇ, ನಾನು ಯುದ್ಧದಲ್ಲಿ ಪರಿವಾರ ಸಹಿತರಾದ ಭೀಷ್ಮರನ್ನು ಮತ್ತು ರಥಶ್ರೇಷ್ಠರಾದ ದ್ರೋಣರನ್ನು ಕೊಂದು ಅರ್ಜುನನಿಗೂ, ರಾಜನಾದ ಯುಧಿಷ್ಠಿರನಿಗೂ, ಭೀಮನಿಗೂ ಮತ್ತು ಅಶ್ವಿನಿಪುತ್ರರಾದ ನಕುಲ-ಸಹದೇವರಿಗೂ ಸಂತೋಷವನ್ನು ಉಂಟುಮಾಡುವೆನು.

ನಿಹತ್ಯ ಸರ್ವಾನ್ ಧೃತರಾಷ್ಟ್ರಪುತ್ರಾನ್
ತತ್‌ಪಕ್ಷಿಣೋ ಯೇ ಚ ನರೇಂದ್ರಮುಖ್ಯಾಃ ।
ರಾಜ್ಯೇನ ರಾಜಾನಮಜಾತಶತ್ರುಂ
ಸಂಪಾದಯಿಷ್ಯಾಮ್ಯಹಮದ್ಯ ಹೃಷ್ಟಃ ॥೮೫॥

ಧೃತರಾಷ್ಟ್ರನ ಎಲ್ಲ ಪುತ್ರರನ್ನು ಮತ್ತು ಅವರ ಪಕ್ಷಕ್ಕೆ ಸೇರಿದ ಎಲ್ಲ ಶ್ರೇಷ್ಠರಾಜರನ್ನು ಸಂಹರಿಸಿ, ಈ ದಿನ ಅಜಾತಶತ್ರುವನ್ನು ಸಂತೋಷದಿಂದ ರಾಜ್ಯದಲ್ಲಿ ಸ್ಥಾಪಿಸುವೆನು (ಎಂದು ಹೇಳಿದನು).

ತತಃ ಸುನಾಭಂ ವಸುದೇವಪುತ್ರಃ
ಸೂರ್ಯಪ್ರಭಂ ವಜ್ರಸಮಪ್ರಭಾವಮ್ ।
ಕ್ಷುರಾಂತಮುದ್ಯಮ್ಯ ಭುಜೇನ ಚಕ್ರಂ
ರಥಾದವಪ್ಲುತ್ಯ ಏಯದ್ಯ ವಾಹಾನ್ ॥೮೬॥

ಸಂಕಂಪಯನ್ ಗಾಂ ಚರನ್ಮೈರ್ಮಹಾತ್ಮಾ
ವೇಗೇನ ಕೃಷ್ಣಃ ಪ್ರಸಸಾರ ಭೀಷ್ಮಮ್ ।
ಮದಾಂಧಮಾಜೌ ಸಮುದೀರ್ಣದರ್ಪಃ
ಓಂಹೋ ಜಿಘಾಂಸನ್ನಿವ ವಾರಣೇಂದ್ರಮ್ ॥೮೭॥

ಅನಂತರ ವಸುದೇವ ಪುತ್ರನಾದ ಮಹಾತ್ಮನಾದ ಆ ಕೃಷ್ಣನು, ವಜ್ರಾಯುಧಕ್ಕೆ ಸಮಾನವಾದ ಸಾಮರ್ಥ್ಯವುಳ್ಳ, ಸೂರ್ಯನ ಕಾಂತಿಯನ್ನು ಹೊಂದಿದ ಕತ್ತಿಯ ಅಲುಗುಗಳನ್ನುಳ್ಳ ತನ್ನ ಸುದರ್ಶನ ಚಕ್ರವನ್ನು ಭುಜದಿಂದ ಎತ್ತಿ ಹಿಡಿದು ಕುದುರೆಗಳನ್ನು ಬಿಟ್ಟು ರಥದಿಂದ ಕೆಳಗೆ ಹಾರಿ ತನ್ನ ಪಾದನ್ಯಾಸಗಳಿಂದ ಭೂಮಿಯನ್ನು ನಡುಗಿಸುತ್ತಾ, ಉನ್ನತವಾದ ದರ್ಪವನ್ನು ಹೊಂದಿರುವ ಸಿಂಹವು ಮದಾಂಧವಾದ ಗಜವನ್ನು ಕೊಲ್ಲುವ ಸಂಕಲ್ಪದಿಂದ ಅದರ ಕಡೆಗೆ ಬಂದಂತೆ ರಣರಂಗದಲ್ಲಿ ಭೀಷ್ಮರ ಸಮೀಪಕ್ಕೆ ವೇಗವಾಗಿ ಧಾವಿಸಿದನು.

ಸೋಽಭ್ಯದ್ರವದ್ ಭೀಷ್ಮಮನೀಕಮಧ್ಯೇ
ಕ್ರುದ್ಧೋ ಮಹೇಂದ್ರಾವರಜಃ ಪ್ರಮಾಥೀ ।
ವ್ಯಾಲಂಬಿಪೀತಾಂತಪಟಶ್ಚಕಾಶೇ
ಘನೋ ಯಥಾ ಖೇಽಚಿರಭಾಸಿದದ್ಭಃ ॥೮೮॥

ಕ್ರುದ್ಧನಾದ, ಇಂದ್ರಾನುಜನಾದ, ಶತ್ರುನಾಶಕನಾದ ಕೃಷ್ಣನು ಸೈನ್ಯದ ಮಧ್ಯದಲ್ಲಿ ಭೀಷ್ಮರ ಕಡೆಗೆ ಧಾವಿಸಿದನು. ಇಳಿ ಬಿದ್ದಿದ್ದ ಅವನ ಪೀತಾಂಬರವು ಆಕಾಶದಲ್ಲಿ ಕಾಂತಿಯಿಂದ ಕೂಡಿದ ಮೋಡದಂತೆ ಕಂಗೊಳಿಸುತ್ತಿದ್ದಿತು.

ಸುದರ್ಶನಂ ಚಾಸ್ಯ ರರಾಜ ಶೌರೇಃ
ತಚ್ಚಕ್ರಪದ್ಮಂ ಸುಭುಜೋರುನಾಲಮ್ ।
ಯಥಾದಿಪದ್ಮಂ ತರುಣಾರ್ಕವರ್ಣಂ
ರರಾಜ ನಾರಾಯಣನಾಭಿಜಾತಮ್ ॥೮೯॥

ಶೌರಿಯಾದ ಕೃಷ್ಣನ ಕೈಯಲ್ಲಿದ್ದ ಪದ್ಮದಂತಿದ್ದ ಸುಂದರವಾದ ಭುಜವನ್ನೂ, ದೊಡ್ಡದಾದ ನಾಳವನ್ನೂ ಹೊಂದಿದ್ದ ಆ ಸುದರ್ಶನ ಚಕ್ರವು ಉದಯಿಸುವ ಸೂರ್ಯನ

ಬಣ್ಣದಿಂದ ಕೂಡಿದುದಾಗಿ ನಾರಾಯಣನ ನಾಭಿಯಿಂದ ಉತ್ಪನ್ನವಾದ ಆದಿಪದ್ಮದಂತೆ ಶೋಭಿಸಿತು.

ತತೃಷ್ಣಕೋಪೋದಯಸೂರ್ಯಬುದ್ಧಂ
ಕ್ಷುರಾಂತತೀಕ್ಷ್ಣಾಗ್ರಸುಜಾತಪತ್ರಮ್ ।
ತಸ್ಯೈವ ದೇಹೋರುಸರಃಪ್ರರೂಢಂ
ರರಾಜ ನಾರಾಯಣಬಾಹುನಾಳಮ್ ॥೯೦॥

ಕೃಷ್ಣನ ಕೋಪವೆಂಬ ಉದಿಸುವ ಸೂರ್ಯನಿಂದ ಅರಳಿದ, ಕತ್ತಿಯ ಅಲುಬಿನಂತೆ ತೀಕ್ಷ್ಣವಾದ ಚೆನ್ನಾಗಿ ಬೆಳೆದ ದಳಗಳನ್ನು ಹೊಂದಿದ, ಅವನ ಶರೀರವೆಂಬ ಸರೋವರದಲ್ಲಿ ಬೆಳೆದ, ನಾರಾಯಣನಾದ ಅವನ ಬಾಹುವೆಂಬ ನಾಳವನ್ನು ಹೊಂದಿದ ಆ ಸುದರ್ಶನ ಚಕ್ರವು ಶೋಭಿಸಿತು.

ತಮಾತ್ತಚಕ್ರಂ ಪ್ರಣದಂತಮುಚ್ಚೈಃ
ಕ್ರುದ್ಧಂ ಮಹೇಂದ್ರಾವರಜಂ ಸಮೀಕ್ಷ್ಯ ।
ಸರ್ವಾಣಿ ಭೂತಾನಿ ಭೃಶಂ ವಿನೇದುಃ
ಕ್ಷಯಂ ಕುರೂಣಾಮಿತಿ ಚಿಂತಯಿತ್ವಾ ॥೯೧॥

ಕೈಯಲ್ಲಿ ಚಕ್ರವನ್ನು ಹಿಡಿದು ಗಟ್ಟಿಯಾಗಿ ಗರ್ಜಿಸುತ್ತಾ ಕೋಪಗೊಂಡಿದ್ದ ಇಂದ್ರಾನುಜನಾದ ಕೃಷ್ಣನನ್ನು ನೋಡಿ ಕುರುಗಳಿಗೆ ವಿನಾಶವುಂಟಾಗುತ್ತದೆ ಎಂದು ಚಿಂತಿಸಿ ಎಲ್ಲ ಯೋಧರೂ ಸಂತೋಷದಿಂದ ಬಹಳವಾಗಿ ಗರ್ಜಿಸಿದರು.

ಸ ವಾಸುದೇವಃ ಪ್ರಗೃಹೀತಚಕ್ರಃ
ಸಂವರ್ತಯಿಷ್ಯನ್ನಿವ ಜೀವಲೋಕಮ್ ।
ಅಭ್ಯುತ್ಪತನ್ ಲೋಕಗುರುರ್ಬಭಾಸೇ
ಭೂತಾನಿ ಧಕ್ಷ್ಯನ್ನಿವ ಕಾಲವಹ್ನಿಃ ॥೯೨॥

ಕೈಯಲ್ಲಿ ಚಕ್ರವನ್ನು ಹಿಡಿದ ಲೋಕಗುರುವಾದ ವಾಸುದೇವನು ಜೀವ ಲೋಕವನ್ನೇ ತಿರುಗಿಸುವವನಂತೆ ಹಾರಿ ವೇಗದಿಂದ ಸಾಗುತ್ತಾ ಎಲ್ಲ ಪ್ರಾಣಿಗಳನ್ನು ದಹಿಸುವ ಕಾಲಾಗ್ನಿಯಂತೆ ಕಂಡುಬಂದನು.

ತಮಾಪತಂತಂ ಪ್ರಗೃಹೀತಚಕ್ರಂ
ಸಮೀಕ್ಷ್ಯ ದೇವಂ ದ್ವಿಪದಾಂ ವರಿಷ್ಠಮ್ ।
ಅಸಂಭ್ರಮಾತ್ ಕಾರ್ಮುಕಬಾಣಪಾಣೇ
ರಥೇ ಸ್ಥಿತಃ ಶಾಂತನವೋಽಭ್ಯುವಾಚ ॥೯೩॥

ಕೈಯಲ್ಲಿ ಚಕ್ರವನ್ನು ಹಿಡಿದು ತನ್ನಡೆಗೆ ಬರುತ್ತಿದ್ದ ದ್ವಿಪದ ಶ್ರೇಷ್ಠನಾದ ದೇವನಾದ ಕೃಷ್ಣನನ್ನು ನೋಡಿ ಬಲ್ಲುಬಾಣಗಳನ್ನು ಹಿಡಿದ ಭೀಷ್ಮರು ಗಾಬರಿಗೊಳ್ಳದೆ ರಥದಲ್ಲಿಯೇ ನಿಂತು ಮಾತನಾಡಿದರು.

ಏಹ್ಯೇಹಿ ದೇವೇಶ ಜಗನ್ನಿವಾಸ
ನಮೋಽಸ್ತು ತೇ ಶಾರ್ಙ್ಗರಥಾಂಗಪಾಣೇ ।
ಪ್ರಸಹ್ಯ ಮಾಂ ಪಾತಯ ಲೋಕನಾಥ
ರಥೋತ್ತಮಾದ್ ಭೂತಶರಣ್ಯ ಸಂಯೇ ॥೯೪॥

ದೇವೇಶನೇ, ಜಗನ್ನಿವಾಸನೇ, ಬಾ, ಬಾ. ಸಾರಂಗಪಾಣಿಯೇ, ಚಕ್ರಪಾಣಿಯೇ, ನಿನಗೆ ನಮಸ್ಕಾರ. ಲೋಕನಾಥನೇ, ಎಲ್ಲ ಜೀವರಿಗೆ ಶರಣ್ಯನಾದವನೇ, ನಿನ್ನ ಬಲದಿಂದ ನನ್ನನ್ನು ರಣರಂಗದಿಂದ ಶ್ರೇಷ್ಠವಾದ ರಥದಿಂದ ಕೆಡವು.

ತ್ವಯಾ ಹತಸ್ಯೇಹ ಮಮಾದ್ಯ ಕೃಷ್ಣ
ಶ್ರೇಯಃ ಪರಸ್ಮಿನ್ನಿಹ ಚೈವ ಲೋಕೇ ।
ಸಂಭಾವಿತೋಽಸ್ಮ್ಯಂಧಕವೃಷ್ಣಿನಾಥ
ಲೋಕೈಃ ಪ್ರಭುರ್ವೀರ ತವಾಭಿಯಾನಾತ್ ॥೯೫॥

ಕೃಷ್ಣನೇ, ನಿನ್ನಿಂದ ಹತನಾದ ನನಗೆ ಈ ದಿನ ಈ ಲೋಕದಲ್ಲಿ ಕೀರ್ತಿಯೂ, ಪರಲೋಕದಲ್ಲಿ ಶ್ರೇಯಸ್ಸೂ ಉಂಟಾಗುತ್ತದೆ. ಎಲೈ ಅಂಧಕವೃಷ್ಣಿಪ್ರಭುವೇ, ವೀರನೇ, ಈ ದಿನ ನೀನು ಚಕ್ರವನ್ನು ಹಿಡಿದು ನನ್ನ ಕಡೆಗೆ ಬರುತ್ತಿರುವುದರಿಂದ ನಾನು ಮೂರು ಲೋಕಗಳಿಂದಲೂ ಗೌರವಿಸಲ್ಪಟ್ಟಿದ್ದೇನೆ (ಎಂದು ಹೇಳಿದರು).

ರಥಾದವಪ್ಲುತ್ಯ ತತಸ್ತ್ವರಾವಾನ್
ಸಾರ್ಥೋಽಶ್ವನುದ್ಯತ್ಯ ಯದುಪ್ರವೀರಮ್ ।

ಬಾಣಾಸ ಮಗೋಲ್ಬಣಮಲಂಬುಜಾಮಂ
ಬಾಹೊಳಾರಿಂ ಬ್ಯಾಯಸೀಗಂಬಾಮಂ ॥೮೬॥

ಆಗ ಅರ್ಜುನನು ಪ್ರೌಢಿಯಿಂದ ರಭಸದಿಂದ ಧನುಷ, ಯಮಪ್ರಭಾವವಾದ ಕೃಷ್ಣ ಹಿಂದ ಓಡಿ ವಿಸ್ತಾರವಾದ ಮತ್ತು ವೃತ್ತಾಕಾರವುಳ್ಳ ಅವನು, ಪುಷ್ಟವಾದ ಮತ್ತು ದೀರ್ಘವಾದ ಬಾಹುವುಳ್ಳ ಕೃಷ್ಣನು ಅವ ಬಾಹುಗಳನ್ನ ಓಡಿದನು.

ನಿಗ್ರಹಮೂರ್ಜ್ಜ ತಾವಿರೆಳ್ದೂ
ದ್ಧತಂ ಸೊೀಣ ಕಲು ಬಾವು ಯೋಗ್ಯ ।
ಅರಾಯ ವೆಗೆಗಳ ಬಾವು ವಿಷ್ಣು-
ದೊಷ್ಟಂ ಮಹಾವಾಹ ಇಷ್ಟಕೃಷ್ಣಮ್ ॥೮೭॥

ಅರ್ಜುನನ ನಾಮಕ್ಕೆ ಸೂಚನವಾದ ಕೃಷ್ಣನೆಂಬ ನಾಮವನ್ನು ಧರಿಸಿದವನೂ ಅಥವಾ ಅರ್ಜುನನಿಂದ ಎಳೆಯಲ್ಪಡುವುದರಿಂದ ಕೃಷ್ಣ ಎಂಬ ನಾಮವುಳ್ಳವನೂ ಆದ ಅರಿದೇವನು ದೇಹದಿಂದ ತೊಡಿದವನಾಗಿ ಮಹಾಬಾಹುವಿನಿಂದ ಒಳ್ಳೆಯದಾದ ವೃಷ್ಣವನ್ನು ಎಳೆಯೊಂದು ಹೋಗುವಂತೆ ಅರ್ಜುನನನ್ನು ಎಳೆಯೊಂದು ಮುಂದೆ ಸಾಗಿದನು.

ಪಾಥಾನ್ವಿ ವಿಷ್ಣಿಪ್ಪ ಬಲೇಷ ಪಾಂಡಿ
ಧನ್ಯಾಂಬೀಂ ಪೂರ್ಣಾಮಧಿಪ್ರಧಂಬಾಮ್ ।
ಬಲಾಪ್ಪಣಾಷ ತಂಗಬಮಾರೀ
ಪಡೆಸಿಷ್ಟ ರಾಜಾಪಾಮಂ ಪ್ರಭಾಮ್ ॥೮೮॥

ಎತ್ತ ರಾಜನೇ, ತಂಗಬಮಾರಿಯಾದ ಅರ್ಜುನನಿಂದ ಪ್ರೇರ್ಪಿತವಾದ ಗುಟ್ಟಾಗಿ ಗುಂಡ ಧನಸ್ಸಿದ ಮೂಲಕ್ಕೆ ಶತ್ರುವಾಗಿ ಒಡೆಯಲ್ಪಟ್ಟ ಕೃಷ್ಣನು ಪ್ರೇರ್ಪಿತವಾದ ಸಮಕ್ಕೆ ರಂದ ಪ್ರಭಾವ ಪಟ್ಟಿದನ್ನು ನಿಲ್ಲಿಸಿದ.

ಅಮ್ಮಿಂ ಪ ಕ್ಷಗಾಷ್ಟ ಕೃಷ್ಣ
ಸ್ಪಗೊಂಡಾಬಾಷ ಪಾಂಡಿಪ್ಪಮಾರೀ ।
ಅಬಾಷ ಕೋಷಂ ಸ್ಪಷಿಂಷಾರೀ
ಸುಧಾಷಾಷಿಂಷಾ ಪಾಂಡಿಪಾಮಾಮ್ ॥೮೯॥

ನಿಂತ ಕೃಷ್ಣನಿಗೆ ನಮಸ್ಕಾರವನ್ನು ಮಾಡಿ ಸಂತೋಷಗೊಂಡ ವಿಚಿತ್ರವಾದ ಸುವರ್ಣಮಾಲೆಯನ್ನು ಧರಿಸಿದ ಅರ್ಜುನನು ಕೇಶವನೇ, ನೀನು ಪಾಡವರಿಗೆ ಗತಿಯಾದವನು, ಕೋಪವನ್ನು ಉಪಶಮನ ಮಾಡು ಎಂದು ಹೇಳಿದನು.

ನ ಹಾಸ್ಯತೇ ಕರ್ಮ ಯಥಾಪ್ರತಿಜ್ಞಂ
ಪುತ್ರೈಃ ಶಪೇ ಕೇಶವ ಸೋದರೈಶ್ಚ ।
ಅಂತಂ ಕರಿಷ್ಯಾಮಿ ಯಥಾ ಕುರೂಣಾಂ
ತ್ವಯಾಹಮಿಂದ್ರಾನುಜ ಸಂಪ್ರಯುಕ್ತಃ ॥೧೦೦॥

ನಾನು ನನ್ನ ಪ್ರತಿಜ್ಞೆಗೆ ಅನುಗುಣವಾಗಿ ಕಾರ್ಯವನ್ನು ಮಾಡುವುದನ್ನು ಬಿಡುವುದಿಲ್ಲ. ಕೇಶವನೇ, ನನ್ನಪುತ್ರರ ಮೇಲೆ ಮತ್ತು ಸಹೋದರರ ಮೇಲೆ ಆಣೆಯನ್ನು ಮಾಡಿ ಹೇಳುತ್ತಿದ್ದೇನೆ (ಇದು ನಾನು ಶಸ್ತ್ರವನ್ನು ಹಿಡಿಯುವುದಿಲ್ಲ ಎಂಬ ನಿನ್ನ ಪ್ರತಿಜ್ಞೆಗೆ ಅನುಗುಣವಾಗಿಲ್ಲ). ಎಲೈ ಇಂದ್ರಾನುಜನೇ, ನಿನ್ನಿಂದ ಕೂಡಿಕೊಂಡ ನಾನು ಈ ದಿನ ಕೌರವರ ವಿನಾಶವನ್ನು ಮಾಡುವೆನು.

ತತಃ ಪ್ರತಿಜ್ಞಾಂ ಸಮಯಂ ಚ ತಸ್ಯೈ
ಜನಾರ್ದನಃ ಪ್ರೀತಮನಾ ನಿಶಮ್ಯ ।
ಸ್ಥಿತಃ ಪ್ರಿಯೇ ಕೌರವಸತ್ತಮಸ್ಯ
ರಥಂ ಸಚಕ್ರಃ ಪುನರಾರುರೋಹ ॥೧೦೧॥

ಅರ್ಜುನನ ಪ್ರತಿಜ್ಞೆಯನ್ನು ಮತ್ತು ಅವನ ನಿಬಂಧನೆಯನ್ನು ಕೇಳಿ ಜನಾರ್ದನನು ಅವನ ಮೇಲೆ ಪ್ರಸನ್ನನಾದನು. ಕೌರವಶ್ರೇಷ್ಠನಾದ ಅವನಿಗೆ ಪ್ರಿಯವನ್ನು ಉಂಟುಮಾಡುವುದಕ್ಕಾಗಿ ಪುನಃ ಕೈಯಲ್ಲಿ ಚಕ್ರವನ್ನು ಹಿಡಿದು ಅರ್ಜುನನ ರಥವನ್ನು ಏರಿದನು.

ತತಃ ಪ್ರತಿಜ್ಞಾಂ ಸಮವಾಪ್ಯ ಭೀಷ್ಮಃ
ಕೃತಾಂಜಲಿಂ ಸ್ತುತ್ಯಮಥಾಕರೋದ್ ವೈ ।
ತ್ರೈವಿಕ್ರಮೇ ಯಸ್ಯ ವಪುರ್ಬಭಾಸೇ
ತಥೈವ ದೃಷ್ಟ್ವಾ ಸಮುಜ್ಜ್ವಲಂತಮ್ ॥೧೦೨॥

ಆಗ ಭೀಷ್ಮರು ತಮ್ಮ ಪ್ರತಿಜ್ಞೆಯು ನೆರವೇರುತ್ತಿರಲು ಕೈಗಳನ್ನು ಮುಗಿದು ಸ್ತೋತ್ರವನ್ನು ಮಾಡಿದರು. ತ್ರಿವಿಕ್ರಮಾವತಾರದಲ್ಲಿತೋರಿಸಿದ ಉಜ್ಜ್ವಲ ರೂಪದಂತೆ ಕೃಷ್ಣನ ರೂಪವು ಅವರಿಗೆ ಕಂಗೊಳಿಸಿತು.

ಸ ತಾನಭೀಷೂನ್ ಪುನರಾದದಾನಃ
ಪ್ರಗೃಹ್ಯ ಶಂಖಂ ದ್ವಿಷತಾಂ ನಿಹಂತಾ ।
ವಿನಾದಯಾಮಾಸ ತತೋ ದಿಶಶ್ಚ
ಸ ಪಾಂಚಜನ್ಯಸ್ಯ ರವೇಣ ಶೌರಿಃ ॥೧೦೩॥

ಶತ್ರುಘಾತಕನಾದ ಕೃಷ್ಣನು ಪುನಃ ಕೈಗಳಲ್ಲಿ ಕಡಿವಾಣಗಳನ್ನು ಹಿಡಿದು ಪಾಂಚಜನ್ಯ ಶಂಖವನ್ನು ತೆಗೆದುಕೊಂಡು ಶೌರಿಯಾದ ಅವನು ಅದರ ನಾದದಿಂದ ದಿಕ್ಕುಗಳು ಪ್ರತಿಧ್ವನಿಸುವಂತೆ ಶಂಖವನ್ನು ಊದಿದನು.

ವ್ಯಾವಿದ್ಧನಿಷ್ಕಾಂಗದಕುಂಡಲಂ ತಂ
ರಜೋವಿಕೀರ್ಣಾಂಚಿತಪಕ್ಷ್ಮನೇತ್ರಮ್ ।
ವಿಶುದ್ಧದಂಷ್ಟ್ರಂ ಪ್ರಗೃಹೀತಶಂಖಂ
ವಿಚುಕ್ರುಶುಃ ಪ್ರೇಕ್ಷ್ಯ ಕುರುಪ್ರವೀರಾಃ ॥೧೦೪॥

ತನ್ನ ನಿಷ್ಕಾಂಗದ ಕುಂಡಲಗಳು ಅಸ್ತವ್ಯಸ್ತವಾಗಿದ್ದ ಹುಬ್ಬು ಮತ್ತು ಕಣ್ಣುಗಳ ಮೇಲೆ ಧೂಳನ್ನು ಹೊಂದಿದ್ದ, ವಿಶುದ್ಧ ದಂತಗಳನ್ನುಳ್ಳ, ಕೈಯಲ್ಲಿ ಶಂಖವನ್ನು ಹಿಡಿದ ಆ ಕೃಷ್ಣನನ್ನು ನೋಡಿ ಕುರುಪ್ರವೀರರು ಕಿರುಚಾಡಿದರು.

ಮೃದಂಗಭೇರೀಪಟಹಪ್ರಣಾದಾ
ನೇಮಿಸ್ವನಾ ದುಂದುಭಿನಿಸ್ವನಾಶ್ಚ ।
ಸಸಿಂಹನಾದಾಶ್ಚ ಬಭೂವುರುಗ್ರಾಃ
ಸರ್ವೇಷ್ವನೀಕೇಷು ತತಃ ಕುರೂಣಾಮ್ ॥೧೦೫॥

ಆಗ ಕುರುಗಳ ಎಲ್ಲ ಸೈನ್ಯದಲ್ಲಿ ಮೃದಂಗಭೇರಿ ಪಟ ಶಬ್ದಗಳೂ, ರಥದ ಚಕ್ರದ ಶಬ್ದಗಳೂ, ದುಂದುಭಿ ಘೋಷಗಳೂ, ಉಗ್ರವಾದ ಸಿಂಹನಾದಗಳೂ ಉಂಟಾದವು.

ಗಾಂಡೀವಘೋಷಃ ಸ್ತನಯಿತ್ನುಕಲ್ಪೋ
ಜಗಾಮ ಪಾರ್ಥಸ್ಯ ನಭೋ ದಿಶಶ್ಚ ।
ಜಗ್ಮುಶ್ಚ ಬಾಣಾ ವಿಮಲಾಃ ಪ್ರಸನ್ನಾಃ
ಸರ್ವಾ ದಿಶಃ ಪಾಂಡವಚಾಪಮುಕ್ತಾಃ ॥೧೦೬॥

ಸಿಡಿಲಿಗೆ ಸಮಾನವಾದ ಅರ್ಜುನನ ಗಾಂಡೀವ ಘೋಷವು ಆಕಾಶ ಮತ್ತು ದಿಕ್ಕು ದಿಕ್ಕುಗಳನ್ನು ತಲುಪಿತು. ಅರ್ಜುನನ ಬಿಲ್ಲಿನಿಂದ ಹೊರಹೊಮ್ಮಿದ ವಿಮಲವಾದ ಬಾಣಗಳು ಎಲ್ಲ ದಿಕ್ಕುಗಳನ್ನು ತಲುಪಿದವು.

ತಂ ಕೌರವಾಣಾಮಧಿಪೋ ಬಲೇನ
ಭೀಷ್ಮೇಣ ಭೂರಿಶ್ರವಸಾ ಚ ಸಾರ್ಧಮ್ ।
ಅಭ್ಯುದ್ಯಯಾವುದ್ಯತಬಾಣಪಾಣಿಃ
ಕಕ್ಷಂ ದಿಧಕ್ಷನ್ನಿವ ಧೂಮಕೇತುಃ ॥೧೦೭॥

ಕೌರವರ ಅಧಿಪತಿಯಾದ ದುರ್ಯೋಧನನು ತನ್ನ ಸೈನ್ಯದಿಂದಲೂ, ಭೀಷ್ಮರಿಂದಲೂ, ಭೂರಿಶ್ರವಸ್ಸಿನಿಂದಲೂ ಕೂಡಿಕೊಂಡು ಎತ್ತಿದ ಕೈಗಳಿಂದ ಬಾಣಗಳನ್ನು ಹಿಡಿದವನಾಗಿ ಹುಲ್ಲುಗಾವಲನ್ನು ದಹಿಸುವ ಅಗ್ನಿಯಂತೆ ಪಾಂಡವರ ಕಡೆಗೆ ಸಾಗಿಬಂದನು.

ಅಥಾರ್ಜುನಾಯ ಪ್ರಜಹಾರ ಭಲ್ಲಾನ್
ಭೂರಿಶ್ರವಾಃ ಸಪ್ತ ಸುವರ್ಣಪುಂಖಾನ್ ।
ದುರ್ಯೋಧನಸ್ತೋಮರಮುಗ್ರವೇಗಂ
ಶಲ್ಯೋ ಗದಾಂ ಶಾಂತನವಶ್ಚ ಶಕ್ತಿಮ್ ॥೧೦೮॥

ಅನಂತರ ಭೂರಿಶ್ರವನು ಸುವರ್ಣಪುಂಖಗಳಿದ್ದ ಏಳು ಭಲ್ಲಗಳನ್ನು ಅರ್ಜುನನ ಮೇಲೆ ಪ್ರಹಾರ ಮಾಡಿದನು. ದುರ್ಯೋಧನನು ಭಯಂಕರವಾದ ವೇಗವುಳ್ಳ ತೋಮರವನ್ನೂ, ಶಲ್ಯನು ಗದೆಯನ್ನೂ ಮತ್ತು ಭೀಷ್ಮರು ಶಕ್ತಿಯನ್ನೂ ಪ್ರಯೋಗಿಸಿದರು.

ಸ ಸಪ್ತಭಿಃ ಸಪ್ತ ಶರಪ್ರವೇಕಾನ್
ಸಂವಾರ್ಯ ಭೂರಿಶ್ರವಸಾ ವಿಸೃಷ್ಟಾನ್ ।
ಶಿತೇನ ದುರ್ಯೋಧನಬಾಹುಮುಕ್ತಂ
ಕ್ಷುರೇಣ ತತ್ತೋಮರಮುನ್ಮಮಾಥ ॥೧೦೯॥

ಅರ್ಜುನನು ಭೂರಿಶ್ರವನು ಪ್ರಯೋಗಿಸಿದ ಏಳು ಶ್ರೇಷ್ಠವಾದ ಬಾಣಗಳನ್ನು ಏಳು ಬಾಣಗಳಿಂದ ನಿವಾರಿಸಿ, ಹರಿತವಾದ ಕತ್ತಿಯಂತಹ ಬಾಣದಿಂದ ದುರ್ಯೋಧನನು ಪ್ರಯೋಗಿಸಿದ ತೋಮರವನ್ನು ನಾಶಪಡಿಸಿದನು.

ತತಃ ಶುಭಾಮಾಪತತೀಂ ಸ ಶಕ್ತಿಂ
ವಿದ್ಯುತ್ಪ್ರಭಾಂ ಶಾಂತನವೇನ ಮುಕ್ತಾಮ್ ।
ಗದಾಂ ಚ ಮದ್ರಾಧಿಪಬಾಹುಮುಕ್ತಾಂ
ದ್ವಾಭ್ಯಾಂ ಶರಾಭ್ಯಾಂ ನಿಚಕರ್ತ ವೀರಃ ॥೧೧೦॥

ಅನಂತರ ವೀರನಾದ ಅವನು ಮಿಂಚಿನ ಕಾಂತಿಯನ್ನು ಹೊಂದಿ ತನ್ನೆಡೆಗೆ ಬರುತ್ತಿದ್ದ ಭೀಷ್ಮರು ಪ್ರಯೋಗಿಸಿದ ಶುಭವಾದ ಶಕ್ತ್ಯಾಯುಧವನ್ನೂ ಮತ್ತು ಮದ್ರಾಧಿಪತಿಯಾದ ಶಲ್ಯನ ಬಾಹುವಿನಿಂದ ಪ್ರಯೋಗಿಸಲ್ಪಟ್ಟ ಗದೆಯನ್ನೂ ಎರಡು ಬಾಣಗಳಿಂದ ಕತ್ತರಿಸಿದನು.

ತತೋ ಭುಜಾಭ್ಯಾಂ ಬಲವದ್ ವಿಕೃಷ್ಯ
ಚಿತ್ರಂ ಧನುರ್ಗಾಂಡಿವಮಪ್ರಮೇಯಮ್ ।
ಮಾಹೇಂದ್ರಮಸ್ತ್ರಂ ವಿಧಿವತ್ ಸುಘೋರಂ
ಪ್ರಾದುಶ್ಚಕಾರಾದ್ಭುತಮಂತರಿಕ್ಷೇ ॥೧೧೧॥

ಅನಂತರ ತನ್ನ ಎರಡು ಭುಜಗಳಿಂದಲೂ ಅಸಾಧಾರಣ ಸಾಮರ್ಥ್ಯವುಳ್ಳ ವಿಚಿತ್ರವಾದ ಗಾಂಡೀವ ಧನುಸ್ಸನ್ನು ಬಲವಾಗಿ ಎಳೆದು ಅತ್ಯಂತ ಘೋರವೂ, ಅದ್ಭುತವೂ ಆದ ಮಹೇಂದ್ರಾಸ್ತ್ರವನ್ನು ಅಂತರಿಕ್ಷದಲ್ಲಿ ಪ್ರಾದುರ್ಭಾವಗೊಳಿಸಿದನು.

ತೇನೋತ್ತಮಾಸ್ತ್ರೇಣ ತತೋ ಮಹಾತ್ಮಾ
ಸರ್ವಾಣ್ಯನೀಕಾನಿ ಮಹಾಧನುಷ್ಮಾನ್ ।

ಶರೌಘಜಾಲೈರ್ವಿಮಲಾಗ್ನಿವರ್ಣೈಃ
ನಿವಾರಯಾಮಾಸ ಕಿರೀಟಮಾಲೀ ॥೧೧೨॥

ಮಹಾತ್ಮ..., ಕಿರೀಟಮಾಲಿಯೂ, ಮಹಾಧನುರ್ಧಾರಿಯೂ ಆದ ಅರ್ಜುನನು ಆ ಶ್ರೇಷ್ಠವಾದ ಅಸ್ತ್ರದಿಂದ ಹೊರಹೊಮ್ಮಿದ ವಿಮಲವಾದ ಅಗ್ನಿಯ ವರ್ಣದಿಂದ ಕೂಡಿದ ಬಾಣಗಳ ಸಮೂಹದ ಬಲದಿಂದ ಎಲ್ಲ ಸೈನ್ಯವನ್ನೂ ನಿವಾರಿಸಿದನು.

ಶಿಲೀಮುಖಾಃ ಪಾರ್ಥಧನುಃಪ್ರಮುಕ್ತಾ
ರಥಾನ್ ಧ್ವಜಾಗ್ರಾಣಿ ಧನೂಂಷಿ ಬಾಹೂನ್ ।
ನಿಕೃತ್ಯ ದೇಹಾನ್ ವಿವಿಶುಃ ಪರೇಷಾಂ
ಸರೇಂದ್ರನಾಗೇಂದ್ರತುರಂಗಮಾಣಾಮ್ ॥೧೧೩॥

ಅರ್ಜುನನ ಧನುಸ್ಸಿನಿಂದ ಹೊರಹೊಮ್ಮಿದ ಹರಿತವಾದ ಬಾಣಗಳು ಶತ್ರುಗಳ ರಥಗಳನ್ನೂ, ಧ್ವಜದ ಮೇಲ್ಭಾಗಗಳನ್ನೂ, ಧನುಸ್ಸುಗಳನ್ನೂ, ಬಾಹುಗಳನ್ನೂ ಕತ್ತರಿಸಿ ರಾಜರ, ಗಜಗಳ, ಅಶ್ವಗಳ ಶರೀರಗಳಲ್ಲಿ ನಾಟಿದವು.

ತತೋ ದಿಶಶ್ಚಾನುದಿಶಶ್ಚ ಪಾರ್ಥಃ
ಶರೈಃ ಸುಧಾರ್ಯೈರ್ನಿಶಿತೈರ್ವಿತತ್ಯ ।
ಗಾಂಡೀವಶಬ್ದೇನ ಮನಾಂಸಿ ತೇಷಾಂ
ಕಿರೀಟಮಾಲೀ ವ್ಯಥಯಾಂಚಕಾರ ॥೧೧೪॥

ಅನಂತರ ಕಿರೀಟಮಾಲಿಯಾದ ಪಾರ್ಥನು ದಿಕ್ಕು-ವಿದಿಕ್ಕುಗಳಲ್ಲಿ ಒಳ್ಳೆಯ ಅಲುಬುಳ್ಳ ನಿಶಿತವಾದ ಬಾಣಗಳನ್ನು ಹರಡಿ, ಗಾಂಡೀವ ಧನುಸ್ಸಿನ ಶಬ್ದದಿಂದ ಶತ್ರುಗಳ ಮನಸ್ಸಿಗೆ ವ್ಯಥೆಯನ್ನು ಉಂಟುಮಾಡಿದನು.

ತಸ್ಮಿಂಸ್ತಥಾ ಘೋರತಮೇ ಪ್ರವೃತ್ತೇ
ಶಂಖಿಸ್ವನಾ ದುಂದುಭಿಸ್ವನಾಶ್ಚ ।
ಅಂತರ್ಹಿತಾ ಗಾಂಡಿವನಿಸ್ವನೇನ
ಬಭೂವುರುಗ್ರಾಶ್ಚ ರಣಪ್ರನಾದಾಃ ॥೧೧೫॥

ಅರ್ಜುನನು ಹಾಗೆ ಅತ್ಯಂತ ಘೋರವಾಗಿ ಯುದ್ಧಮಾಡುತ್ತಿರಲು ಗಾಂಡೀವ ಧನುಸ್ಸಿನ ಘೋಷದಿಂದ ಶಂಖಧ್ವನಿಗಳು ಮತ್ತು ದುಂದುಭಿನಾದಗಳು ಅಡಗಿ ಹೋದವು. ಉಗ್ರವಾದ ಯುದ್ಧಪ್ರನಾದಗಳು ಉಂಟಾದವು.

ಗಾಂಡೀವಶಬ್ದಂ ತಮಥೋ ವಿದಿತ್ವಾ
ವಿರಾಟರಾಜಪ್ರಮುಖಾ ನೃವೀರಾಃ ।
ಪಾಂಚಾಲರಾಜೋ ದ್ರುಪದಶ್ಚ ವೀರಃ
ತಂ ದೇಶಮಾಜಗ್ಮುರದೀನಸತ್ತ್ವಾಃ ॥೧೧೬॥

ಆ ಗಾಂಡೀವ ಧನುಸ್ಸಿನ ಶಬ್ದವನ್ನು ತಿಳಿದ ವಿರಾಟರಾಜನೇ ಮೊದಲಾದ ಎಲ್ಲ ವೀರರೂ, ವೀರನಾದ ಪಾಂಚಾಲನಾದ ದ್ರುಪದನೂ ಧೈರ್ಯದಿಂದ ಕೂಡಿದ ಮನಸ್ಸುಳ್ಳವರಾಗಿ ಆ ಪ್ರದೇಶಕ್ಕೆ ಬಂದರು.

ಸರ್ವಾಣಿ ಸೈನ್ಯಾನಿ ತು ತಾವಕಾನಿ
ಯತೋಯತೋ ಗಾಂಡಿವಜಃ ಪ್ರಣಾದಃ ।
ತತಸ್ತತಃ ಸನ್ನತಿಮೇವ ಜಗ್ಮುಃ
ನ ತಂ ಪ್ರತೀಪೋಽಭಿಸಸಾರ ಕಶ್ಚಿತ್ ॥೧೧೭॥

ನಿನ್ನ ಸೈನ್ಯದವರೆಲ್ಲರೂ ಎಲ್ಲೆಲ್ಲಿ ಗಾಂಡೀವ ಧನುಸ್ಸಿನ ಘೋಷವು ಕೇಳಿ ಬರುತ್ತದೆಯೋ ಅಲ್ಲೆಲ್ಲ ಸನ್ನತಿಯನ್ನೇ ಹೊಂದಿದರು. ಅರ್ಜುನನಿಗೆ ಪ್ರತೀಕಾರ ಮಾಡಲು ಯಾವನೂ ಮುಂದೆ ಬರಲಿಲ್ಲ.

ತಸ್ಮಿನ್ ಸುಘೋರೇ ನೃಪಸಂಪ್ರಹಾರೇ
ಹತಾಃ ಪ್ರವೀರಾಃ ಸರಥಾಃ ಸಸೂತಾಃ ।
ಗಜಾಶ್ಚ ನಾರಾಚನಿಪಾತತಪ್ತಾ
ಮಹಾಪತಾಕಾಃ ಶುಭರುಗ್ಮಕಕ್ಷ್ಯಾಃ ॥೧೧೮॥

ರಾಜರ ಸಂಹಾರಯುಕ್ತವಾದ ಆ ಘೋರವಾದ ಯುದ್ಧವು ಹಾಗೆ ನಡೆಯುತ್ತಿರಲು ರಥ ಮತ್ತು ಸೂತರಿಂದ ಕೂಡಿದ ಶ್ರೇಷ್ಠರಾದ ವೀರರು ಹತರಾದರು. ಮಹಾಪತಾಕೆಗಳನ್ನೂ, ಮನೋಹರವಾದ ಸುವರ್ಣಮಾಲೆಗಳನ್ನೂ ಧರಿಸಿದ ಗಜಗಳು ಬಾಣಗಳ ಹೊಡೆತಕ್ಕೆ ತತ್ತರಿಸಿ ಹೋದವು.

ಪರೀತಸತ್ತ್ವಾ ಸಹಸಾ ನಿಪೇತುಃ
ಕಿರೀಟಿನಾ ಭಿನ್ನತನುತ್ರಕಾಯಾಃ ।
ದೃಢಾಹತಾಃ ಪತ್ರಿಭಿರುಗ್ರವೇಗೈಃ
ಪಾರ್ಥೇನ ಭಲ್ಲೈರ್ನಿಶಿತೈಃ ಶಿತಾಗ್ರೈಃ ॥೧೧೯॥

ಧೈರ್ಯವನ್ನು ಕಳೆದುಕೊಂಡ ಯೋಧರು ಅರ್ಜುನನ ಬಾಣಗಳಿಂದ ತಮ್ಮ ಕವಚ ಮತ್ತು ಶರೀರಗಳು ಭೇದಿಸಲ್ಪಡುತ್ತಿರಲು ತಕ್ಷಣದಲ್ಲಿಯೇ ಕೆಳಗೆ ಬಿದ್ದರು. ಅರ್ಜುನನಿಂದ ಹರಿತವಾದ ತುದಿಯುಳ್ಳ ಪತ್ತಗಳಿಂದ ಕೂಡಿದ ಉಗ್ರವೇಗವುಳ್ಳ ಭಲ್ಲಗಳಿಂದ ಬಲವಾಗಿ ತಾಡಿತರಾದ ಶತ್ರುಗಳೆಲ್ಲರೂ ನೆಲಕ್ಕೆ ಉರುಳಿದರು.

ನಿಕೃತ್ತಯಂತ್ರಾ ನಿಹತೇಂದ್ರಕೀಲಾ
ಧ್ವಜಾ ಮಹಾಂತೋ ಧ್ವಜಿನೀಮುಖೇಷು ।
ಪದಾತಿಸಂಘಾಶ್ಚ ರಥಾಶ್ಚ ಸಂಖೇ
ಹಯಾಶ್ಚ ನಾಗಾಶ್ಚ ಧನಂಜಯೇನ ॥೧೨೦॥

ಬಾಣಾಹತಾಸ್ತೂರ್ಣಮಪೇತಸತ್ತ್ವಾ
ವಿಪ್ಲವ್ಯ ಗಾತ್ರಾಣಿ ನಿಪೇತುರುರ್ವ್ಯಾಮ್ ।
ಐಂದ್ರೇಣ ತೇನಾಸ್ತ್ರವರೇಣ ರಾಜನ್
ಮಹಾಹವೇ ಭಿನ್ನತನುತ್ರದೇಹಾಃ ॥೧೨೧॥

ಗಜದ ಮೇಲೆ ಏರಿಸಿದ ಯಂತ್ರಗಳು ಕತ್ತರಿಸಲ್ಪಟ್ಟವು. ಮಾಯಾ ಮಂತ್ರಾದಿಗಳು ನಾಶವನ್ನು ಹೊಂದಿದವು. ಸೈನ್ಯದ ಮುಂಭಾಗದಲ್ಲಿದ್ದ ದೊಡ್ಡ ಧ್ವಜಗಳು, ಪದಾತಿ ಸಮೂಹಗಳು, ರಥಗಳು, ಅಶ್ವಗಳು, ಗಜಗಳು ಅರ್ಜುನನ ಬಾಣಗಳಿಂದ ಹತವಾಗಿ ಶೀಘ್ರವಾಗಿ ತಮ್ಮ ಪ್ರಾಣವನ್ನು ಕಳೆದುಕೊಂಡು ಭೂಮಿಯ ಮೇಲೆ ಬಿದ್ದವು. ಎಲೈ ರಾಜನೇ, ಆ ಅಸ್ತ್ರಶ್ರೇಷ್ಠವಾದ ಇಂದ್ರಾಸ್ತ್ರದಿಂದ ಆ ದೊಡ್ಡ ಯುದ್ಧದಲ್ಲಿ ಕವಚಗಳು ಮತ್ತು ದೇಹಗಳು ಕತ್ತರಿಸಲ್ಪಟ್ಟು ನೆಲದ ಮೇಲೆ ಉರುಳಿದವು.

ತತಃ ಶರೌಘೈರ್ನಿಶಿತೈಃ ಕಿರೀಟಿನಾ
ನೃದೇಹಶಸ್ತ್ರಕ್ಷತಲೋಹಿತೋದಾ ।
ನದೀ ಸುಘೋರಾ ನರದೇಹಫೇನಾ
ಪ್ರವರ್ತಿತಾ ತತ್ರ ರಣಾಜಿರೇ ವೈ ॥೧೨೨॥

ಆಗ ಅರ್ಜುನನಿಂದ ರಣರಂಗದಲ್ಲಿ ಬಾಣಗಳ ಸಮೂಹದಿಂದ ಹೊಡೆಯಲ್ಪಟ್ಟ ಯೋಧರ ದೇಹಗಳಿಂದ ಉಂಟಾದ ರಕ್ತವೆಂಬ ನೀರನ್ನು ಹೊಂದಿದ್ದ ಅತ್ಯಂತ ಘೋರವಾದ ಯೋಧರ ದೇಹವೆಂಬ ನೊರೆಯನ್ನು ಹೊಂದಿದ್ದ ನದಿಯು ಹರಿಯಿತು.

ವೇಗೇನ ಸಾತೀವ ಪೃಥುಪ್ರವಾಹಾ
ಪ್ರಸುಸ್ರುತಾ ಭೈರವಾರಾವರೂಪಾ ।
ಪರೇತನಾಗಾತ್ತಶರೀರರೋಧಾ
ನರಾಂತ್ರಮಜ್ಜಾಭೃತಮಾಂಸಶಂಷಾ ॥೦೨೩॥

ಪ್ರಭೂತರಕ್ಷೋಗಣಭೂತಸೇವಿತಾ
ಶಿರಃಕಪಾಲಾಕುಲಕೇಶಶಾದ್ವಲಾ ।
ಶರೀರಸಂಘಾತಸಹಸ್ರವಾಹಿನೀ
ವಿಶೀರ್ಣನಾನಾಕವಚೋರ್ಮಿಸಂಕುಲಾ ॥೦೨೪॥

ನರಾಶ್ವನಾಗಾಯುನಿಕೃತ್ತತರ್ಕರಾ
ವಿನಾಶಪಾಲಾಲವತೀ ಭಯಾವಹಾ ।

ವಿಸ್ತಾರವಾದ ಪ್ರವಾಹವುಳ್ಳ, ಭಯಂಕರವಾದ ಶಬ್ದಗಳಿಂದ ಕೂಡಿದ, ಮೃತವಾದ ಗಜಾಶ್ವ ಶರೀರಗಳ ತೀರವನ್ನು ಹೊಂದಿದ, ಯೋಧರ ಕರುಳು, ಮಜ್ಜ ಮತ್ತು ಮಾಂಸವೆಂಬ ಕೆಸರನ್ನು ಹೊಂದಿದ, ಅನೇಕ ಸಂಖ್ಯೆಯ ರಾಕ್ಷಸ ಗಣದಿಂದಲೂ ಮತ್ತು ಭೂತಗಳಿಂದಲೂ ಸೇವಿತವಾದ, ಶಿರಃಕಪಾಲದಿಂದ ಕೂಡಿದ, ಕೆದರಿದ ಕೇಶಗಳೆಂಬ ಮೃದುಪ್ರದೇಶಗಳುಳ್ಳ, ಸಹಸ್ರಾರು ಶರೀರಗಳ ಸಮೂಹವನ್ನು ತೆಗೆದುಕೊಂಡು ಹರಿಯುವ, ಹರಿದುಹೋದ ಅನೇಕ ವಿಧವಾದ ಕವಚಗಳೆಂಬ ತರಂಗಗಳಿಂದ ನಿಬಿಡವಾದ, ಚೂರ್ಣೀಕೃತವಾದ ನರಾಶ್ವಗಜಗಳ ಅಸ್ಥಿಗಳೆಂಬ ಮರಳುಗಳನ್ನುಳ್ಳ, ಯುದ್ಧದಲ್ಲಿ ವಿನಾಶವುಂಟಾದ ಮಾಂಸಗಳ ಸಮೂಹವುಳ್ಳ, ನದಿಯು ಹರಿಯಿತು.

ಶಾಂ ಕಂಕಮಾಲಾವೃತಗೃಧ್ರಕಙ್ಕೈಃ
ಕ್ರವ್ಯಾದಸಂಘೈಶ್ಚ ಪರಿಪ್ಲುತಶ್ಚ ॥೦೨೫॥

ಉಪೇತಕೂಲಾಂ ದದೃಶುಃ ಸಮಂತಾತ್
ಕ್ರೂರಾಂ ಮಹಾವೈತರಣೀಪ್ರಕಾಶಾಮ್ ।
ಪ್ರವರ್ತಿತಾಮರ್ಜುನಬಾಣಸಂಘೈಃ
ಮೇದೋವಸಾಸೃಕ್ಪ್ರವಹಾಂ ಸುಭೀಮಾಮ್ ॥೧೨೬॥

ಕಂಕಪಕ್ಷಿಗಳ ಸಮೂಹಗಳು ಹದ್ದುಗಳು ಮತ್ತು ಕಹ್ವಪಕ್ಷಿಗಳು ಮಾಂಸಾಹಾರಿ ಪ್ರಾಣಿಗಳ ಸಮೂಹಗಳು ಮತ್ತು ಚಿರತೆಗಳಿಂದ ತುಂಬಿದ ತೀರಗಳುಳ್ಳ, ಕ್ರೂರವಾದ, ಮಹಾವೈತರಣಿಯಂತಹ ಅರ್ಜುನನ ಬಾಣಸಮೂಹಗಳಿಂದ ಉಂಟಾದ ಮೇಧಸ್ಸು, ವಸಾ ಮತ್ತು ರಕ್ತಪ್ರವಾಹವುಳ್ಳ ಆ ಭಯಂಕರವಾದ ನದಿಯನ್ನು ಎಲ್ಲರೂ ನೋಡಿದರು.

ತೇ ಚೇದಿಪಾಂಚಾಲಕರೂಶಮತ್ಸ್ಯಾಃ
ಪಾರ್ಥಾಶ್ಚ ಸರ್ವೇ ಸಹಿತಾಃ ಪ್ರಹೃಷ್ಟಾಃ ।
ಜಯಪ್ರಗಲ್ಭಾಃ ಪುರುಷಪ್ರವೀರಾಃ
ಸಂತಾಪಯಂತಃ ಕುರುಯೋಧವೀರಾನ್ ॥೧೨೭॥

ಪುರುಷಪ್ರವೀರರಾದ, ಜಯದ ಸಂತೋಷವುಳ್ಳ ಆ ಚೇದಿ, ಪಾಂಚಾಲ, ಕರೂಶ, ಮತ್ಸ್ಯರು ಮತ್ತು ಎಲ್ಲ ಪಾಂಡವರು ಜೊತೆಯಾಗಿ ಶ್ರೇಷ್ಠರಾದ ಕುರುಯೋಧರನ್ನು ಸಂತಾಪಗೊಳಿಸುತ್ತಾ ಸಿಂಹನಾದವನ್ನು ಮಾಡಿದರು.

ವಿತ್ರಾಸ್ಯ ಸೇನಾಂ ಧ್ವಜಿನೀಪತೀನಾಂ
ಸಿಂಹೋ ಮೃಗಾಣಾಮಿವ ಯೂಥಸಂಘಾನ್ ।
ಹತಪ್ರವೀರಾಣಿ ಬಲಾನಿ ದೃಷ್ಟ್ವಾ
ಕಿರೀಟಿನಾ ಶತ್ರುಭಯಾವಹೇನ ।
ವಿನೇದತುಸ್ತಾವತಿಹರ್ಷಯುಕ್ತೌ
ಗಾಂಡೀವಧನ್ವಾ ಚ ಜನಾರ್ದನಶ್ಚ ॥೧೨೮॥

ಸೇನಾಪತಿಗಳ ಸೈನ್ಯವನ್ನು ಸಿಂಹವು ಮೃಗಗಳ ಸಮೂಹವನ್ನು ನಾಶಗೊಳಿಸುವಂತೆ ನಾಶಗೊಳಿಸಿ, ಶತ್ರುಭಯಂಕರನಾದ ಅರ್ಜುನನಿಂದ ಹತರಾದ ವೀರರನ್ನುಳ್ಳ ಸೈನ್ಯಗಳನ್ನು ನೋಡಿ, ಅತ್ಯಂತ ಸಂತೋಷದಿಂದ ಕೂಡಿದ ಕೃಷ್ಣಾರ್ಜುನರು ಸಿಂಹನಾದವನ್ನು ಮಾಡಿದರು.

ತತೋ ರವಿಂ ಸಂಹೃತರಶ್ಮಿಜಾಲಂ
ದೃಷ್ಟ್ವಾ ಭೃಶಂ ಶಸ್ತ್ರಪರಿಕ್ಷತಾಂಗಾಃ ।
ತದೈಂದ್ರಮಸ್ತ್ರಂ ವಿತತಂ ಸುಘೋರ-
ಮಸಹ್ಯಮುದ್ವೀಕ್ಷ್ಯ ಯುಗಾಂತಕಲ್ಪಮ್ ॥೧೨೯॥

ಅಥಾಪಯಾನಂ ಕುರವಃ ಸಭೀಷ್ಮಾಃ
ಸದ್ರೋಣದುರ್ಯೋಧನಬಾಹ್ಲಿಕಾಶ್ಚ ।
ಚಕ್ರುರ್ನಿಶಾಂ ಸಂಧಿಗತಾಂ ಸಮೀಕ್ಷ್ಯ
ವಿಭಾವಸೋರ್ಲೋಹಿತರಾಜಿಯುಕ್ತಾಮ್ ॥೧೩೦॥

ಅನಂತರ ಸೂರ್ಯನು ತನ್ನ ರಶ್ಮಿಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿರುವುದನ್ನು ನೋಡಿ, ಘೋರವಾದ ಇಂದ್ರಾಸ್ತ್ರವು ಸಹಿಸಲು ಅಸಾಧ್ಯವಾಗಿ ಯುಗಾಂತದಂತೆ ವ್ಯಾಪ್ತವಾಗಿರುವುದನ್ನು ನೋಡಿ, ಶಸ್ತ್ರಗಳಿಂದ ಬಹಳವಾಗಿ ಗಾಯಗೊಂಡ ಶರೀರವುಳ್ಳ ಕುರುಗಳು, ಭೀಷ್ಮರು, ದ್ರೋಣರು, ದುರ್ಯೋಧನ, ಬಾಹ್ಲಿಕರು ಸೂರ್ಯನ ಸಂಧ್ಯಾಕಾಲದ ಅರುಣಕಿರಣಗಳನ್ನು ಗಮನಿಸಿ, ರಾತ್ರಿಯ ಆಗಮನವನ್ನು ಗಮನಿಸಿ ಯುದ್ಧದಿಂದ ಅಪಯಾನವನ್ನು ಮಾಡಿದರು.

ಅವಾಪ್ಯ ಕೀರ್ತಿಂ ಚ ಯಶಶ್ಚ ಲೋಕೇ
ವಿಜಿತ್ಯ ಶತ್ರೂಂಶ್ಚ ಧನಂಜಯೋಽಪಿ ।
ಯಯೌ ನರೇಂದ್ರೈಃ ಸಹ ಸೋದರೈಶ್ಚ
ಸಮಾಪ್ತಕರ್ಮಾ ಶಿಬಿರಂ ನಿಶಾಯಾಮ್ ।
ತತಃ ಪ್ರಜಜ್ಞೇ ತುಮುಲಃ ಕುರೂಣಾಂ
ನಿಶಾಮುಖೇ ಘೋರತರಃ ಪ್ರಣಾದಃ ॥೧೩೧॥

ಅರ್ಜುನನಾದರೂ ಶತ್ರುಗಳನ್ನು ಗೆದ್ದು ಲೋಕದಲ್ಲಿ ಕೀರ್ತಿಯನ್ನೂ, ಯಶಸ್ಸನ್ನೂ ಗಳಿಸಿ ತನ್ನ ಆ ದಿನದ ಕಾರ್ಯವನ್ನು ಮುಗಿಸಿ ರಾಜರ ಮತ್ತು ಸಹೋದರರ ಜೊತೆಯಲ್ಲಿ ತನ್ನ ಶಿಬಿರಕ್ಕೆ ಹೋದನು. ಅನಂತರ ಆ ರಾತ್ರಿಯ ಮೊದಲ ಭಾಗದಲ್ಲಿ ಕುರುಗಳ ಶಿಬಿರದಲ್ಲಿ ಘೋರತರವಾದ, ತೀವ್ರವಾದ ನಾದವು ಉಂಟಾಯಿತು.

ರಣೇ ರಥಾನಾಮಯುತಂ ನಿಹತ್ಯ
ಹತಾ ಗಜಾಃ ಸಪ್ತಶತಾರ್ಜುನೇನ ।
ಪ್ರಾಚ್ಯಾಶ್ಚ ಸೌವೀರಗಣಾಶ್ಚ ಸರ್ವೇ
ನಿಪಾತಿತಾಃ ಕ್ಷುದ್ರಕಮಾಲವಾಶ್ಚ ।
ಮಹತ್‌ಕೃತಂ ಕರ್ಮ ಧನಂಜಯೇನ
ಕರ್ತುಂ ಯಥಾ ನಾರ್ಹತಿ ಕಶ್ಚಿದನ್ಯಃ ॥೧೩೨॥

ಅರ್ಜುನನು ಹತ್ತುಸಾವಿರ ರಥಗಳನ್ನು ಯುದ್ಧದಲ್ಲಿ ಸಂಹರಿಸಿ, ಏಳುನೂರು ಗಜಗಳನ್ನು ಸಂಹರಿಸಿದ್ದನು. ಪ್ರಾಚ್ಯದೇಶದ ರಾಜರು, ಸೌವೀರ ಗಣಗಳು, ಕ್ಷುದ್ರಕ ಮಾಲವ ಯೋಧರೆಲ್ಲರೂ ಅರ್ಜುನನಿಂದ ಹತರಾಗಿದ್ದರು. ಇನ್ನೊಬ್ಬರು ಮಾಡಲು ಸಾಧ್ಯವಿಲ್ಲದಂತಹ ಮಹತ್ಕಾರ್ಯವನ್ನು ಅರ್ಜುನನು ಮಾಡಿದ್ದನು.

ಶ್ರುತಾಯುರಂಬಷ್ಠಪತಿಶ್ಚ ರಾಜಾ
ತಥೈವ ದುರ್ಮರ್ಷಣಚಿತ್ರಸೇನೌ ।
ದ್ರೋಣಃ ಕೃಪಃ ಸೈಂಧವಬಾಹ್ಲಿಕೌ ಚ
ಭೂರಿಶ್ರವಾಃ ಶಲ್ಯಶಲೌ ಚ ರಾಜನ್ ॥೧೩೩॥

ಅನ್ಯೇ ಚ ಯೋಧಾಃ ಶತಶಃ ಸಮೇತಾಃ
ಕ್ರುದ್ಧೇನ ಪಾರ್ಥೇನ ರಣಸ್ಯ ಮಧ್ಯೇ ।
ಸ್ವಬಾಹುವೀರ್ಯೇಣ ಜಿತಾಃ ಸಭೀಷ್ಮಾಃ
ಕಿರೀಟಿನಾ ಲೋಕಮಹಾರಥೇನ ॥೧೩೪॥

ಅಂಬಷ್ಠಪತಿಯಾದ ಶ್ರುತಾಯು ರಾಜ, ಹಾಗೆಯೇ ದುರ್ಮರ್ಷಣ-ಚಿತ್ರಸೇನರು, ದ್ರೋಣರು-ಕೃಪರು, ಸೈಂಧವ-ಬಾಹ್ಲಿಕರು, ಭೂರಿಶ್ರವ, ಶಲ್ಯ, ಶಲ ಮತ್ತು ಒಟ್ಟಿಗೆ ಸೇರಿದ ನೂರಾರು ಯೋಧರು ಎಲ್ಲರೂ ಕೋಪಗೊಂಡ ಅರ್ಜುನನಿಂದ ರಣರಂಗದ ಮಧ್ಯದಲ್ಲಿ ತನ್ನ ಬಾಹುಸಾಮರ್ಥ್ಯದಿಂದಲೇ ಅರ್ಜುನನಿಂದ ಪರಾಜಿತರಾದರು. ಲೋಕಮಹಾರಥನಾದ ಅರ್ಜುನನಿಂದ ಭೀಷ್ಮ ಸಹಿತರಾದ ಎಲ್ಲರೂ ಪರಾಜಿತರಾದರು.

ಇತಿ ಬ್ರುವಂತಃ ಶಿಬಿರಾಣಿ ಜಗ್ಮುಃ
ಸರ್ವೇ ಗಣಾ ಭಾರತ ಯೇ ತ್ವದೀಯಾಃ ।
ಉಲ್ಕಾಸಹಸ್ರೈಶ್ಚ ಸುಸಂಪ್ರದೀಪ್ತೈಃ
ವಿಭ್ರಾಜಮಾನೈಶ್ಚ ತಥಾ ಪ್ರದೀಪ್ತೈಃ ।
ಕಿರೀಟವಿತ್ರಾಸಿತಸರ್ವಯೋಧಾ
ಚಕ್ರೇ ನಿವೇಶಂ ಧ್ವಜಿನೀ ಕುರೂಣಾಮ್ ॥೧೩೫॥

ಎಲೈ ಭಾರತನೇ, ಹೀಗೆ ಹೇಳುತ್ತಾ ನಿನ್ನ ಉಳಿದ ಯೋಧರು ತಮ್ಮ ತಮ್ಮ ಶಿಬಿರಕ್ಕೆ ಹೋದರು. ದೀಪ್ತವಾದ ಸಹಸ್ರಾರು ಪಂಜುಗಳಿಂದಲೂ, ಶೋಭಿಸುವ ಅನೇಕ ದೀಪಗಳಿಂದಲೂ ಕೂಡಿದ ಕೌರವರ ಸೈನ್ಯವು ಅರ್ಜುನನ ಬಾಣಗಳಿಂದ ಹೆದರಿದ ಸರ್ವಯೋಧರನ್ನು ಹೊಂದಿ ಆ ರಾತ್ರಿಯಲ್ಲಿ ವಿಶ್ರಾಂತಿಯನ್ನು ಪಡೆಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಪಂಚಪಂಚಾಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಪಂಚವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಐವತ್ತೈದನೆಯ ಅಧ್ಯಾಯ ಮುಗಿಯಿತು.
ಭೀಷ್ಮಸೇನಾಪತ್ಯದಲ್ಲಿ ಮೂರನೆಯ ದಿನದ ಯುದ್ಧವು ಮುಗಿಯಿತು.

★ ★ ★ ★ ★

ಐವತ್ತಾರನೆಯ ಅಧ್ಯಾಯ

ನಾಲ್ಕನೆಯ ದಿವಸದ ಯುದ್ಧದ ಪ್ರಾರಂಭ. ಭೀಷ್ಮಾರ್ಜುನರ ಪ್ರತಾಪ.

ಸಂಜಯಃ

ವ್ಯುಷ್ಟಾಂ ನಿಶಾಂ ಭಾರತ ಭಾರತಾನಾಮ್
ಅನೀಕಿನೀನಾಂ ಪ್ರಮುಖೇ ಮಹಾತ್ಮಾ ।
ಯಯೌ ಸಪತ್ನಾನ್ ಪ್ರತಿ ಜಾತಕೋಪೋ
ವೃತಃ ಸಮಗ್ರೇಣ ಬಲೇನ ಭೀಷ್ಮಃ ॥೧॥

ಸಂಜಯ– ಎಲೈ ಭಾರತನೇ, ರಾತ್ರಿಯು ಕಳೆಯುತ್ತಿರಲು ಮಹಾತ್ಮರಾದ ಭೀಷ್ಮರು ಶತ್ರುಗಳ ಮೇಲೆ ಕೋಪವನ್ನು ಹೊಂದಿದವರಾಗಿ ಸಮಗ್ರವಾದ ಸೈನ್ಯದಿಂದ ಸಹಿತರಾಗಿ ಕೌರವರ ಸೈನ್ಯದ ಮುಂಭಾಗದಲ್ಲಿ ನಡೆದರು.

ತಂ ದ್ರೋಣದುರ್ಯೋಧನಬಾಹ್ಲಿಕಾಶ್ಚ
ತಥೈವ ದುರ್ಮರ್ಷಣಚಿತ್ರಸೇನೌ ।
ಜಯದ್ರಥಶ್ಚಾತಿಬಲೋ ಬಲೌಘೈಃ
ನೃಪಾಸ್ತಥಾಽನ್ಯೇಽನುಯಯುಃ ಸಮಂತಾತ್ ॥೨॥

ದ್ರೋಣ-ದುರ್ಯೋಧನ-ಬಾಹ್ಲಿಕರೂ, ಹಾಗೆಯೇ ದುರ್ಮರ್ಷಣ-ಚಿತ್ರಸೇನರೂ, ಅತಿ ಬಲಿಷ್ಠನಾದ ಜಯದ್ರಥ ಮತ್ತು ಉಳಿದ ರಾಜರೂ ಎಲ್ಲ ಕಡೆಗಳಿಂದಲೂ ತಮ್ಮ ಸೈನ್ಯದ ಜೊತೆಯಲ್ಲಿ ಭೀಷ್ಮರನ್ನು ಹಿಂಬಾಲಿಸಿದರು.

ಸ ತೈರ್ಮಹದ್ಭಿಶ್ಚ ಮಹಾರಥೈಶ್ಚ
ತೇಜಸ್ವಿಭಿರ್ವೀರ್ಯವದ್ಭಿಶ್ಚ ರಾಜನ್ ।
ರರಾಜ ರಾಜೋತ್ತಮ ರಾಜಮುಖ್ಯೈಃ
ವೃತಃ ಸ ದೇವೈರಿವ ವಜ್ರಪಾಣಿಃ ॥೩॥

ಮಹಾತ್ಮರೂ, ಮಹಾರಥರೂ, ಕಾಂತಿಮಂತರೂ, ಪರಾಕ್ರಮಶಾಲಿಗಳೂ ಆದ ರಾಜಶ್ರೇಷ್ಠರಿಂದ ಮತ್ತು ಪ್ರಧಾನ ರಾಜರಿಂದ ಪರಿವೃತರಾದ ಭೀಷ್ಮರು ಎಲೈ ರಾಜನೇ, ದೇವತೆಗಳಿಂದ ಸುತ್ತುವರಿಯಲ್ಪಟ್ಟ ವಜ್ರಪಾಣಿಯಾದ ಇಂದ್ರನಂತೆ ಶೋಭಿಸಿದರು.

ತಸ್ಮಿನ್ನನೀಕಪ್ರಮುಖೇ ವಿಷಕ್ತಾ
ದೋಧೂಯಮಾನಾಶ್ಚ ಮಹಾಪತಾಕಾಃ ।
ಸುರಕ್ತಪೀತಾಸಿತಪಾಂಡುರಾಭಾ
ಮಹಾಗಜಸ್ಕಂಧಗತಾ ವಿರೇಜುಃ ॥೪॥

ಆ ಸೈನ್ಯದ ಮುಂಭಾಗದಲ್ಲಿ ದೊಡ್ಡ ಆನೆಗಳ ಭುಜದ ಮೇಲೆ ನಿಲ್ಲಿಸಿದ ಕೆಂಪು, ಹಳದಿ, ಬಿಳಿ, ಕಪ್ಪು ಬಣ್ಣಗಳ ಮಹಾಪತಾಕೆಗಳು ಗಾಳಿಗೆ ಕಂಪಿಸುತ್ತಾ ವಿರಾಜಿಸಿದವು.

ಸಾ ವಾಹಿನೀ ಶಾಂತನವೇನ ರಾಜ್ಞಾ
ಮಹಾರಥೈರ್ವಾರಣವಾಜಿಭಿಶ್ಚ ।
ಬಭೌ ಸವಿದ್ಯುತ್ಸ್ತನಯಿತ್ನುಕಲ್ಪಾ
ಜಲಾಗಮೇ ದ್ಯೌರಿವ ಜಾತಮೇಘಾ ॥೫॥

ಶಂತನುಪುತ್ರರಾದ ರಾಜರಾದ ಭೀಷ್ಮರಿಂದಲೂ, ಮಹಾರಥರಿಂದಲೂ, ಅಶ್ವ-ಗಜಗಳಿಂದಲೂ ಕೂಡಿದ ಆ ಸೈನ್ಯವು ಗುಡುಗು, ಮಿಂಚುಗಳಿಂದ ಕೂಡಿದ ಮೇಘಗಳನ್ನು ಹೊಂದಿದ ಮಳೆಗಾಲದ ಆಕಾಶದಂತೆ ಶೋಭಿಸಿತು.

ತತೋ ರಣಾಯಾಭಿಮುಖೀ ಪ್ರಯಾತಾ
ಪ್ರತ್ಯರ್ಜುನಂ ಶಾಂತನವಾಭಿಗುಪ್ತಾ ।
ಸೇನಾ ಮಹೋಗ್ರಾ ಸಹಸಾ ಕುರೂಣಾಂ
ವೇಗೋ ಯಥಾ ಭೀಮ ಇವಾಪಗಾಯಾಃ ॥೬॥

ಅನಂತರ ಭೀಷ್ಮರಿಂದ ರಕ್ಷಿತವಾದ ಕುರುಗಳ ಮಹಾಸೈನ್ಯವು ತಕ್ಷಣದಲ್ಲಿ ಯುದ್ಧಕ್ಕೆ ಸಿದ್ಧವಾಗಿ ಅರ್ಜುನನ ಕಡೆಗೆ ಅಭಿಮುಖವಾಗಿ ಗಂಗಾನದಿಯ ಭಯಂಕರವಾದ ವೇಗದಂತೆ ಸಾಗಿತು.

ತಂ ವ್ಯಾಲನಾನಾವಿಧಗೂಢಸಾರಂ
ಗಜಾಶ್ವಪಾದಾತರಥೌಘಪಕ್ಷಮ್ ।
ವ್ಯೂಹಂ ಮಹಾಮೇಘಸಮಂ ಮಹಾತ್ಮಾ
ದದರ್ಶ ದೂರಾತ್ ಕಪಿರಾಜಕೇತುಃ ॥೭॥

ಕಪಿರಾಜಧ್ವಜನಾದ ಮಹಾತ್ಮನಾದ ಅರ್ಜುನನು ವ್ಯಾಲ ಮೊದಲಾದ ನಾನಾ ವಿಧವಾದ ಗೂಢಸತ್ವವನ್ನು ಹೊಂದಿದ್ದ, ಗಜಾಶ್ವರಥಪದಾತಿಗಳಿಂದ ತುಂಬಿದ, ಮಹಾಮೇಘ ಸದೃಶವಾದ ವ್ಯೂಹವನ್ನು ದೂರದಿಂದಲೇ ನೋಡಿದನು.

ಸ ನಿರ್ಯಯೌ ಕೇತುಮತಾ ರಥೇನ
ನರರ್ಷಭಃ ಶ್ವೇತಹಯೇನ ವೀರಃ ।
ವರೂಥಿನಾ ಸೈನ್ಯಮುಖೇ ಮಹಾತ್ಮಾ
ವಧೇ ಧೃತಃ ಸರ್ವಸಪತ್ನಯೂನಾಮ್ ॥೮॥

ನರಶ್ರೇಷ್ಠನೂ, ವೀರನೂ ಆದ ಅವನು ಶ್ವೇತಾಶ್ವಗಳನ್ನು ಹೂಡಿದ ಧ್ವಜಯುಕ್ತವಾದ ರಥದಿಂದ ಹೊರಟು ಬಂದನು. ಮಹಾತ್ಮನಾದ ಅವನು ಸೈನ್ಯದ ಮುಂಭಾಗದಲ್ಲಿ ಸುರಕ್ಷಿತವಾದ ರಥದಲ್ಲಿ ಶತ್ರುಸೇನೆಯ ಸರ್ವಯುವಕರ ವಧೆಯನ್ನು ನಿಶ್ಚಯಿಸಿ ಬಂದನು.

ಸೂಪಸ್ಕರಂ ಸೋತ್ತರಬಂಧುರೇಷಂ
ಯತ್ತಂ ಯದೂನಾಮೃಷಭೇಣ ಸಂಖೇ ।
ಕಪಿಧ್ವಜಂ ಪ್ರೇಕ್ಷ್ಯ ಏಷೇದುರಾಜೌ
ಸಹೈವ ಪುತ್ರೈಸ್ತವ ಕೌರವೇಯಾಃ ॥೯॥

ಒಳ್ಳೆಯ ಸಲಕರಣೆಗಳಿಂದ ಕೂಡಿದ್ದ ಮತ್ತು ಒಳ್ಳೆಯ ಮತ್ತು ಸುಂದರವಾದ ರಥಾಂಗಗಳಿಂದ ಕೂಡಿದ್ದ, ಯದುಶ್ರೇಷ್ಠನಾದ ಕೃಷ್ಣನಿಂದ ನಿಯಂತ್ರಿಸಲ್ಪಟ್ಟ, ಕಪಿಧ್ವಜವುಳ್ಳ ರಥವನ್ನು ರಣರಂಗದಲ್ಲಿ ನೋಡಿ ನಿನ್ನ ಪುತ್ರರ ಜೊತೆಯಲ್ಲಿ ಎಲ್ಲ ಕೌರವರೂ ವಿಷಾದವನ್ನು ಹೊಂದಿದರು.

ಪ್ರಕರ್ಷತಾ ಗುಪ್ತಮುದಾಯುಧೇನ
ಕಿರೀಟಿನಾ ಲೋಕಮಹಾರಥೇನ ।
ತಂ ವ್ಯೂಹರಾಜಂ ದದೃಶುಸ್ತ್ವದೀಯಾಃ
ಚತುಶ್ಚತುರ್ಭಾಲಸಹಸ್ರಕೀರ್ಣಮ್ ॥೧೦॥

ಲೋಕಮಹಾರಥನಾದ, ಆಯುಧವನ್ನು ಎತ್ತಿಹಿಡಿದ, ಅರ್ಜುನನಿಂದ ನಡೆಸಲ್ಪಟ್ಟ ಪಾಂಡವರ ನಾಲ್ಕು-ನಾಲ್ಕು ಆನೆಗಳ ಸಹಸ್ರದಿಂದ ತುಂಬಿದ ಆ ಶ್ರೇಷ್ಠವಾದ ವ್ಯೂಹವನ್ನು ನಿನ್ನವರು ನೋಡಿದರು.

ಯಥಾ ಹಿ ಪೂರ್ವೇऽಹನಿ ಧರ್ಮರಾಜ್ಞಾ
ವ್ಯೂಹಃ ಕೃತಃ ಕೌರವನಂದನೇನ ।
ತಥಾ ತಥೋದ್ದೇಶಮುಪೇತ್ಯ ತಸ್ಥುಃ
ಪಾಂಚಾಲಮುಖ್ಯೈಃ ಸಹ ಚೇದಿಮುಖ್ಯಾಃ ॥೧೧॥

ಹಿಂದಿನ ದಿನ ಕೌರವನಂದನನಾದ ಧರ್ಮರಾಜನು ಹೇಗೆ ವ್ಯೂಹವನ್ನು ರಚಿಸಿದ್ದನೋ, ಅದರಂತೆ ಪಾಂಚಾಲ ಶ್ರೇಷ್ಠರು ಮತ್ತು ಚೇದಿಶ್ರೇಷ್ಠರು ಆಯಾ ಸ್ಥಳಗಳಲ್ಲಿ ಹೋಗಿ ನಿಂತರು.

ತತೋ ಮಹಾವೇಗಸಮಾಹತಾನಿ
ಭೇರೀಸಹಸ್ರಾಣಿ ಏನೇದುರಾಜೌ ।

ಶಂಖಿಸ್ವನಾ ದುಂದುಭಿನಿಸ್ವನಾಶ್ಚ
ಸರ್ವೇಷ್ವನೀಕೇಷು ಸಸಿಂಹನಾದಾಃ ॥೧೨॥

ಅನಂತರ ಮಹಾವೇಗದಿಂದ ಬಾರಿಸಲ್ಪಟ್ಟ ಸಹಸ್ರ ಭೇರಿಗಳು ರಣರಂಗದಲ್ಲಿ ಮೊಳಗಿದವು. ಎಲ್ಲ ಸೈನ್ಯಗಳಲ್ಲಿಯೂ ಶಂಖನಾದಗಳು, ದುಂದುಭಿ ಘೋಷಗಳು ಮತ್ತು ಸಿಂಹನಾದಗಳು ಉಂಟಾದವು.

ತತಃ ಸಬಾಣಾನಿ ಮಹಾಸ್ವನಾನಿ
ವಿಸ್ಫಾರ್ಯಮಾಣಾನಿ ಧನೂಂಷಿ ವೀರೈಃ ।
ಕ್ಷಣೇನ ಭೇರೀಪಣವಪ್ರಣಾದಾನ್
ಅಂತರ್ದಧುಃ ಶಂಖಿಮಹಾಸ್ವನಾಶ್ಚ ॥೧೩॥

ಅನಂತರ ಒಂದು ಕ್ಷಣದಲ್ಲಿ ವೀರರಿಂದ ಎಳೆಯಲ್ಪಡುವ ಧನುಸ್ಸುಗಳ ಮತ್ತು ಬಾಣಗಳ ಶಬ್ದಗಳು ಭೇರೀ-ಪಣವ ಮೊದಲಾದವುಗಳಿಂದ ಉಂಟಾದ ಶಬ್ದವನ್ನು ಒಂದು ಕ್ಷಣದಲ್ಲಿ ಅಡಗಿಸಿದವು. ಶಂಖದ ಮಹಾನಾದವು ಕೇಳಿ ಬರುತ್ತಿತ್ತು.

ತಚ್ಛಂಖಿಶಬ್ದಾವೃತಮಂತರಿಕ್ಷಮ್
ಉದ್ಧೂತಭೌಮದ್ರುತರೇಣುಜಾಲಮ್ ।
ಮಹಾವಿತಾನಾವತತಪ್ರಕಾಶಮ್
ಆಲೋಕ್ಯ ವೀರಾಃ ಸಹಸಾಭಿಪೇತುಃ ॥೧೪॥

ಅಂತರಿಕ್ಷವು ಶಂಖಗಳ ಮಹಾಶಬ್ದದಿಂದ ತುಂಬಿ ಭೂಮಿಯಿಂದ ಎದ್ದ ಧೂಳಿನಿಂದ ಆವೃತವಾಗಿ ಪ್ರಕಾಶವು ತಡೆಯಲ್ಪಟ್ಟಿರುವುದನ್ನು ನೋಡಿದ ವೀರರು ತಕ್ಷಣ ಒಬ್ಬರ ಮೇಲೆ ಒಬ್ಬರು ಎರಗಿದರು.

ರಥೀ ರಥೇನಾಭಿಹತಃ ಸಸೂತಃ
ಪಪಾತ ಸಾಶ್ವಃ ಸರಥಃ ಸಕೇತುಃ ।
ಗಜೋ ಗಜೇನಾಭಿಹತಃ ಪಪಾತ
ಪದಾತಿನಾ ಚಾಭಿಹತಃ ಪದಾತಿಃ ॥೧೫॥

ರಥದಿಂದ ಹೊಡೆಯಲ್ಪಟ್ಟು ಇನ್ನೊಬ್ಬ ರಥನು ತನ್ನ ಸೂತ. ಅಶ್ವಗಳು ಮತ್ತು ಧ್ವಜಯುಕ್ತವಾದ ರಥದ ಹೊಡೆಯಲ್ಪಟ್ಟ ಕೆಳಗೆ ಬಿದ್ದನು. ಗದೆಯಿಂದ ಅಭಿಹತವಾದ ಗಜವು ಬಿದ್ದಿತು. ಪದಾತಿಯಿಂದ ಅಭಿಹತನಾದ ಪದಾತಿಯು ಬಿದ್ದನು.

ಅಪರೇಣಾಸ್ಯ ಧಾವಂತಂ
ದಾಸ್ಯಃ ಪ್ರಾಪ್ತಪ್ರಲಾಪಿನಂ ।
ಖಡ್ಗೇನ ಖಡ್ಗಿನಂ ಕಶ್ಚಿತ್
ಪಟ್ಟಿಶೇನ ಚ ಪಟ್ಟಿಶಂ ॥೧೬॥

ಗುಂಗಳಿಗೆ ಅಧಮುಖವಾಗಿ ಹೋಗುವ ಮತ್ತು ತಿರುಗಿಕೊಂಡು ಹೋಗುವ ಬಾಣಗಳಿಂದ ಉಂಟಾದ ಗಾಯಗಳು ನೋಡಲು ಅದ್ಭುತವಾಗಿದ್ದವು. ಒಳ್ಳೆಯ ಅಶ್ವ ಸೂತಪುತ್ರರಿಂದ ಪ್ರಾಸಗಳಿಂದಲೂ, ಖಡ್ಗಗಳಿಂದಲೂ ಪ್ರಹಾರ ಮಾಡಲ್ಪಟ್ಟವು.

ಸುವರ್ಣಾಶ್ಚಾಪಿ ಸಂಗ್ರಾಮೇ
ಶರಾಸ್ತಾಸಾಂ ಪ್ರಮುಂಚತಾಂ ನೃಣಾಂ ।
ವಿಚಿತ್ರಾಯೋಧಿನಾಂ ಶಸ್ತ್ರೈಃ
ಪ್ರಾಸೈಶ್ಚ ಖಡ್ಗೈಶ್ಚ ವಿಶೇಷಯಿಷ್ಯಾಮಃ ॥೧೭॥

ವೀರರಿಂದ ಪ್ರಯೋಗಿಸಲ್ಪಟ್ಟ ಸುವರ್ಣಮಯವಾದ ನಕ್ಷತ್ರಗಳಿಂದ ಭೂಷಿತವಾದ ಬತ್ತಳಿಕೆಗಳು ಪರಶ್ವಧಗಳಿಂದಲೂ, ಪ್ರಾಸಗಳಿಂದಲೂ, ಖಡ್ಗಗಳಿಂದಲೂ ಹೊಡೆಯಲ್ಪಟ್ಟು ಭೂಮಿಯ ಮೇಲೆ ಬಿದ್ದವು.

ಗಜೈರಾಜಾಗ್ರಯೋದಾಶ್ಚ
ಶೇಷಾ ಸೂತಾ ರಥಿನಃ ಪ್ರಮೋಷಃ ।
ಗದಾಭಿರಾಶ್ಮಭಿಃ ರಥಾಭ್ಯೋಗಾ
ವಿಚೇತಿರೇ ಬಾಣಜಾಃ ಕ್ಷತಿಜಾಶ್ಚ ॥೧೮॥

ಗಜಗಳ ವಿಷಾಣಗಳಿಂದಲೂ, ಸೊಂಡಿಲುಗಳಿಂದಲೂ ಗಾಯಗೊಂಡ ಶೇಷವು ರಥಿಕರು ಸೂತರೊಡನೆ ಸೇರಿ ಓಡುತ್ತಿದ್ದರು. ಶ್ರೇಷ್ಠವಾದ ಗಜಗಳೂ ಸಹ ಶ್ರೇಷ್ಠವಾದ ರಥದಿಂದ ಬಾಣಗಳಿಂದ ಹತವಾಗಿ ಭೂಮಿಯ ಮೇಲೆ ಬಿದ್ದವು.

ಗಜೌಘವೇಗೋದ್ಧತಸಾದಿತಾನಾಂ
ಶ್ರುತ್ವಾ ನಿನೇದುರ್ವಸುಧಾಂ ಮನುಷ್ಯಾಃ ।
ಆರ್ತಸ್ವರಂ ಸಾದಿಪದಾತಿಯೂನಾಂ
ವಿಹಾಣಗಾತ್ರಾವರತಾಡಿತಾನಾಮ್ ॥೧೯॥

ಗಜಸಮೂಹಗಳ ಉನ್ನತವೇಗದಿಂದ ಗಾಯಗೊಂಡ, ಗಜಗಳ ದಂತಗಳಿಂದಲೂ ಮತ್ತು ಶ್ರೇಷ್ಠವಾದ ಶರೀರಗಳಿಂದಲೂ ತಾಡಿತರಾದ ಅಶ್ವಾರೋಹಿಗಳೂ ಮತ್ತು ಪದಾತಿಗಳೂ ಆದ ಯುವಕರ ಆರ್ತಸ್ವರವನ್ನು ಕೇಳಿದ ಮನುಷ್ಯರು ಭೂಮಿಯ ಮೇಲೆ ಕುಸಿದರು.

ಸಂಭ್ರಾಂತನಾಗಾಶ್ವರಥೇ ಪ್ರಸೂತೇ
ಮಹಾಭಯೇ ಸಾದಿಪದಾತಿಯೂನಾಮ್ ।
ಮಹಾರಥೈಃ ಸಂಪರಿವಾರ್ಯಮಾಣಂ
ದದರ್ಶ ಭೀಷ್ಮಃ ಕಪಿರಾಜಕೇತುಮ್ ॥೨೦॥

ರಣರಂಗದಲ್ಲಿ ಚೆನ್ನಾಗಿ ತಿರುಗುತ್ತಿದ್ದ ಗಜಾಶ್ವರಥಗಳಿಂದ ಅಶ್ವಾರೋಹಿಗಳಾದ ಮತ್ತು ಪದಾತಿಗಳಾದ ಯುವಕರಿಗೆ ಮಹಾಭಯವು ಉಂಟಾಗುತ್ತಿರಲು ಭೀಷ್ಮರು ಮಹಾರಥರಿಂದ ಸುತ್ತುವರಿಯಲ್ಪಟ್ಟ ಕಪಿರಾಜಧ್ವಜನಾದ ಅರ್ಜುನನನ್ನು ನೋಡಿದರು.

ತಂ ಪಂಚತಾಳೋಚ್ಛ್ರಿತತಾಳಕೇತುಃ
ಸದಶ್ವವೇಗೋದ್ಧತವೀರ್ಯಯಾತಃ ।
ಮಹಾಸ್ತ್ರಬಾಣಾಶನಿದೀಪ್ತಮಾರ್ಗಂ
ಕಿರೀಟಿನಂ ಶಾಂತನವೋಽಭ್ಯಧಾವತ್ ॥೨೧॥

ಐದು ತಾಳೆಯ ಮರದಷ್ಟು ಎತ್ತರವಾದ ಧ್ವಜವನ್ನು ಹೊಂದಿದ, ಸದಶ್ವಗಳ ವೇಗದಿಂದ ಉದ್ಧತವಾದ, ಪರಾಕ್ರಮವನ್ನು ಹೊಂದಿದ, ಶಂತನು ಪುತ್ರರಾದ ಭೀಷ್ಮರು ಮಹಾಸ್ತ್ರಬಾಣಗಳೆಂಬ ಸಿಡಿಲುಗಳಿಂದ ಪ್ರಕಾಶಿತವಾದ ಮಾರ್ಗದಲ್ಲಿದ್ದ ಅರ್ಜುನನ ಕಡೆಗೆ ಧಾವಿಸಿದರು.

ರಥಿಕನಿಂದ ಹೊಡೆಯಲ್ಪಟ್ಟ ಇನ್ನೊಬ್ಬ ರಥಿಕನು ತನ್ನ ಸೂತ, ಅಶ್ವಗಳು ಮತ್ತು ಧ್ವಜಯುಕ್ತವಾದ ರಥದ ಜೊತೆಯಲ್ಲಿ ಕೆಳಗೆ ಬಿದ್ದನು. ಗಜದಿಂದ ಅಭಿಹತವಾದ ಗಜವು ಬಿದ್ದಿತು. ಪದಾತಿಯಿಂದ ಅಭಿಹತನಾದ ಪದಾತಿಯು ಬಿದ್ದನು.

ಆವರ್ತಮಾನಾನ್ಯಭಿವರ್ತಮಾನೈಃ
ಬಾಣೈಃ ಕೃತಾನ್ಯದ್ಭುತದರ್ಶನಾನಿ ।
ಪ್ರಾಸೈಶ್ಚ ಖಡ್ಗೈಶ್ಚ ಸಮಾಹತಾನಿ
ಸದಶ್ವವೃಂದಾನಿ ಸದಶ್ವವೃಂದೈಃ ॥೧೬॥

ಗುರಿಗಳಿಗೆ ಅಭಿಮುಖವಾಗಿ ಹೋಗುವ ಮತ್ತು ತಿರುಗಿಕೊಂಡು ಹೋಗುವ ಬಾಣಗಳಿಂದ ಉಂಟಾದ ಗಾಯಗಳು ನೋಡಲು ಅದ್ಭುತವಾಗಿದ್ದವು. ಒಳ್ಳೆಯ ಅಶ್ವ ಸಮೂಹಗಳಿಂದ ಪ್ರಾಸಗಳಿಂದಲೂ, ಖಡ್ಗಗಳಿಂದಲೂ ಪ್ರಹಾರ ಮಾಡಲ್ಪಟ್ಟವು.

ಸುವರ್ಣತಾರಾಗಣಭೂಷಿತಾನಿ
ಶರಾವರಾಣಿ ಪ್ರಹಿತಾನಿ ವೀರೈಃ ।
ವಿದಾರ್ಯಮಾಣಾನಿ ಪರಶ್ವಧೈಶ್ಚ
ಪ್ರಾಸೈಶ್ಚ ಖಡ್ಗೈಶ್ಚ ನಿಪೇತುರುರ್ವ್ಯಾಮ್ ॥೧೭॥

ವೀರರಿಂದ ಪ್ರಯೋಗಿಸಲ್ಪಟ್ಟ ಸುವರ್ಣಮಯವಾದ ನಕ್ಷತ್ರಗಳಿಂದ ಭೂಷಿತವಾದ ಬತ್ತಳಿಕೆಗಳು ಪರಶ್ವಧಗಳಿಂದಲೂ, ಪ್ರಾಸಗಳಿಂದಲೂ, ಖಡ್ಗಗಳಿಂದಲೂ ಹೊಡೆಯಲ್ಪಟ್ಟು ಭೂಮಿಯ ಮೇಲೆ ಬಿದ್ದವು.

ಗಜೈರ್ವಿಷಾಣೈರ್ವರಹಸ್ತರುಗ್ಣಾಃ
ಕೇಚಿತ್ ಸಸೂತಾ ರಥಿನಃ ಪ್ರಪೇತುಃ ।
ಗಜರ್ಷಭಾಶ್ಚಾಪಿ ರಥರ್ಷಭೇಣ
ನಿಪೇತಿರೇ ಬಾಣಹತಾಃ ಪೃಥಿವ್ಯಾಮ್ ॥೧೮॥

ಗಜಗಳ ವಿಷಾಣಗಳಿಂದಲೂ, ಸೊಂಡಿಲುಗಳಿಂದಲೂ ಗಾಯಗೊಂಡ ಕೆಲವು ರಥಿಕರು ಸೂತರೊಡನೆ ನೆಲಕ್ಕೆ ಉರುಳಿದರು. ಶ್ರೇಷ್ಠವಾದ ಗಜಗಳೂ ಸಹ ಶ್ರೇಷ್ಠವಾದ ರಥರಿಂದ ಬಾಣಗಳಿಂದ ಹತವಾಗಿ ಭೂಮಿಯ ಮೇಲೆ ಬಿದ್ದವು.

ಗಜೌಘವೇಗೋದ್ಧತಸಾದಿತಾನಾಂ
ಶ್ರುತ್ವಾ ನಿಷೇದುರ್ವಸುಧಾಂ ಮನುಷ್ಯಾಃ ।
ಆರ್ತಸ್ವರಂ ಸಾದಿಪದಾತಿಯೂನಾಂ
ವಿಷಾಣಗಾತ್ರಾವರತಾಡಿತಾನಾಮ್ ॥೧೯॥

ಗಜಸಮೂಹಗಳ ಉನ್ನತವೇಗದಿಂದ ಗಾಯಗೊಂಡ, ಗಜಗಳ ದಂತಗಳಿಂದಲೂ ಮತ್ತು ಶ್ರೇಷ್ಠವಾದ ಶರೀರಗಳಿಂದಲೂ ತಾಡಿತರಾದ ಅಶ್ವಾರೋಹಿಗಳೂ ಮತ್ತು ಪದಾತಿಗಳೂ ಆದ ಯುವಕರ ಆರ್ತಸ್ವರವನ್ನು ಕೇಳಿದ ಮನುಷ್ಯರು ಭೂಮಿಯ ಮೇಲೆ ಕುಸಿದರು.

ಸಂಭ್ರಾಂತನಾಗಾಶ್ವರಥೇ ಪ್ರಸೂತೇ
ಮಹಾಭಯೇ ಸಾದಿಪದಾತಿಯೂನಾಮ್ ।
ಮಹಾರಥೈಃ ಸಂಪರಿವಾರ್ಯಮಾಣಂ
ದದರ್ಶ ಭೀಷ್ಮಃ ಕಪಿರಾಜಕೇತುಮ್ ॥೨೦॥

ರಣರಂಗದಲ್ಲಿ ಚೆನ್ನಾಗಿ ತಿರುಗುತ್ತಿದ್ದ ಗಜಾಶ್ವರಥಗಳಿಂದ ಅಶ್ವಾರೋಹಿಗಳಾದ ಮತ್ತು ಪದಾತಿಗಳಾದ ಯುವಕರಿಗೆ ಮಹಾಭಯವು ಉಂಟಾಗುತ್ತಿರಲು ಭೀಷ್ಮರು ಮಹಾರಥರಿಂದ ಸುತ್ತುವರಿಯಲ್ಪಟ್ಟ ಕಪಿರಾಜಧ್ವಜನಾದ ಅರ್ಜುನನನ್ನು ನೋಡಿದರು.

ತಂ ಪಂಚತಾಲೋಚ್ಛ್ರಿತತಾಳಕೇತುಃ
ಸದಶ್ವವೇಗೋದ್ಧತವೀರ್ಯಯಾತಃ ।
ಮಹಾಸ್ತ್ರಬಾಣಾಶನಿದೀಪ್ತಮಾರ್ಗಂ
ಕಿರೀಟಿನಂ ಶಾಂತನವೋಽಭ್ಯಧಾವತ್ ॥೨೧॥

ಐದು ತಾಳೆಯ ಮರದಷ್ಟು ಎತ್ತರವಾದ ಧ್ವಜವನ್ನು ಹೊಂದಿದ, ಸದಶ್ವಗಳ ವೇಗದಿಂದ ಉದ್ಧತವಾದ, ಪರಾಕ್ರಮವನ್ನು ಹೊಂದಿದ, ಶಂತನು ಪುತ್ರರಾದ ಭೀಷ್ಮರು ಮಹಾಸ್ತ್ರಬಾಣಗಳೆಂಬ ಸಿಡಿಲುಗಳಿಂದ ಪ್ರಕಾಶಿತವಾದ ಮಾರ್ಗದಲ್ಲಿದ್ದ ಅರ್ಜುನನ ಕಡೆಗೆ ಧಾವಿಸಿದರು.

ತಥೈವ ಶಕ್ರಪ್ರತಿಮಾನಕಲ್ಪಮ್
ಇಂದ್ರಾತ್ಮಜಂ ದ್ರೋಣಮುಖಾಭಿಸಸ್ರುಃ ।
ಕೃಪಶ್ಚ ಶಲ್ಯಶ್ಚ ವಿವಿಂಶತಿಶ್ಚ
ದುರ್ಯೋಧನಃ ಸೌಮದತ್ತಿಶ್ಚ ರಾಜನ್ ॥೨೨॥

ಎಲೈ ರಾಜನೇ, ಹಾಗೆಯೇ ಇಂದ್ರನಿಗೆ ಸಮಾನವಾದ ಸಾಮರ್ಥ್ಯವುಳ್ಳ, ಇಂದ್ರಾತ್ಮಜನಾದ ಅರ್ಜುನನನ್ನು ದ್ರೋಣರು, ಕೃಪರು, ಶಲ್ಯ, ವಿವಿಂಶತಿ, ದುರ್ಯೋಧನ ಮತ್ತು ಸೌಮದತ್ತಿ ಇವರೂ ಸಮೀಪಿಸಿದರು.

ತತೋ ರಥಾನೀಕಮುಖಾದುಪೇತ್ಯ
ಸರ್ವಾಸ್ತ್ರವಿತ್ ಕಾಂಚನಚಿತ್ರವರ್ಮಾ ।
ಜವೇನ ಶೂರೋಽಭಿಸಸಾರ ಸರ್ವಾನ್
ತಥಾಽರ್ಜುನಸ್ಯಾತ್ರ ಸುತೋಽಭಿಮನ್ಯುಃ ॥೨೩॥

ಅನಂತರ ರಥಗಳ ಸಮೂಹಗಳ ಮುಂಭಾಗಕ್ಕೆ ಬಂದು ಸರ್ವಾಸ್ತ್ರವೇತ್ತನೂ, ವಿಚಿತ್ರವಾದ ಸುವರ್ಣಮಯವಾದ ಕವಚವನ್ನು ಧರಿಸಿದವನೂ, ಅರ್ಜುನನ ಪುತ್ರನೂ, ಶೂರನೂ ಆದ ಅಭಿಮನ್ಯುವು ವೇಗವಾಗಿ ಎಲ್ಲ ಶತ್ರುಗಳನ್ನೂ ಸಮೀಪಿಸಿದನು.

ತೇಷಾಂ ಮಹಾಸ್ತ್ರಾಣಿ ಮಹಾರಥಾನಾಮ್
ಅಸಕ್ತಕರ್ಮಾ ವಿನಿಹತ್ಯ ಕಾರ್ಷ್ಣಿಃ ।
ಬಭೌ ಮಹಾಮಂತ್ರಹುತಾರ್ಚಿಮಾಲೀ
ಸದೋಗತಃ ಸನ್ ಭಗವಾನಿವಾಗ್ನಿಃ ॥೨೪॥

ಎಲ್ಲಿಯೂ ಸಿಕ್ಕಿಹಾಕಿಕೊಳ್ಳದೆ ಕಾರ್ಯವನ್ನು ಮಾಡುವ ಅಭಿಮನ್ಯುವು ಆ ಮಹಾರಥರ ಮಹಾಸ್ತ್ರಗಳನ್ನು ನಾಶಪಡಿಸಿ ಮಹಾಮಂತ್ರಗಳಿಂದ ಹುತವಾದ ಜ್ವಾಲಾಮಾಲೆಗಳನ್ನು ಹೊಂದಿದ, ವೇದಿಯಲ್ಲಿರುವ ಪೂಜ್ಯನಾದ ಅಗ್ನಿಯಂತೆ ಕಂಗೊಳಿಸಿದನು.

ತತಃ ಸ ತೂರ್ಣಂ ರುಧಿರೋದಫೇನಾಂ
ಕೃತ್ವಾ ನದೀಂ ವೈಶಸನೇ ರಿಪೂಣಾಮ್ ।
ಜಗಾಮ ಸೌಭದ್ರಮತೀತ್ಯ ಭೀಷ್ಮೋ
ಮಹಾರಥಂ ಪಾರ್ಥಮದೀನಸತ್ತ್ವಃ ॥೨೫॥

ಅನಂತರ ಧೈರ್ಯಶಾಲಿಗಳಾದ ಭೀಷ್ಮರು ಯುದ್ಧದಲ್ಲಿ ಶೀಘ್ರವಾಗಿ ಶತ್ರುಗಳ ರಕ್ತದ ಉದಕ ಮತ್ತು ನೊರೆಗಳಿಂದ ಕೂಡಿದ ನದಿಯನ್ನು ಹರಿಸಿ ಅಭಿಮನ್ಯುವನ್ನು ದಾಟಿ ಮಹಾರಥನಾದ ಪಾರ್ಥನನ್ನು ಸಮೀಪಿಸಿದರು.

ತತಃ ಪ್ರಹಸ್ಯಾದ್ಭುತದರ್ಶನೇನ
ಗಾಂಡೀವನಿರ್ಹ್ರಾದಮಹಾಸ್ವನೇನ ।
ವಿಪಾಠಜಾಲೇನ ಮಹಾಸ್ತ್ರಜಾಲಂ
ವಿನಾಶಯಾಮಾಸ ಕಿರೀಟಮಾಲೀ ॥೨೬॥

ಆಗ ಕಿರೀಟಮಾಲಿಯಾದ ಅರ್ಜುನನು ನಕ್ಕು ಗಾಂಡೀವಧನುಸ್ಸಿನ ಮಹಾಘೋಷದಿಂದಲೂ, ಅದ್ಭುತವಾಗಿ ಕಾಣುತ್ತಿದ್ದ ವಿಪಾಠರೂಪವಾದ ಶರಗಳ ಸಮೂಹದಿಂದಲೂ, ಭೀಷ್ಮರು ಪ್ರಯೋಗಿಸಿದ ಮಹಾಸ್ತ್ರ ಸಮೂಹಗಳನ್ನು ನಾಶಗೊಳಿಸಿದನು.

ತಮುತ್ತಮಂ ಸರ್ವಧನುರ್ಧರಾಣಾಮ್
ಅಸಕ್ತಕರ್ಮಾ ಕಪಿರಾಜಕೇತುಃ ।
ಭೀಷ್ಮಂ ಮಹಾತ್ಮಾಭವವರ್ಷ ತೂರ್ಣಂ
ಶರೌಘಜಾಲೈರ್ವಿಮಲೈಶ್ಚ ಭಲ್ಲೈಃ ॥೨೭॥

ಕಪಿರಾಜಧ್ವಜನೂ, ಅಸಕ್ತಕರ್ಮವುಳ್ಳವನೂ ಆದ ಮಹಾತ್ಮನಾದ ಅರ್ಜುನನು ಸರ್ವಧನುರ್ಧಾರಿಗಳಲ್ಲಿ ಶ್ರೇಷ್ಠರಾದ ಭೀಷ್ಮರ ಮೇಲೆ ಶೀಘ್ರವಾಗಿ ಬಾಣಗಳ ಸಮೂಹಗಳಿಂದಲೂ ಮತ್ತು ವಿಮಲವಾದ ಭಲ್ಲಗಳಿಂದಲೂ ಮಳೆಗರೆದನು.

ತಥೈವ ಭೀಷ್ಮಾಹತಮಂತರಿಕ್ಷೇ
ಮಹಾಸ್ತ್ರಜಾಲಂ ಕಪಿರಾಜಕೇತೋಃ ।
ವಿಶೀರ್ಯಮಾಣಂ ದದೃಶುಸ್ತ್ವದೀಯಾ
ದಿವಾಕರೇಣೇವ ತಮೋಭಿಭೂತಮ್ ॥೨೮॥

ಹಾಗೆಯೇ, ಕಪಿರಾಜಕೇತುವಾದ ಅರ್ಜುನನಿಂದ ಪ್ರಯೋಗಿಸಲ್ಪಟ್ಟ ಮಹಾಸ್ತ್ರಜಾಲಗಳು ಭೀಷ್ಮರಿಂದ ಹೊಡೆಯಲ್ಪಟ್ಟು ಅಂತರಿಕ್ಷದಲ್ಲಿ ಸೂರ್ಯನ ಪ್ರಭಾವಕ್ಕೆ ಸಿಕ್ಕಿದ ಕತ್ತಲೆಯಂತೆ ನಾಶವನ್ನು ಹೊಂದುವುದನ್ನು ನಿನ್ನವರು ನೋಡಿದರು.

ಏವಂವಿಧಂ ಕಾರ್ಮುಕಭೀಮನಾದಮ್
ಅದೀನವತ್ ಸತ್ಪುರುಷೋತ್ತಮಾಭ್ಯಾಮ್ ।
ದದರ್ಶ ಲೋಕಃ ಕುರುಸೃಂಜಯಾಶ್ಚ
ತದ್ ದ್ವೈರಥಂ ಭೀಷ್ಮಧನಂಜಯಾಭ್ಯಾಮ್ ॥೨೯॥

ಸತ್ಪುರುಷರಲ್ಲಿ ಶ್ರೇಷ್ಠರಾದ ಭೀಷ್ಮಾರ್ಜುನರಿಗೆ ದೈನ್ಯರಹಿತವಾಗಿ ನಡೆದ ಧನುಸ್ಸುಗಳ ಭಯಂಕರ ನಾದವನ್ನು ಹೊಂದಿದ್ದ ಇಂತಹ ದ್ವಂದ್ವ ಯುದ್ಧವನ್ನು ಎಲ್ಲ ಜನರು ಮತ್ತು ಕುರುಸೃಂಜಯರು ನೋಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಷಟ್‌ಪಂಚಾಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಷೋಡಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಐವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೇಳನೆಯ ಅಧ್ಯಾಯ

ಧೃಷ್ಟದ್ಯುಮ್ನನಿಂದ ಯುದ್ಧದಲ್ಲಿ ಸಾಂಯಮನಿ ಪುತ್ರನ ವಧೆ.

ಸಂಜಯಃ

ದ್ರೌಣಿರ್ಭೂರಿಶ್ರವಾಃ ಶಲ್ಯಶ್ಚಿತ್ರಸೇನಶ್ಚ ಮಾರಿಷ ।
ಪುತ್ರಃ ಸಾಂಯಮನೇಶ್ಚೈವ ಸೌಭದ್ರಂ ಸಮಯೋಧಯನ್ ॥೧॥

ಸಂಜಯ– ಎಲೈ ಪೂಜ್ಯನೇ, ಅಶ್ವತ್ಥಾಮರು, ಭೂರಿಶ್ರವ, ಶಲ್ಯ, ಚಿತ್ರಸೇನ ಮತ್ತು ಸಂಯಮನ ರಾಜನ ಪುತ್ರ ಈ ಐವರು ಅಭಿಮನ್ಯುವಿನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಸಂಸಕ್ತಮತಿತೇಜೋಭಿಸ್ತಮೇಕಂ ದದೃಶುರ್ಜನಾಃ ।
ಪಂಚಭಿರ್ಮನುಜವ್ಯಾಘ್ರೈರ್ಗಜೈಃ ಸಿಂಹಶಿಶುಂ ಯಥಾ ॥೨॥

ಗಜಗಳಿಂದ ಸಿಂಹದ ಮರಿಯು ಸುತ್ತುವರಿಯಲ್ಪಟ್ಟಂತೆ ಐದು ಜನ ಅತಿ ತೇಜಸ್ವಿಗಳಾದ ಮನುಜವ್ಯಾಘ್ರರಿಂದ ಸುತ್ತುವರಿಯಲ್ಪಟ್ಟ ಅಭಿಮನ್ಯುವನ್ನು ಜನರು ನೋಡಿದರು.

ನಾಭಿಲಕ್ಷ್ಯತಯಾ ಕಶ್ಚಿನ್ನ ಶೌರ್ಯೇ ನ ಪರಾಕ್ರಮೇ ।
ಬಭೂವ ಸದೃಶಃ ಕಾರ್ಷ್ಣೇರ್ನಾಸ್ತ್ರೇ ನಾಪಿ ಚ ಲಾಘವೇ ॥೩॥

ಶೌರ್ಯದಲ್ಲಾಗಲೀ, ಪರಾಕ್ರಮದಲ್ಲಾಗಲೀ, ಅಸ್ತ್ರವಿದ್ಯೆಯಲ್ಲಾಗಲೀ ಅಥವಾ ಕ್ಷಿಪ್ರತೆಯಲ್ಲಾಗಲೀ ಅಭಿಮನ್ಯುವಿನ ಜೊತೆಯಲ್ಲಿ ಹೋಲಿಸಿ ಎಣಿಸಬಹುದಾದವರು ಯಾರೂ ಇರಲಿಲ್ಲ.

ತಥಾ ತಮಾತ್ಮಜಂ ಯುದ್ಧೇ ವಿಕ್ರಮಂತಮರಿಂದಮಮ್ ।
ದೃಷ್ಟ್ವಾ ಪಾರ್ಥೋ ರಣೇ ಯತ್ತಃ ಸಿಂಹನಾದಮಥೋಽನದತ್ ॥೪॥

ಆ ರೀತಿಯಲ್ಲಿ ಅರಿಂದಮನಾದ ತನ್ನ ಪುತ್ರನು ಯುದ್ಧದಲ್ಲಿ ಪರಾಕ್ರಮವನ್ನು ತೋರಿಸುವುದನ್ನು ನೋಡಿ ಅರ್ಜುನನು ಜಾಗರೂಕನಾಗಿ ಸಿಂಹನಾದವನ್ನು ಮಾಡಿದನು.

ಪೀಡಯಾನಂ ಚ ತತ್ಸೈನ್ಯಂ ಪೌತ್ರಂ ತವ ವಿಶಾಂಪತೇ ।
ದೃಷ್ಟ್ವಾ ತ್ವದೀಯಾ ರಾಜೇಂದ್ರ ಸಮಂತಾತ್ ಪರ್ಯವಾರಯನ್ ॥೫॥

ಎಲೈ ರಾಜನೇ, ಪೀಡಿಸಲ್ಪಡುತ್ತಿರುವ ಕೌರವ ಸೈನ್ಯವನ್ನೂ ಮತ್ತು ನಿನ್ನ ಪೌತ್ರನನ್ನೂ ನೋಡಿದ ನಿನ್ನವರೆಲ್ಲರೂ ಅಭಿಮನ್ಯುವನ್ನು ಎಲ್ಲ ಕಡೆಯಲ್ಲೂ ಸುತ್ತುವರಿದರು.

ಧ್ವಜಿನೀಂ ಧಾರ್ತರಾಷ್ಟ್ರಾಣಾಂ ದೀನಶತ್ರುರದೀನವತ್ ।
ಪ್ರತ್ಯುದ್ಯಯೌ ಸ ಸೌಭದ್ರಸ್ತೇಜಸಾ ಚ ಬಲೇನ ಚ ॥೬॥

ತಾನು ದೀನನಾಗದೆ ಶತ್ರುಗಳಿಗೆ ದೈನ್ಯವನ್ನು ಉಂಟುಮಾಡುವ ಅಭಿಮನ್ಯುವು ತನ್ನ ತೇಜಸ್ಸು ಮತ್ತು ಬಲಗಳಿಂದ ಆ ಕೌರವ ಸೈನ್ಯದ ಮೇಲೆ ಎರಗಿದನು.

ತಸ್ಯ ಲಾಘವಮಾರ್ಗಸ್ಥಮಾದಿತ್ಯಸದೃಶಪ್ರಭಮ್ ।
ವ್ಯದೃಶ್ಯತ ಮಹಚ್ಚಾಪಂ ಸಮರೇ ಯುಧ್ಯತಃ ಪರೈಃ ॥೭॥

ಯುದ್ಧದಲ್ಲಿ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವ ಅವನ ದೊಡ್ಡ ಧನುಸ್ಸು ಯುದ್ಧದ ಲಾಘವ ಮಾರ್ಗದಲ್ಲಿ ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳದ್ದಾಗಿ ಕಂಡುಬಂದಿತು.

ಸ ದ್ರೌಣಿಮಿಷುಣೈಕೇನ ವಿದ್ಧ್ವಾ ಶಲ್ಯಂ ಚ ಪಂಚಭಿಃ ।
ಧ್ವಜಂ ಸಾಂಯಮನೇಶ್ಚಾಪಿ ಸೋಽಷ್ಟಾಭಿರಪವರ್ಜಯತ್ ॥೮॥

ಅವನು ಅಶ್ವತ್ಥಾಮರನ್ನು ಒಂದು ಬಾಣದಿಂದಲೂ, ಶಲ್ಯನನ್ನು ಐದು ಬಾಣಗಳಿಂದಲೂ ಹೊಡೆದು ಸಂಯಮನ ರಾಜಕುಮಾರನ ರಥದ ಧ್ವಜವನ್ನು ಎಂಟು ಬಾಣಗಳಿಂದ ಕತ್ತರಿಸಿದನು.

ರುಗ್ಣದಂಡಾಂ ಮಹಾಶಕ್ತಿಂ ಪ್ರೇಷಿತಾಂ ಸೌಮದತ್ತಿನಾ ।
ಶತೇನೋರಗಸಂಕಾಶಾಂ ಪತ್ರಿಣಾ ವಿಜಹಾರ ತಾಮ್ ॥೯॥

ಭೂರಿಶ್ರವಸಿನಿಂದ ಪ್ರಯೋಗಿಸಲ್ಪಟ್ಟ ಚಿನ್ನದ ಹಿಡಿಯಿರುವ ಸರ್ಪದಂತಿದ್ದ ಮಹಾಶಕ್ತ್ಯಾಯುಧವನ್ನು ಪತ್ರವುಳ್ಳ ಹರಿತವಾದ ಬಾಣದಿಂದ ಹಾರಿಸಿದನು.

ಶಲ್ಯಸ್ಯ ಚ ಮಹಾಘೋರಾನಸ್ಯತಃ ಶತಶಃ ಶರಾನ್ ।
ನಿವಾರ್ಯಾರ್ಜುನದಾಯಾದೋ ಜಘಾನ ಸಮರೇ ಹಯಾನ್ ॥೧೦॥

ಶಲ್ಯನು ಮಹಾಘೋರವಾದ ಬಾಣಗಳನ್ನು ಪ್ರಯೋಗಿಸುತ್ತಿದ್ದರೂ ಅರ್ಜುನ ಪುತ್ರನು ಅದನ್ನು ತಪ್ಪಿಸಿಕೊಂಡು ಅವನ ರಥದ ಅಶ್ವಗಳನ್ನು ಸಂಹರಿಸಿದನು.

ಭೂರಿಶ್ರವಾಶ್ಚ ಶಲ್ಯಶ್ಚ ದ್ರೌಣಿಃ ಸಾಂಯಮನಿಃ ಶಲಃ ।
ನಾಭ್ಯವರ್ತಂತ ಸಂರಬ್ಧಾಃ ಕಾರ್ಷ್ಣೇರ್ಬಾಹುಬಲಾಶ್ರಯಾತ್ ॥೧೧॥

ಭೂರಿಶ್ರವ, ಶಲ್ಯ, ಅಶ್ವತ್ಥಾಮರು, ಸಂಯಮನ ಪುತ್ರ ಮತ್ತು ಶಲ ಇವರು ಕೋಪಗೊಂಡಿದ್ದರೂ ಸಹ ಅರ್ಜುನನ ಪುತ್ರನ ಬಾಹುಬಲದಿಂದಾಗಿ ಮುಂದುವರಿಯಲು ಸಾಧ್ಯವಾಗಲಿಲ್ಲ.

ತತಸ್ತ್ರಿಗರ್ತಾ ರಾಜೇಂದ್ರ ಮದ್ರಾಶ್ಚ ಸಹ ಕೇಕಯೈಃ ।
ಪಂಚತ್ರಿಂಶತಿಸಾಹಸ್ರಾಸ್ತವ ಪುತ್ರೇಣ ಚೋದಿತಾಃ ॥೧೨॥

ಧನುರ್ವೇದವಿದೋ ಮುಖ್ಯಾ ಅಜೇಯಾಃ ಶತ್ರುಭಿರ್ಯುಧಿ ।
ಸಹಪುತ್ರಂ ಜಘಾಂಸಂತಂ ಪರಿವವ್ರುಃ ಕಿರೀಟಿನಮ್ ॥೧೩॥

ಅನಂತರ ಎಲೈ ರಾಜೇಂದ್ರನೇ, ತ್ರಿಗರ್ತರು, ಮದ್ರರು ಮತ್ತು ಕೇಕಯರು ಸೇರಿ ಧನುರ್ವೇದ ಪಾರಂಗತರಾದ, ಶ್ರೇಷ್ಠರಾದ, ಶತ್ರುಗಳು ಯುದ್ಧದಲ್ಲಿ ಜಯಿಸಲು ಅಸಾಧ್ಯರಾದ ಮೂವತ್ತೈದು ಸಹಸ್ರ ಯೋಧರು ದುರ್ಯೋಧನನಿಂದ ಪ್ರೇರಿತರಾಗಿ ಎಲ್ಲರನ್ನೂ ಸಂಹರಿಸುತ್ತಿದ್ದ ಅರ್ಜುನನನ್ನು ಮತ್ತು ಅವನ ಪುತ್ರನನ್ನು ಸುತ್ತುವರಿದರು.

ತೌ ತು ತತ್ರ ಪಿತಾಪುತ್ರೌ ಪರಿಷ್ಪೃತ್ತೌ ರಥರ್ಷಭೌ ।
ದದರ್ಶ ರಾಜನ್ ಪಾಂಚಾಲ್ಯಃ ಸೇನಾಪತಿರಮಿತ್ರಜಿತ್ ॥೧೪॥

ಎಲೈ ರಾಜನೇ, ಈ ರಥಶ್ರೇಷ್ಠರಾದ ತಂದೆ-ಮಕ್ಕಳು ಎಲ್ಲ ಸೈನ್ಯದಿಂದ ಸುತ್ತುವರಿದಿದ್ದನ್ನು ಶತ್ರುಸಂಹಾರಕನೂ, ಸೇನಾಪತಿಯೂ ಆದ ಧೃಷ್ಟದ್ಯುಮ್ನನು ನೋಡಿದನು.

ಸ ವಾರಣರಥೌಘಾನಾಂ ಸಹಸ್ರೈರ್ಬಹುಭಿರ್ವೃತಃ ।
ವಾಜಿಭಿಃ ಪತ್ತಿಭಿಶ್ಚೈವ ವೃತಃ ಶತಸಹಸ್ರಶಃ ॥೧೫॥

ಧನುರ್ವಿಸ್ಫಾರ್ಯ ಸಂಕ್ರುದ್ಧಶ್ಚೋದಯಿತ್ವಾ ವರೂಥಿನೀಮ್ ।
ಯಯೌ ತನ್ಮದ್ರಕಾನೀಕಂ ಕೇಕಯಾಂಶ್ಚ ಪರಂತಪಃ ॥೧೬॥

ಪರಂತಪನಾದ ಆ ಧೃಷ್ಟದ್ಯುಮ್ನನಾದರೂ ಅನೇಕ ಸಹಸ್ರ ಗಜ ಮತ್ತು ರಥಗಳ ಸಮೂಹದಿಂದಲೂ, ಶತಸಹಸ್ರ ಸಂಖ್ಯೆಯ ಅಶ್ವಾರೋಹಿಗಳು ಮತ್ತು ಪದಾತಿಗಳಿಂದಲೂ ಸಹಿತನಾಗಿ ತನ್ನ ಧನುಸ್ಸನ್ನು ಎಳೆಯುತ್ತಾ ಕೋಪಗೊಂಡು ಆ ಸೈನ್ಯವನ್ನು ಪ್ರೇರಿಸಿ ಮದ್ರಕರ ಮತ್ತು ಕೇಕಯರ ಸೈನ್ಯದ ಕಡೆಗೆ ಧಾವಿಸಿದನು.

ತೇನ ಕೀರ್ತಿಮತಾ ಗುಪ್ತಮನೀಕಂ ದೃಢಧನ್ವನಾ ।
ಪ್ರಯುಕ್ತರಥನಾಗಾಶ್ವಂ ಯೋತ್ಸ್ಯಮಾನಮಶೋಭತ ॥೧೭॥

ಕೀರ್ತಿಶಾಲಿಯೂ, ದೃಢವಾದ ಧನುಸ್ಸನ್ನು ಉಳ್ಳವನೂ ಆದ ಅವನಿಂದ ರಕ್ಷಿತವಾದ ರಥನಾಗಾಶ್ವಗಳಿಂದ ಪ್ರಯೋಜಿತವಾದ ಆ ಸೈನ್ಯವು ಯುದ್ಧಮಾಡುತ್ತಾ ಶೋಭಿಸಿತು.

ಸೋಽರ್ಜುನಂ ಪ್ರಮುಖೇ ಯಾಂತಂ ಪಾಂಚಾಲ್ಯಃ ಕುರುನಂದನ ।
ತ್ರಿಭಿಃ ಶಾರದ್ವತಂ ಬಾಣೈರ್ಜತ್ರುದೇಶೇ ಸಮರ್ಪಯತ್ ॥೧೮॥

ಎಲೈ ಕುರುನಂದನನೇ, ಧೃಷ್ಟದ್ಯುಮ್ನನು ಅರ್ಜುನನ ಮುಂಭಾಗದಲ್ಲಿ ಹೋಗುತ್ತಿದ್ದ ಕೃಪರನ್ನು ಉದ್ದೇಶಿಸಿ ಮೂರು ಬಾಣಗಳಿಂದ ಅವರ ಭುಜಸಂಧಿ ದೇಶದಲ್ಲಿ ಹೊಡೆದನು.

ತತಃ ಸ ಮದ್ರಕಾನ್ ಹತ್ವಾ ದಶಭಿರ್ದಶಭಿಃ ಶರೈಃ ।
ಹೃಷ್ಟ ಏಕೋ ಜಘಾನಾಶ್ವಂ ಭಲ್ಲೇನ ಕೃತವರ್ಮಣಃ ॥೧೯॥

ಅನಂತರ ಅವನು ಹತ್ತು-ಹತ್ತು ಬಾಣಗಳಿಂದ ಮದ್ರಕರನ್ನು ಕೊಂದು ಸಂತೋಷಗೊಂಡು ಒಬ್ಬನೇ ಕೃತವರ್ಮನ ರಥಾಶ್ವಗಳನ್ನು ಭಲ್ಲದಿಂದ ಸಂಹರಿಸಿದನು.

ದಮನಂ ಚಾಪಿ ದಾಯಾದಂ ಪೌರವಸ್ಯ ಮಹಾತ್ಮನಃ ।
ಜಘಾನ ವಿಪುಲಾಗ್ರೇಣ ನಾರಾಚೇನ ಪರಂತಪಃ ॥೨೦॥

ಪರಂತಪನಾದ ಅವನು ಮಹಾತ್ಮನಾದ ಪೌರವನ ಪುತ್ರನಾದ ದಮನನನ್ನು ವಿಸ್ತಾರವಾದ ಅಲುಬುಳ್ಳ ನಾರಾಚದಿಂದ ಕೊಂದನು.

ತತಃ ಸಾಂಯಮನೇಃ ಪುತ್ರಃ ಪಾಂಚಾಲ್ಯಂ ಯುದ್ಧದುರ್ಮದಮ್ ।
ಅವಿಧ್ಯತ್ ತ್ರಿಂಶತಾ ಬಾಣೈರ್ದಶಭಿಶ್ಚಾಸ್ಯ ಸಾರಥಿಮ್ ॥೨೧॥

ಅನಂತರ ಸಂಯಮನ ರಾಜನ ಪುತ್ರನು ಯುದ್ಧದುರ್ಮದನಾದ ಧೃಷ್ಟದ್ಯುಮ್ನನ ಮೇಲೆ ಮೂವತ್ತು ಬಾಣಗಳನ್ನು ಪ್ರಯೋಗಿಸಿ ಹತ್ತು ಬಾಣಗಳಿಂದ ಅವನ ರಥದ ಸಾರಥಿಯನ್ನು ಕೊಂದನು.

ಸೋಽತಿವಿದ್ಧೋ ಮಹೇಷ್ವಾಸಃ ಸೃಕ್ಕಿಣೀ ಪರಿಸಂಲಿಹನ್ ।
ಭಲ್ಲೇನ ಭೃಶತೀಕ್ಷ್ಣೇನ ನಿಚಕರ್ತಾಸ್ಯ ಕಾರ್ಮುಕಮ್ ॥೨೨॥

ಬಹಳ ಪ್ರಹಾರಕ್ಕೆ ಸಿಕ್ಕಿದ ಮಹಾಧನುರ್ಧಾರಿಯಾದ ಧೃಷ್ಟದ್ಯುಮ್ನನು ಕಟಬಾಯಿಯನ್ನು ಸವರಿಕೊಳ್ಳುತ್ತಾ ಬಹಳ ತೀಕ್ಷ್ಣವಾದ ಭಲ್ಲದಿಂದ ಅವನ ಧನುಸ್ಸನ್ನು ಕತ್ತರಿಸಿದನು.

ಅಥೈನಂ ಪಂಚವಿಂಶತ್ಯಾ ಕ್ಷಿಪ್ರಮೇವ ಸಮರ್ಪಯತ್ ।
ಅಶ್ವಾಂಶ್ಚಾಸ್ಯಾವಧೀದ್ ರಾಜನ್ಪುಭೌ ತೌ ಪಾರ್ಷ್ಣಿಸಾರಥೀ ॥೨೩॥

ರಾಜನೇ, ತಕ್ಷಣದಲ್ಲಿಯೇ ಇಪ್ಪತ್ತೈದು ಬಾಣಗಳನ್ನು ಪ್ರಯೋಗಿಸಿ ಅವನ ಅಶ್ವಗಳನ್ನು ಮತ್ತು ಪಾರ್ಶ್ವದ ಸಾರಥಿಗಳನ್ನು ಕೊಂದನು.

ಸ ಹತಾಶ್ವೇ ರಥೇ ತಿಷ್ಠನ್ ದದರ್ಶ ಭರತರ್ಷಭ ।
ಪುತ್ರಃ ಸಾಂಯಮನೇಃ ಪುತ್ರಂ ಪಾಂಚಾಲ್ಯಸ್ಯ ಮಹಾತ್ಮನಃ ॥೨೪॥

ಎಲೈ ಭರತರ್ಷಭನೇ, ಸಂಯಮನ ರಾಜಕುಮಾರನು ಅಶ್ವಗಳನ್ನು ಕಳೆದುಕೊಂಡು ರಥದಲ್ಲಿ ಕುಳಿತು ಮಹಾತ್ಮನಾದ ದ್ರುಪದನ ಪುತ್ರನಾದ ಧೃಷ್ಟದ್ಯುಮ್ನನನ್ನು ನೋಡಿದನು.

ಸ ಸಂಗೃಹ್ಯ ಮಹಾಘೋರಂ ನಿಸ್ತ್ರಿಂಶವರಮಾಯಸಮ್ ।
ಪದಾತಿಸ್ತೂರ್ಣಮಭ್ಯರ್ಚ್ಛದ್ ರಥಸ್ಥಂ ದ್ರುಪದಾತ್ಮಜಮ್ ॥೨೫॥

ಅವನು ತಕ್ಷಣ ಮಹಾಘೋರವಾದ, ಕಬ್ಬಿಣದಿಂದ ಮಾಡಿದ ಖಡ್ಗವನ್ನು ಹಿಡಿದುಕೊಂಡು ಪದಾತಿಯಾಗಿ ನಡೆದುಬಂದು ರಥದಲ್ಲಿದ್ದ ದ್ರುಪದ ಪುತ್ರನ ಮೇಲೆ ಅದನ್ನು ಬೀಸಿ ಎಸೆದನು.

ತಂ ಮಹೌಘಮಿವಾಯಾಂತಂ ಖಾತ್ ಪತಂತಮಿವೋರಗಮ್ ।
ಭ್ರಾಂತಾವರಣನಿಸ್ತ್ರಿಂಶಂ ಕಾಲೋತ್ಪಾತಮಿವಾಂತಕಮ್ ॥೨೬॥

ದೀಪ್ಯಂತಮಿವ ಶಸ್ತ್ರೌಘೈ ಮತ್ತವಾರಣವಿಕ್ರಮಮ್ ।
ಅಪಶ್ಯನ್ ಪಾಂಡವಾಸ್ತತ್ರ ಧೃಷ್ಟದ್ಯುಮ್ನಶ್ಚ ಪಾರ್ಷತಃ ॥೨೭॥

ಮಹಾಪ್ರವಾಹದಂತೆ ಬರುತ್ತಿದ್ದ, ಆಕಾಶದಿಂದ ಬಿದ್ದ ಸರ್ಪದಂತೆ ತೋರುತ್ತಿದ್ದ ಕಾಲಪ್ರವರ್ತಕನಾದ ಯಮನಂತೆ ತೋರುತ್ತಿದ್ದ, ಶಸ್ತ್ರಾಘಿಯಿಂದ ಬೆಳಗುತ್ತಿದ್ದ, ಮದಿಸಿದ ಆನೆಯ ಪರಾಕ್ರಮವನ್ನು ಹೋಲುತ್ತಿದ್ದ, ಆವರಣರಹಿತವಾದ ಆ ಖಡ್ಗವನ್ನು ಪಾಂಡವರೂ ಮತ್ತು ಧೃಷ್ಟದ್ಯುಮ್ನನೂ ನೋಡಿದರು.

ತಸ್ಯ ಪಾಂಚಾಲಪುತ್ರಸ್ತು ಪ್ರತೀಪಮಭಿಧಾವತಃ ।
ಶತನಿಸ್ತ್ರಿಂಶಹಸ್ತಸ್ಯ ಶರಾವರಣಧಾರಿಣಃ ॥೨೮॥

ಬಾಣವೇಗಮತೀತಸ್ಯ ರಥಾಭ್ಯಾಶಮುಪೇಯುಷಃ ।
ತ್ವರನ್ ಸೇನಾಪತಿಃ ಕ್ರುದ್ಧೋ ಬಭೇದ ಗದಯಾ ಶಿರಃ ॥೨೯॥

ಪಾಂಚಾಲ ರಾಜಕುಮಾರನಾದ ಧೃಷ್ಟದ್ಯುಮ್ನನಾದರೂ ತನಗೆ ಪ್ರತೀಕಾರವನ್ನು ಮಾಡಲು ಕೈಯಲ್ಲಿ ಹರಿತವಾದ ಖಡ್ಗವನ್ನು ಮತ್ತು ಗುರಾಣಿಯನ್ನು ಹಿಡಿದು ಬಾಣವೇಗವನ್ನು ಮೀರಿದವೇಗದಿಂದ ತನ್ನ ರಥದ ಬಳಿಗೆ ಬರುತ್ತಿದ್ದ ಅವನನ್ನು ನೋಡಿ ಕ್ರುದ್ಧನಾದ ಸೇನಾಪತಿಯಾದ ಅವನು ಜಾಗ್ರತೆಯಾಗಿ ತನ್ನ ಗದೆಯಿಂದ ಅವನ ಶಿರಸ್ಸನ್ನು ಒಡೆದನು.

ತಸ್ಯ ರಾಜನ್ ಸನಿಸ್ತ್ರಿಂಶಂ ಸುಪ್ರಭಂ ಚ ಶರಾವರಮ್ ।
ಹತಸ್ಯ ಪತತೋ ಹಸ್ತಾದ್ ವೇಗೇನ ನ್ಯಪತದ್ ಭುವಿ ॥೩೦॥

ಎಲೈ ರಾಜನೇ, ಶಿರಸ್ಸು ಭಗ್ನವಾಗಿ ಅವನು ಧರೆಗೆ ಬೀಳುತ್ತಿರುವಂತೆ ಅವನ ಕಾಂತಿಯುಕ್ತವಾದ ಖಡ್ಗವು ಮತ್ತು ಗುರಾಣಿಯು ವೇಗವಾಗಿ ಭೂಮಿಯ ಮೇಲೆ ಬಿದ್ದಿತು.

ತಂ ನಿಹತ್ಯ ಗದಾಗ್ರೇಣ ಲೇಭೇ ಸ ಪರಮಂ ಯಶಃ ।
ಪುತ್ರಃ ಪಾಂಚಾಲರಾಜಸ್ಯ ಮಹಾತ್ಮಾ ಭೀಮವಿಕ್ರಮಃ ॥೩೧॥

ಮಹಾತ್ಮನೂ, ಭಯಂಕರ ಪರಾಕ್ರಮವುಳ್ಳವನೂ, ಪಾಂಚಾಲ ರಾಜನ ಪುತ್ರನೂ ಆದ ಧೃಷ್ಟದ್ಯುಮ್ನನು ಸಾಯಮನಿ ರಾಜಪುತ್ರನನ್ನು ತನ್ನ ಶ್ರೇಷ್ಠವಾದ ಗದೆಯಿಂದ ಕೊಂದು ಅಪಾರ ಕೀರ್ತಿಯನ್ನು ಪಡೆದನು.

ತಸ್ಮಿನ್ ಹತೇ ಮಹೇಷ್ವಾಸೇ ರಾಜಪುತ್ರೇ ಮಹಾರಥೇ ।
ಹಾಹಾಕಾರೋ ಮಹಾನಾಸೀತ್ ತವ ಸೈನ್ಯಸ್ಯ ಮಾರಿಷ ॥೩೨॥

ಎಲೈ ಪೂಜ್ಯನೇ, ಮಹಾರಥನೂ, ಮಹಾಧನುರ್ಧಾರಿಯೂ ಆದ ಆ ರಾಜಪುತ್ರನು ಹೀಗೆ ಕೊಲ್ಲಲ್ಪಡುತ್ತಿರಲು ನಿನ್ನ ಸೈನ್ಯದಲ್ಲಿ ದೊಡ್ಡ ಹಾಹಾಕಾರ ಉಂಟಾಯಿತು.

ತತಃ ಸಾಂಯಮನಿಃ ಕ್ರುದ್ಧೋ ದೃಷ್ಟ್ವಾ ವಿಷಮಮಾಹವೇ ।
ಅಭಿದುದ್ರಾವ ವೇಗೇನ ಪಾಂಚಾಲ್ಯಂ ಯುದ್ಧದುರ್ಮದಮ್ ॥೩೩॥

ಆಗ ಸ್ವಯಂ ಸಾಂಯಮನಿ ರಾಜನು ತನ್ನ ಪುತ್ರನು ಹತನಾದುದನ್ನು ನೋಡಿ ಕೋಪಗೊಂಡು ವೇಗದಿಂದ ಯುದ್ಧದುರ್ಮದನಾದ ದೃಷ್ಟದ್ಯುಮ್ನನ ಕಡೆಗೆ ಓಡಿಬಂದನು.

ತೌ ತತ್ರ ಸಮರೇ ವೀರೌ ಸಮೇತೌ ರಥಿನಾಂ ವರೌ ।
ದದೃಶುಃ ಸರ್ವರಾಜಾನಃ ಕುರವಃ ಪಾಂಡವಾಸ್ತಥಾ ॥೩೪॥

ರಥಿಶ್ರೇಷ್ಠರಾದ ಆ ಇಬ್ಬರು ವೀರರು ಯುದ್ಧದಲ್ಲಿ ಒಬ್ಬರನ್ನೊಬ್ಬರು ಎದುರಿಸುತ್ತಿರುವುದನ್ನು ಎಲ್ಲಾ ರಾಜರೂ, ಕುರುಗಳೂ ಮತ್ತು ಪಾಂಡವರೂ ನೋಡಿದರು.

ತತಃ ಸಾಂಯಮನಿಃ ಕ್ರುದ್ಧಃ ಪಾರ್ಷತಂ ಶರವೀರಹಾ ।
ಆಜಘಾನ ತ್ರಿಭಿರ್ಬಾಣೈಸ್ತೋತ್ತ್ರೈರಿವ ಮಹಾದ್ವಿಪಮ್ ॥೩೫॥

ಆಗ ಶತ್ರುಘಾತಕನಾದ ಸಾಂಯಮನಿಯು ಕ್ರುದ್ಧನಾಗಿ ಅನೆಯನ್ನು ಅಂಕುಶದಿಂದ ಹೊಡೆದಂತೆ ಮೂರುಬಾಣದಿಂದ ದೃಷ್ಟದ್ಯುಮ್ನನನ್ನು ಹೊಡೆದನು.

ತಸ್ಯೈವ ಪಾರ್ಷತಂ ಶೂರಂ ಶಲ್ಯಃ ಸಮಿತಿಶೋಭನಃ ।
ಆಜಘಾನೋರಸಿ ಕ್ರುದ್ಧಸ್ತೋ ಯುದ್ಧಮವರ್ತತ ॥೩೬॥

ಹಾಗೆಯೇ ಯುದ್ಧದಲ್ಲಿ ಶೋಭಿಸುವ ಶಲ್ಯನೂ ಸಹ ಕ್ರುದ್ಧನಾಗಿ ಶೂರನಾದ ದೃಷ್ಟದ್ಯುಮ್ನನ ವಕ್ಷಸ್ಥಲದಲ್ಲಿ ಬಾಣಪ್ರಯೋಗವನ್ನು ಮಾಡಿದನು. ಅನಂತರ ಯುದ್ಧವು ಮುಂದುವರಿಯಿತು.

॥ ಇತಿ ಶ್ರೀಮನ್ಮಹಾಭಾರತೇ ಕೃಷ್ಣದ್ವೈಪಾಯನೇ ಭಗವತಿ ವೇದವ್ಯಾಸೇ
ಭೀಷ್ಮಪರ್ವಣಿ ಸಪ್ತದಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಏಳನೆಯದು ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯ – ೨೫ನೇ ಅಧ್ಯಾಯ

ಜಿತಾಃ ಸೇನಾಪಹಾರಂ ಚ ಚಕ್ರುರ್ಭೀಷ್ಮಮುಖಾಸ್ತತಃ ।
ಕದಾಚಿದಗ್ರಗೋ ಭೀಮೋ ಭೀಷ್ಮದ್ರೋಣೌ ವಿಸಾರಥೀ ।
ಕೃತ್ವಾ ವಿದ್ರಾವ್ಯ ತಾನಶ್ವಾನ್ ಭಿತ್ವಾ ವ್ಯೂಹಂ ವಿವೇಶ ಹ ॥೪೪॥

ಬಳಿಕ ಭೀಷ್ಮಾದಿಗಳು ಸೋತು ಸೈನ್ಯವನ್ನು ಶಿಬಿರಕ್ಕೆ ಕರೆಸಿಕೊಂಡರು. ಒಮ್ಮೆ ಭೀಮಸೇನನು ಯುದ್ಧದಲ್ಲಿ ಮುಂದೆ ಬಂದು ಭೀಷ್ಮ-ದ್ರೋಣರನ್ನು ಸಾರಥಿರಹಿತರನ್ನಾಗಿ ಮಾಡಿ ಕುದುರೆಗಳನ್ನು ಓಡಿಸಿ ವ್ಯೂಹವನ್ನು ಭೇದಿಸಿ ಒಳಗೆ ಪ್ರವೇಶಿಸಿದನು.

ಪುನಃ ಸಂಸ್ಥಾಪಿತರಥೌ ವಿಜಿತ್ಯಾಯತ್ನತೋ ಬಲೀ ।
ಯತಮಾನೌ ಮಹೇಷ್ವಾಸೌ ಧಾರ್ತರಾಷ್ಟ್ರಾನ್ ಜಘಾನ ಹ ॥೪೫॥

ಮಹಾಧನುರ್ಧಾರಿಗಳಾದ ಭೀಷ್ಮ-ದ್ರೋಣರು ಪುನಃ ರಥಗಳನ್ನು ನಿಲ್ಲಿಸಿಕೊಂಡು ಯತ್ನಿಸಿದರೂ ಭೀಮನು ಅವರನ್ನು ಅನಾಯಾಸವಾಗಿ ಪರಾಭವಗೊಳಿಸಿ, ಕೌರವರನ್ನು ಕೊಲ್ಲತೊಡಗಿದನು.

ಪಂಚವಿಂಶದ್ಧತಾಸ್ತತ್ರ ಧಾರ್ತರಾಷ್ಟ್ರಾ ಮಹಾಬಲಾಃ ।
ಭಗದತ್ತದ್ರೌಣಿಕೃಪಶಲ್ಯದುರ್ಯೋಧನಾದಯಃ ॥೪೬॥

ಸರ್ವೇ ಜಿತಾ ದ್ರಾವಿತಾಶ್ಚ ಸೇನಾ ಚ ಬಹುಲಾ ಹತಾ ।
ವಿರಥೋ ವ್ಯಾಯುಧಶ್ಚೈವ ದೃಢವೇಧವಿಮೂರ್ಚ್ಛಿತಃ ॥೪೭॥

ಕೃತೋ ದುರ್ಯೋಧನಃ ಸರ್ವರಾಜ್ಞಾಂ ಭೀಮೇನ ಪಶ್ಯತಾಮ್ ।
ತತೋಽಪ(ವ)ಹಾರಂ ಸೈನ್ಯಸ್ಯ ಜಿತಾಶ್ಚಕ್ರುಶ್ಚ ಕೌರವಾಃ ॥೪೮॥

ಆಗ ಎಲ್ಲರಾಜರೂ ನೋಡುತ್ತಿದ್ದಂತೆಯೇ ಇಪ್ಪತ್ತೈದು ಮಂದಿ ಮಹಾಬಲಿಷ್ಠರಾದ ಧೃತರಾಷ್ಟ್ರಪುತ್ರರು ಭೀಮನಿಂದ ಹತರಾದರು. ಭಗದತ್ತ ಅಶ್ವತ್ಥಾಮ ಕೃಪ ಶಲ್ಯ ದುರ್ಯೋಧನ ಮುಂತಾದವರೆಲ್ಲರೂ ಪರಾಜಿತರಾಗಿ ಪಲಾಯನಗೊಳಿಸಲ್ಪಟ್ಟರು. ಬಹಳ ಸೈನ್ಯವೂ ಹತವಾಯಿತು. ದುರ್ಯೋಧನನೂ ರಥ ಆಯುಧರಹಿತನಾಗಿ ತೀವ್ರ

ಗಾಯಗಳಿಂದ ಮೂರ್ಛೆಗೊಳಿಸಲ್ಪಟ್ಟ ಬಳಿಕ ಸೋತ ಕೌರವರು ಸೈನ್ಯವನ್ನು ಹಿಂದ ಕರೆಸಿಕೊಂಡರು.

ದುರ್ಯೋಧನೋ ನಿಶಾಯಾಂ ಚ ಯಯೌ ಯತ್ರ ನದೀಸುತಃ ।
ಪೀಡಿತೋ ಭೀಮಬಾಣೈಶ್ಚ ಕ್ಷರದ್‌ಗಾತ್ರೋ ನನಾಮ ತಮ್ ।
ಉವಾಚ ಹೇತುನಾ ಕೇನ ವಯಂ ಕ್ಷೀಯಾಮ ಸರ್ವದಾ ॥೪೯॥

ದುರ್ಯೋಧನನು ಭೀಮನ ಬಾಣಗಳಿಂದ ಗಾಯಗೊಂಡು ಮೈನೆತ್ತರು ಸುರಿಸುತ್ತ ರಾತ್ರಿಯಲ್ಲಿ ಭೀಷ್ಮನಿದ್ದಲ್ಲಿಗೆ ಹೋಗಿ ಅವರನ್ನು ನಮಿಸಿ ಕೇಳಿದ, 'ನಾವು ಸದಾ ಏಕೆ ಸೋಲುತ್ತಿದ್ದೇವೆ?'

ಪಾಂಡವಾಶ್ಚ ಜಯಂ ನಿತ್ಯಂ ಲಬ್ಧ್ವಾ ಹರ್ಷಮವಾಪ್ನುವನ್ ।
ತಮಾಹ ಭೀಷ್ಮಸ್ತೇಽಜೇಯಾ ದೇವಾಸ್ತೇ ಧರಣೀಂ ಗತಾಃ ।
ವಿಶೇಷತಃ ಕೇಶವೇನ ಪಾಲಿತಾಸ್ತತ್ಪ್ರಿಯಾಃ ಸದಾ ॥೫೦॥

'ಪಾಂಡವರು ನಿತ್ಯವೂ ಜಯಹೊಂದಿ ಹರ್ಷಪಟ್ಟಿದ್ದಾರೆ!' ಹೀಗೆ ದುರ್ಯೋಧನನು ಹೇಳಿದಾಗ ಭೀಷ್ಮರೆಂದರು, 'ಪಾಂಡವರು ಅಜೇಯರು. ಏಕೆಂದರೆ ಅವರು ಭೂಮಿಯಲ್ಲಿ ಅವತರಿಸಿದ ದೇವತೆಗಳು, ವಿಶೇಷವಾಗಿ ಶ್ರೀಕೃಷ್ಣನಿಂದ ರಕ್ಷಿತರಾಗಿರುವವರು. ಸದಾ ಅವನಿಗೆ ಪ್ರಿಯರು'

ಮಾನಸೋತ್ತರಶೈಲೇ ಹಿ ಪುರಾ ಬ್ರಹ್ಮಪುರಸ್ಸರಾಃ ।
ಸ್ಥಿತಾ ದೇವಾಸ್ತದಾऽಪಶ್ಯದ್ ಬ್ರಹ್ಮೈಕೋ ಹರಿಮಂಬರೇ ॥೫೧॥

ಹಿಂದೆ ಮಾನಸೋತ್ತರ ಪರ್ವತದಲ್ಲಿ ಬ್ರಹ್ಮಾದಿ ದೇವತೆಗಳು ಇದ್ದರು. ಆಗ ಬ್ರಹ್ಮದೇವರೊಬ್ಬರೇ ಆಕಾಶದಲ್ಲಿ ಹರಿಯನ್ನು ಕಂಡರು.

ಸ್ತುತ್ವಾ ಸಂಪೂಜ್ಯ ಭೂಮೇಃ ಸ ಭಾರಾಮತರಣಾಯ ತಮ್ ।
ಪ್ರಾರ್ಥಯಾಮಾಸ ತೇನೋಕ್ತಂ ದೇವಾನಾಮವದದ್ ವಿಭುಃ ॥೫೨॥

ಬ್ರಹ್ಮದೇವರು ಶ್ರೀಹರಿಯನ್ನು ಸ್ತೋತ್ರ ಮಾಡಿ ಪೂಜಿಸಿ, ಭೂಭಾರಹರಣ ಮಾಡಲು ಪ್ರಾರ್ಥಿಸಿದರು. ಆಗ ಶ್ರೀಹರಿಯು ಹೇಳಿದುದನ್ನು ದೇವತೆಗಳಿಗೆ ತಿಳಿಸಿದರು.

ಅಯಂ ನಾರಾಯಣೋ ದೇವಃ ಪೂರ್ಣಾನಂತಗುಣಾರ್ಣವಃ ।
ಆಜ್ಞಾಪಯತಿ ವಃ ಸರ್ವಾನ್ ಪ್ರಾದುರ್ಭಾವಾಯ ಭೂತಳೇ ॥೫೩॥

ಸ್ವಯಂ ಚ ದೇವಕೀಪುತ್ರೋ ಭವಿಷ್ಯತಿ ಜಗತ್ಪತಿಃ ॥೫೪॥

'ಪೂರ್ಣ ಅನಂತ ಗುಣಸಾಗರನಾದ ಈ ನಾರಾಯಣ ದೇವನು ನಿಮ್ಮೆಲ್ಲರನ್ನೂ ಭೂತಳದಲ್ಲಿ ಅವತರಿಸಲು ಆಜ್ಞಾಪಿಸುತ್ತಿದ್ದಾನೆ. ಜಗದೊಡೆಯನು ಸ್ವತಃ ದೇವಕೀಪುತ್ರನಾಗಿ ಅವತರಿಸುವನು'.

ಏವಂ ತೇನ ಸಮಾದಿಷ್ಟಾ ಧರ್ಮವಾಯ್ವಾದಯೋಽಖಿಲಾಃ ।
ಅಭವನ್ ಪಾಂಡವಾದ್ಯಾಸ್ತೇ ಸೇಂದ್ರಾಃ ಸಹಮರುದ್ಗಣಾಃ ॥೫೫॥

ಹೀಗೆ ಶ್ರೀಹರಿಯಿಂದ ಆಜ್ಞಪ್ತರಾದ ಯಮಧರ್ಮ, ವಾಯು ಮುಂತಾದವರೆಲ್ಲರೂ ಇಂದ್ರ ಮತ್ತು ಮರುದ್ಗಣಸಮೇತರಾಗಿ ಪಾಂಡವರು ಮುಂತಾದವರಾಗಿ ಅವತರಿಸಿದರು.

ಸ ಚ ನಾರಾಯಣೋ ದೇವೋ ದೇವಕೀನಂದನೋಽಭವತ್ ।
ತೇನೈತೇ ಪಾಲಿತಾಃ ಪಾರ್ಥಾ ಅಜೇಯಾ ದೇವಸರ್ಗಿಣಃ ।
ತಸ್ಮಾತ್ ತೈಃ ಸಂಧಿಮನ್ವಿಚ್ಛ ಯದೀಚ್ಛಸ್ಯಪರಾಭವಮ್ ॥೫೬॥

ಆ ನಾರಾಯಣದೇವನು ದೇವಕೀಪುತ್ರನಾಗಿ ಅವತರಿಸಿದ್ದಾನೆ. ಅವನಿಂದ ರಕ್ಷಿತರಾದ ದೇವಾಂಶಸಂಭೂತರಾದ ಪಾಂಡವರು ಅಜೇಯರಾಗಿದ್ದಾರೆ. ಅವರಿಂದ ಸೋಲಾಗದಿರಲು ಬಯಸುವಿಯಾದರೆ ಅವರೊಡನೆ ಸಂಧಿಗೆ ಒಪ್ಪಿಕೊಳ್ಳುವವನಾಗು.

ಇತ್ಯುಕ್ತೋ ಡಂಭಬುದ್ಧ್ಯೈವ ನತ್ವಾ ವಿಷ್ಣುಂ ತತೋ ಯಯೌ ।
ಪ್ರಾತರ್ನಿರ್ಯಾತಯಾಮಾಸ ಸೇನಾಂ ಯುದ್ಧಾಯ ದುರ್ಮತಿಃ ।
ದಿವ್ಯೌಷಧೇನ ಭೀಷ್ಮಸ್ಯ ಭೂತ್ವಾ ಚ ನಿರುಜಸ್ತತಃ ॥೫೮॥

ಭೀಷ್ಮರು ಹೀಗೆ ಹೇಳಿದಾಗ ದುರ್ಬುದ್ಧಿಯವನಾದ ದುರ್ಯೋಧನನು ಡಾಂಭಿಕ ಭಾವನೆಯಿಂದಲೇ ಹರಿಯನ್ನು ನಮಿಸಿ ಅಲ್ಲಿಂದ ಹೊರಟು ಹೋದ. ಭೀಷ್ಮರ ದಿವ್ಯೌಷಧ ಪ್ರಭಾವದಿಂದ ದುರ್ಯೋಧನ ನೋವಿಲ್ಲದವನಾಗಿ ಬೆಳಿಗ್ಗೆ ಯುದ್ಧಕ್ಕೆ ಸೇನೆಯನ್ನು ಹೊರಡಿಸಿದನು.

★ ★ ★ ★ ★

ಐವತ್ತೆಂಟನೆಯ ಅಧ್ಯಾಯ

ಭೀಮಸೇನನಿಂದ ಗದೆಯಿಂದ ಶತ್ರುಗಳ ಗಜಗಳ ವಧೆ.

ಧೃತರಾಷ್ಟ್ರ:

ದೈವಮೇವ ಪರಂ ಮನ್ಯೇ ಪೌರುಷಾದಪಿ ಸಂಜಯ ।
ಯತ್ ಸೈನ್ಯಂ ಮಮ ಪುತ್ರಸ್ಯ ಪಾಂಡುಸೈನ್ಯೇನ ವಧ್ಯತೇ ॥೧॥

ಧೃತರಾಷ್ಟ್ರ- ಎಲೈ ಸಂಜಯನೇ, ನನ್ನ ಪುತ್ರನ ಸೈನ್ಯವು ಪಾಂಡವರ ಸೈನ್ಯದಿಂದ ಹತವಾಗುವುದನ್ನು ನೋಡಿದರೆ ಪುರುಷ ಪ್ರಯತ್ನಕ್ಕಿಂತಲೂ ದೈವಸಂಕಲ್ಪವೇ ಶ್ರೇಷ್ಠವೆಂದು ತೋರುತ್ತದೆ.

ನಿತ್ಯಂ ಹಿ ಮಾಮಕಾಂಸ್ತಾತ ಹತಾನೇವ ಹಿ ಶಂಸಸಿ ।
ಅಮೃಗ್ಯಾಂಶ್ಚ ಪ್ರಹೃಷ್ಟಾಂಶ್ಚ ನಿತ್ಯಂ ಶಂಸಸಿ ಪಾಂಡವಾನ್ ॥೨॥

ಎಲೈ ಪ್ರೀತಿಪಾತ್ರನೇ, ನೀನು ನಿತ್ಯವೂ ನನ್ನವರು ಹತರಾಗುತ್ತಿದ್ದಾರೆಂದೂ ಮತ್ತು ಪಾಂಡವರು ಏನೂ ತೊಂದರೆಯಿಲ್ಲದೆ ಸಂತೋಷದಿಂದ ಇದ್ದಾರೆಂದೂ ನನಗೆ ಹೇಳುತ್ತಿದ್ದೀಯೆ.

ಹೀನಾನ್ ಪುರುಷಕಾರೇಣ ಮಾಮಕಾನದ್ಯ ಸಂಜಯ ।
ಪತಿತಾನ್ ಪಾತ್ಯಮಾನಾಂಶ್ಚ ಹತಾನೇವ ಚ ಶಂಸಸಿ ॥೩॥

ಯುಧ್ಯಮಾನಾನ್ ಯಥಾಶಕ್ತಿ ಭೃಶಮಾಸಾಂಜಯಂ ಪ್ರತಿ ।

ನನ್ನ ಪುತ್ರರು ಜಯವನ್ನು ಉದ್ದೇಶಿಸಿ ಯಥಾಶಕ್ತಿ ಯುದ್ಧವನ್ನು ಮಾಡುತ್ತಿದ್ದರೂ ಎಲೈ ಸಂಜಯನೇ, ನನ್ನ ಮಕ್ಕಳ ಪ್ರಯತ್ನವು ದುರ್ಬಲವೆಂದೂ ಮತ್ತು ಅವರು ಯುದ್ಧದಲ್ಲಿ ಬಿದ್ದಿದ್ದಾರೆ ಮತ್ತು ಬೀಳುತ್ತಿದ್ದಾರೆ ಮತ್ತು ಕೊಲ್ಲಲ್ಪಡುತ್ತಿದ್ದಾರೆ ಎಂದೂ ಹೇಳುತ್ತಿದ್ದೀಯೆ.

ಪಾಂಡವಾ ವಿಜಯಂತ್ಯೇವ ಜೀಯಂತೇ ಚೈವ ಮಾಮಕಾಃ ॥೪॥

ಸೋಽಹಂ ತೀವ್ರಾಣಿ ದುಃಖಾನಿ ದುರ್ಯೋಧನಕೃತಾನಿ ಚ ।
ಅಸ್ಪೃಶಂ ಸತತಂ ತಾತ ದುಷ್ಪಾನಿ ಬಹೂನಿ ಚ ॥೫॥

ನನ್ನ ಮಕ್ಕಳು ಸೋಲುತ್ತಿದ್ದಾರೆ, ಪಾಂಡವರು ಗೆಲ್ಲುತ್ತಲೇ ಇದ್ದಾರೆ. ಪ್ರೀತಿಪಾತ್ರನೇ, ನಾನು ದುರ್ಯೋಧನನ ನಿಮಿತ್ತದಿಂದ ಉಂಟಾದ ದುಸ್ಸಹವಾದ, ತೀವ್ರವಾದ ಅನೇಕ ದುಃಖಗಳನ್ನು ಸತತವಾಗಿ ಕೇಳುತ್ತಿದ್ದೇನೆ.

ತಮುಪಾಯಂ ನ ಪಶ್ಯಾಮಿ ಜೇಯೇರನ್ ಯೇನ ಪಾಂಡವಾಃ ।
ಮಾಮಕಾ ವಾ ಜಯಂ ಯುದ್ಧೇ ಪ್ರಾಪ್ನುಯುರ್ಯೇನ ಸಂಜಯ ॥೬॥

ಎಲೈ ಸಂಜಯನೇ, ಪಾಂಡವರನ್ನು ಯುದ್ಧದಲ್ಲಿ ಗೆಲ್ಲುವ, ನನ್ನ ಮಕ್ಕಳು ಯುದ್ಧದಲ್ಲಿ ಜಯವನ್ನು ಗಳಿಸುವ ಯಾವ ಉಪಾಯವನ್ನೂ ನಾನು ಕಾಣುತ್ತಿಲ್ಲ.

ಸಂಜಯಃ

ಕ್ಷಯಂ ಮನುಷ್ಯದೇಹಾನಾಂ ಗಜವಾಜಿರಥಕ್ಷಯಮ್ ।
ಶೃಣು ರಾಜನ್ ಸ್ಥಿರೋ ಭೂತ್ವಾ ತವೈವಾಪನಯೋ ಮಹಾನ್ ॥೭॥

ಸಂಜಯ– ರಾಜನೇ, ಮನುಷ್ಯದೇಹಗಳ ಮತ್ತು ಗಜಾಶ್ವರಥಗಳ ವಿನಾಶವನ್ನು ಸ್ಥಿರವಾಗಿ ಕುಳಿತು ಕೇಳುವವನಾಗು. ಇದಕ್ಕೆ ನಿನ್ನ ದುರ್ನೀತಿಯೇ ದೊಡ್ಡ ಕಾರಣ.

ಧೃಷ್ಟದ್ಯುಮ್ನಸ್ತು ಶಲ್ಯೇನ ಪೀಡಿತೋ ನವಭಿಃ ಶರೈಃ ।
ಪೀಡಯಾಮಾಸ ಸಂಕ್ರುದ್ಧೋ ಮದ್ರಾಧಿಪತಿಮಾಯಸ್ಯೈಃ ॥೮॥

ಶಲ್ಯನಿಂದ ಒಂಬತ್ತು ಬಾಣಗಳಿಂದ ಪೀಡಿತನಾದ ಧೃಷ್ಟದ್ಯುಮ್ನನಾದರೂ ಬಹಳ ಕೋಪಗೊಂಡು ಮದ್ರಾಧಿಪತಿಯನ್ನು ಅಯಸ್ಕಯವಾದ (ಕಬ್ಬಿಣದಿಂದ ಮಾಡಿದ) ಬಾಣದಿಂದ ಪೀಡಿಸಿದನು.

ತತ್ರಾದ್ಭುತಮಪಶ್ಯಾಮ ಪಾರ್ಷತಸ್ಯ ಪರಾಕ್ರಮಮ್ ।
ನ್ಯವಾರಯತ ಯತ್ ತೂರ್ಣಂ ಶಲ್ಯಂ ಸಮಿತಿಶೋಭನಮ್ ॥೯॥

ಯುದ್ಧದಲ್ಲಿ ಶೋಭಿಸುವ ಶಲ್ಯನನ್ನು ಶೀಘ್ರವಾಗಿ ಹಿಂದಿರುಗಿಸಿದ ಧೃಷ್ಟದ್ಯುಮ್ನನ ಪರಾಕ್ರಮವನ್ನು ನಾವು ಅಲ್ಲಿ ನೋಡಿದೆವು.

ನಾಂತರಂ ದದೃಶೇ ಕಶ್ಚಿತ್ ತಯೋಃ ಸಂರಬ್ಧಯೋ ರಣೇ ।
ಮುಹೂರ್ತಮಿವ ತದ್ಯುದ್ಧಂ ತಯೋಃ ಸಮಮಿವಾಭವತ್ ॥೧೦॥

ಸಿಟ್ಟಿನಿಂದ ಯುದ್ಧಮಾಡುವ ಅವರಿಬ್ಬರಲ್ಲಿ ಒಂದು ಮುಹೂರ್ತದವರೆಗೆ ಯಾವ ವ್ಯತ್ಯಾಸವೂ ಕಾಣಲಿಲ್ಲ. ಯುದ್ಧವು ಸಮವಾಗಿಯೇ ನಡೆಯಿತು.

ತತಃ ಶಲ್ಯೋ ಮಹಾರಾಜ ಧೃಷ್ಟದ್ಯುಮ್ನಸ್ಯ ಸಂಯುಗೇ ।
ಧನುಶ್ಚಿಚ್ಛೇದ ಭಲ್ಲೇನ ಪೀತೇನ ನಿಶಿತೇನ ಚ ॥೧೧॥

ಎಲೈ ಮಹಾರಾಜನೇ, ಅನಂತರ ಶಲ್ಯನು ಯುದ್ಧದಲ್ಲಿ ನೀರನ್ನು ಕುಡಿಸಿ ಹದಮಾಡಿ ಹರಿತವಾದ ಭಲ್ಲದಿಂದ ಧೃಷ್ಟದ್ಯುಮ್ನನ ಧನುಸ್ಸನ್ನು ಕತ್ತರಿಸಿದನು.

ಅಥೈನಂ ಶರವರ್ಷೇಣ ಛಾದಯಾಮಾಸ ಭಾರತ ।
ಗಿರಿಂ ಜಲಾಗಮೇ ಯದ್ವದ್ ಜಲದಾ ಜಲಧಾರಿಣಃ ॥೧೨॥

ಅನಂತರ ಎಲೈ ಭಾರತನೇ, ಅವನು ಮಳೆಗಾಲದಲ್ಲಿ ಮೋಡಗಳು ಪರ್ವತವನ್ನು ಮುಚ್ಚುವಂತೆ ಧೃಷ್ಟದ್ಯುಮ್ನನನ್ನು ಬಾಣಗಳ ಮಳೆಯಿಂದ ಮುಚ್ಚಿದನು.

ಅಭಿಮನ್ಯುಸ್ತು ಸಂಕ್ರುದ್ಧೋ ಧೃಷ್ಟದ್ಯುಮ್ನೇ ನಿಪೀಡಿತೇ ।
ಅಭಿದುದ್ರಾವ ವೇಗೇನ ಮದ್ರರಾಜರಥಂ ಪ್ರತಿ ॥೧೩॥

ಧೃಷ್ಟದ್ಯುಮ್ನನು ಪೀಡಿತನಾಗುತ್ತಿರಲು ಅಭಿಮನ್ಯುವಾದರೂ ಬಹಳ ಕೋಪಗೊಂಡವನಾಗಿ ವೇಗವಾಗಿ ಮದ್ರರಾಜನಾದ ಶಲ್ಯನ ರಥದ ಕಡೆಗೆ ಓಡಿ ಬಂದನು.

ತತೋ ಮದ್ರಾಧಿಪರಥಂ ಕಾರ್ಷ್ಣಿಃ ಪ್ರಾಪ್ಯಾತಿಕೋಪನಃ ।
ಆರ್ತಾಯನಿಮಮೇಯಾತ್ಮಾ ವಿವ್ಯಾಧ ನಿಶಿತೈಃ ಶರೈಃ ॥೧೪॥

ಅಪಾರವಾದ ಸಾಹಸವುಳ್ಳವನೂ, ಅತಿ ಕೋಪವನ್ನು ಉಳ್ಳವನೂ ಆದ ಅಭಿಮನ್ಯುವು ಋತಾಯನ ಪುತ್ರನಾದ ಶಲ್ಯನ ರಥದ ಬಳಿಗೆ ಬಂದು ಅವನನ್ನು ಮೂರು ಬಾಣಗಳಿಂದ ಪೀಡಿಸಿದನು.

ತತಸ್ತು ತಾವಕಾ ರಾಜನ್ ಪರೀಪ್ಸಂತೋಽರ್ಜುನಿಂ ರಣೇ ।
ಮದ್ರರಾಜರಥಂ ತೂರ್ಣಂ ಪರಿವಾರ್ಯಾವತಸ್ಥಿರೇ ॥೧೫॥

ಎಲೈ ರಾಜನೇ, ಅನಂತರ ನಿನ್ನವರು ಅಭಿಮನ್ಯುವಿನಿಂದ ಶಲ್ಯನನ್ನು ರಕ್ಷಿಸಲು ಬಯಸಿ ಶೀಘ್ರವಾಗಿ ಶಲ್ಯನ ರಥವನ್ನು ಸುತ್ತುವರಿದು ನಿಂತರು.

ದುರ್ಯೋಧನೋ ವಿಕರ್ಣಶ್ಚ ದುಃಶಾಸನವಿವಿಂಶತೀ ।
ದುರ್ಮರ್ಷಣಕೋ ದುಃಸಹಶ್ಚ ಚಿತ್ರಸೇನಶ್ಚ ದುರ್ಮುಖಃ ॥೧೬॥

ಸತ್ಯವ್ರತಶ್ಚ ಭದ್ರಂ ತೇ ಪುರುಮಿತ್ರಶ್ಚ ಭಾರತ ।
ಏತೇ ಮದ್ರಾಧಿಪರಥಂ ಪಾಲಯಂತಃ ಸ್ಥಿತಾ ರಣೇ ॥೧೭॥

ದುರ್ಯೋಧನ, ವಿಕರ್ಣ, ದುಶ್ಶಾಸನ, ವಿವಿಂಶತಿ, ದುರ್ಮರ್ಷಣ, ದುಃಸಹ, ಚಿತ್ರಸೇನ, ದುರ್ಮುಖ, ಸತ್ಯವ್ರತ, ಭದ್ರ, ಪುರುಮಿತ್ರ ಎಲ್ಲೆ ಭಾರತನೇ, ನಿನಗೆ ಮಂಗಳವಾಗಲಿ ಇವರು ಶಲ್ಯನ ರಥವನ್ನು ರಕ್ಷಿಸುತ್ತಾ ರಣರಂಗದಲ್ಲಿ ನಿಂತರು.

ತಾನ್ ಭೀಮಸೇನಃ ಸಂಕ್ರುದ್ಧೋ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ದ್ರೌಪದೇಯಾಭಿಮನ್ಯುಶ್ಚ ಮಾದ್ರೀಪುತ್ರೌ ಚ ಪಾಂಡವೌ ।
ಧಾರ್ತರಾಷ್ಟ್ರಾನ್ ದಶ ರಥಾನ್ ದಶೈವ ಪ್ರತ್ಯವಾರಯನ್ ॥೧೮॥

ಬಹಳ ಕೋಪಗೊಂಡ ಭೀಮಸೇನ, ಧೃಷ್ಟದ್ಯುಮ್ನ, ದ್ರೌಪದಿಯ ಐದು ಮಕ್ಕಳು, ಅಭಿಮನ್ಯು, ಪಾಂಡುಪುತ್ರರಾದ ನಕುಲ-ಸಹದೇವರು ಈ ಹತ್ತು ವೀರರು ಕೌರವರನ್ನು ತಡೆಗಟ್ಟಿದರು.

ನಾನಾರೂಪಾಣಿ ಶಸ್ತ್ರಾಣಿ ವಿಸೃಜಂತೋ ವಿಶಾಂಪತೇ ।
ಅಭ್ಯವರ್ತಂತ ಸಂಹೃಷ್ಟಾಃ ಪರಸ್ಪರವಧೈಷಿಣಃ ।
ತೇ ವೈ ಸಮೀಯುಃ ಸಂಗ್ರಾಮೇ ರಾಜನ್ ದುರ್ಮಂತ್ರಿತೇ ತವ ॥೧೯॥

ಎಲ್ಲೆ ರಾಜನೇ, ನಾನಾ ವಿಧವಾದ ಶಸ್ತ್ರಗಳನ್ನು ಪ್ರಯೋಗಿಸುತ್ತಾ, ಪರಸ್ಪರ ವಧೆಯನ್ನು ಆಕಾಂಕ್ಷಿಸುತ್ತಾ, ಸಂತೋಷದಿಂದ ಒಡಗೂಡಿ ರಣರಂಗದಲ್ಲಿ ನಿನ್ನ ದುರ್ನೀತಿಯಿಂದಾಗಿ ಅವರು ಒಬ್ಬರನ್ನೊಬ್ಬರು ಎದುರಿಸಿದರು.

ತಸ್ಮಿನ್ ದಾಶರಥೇ ಯುದ್ಧೇ ವರ್ತಮಾನೇ ಭಯಾವಹೇ ।
ತಾವಕಾನಾಂ ಪರೇಷಾಂ ಚ ಪ್ರೇಕ್ಷಕಾ ರಥಿನೋऽಭವನ್ ॥೨೦॥

ನಿನ್ನವರಿಗೆ ಮತ್ತು ಪರರಿಗೆ ಹತ್ತು ರಥಗಳಿಂದ ಕೂಡಿದ ಭಯಂಕರವಾದ ಯುದ್ಧವು ನಡೆಯುತ್ತಿರಲು ಉಳಿದ ರಥಿಕರು ಪ್ರೇಕ್ಷಕರಾದರು.

ಶಸ್ತ್ರಾಣ್ಯನೇಕರೂಪಾಣಿ ವಿಸೃಜಂತೋ ಮಹಾರಥಾಃ ।
ಅನ್ಯೋನ್ಯಮಭಿನರ್ದಂತಃ ಸಂಪ್ರಹಾರಂ ಪ್ರಚಕ್ರಿರೇ ॥೨೧॥

ಮಹಾರಥರಾದ ಅವರು ಅನೇಕ ಆಕಾರದ ಶಸ್ತ್ರಗಳನ್ನು ಪ್ರಯೋಗಿಸುತ್ತಾ, ಪರಸ್ಪರವಾಗಿ ಗರ್ಜಿಸುತ್ತಾ ಸಂಪ್ರಹಾರವನ್ನು ಮಾಡಿದರು.

ತೇ ಯತ್ತಾ ಜಾತಸಂರಂಭಾಃ ಸರ್ವೇऽನ್ಯೋನ್ಯಂ ಜಿಘಾಂಸವಃ ।
ಅನ್ಯೋನ್ಯಮಭಿನರ್ದಂತಃ ಸ್ಪರ್ಧಮಾನಾಃ ಪರಸ್ಪರಮ್ ॥೨೨॥

ಆನ್ಯೋನ್ಯಸ್ಪರ್ಧಯಾ ರಾಜನ್ ಜ್ಞಾತಯಃ ಸಂಗತಾ ಮಿಥಃ ।
ಮಹಾಸ್ತ್ರಾಣಿ ವಿಮುಂಚಂತಃ ಸಮಾಪೇತುರಮರ್ಷಣಾಃ ॥೨೩॥

ಎಲೈ ರಾಜನೇ, ಪರಸ್ಪರವಾಗಿ ಸಹಿಸದ ಅವರು ಜಾಗರೂಕರಾಗಿ, ಪರಸ್ಪರವಾಗಿ ಕೊಲ್ಲುವ ಆಸೆಯುಳ್ಳವರಾಗಿ, ಸಿಟ್ಟನ್ನು ಹೊಂದಿದವರಾಗಿ, ಪರಸ್ಪರವಾಗಿ ಗರ್ಜಿಸುತ್ತಾ ಸ್ಪರ್ಧೆಯಿಂದ ಕೂಡಿದವರಾಗಿ, ಮಹಾಸ್ತ್ರಗಳನ್ನು ಪ್ರಯೋಗಿಸುತ್ತಾ ಒಬ್ಬರ ಮೇಲೆ ಇನ್ನೊಬ್ಬರು ಎರಗಿದರು.

ದುರ್ಯೋಧನಸ್ತು ಸಂಕ್ರುದ್ಧೋ ಧೃಷ್ಟದ್ಯುಮ್ನಂ ಮಹಾರಣೇ ।
ವಿವ್ಯಾಧ ನಿಶಿತೈರ್ಬಾಣೈಶ್ಚತುರ್ಭಿಸ್ತ್ವರಿತೋ ಭೃಶಮ್ ॥೨೪॥

ಆ ಮಹಾಯುದ್ಧದಲ್ಲಿ ದುರ್ಯೋಧನನಾದರೂ ಬಹಳ ಸಿಟ್ಟುಗೊಂಡವನಾಗಿ ಧೃಷ್ಟದ್ಯುಮ್ನನ ಮೇಲೆ ಶೀಘ್ರವಾಗಿ ಹರಿತವಾದ ನಾಲ್ಕು ಬಾಣಗಳನ್ನು ಪ್ರಯೋಗಿಸಿದನು.

ದುರ್ಮರ್ಷಣಶ್ಚ ವಿಂಶತ್ಯಾ ಚಿತ್ರಸೇನಶ್ಚ ಪಂಚಭಿಃ ।
ದುರ್ಮುಖೋ ನವಭಿರ್ಬಾಣೈರ್ದುಃಸಹಶ್ಚಾಪಿ ಸಪ್ತಭಿಃ ।
ವಿವಿಂಶತಿಃ ಪಂಚಭಿಶ್ಚ ತ್ರಿಭಿರ್ದುಃಶಾಸನಸ್ತಥಾ ॥೨೫॥

ದುರ್ಮರ್ಷಣನು ಇಪ್ಪತ್ತು ಬಾಣಗಳಿಂದಲೂ, ಚಿತ್ರಸೇನನು ಐದು ಬಾಣಗಳಿಂದಲೂ, ದುರ್ಮುಖನು ಒಂಬತ್ತು ಬಾಣಗಳಿಂದಲೂ, ದುಃಸಹನು ಏಳು ಬಾಣಗಳಿಂದಲೂ, ವಿವಿಂಶತಿಯು ಐದು ಬಾಣಗಳಿಂದಲೂ, ದುಶ್ಶಾಸನನು ಮೂರು ಬಾಣಗಳಿಂದಲೂ (ಧೃಷ್ಟದ್ಯುಮ್ನನನ್ನು ಪೀಡಿಸಿದರು).

ತಾನ್ ಪ್ರತ್ಯವಿಧ್ಯದ್ ರಾಜೇಂದ್ರ ಪಾರ್ಷತಃ ಶತ್ರುತಾಪನಃ ।
ಏಕೈಕಂ ಪಂಚವಿಂಶತ್ಯಾ ದರ್ಶಯನ್ ಪಾಣಿಲಾಘವಮ್ ॥೨೬॥

ಎಲೈ ರಾಜೇಂದ್ರನೇ, ಶತ್ರುತಾಪಕನಾದ ಧೃಷ್ಟದ್ಯುಮ್ನನು ತನ್ನ ಹಸ್ತದ ಕ್ಷಿಪ್ರತನವನ್ನು ತೋರಿಸುತ್ತಾ ಅವರಲ್ಲಿ ಒಬ್ಬೊಬ್ಬರ ಮೇಲೆಯೂ ಇಪ್ಪತ್ತು ಬಾಣಗಳನ್ನು ಪ್ರಯೋಗಿಸಿದನು.

ಸತ್ಯವ್ರತಂ ತು ಸಮರೇ ಪುರುಮಿತ್ರಂ ಚ ಭಾರತ ।
ಅಭಿಮನ್ಯುರವಿಧ್ಯತ್ ತೌ ದಶಭಿರ್ದಶಭಿಃ ಶರೈಃ ॥೨೭॥

ಎಲೈ ಭಾರತನೇ, ಅಭಿಮನ್ಯುವು ರಣರಂಗದಲ್ಲಿ ಸತ್ಯವ್ರತನನ್ನು ಮತ್ತು ಪುರುಮಿತ್ರನನ್ನು ಹತ್ತು ಹತ್ತು ಬಾಣಗಳಿಂದ ಪೀಡಿಸಿದನು.

ಮಾದ್ರೀಪುತ್ರೌ ತು ಸಮರೇ ಮಾತುಲಂ ಮಾತೃನಂದನೌ ।
ಛಾದಯೇತಾಂ ಶರವ್ರಾತೈಸ್ತದದ್ಭುತಮಿವಾಭವತ್ ॥೨೮॥

ತಾಯಿಗೆ ಸಂತೋಷವನ್ನು ಕೊಡುವ ಮಾದ್ರೀಪುತ್ರರಾದ ನಕುಲ-ಸಹದೇವರು ಸೋದರಮಾವನಾದ ಶಲ್ಯನನ್ನು ಯುದ್ಧದಲ್ಲಿ ಬಾಣಗಳ ಸಮೂಹದಿಂದ ಮುಚ್ಚಿದರು. ಅದು ಅದ್ಭುತವಾಗಿದ್ದಿತು.

ತತಃ ಶಲ್ಯೋ ಮಹಾರಾಜ ಸ್ವಸ್ರೀಯೌ ರಥಿನಾಂ ವರೌ ।
ಶರೈರ್ಬಹುಭಿರಾನರ್ಚ್ಛತ್ ಕೃತಪ್ರತಿಕೃತೈಷಿಣೌ ।
ಛಾದ್ಯಮಾನೌ ತತಸ್ತೌ ತು ಮಾದ್ರೀಪುತ್ರೌ ನ ಚೇಲತುಃ ॥೨೯॥

ಎಲೈ ಮಹಾರಾಜನೇ, ತಾನು ಮಾಡಿದುದಕ್ಕೆ ಪ್ರತೀಕಾರವನ್ನು ಮಾಡುತ್ತಿದ್ದಂತಹ ರಥಿಶ್ರೇಷ್ಠರಾದ ಆ ಇಬ್ಬರು ಸೋದರಳಿಯಂದಿರನ್ನು ಶಲ್ಯನು ಅನೇಕ ಬಾಣಗಳನ್ನು ಪ್ರಯೋಗಿಸಿ ಹಿಂಸಿಸಿದನು. ಬಾಣಗಳಿಂದ ಮುಚ್ಚಲ್ಪಟ್ಟರೂ ಆ ಮಾದ್ರೀಪುತ್ರರು ಅಲುಗಾಡಲಿಲ್ಲ.

ಅಥ ದುರ್ಯೋಧನಂ ದೃಷ್ಟ್ವಾ ಭೀಮಸೇನೋ ಮಹಾಬಲಃ ।
ವಿಧಿತ್ಸುಃ ಕಲಹಸ್ಯಾಂತಂ ಗದಾಂ ಜಗ್ರಾಹ ಪಾಂಡವಃ ॥೩೦॥

ಆಗ ಮಹಾಬಲನಾದ ಭೀಮಸೇನನು ದುರ್ಯೋಧನನನ್ನು ನೋಡಿ ಯುದ್ಧದ ಅಂತ್ಯವನ್ನು ಮಾಡಲು ಯೋಚಿಸಿ ಕೈಯಲ್ಲಿ ಗದೆಯನ್ನು ತೆಗೆದುಕೊಂಡನು.

ತಮುದ್ಯತಗದಂ ದೃಷ್ಟ್ವಾ ಕೈಲಾಸಮಿವ ಶೃಂಗಿಣಮ್ ।
ಭೀಮಸೇನಂ ಮಹಾಬಾಹುಂ ಪುತ್ರಾಸ್ತೇ ಪ್ರಾದ್ರವನ್ ಭಯಾತ್ ॥೩೧॥

ಶಿಖರಸಹಿತವಾದ ಕೈಲಾಸಪರ್ವತದಂತಿರುವ ಎತ್ತಿದ ಗದೆಯುಳ್ಳ ಮಹಾಬಾಹುವಾದ ಭೀಮಸೇನನನ್ನು ನೋಡಿ ನಿನ್ನ ಮಕ್ಕಳು ಭಯದಿಂದ ಓಡಿ ಹೋದರು.

ದುರ್ಯೋಧನಸ್ತು ಸಂಕ್ರುದ್ಧೋ ಮಾಗಧಂ ಸಮಚೋದಯತ್ ।
ಅನೀಕಂ ದಶಸಾಹಸ್ರಂ ಕುಂಜರಾಣಾಂ ತರಸ್ವಿನಾಮ್ ॥೩೨॥

ಗಜಾನೀಕೇನ ಸಹಿತಸ್ತೇನ ರಾಜಾ ಸುಯೋಧನಃ ।
ಮಾಗಧಂ ಪುರತಃ ಕೃತ್ವಾ ಭೀಮಸೇನಂ ಸಮಭ್ಯಯಾತ್ ॥೩೩॥

ಬಹಳ ಕೋಪಗೊಂಡ ದುರ್ಯೋಧನನಾದರೂ ಹತ್ತು ಸಹಸ್ರ ಗಜಗಳ ಸೇನೆಯುಳ್ಳ ಮಗಧರಾಜನನ್ನು ಪ್ರಚೋದಿಸಿದನು. ದುರ್ಯೋಧನನು ವೇಗಶಾಲಿಗಳಾದ ಆ ಆನೆಗಳನ್ನು ತೆಗೆದುಕೊಂಡು ಮಗಧರಾಜನನ್ನು ಮುಂದೆ ಮಾಡಿಕೊಂಡು ಭೀಮಸೇನನ ಕಡೆಗೆ ಧಾವಿಸಿದನು.

ಆಪತಂತಂ ಚ ತಂ ದೃಷ್ಟ್ವಾ ಗಜಾನೀಕಂ ವೃಕೋದರಃ ।
ಗದಾಪಾಣಿರವಾರೋಹದ್ ರಥಾತ್ ಸಿಂಹ ಇವೋನ್ನದನ್ ॥೩೪॥

ತನ್ನೆಡೆಗೆ ಬರುತ್ತಿದ್ದ ಆ ಗಜಸೇನೆಯನ್ನು ನೋಡಿ ವೃಕೋದರನು ಸಿಂಹದಂತೆ ಗರ್ಜಿಸುತ್ತಾ ಕೈಯಲ್ಲಿ ಗದೆಯನ್ನು ಹಿಡಿದು ರಥದಿಂದ ಇಳಿದನು.

ಅದ್ರಿಸಾರಮಯೀಂ ಗುರ್ವೀಂ ಪ್ರಗೃಹ್ಯ ಮಹತೀಂ ಗದಾಮ್ ।
ಅಭ್ಯಧಾವದ್ ಗಜಾನೀಕಂ ವ್ಯಾದಿತಾಸ್ಯ ಇವಾಂತಕಃ ॥೩೫॥

ಬಾಯ್ತೆರೆದ ಮೃತ್ಯುವಿನಂತೆ ಇದ್ದ ಅವನು ಭಾರವಾದ, ಪರ್ವತದ ಸಾರದಿಂದ ಮಾಡಿದಂತಿದ್ದ ಆ ದೊಡ್ಡ ಗದೆಯನ್ನು ಎತ್ತಿ ಹಿಡಿದು ಗಜಸೇನೆಯ ಕಡೆಗೆ ಧಾವಿಸಿದನು.

ಸ ಗಜಾನ್ ಗದಯಾ ನಿಘ್ನನ್ ವ್ಯಚರತ್ ಸಮರೇ ಬಲೀ ।
ಭೀಮಸೇನೋ ಮಹಾಬಾಹುಃ ಸವಜ್ರ ಇವ ವಾಸವಃ ॥೩೬॥

ಬಲಿಷ್ಠನಾದ, ಮಹಾಬಾಹುವಾದ ಆ ಭೀಮಸೇನನು ವಜ್ರವನ್ನು ಹಿಡಿದ ಇಂದ್ರನಂತೆ ಗದೆಯನ್ನು ಹಿಡಿದು ಗಜಗಳನ್ನು ಕೊಲ್ಲುತ್ತಾ ರಣರಂಗದಲ್ಲಿ ತಿರುಗಾಡಿದನು.

ತಸ್ಯ ನಾದೇನ ಮಹತಾ ಮನೋಹೃದಯಕಂಪಿನಾ ।
ವ್ಯತ್ಯಚೇಷ್ಟಂತ ಸಂಹತ್ಯ ಗಜಾ ಭೀಮಸ್ಯ ನರ್ದತಃ ॥೩೭॥

ಭೀಮನು ಮಾಡುತ್ತಿದ್ದಂತಹ ಮನಸ್ಸನ್ನು ಮತ್ತು ಹೃದಯವನ್ನು ನಡುಗಿಸುವ ಆ ಭಯಂಕರವಾದ ಗರ್ಜನೆಗೆ ಆನೆಗಳೆಲ್ಲವೂ ಒಟ್ಟುಗೂಡಿ ವಿಪರೀತ ಚೇಷ್ಟೆಗಳನ್ನು ಮಾಡಿದವು.

ತತಸ್ತು ದ್ರೌಪದೀಪುತ್ರಾಃ ಸೌಭದ್ರಶ್ಚ ಮಹಾರಥಃ ।
ನಕುಲಃ ಸಹದೇವಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ॥೩೮॥

ಪೃಷ್ಠಂ ಭೀಮಸ್ಯ ರಕ್ಷಂತಃ ಶರವರ್ಷೇಣ ವಾರಣಾನ್ ।
ಅಭ್ಯಧಾವಂತ ವರ್ಷಂತೋ ಮೇಘಾ ಇವ ಗಿರೀನ್ ಯಥಾ ॥೩೯॥

ಆಗ ದ್ರೌಪದಿಯ ಮಕ್ಕಳೂ, ಮಹಾರಥನಾದ ಅಭಿಮನ್ಯುವೂ, ನಕುಲ-ಸಹದೇವರೂ, ಪಾರ್ಷತನಾದ ಧೃಷ್ಟದ್ಯುಮ್ನನೂ ಭೀಮನನ್ನು ಹಿಂದುಗಡೆಯಿಂದ ರಕ್ಷಿಸುತ್ತಾ ಮೋಡಗಳು ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ಗಜಗಳ ಮೇಲೆ ಬಾಣಗಳ ಮಳೆಯನ್ನು ಸುರಿಸುತ್ತಾ ಓಡಾಡಿದರು.

ಕ್ಷುರೈಃ ಕ್ಷುರಪ್ರೈರ್ಭಲ್ಲೈಶ್ಚ ಪೀತೈರಂಜಲಿಕೈರಪಿ ।
ಪಾತಯಂತೋತ್ತಮಾಂಗಾನಿ ಪಾಂಡವಾ ಗಜಯೋಧಿನಾಮ್ ॥೪೦॥

ಪಾಂಡವರು ಕ್ಷುರಗಳಿಂದಲೂ, ಕ್ಷುರಪ್ರಗಳಿಂದಲೂ, ಭಲ್ಲಗಳಿಂದಲೂ, ಅಂಜಲಿಗಳಿಂದಲೂ ಗಜಾರೋಹಿಗಳ ಶಿರಸ್ಸನ್ನು ಕೆಡವುತ್ತಾ (ಓಡಾಡಿದರು).

ಶಿರೋಭಿಃ ಪ್ರಪತದ್ಭಿಶ್ಚ ಬಾಹುಭಿಶ್ಚ ವಿಭೂಷಿತೈಃ ।
ಅಶ್ವವೃಷ್ಟಿರಿವಾಭಾತಿ ಪಾಣಿಭಿಶ್ಚ ಸಹಾಂಕುಶೈಃ ॥೪೧॥

ಕೆಳಗೆ ಬೀಳುತ್ತಿದ್ದ ಶಿರಸ್ಸುಗಳಿಂದಲೂ, ಅಲಂಕೃತವಾದ ಬಾಹುಗಳಿಂದಲೂ, ಅಂಕುಶಸಹಿತವಾದ ಹಸ್ತಗಳಿಂದಲೂ ಆ ಭೂಮಿಯು ಕಲ್ಲಿನ ಮಳೆಯನ್ನು ಹೊಂದುತ್ತಿರುವಂತೆ ತೋರಿತು.

ಹೃತೋತ್ತಮಾಂಗಾಃ ಸ್ಕಂಧೇಷು ಗಜಾನಾಂ ಗಜಯೋಧಿನಃ ।
ಅದೃಶ್ಯಂತಾಚಲಾಗ್ರೇಷು ದ್ರುಮಾ ಭಗ್ನಶಿಖಾ ಇವ ॥೪೨॥

ಗಜಾರೋಹಿಗಳಾದ ಯೋಧರು ಆನೆಗಳ ಭುಜದ ಮೇಲೆ ಕುಳಿತು ಶಿರಸ್ಸುಗಳನ್ನು ಕಳೆದುಕೊಂಡು ಮೇಲ್ಭಾಗವು ಕಡಿದ ಮರಗಳಂತೆ ಕಂಡುಬಂದರು.

ಧೃಷ್ಟದ್ಯುಮ್ನಹತಾನನ್ಯಾನಪಶ್ಯಾಮ ಮಹಾಗಜಾನ್ ।
ಪತಿತಾನ್ ಪಾತ್ಯಮಾನಾಂಶ್ಚ ಪಾರ್ಷತೇನ ಮಹಾತ್ಮನಾ ॥೪೩॥

ಮಹಾತ್ಮನಾದ ಪಾರ್ಷತನಾದ ಧೃಷ್ಟದ್ಯುಮ್ನನಿಂದ ಹತವಾಗಿ ಬಿದ್ದಂತಹ ಮತ್ತು ಬೀಳುತ್ತಿದ್ದಂತಹ ಮಹಾಗಜಗಳನ್ನು ನೋಡಿದೆವು.

ಮಾಗಧೋಽಥ ಮಹೀಪಾಲೋ ಗಜಮೈರಾವಣೋ(ತೋ)ಪಮಮ್ ।
ಪ್ರೇಷಯಾಮಾಸ ಸಮರೇ ಸೌಭದ್ರಸ್ಯ ರಥಂ ಪ್ರತಿ ॥೪೪॥

ಮಾಗಧ ರಾಜನೂ ಸಹ ಐರಾವಣನಂತಹ ದೊಡ್ಡ ಗಜವನ್ನು ಏರಿ ಯುದ್ಧದಲ್ಲಿ ಅಭಿಮನ್ಯುವಿನ ರಥದ ಮೇಲೆ ಅದನ್ನು ಬಿಟ್ಟನು.

ತಮಾಪತಂತಂ ಸಂಪ್ರೇಕ್ಷ್ಯ ಮಾಗಧಸ್ಯ ಗಜೋತ್ತಮಮ್ ।
ಜಘಾನೈಕೇಷುಣಾ ವೀರಃ ಸೌಭದ್ರಃ ಪರವೀರಹಾ ॥೪೫॥

ಮಗಧರಾಜನ ಆ ಶ್ರೇಷ್ಠವಾದ ಗಜವು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ಶತ್ರುಸಂಹಾರಕನಾದ ಮತ್ತು ವೀರನಾದ ಅಭಿಮನ್ಯುವು ಒಂದು ಬಾಣದಿಂದ ಅದನ್ನು ಕೊಂದನು.

ತಸ್ಯಾವರ್ಜಿತನಾಗಸ್ಯ ಕಾರ್ಷ್ಣಿಃ ಪರಪುರಂಜಯಃ ।
ರಾಜ್ಞೋ ರಜತಪುಂಖೇನ ಭಲ್ಲೇನಾಪಹರಚ್ಛಿರಃ ॥೪೬॥

ಪರಪುರಂಜಯನಾದ ಅಭಿಮನ್ಯುವು ಅವನ ಗಜವನ್ನು ಕೊಂದು ರಜತದ ಪುಂಖದಿಂದ ಅಲಂಕೃತವಾಗಿದ್ದ ಭಲ್ಲದಿಂದ ಅವನ ಶಿರಸ್ಸನ್ನು ಕತ್ತರಿಸಿದನು.

ವಿಗಾಹ್ಯ ತದ್ ಗಜಾನೀಕಂ ಭೀಮಸೇನೋಽಪಿ ಪಾಂಡವಃ ।
ವ್ಯಚರತ್ ಸಮರೇ ಮೃದ್ನನ್ ಗಜಾನಿಂದ್ರೋ ಗಿರೀನಿವ ॥೪೭॥

ಪಾಂಡುಪುತ್ರನಾದ ಭೀಮಸೇನನು ಆ ಗಜಸೇನೆಯನ್ನು ಪ್ರವೇಶಿಸಿ ಇಂದ್ರನು ಪರ್ವತಗಳನ್ನು ಮರ್ದಿಸಿದಂತೆ ಆ ಗಜಗಳನ್ನು ಮರ್ದಿಸುತ್ತಾ ರಣರಂಗದಲ್ಲಿ ಸಂಚರಿಗಾಡಿದನು.

ಏಕಪ್ರಹಾರಾಭಿಹತಾನ್ ಭೀಮಸೇನೇನ ಕುಂಜರಾನ್ ।
ಅಪಶ್ಯಾಮ ರಣೇ ತಸ್ಮಿನ್ ಗಿರೀನ್ ವಜ್ರಹತಾನಿವ ॥೪೮॥

ವಜ್ರದಿಂದ ಹತವಾದ ಪರ್ವತಗಳಂತೆ ಭೀಮಸೇನನಿಂದ ಒಂದೇ ಗದಾ ಪ್ರಹಾರದಿಂದ ಹತವಾದ ಗಜಗಳನ್ನು ನಾವು ರಣರಂಗದಲ್ಲಿ ನೋಡಿದೆವು.

ಭಗ್ನದಂತಾನ್ ಭಗ್ನಕಟೀನ್ ಭಗ್ನಸಕ್ಥೀಂಶ್ಚ ವಾರಣಾನ್ ।
ಭಗ್ನಪೃಷ್ಠಾನ್ ಭಗ್ನಕುಂಭಾನ್ ನಿಹತಾನ್ ಪರ್ವತೋಪಮಾನ್ ॥೪೯॥

ದಂತಗಳು ಮುರಿದ, ಕಟಿಗಳು ಮುರಿದ, ತೊಡೆಯ ಸಂಧಿಗಳು ಮುರಿದ, ಬೆನ್ನು ಮುರಿದ, ಕುಂಭಸ್ಥಲವು ಒಡೆದ ಪರ್ವತದಂತಿದ್ದ ಗಜಗಳು ಹತವಾದುದನ್ನು ನಾವು ನೋಡಿದೆವು.

ನದತಃ ಸೀದತಶ್ಚಾನ್ಯಾನ್ ವಿಮುಖಾನ್ ಸಮರೇ ಗಜಾನ್ ।
ವಿಮೂತ್ರಾನ್ ಭಗ್ನಸಂವಿಗ್ನಾಂಸ್ತಥಾ ವಿಶಕೃತೋಽಪರಾನ್ ॥೫೦॥

ಇನ್ನು ಕೆಲವು ಗಜಗಳು ಗರ್ಜಿಸುತ್ತಾ ನೆಲದಲ್ಲಿ ಬಿದ್ದು ಹೊರಳಾಡುತ್ತಾ ಯುದ್ಧಕ್ಕೆ ವಿಮುಖವಾಗಿ ವಿಶೇಷವಾಗಿ ಮಲಮೂತ್ರಗಳನ್ನು ಸ್ರವಿಸುತ್ತಾ ಭಗ್ನಗೊಂಡು ಸೇದನೆಯಿಂದ ಕೂಡಿದ ಗಜಗಳನ್ನು ನೋಡಿದೆವು.

ಭೀಮಸೇನಸ್ಯ ಮಾರ್ಗೇಷು ಗತಾಸೂನ್ ಪರ್ವತೋಪಮಾನ್ ।
ಅಪಶ್ಯಾಮ ಹತಾನ್ ನಾಗಾನ್ ನಿಘ್ನಂತಸ್ತಥಾಪರೇ ॥೫೧॥

ಭೀಮಸೇನನ ಸಂಚಾರ ಮಾರ್ಗದಲ್ಲಿ ಮರಣ ಹೊಂದಿದ್ದ ಇನ್ನು ಕೆಲವು ಬಿದ್ದು ನೋವಿನಿಂದ ಗರ್ಜಿಸುತ್ತಿದ್ದಂತಹ ಪರ್ವತದಂತಿದ್ದ ಗಜಗಳನ್ನು ನೋಡಿದವು.

ವಮಂತೋ ರುಧಿರಂ ಚಾನ್ಯೇ ಭಿನ್ನಕುಂಭಾ ಮಹಾಗಜಾಃ ।
ವಿಹ್ವಲಂತೋ ಗತಾ ಭೂಮಿಂ ಶೈಲಾ ಇವ ಧರಾತಳೇ ॥೫೨॥

ಇನ್ನು ಕೆಲವು ಮಹಾಗಜಗಳು ಕುಂಭಗಳು ಒಡೆದು ರಕ್ತವನ್ನು ಕಾರುತ್ತಾ ಸಂಕಟದಿಂದ ಕೂಡಿ ಭೂಮಿಯ ಮೇಲೆ ಪರ್ವತವು ಉರುಳಿದಂತೆ ಉರುಳುತ್ತಿರುವುದು ಕಂಡುಬಂದಿತು.

ಮೇದೋರುಧಿರದಿಗ್ಧಾಂಗೋ ವಸಾಮಜ್ಜಾಸಮುಕ್ಷಿತಃ ।
ವ್ಯಚರತ್‌ಸಮರೇ ಭೀಮೋ ದಂಡಪಾಣಿರಿವಾಂತಕಃ ॥೫೩॥

ಗಜಗಳ ಮೇದಸ್ಸು ಮತ್ತು ರಕ್ತಗಳಿಂದ ಲೇಪಿತವಾದ ಶರೀರವುಳ್ಳವನಾಗಿ, ಮೊಸಳ ಮತ್ತು ಮಜ್ಜಗಳಿಂದ ಚುಮುಕಿಸಲ್ಪಟ್ಟವನಂತೆ ಇದ್ದ ಭೀಮನು ಕೈಯಲ್ಲಿ ದಂಡವನ್ನು ಹಿಡಿದ ಯಮನಂತೆ ರಣರಂಗದಲ್ಲಿ ಸಂಚರಿಸಿದನು.

ಗಜಾನಾಂ ರುಧಿರಾಕ್ತಾಂ ತಾಂ ಗದಾಂ ಬಿಭ್ರದ್ ವೃಕೋದರಃ ।
ಘೋರಃ ಪ್ರತಿಭಯಶ್ಚಾಸೀತ್ ಪಿನಾಕೀವ ಪಿನಾಕಧೃಕ್ ॥೫೪॥

ಗಜಗಳ ರಕ್ತದಿಂದ ಲೇಪಿತವಾದ ಆ ಗದೆಯನ್ನು ಹಿಡಿದ ವೃಕೋದರನು ಪಿನಾಕವನ್ನು ಧರಿಸಿದ ರುದ್ರನಂತೆ ನೋಡುವುದಕ್ಕೆ ಘೋರನೂ, ಭಯಂಕರನೂ ಆಗಿದ್ದನು.

ನಿರ್ಮಥ್ಯಮಾನಾಃ ಕ್ರುದ್ಧೇನ ಭೀಮಸೇನೇನ ದಂತಿನಃ ।
ಸಹಸಾ ಪ್ರಾದ್ರವನ್ ಶಿಷ್ಟಾ ಮೃದ್ನಂತಸ್ತವ ವಾಹಿನೀಮ್ ॥೫೫॥

ಕೋಪಗೊಂಡ ಭೀಮಸೇನನಿಂದ ಗಜಗಳು ಹಿಂಸೆಗೆ ಒಳಗಾಗುತ್ತಿರಲು, ಉಳಿದ ಗಜಗಳು ಇದ್ದಕ್ಕಿದ್ದಂತೆಯೇ ನಿನ್ನ ಸೈನ್ಯವನ್ನೇ ತುಳಿಯುತ್ತಾ ಓಡಿಹೋದವು.

ತಂ ಹಿ ವೀರಂ ಮಹೇಷ್ವಾಸಾಃ ಸೌಭದ್ರಪ್ರಮುಖಾ ರಥಾಃ ।
ಪರ್ಯರಕ್ಷಂತ ಯುಧ್ಯಂತಂ ವಜ್ರಾಯುಧಮಿವಾಮರಾಃ ॥೫೬॥

ದೇವತೆಗಳು ವಜ್ರಾಯುಧವನ್ನು ಹಿಡಿದ ಇಂದ್ರನನ್ನು ಎಲ್ಲ ಕಡೆಯಿಂದಲೂ ರಕ್ಷಿಸಿದಂತೆ ಅಭಿಮನ್ಯು ಮೊದಲಾದ ಮಹಾಧನುರ್ಧಾರಿಗಳು ಮತ್ತು ಮಹಾರಥರು ಯುದ್ಧವನ್ನು ಮಾಡುವ ವೀರನಾದ ಭೀಮಸೇನನನ್ನು ಎಲ್ಲ ಕಡೆಯಿಂದಲೂ ರಕ್ಷಿಸಿದರು.

ಶೋಣಿತಾಕ್ತಾಂ ಗದಾಂ ಬಿಭ್ರದುಚ್ಚಿತೋ ಗಜಶೋಣಿತೈಃ ।
ಕೃತಾಂತ ಇವ ರೌದ್ರಾತ್ಮಾ ಭೀಮಸೇನೋ ವ್ಯದೃಶ್ಯತ ॥೫೭॥

ರಕ್ತದಿಂದ ಲೇಪಿತವಾದ ಗದೆಯನ್ನು ಹಿಡಿದು ಗಜಗಳ ರಕ್ತದಿಂದ ಚುಮುಕಿಸಲ್ಪಟ್ಟಂತಿದ್ದ ಭೀಮಸೇನನು ಭಯಂಕರವಾದ ರೂಪವುಳ್ಳ ಯಮನಂತೆ ಕಂಡುಬಂದನು.

ವ್ಯಾಯಚ್ಛಮಾನಂ ಗದಯಾ ದಿಕ್ಷು ಸರ್ವಾಸು ಭಾರತ ।
ನೃತ್ಯಮಾನಮಪಶ್ಯಾಮ ನೃತ್ಯಂತಮಿವ ಶಂಕರಮ್ ॥೫೮॥

ಎಲೈ ಭಾರತನೇ, ಎಲ್ಲ ದಿಕ್ಕುಗಳಲ್ಲಿಯೂ ಗದೆಯನ್ನು ಬೀಸುತ್ತಿದ್ದ ಅವನು ತಾಂಡವ ನೃತ್ಯವನ್ನು ಮಾಡುವ ಶಂಕರನಂತೆ ನೃತ್ಯವನ್ನು ಮಾಡುವುದನ್ನು ನಾವು ನೋಡಿದೆವು.

ಯಮದಂಡೋಪಮಾಂ ಗುರ್ವೀಮಿಂದ್ರಾಶನಿಸಮಸ್ವನಾಮ್ ।
ಅಪಶ್ಯಾಮ ಮಹಾರಾಜ ರೌದ್ರಾಂ ವಿಶಸನೀಂ ಗದಾಮ್ ॥೫೯॥

ವಿಮಿಶ್ರಾಂ ಕೇಶಮಜ್ಜಭಿಃ ಪ್ರದಿಗ್ಧಾಂ ರುಧಿರೇಣ ಚ ।
ಪಿನಾಕಮಿವ ರುದ್ರಸ್ಯ ಕ್ರುದ್ಧಸ್ಯಾಭಿಘ್ನತಃ ಪಶೂನ್ ॥೬೦॥

ಎಲೈ ಮಹಾರಾಜನೇ, ಶತ್ರುಗಳನ್ನು ಪುಡಿ-ಪುಡಿ ಮಾಡುವ, ಭಯಂಕರವಾದ ಯಮದಂಡದಂತಿದ್ದ, ಭಾರವಾದ, ಇಂದ್ರನ ವಜ್ರಾಯುಧಕ್ಕೆ ಸಮನಾದ ಘೋಷವುಳ್ಳ, ಕೇಶಮಜ್ಜಗಳು ಅಂಟಿಕೊಂಡಿರುವ, ರಕ್ತದಿಂದ ತೋಯ್ದಿರುವ, ಕ್ರೋಧದಿಂದ ಪಶುಗಳನ್ನು ಸಂಹರಿಸುವ ರುದ್ರನ ಪಿನಾಕದಂತಿರುವ, ಭೀಮಸೇನನ ಗದೆಯನ್ನು ನೋಡಿದೆವು.

ಯಥಾ ಪಶೂನಾಂ ಸಂಘಾತಂ ಯಷ್ಟ್ಯಾ ಪಾಲಃ ಪ್ರಕಾಲಯೇತ್ ।
ತಥಾ ಭೀಮೋ ಗಜಾನೀಕಂ ಗದಯಾ ಪರ್ಯಕಾಲಯತ್ ॥೬೧॥

ಹೇಗೆ ಪಶುಪಾಲಕನು ಕೈಯಲ್ಲಿ ಕೋಲನ್ನು ಹಿಡಿದು ಪಶುಸಮೂಹವನ್ನು ತಡಕಾಡುತ್ತಾನೆಯೋ ಅದರಂತೆ ಭೀಮನು ಕೈಯಲ್ಲಿ ಗದೆಯನ್ನು ಹಿಡಿದು ಗಜ ಸಮೂಹವನ್ನು ತಡಕಾಡಿದನು.

ಗದಯಾ ವಧ್ಯಮಾನಾಸ್ತೇ ಮಾರ್ಗಣೈಶ್ಚ ಸಮಂತತಃ ।
ಸ್ವಾನ್ಯನೀಕಾನಿ ಮೃದ್ನಂತಃ ಪ್ರಾದ್ರವನ್ ಕುಂಜರಾಸ್ತವ ॥೬೨॥

ಗದೆಯಿಂದ ಹೊಡೆಯಲ್ಪಟ್ಟು ಎಲ್ಲ ಕಡೆಗಳಿಂದಲೂ ಬಾಣಗಳಿಗೆ ಗುರಿಯಾಗುತ್ತಿದ್ದ ನಿನ್ನ ಗಜಗಳು ತಮ್ಮ ಸೈನ್ಯವನ್ನೇ ತುಳಿಯುತ್ತಾ ಓಡಿಹೋದವು.

ಮಹಾವಾತ ಇವಾಭ್ರಾಣಿ ವಿಧಮಿತ್ವಾ ಸ ವಾರಣಾನ್ ।
ಅತಿಷ್ಠತ್ ತುಮುಲೇ ಭೀಮಃ ಶ್ಮಶಾನ ಇವ ಶೂಲಭೃತ್ ॥೬೩॥

ಬಿರುಗಾಳಿಯು ಮೋಡಗಳನ್ನು ಚದುರಿಸಿದಂತೆ ಭೀಮಸೇನನು ತನ್ನ ಗದೆಯಿಂದ ಗಜಗಳನ್ನು ವಿನಾಶಗೊಳಿಸಿ ಸ್ಮಶಾನದಲ್ಲಿ ರುದ್ರದೇವರು ನಿಂತಂತೆ ತೀವ್ರವಾದ ಯುದ್ಧದಲ್ಲಿ ನಿಂತನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಅಷ್ಟಪಂಚಾಶೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ಅಷ್ಟಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೊಂಬತ್ತನೆಯ ಅಧ್ಯಾಯ

ಭೀಮಸೇನನ ಪರಾಕ್ರಮ. ಧೃಷ್ಟದ್ಯುಮ್ನನ ಪ್ರತಾಪವನ್ನು ನೋಡಿ ಭೂರಿಶ್ರವಸ ಆಗಮನ.

ಸಂಜಯಃ

ತಸ್ಮಿನ್ ಹತೇ ಗಜಾನೀಕೇ ಪುತ್ರೋ ದುರ್ಯೋಧನಸ್ತವ ।
ಭೀಮಸೇನಂ ಘ್ನತೇತ್ಯೇವಂ ಸರ್ವಸೈನ್ಯಾನ್ಯಚೋದಯತ್ ॥೧॥

ಸಂಜಯ– ಭೀಮಸೇನನಿಂದ ಆ ಗಜಸೇನೆಯು ಕೊಲ್ಲಲ್ಪಡುತ್ತಿರಲು ನಿನ್ನ ಪುತ್ರನಾದ ದುರ್ಯೋಧನನು ಭೀಮಸೇನನನ್ನು ಕೊಲ್ಲಿ ಎಂದು ಎಲ್ಲಾ ಸೈನ್ಯಕ್ಕೂ ಪ್ರೇರಣೆಯನ್ನು ಮಾಡಿದನು.

ತತಃ ಸರ್ವಾಣ್ಯನೀಕಾನಿ ತವ ಪುತ್ರಸ್ಯ ಶಾಸನಾತ್ ।
ಅಭ್ಯದ್ರವನ್ ಭೀಮಸೇನಂ ನದಂತಂ ಭೈರವಾನ್ ರವಾನ್ ॥೨॥

ನಿನ್ನ ಪುತ್ರನ ಶಾಸನದಂತೆ ಎಲ್ಲ ಸೈನ್ಯಗಳೂ ಭೈರವನಾದಗಳನ್ನು ಗರ್ಜಿಸುತ್ತಿದ್ದಂತಹ ಭೀಮಸೇನನ ಕಡೆಗೆ ಓಡಿ ಬಂದವು.

ತಂ ಬಲೌಘಮಪರ್ಯಂತಂ ದೇವೈರಪಿ ದುರುತ್ಸಹಮ್ ।
ಆಪತಂತಂ ಸುದುಷ್ಪಾರಂ ಸಮುದ್ರಮಿವ ಪರ್ವಣಿ ॥೩॥

ರಥನಾಗಾಶ್ವಕಲಿಲಂ ಶಂಖದುಂದುಭಿನಾದಿತಮ್ ।
ಅಥಾನಂತಮಪಾರಂ ಚ ನರೇಂದ್ರಸ್ತಿಮಿತಹ್ರದಮ್ ॥೪॥

ತಂ ಭೀಮಸೇನಃ ಸಮರೇ ಮಹೋದಧಿಮಿವಾಪರಮ್ ।
ಸೇನಾಸಾಗರಮಕ್ಷೋಭ್ಯಂ ವೇಲೇವ ಸಮವಾರಯತ್ ॥೫॥

ದೇವತೆಗಳಿಂದಲೂ ಸೋಲಿಸಲು ಕಷ್ಟವಾದ, ಪರ್ವಕಾಲದ ಸಮುದ್ರದಂತೆ ದಾಟಲು ಅಸಾಧ್ಯವಾದ, ರಥ-ಗಜಾಶ್ವಗಳಿಂದ ತುಂಬಿದ, ಶಂಖ-ದುಂದುಭಿ ನಾದಗಳಿಂದ ಕೂಡಿದ, ಅನಂತವಾದ, ಅಪಾರವಾದ ರಾಜರುಗಳಿಂದ ನಿಶ್ಚಲವಾದ ಸರೋವರಗಳಿಂದ ಕೂಡಿದ, ಇನ್ನೊಂದು ದೊಡ್ಡ ಸಮುದ್ರದಂತೆ ತನ್ನ ಕಡೆಗೆ ಬರುತ್ತಿದ್ದ

ಅಲುಗಾಡಿಸಲು ಅಸಾಧ್ಯವಾದ ಆ ಸೈನ್ಯವನ್ನು ಸಾಗರವನ್ನು ತೀರವು ತಡೆದಂತೆ ಭೀಮಸೇನನು ಯುದ್ಧದಲ್ಲಿ ತಡೆದನು.

ತದಾಶ್ಚರ್ಯಮಪಶ್ಯಾಮ ಶ್ರದ್ದೇಯಮಪಿ ಚಾದ್ಭುತಮ್ ।
ಭೀಮಸೇನಸ್ಯ ಸಮರೇ ರಾಜನ್ ಕರ್ಮಾತಿಮಾನುಷಮ್ ॥೬॥

ಎಲೈ ರಾಜನೇ, ಭೀಮಸೇನನು ಯುದ್ಧದಲ್ಲಿ ಮಾಡಿದ ಅತಿಮಾನುಷವಾದ ಅದ್ಭುತವಾದ ಕರ್ಮವಾದರೂ ನಂಬಲೇಬೇಕಾದ ಆ ಆಶ್ಚರ್ಯವನ್ನು ನಾವು ನೋಡಿದೆವು.

ಉದೀರ್ಣಾಂ ಪೃಥಿವೀಂ ಸರ್ವಾಂ ಸಾಶ್ವಾಂ ಸರಥಕುಂಜರಾಮ್ ।
ಅಸಂಭ್ರಮಂ ಭೀಮಸೇನೋ ಗದಯಾ ಸಮತಾಡಯತ್ ॥೭॥

ಅಶ್ವ-ಗಜ-ರಥಗಳಿಂದ ತುಂಬಿದ ಸಮಗ್ರವಾದ ಭೂಮಿಯ ಸೈನ್ಯವನ್ನು ಭೀಮಸೇನನು ಯಾವ ಗಾಬರಿಯೂ ಇಲ್ಲದೆ ಗದೆಯಿಂದ ಹೊಡೆದನು.

ಸ ಸಂವಾರ್ಯ ಬಲೌಘಾಂಸ್ತಾನ್ ಗದಯಾ ರಥಿನಾಂ ವರಃ ।
ಅತಿಷ್ಠತ್ ತುಮುಲೇ ಭೀಮೋ ಗಿರಿರ್ಮೇರುರಿವಾಚಲಃ ॥೮॥

ರಥಿಕರಲ್ಲಿ ಶ್ರೇಷ್ಠನಾದ ಅವನು ತನ್ನ ಗದೆಯಿಂದ ಆ ಸೈನ್ಯ ಸಮೂಹವನ್ನು ನಿವಾರಿಸಿ ಮೇರು ಪರ್ವತದಂತೆ ಸ್ಥಿರವಾಗಿ ರಣರಂಗದಲ್ಲಿ ನಿಂತನು.

ತಸ್ಮಿನ್ ಸುತುಮುಲೇ ಘೋರೇ ಕಾಲೇ ಪರಮದಾರುಣೇ ।
ಭ್ರಾತರಶ್ಚೈವ ಪುತ್ರಾಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ॥೯॥

ದ್ರೌಪದೇಯಾಭಿಮನ್ಯುಶ್ಚ ಶಿಖಂಡೀ ಚ ಮಹಾರಥಃ ।
ನ ಪ್ರಾಜಹನ್ ಭೀಮಸೇನಂ ಭಯೇ ಜಾತೇ ಮಹಾಬಲಮ್ ॥೧೦॥

ಅಂತಹ ತೀವ್ರವಾದ, ಘೋರವಾದ, ಪರಮದಾರುಣವಾದ ಕಾಲದಲ್ಲಿ ಅವನ ಸಹೋದರರೂ, ಪುತ್ರರೂ, ಧೃಷ್ಟದ್ಯುಮ್ನನೂ, ದ್ರೌಪದಿಯ ಐವರು ಮಕ್ಕಳೂ, ಅಭಿಮನ್ಯುವೂ, ಮಹಾರಥನಾದ ಶಿಖಂಡಿಯೂ ಮಹಾಬಲನಾದ ಭೀಮಸೇನನ ಪಾರ್ಶ್ವವನ್ನು ತ್ಯಜಿಸಲಿಲ್ಲ.

ತತಃ ಶೈಕ್ಯಾಯಸೀಂ ಗುರ್ವೀಂ ಪ್ರಗೃಹ್ಯ ಮಹತೀಂ ಗದಾಮ್ ।
ಅವಧೀತ್ ತಾವಕಾನ್ ಯೋಧಾನ್ ದಂಡಪಾಣಿರಿವಾಂತಕಃ ।
ಪೋಥಯನ್ ರಥವೃಂದಾನಿ ವಾಜಿವೃಂದಾನಿ ಚಾಭಿಭೂಃ ॥೧೧॥

ಅನಂತರ ಯಾವಾಗಲೂ ನೆಲುವಿನ ಮೇಲೆ ಇರುತ್ತಿದ್ದ ಕಬ್ಬಿಣದ ದೊಡ್ಡ ಗದೆಯನ್ನು ಕೈಯಲ್ಲಿ ಹಿಡಿದು, ಕೈಯಲ್ಲಿ ದಂಡವನ್ನು ಹಿಡಿದ ಯಮನಂತೆ ರಥ ಸಮೂಹಗಳನ್ನು, ಗಜ ಸಮೂಹಗಳನ್ನು ಮರ್ದನ ಮಾಡುತ್ತಾ, ಎಲ್ಲರನ್ನೂ ಸೋಲಿಸುವ ಅವನು ನಿನ್ನ ಯೋಧರನ್ನು ಸಂಹರಿಸಿದನು.

ವ್ಯಚರತ್ಸಮರೇ ಭೀಮೋ ಯುಗಾಂತೇ ಪಾವಕೋ ಯಥಾ ।
ವಿನಿಘ್ನನ್ ಸಮರೇ ಸರ್ವಾನ್ ಯುಗಾಂತೇ ಕಾಲವದ್ ವಿಭುಃ ॥೧೨॥

ಯುಗಾಂತಕಾಲದ ಅಗ್ನಿಯಂತೆ ಅಥವಾ ಯುಗಾಂತಕಾಲದ ಮೃತ್ಯುವಿನಂತೆ ಸರ್ವಸಮರ್ಥನಾದ ಆ ಭೀಮನು ಯುದ್ಧದಲ್ಲಿ ಎಲ್ಲರನ್ನೂ ಸಂಹರಿಸುತ್ತಾ ತಿರುಗಾಡಿದನು.

ಊರುವೇಗೇನ ಸಂಕರ್ಷನ್ ರಥಜಾಲಾನಿ ಪಾಂಡವಃ ।
ಪ್ರಮರ್ದಯನ್ ಗಜಾನ್ ಸರ್ವಾನ್ ನಡ್ವಲಾನೀವ ಕುಂಜರಃ ॥೧೩॥

ಮೃದ್ನನ್ ರಥೇಭ್ಯೋ ರಥಿನೋ ಗಜೇಭ್ಯೋ ಗಜಯೋಧಿನಃ ।
ಸಾದಿನಶ್ಚಾಶ್ವಪೃಷ್ಠೇಭ್ಯೋ ಭೂಮೌ ಚೈವ ಪದಾತಿನಃ ॥೧೪॥

ತನ್ನ ತೊಡೆಗಳ ವೇಗದಿಂದ ರಥಸಮೂಹಗಳನ್ನು ಎಳೆಯುತ್ತಾ, ಎಲ್ಲಾ ಗಜಗಳನ್ನು ಆನೆಯು ಬಳ್ಳಿಗಳನ್ನು ವಿನಾಶ ಮಾಡಿದಂತೆ ನಾಶಮಾಡುತ್ತಾ, ರಥದಲ್ಲಿದ್ದ ರಥಿಕರನ್ನು, ಗಜದ ಮೇಲಿದ್ದ ಗಜಯೋಧರನ್ನು, ಅಶ್ವದ ಮೇಲಿದ್ದ ಅಶ್ವಾರೋಹಿಗಳನ್ನು, ಭೂಮಿಯ ಮೇಲಿದ್ದ ಪದಾತಿಗಳನ್ನು ಸಂಹರಿಸುತ್ತಾ ಭೀಮಸೇನನು ಸಂಚರಿಸಿದನು.

ತತ್ರತತ್ರ ಹತೈಶ್ಚಾಪಿ ಮನುಷ್ಯಗಜವಾಜಿಭಃ ।
ರಣಾಂಗಣಂ ತದಭವನ್ಮೃತ್ಯೋರಾಘಾತಸನ್ನಿಭಮ್ ॥೧೫॥

ಅಲ್ಲಲ್ಲಿ ಹತರಾಗಿ ಬಿದ್ದ ಮನುಷ್ಯ ಗಜಾಶ್ವಗಳಿಂದ ಕೂಡಿದ ಆ ರಣಭೂಮಿಯು ಮೃತ್ಯುವಿನ ವಜ್ರಧಸ್ಥಾನದಂತೆ ತೋರಿತು.

ಪಿನಾಕಮಿವ ರುದ್ರಸ್ಯ ಕ್ರುದ್ಧಸ್ಯಾಭಿಪತನ್ಪಶೂನ್ ।
ಯಮದಂಡೋಪಮಾಮುಗ್ರಾಮಿಂದ್ರಾಶನಿಸಮಸ್ವನಾಮ್ ।
ದದೃಶುರ್ಭೀಮಸೇನಸ್ಯ ರೌದ್ರಾಂ ವಿಶಸನೀಂ ಗದಾಮ್ ॥೧೬॥

ಪಶುಗಳನ್ನು ಸಂಹಾರ ಮಾಡುವ ರುದ್ರದೇವರ ಪಿನಾಕದಂತೆ, ಯಮದೇವರ ದಂಡದಂತೆ, ಇಂದ್ರನ ವಜ್ರಾಯುಧದಂತೆ ಇದ್ದ ಶತ್ರುಸೈನ್ಯವನ್ನು ಸಂಹಾರ ಮಾಡುವ ಭೀಮಸೇನನ ಭಯಂಕರವಾದ ಗದೆಯನ್ನು ಎಲ್ಲರೂ ನೋಡಿದರು.

ಆವಿಧ್ಯತೋ ಗದಾಂ ತಸ್ಯ ಕೌಂತೇಯಸ್ಯ ಮಹಾತ್ಮನಃ ।
ಬಭೌ ರೂಪಂ ಮಹಾಘೋರಂ ಕಾಲಸ್ಯೇವ ಯುಗಕ್ಷಯೇ ॥೧೭॥

ಗದೆಯಿಂದ ಪರಸೈನ್ಯದ ಮೇಲೆ ಪ್ರಹಾರ ಮಾಡುವ ಮಹಾತ್ಮನಾದ ಕೌಂತೇಯನಾದ ಆ ಭೀಮಸೇನನ ರೂಪವು ಯುಗಾಂತಕಾಲದ ಮೃತ್ಯುವಿನ ರೂಪದಂತೆ ಮಹಾಭಯಂಕರವಾಗಿ ತೋರಿತು.

ತಂ ತಥಾ ಮಹತೀಂ ಸೇನಾಂ ದ್ರಾವಯಂತಂ ಪುನಃ ಪುನಃ ।
ದೃಷ್ಟ್ವಾ ಮೃತ್ಯುಮಿವಾಯಾಂತಂ ಸರ್ವೇ ವಿಮನಸೋಽಭವನ್ ॥೧೮॥

ತಮ್ಮ ದೊಡ್ಡ ಸೈನ್ಯವನ್ನು ಪುನಃ ಪುನಃ ಹೊಡೆದೋಡಿಸುತ್ತಾ ಮೃತ್ಯುವಿನಂತೆ ಮೇಲೆ ಬರುತ್ತಿದ್ದ ಭೀಮಸೇನನನ್ನು ನೋಡಿ ಕೌರವಯೋಧರೆಲ್ಲರೂ ಯುದ್ಧದಲ್ಲಿ ವಿಮುಖರಾದರು.

ಯತೋಯತಃ ಪ್ರೇಕ್ಷತೇ ಸ್ಮ ಗದಾಮುದ್ಯಮ್ಯ ಪಾಂಡವಃ ।
ತೇನತೇನ ಸ್ಮ ದೀರ್ಯಂತೇ ಸರ್ವಸೈನ್ಯಾನಿ ಭಾರತ ॥೧೯॥

ಎಲೈ ಭಾರತನೇ, ಪಾಂಡವನಾದ ಭೀಮಸೇನನು ಗದೆಯನ್ನು ಎತ್ತಿ ಯಾವ ಯಾವ ದಿಕ್ಕಿನಲ್ಲಿ ನೋಡುತ್ತಾನೆಯೋ, ಆಯಾ ದಿಕ್ಕಿನಲ್ಲಿ ಸರ್ವಸೈನ್ಯಗಳೂ ನಾಶವನ್ನು ಹೊಂದಿದವು.

ಪ್ರದಾರಯಂತಂ ಸೈನ್ಯಾನಿ ಬಲೌಘೇನಾಪರಾಜಿತಮ್ ।
ಗ್ರಸಮಾನಮನೀಕಾನಿ ವ್ಯಾದಿತಾಸ್ಯಮಿವಾಂತಕಮ್ ॥೨೦॥

ತಂ ತಥಾ ಭೀಮಕರ್ಮಾಣಂ ಪ್ರಗೃಹೀತಮಹಾಗದಮ್ ।
ದೃಷ್ಟ್ವಾ ವೃಕೋದರಂ ಭೀಷ್ಮಃ ಸಹಸೈವ ಸಮಭ್ಯಯಾತ್ ॥೨೧॥

ಮಹತಾ ಮೇಘಘೋಷೇಣ ರಥೇನಾದಿತ್ಯವರ್ಚಸಾ ।
ಛಾದಯನ್ ಶರವರ್ಷೇಣ ಪರ್ಜನ್ಯ ಇವ ವೃಷ್ಟಿಮಾನ್ ॥೨೨॥

ತನ್ನ ಅಪರಿಮಿತವಾದ ಬಲದಿಂದ ಎಲ್ಲ ಸೈನ್ಯವನ್ನೂ ಸೀಳಿಹಾಕುವ, ಅಪರಾಜಿತನಾದ, ಬಾಯಿಯನ್ನು ತೆರೆದ ಮೃತ್ಯುವಿನಂತೆ ಶತ್ರುಸೈನ್ಯವನ್ನು ನುಂಗುವ, ಕೈಯಲ್ಲಿ ದೊಡ್ಡ ಗದೆಯನ್ನು ಹಿಡಿದು ಭಯಂಕರ ಕಾರ್ಯವನ್ನು ಎಸಗುವ ಭೀಮಸೇನನನ್ನು ನೋಡಿ ದೊಡ್ಡ ಮೇಘ ಘೋಷವುಳ್ಳ, ಸೂರ್ಯನ ಪ್ರಭೆಯನ್ನು ಹೊಂದಿದ, ರಥದಲ್ಲಿ ಕುಳಿತು ಮಳೆಯನ್ನು ಸುರಿಸುವ ಪರ್ಜನ್ಯನಂತೆ ಭೀಮಸೇನನ ಮೇಲೆ ಬಾಣಗಳ ಮಳೆಯನ್ನು ಕರೆಯುತ್ತಾ ಭೀಷ್ಮರು ತಕ್ಷಣ ಅವನಿಗೆ ಅಭಿಮುಖರಾಗಿ ಬಂದರು.

ತಮಾಯಾಂತಂ ತಥಾ ದೃಷ್ಟ್ವಾ ವ್ಯಾತ್ತಾನನಮಿವಾಂತಕಮ್ ।
ಭೀಷ್ಮಂ ಭೀಮೋ ಮಹಾಬಾಹುಃ ಪ್ರತ್ಯುದೀಯಾದಮರ್ಷಣಃ ॥೨೩॥

ಬಾಯಿಯನ್ನು ತೆರೆದ ಮೃತ್ಯುವಿನಂತೆ ತನ್ನ ಕಡೆಗೆ ಬರುತ್ತಿದ್ದ ಭೀಷ್ಮರನ್ನು ನೋಡಿ ಮಹಾಬಾಹುವಾದ ಭೀಮನು ಅದನ್ನು ಸಹಿಸದೆ ಅವರ ಕಡೆಗೆ ಧಾವಿಸಿದನು.

ತಸ್ಮಿನ್ ಕ್ಷಣೇ ಸಾತ್ಯಕಿಃ ಸತ್ಯಸಂಧಃ
ಶಿನಿಪ್ರವೀರೋಽಭ್ಯಪತತ್ ಪಿತಾಮಹಮ್ ।
ನಿಘ್ನನ್ನಮಿತ್ರಾನ್ ಧನುಷಾ ದೃಢೇನ
ಸ ಕಂಪಯಂಸ್ತವ ಪುತ್ರಸ್ಯ ಸೇನಾಮ್ ॥೨೪॥

ಆ ಸಮಯದಲ್ಲಿ ಸತ್ಯಸಂಧನೂ, ಶಿನಿಪ್ರವೀರನೂ ಆದ ಸಾತ್ಯಕಿಯು ತನ್ನ ದೃಢವಾದ ಧನುಸ್ಸಿನಿಂದ ಶತ್ರುಗಳನ್ನು ಸಂಹರಿಸುತ್ತಾ ನಿನ್ನ ಪುತ್ರನ ಸೈನ್ಯವನ್ನು ನಡುಗಿಸುತ್ತಾ ಪಿತಾಮಹರಾದ ಭೀಷ್ಮರ ಬಳಿಗೆ ಸಾಗಿ ಬಂದನು.

ತಂ ಯಾಂತಮಶ್ವೈ ರಜತಪ್ರಕಾಶೈಃ
ಶರಾನ್ ಧಮಂತಂ ಧನುಷಾ ದೃಢೇನ ।

ನಾಶಕ್ನುವನ್ ವಾರಯಿತುಂ ತದಾನೀಂ
ಸರ್ವೇ ಗಣಾ ಭಾರತ ಯೇ ತ್ವದೀಯಾಃ ॥೨೫॥

ಬೆಳ್ಳಿಯ ಬಣ್ಣದಿಂದ ಕೂಡಿದ ಅಶ್ವಗಳನ್ನು ಹೂಡಿದ ರಥದಲ್ಲಿ ಬರುತ್ತಿದ್ದಂತಹ, ತನ್ನ ದೃಢವಾದ ಧನುಸ್ಸಿನಿಂದ ಬಾಣವನ್ನು ಚೆಲ್ಲುತ್ತಿದ್ದಂತಹ ಅವನನ್ನು ಆಗ ತಡೆಯಲು ಎಲೈ ಭಾರತನೇ, ನಿನ್ನ ಯೋಧರೆಲ್ಲರೂ ಸೇರಿಯೂ ಸಮರ್ಥರಾಗಲಿಲ್ಲ.

ಅವಿಧ್ಯದೇನಂ ನಿಶಿತೈಃ ಶರಾಗ್ರೈಃ
ಅಲಂಬುಸೋ ರಾಜವರಾರ್ಶ್ಯಶೃಂಗಿಃ ।
ತಂ ವೈ ಚತುರ್ಭಿಃ ಪ್ರತಿವಿಧ್ಯ ವೀರೋ
ನಪ್ತಾ ಶನೇರಭ್ಯಪತದ್ ರಥೇನ ॥೨೬॥

ಋಶ್ಯಶೃಂಗರ ಪುತ್ರನಾದ ಅಲಂಬುಸನು ತೀಕ್ಷ್ಣವಾದ ಶರಗಳಿಂದ ಅವನನ್ನು ಹೊಡೆದನು. ವೀರನಾದ ಸಾತ್ಯಕಿಯಾದರೂ ನಾಲ್ಕು ಬಾಣಗಳಿಂದ ಅವನನ್ನು ಪ್ರತಿಯಾಗಿ ಹೊಡೆದು ತನ್ನ ರಥದಿಂದ ಮುಂದೆ ಸಾಗಿದನು.

ಅನ್ವಾಗತಂ ವೃಷ್ಣಿವರಂ ನಿಶಮ್ಯ
ಮಧ್ಯೇ ರಿಪೂಣಾಂ ಪರಿವರ್ತಮಾನಮ್ ।
ಪ್ರಾವರ್ತಯಂತಂ ಕುರುಪುಂಗವಾಂಶ್ಚ
ಪುನಃ ಪುನಶ್ಚ ಪ್ರಣದಂತಮಾಜೌ ॥೨೭॥

ಯೋಧಾಸ್ತ್ವದೀಯಾಃ ಶರವರ್ಷೈರವರ್ಷನ್
ಮೇಘಾ ಯಥಾ ಭೂಧರಮಂಬುವೇಗೈಃ ।

ಭೀಮಸೇನನನ್ನು ಅನುಸರಿಸಿಕೊಂಡು ಬಂದ, ಶತ್ರುಗಳ ಸೈನ್ಯದ ಮಧ್ಯದಲ್ಲಿ ತಿರುಗಾಡುತ್ತಿರುವ, ಕುರುಶ್ರೇಷ್ಠರನ್ನು ಯುದ್ಧಕ್ಕೆ ಉದ್ಯುಕ್ತರಾಗುವಂತೆ ಮಾಡಿ ರಣರಂಗದಲ್ಲಿ ಪುನಃ ಪುನಃ ಸಿಂಹನಾದವನ್ನು ಮಾಡುತ್ತಿದ್ದ ಅವನನ್ನು ನೋಡಿ ನಿನ್ನ ಯೋಧರು ಮೇಘಗಳು ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ಬಾಣಗಳ ಮಳೆಯನ್ನು ಸುರಿಸಿದರು.

ನಾಶಕ್ನುವನ್ ವಾರಯಿತುಂ ವರಿಷ್ಠಂ
ಮಧ್ಯಂದಿನೇ ಸೂರ್ಯಮಿವಾತಪಂತಮ್ ।
ನ ತತ್ರ ಕಶ್ಚಿನ್ನವಿಷಣ್ಣ ಆಸೀದ್
ಋತೇ ರಾಜನ್ ಸೋಮದತ್ತಸ್ಯ ಪುತ್ರಾತ್ ॥೨೮॥

ಮಧ್ಯಾಹ್ನದಲ್ಲಿ ಪ್ರಖರವಾದ ತಾಪವನ್ನು ಕೊಡುವ ಸೂರ್ಯನನ್ನು ನಿವಾರಿಸಲು ಸಾಧ್ಯವಿಲ್ಲದಂತೆ ಶ್ರೇಷ್ಠನಾದ ಸಾತ್ಯಕಿಯನ್ನು ನಿವಾರಿಸಲು ಯಾರೂ ಸಮರ್ಥರಾಗಲಿಲ್ಲ. ಎಲೈ ರಾಜನೇ, ಆ ರಣರಂಗದಲ್ಲಿ ಸೋಮದತ್ತನ ಪುತ್ರನಾದ ಭೂರಿಶ್ರವನೊಬ್ಬನನ್ನು ಬಿಟ್ಟು ಯುದ್ಧದಲ್ಲಿ ವಿಷಾದ ಹೊಂದದವರು ಯಾರೂ ಇರಲಿಲ್ಲ.

ಸ ಹ್ಯಾದದಾನೋ ಧನುರುಗ್ರವೇಗಂ
ಭೂರಿಶ್ರವಾ ಭಾರತ ಸೌಮದತ್ತಿಃ ।
ದೃಷ್ಟ್ವಾ ರಥಾನ್ ಸ್ವಾನ್ ವ್ಯಪನೀಯಮಾನಾನ್
ಪ್ರತ್ಯುದ್ಯಯೌ ಸಾತ್ಯಕಿಂ ಯೋದ್ಧುಮಿಚ್ಛನ್ ॥೨೯॥

ಎಲೈ ಭಾರತನೇ, ಸೋಮದತ್ತನ ಪುತ್ರನಾದ ಭೂರಿಶ್ರವನು ತಮ್ಮ ರಥಗಳು ದೂರ ಸರಿಯುತ್ತಿರುವುದನ್ನು ನೋಡಿ ಭಯಂಕರ ವೇಗವುಳ್ಳ ಧನುಸ್ಸನ್ನು ತೆಗೆದುಕೊಂಡು ಸಾತ್ಯಕಿಯ ಜೊತೆಯಲ್ಲಿ ಯುದ್ಧವನ್ನು ಮಾಡಲು ಅವನಿಗೆ ಎದುರಾಗಿ ಬಂದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಭೀಷ್ಮಪರ್ವಣಿ ಏಕೋನಷಷ್ಟಿತಮೋऽಧ್ಯಾಯಃ ॥

॥ ಭೀಷ್ಮವಧಪರ್ವಣಿ ಏಕೋನವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಐವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತನೆಯ ಅಧ್ಯಾಯ

ಭೀಮಸೇನನಿಂದ ದುರ್ಯೋಧನನ ತಮ್ಮಂದಿರ ವಧೆ.
ಭೀಷ್ಮರಿಂದ ಸೈನ್ಯಾವಹಾರ.

ಸಂಜಯಃ

ತತೋ ಭೂರಿಶ್ರವಾ ರಾಜನ್ ಸಾತ್ಯಕಿಂ ನವಭಿಃ ಶರೈಃ ।
ಅವಿಧ್ಯದ್ ಭೃಶಂಕ್ರುದ್ಧೋತ್ಕ್ರೋಶಂತಮಿವ ಮಹಾದ್ವಿಪಮ್ ॥೧॥

ಸಂಜಯ– ಎಲೈ ರಾಜನೇ, ಅನಂತರ ಭೂರಿಶ್ರವನು ಬಹಳ ಕೋಪಗೊಂಡವನಾಗಿ ಅಂಕುಶದಿಂದ ಮಹಾಗಜವನ್ನು ಹೊಡೆದಂತೆ ಒಂಬತ್ತು ಬಾಣಗಳಿಂದ ಸಾತ್ಯಕಿಯನ್ನು ಪೀಡಿಸಿದನು.

ಕೌರವಂ ಸಾತ್ಯಕಿಶ್ಚೈವ ಶರೈಃ ಸನ್ನತಪರ್ವಭಿಃ ।
ಅವಾಕಿರದಮೇಯಾತ್ಮಾ ಸರ್ವಲೋಕಸ್ಯ ಪಶ್ಯತಃ ॥೨॥

ಅಚಿಂತ್ಯ ಮಹಿಮೆಯುಳ್ಳ ಸಾತ್ಯಕಿಯೂ ಸಹ ಎಲ್ಲ ಜನರೂ ನೋಡುತ್ತಿರುವಂತೆ ಕೌರವ ವಂಶದ ಭೂರಿಶ್ರವನ ಮೇಲೆ ಬಾಗಿದ ತುದಿಯುಳ್ಳ ಬಾಣಗಳ ಮಳೆಯನ್ನು ಸುರಿಸಿದನು.

ತತೋ ದುರ್ಯೋಧನೋ ರಾಜಾ ಸೋದರ್ಯೈಃ ಪರಿವಾರಿತಃ ।
ಸೌಮದತ್ತಿಂ ರಣೇ ಯತ್ತಃ ಸಮಂತಾತ್ ಪರ್ಯವಾರಯತ್ ॥೩॥

ಆಗ ರಾಜನಾದ ದುರ್ಯೋಧನನು ತನ್ನ ತಮ್ಮಂದಿರಿಂದ ಪರಿವೃತನಾಗಿ ರಣರಂಗದಲ್ಲಿ ಭೂರಿಶ್ರವನನ್ನು ಎಚ್ಚರಿಕೆಯಿಂದ ಎಲ್ಲ ಕಡೆಯಿಂದಲೂ ರಕ್ಷಿಸಿದನು.

ತಥೈವ ಪಾಂಡವಾಃ ಸರ್ವೇ ಸಾತ್ಯಕಿಂ ರಭಸಂ ರಣೇ ।
ಪರಿವಾರ್ಯ ಸ್ಥಿತಾಃ ಸಂಖೇ ಸಮಂತಾತ್ ಸುಮಹೌಜಸಃ ॥೪॥

ಹಾಗೆಯೇ ಮಹಾಸಾಮರ್ಥ್ಯಶಾಲಿಗಳಾದ ಎಲ್ಲ ಪಾಂಡವರೂ ರಣರಂಗದಲ್ಲಿ ವೇಗಶಾಲಿಯಾದ ಸಾತ್ಯಕಿಯನ್ನು ಸುತ್ತುವರಿದು ನಿಂತರು.

ಭೀಮಸೇನಸ್ತು ಸಂಕ್ರುದ್ಧೋ ಗದಾಮುದ್ಯಮ್ಯ ಭಾರತ ।
ದುರ್ಯೋಧನಮುಖಾನ್ ಸರ್ವಾನ್ ಪುತ್ರಾಂಸ್ತೇ ಪರ್ಯವಾರಯತ್॥

ಎಲೈ ಭಾರತನೇ, ಭೀಮಸೇನನಾದರೂ ಕೋಪಗೊಂಡು ಗದೆಯನ್ನು ಎತ್ತಿಹಿಡಿದು ದುರ್ಯೋಧನ ಮೊದಲಾದ ನಿನ್ನ ಎಲ್ಲ ಪುತ್ರರನ್ನೂ ನಿವಾರಿಸಿದನು.

ರಥೈರನೇಕಸಾಹಸ್ರೈಃ ಕ್ರೋಧಾಮರ್ಷಸಮನ್ವಿತಃ ।
ನಂದಕಸ್ತವ ಪುತ್ರಸ್ತು ಭೀಮಸೇನಂ ಮಹಾಬಲಮ್ ।
ವಿವ್ಯಾಧ ನಿಶಿತೈಃ ಷಡ್ಭಿಃ ಕಂಕಪತ್ರೈಃ ಶಿಲಾಶಿತೈಃ ॥೬॥

ನಿನ್ನ ಪುತ್ರನಾದ ನಂದಕನು ಸಿಟ್ಟಿನಿಂದ ಕೂಡಿದವನಾಗಿ ಅನೇಕ ಸಹಸ್ರ ರಥಗಳ ಜೊತೆಯಲ್ಲಿ ಮತ್ತು ಮಹಾಬಲನಾದ ಭೀಮಸೇನನ ಜೊತೆಯಲ್ಲಿ ಯುದ್ಧವನ್ನು ಮಾಡಿ ಅವನ ಮೇಲೆ ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಕಂಕಪತ್ರಗಳಿಂದ ಕೂಡಿದ ಆರು ಬಾಣಗಳನ್ನು ಪ್ರಯೋಗಿಸಿದನು.

ದುರ್ಯೋಧನಸ್ತು ಸಮರೇ ಭೀಮಸೇನಂ ಮಹಾಬಲಮ್ ।
ಆಜಘಾನೋರಸಿ ಕ್ರುದ್ಧೋ ಮಾರ್ಗಣೈರ್ನಿಶಿತೈಸ್ತ್ರಿಭಿಃ ॥೭॥

ದುರ್ಯೋಧನನಾದರೂ ಕ್ರೋಧಗೊಂಡು ಮೂರು ಹರಿತವಾದ ಬಾಣಗಳಿಂದ ಮಹಾಬಲನಾದ ಭೀಮಸೇನನಿಗೆ ಅವನ ವಕ್ಷಸ್ಥಲದಲ್ಲಿ ಹೊಡೆದನು.

ತತೋ ಭೀಮೋ ಮಹಾಬಾಹುಃ ಸ್ವರಥಂ ಸುಮಹಾಬಲಃ ।
ಆರುರೋಹ ರಥಶ್ರೇಷ್ಠಂ ವಿಶೋಕಂ ಚೇದಮಬ್ರವೀತ್ ॥೮॥

ಆಗ ಮಹಾಬಲಶಾಲಿಯಾದ, ಮಹಾಬಾಹುವಾದ ಭೀಮಸೇನನು ಪುನಃ ತನ್ನ ಶ್ರೇಷ್ಠವಾದ ರಥವನ್ನು ಏರಿ ಸಾರಥಿಯಾದ ವಿಶೋಕನನ್ನು ಕುರಿತು ಹೀಗೆ ಮಾತನಾಡಿದನು.

ಏತೇ ಮಹಾರಥಾಃ ಶೂರಾ ಧಾರ್ತರಾಷ್ಟ್ರಾ ಮಹಾಬಲಾಃ ।
ಮಾಮೇವ ಬಹುಸಂಕ್ರುದ್ಧಾ ಹಂತುಮಭ್ಯುದ್ಯತಾ ಯುಧಿ ॥೯॥

ಈ ಮಹಾಬಲಿಷ್ಠರಾದ, ಶೂರರಾದ, ಮಹಾರಥರಾದ ಧೃತರಾಷ್ಟ್ರಪುತ್ರರು ಬಹಳ ಸಿಟ್ಟಿನಿಂದ ಕೂಡಿದವರಾಗಿ ರಣರಂಗದಲ್ಲಿ ನನ್ನನ್ನೇ ಕೊಲ್ಲಲು ಉದ್ಯುಕ್ತರಾಗಿದ್ದಾರೆ.

ಮನೋರಥದ್ರುಮೋಽಸ್ಮಾಕಂ ಚಿಂತಿತೋ ಬಹುವಾರ್ಷಿಕಃ ।
ಸಫಲಃ ಸೂತ ಚಾದ್ಯೇಹ ಯೋಽಹಂ ಪಶ್ಯಾಮಿ ಸೋದರಾನ್ ॥೧೦॥

ಯತ್ರಾಶೋಕ ಸಮುತ್ಕ್ಷಿಪ್ತಾ ರೇಣವೋ ರಥನೇಮಿಭಃ ।
ನ ಪ್ರಯಾಸ್ಯಂತರಿಕ್ಷಂ ಹಿ ಶರವೃಂದೈರ್ದಿಗಂತರೇ ॥೧೧॥

ತತ್ರ ತಿಷ್ಠತಿ ಸನ್ನದ್ಧಃ ಸ್ವಯಂ ರಾಜಾ ಸುಯೋಧನಃ ।
ಭ್ರಾತರಶ್ಚಾಸ್ಯ ಸನ್ನದ್ಧಾ ಕುಲಪುತ್ರಾ ಮದೋತ್ಕಟಾಃ ॥೧೨॥

ನಾವು ಅನೇಕ ವರ್ಷಗಳಿಂದ ಮನಸ್ಸಿನಲ್ಲಿಯೇ ಯೋಚಿಸಿದ ನಮ್ಮ ಮನೋರಥವು ಈ ದಿನ ಫಲಿಸಿದೆ. ಏಕೆಂದರೆ ನಾನು ಇಲ್ಲಿ ಸಹೋದರನಿಂದ ಸಹಿತನಾದ ದುರ್ಯೋಧನನನ್ನು ನೋಡುತ್ತಿದ್ದೇನೆ. ಎಲೈ ವಿಶೋಕನೇ, ಈ ಬೇರೆ ದಿಕ್ಕಿನಲ್ಲಿ ಎಲ್ಲಿ ರಥದ ಚಕ್ರಗಳಿಂದ ಮೇಲೆದ್ದ ಭೂಮಿಯ ಧೂಳು ಅಂತರಿಕ್ಷವನ್ನು ತಲುಪುತ್ತಿದೆಯೋ ಅಲ್ಲಿ ರಾಜನಾದ ದುರ್ಯೋಧನನೂ, ಕುಲಪುತ್ರರೂ, ಬಲೋತ್ಕಟರೂ ಆದ ಅವನ ತಮ್ಮಂದಿರೂ ಯುದ್ಧಕ್ಕೆ ಸನ್ನದ್ಧರಾಗಿ ಇದ್ದಾರೆ.

ಏತಾನದ್ಯ ಹನಿಷ್ಯಾಮಿ ಪಶ್ಯತಸ್ತೇ ನ ಸಂಶಯಃ ।
ತಸ್ಮಾನ್ಮಮಾಶ್ವಾನ್ ಸಂಗ್ರಾಮೇ ಯತ್ತಃ ಸಂಯಚ್ಛ ಸಾರಥೇ ॥೧೩॥

ನಿನ್ನ ಕಣ್ಣೆದುರಿಗೆ ನಾನು ಈ ದಿನ ಅವರನ್ನು ಕೊಲ್ಲುವೆನು. ಇದರಲ್ಲಿ ಸಂಶಯವಿಲ್ಲ. ಎಲೈ ಸಾರಥಿಯೇ, ಆದ್ದರಿಂದ ನನ್ನ ಕುದುರೆಗಳನ್ನು ಜಾಗರೂಕತೆಯಿಂದ ನಿಯಂತ್ರಿಸು.

ಏವಮುಕ್ತ್ವಾ ತತಃ ಪಾರ್ಥಃ ಪುತ್ರಂ ದುರ್ಯೋಧನಂ ತವ ।
ವಿವ್ಯಾಧ ದಶಭಿಸ್ತೀಕ್ಷ್ಣೈಃ ಶರೈಃ ಕನಕಭೂಷಣೈಃ ।
ನಂದಕಂ ಚ ತ್ರಿಭಿರ್ಬಾಣೈಃ ಪ್ರತ್ಯವಿಧ್ಯತ್ ಸ್ತನಾಂತರೇ ॥೧೪॥

ಭೀಮಸೇನನು ಹೀಗೆ ಹೇಳಿ ಅನಂತರ ನಿನ್ನ ಪುತ್ರನಾದ ದುರ್ಯೋಧನನ ಮೇಲೆ ಸುವರ್ಣಭೂಷಿತವಾದ, ತೀಕ್ಷ್ಣವಾದ ಹತ್ತು ಬಾಣಗಳನ್ನು ಪ್ರಯೋಗಿಸಿದನು.

ನಂದಕನಿಗೂ ಸಹ ಸ್ತನಗಳ ಮಧ್ಯದಲ್ಲಿ ತೀಕ್ಷ್ಣವಾದ ಮೂರು ಬಾಣಗಳಿಂದ ಹೊಡೆದನು.

ತಂ ತು ದುರ್ಯೋಧನಃ ಷಷ್ಟ್ಯಾ ವಿದ್ಧ್ವಾ ಭೀಮಂ ಮಹಾಬಲಮ್ ।
ತ್ರಿಭಿರಶ್ಯೈಃ ಸುನಿಶಿತೈರ್ವಿತೋಕಂ ಹ್ರಸ್ವವಿದ್ಧ್ಯತ ॥೧೫॥

ದುರ್ಯೋಧನನಾದರೂ ಮಹಾಬಲಿಷ್ಠನಾದ ಭೀಮಸೇನನ ಮೇಲೆ ಅತ್ಯಂತ ಹರಿತವಾದ ಅರವತ್ತು ಬಾಣಗಳನ್ನು ಪ್ರಯೋಗಿಸಿ, ಪುನಃ ಹರಿತವಾದ ಮೂರು ಬೇರೆ ಬಾಣಗಳಿಂದ ಅವನ ಸಾರಥಿಯಾದ ವಿತೋಕನನ್ನು ಹೊಡೆದನು.

ಭೀಮಸ್ಯ ಚ ರಣೇ ರಾಜನ್ ಧನುಶ್ಚಿಚ್ಛೇದ ಭಾಸ್ವರಮ್ ।
ಮುಷ್ಟಿದೇಶೇ ಶರೈಸ್ತೀಕ್ಷ್ಣೈಸ್ತ್ರಿಭೀ ರಾಜಾ ಹಸನ್ನಿವ ॥೧೬॥

ಎಲೈ ರಾಜನೇ, ರಾಜನಾದ ದುರ್ಯೋಧನನು ನಗುವವನಂತೆ ರಣರಂಗದಲ್ಲಿ ಭೀಮಸೇನನ ಪ್ರಕಾಶಮಾನವಾದ ಧನುಸ್ಸನ್ನು ಮೂರು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಮುಷ್ಟಿದೇಶದಲ್ಲಿ ಕತ್ತರಿಸಿದನು.

ಭೀಮಸ್ತು ಪ್ರೇಕ್ಷ್ಯ ಯಂತಾರಂ ವಿತೋಕಂ ಸಂಯುಗೇ ಶದಾ ।
ಪೀಡಿತಂ ವಿಶಿಖೈಸ್ತೀಕ್ಷ್ಣೈಸ್ತವ ಪುತ್ರೇಣ ಧನ್ವಿನಾ ॥೧೭॥

ಅಮೃಷ್ಯಮಾಣಃ ಸಂಕ್ರುದ್ಧೋ ಧನುರ್ದಿವ್ಯಂ ಪರಾಮೃಶತ್ ।
ಪುತ್ರಸ್ಯ ತೇ ಮಹಾರಾಜ ವಧಾರ್ಥಂ ಭರತರ್ಷಭ ॥೧೮॥

ಎಲೈ ಮಹಾರಾಜನೇ, ಭರತಶ್ರೇಷ್ಠನೇ, ಭೀಮಸೇನನಾದರೂ ತನ್ನ ಸಾರಥಿಯಾದ ವಿತೋಕನು ಧನುರ್ಧಾರಿಯಾದ ನಿನ್ನ ಪುತ್ರನಿಂದ ತೀಕ್ಷ್ಣವಾದ ಬಾಣಗಳಿಂದ ಪೀಡಿತನಾದುದನ್ನು ನೋಡಿ ಅದನ್ನು ಸಹಿಸದೆ ಬಹಳ ಕೋಪಗೊಂಡು ನಿನ್ನ ಪುತ್ರನ ವಧೆಗಾಗಿ ದಿವ್ಯವಾದ ಇನ್ನೊಂದು ಧನುಸ್ಸನ್ನು ಕೈಯಲ್ಲಿ ಹಿಡಿದನು.

ಸಮಾದತ್ತ ಚ ಸಂರಬ್ಧಃ ಕ್ಷುರಪ್ರಂ ಲೋಮವಾಹಿನಮ್ ।
ತೇನ ಚಿಚ್ಛೇದ ನೃಪತೇರ್ಭೀಮಃ ಕಾರ್ಮುಕಮುತ್ತಮಮ್ ॥೧೯॥

ಕೋಪಗೊಂಡ ಭೀಮಸೇನನು ಕೂದಲನ್ನೂ ಸೀಳುವಂತಹ ಹರಿತವಾದ ಕ್ಷುರಪ್ರವನ್ನು ತೆಗೆದುಕೊಂಡು ಅದರಿಂದ ದುರ್ಯೋಧನನ ಶ್ರೇಷ್ಠವಾದ ಧನುಸ್ಸನ್ನು ಕತ್ತರಿಸಿದನು.

ಸೋಽಪವಿದ್ಧ ಧನುಶ್ಚಿನ್ನಂ ಕ್ರೋಧೇನ ಪ್ರಜ್ವಲನ್ನಿವ ।
ಅನ್ಯತ್ ಕಾರ್ಮುಕಮಾದತ್ತ ಸ್ವರಂ ವೇಗವತ್ತರಮ್ ॥೨೦॥

ಸಂಧತ್ತ ವಿಷಿಖಂ ಘೋರಂ ಕಾಲಮೃತ್ಯುಸಮಪ್ರಭಮ್ ।
ತೇನಾಜಘಾನ ಸಂಕ್ರುದ್ಧೋ ಭೀಮಸೇನಂ ಶ್ಚನಾಂತರೇ ॥೨೧॥

ದುರ್ಯೋಧನನು ಕತ್ತರಿಸಲ್ಪಟ್ಟ ಧನುಸ್ಸನ್ನು ಬಿಟ್ಟು ಕ್ರೋಧದಿಂದ ಉರಿಯುವವನಂತೆ ಇನ್ನೊಂದು ವೇಗಶಾಲಿಯಾದ ಧನುಸ್ಸನ್ನು ತೆಗೆದುಕೊಂಡು ಅದರಲ್ಲಿ ಕಾಲಮೃತ್ಯುವಿಗೆ ಸಮಾನವಾದ ಕಾಂತಿಯುಳ್ಳ ಘೋರವಾದ ಬಾಣವನ್ನು ಹೂಡಿ ಕೋಪದಿಂದ ಭೀಮಸೇನನನ್ನು ಅದರಿಂದ ಅವನ ಶ್ವನಗಳ ಮಧ್ಯದಲ್ಲಿ ಹೊಡೆದನು.

ಸ ಗಾಢವಿದ್ಧೋ ವ್ಯಥಿತಃ ಸ್ಯಂದನೋಪಸ್ಥ ಆವಿಶತ್ ।
ಸ ನಿಷಣ್ಣೋ ರಥೋಪಸ್ಥೇ ಮೂರ್ಚ್ಛಾಮಭಿಜಗಾಮ ಹ ॥೨೨॥

ಗಾಢವಾಗಿ ಹೊಡೆಯಲ್ಪಟ್ಟ ಭೀಮಸೇನನು ವ್ಯಥೆಯಿಂದ ಕೂಡಿ ರಥದ ಮಧ್ಯಪ್ರದೇಶದಲ್ಲಿ ಕುಸಿದನು. ರಥೋಪಸ್ಥದಲ್ಲಿ ಕುಳಿತ ಅವನು ಮೂರ್ಛೆಯನ್ನು ಹೊಂದಿದನು.

ತಂ ದೃಷ್ಟ್ವಾ ವ್ಯಥಿತಂ ಭೀಮಮಭಿಮನ್ಯುಪುರೋಗಮಾಃ ।
ನಾಮೃಷ್ಯಂತ ಮಹೇಷ್ವಾಸಾಃ ಪಾಂಡವಾನಾಂ ಮಹಾರಥಾಃ ॥೨೩॥

ಭೀಮಸೇನನು ಹೀಗೆ ವ್ಯಥೆಗೆ ಒಳಗಾದುದನ್ನು ನೋಡಿ ಪಾಂಡವರ ಮಹಾರಥರೂ, ಮಹಾಧನುರ್ಧಾರಿಗಳೂ ಆದ ಅಭಿಮನ್ಯು ಮೊದಲಾದವರು ಅದನ್ನು ಸಹಿಸಲಿಲ್ಲ.

ತತಸ್ತು ತುಮುಲಾಂ ವೃಷ್ಟಿಂ ಶಸ್ತ್ರಾಣಾಂ ತಿಗ್ಮತೇಜಸಾಮ್ ।
ಪಾತಯಾಮಾಸುರವ್ಯಗ್ರಾಃ ಪುತ್ರಸ್ಯ ತವ ಮೂರ್ಧನಿ ॥೨೪॥

ಅನಂತರ ಮಹಾಸಾಮರ್ಥ್ಯವುಳ್ಳ ಶಸ್ತ್ರಗಳ ತೀವ್ರವಾದ ಮಳೆಯನ್ನು ನಿನ್ನ ಪುತ್ರನ ತಲೆಯ ಮೇಲೆ ಅವರು ಎಚ್ಚರಿಕೆಯಿಂದ ಬೀಳಿಸಿದರು.

ಪ್ರತಿಲಭ್ಯ ತತಃ ಸಂಜ್ಞಾಂ ಭೀಮಸೇನೋ ಮಹಾಬಲಃ ।
ದುರ್ಯೋಧನಂ ತ್ರಿಭಿರ್ವಿದ್ಧ್ವಾ ಪುನರ್ವಿವ್ಯಾಧ ಪಂಚಭಿಃ ॥೨೫॥

ಆ ವೇಳೆಗೆ ಮಹಾಬಲನಾದ ಭೀಮಸೇನನು ಸಂಜ್ಞೆಯನ್ನು ಮರಳಿ ಪಡೆದು ದುರ್ಯೋಧನನ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಿ ಪುನಃ ಐದು ಬಾಣಗಳನ್ನು ಪ್ರಯೋಗಿಸಿದನು.

ಶಲ್ಯಂ ಚ ಪಂಚವಿಂಶತ್ಯಾ ಶರೈರ್ವಿವ್ಯಾಧ ಪಾಂಡವಃ ।
ರುಗ್ಣಪುಂಖೈರ್ಮಹೇಷ್ವಾಸಃ ಸ ವಿದ್ಧೋ ವ್ಯಪಯಾದ್ ರಣಾತ್ ॥೨೬॥

ಮಹಾಧನುರ್ಧಾರಿಯಾದ ಪಾಂಡುಪುತ್ರನಾದ ಭೀಮಸೇನನು ಶಲ್ಯನನ್ನು ಚಿನ್ನದ ಪುಂಖಗಳನ್ನು ಹೊಂದಿದ ಇಪ್ಪತ್ತೈದು ಬಾಣಗಳಿಂದ ಹೊಡೆದನು. ಗಾಯಗೊಂಡ ಶಲ್ಯನು ರಣರಂಗವನ್ನು ಬಿಟ್ಟು ಹೊರಟು ಹೋದನು.

ಪ್ರತ್ಯುದ್ಯಯುಸ್ತತೋ ಭೀಮಂ ತವ ಪುತ್ರಾಶ್ಚತುರ್ದಶ ।
ಸೇನಾಪತಿಃ ಸುಷೇಣಶ್ಚ ಜಲಸಂಧಃ ಸುಲೋಚನಃ ॥೨೭॥

ಉಗ್ರೋ ಭೀಮರಥೋ ಭೀಮೋ ಭೀಮಬಾಹುರಲೋಲುಪಃ ।
ದುರ್ಮುಖೋ ದುಷ್ಪ್ರಧರ್ಷಶ್ಚ ವಿವಿತ್ಸುರ್ವಿಕಟಃ ಸಮಃ ॥೨೮॥

ವಿಸೃಜಂತೋ ಬಹೂನ್ ಬಾಣಾನ್ ಕ್ರೋಧಸಂರಕ್ತಲೋಚನಾಃ ।
ಭೀಮಸೇನಮಭಿದ್ರುತ್ಯ ವಿವ್ಯಧುಃ ಸಹಿತಾ ಭೃಶಮ್ ॥೨೯॥

ಆಗ ನಿನ್ನ ಮಕ್ಕಳಾದ ಸೇನಾಪತಿ, ಸುಷೇಣ, ಜಲಸಂಧ, ಸುಲೋಚನ, ಉಗ್ರ, ಭೀಮರಥ, ಭೀಮ, ಭೀಮಬಾಹು, ಅಲೋಲುಪ, ದುರ್ಮುಖ, ದುಷ್ಪ್ರಧರ್ಷ, ವಿವಿತ್ಸು, ವಿಕಟ, ಸಮ ಈ ಹದಿನಾಲ್ಕು ಜನರು ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿ ಭೀಮಸೇನನ ಮೇಲೆ ಬಾಣಗಳನ್ನು ಪ್ರಯೋಗಿಸುತ್ತಾ ಭೀಮಸೇನನ ಬಳಿಗೆ ಬಂದು ಎಲ್ಲರೂ ಜೊತೆಯಾಗಿ ಯುದ್ಧವನ್ನು ಮಾಡಿದರು.

ಪುತ್ರಾಂಸ್ತು ತವ ಸಂಪ್ರೇಕ್ಷ್ಯ ಭೀಮಸೇನೋ ಮಹಾಬಲಃ ।
ಸೃಕ್ಕಿಣೇ ವಿಲಿಹನ್ ವೀರಃ ಪಶುಮಧ್ಯೇ ವೃಕೋ ಯಥಾ ॥೩೦॥

ಅಭಿಪತ್ಯ ಮಹಾಬಾಹುರ್ಗರುತ್ಮಾನಿವ ವೇಗಿತಃ ।
ಸೇನಾಪತೇಃ ಕ್ಷುರಪ್ರೇಣ ಶಿರಶ್ಚಿಚ್ಛೇದ ಪಾಂಡವಃ ॥೩೧॥

ಮಹಾಬಲನಾದ ಭೀಮಸೇನನು ನಿನ್ನ ಮಕ್ಕಳನ್ನು ನೋಡಿ ವೀರನಾದ ಅವನು ಪಶುಗಳ ಮಧ್ಯದಲ್ಲಿರುವ ತೋಳದಂತೆ ಕಟಬಾಯಿಯನ್ನು ಸವರಿಕೊಳ್ಳುತ್ತಾ ಮಹಾಬಾಹುವಾದ ಅವನು ಗರುಡನಂತೆ ವೇಗದಿಂದ ಸೇನಾಪತಿಯ ಮೇಲೆ ಎರಗಿ ಕ್ಷುರಪ್ರದಿಂದ ಅವನ ಶಿರಸ್ಸನ್ನು ಕತ್ತರಿಸಿದನು.

ಸಂಪ್ರಸಹ್ಯ ಚ ಹೃಷ್ಟಾತ್ಮಾ ತ್ರಿಭಿರ್ಬಾಣೈರ್ಮಹಾಭುಜಃ ।
ಜಲಸಂಧಂ ವಿನಿರ್ಭಿದ್ಯ ಸೋಽನಯದ್ ಯಮಸಾದನಮ್ ।
ಸುಷೇಣಂ ಚ ತತೋ ಹತ್ವಾ ಪ್ರೇಷಯಾಮಾಸ ಮೃತ್ಯವೇ ॥೩೨॥

ಮಹಾಭುಜನೂ, ಸಂತಸಗೊಂಡ ಮನಸ್ಸುಳ್ಳವನೂ ಆದ ಭೀಮನು ನಕ್ಕು ಜಲಸಂಧನನ್ನು ಮೂರು ಬಾಣಗಳನ್ನು ಭೇದಿಸಿ ಯಮಪಟ್ಟಣಕ್ಕೆ ಕಳುಹಿಸಿದನು. ಅನಂತರ ಸುಷೇಣನನ್ನು ಕೊಂದು ಮೃತ್ಯುಲೋಕಕ್ಕೆ ಕಳುಹಿಸಿದನು.

ಉಗ್ರಸ್ಯ ಸಶಿರಸ್ತ್ರಾಣಂ ಶಿರಶ್ಚಂದ್ರೋಪಮಂ ಭುವಿ ।
ಪಾತಯಾಮಾಸ ಭಲ್ಲೇನ ಕುಂಡಲಾಭ್ಯಾಂ ವಿಭೂಷಿತಮ್ ॥೩೩॥

ಉಗ್ರನ ಶಿರಸ್ತ್ರಾಣಸಹಿತವಾದ ಕುಂಡಲದಿಂದ ಅಲಂಕೃತವಾದ ಚಂದ್ರನಂತಿದ್ದ ಶಿರಸ್ಸನ್ನು ಭಲ್ಲದಿಂದ ತಿವಿದು ಭೂಮಿಯ ಮೇಲೆ ಕೆಡವಿದನು.

ಭೀಮಬಾಹುಂ ಚ ಸಪ್ತತ್ಯಾ ಸಾಶ್ವಕೇತುಂ ಸಸಾರಥಿಮ್ ।
ನಿನಾಯ ಸಮರೇ ಭೀಮಃ ಪರಲೋಕಾಯ ಮಾರಿಷ ॥೩೪॥

ಎಲೈ ಪೂಜ್ಯನೇ, ಅಶ್ವಧ್ವಜದಿಂದ ಮತ್ತು ಸಾರಥಿಯಿಂದ ಸಹಿತನಾದ ಭೀಮಬಾಹುವನ್ನು ರಣರಂಗದಲ್ಲಿ ಭೀಮನು ಎಪ್ಪತ್ತು ಬಾಣಗಳನ್ನು ಪ್ರಯೋಗಿಸಿ ಪರಲೋಕಕ್ಕೆ ಕಳುಹಿಸಿದನು.

ಭೀಮಂ ಭೀಮರಥಂ ಚೋಭೌ ಭೀಮಸೇನೋ ಹಸನ್ನಿವ ।
ಭ್ರಾತರೌ ರಭಸೌ ರಾಜನ್ನನಯದ್ ಯಮಸಾದನಮ್ ॥೩೫॥

ಎಲೈ ರಾಜನೇ, ಭೀಮಸೇನನು ನಗುತ್ತಾ ಸಹೋದರರೂ, ವೇಗಶಾಲಿಗಳೂ ಆದ ಭೀಮ ಮತ್ತು ಭೀಮರಥರಿಬ್ಬರನ್ನೂ ನಗುವವನಂತೆ ಯಮಪಟ್ಟಣಕ್ಕೆ ಕಳುಹಿಸಿದನು.

ತತಃ ಸುಲೋಚನಂ ಭೀಮಃ ಕ್ಷುರಪ್ರೇಣ ಮಹಾಮೃಧೇ ।
ಮಿಷತಾಂ ಸರ್ವಸೈನ್ಯಾನಾಮನಯದ್ ಯಮಸಾದನಮ್ ॥೩೬॥

ಅನಂತರ ಮಹಾಯುದ್ಧದಲ್ಲಿ ಭೀಮಸೇನನು ಸುಲೋಚನನೆಂಬ ನಿನ್ನ ಪುತ್ರನನ್ನು ಎಲ್ಲ ಸೈನ್ಯವೂ ನೋಡುತ್ತಿರುವಂತೆ ಕ್ಷುರಪ್ರದಿಂದ ಯಮಪಟ್ಟಣಕ್ಕೆ ಕಳುಹಿಸಿದನು.

ಪುತ್ರಾಸ್ತು ತವ ತಂ ದೃಷ್ಟ್ವಾ ಭೀಮಸೇನಪರಾಕ್ರಮಮ್ ।
ತೇಷಾ ಯೇಽನ್ಯೇಽಭವಂಸ್ತತ್ರ ತೇ ಭೀಮಸ್ಯ ಭಯಾರ್ದಿತಾಃ ।
ವಿಪ್ರದ್ರುತಾ ದಿಶೋ ರಾಜನ್ ವಧ್ಯಮಾನಾ ಮಹಾತ್ಮನಾ ॥೩೭॥

ಎಲೈ ರಾಜನೇ, ನಿನ್ನ ಉಳಿದ ಮಕ್ಕಳು ಭೀಮಸೇನನ ಆ ಪರಾಕ್ರಮವನ್ನು ನೋಡಿ ಭೀಮನ ಭಯದಿಂದ ನಡುಗುತ್ತಾ, ಮಹಾತ್ಮನಾದ ಭೀಮಸೇನನಿಂದ ಬಾಣ ಪ್ರಯೋಗದಿಂದ ಹೊಡೆಯಲ್ಪಡುವವರಾಗಿ ದಿಕ್ಕು ದಿಕ್ಕುಗಳಿಗೆ ಓಡಿಹೋದರು.

ತತೋಽಬ್ರವೀಚ್ಛಾಂತನವಃ ಸರ್ವಾನೇವ ಮಹಾರಥಾನ್ ।
ಏಷ ಭೀಮೋ ರಣೇ ಕ್ರುದ್ಧೋ ಧಾರ್ತರಾಷ್ಟ್ರಾನ್ ಮಹಾರಥಾನ್ ॥

ಯಥಾಪ್ರಾಗ್ರ್ಯಾನ್ ಯಥಾಜ್ಯೇಷ್ಠಾನ್ ಯಥಾಶೂರಾಂಶ್ಚ ಸಂಗತಾನ್ ।
ನಿಪಾತಯತ್ಯುಗ್ರಧನ್ವಾ ತಂ ಪ್ರಮಥ್ನೀತ ಪಾರ್ಥಿವಾಃ ॥೩೯॥

ಆಗ ಶಂತನುಪುತ್ರರಾದ ಭೀಷ್ಮರು ಎಲ್ಲ ಮಹಾರಥರನ್ನು ಕುರಿತು, ಈ ಭೀಮಸೇನನು ಪರಾಕ್ರಮದಿಂದ ಶ್ರೇಷ್ಠರಾದ ಮತ್ತು ವಯಸ್ಸಿನಿಂದ ಶ್ರೇಷ್ಠರಾದ ಇಲ್ಲಿ ಸೇರಿದ ನಮ್ಮ ಸೈನ್ಯದ ಶೂರರನ್ನು ಕೈಯಲ್ಲಿ ಉಗ್ರವಾದ ಧನುಸ್ಸನ್ನು ಹಿಡಿದು ಕೆಡವುತ್ತಿದ್ದಾನೆ. ರಾಜರೇ, ಅವನನ್ನು ಮರ್ದಿಸಿ ಎಂದು ಹೇಳಿದರು.

ಮಲಮೂತ್ರಾದಿಗಳ ಸಹಿತ ಧೌತವಾಸ್ತ್ರವನ್ನು ಧರಿಸಬಾರದು ।
ಅಧ್ಯಯನಾದಿ ಸತ್ಕರ್ಮಾ ಧರಿಸಿರೇ ಯಾವುದಾದರೆ ॥೧೦೩॥

ಒಂಗಿ ಹೋಗಿರುವ ಮಲಿನವಸ್ತ್ರಗಳನ್ನು ಧರಿಸಿಕೊಂಡು ಯಾವ ಕೆಲಸಗಳನ್ನು ಮಾಡಬಾರದೆಂದು ಹೇಳಿದ್ದಾರೆ.

ಧರಿಸಿದ ಪ್ರಮಾಣಕ್ಕೆ ಮಲಿನವಾಗಿ ಒಂಗಿದರೆ ।
ಅಂತಹ ಸ್ಥಾನದ ಸ್ವಲ್ಪ ದಾನ ಧರಿಸಿದ ಪ್ರಮಾಣ ॥೧೦೪॥

ಎಷ್ಟು ದಾನ, ಧರಿಸಿದ್ದರೂ ಸ್ವಲ್ಪ ದಾನದ ಅಂತರ ಮಲಿನವಾಗಿ ಧರಿಸಿದ್ದರೂ ಅದಕ್ಕೆ ಯಾವ ಪರಿಣಾಮವೂ ಇಲ್ಲ ಎಂದು ಅರ್ಥ.

ಅಂತಹವನ ಪಿ ದಾನ ಧರಿಸಿದ್ದರೂ ಸಾಲದು ।
ಅಧ್ಯಯನ ಸಮಯ ಬಿಟ್ಟು ಹೇಗಾದರೂ ಇರಲಿ ಧರಿಸಿದ್ದಾಗ ॥೧೦೫॥

ಅಂತಹ ಧರಿಸಿದ್ದರು ಸಮಾನವಲ್ಲ ಎಂದು ಹೇಳಿದ್ದಾರೆ. ಧರಿಸಿದ್ದರೂ ಸಾಲದು ಎಂದರೆ ಯಾವುದೇ ಕೆಲಸ ಮಾಡಲು ಅರ್ಹನಲ್ಲ ಎಂದು ಅರ್ಥ.

ಅಧ್ಯಯನಾದಿಗಳಿಗಷ್ಟೆ ಹೊಸ್ತಿಲ್ಲಿಗೆ ಯಾಜ್ಞಿಕರು ।
ಧರಿಸಿಕೊಳ್ಳಲಿ ಇಲ್ಲಿ ಸ್ವಲ್ಪವಾದರೂ ಸಾಲದು ॥೧೦೬॥

ಮನೆ ಯಾಜ್ಞಿಕರು ಅಧ್ಯಯನ ಅಥವಾ ಮತ್ತಿನ ಕೆಲಸಗಳಲ್ಲಿ ಮಲಿನವಾದ ಧರಿಸಿದ್ದರೂ ಯಾಜ್ಞಿಕರ ಮನೆಯಲ್ಲಿ ಮಲಿನವಾಗಿರಬಾರದು ಎಂದು.

ಕ ದೇಶ ಪರಿಚಿತೇನಾ ಸಹಿತವಾಗಿ ಪರಿಚಾರಿಕೆಗೆ ।
ಸಿಲಾ ಪ ಪರಿಚಿತ್ತು ಪಂ ಧರಿಸಿದ್ದಾರೆ ॥೧೦೭॥

ಅಂತಹ ಈ ಧರಿಸಿದ್ದರು ಯಾವಾಗ ಮಲಿನವಾಗಿ ಹೋಗಿ ಎಷ್ಟು ಪ್ರಮಾಣದಲ್ಲಿ ಮಲಿನವಾಗಿ ಹೋಗಿದೆ ಎಂಬುದರ ಆಧಾರದ ಮೇಲೆ ಅದನ್ನು ಯಾವ ಕೆಲಸಗಳಿಗೆ ಬಳಸಬಹುದು ಎಂಬುದನ್ನು ಇಲ್ಲಿ ಹೇಳಿದ್ದಾರೆ.

ಭೀಮಂ ಭೀಮರಥಂ ಚೋಭೌ ಭೀಮಸೇನೋ ಹಸನ್ನಿವ ।
ಭ್ರಾತರೌ ರಭಸೌ ರಾಜನ್ನನಯದ್ ಯಮಸಾದನಮ್ ॥೩೫॥

ಎಲೈ ರಾಜನೇ, ಭೀಮಸೇನನು ನಗುತ್ತಾ ಸಹೋದರರೂ, ವೇಗಶಾಲಿಗಳೂ ಆದ ಭೀಮ ಮತ್ತು ಭೀಮರಥರಿಬ್ಬರನ್ನೂ ನಗುವವನಂತೆ ಯಮಪಟ್ಟಣಕ್ಕೆ ಕಳುಹಿಸಿದನು.

ತತಃ ಸುಲೋಚನಂ ಭೀಮಃ ಕ್ಷುರಪ್ರೇಣ ಮಹಾಮೃಧೇ ।
ಮಿಷತಾಂ ಸರ್ವಸೈನ್ಯಾನಾಮನಯದ್ ಯಮಸಾದನಮ್ ॥೩೬॥

ಅನಂತರ ಮಹಾಯುದ್ಧದಲ್ಲಿ ಭೀಮಸೇನನು ಸುಲೋಚನನೆಂಬ ನಿನ್ನ ಪುತ್ರನನ್ನು ಎಲ್ಲ ಸೈನ್ಯವೂ ನೋಡುತ್ತಿರುವಂತೆ ಕ್ಷುರಪ್ರದಿಂದ ಯಮಪಟ್ಟಣಕ್ಕೆ ಕಳುಹಿಸಿದನು.

ಪುತ್ರಾಸ್ತು ತವ ತಂ ದೃಷ್ಟ್ವಾ ಭೀಮಸೇನಪರಾಕ್ರಮಮ್ ।
ತೇಷಾ ಯೇಽನ್ಯೇಽಭವಂಸ್ತತ್ರ ತೇ ಭೀಮಸ್ಯ ಭಯಾರ್ದಿತಾಃ ।
ವಿಪ್ರದ್ರುತಾ ದಿಶೋ ರಾಜನ್ ವಧ್ಯಮಾನಾ ಮಹಾತ್ಮನಾ ॥೩೭॥

ಎಲೈ ರಾಜನೇ, ನಿನ್ನ ಉಳಿದ ಮಕ್ಕಳು ಭೀಮಸೇನನ ಆ ಪರಾಕ್ರಮವನ್ನು ನೋಡಿ ಭೀಮನ ಭಯದಿಂದ ನಡುಗುತ್ತಾ, ಮಹಾತ್ಮನಾದ ಭೀಮಸೇನನಿಂದ ಬಾಣ ಪ್ರಯೋಗದಿಂದ ಹೊಡೆಯಲ್ಪಡುವವರಾಗಿ ದಿಕ್ಕು ದಿಕ್ಕುಗಳಿಗೆ ಓಡಿಹೋದರು.

ತತೋಽಬ್ರವೀಚ್ಛಾಂತನವಃ ಸರ್ವಾನೇವ ಮಹಾರಥಾನ್ ।
ವಿಷ ಭೀಮೋ ರಣೇ ಕ್ರುದ್ಧೋ ಧಾರ್ತರಾಷ್ಟ್ರಾನ್ ಮಹಾರಥಾನ್ ॥

ಯಥಾಪ್ರಾಗ್ರ್ಯಾನ್ ಯಥಾಜ್ಯೇಷ್ಠಾನ್ ಯಥಾಶೂರಾಂಶ್ಚ ಸಂಗತಾನ್ ।
ನಿಪಾತಯತ್ಯುಗ್ರಧನ್ವಾ ತಂ ಪ್ರಮಥ್ನೀತ ಪಾರ್ಥಿವಾಃ ॥೩೯॥

ಆಗ ತಂತನುಪುತ್ರರಾದ ಭೀಷ್ಮರು ಎಲ್ಲ ಮಹಾರಥರನ್ನು ಕುರಿತು, ಈ ಭೀಮಸೇನನು ಪರಾಕ್ರಮದಿಂದ ಶ್ರೇಷ್ಠರಾದ ಮತ್ತು ವಯಸ್ಸಿನಿಂದ ಜ್ಯೇಷ್ಠರಾದ ಇಲ್ಲಿ ಸೇರಿದ ನಮ್ಮ ಸೈನ್ಯದ ಶೂರರನ್ನು ಕೈಯಲ್ಲಿ ಉಗ್ರವಾದ ಧನುಸ್ಸನ್ನು ಹಿಡಿದು ಕೆಡವುತ್ತಿದ್ದಾನೆ. ರಾಜರೇ, ಅವನನ್ನು ಮರ್ದಿಸಿ ಎಂದು ಹೇಳಿದರು.

ಎನಮುಖ್ಯಪ್ರಜೆ ಸರ್ವಾ ಧಾರಾಬಿಲ್ಲ ಕೈಯಾ ।
ಅಧ್ವರ್ಯಂ ಸುಬ್ರಮಣ್ಯ ಧರ್ಮಪೀಠಂ ಮಹಾಬಲಂ ॥೧೦೩॥

ಒಂಗೆ ಹೇಳಲ್ಪಟ್ಟ ದುರ್ಲಕ್ಷಣವು ಕೈಯಲ್ಲಿರುವ ಬಿಲ್ಲು ಹೇಗಿರಬೇಕು ಮಹಾಬಲವಾದ ಧರ್ಮಪೀಠವು ಹೀಗೆ ಒಡೆಯಲಾಯಿತು.

ಧರಿತ್ರಿ ಪ್ರಭಾಕ್ಷಣ ಕಂಬಂದಿಗಾ ವಿಜಯಂ ।
ಅಜಯ್ ಸಾಮಾ ಪ್ರಭ ಯಜ್ಞ ಧರ್ಮಲ ಧೃಷ್ಟಿಂ ॥೧೦೪॥

ಎನ್ನ ರಾಜನೇ, ಧರಿತ್ರಿಯು ಪ್ರಭ ಮಂಡಿಲ ಅಯಂ ಜೀವಿಯಲ್ಲಿ ಧರ್ಮಪೀಠವು ಇದ್ದ ಕಡೆಗೆ ಪ್ರಭಾ ಬಂದನು.

ಅಜಯ್ಯಂತ ಬ ರಾಜ್ಯ ಧರ್ಮಪೀಠಂ ಶಿಲಾಭಿಧೃ ।
ಅಧ್ವರ್ಯಂ ಸುಬ್ರಮಣ್ಯ ಜೀವಿ ಜೀವಾಯಜ ಇದ ಧಾರ್ಮಿಕಾ ॥೧೦೫॥

ಅವನು ಧರ್ಮಪೀಠವು ಸುಬ್ರಹ್ಮಣ್ಯ ಬಲ್ಲವರಾಗಲೇ ಕಲ್ಲಿನಲ್ಲಿ ಜೀವಿಯನ್ನು ಒಡಿದ ಬಾಣದಿಂದ ಮೇಲಾಗಿರುವ ಸಂಪತ್ತನ್ನು ಮಾಲ್ಯಗಳ ಧರ್ಮಪೀಠವನ್ನು ಖಾಲಿಯಲ್ಲಿ ಮಾಡಿದನು.

ಅಧಾಯಮುಖಾಭ್ಯಾ ಜಾಲ್ಯಾಭ್ಯಲ ಮಹಾಬಲಾ ।
ಧರಾಜ್ಯಾಭ್ಯಾಯಂ ಸುಖೆ ಶ್ರೀಜಾಬಲಯಾಭ್ಯಾಯಾ ॥೧೦೬॥

ಮತ್ತೆ ರಾಜಬಲವನ್ನು ಆತ್ಮವುಳ ಅಧಾಯವನ್ನು ಪೊಡೆದಾದ ಮಹಾಬಲವು ಧರ್ಮಪೀಠವು ಮುದ್ದಾಗಿರುವ ಬಾಣಗಳಿಂದ ಮಾಲ್ಯಜಾಲವನ್ನು ಸೊಲೆಸಿದ್ದ.

ಕ ವಿಜಂ ಪಾಯಿಸಿಗಾ ಸಾಯಾಲ್ ಪಾಯಾಧಾಯಾಲ್ ।
ಗಾಂ ಬ ಪಾಯ್ಯಾ ಜಂ ಧರಾಯಿಲ್ ಸಾಯಾಲ ॥೧೦೭॥

ಅವು ಈ ಧರಿತ್ರಿಯನ್ನು ಬಾಣಗಳ ಮಳೆಯನ್ನು ಸುರಿಸಿ ಎಲ್ಲ ಪೀಠಗಳನ್ನೂ ಪಡೆದು ಮತ್ತೆ ಬಾಣಗಳ ಮಳೆಯಿಂದ ಎಲ್ಲ ಪೀಠಗಳಿಂದಲೂ ಅವರ ಗೆಲ್ಲುವ ಸಮ್ಮಾನವನ್ನು ಸಾಧಿಸಿಕೊಂಡರು.

ಭೀಮಂ ಭೀಮರಥಂ ಜೋಧೌ ಭೀಮಸೇನೋ ಹಸನ್ನಿವ ।
ಭ್ರಾತರೌ ರಥಿನೌ ರಾಜನ್ನುಭಯತ್ರ ಯಮಾವುಭೌ ॥೩೨॥

ಎಲೈ ರಾಜನೇ, ಭೀಮಸೇನನು ನಗುತ್ತಾ ಸಹೋದರರೂ, ವೇಗಶಾಲಿಗಳೂ ಆದ ಭೀಮ ಮತ್ತು ಭೀಮರಥರಿಬ್ಬರನ್ನೂ ನಗುವವನಂತೆ ಯಮಪುತ್ರಗಳ್ಳೆ ಕಳುಹಿಸಿದನು.

ತತಃ ಸುಲೋಚನಂ ಭೀಮಃ ಕ್ಷುರಪ್ರೇಣ ಮಹಾಮೃಧೇ ।
ಮಿಷತಾಂ ಸರ್ವಸೈನ್ಯಾನಾಮಜಯದ್ ಯಮಸಾದನಮ್ ॥೩೩॥

ಅನಂತರ ಮಹಾಯುದ್ಧದಲ್ಲಿ ಭೀಮಸೇನನು ಸುಲೋಚನನೆಂಬ ನಿನ್ನ ಪುತ್ರನನ್ನು ಎಲ್ಲ ಸೈನ್ಯವೂ ನೋಡುತ್ತಿರುವಂತೆ ಕ್ಷುರಪ್ರದಿಂದ ಯಮಪುರಿಗೆ ಕಳುಹಿಸಿದನು.

ಕ್ಷುರಾಭ್ಯಾಂ ತವ ಶಂ ದೃಷ್ಟ್ವಾ ಭೀಮಸೇನಮುಪಾಸ್ಯತಮ್ ।
ಶೇಷಾ ಯೇಽಸ್ಯೇಽಭವಂಸ್ತತ್ರ ತೇ ಭೀಮಮ್ಯ ಭಯಾರ್ದಿತಾಃ ।
ವಿಪ್ರದ್ರುತಾ ದಿಶೋ ರಾಜನ್ ದೃಷ್ಟ್ವಾ ಮಹಾಬಲಾ ॥೩೪॥

ಎಲೈ ರಾಜನೇ, ನಿನ್ನ ಉಳಿದ ಮಕ್ಕಳು ಭೀಮಸೇನನ ಆ ಪರಾಕ್ರಮವನ್ನು ನೋಡಿ ಭೀಮನ ಭಯದಿಂದ ನಡುಗುತ್ತಾ, ಮಹಾಬಲನಾದ ಭೀಮಸೇನನಿಂದ ಬಾಣ ಪ್ರಯೋಗದಿಂದ ಹೊಡೆಯಲ್ಪಡುವವರಾಗಿ ದಿಕ್ಕು ದಿಕ್ಕುಗಳಿಗೆ ಓಡಿಹೋದರು

ತತೋಽಬ್ರವೀನ್ಮಹಾರಾಜ ಸೂತಾನೇವ ಮಹಾರಥಾನ್ ।
ವಿಷ ಭೀಮೋ ರಣೇ ಕ್ರುದ್ಧೋ ಧಾರ್ತರಾಷ್ಟ್ರಾನ್ ಮಹಾರಥಾನ್ ॥

ಯಥಾಜ್ಯಾಗ್ನಿಂ ಯಥಾಧ್ವರ್ಯುಂ ಯಥಾಽಽದಿತ್ಯಂ ಖಮಂಡಲೇ ।
ನಿಷಾತಯತ್ಯುಗ್ರಧನ್ವಾ ತಂ ಶ್ರಮಮೀಷ ಜಹಿರ್ಯಥಾ ॥೩೫॥

ಆಗ ಶಂತನುಪುತ್ರರಾದ ಭೀಷ್ಮರು ಎಲ್ಲ ಮಹಾರಥರನ್ನು ಕುರಿತು, ಈ ಭೀಮಸೇನನು ಪರಾಕ್ರಮದಿಂದ ಶ್ರೇಷ್ಠರಾದ ಮತ್ತು ಮಹಿಮೆಯಿಂದ ಶ್ರೇಷ್ಠರಾದ ನಿಮ್ಮ ಸೇರಿದ ನಮ್ಮ ಸೈನ್ಯದ ಹೊರಗನ್ನು ಕೈಯಲ್ಲಿ ಅಗ್ರವಾದ ಧನುಸ್ಸನ್ನು ಒಯ್ದು ಕೊಯ್ಯುತ್ತಿದ್ದಾನೆ. ರಾಜರೇ, ಅವನನ್ನು ಮರ್ದಿಸಿ ಎಂದು ಹೇಳಿದನು.

ಮಹಾಬಾಲ್ಯಕೇ ಸರ್ವಂ ಧರ್ಮಾದಾಪ್ನೋತಿ ಶೋಭನಮ್ ।
ಅಧರ್ಮಾದಾಪ್ನುತೇ ಪಾಪಮಿಹ ಚಾಮುತ್ರ ದುರ್ಮತಿಃ ॥೧೦೫॥

ಒಂಗೆ ಹೇಳಲ್ಪಟ್ಟ ದುರ್ಮಾರ್ಗದಿಂ ಪೊರಮಡಿಸುವ ಬಗೆ ಮೊದಲಾದ ಸಮಸ್ತವುಂ ಧರ್ಮದಿಂದ ಪಡೆಯಲ್ಪಡುತ್ತಿರ್ಪುದು.

ಧರ್ಮಸ್ಯ ಫಲಮಿಚ್ಛಂತಿ ಧರ್ಮಂ ನೇಚ್ಛಂತಿ ಮಾನವಾಃ ।
ಫಲಂ ಪಾಪಸ್ಯ ನೇಚ್ಛಂತಿ ಪಾಪಂ ಕುರ್ವಂತಿ ಯತ್ನತಃ ॥೧೦೬॥

ಎನ್ನ ಮಾತು. ಧರ್ಮವುಂ ಪಡೆಯಲ್ಪಡುವ ಪಲಮಂ ಜೀವಂಗಳ್ ಧರ್ಮಮಂ ಬಯ್ಕೆ ಮಾಡುವುದಿಲ್ಲ. ಪಾಪದ ಪಲಮಂ ಬಯ್ಕೆ ಮಾಡುವುದಿಲ್ಲ ಪಾಪಮಂ ಪ್ರಯತ್ನದಿಂ ಮಾಡುವುದು.

ಅಪಥೇನಾಪಿ ವಾಂಛಂತಿ ಧರ್ಮಮೇವ ಪಥೇ ಸ್ಥಿತಾಃ ।
ಅಧರ್ಮಂ ಸಹಸಾ ನೈವ ಕುರ್ವಂತಿ ಚ ಮನೀಷಿಣಃ ॥೧೦೭॥

ಅಪಥ ಧರ್ಮಮಂ ಪೊರಮಡಿಸಿ ಬರ್ಪುದಾದೊಡಂ ಸಜ್ಜನರ್ಕಳ್ ಸನ್ಮಾರ್ಗದಿಂದಮೇ ಪೋಗಲ್ಬೇಡಿ ಸನ್ಮಾರ್ಗದಿಂ ಧರ್ಮಮನ್ನೆ ಪಡೆಯಲ್ಬೇಡುವರ್. ಅಧರ್ಮಮಂ ಸಾಹಸದಿಂ ಮಾಡರ್.

ಅಧರ್ಮಮೂಲಾಸ್ತ್ರಯೋ ಲೋಕಾಃ ಸಂಸಾರಶ್ಚ ಸುದಾರುಣಃ ।
ಧರ್ಮಾತ್ಪ್ರಾಪ್ಯತೇ ಸುಖಂ ಸ್ವರ್ಗೋ ಮೋಕ್ಷಶ್ಚ ಪರಮಾದ್ಭುತಃ ॥೧೦೮॥

ಮತ್ತೆ ಮಾತುಮಲ್ತು ಅಧರ್ಮಮೆ ಮೊದಲಾಗಿ ಮೂಲಮಾಗಿರ್ಪ ಧರ್ಮಮಂ ಪುರಸ್ಕರಿಸಿದಂ ಮುಕ್ತಿಪರ್ಯಂತಮಪ್ಪ ಸುಖಮನ್ನೆ ಪಡೆಯಲ್ಪಡುಗುಂ ಸುಮೀ.

ಸ ಮಯಾ ಪ್ರಾಪ್ತವಾನ್ ಸರ್ವಂ ಪ್ರಸಾದಾದ್ಧರ್ಮಸೂನುನಃ ।
ಸೋಽಯಂ ಸ ಸಮ್ಪ್ರತ್ಯಹಂ ಸರ್ವಂ ಪ್ರಾಪ್ನೋಮಿ ಸುಖಮುತ್ತಮಮ್ ॥೧೦೯॥

ಆದುದಂ ನಾಂ ಧರ್ಮಜನ ಮಗನಪ್ಪ ಸುಧರ್ಮಸ್ವಾಮಿಯ ಪ್ರಸಾದದಿಂದಮೆ ಪಡೆದೆಂ. ಆ ಸುಧರ್ಮಸ್ವಾಮಿಯ ಪ್ರಸಾದದಿಂದಮೆ ಎನ್ನ ಗಣಧರರ್ಕಳ್ ಪಡೆದರ್. ಆ ಸುಧರ್ಮಸ್ವಾಮಿಯ ಪ್ರಸಾದದಿಂದಮೆ ಎನ್ನ ಸಮಸ್ತ ಶಿಷ್ಯರ್ಕಳುಂ ಪಡೆದರ್.

ಭೀಮಂ ಭೀಮರಥಂ ಚೋಭೌ ಭೀಮಸೇನೋ ಹಸನ್ನಿವ ।
ಭ್ರಾತರೌ ರಭಸೌ ರಾಜನ್ನನಯದ್ ಯಮಸಾದನಮ್ ॥೩೫॥

ಎಲೈ ರಾಜನೇ, ಭೀಮಸೇನನು ನಗುತ್ತಾ ಸಹೋದರರೂ, ವೇಗಶಾಲಿಗಳೂ ಆದ ಭೀಮ ಮತ್ತು ಭೀಮರಥರಿಬ್ಬರನ್ನೂ ನಗುವವನಂತೆ ಯಮಪಟ್ಟಣಕ್ಕೆ ಕಳುಹಿಸಿದನು.

ತತಃ ಸುಲೋಚನಂ ಭೀಮಃ ಕ್ಷುರಪ್ರೇಣ ಮಹಾಮೃಧೇ ।
ಮಿಷತಾಂ ಸರ್ವಸೈನ್ಯಾನಾಮನಯದ್ ಯಮಸಾದನಮ್ ॥೩೬॥

ಅನಂತರ ಮಹಾಯುದ್ಧದಲ್ಲಿ ಭೀಮಸೇನನು ಸುಲೋಚನನೆಂಬ ನಿನ್ನ ಪುತ್ರನನ್ನು ಎಲ್ಲಸೈನ್ಯವೂ ನೋಡುತ್ತಿರುವಂತೆ ಕ್ಷುರಪ್ರದಿಂದ ಯಮಪಟ್ಟಣಕ್ಕೆ ಕಳುಹಿಸಿದನು.

ಪುತ್ರಾಸ್ತು ತವ ತಂ ದೃಷ್ಟ್ವಾ ಭೀಮಸೇನಪರಾಕ್ರಮಮ್ ।
ಶೇಷಾ ಯೇಽನ್ಯೇಽಭವಂಸ್ತತ್ರ ತೇ ಭೀಮಸ್ಯ ಭಯಾರ್ದಿತಾಃ ।
ವಿಪ್ರದ್ರುತಾ ದಿಶೋ ರಾಜನ್ ವಧ್ಯಮಾನಾ ಮಹಾತ್ಮನಾ ॥೩೭॥

ಎಲೈ ರಾಜನೇ, ನಿನ್ನ ಉಳಿದ ಮಕ್ಕಳು ಭೀಮಸೇನನ ಆ ಪರಾಕ್ರಮವನ್ನು ನೋಡಿ ಭೀಮನ ಭಯದಿಂದ ನಡುಗುತ್ತಾ, ಮಹಾತ್ಮನಾದ ಭೀಮಸೇನನಿಂದ ಬಾಣ ಪ್ರಯೋಗದಿಂದ ಹೊಡೆಯಲ್ಪಡುವವರಾಗಿ ದಿಕ್ಕು ದಿಕ್ಕುಗಳಿಗೆ ಓಡಿಹೋದರು.

ತತೋಽಬ್ರವೀಚ್ಛಂತನವಃ ಸರ್ವಾನೇವ ಮಹಾರಥಾನ್ ।
ಏಷ ಭೀಮೋ ರಣೇ ಕ್ರುದ್ಧೋ ಧಾರ್ತರಾಷ್ಟ್ರಾನ್ ಮಹಾರಥಾನ್ ॥

ಯಥಾಪ್ರಾಗ್ರ್ಯಾನ್ ಯಥಾಜ್ಯೇಷ್ಠಾನ್ ಯಥಾಶೂರಾಂಶ್ಚ ಸಂಗತಾನ್ ।
ನಿಪಾತಯತ್ಯುಗ್ರಧನ್ವಾ ತಂ ಪ್ರಮಥ್ನೀತ ಪಾರ್ಥಿವಾಃ ॥೩೮॥

ಆಗ ಶಂತನುಪುತ್ರರಾದ ಭೀಷ್ಮರು ಎಲ್ಲ ಮಹಾರಥರನ್ನು ಕುರಿತು, ಈ ಭೀಮಸೇನನು ಪರಾಕ್ರಮದಿಂದ ಶ್ರೇಷ್ಠರಾದ ಮತ್ತು ವಯಸ್ಸಿನಿಂದ ಜ್ಯೇಷ್ಠರಾದ ಇಲ್ಲಿ ಸೇರಿದ ನಮ್ಮ ಸೈನ್ಯದ ಶೂರರನ್ನು ಕೈಯಲ್ಲಿ ಉಗ್ರವಾದ ಧನುಸ್ಸನ್ನು ಹಿಡಿದು ಕೆಡವುತ್ತಿದ್ದಾನೆ. ರಾಜರೇ, ಅವನನ್ನು ಮರ್ದಿಸಿ ಎಂದು ಹೇಳಿದರು.

ಏವಮುಕ್ತಾಸ್ತತಃ ಸರ್ವೇ ಧಾರ್ತರಾಷ್ಟ್ರಸ್ಯ ಸೈನಿಕಾಃ ।
ಅಭ್ಯದ್ರವಂತ ಸಂಕ್ರುದ್ಧಾ ಭೀಮಸೇನಂ ಮಹಾಬಲಮ್ ॥೪೦॥

ಹೀಗೆ ಹೇಳಲ್ಪಟ್ಟ ದುರ್ಯೋಧನನ ಸೈನಿಕರೆಲ್ಲರೂ ಬಹಳ ಕೋಪಗೊಂಡು ಮಹಾಬಲನಾದ ಭೀಮಸೇನನ ಕಡೆಗೆ ಓಡಿಹೋದರು.

ಭಗದತ್ತಃ ಪ್ರಭಿನ್ನೇನ ಕುಂಜರೇಣ ವಿಶಾಂಪತೇ ।
ಅಪತತ್ ಸಹಸಾ ತತ್ರ ಯತ್ರ ಭೀಮೋ ವ್ಯವಸ್ಥಿತಃ ॥೪೧॥

ಎಲೈ ರಾಜನೇ, ಭಗದತ್ತನು ತನ್ನ ಮದಿಸಿದ ಆನೆಯ ಜೊತೆಯಲ್ಲಿ ಭೀಮಸೇನನು ಇದ್ದ ಕಡೆಗೆ ತಕ್ಷಣ ಬಂದನು.

ಆಪತನ್ನೇವ ಚ ರಣೇ ಭೀಮಸೇನಂ ಶಿಲಾಶಿತೈಃ ।
ಅದೃಶ್ಯಂ ಸಮರೇ ಚಕ್ರೇ ಜೀಮೂತ ಇವ ಭಾಸ್ಕರಮ್ ॥೪೨॥

ಅವನು ಭೀಮಸೇನನ ಸಮೀಪಕ್ಕೆ ಬರುತ್ತಿರುವಾಗಲೇ ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಣಗಳಿಂದ ಮೋಡಗಳು ಸೂರ್ಯನನ್ನು ಮುಚ್ಚುವಂತೆ ಭೀಮಸೇನನನ್ನು ಕಾಣದಂತೆ ಮಾಡಿದನು.

ಅಭಿಮನ್ಯುಮುಖಾಸ್ತತ್ರ ನಾಮೃಷ್ಯಂತ ಮಹಾರಥಾಃ ।
ಭೀಮಸ್ಯಾಚ್ಛಾದನಂ ಸಂಖೇ ಸ್ವಬಾಹುಬಲಮಾಶ್ರಿತಾಃ ॥೪೩॥

ತಮ್ಮ ಬಾಹುಬಲವನ್ನು ಆಶ್ರಯಿಸಿದ ಅಭಿಮನ್ಯು ಮೊದಲಾದ ಮಹಾರಥರು ಭೀಮಸೇನನು ಯುದ್ಧದಲ್ಲಿ ಬಾಣಗಳಿಂದ ಮುಚ್ಚಲ್ಪಡುವುದನ್ನು ಸಹಿಸಲಿಲ್ಲ.

ತ ಏನಂ ಶರವರ್ಷೇಣ ಸಮಂತಾತ್ ಪರ್ಯವಾರಯನ್ ।
ಗಜಂ ಚ ಶರವೃಷ್ಟ್ಯಾ ತಂ ಬಿಭಿದುಸ್ತೇ ಸಮಂತತಃ ॥೪೪॥

ಅವರು ಈ ಭಗದತ್ತನನ್ನು ಬಾಣಗಳ ಮಳೆಯನ್ನು ಸುರಿಸಿ ಎಲ್ಲ ಕಡೆಗಳಿಂದಲೂ ತಡೆದರು ಮತ್ತು ಬಾಣಗಳ ಮಳೆಯಿಂದ ಎಲ್ಲ ಕಡೆಗಳಿಂದಲೂ ಅವನ ಗಜವಾದ ಸುಪ್ರತೀಕವನ್ನು ಗಾಯಗೊಳಿಸಿದರು.

ಸ ಪಶ್ಚಾತ್ಪ್ರಥಮಂ ಪಾಪ್ತುಮಿಚ್ಛನ್ವಿಗುಣಾಂ ಜವಮ್ ।
ಪಾರ್ಥಿವೈರ್ಬಹುಭಿರ್ಗೋಪೈ ರಾವೃತಂ ಸಾಗರಂಗಮೈಃ ಸಂಜೀವಯೈ ॥೧೪೩॥

ಎಲೈ ರಾಜನೇ, ಹಾಗೂ ವಿಧವಾದ, ಅತ್ಯಂತ ತೀಕ್ಷ್ಣವಾದ ಪಶ್ಚಾತ್ ಭಾಗದ ಮೊಗೆ ಒಂಟೆದ ಪಾರ್ಥಿವ ಅರಿಷ್ಟವಿಯ ಸಮೀಪಕ್ಕೆ ಗಜವು ಎರಡನ್ನು ದೂರ ಓಡಿಹೋಯಿತು.

ಸಂಜಾತಮನ್ಯುರೋಷೇಣ ಪ್ರೇಷ್ಯಾಣಾಮೇಷ ಭೂಪತಿಃ ರಣೇ ।
ಗಜಸ್ಯಾಧಿರಥಾಗ್ರ್ಯಸ್ಯ ಸಂಜಗ್ರಾಹೇ ಜಲದೋ ಯಥಾ ॥೧೪೬॥

ಸಾಯಗೊಂಡ ತಿರಸ್ಕಾರದಿಂದ ರೌದ್ರ ಸಂಯುಕ್ತನಾದ ಸೂರ್ಯತನಯನು ಸಾಯದ ಮೇಘದಂತೆ ರಣರಂಗದಲ್ಲಿ ಆ ಗಜವು ಸುಂದರವಾಗಿ ಕಾಣುತ್ತಿದ್ದನು.

ಸ ಚೋದಿತೋ ಮಹಾಮಾತ್ರೈ ಭೂಗತೈಶ್ಚ ರಾಜಭಿಃ ।
ಅಭ್ಯದ್ರವತ ತಾಂ ಸೇನಾಂ ಜಲದೋತ್ಪಾತ ಇವಾಂತಕಃ ।
ದಿಗುಣಾಂ ಜವಮಾಸ್ಥಾಯ ಶಮಯಿಷ್ಯಂಸ್ತದಾತ್ಮಜಮ್ ॥೧೪೭॥

ಭೂಪತ್ಯಿಂದ ಪ್ರಚೋದಿಸಲ್ಪಟ್ಟ ಮದವನ್ನು ಸುರಿಸುವ ಆ ಗಜವು ಮೊದಲಿಗಿಂತ ಎರಡರಷ್ಟು ವೇಗವನ್ನು ತೋರಿ ಪಟ್ಟ ಸಾಮಾನ್ಯದಿಂದ ಭೂಮಿಯನ್ನು ನಡುಗಿಸುತ್ತ ಪಾಲ್ಗೊಂಡಿರುವ ಯಮನಂತೆ ಆ ಎಲ್ಲರ ಮೇಲೆ ಧಾಮಿತು.

ತಸ್ಯ ಪಾಲ್ಗುನಮಾಲೋಕ್ಯ ದೃಷ್ಟ್ವಾ ಸರ್ವೇ ಮಹಾರಥಾಃ ।
ಅಸ್ಯಂತಂ ಮಹದಸ್ತ್ರಾಣಿ ಸಾಪಿಪ್ರಮದಮೋಽಭವತ್ ॥೧೪೮॥

ಆ ಗಜದ ಅತ್ಯಂತ ದೊಡ್ಡ ಆಕಾರವನ್ನು ನೋಡಿ ಪಾಂಡವರ ಎಲ್ಲ ಮಹಾರಥರೂ ಇದನ್ನು ಎದುರಿಸಲು ಸಾಧ್ಯವಿಲ್ಲವೆಂದು ತಿಳಿದು ಮನಸ್ಸಿನಲ್ಲಿ ದೀನರಗೊಂಡರು.

ತತಸ್ತು ದೃಷ್ಟ್ವಾ ಕ್ರುದ್ಧಂ ಭೀಮಸೇನಂ ಸ್ವಸಾರಥೇ ।
ಅಭಿಪಾತ ಸಮಾಪ್ಸ್ಯಂ ತಂ ಕರೇಣ ಜಘಾನ ಹ ॥೧೪೯॥

ಎಲೈ ಸಮಾಪ್ತಸೇ, ಆಗ ತೋಷಗೊಂಡ ರಾಜನಾದ ಭಗದತ್ತನು ಬಾಗಿದ ಹುರಿಯುಳ್ಳ ಬಾಣದಿಂದ ಭೀಮಸೇನನನ್ನು ಸ್ವಸಾರಥಿಯ ಮಧ್ಯದಲ್ಲಿ ಹೊಡೆದನು.

ಸೋಽಪಿವಿದ್ರೋ ಮಹೇಷ್ವಾಸ್ತೇನ ರಾಜ್ಞಾ ಮಹಾರಥಃ ।
ಮೂರ್ಧ್ನಿಯಾಭಿಹರಿನ್ತಾಂಗೋ ಧ್ವಜಯಷ್ಟಿಮುಪಾಶ್ರಿತಃ ॥೫೦॥

ಮಹಾರಥನೂ, ಮಹಾಧನುರ್ಧಾರಿಯೂ ಆದ ಭೀಮಸೇನನು ಭಗದತ್ತ ರಾಜನಿಂದ ಗಾಢವಾಗಿ ಹೊಡೆಯಲ್ಪಟ್ಟು ಮೂರ್ಛೆಯನ್ನು ಹೊಂದುತ್ತಾ ಧ್ವಜದ ದಂಡವನ್ನು ಹಿಡಿದು ನಿಂತನು.

ತಾಂಸ್ತು ಭೀತಾನ್ ಸಮಾಲಕ್ಷ್ಯ ಭೀಮಸೇನಂ ಚ ಮೂರ್ಚ್ಛಿತಮ್ ।
ನನಾದ ಬಲವನ್ನಾದಂ ಭಗದತ್ತಃ ಪ್ರತಾಪವಾನ್ ॥೫೧॥

ಶತ್ರುಸೈನ್ಯದವರೆಲ್ಲರೂ ಭೀತರಾಗಿರುವುದನ್ನೂ, ಭೀಮಸೇನನು ಮೂರ್ಛೆ ಹೊಂದಿರುವುದನ್ನೂ ಗಮನಿಸಿದ ಪ್ರತಾಪಶಾಲಿಯಾದ ಭಗದತ್ತನು ಗಟ್ಟಿಯಾಗಿ ಸಿಂಹನಾದವನ್ನು ಮಾಡಿದನು.

ತತೋ ಘಟೋತ್ಕಚೋ ರಾಜನ್ ಪ್ರೇಕ್ಷ್ಯ ಭೀಮಂ ತಥಾಗತಮ್ ।
ಸಂಕ್ರುದ್ಧೋ ರಾಕ್ಷಸೋ ಘೋರಶ್ಚಾನ್ತರಧೀಯತ ॥೫೨॥

ರಾಜನೇ, ಭೀಮಸೇನನು ಆ ಅವಸ್ಥೆಗೆ ಹೋಗಿರುವುದನ್ನು ನೋಡಿ ಆಗ ರಾಕ್ಷಸನೂ, ಘೋರರೂಪನೂ ಆದ ಘಟೋತ್ಕಚನು ಬಹಳ ಕೋಪಗೊಂಡು ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಸ ಕೃತ್ವಾ ದಾರುಣಾಂ ಮಾಯಾಂ ಭೀರೂಣಾಂ ಭಯವರ್ಧಿನೀಮ್ ।
ಅದೃಶ್ಯತ ನಿಮೇಷಾರ್ಧಾದ್ ಘೋರರೂಪಂ ಸಮಾಶ್ರಿತಃ ॥೫೩॥

ಅವನು ಅರ್ಧನಿಮಿಷದಲ್ಲಿ ಭೀರುಗಳಿಗೆ ಭಯವನ್ನು ಹೆಚ್ಚಿಸುವ ದಾರುಣವಾದ ಘೋರವಾದ ಮಾಯಾರೂಪವನ್ನು ತೆಗೆದುಕೊಂಡು ಪುನಃ ಕಾಣಿಸಿಕೊಂಡನು.

ಐರಾವತಂ ಸಮಾರುಹ್ಯ ಸ್ವಯಂ ಮಾಯಾಮಯಂ ಕೃತಮ್ ।
ತಸ್ಯ ಚಾಸ್ಯೇಽಪಿ ದಿಙ್ನಾಗಾ ಬಭೂವುರನುಯಾಯಿನಃ ॥೫೪॥

ತನ್ನ ಮಾಯೆಯಿಂದ ನಿರ್ಮಿಸಿದ ಐರಾವತ ಗಜವನ್ನು ಏರಿ ಬಂದನು. ಅದಕ್ಕೆ ಉಳಿದ ದಿಗ್ಗಜಗಳು ಅನುಯಾಯಿಗಳಾಗಿದ್ದವು.

ಸ ಶಸ್ತ್ರವೃಷ್ಟ್ಯಾಭಿಹತಃ ಪ್ರಾದ್ರವದ್ ದ್ವಿಗುಣಂ ಪದಮ್ ।
ಪ್ರಾಗ್ಜ್ಯೋತಿಷಗಜೋ ರಾಜನ್ ನಾನಾಲಿಂಗೈಃ ಸುತೇಜನೈಃ ॥೪೫॥

ಎಲೈ ರಾಜನೇ, ನಾನಾ ವಿಧವಾದ, ಅತ್ಯಂತ ತೀಕ್ಷ್ಣವಾದ ಶಸ್ತ್ರಗಳ ಮಳೆಗೆ ಸಿಲುಕಿದ ಪ್ರಾಗ್ಜ್ಯೋತಿಷ ಅಧಿಪತಿಯ ಸುಪ್ರತೀಕ ಗಜವು ಎರಡರಷ್ಟು ದೂರ ಓಡಿಹೋಯಿತು.

ಸಂಜಾತರುಧಿರೋತ್ಪೀಡಃ ಪ್ರೇಕ್ಷಣೀಯೋಽಭವದ್ ರಣೇ ।
ಗಭಸ್ತಿಭಿರಿವಾರ್ಕಸ್ಯ ಸಂಸ್ಕೃತೋ ಜಲದೋ ಮಹಾನ್ ॥೪೬॥

ಗಾಯಗೊಂಡ ಶಿರಸ್ಸಿನಿಂದ ರಕ್ತವು ಸುರಿಯುತ್ತಿರಲು ಸೂರ್ಯಕಿರಣಗಳು ನಾಟಿದ ಮೇಘದಂತೆ ರಣರಂಗದಲ್ಲಿ ಆ ಗಜವು ಸುಂದರವಾಗಿ ಕಾಣುತ್ತಿದ್ದಿತು.

ಸ ಚೋದಿತೋ ಮದಸ್ರಾವೀ ಭಗದತ್ತೇನ ವಾರಣಃ ।
ಅಭ್ಯಧಾವತ ತಾನ್ ಸರ್ವಾನ್ ಕಾಲೋತ್ಸೃಷ್ಟ ಇವಾಂತಕಃ ।
ದ್ವಿಗುಣಂ ಜವಮಾಸ್ಥಾಯ ಕಂಪಯಂಶ್ಚರಣೈರ್ಮಹೀಮ್ ॥೪೭॥

ಭಗದತ್ತನಿಂದ ಪ್ರಚೋದಿಸಲ್ಪಟ್ಟ ಮದವನ್ನು ಸುರಿಸುವ ಆ ಗಜವು ಮೊದಲಿಗಿಂತ ಎರಡರಷ್ಟು ವೇಗವನ್ನು ಹೊಂದಿ ತನ್ನ ಪಾದನ್ಯಾಸದಿಂದ ಭೂಮಿಯನ್ನು ನಡುಗಿಸುತ್ತಾ ಕಾಲಪ್ರೇರಿತನಾದ ಯಮನಂತೆ ಆ ಎಲ್ಲರ ಮೇಲೆ ಧಾವಿಸಿತು.

ತಸ್ಯ ತತ್ಸುಮಹದ್ರೂಪಂ ದೃಷ್ಟ್ವಾ ಸರ್ವೇ ಮಹಾರಥಾಃ ।
ಅಸಹ್ಯಂ ಮನ್ಯಮಾನಾಸ್ತೇ ಸಾತಿಪ್ರಮನಸೋಽಭವನ್ ॥೪೮॥

ಆ ಗಜದ ಅತ್ಯಂತ ದೊಡ್ಡ ಆಕಾರವನ್ನು ನೋಡಿ ಪಾಂಡವರ ಎಲ್ಲ ಮಹಾರಥರೂ ಇದನ್ನು ಎದುರಿಸಲು ಸಾಧ್ಯವಿಲ್ಲವೆಂದು ತಿಳಿದು ಮನಸ್ಸಿನಲ್ಲಿ ಬೇಸರಗೊಂಡರು.

ತತಸ್ತು ನೃಪತಿಃ ಕ್ರುದ್ಧೋ ಭೀಮಸೇನಂ ಸ್ತನಾಂತರೇ ।
ಆಜಘಾನ ನರವ್ಯಾಘ್ರ ಶರೇಣ ನತಪರ್ವಣಾ ॥೪೯॥

ಎಲೈ ನರವ್ಯಾಘ್ರನೇ, ಆಗ ಕೋಪಗೊಂಡ ರಾಜನಾದ ಭಗದತ್ತನು ಬಾಗಿದ ತುದಿಯುಳ್ಳ ಬಾಣದಿಂದ ಭೀಮಸೇನನನ್ನು ಸ್ತನಗಳ ಮಧ್ಯದಲ್ಲಿ ಹೊಡೆದನು.

ಸೋಽತಿವಿದ್ಧೋ ಮಹೇಷ್ವಾಸಸ್ತೇನ ರಾಜ್ಞಾ ಮಹಾರಥಃ ।
ಮೂರ್ಚ್ಛಯಾಭಿಪರೀತಾಂಗೋ ಧ್ವಜಯಷ್ಟಿಮುಪಾಶ್ರಿತಃ ॥೫೦॥

ಮಹಾರಥನೂ, ಮಹಾಧನುರ್ಧಾರಿಯೂ ಆದ ಭೀಮಸೇನನು ಭಗದತ್ತ ರಾಜನಿಂದ ಗಾಢವಾಗಿ ಹೊಡೆಯಲ್ಪಟ್ಟು ಮೂರ್ಛೆಯನ್ನು ಹೊಂದುತ್ತಾ ಧ್ವಜದ ದಂಡವನ್ನು ಹಿಡಿದು ನಿಂತನು.

ತಾಂಸ್ತು ಭೀತಾನ್ ಸಮಾಲಕ್ಷ್ಯ ಭೀಮಸೇನಂ ಚ ಮೂರ್ಚ್ಛಿತಮ್ ।
ನನಾದ ಬಲವನ್ನಾದಂ ಭಗದತ್ತಃ ಪ್ರತಾಪವಾನ್ ॥೫೧॥

ಶತ್ರುಸೈನ್ಯದವರೆಲ್ಲರೂ ಭೀತರಾಗಿರುವುದನ್ನೂ, ಭೀಮಸೇನನು ಮೂರ್ಛೆ ಹೊಂದಿರುವುದನ್ನೂ ಗಮನಿಸಿದ ಪ್ರತಾಪಶಾಲಿಯಾದ ಭಗದತ್ತನು ಗಟ್ಟಿಯಾಗಿ ಸಿಂಹನಾದವನ್ನು ಮಾಡಿದನು.

ತತೋ ಘಟೋತ್ಕಚೋ ರಾಜನ್ ಪ್ರೇಕ್ಷ್ಯ ಭೀಮಂ ತಥಾಗತಮ್ ।
ಸಂಕ್ರುದ್ಧೋ ರಾಕ್ಷಸೋ ಘೋರಸ್ತತ್ರೈವಾಂತರಧೀಯತ ॥೫೨॥

ರಾಜನೇ, ಭೀಮಸೇನನು ಆ ಅವಸ್ಥೆಗೆ ಹೋಗಿರುವುದನ್ನು ನೋಡಿ ಆಗ ರಾಕ್ಷಸನೂ, ಘೋರರೂಪನೂ ಆದ ಘಟೋತ್ಕಚನು ಬಹಳ ಕೋಪಗೊಂಡು ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಸ ಕೃತ್ವಾ ದಾರುಣಾಂ ಮಾಯಾಂ ಭೀರೂಣಾಂ ಭಯವರ್ಧಿನೀಮ್ ।
ಅದೃಶ್ಯತ ನಿಮೇಷಾರ್ಧಾದ್ ಘೋರರೂಪಂ ಸಮಾಶ್ರಿತಃ ॥೫೩॥

ಅವನು ಅರ್ಧನಿಮಿಷದಲ್ಲಿ ಭೀರುಗಳಿಗೆ ಭಯವನ್ನು ಹೆಚ್ಚಿಸುವ ದಾರುಣವಾದ ಘೋರವಾದ ಮಾಯಾರೂಪವನ್ನು ತೆಗೆದುಕೊಂಡು ಪುನಃ ಕಾಣಿಸಿಕೊಂಡನು.

ಐರಾವತಂ ಸಮಾರುಹ್ಯ ಸ್ವಯಂ ಮಾಯಾಮಯಂ ಕೃತಮ್ ।
ತಸ್ಯ ಚಾನ್ಯೇಽಪಿ ದಿಜ್ಞಾಗಾ ಬಭೂವುರನುಯಾಯಿನಃ ॥೫೪॥

ತನ್ನ ಮಾಯೆಯಿಂದ ನಿರ್ಮಿಸಿದ ಐರಾವತ ಗಜವನ್ನು ಏರಿ ಬಂದನು. ಅದಕ್ಕೆ ಉಳಿದ ದಿಗ್ಗಜಗಳು ಅನುಯಾಯಿಗಳಾಗಿದ್ದವು.

ಅಂಜನೋ ವಾಮನಶ್ಚೈವ ಮಹಾಪದ್ಮಶ್ಚ ಸುಪ್ರಭಃ ।
ತ್ರಯ ಏತೇ ಮಹಾನಾಗಾ ರಾಕ್ಷಸೈಃ ಸಮಧಿಷ್ಠಿತಾಃ ॥೫೫॥

ಮಹಾಕಾಯಾಸ್ತ್ರಿಧಾ ರಾಜನ್ ಪ್ರಸ್ರವಂತೋ ಮದಂ ಬಹು ।
ತೇಜೋವೀರ್ಯಬಲೋಪೇತಾ ಮಹಾಬಲಪರಾಕ್ರಮಾಃ ॥೫೬॥

ಅಂಜನ, ವಾಮನ, ಒಳ್ಳೆಯ ಕಾಂತಿಯುಳ್ಳ ಮಹಾಪದ್ಮ ಈ ಮೂರು ಗಜಗಳು ರಾಕ್ಷಸರಿಂದ ಅಧಿಷ್ಠಿತವಾಗಿ ದೊಡ್ಡ ಶರೀರವನ್ನು ಧರಿಸಿ ಬಹಳವಾದ ಮದೋದಕವನ್ನು ಸುರಿಸುತ್ತಾ, ತೇಜೋವೀರ್ಯಬಲಗಳಿಂದ ಕೂಡಿ ಮಹಾಬಲವನ್ನು, ಪರಾಕ್ರಮವನ್ನು ಹೊಂದಿದವುಗಳಾಗಿ (ಘಟೋತ್ಕಚನನ್ನು ಅನುಸರಿಸಿ ಬಂದವು).

ಘಟೋತ್ಕಚಸ್ತು ಸ್ವಂ ನಾಗಂ ಚೋದಯಾಮಾಸ ತಂ ತತಃ ।
ಸಗಜಂ ಭಗದತ್ತಂ ತು ಹಂತುಕಾಮಃ ಪರಂತಪಃ ॥೫೭॥

ಪರಂತಪನಾದ ಘಟೋತ್ಕಚನಾದರೂ ಗಜದಿಂದ ಸಹಿತನಾಗಿ ಭಗದತ್ತನನ್ನು ಕೊಲ್ಲಲು ಬಯಸಿ ತನ್ನ ಗಜವನ್ನು ಅವನ ಕಡೆಗೆ ಪ್ರೇರಿಸಿದನು.

ತೇ ಚಾನ್ಯೇ ಚೋದಿತಾ ನಾಗಾ ರಾಕ್ಷಸೈಸ್ತೈರ್ಮಹಾಬಲೈಃ ।
ಪರಿಪೇತುಃ ಸುಸಂರಬ್ಧಾಶ್ಚತುರ್ದಂಷ್ಟ್ರಾಶ್ಚತುರ್ದಿಶಮ್ ।
ಭಗದತ್ತಸ್ಯ ತಂ ನಾಗಂ ವಿಷಾಣೈಸ್ತೇಽಭ್ಯಪೀಡಯನ್ ॥೫೮॥

ಮಹಾಬಲವುಳ್ಳ ರಾಕ್ಷಸರಿಂದ ಪ್ರಚೋದಿತವಾದ, ಬಹಳ ಸಿಟ್ಟಿನಿಂದ ಕೂಡಿದ, ನಾಲ್ಕುದಂತಗಳುಳ್ಳ ಉಳಿದ ಗಜಗಳೂ ಸಹ ಶತ್ರುಸೈನ್ಯದ ಮೇಲೆ ನಾಲ್ಕು ದಿಕ್ಕುಗಳಲ್ಲಿಯೂ ಬಿದ್ದು ಭಗದತ್ತನ ಸುಪ್ರತೀಕ ಗಜವನ್ನು ತಮ್ಮ ದಂತಗಳಿಂದ ತಿವಿದವು.

ಸಂಪೀಡ್ಯಮಾನಸ್ತೈರ್ನಾಗೈರ್ವೇದನಾರ್ತಃ ಶರಾತುರಃ ।
ಸೋಽನದತ್ ಸುಮಹಾನಾದಮಿಂದ್ರಾಶನಿಸಮಸ್ವನಮ್ ॥೫೯॥

ಆ ಗಜಗಳಿಂದ ಹೀಗೆ ಪೀಡಿಸಲ್ಪಟ್ಟು ಬಾಣಗಳ ಏಟಿಗೆ ಸಿಲುಕಿ ನೋವನ್ನು ಅನುಭವಿಸುತ್ತಿದ್ದ ಸುಪ್ರತೀಕವು ಇಂದ್ರನ ವಜ್ರಾಯುಧದ ಘೋಷಕ್ಕೆ ಸಮಾನವಾದ ನಾದದಿಂದ ಮಹಾನಾದವನ್ನು ಮಾಡಿತು.

ತಸ್ಯ ತಂ ನದತೋ ನಾದಂ ಸುಘೋರಂ ಭೀಮನಿಸ್ವನಮ್ ।
ಶ್ರುತ್ವಾ ಭೀಷ್ಮೋಽಬ್ರವೀದ್ ದ್ರೋಣಂ ರಾಜಾನಂ ಚ ಸುಯೋಧನಮ್ ॥

ಅದರ ಅತ್ಯಂತ ಘೋರವೂ ಮತ್ತು ಭಯಂಕರವೂ ಆದ ಆ ನಾದವನ್ನು ಕೇಳಿದ ಭೀಷ್ಮರು ದ್ರೋಣರನ್ನು ಮತ್ತು ರಾಜನಾದ ದುರ್ಯೋಧನನನ್ನು ಕುರಿತು ಹೀಗೆ ಮಾತನಾಡಿದರು.

ಏಷ ಯುಧ್ಯತಿ ಸಂಗ್ರಾಮೇ ಹೈಡಿಂಬೇನ ದುರಾತ್ಮನಾ ।
ಭಗದತ್ತೋ ಮಹೇಷ್ವಾಸಃ ಕೃಚ್ಛ್ರೇಣ ಪರಿವರ್ತತೇ ॥೬೧॥

ದುಷ್ಟನಾದ ಘಟೋತ್ಕಚನ ಜೊತೆಯಲ್ಲಿ ಯುದ್ಧ ಮಾಡುತ್ತಿರುವ ಮಹಾಧನುರ್ಧಾರಿಯಾದ ಈ ಭಗದತ್ತನು ಕಷ್ಟಕ್ಕೆ ಸಿಲುಕಿದ್ದಾನೆ.

ರಾಕ್ಷಸಶ್ಚ ಮಹಾಮಾಯಃ ಸ ಚ ರಾಜಾತಿಕೋಪನಃ ।
ತೌ ಸಮೇತೌ ಮಹಾವೀರ್ಯೌ ಕಾಲಮೃತ್ಯುಸಮಾವುಭೌ ॥೬೨॥

ರಾಕ್ಷಸನಾದ ಘಟೋತ್ಕಚನು ಮಹಾಮಾಯೆಯಿಂದ ಕೂಡಿದವನು ಮತ್ತು ಭಗದತ್ತನು ಬಹಳ ಕೋಪದಿಂದ ಕೂಡಿದವನು. ಮಹಾಪರಾಕ್ರಮಶಾಲಿಗಳಾದ ಕಾಲಮೃತ್ಯುವಿಗೆ ಸಮರಾದ ಅವರಿಬ್ಬರೂ ಪರಸ್ಪರವಾಗಿ ಯುದ್ಧವನ್ನು ಮಾಡುತ್ತಿದ್ದಾರೆ.

ಶ್ರೂಯತೇ ಹ್ಯೇಷ ಹೃಷ್ಟಾನಾಂ ಪಾಂಡವಾನಾಂ ಮಹಾಸ್ವನಃ ।
ಹಸ್ತಿನಶ್ಚೈವ ಸುಮಹಾನ್ ಭೀತಸ್ಯ ರುವತೋ ಧ್ವನಿಃ ॥೬೩॥

ಸಂತೋಷಗೊಂಡ ಪಾಂಡವರ ಈ ಮಹಾನಾದವೂ, ಹೆದರಿ ಗೋಳಿಡುತ್ತಿರುವ ಸುಪ್ರತೀಕ ಗಜದ ಮಹಾನಾದವೂ ಕೇಳಿಬರುತ್ತಿದೆ.

ತತ್ರ ಗಚ್ಛಾಮ ಭದ್ರಂ ವೋ ರಾಜಾನಂ ಪರಿರಕ್ಷಿತುಮ್ ।
ಅರಕ್ಷ್ಯಮಾಣಃ ಸಮರೇ ಕ್ಷಿಪ್ರಂ ಪ್ರಾಣಾನ್ ವಿಮೋಕ್ಷ್ಯತೇ ॥೬೪॥

ನಿಮಗೆ ಮಂಗಳವಾಗಲಿ. ರಾಜನನ್ನು ರಕ್ಷಿಸಲು ನಾವು ಅಲ್ಲಿಗೆ ಹೋಗೋಣ. ರಕ್ಷಿಸದಿದ್ದರೆ ಅವನು ಶೀಘ್ರವಾಗಿ ಪ್ರಾಣವನ್ನು ಕಳೆದುಕೊಳ್ಳುವನು.

ತೇ ತ್ವರಧ್ವಂ ಮಹಾವೀರ್ಯಾಃ ಕಿಂ ಚಿರೇಣ ಪ್ರಯಾಮಹೇ ।
ಮಹಾನ್ ಹಿ ವರ್ತತೇ ರೌದ್ರಃ ಸಂಗ್ರಾಮೋ ರೋಮಹರ್ಷಣಃ ॥೬೫॥

ಎಲೈ ಮಹಾಪರಾಕ್ರಮಿಗಳೇ, ವೇಗ ಹೊರಡಿ. ನಾವು ಏಕೆ ಅಲ್ಲಿಗೆ ನಿಧಾನವಾಗಿ ಹೋಗಬೇಕು? ಭಯಂಕರವೂ, ರೋಮಾಂಚಕಾರಿಯೂ ಆದ ದೊಡ್ಡ ಯುದ್ಧವು ನಡೆಯುತ್ತಿದೆ.

ಭಕ್ತಶ್ಚ ಕುಲಪುತ್ರಶ್ಚ ಶೂರಶ್ಚ ಕೃತನಾಪತಿಃ ।
ಯುಕ್ತಂ ತಸ್ಯ ಪರಿತ್ರಾಣಂ ಕರ್ತುಮಸ್ಮಾಭಿರಚ್ಯುತಾಃ ॥೬೬॥

ಎಲೈ ಪರಾಕ್ರಮದಿಂದ ಚ್ಯುತರಾಗದ ರಾಜರೇ, ಭಗದತ್ತನಾದರೂ ನಮ್ಮಲ್ಲಿ ನಿಷ್ಠೆಯುಳ್ಳವನು, ಕುಲಪುತ್ರನಾದವನು, ಶೂರನು ಮತ್ತು ಸೇನಾಪತಿಯಾದವನು. ನಾವು ಅವನನ್ನು ರಕ್ಷಣೆ ಮಾಡುವುದು ಅತ್ಯಂತ ಯೋಗ್ಯವಾಗಿರುತ್ತದೆ.

ಭೀಷ್ಮಸ್ಯ ತದ್ವಚಃ ಶ್ರುತ್ವಾ ಭಾರದ್ವಾಜಪುರೋಗಮಾಃ ।
ಸಹಿತಾಃ ಸರ್ವರಾಜಾನೋ ಭಗದತ್ತಪರೀಪ್ಸಯಾ ।
ಉತ್ತಮಂ ಜವಮಾಸ್ಥಾಯ ಪ್ರಯಯುರ್ಯತ್ರ ಸೋಽಭವತ್ ॥೬೭॥

ಭೀಷ್ಮರ ಆ ಮಾತುಗಳನ್ನು ಕೇಳಿ ದ್ರೋಣರನ್ನು ಮುಂದೆ ಮಾಡಿಕೊಂಡು ಎಲ್ಲ ರಾಜರೂ ಭಗದತ್ತನನ್ನು ರಕ್ಷಿಸಲು ಬಯಸಿ ಶ್ರೇಷ್ಠವಾದ ವೇಗವನ್ನು ಹೊಂದಿ ಅವನು ಇದ್ದ ಕಡೆಗೆ ಧಾವಿಸಿದರು.

ತಾನ್ ಪ್ರಯಾತಾನ್ ಸಮಾಲೋಕ್ಯ ಯುಧಿಷ್ಠಿರಪುರೋಗಮಾಃ ।
ಪಾಂಚಾಲಾಃ ಪಾಂಡವೈಃ ಸಾರ್ಧಂ ಪೃಷ್ಠತೋಽನುಯಯುಃ ಪರಾನ್ ॥

ತಾನ್ಯನೀಕಾನ್ಯಥಾಲೋಕ್ಯ ರಾಕ್ಷಸೇಂದ್ರಃ ಪ್ರತಾಪವಾನ್ ।
ಸನಾದ ಸುಮಹಾನಾದಂ ವಿಸ್ಫೋಟಮಶನೇರಿವ ॥೬೮॥

ಅವರು ತಮ್ಮ ಸನ್ನಿಧಿಯಿಂದ ಹೊರಟು ಹೋದುದನ್ನು ನೋಡಿ ಯುಧಿಷ್ಠಿರನೇ ಮೊದಲಾದ ಪಾಂಚಾಲರೂ ಮತ್ತು ಪಾಂಡವರೂ ಮತ್ತು ಪ್ರತಾಪಶಾಲಿಯಾದ ರಾಕ್ಷಸೇಂದ್ರನಾದ ಘಟೋತ್ಕಚನೂ (ಹರ್ಷಗೊಂಡರು). ಆ ಸೈನ್ಯವನ್ನು ನೋಡಿದ

ಪ್ರತಾಪಶಾಲಿಯಾದ ರಾಕ್ಷಸೇಂದ್ರನಾದ ಘಟೋತ್ಕಚನು ಸಿಡಿಲಿನ ಸ್ಫೋಟದಂತಿದ್ದ ದೊಡ್ಡ ನಾದವನ್ನು ಮಾಡಿದನು.

ತಸ್ಯ ತಂ ನಿನದಂ ಶ್ರುತ್ವಾ ದೃಷ್ಟ್ವಾ ನಾಗಾಂಶ್ಚ ಯುಧ್ಯತಃ ।
ಭೀಷ್ಮಃ ಶಾಂತನವೋ ಭೂಯೋ ಭಾರದ್ವಾಜಮಭಾಷತ ॥೭೦॥

ಗಜಗಳ ಜೊತೆಯಲ್ಲಿ ಯುದ್ಧವನ್ನು ಮಾಡುವ ಅವನ ಆ ನಾದವನ್ನು ಕೇಳಿದ ಶಂತನು ಪುತ್ರರಾದ ಭೀಷ್ಮರು ಪುನಃ ದ್ರೋಣರ ಜೊತೆಯಲ್ಲಿ ಮಾತನಾಡಿದರು.

ನ ರೋಚತೇ ಮೇ ಸಂಗ್ರಾಮೋ ಹೈಡಿಂಬೇನ ದುರಾತ್ಮನಾ ।
ಬಲವೀರ್ಯಸಮಾವಿಷ್ಟಃ ಸಸಹಾಯಶ್ಚ ಸಾಂಪ್ರತಮ್ ॥೭೦॥

ದುಷ್ಟನಾದ ಘಟೋತ್ಕಚನ ಜೊತೆಯಲ್ಲಿ ಯುದ್ಧವನ್ನು ಮುಂದುವರಿಸುವುದು ನನಗೆ ಇಷ್ಟವಿಲ್ಲ. ಬಲವೀರ್ಯದಿಂದ ತುಂಬಿದ ಅವನು ಈಗ ಉಳಿದವರ ಸಹಾಯವನ್ನೂ ಹೊಂದಿದ್ದಾನೆ.

ನೈಷ ಶಕ್ಯೋ ಯುಧಾ ಜೇತುಮಪಿ ವಜ್ರಭೃತಾ ಸ್ವಯಮ್ ।
ಲಬ್ಧಲಕ್ಷ್ಯಃ ಪ್ರಹಾರೀ ಚ ವಯಂ ಚ ಶ್ರಾಂತವಾಹನಾಃ ।
ಪಾಂಚಾಲೈಃ ಪಾಂಡವೇಯೈಶ್ಚ ದಿವಸಂ ಕ್ಷತವಿಕ್ಷತಾಃ ॥೭೧॥

ವಜ್ರಾಯುಧವನ್ನು ಧರಿಸಿದ ಇಂದ್ರನೂ ಸಹ ಅವನನ್ನು ಯುದ್ಧದಲ್ಲಿ ಗೆಲ್ಲಲಾರ. ಘಟೋತ್ಕಚನಾದರೂ ಗುರಿಯನ್ನು ತಪ್ಪದೆ ಪ್ರಹಾರ ಮಾಡುತ್ತಿದ್ದಾನೆ. ಪಾಂಚಾಲರಿಂದ ಮತ್ತು ಪಾಂಡವರಿಂದ ಬೆಳಗಿನಿಂದ ಬಹಳವಾಗಿ ಗಾಯಗೊಂಡು ನಮ್ಮ ವಾಹನಗಳು ಬಳಲಿವೆ.

ಇದಾನೀಂ ಯುಧಿ ನಿರ್ಜೇತುಂ ನ ಶಕ್ಯೋಽಸೌ ಸ ರಾಕ್ಷಸಃ ।
ಅಸ್ತಮಭ್ಯೇತಿ ಸವಿತಾ ರಾತ್ರೌ ಯೋದ್ಧುಂ ನ ಶಕ್ಯತೇ ॥೭೩॥

ತನ್ನ ಮೇ ರೋಚತೇ ಯುದ್ಧಂ ಪಾಂಡವೈರ್ಜಿತಕಾಶಿಭಿಃ ।
ಘುಷ್ಯತಾಮವಹಾರೋಽದ್ಯ ಶ್ವೋ ಯೋತ್ಸ್ಯಾಮಃ ಪರೈಃ ಸಹ ॥೭೪॥

ಈಗ ರಾಕ್ಷಸನನ್ನು ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲ. ಸೂರ್ಯನು ಅಸ್ತಂಗತನಾಗುತ್ತಿದ್ದಾನೆ. ರಾತ್ರಿಯಲ್ಲಿ ಯುದ್ಧ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಜಯವನ್ನು ಹೊಂದಿದ ಉತ್ಸಾಹದಿಂದ ಇರುವ ಮನಸ್ಸುಳ್ಳ ಪಾಂಡವರ ಜೊತೆಯಲ್ಲಿ ಯುದ್ಧವು ನನಗೆ ಇಷ್ಟವಾಗುವುದಿಲ್ಲ. ಕೃಷ್ಣನನ್ನು ಹಿಂದಕ್ಕೆ ತೆಗೆದುಕೊಳ್ಳೋಣ. ತಮ್ಮಗಳ ಜೊತೆಯಲ್ಲಿ ನಾಳೆ ಯುದ್ಧವನ್ನು ಮಾಡುವೆವು.

ಏವಮಬ್ರವೀಃ ಶ್ರುತ್ವಾ ತಥಾ ಚಕ್ರುಃ ಸ್ಮ ಕೌರವಾಃ ।
ಉಪಾಯೇನಾಪಯಾನಂ ತೇ ಘಟೋತ್ಕಚಭಯಾರ್ದಿತಾಃ ॥೭೫॥

ಏವಮಬ್ರವೀದ ಭೀಷ್ಮರ ಮಾತನ್ನು ಕೇಳಿದ ಕೌರವರು ಘಟೋತ್ಕಚನ ಭಯದಿಂದ ಪೀಡಿತರಾಗಿ ಹೀಗೆ ಉಪಾಯದಿಂದ ರಣರಂಗದಿಂದ ಅಪಯಾನವನ್ನು ಮಾಡಿದರು.

ಕೌರವೇಷು ನಿವೃತ್ತೇಷು ಪಾಂಡವಾ ಜಿತಕಾಶಿನಃ ।
ಸಿಂಹನಾದಮಥುರ್ವೀರಾಃ ಶಂಖವೇಣುಸ್ವನೈಃ ಸಹ ॥೭೬॥

ಕೌರವರು ಹೊರಟು ಹೋದ ಮೇಲೆ ಜಯದಿಂದ ಸಂತುಷ್ಟರಾದ ಮನಸ್ಸುಳ್ಳ ಪಾಂಡವರು ಶಂಖ-ವೇಣು ನಾದಗಳ ಜೊತೆಯಲ್ಲಿ ಸಿಂಹನಾದವನ್ನು ಮಾಡಿದರು.

ಏವಂ ತದಭವದ್ ಯುದ್ಧಂ ದಿವಸಂ ಭರತರ್ಷಭ ।
ಪಾಂಡವಾನಾಂ ಕುರೂಣಾಂ ಚ ಪುರಸ್ಕೃತ್ಯ ಘಟೋತ್ಕಚಮ್ ॥೭೭॥

ಎಲೈ ಭರತಶ್ರೇಷ್ಠನೇ, ಹೀಗೆ ಘಟೋತ್ಕಚನನ್ನು ಮುಂದೆ ಮಾಡಿಕೊಂಡ ಪಾಂಡವರಿಗೂ ಮತ್ತು ಕೌರವರಿಗೂ ಆ ದಿವಸವೆಲ್ಲಾ ಯುದ್ಧವು ನಡೆಯಿತು.

ಕೌರವಾಸ್ತು ತತೋ ರಾಜನ್ ಪ್ರಯಯುಃ ಶಿಬಿರಂ ಸ್ವಕಮ್ ।
ವ್ರೀಡಮಾನಾ ನಿಶಾಕಾಲೇ ಪಾಂಡವೇಯೈಃ ಪರಾಜಿತಾಃ ॥೭೮॥

ಎಲೈ ರಾಜನೇ, ಅನಂತರ ರಾತ್ರಿಯು ಬರುತ್ತಿರಲು ಪಾಂಡವರಿಂದ ಪರಾಜಿತರಾದ ಕೌರವರಾದರೂ ನಾಚಿಕೆ ಪಡುತ್ತಾ ತಮ್ಮ ಶಿಬಿರಕ್ಕೆ ಹೋದರು.

ಶರವಿಕ್ಷತಗಾತ್ರಾಸ್ತೇ ಪಾಂಡುಪುತ್ರಾ ಮಹಾರಥಾಃ ।
ಯುದ್ಧೇ ಸುಮುಖರೋ ಭೂತ್ವಾ ಶಿಬಿರಾಯೈವ ಜಗ್ಮಿರೇ ॥೭೯॥

ಮಹಾರಥರಾದ ಪಾಂಡವರು ಬಾಣಗಳ ಏಟಿನಿಂದ ಶರೀರದಲ್ಲಿ ಗಾಯಗೊಂಡಿದ್ದರೂ ಯುದ್ಧದ ವಿಷಯದಲ್ಲಿ ಉತ್ಸಾಹವುಳ್ಳವರಾಗಿ ತಮ್ಮ ಶಿಬಿರಗಳಿಗೆ ಹೋದರು.

ಪುರಸ್ಕೃತ್ಯ ಮಹಾರಾಜ ಭೀಮಸೇನಘಟೋತ್ಕಚೌ ।
ಪೂಜಯಂತಸ್ತದಾನ್ಯೋನ್ಯಂ ಮುದಾ ಪರಮಯಾ ಯುತಾಃ ॥೮೦॥

ನದಂತೋ ವಿವಿಧಾನ್ ನಾದಾಂಸ್ತೂರ್ಯಸ್ವನವಿಮಿಶ್ರಿತಾನ್ ।
ಸಿಂಹನಾದಾಂಶ್ಚ ಕುರ್ವಾಣಾ ವಿಮಿಶ್ರಾನ್ ಶಂಖನಿಸ್ವನೈಃ ॥೮೧॥

ವಿನದಂತೋ ಮಹಾತ್ಮಾನಃ ಕಂಪಯಂತಶ್ಚ ಮೇದಿನೀಮ್ ।
ಘಟ್ಟಯಂತಶ್ಚ ಮರ್ಮಾಣಿ ತವ ಪುತ್ರಸ್ಯ ಮಾರಿಷ ।
ಪ್ರಯಾತಾಃ ಶಿಬಿರಾಯೈವ ನಿಶಾಕಾಲೇ ಪರಂತಪಾಃ ॥೮೨॥

ಎಲೈ ಮಹಾರಾಜನೇ, ಭೀಮಸೇನ-ಘಟೋತ್ಕಚರನ್ನು ಮುಂದೆ ಮಾಡಿಕೊಂಡು ಪರಸ್ಪರವಾಗಿ ಪೂಜಿಸುತ್ತಾ, ಬಹಳ ಸಂತೋಷದಿಂದ ಕೂಡಿದವರಾಗಿ ತೂರ್ಯಾದಿನಾದ ಮಿಶ್ರಿತವಾದ ವಿವಿಧವಾದ ನಾದಗಳನ್ನು ಮಾಡುತ್ತಾ, ಶಂಖಧ್ವನಿಗಳಿಂದ ಕೂಡಿದ ಸಿಂಹನಾದಗಳನ್ನು ಮಾಡುತ್ತಾ ಮಹಾತ್ಮರೂ, ಪರಂತಪರೂ ಆದ ಅವರು ಭೂಮಿಯನ್ನು ನಡುಗಿಸುತ್ತಾ ಎಲೈ ಪೂಜ್ಯನೇ, ನಿನ್ನ ಪುತ್ರನಾದ ದುರ್ಯೋಧನನ ಮರ್ಮಗಳನ್ನು ಭೇದಿಸುತ್ತಾ ರಾತ್ರಿಯು ಸಮೀಪಿಸುತ್ತಿರಲು ತಮ್ಮ ಶಿಬಿರಗಳಿಗೆ ಹೋದರು.

ದುರ್ಯೋಧನಸ್ತು ನೃಪತಿರ್ದೀನೋ ಭ್ರಾತೃವಧೇನ ಚ ।
ಮುಹೂರ್ತಂ ಚಿಂತಯಾಮಾಸ ಬಾಷ್ಪಶೋಕಸಮಾಕುಲಃ ॥೮೩॥

ರಾಜನಾದ ದುರ್ಯೋಧನನಾದರೂ ತಮ್ಮಂದಿರ ವಧೆಯಿಂದ ದೈನ್ಯವನ್ನು ಹೊಂದಿ, ಬಾಷ್ಪಶೋಕಗಳಿಂದ ಕೂಡಿದವನಾಗಿ ಒಂದು ಮುಹೂರ್ತದ ಕಾಲ ಚಿಂತಿಸಿದನು.

ತತಃ ಕೃತ್ವಾ ವಿಧಿಂ ಸರ್ವಂ ಶಿಬಿರಸ್ಯ ಯಥಾವಿಧಿ ।
ಪ್ರದಧ್ಮೌ ಶೋಕಸಂತಪ್ತೋ ಭ್ರಾತೃವ್ಯಸನಕರ್ಶಿತಃ ॥೮೪॥

ಈಗ ರಾತ್ರಸನನ್ನು ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲ. ಸೂರ್ಯನು ಅಸ್ತಂಗತನಾಗುತ್ತಿದ್ದಾನೆ. ರಾತ್ರಿಯಲ್ಲಿ ಯುದ್ಧ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಜಯವನ್ನು ಹೊಂದಿದ ಉತ್ಸಾಹದಿಂದ ಇರುವ ಮನಸ್ಸುಳ್ಳ ಪಾಂಡವರ ಜೊತೆಯಲ್ಲಿ ಯುದ್ಧವು ನಸಗೆ ಇಷ್ಟವಾಗುವುದಿಲ್ಲ. ಸೈನ್ಯವನ್ನು ಹಿಂದಕ್ಕೆ ತೆಗೆದುಕೊಳ್ಳೋಣ. ಶತ್ರುಗಳ ಜೊತೆಯಲ್ಲಿ ನಾಳೆ ಯುದ್ಧವನ್ನು ಮಾಡುವೆವು.

ಏತಾಮಹವಃ ಶ್ರುತ್ವಾ ತಥಾ ಚಕ್ರುಃ ಸ್ಮ ಕೌರವಾಃ ।
ಉಪಾಯೇನಾಪಯಾನಂ ತೇ ಘಟೋತ್ಕಚಭಯಾರ್ದಿತಾಃ ॥೭೫॥

ಏತಾಮಹರಾದ ಭೀಷ್ಮರ ಮಾತನ್ನು ಕೇಳಿದ ಕೌರವರು ಘಟೋತ್ಕಚನ ಭಯದಿಂದ ಪೀಡಿತರಾಗಿ ಹೀಗೆ ಉಪಾಯದಿಂದ ರಣರಂಗದಿಂದ ಅಪಯಾನವನ್ನು ಮಾಡಿದರು.

ಕೌರವೇಷು ನಿವೃತ್ತೇಷು ಪಾಂಡವಾ ಜಿತಕಾಶಿನಃ ।
ಸಿಂಹನಾದಮಥುರ್ಹಷ್ಟಾ ಶಂಖವೇಣುಸ್ವನೈಃ ಸಹ ॥೭೬॥

ಕೌರವರು ಹೊರಟು ಹೋದ ಮೇಲೆ ಜಯದಿಂದ ಸಂತುಷ್ಟರಾದ ಮನಸ್ಸುಳ್ಳ ಪಾಂಡವರು ಶಂಖ-ವೇಣು ನಾದಗಳ ಜೊತೆಯಲ್ಲಿ ಸಿಂಹನಾದವನ್ನು ಮಾಡಿದರು.

ಏವಂ ತದಭವದ್ ಯುದ್ಧಂ ದಿವಸಂ ಭರತರ್ಷಭ ।
ಪಾಂಡವಾನಾಂ ಕುರೂಣಾಂ ಚ ಪುರಸ್ಕೃತ್ಯ ಘಟೋತ್ಕಚಮ್ ॥೭೭॥

ಎಲೈ ಭರತಶ್ರೇಷ್ಠನೇ, ಹೀಗೆ ಘಟೋತ್ಕಚನನ್ನು ಮುಂದೆ ಮಾಡಿಕೊಂಡ ಪಾಂಡವರಿಗೂ ಮತ್ತು ಕೌರವರಿಗೂ ಆ ದಿವಸವೆಲ್ಲಾ ಯುದ್ಧವು ನಡೆಯಿತು.

ಕೌರವಾಸ್ತು ತತೋ ರಾಜನ್ ಪ್ರಯಯುಃ ಶಿಬಿರಂ ಸ್ವಕಮ್ ।
ವ್ರೀಡಮಾನಾ ನಿಶಾಕಾಲೇ ಪಾಂಡವೇಯೈಃ ಪರಾಜಿತಾಃ ॥೭೮॥

ಎಲೈ ರಾಜನೇ, ಅನಂತರ ರಾತ್ರಿಯು ಬರುತ್ತಿರಲು ಪಾಂಡವರಿಂದ ಪರಾಜಿತರಾದ ಕೌರವರಾದರೂ ನಾಚಿಕೆ ಪಡುತ್ತಾ ತಮ್ಮ ಶಿಬಿರಕ್ಕೆ ಹೋದರು.

ತರವಿಕ್ಷತಗಾತ್ರಾಸ್ತ್ರ ಪಾಂಡುಪುತ್ರಾ ಮಹಾರಥಾಃ ।
ಯುದ್ಧೇ ಸುಮನಸೋ ಭೂತ್ವಾ ಶಿಬಿರಾಯೈವ ಜಗ್ಮಿರೇ ॥೭೯॥

ಮಹಾರಥರಾದ ಪಾಂಡವರು ಬಾಣಗಳ ಏಟಿನಿಂದ ಶರೀರದಲ್ಲಿ ಗಾಯಗೊಂಡಿದ್ದರೂ ಯುದ್ಧದ ವಿಷಯದಲ್ಲಿ ಉತ್ಸಾಹವುಳ್ಳವರಾಗಿ ತಮ್ಮ ಶಿಬಿರಗಳಿಗೆ ಹೋದರು.

ಪುರಸೃತ್ಯ ಮಹಾರಾಜ ಭೀಮಸೇನಘಟೋತ್ಕಚೌ ।
ಪೂಜಯಂತಸ್ತದಾನ್ಯೋನ್ಯಂ ಮುದಾ ಪರಮಯಾ ಯುತಾಃ ॥೮೦॥

ನದಂತೋ ವಿವಿಧಾನ್ ನಾದಾಂಸ್ತೂರ್ಯಸ್ವನವಿಮಿಶ್ರಿತಾನ್ ।
ಸಿಂಹನಾದಾಂಶ್ಚ ಕುರ್ವಾಣಾ ವಿಮಿಶ್ರಾನ್ ಶಂಖನಿಸ್ವನೈಃ ॥೮೧॥

ವಿನದಂತೋ ಮಹಾತ್ಮಾನಃ ಕಂಪಯಂತಶ್ಚ ಮೇದಿನೀಮ್ ।
ಘಟ್ಟಯಂತಶ್ಚ ಮರ್ಮಾಣಿ ತವ ಪುತ್ರಸ್ಯ ಮಾರಿಷ ।
ಪ್ರಯಾತಾಃ ಶಿಬಿರಾಯೈವ ನಿಶಾಕಾಲೇ ಪರಂತಪಾಃ ॥೮೨॥

ಎಲೈ ಮಹಾರಾಜನೇ, ಭೀಮಸೇನ-ಘಟೋತ್ಕಚರನ್ನು ಮುಂದೆ ಮಾಡಿಕೊಂಡು ಪರಸ್ಪರವಾಗಿ ಪೂಜಿಸುತ್ತಾ, ಬಹಳ ಸಂತೋಷದಿಂದ ಕೂಡಿದವರಾಗಿ ತೂರ್ಯಾದಿ ನಾದ ಮಿಶ್ರಿತವಾದ ವಿವಿಧವಾದ ನಾದಗಳನ್ನು ಮಾಡುತ್ತಾ, ಶಂಖಧ್ವನಿಗಳಿಂದ ಕೂಡಿದ ಸಿಂಹನಾದಗಳನ್ನು ಮಾಡುತ್ತಾ ಮಹಾತ್ಮರೂ, ಪರಂತಪರೂ ಆದ ಅವರು ಭೂಮಿಯನ್ನು ನಡುಗಿಸುತ್ತಾ ಎಲೈ ಪೂಜ್ಯನೇ, ನಿನ್ನ ಪುತ್ರನಾದ ದುರ್ಯೋಧನನ ಮರ್ಮಗಳನ್ನು ಭೇದಿಸುತ್ತಾ ರಾತ್ರಿಯು ಸಮೀಪಿಸುತ್ತಿರಲು ತಮ್ಮ ಶಿಬಿರಗಳಿಗೆ ಹೋದರು.

ದುರ್ಯೋಧನಸ್ತು ನೃಪತಿರ್ದೀನೋ ಭ್ರಾತೃವಧೇನ ಚ ।
ಮುಹೂರ್ತಂ ಚಿಂತಯಾಮಾಸ ಬಾಷ್ಪಶೋಕಸಮಾಕುಲಃ ॥೮೩॥

ರಾಜನಾದ ದುರ್ಯೋಧನನಾದರೂ ತಮ್ಮಂದಿರ ವಧೆಯಿಂದ ದೈನ್ಯವನ್ನು ಹೊಂದಿ, ಬಾಷ್ಪಶೋಕಗಳಿಂದ ಕೂಡಿದವನಾಗಿ ಒಂದು ಮುಹೂರ್ತದ ಕಾಲ ಚಿಂತಿಸಿದನು.

ತತಃ ಕೃತ್ವಾ ವಿಧಿಂ ಸರ್ವಂ ಶಿಬಿರಸ್ಯ ಯಥಾವಿಧಿ ।
ಪ್ರದಧ್ಮೌ ಶೋಕಸಂತಪ್ತೋ ಭ್ರಾತೃವ್ಯಸನಕರ್ಶಿತಃ ॥೮೪॥

ಅನಂತರ ಶಿಬಿರದಲ್ಲಿ ಮಾಡಬೇಕಾದ ಎಲ್ಲ ವ್ಯವಸ್ಥೆಯನ್ನೂ ಮಾಡಿ ತಮ್ಮಂದಿರ ವಧೆಯ ವ್ಯಸನದಿಂದ ಕರ್ಶಿತನಾಗಿ ಶೋಕಸಂತಪ್ತನಾಗಿ ಚಿಂತಾಕ್ರಾಂತನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಷಷ್ಟಿತಮೋಽಧ್ಯಾಯಃ ॥

॥ ಭೀಷ್ಮವಧಪರ್ವಣಿ ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಭೀಷ್ಮಪರ್ವದಲ್ಲಿ ಅರವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★